# ಝೂಯಾನ್ ಫಾಲೂನ್

(ಕನ್ನಡ ಅನುವಾದ)

ಲೀ ಹಾಂಗ್‌ಝಿ

# ದಾಫ ಕುರಿತು

## (ಲುನ್ಯು)*

ದಾಫಾ ಸೃಷ್ಟಿಕರ್ತನ ಜ್ಞಾನವಾಗಿದೆ. ಇದು ಭೂಮಿ, ಸ್ವರ್ಗ ಮತ್ತು ಬ್ರಹ್ಮಾಂಡವು ನೆಲೆಗೊಂಡಿರುವ ಸೃಷ್ಟಿಯ ಮೂಲಾಧಾರ. ಅತಿ ಸಣ್ಣ ಕಣದಿಂದ ಹಿಡಿದು ಅತ್ಯಂತ ದೊಡ್ಡ ವಸ್ತುವಿನವರೆಗೆ ಎಲ್ಲವನ್ನೂ ಇದು ಒಳಗೊಂಡಿದೆ ಮತ್ತು ವಿಶ್ವದಲ್ಲಿ ಅಸ್ತಿತ್ವದಲ್ಲಿರುವ ಪ್ರತಿಯೊಂದು ಸ್ತರಗಳಲ್ಲಿ ಹಲವಾರು ರೀತಿಯಲ್ಲಿ ಇದು ಪ್ರಕಟಗೊಂಡಿದೆ. ಬ್ರಹ್ಮಾಂಡದ ಆಳದಿಂದ, ಮೊದಲಿಗೆ ಗೋಚರವಾದ ಅತ್ಯಂತ ಸೂಕ್ಷ್ಮ ಕಣದ ಹೊರಗೆ, ಒಂದರ ಮೇಲೊಂದು ಪದರಗಳಲ್ಲಿ, ಲೆಕ್ಕವಿಲ್ಲದಷ್ಟು ಸಂಖ್ಯೆಯ ಅತ್ಯಂತ ಚಿಕ್ಕ ಕಣದಿಂದ ಅತ್ಯಂತ ದೊಡ್ಡ ಗಾತ್ರದ ಕಣಗಳವರೆಗೂ ವ್ಯಾಪಿಸಿ, ಮಾನವ ಜ್ಞಾನದ ಮಿತಿಯಾದ ಅಣು, ಪರಮಾಣುಗಳು, ನಕ್ಷತ್ರ ಪುಂಜಗಳನ್ನೂ ಮೀರಿ ಇನ್ನೂ ದೊಡ್ಡದಾಗಿರುವ ಸ್ತರದಾಚೆಗೂ ಇದು ವ್ಯಾಪಿಸಿದೆ. ವಿವಿಧ ಗಾತ್ರದ ಜೀವಿಗಳನ್ನು ಮತ್ತು ವಿವಿಧ ಗಾತ್ರದ ವಿಶ್ವಗಳನ್ನು ನಿರ್ಮಾಣ ಮಾಡಿರುವ ವಿವಿಧ ಗಾತ್ರದ ಕಣಗಳು ಬ್ರಹ್ಮಾಂಡದಲ್ಲಿ ಹರಡಿವೆ. ಯಾವುದಾದರೊಂದು ಕಣಸ್ತರದಲ್ಲಿರುವ ಜೀವಿಗಳು ತಮ್ಮ ಮುಂದಿನ ದೊಡ್ಡ ಕಣಸ್ತರವನ್ನು ತಮ್ಮ ಆಕಾಶದಲ್ಲಿನ ಗ್ರಹಗಳೆಂದು ಅರ್ಥೈಸಿಕೊಳ್ಳುತ್ತವೆ, ಪ್ರತಿಯೊಂದೂ ಸ್ತರಕ್ಕೂ ಈ ಅಂಶವು ಸತ್ಯವಾಗಿರುವುದು. ಬ್ರಹ್ಮಾಂಡದ ಪ್ರತಿಯೊಂದೂ ಸ್ತರದ ಜೀವರಾಶಿಗೂ ಈ ವಿಷಯವು ಅನಂತವಾಗಿ ಮುಂದುವರೆಯುವಂತೆ ತೋರುವುದು. ಕಾಲ ಮತ್ತು ಆಕಾಶ, ವಿವಿಧ ಬಗೆಯ ಜೀವಿ, ಮತ್ತು ಪ್ರಬೇಧಗಳನ್ನು ನಿರ್ಮಿಸಿರುವುದು ಯಾವುದೆಂದರೆ 'ದಾಫಾ'. ಅಸ್ತಿತ್ವದಲ್ಲಿರುವ ಎಲ್ಲವೂ ಇದಕ್ಕೆ ಬದ್ಧವಾಗಿರುವುದು, ಇದರಿಂದಾಚೆ ಏನೂ ಇಲ್ಲ. ಇವೆಲ್ಲವೂ ವಿವಿಧ ಸ್ತರಗಳಲ್ಲಿ ದಾಫಾದ ಗುಣಗಳಾದ ಜನ್, ಶಾನ್ ಮತ್ತು ರೆನ್‌ಗಳ* ಮೂರ್ತ ಅಭಿವ್ಯಕ್ತಿಗಳಾಗಿವೆ.

ಆಕಾಶದಲ್ಲಿ ಹುಡುಕುವ ಮತ್ತು ಜೀವನವನ್ನು ಪರಿಶೋಧಿಸುವ ಮನುಷ್ಯನ ಎಷ್ಟೇ ಉನ್ನತ ಮಾರ್ಗಗಳಿದ್ದರೂ ಆತನು ಗಳಿಸಿರುವ ಜ್ಞಾನವು ವಿಶ್ವದ ಅತ್ಯಂತ ಕೆಳಸ್ತರದಲ್ಲಿ ವಾಸಿಸಿರುವ ಮಾನವನ ಈ ಒಂದು ಆಯಾಮದ ಕೆಲವು ಅಂಶಗಳಿಗಷ್ಟೇ ಸೀಮಿತಗೊಂಡಿದೆ. ನಾಗರೀಕತೆಯ ಇತಿಹಾಸದಲ್ಲಿ ಅನ್ಯಗ್ರಹಗಳು ಬಹಳ ಹಿಂದೆಯೇ ಮಾನವನಿಂದ ಶೋಧಿಸಲ್ಪಟ್ಟಿದ್ದವು. ಮಾನವನು ಎಷ್ಟೇ ಎತ್ತರ ಮತ್ತು ದೂರವನ್ನು ಕ್ರಮಿಸಿದ್ದರೂ ಆತನಿಗೆ ತಾನು ನೆಲೆಸಿರುವ ಈ ಆಯಾಮದ ಆಚೆ ಸಾಗಲು ಸಾಧ್ಯವಾಗಿಲ್ಲ, ಬ್ರಹ್ಮಾಂಡದ ನೈಜ ಚಿತ್ರಣವು ಮಾನವ ಗ್ರಹಿಕೆಯಿಂದ ಶಾಶ್ವತವಾಗಿ ಹೊರಗುಳಿದಿರುವುದು. ಬ್ರಹ್ಮಾಂಡ, ಆಕಾಶ, ಕಾಲ ಮತ್ತು ಮಾನವ ಶರೀರಗಳ ರಹಸ್ಯವನ್ನು ಮನುಷ್ಯನು ತಿಳಿದುಕೊಳ್ಳಬೇಕೆಂದರೆ, ನಿಜವಾದ ಹಾದಿಯಲ್ಲಿ ಸಾಧನೆ ಮಾಡುವ ಮಾರ್ಗವನ್ನು ಅವನು ಕೈಗೊಳ್ಳಬೇಕು ಮತ್ತು ತನ್ನ ಇರುವಿಕೆಯ ಸ್ತರವನ್ನು ಎತ್ತರಕ್ಕೇರಿಸಿಕೊಂಡು ನಿಜವಾದ ಜ್ಞಾನೋದಯವನ್ನು ಗಳಿಸಬೇಕು. ಸಾಧನೆ ಮಾಡುವುದರಿಂದ ನೈತಿಕ ಗುಣವು ಎತ್ತರಕ್ಕೇರುವುದು. ಮಾನವರು ಯಾವಾಗ ಒಳ್ಳೆಯದನ್ನು ಕೆಟ್ಟದ್ದರಿಂದ, ಹಾಗೂ ಸನ್ಮಾರ್ಗದಿಂದ ದುರ್ಮಾರ್ಗವನ್ನು ಬೇರ್ಪಡಿಸುವುದನ್ನು ಮತ್ತು ಈ ಮಾನವ ಸ್ತರದಿಂದಾಚೆ ಹೋಗುವುದನ್ನು ಕಲಿಯುತ್ತಾರೋ ಆಗ ಅವರು ಬ್ರಹ್ಮಾಂಡದ ವಾಸ್ತವಾಂಶದೆಡೆಗೆ ಪ್ರಯಾಣಿಸುವ ಮಾರ್ಗವನ್ನು ಹಾಗೂ ಬೇರೆ ಆಯಾಮದಲ್ಲಿ ಮತ್ತು ಅನ್ಯಗ್ರಹಗಳಲ್ಲಿರುವ ಜೀವರಾಶಿಯನ್ನು ಅರಿಯುತ್ತಾರೆ.

---

* ಲುನ್ಯು – ನಿರೂಪಣೆ, ವ್ಯಾಖ್ಯಾನ

* ಜನ್ ಶಾನ್ ರೆನ್ – ಜನ್: ಸತ್ಯ ಶಾನ್:ಕರುಣೆ ದಯೆ ರೆನ್:ತಾಳ್ಮೆ ಸಹಿಷ್ಣುತೆ ಸೈರಣೆ, ಸ್ವ–ನಿಯಂತ್ರಣ

ಸಾಮಾನ್ಯವಾಗಿ ಜನರು ತಮ್ಮ ವೈಜ್ಞಾನಿಕ ಚಟುವಟಿಕೆಗಳಿರುವುದು "ಜೀವನದ ಗುಣಮಟ್ಟವನ್ನು ಸುಧಾರಿಸಲು" ಎಂಬುವುದಾಗಿ ಹೇಳುತ್ತಾರೆ, ತಂತ್ರಜ್ಞಾನದಲ್ಲಾಗುತ್ತಿರುವ ಸ್ಪರ್ಧೆಗಳು ಅವರನ್ನು ಈ ಬಗೆಯ ನಿಲುವು ತಳೆಯಲು ಪ್ರಚೋದಿಸುವುದು. ಅನೇಕ ಸಂದರ್ಭಗಳಲ್ಲಿ ಜನರು ದೈವಿಕತೆಯನ್ನು ಹೊರತಳ್ಳಿ, ತಮ್ಮ ಮನೋನಿಗ್ರಹವನ್ನು ಕಾದಿಡಲು ಇರುವ ನೈತಿಕತೆಯನ್ನು ತೊರೆದಾಗ ಈ ರೀತಿಯಾಗುವುದು. ಈ ಕಾರಣಗಳಿಂದಾಗಿಯೇ ಹಿಂದಿನ ನಾಗರೀಕತೆಗಳು ಅನೇಕ ಬಾರಿ ವಿನಾಶವಾಗಿರುವುದು. ಇಷ್ಟಾದರೂ ಜನರ ಸಂಶೋದನೆಗಳು ಈ ಭೌತಿಕ ಜಗತ್ತಿಗೆ ಮಾತ್ರ ಸೀಮಿತಗೊಂಡಿದೆ ಹಾಗೂ ನಾವು ಅನುಸರಿಸುತ್ತಿರುವ ವಿಧಾನಗಳು ಕೇವಲ ಮೂರ್ತ ರೂಪದಲ್ಲಿ ಗುರುತಿಸಲ್ಪಡುವ ವಿಚಾರಗಳಿಗಷ್ಟೇ ಸೀಮಿತವಾಗಿದೆ. ಈ ಮಧ್ಯೆ ಮಾನವ ಆಯಾಮದಲ್ಲಿ ಅಮೂರ್ತ ಅಥವ ಅದೃಶ್ಯ ವಸ್ತುಗಳಾಗಿದ್ದರೂ ವಸ್ತುನಿಷ್ಟವಾಗಿ ಅಸ್ತಿತ್ವದಲ್ಲಿರುವ ಮತ್ತು ಪ್ರಸ್ತುತ ಜಗತ್ತಿನಲ್ಲಿ ವಾಸ್ತವಿಕವಾಗಿ ತಮ್ಮಷ್ಟಕ್ಕೆ ತಾವೇ ಬಹಿರಂಗಗೊಳ್ಳಬಲ್ಲ ಅಂಶಗಳಾಗಿರುವ ಆಧ್ಯಾತ್ಮಿಕತೆ, ನಂಬಿಕೆ, ದೈವಿಕಭಾಷೆ, ಅಲೌಕಿಕತೆ, ಇತ್ಯಾದಿಗಳು ದೈವಿಕತೆಯಿಂದ ಹೊರ ಬಂದಿರುವ ಜನರಿಗೆ ನಿಷೇಧಿತ ಅಂಶಗಳಾಗಿ ಪರಿಗಣಿಸಲ್ಪಡುತ್ತಿವೆ.

ಮಾನವ ಜನಾಂಗವು ತನ್ನ ಗುಣ, ನಡತೆ ಮತ್ತು ಆಲೋಚನೆಗಳನ್ನು ಉನ್ನತ ನೈತಿಕ ಮೌಲ್ಯಗಳಲ್ಲಿ ಅರೆದು ಅಭಿವೃದ್ಧಿಪಡಿಸಿಕೊಳ್ಳುವುದಾದರೆ ನಾಗರೀಕತೆಯು ಸಹಿಷ್ಣುತೆಯನ್ನು ಗಳಿಸಲು ಸಾಧ್ಯವಾಗುವುದು ಅಲ್ಲದೆ ಈ ಮಾನವ ಪ್ರಪಂಚದಲ್ಲಿ ವಿಸ್ಮಯಗಳೂ ಕೂಡ ಮತ್ತೊಮ್ಮೆ ಸಂಭವಿಸಲು ಸಾಧ್ಯವಾಗುವುದು. ಈ ಹಿಂದೆ ಅನೇಕ ಬಾರಿ, ಈ ಪ್ರಪಂಚದಲ್ಲಿ ದೈವಿಕತೆಯುಳ್ಳ ಸಂಸ್ಕೃತಿಗಳು ಗೋಚರವಾಗಿದ್ದುವು, ಅವು ಮಾನವನಂತೆ ಈ ಪ್ರಪಂಚದಲ್ಲಿ ಕಾಣಿಸಿಕೊಂಡು ಜೀವನ ಮತ್ತು ಜಗತ್ತಿನ ಕುರಿತು ನೈಜ ತಿಳುವಳಿಕೆಯನ್ನು ಜನರು ಪಡೆಯುವಲ್ಲಿ ಅವರಿಗೆ ನೆರವಾಗಿದ್ದುವು. ಈ ಪ್ರಪಂಚದಲ್ಲಿ ದಾಫಾ ಪ್ರಕಟಗೊಳ್ಳುವಂತಹ ಅಂಶಗಳಿಗೆ ಜನರು ಯಾವಾಗ, ಸೂಕ್ತವಾದ ಸನ್ಮಾನ ಮತ್ತು ಗೌರವವವನ್ನು ತೋರುತ್ತಾರೋ ಆಗ ಅವರು, ಅವರ ಜನಾಂಗ ಅಥವ ಅವರ ರಾಷ್ಟ್ರವು ಗೌರವ ಮತ್ತು ಅನುಗ್ರಹಗಳ ಖುಷಿ ಪಡೆಯುವುದು. ದಾಫಾ – ವಿಶ್ವದ ಮಹಾನ್ ಹಾದಿ ಇದು ಆಕಾಶಕಾಯ, ಜಗತ್ತು, ಜೀವರಾಶಿ, ಮತ್ತು ಸೃಷ್ಟಿಯ ಎಲ್ಲಾ ಅಂಶಗಳನ್ನೂ ನಿರ್ಮಾಣ ಮಾಡಿರುವುದು. ದಾಫಾದಿಂದ ದೂರ ಸರಿಯುವ ಯಾವುದೇ ಜೀವಿ ನಿಜವಾಗಿಯೂ ಭ್ರಷ್ಟತೆಯಿಂದಿರುವುದು. ದಾಫಾ ಮಾರ್ಗವನ್ನು ಅನುಸರಿಸುವ ಯಾವುದೇ ಮಾನವರು ನಿಜವಾಗಿಯೂ ಒಳ್ಳೆಯ ಮನುಷ್ಯರಾಗಿ ಉಳಿಯುವರು, ಆರೋಗ್ಯ, ನೆಮ್ಮದಿ, ಸಂತೋಷಗಳಿಂದ ಗೌರವ ಮತ್ತು ಸನ್ಮಾನಗಳನ್ನು ಗಳಿಸುವರು. ದಾಫಾದೊಂದಿಗೆ ಒಂದಾಗಿ ಬೆರೆಯಬಲ್ಲ ಯಾವುದೇ ಸಾಧಕರು ಜ್ಞಾನಯುಕ್ತ ದೈವವಾಗುವರು.

# ಪರಿವಿಡಿ


## ನಿರೂಪಣೆ ವ್ಯಾಖ್ಯಾನ

**ಉಪನ್ಯಾಸ ಒಂದು** ---------------------------------------------------------------------- 8

ಜನರನ್ನು ಉನ್ನತ ಮಟ್ಟದೆಡೆಗೆ ನಡೆಸುವುದು---------------------------------------------------- 8
ಭಿನ್ನ ಮಟ್ಟಗಳು ಭಿನ್ನ ಫಾ ವನ್ನು ಹೊಂದಿರುತ್ತವೆ------------------------------------------ 13
ಜ್ಞೆನ್ ಷ್ಞೆನ್ ರ್ಥೆನ್ ಮಾತ್ರ ಒಳ್ಳೆಯ ಮತ್ತು ದುಷ್ಟ ಜನರೆಂದು ನಿರ್ಣಯಿಸಲಿರುವ ಏಕೈಕ ಮಾರ್ಗ----- 16
ಚೀಗಾಂಗ್ ಎನ್ನವುದು ಇತಿಯಾಸ ಪೂರ್ವ ಸಂಸ್ಕೃತಿ ------------------------------------------ 19
ಚೀಗಾಂಗ್ ಎನ್ನವುದು ಸಾಧನೆಯ ಅಭ್ಯಾಸ --------------------------------------------------- 23
ನಿಮ್ಮ ಅಭ್ಯಾಸದೊಂದಿಗೆ ನಿಮ್ಮ ಗಾಂಗ್ ಏಕೆ ವೃದ್ಧಿಸುತ್ತಿಲ್ಲ -------------------------------------- 26
ಫಾಲೂನ್  ದಾಫಾದ ವೈಶಿಷ್ಟ್ಯಗಳು -------------------------------------------------------- 34

**ಉಪನ್ಯಾಸ ಎರಡು** ------------------------------------------------------------- **41**

ದಿವ್ಯ ನೇತ್ರ ಕುರಿತಾದ ಚರ್ಚೆ---------------------------------------------------------------- 41
ಅಸಾಮಾನ್ಯ ಅಲೌಕಿಕ ದಿವ್ಯ ದೃಷ್ಟಿ ಶಕ್ತಿ  --------------------------------------------------- 52
ಪೂರ್ವಜ್ಞಾನ ಮತ್ತು ಭವಿಷ್ಯ ತಿಳಿಯುವ ಅದ್ಭುತ ಸಾಮರ್ಥ್ಯ ---------------------------------- 54
ಪಂಚ ಭೂತಗಳನ್ನು ಹಾಗು ಮೂರು ಲೋಕಗಳನ್ನು ಮೀರುವುದು --------------------------- 58
ಒಂದು ವಿಷಯವನ್ನು ಬೆನ್ನು ಹತ್ತುವ ಕುರಿತು --------------------------------------------- 63

**ಉಪನ್ಯಾಸ ಮೂರು** -------------------------------------------------------- **71**

ಎಲ್ಲಾ ವಿದ್ಯಾರ್ಥಿಗಳನ್ನು ನಾನು ಅನುಯಾಯಿಗಳನ್ನಾಗಿ ಸ್ವೀಕರಿಸುತ್ತದ್ದೇನೆ ------------------------ 71
ಬೌದ್ಧ ಚೀಗಾಂಗ್ ಮತ್ತು ಬೌದ್ಧ ಧರ್ಮ ------------------------------------------------------ 72
ಅಭ್ಯಾಸದಲ್ಲಿ ನೀವು ಒಂದು ನಿಯಮಕ್ಕೆ ಬದ್ಧರಾಗಿರಬೇಕಾದ ಅವಶ್ಯಕತೆ -------------------------- 77
ಸಾಮರ್ಥ್ಯ ಮತ್ತು ಸಮರ್ಥ ----------------------------------------------------------------- 80
ವಿರುದ್ಧ ಅಭ್ಯಾಸ ಮತ್ತು ಕೃಷಿ ಶಕ್ತಿ ಬದಲು ----------------------------------------------- 81
ಆತ್ಮದ ಸ್ವಾಧೀನ ------------------------------------------------------------------------- 87
ದೈವಿಕ ಭಾಷೆ --------------------------------------------------------------------------- 94
ನಿಮ್ಮ ಗುರುಗಳು ತಮ್ಮ ವಿದ್ಯಾರ್ಥಿಗಳಿಗೆ ಕೊಡುವ ಸಂಗತಿಗಳು -------------------------------- 97
ಶಕ್ತಿಯ ಕಾಯ್ ಕ್ಷೇತ್ರ ----------------------------------------------------------------- 104
ಫಾಲೂನ್ ದಾಫಾದ ವಿದ್ಯಾರ್ಥಿಗಳು ತಮ್ಮ ಅಭ್ಯಾಸವನ್ನು ಹೇಗೆ ಹರಡಬೇಕು ---------------------- 105

**ಉಪನ್ಯಾಸ ನಾಲ್ಕು** ------------------------------------------------------ 108

ನಷ್ಟ ಮತ್ತು ಲಾಭ --------------------------------------------------------------------- 108
ಕರ್ಮದ ಸ್ಥಾನಾಂತಿರೀಕರಣ ---------------------------------------------------------------- 110
ನಡೆತೆಯ ಸುಧಾರಣೆ -------------------------------------------------------------------- 119
ಬೌದ್ಧ ಧರ್ಮಾಚರಣೆ -------------------------------------------------------------------- 124
ನಿಶ್ಚಿತ ಸ್ಥಳದ ರಹಸ್ಯ ಮಾರ್ಗ ------------------------------------------------------------ 128

**ಉಪನ್ಯಾಸ ಐದು** ---------------------------------------- 136

ಸಾಧನೆಯ ಸಂಕೇತ ---------------------------------------- 136
ಚೀಮನ್ ತತ್ವಗಳು ---------------------------------------- 138
ಪಾಪಕರವಾದ ಮಾರ್ಗದಲ್ಲಿ ಅಭ್ಯಾಸಿಸುವುದು ---------------------------------------- 140
ಪುರುಷ ಮತ್ತು ಸ್ತ್ರೀಯರ ಯುಗಳ ಅಭ್ಯಾಸ ---------------------------------------- 142
ಮನಸ್ಸು ಮತ್ತು ದೇಹದ ಸಾಧನೆ ---------------------------------------- 144
ಪ್ರಭಾವಲಯ ---------------------------------------- 146
ಬೌದ್ಧ ವಿಗ್ರಹದ ಪಾವಿತ್ರೀಕರಣ ---------------------------------------- 147
ಅಭ್ಯಾಸದ ಅನುಬಂಧ ---------------------------------------- 153

**ಉಪನ್ಯಾಸ ಆರು** ---------------------------------------- 155

ಸಾಧನೆಯ ಉನ್ಮಾದ ---------------------------------------- 155
ಸಾಧನೆಯಲ್ಲಿ ಭಯಾನಕ ತೊಡುಕುಗಳು ---------------------------------------- 160
ಸ್ವ ಮನಸ್ಸಿನ ಭಯಾನಕ ತೊಡುಕುಗಳು ---------------------------------------- 164
ನಿಮ್ಮ ಪ್ರಧಾನ ಪ್ರಜ್ಞೆಯು ಪ್ರಬಲವಾಗಿರಬೇಕು ---------------------------------------- 166
ನಿಮ್ಮ ಚಿಂತನೆಗಳು ಸರಿಯಾಗಿರಬೇಕು ---------------------------------------- 167
ಯುದ್ಧ ನೈಪುಣ್ಯತೆಯ ಚೀಗಾಂಗ್ ---------------------------------------- 169
ಪ್ರದರ್ಶಕ ದೋರಣೆ ---------------------------------------- 171

**ಉಪನ್ಯಾಸ ಏಳು** ---------------------------------------- **175**

ಕೊಲೆಯ ವಿವಾದ ---------------------------------------- 175
ಮಾಂಸ ತಿನ್ನುವ ವಿವಾದ ---------------------------------------- 178
ಮತ್ಸರ ---------------------------------------- 185
ಖಾಯಿಲೆ ಚಿಕಿತ್ಸಾ ವಿಧಾನ ---------------------------------------- 191
ಆಸ್ಪತ್ರೆಯ ಚಿಕಿತ್ಸೆ ಮತ್ತು ಚೀಗಾಂಗ್ ಚಿಕಿತ್ಸೆ ---------------------------------------- 195

**ಉಪನ್ಯಾಸ ಎಂಟು** ---------------------------------------- **201**

ಉಪವಾಸ ಕ್ರಿಯೆ ---------------------------------------- 201
ಕದ್ದು ಪಡೆಯುವ ಪ್ರಭೆ ---------------------------------------- 203
ಸಂಗ್ರಹಿಸುವ ಪ್ರಭೆ ---------------------------------------- 205
ಯಾರು ಅಭ್ಯಸಿಸುತ್ತಾರೋ ಅವರು ಗಾಂಗ್ನ್ನು ಪಡೆಯುತ್ತಾರೆ ---------------------------------------- 208
ಸ್ವರ್ಗೀಯ ಪ್ರದಕ್ಷಣೆಯ ಪಥ ---------------------------------------- 214
ಮತಾಂಧತೆಯ ಸಂಬಂಧ ---------------------------------------- 222
ಪ್ರವಚನ ವೃದ್ಧಿ ---------------------------------------- 223

**ಉಪನ್ಯಾಸ ಒಂಬತ್ತು** ------------------------------------------------ **226**

ಚೀಗಾಂಗ್ ಮತ್ತು ದೈಹಿಕ ವ್ಯಾಯಾಮ ------------------------------------------------ 226
ಮನಸ್ಸಿನಾಲೋಚನೆ ------------------------------------------------------------------ 228
ಮುಕ್ತ ಮತ್ತು ಸ್ವಚ್ಛ ಮನಸ್ಸು ------------------------------------------------------------ 233
ಜನ್ಮತಃ ಗುಣ ------------------------------------------------------------------------- 237
ಜ್ಞಾನೋದಯ ---------------------------------------------------------------------- 238
ಜನ್ಮತಃ ಶ್ರೇಷ್ಠ ಗುಣವುಳ್ಳವರು ------------------------------------------------------------ 243
ಪಾರಿ ಭಾಷಿಕ ಕೋಶ ------------------------------------------------------------ 250
ಆಂಗ್ಲ ಭಾಷೆಯಲ್ಲಿರುವ ಫಾಲೂನ್ ದಫಾ ಪುಸ್ತಕಗಳು----------------------------- 255
ವಿಶ್ವದಾದ್ಯಂತ ನಡೆಯುತ್ತಿರುವ ಉಚಿತ ಕಾರ್ಯಗಾರಗಳು ಮತ್ತು ಸಲಹೆಗಳು--------- 256

# ಉಪನ್ಯಾಸ ಒಂದು

## ಜನರನ್ನು ಉನ್ನತ ಮಟ್ಟದೆಡೆಗೆ ನಡೆಸುವುದು

ನನ್ನ ಇಡೀ ಫಾ಼ಲ್ಟ಼ ಮತ್ತು ಸಾಧನೆ ಅಭ್ಯಾಸದ ಬೋಧನಾ ತರಗತಿಯ ಉದ್ದಕ್ಕೂ ನಾನು ಸಮಾಜಕ್ಕೆ ಮತ್ತು ಅಭ್ಯಾಸಿಗರಿಗೆ ಜವಾಬ್ದಾರಿಯುತನಾಗಿದ್ದೇನೆ. ಇದರಿಂದ ನಾವು ಪಡೆದ ಫಲಿತಾಂಶವು ಕೂಡ ಚೆನ್ನಾಗಿಯೇ ಇದೆ. ಮತ್ತು ಇಡೀ ಸಮಾಜದ ಮೇಲೆ ಇದರ ಪರಿಣಾಮವು ಕೂಡ ಚೆನ್ನಾಗಿಯೇ ಇದೆ. ಕೆಲ ವರ್ಷಗಳ ಹಿಂದೆ ಚೀಗಾಂಗ್ ಅನ್ನು ಹೇಳಿಕೊಡಲು ಹಲವಾರು ಮಂದಿ ಚೀಗಾಂಗ್ ಗುರುಗಳಿದ್ದರು. ಅವರು ಹೇಳಿಕೊಡುತ್ತಿದ್ದುದೆಲ್ಲವೂ ಗುಣಪಡಿಸುವ ಮತ್ತು ಗಟ್ಟಿಮುಟ್ಟಾಗಿಸುವ ಮಟ್ಟದ್ದಾಗಿತ್ತು. ಹಾಗಲ್ಲದೆ ಅವರ ಅಭ್ಯಾಸದ ದಾರಿಯು ಕೆಟ್ಟದ್ದು ಅಂತ ನಾನು ಹೇಳುವುದಿಲ್ಲ. ನಾನು ಕೇವಲ ಅವರು ಉನ್ನತ ಮಟ್ಟದೆಡೆಗೆ ಏನೂ ಬೋಧಿಸುವುದಿಲ್ಲ ಎಂಬುವುದನ್ನು ತೋರಿಸುತ್ತಿದ್ದೇನೆ. ಇಡೀ ದೇಶದಲ್ಲಿ ಚೀಗಾಂಗ್ ಪರಿಸ್ಥಿತಿಯೂ ನನಗೆ ಗೊತ್ತು. ಈ ವೇಳೆಯಲ್ಲಿ ದೇಶ ಮತ್ತು ವಿದೇಶದಲ್ಲಿ ಉನ್ನತ ಮಟ್ಟದ ನೈಜ ಚಿಗಾಂಗ್‌ನ್ನು ಬೋಧಿಸುತ್ತಿರುವುದು ನಾನೊಬ್ಬನೆ. ಏಕೆ ಯಾರೂ ಕೂಡ ಚೀಗಾಂಗ್‌ನ್ನು ಉನ್ನತ ಮಟ್ಟದೆಡೆಗೆ ಬೋಧಿಸುವ ಪ್ರಯತ್ನ ಮಾಡಿಲ್ಲ? ಏಕೆಂದರೆ ಇದು ಮಹತ್ವದ ವಿಷಯಗಳು ಘನವಾದ ಐತಿಹಾಸಿಕ ಕಾರಣಗಳು, ವ್ಯಾಪಕ ವಿಸ್ತಾರದ ಸಂಗತಿಗಳು ಮತ್ತು ಅತ್ಯಂತ ಗಂಭೀರ ವಿಷಯಗಳ ಪ್ರಶ್ನೆಗಳನ್ನು ಕುರಿತದ್ದಾಗಿರುತ್ತದೆ. ಇದು ಯಾರೋ ಸಾಮಾನ್ಯ ಮನುಷ್ಯ ಬೋಧಿಸಲು ಸಾಧ್ಯವಾಗುವಂಥದ್ದಲ್ಲ , ಏಕೆಂದರೆ ಇದು ಹಲವಾರು ಚೀಗಾಂಗ್ ಶಾಲೆಗಳ ಅಭ್ಯಾಸಗಳನ್ನೂ ಒಳಗೊಂಡಿರುವುದಾಗಿದೆ. ಪ್ರತ್ಯೇಕವಾಗಿ ಹೇಳುವುದಾದರೆ ಹಲವಾರು ಜನ ನಮ್ಮ ಅಭ್ಯಾಸಿಗರು ಇಂದು ಒಂದು ಅಭ್ಯಾಸವನ್ನು ಕಲಿತು ನಾಳೆ ಮತ್ತೊಂದು ಅಭ್ಯಾಸವನ್ನು ಕಲಿಯುವವರು ತಮ್ಮ ದೇಹವನ್ನು ಆಗಲೇ ಹಾಳುಗೆಡವಿ ಕೊಂಡಿದ್ದಾರೆ. ಅವರ ಸಾಧನೆಯು ಖಂಡಿತವಾಗಿ ಹಾಳಾಗುವಂಥದ್ದು. ಇತರರು ಸಾಧನೆಯ ಮುಖ್ಯ ದಾರಿಯಲ್ಲಿ ಸಾಗಿ ಮುಂದುವರೆದರೆ ಈ ಜನರು ಅಡ್ಡ ದಾರಿಯಲ್ಲಿ ಸಾಗುವವರು. ಅವರು ಒಂದು ಹಾದಿಯಲ್ಲಿ ಸಾಧನೆ ಮಾಡಲು ಹೊರಟರೆ ಮತ್ತೊಂದು ಹಾದಿಯು ಅಡ್ಡ ಬರುತ್ತದೆ. ಅವರು ಮತ್ತೊಂದು ಹಾದಿಯಲ್ಲಿ ಸಾಧಿಸ ಹೊರಟರೆ ಈ ಅಭ್ಯಾಸವು ಅಡ್ಡ ಬರುತ್ತದೆ. ಎಲ್ಲವೂ ಕೂಡ ಅವರಿಗೆ ಅಡ್ಡ ಬರುತ್ತದೆ ಮತ್ತು ಅವರು ಸಾಧನೆಯ ಅಭ್ಯಾಸದಲ್ಲಿ ಸಿದ್ಧಿಸುವುದು ಸಾಧ್ಯವಾಗದು.

ನಾವು ಈ ಎಲ್ಲಾ ಸಂಗತಿಗಳನ್ನು ಸರಿ ಮಾಡುತ್ತೇವೆ. ಮತ್ತು ಒಳ್ಳೆಯ ಭಾಗವನ್ನು ಸಂರಕ್ಷಿಸಿ ಮತ್ತು ಕೆಟ್ಟ ಭಾಗವನ್ನು ಹೋಗಲಾಡಿಸಿ ನೀವು ಮುಂದೆ ಸಾಧನೆಯ ಅಭ್ಯಾಸವನ್ನು ಮಾಡಲು ಅನುವಾಗುವಂತೆ ಮಾಡುತ್ತೇವೆ. ಆದಾಗ್ಯೂ ನೀವು ಈ ದಾಫಾವನ್ನು ನಿಷ್ಠರಾಗಿ ಅಭ್ಯಾಸಿಸಲು ಬಂದಿರಬೇಕು. ನೀವು ಅನೇಕ ಆಸೆ ಆಕಾಂಕ್ಷೆಗಳನ್ನು ಹೊತ್ತು ಬಂದಿದ್ದರೆ ಮತ್ತು ಅಸಾಮಾನ್ಯ ಶಕ್ತಿಗಳನ್ನು ಸಂಪಾದಿಸಲು ಬಂದಿದ್ದರೆ, ರೋಗವನ್ನು ಗುಣಪಡಿಸಿಕೊಳ್ಳಲು ಬಂದಿದ್ದರೆ, ಕೆಲವು ತತ್ವಗಳನ್ನು ಆಲಿಸಲು ಬಂದಿದ್ದರೆ ಅಥವ ಇನ್ನಾವುದೋ ಕೆಟ್ಟ ಉದ್ದೇಶಗಳನ್ನು ಹೊತ್ತು ತಂದಿದ್ದರೆ, ಅಧ್ಯಾವುದೂ ಕೆಲಸ ಮಾಡುವುದಿಲ್ಲ. ಇದು ಏಕೆಂದರೆ, ನಾನಾಗಲೇ ಹೇಳಿದಂತೆ ಇಂತಹ ಕೆಲಸವನ್ನು ಮಾಡುತ್ತಿರುವ ಏಕೈಕ ವ್ಯಕ್ತಿ ನಾನು. ಇಂತಹುದಕ್ಕಾಗಿ ಹೆಚ್ಚಿನ ಯಾವುದೇ ಅವಕಾಶಗಳಿಲ್ಲ ಮತ್ತು ನಾನೂ ಕೂಡ ಹೀಗೆ ನಿರಂತರವಾಗಿ ಬೋಧಿಸುವುದಿಲ್ಲ. ನನಗೆ ಅನಿಸುವ ಮಟ್ಟಿಗೆ ನನ್ನ ಈ ಬೋಧನೆಗಳನ್ನು ವ್ಯಕ್ತಿಯುತವಾಗಿ ಕೇಳಲು ಅವಕಾಶ ಸಿಕ್ಕಿದವರಿಗೆ, ನಾನು ಪ್ರಾಮಾಣಿಕವಾಗಿ ಹೇಳುತ್ತೇನೆ, ನೀವು ಈ ಕಾಲಘಟ್ಟದ ಅಮೂಲ್ಯತೆಯನ್ನು ಭವಿಷ್ಯದಲ್ಲಿ ಮನಗಾಣುತ್ತೀರಿ. ಅಲ್ಲದೆ ನಾವು ಪೂರ್ವಸಂಕಲ್ಪಿತ ಸಂಬಂಧಗಳನ್ನು ನಂಬುತ್ತೇವೆ, ಇಲ್ಲಿ ಎಲ್ಲರೂ ಕುಳಿತಿರುವುದೇಕೆಂದರೆ ಎಲ್ಲರಿಗೂ ಪೂರ್ವಸಂಕಲ್ಪಿತವಾದ ಸಂಬಂಧವಿದೆ.

---

1. **ಚೀಗಾಂಗ್** – ಚೀ ಅಥವ "ಪ್ರಮುಖ ಶಕ್ತಿ"ಗಳನ್ನು ಅಭ್ಯಾಸ ಮಾಡುವ ಪಾರಂಪರಿಕ ಚೀನೀ ವ್ಯಾಯಾಮ ವ್ಯವಸ್ಥೆ. 1

ಎಲ್ಲರೂ ಯೋಚಿಸಿ ನೋಡಿ: ಉನ್ನತ ಮಟ್ಟದೆಡೆಗೆ ಚಿಗಾಂಗ್‌ನ್ನು ಬೋಧಿಸಲು ಯಾವ ಸಂಗತಿ ಬೇಕಾಗುತ್ತದೆ? ಇದು ಮಾನವ ಕುಲಕ್ಕೆ ಮೋಕ್ಷವನ್ನು ದಯಪಾಲಿಸಿದಂತಲ್ಲವೇ? ಮಾನವ ಕುಲಕ್ಕೆ ಮೋಕ್ಷವನ್ನು ದಯಪಾಲಿಸುವುದೆಂದರೆ ನೀವು ನಿಜವಾಗಿಯೂ ಸಾಧನೆಯನ್ನು ಅಭ್ಯಾಸ ಮಾಡುತ್ತಿರುತ್ತೀರಿ, ಮತ್ತು ಕೇವಲ ರೋಗ ಗುಣಪಡಿಸಲು ಮತ್ತು ಗಟ್ಟಿ ಮುಟ್ಟಾಗಿರಿಸಿಕೊಳ್ಳಲಷ್ಟೇ ಅಲ್ಲ. ಅದರಂತೆ ನೈಜ ಸಾಧನಾಭ್ಯಾಸವು ಅಭ್ಯಾಸಿಗರಿಂದ ಉನ್ನತ ಮಟ್ಟದ ಷಿನ್‌ಷಿಂಗ್‌ನ್ನು ಅಪೇಕ್ಷಿಸುತ್ತದೆ. ಎಲ್ಲರೂ ಕೂಡ ಇಲ್ಲಿ ದಾಫಾ ಕಲಿಯಲು ಕುಳಿತಿದ್ದಾರೆ, ಆದ್ದರಿಂದ ನೀವು ನಿಷ್ಠ ಅಭ್ಯಾಸಿಗರಂತೆ ನಡೆದು ಕೊಳ್ಳಬೇಕಾಗುತ್ತದೆ, ಮತ್ತು ನಿಮ್ಮ ಎಲ್ಲಾ ಕಾಮನೆಗಳನ್ನು ಬಿಡಬೇಕು. ಅಭ್ಯಾಸ ಈ ದಾಫಾಕ್ಕೆ ಹಲವಾರು ಆಸೆ ಆಕಾಂಕ್ಷೆಗಳೊಂದಿಗೆ ಬಂದರೆ ಏನನ್ನೂ ನೀವು ಅರಿತುಕೊಳ್ಳುವುದಿಲ್ಲ. ನಿಜ ಹೇಳಬೇಕೆಂದರೆ ಇಡೀ ಸಾಧನೆಯ ಪ್ರಕ್ರಿಯೆಯೇ ಸಾಧಕ ನಿರಂತರವಾಗಿ ತನ್ನ ಮಾನವ ಕಾಮನೆಗಳನ್ನು ಬಿಡುವುದೇ ಆಗಿದೆ. ಸಾಮಾನ್ಯ ಮಾನವ ಸಮಾಜದಲ್ಲಿ, ಜನರು ಸ್ಪರ್ಧಿಸುತ್ತಾರೆ, ಮೋಸ ಮಾಡುತ್ತಾರೆ ಮತ್ತು ಒಬ್ಬರಿಗೊಬ್ಬರು ಸಣ್ಣ ವೈಯುಕ್ತಿಕ ಲಾಭಕ್ಕಾಗಿ ಹಾನಿ ಮಾಡುತ್ತಾರೆ. ಈ ಎಲ್ಲಾ ಮಾನಸಿಕ ಚಿತ್ತಗಳನ್ನು ಸಂಪೂರ್ಣವಾಗಿ ಬಿಟ್ಟು

ನಾನಿಲ್ಲಿ ರೋಗಗಳನ್ನು ಗಣಪಡಿಸುವ ಕುರಿತು ಏನನ್ನೂ ಹೇಳುವುದಿಲ್ಲ ಮತ್ತು ನಾವು ರೋಗಗಳನ್ನು ಗುಣಪಡಿಸುವುದೂ ಇಲ್ಲ. ಒಬ್ಬ ನಿಷ್ಠ ಅಭ್ಯಾಸಿಗನಾಗಿ ನೀವು ರೋಗಿಷ್ಠ ಶರೀರದೊಂದಿಗೆ ಸಾಧನೆಯ ಅಭ್ಯಾಸವನ್ನು ಮಾಡಲಿಕ್ಕಾಗದು. ನಾನು ನಿಮ್ಮ ಶರೀರವನ್ನು ಶುದ್ಧೀಕರಿಸುತ್ತೇನೆ. ದೇಹ ಶುದ್ಧೀಕರಣವನ್ನು ಕೇವಲ ನೈಜವಾಗಿ ಈ ಅಭ್ಯಾಸವನ್ನು ಮತ್ತು ಫಾ ಅನ್ನು ಕಲಿಯಲು ಬರುವವರಿಗೆ ಮಾತ್ರ ಮಾಡಲಾಗುವುದು. ನಾವಿಲ್ಲಿ ಒಂದು ವಿಷಯವನ್ನು ಒತ್ತಿ ಹೇಳಬೇಕು: ನೀವು ರೋಗದ ಬಗೆಗಿನ ಕಳಕಳಿ ಅಥವ ಮೋಹವನ್ನು ತ್ಯಜಿಸದಿದ್ದರೆ ನಾವೇನೂ ಮಾಡಲಿಕ್ಕಾಗುವುದಿಲ್ಲ ಮತ್ತು ನಿಮಗೆ ಸಹಾಯ ಮಾಡಲು ಆಗವುದಿಲ್ಲ. ಹೀಗೇಕೆ? ಏಕೆಂದರೆ ಈ ವಿಶ್ವದಲ್ಲಿ ಈ ತರಹದ ತತ್ವವಿದೆ; ಸಾಮಾನ್ಯ ಮಾನವರ ಚಟುವಟಿಕೆಗಳು, ಬುದ್ಧ ತತ್ವದ ಪ್ರಕಾರ, ಎಲ್ಲಾ ಪೂರ್ವಸಂಕಲ್ಪಿತ ಸಂಬಂಧಗಳನ್ನು ಹೊಂದಿರುತ್ತದೆ. ಹುಟ್ಟು, ಮುಪ್ಪು, ರೋಗ ಮತ್ತು ಸಾವುಗಳು ಸಾಮಾನ್ಯ ಜನರಿಗಾಗಿಯೇ ಇರುವಂತಹುದು, ಹಿಂದಿನ ತಪ್ಪು ಕಾರ್ಯಗಳಿಂದ ಉದ್ಭವಿಸುವ ಕರ್ಮದಿಂದಾಗಿ ಒಬ್ಬರಿಗೆ ರೋಗ ಅಥವ ಕಷ್ಟಕೋಟಲೆಗಳು ಬರುತ್ತವೆ; ನರಳುವಿಕೆ ಈ ಕಾರ್ಮಿಕ ಸಾಲವನ್ನು ಹಿಂತಿರುಗಿಸಿದಂತೆ, ಮತ್ತು ಹಾಗಾಗಿ ಯಾರೂ ಕೂಡ ಇದನ್ನು ಹಾಗೇ ಸುಮ್ಮನೆ ಬದಲಾಯಿಸಲು ಆಗುವುದಿಲ್ಲ. ಬದಲಾಯಿಸುವುದೆಂದರೆ ಒಬ್ಬರು ಋಣದಲ್ಲಿದ್ದುಕೊಂಡು ಈ ಋಣವನ್ನು ಹಿಂತಿರುಗಿಸುವುದು ಬೇಕಾಗಿಲ್ಲದಂತಾಗುತ್ತದೆ. ಮತ್ತು ಇದನ್ನು ಮನೋ ಇಚ್ಛೆ ಮಾಡಲಿಕ್ಕಾಗುವುದಿಲ್ಲ. ಹೀಗೆ ಮಾಡುವುದು ಕೆಟ್ಟ ಕಾರ್ಯವನ್ನು ಮಾಡಿದಂತೆಯೇ ಆಗುತ್ತದೆ.

ಹಲವು ಜನರು ರೋಗಿಗಳಿಗೆ ಚಿಕಿತ್ಸೆ ಕೊಡುವುದು, ರೋಗಗಳನ್ನು ಗುಣಪಡಿಸುವುದು ಮತ್ತು ಅವರ ಆರೋಗ್ಯವನ್ನು ಸುಧಾರಿಸುವುದು ಎಲ್ಲವೂ ಒಳ್ಳೆಯ ಕಾರ್ಯಗಳೆಂದು ತಿಳಿದುಕೊಂಡಿರುತ್ತಾರೆ. ನನ್ನ ದೃಷ್ಟಿಯಲ್ಲಿ, ಅವರು ರೋಗಗಳನ್ನು ನಿಜವಾಗಿಯೂ ಗುಣಪಡಿಸಿರುವುದಿಲ್ಲ. ಅವನ್ನು ತೆಗೆಯುವುದನ್ನು ಬಿಟ್ಟು ಅವರು ಅದನ್ನು ಮುಂದೂಡಿರುತ್ತಾರೆ ಇಲ್ಲವೇ ರೋಗವನ್ನು ಬದಲಾಯಿಸಿರುತ್ತಾರೆ. ನಿಜವಾಗಿಯೂ ಕಷ್ಟಕೋಟಲೆಗಳನ್ನು ತೊಲಗಿಸಬೇಕಾದರೆ ಕರ್ಮವನ್ನು ನಿರ್ನಾಮ ಮಾಡಬೇಕು. ಒಬ್ಬರು ನಿಜವಾಗಿಯೂ ರೋಗಗಳನ್ನು ಗುಣಪಡಿಸಲು ಮತ್ತು ಇಂತಹ ಕರ್ಮವನ್ನು ಸಂಪೂರ್ಣವಾಗಿ ನಿರ್ನಾಮ ಮಾಡಲು ಶಕ್ತರಾಗಿದ್ದರೆ ಅವರ ಮಟ್ಟವು ಬಹಳ ಉನ್ನತವಾಗಿರಬೇಕಾಗುತ್ತದೆ. ಈ ಒಂದು ವಸ್ತುಸ್ಥಿತಿಯನ್ನು ಅವರು ಕಂಡುಕೊಂಡಿರುತ್ತಾರೆ; ಸಾಮಾನ್ಯ ಮಾನವ ಸಮಾಜದ ತತ್ವಗಳನ್ನು ಹಾಗೇ ಸುಮ್ಮನೆ ಉಲ್ಲಂಘಿಸಲಾಗುವುದಿಲ್ಲ. ಸಾಧನೆಯ ಅಭ್ಯಾಸದ

---

2. ದಾಫಾ – “ಮಹಾ ಕಾಯಿದೆ” ಕಟ್ಟಳೆ ಅಥವ “ಮಹಾ ಹಾದಿ” ತತ್ವಗಳು

3. ಷಿನ್‌ಷಿಂಗ್ – ಮನ ಅಥವ ಹೃದಯದ ಪ್ರಕೃತಿ; ನೈತಿಕ ಗುಣ ಬಿಡಬೇಕು. ವಿಶೇಷವಾಗಿ ಸಾಧನೆಯ ಅಭ್ಯಾಸವನ್ನು ಇಂದು ಓದುತ್ತಿರುವವರು, ಈ ಒಂದು ಮಾನಸಿಕ ಚಿತ್ತಗಳನ್ನು ಇನ್ನೂ ಹೆಚ್ಚಾಗಿ ತ್ಯಜಿಸಬೇಕು.

ಹಾದಿಯಲ್ಲಿ ಒಬ್ಬ ಅಭ್ಯಾಸಿಗ ಆತ ಅಥವ ಆಕೆಯ ಸಹಾನುಭೂತಿಯಿಂದ ರೋಗದ ಚಿಕಿತ್ಸೆಗೆ ನೆರವಾಗುವುದು ಮತ್ತು ಇತರರ ರೋಗಗಳನ್ನು ಗುಣಪಡಿಸುವುದು ಅಥವ ಅವರ ಆರೋಗ್ಯ ಕಾಪಾಡಿಕೊಳ್ಳಲು ನೆರವಾಗುವುದು ಇಂತಹ ಒಳ್ಳೆಯ ಕೆಲಸಗಳನ್ನು ಮಾಡಬಹುದು – ಇವೆಲ್ಲಕ್ಕೂ ಅನುಮತಿಯಿದೆ. ಹಾಗಾಗಿಯೂ, ಒಬ್ಬರು ಇತರ ವ್ಯಕ್ತಿಗಳ ರೋಗಗಳನ್ನು ಸಂಪೂರ್ಣವಾಗಿ ಗುಣಪಡಿಸಲು ಸಾಧ್ಯವಿಲ್ಲ. ಒಬ್ಬ ಸಾಮಾನ್ಯ ಮನುಷ್ಯನ ರೋಗಗಳ ಕಾರಣಗಳನ್ನು ಹಾಗೆಯೇ ನಿರ್ಮೂಲನಗೊಳಿಸಬಹುದಾದರೆ, ಒಬ್ಬ ಅಸಾಧಕ ಕೂಡ ಯಾವುದೇ ರೋಗಗಳಿಲ್ಲದೆ ಹೊರನಡೆಯುತ್ತಾನೆ. ಈ ವ್ಯಕ್ತಿ ಒಮ್ಮೆ ಈ ಬಾಗಿಲಿನಿಂದ ಹೊರ ನಡೆದಾಕ್ಷಣ ಸಾಮಾನ್ಯ ಮನುಷ್ಯನಾಗಿಯೇ ಉಳಿಯುತ್ತಾನೆ. ಈತನು ಸಾಮಾನ್ಯ ಮನುಷ್ಯನಂತೆಯೇ ವೈಯುಕ್ತಿಕ ಲಾಭಕ್ಕಾಗಿ ಸ್ಪರ್ಧಿಸುತ್ತಿರುತ್ತಾನೆ. ಈತನ ಕರ್ಮವನ್ನು ಹಾಗೆ ಸುಮ್ಮನೆ ಹೇಗೆ ನಿರ್ಮೂಲನಗೊಳಿಸಬಹುದು? ಇದು ಸಂಪೂರ್ಣವಾಗಿ ನಿಷೇಧಿಸಿದೆ.

ಹಾಗಾದರೆ ಇದನ್ನು ಅಭ್ಯಾಸಿಗರಿಗೆ ಹೇಗೆ ಮಾಡಬಹುದು? ಏಕೆಂದರೆ ಅಭ್ಯಾಸಿಗರು ಅತ್ಯಂತ ಅಮೂಲ್ಯವಾದವರು, ಆತ ಅಥವ ಆಕೆ ಸಾಧನೆಯ ಅಭ್ಯಾಸವನ್ನು ಮಾಡಲು ಬಯಸುತ್ತಾರೆ. ಆದ್ದರಿಂದ ಈ ಆಲೋಚನೆ ಬೆಳೆಯುವುದೇ ಅತ್ಯಂತ ಅಮೂಲ್ಯವಾದದ್ದು. ಬೌದ್ಧಧರ್ಮದಲ್ಲಿ ಜನರು ಬುದ್ಧ–ಸ್ವಭಾವವನ್ನು ಕುರಿತು ಮಾತನಾಡುತ್ತಾರೆ. ಒಬ್ಬ ವ್ಯಕ್ತಿಯಲ್ಲಿ ಬುದ್ಧ–ಸ್ವಭಾವ ಉದ್ಭವಿಸಿದಾಗ, ಸುಜ್ಞಾನಿ ಜೀವಿಗಳು ಆತನಿಗೆ ಸಹಾಯ ಮಾಡಲು ಸಾಧ್ಯವಾಗುತ್ತದೆ, ಏನಿದರ ಅರ್ಥ? ನನ್ನನ್ನು ಕೇಳಿದರೆ, ನಾನು ಉನ್ನತ ಮಟ್ಟದ ಅಭ್ಯಾಸವನ್ನು ಬೋಧಿಸುತ್ತಿರುವುದರಿಂದ ಇದು ಉನ್ನತ ಮಟ್ಟದ ತತ್ವಗಳು ಹಾಗೂ ಅತ್ಯಂತ ಮಹತ್ವ ಪೂರ್ಣ ಸಂಗತಿಗಳನ್ನು ಒಳಗೊಂಡಿರುತ್ತದೆ. ನಾವು ನೋಡುವಂತೆ ಈ ವಿಶ್ವದಲ್ಲಿ ಮಾನವ ಜೀವಿಗಳನ್ನು ಈ ಸಾಮಾನ್ಯ ಮಾನವ ಸಮಾಜದಲ್ಲಿ ಸೃಷ್ಠಿಸುವುದಿಲ್ಲ ; ಒಬ್ಬರ ನಿಜವಾದ ಜೀವನವು ಜಗತ್ತಿನ ಒಂದು ಸ್ಥಳದಲ್ಲಿ ಸೃಷ್ಠಿಸಲಾಗಿರುತ್ತದೆ. ಏಕೆಂದರೆ, ಈ ವಿಶ್ವದಲ್ಲಿ ಅನೇಕ ತರಹದ ಬಹಳಷ್ಟು ವಸ್ತುಗಳಿವೆ, ಅಂತಹ ವಸ್ತುಗಳು ತಮ್ಮ ನಡುವಿನ ಅಂತರ್ ಕ್ರಿಯೆಗಳಿಂದ ಜೀವವನ್ನು ಸೃಷ್ಠಿಸುತ್ತದೆ. ಬೇರೆ ಮಾತಿನಲ್ಲಿ ಹೇಳುವುದಾದರೆ, ಒಬ್ಬ ವ್ಯಕ್ತಿಯ ಅತ್ಯಂತ ಹಿಂದಿನ ಜೀವವು ಈ ವಿಶ್ವದಿಂದ ಬಂದಿರುವುದಾಗಿರುತ್ತದೆ. ಈ ವಿಶ್ವದ ವಾತಾವರಣವು ಕಾರುಣ್ಯದಿಂದ ಕೂಡಿದೆ ಮತ್ತದು ಜ್ಹೆನ್–ಷ್ಹನ್–ರ್‍ಹೆನ್‌ನ ವಿಶಿಷ್ಟ ಗುಣಲಕ್ಷಣವನ್ನು ಒಳಗೊಂಡಿರುತ್ತದೆ. ಹುಟ್ಟುವಾಗ ಒಬ್ಬರು ಈ ವಿಶ್ವದ ವಿಶಿಷ್ಟ ಗುಣಲಕ್ಷಣಕ್ಕೆ ಅನುರೂಪವಾಗಿರುತ್ತಾರೆ. ಆದರೂ ಜೀವನ ಸಂಖ್ಯೆ ಹೆಚ್ಚಿದಂತೆ ಸಮುದಾಯಿಕ ರೂಪದ ಸಾಮಾಜಿಕ ಸಂಬಂಧಗಳು ಬೆಳೆಯುತ್ತವೆ. ಇದರಿಂದ ಹಲವು ಜನರು ಸ್ವಾರ್ಥವನ್ನು ಬೆಳೆಸಿಕೊಳ್ಳಬಹುದು ಮತ್ತು ಕ್ರಮೇಣ ಅವರ ಮಟ್ಟವು ಕುಗ್ಗುತ್ತಾ ಹೋಗುವುದು. ಆ ಒಂದು ಮಟ್ಟದಲ್ಲಿ ಅವರು ಪುನಃ ಒಳ್ಳೆಯವರಲ್ಲದವರಾಗಬಹುದು ಮತ್ತು ಅಲ್ಲೂ ಕೂಡ ಇರಲಾಗುವುದಿಲ್ಲ. ಅವರು ಮತ್ತೂ ತಳಕ್ಕೆ ಇಳಿಯಲು ಮುಂದುವರೆಯುತ್ತಾರೆ, ಕೊನೆಗೆ, ಅವರು ಈ ಮಾನವ ಜೀವಿಗಳ ಮಟ್ಟವನ್ನು ಮುಟ್ಟುತ್ತಾರೆ.

ಇಡೀ ಮಾನವ ಸಮಾಜವು ಒಂದೇ ಮಟ್ಟದಲ್ಲಿದೆ. ಅಸಾಮಾನ್ಯ ಶಕ್ತಿಗಳ ಅಥವ ಮಹಾನ್ ಸುಜ್ಞಾನಿ ಜೀವಿಗಳ ದೃಷ್ಟಿಕೋನದಿಂದ ಈ ಜೀವಿಗಳನ್ನು ಈ ಮಟ್ಟಕ್ಕೆ ಬಿದ್ದ ಕಾರಣದಿಂದ ನಾಶಪಡಿಸಬೇಕಿತ್ತು, ಆದರೂ ಈ ಮಹಾನ್ ಸುಜ್ಞಾನಿ ಜೀವಿಗಳು ತಮ್ಮ ಕರುಣೆ ದಯೆಯಿಂದ ಇವರಿಗೆ ಇನ್ನೊಂದು ಅವಕಾಶ ಕೊಟ್ಟು ಈ ಒಂದು ವಿಶೇಷ ಪರಿಸರ ಮತ್ತು ಅಪೂರ್ವವಾದ ಪರಿಮಾಣವನ್ನು ನಿರ್ಮಿಸಿದರು. ಈ ಪರಿಮಾಣದಲ್ಲಿರುವ ಎಲ್ಲಾ ಜೀವಿಗಳು ಪ್ರಪಂಚದ ಇತರ ಎಲ್ಲಾ ಪರಿಮಾಣಗಳಿಗಿಂತ ಭಿನ್ನವಾದುವು. ಈ ಪರಿಮಾಣದಲ್ಲಿರುವ ಜೀವಿಗಳು ಇತರ ಪರಿಮಾಣದಲ್ಲಿರುವ ಜೀವಿಗಳನ್ನು ಅಥವ ಈ ಪ್ರಪಂಚದ ಸತ್ಯವನ್ನು ನೋಡಲಿಕ್ಕಾಗುವುದಿಲ್ಲ. ಆದ್ದರಿಂದ ಈ ಮಾನವ ಜೀವಿಗಳು ಚಕ್ರವ್ಯೂಹದಲ್ಲಿ ಕಳೆದುಹೋಗಿದ್ದಾರೆ. ತಮ್ಮ ರೋಗಗಳನ್ನು ಗುಣಪಡಿಸಿಕೊಳ್ಳುವುದಕ್ಕೆ ಅಥವ ಕರ್ಮ ಮತ್ತು ಕಷ್ಟಕಾರ್ಪಣ್ಯಗಳನ್ನು ನಿರ್ಮೂಲನಗೊಳಿಸಲು ಈ ಜನರು ಸಾಧನೆಯ ಅಭ್ಯಾಸವನ್ನು ಮಾಡಬೇಕು ಮತ್ತು ತಮ್ಮ ನೈಜ ಸತ್ಯ ಸ್ವ ಆತ್ಮಕ್ಕೆ ಮರಳಬೇಕು. ಬೇರೆ ಬೇರೆ ಸಾಧನೆಯ ಶಾಲೆಗಳು ಈ ಕುರಿತು ಈ ರೀತಿಯಾದ ದೃಷ್ಟಿ ಹೊಂದಿದೆ. ಒಬ್ಬರು ತಮ್ಮ ನೈಜ ಸತ್ಯ ಸ್ವ ಆತ್ಮಕ್ಕೆ ಮರಳಬೇಕು. ಇದೇ ಮಾನವನಾಗಿರುವುದರ ನಿಜವಾದ ಉದ್ದೇಶ. ಆದ್ದರಿಂದ ಒಮ್ಮೆ ಒಬ್ಬ ವ್ಯಕ್ತಿ, ಸಾಧನೆಯ ಅಭ್ಯಾಸವನ್ನು ಮಾಡಬಯಸಿದರೆ, ಆತನ ಅಥವ ಆಕೆಯ ಬುದ್ಧ–ಸ್ವಭಾವವು

ಪ್ರಚಾರಕ್ಕೆ ಬಂದಿದೆಯೆಂದೇ ಪರಿಗಣಿಸುತ್ತಾರೆ. ಈ ಒಂದು ಆಲೋಚನೆಯೇ ಅತ್ಯಂತ ಅಮೂಲ್ಯವಾದುದು, ಏಕೆಂದರೆ ಈ ವ್ಯಕ್ತಿ ಆತನ ಅಥವ ಆಕೆಯ ಮೂಲ ಸತ್ಯ ಸ್ವಆತ್ಮಕೆ ಮರಳಲು ಮತ್ತು ಈ ಸಾಮಾನ್ಯ ಮಾನವರು ಮಟ್ಟವನ್ನು ಮೀರಲು ಬಯಸುತ್ತಾರೆ.

ಬಹುಷಃ ಎಲ್ಲರೂ ಬುದ್ಧಧರ್ಮದಲ್ಲಿನ ಈ ವಾಕ್ಯವನ್ನು ಕೇಳಿರಬೇಕು: "ಒಬ್ಬರಲ್ಲಿ ಬುದ್ಧ–ಸ್ವಭಾವವು ಉದ್ಭವವಾದಾಗ ಈ ಜಗತ್ತು ಹತ್ತು ದಿಕ್ಕುಗಳಲ್ಲಿ ನಡುಗುತ್ತದೆ". ಇದನ್ನು ಯಾರು ನೋಡುತ್ತಾರೋ ಅವರು ಸಹಾಯ ಹಸ್ತ ನೀಡಲು ಧಾವಿಸುತ್ತಾರೆ. ಮತ್ತು ಈ ವ್ಯಕ್ತಿಗೆ ಯಾವುದೇ ಷರತ್ತಿಲ್ಲದೆ ಸಹಾಯ ಮಾಡುತ್ತಾರೆ. ಮಾನವ ಕೋಟಿಗೆ ಮೋಕ್ಷವನ್ನು ದಯಪಾಲಿಸುವಾಗ ಬುದ್ಧ ಶಾಲೆಯು ಯಾವುದೇ ಷರತ್ತನ್ನು ವಿಧಿಸುವುದಿಲ್ಲ ಅಥವ ಯಾವುದೇ ಲಾಭವನ್ನು ನಿರೀಕ್ಷಿಸುವುದಿಲ್ಲ ಮತ್ತು ಅವರು ಅನಿರ್ಬಂಧಿತವಾಗಿ ಸಹಾಯ ಮಾಡುತ್ತಾರೆ. ಹಾಗಾಗಿ ನಾವು ಅಭ್ಯಾಸಿಗರಿಗಾಗಿ ಅನೇಕ ಸಂಗತಿಗಳನ್ನು ಮಾಡಬಹುದು. ಆದರೆ ದಿನನಿತ್ಯದ ಮನುಷ್ಯನಾಗಿಯೂ ಇರ ಬಯಸುವ ಮತ್ತು ಆತನ ಅಥವ ಆಕೆಯ ರೋಗವನ್ನು ಗುಣಪಡಿಸಲು ಇಚ್ಛಿಸುವ, ದಿನನಿತ್ಯದ ಮನುಷ್ಯರಿಗೆ ಇದು ಯಾವುದೇ ಕೆಲಸಕ್ಕೆ ಬಾರದು. ಕೆಲವು ಜನರು ಆಲೋಚಿಸಬಹುದು, "ನಾನು ಸಾಧನೆಯ ಅಭ್ಯಾಸವನ್ನು ನನ್ನ ರೋಗ ಗುಣವಾದ ನಂತರ ಮಾಡುತ್ತೇನೆ". ಸಾಧನೆಯ ಅಭ್ಯಾಸವನ್ನು ಮಾಡಲು ಯಾವುದೇ ಪೂರ್ವ ಷರತ್ತು ಇಲ್ಲ ಮತ್ತು ಸಾಧನೆ ಮಾಡಲು ಇಚ್ಛಿಸಿದರೆ ಹಾಗೇ ಅಭ್ಯಾಸದಲ್ಲಿ ತೊಡಗಬೇಕು. ಆದರೂ ಕೆಲವು ಜನರ ದೇಹದಲ್ಲಿ ರೋಗವಿರುತ್ತದೆ. ಮತ್ತು ಕೆಲವು ಜನರ ದೇಹಗಳಲ್ಲಿ ಅವ್ಯವಸ್ಥಿತ ಸಂದೇಶಗಳನ್ನು ಹೊಂದಿರಬಹುದು. ಕೆಲವು ಜನರು ಚೀಗಾಂಗ್‌ನ್ನು ಯಾವತ್ತೂ ಅಭ್ಯಾಸ ಮಾಡದೆ ಇರಬಹುದು. ಅಲ್ಲದೆ ಇದನ್ನು ಹತ್ತಾರು ವರ್ಷಗಳಿಂದ ಅಭ್ಯಾಸ ಮಾಡುತ್ತಿರುವ ಮತ್ತು ಇನ್ನೂ ಚೀ[5] ಮಟ್ಟದಲ್ಲೇ ಅಭ್ಯಾಸದಲ್ಲಿ ಯಾವುದೇ ಪ್ರಗತಿ ಇಲ್ಲದೆ ಒದ್ದಾಡುತ್ತಿರುವ ಹಲವಾರು ಜನರಿರಬಹುದು.

ಹಾಗಾದರೆ ಈ ಕುರಿತು ಏನು ಮಾಡಬೇಕು? ನಾವು ಅವರ ದೇಹವನ್ನು ಪರಿಶುದ್ಧಗೊಳಿಸುತ್ತೇವೆ ಮತ್ತು ಅವರು ಉನ್ನತ ಮಟ್ಟದೆಡೆ ಸಾಧನೆಯ ಅಭ್ಯಾಸದಲ್ಲಿ ತೊಡಗಲು ಅನುವು ಮಾಡಿ ಕೊಡುತ್ತೇವೆ. ಸಾಧನೆಯ ಅಭ್ಯಾಸದ ಕನಿಷ್ಠ ಮಟ್ಟದಲ್ಲಿ ಒಂದು ಸ್ಥಿತ್ಯಂತರ ಇರುತ್ತದೆ ಮತ್ತು ಇದು ನಿಮ್ಮ ದೇಹವನ್ನು ಸಂಪೂರ್ಣವಾಗಿ ಶುದ್ಧೀಕರಿಸಬೇಕು. ನಿಮ್ಮ ಮನಸ್ಸಿನಲ್ಲಿರುವ ಎಲ್ಲಾ ಕೆಟ್ಟ ವಿಷಯಗಳು, ನಿಮ್ಮ ದೇಹವನ್ನು ಸುತ್ತುವರಿದಿರುವ ಕರ್ಮಿಕ ಕ್ಷೇತ್ರ ಮತ್ತು ನಿಮ್ಮ ದೇಹವನ್ನು ಅನಾರೋಗ್ಯಗೊಳಿಸುವ ಮೂಲವಸ್ತುಗಳಿಂದ ಶುಚಿಗೊಳಿಸಬೇಕಾಗುತ್ತದೆ. ಇವೆಲ್ಲವನ್ನು ಶುಚಿಗೊಳಿಸದೇ ಹೋದಲ್ಲಿ ನೀವು ಹೇಗೆ ಇಂತಹ ಅಶುಚಿ, ಕಪ್ಪಾದ ದೇಹ ಮತ್ತು ಅಸಹ್ಯ ಮನಸ್ಸಿನಿಂದ ಉನ್ನತ ಮಟ್ಟದೆಡೆಗೆ ಸಾಧನೆಯ ಅಭ್ಯಾಸವನ್ನು ಮಾಡಲು ಸಾಧ್ಯ? ನಾವಿಲ್ಲಿ ಚೀಯನ್ನು ಅಭ್ಯಾಸ ಮಾಡುವುದಿಲ್ಲ. ನೀವು ಅಂತಹ ಕೆಳಮಟ್ಟದ ಸಂಗತಿಯನ್ನು ಅಭ್ಯಾಸ ಮಾಡುವ ಅಗತ್ಯವಿಲ್ಲ ಮತ್ತು ನಾವು ನಿಮ್ಮನ್ನು ಅದಕ್ಕೂ ಮಿಗಿಲಾದುದರೆಡೆ ಒಯ್ಯುತ್ತೇವೆ, ಆ ಮೂಲಕ ನಿಮ್ಮ ದೇಹವನ್ನು ಯಾವುದೇ ರೋಗದಿಂದ ಮುಕ್ತವಾದ ಸ್ಥಿತಿಯತ್ತ ಒಯ್ಯಲಾಗುತ್ತದೆ. ಏತನ್ಮಧ್ಯೆ ನಿಮ್ಮ ದೇಹದಲ್ಲಿ ತಳಮಟ್ಟದಲ್ಲಿ ಅಡಿಪಾಯ ಹಾಕುವುದಕ್ಕೆ ಅವಶ್ಯವಿರುವ ಸಿದ್ಧ ಯಾಂತ್ರಿಕ ರಚನಾ ವ್ಯವಸ್ಥೆ ಅಳವಡಿಸಲಾಗವುದು. ಈ ರೀತಿಯಾಗಿ ನೀವು ಉನ್ನತ ಮಟ್ಟದೆಡೆ ಸಾಧನೆಯ ಅಭ್ಯಾಸವನ್ನು ಕೈಗೊಳ್ಳಲು ಸಾಧ್ಯವಾಗುತ್ತದೆ.

---

4. **"ಹತ್ತು ದಿಕ್ಕುಗಳ ಜಗತ್ತು"** – ಈ ಪ್ರಪಂಚದ ಬಗ್ಗೆ ಬೌದ್ಧರ ಪರಿಕಲ್ಪನೆ.

5. ಚೀ – ಚೀನೀ ಸಂಸ್ಕೃತಿಯಲ್ಲಿ "ಮೂಲಸತ್ವದ ಶಕ್ತಿಯು" ; ಗಾಂಗ್‌ಗೆ ಹೋಲಿಸಿದರೆ ಕೆಳಮಟ್ಟದ ಶಕ್ತಿಯರೂಪ ಎಂದು ನಂಬಲಾಗುತ್ತದೆ.

ಸಾಧನಾ ಅಭ್ಯಾಸದ ಪದ್ಧತಿಯ ಪ್ರಕಾರ ಚೀಯನ್ನು ಸೇರಿಸಿದರೆ ಮೂರು ಮಟ್ಟಗಳಿವೆ. ಹಾಗಾಗ್ಯೂ ನೈಜ ಸಾಧನಾ ಅಭ್ಯಾಸದಲ್ಲಿ ಒಟ್ಟು ಎರಡು ಮಹತ್ವದ ಮಟ್ಟಗಳಿವೆ (ಚೀಯನ್ನು ಅಭ್ಯಾಸ ಮಾಡವುದನ್ನು ಬಿಟ್ಟು) ಒಂದು, ಮೂರು–ಲೋಕದೊಳಗಿನ ಫಾ (ಶೀ–ಜಿಯಾನ್ ಫಾ) ಸಾಧನಾ ಅಭ್ಯಾಸ, ಹಾಗೂ ಮತ್ತೊಂದು ಮೂರು – ಲೋಕದಾಚೆಗಿನ ಫಾ (ಚೂ–ಶೀ–ಜಿಯಾನ್–ಫಾ)

ಸಾಧನಾ ಅಭ್ಯಾಸ. ಮೂರು ಲೋಕದೊಳಗಿನ ಫಾ ಮತ್ತು ಮೂರು ಲೋಕದಾಚೆಗಿನ ಫಾ ಸಾಧನಾ ಅಭ್ಯಾಸವು ದೇವಸ್ಥಾನಗಳಲ್ಲಿ ತಾತ್ವಿಕ ನೆಲೆಯಲ್ಲಿ ಬಳಸಲ್ಪಡುವ "ಲೋಕದೊಳಗಿನ" ಮತ್ತು " ಲೋಕದಾಚೆಗಿನ" ಪದಗಳಿಗಿಂತ ಭಿನ್ನವಾದುದು. ನಮ್ಮದು ಸಾಧನಾ ಅಭ್ಯಾಸದ ಎರಡು ಪ್ರಮುಖ ಮಟ್ಟದ ಮೂಲಕ ನಡೆಯುವ ಮಾನವ ಶರೀರದ ಅತ್ಯಂತ ನಿಜವಾದ ಪರಿವರ್ತನೆ. ಏಕೆಂದರೆ ಮೂರು ಲೋಕದೊಳಗಿನ ಫಾ ಸಾಧನಾ ಅಭ್ಯಾಸದ ಹಾದಿಯಲ್ಲಿ ಒಬ್ಬರ ದೇಹವು ನಿರಂತರವಾಗಿ ಶುದ್ಧೀಕರಿಸಲ್ಪಡುತ್ತದೆ, ಒಬ್ಬರು ಮೂರು ಲೋಕದೊಳಗಿನ 'ಫಾ' ದ ಅತ್ಯಂತ ಉನ್ನತ ಮಟ್ಟವನ್ನು ತಲುಪಿದಾಗ ಅದು ಸಂಪೂರ್ಣವಾಗಿ ಉನ್ನತ ಶಕ್ತಿಯ ಕಣಗಳಿಂದ ಬದಲಿಸಲ್ಪಡುತ್ತದೆ. ಮೂರು ಲೋಕದಾಚೆಗಿನ ಫಾ ಸಾಧನಾ ಅಭ್ಯಾಸವು ಮೂಲಭೂತವಾಗಿ ಬುದ್ಧ–ದೇಹವನ್ನು ಬೆಳಸುವುದೇ ಆಗಿದೆ. ಆ ದೇಹವು ಉನ್ನತ ಶಕ್ತಿ ಕಣಗಳಿಂದ ಮಾಡಲ್ಪಟ್ಟಿದೆ ಮತ್ತು ಎಲ್ಲಾ ಅಸಾಮಾನ್ಯ ಶಕ್ತಿಗಳೆಲ್ಲವೂ ಪುನರಾಭಿವೃದ್ಧಿಗೊಳ್ಳುತ್ತವೆ. ಇದೇ ನಾವು ಉಲ್ಲೇಖಿಸಿರುವಂತಹ ಎರಡು ಪ್ರಮುಖ ಮಟ್ಟಗಳು.

ನಾವು ಪೂರ್ವ ಸಂಕಲ್ಪಿತ ಸಂಬಂಧವನ್ನು ನಂಬುತ್ತೇವೆ. ನಾನು ಈ ರೀತಿಯಾಗಿ ಇಲ್ಲಿ ಕುಳಿತಿರುವ ಎಲ್ಲರಿಗೂ ಮಾಡಬಲ್ಲೆ. ಈ ಸದ್ಯದಲ್ಲಿ ನಮ್ಮಲ್ಲಿ ಎರಡು ಸಾವಿರಕ್ಕೂ ಅಧಿಕ ಜನರಿದ್ದಾರೆ. ನಾನು ಇದನ್ನು ಹಲವಾರು ಸಾವಿರ ಅಥವ ಅದಕ್ಕೂ ಹೆಚ್ಚಿನ ಜನರಿಗೆ, ಹತ್ತು ಸಾವಿರಕ್ಕೂ ಅಧಿಕ ಜನರಿಗೂ ಮಾಡಬಲ್ಲೆ. ಹೇಳುವುದೆಂದರೆ ನೀವು ಕೆಳಮಟ್ಟದಲ್ಲಿ ಅಭ್ಯಾಸ ಮಾಡುವ ಅಗತ್ಯವಿಲ್ಲ. ನಿಮ್ಮ ದೇಹವನ್ನು ಶುದ್ಧೀಕರಿಸಿದ ಮತ್ತು ನಿಮ್ಮನ್ನು ಉನ್ನತೀಕರಿಸಿದ ನಂತರ ನಾನು ನಿಮ್ಮ ದೇಹದಲ್ಲಿ ಒಂದು ಸಂಪೂರ್ಣ ಸಾಧನಾ ಅಭ್ಯಾಸದ ವ್ಯವಸ್ಥೆಯನ್ನು ಅಳವಡಿಸುತ್ತೇನೆ. ತತ್‌ಕ್ಷಣವೇ ನೀವು ಉನ್ನತ ಮಟ್ಟದೆಡೆಗೆ ಸಾಧನಾ ಅಭ್ಯಾಸವನ್ನು ಮಾಡುತ್ತೀರಿ. ಆದರೆ ಇದನ್ನು ಕೇವಲ ನಿಜವಾಗಿಯೂ ಸಾಧನೆಯ ಅಭ್ಯಾಸವನ್ನು ಮಾಡಲಿಚ್ಚಿಸುವ ಅಭ್ಯಾಸಿಗರಿಗೆ ಮಾತ್ರ ಮಾಡಲಾಗುವುದು; ನೀವಿಲ್ಲಿ ಕುಳಿತಿದ್ದಾಕ್ಷಣ ನೀವು ಅಭ್ಯಾಸಿಗರೆಂದು ಅರ್ಥವಲ್ಲ. ಇವೆಲ್ಲವನ್ನು ನೀವು ನಿಮ್ಮ ಮನೋಭಾವವನ್ನು ಮೂಲಭೂತವಾಗಿ ಬದಲಾಯಿಸುವ ತನಕ ನಿಮಗೆ ಕೊಡಲಾಗುತ್ತದೆ ಮತ್ತು ಇದು ಕೇವಲ ಇಷ್ಟಕ್ಕೇ ಸೀಮಿತವೂ ಅಲ್ಲ. ನಿಮಗೆಲ್ಲಾ ನಾನೇನು ಕೊಟ್ಟಿದ್ದೇನೆಂದು ನಂತರ ಅರಿವಾಗುತ್ತದೆ. ನಾನಿಲ್ಲಿ ರೋಗಗಳನ್ನು ಗುಣಪಡಿಸುವ ಕುರಿತೂ ಸಹ ಮಾತನಾಡುವುದಿಲ್ಲ. ಹೊರತಾಗಿ , ನಾವು ಅಭ್ಯಾಸಿಗರ ದೇಹವನ್ನು ಸಾಧನೆಯ ಅಭ್ಯಾಸವನ್ನು ಮಾಡಲು ಅನುವಾಗುವಂತೆ ಸಂಪೂರ್ಣವಾಗಿ ಹೊಂದಿಸಲಾಗುತ್ತದೆ ಎಂದಷ್ಟೇ ಹೇಳುತ್ತೇವೆ. ರೋಗಿಷ್ಟ ದೇಹದೊಂದಿಗೆ ನೀವು ಗಾಂಗ್[7] ಅನ್ನು ಬೆಳೆಸುವುದಕ್ಕೆ ಆಗದು. ಆದ್ದರಿಂದ ನೀವು ನನ್ನ ಬಳಿ ರೋಗಗಳನ್ನು ಗುಣಪಡಿಸಿಕೊಳ್ಳಲು ಬರಬಾರದು ಮತ್ತು ನಾವು ಕೂಡ ಇಂತಹದ್ದನ್ನು ಮಾಡುವುದಿಲ್ಲ. ನಾನು ಸಾರ್ವಜನಿಕವಾಗಿ ಬರಲು ಪ್ರಾಥಮಿಕ

---

6. **ಮೂರು ಲೋಕದೊಳಗಿನ ಫಾ–**
ಬೌದ್ಧಧರ್ಮವು.ಒಬ್ಬರು ಮೂರುಲೋಕದಾಚೆಗಿನ ಸಾಧನೆ ಅಥವ ಮೂರು ಲೋಕವನ್ನು
ಇನ್ನೂ ಮುಟ್ಟಿಲ್ಲವಾದರೆ ಅವರು ಈ ಸಂಸಾರ (ಹುಟ್ಟು ಸಾವುಗಳ ಚಕ್ರ) ದ ಮೂಲಕ ಸಾಗಬೇಕು.

7. **ಗಾಂಗ್** – 1. ಕೃಷಿ ಶಕ್ತಿ
2. ಇಂತಹ ಶಕ್ತಿಯನ್ನು ಸಾಧಿಸುವ ಒಂದು ಅಭ್ಯಾಸ

ಕಾರಣವೆಂದರೆ ಜನರಿಗೆ ಉನ್ನತ ಮಟ್ಟದೆಡೆಗೆ ಮಾರ್ಗದರ್ಶನ ಮಾಡಲು, ನೈಜವಾಗಿ ಜನರನ್ನು ಉನ್ನತಮಟ್ಟದೆಡೆಗೆ ಮಾರ್ಗದರ್ಶನ ಮಾಡಲು.

**ಭಿನ್ನ ಮಟ್ಟಗಳು ಭಿನ್ನ ಫಾ ವನ್ನು ಹೊಂದಿರುತ್ತದೆ**

ಹಿಂದೆ ಬಹಳಷ್ಟು ಜನ ಚೀಗಾಂಗ್ ಗುರುಗಳು ಚೀಗಾಂಗ್‌ನಲ್ಲಿ ಆರಂಭಿಕ ಮಟ್ಟ, ಮಾಧ್ಯಮಿಕ ಮಟ್ಟ ಮತ್ತು ಉನ್ನತ ಮಟ್ಟಗಳಿವೆ ಎಂದು ಹೇಳುತ್ತಿದ್ದರು. ಇವೆಲ್ಲವೂ ಚೀ ಮತ್ತು ಕೇವಲ ಚೀಯನ್ನು ಅಭ್ಯಾಸ ಮಾಡುವ ಮಟ್ಟದಲ್ಲಿರುವಂಥದ್ದು, ಹಾಗಿದ್ದರೂ ಕೂಡ ಅದನ್ನು ಆರಂಭಿಕ ಮಟ್ಟ, ಮಾಧ್ಯಮಿಕ ಮಟ್ಟ ಮತ್ತು ಉನ್ನತ ಮಟ್ಟದ ಚೀಗಾಂಗ್ ಎಂದು ವರ್ಗೀಕರಿಸಲಾಗಿತ್ತು. ನೈಜ ಉನ್ನತ ಮಟ್ಟವನ್ನು ಕುರಿತಂತೆ ಬಹುಸಂಖ್ಯಾತ ಚೀಗಾಂಗ್ ಅಭ್ಯಾಸಿಗರ ಮನಸ್ಸು ಖಾಲಿಯಾಗಿಯೇ ಇತ್ತು, ಏಕೆಂದರೆ ಅವರಾರಿಗೂ ಇದರ ಬಗ್ಗೆ ಏನೂ ಗೊತ್ತಿರಲೇ ಇಲ್ಲ. ಇಂದಿನಿಂದ ನಾವು ಉದ್ದೇಶಿಸಿ ಹೇಳುವಂಥದ್ದೆಲ್ಲವೂ ಉನ್ನತ ಮಟ್ಟದ ಫಾ ಆಗಿದೆ. ಇದರೊಂದಿಗೆ ನಾನು ಸಾಧನೆಯ ಅಭ್ಯಾಸದ ಘನತೆಯನ್ನು ಪುನರ್‌ಸ್ಥಾಪಿಸುತ್ತೇನೆ. ನನ್ನ ಉಪನ್ಯಾಸಗಳಲ್ಲಿ ನಾನು ಸಾಧಕರ ಸಮುದಾಯದಲ್ಲಿರುವ ಕೆಲವು ಅನಾರೋಗ್ಯಕರ ಬೆಳವಣಿಗೆಗಳ ಕುರಿತು ಹೇಳುತ್ತೇನೆ, ನಾನು ಈ ವಿಷಯವನ್ನು ಹಾಗೂ ನಾವು ಯಾವ ರೀತಿ ಪರಿಗಣಿಸಬೇಕು ಮತ್ತು ನೋಡಬೇಕೆಂಬುದನ್ನು ಕುರಿತೂ ಹೇಳುತ್ತೇನೆ. ಮೇಲಾಗಿ, ಸಾಧನ ಅಭ್ಯಾಸದ ವ್ಯವಸ್ಥೆ ಮತ್ತು ಉನ್ನತ ಮಟ್ಟದ ಫಾ ಬೋಧನೆಯು ಹಲವಾರು ಆಯಾಮಗಳು ಮತ್ತು ಮಹತ್ವಪೂರ್ಣ ವಿಷಯಗಳನ್ನು ಒಳಗೊಂಡಿದೆ, ಕೆಲವೊಂದು ಆಗಲೇ ಬಹಳ ಗಂಭೀರವಾಗಿದೆ; ಈ ವಿಷಯವನ್ನು ಕೂಡ ನಾನು ಎತ್ತಿ ತೋರಿಸ ಬಯಸುತ್ತೇನೆ. ಸಾಮಾನ್ಯ ಮಾನವ ಸಮಾಜದ, ಅದರಲ್ಲೂ ವಿಶೇಷವಾಗಿ ಸಾಧಕರ ಸಮುದಾಯದಲ್ಲಿ, ಹಲವಾರು ಮಧ್ಯ ಪ್ರವೇಶಿಸುವ ಅಡೆತಡೆಗಳು ಇತರ ಪರಿಣಾಮಗಳಿಂದ ಬರುತ್ತವೆ. ನಾನು ಇವನ್ನೂ ಕೂಡ ಬಹಿರಂಗಗೊಳಿಸಲು ಬಯಸುತ್ತೇನೆ. ಅದೇ ಸಮಯದಲ್ಲಿ ಇವೆಲ್ಲ ತೊಂದರೆಗಳನ್ನು ನಾನು ಅಭ್ಯಾಸಿಗರಿಗಾಗಿ ಪರಿಹರಿಸುತ್ತೇನೆ. ಈ ತೊಂದರೆಗಳನ್ನು ಪರಿಹರಿಸಲಾಗದಿದ್ದಲ್ಲಿ ನೀವು ಸಾಧನೆಯ ಅಭ್ಯಾಸವನ್ನು ಮಾಡಲು ಆಗುವುದಿಲ್ಲ. ಈ ವಿಷಯಗಳನ್ನು ಮೂಲಭೂತವಾಗಿ ಪರಿಹರಿಸಬೇಕಾದರೆ ನಾವು ಎಲ್ಲರನ್ನೂ ನಿಜವಾದ ಅಭ್ಯಾಸಿಗರೆಂದೇ ಪರಿಗಣಿಸಬೇಕಾಗುತ್ತದೆ. ಆದರೂ ನಿಮ್ಮ ಮನೋಭಾವವನ್ನು ತತ್‌ಕ್ಷಣದಿಂದ ಬದಲಾಯಿಸಿಕೊಳ್ಳುವುದು ಸುಲಭವಲ್ಲ; ನೀವು ನಿಮ್ಮ ಮನೋಭಾವವನ್ನು ನನ್ನ ಉಪನ್ಯಾಸಗಳನ್ನು ಕೇಳುತ್ತಿರುವಂತೆ ಕ್ರಮೇಣ ಬದಲಾಯಿಸುತ್ತೀರ. ನೀವೆಲ್ಲರೂ ಅತ್ಯಂತ ಗಮನವಿಟ್ಟು ಕೇಳುತ್ತೀರೆಂದು ಆಶಿಸುತ್ತೇನೆ. ನಾನು ಸಾಧನೆಯ ಅಭ್ಯಾಸವನ್ನು ಬೋಧಿಸುವ ರೀತಿ ಇತರರಿಗಿಂತ ಭಿನ್ನವಾದುದು. ಕೆಲವು ಜನರು ತಮ್ಮ ಅಭ್ಯಾಸದ ಕ್ರಮದ ಬಗೆಗಿನ ತತ್ವಗಳನ್ನು ಕುರಿತು ಚಿಕ್ಕದಾಗಿ ಮಾತನಾಡಿ ಮುಗಿಸುತ್ತಾರೆ, ನಂತರ ತಮ್ಮ ಸಂದೇಶವನ್ನು ನಿಮಗೆ ಬೋಧಿಸುತ್ತಾರೆ. ಮತ್ತು ಕೆಲವು ವ್ಯಾಯಾಮವನ್ನು ಹೇಳಿಕೊಡುತ್ತಾರೆ ಅಷ್ಟೇ. ಜನರೂ ಕೂಡ ಈ ತರಹದ ಸಾಧನೆಯ ಬೋಧನೆಗೆ ಒಗ್ಗಿಹೋಗಿದ್ದಾರೆ.

ಸಾಧನಾ ವ್ಯವಸ್ಥೆಯ ನೈಜ ಬೋಧನೆಯು ಫಾ ಅಥವ ತಾವೋದ ಬೋಧನೆಯನ್ನು ಬೇಡುತ್ತದೆ. ಹತ್ತು ಉಪನ್ಯಾಸಗಳಲ್ಲಿ ನಾನು ನಿಮಗೆ ಸಾಧನೆಯ ಅಭ್ಯಾಸವನ್ನು ಮಾಡಲು ಅನುಕೂಲವಾಗುವಂತೆ ಉನ್ನತ ಮಟ್ಟದ ತತ್ವಗಳನ್ನು ಬೋಧಿಸುತ್ತೇನೆ. ಇಲ್ಲವಾದಲ್ಲಿ ನಿಮಗೆ ಅಭ್ಯಾಸವನ್ನು ಮಾಡಲು ಸಾಧ್ಯವೇ ಆಗುವುದಿಲ್ಲ. ಬೇರೆಯವರು ನಿಮಗೆ ಹೇಳಿಕೊಟ್ಟಿರುವುದೆಲ್ಲಾ ಕೇವಲ ಗುಣಪಡಿಸುವ ಮತ್ತು ಸಧೃಢವಾಗುವ ಮಟ್ಟಕ್ಕಷ್ಟೇ ಸೀಮಿತವಾಗಿತ್ತು. ನೀವು ಉನ್ನತ ಮಟ್ಟದೆಡೆಗೆ ಅಭ್ಯಾಸವನ್ನು ಮಾಡಬಯಸುವವರಾದರೆ, ಉನ್ನತ ಮಟ್ಟದ ಫಾ ದ ಮಾರ್ಗದರ್ಶನವಿಲ್ಲದೆ ನೀವು ಸಾಧನೆಯಲ್ಲಿ ಸಫಲರಾಗುವುದಕ್ಕೆ ಸಾಧ್ಯವಿಲ್ಲ. ಇದು ಶಾಲೆಗೆ ಹೋಗುವ ತರವಾಗಿದೆ; ನೀವು ಕಾಲೇಜಿಗೆ ಪ್ರಾಥಮಿಕ ಶಾಲಾ ಪಠ್ಯಪುಸ್ತಕದೊಂದಿಗೆ ಹೋದರೆ, ನೀವು ಇನ್ನೂ ಪ್ರಾಥಮಿಕ ಶಾಲಾ ವಿದ್ಯಾರ್ಥಿಯೇ ಆಗಿರುವಿರಿ. ಹಲವಾರು ಜನರು ತಾವು ಅನೇಕ ಅಭ್ಯಾಸಗಳನ್ನು ಕಲಿತಿದ್ದೇವೆ ಎಂದು ಭಾವಿಸಬಹುದು, ಆ ಅಭ್ಯಾಸ ಅಥವ ಈ ಅಭ್ಯಾಸ ಮಾಡಿದ್ದೇವೆ ಮತ್ತು ಅವರಲ್ಲಿ ಒಂದು ಹೇರು ಪದವಿ ಪತ್ರಗಳು ಇರಬಹುದು, ಆದರೂ ಅವರ ಗಾಂಗ್ ಮಾತ್ರ ಯಾವುದೇ ಪ್ರಗತಿ ಸಾಧಿಸಿರುವುದಿಲ್ಲ. ಅವರು ಇದನ್ನೇ ಚೀಗಾಂಗ್‌ನ ನಿಜವಾದ ಸಾರವೆಂದು ತಿಳಿದಿರುತ್ತಾರೆ ಮತ್ತು ಚೀಗಾಂಗ್ ಎಂದರೆ ಇಷ್ಟೇ ಎಂದು ಭಾವಿಸಿರುತ್ತಾರೆ. ಇಲ್ಲಿ ಇವೆಲ್ಲವೂ ಕೇವಲ ಚೀಗಾಂಗ್

ಹೊರಚರ್ಮದಷ್ಟೇ ಆಳವಾಗಿದೆ ಮತ್ತು ಅತ್ಯಂತ ಕೆಳಮಟ್ಟದ್ದಾಗಿದೆ. ಚೀಗಾಂಗ್ ಕೇವಲ ಇಷ್ಟಕ್ಕೇ ಸೀಮಿತವಾಗಿರುವಂಥದ್ದಲ್ಲ, ಏಕೆಂದರೆ ಅದು ಸಾಧನೆಯ ಅಭ್ಯಾಸವಷ್ಟೇ ಅಲ್ಲದೆ ಅತ್ಯಂತ ವಿಶಾಲ ಮತ್ತು ಗಾಢವಾದದ್ದು ಆಗಿದೆ. ಅಷ್ಟಲ್ಲದೆ, ಭಿನ್ನ ಮಟ್ಟಗಳಲ್ಲಿ ಭಿನ್ನ ಫಾ ಅಸ್ತಿತ್ವದಲ್ಲಿರುತ್ತದೆ. ಆದ್ದರಿಂದ ಅದು ನಮಗೆ ತಿಳಿದಿರುವ ಚೀ ಅಭ್ಯಾಸಗಳಿಗಿಂತ ಭಿನ್ನವಾಗಿದೆ; ನೀವು ಎಷ್ಟೇ ಹೆಚ್ಚು ಹೆಚ್ಚಾಗಿ ಕಲಿತರೂ ಕೂಡ ಅದು ಒಂದೇ ಆಗಿದೆ. ಉದಾಹರಣೆಗೆ, ನೀವು ಬ್ರಿಟೀಷ್ ಪ್ರಾಥಮಿಕ ಶಾಲಾ ಪಠ್ಯ, ಅಮೇರಿಕನ್ ಪ್ರಾಥಮಿಕ ಶಾಲಾ ಪಠ್ಯ, ಜಪಾನೀಯ ಪ್ರಾಥಮಿಕ ಶಾಲಾ ಪಠ್ಯ ಮತ್ತು ಚೀನೀ ಪ್ರಾಥಮಿಕ ಶಾಲಾ ಪಠ್ಯ ಇವೆಲ್ಲವನ್ನೂ ಓದಿದ್ದರೂ ಸಹ ನೀವು ಪ್ರಾಥಮಿಕ ಶಾಲಾ ವಿದ್ಯಾರ್ಥಿಯೇ ಆಗಿ ಉಳಿಯುತ್ತೀರಿ. ಇಂತಹ ಕೆಳಮಟ್ಟದ ಚೀಗಾಂಗ್ ಬೋಧನೆಗಳನ್ನು ಹೆಚ್ಚು ತೆಗೆದುಕೊಂಡಷ್ಟೂ ಮತ್ತು ಹೆಚ್ಚು ಹೆಚ್ಚು ಅವುಗಳನ್ನು ನೀವು ಹೀರಿಕೊಂಡಷ್ಟು, ನಿಮಗೆ ಹೆಚ್ಚು ಹಾನಿ ಉಂಟಾಗುತ್ತದೆ. ನಿಮ್ಮ ದೇಹವು ಆಗಲೇ ಕಲುಷಿತವಾಗಿದೆ.

ನಾನು ಮತ್ತೊಂದು ವಿಷಯವನ್ನು ಕುರಿತು ಒತ್ತಿ ಹೇಳಬೇಕು : ನಮ್ಮ ಸಾಧನೆಯ ಅಭ್ಯಾಸದಲ್ಲಿ ಸಾಧನೆಯ ಕ್ರಮ ಮತ್ತು ಫಾ ಎರಡನ್ನೂ ಕುರಿತು ಭೋಧಿಸುವ ಅವಶ್ಯಕತೆ ಇದೆ. ಕೆಲವು ದೇವಾಲಯದ ಪೂಜಾರಿಗಳಿಗೆ ಅದರಲ್ಲೂ ಜ್ಯೆನ್ ಬೌದ್ಧ ಧರ್ಮದವರು ಈ ಕುರಿತಂತೆ ಭಿನ್ನ ಅಭಿಪ್ರಾಯ ತಳೆಯಬಹುದು. ಫಾವನ್ನು ಬೋಧಿಸಲಾಗುತ್ತದೆ ಎಂಬುದನ್ನು ತಿಳಿದ ಕೂಡಲೇ ಅವರು ಅದನ್ನು ಕೇಳಿಸಿಕೊಳ್ಳಲು ಬಯಸುವುದಿಲ್ಲ, ಹೀಗೇಕೆ? ಜ್ಯೆನ್ ಬೌದ್ಧತ್ವವು ಫಾ ವನ್ನು ಬೋಧಿಸಬಾರದೆಂದು ನಂಬುತ್ತದೆ, ಫಾ ಅನ್ನು ಬೋಧಿಸುವಾಗ ಅದು ಫಾ ಆಗಿ ಉಳಿಯುವುದಿಲ್ಲ. ಮತ್ತು ಬೋಧಿಸಲ್ಪಡುವಂತಹ ಫಾ ಯಾವುದೂ ಇಲ್ಲ; ಇಬ್ಬರೂ ಅದನ್ನು ಕೇವಲ ಹೃದಯ ಮತ್ತು ಜೀವಾತ್ಮದ ಮೂಲಕ ಅರ್ಥ ಮಾಡಿಕೊಳ್ಳಬಹುದೆಂದು ನಂಬುತ್ತದೆ. ಇದರ ಪರಿಣಾಮವಾಗಿ ಈ ದಿನದ ತನಕ ಜ್ಯೆನ್ ಬೌದ್ಧ ತತ್ವವು ಯಾವುದೇ ಫಾವನ್ನು ಬೋಧಿಸಲು ಸಾಧ್ಯವಾಗಿಲ್ಲ. ಜ್ಯೆನ್ ಬೌದ್ಧ ತತ್ವದ ಮೂಲಪುರುಷ ಬೋಧಿಧರ್ಮ. ಸಾಖ್ಯಮುನಿಯ ಹೇಳಿಕೆ – "ಯಾವುದೇ ಧರ್ಮವು ನಿಶ್ಚಿತವಲ್ಲ" ಅದನ್ನು ಆಧರಿಸಿ ಈ ರೀತಿಯಾಗಿ ಬೊಧಿಸಿದನು. ಆತನು ಸಾಖ್ಯಮುನಿಯ ಈ ಹೇಳಿಕೆಯನ್ನು ಆಧರಿಸಿ ಜ್ಯೆನ್ ಬೌದ್ಧ ತತ್ವವನ್ನು ಪ್ರತಿಪಾದಿಸಿದನು. ನಾವು ಈ ಸಾಧನೆಯ ಅಭ್ಯಾಸವನ್ನು "ಹೋರಿಯ ಕೊಂಬನ್ನು ಅಗೆದು ತೆಗೆ" ಎಂಬಂತೆ ಭಾವಿಸುತ್ತೇವೆ. ಅದನ್ನು ಹೋರಿಯ ಕೊಂಬನ್ನು ಅಗೆದು ತೆಗೆ ಎಂದು ಏಕೆ ಹೇಳುತ್ತೇವೆ? ಬೋಧಿಧರ್ಮನು ಅದರಲ್ಲಿ ಅಗೆಯಲು ಶುರುಮಾಡಿದಾಗ ಅದು ವಿಶಾಲವಾಗಿತ್ತೆಂದು ಆತನಿಗೆ ಅನಿಸಿತು. ನಂತರ ಮೂಲಪುರುಷ –2 ಅಗೆದಾಗ ಆತನಿಗೆ ಅದು ಅಷ್ಟೇನು ವಿಶಾಲವಾಗಿಲ್ಲ ಎನಿಸಿತು. ಮೂಲಪುರುಷ–3 ನ ಕಾಲಕ್ಕೆ ಅದು ಇನ್ನೂ ಸಾಗುವಷ್ಟಿತ್ತು. ಆದರೆ ಮೂಲಪುರುಷ–4 ನೇ ಕಾಲಕ್ಕಾಗಲೇ ಅದು ಸಾಕಷ್ಟು ಕಿರಿದಾಗಿತ್ತು ಮೂಲಪುರುಷ–5 ನಿಗೆ ಆಗಲೇ ಮುಂದುವರೆಯಲು ಯಾವುದೇ ಜಾಗವಿರಲಿಲ್ಲ. ಹ್ಯೂಯ್‌ನಿಂಗ್, ಮೂಲಪುರುಷ–6 ನ ಕಾಲಕ್ಕೆ ಅದು ಅಂತ್ಯವನ್ನು ಕಂಡಿತ್ತು. ಮತ್ತು ಮುಂದುವರೆಯಲು ಯಾವುದೇ ಅವಕಾಶವಿರಲಿಲ್ಲ. ಇಂದು ನೀವು ಯಾವುದಾದರೂ ಜ್ಯೆನ್ ಬೌದ್ಧರ ಬಳಿ ಧರ್ಮ ಕಲಿಯಲಿ ಹೋದರೆ ನೀವು ಅಲ್ಲಿ ಯಾವುದೇ ಪ್ರಶ್ನೆಯನ್ನು ಕೇಳಬಾರದು. ನೀವು ಪ್ರಶ್ನೆಯನ್ನು ಕೇಳಿದರೆ ಆತ ಅಥವ ಆಕೆ ತಿರುಗಿ ನಿಮ್ಮ ತಲೆಗೆ ಕೋಲಿನಿಂದ ಮಟಕುತ್ತಾರೆ, ಇವನ್ನು "ಕೋಲು ಎಚ್ಚರಿಕೆ" ಎಂದು ಹೇಳುತ್ತಾರೆ. ಇದರ ಅರ್ಥ ನೀವು ವಿಚಾರಿಸಬಾರದು ಎಂದು ಮತ್ತು ನೀವೇ ಸ್ವಂತವಾಗಿ ಜ್ಞಾನೋದಯ ಹೊಂದಬೇಕು ಎಂದು. ನೀವು ಹೇಳುತ್ತೀರಿ, "ನನಗೆ ಏನೂ ತಿಳಿದಿಲ್ಲದ ಕಾರಣಕ್ಕಾಗಿ ನಾನಿಲ್ಲಿ ಕಲಿಯಲು ಬಂದಿದ್ದೇನೆ. ನಾನು ಏನನ್ನು ಕುರಿತು ಜ್ಞಾನೋದಯ ಹೊಂದಬೇಕು? ನೀವು ನನಗೆ ಏಕೆ ಕೋಲಿನಿಂದ ಮಟಕುತ್ತೀರಾ?!" ಇದು ಜ್ಹೆನ್ ಬುದ್ಧಧರ್ಮವು ಹೋರಿಯ ಕೊಂಬನ್ನು ಮುಟ್ಟಿರುವುದಕ್ಕೆ ಸಾಕ್ಷಿಯಾಗಿದೆ ಮತ್ತು ಈಗ ಅದರಲ್ಲಿ ಬೋಧಿಸುವಂಥದ್ದು ಏನೂ ಉಳಿದಿಲ್ಲ. ಬೋಧಿಧರ್ಮನೂ ಕೂಡ ತನ್ನ ಬೋಧನೆಯನ್ನು ಆರು

---

8. ಸಾಖ್ಯಮುನಿ – ಐತಿಹಾಸಿಕ ಬುದ್ಧ, ಗೌತಮ ಸಿದ್ದಾರ್ಥ

9. ಧರ್ಮ – ಬುದ್ಧ ಸಾಖ್ಯಮುನಿಯ ಬೋಧನೆಗಳು

10. "ಹೋರಿಯ ಕೊಂಬನ್ನು ಅಗೆದು ತೆಗೆ" – ಕಟ್ಟಕಡೆಯ ಎಡೆಗೆ ಸಾಗು ಎಂಬುವುದಕ್ಕೆ ಚೀನೀ ವ್ಯಾಖ್ಯಾನ.

ತಲೆಮಾರುಗಳಿಗಳಿಗಷ್ಟೇ ಮುದುವರೆಸಿಕೊಂಡು ಹೋಗಬಹುದು, ಅದಾದನಂತರ ಅದರಿಂದ ಯಾವುದೇ ಉಪಯೋಗವು ಬಾರದು, ಎಂದು ಹೇಳಿದ್ದ. ಹಲವಾರು ನೂರು ವರ್ಷ ಕಳೆದು ಹೋಗಿದೆ, ಆದರೂ ಕೂಡ ಇಂದಿಗೂ ಜೈನ್ ಬೌದ್ಧ ಧರ್ಮದ ತತ್ವಗಳನ್ನ ಕುರಿತು ಅತ್ಯಂತ ಕಟ್ಟುನಿಟ್ಟಾಗಿ ಆಚರಿಸುವ ಜನರಿದ್ದಾರೆ. ಸಾಖ್ಯಮುನಿಗಳ ಉಚ್ಛಾರಣೆಗಳ ನಿಜವಾದ ಅರ್ಥವೇನು? ; " ಯಾವುದೇ ಧರ್ಮವು ನಿಶ್ಚಿತವಲ್ಲ"? ಸಾಖ್ಯಮುನಿಗಳ ಮಟ್ಟವು ತಥಾಗತ. ನಂತರದ ಹಲವಾರು ಸಂತರು , ಶಾಖ್ಯಮುನಿಗಳ ಮಟ್ಟಕ್ಕೆ, ಅವರ ವಿಚಾರಗಳ ಪರಿಧಿಗೆ ತಮ್ಮ ಆಲೋಚನೆಯನ್ನು, ಆತ ಪ್ರತಿಪಾದಿಸಿದ ಧರ್ಮದ ನಿಜವಾದ ಅರ್ಥಕ್ಕೆ ಅಥವ ಆತನ ಹೇಳಿಕೆಯ ನೈಜ ಅರ್ಥಗಳಿಗೆ ಜ್ಞಾನೋದಯ ಹೊಂದಲಿಲ್ಲ. ಆದ್ದರಿಂದ, ನಂತರ ಜನರು ಅದನ್ನು ಗೊಂದಲಮಯ ಅರ್ಥೈಕೆಗಳ ಮೂಲಕ ಆ ರೀತಿ ಅಥವ ಈ ರೀತಿಯಾಗಿ ಅರ್ಥೈಸಿದರು. ಅವರು " ಯಾವುದೇ ಧರ್ಮವು ನಿಶ್ಚಿತವಲ್ಲ" ಎಂಬುವುದಕ್ಕೆ ಧರ್ಮವನ್ನು ಬೋಧಿಸಬಾರದು ಮತ್ತು ಧರ್ಮವನ್ನು ಬೋಧಿಸಿದರೆ ಅದು ಧರ್ಮವಾಗಿ ಉಳಿಯುವುದಿಲ್ಲ ಎಂದು ಅರ್ಥವಿದೆ ಎಂದು ಭಾವಿಸಿದರು. ನಿಜವಾಗಿ ಅದರರ್ಥ ಈ ರೀತಿಯಲ್ಲ, ಸಾಖ್ಯಮುನಿಗಳು ಬೋಧಿ ವೃಕ್ಷದ ಕೆಳಗೆ ಜ್ಞಾನೋದಯ ಹೊಂದಿದಾಗ ಅವರು ನೇರವಾಗಿ ತಾಥಗತ ಮಟ್ಟವನ್ನು ತಲುಪಲಿಲ್ಲ. ತನ್ನ ನಲವತ್ತೊಂಭತ್ತು ವರ್ಷಗಳ ಧರ್ಮ ಬೋಧನೆಯಲ್ಲಿ ಅವರೂ ಕೂಡ ನಿರಂತರವಾಗಿ ಪ್ರಗತಿ ಸಾಧಿಸುತ್ತಿದ್ದರು. ಆತ ತನ್ನ ಮಟ್ಟವನ್ನು ಉನ್ನತೀಕರಿಸಿ ಕೊಂಡಾಗಲೆಲ್ಲಾ, ತನ್ನ ಬೋಧನೆಯನ್ನು ಹಿಂತಿರುಗಿ ನೋಡಿದಾಗ ಆತನಿಗೆ ತಾನು ಬೋಧಿಸಿದ ಧರ್ಮವೆಲ್ಲಾ ಮತ್ತೇ ತಪ್ಪೆಂದು ತಿಳಿಯಿತು. ಆತ ಮತ್ತೂ ಪ್ರಗತಿ ಸಾಧಿಸಿದಾಗ ಆತ ತಾನು ಈಗ ಬೋಧಿಸಿದ ಧರ್ಮವೆಲ್ಲಾ ಮತ್ತೇ ತಪ್ಪೆಂದು ತಿಳಿಯಿತು. ಆತ ಮತ್ತೂ ಪ್ರಗತಿ ಸಾಧಿಸಿದ ನಂತರ ಆತನಿಗೆ ಮತ್ತೇ ತಾನು ಈಗ ಬೋಧಿಸಿದ ಧರ್ಮ ತಪ್ಪೆಂದು ಮತ್ತೆ ಅರಿವಾಯಿತು. ಆತ ತನ್ನ ನಲವತ್ತೊಂಭತ್ತು ವರ್ಷಗಳಲ್ಲಿ ನಿರಂತರವಾಗಿ ಇಂತಹ ಪ್ರಗತಿಯನ್ನು ಹೊಂದುತ್ತಿದ್ದ. ಆತ ಉನ್ನತ ಮಟ್ಟವನ್ನು ತಲುಪಿದಾಗಲೆಲ್ಲಾ ತಾನು ಹಿಂದೆ ಬೋಧಿಸಿದ ಧರ್ಮವೆಲ್ಲಾ ಗ್ರಹಿಕೆಯಲ್ಲಿ ಅತ್ಯಂತ ಕೆಳಮಟ್ಟದ್ದೆಂದು ಅರಿವಾಗುತ್ತಿತ್ತು. ಆತನಿಗೆ ಪ್ರತೀ ಮಟ್ಟದ ಧರ್ಮವು ಯಾವಾಗಲೂ ಆಯಾ ಮಟ್ಟದ ಧರ್ಮದ ಮೂಲಕ ವ್ಯಕ್ತವಾಗುತ್ತದೆ, ಪ್ರತಿಯೊಂದು ಮಟ್ಟದಲ್ಲೂ ಆಯಾ ಧರ್ಮಗಳಿರುತ್ತವೆ, ಮತ್ತು ಯಾವುದೂ ಕೂಡ ಈ ಪ್ರಪಂಚದ ಅಂತಿಮ ಸತ್ಯವಲ್ಲವೆಂದು ಅರಿವಾಯಿತು. ಉನ್ನತ ಮಟ್ಟದ ಧರ್ಮವು ಕೆಳಮಟ್ಟದ ಧರ್ಮಗಳಿಗಿಂತ ಈ ಪ್ರಪಂಚದ ವೈಶಿಷ್ಟ್ಯಗಳಿಗೆ ಹತ್ತಿರದ್ದಾಗಿದೆ. ಆದ್ದರಿಂದಲೇ ಆತ ಹೇಳಿದ್ದು: "ಯಾವುದೇ ಧರ್ಮವು ನಿಶ್ಚಿತವಲ್ಲ."

ಕೊನೆಯಲ್ಲಿ ಸಾಖ್ಯಮುನಿ ಘೋಷಿಸಿದ, "ನಾನು ನನ್ನ ಜೀವಿತಾವಧಿಯಲ್ಲಿ ಯಾವುದೇ ಧರ್ಮವನ್ನು ಬೋಧಿಸಿಲ್ಲ". ಜೈನ್ ಬೌದ್ಧಧರ್ಮವು ಮತ್ತೆ ಇದರರ್ಥವನ್ನು ಬೋಧಿಸಲು ಯಾವುದೇ ಧರ್ಮವಿಲ್ಲವೆಂದು ತಪ್ಪಾಗಿ ಗ್ರಹಿಸಿತು. ಆತನ ಕೊನೆಗಾಲಕ್ಕಾಗಲೇ ಸಾಖ್ಯಮುನಿ ತಥಾಗತ ಮಟ್ಟವನ್ನು ತಲುಪಿದ್ದರು. ಮತ್ತೇಕೆ ಆತ ತಾನು ಯಾವುದೇ ಧರ್ಮವನ್ನು ಬೋಧಿಸಿಲ್ಲವೆಂದು ಹೇಳಿದ? ಆತ ಎತ್ತಿದ ನಿಜವಾದ ಸಂಗತಿ ಏನು? ಆತ ಹೇಳಿದ "ನನ್ನ ತಥಾಗತ ಮಟ್ಟದಲ್ಲೂ ಕೂಡ ನಾನು ಪ್ರಪಂಚದ ಅಂತಿಮ ಸತ್ಯವನ್ನಾಗಲೀ ಅಥವ ಅಂತಿಮ ಧರ್ಮವನ್ನಾಗಲೀ ನೋಡಲಿಲ್ಲ." ಆದ್ದರಿಂದ ಆತ ತನ್ನ ನಂತರದ ಜನರಿಗೆ ತನ್ನ ಮಾತುಗಳೇ ಅಂತಿಮ ಅಥವ ಬದಲಿಸಲು ಸಾಧ್ಯವಿಲ್ಲದ ಸತ್ಯವೆಂದು ಪರಿಗಣಿಸಬಾರದು ಎಂದು ಹೇಳಿದ. ಇಲ್ಲವಾದಲ್ಲಿ, ಅದು ನಂತರ ಜನರನ್ನು ತಥಾಗತ ಮಟ್ಟಕ್ಕೆ ಅಥವ ಅದಕ್ಕೂ ಕೆಳಗಿನ ಮಟ್ಟಕ್ಕೆ ಸೀಮಿತಗೊಳಿಸುತ್ತದೆ, ಮತ್ತು ಅವರು ಉನ್ನತ ಮಟ್ಟಗಳ ಎಡೆಗೆ ಮುನ್ನುಗ್ಗಲು ಸಾಧ್ಯವಾಗುವುದಿಲ್ಲ. ಮುಂದೆ ಬಂದ ಜನರು ಈ ವಾಕ್ಯದ ನಿಜವಾದ ಅರ್ಥವನ್ನು ಸರಿಯಾಗಿ ಗ್ರಹಿಸಲು ಆಗಲಿಲ್ಲ ಮತ್ತು ಅವರು ಧರ್ಮವನ್ನು ಬೋಧಿಸಿದರೆ ಅದು ಧರ್ಮವಲ್ಲ ಎಂದೇ ತಿಳಿದರು – ಅವರು ಅದನ್ನು ಈ ರೀತಿಯಾಗಿ ಅರ್ಥೈಸಿದ್ದಾರೆ. ನಿಜವೆಂದರೆ, ಸಾಖ್ಯಮುನಿಗಳು ಬೇರೆಬೇರೆ ಮಟ್ಟದಲ್ಲಿ ಬೇರೆಬೇರೆ ಧರ್ಮಗಳಿವೆ ಮತ್ತು ಆ ಮಟ್ಟದಲ್ಲಿನ ಧರ್ಮವು ಪ್ರಪಂಚದ ಅಂತಿಮ ಸತ್ಯವಲ್ಲ ಎಂದು ಹೇಳಿದ್ದರು. ಆದರೂ ಕೂಡ ಆ ಮಟ್ಟದ ಧರ್ಮವು ಆ ಮಟ್ಟದಲ್ಲಿ ಮಾರ್ಗದರ್ಶಕ ಪಾತ್ರವನ್ನು ಹೊಂದಿರುತ್ತದೆ. ಆತ ಈ ರೀತಿಯ ತತ್ವವನ್ನು ಹೇಳುತ್ತಿದ್ದುದು.

**11.ತಥಾಗತ** –ಒಬ್ಬ ಜ್ಞಾನೋದಯ ಹೊಂದಿದ ಜೀವಿ 1

12.**ವಜ್ರ ಸೂತ್ರ** – ಬೌದ್ಧಧರ್ಮದ ಪುರಾತನ ಗ್ರಂಥ

ಹಿಂದೆ ಅನೇಕ ಜನರು, ಅದರಲ್ಲೂ ಜೈನ್ ಬುದ್ಧ ತತ್ವದವರು, ಇಂತಹ ಒಂದು ಪಕ್ಷಪಾತದ ಮತ್ತು ಅತ್ಯಂತ ಸಂಕುಚಿತ ದೃಷ್ಟಿಯನ್ನು ಹೊಂದಿದ್ದರು. ನೀವು ಬೋಧನೆ ಮತ್ತು ಮಾರ್ಗದರ್ಶನವಿಲ್ಲದೆ ಹೇಗೆ ಸಾಧನೆ ಮತ್ತು ಅಭ್ಯಾಸವನ್ನು ಮಾಡಬಲ್ಲಿರಿ? ಬೌದ್ಧಧರ್ಮದಲ್ಲಿ ಅನೇಕ ಬೌದ್ಧ ಕಥೆಗಳಿವೆ. ಕೆಲವು ಜನರು ಸ್ವರ್ಗಕ್ಕೆ ಹೋದ ವ್ಯಕ್ತಿಯ ಬಗ್ಗೆ ಓದಿರಬಹುದು. ಸ್ವರ್ಗಕ್ಕೆ ಆಗಮಿಸಿದ ನಂತರ ಆತ ವಜ್ರ ಸೂತ್ರ ಪ್ರತೀ ಪದವೂ ಕೂಡ ಕೆಳಗೆ ಇರುವುದಕ್ಕಿಂತಲೂ ಇಲ್ಲಿ ಮೇಲ್ಗಡೆ ಭಿನ್ನವಾಗಿದೆ ಮತ್ತು ಅದರ ಅರ್ಥವು ಸಂಪೂರ್ಣ ಭಿನ್ನವಾಗಿದೆಯೆಂದು ಅರಿತುಕೊಂಡನು. ಈ ವಜ್ರ ಸೂತ್ರವು ಹೇಗೆ ಸಾಮಾನ್ಯ ಮಾನವ ಪ್ರಪಂಚಕ್ಕಿಂತ ಭಿನ್ನವಾಗಿದೆ? ಅಲ್ಲದೆ ಇಂಥದ್ದನ್ನು ಪ್ರತಿಪಾದಿಸುವ ಜನರೂ ಇದ್ದಾರೆ: " ಅಂತಿಮ ಪರಮ ಸುಖದ ಸ್ವರ್ಗದಲ್ಲಿರುವ ಗ್ರಂಥಗಳು ಇಲ್ಲಿ ಕೆಳಗಿರುವುದಕ್ಕಿಂತ ಸಂಪೂರ್ಣ ಭಿನ್ನವಾಗಿದೆ ಮತ್ತು ಅದು ಒಂದೇ ರೀತಿಯದ್ದೇ ಆಗಿಲ್ಲ. ಕೇವಲ ಪದಗಳಷ್ಟೇ ಭಿನ್ನವಾಗಿದೆಯಲ್ಲದೆ

ಅದೆಲ್ಲಾ ಬದಲಾಗಿರುವುದರಿಂದ ಅದರ ಪರಿಣಾಮ ಮತ್ತು ಅರ್ಥವೂ ಕೂಡ ಎಲ್ಲಾ ಭಿನ್ನವಾಗಿದೆ". ಸತ್ಯವಾದ ವಿಷಯವೆಂದರೆ, ಇದೇಕೆಂದರೆ ಫಾ ಒಂದೇ ಆಗಿದ್ದರೂ ಭಿನ್ನ ಭಿನ್ನ ಮಟ್ಟದಲ್ಲಿ ಅದರ ಭಿನ್ನ ಪರಿವರ್ತನೆಗಳನ್ನು ಮತ್ತು ಭಿನ್ನ ರೂಪಗಳನ್ನು ಪ್ರಕಟಿಸುತ್ತದೆ ಮತ್ತು ಅದು ಭಿನ್ನ ಮಟ್ಟದಲ್ಲಿರುವ ಅಭ್ಯಾಸಿಗರಿಗೆ ಭಿನ್ನ ರೀತಿಯ ಮಾರ್ಗದರ್ಶಕ ಪಾತ್ರವನ್ನು ತೋರುತ್ತದೆ.

ಬೌದ್ಧಧರ್ಮದಲ್ಲಿ "ಪರಮ ಸುಖದ ಸ್ವರ್ಗದಲ್ಲೊಂದು ಪ್ರವಾಸ" ಎಂಬ ಪುಸ್ತಕವಿರುವುದು ಎಲ್ಲರಿಗೂ ಗೊತ್ತಿರುವ ವಿಷಯ. ಒಬ್ಬ ಮುನಿ ಧ್ಯಾನದಲ್ಲಿ ಕುಳಿತಿರುವಾಗ ಆತನ ಪುರಾತನ ಮೂಲ ಜೀವಾತ್ಮ (ಯೂಆನ್‌ಷೆನ್) ಪರಮಸುಖದ ಸ್ವರ್ಗಕ್ಕೆ ಹೋಗಿ ಅಲ್ಲಿನ ದೃಶ್ಯವನ್ನು ನೋಡಿಬಂದಿದ್ದರ ಕುರಿತು ಇದು ಉಲ್ಲೇಖಿಸುತ್ತದೆ. ಅಲ್ಲಿ ಆತ ಒಂದು ದಿನವನ್ನು ಕಳೆದ; ಆತ ಈ ಮಾನವ ಪ್ರಪಂಚಕ್ಕೆ ಮರಳಿದಾಗ ಆರು ವರ್ಷಗಳು ಉರುಳಿ ಹೋಗಿದ್ದವು. ಆತ ಅದನ್ನು ನೋಡಿದನೇ? ಹೌದು, ಆದರೆ ಆತ ನೋಡಿರುವುದು ಅದರ ನಿಜವಾದ ಸ್ಥಿತಿಯನ್ನಲ್ಲ. ಏಕೆ? ಇದೇಕೆಂದರೆ ಆತನ ಮಟ್ಟವು ಅಷ್ಟೊಂದು ಉನ್ನತವಾಗಿದ್ದಿರಲಿಲ್ಲ ಮತ್ತು ಆತನಿಗೆ ತೋರಿಸಿದ್ದು ಕೇವಲ ಆತನ ಮಟ್ಟಕ್ಕನುಗುಣವಾದ ಬುದ್ಧ ಫಾದ ಪ್ರಕಟನೆ ಮಾತ್ರ. ಅಂತಹ ಸ್ವರ್ಗವು ಫಾ ದ ರಚನೆಯನ್ನು ಆಧರಿಸಿ ಪ್ರಕಟಗೊಳ್ಳುವುದರಿಂದ ಆತ ಇದರ ನೈಜ ಸ್ಥಿತಿಯನ್ನು ನೋಡಲು ಸಾಧ್ಯವಾಗಲಿಲ್ಲ. ನಾನು "ಯಾವುದೇ ಧರ್ಮವು ನಿಶ್ಚಿತವಲ್ಲ" ಎಂದು ಹೇಳುವಾಗ ಅದರ ಅರ್ಥ ಇದೇ ಆಗಿರುತ್ತದೆ.

## ಜೆನ್-ಷನ್-ರೆನ್ ಮಾತ್ರ ಒಳ್ಳೆಯ ಮತ್ತು ದುಷ್ಟ ಜನರೆಂದು ನಿರ್ಣಯಿಸಲು ಇರುವ ಏಕಮಾತ್ರ ಮಾನದಂಡ

ಬೌದ್ಧಧರ್ಮದಲ್ಲಿ ಜನರು ಬುದ್ಧ ಫಾ ಏನೆಂಬುವುದನ್ನು ಚರ್ಚಿಸುತ್ತಲೇ ಇದ್ದಾರೆ. ಬೌದ್ಧಧರ್ಮದಲ್ಲಿ ಪ್ರತಿಪಾದಿತವಾಗಿರುವ ಧರ್ಮವೇ ಅದರ ಅಖಂಡತೆಯಲ್ಲಿ ಬುದ್ಧ ಫಾ ನೇ ಆಗಿದೆ ಎಂದು ನಂಬುವ ಜನರೂ ಕೂಡ ಇದ್ದಾರೆ. ಆದರಿದು ಹಾಗಿಲ್ಲ. ಸಾಕ್ಯಮುನಿ ಎರಡು ಸಾವಿರದ ಐದುನೂರು ವರುಷಗಳ ಹಿಂದೆ ಪ್ರತಿಪಾದಿಸಿದಂತಹ ಧರ್ಮವು ಕೇವಲ ಕೆಳಮಟ್ಟದಲ್ಲಿರುವ ಸಾಮಾನ್ಯ ಮನುಷ್ಯರಿಗೆ ಆಗಿತ್ತು ; ಅದನ್ನು ಕೇವಲ ಪುರಾತನ ಸಮಾಜಗಳಿಂದ ಆಗತಾನೆ ಉದಯಿಸಿದ ಮತ್ತು ಇನ್ನೂ ಸರಳ ಮನಸ್ಸು ಉಳ್ಳವರಿಗಾಗಿ ಬೋಧಿಸಲ್ಪಟ್ಟಿತ್ತು. ಇಂದು, ಆತ ಹೇಳಿದ್ದ ಧರ್ಮ ಕೊನೆಗೊಳ್ಳುವ ಕಾಲ, ಇಂದು ಆ ಧರ್ಮದ ಅನುಸಾರ ಜನರು ಸಾಧನೆಯ ಅಭ್ಯಾಸವನ್ನು ಕೈಗೊಳ್ಳಲು ಬರುವುದಿಲ್ಲ. ಈ ಧರ್ಮ ಕೊನೆಗೊಳ್ಳುವ ಕಾಲದಲ್ಲಿ, ದೇವಾಲಯದಲ್ಲಿರುವ ಮುನಿಗಳಿಗೂ ಕೂಡ

---

13. **ಪುರಾತನ ಮೂಲ ಜೀವಾತ್ಮ** – ಇದನ್ನು ಮುಖ್ಯ ಜೀವಾತ್ಮ ಮತ್ತು ಸಹಾಯಕ ಜೀವಾತ್ಮ ಎಂದು ಪುನರ್‌ವಿಂಗಡಿಸಬಹುದು, ಪಾರಂಪರಿಕ ಚೀನೀ ನಂಬಿಕೆಯ ಅನುಸಾರ ದೇಹದಲ್ಲಿ ಹಲವಾರು ಕರ್ತವ್ಯ ಮತ್ತು ಕ್ರಮಗಳ ನಿರ್ವಹಣೆಗಾಗಿ ಹಲವಾರು ಆತ್ಮಗಳಿವೆ ಎಂದು ನಂಬುತ್ತಾರೆ. (ಉದಾ : ಹಲವಾರು ಜನರು ಯಕೃತ್‌ನಲ್ಲಿ ಆತ್ಮವೊಂದು ನೆಲೆಸಿ ಅದರ ಕೆಲಸವನ್ನು ನಿರ್ವಹಿಸುತ್ತದೆಯೆಂದು ನಂಬಿದ್ದರು)

ಬೇರೆಯವರಿಗೆ ಮೋಕ್ಷ ದಯಪಾಲಿಸುವುದಿರಲಿ ತಮ್ಮನ್ನು ತಾವೇ ರಕ್ಷಿಸಿಕೊಳ್ಳಲು ಸಾಧ್ಯವಾಗುವುದಿಲ್ಲ. ಸಾಖ್ಯಮುನಿಗಳು ಆ ಕಾಲದಲ್ಲಿ ಬೋಧಿಸಿದಂತಹ ಧರ್ಮವು ಈ ಒಂದು ಸನ್ನಿವೇಶವನ್ನು ಪರಿಗಣಿಸಿತ್ತು ಮತ್ತು ತನ್ನ ಸ್ವಂತ ಮಟ್ಟದಲ್ಲಿ ಆತ ಗ್ರಹಿಸಿದ ಬುದ್ಧ ಫಾ ವನ್ನು ಆತ ಪೂರ್ತಿಯಾಗಿ ಪ್ರತಿಪಾದಿಸಲಿಲ್ಲ, ಮತ್ತು ಇದನ್ನು ಯಾವುದೇ ಬದಲಾವಣೆಗಳಿಲ್ಲದೆ ನಿರಂತರವಾಗಿ ಇಡುವುದೂ ಕೂಡ ಅಸಾಧ್ಯ.

ಸಮಾಜವು ಅಭಿವೃದ್ಧಿಗೊಂಡಂತೆ ಮಾನವ ಮನಸ್ಸೂ ಕೂಡ ಹೆಚ್ಚು ಆಧುನಿಕಗೊಳ್ಳುತದೆ, ಹೀಗಾಗಿ ಇವರಿಗೆ ಸಾಧನೆಯ ಅಭ್ಯಾಸವನ್ನು ಹೆಚ್ಚು ಸುಲಭದಾಯಕವಾಗಿರುವುದಿಲ್ಲದಂತೆ ಮಾಡುತ್ತದೆ. ಬೌದ್ಧಧರ್ಮದ ಧರ್ಮವು ಅಖಂಡ ಬುದ್ಧ ಫಾ ವನ್ನು ಸಂಗ್ರಹಿಸಲು ಸಾಧ್ಯವಿಲ್ಲ ಮತ್ತು ಬದ್ಧ ಫಾ ದ ಒಂದು ಸಣ್ಣ ಭಾಗವಷ್ಟೇ. ಬುದ್ಧ ಶಾಲೆಯಲ್ಲಿ ಜನರ ನಡುವೆ ಹರಿದು ಬರುತ್ತಿರುವಂತಹ ಇನ್ನೂ ಅನೇಕ ಮಹಾನ್ ಸಾಧನೆಯ ಅಭ್ಯಾಸಗಳಿವೆ. ಇತಿಹಾಸದುದ್ದಕ್ಕೂ ಇಂತಹದ್ದು ಕೇವಲ ಒಬ್ಬನೇ ಒಬ್ಬ ಶಿಷ್ಯನಿಗೆ ಹರಿದು ಬರುತ್ತಿದೆ. ಭಿನ್ನ ಭಿನ್ನ ಮಟ್ಟಗಳು ಭಿನ್ನ ಭಿನ್ನ ಫಾ ವನ್ನು ಹೊಂದಿವೆ, ಮತ್ತು ಭಿನ್ನ ಪರಿಮಾಣಗಳು ಭಿನ್ನ ಫಾ ವನ್ನು ಹೊಂದಿವೆ, ಇವೆಲ್ಲವೂ ಕೂಡ ಭಿನ್ನ ಪರಿಮಾಣಗಳು ಮತ್ತು ಭಿನ್ನ ಮಟ್ಟಗಳಲ್ಲಿ ಬುದ್ಧ ಫಾ ದ ವಿವಿಧ ಪ್ರಕಟಗೊಳಿಸುವಿಕೆಯೇ ಆಗಿವೆ. ಸಾಖ್ಯಮುನಿಯೂ ಕೂಡ ಬುದ್ಧ ತತ್ವವನ್ನು ಸಾಧಿಸುವುದಕ್ಕಾಗಿ ಎಂಭತ್ನಾಲ್ಕು ಸಾವಿರ ಸಾಧನಾ ವಿಧಾನಗಳಿದೆಯೆಂದು ಹೇಳಿದ್ದಾನೆ. ಅವರು ಬುದ್ಧ ಧರ್ಮವು ಇಂಥಹ ಹತ್ತಕ್ಕೂ ಹೆಚ್ಚು ಸಾಧನ ವಿಧಾನಗಳನ್ನು, ಉದಾಹರಣೆಗೆ ಜ್ಯೆನ್ ಬೌದ್ಧಧರ್ಮ, ಪರಿಶುದ್ಧ ಭೂಮಿ, ತಿಯಾನ್‌ತಾಯ್, ಹೂಯಾನ್ ಮತ್ತು ತಾಂತ್ರಿಕಧರ್ಮ; ಇವೆಲ್ಲವೂ ಕೂಡ ಇಡೀ ಬುದ್ಧ ಫಾ ವನ್ನು ಪ್ರತಿನಿಧಿಸಲು ಸಾಧ್ಯವಿಲ್ಲ. ಸಾಖ್ಯಮುನಿಯೂ ಕೂಡ ತನ್ನೆಲ್ಲಾ ಧರ್ಮವನ್ನು ಪ್ರತಿಪಾದಿಸಲಿಲ್ಲ; ಆತ ಕೇವಲ ಆ ಕಾಲದ ಜನರ ಗ್ರಹಿಕೆಯ ಸಾಮರ್ಥ್ಯಕ್ಕೆ ಯೋಗ್ಯವಾದ ಭಾಗ್ಯವನ್ನಷೇ ಬೋಧಿಸಿದ್ದು.

ಹಾಗಾದರೆ ಬುದ್ಧ ಫಾ ಎಂದರೇನು? ಈ ಪ್ರಪಂಚದ ಅತ್ಯಂತ ಮೂಲಭೂತ ವಿಶಿಷ್ಠತೆಯಾದ, ಜ್ಹೆನ್–ಷ್ಹನ್–ರ್‍ಹೆನ್,

ಇದೇ ಬುದ್ಧ ಫಾ ದ ಅತ್ಯುನ್ನತ ಪ್ರಕಟಣೆ. ಇದು ಅತ್ಯಂತ ಮೂಲಭೂತ ಬದ್ಧ ಫಾ. ಬೇರೆ ಬೇರೆ ಮಟ್ಟದಲ್ಲಿ ಬೇರೆ ಬೇರೆ ರೂಪವನ್ನು ಪ್ರಕಟಿಸುತ್ತದೆ ಮತ್ತು ಭಿನ್ನ ಮಟ್ಟದಲ್ಲಿ ಭಿನ್ನ ಮಾರ್ಗದರ್ಶಕ ಪಾತ್ರವನ್ನು ಅನುಸರಿಸುತ್ತದೆ. ಮಟ್ಟ ಕೆಳಗಿದ್ದಂತೆಲ್ಲಾ ಅದು ಹೆಚ್ಚು ಸಂಕೀರ್ಣವಾಗಿರುತ್ತದೆ. ಈ ವೈಶಿಷ್ಟ್ಯತೆ, ಜ್ಹೆನ್–ಷ್ಹನ್–ರ್‍ಹೆನ್, ಗಾಳಿ, ಕಲ್ಲು, ಮರ, ಮಣ್ಣು ಕಬ್ಬಿಣ ಮತ್ತು ಉಕ್ಕು, ಮಾನವ ಶರೀರ ಒಳಗೊಂಡಂತೆ ಎಲ್ಲಾ ವಸ್ತುಗಳ ಸೂಕ್ಷ್ಮ ಕಣಗಳಲ್ಲಿ ಒಳಗೊಂಡಿರುತ್ತದೆ, ಪ್ರಾಚೀನ ಕಾಲದಲ್ಲಿ ಐದು ಮೂಲಭೂತ ಧಾತುಗಳು[15] ಪ್ರಪಂಚದಲ್ಲಿರುವ ಎಲ್ಲಾ ವಸ್ತು ಮತ್ತು ಪದಾರ್ಥಗಳಲ್ಲಿ ಒಳಗೊಂಡಿರುತ್ತದೆ ಎಂದು ಹೇಳಲಾಗಿದೆ; ಅವೂ ಕೂಡ ಈ ವೈಶಿಷ್ಟ್ಯ ಜ್ಹೆನ್–ಷ್ಹನ್–ರ್‍ಹೆನ್ ಅನ್ನು ಹೊಂದಿರುತ್ತದೆ. ಒಬ್ಬ ಅಭ್ಯಾಸಿಗ ಆತನ ಅಥವ ಆಕೆಯ ಸಾಧನೆಯ ಮಟ್ಟದ ಅನುಸಾರವಾಗಿ ಬುದ್ಧ ಫಾದ ನಿಖರವಾದ ಪ್ರಕಟನೆಗಳನ್ನು ಮಾತ್ರ ಗ್ರಹಿಸಬಲ್ಲವರಾಗಿರುತ್ತಾರೆ, ಇದೇ ಆತನ ಅಥವ ಆಕೆಯ ಸಾಧನೆಯ ಫಲ ಪದವಿ[16] ಮತ್ತು ಮಟ್ಟ. ವಿಸ್ತಾರವಾಗಿ ಹೇಳಬೇಕಾದರೆ ಫಾ ಅತ್ಯಂತ ಅಗಾಧವಾದುದು. ಅತ್ಯಂತ ಉನ್ನತ ಮಟ್ಟದ ದೃಷ್ಟಿಕೋನದಿಂದ ಹೇಳಬೇಕಾದರೆ ಇದು ಅತ್ಯಂತ ಸರಳವಾದುದು, ಏಕೆಂದರೆ ಫಾ ಒಂದು ಪಿರಮಿಡ್‌ನ ರೂಪವನ್ನು ಹೋಲುತ್ತದೆ. ಅದರ ಅತ್ಯುನ್ನತ ಮಟ್ಟದಲ್ಲಿ ಅದನ್ನು ಮೂರು ಪದಗಳಲ್ಲೇ ಸಂಗ್ರಹಿಸಬಹುದು; ಜ್ಹೆನ್, ಷ್ಹನ್, ರ್‍ಹೆನ್ ಭಿನ್ನ ಭಿನ್ನ ಮಟ್ಟದಲ್ಲಿ ಅದು ಅತ್ಯಂತ ಸಂಕೀರ್ಣವಾಗಿ ಪ್ರಕಟಗೊಳ್ಳುತ್ತದೆ. ಮಾನವನನ್ನು ಉದಾಹರಣೆಗೆ ತೆಗೆದುಕೊಳ್ಳಬಹುದು. ತಾವೋ ಶಾಲೆ ಮಾನವ ದೇಹವನ್ನು ಒಂದು ಸಣ್ಣ ಪ್ರಪಂಚವೆಂದು ಪರಿಗಣಿಸುತ್ತಾರೆ. ಒಬ್ಬ ವ್ಯಕ್ತಿಗೆ ಈ ಭೌತಿಕ ದೇಹವಿರುತ್ತದೆ, ಆದರೂ ಒಬ್ಬ ವ್ಯಕ್ತಿ ಕೇವಲ ಈ 14.

---

**14. ಧರ್ಮ ಕೊನೆಯಾಗುವ ಕಾಲ** – ಬುದ್ಧ ಸಾಖ್ಯಮುನಿಯ ಅನುಸಾರ ಧರ್ಮ ಕೊನೆಗೊಳ್ಳುವ ಕಾಲವು ಅವನು ತೀರಿಹೋದ ಐದುನೂರು ವರ್ಷಗಳ ನಂತರ ಶುರುವಾಗುವಂಥದ್ದು ಮತ್ತು ಈ ಕಾಲದಲ್ಲಿ ಆತನ ಧರ್ಮವೂ ಕೂಡ ಜನರನ್ನು ರಕ್ಷಿಸಲು ಸಾಧ್ಯವಾಗುವುದಿಲ್ಲ.

ಭೌತಿಕ ಶರೀರದಿಂದಷ್ಟೇ ಸಂಪೂರ್ಣನಲ್ಲ. ಒಬ್ಬರಿಗೆ ಅವರೊಂದಿಗೆ ಮಾನವ ಸ್ವಭಾವ, ವ್ಯಕ್ತಿತ್ವ, ಗುಣ ಮತ್ತು ಪುರಾತನ ಮೂಲ ಜೀವಾತ್ಮ ಇವೆಲ್ಲವನ್ನೂ ಒಳಗೊಂಡಿದ್ದರೆ ಮಾತ್ರ ವ್ಯಕ್ತಿ ವಿಶೇಷವುಳ್ಳ ಸಂಪೂರ್ಣ ಮತ್ತು ಸ್ವತಂತ್ರ ವ್ಯಕ್ತಿಯೆಂದು ಪರಿಗಣಿಸಲು ಸಾಧ್ಯ. ಇದು ನಮ್ಮ ವಿಶ್ವದ ಕುರಿತೂ ಸತ್ಯವಾದುದು, ಹಾಲಿನ ಹಾದಿ, ಇತರ ನಕ್ಷತ್ರ ಪುಂಜ, ಜೀವ ಮತ್ತು ನೀರು ಎಲ್ಲವನ್ನು ಇದು ಒಳಗೊಂಡಿದೆ. ಈ ವಿಶ್ವದ ಎಲ್ಲಾ ಪದಾರ್ಥ ಮತ್ತು ಜೀವ ಮತ್ತು ನೀರು ಎಲ್ಲವನ್ನೂ ಇದು ಒಳಗೊಂಡಿದೆ. ಈ ವಿಶ್ವದ ಎಲ್ಲಾ ಪದಾರ್ಥ ಮತ್ತು ವಸ್ತುಗಳೂ ಕೂಡ ವಾಸ್ತವಿಕ ಅಸ್ತಿತ್ವದ ಪ್ರತೀಕಗಳೇ ಆಗಿವೆ. ಅದೇ ಸಮಯದಲ್ಲಿ ಅವುಗಳು ಜೈನ್–ಷ್ಮನ್–ರ್‍ಧೆನ್ ವೈಶಿಷ್ಟ್ಯಗಳನ್ನು ಒಳಗೊಂಡಿರುತ್ತದೆ. ಒಂದು ವಸ್ತುವಿನ ಎಲ್ಲಾ ಸೂಕ್ಷ್ಮ ಕಣಗಳೂ ಕೂಡ ಈ ವೈಶಿಷ್ಟ್ಯಗಳನ್ನು ಒಳಗೊಂಡಿರುತ್ತದೆ–ಅತ್ಯಂತ ಸೂಕ್ಷ್ಮಾತಿಸೂಕ್ಷ್ಮ ಕಣಗಳೂ ಕೂಡ ಈ ಗುಣವನ್ನು ಹೊಂದಿರುತ್ತದೆ.

ಈ ವೈಶಿಷ್ಟ್ಯ; ಜೈನ್–ಷ್ಮನ್–ರ್‍ಧೆನ್, ಇವೇ ವಿಶ್ವದಲ್ಲಿ ಒಳ್ಳೆಯದು ಮತ್ತು ಕೆಟ್ಟದ್ದನ್ನು ಅಳೆಯಲು ಇರುವ ಮಾನದಂಡ. ಯಾವುದು ಒಳ್ಳೆಯದು ಅಥವ ಕೆಟ್ಟದ್ದು? ಅವನ್ನು ಇದರಿಂದ ನಿರ್ಣಯಿಸಲ್ಪಡುತ್ತದೆ. ನಾವು ಈ ಹಿಂದೆ ಉಲ್ಲೇಖಿಸಿದಂತಹ ಡ್ಥ[17] ಕೂಡ ಇದೇ ಆಗಿದೆ. ನಿಶ್ಚಿತವಾಗಿ, ಇಂದಿನ ಸಮಾಜದ ನೈತಿಕ ಮಟ್ಟ ಆಗಲೇ ಬದಲಾಗುತ್ತಿದೆ ಮತ್ತು ವಿರೂಪಗೊಂಡಿದೆ. ಈಗ ಯಾರಾದರೂ ಒಬ್ಬರು ಲೇ ಫಂಗ್[18] ನಿಂದ ಕರೆಯಲ್ಪಡುತ್ತಿದ್ದರೆ ಅವನನ್ನು ಅಥವ ಅವಳನ್ನು ಮಾಸಿಕ ಅಸ್ಪೃಶ್ಯನೆಂದೇ ಬಗೆಯುತ್ತಾರೆ. ಆದರೆ 1950 ರಲ್ಲಿ ಅಥವ 1960 ರಲ್ಲಿ ಯಾರು ಇವರನ್ನು ಮಾನಸಿಕ ಅಸ್ವಸ್ಥರೆಂದು ಹೇಳುತ್ತಿದ್ದರು? ಮಾನವ ನೈತಿಕ ಗುಣಮಟ್ಟ ವಿಪರೀತವಾಗಿ ಕ್ಷೀಣಿಸುತ್ತಿದೆ ಮತ್ತು ಮಾನವ ನೈತಿಕ ಮೌಲ್ಯಗಳು ದಿನಕಳೆದಂತೆ ನಶಿಸಿ ಹೋಗುತ್ತಿದೆ. ಮಾನವರು ತಮ್ಮ ಸ್ವ–ಹಿತಾಸಕ್ತಿಯನ್ನಷ್ಟೇ ಬೆನ್ನಟ್ಟುತ್ತಾರೆ ಮತ್ತು ಒಂದು ಸಣ್ಣ ವೈಯಕ್ತಿಕ ಲಾಭಕ್ಕಾಗಿ ಇತರರಿಗೆ ಹಾನಿ ಮಾಡುತ್ತಾರೆ. ಇವರುಗಳು ಒಬ್ಬರ ವಿರುದ್ಧ ಮತ್ತೊಬ್ಬರು ಎಲ್ಲಾ ವಿಧಾನಗಳ ಮೂಲಕ ಸ್ಪರ್ಧಿಸುತ್ತಾರೆ ಮತ್ತು ಹೋರಾಡುತ್ತಾರೆ. ಎಲ್ಲರೂ ಯೋಚಿಸಿ ನೋಡಿ: ಇದನ್ನು ಮುಂದುವರೆಯಲು ಬಿಡಲಾಗುತ್ತದೆಯೇ? ಯಾರಾದರೂ ಒಬ್ಬರು ಕೆಟ್ಟ ಕೆಲಸವನ್ನು ಮಾಡುತ್ತಿದ್ದಾಗ, ಆತ ನೀವು ಆತನ ಕೆಟ್ಟ ಕೆಲಸದ ಕುರಿತು ತಿಳಿಸಿದರೂ ಕೂಡ ಆತ ಅದನ್ನು ನಂಬುವುದಿಲ್ಲ. ಆ ವ್ಯಕ್ತಿಯು ತಾನು ತಪ್ಪು ಮಾಡುತ್ತಿದ್ದೇನೆಂದು ನಂಬಿಕೆಯೇ ಬರುವುದಿಲ್ಲ. ಕೆಲವು ಜನರು ತಮ್ಮನ್ನು ತಾವೇ ಈ ಕ್ಷೀಣಿಸಿದ ನೈತಿಕ ಗುಣಮಟ್ಟದೊಂದಿಗೆ ಮೌಲ್ಯಮಾಪನ ಮಾಡಿಕೊಳ್ಳುತ್ತಾರೆ. ಮೌಲ್ಯಮಾಪನದ ಮಾನದಂಡ ಬದಲಾಗಿರುವುದರಿಂದ ತಮ್ಮನ್ನು ತಾವು ಇತರರಿಗಿಂತ ವಾಸಿಯೆಂದು ತಿಳಿದುಕೊಳ್ಳುತ್ತಾರೆ. ಮಾನವ ನೈತಿಕ ಗುಣಮಟ್ಟವು ಎಷ್ಟೇ ಬದಲಾದರೂ ಕೂಡ ಪ್ರಪಂಚದ ವೈಶಿಷ್ಟ್ಯ ಮಾತ್ರ ಯಾವುದೇ ಬದಲಾವಣೆಯನ್ನು ಹೊಂದುವುದಿಲ್ಲ, ಮತ್ತು ಇದೇ ಒಳ್ಳೆಯ ಜನರನ್ನು ಕೆಟ್ಟ ಜನರಿಂದ ಬೇರ್ಪಡಿಸಲಿರುವ ಏಕಮಾತ್ರ ಮಾನದಂಡ. ಹಾಗಾಗಿ ಒಬ್ಬ ಅಭ್ಯಾಸಿಗನಾಗಿ ಒಬ್ಬರು, ತಮ್ಮ ನಡವಳಿಕೆಗಳನ್ನು ಸಾಮಾನ್ಯ ಜನರ ಗುಣಮಟ್ಟಕ್ಕನುಸಾರವಾಗಿ ನಡೆದುಕೊಳ್ಳದೆ ಪ್ರಪಂಚದ ವೈಶಿಷ್ಟ್ಯಗಳಿಗನುಗುಣವಾಗಿ ನಡೆದುಕೊಳ್ಳಬೇಕು. ನೀವು ನಿಮ್ಮ ಮೂಲ, ನೈಜ ಜೀವಾತ್ಮದೆಡೆಗೆ ಮರಳುವುದಾದರೆ ಮತ್ತು ಸಾಧನೆಯ ಅಭ್ಯಾಸದಲ್ಲಿ ಮೇಲೇರಲು ಬಯಸುವುದಾದರೆ, ನೀವು ಈ ಮಾನದಂಡದ ಅನುಸಾರವಾಗಿಯೇ ನಡೆದುಕೊಳ್ಳಬೇಕು. ಮಾನವರಾಗಿ, ನೀವು ಈ ಪ್ರಪಂಚದ ವೈಶಿಷ್ಟ್ಯತೆಯಾದ ಜೈನ್–ಷ್ಮನ್–ರ್‍ಧೆನ್ ಅನ್ನು ಅನುಸರಿಸಲು ಸಾಧ್ಯವಾದರೆ ಮಾತ್ರ ನೀವು ಒಳ್ಳೆಯ ಒಬ್ಬ ವ್ಯಕ್ತಿ ಎನಿಸುವಿರಿ. ಈ ವೈಶಿಷ್ಟ್ಯತೆಗಳಿಂದ ತಪ್ಪಿ ನಡೆದರೆ ಆತ ನಿಜವಾಗಿಯೂ ಕೆಟ್ಟ ಮನುಷ್ಯ. ನಿಮ್ಮ ಕೆಲಸದ ಸ್ಥಳದಲ್ಲಿ ಅಥವ ಈ ಸಮಾಜದಲ್ಲಿ ಕೆಲವು ಜನರು ನಿಮ್ಮನ್ನು ಕೆಟ್ಟವನೆಂದು ಹೇಳಬಹುದು, ಆದರೂ ನೀವು ಅವಶ್ಯಕವಾಗಿ ಕೆಟ್ಟವರಾಗಿಲ್ಲದೇ ಇರಬಹುದು. ಕೆಲವು ಜನರು ನೀವು

---

15. **ಐದು ಮೂಲಭೂತ ಧಾತುಗಳು** – ಲೋಹ, ಮರ, ನೀರು, ಬೆಂಕಿ ಮತ್ತು ಭೂಮಿ
16. **ಫಲ ಪದವಿ –** ಬುದ್ಧ ಶಾಲೆಯಲ್ಲಿ ಒಬ್ಬರ ಮಟ್ಟದ ಗಳಿಸುವಿಕೆ, ಉದಾ. ಅರ್ಹತ್, ಬೋಧಿಸತ್ವ, ತಥಾಗತ, – ಇತ್ಯಾದಿ
17. **ಡ್ಥ** – "ಸುಶೀಲ್ಯ" , "ಶ್ರೇಷ್ಠತೆ" ; ಅಮೂಲ್ಯ ಬಿಳಿ ವಸ್ತು.
18. **ಲೇ ಫಂಗ್** – 1960 ರ ಚೀನಾದ ನೈತಿಕ ಆದರ್ಶ ವ್ಯಕ್ತಿ.

ಒಳ್ಳೆಯವರೆನ್ನಬಹುದು, ಆದರೆನೀವು ನಿಜವಾಗಿಯೂ ಒಳ್ಳೆಯವರಾಗಿಲ್ಲದೆ ಇರಬಹುದು. ಒಬ್ಬ ಅಭ್ಯಾಸಿಗನಾಗಿ, ನೀವು ಈ ವೈಶಿಷ್ಟ್ಯತೆಗೆ ನಿಮ್ಮನ್ನು ನೀವು ಸಮೀಕರಿಸಿಕೊಂಡಲ್ಲಿ ನೀವಾಗಲೇ ತಾವ್ರೋ ಅನ್ನು ತಲುಪಿದಂತೆಯೇ – ಇದು ಈ ತರಹದ ಸಾಮಾನ್ಯ ತತ್ವ.

ಜೈನ್–ಷ್ಞನ್–ರ್‍ಥೆನ್ ಇವುಗಳನ್ನು ಅಭ್ಯಾಸಿಸುವ ವೇಳೆ ತಾವ್ರೋ ಶಾಲೆ ಜೈನ್ ಅನ್ನು ಸಾಧಿಸಲು ಹೆಚ್ಚು ಒತ್ತು ಕೊಡುತ್ತದೆ. ಆದ್ದರಿಂದ ತಾವ್ರೋ ಶಾಲೆ ಒಬ್ಬರ ಸ್ವಬಾವವನ್ನು ಬೆಳೆಸಬೇಕಾದರೆ ಜೈನ್ ಅನ್ನು ಸಾಧಿಸಬೇಕೆಂದು ನಂಬುತ್ತದೆ ; ಒಬ್ಬರು ಸತ್ಯವನ್ನೇ ನುಡಿಯಬೇಕು, ಸತ್ಯವಾದದ್ದನ್ನೇ ಮಾಡಬೇಕು, ಸತ್ಯವಂತ ವ್ಯಕ್ತಿಯಾಗಬೇಕು, ತಮ್ಮ ಮೂಲ ನೈಜ ಜೀವಾತ್ಮದೆಡೆಗೆ ಮರಳಬೇಕು ಮತ್ತು ಕೊನೆಯಲ್ಲಿ ಸಾಧನುು ಮೂಲಕ ಸತ್ಯವಾದ ಮನುಷ್ಯನಾಗಬೇಕು. ಆದಾಗ್ಯೂ, ಅದು ರ್‍ಥೆನ್ ಮತ್ತು ಷ್ಞನ್ ಅನ್ನು ಒಳಗೊಳ್ಳುತ್ತದೆ, ಆದರೆ ಜೈನ್ ಅನ್ನು ಸಾಧನೆಗೆ ಹೆಚ್ಚು ಒತ್ತು ಕೊಡುತ್ತದೆ. ಬುದ್ಧ ಶಾಲೆಯು ಜೈನ್–ಷ್ಞನ್–ರ್‍ಥೆನ್ ಗಳಲ್ಲಿ ಷ್ಞನ್ ಸಾಧನೆಗೆ ಹೆಚ್ಚು ಮಹತ್ವ ಕೊಡುತ್ತದೆ. ಏಕೆಂದರೆ ಷ್ಞನ್‌ನ ಸಾಧನೆ ಮಹಾನ್, ಪರೋಪಕಾರಿ ದಯೆಯನ್ನು ಉತ್ಪಾದಿಸುತ್ತದೆ, ಮತ್ತು ಕರುಣೆ ಅಭಿವೃದ್ಧಿಗೊಂಡಾಗ ಒಬ್ಬರಿಗೆ ಎಲ್ಲಾ ಜೀವಿಗಳೂ ನೋವಿನಲ್ಲಿರುವುದು ಗೋಚರವಾಗುತ್ತದೆ, ಆದ್ದರಿಂದ ಬುದ್ಧ ಶಾಲೆಯು ಎಲ್ಲಾ ಜೀವಿಗಳಿಗೂ ಮೋಕ್ಷವನ್ನು ದಯಪಾಲಿಸುವ ಹೆಬ್ಬಯಕೆಯನ್ನು ಹೊಂದಿದೆ. ಅದೂ ಕೂಡ ಜೈನ್ ಮತ್ತು ರ್‍ಥೆನ್ ಅನ್ನು ಒಳಗೊಂಡಿದೆ, ಆದರೆ ಷ್ಞನ್ ಸಾಧನೆಗೆ ಹೆಚ್ಚು ಒತ್ತು ಕೊಡಲಾಗುತ್ತದೆ. ನಮ್ಮ ಫಾಲೂನ್ ದಾಫಾ ಈ ಪ್ರಪಂಚದ ಅತ್ಯುನ್ನತ ಮಾನದಂಡವಾದ ಜೈನ್–ಷ್ಞನ್–ರ್‍ಥೆನ್‌ನ್ನು ಆಧಾರವಾಗಿ ಹೊಂದಿದೆ, ಜೈನ್, ಷ್ಞನ್ ಮತ್ತು ರ್‍ಥೆನ್ ಎಲ್ಲವನ್ನು ನಾವು ಏಕಕಾಲದಲ್ಲೇ ಅಭ್ಯಾಸಿಸುತ್ತೇವೆ. ನಾವು ಅಭ್ಯಾಸಿಸುವಂತಹ ವ್ಯವಸ್ಥೆಯು ಅಗಾಧವಾದುದು.

**ಚೀಗಾಂಗ್ ಎನ್ನುವುದು ಇತಿಹಾಸ ಪೂರ್ವ ಸಂಸ್ಕೃತಿ**

ಚೀಗಾಂಗ್ ಎಂದರೇನು? ಬಹಳಷ್ಟು ಮಂದಿ ಚೀಗಾಂಗ್ ಗುರುಗಳು ಈ ಬಗ್ಗೆ ಹೇಳಿದ್ದಾರೆ. ನಾನು ಹೇಳುತ್ತಿರುವುದು ಅವರೆಲ್ಲರೂ ಹೇಳುವುದಕ್ಕಿಂತ ಭಿನ್ನವಾಗಿದೆ. ಬಹಳಷ್ಟು ಮಂದಿ ಚೀಗಾಂಗ್ ಗುರುಗಳು ಅವರವರ ಮಟ್ಟಗಳಿಗನುಗುಣವಾಗಿ ಮಾತನಾಡುತ್ತಾರೆ. ಆದರೆ ನಾನು ಚೀಗಾಂಗ್ ಕುರಿತಾದ ಉನ್ನತ ಮಟ್ಟದ ಗ್ರಹಿಕೆಯಿಂದ ಮಾತನಾಡುತ್ತೇನೆ. ಅದು ಅವರ ಗ್ರಹಿಕೆಯಿಂದ ಸಂಪೂರ್ಣವಾಗಿ ಭಿನ್ನವಾಗಿರುತ್ತದೆ. ಕೆಲವು ಚೀಗಾಂಗ್ ಗುರುಗಳು ನಮ್ಮ ದೇಶದಲ್ಲಿ ಚೀಗಾಂಗ್‌ಗೆ ಎರಡು ಸಾವಿರ ವರ್ಷಗಳ ಇತಿಹಾಸವಿದೆಯೆಂದು ಹೇಳುತ್ತಾರೆ. ಇನ್ನು ಕೆಲವು ಜನರು ಚೀಗಾಂಗ್‌ಗೆ ಮೂರು ಸಾವಿರ ವರ್ಷಗಳ ಇತಿಹಾಸವಿದೆಯೆಂದು ಹೇಳುತ್ತಾರೆ. ಮತ್ತೆ ಕೆಲವರು ಚೀಗಾಂಗ್‌ಗೆ ಐದು ಸಾವಿರ ವರ್ಷಗಳ ಇತಿಹಾಸವಿದೆಯೆಂದು ಹೇಳುತ್ತಾರೆ, ಇದು ನಮ್ಮ ಚೀನೀ ನಾಗರೀಕತೆಗೆ ಹತ್ತಿರ ಬರುತ್ತದೆ. ಮತ್ತೆ ಇನ್ನೂ ಕೆಲವರು ಪ್ರಾಚ್ಯ ವಸ್ತುಗಳ ಅಗೆಯುವಿಕೆಯ ಆಧಾರದ ಮೇಲೆ ಇದಕ್ಕೆ ಏಳು ಸಾವಿರ ವರ್ಷಗಳ ಇತಿಹಾಸವಿದೆಯೆನ್ನುತ್ತಾರೆ, ಮತ್ತಿದು ನಮ್ಮ ಚೀನೀ ನಾಗರೀಕತೆಯನ್ನು ಮೀರಿದಂತಾಯಿತು. ಅವರು ಇದನ್ನು ಹೇಗಾದರೂ ಅರ್ಥೈಸಲಿ ಚೀಗಾಂಗ್ ಮಾನವ ನಾಗರೀಕತೆಯ ಇತಿಹಾಸ ಪೂರ್ವದಲ್ಲಿ ಅಸ್ತಿತ್ವದಲ್ಲಿರುವುದು ಸಾಧ್ಯವಿಲ್ಲ. ಡಾರ್ವಿನ್‌ನ ವಿಕಾಸವಾದದ ಪ್ರಕಾರ, ಮಾನವರು ಜಲಚರ ಗಿಡಗಳಿಂದ ನಂತರ ಜಲಚರ ಪ್ರಾಣಿಗಳ ನಂತರ ವಿಕಸಿಸಿದರು. ನಂತರ ಅವು ಭೂಮಿಯ ಮೇಲೆ ವಾಸಿಸಲು ಬಂದವು ಮತ್ತು ಕ್ರಮೇಣ ಮರಗಳ ಮೇಲೆ ಮತ್ತೆ ಭೂಮಿಯಲ್ಲಿ, ಅವು ಕಪಿಗಳಾದವು ಮತ್ತು ಕೊನೆಯಲ್ಲಿ ಸಂಸ್ಕೃತಿ ಮತ್ತು ಆಲೋಚನಾ ಶಕ್ತಿಯಿರುವ ಆಧುನಿಕ ಮಾನವರು ವಿಕಸಿಸಿದರು. ಈ ಲೆಕ್ಕಾಚಾರದ ಆಧಾರದ ಮೇಲೆ, ಮಾನವ ನಾಗರೀಕತೆ ಉದಯಿಸಿದ್ದು ಹತ್ತುಸಾವಿರ ವರ್ಷಗಳ ಹಿಂದಿಗಿಂತ ಜಾಸ್ತಿ ಇಲ್ಲ. ಇದಕ್ಕೂ ಹಿಂದಕ್ಕೆ ನೋಡಿದಾಗ, ಗಂಟುಕಟ್ಟುವ ಮೂಲಕ ಟಿಪ್ಪಣಿ ಮಾಡಿಕೊಳ್ಳುವುದೂ ತಿಳಿದಿರಲಿಲ್ಲ. ಆ ಜನರು ಮರದ ಎಲೆಗಳನ್ನು ಉಡುತ್ತಿದ್ದರು ಮತ್ತು ಹಸಿ ಮಾಂಸವನ್ನು ತಿನ್ನುತ್ತಿದ್ದರು. ಇದಕ್ಕೂ ಮತ್ತೂ ಹಿಂದೆ ಹೋದರೆ, ಜನರು ಸಂಪೂರ್ಣವಾಗಿ ವನ್ಯ ಅಥವ ಆದಿಮಾನವನಾಗಿದ್ದನು, ಅವರಿಗೆ ಬೆಂಕಿಯ ಬಳಕೆಯ ಕುರಿತೂ ತಿಳಿದಿರಲಿಕ್ಕಿಲ್ಲ.

ಆದರೂ ನಮಗೊಂದು ಸಮಸ್ಯೆ ಎದುರಾಗಿದೆ. ಜಗತ್ತಿನ ಹಲವಾರು ಸ್ಥಳಗಳಲ್ಲಿ ಸಿಕ್ಕಿರುವಂತಹ ಬಹಳ ಸಾಂಸ್ಕೃತಿಕ ಆಸ್ತಿಗಳ ಆಧಾರದ ಮೇಲೆ ಮಾನವ ನಾಗರೀಕತೆಯ ಇತಿಹಾಸವು ಮತ್ತೂ ಹಿಂದಕ್ಕೆ ಒಯ್ಯಲ್ಪಡುತ್ತದೆ. ಈ ಪುರಾತನ ಅವಶೇಷಗಳು ಉನ್ನತ ಮಟ್ಟದ ಕಲೆಗಾರಿಕೆಯನ್ನು ಹೊಂದಿದೆ. ಕಲಾಕೌಶಲ್ಯ ಮೌಲ್ಯದ ಆಧಾರದ ಮೇಲೆ ಹೇಳುವುದಾದರೆ ಇವು ಬಹುವಾಗಿ ಮುಂದುವರೆದ ಮಟ್ಟವಾಗಿತ್ತು. ಆಧುನಿಕ ಮಾನವಕುಲ ಪುರಾತನ ಜನರ ಕಲೆಗಳನ್ನು ಸುಮ್ಮನೆ ಅನುಕರಣೆ ಮಾಡುತ್ತಿದ್ದಾರೆ. ಮತ್ತು ಅವರ ಕಲೆಯು ಅತ್ಯುನ್ನತ ಕಲಾನೈಪುಣ್ಯ ಮೌಲ್ಯವುಳ್ಳದ್ದಾಗಿತ್ತು. ಆದರೂ, ಇವೆಲ್ಲವೂ ನೂರು ಸಾವಿರ ವರ್ಷಗಳಿಗೂ ಹಿಂದೆ, ಹಲವಾರು ನೂರು ಸಾವಿರ ವರ್ಷಗಳ ಹಿಂದೆ, ಹಲವಾರು ಮಿಲಿಯನ್ ವರ್ಷ, ಅಥವ ನೂರು ಮಿಲಿಯನ್ ವರ್ಷಕ್ಕಿಂತ ಜಾಸ್ತಿ ಹಿಂದಿನ ಅಸ್ತಿಗಳಾಗಿತ್ತು. ಯೋಚಿಸಿ ನೋಡಿ ಎಲ್ಲರೂ : ಇವೆಲ್ಲವೂ ಇಂದಿನ ಇತಿಹಾಸವನ್ನು ಅಪಹಾಸ್ಯ ಮಾಡುತ್ತಿಲ್ಲವೇ? ಇದು ನಿಜವಾಗಿಯೂ ತಮಾಷೆಯಲ್ಲ, ಏಕೆಂದರೆ ಮಾನವ ಕುಲವು ಯಾವಾಗಲೂ ಸುಧಾರಿಸುತ್ತಲೇ ಇದೆ ಮತ್ತು ಪುನರ್‌ಶೋಧಿಸಿಕೊಳ್ಳುತ್ತಲೇ ಇದೆ. ಈ ರೀತಿಯಾಗಿಯೇ ಸಮಾಜವು ಅಭಿವೃದ್ಧಿ ಹೊಂದುವುದು. ಪ್ರಾಥಮಿಕ ಗ್ರಹಿಕೆಯು ಅಂತಿಮವಾಗಿ ಸರಿಯಾದುದಲ್ಲದಿರಬಹುದು.

ಬಹಳಷ್ಟು ಜನರು "ಇತಿಹಾಸಪೂರ್ವ ಸಂಸ್ಕೃತಿ" ಗಳ ಬಗ್ಗೆ ಕೇಳಿರಬಹುದು, ಇವನ್ನು "ಇತಿಹಾಸ ಪೂರ್ವ ನಾಗರಿಕತೆ" ಎಂದೂ ಕರೆಯಲಾಗುತ್ತದೆ. ನಾವು ಇತಿಹಾಸಪೂರ್ವ ನಾಗರೀಕತೆಯ ಬಗ್ಗೆ ಮಾತನಾಡುತ್ತೇವೆ. ಈ ಭೂಮಿಯ ಮೇಲೆ ಏಷ್ಯಾ, ಯೂರೋಪ್, ದಕ್ಷಿಣ ಅಮೇರಿಕ, ಉತ್ತರ ಅಮೇರಿಕ, ಓಶಿಯಾನಿಯ, ಆಫ್ರಿಕ ಮತ್ತು ಅಂಟಾರ್ಟಿಕ ಭೂಖಂಡಗಳಿವೆ. ಭೂಗರ್ಭ ಶಾಸ್ತ್ರಜ್ಞರು ಇವುಗಳನ್ನು ಭೂಖಂಡ ತಟ್ಟೆಗಳೆನ್ನುತ್ತಾರೆ. ಈ ಭೂಖಂಡ ತಟ್ಟೆಗಳ ರಚನೆಯಿಂದ ಇಂದಿನವರೆಗೂ ಹಲವು ಹತ್ತಾರು ಮಿಲಿಯನ್ ವರ್ಷಗಳು ಗತಿಸಿವೆ. ಅಂದರೆ ಹಲವಾರು ಭೂಖಂಡಗಳೂ ಕೂಡ ಸಮುದ್ರ ತಳದಲ್ಲಿ ಮುಳುಗಿವೆ. ಇಂದಿನ ಸ್ಥಿತಿಯಲ್ಲಿ ಅವು ಸುಸ್ಥಿರಗೊಂಡು ಹತ್ತಾರು ಮಿಲಿಯನ್ ಅಧಿಕ ವರ್ಷಗಳು ಉರುಳಿವೆ. ಹಲವಾರು ಸಾಗರಗಳ ನೀರಿನಡಿಯಲ್ಲಿ ಹಲವು ಉದ್ದದ ಮತ್ತು ಬೃಹತ್ ಪುರಾತನ ವಾಸ್ತುಶಿಲ್ಪ ಕೃತಿಗಳನ್ನು ಶೋಧಿಸಲಾಗಿದೆ. ಈ ಕಟ್ಟಡಗಳು ಅತ್ಯಂತ ಸುಂದರವಾಗಿ ಕೆತ್ತಲ್ಪಟ್ಟಿವೆ ಮತ್ತು ಇವು ನಮ್ಮ ಆಧುನಿಕ ಮಾನವ ಕುಲದ ಸಾಂಸ್ಕೃತಿಕ ಇತಿಹಾಸದ್ದಲ್ಲ. ಹಾಗಾದರೆ ಇವುಗಳನ್ನು ಸಾಗರ ತಳದಲ್ಲಿ ಮುಳುಗುವುದಕ್ಕೂ ಮೊದಲೇ ಕಟ್ಟಿಸಿರಬೇಕು. ಇಂತಹ ನಾಗರೀಕತೆಯನ್ನು ಹತ್ತಾರು ಮಿಲಿಯನ್ ವರ್ಷಗಳ ಹಿಂದೆ ಯಾರು ಸೃಷ್ಠಿಸಿದ್ದರು? ಆ ಕಾಲದಲ್ಲಿ ಮಾನವ ಕುಲವು ಇನ್ನೂ ಕಪಿಗಳೂ ಆಗಿರಲಿಲ್ಲ. ಅಂತಹ ಮಹಾನ್ ಜ್ಞಾನದ ಇಂಥಹವುಗಳನ್ನು ಸೃಷ್ಟಿಸಲು ನಮಗೆ ಹೇಗೆ ಸಾಧ್ಯ? ಪ್ರಪಂಚದ ಪ್ರಾಚೀನ ವಸ್ತುಶಾಸ್ತ್ರಜ್ಞರು ಸುಮಾರು 600 ಮತ್ತು 260 ಮಿಲಿಯನ್ ವರ್ಷಗಳ ನಡುವೆ ಹಿಂದೆ ಇದ್ದಂತಹ ಟ್ರಿಲೋಬೈಟ್ ಎಂಬ ಜೀವಿಯನ್ನು ಶೋಧಿಸಿದ್ದಾರೆ. ಈ ತರಹದ ಜೀವಿಯು ಸುಮಾರು 260 ಮಿಲಿಯನ್ ವರ್ಷಗಳ ಹಿಂದೆ ಕಣ್ಮರೆಯಾಯಿತು. ಒಬ್ಬ ಅಮೇರಿಕಾ ವಿಜ್ಞಾನಿ ಈ ಟ್ರಿಲೋಬೈಟ್ ಅಸ್ಥಿಯ ಮೇಲೆ ಮಾನವ ಹೆಜ್ಜೆ ಗುರುತು ಇರುವುದನ್ನು ಶೋಧಿಸಿದ್ದಾನೆ ; ಈ ಹೆಜ್ಜೆಗುರುತು ಒಬ್ಬ ಷೂ ಧರಿಸಿದ ವ್ಯಕ್ತಿಯಿಂದ ಅಚ್ಚಾಗಿದೆಯೆಂಬುದು ಸ್ಪಷ್ಟವಾಗಿದೆ. ಇದು ಇತಿಹಾಸಕಾರರನ್ನು ಗೇಲಿ ಮಾಡುತ್ತಿಲ್ಲವೇ ? ಡಾರ್ವಿನ್ನನ ವಿಕಾಸವಾದದ ಪ್ರಕಾರ, ಮಾನವ ಜೀವಿಗಳು 260 ಮಿಲಿಯನ್ ವರ್ಷಗಳ ಹಿಂದೆ ಹೇಗೆ ತಾನೇ ಇರಲು ಸಾಧ್ಯ ?

ಬಂಡೆ ಮೇಲೆ ಕೆತ್ತಲ್ಪಟ್ಟ ಪೆರುವಿನ ರಾಷ್ಟ್ರೀಯ ವಿಶ್ವವಿದ್ಯಾನಿಲಯದ ವಸ್ತುಸಂಗ್ರಹಾಲಯದಲ್ಲಿ ಮಾನವ ಚಿತ್ರವಿದೆ. ಸಂಶೋಧನೆಯ ನಂತರ ಈ ಮಾನವ ಚಿತ್ರವನ್ನು ಸುಮಾರು ಮೂವತ್ತು ಸಾವಿರ ವರ್ಷಗಳ ಹಿಂದೆ ಕೆತ್ತಲ್ಪಟ್ಟಿತ್ತು ಎಂದು ನಿರ್ಧರಿಸಲಾಯಿತು. ಆದರೆ ಈ ಮಾನವ ಚಿತ್ರವು ಉಡುಪುಗಳನ್ನು ಧರಿಸಿತ್ತು ಟೊಪ್ಪಿಗೆ ಮತ್ತು ಷೂ, ಕೈಯ್ಯಲ್ಲಿ ದುರ್ಬೀನು ಇದೆ. ಮತ್ತು ಆತ ಆಕಾಶಕಾಯಗಳನ್ನು ಟೆಲಿಸ್ಕೋಪ್ ಮೂಲಕ ಗಮನಿಸುತ್ತಿದ್ದಾನೆ. ಮೂವತ್ತು ಸಾವಿರ ವರ್ಷಗಳ ಹಿಂದೆ ಹೇಗೆ ಜನರು ಬಟ್ಟೆಯನ್ನು ನೇಯಬಲ್ಲರು ಮತ್ತು ಉಡುಪು ಧರಿಸಬಲ್ಲರು? ನಂಬಲಸಾಧ್ಯವೆಂದರೆ ಆತ ಆಕಾಶಕಾಯಗಳನ್ನು ಟೆಲಿಸ್ಕೋಪ್ ಮೂಲಕ ಗಮನಿಸುತ್ತಿದ್ದಾನೆ ಮತ್ತು ಬಾಹ್ಯಾಕಾಶದ ಬಗ್ಗೆ ಕೆಲಮಟ್ಟಿಗಿನ ಜ್ಞಾನವುಳ್ಳವನಾಗಿದ್ದಾನೆ. ನಾವು ಯಾವಾಗಲೂ ಟೆಲಿಸ್ಕೋಪ್‌ನ್ನು ಗೆಲಿಲಿಯೋ ಎಂಬ ಯೂರೋಪಿಯನ್ ಕಂಡುಹಿಡಿದ ಎಂದು ನಾವು ತಿಳಿದಿದ್ದೇವೆ, ಹಾಗಾಗಿ ಇದು ಕೇವಲ ಮೂರು

ನೂರಕ್ಕೂ ಹೆಚ್ಚು ವರ್ಷದ ಇತಿಹಾಸ ಹೊಂದಿದೆ. ಮೂವತ್ತು ಸಾವಿರ ವರ್ಷಗಳ ಹಿಂದೆ ಯಾರು ಟೆಲಿಸ್ಕೋಪನ್ನು ಕಂಡುಹಿಡಿದರು? ಇನ್ನೂ ಇಂತಹ ಹಲವಾರು ಪರಿಹರಿಸಲಾಗದ ಗೂಢ ಸಮಸ್ಯೆಗಳಿವೆ. ಉದಾಹರಣೆಗೆ, ಫ್ರಾನ್ಸ, ದಕ್ಷಿಣ ಆಫ್ರಿಕ ಮತ್ತು ಆಲ್ಪ್ಸನ ಗುಹೆಗಳಲ್ಲಿ ಹಲವಾರು ನೈಜ ಮತ್ತು ಜೀವವಿರುವಂತೆ ಕಾಣುವ ಫ್ರೆಸ್ಕೋ ಗಳನ್ನು ಕೆತ್ತಲಾಗಿದೆ. ಇಲ್ಲಿ ಕೆತ್ತನೆ ಮಾಡಿರುವ ಚಿತ್ರಗಳು ಅತ್ಯದ್ಭುತವಾಗಿ ಕಾಣುತ್ತವೆ ಮತ್ತು ಖನಿಜಯುಕ್ತ ರಂಗುಗಳಿಂದ ಬಣ್ಣ ಹಾಕಲಾಗಿದೆ. ಆದಾಗ್ಯೂ, ಈ ಜನರೆಲ್ಲರೂ ಪಾಶ್ಚಾತ್ಯ ಕೋಟು ಮತ್ತು ಬಿಗಿಯಾದ ಪ್ಯಾಂಟ್‌ಗಳಂತೆ ಇರುವ ಸಮಕಾಲೀನ ವಸ್ತ್ರಗಳನ್ನು ತೊಟ್ಟಿದ್ದಾರೆ. ಕೆಲವು ಜನರು ಧೂಮಪಾನದ ಪೈಪ್‌ಗಳಂತಿರುವುದನ್ನು ಹಿಡಿದಿದ್ದಾರೆ. ಮತ್ತೂ ಕೆಲವರು ನಡಿಗೆಯ ಕೋಲು ಮತ್ತು ಟೊಪ್ಪಿಗೆಗಳನ್ನು ಧರಿಸಿದ್ದಾರೆ. ಹಲವಾರು ನೂರು ಸಾವಿರ ವರ್ಷಗಳಷ್ಟು ಹಿಂದಿನ ಕಪಿಗಳು ಹೇಗೆ ಇಂತಹ ಮುಂದುವರೆದ ಕಲಾವಂತಿಕೆಯ ಮಟ್ಟವನ್ನು ತಲುಪಲು ಸಾಧ್ಯ.

ಇದಕ್ಕೂ ಬಹಳ ಹಿಂದಿನ ಕಾಲದ ಉದಾಹರಣೆಯನ್ನು ಕೊಡುವುದಾದರೆ, ಆಫ್ರಿಕಾದ ಗ್ಯಾಬೋನ್ ದೇಶದಲ್ಲಿ ಯುರೇನಿಯಂ ಅದಿರು ಇದೆ. ಈ ದೇಶವು ಸಾಪೇಕ್ಷವಾಗಿ ಅಭಿವೃದ್ಧಿಶೀಲ ರಾಷ್ಟ್ರವಾಗಿದೆ. ಅದು ಯುರೇನಿಯಂನ್ನು ತಾನೇ ತಯಾರು ಮಾಡದೆ ಅದಿರನ್ನು ಅಭಿವೃದ್ಧಿ ಹೊಂದಿದ ರಾಷ್ಟ್ರಗಳಿಗೆ ರಫ್ತು ಮಾಡುತ್ತದೆ. 1972 ರಲ್ಲಿ ಫ್ರಾನ್ಸಿನ ಕಂಪೆನಿಯೊಂದು ಯುರೇನಿಯಂ ಅದಿರನ್ನು ಈ ದೇಶದಿಂದ ತರಿಸಿಕೊಂಡಿತ್ತು. ಪ್ರಾಯೋಗಿಕ ಪರೀಕ್ಷೆಗಳ ನಂತರ ಈ ಯುರೇನಿಯಂ ಅದಿರನ್ನು ಸಂಸ್ಕರಿಸಿ ಬಳಸಲ್ಪಟ್ಟಿತ್ತೆಂದು ತಿಳಿದುಬಂದಿತು. ಇದು ಅವರಿಗೆ ಅತ್ಯಂತ ವಿಚಿತ್ರವಾಗಿ ತೋರಿತು ಮತ್ತು ಇದನ್ನು ಅಧ್ಯಯನ ಮಾಡಲು ವಿಜ್ಞಾನಿಗಳನ್ನು ಕಳುಹಿಸಿದರು. ಹಲವಾರು ದೇಶಗಳ ವಿಜ್ಞಾನಿಗಳು ಅಲ್ಲಿಗೆ ಹೋಗಿ ತಪಾಸಣೆ ನಡೆಸಿದರು, ಕೊನೆಯಲ್ಲಿ ಈ ಯುರೇನಿಯಂ ಗಣಿಯು ಒಂದು ಅತ್ಯಂತ ಬುದ್ಧಿಪ್ರಮಾಣ ನಕ್ಷೆಯನ್ನು ಹೊಂದಿದ ದೊಡ್ಡ ಪ್ರಮಾಣದ ಪರಮಾಣು ಬೀಜಸ್ಥಾವರ ಎಂದು ಧೃಡೀಕರಿಸಲ್ಪಟ್ಟಿತು. ಇಂತಹದ್ದನ್ನು ನಮ್ಮ ಇಂದಿನ ಆಧುನಿಕ ಜನರೂ ಕಟ್ಟಲು ಸಾಧ್ಯವಾಗುವುದೋ ಏನೋ, ಹಾಗಾದರೆ ಇದನ್ನು ಎಂದು ಕಟ್ಟಲಾಗಿತ್ತು ? ಇದನ್ನು ಎರಡು ಬಿಲಿಯನ್ ವರ್ಷಗಳ ಹಿಂದೆ ಕಟ್ಟಲಾಗಿತ್ತು ಮತ್ತು ಇದು ಐದುನೂರು ಸಾವಿರ ವರ್ಷಗಳವರೆಗೆ ಕೆಲಸ ಮಾಡುತ್ತಿತ್ತು. ಇವೆಲ್ಲವೂ ನಿಜವಾಗಿಯೂ ಜ್ಯೋತಿರ್‌ಶಾಸ್ತ್ರೀಯ ಸಂಖ್ಯೆಗಳು. ಮತ್ತು ಡಾರ್ವಿನ್‌ನ ವಿಕಾಸವಾದವು ಅವುಗಳನ್ನು ಕುರಿತು ಏನೂ ವಿಚಾರಣೆಯನ್ನು ಕೊಡಲು ಸಾಧ್ಯವಿಲ್ಲ. ಇಂತಹ ಹಲವಾರು ಉದಾಹರಣೆಗಳಿವೆ. ನಮ್ಮ ಇಂದಿನ ವೈಜ್ಞಾನಿಕ ಮತ್ತು ತಂತ್ರಜ್ಞಾನಿಕ ಸಮುದಾಯವು ಶೋಧಿಸಿರುವುದು ನಮ್ಮ ಇಂದಿನ ಪಠ್ಯಪುಸ್ತಕಗಳನ್ನು ಬದಲಾಯಿಸುವಷ್ಟು ಸಾಕಾಗುವಷ್ಟಿದೆ. ಒಮ್ಮೆ ಮನುಷ್ಯನ ಸಾಂಪ್ರದಾಯಕ ಮನೋಭಾವವು ವ್ಯವಸ್ಥಿತವಾದ ಆಲೋಚನೆ ಮತ್ತು ಕೆಲಸದ ಮಾರ್ಗದಲ್ಲಿ ಸಂರಚನೆಗೊಂಡರೆ ಹೊಸ ಆಲೋಚನೆಗಳನ್ನು ಒಪ್ಪಿಕೊಳ್ಳುವುದು ಅತ್ಯಂತ ಕಷ್ಟಕರವಾಗುತ್ತದೆ. ಸತ್ಯ ಹೊರಬಂದಾಗ ಜನರು ಅದನ್ನು ಒಪ್ಪುವ ಧೈರ್ಯ ಮಾಡುವುದಿಲ್ಲ ಮತ್ತು ಸ್ವಾಭಾವಿಕ ಸಹಜ ಪ್ರವೃತ್ತಿಯಿಂದ ಅದನ್ನು ನಿರಾಕರಿಸುತ್ತಾರೆ. ಸಂಪ್ರದಾಯಿಕ ಮನೋಭಾವಗಳ ಪ್ರಭಾವದಿಂದ ಇಂದು ಇಂತಹ ಶೋಧನೆಗಳನ್ನು ಯಾರೂ ವ್ಯವಸ್ಥಿತವಾಗಿ ಸಂಕಲನಗೊಳಿಸಿಲ್ಲ. ಆದ್ದರಿಂದ ಮಾನವ ಪರಿಕಲ್ಪನೆಗಳು ಯಾವಾಗಲೂ ಪ್ರಗತಿಯ ಹಿಂದೆ ಉಳಿಯುತ್ತದೆ. ಒಮ್ಮೆ ನೀವು ಇಂತಹ ವಿಷಯವನ್ನು ಹೇಳಹೊರಟರೆ, ಇಂತಹವನ್ನು ಮೂಢನಂಬಿಕೆ ಎಂದು ಕರೆದು ಇವುಗಳನ್ನು ದೂರತಳ್ಳುವ ಜನರು ಇದ್ದೇ ಇರುತ್ತಾರೆ – ಇದನ್ನು ಆಗಲೇ ಶೋಧಿಸಿದ್ದರೂ ಕೂಡ ಹೀಗಾಗುತ್ತದೆ. ಇವುಗಳನ್ನು ಇನ್ನೂ ಕೂಡ ವ್ಯಾಪಕವಾಗಿ ಜಾಹೀರುಗೊಳಿಸಿಲ್ಲ.

ಬಹಳಷ್ಟು ಮಂದಿ ಧೈರ್ಯವಂತ ವಿದೇಶಿ ವಿಜ್ಞಾನಿಗಳು ಇದನ್ನು ಒಂದು ನಾಗರೀಕತೆ ಎಂದು ಬಹಿರಂಗವಾಗಿ ಗುರುತಿಸಿದ್ದಾರೆ. ಬೇರೆ ಮಾತುಗಳಲ್ಲಿ ಹೇಳುವುದಾದರೆ, ನಮ್ಮ ನಾಗರೀಕತೆಗೆ ಪೂರ್ವದಲ್ಲಿ ಒಂದಕ್ಕೂ ಹೆಚ್ಚು ನಾಗರೀಕತೆಯ ಯುಗಗಳು ಅಸ್ತಿತ್ವದಲ್ಲಿದ್ದವು. ಅಗೆದು ತೆಗೆದಂತಹ ಅಸ್ತಿಗಳ ಮೂಲದಿಂದ ನಾವು ಶೋಧಿಸಿದಂತಹ ವಸ್ತುಗಳು ಕೇವಲ ಒಂದೇ ಒಂದು ನಾಗರೀಕತೆಯ ಯುಗಕ್ಕೆ ಸೀಮಿತವಾಗುವಂಥದ್ದಲ್ಲ. ಆದ ಕಾರಣ, ಹಿಂದೆ ಬಹಳಷ್ಟು ಬಾರಿ ಆದಂತೆ ಪ್ರತೀಬಾರಿ ಮಾನವ ನಾಗರೀಕತೆ ಸರ್ವನಾಶ ಹೊಂದಿದಾಗ, ಕೇವಲ ಕೆಲವೇ ಕೆಲವು ಜನರು ಬದುಕುಳಿದರು ಮತ್ತು ಅವರು ಪ್ರಾಚೀನ ಆದಿಮಾನವ ಜೀವನವನ್ನು ನಡೆಸುತ್ತಿದ್ದರು ನಂತರ ಅವರು ಕ್ರಮೇಣ ಸಂಖ್ಯೆಯಲ್ಲಿ ವೃದ್ಧಿ ಹೊಂದಿ ಹೊಸ ಮಾನವ ಕುಲಕ್ಕೆ ನಾಂದಿ ಹಾಡಿದರು, ಹೀಗೆ ಹೊಸ ನಾಗರೀಕತೆ

ಶುರುವಾಯಿತು. ನಂತರ ಅವರನ್ನು ಮತ್ತೆ ನಿರ್ನಾಮ ಮಾಡಲಾಯಿತು. ಮತ್ತು ನಂತರ ಪುನಃ ಹೊಸ ಮಾನವ ಜನಾಂಗವು ಉತ್ಪಾದಿಸಲ್ಪಟ್ಟಿತು. ಇದು ಇಂತಹ ಹಲವಾರು ಬೇರೆ ಬೇರೆ ನಿಯತಕಲಿಕ ಬದಲಾವಣೆಗಳ ಮೂಲಕ ಸಾಗುತ್ತದೆ. ಭೌತಶಾಸ್ತ್ರಜ್ಞರು ವಸ್ತುವಿನ ಚಲನೆಯು ಕೆಲವು ನಿಯಮಗಳಿಗನುಗುಣವಾಗಿ ಸಾಗುತ್ತದೆ ಎನ್ನುತ್ತಾರೆ. ನಮ್ಮ ಅಖಂಡ ಪ್ರಪಂಚದ ಬದಲಾವಣೆಗಳೂ ಸಹ ನಿಯಮಬದ್ಧವಾಗಿ ಸಾಗುತ್ತವೆ.

ಇಷ್ಟೆಲ್ಲಾ ಅಗಾಧ ಪ್ರಪಂಚ ಮತ್ತು ಹಾಲು ಹಾದಿ ಇದ್ದುಕೊಂಡು ನಮ್ಮ ಈ ಗ್ರಹ ಭೂಮಿ, ಎಲ್ಲಾ ಕಾಲದಲ್ಲೂ ಯಾವುದೇ ತೊಂದರೆಗಳಿಲ್ಲದೆ ತಿರುಗುತ್ತಿದೆ ಎನ್ನುವುದು ಅಸಾಧ್ಯ. ಅದು ಇನ್ಯಾವುದೋ ಗ್ರಹಕ್ಕೆ ಡಿಕ್ಕಿ ಹೊಡೆದೋ ಅಥವ ಇನ್ಯಾವುದೋ ಇತರ ತೊಂದರೆಗಳಿಗೆ ಗುರಿಯಾಗಿರಬಹುದು, ಇದು ದೊಡ್ಡ ವಿಕೋಪಕ್ಕೆ ದಾರಿಯಾಗಿರಬಹುದು. ನಮ್ಮ ಅತಿಮಾನುಷ ಶಕ್ತಿಯ ದೃಷ್ಟಿಕೋನದಿಂದ ಇದನ್ನು ಈ ರೀತಿಯಾಗಿ ಆಯೋಜಿಸಲಾಗಿದೆ, ನಾನು ಒಮ್ಮೆ ಅತ್ಯಂತ ಕೂಲಂಕುಶವಾಗಿ ವಿಚಾರಿಸಲಾಗಿ ಈ ಮಾನವ ಜನಾಂಗವು ಎಂಭತ್ತೊಂದು ಬಾರಿ ಸಂಪೂರ್ಣ ನಿರ್ನಾಮವನ್ನು ಹೊಂದಿದೆಯೆಂದು ತಿಳಿದುಬಂತು. ಪೂರ್ವದ ನಾಗರೀಕತೆಯ ಅತ್ಯಂತ ಕಡಿಮೆ ಕುರುಹಿನೊಂದಿಗೆ, ಕೇವಲ ಕೆಲವೇ ಸಂಖ್ಯೆಯ ಜನರು ಬದುಕುಳಿಯುತ್ತಿದ್ದರು ಮತ್ತು ಮುಂದಿನ ಯುಗವನ್ನು ಪ್ರವೇಶಿಸುತ್ತಾರೆ, ಅವರು ಪುನಃ ಆದಿಮಾನವರ ಜೀವನವನ್ನೇ ನಡೆಸುತ್ತಿದ್ದರು. ಮಾನವ ಜನಸಂಖ್ಯೆ ಬೆಳೆದಂತೆ ನಾಗರೀಕತೆಯೂ ಕ್ರಮೇಣ ಮತ್ತೆ ಬೆಳೆಯುತ್ತದೆ. ಮನುಷ್ಯತ್ವವು ಇಂತಹ ನಿಯತಕಾಲಿಕ ಬದಲಾವಣೆಯನ್ನು ಎಂಭತ್ತೊಂದು ಬಾರಿ ಅನುಭವಿಸಿದೆ. ಮತ್ತು ಇದರ ಕೊನೆಯ ತನಕದ ಜಾಡು ನನಗೂ ಇನ್ನೂ ದೊರೆತಿಲ್ಲ. ಚೀನೀ ಜನರು ಜಗತ್ ಸೃಷ್ಟಿಯ ಕಾಲೀನಗಳು, ಅನುಕೂಲಕರ ಜಗತ್ತಿನ ಪರಿಸ್ಥಿತಿ ಮತ್ತು ಮಾನವ ಸಹಬಾಳ್ವೆ ಕುರಿತು ಮಾತನಾಡುತ್ತಾರೆ. ಭಿನ್ನ ವಿಶ್ವ ಬದಲಾವಣೆಗಳು ಮತ್ತು ಭಿನ್ನ ವಿಶ್ವ ಕಾಲೀನಗಳು ಭಿನ್ನ ಭಿನ್ನವಾದ ಪರಿಸ್ಥಿತಿಯನ್ನು ಸಾಮಾನ್ಯ ಮಾನವ ಸಮಾಜದಲ್ಲಿ ಸೃಷ್ಟಿಸಬಲ್ಲುದು, ಭೌತಶಾಸ್ತ್ರದ ಕಣಗಳ ಚಲನೆ ಸಿದ್ಧಾಂತಗಳ ಅನುಸಾರವಾಗಿ ನಡೆಯುತ್ತವೆ – ಇದು ಪ್ರಪಂಚದ ಚಾಲನೆಯ ವಿಷಯದ ಕುರಿತೂ ಸತ್ಯವಾಗಿದೆ.

ಈ ಮೇಲಿನ ಇತಿಹಾಸಪೂರ್ವ ಸಂಸ್ಕೃತಿಯ ಉಲ್ಲೇಖವು ಪ್ರಾಥಮಿಕವಾಗಿ ನಿಮಗೆ ಚೀಗಾಂಗ್ ಎಂಬುದು ನಮ್ಮ ಈ ಮಾನವ ಕುಲದ ಸೃಷ್ಠಿಯಲ್ಲ ಎಂಬುದನ್ನು ಸ್ಪಷ್ಟಪಡಿಸುತ್ತದೆ ಕೂಡ. ಇದು ಬಹಳ ಪುರಾತನ ಕಾಲದಿಂದ ಪಿತ್ರಾರ್ಜಿತವಾಗಿ ಬಂದಂತಹುದು ಮತ್ತು ಇದೂ ಕೂಡ ಇತಿಹಾಸಪೂರ್ವ ಸಂಸ್ಕೃತಿಯ ಒಂದು ಬಗೆಯಾಗಿತ್ತು. ಬೌದ್ಧಧರ್ಮದ ಗ್ರಂಥಗಳಿಂದ ಕೂಡ ಈ ಕುರಿತಂತೆ ಹೇಳಿಕೆಗಳನ್ನ ನೋಡಬಹುದಾಗಿದೆ. ಸಾಖ್ಯಮುನಿಯು ಕೂಡ ತಾನು ನೂರಾರು ಮಿಲಿಯನ್ ಕಲ್ಪ (ಜೀ) ಗಳ ಹಿಂದೆ ಸಾಧನೆಯ ಅಭ್ಯಾಸದಲ್ಲಿ ಸಫಲನಾದೆನೆಂದು ಹೇಳುತ್ತಾನೆ. ಒಂದು ಕಲ್ಪದಲ್ಲಿ ಎಷ್ಟು ವರ್ಷಗಳಿರುತ್ತವೆ? ಒಂದು ಕಲ್ಪವೆಂದರೆ ನೂರಾರು ಮಿಲಿಯನ್ ವರ್ಷಗಳಿಗೆ ಅನ್ವಯವಾಗುವ ಒಂದು ಸಂಖ್ಯೆ. ಇಂಥಹ ಬೃಹತ್ ಸಂಖ್ಯೆಯು ಕಲ್ಪನೆಗೂ ನಿಲುಕದಿರುವಂಥದು. ಇದು ನಿಜವಾದಲ್ಲಿ, ಇದು ನಮ್ಮ ಮಾನವ ಕುಲದ ಇತಿಹಾಸ ಮತ್ತು ಇಡೀ ವಿಶ್ವದ ಬದಲಾವಣೆಗಳಿಗನುಸಾರವಾಗಿದೆಯಲ್ಲವೇ ? ಇಷ್ಟೇ ಅಲ್ಲದೆ ಸಾಖ್ಯಮುನಿಗಳು ಅವರಿಗೂ ಹಿಂದೆ ಏಳು ಮಂದಿ ಪುರಾತನ ಬುದ್ಧರುಗಳು ಆಗಿ ಹೋಗಿದ್ದಾರೆ, ಆತನಿಗೆ ಗುರುಗಳಿದ್ದರು ಇತ್ಯಾದಿ, ಇವರೆಲ್ಲರೂ ನೂರಾರು ಮಿಲಿಯನ್ ಕಲ್ಪಗಳ ಹಿಂದೆ ಸಾಧನೆಯ ಅಭ್ಯಾಸದಲ್ಲಿ ಸಫಲರಾಗಿದ್ದರು ಎಂದೆಲ್ಲಾ ಹೇಳುತ್ತಾರೆ. ಇವೆಲ್ಲಾ ನಿಜವೆಂದಾದರೆ ನಮ್ಮ ಇಂದಿನ ಸಮಾಜದಲ್ಲೂ ಕೂಡ ಇಂತಹ ನಿಜ, ಪರಂಪರಾಗತವಾದ ಸಾಧನೆಯ ಅಭ್ಯಾಸದ ದಾರಿಗಳು ಮತ್ತು ನೈಜ ಬೋಧನೆಗಳ ಕುರಿತು ಕಲಿಸಲಾಗುತ್ತಿದೆಯೇ ? ನನ್ನನ್ನು ಕೇಳಿದರೆ, ಖಂಡಿತವಾಗಿಯೂ ಇದೆ, ಆದರೆ ಇದು ಸುಲಭವಾಗಿ ಕಾಣುವಂಥದ್ದಲ್ಲ. ಇತ್ತೀಚಿನ ದಿನಗಳಲ್ಲಿ ಡೋಂಗಿ ಚೀಗಾಂಗ್, ಕಪಟ ಚೀಗಾಂಗ್‌ಗಳು ಮತ್ತು ಪ್ರೇತಗಳಿಂದ ಸ್ವಾಧೀನಗೊಂಡಂತಹ ಜನರುಗಳು ತಮಗೆ ತೋಚಿದ್ದನ್ನೆಲ್ಲ ಮಾಡಿ ಜನರನ್ನು ಮೋಸಗೊಳಿಸುತ್ತಿದ್ದಾರೆ, ಮತ್ತು ಅವರುಗಳ ಸಂಖ್ಯೆಯು ನೈಜ ಚೀಗಾಂಗ್ ಅಭ್ಯಾಸಗಳಿಗಿಂತ ಹಲವಾರು ಪಟ್ಟು ಮಿಗಿಲಾಗಿದೆ. ನೈಜ ಮತ್ತು ಖೋಟಾ ಚೀಗಾಂಗ್‌ಗಳನ್ನು ಪ್ರತ್ಯೇಕಿಸಿ ನಿಜವೆಂದರೆ ಕೇವಲ ಚೀಗಾಂಗ್ ಅಷ್ಟೇ ಅನಾದಿಕಾಲದಿಂದ ಹರಿದು ಬಂದಿಲ್ಲ, ಟೈಜೀ, ಹೂಟೂ, ಲೂವ್ ಫ್ಯೂ, <u>ಬದಲಾವಣೆಗಳ ಪುಸ್ತಕ</u>, ಎಂಟು ಟ್ರಯಾಗ್ರಾಮ್‌ಗಳು ಇತ್ಯಾದಿ., ಇವೆಲ್ಲವೂ ಕೂಡ ಇತಿಹಾಸಪೂರ್ವದಿಂದ ಪಿತ್ರಾರ್ಜಿತಗೊಂಡಿದೆ.

ಆದ್ದರಿಂದ, ನಾವು ಅವುಗಳನ್ನು ಸಾಮಾನ್ಯ ದಿನನಿತ್ಯದ ಜನರ ದೃಷ್ಟಿಕೋನಗಳಿಂದ ಅಧ್ಯಯನ ಮತ್ತು ಅರ್ಥೈಸಲು ಪ್ರಯತ್ನಿಸಿದರೆ ನಾವು ಅವನ್ನು ಯಾವುದೇ ಮಾರ್ಗದಿಂದ ತಿಳಿದುಕೊಳ್ಳಲು ಸಾಧ್ಯವಾಗುವುದಿಲ್ಲ. ಒಬ್ಬ ಸಾಮಾನ್ಯ ದಿನನಿತ್ಯದ ಜನರ ಮಟ್ಟ, ದೃಷ್ಟಿಕೋನ ಮತ್ತು ಮಾನಸಿಕ ಚೌಕಟ್ಟುಗಳಿಂದ ನೈಜ ಸಂಗತಿಗಳನ್ನು ತಿಳಿದುಕೊಳ್ಳಲು ಒಬ್ಬರಿಗೆ ಸಾಧ್ಯವಾಗುವುದಿಲ್ಲ.

**ಚೀಗಾಂಗ್ ಎನ್ನುವುದು ಸಾಧನೆಯ ಅಭ್ಯಾಸ**

ಚೀಗಾಂಗ್‌ಗೆ ಬಹುದೊಡ್ಡ ಇತಿಹಾಸವಿದೆ, ಅದು ಏತಕ್ಕಾಗಿ ? ನಾನು ಎಲ್ಲರಿಗೂ ಹೇಳುವುದೇನೆಂದರೆ ನಾವು ಬುದ್ಧ <u>ಶಾಲೆಯ ಮಹಾನ್ ಸಾಧನೆಯ ದಾರಿಯನ್ನು ಅನುಸರಿಸುವುದರಿಂದ ನಾವು ಬುದ್ಧತನವನ್ನು</u> ಸಾಧಿಸಲು ಬಯಸುತ್ತೇವಷ್ಟೆ. ತಾವೋ ಶಾಲೆಯಲ್ಲಿ ತಾವೋ ಅನ್ನು ಪಡೆಯುವುದಕ್ಕಾಗಿ ತಾವೋವನ್ನು ಅನುಸರಿಸುತ್ತಾರೆ. ನಾನು ಎಲ್ಲರಿಗೂ ಹೇಳುವುದೇನೆಂದರೆ 'ಬುದ್ದ' ಎಂಬುದು ಮೂಢನಂಬಿಕೆಯಲ್ಲ. ಇದು ಭಾರತದ ಪುರಾತನ ಭಾಷೆ, ಸಂಸ್ಕೃತದ ಒಂದು ಶಬ್ದ. ಇದನ್ನು ಚೀನಾದಲ್ಲಿ ಪರಿಚಯಿಸಿದಾಗ ಇದನ್ನು 'ಫೋಟೋ'[24] ಎಂದು ಕರೆಯಲಾಯಿತು. ಇದನ್ನು 'ಫುಟು'[25] ಎಂದು ತರ್ಜುಮೆ ಮಾಡಿದ ಜನರೂ ಇದ್ದರು. ಹೆಚ್ಚಾಗಿ ಪ್ರಚಲಿತವಾದಂತೆ, ನಮ್ಮ ಚೀನೀ ಜನರು ಇದರ ಒಂದು ಶಬ್ದವನ್ನು ತೆಗೆದು ಅದನ್ನು "ಫೋ" ಎಂದು ಕರೆದರು. ಚೀನೀ ಭಾಷೆಯಲ್ಲಿ ಇದರ ಅರ್ಥವೇನು ? "ಜ್ಞಾನೋದಯ ಹೊಂದಿದ ವ್ಯಕ್ತಿ"ಎಂದು ಇದರ ಅರ್ಥ, ಸಾಧನೆಯ ಮೂಲಕ ಜ್ಞಾನೋದಯ ಹೊಂದಿದವರು, ಇದರಲ್ಲಿ ಮೂಢನಂಬಿಕೆ ಎಂಬುದೇನಿದೆ ?

ಈ ಪದ ಯೋಚಿಸಿ ನೋಡಿ, ಎಲ್ಲರೂ : ಒಬ್ಬರು ಸಾಧನೆಯ ಅಭ್ಯಾಸದ ಮೂಲಕ ಅಸಾಮಾನ್ಯ ಸಾಮರ್ಥ್ಯಗಳನ್ನು ಬೆಳೆಸಬಹುದು. ಇಂದು ಜಗತ್ತಿನಲ್ಲಿ ಆರು ಬಗೆಯ ಅಸಾಮಾನ್ಯ ಶಕ್ತಿಗಳನ್ನು ಗುರುತಿಸಲಾಗಿದೆ. ಆದರೂ ಇವಿಷ್ಟಕ್ಕೆ ಇದನ್ನು ಸೀಮಿತಗೊಳಿಸುವಂತಿಲ್ಲ, ಹತ್ತುಸಾವಿರಕ್ಕೂ ಅಧಿಕ ನೈಜ ಅಸಾಮಾನ್ಯ ಶಕ್ತಿಗಳಿವೆಯೆಂದು ನಾನು ಹೇಳುತ್ತೇನೆ. ಒಬ್ಬ ವ್ಯಕ್ತಿ ಕುಳಿತು, ಕೈಕಾಲುಗಳನ್ನು ಒಂದಿಷ್ಟೂ ಅಲುಗಾಡಿಸದೆ, ಇತರ ವ್ಯಕ್ತಿಗಳು ಕೈಕಾಲುಗಳಿಂದಲೂ ಮಾಡಲಾಗದ ಅನೇಕ ಕೆಲಸಗಳನ್ನು ಮಾಡಬಲ್ಲ ಮತ್ತು ಆತ ಪ್ರಪಂಚದ ಪ್ರತೀ ಪರಿಮಾಣದ ನಿಜಸತ್ಯಗಳನ್ನು ಕಾಣಬಲ್ಲ, ಈ ವ್ಯಕ್ತಿ ಒಬ್ಬ ಸಾಮಾನ್ಯ ದಿನನಿತ್ಯದ ವ್ಯಕ್ತಿಗೆ ಕಾಣದ ಪ್ರಪಂಚದ ಸತ್ಯ ಮತ್ತು ಇತರ ಸಂಗತಿಗಳನ್ನು ನೋಡಬಲ್ಲ, ಈತ ಸಾಧನೆಯ ಅಭ್ಯಾಸದ ಮೂಲಕ ತಾವೋ ಅನ್ನು ಸಾಧಿಸಿದ ವ್ಯಕ್ತಿಯಲ್ಲವೇ ?

---

19 **ಕಲ್ಪ** – ಎರಡು ಬಿಲಿಯನ್ ವರ್ಷಗಳ ಒಂದು ಕಾಲಾವಧಿ ; ಇಲ್ಲಿ ಇದನ್ನು ಸಂಖ್ಯೆಯ ರೂಪದಲ್ಲಿ ಬಳಸಲಾಗಿದೆ. ಗುರುತಿಸುವುದು ಕಷ್ಟಸಾಧ್ಯವಾದುದು. ನೈಜ ಚೀಗಾಂಗ್ ಅಭ್ಯಾಸವನ್ನು ಪ್ರತ್ಯೇಕಿಸುವುದಷ್ಟೇ ಅಲ್ಲ ಅದನ್ನು ಕಾಣುವುದೂ ಕೂಡ ಅಷ್ಟೆ ಕಷ್ಟಸಾಧ್ಯವಾದುದು.

20. **ಟೈಜೀ** – ತಾವೋ ಶಾಲೆಯ ಗುರುತು, ಪಾಶ್ಚಿಮಾತ್ಯದಲ್ಲಿ ಇದು "ಯಿನ್-ಯಾಂಗ್ ಗುರುತು" ಎಂದುಖ್ಯಾತವಾಗಿದೆ.

21. **ಹೂಟೂ, ಲೂವ್ ಫ್ಯೂ–** ಪುರಾತನ ಚೀನಾದಲ್ಲಿ ಕಾಣಸಿಗುವ ಇತಿಹಾಸಪೂರ್ವ ಚಿತ್ರಗಳು ಮತ್ತು ಪ್ರಕೃತಿಯಲ್ಲಿನ ಬದಲಾವಣೆಗಳ ಮಾರ್ಗಗಳನ್ನು ಬಹಿರಂಗಗೊಳಿಸುತ್ತದೆ ಎಂದು ನಂಬಲಾಗಿದೆ.

22 **<u>ಬದಲಾವಣೆಗಳ ಪುಸ್ತಕ</u>** – ದೈವತ್ವದ ಪುರಾತನ ಚೀನೀ ಪುಸ್ತಕ, ಜೌ. ರಾಜಮನೆತನದ ಕಾಲದ್ದು (ಕ್ರಿ.ಪೂ.1100–ಕ್ರಿ.ಪೂ.221) ಎನ್ನಲಾಗಿದೆ.

23 **ಎಂಟು ಟ್ರ್ಯಾಯಾಗ್ರಾಮ್‌ಗಳು** – ಬದಲಾವಣೆಗಳ ಪುಸ್ತಕದಲ್ಲಿರುವ, ಇತಿಹಾಸಪೂರ್ವದ ಚಿತ್ರ. ನೈಸರ್ಗಿಕ ಬದಲಾವಣೆಗಳ ಮಾರ್ಗವನ್ನು ಬಾಹಿರಗೊಳಿಸುತ್ತದೆ ಎನ್ನಲಾಗಿದೆ.

24 **ಫೋಟೋ** – "ಬುದ್ಧ " ಎಂಬುದಕ್ಕೆ ಪ್ರಮಾಣಭೂತವಾದ ಚೀನೀ ಪದ.

25 **ಫುಟು** – "ಬುದ್ಧ " ಎಂಬುದಕ್ಕೆ ಪ್ರಮಾಣಭೂತವಾದ ಚೀನೀ ಪದ.

ಈತ ಮಹಾನ್ ಜ್ಞಾನೋದಯ ಹೊಂದಿದ ವ್ಯಕ್ತಿಯಲ್ಲವೇ ? ಈತನನ್ನು ಒಬ್ಬ ಸಾಮಾನ್ಯ ದಿನನಿತ್ಯದ ವ್ಯಕ್ತಿಗೆ ಸಮವೆಂದು ಹೇಗೆ ಪರಿಗಣಿಸಬಹುದು ? ಈತ ಸಾಧನೆಯ ಅಭ್ಯಾಸದ ಮೂಲಕ ಜ್ಞಾನೋದಯ ಹೊಂದಿದ ವ್ಯಕ್ತಿಯಲ್ಲವೇ ? ಈತನನ್ನು ಜ್ಞಾನೋದಯ ಹೊಂದಿದ ವ್ಯಕ್ತಿ ಎಂದು ಕರೆಯುವುದು ಸರಿಯಲ್ಲವೇ ? ಭಾರತದ ಪುರಾತನ ಭಾಷೆಯಲ್ಲಿ ಇಂತಹ ವ್ಯಕ್ತಿಯನ್ನು ಬುದ್ಧ ಎನ್ನುತ್ತಾರೆ. ಇದೇ ನಿಜವಾದುದು. ಚೀಗಾಂಗ್ ಇರುವುದೂ ಇದಕ್ಕಾಗಿಯೇ.

ಚೀಗಾಂಗ್ ಕುರಿತು ಹೇಳುವಾಗ ಕೆಲವು ಜನರು ಈ ರೀತಿಯಾಗಿ ಮಾತನಾಡಬಹುದು, "ಯಾವೊಂದೂ ರೋಗವು ಇಲ್ಲದೆ, ಯಾರು ಚೀಗಾಂಗ್‌ನ್ನು ಅಭ್ಯಾಸಿಸುತ್ತಾರೆ ?" ಇದು ಚೀಗಾಂಗ್ ರೋಗಗಳನ್ನು ಗುಣಪಡಿಸುವುದಕ್ಕಾಗಿ ಇದೆ ಎಂದು ಸೂಚಿಸುತ್ತದೆ. ಇದು ಬಹಳ, ಬಹಳ ಆಳವಿಲ್ಲದ ಅರ್ಥೈಸುವಿಕೆ. ಇದು ನಿಮ್ಮ ತಪ್ಪು ಅಲ್ಲ, ಏಕೆಂದರೆ ಬಹಳಷ್ಟು ಜನ ಚೀಗಾಂಗ್ ಗುರುಗಳು ರೋಗಗಳನ್ನು ಗುಣಪಡಿಸುವುದು ಮತ್ತು ದೇಹದಾರ್ಢ್ಯತೆ ಕಾಯ್ದುಕೊಳ್ಳುವುದು ಮುಂತಾದ ಕೆಲಸಗಳನ್ನು ಮಾಡುತ್ತಾರೆ. ಅವರೆಲ್ಲಾ ಗುಣಪಡಿಸುವುದು ಮತ್ತು ಆರೋಗ್ಯ ಕಾಪಾಡಿಕೊಳ್ಳುವುದರ ಕುರಿತೇ ಮಾತನಾಡುತ್ತಾರೆ. ಯಾರೂ ಕೂಡ ಉನ್ನತ ಮಟ್ಟದೆಡೆಗೆ ಏನನ್ನೂ ಬೋಧಿಸುವುದಿಲ್ಲ. ಇದರರ್ಥ ಅವರುಗಳ ಅಭ್ಯಾಸ ಒಳ್ಳೆಯದಲ್ಲವೆಂದಲ್ಲ. ಅವರ ಗುರಿ ಏನಿದ್ದರೂ ಗುಣಪಡಿಸುವ ಮತ್ತು ದೈಹಿಕ ಸಧೃಢತೆ ಕಾಪಾಡಿಕೊಳ್ಳುವ ಮಟ್ಟದ ವಿಷಯಗಳ ಬೋಧನೆ ಮಾಡುವುದು ಮತ್ತು ಚೀಗಾಂಗನ್ನು ಪ್ರಚಾರ ಮಾಡುವುದಷ್ಟೇ ಆಗಿದೆ. ಬಹಳಷ್ಟು ಜನರಿಗೆ ತಾವು ಉನ್ನತ ಮಟ್ಟದೆಡೆಗೆ ಅಭ್ಯಾಸ ಮಾಡುವ ಬಯಕೆ ಇರುತ್ತದೆ. ಅವರಿಗೆ ಅಂಥಹ ಆಲೋಚನೆ ಮತ್ತು ಆಸೆಗಳಿರುತ್ತದೆ, ಆದರೆ ಅವರಿಗೆ ಸಾಧನೆ ಮಾಡಲು ಸರಿಯಾದ ಮಾರ್ಗದರ್ಶನ ದೊರೆತಿರುವುದಿಲ್ಲ, ಇದರಿಂದ ಬಹಳ ತೊಂದರೆಗಳು ಮತ್ತು ತುಂಬಾ ಕಷ್ಟಗಳಿಗೆ ಕಾರಣವಾಗುತ್ತದೆ. ಉನ್ನತ ಮಟ್ಟದ ನೈಜ ಸಾಧನೆಯ ಬೋಧನೆಯು ಹಲವಾರು ಅಗಾಧ ಸಂಗತಿಗಳನ್ನು ಒಳಗೊಂಡಿರುತ್ತದೆ ಎಂಬ ಮಾತು ದಿಟ. ಆದ್ದರಿಂದ ನಾವು ಜನರಿಗೂ ಮತ್ತು ಸಮಾಜಕ್ಕೂ ಜವಾಬ್ದಾರಿಯುತವಾಗಿದ್ದೇವೆ ಮತ್ತು ಸಾಧನೆ ಅಭ್ಯಾಸದ ಬೋಧನೆಯ ಒಟ್ಟಾರೆ ಫಲಿತಾಂಶ ಕೂಡ ಉತ್ತಮವಾಗಿದೆ. ಕೆಲವೊಂದು ಸಂಗತಿಗಳಂತೂ ನಿಜವಾಗಿಯೂ ಬಹಳಷ್ಟು ಅಗಾಧವಾಗಿದೆ. ಮತ್ತು ಅದನ್ನು ಚರ್ಚಿಸಿದಾಗ ಮೂಢನಂಬಿಕೆಯಂತೆ ಭಾಸವಾಗಬಹುದು. ಆದಾಗ್ಯೂ, ನಾವು ಇವುಗಳನ್ನು ಆಧುನಿಕ ವಿಜ್ಞಾನದ ಹಿನ್ನೆಲೆಯಲ್ಲಿ ವಿವರಿಸಲು ಶಕ್ತಿಮೀರಿ ಪ್ರಯತ್ನಿಸುತ್ತೇವೆ.

ನಾವು ಕೆಲವೊಂದು ವಿಷಯಗಳ ಕುರಿತು ಮಾತನಾಡಲು ಹೊರಟರೆ ಕೆಲವು ಮಂದಿ ಇವುಗಳನ್ನು ಮೂಢನಂಬಿಕೆ ಎಂದು ಕರೆಯಬಹುದು. ಏಕೆ ಹೀಗೆ ? ಈ ವ್ಯಕ್ತಿಯ ಮಾನದಂಡವು ವಿಜ್ಞಾನವು ಇನ್ನೂ ಗುರುತಿಸದೆ ಇರುವಂಥದ್ದನ್ನು, ಅವನ ಅನುಭವಕ್ಕೆ ಇನ್ನೂ ಬಾರದೆ ಇರುವಂಥದ್ದನ್ನು ಅಥವ ಈತನ ಪ್ರಕಾರ ಯಾವುದರ ಅಸ್ತಿತ್ವವು ಅಸಾಧ್ಯವಾದುದೋ, ಈ ಎಲ್ಲವನ್ನು ಆತ ಮೂಢನಂಬಿಕೆ ಮತ್ತು ಕಾಲ್ಪನಿಕವೆಂದು ಪರಿಗಣಿಸುತ್ತಾನೆ – ಇದು ಆತನ ಮನೋಭಾವ. ಈ ರೀತಿಯ ಮನೋಭಾವ ಸರಿಯೇ ? ವಿಜ್ಞಾನದಿಂದ ಗುರುತಿಸದಿರಲ್ಪಡುವಂತಹವು ಅಥವ ಅದರ ಪ್ರಗತಿಗಿಂತ ಮಿಗಿಲಾಗಿರುವಂಥದ್ದನ್ನು ಮೂಢನಂಬಿಕೆ ಮತ್ತು ಕಾಲ್ಪನಿಕ ಎಂದು ಹಣೆಪಟ್ಟಿ ಹಚ್ಚಬೇಕೇ ? ಹಾಗಾದರೆ ಈ ವ್ಯಕ್ತಿಯು ತಾನೇ ಮೂಢನಂಬಿಕೆ ಮತ್ತು ಕಾಲ್ಪನಿಕ ಎನಿಸಿಕೊಳ್ಳುವುದಿಲ್ಲವೇ ? ಈ ಮನೋಭಾವದಿಂದ ಹೇಗೆ ವಿಜ್ಞಾನ ಅಭಿವೃದ್ಧಿ ಮತ್ತು ಪ್ರಗತಿ ಸಾಧಿಸಬಲ್ಲದು ? ಮಾನವ ಸಮಾಜವು ಕೂಡ ಇದರಿಂದ ಮುಂದುವರಿಯಲು ಸಾಧ್ಯವಿಲ್ಲ. ನಮ್ಮ ವೈಜ್ಞಾನಿಕ ಮತ್ತು ತಂತ್ರಜ್ಞಾನಿಕ ಸಮಾಜವು ಕಂಡುಹಿಡಿದಿರುವುದೆಲ್ಲವೂ ಹಿಂದೆ ಜನರಿಗೆ ತಿಳಿಯದಿರುವುದೇ ಆಗಿತ್ತು, ಇವೆಲ್ಲವನ್ನೂ ಕೂಡ ಮೂಢನಂಬಿಕೆಯೆಂದು ಜರಿದಿದ್ದರೆ, ಅಭಿವೃದ್ಧಿಗೆ ಯಾವುದೇ ಅಗತ್ಯ ಇರುತ್ತಿರಲಿಲ್ಲ. ಚೀಗಾಂಗ್ ಎಂಬುದು ಕಾಲ್ಪನಿಕವಾದುದಲ್ಲ. ಚೀಗಾಂಗ್‌ನ್ನು ಸರಿಯಾಗಿ ಅರಿಯದ ಹಲವಾರು ಜನರಿದ್ದಾರೆ ಮತ್ತು ಆದ್ದರಿಂದ ಚೀಗಾಂಗ್‌ನ್ನು ಯಾವಾಗಲೂ ಕಾಲ್ಪನಿಕವೆಂದೇ ಪರಿಗಣಿಸುತ್ತಾರೆ. ಇಂದಿನ ವೈಜ್ಞಾನಿಕ ಸಾಧನಗಳಿಂದ ನಾವು ಚೀಗಾಂಗ್ ಗುರುವಿನ ದೇಹದಲ್ಲಿ ಇನ್ಫ್ರಾಸೋನಿಕ್ ತರಂಗಗಳು, ಸೂಪರ್‌ಸೋನಿಕ್ ತರಂಗಗಳು, ಎಲೆಕ್ಟ್ರೋಮ್ಯಾಗ್ನೆಟಿಕ್ ತರಂಗಗಳು, ಇನ್ಫ್ರಾರೆಡ್, ಅಲ್ಟ್ರಾವೈಲೆಟ್, ಗಾಮಾ ಕಿರಣಗಳು, ನ್ಯೂಟ್ರಾನುಗಳು, ಪರಮಾಣುಗಳು, ಲೋಹದ ಗುರುತು ಕಣಗಳು ಇತ್ಯಾದಿಗಳನ್ನು ಕಂಡುಹಿಡಿದಿದ್ದಾರೆ. ಇವೆಲ್ಲವೂ ವಾಸ್ತವಿಕ

ಅಸ್ತಿತ್ವದಲ್ಲಿರುವಂತಹುದಲ್ಲವೇ ? ಇವೂ ಕೂಡ ವಸ್ತುಗಳೇ. ಎಲ್ಲವೂ ಕೂಡ ಕಣಗಳಿಂದಲೇ ಮಾಡಲ್ಪಟ್ಟಿದೆಯಲ್ಲವೇ ? ಇತರ ಕಾಲ–ಸ್ಥಳಗಳೂ ಕೂಡ ಕಣಗಳಿಂದಲೇ ಮಾಡಲ್ಪಟ್ಟಿದೆಯಲ್ಲವೇ ? ಚೀಗಾಂಗ್‌ಗೆ ಹೇಗೆ "ಮೂಢನಂಬಿಕೆಯದ್ದು" ಎಂದು ಹಣೆಪಟ್ಟಿ ಹಚ್ಚಬಹುದು? ಇದು ಬೌದ್ಧತನವನ್ನು ಬೆಳೆಸಿಕೊಳ್ಳಲು ಉಪಯೋಗಿಸುವುದರಿಂದ ಹಲವಾರು ಅಗಾಧವಾದ ಸಂಗತಿಗಳನ್ನು ಒಳಗೊಳ್ಳಲೇಬೇಕು ಮತ್ತು ಇವೆಲ್ಲವನ್ನೂ ನಾವು ಉದ್ದೇಶಿಸುತ್ತೇವೆ.

ಚೀಗಾಂಗ್ ಈ ಒಂದು ಉಪಯೋಗವನ್ನು ಪೂರೈಸುತ್ತಿದಿದ್ದರಿಂದ ನಾವದನ್ನು ಚೀಗಾಂಗ್ ಎಂದು ಏಕೆ ಕರೆಯುತ್ತೇವೆ ? ನಿಜವಾಗಿಯೂ ಹೇಳಬೇಕೆಂದರೆ ಇದನ್ನು "ಚೀಗಾಂಗ್" ಎಂದು ಕರೆಯುವುದಿಲ್ಲ ? ಇದನ್ನು ಏನೆಂದು ಕರೆಯುತ್ತಾರೆ ? ಇದನ್ನು "ಸಾಧನೆಯ ಅಭ್ಯಾಸ" ವೆಂದು ಕರೆಯುತ್ತಾರೆ. ಮತ್ತದು ಕೇವಲ ಸಾಧನೆಯ ಅಭ್ಯಾಸ ಮಾತ್ರ. ಹೌದು ಇದಕ್ಕೆ ಇತರ ನಿಶ್ಚಿತ ಹೆಸರುಗಳಿವೆಯಾದರೂ ಸಾಧಾರಣವಾಗಿ ಇದನ್ನು ಸಾಧನೆಯ ಅಭ್ಯಾಸವೆಂದು ಕರೆಯಲಾಗುತ್ತದೆ. ಹಾಗಾದರೆ ಇದನ್ನು ಚೀಗಾಂಗ್ ಎಂದು ಏಕೆ ಕರೆಯಲಾಗುತ್ತದೆ? ನಿಮಗೆ ತಿಳಿದಿರುವ ಹಾಗೆ ಚೀಗಾಂಗ್‌ಅನ್ನು ಕಳೆದ ಸುಮಾರು 20 ವರ್ಷಗಳಿಂದ ಸಮಾಜದಲ್ಲಿ ಪ್ರಚಾರ ಮಾಡಲಾಗುತ್ತಿದೆ. ಇದು ಮಹಾ ಸಾಂಸ್ಕೃತಿಕ ಕ್ರಾಂತಿಯ[26] ಮಧ್ಯಭಾಗದಲ್ಲಿ ಮೊದಲಿಗೆ ಬೆಳಕಿಗೆ ಬಂತು. ನಂತರ ಅದು ತನ್ನ ಖ್ಯಾತಿಯ ಉತ್ತುಂಗಕ್ಕೇರಿತು. ಈ ಬಗ್ಗೆ ಯೋಚಿಸಿ, ಎಲ್ಲರೂ : ಎಡಪಂಥೀಯ ತತ್ವಗಳು ಆ ಕಾಲದಲ್ಲಿ ಹೆಚ್ಚು ಪ್ರಬಲವಾಗಿತ್ತು. ನಾವು ಇತಿಹಾಸಪೂರ್ವ ನಾಗರೀಕತೆಯ ವೇಳೆ ಚೀಗಾಂಗ್‌ಗೆ ಇದ್ದ ಹೆಸರುಗಳನ್ನು ಇಲ್ಲಿ ಉಲ್ಲೇಖಿಸುವುದಿಲ್ಲ. ಅದರ ಅಭಿವೃದ್ಧಿಯ ವೇಳೆಯಲ್ಲಿ ಈ ಮಾನವ ನಾಗರೀಕತೆಯು ಊಳಿಗಮಾನ್ಯ ಪದ್ಧತಿಯ ಕಾಲದ ಮೂಲಕ ಹರಿದು ಬಂದಿತು. ಆದ್ದರಿಂದ ಅದಕ್ಕೆ ಸಹಜವಾಗಿ ಊಳಿಗಮಾನ್ಯ ಪದಾರ್ಥವುಳ್ಳ ಹೆಸರುಗಳು ಇದ್ದಿತು. ಧರ್ಮಗಳಿಗೆ ಸಂಬಂಧಿಸಿದಂತಹ ಅಭ್ಯಾಸಗಳು ಅತಿಯಾದ ಧಾರ್ಮಿಕ ಪರಿಭಾಷೆಯ ಹೆಸರುಗಳಿಂದ ಕೂಡಿತ್ತು. ಉದಾಹರಣೆಗೆ, "ತಾವೋ ದ ಮಹಾನ್ ಸಾಧನೆಯ ಹಾದಿ" "ವಜ್ರದ ಧ್ಯಾನ" "ಅರ್ಹತ್‌ಗೆ ದಾರಿ"27, "ಬೌದ್ಧಧರ್ಮದ ಮಹಾನ್ ಸಾಧನೆಯ ಹಾದಿ", "ಒಂಭತ್ತು ಪಟ್ಟು ಆಂತರಿಕ ಆಲ್ಕೆಮಿ" ಮುಂತಾದುವುಗಳಿದ್ದವು. ಮಹಾನ್ ಸಾಂಸ್ಕೃತಿಕ ಕ್ರಾಂತಿಯ ವೇಳೆ ಇಂತಹ ಹೆಸರುಗಳನ್ನು ಬಳಸಿದ್ದರೆ ನೀವು ಟೀಕಿಸಲ್ಪಡುತ್ತಿರಲಿಲ್ಲವೇ ? ಈ ಚೀಗಾಂಗ್ ಗುರುಗಳ ಚೀಗಾಂಗ್ ಅನ್ನು ಪ್ರಚಾರ ಮಾಡುವ ಉದ್ದೇಶ ಒಳ್ಳೆಯದೇ ಆಗಿತ್ತು ಮತ್ತು ಜನಸಾಮಾನ್ಯರ ರೋಗಗಳನ್ನು ಗುಣಪಡಿಸಲು ಗಟ್ಟಿಮುಟ್ಟಾಗಿರಲು/ ಕಾಯ್ದುಕೊಳ್ಳಲು ಮತ್ತು ತಮ್ಮ ದೈಹಿಕ ಸ್ಥಿತಿಗಳನ್ನು ಉತ್ತಮಗೊಳಿಸಲು ಬಯಸಿದ್ದರು – ಹೀಗಾದರೆ ಎಷ್ಟು ಚನ್ನ – ಹೀಗಾಗಲು ಬಿಡಲಾಗುವುದಿಲ್ಲ. ಈ ತರಹದ ಹೆಸರುಗಳನ್ನು ಉಪಯೋಗಿಸಲು ಜನರಿಗೆ ಧೈರ್ಯವೇ ಬರಲಿಲ್ಲ. ಆದ್ದರಿಂದ ಚೀಗಾಂಗ್ ಅನ್ನು ಪ್ರಚಾರ ಮಾಡುವ ಸಲುವಾಗಿ ಬಹಳಷ್ಟು ಚೀಗಾಂಗ್ ಗುರುಗಳು ಡಾನ್ ಜಿಂಗ್ ಮತ್ತು ಡಾವೋ ಜ಼ಂಗ್[28] ಪಠ್ಯಗಳಿಂದ ಎರಡು ಪದಗಳನ್ನು ತೆಗೆದು"ಚೀಗಾಂಗ್" ಎಂದು ಹೆಸರಿಟ್ಟರು.

ಕೆಲವು ಜನರು ಚೀಗಾಂಗ್ ಪದದ ಕುರಿತೇ ಅಧ್ಯಯನ ಮಾಡಲು ತೊಡಗಿದ್ದಾರೆ. ಅದರಲ್ಲಿ ಅಧ್ಯಯನ ಮಾಡಲು ಏನೂ ಇಲ್ಲ. ಹಿಂದೆ ಇದನ್ನು ಕೇವಲ ಸಾಧನೆಯ ಅಭ್ಯಾಸವೆಂದು ಕರೆಯುತ್ತಿದ್ದರು. "ಚೀಗಾಂಗ್" ಎಂಬುದು ಆಧುನಿಕ ಜನರ ಮನಸ್ಥಿತಿಗೆ ಸರಿಹೊಂದುವಂತಹ ಹೊಸ ತಂತ್ರದ ಶಬ್ದ ಮಾತ್ರ.

---

**26 ಮಹಾನ್ ಸಾಂಸ್ಕೃತಿಕ ಕ್ರಾಂತಿ** – ಸಾಂಪ್ರದಾಯಿಕ ಮೌಲ್ಯ ಮತ್ತು ಆಚರಣೆಗಳನ್ನು ಧಿಕ್ಕರಿಸಿದ ಎಡಪಂಥೀಯರ ರಾಜಕೀಯ ಚಳುವಳಿ (1966–1976)

**27 ಅರ್ಹತ್** – ಬುದ್ಧ ಶಾಲೆಯಲ್ಲಿ ಫಲ ಪದವಿ ಪಡೆದ ಸುಜ್ಞಾನ ಜೀವಿ ಮತ್ತು ಮೂರು ಲೋಕಗಳನ್ನು ಮೀರಿದಂಥವರು

**28 ಡಾನ್ ಜಿಂಗ್ ಮತ್ತು ಡಾವೋ ಜ಼ಂಗ್** – ಚೀನಿ ಶಾಸ್ತ್ರೀಯ ಗ್ರಂಥಗಳ ಕೌಶಲ್ಯ ಸಾಧನೆಯ ಕುರಿತು ಅಭ್ಯಾಸ.

**ನಿಮ್ಮ ಅಭ್ಯಾಸದೊಂದಿಗೆ ನಿಮ್ಮ ಗಾಂಗ್ ಏಕೆ ವೃದ್ಧಿಸುತ್ತಿಲ್ಲ ?**

ನಿಮ್ಮ ಸಾಧನೆಯ ಅಭ್ಯಾಸದೊಂದಿಗೆ ನಿಮ್ಮ ಗಾಂಗ್ ಏಕೆ ವೃದ್ಧಿಸುತ್ತಿಲ್ಲ ? ಬಹಳಷ್ಟು ಜನ ಈ ರೀತಿಯಲ್ಲಿ ಯೋಚಿಸುತ್ತಾರೆ: "ನನಗೆ ಯಾವುದೇ ನೈಜ ಬೋಧನೆ ದೊರಕಲಿಲ್ಲ. ಗುರುಗಳು ನನಗೆ ಕೆಲವು ವಿಷೇಶ ತಂತ್ರಗಳು ಮತ್ತು ಕೆಲವು ಮುಂದುವರೆದ ಕಲಾಕೌಶಲ್ಯಗಳನ್ನು ಹೇಳಿಕೊಟ್ಟರೆ ನನ್ನ ಗಾಂಗ್ ವೃದ್ಧಿಸುತ್ತದೆ." ಇಂದಿನ ದಿನಗಳಲ್ಲಿ ಪ್ರತಿಶತ ತೊಂಭತ್ತೈದು ಜನರು ಈ ರೀತಿಯಾಗಿ ಯೋಚಿಸುತ್ತಾರೆ ಮತ್ತು ನನಗಿದು ಅತ್ಯಂತ ಹಾಸ್ಯಾಸ್ಪದ ಎನಿಸುತ್ತದೆ. ಏಕಿದು ಹಾಸ್ಯಾಸ್ಪದ ? ಏಕೆಂದರೆ ಚೀಗಾಂಗ್ ಎಂಬುದು ದಿನನಿತ್ಯ ಜನರ ಕೌಶಲ್ಯ ಅಲ್ಲ. ಅದು ಸಂಪೂರ್ಣ ಅಸಾಮಾನ್ಯವಾದುದು. ಹಾಗಾಗಿ, ಉನ್ನತ ಮಟ್ಟದ ತತ್ವಗಳನ್ನು ಆಧರಿಸಿ ಇದನ್ನು ವಿಚಾರಿಸಬೇಕು. ಎಲ್ಲರಿಗೂ ನಾನು ಹೇಳುವುದಿಷ್ಟೇ, ಒಬ್ಬರ ಗಾಂಗ್ ವೃದ್ಧಿಸಲು ವಿಫಲವಾಗುವುದರ ಹಿಂದಿರುವ ಮೂಲಭೂತ ಕಾರಣವೆಂದರೆ ಇದು : "ಸಾಧನೆ" ಮತ್ತು "ಅಭ್ಯಾಸ" ಈ ಎರಡು ಪದಗಳಲ್ಲಿ ಜನರು ಅಭ್ಯಾಸಕ್ಕೇ ಹೆಚ್ಚು ಗಮನ ಕೊಡುತ್ತಾರೆ ಮತ್ತು ಸಾಧನೆಯನ್ನು ಕಡೆಗಣಿಸುತ್ತಾರೆ. ನೀವು ಏನನ್ನಾದರೂ ಬಾಹ್ಯದಲ್ಲಿ ಹುಡುಕಿದರೆ ನೀವದನ್ನು ಯಾವುದೇ ರೀತಿಯಲ್ಲೂ ಪಡೆಯಲಾರಿರಿ, ದಿನನಿತ್ಯ ವ್ಯಕ್ತಿಯ ದೇಹ, ದಿನನಿತ್ಯ ವ್ಯಕ್ತಿಯ ಕೈ ಮತ್ತು ದಿನನಿತ್ಯ ವ್ಯಕ್ತಿಯ ಮನಸ್ಸಿನಿಂದ ನೀವು ಪಬಲ – ಶಕ್ತಿಯ ಕಣಗಳನ್ನು ಗಾಂಗ್ ಆಗಿ ಪರಿವರ್ತಿಸಲು ಅಥವ ಗಾಂಗ್‌ನ್ನು ವೃದ್ಧಿಸಲು ಸಾದ್ಯವೆಂದು ತಿಳಿದಿದ್ದೀರಾ? ಅಷ್ಟೊಂದು ಸುಲಭವಾಗಿ ಹೇಗಾಗುತ್ತದೆ ! ನನ್ನ ದೃಷ್ಟಿಯಲ್ಲಿ ಇದೊಂದು ತಮಾಷೆಯೇ. ಇದು ಬಾಹ್ಯಾಕಾಶದಲ್ಲಿರುವ ಏನನ್ನಾದರೂ ಬೆನ್ನಟ್ಟಿದಂತೆ ಮತ್ತು ಬಾಹ್ಯದಲ್ಲಿರುವುದನ್ನು ಹುಡುಕುವುದಕ್ಕೆ ಸಮ. ನೀವು ಅದನ್ನು ಯಾವತ್ತೂ ಪಡೆಯಲಾರಿರಿ.

ಇದು ನೀವು ಹಣವನ್ನು ಪಾವತಿಸಿ ಪಡೆಯುವ ಅಥವ ಕೆಲವು ಕಲಾಕೌಶಲ್ಯಗಳನ್ನು ಕಲಿಯುವಂತಹ ದಿನನಿತ್ಯ ಜನರ

ಡಾನ್ ಜಿಂಗ್ ಮತ್ತು ಡಾವೋ ಜ಼ಂಗ್ – ಸಾಧನೆ ಅಭ್ಯಾಸ ಕುರಿತು ಚೀನಿ ಶಾಸ್ತ್ರೀಯ ಗ್ರಂಥಗಳ ಕೌಶಲ್ಯವಲ್ಲ. ಇದು ಅಂತಹುದಲ್ಲ, ಏಕೆಂದರೆ ಇದು ಸಾಮಾನ್ಯ ದಿನನಿತ್ಯದ ಜನರ ಮಟ್ಟಕ್ಕಿಂತ ಮಿಗಿಲಾದುದು. ಆದ್ದರಿಂದ ನೀವು ಅಸಾಮಾನ್ಯ ತತ್ವಗಳನ್ನು ಪಾಲಿಸಲು ನಿರೀಕ್ಷಿಸಲಾಗುತ್ತದೆ. ಹಾಗಾದರೆ ನಿಮ್ಮಿಂದ ಆಗಬೇಕಾದುದೇನು ? ನೀವು ನಿಮ್ಮ ಅಂತರಾತ್ಮವನ್ನು ಕೃಷಿ ಮಾಡಬೇಕು ಮತ್ತು ಬಾಹ್ಯ ಸಂಗತಿಗಳನ್ನು ಬೆನ್ನಟ್ಟಿ ಹೋಗಬಾರದು. ಬಹಳಷ್ಟು ಮಂದಿ ಬಾಹ್ಯ ಸಂಗತಿಗಳನ್ನ ಬಯಸುತ್ತಿದ್ದಾರೆ. ಅವರು ಇಂದು ಒಂದರ ಹಿಂದೆ ಹೋದರೆ ನಾಳೆ ಮತ್ತೊಂದನ್ನು ಬಯಸುತ್ತಾರೆ. ಇದರೊಂದಿಗೆ ಅವರುಗಳು ಅಸಾಧಾರಣ ಶಕ್ತಿಗಳನ್ನು ಹೊಂದಲು ಅತಿಯಾದ ಮೋಹವನ್ನು ಹೊಂದಿರುತ್ತಾರೆ ಮತ್ತು ಎಲ್ಲಾ ತರಹದ ಉದ್ದೇಶಗಳನ್ನು ಹೊಂದಿರುತ್ತಾರೆ. ಚೀಗಾಂಗ್ ಗುರುಗಳಾಗಲು ಮತ್ತು ರೋಗಗಳನ್ನು ಗುಣಪಡಿಸುವ ಮೂಲಕ ಶ್ರೀಮಂತರಾಗಲು ಸಹ ಹಲವಾರು ಜನರು ಬಯಸುತ್ತಿರುತ್ತಾರೆ ! ನಿಜವಾಗಿ ಸಾಧನೆಯ ಅಭ್ಯಾಸವನ್ನು ಮಾಡಲು ನೀವು ನಿಮ್ಮ ಮನಸ್ಸನ್ನು ಕೃಷಿ ಮಾಡಬೇಕು. ಇದಕ್ಕೆ ಷಿನ್‌ಷಿಂಗ್ ಅಭ್ಯಾಸವೆಂದು ಕರಯುತ್ತಾರೆ. ಉದಾಹರಣೆಗೆ, ಇನ್ನೊಬ್ಬರೊಂದಿಗಿನ ಸಂಘರ್ಷಗಳಲ್ಲಿ, ನೀವು ನಿಮ್ಮ ವೈಯಕ್ತಿಕ ಭಾವನೆ ಮತ್ತು ಆಸೆ ಆಕಾಂಕ್ಷೆಗಳನ್ನು ಕುರಿತು ಹೆಚ್ಚು ಕಾಳಜಿವಹಿಸಬಾರದು. ನಿಮ್ಮ ವೈಯಕ್ತಿಕ ಲಾಭಕ್ಕಾಗಿ ಸೆಣಸುತ್ತಾ ನೀವು ನಿಮ್ಮ ಗಾಂಗ್‌ನ್ನು ವೃದ್ಧಿಸಬೇಕೆಂದು ಬಯಸುತ್ತೀರಿ – ಹೇಗೆ ಇದು ಸಾಧ್ಯವಾಗುತ್ತದೆ? ಹಾಗಾದರೆ ನೀವೂ ಸಹ ಸಾಮಾನ್ಯ ದಿನನಿತ್ಯ ಮನುಷ್ಯರ ಸಮವೇ ಅಲ್ಲವೆ? ನಿಮ್ಮ ಗಾಂಗ್ ಹೇಗೆ ವೃದ್ಧಿಸಬಲ್ಲುದು? ಆದ್ದರಿಂದ, ಕೇವಲ ಷಿನ್‌ಷಿಂಗ್ ಕೃಷಿಗೆ ಒತ್ತುಕೊಟ್ಟಲ್ಲಿ ಮಾತ್ರ ನಿಮ್ಮ ಗಾಂಗ್ ವೃದ್ಧಿಸುತ್ತದೆ ಮತ್ತು ನಿಮ್ಮ ಮಟ್ಟವು ಉನ್ನತಿಸುತ್ತದೆ.

ಷಿನ್‌ಷಿಂಗ್ ಅಂದರೇ ಏನು? ಇದು ಢ್ಹಾ (ಒಂದು ವಿಧದ ಕಣ), ಜ್ಞಾನ, ಗುಣ, ಸಂಸ್ಕಾರ, ತ್ಯಾಗ, ಸಾಮಾನ್ಯ ಜನರ ವಿವಿಧ ಆಸೆ ಮತ್ತು ಮೋಹಗಳನ್ನು ತ್ಯಜಿಸುವುದು. ವಿವಿಧ ಕಷ್ಟಗಳನ್ನು ತಾಳಿಕೊಳ್ಳುವುದು ಮತ್ತು ಮತ್ತಿತರವುಗಳು. ಅದು ವಿವಿಧ ಸಂಗತಿಗಳನ್ನು ಒಳಗೊಳ್ಳುತ್ತದೆ. ಷಿನ್‌ಷಿಂಗ್‌ನ ಪ್ರತಿಯೊಂದು ಆಯಾಮವೂ ಕೂಡ ಉನ್ನತಿಸಿದರೆ ಮಾತ್ರ ನೀವು ನಿಜವಾದ ಪ್ರಗತಿಯನ್ನು

ಸಾಧಿಸಲು ಸಾಧ್ಯ. ಇದು ಗಾಂಗ್‌ನ ಸಾಮರ್ಥ್ಯ(ಗಾಂಗ್‌ಲೀ)ವನ್ನು ಸುಧಾರಿಸುವುದಕ್ಕೆ ಅತ್ಯಂತ ಮಹತ್ವಪೂರ್ಣವಾದ ಗುಣ.

ಕೆಲವು ಜನರು ಈ ರೀತಿ ಯೋಚಿಸಬಹುದು ; " ನೀವು ಹೇಳುವ ಈ ಷಿನ್‌ಷಿಂಗ್ ವಿಷಯವು ತಾತ್ವಿಕವಾದುದು ಮತ್ತು ಒಬ್ಬರ ಆಲೋಚನಾ ವಲಯಕ್ಕೆ ಸಂಬಂಧಿಸಿದುದಾಗಿದೆ. ಇದು ನಾವು ಕೃಷಿ ಮಾಡುವ ಗಾಂಗ್‌ಗೆ ಏನೂ ಸಂಬಂಧ ಹೊಂದಿಲ್ಲ" ಇವೆರಡೂ ಒಂದೇ ಸಂಗತಿ ಏಕಾಗವುದಿಲ್ಲ? ಇತಿಹಾಸದುದ್ದಕ್ಕೂ, ವಸ್ತು ಮನಸ್ಸನ್ನು ನಿರ್ಧರಿಸುವುದೋ ಅಥವ ಮನಸ್ಸು ವಸ್ತುವನ್ನು ನಿರ್ಧರಿಸುತ್ತದೋ ಎಂಬ ವಿಷಯ ತತ್ವಜ್ಞಾನಿಕ ಜಗತ್ತಿನಲ್ಲಿ ನಿರಂತರವಾಗಿ ಚರ್ಚೆಗೊಳಪಟ್ಟ ವಿಷಯವಾಗಿದೆ. ನಿಜ ಹೇಳಬೇಕೆಂದರೆ, ಎಲ್ಲರಿಗೂ ನಾನು ಹೇಳುವುದೇನೆಂದ'ರೆ ವಸ್ತು ಮತ್ತು ಮನಸ್ಸು ಎರಡೂ ಒಂದೇ. ಮಾನವ ಶರೀರದ ವೈಜ್ಞಾನಿಕ ಅಧ್ಯಾಯನದಲ್ಲಿ ಇಂದಿನ ವಿಜ್ಞಾನಿಗಳು ಮಾನವ ಮೆದುಳಿನಲ್ಲಿ ಉತ್ಪಾದನೆಗೊಳ್ಳುವ ಆಲೋಚನೆಯು ಒಂದು ವಸ್ತುವೇ ಎಂದು ಅಭಿಪ್ರಾಯ ಪಡುತ್ತಾರೆ. ಅದು ವಾಸ್ತವಿಕ ಅಸ್ತಿತ್ವದಲ್ಲಿರುವುದೇ ಆದಲ್ಲಿ ಅದು ಮಾನವ ಮನಸ್ಸಿಗೂ ಸಂಬಂಧಿಸಿದುದಲ್ಲವೇ? ಅವೆರಡೂ ಒಂದೇ ಎಂದಾಗಲಿಲ್ಲವೇ ? ನಾನು ವರ್ಣಿಸಿರುವ ಈ ವಿಶ್ವದಂತೆಂಯೇ, ಅದಕ್ಕೆ ವಾಸ್ತವಿಕ ಅಸ್ತಿತ್ವವಿರುವುದಷ್ಟೇ ಅಲ್ಲವೇ, ಇದರದ್ದೇ ವಿಶಿಷ್ಟತೆಗಳೂ ಇವೆ. ಒಬ್ಬ ಸಾಮಾನ್ಯ ದಿನನಿತ್ಯದ ಮನುಷ್ಯ ಈ ಜಗತ್ತಿನಲ್ಲಿ ಜ್ಹೆನ್–ಷ್ಹನ್–ರ್‍ಹೆನ್ ವಿಶಿಷ್ಟತೆಯ ಇರುವಿಕೆಯನ್ನು ಗ್ರಹಿಸಲು ಆಗುವುದಿಲ್ಲ. ಏಕೆಂದರೆ ಸಾಮಾನ್ಯ ದಿನನಿತ್ಯದ ಜನರೆಲ್ಲಾ ಒಂದೇ ಮಟ್ಟದವರೇ ಆಗಿರುತ್ತಾರೆ. ನೀವು ಈ ದಿನನಿತ್ಯದ ಜನರ ಮಟ್ಟಕ್ಕಿಂತ ಸ್ವಲ್ಪ ಮೇಲಕ್ಕೆ ಹೋದಲ್ಲಿ ಇರುವಿಕೆಯನ್ನು ನೀವು ಬಯಸಬಹುದು. ಅದನ್ನು ನೀವು ಹೇಗೆ ಗ್ರಹಿಸಬಲ್ಲಿರಿ? ಈ ಜಗತ್ತಿನಲ್ಲಿರುವ ಎಲ್ಲಾ ಕಣಗಳು, ಈ ಜಗತ್ತಿನಲ್ಲಿ ಆವರಿಸಿರುವ ಎಲ್ಲಾ ವಸ್ತುಗಳೂ ಒಳಗೊಂಡಂತೆ, ಎಲ್ಲವೂ ಆಲೋಚಿಸುವ ಮನಸ್ಸಿರುವ ಜೀವಿಗಳೇ ಮತ್ತು ಇವೆಲ್ಲವೂ ಕೂಡ ಜಗತ್ತಿನ ಘಾದ ಭಿನ್ನ ಭಿನ್ನ ಮಟ್ಟದಲ್ಲಿರುವ ರೂಪಗಳ ಅಸ್ತಿತ್ವವೇ ಆಗಿದೆ. ಅವು ನಿಮ್ಮನ್ನು ಮೇಲೇರಲು ಬಿಡುವುದಿಲ್ಲ. ನೀವು ಮೇಲೇಳಲು ಬಯಸಿದರೂ ಅವು ನಿಮ್ಮನ್ನು ಬಿಡುವುದಿಲ್ಲ. ಅವು ನಿಮ್ಮನ್ನು ಯಾವುದೇ ಕಾರಣಕ್ಕೂ ಮೇಲೇಳಲು ಬಿಡುವುದಿಲ್ಲ. ಅವು ನಿಮ್ಮನ್ನು ಮೇಲೇರಲು ಏಕೆ ಬಿಡುವುದಿಲ್ಲ? ಇದೇಕೆಂದರೆ ನಿಮ್ಮ ಷಿನ್‌ಷಿಂಗ್ ಇನ್ನೂ ಸುಧಾರಿಸಿಲ್ಲ. ಪ್ರತಿಯೊಂದು ಮಟ್ಟಕ್ಕೂ ತನ್ನದೇ ಆದ ಬೇರೆ ಬೇರೆ ಮಾನದಂಡಗಳಿರುತ್ತವೆ. ನೀವು ಉನ್ನತ ಮಟ್ಟಕ್ಕೇರಬಯಸುವಿರಾದರೆ, ನೀವು ನಿಮ್ಮ ಕೆಟ್ಟ ಆಲೋಚನೆಗಳನ್ನು ತ್ಯಜಿಸಬೇಕು ಮತ್ತು ನಿಮ್ಮೆಲ್ಲಾ ಕಲ್ಮಶಗಳನ್ನು ಹಸನುಗೊಳಿಸಿಕೊಂಡರೆ ನೀವು ಆ ಮಟ್ಟದ ಮಾನದಂಡದ ಅವಶ್ಯಕತೆಗೆ ಸಮರೂಪವಾಗಿಸಬಹುದು. ಹೀಗೆ ಮಾಡುವುದರಿಂದ ಮಾತ್ರ ನೀವು ಮೇಲೇರಲು ಸಾಧ್ಯ.

ಒಮ್ಮೆ ನೀವು ನಿಮ್ಮ ಷಿನ್‌ಷಿಂಗ್‌ಅನ್ನು ಉನ್ನತೀಕರಿಸಿಕಂಡಕೂಡಲೇ ನಿಮ್ಮ ದೇಹವು ಅತ್ಯಧಿಕ ಬದಲಾವಣೆಗಳನ್ನು ಹೊಂದುತ್ತದೆ. ಷಿನ್‌ಷಿಂಗ್‌ಅನ್ನು ಉನ್ನತೀಕರಿಸಿಕೊಂಡ ಕೂಡಲೇ ನಿಮ್ಮ ದೇಹದ ಕಣಗಳು ರೂಪಾಂತರ ಹೊಂದುವುದರಲ್ಲಿ ಸಂಶಯವೇ ಇಲ್ಲ. ಯಾವ ರೀತಿಯ ಬದಲಾವಣೆಗಳು ಸಂಭವಿಸುತ್ತದೆ? ನಿಮ್ಮಲ್ಲಿ ಇರುವಂತಹ ಕೆಟ್ಟ ಸಂಗತಿಗಳ ಬಗೆಗಿನ ಮೋಹಗಳನ್ನು ನೀವು ಬಿಟ್ಟುಬಿಡುತ್ತೀರಿ. ಉದಾಹರಣೆಗೆ, ಒಂದು ಬಾಟಲಿನಲ್ಲಿ ಕೊಳಕಾದ ವಸ್ತುಗಳನ್ನು ತುಂಬಿ ಗಟ್ಟಿಯಾಗಿ ಮುಚ್ಚಳವನ್ನು ಮುಚ್ಚಿ ನೀರಿನಲ್ಲಿ ಎಸೆದರೆ, ಅದು ಅತ್ಯಂತ ತಟ್ಟತಳದ ತನಕ ಮುಳುಗುತ್ತದೆ, ಅದರಲ್ಲಿರುವ ಕೆಲವು ಕಲ್ಮಶಗಳನ್ನು ಹೊರಗೆ ಎಸೆಯಿಸಿ, ಬಾಟಲಿಯಲ್ಲಿರುವುದನ್ನು ಹೆಚ್ಚು ಹೆಚ್ಚು ಖಾಲಿ ಮಾಡಿದಂತೆ ಅದು ನೀರಿನಲ್ಲಿ ಮೇಲಕ್ಕೆ ಮೇಲಕ್ಕೆ ತೇಲುತ್ತಾ ಬರುತ್ತದೆ. ಅದು ಸಂಪೂರ್ಣವಾಗಿ ಖಾಲಿಯಾದಾಗ ಸಂಪೂರ್ಣವಾಗಿ ಅದು ಮೇಲಕ್ಕೆ ಬಂದು ತೇಲುತ್ತದೆ. ನಿಮ್ಮ ಸಾಧನೆಯ ಅಭ್ಯಾಸದ ದಾರಿಯಲ್ಲಿ ನೀವು ನಿಮ್ಮ ದೇಹದಲ್ಲಿರುವ ಹಲವಾರು ಕೆಟ್ಟವಸ್ತುಗಳನ್ನು ತೊರೆದು ಹಸನುಗೊಳಿಸಿದಾಗ ನೀವು ಮೇಲೇರಲು ಸಾಧ್ಯವಾಗುತ್ತದೆ. ವಿಶ್ವದ ಈ ವೈಶಿಷ್ಟ್ಯತೆ ನಿಶ್ಚಿತವಾಗಿ ಈ ಪಾತ್ರವನ್ನೇ ಮಾಡುತ್ತದೆ. ನೀವು ನಿಮ್ಮ ಷಿನ್‌ಷಿಂಗ್‌ಅನ್ನು ಕೃಷಿಮಾಡದಿದ್ದರೆ ಅಥವ ನಿಮ್ಮ ನೈತಿಕ ಗುಣಮಟ್ಟವನ್ನು ಉನ್ನತೀಕರಿಸದಿದ್ದರೆ ಅಥವ ನಿಮ್ಮ ಕೆಟ್ಟ ಆಲೋಚನೆಗಳು ಮತ್ತು ಕೆಟ್ಟ ವಸ್ತುಗಳನ್ನು ತೆಗೆಯದಿದ್ದಲ್ಲಿ, ಅದು ನಿಮ್ಮನ್ನು ಮೇಲೇರಲು ಬಿಡುವುದಿಲ್ಲ. ಇವೆರಡೂ ಒಂದೇ ಸಂಗತಿಯಲ್ಲವೆಂದು ನೀವು ಹೇಗೆ ಹೇಳುವಿರಿ ? ನಾನೊಂದು ತಮಾಷೆಯನ್ನು ಹೇಳುತ್ತೇನೆ, ಎಲ್ಲಾ

ತರಹದ ಸಾಮಾನ್ಯ ದಿನನಿತ್ಯ ಜನರ ತರಹದ ಮಾನವ ಭಾವನೆ ಮತ್ತು ಆಸೆಗಳನ್ನು ಹೊಂದಿರುವ ವ್ಯಕ್ತಿಯನ್ನು ಮೇಲೇರಲು ಮತ್ತು ಬುದ್ಧನಾಗಲು ಬಿಟ್ಟರೆ – ಯೋಚಿಸಿನೋಡಿ ಇದು ಸಾಧ್ಯವೇ? ಅವನಿಗೆ ಬೋಧಿಸತ್ವ[29] ಅಷ್ಟು ಸುಂದರನಾಗಿರುವುದನ್ನು ಕಂಡು ಕೆಟ್ಟ ಆಲೋಚನೆಗಳು ಬರಬಹುದು. ಈ ವ್ಯಕ್ತಿ ತನ್ನ ಅಸೂಯೆಯನ್ನು ತ್ಯಜಿಸಲು ಸಾಧ್ಯವಾಗದ್ದರಿಂದ ಬುದ್ಧನೊಂದಿಗೆ ಸಂಘರ್ಷಕ್ಕೆ ಇಳಿಯಬಹುದು. ಈ ಎಲ್ಲಾ ಸಂಗತಿಗಳು ನಡೆಯುವುದಕ್ಕೆ ಹೇಗೆ ತಾನೇ ಅವಕಾಶ ಮಾಡಿಕೊಡ ಬಹುದು ? ಹಾಗಾದರೆ ಈ ಕುರಿತು ಏನನ್ನು ಮಾಡಬೇಕು? ನೀವು ಸಾಮಾನ್ಯ ದಿನನಿತ್ಯ ಜನರ ಎಲ್ಲಾ ಕೆಟ್ಟ ಆಲೋಚನೆಗಳನ್ನು ತೊಲಗಿಸಬೇಕು–ಆಗ ಮಾತ್ರ ನೀವು ಮೇಲೇರಲು ಸಾಧ್ಯ.

ಬೇರೆ ಮಾತಿನಲ್ಲಿ ಹೇಳುವುದಾದರೆ, ನೀವು ಷಿನ್‌ಷಿಂಗ್ ಕೃಷಿಯ ಕುರಿತು ಗಮನ ಹರಿಸಬೇಕು ಮತ್ತು ಪ್ರಪಂಚದ ವೈಶಿಷ್ಟ್ಯತೆಗಳಿಗನುಗುಣವಾಗಿ ಸಾಧನೆಯ ಅಭ್ಯಾಸವನ್ನು ಕೈಗೊಳ್ಳಬೇಕು. ನೀವು ಜ್ಹೆನ್–ಷ್ಹನ್–ರ್‍ಹೆನ್‌ಗೆ ಸಾಮಾನ್ಯ ಮನುಷ್ಯರ ಎಲ್ಲಾ ಆಸೆ ಆಕಾಂಕ್ಷೆಗಳನ್ನು ಅನೈತಿಕ ಆಲೋಚನೆಗಳನ್ನು ಮತ್ತು ತಪ್ಪು ಕೆಲಸ ಮಾಡುವ ಉದ್ದೇಶಗಳನ್ನು ಸಂಪೂರ್ಣವಾಗಿ ನಿರ್ಮೂಲನೆಗೊಳಿಸಬೇಕು. ನಿಮ್ಮ ಮಾನಸಿಕ ಸ್ಥಿತಿಯಲ್ಲಿನ ಒಂದು ಚಿಕ್ಕ ಸುಧಾರಣೆಗೂ ನಿಮ್ಮ ದೇಹದಲ್ಲಿನ ಕೆಲವು ಕೆಟ್ಟ ವಸ್ತುಗಳು ನಿರ್ಮೂಲನೆಗೊಳ್ಳುತ್ತದೆ. ಅದೇ ಸಮಯದಲ್ಲಿ ನೀವೂ ಸಹ ಕರ್ಮವನ್ನು ಕಡಿಮೆ ಮಾಡಲು ಸ್ವಲ್ಪ ಕಷ್ಟಕಾರ್ಪಣ್ಯಗಳನ್ನು ಅನುಭವಿಸಬೇಕು ಮತ್ತು ಹಲವು ತೊಂದರೆಗಳನ್ನು ಎದುರಿಸಬೇಕು. ಆಗ ನೀವು ಸ್ವಲ್ಪ ಮೇಲಕ್ಕೆ ಹೋಗಬಹುದು; ಅಂದರೆ ಈ ಪ್ರಪಂಚದ ವೈಶಿಷ್ಟ್ಯಗಳು ನಿಮ್ಮನ್ನು ಅಷ್ಟಾಗಿ ನಿರ್ಬಂಧಿಸುವುದಿಲ್ಲ. ಸಾಧನೆ ಒಬ್ಬರ ಸ್ವಂತ ಪರಿಶ್ರಮವನ್ನು ಅವಲಂಬಿಸಿದರೆ ಗಾಂಗ್‌ನ ಪರಿವರ್ತನೆಯನ್ನು ಒಬ್ಬರ ಗುರುಗಳು ಮಾಡುತ್ತಾರೆ. ಗುರುಗಳು ನಿಮಗೆ ನಿಮ್ಮ ಗಾಂಗ್‌ನ ಅಭಿವೃದ್ಧಿಗಾಗಿ ಗಾಂಗ್ ಯಂತ್ರರಚನೆಯನ್ನು ಕೊಡುತ್ತಾರೆ ಮತ್ತು ಈ ಗಾಂಗ್ ಯಂತ್ರರಚನೆ ಕಾರ್ಯನಿರ್ವಹಿಸುತ್ತದೆ. ಅದು ನಿಮ್ಮ ದೇಹದ ಹೊರಗಿರುವ ಢ್ಹಾ ಕಣಗಳನ್ನು ಗಾಂಗ್ ಆಗಿ ಪರಿವರ್ತಿಸಬಲ್ಲದು. ನೀವು ನಿರಂತರವಾಗಿ ನಿಮ್ಮನ್ನು ನೀವೇ ಸುಧಾರಿಸಿಕೊಂಡಂತೆ ಮತ್ತು ಸಾಧನೆಯ ಅಭ್ಯಾಸದಲ್ಲಿ ಮೇಲೇರಲು ತೊಡಗಿದಂತೆ ನಿಮ್ಮ ಗಾಂಗ್ ಕಂಬ (ಗಾಂಗ್ ಜೂ) ಕೂಡ ಉನ್ನತ ಮಟ್ಟದೆಡೆಗೆ ನಿರಂತರ ಪ್ರಗತಿ ಸಾಧಿಸುತ್ತಿರುತ್ತದೆ. ಒಬ್ಬ ಅಭ್ಯಾಸಿಗನಾಗಿ ನೀವು ಈ ದಿನನಿತ್ಯದ ಜನರ ಪರಿಸರದಲ್ಲೇ ಅಭ್ಯಾಸವನ್ನು ಮತ್ತು ಗುಣವನ್ನು ಹದಗೊಳಿಸಿಕೊಳ್ಳಬೇಕು ಮತ್ತು

ಕ್ರಮೇಣ ಎಲ್ಲಾ ಮೋಹ ಮತ್ತು ವಿವಿಧ ಆಸೆ ಆಕಾಂಕ್ಷೆಗಳನ್ನು ತೊಲಗಿಸಬೇಕು. ಹಲವಾರು ಬಾರಿ, ಯಾವುದನ್ನು ನಮ್ಮ ಮಾನವ ಸಮಾಜ ಒಳ್ಳೆಯದೆಂದು ಪರಿಗಣಿಸುತ್ತದೋ ಅದು ಉನ್ನತ ಮಟ್ಟದ ದೃಷ್ಟಿಕೋನದಿಂದ ಸಾಮಾನ್ಯವಾಗಿ ಕೆಟ್ಟದಾಗಿರುತ್ತದೆ. ಆದ್ದರಿಂದ ಜನರು ಒಬ್ಬ ವ್ಯಕ್ತಿಗೆ ಒಳ್ಳೆಯದೆಂದು ಪರಿಗಣಿಸುವುದು ಈ ಸಾಮಾನ್ಯ ದಿನನಿತ್ಯದ ಜನರ ನಡುವೆ ಸ್ವಹಿತಾಸಕ್ತಿಯನ್ನು ಪೂರೈಸಿಕೊಳ್ಳುವುದು, ತದನಂತರ ಉತ್ತಮ ಜೀವನಶೈಲಿಯನ್ನು ನಡೆಸುವುದು, ಮಹಾನ್ ಸುಜ್ಞಾನ ಜೀವಿಗಳಿಗೆ ಈ ವ್ಯಕ್ತಿಯು ಅತ್ಯಂತ ಕೆಟ್ಟದಾಗಿರುವನು. ಇದರಲ್ಲಿ ಅಂತಹ ಕೆಟ್ಟದ್ದೇನಿದೆ ? ಒಬ್ಬರು ಹೆಚ್ಚು ಗಳಿಸಿದಂತೆ ಹೆಚ್ಚುಹೆಚ್ಚು ಇತರರ ಮೇರೆಯನ್ನು ಮೀರುತ್ತಾರೆ. ಒಬ್ಬರು ತಾವು ಅದಕ್ಕೆ ಅರ್ಹರಲ್ಲದಿದ್ದರೂ ಪಡೆಯುತ್ತಾರೆ. ಈ ವ್ಯಕ್ತಿ ಖ್ಯಾತಿ ಮತ್ತು ಲಾಭದ ಮೋಹಕ್ಕೆ ಸಿಲುಕಿರುತ್ತಾನೆ, ಹಾಗಾಗಿ ಢ್ಹಾ ವನ್ನು ಕಳೆದುಕೊಳ್ಳುತ್ತಾನೆ. ನೀವು ನಿಮ್ಮ ಗಾಂಗ್ ಅನ್ನು ಷಿನ್‌ಷಿಂಗ್ ಕೃಷಿಗೆ ಒತ್ತುಕೊಡದೆ ವೃದ್ಧಿ ಬಯಸಿದರೆ ನಿಮ್ಮ ಗಾಂಗ್ ಯಾವತ್ತೂ ವೃದ್ಧಿಸುವುದೇ ಇಲ್ಲ.

ಸಾಧಕರ ಸಮುದಾಯವು ಒಬ್ಬರ ಪೂರ್ವದ ಜೀವಾತ್ಮವು ನಶಿಸಿಹೋಗುವುದಿಲ್ಲವೆಂದೇ ನಂಬುತ್ತದೆ. ಹಿಂದೆ ಜನರು ಮಾನವರ ಪೂರ್ವದ ಜೀವಾತ್ಮದ ಕುರಿತು ಚರ್ಚಿಸುವುದನ್ನು ಮೂಢನಂಬಿಕೆಯೆಂದೇ ಪರಿಗಣಿಸುತ್ತಿದ್ದರು. ಭೌತಶಾಸ್ತ್ರದಲ್ಲಿ ಮಾನವ ಶರೀರದ ಮೇಲೆ ನಡೆದ ಅಧ್ಯಯನದಲ್ಲಿ ಅಣು, ಪ್ರೋಟಾನ್, ನ್ಯೂಟ್ರಾನ್, ಎಲೆಕ್ಟ್ರಾನ್, ಮತ್ತೂ ಕೆಳಗೆ ಹೋದರೆ ಕ್ವಾರ್ಕ್, ನ್ಯೂಟ್ರಿನೊ ಪತ್ತೆ ಹಚ್ಚಿ

**29. ಬೋಧಿಸತ್ವ** – ಬುದ್ಧ ಶಾಲೆಯಲ್ಲಿ ಫಲಪದವಿಯೊಂದಿಗೆ ಜ್ಞಾನೋದಯ ಹೊಂದಿದವರು, ಮತ್ತು ಒಬ್ಬ ಅರ್ಹತ್‌ನಿಂದ ಮೇಲ್ಮಟ್ಟದಲ್ಲಿ ಆದರೆ ತಥಾಗತಕ್ಕಿಂತ ಕೆಳಮಟ್ಟದಲ್ಲಿರುವವರು.

ದ್ದಾರೆಂಬುದು ತಿಳಿದ ವಿಷಯವೇ ಆಗಿದೆ. ಆ ಒಂದು ಘಟ್ಟದಲ್ಲಿ ಸೂಕ್ಷ್ಮದರ್ಶಕ ಯಂತ್ರಗಳು ಇನ್ನೂ ಹೆಚ್ಚಿನದನ್ನು ಪತ್ತೆಹಚ್ಚಲು ಆಗಲಿಲ್ಲ. ಆದರೂ ಇವೆಲ್ಲವೂ ಜೀವನದ ಉಗಮ ಮತ್ತು ಕಣಗಳ ಉಗಮಕ್ಕಿಂತ ಬಹಳ ಹಿಂದಿರುವಂಥದ್ದು. ಒಂದು ಪರಮಾಣು ಬೀಜ ಸಮ್ಮಿಲನ ಅಥವ ವಿದಳನವಾಗಲು ಅಪಾರ ಪ್ರಮಾಣದ ಶಕ್ತಿಯ ಅಪ್ಪಳಿಕೆಯಿಂದ ಮತ್ತು ಅತ್ಯಂತ ಅಪಾರ ಪ್ರಮಾಣದ ಶಾಖದಿಂದ ಮಾತ್ರ ಸಾಧ್ಯ ಎಂಬುದು ಎಲ್ಲರಿಗೂ ತಿಳಿದ ವಿಷಯವೇ ಆಗಿದೆ. ಒಬ್ಬ ಸತ್ತಾಗ ಒಬ್ಬರ ದೇಹದಲ್ಲಿರುವ ನ್ಯೂಕ್ಲಿಯಸ್‌ಗಳು ನಶಿಸಿ ಹೋಗಲು ಹೇಗೆ ತಾನೆ ಸಾಧ್ಯ ? ಆದ್ದರಿಂದ, ನಾವು ಕಂಡುಕೊಂಡಿರುವುದು ಏನೆಂದರೆ, ಒಬ್ಬ ವ್ಯಕ್ತಿ ಸತ್ತಾಗ ನಮ್ಮ ಪರಿಮಾಣದಲ್ಲಿರುವ ಅತ್ಯಂತ ದೊಡ್ಡ ಅಣ್ವಿಕ ಕಣಗಳು ಮಾತ್ರ ಹರಿದುಕೊಳ್ಳುತ್ತದೆ, ಇತರೆ ಪರಿಮಾಣಗಳಲ್ಲಿರುವ ದೇಹವು ನಶಿಸದೆ ಹಾಗೆಯೇ ಇರುತ್ತದೆ. ಯೋಚಿಸಿ ನೋಡಿ, ಎಲ್ಲರೂ : ಸೂಕ್ಷ್ಮದರ್ಶಕ ಯಂತ್ರದ ಕೆಳಗೆ ಮಾನವ ಶರೀರವು ಹೇಗೆ ಕಾಣುತ್ತದೆ. ಇಡೀ ಮಾನವ ಶರೀರವೇ ಚಲನಶೀಲವಾಗಿರುತ್ತದೆ. ನೀವು ಸುಮ್ಮನೆ ಕುಳಿತಿರುವಾಗಲೂ ಸಹ ನಿಮ್ಮ ಇಡೀ ದೇಹವೇ ಚಲನಶೀಲವಾಗಿರುತ್ತದೆ. ಜೀವಕೋಶದ ಅಣುಗಳು ಚಲನಶೀಲವಾಗಿರುತ್ತದೆ ಮತ್ತು ಇಡೀ ದೇಹವೇ ಮರಳಿನಿಂದ ಮಾಡಿರುವಂತೆ ಸಡಿಲವಾಗಿರುತ್ತದೆ. ಸೂಕ್ಷ್ಮದರ್ಶಕ ಯಂತ್ರದಲ್ಲಿ ಮಾನವ ಶರೀರವು ಈ ತರಹವೇ ಕಾಣುತ್ತಿರುತ್ತದೆ ಮತ್ತು ನಮ್ಮ ನಗ್ನ ಕಣ್ಣುಗಳಿಗೆ ಕಾಣಿಸುವುದಕ್ಕಿಂತ ಅತ್ಯಂತ ಭಿನ್ನವಾಗಿರುತ್ತದೆ. ಇದು ಏಕೆಂದರೆ ಈ ಮಾನವ ಜೋಡಿ ಕಣ್ಣುಗಳು ಮಿಥ್ಯ ತಿಳುವಳಿಕೆಯನ್ನು ನಿಮಗೆ ಸೃಷ್ಟಿಸುತ್ತದೆ ಮತ್ತು ಈ ವಸ್ತುಗಳನ್ನು ನೋಡುವುದಕ್ಕೆ ನಿಮ್ಮನ್ನು ತಡೆಯುತ್ತದೆ. ಒಮ್ಮೆ ಒಬ್ಬರ ದಿವ್ಯ ಚಕ್ಷುಗಳು[30] (ತೆನ್ಮ) ಅನಾವರಣಗೊಂಡಾಗ ಅದು ವಸ್ತುಗಳನ್ನು ದೊಡ್ಡದಾಗಿಸುವ ಮೂಲಕ ನೋಡುತ್ತದೆ ; ಇದು ನಿಜವಾಗಿಯೂ ಮಾನವ ಮೂಲ ಪ್ರವೃತ್ತಿಯೇ ಆಗಿದ್ದು ಅದನ್ನು ಈಗ ಅಸಾಮಾನ್ಯ ಶಕ್ತಿಯೆಂದು ಕರೆಯುತ್ತಾರೆ, ನೀವು ಅಸಾಧಾರಣ ಶಕ್ತಿಗಳನ್ನು ಬಳಸಿಕೊಳ್ಳಬೇಕಾದರೆ ನೀವು ನಿಮ್ಮ ಮೂಲ ನೈಜ ಜೀವಾತ್ಮಕ್ಕೆ ಮರಳಬೇಕು, ಮತ್ತು ಸಾಧನೆಯ ಮೂಲಕ ಹಿಂತಿರುಗಿ ಬರಬೇಕು.

ನಾವು ಡ್ಹಾ ಕುರಿತು ಮಾತನಾಡೋಣ. ಯಾವ ನಿಖರವಾದ ಸಂಪರ್ಕ ಅದಕ್ಕಿದೆ? ನಾವು ಇದನ್ನು ಕೂಲಂಕುಶವಾಗಿ ಅಧ್ಯಯನ ಮಾಡುತ್ತೇವೆ. ಮಾನವ ಜೀವಿಗಳಾಗಿ ನಮಗೆ ಇರುವ ಹಲವಾರು ಪರಿಮಾಣಗಳಲ್ಲೂ ಪ್ರತಿಯೊಂದರಲ್ಲೂ ದೇಹವಿರುತ್ತದೆ. ನಾವು ಮಾನವ ಶರೀರವನ್ನು ಪರಿಶೀಲಿಸಿದಾಗ, ಅತ್ಯಂತ ದೊಡ್ಡ ಕಣಗಳು, ಜೀವಕೋಶಗಳು ಮತ್ತು ಇವೇ ನಮ್ಮ ಭೌತಿಕ ಮಾನವ ಶರೀರವೆಂದು ಪರಿಗಣಿತವಾಗುವುದು. ನೀವು ಜೀವಕೋಶ ಮತ್ತು ಅಣುಗಳ ನಡುವಿನ ಸ್ಥಳ ಅಥವ ಅಣುಗಳ ಮಧ್ಯೆ ಇರುವ ಸ್ಥಳವನ್ನು ಪ್ರವೇಶಿಸುವಿರಾದಲ್ಲಿ ನೀವು ಬೇರೊಂದು ಪರಿಮಾಣದಲ್ಲಿರುವುದಾಗಿ ಅನುಭವ ವಾಗುತ್ತದೆ. ಆ ದೇಹದ ಅಸ್ತಿತ್ವದ ರೂಪ ಏನನ್ನು ಹೋಲುತ್ತದೆ ? ನಿಜ, ನೀವು ಈ ಪರಿಮಾಣದ ಪರಿಕಲ್ಪನೆಗಳಿಂದ ಅದನ್ನು ಅರ್ಥ ಮಾಡಿಕೊಳ್ಳಲು ಆಗದು, ಮತ್ತು ನಿಮ್ಮ ದೇಹವು ಆ ಪರಿಮಾಣದ ಅಸ್ತಿತ್ವದ ರೂಪಕ ಅವಶ್ಯಕತೆಯನ್ನು ಪೂರೈಸಬೇಕು. ಇತರ ಪರಿಮಾಣದಲ್ಲಿ ದೇಹವು ಶುರುವಿನಲ್ಲೇ ದೊಡ್ಡದು ಅಥವ ಚಿಕ್ಕದಾಗಬಹುದು. ಆ ಸಮಯದಲ್ಲಿ, ನೀವು ಅದನ್ನು ಅಮಿತ ಪರಿಮಾಣವೆಂದು ಅರಿಯುವಿರಿ. ಇದು ಒಂದೇ ಸ್ಥಳದಲ್ಲಿ ಸಮಾನಾಂತರವಾಗಿ ಅಸ್ತಿತ್ವದಲ್ಲಿರುವ ಇತರ ಪರಿಮಾಣದ ಸರಳ ರೂಪವನ್ನು ಉಲ್ಲೇಖಿಸುತ್ತದೆ. ಎಲ್ಲರಿಗೂ ಇರುವ ಬಹಳಷ್ಟು ಬೇರೆ ಬೇರೆ ಪರಿಮಾಣಗಳಲ್ಲಿ ಪ್ರತಿಯೊಂದರಲ್ಲೂ ನಿಶ್ಚಿತವಾದ ಶರೀರವಿರುತ್ತದೆ. ನಿಶ್ಚಿತವಾದ ಪರಿಮಾಣದಲ್ಲಿ ಮಾನವ ಶರೀರವನ್ನು ಸುತ್ತುವರೆದಿರುವ ಒಂದು ಕ್ಷೇತ್ರವಿರುತ್ತದೆ. ಇದು ಯಾವ ರೀತಿಯ ಕ್ಷೇತ್ರ ? ಇದು ನಾವು ಹೇಳಿರುವಂತಹ ಡ್ಹಾ ದ ಕ್ಷೇತ್ರ. ಡ್ಹಾ ಎಂಬುದು ಶ್ವೇತ ವಸ್ತು ಮತ್ತು ನಾವು ಹಿಂದೆ ಅಂದುಕೊಂಡಂತೆ ಇದು ಆಧ್ಯಾತ್ಮಿಕ ಅಥವ ತಾತ್ವಿಕವಾದ ಯಾವುದೋ ವಸ್ತುವಲ್ಲ – ಇದು ಖಂಡಿತವಾಗಿಯೂ ವಾಸ್ತವಿಕ ಅಸ್ತಿತ್ವವಿರುವಂತಹುದು. ಆದ್ದರಿಂದ, ಹಿಂದೆ ಹಿರಿಯರು ಡ್ಹಾ ವನ್ನು ಕೂಡಿಡುವ ಅಥವ ಕಳೆಯುವ ಕುರಿತು ಮಾತನಾಡುತ್ತಿದ್ದರು, ಮತ್ತು ಅವರ ಮಾತು ಅತ್ಯಂತ ತಿಳಿವಳಿಕೆಯುಳ್ಳದ್ದಾಗಿತ್ತು. ಈ ಡ್ಹಾ ಒಬ್ಬರ ದೇಹದ ಸುತ್ತ ಇರುವ ಒಂದು ಕ್ಷೇತ್ರವನ್ನು ನಿರ್ಮಿಸುತ್ತದೆ. ಹಿಂದೆ ತಾವೋ ಶಾಲೆ ಶಿಷ್ಯ, ಗುರುವನ್ನು ಆಯ್ಕೆ ಮಾಡುವ ಬದಲು ಗುರು ಶಿಷ್ಯನನ್ನು ಆಯ್ಕೆಮಾಡುವುದೆಂದು ನಂಬಿತ್ತು. ಏನಿದರ ಅರ್ಥ ? ಒಬ್ಬ ಗುರು ಶಿಷ್ಯನ ದೇಹವು ಬೃಹತ್ ಪ್ರಮಾಣದ ಡ್ಹಾ ಹೊದಿದೆಯೇ ಎಂದು

ಪರೀಕ್ಷಿಸುತ್ತಿದ್ದರು. ಶಿಷ್ಯನಿಗೆ ಅಪಾರ ಪ್ರಮಾಣದ ಡ್ಹಾ ಹೊಂದಿದ್ದರೆ ಅವನಿಗೆ ಸಾಧನೆಯ ಅಭ್ಯಾಸವನ್ನು ಮಾಡಲು ಬಹಳ

ಅದೇ ಸಮಯದಲ್ಲಿ, ನಾವು "ಕರ್ಮ" ಎನ್ನುವ ಮತ್ತು ಬುದ್ಧಶಾಲೆ "ಪಾಪಯುಕ್ತ ಕರ್ಮ "ಎನ್ನುವ ಒಂದು ರೀತಿಯ ಕಪ್ಪು ವಸ್ತು ಅಸ್ತಿತ್ವದಲ್ಲಿರುತ್ತದೆ. ಈ ಕಪ್ಪು ಮತ್ತು ಶ್ವೇತ ವಸ್ತುಗಳೆರಡೂ ಒಂದೇ ಕಾಲದಲ್ಲಿ ಇರುತ್ತದೆ. ಇವೆರಡು ವಸ್ತುಗಳಿಗೂ ಇರುವಂತಹ ಸಂಬಂಧ ಎಂತಹುದು ? ನಾವು ಡ್ಹಾವನ್ನು ಕಷ್ಟಪಡುವುದರಿಂದ, ತೊಂದರೆ ಸಹಿಸಿಕೊಳ್ಳುವುದರಿಂದ ಮತ್ತು ಒಳ್ಳೆಯ ಕಾರ್ಯಗಳನ್ನು ಮಾಡುವ ಮೂಲಕ ಪಡೆದರೆ; ಕಪ್ಪು ವಸ್ತುವನ್ನು ಕೆಟ್ಟ ಕಾರ್ಯ ಮಾಡುವುದರಿಂದ ಮತ್ತು ತಪ್ಪು ಕೆಲಸಗಳನ್ನು ಮಾಡುವುದರಿಂದ ಅಥವ ಜನರನ್ನು ಬೆದರಿಸುವುದರಿಂದ ಪಡೆಯುತ್ತೇವೆ. ಈಗಿನ ಕಾಲದಲ್ಲಿ ಕೆಲವು ಜನರು ಕೇವಲ ಲಾಭಕ್ಕಾಗಿಯಷ್ಟೇ ಹೊಡೆದಾಡದೆ ಎಲ್ಲಾ ರೀತಿಯ ದುಷ್ಟ ಕಾರ್ಯಗಳನ್ನು ಮಾಡುವಷ್ಟರ ಮಟ್ಟಿಗೆ ಹೋಗುತ್ತಾರೆ. ಅವರು ಹಣಕ್ಕಾಗಿ ಎಲ್ಲಾ ರೀತಿಯ ಕೆಟ್ಟ ಕೆಲಸಗಳನ್ನೂ ಮಾಡುತ್ತಾರೆ ಮತ್ತು ಅವರು ಕೊಲೆಯನ್ನೂ ಮಾಡುತ್ತಾರೆ, ಕೊಲೆ ಮಾಡಿಸಲು ಹಣ ಕೊಡುತ್ತಾರೆ, ಸಲಿಂಗ ಕಾಮವನ್ನು ಮಾಡುತ್ತಾರೆ ಮತ್ತು ಮಾದಕವಸ್ತುಗಳನ್ನು ಸೇವಿಸುತ್ತಾರೆ. ಅವರು ಎಲ್ಲಾ ತರಹದ ಕೆಲಸಗಳನ್ನು ಮಾಡುತ್ತಾರೆ. ಒಬ್ಬರು ತಪ್ಪು ಕೆಲಸ ಮಾಡಿದಾಗ ಅವರು ಡ್ಹಾವನ್ನು ಕಳೆದುಕೊಳ್ಳುತ್ತಾರೆ. ಒಬ್ಬ ವ್ಯಕ್ತಿ ಹೇಗೆ ಡ್ಹಾವನ್ನು ಕಳೆದುಕೊಳ್ಳುತ್ತಾನೆ? ಒಬ್ಬ ವ್ಯಕ್ತಿ ಇನ್ನೊಬ್ಬನನ್ನು ಬೆದರಿಸಿದಾಗ ಆತ ತನಗೆ ಮೇಲ್ಗೈಯಾಯಿತೆಂದು ಅಂದುಕೊಂಡು ಸಂತೋಷ ಅನುಭವಿಸುತ್ತಾನೆ. ಈ ಪ್ರಪಂಚದಲ್ಲಿ "ನಷ್ಟ ಇಲ್ಲ, ಲಾಭ ಇಲ್ಲ" ಎಂಬ ತತ್ವವಿದೆ. ಏನಾದರೂ ಪಡೆಯಬೇಕಾದರೆ ಒಬ್ಬರು ಏನನ್ನಾದರೂ ಕಳೆದುಕೊಳ್ಳಬೇಕು. ನೀವು ಕಳೆದುಕೊಳ್ಳಲು ಬಯಸದಿದ್ದರೂ ಕೂಡ ನಿಮ್ಮಿಂದ ಬಲವಂತದಿಂದ ಕಳೆದುಕೊಳ್ಳುವಂತೆ ಮಾಡಲಾಗುತ್ತದೆ. ಯಾರು ಇಂಥ ಪಾತ್ರವನ್ನು ನಿರ್ವಹಿಸುತ್ತಾರೆ ? ಈ ಜಗತ್ತಿನ ವೈಶಿಷ್ಟ್ಯತೆಯೇ ನಿರ್ದಿಷ್ಟವಾಗಿ ಇಂತಹ ಒಂದು ಪಾತ್ರವನ್ನು ಮಾಡುತ್ತದೆ. ಆದ್ದರಿಂದ, ನೀವು ಕೇವಲ ಲಾಭ ಮಾಡಿಕೊಳ್ಳಲು ಬಯಸಿದರೆ ಅದು ಅಸಾಧ್ಯವಾಗಿದೆ. ಆಗ ಏನಾಗುತ್ತದೆ ? ಇನ್ನೊಬ್ಬ ವ್ಯಕ್ತಿಯನ್ನು ಬೈಯುವಾಗಲೋ ಅಥವ ಬೆದರಿಸುವಾಗಲೋ ಆ ವ್ಯಕ್ತಿಗೆ ಇವನು ಡ್ಹಾವನ್ನು ಕೊಡುತ್ತಿರುತ್ತಾನೆ, ಇನ್ನೊಬ್ಬ ವ್ಯಕ್ತಿಯೋ ತನಗೆ ತಪ್ಪಾಯಿತೆಂದು ಭಾವಿಸುವುದರಿಂದ ಮತ್ತು ಆತ ಕಷ್ಟ ಮತ್ತು ನಷ್ಟವನ್ನು ಅನುಭವಿಸಿದ್ದರಿಂದ ಆತನಿಗೆ ಸೂಕ್ತವಾದ ಪರಿಹಾರವನ್ನು ಕೊಡಲಾಗುತ್ತದೆ. ಒಬ್ಬ ವ್ಯಕ್ತಿ ಇಲ್ಲಿ ಬೈಯುತ್ತಿದ್ದಾಗ, ಬೈಯುತ್ತಿರುವಾಗ ಹಾಗೆ ಒಂದು ತಂಡು ಡ್ಹಾ ಆತನ ಸ್ವಂತ ಪರಿಮಾಣದ ಕ್ಷೇತ್ರವನ್ನು ಬಿಟ್ಟು ಇನ್ನೊಬ್ಬ ವ್ಯಕ್ತಿಯಲ್ಲಿಗೆ ಹೋಗುತ್ತದೆ. ಈತ ಅವನಿಗೆ ಹೆಚ್ಚು ಹೆಚ್ಚು ಬೈದಂತೆ ಹೆಚ್ಚು ಹೆಚ್ಚು ಡ್ಹಾ ಅವನಿಗೆ ಕೊಡುತ್ತಾನೆ. ಇದು ಹೊಡೆದಾಗಲೂ ಅಥವ ಬೆದರಿಸಿದಾಗಲೂ ಸಹ ಹೀಗೇ ಆಗುತ್ತದೆ. ಒಬ್ಬ ಇನ್ನೊಬ್ಬನಿಗೆ ಹೊಡೆದಾಗ ಅಥವ ಒದ್ದಾಗ ಆತ ಇವನಿಗೆ ಎಷ್ಟು ಕೆಟ್ಟದ್ದಾಗಿ ಹೊಡೆಯುತ್ತಾನೆ ಅದರ ಅನುಗುಣವಾಗಿ ಆ ವ್ಯಕ್ತಿಗೆ ಡ್ಹಾವನ್ನು ಕೊಡುತ್ತಾನೆ. ಒಬ್ಬ ಸಾಮಾನ್ಯ ದಿನನಿತ್ಯದ ವ್ಯಕ್ತಿಗೆ ಈ ತತ್ವವು ಕಾಣುವುದಿಲ್ಲ. ತೀವ್ರ ಅವಮಾನಿತನಾಗಿ ಆತ ಇನ್ನೂ ತಡೆಯಲಾರದೆ ಹೀಗೆ ಯೋಚಿಸುತ್ತಾನೆ. "ನೀನು ನನಗೆ ಹೊಡೆದೆಯಾದ್ದರಿಂದ ನಾನು ನಿನಗೆ ಅದನ್ನು ವಾಪಸ್ಸು ತೀರಿಸಬೇಕು '" "ವ್ಯಾಮ್" ಈತ ಆ ವ್ಯಕ್ತಿಗೆ ಮರಳಿ ಗುದ್ದುತ್ತಾನೆ ಮತ್ತು ಡ್ಹಾವನ್ನು ಆತನಿಗೆ ಮರಳಿ ಕೊಡುತ್ತಾನೆ. ಇಬ್ಬರಿಗೂ ಕೂಡ ಯಾವದೇ ಲಾಭ ಅಥವ ನಷ್ಟವಾಗಲಿಲ್ಲ. ಈತ ಹೀಗೇ ಯೋಚಿಸಬಹುದು "ನೀನು ನನಗೆ

ಒಮ್ಮೆ ಹೊಡೆದಿದ್ದೀಯ, ಆದ್ದರಿಂದ ನಾನು ನಿನಗೆ ಎರಡು ಬಾರಿ ಹೊಡೆಯಬೇಕು. ಇಲ್ಲವಾದಲ್ಲಿ ನನಗೆ ಸೇಡು ತೀರಿಸಿಕೊಂಡೆ ಎನಿಸುವುದಿಲ್ಲ". ಈತ ಈ ವ್ಯಕ್ತಿಗೆ ಇನ್ನೊಮ್ಮೆ ಹೊಡೆಯುತ್ತಾನೆ ಮತ್ತು ಇನ್ನೊಂದು ತುಂಡು ಆತನ ಡ್ಹಾ ಆ ವ್ಯಕ್ತಿಗೆ ಕೊಡಲ್ಪಡುತ್ತದೆ.

---

**೩೦ ದಿವ್ಯ ಚಕ್ಷುಗಳು** – ''ಮೂರನೇ ಕಣ್ಣು'' ಎಂದು ಕರಯಲಾಗುವುದು.

ಸುಲಭವಾಗುತ್ತದೆ. ಇಲ್ಲವಾದರೆ, ಆತನಿಗೆ ಸುಲಭವಾಗಿ ಮೇಲೇರಲು ಸಾಧ್ಯವಾಗುವುದಿಲ್ಲ ಮತ್ತು ಉನ್ನತ ಮಟ್ಟದೆಡೆಯ ಗಾಂಗ್ ಮಟ್ಟವನ್ನು ಬೆಳೆಸುವುದಕ್ಕೆ ಅತಿ ಕಷ್ಟವನ್ನು ಅನುಭವಿಸಬೇಕಾಗುತ್ತದೆ.

ಈ ಡ್ಹಾ ಏತಕ್ಕಾಗಿ ಇಷ್ಟೊಂದು ಮೌಲ್ಯವುಳ್ಳದ್ದಾಗಿವೆ? ಡ್ಹಾ ದ ಪರಿವರ್ತನೆಯಲ್ಲಿ ಯಾವ ರೀತಿಯ ಸಂಬಂಧ ಇದೆ? ಧರ್ಮಗಳು ಹೀಗೆ ಹೇಳುತ್ತವೆ: "ಡ್ಹಾ ದಿಂದ, ಒಬ್ಬ ವ್ಯಕ್ತಿ ಈ ಜನ್ಮದಲ್ಲಿ ಅಲ್ಲದಿದ್ದರೂ ಮುಂದಿನ ಜನ್ಮದಲ್ಲಾದರೂ ಏನನ್ನಾದರೂ ಗಳಿಸುತ್ತಾನೆ". ಒಬ್ಬರು ಏನನ್ನು ಗಳಿಸುತ್ತಾರೆ? ಹೆಚ್ಚು ಡ್ಹಾ ಇದ್ದಲ್ಲಿ ಒಬ್ಬರು ಒಬ್ಬ ಉನ್ನತ ಮಟ್ಟದ ಅಧಿಕಾರಿಯೋ ಅಥವ ಅಪಾರವಾದ ಶ್ರೀಮಂತಿಕೆಯನ್ನೋ ಗಳಿಸಬಹುದು. ತಮಗೆ ಬೇಕಾದ್ದೆಲ್ಲವನ್ನು ಅವರು ಗಳಿಸಬಹುದು ಮತ್ತು ಇವೆಲ್ಲವನ್ನು ಡ್ಹಾ ದೊಂದಿಗೆ ವಿನಿಮಯ ಮಾಡಲಾಗುತ್ತದೆ, ಒಬ್ಬರಿಗೆ ಯಾವುದೇ ಡ್ಹಾ ಇಲ್ಲದೆ ಹೋದಲ್ಲಿ, ಆತನ ದೇಹ ಮತ್ತು ಆತ್ಮ ಎರಡೂ ಕೂಡ ನಿರ್ನಾಮ ಹೊಂದುತ್ತವೆ. ಒಬ್ಬರ ಪೂರ್ವದ ಜೀವಾತ್ಮವನ್ನು ಸಂಪೂರ್ಣವಾಗಿ ನಿರ್ಮೂಲನೆಗೊಳಿಸಲಾಗುತ್ತದೆ. ಮತ್ತು ಸಾವಿನ ನಂತರ ಅವರಿಂದ ಏನೂ ಉಳಿಯದೆ ಅವರು ಸಂಪೂರ್ಣವಾಗಿ ಸಾಯುತ್ತಾರೆ. ನಮ್ಮ ಸಾಧಕರ ಸಮುದಾಯದಲ್ಲಿ ಅದಾಗ್ಯೂ ನಾವು ಈ ಡ್ಹಾವನ್ನು ನೇರವಾಗಿ ಗಾಂಗ್ ಆಗಿ ಪರಿವರ್ತಿಸಬಹುದೆಂದು ಪರಿಗಣಿಸುತ್ತೇವೆ.

ನಾವಿಲ್ಲಿ ಡ್ಹಾ ಹೇಗೆ ಗಾಂಗ್ ಆಗಿಪರಿವರ್ತಿತಗೊಳ್ಳುತ್ತದೆಯೆಂಬುದರ ಕುರಿತು ಹೇಳುತ್ತೇವೆ. ಸಾಧಕರ ಸಮುದಾಯದಲ್ಲಿ ಈ ತರಹದ ಒಂದು ಹೇಳಿಕೆಯಿದೆ. "ಸಾಧನೆಯು ಒಬ್ಬರ ಸ್ವಂತ ಪರಿಶ್ರಮವನ್ನು ಅವಲಂಬಿಸಿದರೆ ಗಾಂಗ್‌ನ ಪರಿವರ್ತನೆಯನ್ನು ಒಬ್ಬರ ಗುರುಗಳು ನೆರವೇರಿಸುತ್ತಾರೆ". ಆದರೂ ಕೆಲವು ಜನರು "ಡ್ಹಾನ್[31] ಅನ್ನು ಮಾಡಲು ಔಷದೀಯ ಸಸ್ಯಗಳಿಂದ ಕೂಡಿದ ದೈಹಿಕ ಕುಲುಮೆ ಮತ್ತು ಭಟ್ಟಿಯನ್ನು ಸ್ಥಾಪಿಸುವ"[32] ಮತ್ತಿತರ ಮಾನಸಿಕ ಚಟುವಟಿಕೆಗಳ ಕುರಿತು ಮಾತನಾಡುತ್ತಾರೆ. ಮತ್ತು ಇದನ್ನು ಬಹಳ ಮಹತ್ವದ್ದೆಂದು ಬಾವಿಸುತ್ತಾರೆ. ನಾನು ಹೇಳುತ್ತೇನೆ ಇವೆಲ್ಲವೂ ಮುಖ್ಯವಾದುದೇ ಅಲ್ಲ. ಮತ್ತು ಅವರನ್ನು ಕುರಿತು ಯೋಚಿಸುವುದೂ ಕೂಡ ಒಂದು ಮೋಹವೇ ಆಗುತ್ತದೆ. ನೀವು ಅತಿಯಾಗಿ ಈ ಬಗ್ಗೆ ಚಿಂತಿಸಿದರೆ ನೀವು ಅತಿ ಬಯಕೆಯ ಮೋಹಕ್ಕೆ ಬಲಿಯಾದಂತಲ್ಲವೇ? ಸಾಧನೆಯು ಒಬ್ಬರ ಸ್ವಂತ ಪರಿಶ್ರಮವನ್ನು ಅವಲಂಬಿಸಿದರೆ ಗಾಂಗ್‌ನ ಪರಿವರ್ತನೆಯು ಒಬ್ಬರ ಗುರುಗಳಿಂದ ಮಾಡಲ್ಪಡುತ್ತದೆ. ಈ ಕುರಿತು ಬಯಕೆ ಇದ್ದರೆ ಅಷ್ಟೇ ಸಾಕು. ನೀವು ಇದನ್ನು ಮಾಡಲು ಅಸಾಧ್ಯವಾದ ಕಾರಣ ಗರುಗಳೇ ನಿಜವಾಗಿ ಇದನ್ನು ಮಾಡುವುದು. ನಿಮ್ಮಂತಹ ಈ ಸಾಮಾನ್ಯ ಮಾನವ ದೇಹವನ್ನಿಟ್ಟುಕೊಂಡು ನೀವು ಅದನ್ನು ಹೇಗೆ ತಾನೇ ಉನ್ನತ ಜೀವದ ಶರೀರದ ಉನ್ನತ ಶಕ್ತಿ ಕಣಗಳಾಗಿ ಮಾರ್ಪಡಿಸಬಲ್ಲಿರಿ? ಇದು ಖಂಡಿತವಾಗಿಯೂ ಅಸಾಧ್ಯವಾದುದು ಮತ್ತು ಒಂದು ತಮಾಷೆಯ ರೀತಿ ಅನಿಸುತ್ತದೆ. ಈ ಮಾನವ ದೇಹದ, ಇತರ ಪರಿಮಾಣಗಳಲ್ಲಿನ ಮಾರ್ಪಾಡು ಪ್ರಕ್ರಿಯೆಯು ಅತ್ಯಂತ ತೊಡಕಿನ ಮತ್ತು ಸಂಕೀರ್ಣವಾದುದು, ನೀವು ಇಂಥಹದ್ದನ್ನು ಮಾಡಲು ಸಾಧ್ಯವೇ ಇಲ್ಲ?

ಗುರುಗಳು ನಿಮಗಾಗಿ ಏನನ್ನು ಕೊಡುತ್ತಾರೆ? ಆತ ನಿಮಗೆ ನಿಮ್ಮ ಗಾಂಗ್‌ನ ಅಭಿವೃದ್ಧಿಗಾಗಿ ಗಾಂಗ್ ಯಾಂತ್ರಿಕ ಸಂರಚನೆಯನ್ನು ನೀಡುತ್ತಾರೆ. ಡ್ಹಾ ಒಬ್ಬರ ದೇಹದ ಹೊರಗೆ ಅಸ್ತಿತ್ವದಲ್ಲಿರುವುದರಿಂದ ಒಬ್ಬರ ನಿಜ ಗಾಂಗ್ ಈ ಡ್ಹಾ ದಿಂದಲೇ ಉತ್ಪಾದಿಸಲ್ಪಡುತ್ತದೆ. ಒಬ್ಬರ ಮಟ್ಟದ ಎತ್ತರ ಮತ್ತು ಒಬ್ಬರ ಗಾಂಗ್ ಸಾಮರ್ಥ್ಯದ ಶಕ್ತಿ ಎಲ್ಲವೂ ಡ್ಹಾ ದಿಂದಲೇ ಉತ್ಪಾದಿಸಲ್ಪಡುತ್ತದೆ. ಗುರುಗಳು ನಿಮ್ಮ ಗಾಂಗ್ ಅನ್ನು ಡ್ಹಾ ದಿಂದ ಪರಿವರ್ತಿಸುತ್ತಾರೆ. ಮತ್ತಿದು ಸುರುಳಿ ರೂಪದಲ್ಲಿ ಮೇಲಕ್ಕೆ ಬೆಳೆಯುತ್ತದೆ. ಒಬ್ಬರ ಮಟ್ಟವನ್ನು ನಿಜವಾಗಿ ನಿರ್ಧರಿಸುವ ಗಾಂಗ್ ಒಬ್ಬರ ದೇಹದ ಹೊರಗೆ ಬೆಳೆಯುತ್ತದೆ ಮತ್ತದು ಸುರುಳಿ ರೂಪದಲ್ಲಿ ಬೆಳೆಯುತ್ತದೆ, ತದನಂತರ ಒಬ್ಬರ ತಲೆಯ ಮೇಲಕ್ಕೆ ಬೆಳೆದಾಗ ಗಾಂಗ್ ಕಂಬದ ರೀತಿಯಲ್ಲಿ ಆಗುತ್ತದೆ. ಈ ವ್ಯಕ್ತಿಯ ಗಾಂಗ್ ಕಂಬದ ಎತ್ತರದ ಮೇಲೆ ಒಂದು ದೃಷ್ಟಿ ಹಾಯಿಸಿದ ಕೂಡಲೇ ಆತನ ಗಾಂಗ್‌ನ ಮಟ್ಟವನ್ನು ಅಳೆಯಬಹುದು. ಇದುವೇ ಬೌದ್ಧ ಧರ್ಮದಲ್ಲಿ ಹೇಳಿರುವಂತಹ ಒಬ್ಬರ ಮಟ್ಟ ಮತ್ತು ಫಲ ಪದವಿ.

---

31. **ಡ್ಹಾನ್** – ಸಾಧಕನ ದೇಹದಲ್ಲಿರುವ ಬೇರೆ ಪರಿಣಾಮಗಳಲ್ಲಿ ಶೇಖರಿತವಾಗಿರುವ ಶಕ್ತಿ ಗೊಂಚಲು

32. "ಡ್ಹಾನ್ ಅನ್ನು ಮಾಡಲು ಔಷದೀಯ ಸಸ್ಯಗಳಿಂದ ಕೂಡಿದ ದೈಹಿಕ ಕುಲುಮೆ ಮತ್ತು ಭಟ್ಟಿಯನ್ನು ಸ್ಥಾಪಿಸುವುದು" ಬಹಳ – ಆಂತರಿಕ ರಸವಿದ್ಯೆ ಕುರಿತ ತಾವೋ ರೂಪಕ

ಧ್ಯಾನದಲ್ಲಿ ಕುಳಿತಿರುವ ವೇಳೆ ಕೆಲವು ಜನರ ಪೂರ್ವದ ಜೀವಾತ್ಮವು ಅವರ ದೇಹವನ್ನು ಬಿಟ್ಟು ಒಂದು ನಿರ್ದಿಷ್ಟ ಮಟ್ಟವನ್ನು ತಲುಪಬಹುದು. ಆತನ ಪೂರ್ವದ ಜೀವಾತ್ಮವು ಎಷ್ಟೇ ಪ್ರಯತ್ನಿಸಿದರೂ ಕೂಡ ಅದಕ್ಕೂ ಮೇಲಕ್ಕೆ ಹೋಗಲು ಆಗುವುದಿಲ್ಲ ಮತ್ತು ಅದು ಇನ್ನೂ ಮೇಲಕ್ಕೆ ಹೋಗಲು ಧೈರ್ಯವನ್ನೂ ಮಾಡುವುದಿಲ್ಲ. ಅದು ಆತನ ಗಾಂಗ್ ಕಂಬದ ಮೇಲೆ ಕುಳಿತು ಮೇಲೇರುವುದರಿಂದ ಅದಕ್ಕೆ ಆ ಮಟ್ಟವನ್ನಷ್ಟೇ ತಲುಪಲು ಸಾಧ್ಯ. ಆತನ ಗಾಂಗ್ ಕಂಬ ಕೇವಲ ಅಷ್ಟು ಎತ್ತರವಾಗಿರುವುದರಿಂದ ಅದಕ್ಕೆ ಇನ್ನೂ ಮೇಲಕ್ಕೇರಲು ಸಾಧ್ಯವಾಗುವುದಿಲ್ಲ. ಇದು ಬೌದ್ಧಧರ್ಮದಲ್ಲಿ ಪ್ರತಿಪಾದಿಸುವ ಫಲಪದವಿಯೇ ಆಗಿದೆ.

ಷಿನ್‌ಷಿಂಗ್ ಮಟ್ಟವನ್ನು ಅಳೆಯಲು ಸಹ ಒಂದು ಅಳತೆಗೋಲು ಇದೆ. ಈ ಅಳತೆಗೋಲು ಮತ್ತು ಗಾಂಗ್ ಕಂಬ ಎರಡೂ ಒಂದೇ ಪರಿಮಾಣದಲ್ಲಿ ಅಸ್ತಿತ್ವದಲ್ಲಿರುವುದಿಲ್ಲವಾದರೂ ಎರಡೂ ಸಮಕಾಲೀನವಾಗಿಯೇ ಇರುತ್ತದೆ. ನಿಮ್ಮ ಷಿನ್‌ಷಿಂಗ್ ಕೃಷಿ ಆಗಲೇ ಪ್ರಗತಿಯನ್ನು ಸಾಧಿಸಿದೆ ಎಂದೇ ಅರ್ಥ, ಉದಾಹರಣೆಗೆ ಸಾಮಾನ್ಯ ದಿನನಿತ್ಯದ ಜನರ ನಡುವೆ ಯಾರಾದರೂ ನಿಮ್ಮನ್ನು ಬೈದಾಗ ನೀವು ತಿರುಗಿ ಒಂದು ಪದವನ್ನೂ ಹೇಳದೆ, ಶಾಂತವಾಗಿ ಇದ್ದರೆ; ಅಥವ ಯಾರಾದರೂ ನಿಮ್ಮ ಮೇಲೆ ಕೈಮಾಡಲು ಬಂದರೆ, ಆಗಲೂ ನೀವು ಏನೂ ಮಾತನಾಡದೆ ಹಾಗೆ ಒಂದು ಮುಗುಳ್ನಗೆಯಲ್ಲಿ ಎಲ್ಲವನ್ನೂ ಮರೆತರೆ ನಿಮ್ಮ ಷಿನ್‌ಷಿಂಗ್ ಆಗಲೇ ಬಹಳ ಪ್ರಗತಿಯಾಗಿದೆ ಎಂದೇ ಅರ್ಥ. ಹಾಗಾಗಿ ಅಭ್ಯಾಸಿಗರಾಗಿ ನೀವು ಏನನ್ನು ಪಡೆಯಬೇಕು ? ನೀವು ಗಾಂಗ್ ಅನ್ನು ಪಡೆಯುತ್ತೀರಲ್ಲವೇ? ನಿಮ್ಮ ಷಿನ್‌ಷಿಂಗ್ ಉನ್ನತೀಕರಿಸಿದಂತೆ ನಿಮ್ಮ ಗಾಂಗ್ ಕೂಡ ವೃದ್ಧಿಸುತ್ತದೆ. ಒಬ್ಬರ ಗಾಂಗ್ ಮಟ್ಟವು ಅವರ ಷಿನ್‌ಷಿಂಗ್ ಮಟ್ಟದಷ್ಟೇ ಎತ್ತರವಿರುತ್ತದೆ ಮತ್ತು ಇದು ನಿಶ್ಚಿತವಾದ ಸತ್ಯ. ಹಿಂದೆ, ಜನರು ಚೀಗಾಂಗ್‌ನ್ನು ಮನೆಯಲ್ಲೇ ಅಥವ ಉದ್ಯಾನವನದಲ್ಲೇ ಅಭ್ಯಾಸ ಮಾಡಿದರೂ ಬಹಳ ಪರಿಶ್ರಮ ಮತ್ತು ನಿಷ್ಠೆಯಿಂದ ಮಾಡುತ್ತಿದ್ದರು ಮತ್ತು ಅಭ್ಯಾಸವನ್ನು ಚೆನ್ನಾಗಿ ಮಾಡುತ್ತಿದ್ದರು. ಒಮ್ಮೆ ಹೊರಗೆ ಕಾಲಿಟ್ಟ ಕೂಡಲೇ ಅವರು ಬೇರೆ ತರಹವೇ ವರ್ತಿಸುತ್ತಿದ್ದರು. ಮತ್ತು ಸಾಮಾನ್ಯ ದಿನನಿತ್ಯದ ಜನರ ನಡುವೆ ಖ್ಯಾತಿ ಮತ್ತು ಲಾಭಕ್ಕಾಗಿ ಪೈಪೋಟಿ ಮತ್ತು ಹೋರಾಟ ಮಾಡುತ್ತಾ ತಮ್ಮದೇ ದಾರಿಯಲ್ಲಿ ನಡೆಯುತ್ತಿದ್ದರು. ಅವರು ಗಾಂಗ್ ಅನ್ನು ಹೇಗೆ ವೃದ್ಧಿಸಬಲ್ಲರು? ಅದು ಯಾವತ್ತಿಗೂ ವೃದ್ಧಿಸುವುದೇ ಇಲ್ಲ ಮತ್ತು ಇದೇ ಕಾರಣಕ್ಕಾಗಿ ಅವರ ರೋಗಗಳೂ ಕೂಡ ಗುಣಹೊಂದುತ್ತಿರಲಿಲ್ಲ. ಏಕೆ ಹಲವಾರು ಜನರು ಬಹಳ ಕಾಲದ ಅಭ್ಯಾಸದ ನಂತರವೂ ತಮ್ಮ ರೋಗಗಳನ್ನು ಗುಣಪಡಿಸಿಕೊಳ್ಳಲು ಆಗುವುದಿಲ್ಲ? ಚೀಗಾಂಗ್ ಎಂಬುದು ಸಾಮಾನ್ಯ ದಿನನಿತ್ಯ ಜನರ ದೈಹಿಕ ವ್ಯಾಯಾಮದಂತಿರದೆ ಒಂದು ಸಾಧನೆಯ ಅಭ್ಯಾಸ ಮತ್ತು ಅಸಾಧಾರಣವಾದುದು, ಒಬ್ಬರು ರೋಗಗಳನ್ನು ಗಣಪಡಿಸಿಕೊಳ್ಳಲು ಮತ್ತು ಗಾಂಗ್ ಅನ್ನು ವೃದ್ಧಿಸಿಕೊಳ್ಳಲು ಷಿನ್‌ಷಿಂಗ್ ಬಗ್ಗೆ ಗಮನಹರಿಸಬೇಕು.

ಕೆಲವು ಜನರು ಡ್ಯಾನ್ ಅನ್ನು ಮಾಡಲು ಶೇಖರಿಸಿದ ಔಷಧೀಯ ಸಸ್ಯಗಳಿಂದ ಕೂಡಿದ ದೈಹಿಕ ಕುಲುಮೆ ಮತ್ತು ಭಟ್ಟಿಯನ್ನು ಸ್ಥಾಪಿಸುವುದನ್ನು ನಂಬುತ್ತಾರೆ ಮತ್ತು ಈ ಡ್ಯಾನ್‌ಅನ್ನೇ ಗಾಂಗ್ ಎಂದು ಭಾವಿಸುತ್ತಾರೆ. ಆದರೆ ಇದು ಅಲ್ಲ. ಈ ಡ್ಯಾನ್ ಕೇವಲ ಶಕ್ತಿಯ ಒಂದು ಭಾಗವನ್ನಷ್ಟೇ ಶೇಖರಿಸುತ್ತದೆ ಮತ್ತು ಅದು ಎಲ್ಲಾ ಶಕ್ತಿಯನ್ನು ಒಳಗೊಳ್ಳುವುದಿಲ್ಲ. ಡ್ಯಾನ್ ಯಾವ ರೀತಿಯ ವಸ್ತು? ನಮಗೂ ಕೂಡ ಜೀವನವನ್ನು ಸಾಧನಕ್ಕೊಳಪಡಿಸಲು ಇತರ ಹಲವಾರು ವಸ್ತುಗಳಿವೆ ಮತ್ತು ನಮ್ಮ ದೇಹವು ಅಸಾಧಾರಣ ಸಾಮರ್ಥ್ಯಗಳನ್ನು ಮತ್ತು ಇತರ ಹಲವಾರು ಶಕ್ತಿಗಳನ್ನು ಬೆಳೆಸಿಕೊಳ್ಳುತ್ತದೆ ಎಂಬುದು ತಿಳಿದಿರುವ ವಿಷಯವೇ ಆಗಿದೆ ; ಇದರಲ್ಲಿ ಬಹುಭಾಗವು ಬಂಧಿಸಲ್ಪಟ್ಟಿರುತ್ತದೆ ಮತ್ತು ಅವುಗ್‌ಳನ್ನು ಉಪಯೋಗಿಸಲು ಬಿಡಲಾಗುವುದಿಲ್ಲ. ಅಸಾಧಾರಣ ಸಾಮರ್ಥ್ಯಗಳು ಬಹಳಷ್ಟಿವೆ – ಸುಮಾರು ಹತ್ತು ಸಾವಿರಕ್ಕೂ ಅಧಿಕವಾಗಿದೆ. ಒಂದು ಅಭಿವೃದ್ಧಿಗೊಂಡ ಕೂಡಲೇ ಅದನ್ನು ಬಂಧಿಸಲಾಗುವುದು, ಅವನ್ನು ಪ್ರದರ್ಶಿಸಲು ಏಕೆ ಅವಕಾಶವಿಲ್ಲ? ಇದರ ಉದ್ದೇಶ ನೀವು ಈ ಸಾಮಾನ್ಯ ಮಾನವ ಸಮಾಜದಲ್ಲಿ ಏನಾದರೂ ಮಾಡುವುದಕ್ಕಾಗಿ ಅದನ್ನು ನಿರ್ಬಂಧವಿಲ್ಲದೆ ಬಳಸಲು ಬಿಡಬಾರದು ಎಂಬುದಾಗಿದೆ. ಸಾಮಾನ್ಯ ಮಾನವ ಸಮಾಜವನ್ನು ನೀವು ಮನಬಂದಂತೆ ಕದಡಲು ಬಿಡುವುದಿಲ್ಲ ಮತ್ತು ಸಾಮಾನ್ಯ ಮಾನವ ಸಮಾಜದಲ್ಲಿ ನೀವು ಮನಸ್ಸಿಗೆ ಬಂದಂತೆ ನಿಮ್ಮ ಸಾಮರ್ಥ್ಯಗಳನ್ನು ಪ್ರದರ್ಶಿಸಲೂ ಕೂಡ ಬಿಡಲಾಗುವುದಿಲ್ಲ. ಇದೇಕೆಂದರೆ ಹಾಗೆ ಮಾಡುವುದರಿಂದ ಸಾಮಾನ್ಯ ಮಾನವ ಸಮಾಜದ ಸ್ಥಿತಿಯು ಕದಡಬಹದು. ಬಹಳಷ್ಟು ಜನರು

ಜ್ಞಾನೋದಯದಿಂದ ಸಾಧನೆಯ ಅಭ್ಯಾಸವನ್ನು ಕೈಗೊಳ್ಳುತ್ತಾರೆ. ನೀವು ನಿಮ್ಮೆಲ್ಲಾ ಶಕ್ತಿಗಳನ್ನು ಅವರೆದುರು ಪ್ರದರ್ಶಿಸಿದರೆ, ಅವರು ಅದರ ನೈಜತೆಯನ್ನು ನೋಡಿ ಅವರೂ ಸಾಧನೆಯ ಅಭ್ಯಾಸವನ್ನು ಮಾಡಲು ಬರುತ್ತಾರೆ. ಕ್ಷಮೆಯಿಲ್ಲದ ದುಷ್ಟಕೃತ್ಯಗಳನ್ನು ಎಸಗಿದವರೆಲ್ಲರೂ ಕೂಡ ಸಾಧನೆಯ ಅಭ್ಯಾಸ ಮಾಡಲು ಬರುತ್ತಾರೆ ಮತ್ತು ಇದು ನಿಷೇಧಿಸಲಾಗಿದೆ. ನೀವು ಈ ರೀತಿಯಾಗಿ ಪ್ರದರ್ಶಿಸಲು ಅವಕಾಶವಿಲ್ಲ. ಅಲ್ಲದೆ ನೀವು ಪೂರ್ವ ಪ್ರಾರಬ್ಧ ವಿಧಿ ಮತ್ತು ಹಲವಾರು ಸಂಗತಿಗಳ ನೈಜ ಗುಣಗಳನ್ನು ಕಾಣಲಾರದ್ದರಿಂದ ನೀವು ಅತಿ ಸುಲಭವಾಗಿ ತಪ್ಪಾದ ಕೆಲಸಗಳನ್ನು ಮಾಡಬಹುದು. ನೀವು ಒಳ್ಳೆಯ ಕೆಲಸ ಮಾಡುತ್ತಿದ್ದೇನೆಂದು ಭಾವಿಸಬಹುದು ಆದರದು ಕೆಟ್ಟ ಕೆಲಸವಾಗಿರಬಹುದು, ಆದ್ದರಿಂದ, ನೀವದನ್ನು ಉಪಯೋಗಿಸುವುದಕ್ಕೆ ಬಿಡುವುದಿಲ್ಲ, ಏಕೆಂದರೆ ಒಮ್ಮೆ ನೀವು ಕೆಟ್ಟಕೆಲಸವನ್ನು ಮಾಡಿದರೆ ನಿಮ್ಮ ಮಟ್ಟವು ಇಳಿಯುತ್ತದೆ ಮತ್ತು ನಿಮ್ಮ ಸಾಧನೆಯು ವ್ಯರ್ಥವಾಗುತ್ತದೆ. ಈ ಕಾರಣದಿಂದ, ಹಲವಾರು ಅಸಾಮಾನ್ಯ ಶಕ್ತಿಗಳು ಬಂಧಿತವಾಗಿರುತ್ತದೆ. ಮತ್ತೇನಾಗುತ್ತದೆ ? ನೀವು ಗಾಂಗ್‌ನ ಬಿಡುಗಡೆ (ಕಾಯ್‌ಗಾಂಗ್)ನ ಸ್ಥಿತಿ ತಲುಪಿ ಜ್ಞಾನೋದಯ ಹೊಂದುವ ಸಮಯವನ್ನು ತಲುಪಿದಾಗ, ಈ ಡ್ಯಾನ್ ಬಾಂಬಿನ ತರಹ ಆಸ್ಫೋಟಿಸುತ್ತದೆ ಮತ್ತು ಎಲ್ಲಾ ಅಸಾಧಾರಣ ಶಕ್ತಿಗಳನ್ನು ತೆಗೆಯುತ್ತದೆ, ದೇಹದ ಎಲ್ಲಾ ಬಂಧನಗಳು ಮತ್ತು ನೂರಾರು ಶಕ್ತಿ ಸಂದುಗಳು ತೆರೆದುಕೊಳ್ಳುತ್ತವೆ. "ಬ್ಯಾಂಗ್" ಎಲ್ಲವೂ ಕೂಡ ನಡುಗುತ್ತಾ ಅನಾವರಣಗೊಳ್ಳುತ್ತದೆ. ಡ್ಯಾನ್‌ಅನ್ನು ಇದಕ್ಕಾಗಿ ಉಪಯೋಗಿಸಲಾಗುತ್ತದೆ. ಒಬ್ಬ ಸಂತನ ಮರಣಾನಂತರ ಅಂತ್ಯಕ್ರಿಯೆ ಆದಾಗಲೂ ಈ *ಶರೀರ* ಉಳಿದುಕೊಳ್ಳುತ್ತದೆ. ಕೆಲವು ಜನರು ಇದನ್ನು ಮೂಳೆ ಮತ್ತು ಹಲ್ಲುಗಳೆಂದು ಪ್ರತಿಪಾದಿಸುತ್ತಾರೆ. ದಿನನಿತ್ಯದ ಜನರು ಏಕೆ ಈ ಶರೀರವನ್ನು ಹೊಂದಿರುವುದಿಲ್ಲ? ಅವು ಕೇವಲ ಆಸ್ಫೋಟಗೊಂಡ ಡ್ಯಾನ್ ಮಾತ್ರ ಮತ್ತು ಅದರ ಶಕ್ತಿಯು ಬಿಡುಗಡೆಗೊಳ್ಳಬೇಕು. ಅವು ತಮ್ಮಲ್ಲೇ ಇತರ ಪರಿಮಾಣಗಳಲ್ಲಿರುವ ಅನೇಕ ವಸ್ತುಗಳನ್ನು ಹೊಂದಿರುತ್ತದೆ. ಅವೂ ಕೂಡ ವಾಸ್ತವಿಕ ಅಸ್ತಿತ್ವದಲ್ಲಿರುವಂಥಹುದೇ ಆದರೂ ಅವುಗಳ ಉಪಯೋಗ ಕಡಿಮೆಯೇ, ಅವು ಶಕ್ತಿಯನ್ನು ಹೊಂದಿರುತ್ತವೆ ಮತ್ತು ಹೊಳಪುಳ್ಳದ್ದಾಗಿರುತ್ತದೆ, ಹಾಗೆಯೇ ಬಹಳ ಗಟ್ಟಿಯಾಗಿಯೂ ಇರುತ್ತದೆ. ಅವು ಹೀಗೇ ಇರುತ್ತದೆ.

ಗಾಂಗ್‌ಅನ್ನು ವೃದ್ಧಿಸಲು ವಿಫಲವಾಗುವುದಕ್ಕೆ ಇನ್ನೂ ಒಂದು ಕಾರಣವಿದೆ. ಅರ್ಥಾತ್, ಉನ್ನತ ಮಟ್ಟದ ಫಾ ದ ಕುರಿತು ಜ್ಞಾನವಿಲ್ಲದೆ ಒಬ್ಬರು ಸಾಧನೆಯ ಅಭ್ಯಾಸದಲ್ಲಿ ಮುಂದುವರೆಯಲು ಸಾಧ್ಯವಿಲ್ಲ. ಇದರರ್ಥವೇನು ? ನಾನು ಈಗಷ್ಟೇ ಹೇಳಿದಂತೆ ಕೆಲವು ಜನರು ಬಹಳಷ್ಟು ಚೀಗಾಂಗ್ ವ್ಯಾಯಾಮಗಳನ್ನು ಅಭ್ಯಸಿಸಿರುತ್ತಾರೆ. ನಾನು ಹೇಳುತ್ತೇನೆ, ನೀವು ಇಂಥವುಗಳನ್ನು ಇನ್ನೂ ಹೆಚ್ಚು ಹೆಚ್ಚು ಓದಿದರೂ ಕೂಡ ಯಾವುದೇ ಉಪಯೋಗವಿಲ್ಲ. ನೀವು ಕೇವಲ ಪ್ರಾಥಮಿಕ ಶಾಲಾ ವಿದ್ಯಾರ್ಥಿಯೇ ಆಗಿ ಉಳಿಯುತ್ತೀರಿ – ಸಾಧನೆಯ ಅಭ್ಯಾಸದಲ್ಲಿ ಒಬ್ಬ ಪ್ರಾಥಮಿಕ ಶಾಲಾ ವಿದ್ಯಾರ್ಥಿ, ಅವೆಲ್ಲವೂ ತಳಮಟ್ಟದ ತತ್ವಗಳು, ಇಂತಹ ತಳಮಟ್ಟದ ತತ್ವಗಳಿಂದ ನಿಮ್ಮ ಉನ್ನತ ಮಟ್ಟದ ಸಾಧನೆಯ ಅಭ್ಯಾಸದಲ್ಲಿ ಮಾರ್ಗದರ್ಶನ ಪಾತ್ರ ಏನೂ ಇಲ್ಲ. ನೀವು ಕಾಲೇಜಿನಲ್ಲಿ ಪ್ರಾಥಮಿಕ ಶಾಲಾ ಪಠ್ಯಪುಸ್ತಕಗಳನ್ನು ಓದಿದರೆ ನೀವು ಪ್ರಾಥಮಿಕ ಶಾಲಾ ವಿದ್ಯಾರ್ಥಿಯಾಗಿಯೇ ಉಳಿಯುತ್ತೀರಿ. ನೀವು ಇವುಗಳನ್ನು ಎಷ್ಟೇ ಜಾಸ್ತಿ ಓದಿದರೂ ಯಾವುದೇ ಉಪಯೋಗವಿಲ್ಲ, ಬದಲಾಗಿ ನೀವು ಇನ್ನೂ ಹಾಳಾಗುತ್ತೀರಿ. ಭಿನ್ನಮಟ್ಟಗಳಲ್ಲಿ ಭಿನ್ನ ಫಾ ಇರುತ್ತದೆ. ಮತ್ತು ಫಾ ಭಿನ್ನಮಟ್ಟಗಳಲ್ಲಿ ಭಿನ್ನ ಮಾರ್ಗದರ್ಶಕ ಪಾತ್ರವನ್ನು ನಿರ್ವಹಿಸುತ್ತದೆ. ಆದ್ದರಿಂದ ತಳಮಟ್ಟದ ತತ್ವಗಳು ನಿಮ್ಮ ಉನ್ನತಮಟ್ಟದೆಡೆಗಿನ ಸಾಧನೆಯ ಅಭ್ಯಾಸಕ್ಕೆ ಮಾರ್ಗದರ್ಶನ ಕೊಡಲಾರದು. ನಾವು ಮುಂದೆ ಹೇಳುವುದೆಲ್ಲವೂ ಕೂಡ ಉನ್ನತಮಟ್ಟದೆಡೆಗೆ ಸಾಧನೆಯ ಅಭ್ಯಾಸದ ತತ್ವಗಳೇ. ನಾನು ಬೇರೆ ಬೇರೆ ಮಟ್ಟದ ವಿಷಯಗಳನ್ನು ನನ್ನ ಬೋಧನೆಯಲ್ಲಿ ಅಳವಡಿಸಿಕೊಳ್ಳುತ್ತೇನೆ. ಆದ್ದರಿಂದ ಅವು ನಿಮ್ಮ ಭವಿಷ್ಯದ ಸಾಧನೆಯ ಅಭ್ಯಾಸದಲ್ಲಿ ಯಾವಾಗಲೂ ಕೂಡ ಮಾರ್ಗದರ್ಶಕ ಪಾತ್ರವನ್ನು ನಿರ್ವಹಿಸುತ್ತದೆ. ನನ್ನಲ್ಲಿ ಹಲವಾರು ಪುಸ್ತಕಗಳು, ಆಡಿಯೋ ಟೇಪು ಮತ್ತು ವೀಡಿಯೋ ಟೇಪುಗಳಿವೆ. ಒಮ್ಮೆ ಅವುಗಳನ್ನು ನೋಡಿ ಮತ್ತು ಕೇಳಿ ಸ್ವಲ್ಪ ಸಮಯದ ನಂತರ ಪುನಃ ನೋಡಿ ಮತ್ತು ಕೇಳಿದರೆ ಆಗಲೂ ಕೂಡ ಅದು ಮಾರ್ಗದರ್ಶನ ಮಾಡುತ್ತದೆ ಎಂದು ನೀವು ಗಮನಿಸುತ್ತೀರಿ. ನೀವೂ ಕೂಡ ನಿರಂತರವಾಗಿ ನಿಮ್ಮನ್ನು ನೀವು ಉನ್ನತೀಕರಿಸಿಕೊಳ್ಳುತ್ತೀರಿ ಮತ್ತು ಅದು ನಿಮ್ಮನ್ನು ನಿರಂತರವಾಗಿ ಮಾರ್ಗದರ್ಶನ ಮಾಡುತ್ತಲೇ ಇರುತ್ತದೆ – ಇದುವೇ ಫಾ. ಗಾಂಗ್‌ನ್ನು ವೃದ್ಧಿಸದಿರುವುದಕ್ಕೆ ಮೇಲೆ

ಹೇಳಿದಂತೆ ಎರಡು ಕಾರಣಗಳಿವೆ. ಉನ್ನತಮಟ್ಟದೆಡೆಗಿನ ಫಾ ವನ್ನು ಅರಿಯದೆ ಒಬ್ಬರು ಸಾಧನೆಯ ಅಭ್ಯಾಸವನ್ನು ಮಾಡಲಿಕ್ಕಾಗುವುದಿಲ್ಲ. ಒಬ್ಬರು ತಮ್ಮ ಆಂತರಿಕ ಪ್ರಜ್ಞೆಯನ್ನು ಮತ್ತು ಷಿನ್‌ಷಿಂಗ್‌ನ್ನು ಕೃಷಿಮಾಡದೆ ಒಬ್ಬರ ಗಾಂಗ್ ನ್ನು ವೃದ್ಧಿಸಲಾಗುವುದಿಲ್ಲ. ಇವೇ ಆ ಎರಡು ಕಾರಣಗಳು.

**ಫಾಲೂನ್ ದಾಫಾದ ವೈಶಿಷ್ಟ್ಯಗಳು**

ನಮ್ಮ ಪಾಲೂನ್ ದಾಫಾ ಬುದ್ಧ ಶಾಲೆಯ ಎಂಭತ್ತನಾಲ್ಕು ಸಾವಿರ ಸಾಧನೆಯ ಹಾದಿಗಳಲ್ಲಿ ಒಂದು. ಮಾನವ ನಾಗರೀಕತೆಯ ಐತಿಹಾಸಿಕ ಕಾಲಘಟ್ಟದಲ್ಲಿ ಇದನ್ನು ಎಂದೂ ಸಾರ್ವಜನಿಕ ಗೊಳಿಸಿರಲಿಲ್ಲ. ಇತಿಹಾಸಪೂರ್ವ ಕಾಲಘಟ್ಟದಲ್ಲಿ ಒಮ್ಮೆ ಮಾತ್ರ ಅದನ್ನು ಮಾನವ ಕುಲಕ್ಕೆ ಮೋಕ್ಷ ದಯಪಾಲಿಸಲು ವಿಸ್ತಾರವಾಗಿಬಳಸಲಾಯಿತು. ಈ ಕಡೆಯ ಪ್ರಳಯ[33] ದ ಅಂತಿಮ ಕಾಲಘಟ್ಟದಲ್ಲಿ ನಾನು ಇದನ್ನು ಮತ್ತೊಮ್ಮೆ ಸಾರ್ವಜನಿಕಗೊಳಿಸುತ್ತಿದ್ದೇನೆ. ಆದ್ದರಿಂದ ಇದು ಅತ್ಯಂತ ಅಮೂಲ್ಯ ವಾದುದು. ನಾನು ಡ್ಡಾ ವನ್ನು ಗಾಂಗ್‌ಗೆ ಮಾರ್ಪಡಿಸುವ ಸ್ವರೂಪದ ಕುರಿತು ಮಾತನಾಡಿದ್ದೇನೆ. ನಿಜವೆಂದರೆ ಗಾಂಗ್ ಅನ್ನು ಅಭ್ಯಾಸದ ಮೂಲಕ ಪಡೆಯುವಂಥದ್ದಲ್ಲ. ಅದು ಸಾಧನೆಯ ಮೂಲಕ ಪಡೆಯುವಂಥಹದ್ದು. ಬಹಳಷ್ಟು ಜನರು ತಮ್ಮ ಗಾಂಗ್ ಅನ್ನು ವೃದ್ಧಿಸಿಕೊಳ್ಳಲು ಪ್ರಯತ್ನಿಸುತ್ತಾರೆ ಮತ್ತು ಇದಕ್ಕಾಗಿ ಹೇಗೆ ಅಭ್ಯಸಿಸಬೇಕು ಎನ್ನುವುದರ ಬಗ್ಗೆ ಮಾತ್ರ ಗಮನ ಹರಿಸುತ್ತಾರೆ, ಮತ್ತು ಸಾಧನೆಯ ಕುರಿತು ಯಾವುದೇ ಗಮನ ಹರಿಸುವುದಿಲ್ಲ. ನಿಜವೆಂದರೆ ಗಾಂಗ್ ಸಂಪೂರ್ಣವಾಗಿ ಷಿನ್‌ಷಿಂಗ್ ಕೃಷಿಯ ಮೂಲಕ ದೊರೆಯುವಂತಹುದು. ಹಾಗಾದರೆ ಇಲ್ಲಿ ವ್ಯಾಯಾಮಗಳನ್ನು ನಾವು ಏಕೆ ಹೇಳಿಕೊಡುತ್ತೇವೆ? ಮೊದಲಿಗೆ, ಸನ್ಯಾಸಿಗಳು ಏಕೆ ಯಾವುದೇ ವ್ಯಾಯಾಮ ಅಭ್ಯಾಸಗಳನ್ನು ಮಾಡುವುದಿಲ್ಲ ಎಂಬುದರ ಕುರಿತು ನಾನು ಹೇಳುತ್ತೇನೆ. ಆತ ಪರವಶನಾಗಿ ಕುಳಿತುಕೊಳ್ಳುತ್ತಾನೆ. ಗ್ರಂಥಗಳನ್ನು ಪಠಿಸುತ್ತಾನೆ, ಷಿನ್‌ಷಿಂಗ್ ಕೃಷಿ ಮಾಡುತ್ತಾನೆ ಮತ್ತು ಆತನ ಗಾಂಗ್ ವೃದ್ಧಿಸುತ್ತದೆ. ಆತ ತನ್ನ ಮಟ್ಟವನ್ನು ಉನ್ನತೀಕರಿಸುವ ಗಾಂಗ್ ಅನ್ನು ವೃದ್ಧಿಸುತ್ತಾನೆ. ಸಾಕ್ಯಮುನಿಗಳು ಈ ಜನರಿಗೆ ಈ ಜಗತ್ತಿನಲ್ಲಿ ಎಲ್ಲವನ್ನು ತ್ಯಜಿಸಲು ಬೋಧಿಸಿದ್ದರಿಂದ – ತಮ್ಮ ದೇಹವನ್ನೂ ಒಳಗೊಂಡಂತೆ, ದೈಹಿಕ ವ್ಯಾಯಾಮಗಳ ಅವಶ್ಯಕತೆಯೇ ಇರಲಿಲ್ಲ. ತಾವೋ ಶಾಲೆ ಎಲ್ಲಾ ಜೀವಿಗಳಿಗೂ ಮೋಕ್ಷವನ್ನು ದಯಪಾಲಿಸುವುದಿಲ್ಲ. ಅದು ವಿವಿಧ ಮನೋಭಾವ ಮತ್ತು ಮಟ್ಟದ ಎಲ್ಲಾ ರೀತಿಯ ಜನರನ್ನು , ಕೆಲವರು ಅತೀ ಸ್ವಾರ್ಥಿಗಳು ಮತ್ತು ಇನ್ನೂ ಕೆಲವರು ಕಡಿಮೆ ಸ್ವಾರ್ಥಿಗಳು. ಇದು ತನ್ನ ಶಿಷ್ಯರನ್ನು ತಾನೇ ಆಯ್ದುಕೊಳ್ಳುತ್ತದೆ. ಮೂರು ಜನ ಶಿಷ್ಯರು ಆಯ್ಕೆಗೊಂಡರೆ ಒಬ್ಬನೇ ಒಬ್ಬನಿಗೆ ಮಾತ್ರ ನಿಜವಾದ ಬೋಧನೆ ದೊರೆಯುತ್ತದೆ. ಹಾಗಾಗಿ ಅದು ಈ ಶಿಷ್ಯ ಬಹಳ ಸಾತ್ವಿಕ, ಬಹಳ ಒಳ್ಳೆಯವನಾಗಿ ಮತ್ತು ಅಡ್ಡಹಾದಿಗೆ ಹೋಗದಂತೆ ಎಚ್ಚರವಹಿಸಬೇಕಾಗುತ್ತದೆ. ಆದ್ದರಿಂದ ಅದು ಜೀವನವನ್ನು ಸಾಧನೆಗೈಯ್ಯಲು ಕೆಲವು ತಾಂತ್ರಿಕ ವಿಷಯಗಳನ್ನು ಬೋಧಿಸಲು ಮತ್ತು ಅಸಾಮಾನ್ಯ ಶಕ್ತಿ ತಂತ್ರ ಮುಂತಾದುವುಗಳ ಅಭ್ಯಾಸವನ್ನು ಒತ್ತಿ ಹೇಳುತ್ತದೆ. ಇದು ಕೆಲವು ದೈಹಿಕ ವ್ಯಾಯಾಮಗಳನ್ನು ಬಯಸುತ್ತದೆ.

ಫಾಲೂನ್ ದಾಫಾ ಕೂಡ ದೇಹ ಮತ್ತು ಮನಸ್ಸುಗಳ ಸಾಧನೆಯ ಅಭ್ಯಾಸ. ಮತ್ತು ಅದು ವ್ಯಾಯಾಮಗಳನ್ನು ಹೊಂದಿದೆ. ಒಂದು ಕೈಯ್ಯಲ್ಲಿ ವ್ಯಾಯಾಮವು ಅಸಾಮಾನ್ಯ ಶಕ್ತಿಗಳನ್ನು ಶಕ್ತಿಯುತಗೊಳಿಸಲು ಬಳಸಲಾಗುತ್ತದೆ. "ಶಕ್ತಿಯುತಗೊಳಿಸುವುದು " ಎಂದರೇನು ? ಇದು ನಿಮ್ಮ ಅಸಾಮಾನ್ಯ ಶಕ್ತಿಗಳನ್ನು ನಿಮ್ಮ ಪ್ರಬಲ ಗಾಂಗ್ ಸಾಮರ್ಥ್ಯದ ಮೂಲಕ ಬೆಂಬಲಕೊಡುವುದು, ಆ ಮೂಲಕ ಅವನ್ನು ಕ್ರಮೇಣ ಬಲಯುಕ್ತಗೊಳಿಸುವುದು. ಇನ್ನೊಂದು ಕೈಯ್ಯಲ್ಲಿ, ನಿಮ್ಮ ದೇಹದಲ್ಲಿ ಅನೇಕಜೀವಿಗಳನ್ನೂಕೂಡ ಅಭಿವೃದ್ಧಿಗೊಳಿಸಬೇಕಾಗುತ್ತದೆ.

---

**೩೩. ಕಡೆಯ ಪ್ರಳಯ** – ಸಾಧಕರ ಸಮುದಾಯದಲ್ಲಿ ವಿಶ್ವದ ವಿಕಾಸಕ್ಕೆ ಮೂರು ವೃದ್ಧಿಗಳಿದೆಯೆಂದು ಪರಿಗಣಿಸಿದೆ ( ಮೂಲ ಪ್ರಳಯ, ಮಧ್ಯಪ್ರಳಯ, ಕಡೆಯ ಪ್ರಳಯ) ಮತ್ತು ಈಗ ಕಡೆಯ ಪ್ರಳಯದ ಕೊನೆಯ ಘಳಿಗೆ.

ಉನ್ನತ ಮಟ್ಟದ ಸಾಧನೆಯ ಅಭ್ಯಾಸದಲ್ಲಿ ತಾವೋ ಶಾಲೆ ಅಮರ ಶಿಶು(ಯಾನ್ ಯಿಂಗ್) ವಿನ ಜನನವನ್ನು ಬಯಸುತ್ತದೆಯಾದರೆ,ಬುದ್ಧ ಶಾಲೆಯು ವಜ್ರದ ಅವಿನಾಶ ದೇಹವನ್ನು ಬಯಸುತ್ತದೆ. ಅಷ್ಟಲ್ಲದೆ ಹಲವಾರು ಅತಿಸಾಮಾನ್ಯ ಸಾಮರ್ಥ್ಯಗಳನ್ನೂ ಕೂಡ ಅಭಿವೃದ್ಧಿಪಡಿಸಬೇಕು. ಈ ಎಲ್ಲವನ್ನೂ ದೈಹಿಕ ವ್ಯಾಯಾಮಗಳ ಮೂಲಕ ಅಭಿವೃದ್ಧಿಪಡಿಸಲಾಗುತ್ತದೆ ಮತ್ತು ನಮ್ಮ ವ್ಯಾಯಾಮಗಳೂ ಕೂಡ ಇವುಗಳನ್ನೇ ಬೆಳೆಸುತ್ತವೆ. ದೇಹ ಮತ್ತು ಮನಸ್ಸಿನ ಸಂಪೂರ್ಣ ಸಾಧನೆಯ ಅಭ್ಯಾಸವು ಸಾಧನೆ ಮತ್ತು ಅಭ್ಯಾಸ ಎರಡನ್ನೂ ಒಳಗೊಂಡಿರಬೇಕಾಗುತ್ತದೆ. ಗಾಂಗ್, ಹೇಗೆ ಬರುತ್ತದೆ ಎಂಬುದು ಎಲ್ಲರಿಗೂ ಅರ್ಥವಾಗಿದೆ ಎಂದು ನಾನು ಭಾವಿಸುತ್ತೇನೆ. ನಿಮ್ಮ ಸಾಧನೆಯ ಮಟ್ಟವನ್ನು ನಿಜವಾಗಿಯೂ ನಿರ್ಧರಿಸುವ ಗಾಂಗ್, ಅಭ್ಯಾಸದ ಮೂಲಕ ಅಭಿವೃದ್ಧಿಗೊಳ್ಳುವುದಿಲ್ಲ ಬದಲಿಗೆ ಸಾಧನೆಯ ಮೂಲಕ ನಡೆಯುತ್ತದೆ. ನಿಮ್ಮ ಷಿನ್‌ಷಿಂಗ್ ಮಟ್ಟವನ್ನು ಅಭಿವೃದ್ಧಿಗೊಳಿಸುವುದರಿಂದ ಮತ್ತು ನಿಮ್ಮ ದಿನನಿತ್ಯದ ಜನರ ನಡುವಿನ ಸಾಧನೆಯ ಅಭ್ಯಾಸದಲ್ಲಿ ಈ ಪ್ರಪಂಚದ ವೈಶಿಷ್ಟ್ಯಗಳಿಗೆ ನೀವು ಸಮರೂಪಿಗಳಾದರೆ, ಈ ಪ್ರಪಂಚದ ವೈಶಿಷ್ಟ್ಯ ನಿಮ್ಮನ್ನು ನಿರ್ಬಂಧಿಸಲು ಹೋಗುವುದಿಲ್ಲ ; ನಂತರ ನೀವು ಮೇಲೇರಲು ಬಿಡಲಾಗುವುದು. ಆನಂತರ ನಿಮ್ಮ ಡ್ಹಾ, ಗಾಂಗ್‌ನ ಪರಿವರ್ತನೆಯನ್ನು ಶುರು ಮಾಡುತ್ತದೆ. ನಿಮ್ಮ ಷಿನ್‌ಷಿಂಗ್ ಮಟ್ಟ ಸುಧಾರಿಸಿದಂತೆ ನಿಮ್ಮ ಗಾಂಗ್ ಕೂಡ ಬೆಳೆಯುತ್ತದೆ. ಇಂತಹ ಒಂದು ಸಂಬಂಧವಿರುತ್ತದೆ.

ನಮ್ಮದು, ದೇಹ ಮತ್ತು ಮನಸ್ಸಿನ ನೈಜವಾದ ಸಾಧನೆಯ ಅಭ್ಯಾಸ . ನಾವು ಬೆಳೆಸುವ ಗಾಂಗ್ ದೇಹದ ಪ್ರತಿಯೊಂದು ಜೀವಕೋಶದಲ್ಲೂ ಶೇಖರಿಸಲ್ಪಡುತ್ತದೆ ಮತ್ತು ಈ ಉನ್ನತ ಶಕ್ತಿಯ ಕಣವುಳ್ಳ ಗಾಂಗ್‌ಗಳು ಅತ್ಯಂತ ಸೂಕ್ಷ್ಮ ಮಟ್ಟದಲ್ಲಿ ವಸ್ತುವಿನ ನೈಜ ಅತ್ಯಂತ ಸಣ್ಣ ಕಣಗಳಲ್ಲೂ ಶೇಖರಿಸಲ್ಪಡುತ್ತದೆ. ನಿಮ್ಮ ಗಾಂಗ್ ಸಾಮರ್ಥ್ಯ ಹೆಚ್ಚಿದಂತೆ ಗಾಂಗ್‌ನ ಸಾಂದ್ರತೆ ಮತ್ತು ಶಕ್ತಿ ಕೂಡ ಹೆಚ್ಚುತ್ತದೆ. ಇಂತಹ ಉನ್ನತ ಶಕ್ತಿ ಕಣಗಳಿಗೆ ಬುದ್ಧಿವಂತಿಕೆ ಇರುತ್ತದೆ. ಅದು, ಜೀವದ ಉಗಮದಿಂದ ಹಿಡಿದು ಮಾನವ ಶರೀರದ ಪ್ರತಿಯೊಂದು ಜೀವಕೋಶದಲ್ಲೂ ಶೇಖರಿಸಲ್ಪಡುವುದರಿಂದ, ಅದು ನಿಮ್ಮ ದೇಹದ ಜೀವಕೋಶದಂತೆಯೆ ಅಣ್ವಿಕ ಸಮ್ಮಿಲನ ಮತ್ತು ನ್ಯೂಕ್ಲಿಯಸ್‌ನ ರೂಪವನ್ನೆ ಪಡೆಯುವುದರ ಮೂಲಕ ಕ್ರಮೇಣ ಅದರಂತೆಯೇ ರೂಪವನ್ನು ಪಡೆಯುತ್ತದೆ. ಆದರೆ ಅದರ ಸಾರವು ಬದಲಾಗಿರುತ್ತದೆ, ಏಕೆಂದರೆ ಈ ದೇಹವು ಇನ್ನು ಮುಂದೆ ಮೂಲ ಭೌತಿಕ ಜೀವಕೋಶಗಳಿಂದ ಮಾಡಲ್ಪಟ್ಟಿರುವುದಿಲ್ಲ. ನೀವು ಈ ಐದು ವಸ್ತುಗಳನ್ನು ಮೀರಿದಂತಾದಲಿಲ್ಲವೇ? ಹೌದು, ನಿಮ್ಮ ಸಾಧನೆಯ ಅಭ್ಯಾಸ ಇನ್ನೂ ಕೊನೆಗೊಂಡಿಲ್ಲ ಮತ್ತು ನೀವು ಇನ್ನೂ ಕೂಡ ಈ ಸಾಮಾನ್ಯ ದಿನನಿತ್ಯದ ಜನರೊಂದಿಗೆಯೇ ಸಾಧನೆಯ ಅಭ್ಯಾಸವನ್ನು ಮುಂದುವರೆಸಬೇಕು. ಅವರಿಂದ, ಮೇಲ್ಗಡೆ ನೀವು ಇನ್ನೂ ಸಾಮಾನ್ಯ ವ್ಯಕ್ತಿಯಂತೆಯೇ ಕಾಣುತ್ತೀರಿ. ಒಂದೇ ವ್ಯತಾಸವೆಂದರೆ, ನೀವು ನಿಮ್ಮ ಸಮಕಾಲೀನ ವಯಸ್ಕರಿಗಿಂತ ಚಿಕ್ಕವರಾಗಿ ಕಾಣುತ್ತೀರಿ. ಖಂಡಿತವಾಗಿ ನಿಮ್ಮ ದೇಹದಲ್ಲಿರುವ ಕೆಟ್ಟ ವಸ್ತುಗಳು ರೋಗಗಳನ್ನು ಒಳಗೊಂಡಂತೆ ಎಲ್ಲವನ್ನೂ ನಿಮ್ಮ ದೇಹದಿಂದ ಮೊದಲು ಹೊರತೆಗೆಯಬೇಕಾಗುತ್ತದೆ. ಆದರೆ ನಾವಿಲ್ಲಿ ರೋಗಗಳನ್ನು ಗುಣಪಡಿಸುವುದಿಲ್ಲ. ನಾವು ನಿಮ್ಮ ದೇಹವನ್ನು ಶುದ್ಧೀಕರಿಸುತ್ತಿದ್ದೇವೆ ಮತ್ತು ರೋಗಗಳನ್ನು ಗುಣಪಡಿಸು ಎಂಬ ಶಬ್ದವೇ ತಪ್ಪು. ನಾವು ಅದನ್ನು ಕೇವಲ "ದೇಹವನ್ನು ಶುದ್ಧೀಕರಿಸುವುದು" ಎಂದು ಕರೆಯುತ್ತೇವೆ ಮತ್ತು ನಾವು ನೈಜ ಸಾಧಕರ ದೇಹವನ್ನು ಶುಚಿಗೊಳಿಸುತ್ತೇವೆ. ಕೆಲವು ಜನರು ಇಲ್ಲಿ ಕೇವಲ ರೋಗ ಗುಣಪಡಿಸಿಕೊಳ್ಳುವುದಕ್ಕಷ್ಟೇ ಬಂದಿರುತ್ತಾರೆ. ತುಂಬಾ ಗಂಭಿರವಾದ ರೋಗವುಳ್ಳವರನ್ನು ನಾವು ತರಗತಿಗೆ ಹಾಜರಾಗಲೂ ಬಿಡುವುದಿಲ್ಲ, ಏಕೆಂದರೆ ಅವರಿಗೆ ರೋಗವನ್ನು ಗುಣಪಡಿಸಿಕೊಳ್ಳಬೇಕೆಂಬ ಮೋಹದಿಂದ ಮುಕ್ತರಾಗುವುದಕ್ಕೆ ಅಥವ ರೋಗವಿದೆಯೆಂಬ ಮನೋಭಾವದಿಂದ ಹೊರಬರಲು ಆಗುವುದಿಲ್ಲ. ಒಬ್ಬರಿಗೆ ಅತಿ ಗಂಭೀರ ರೋಗವಿದ್ದು ಮತ್ತು ಅತ್ಯಂತ ನೋವಿನಿಂದ ಕೂಡಿದ್ದರೆ ಅವರು ಅದನ್ನು ಬಿಡುವುದಕ್ಕೆ ಆಗುತ್ತದೆಯೇ ? ಈ ವ್ಯಕ್ತಿ ಸಾಧನೆಯ ಅಭ್ಯಾಸವನ್ನು ಮಾಡಲು ಸಾಧ್ಯವಾಗವುದಿಲ್ಲ. ನಾವು ಇಲ್ಲಿ ಗಂಭೀರ ರೋಗವುಳ್ಳ ರೋಗಿಗಳನ್ನು ಸೇರಿಸಿಕೊಳ್ಳುವುದಿಲ್ಲವೆಂದು ಕಾಲಕಾಲಕ್ಕೆ ಹೇಳುತ್ತಲೇ ಇದ್ದೇವೆ. ಇದು ಸಾಧನೆಯ ಅಭ್ಯಾಸ, ಇದು ಅವರು ಆಲೋಚಿಸುವುದಕ್ಕಿಂತ ಅತ್ಯಂತ ಉನ್ನತವಾದುದು. ಅವರು ಇಂತಹದ್ದನ್ನು ಮಾಡಲು ಬೇರೆ ಚೀಗಾಂಗ್ ಗುರುಗಳನ್ನು ನೋಡಿಕೊಳ್ಳಲಿ.

ನಿಜ, ಹಲವಾರು ಅಭ್ಯಾಸಿಗರಿಗೆ ರೋಗಗಳಿರುತ್ತದೆ. ನೀವು ನಿಜವಾದ ಅಭ್ಯಾಸಿಗನಾಗಿರುವುದರಿಂದ ಇಂಥಹ ವಿಷಯಗಳನ್ನು ನಿಮಗಾಗಿ ನಾವು ನೋಡಿಕೊಳ್ಳುತ್ತೇವೆ.

ಕೆಲವು ಕಾಲದ ಸಾಧನೆಯ ಅಭ್ಯಾಸದ ನಂತರ, ನಮ್ಮ ಫಾಲೂನ್ ದಾಫಾ ಸಾಧಕರು ನೋಡಲು ಬೇರೆ ತರಹ ಕಾಣುತ್ತಾರೆ. ಅವರ ಚರ್ಮ ಮೃದುವಾಗಿ ಕೆಂಪು ಬಿಳಿಯಾಗುತ್ತದೆ. ವಯಸ್ಸಾದವರಿಗೆ ಚರ್ಮ ಸುಕ್ಕುಗಳು ಕಡಿಮೆಯಾಗುತ್ತವೆ, ಅಥವ ಬಹಳಷ್ಟು ಮಾಯವಾಗುತ್ತವೆ. ಇಂಥದು ಸಾಮಾನ್ಯವಾದ ಸಂಗತಿ. ನಾನು ಇಲ್ಲಿ ನಂಬಲಾಸಾಧ್ಯವಾದುದನ್ನು ಏನೂ ಹೇಳುತ್ತಿಲ್ಲ, ಇಲ್ಲಿ ಕುಳಿತಿರುವ ನಮ್ಮ ಬಹಳಷ್ಟು ಮಂದಿ ಅನುಭವಿ ಅಭ್ಯಾಸಿಗರಿಗೆ ಈ ಸಂಗತಿ ತಿಳಿದೇ ಇದೆ. ಇದರೊಂದಿಗೆ ವಯಸ್ಸಾದ ಮಹಿಳೆಯರು ತಮ್ಮ ಋತುಚಕ್ರವನ್ನು ಮರಳಿ ಪಡೆಯುತ್ತಾರೆ ಏಕೆಂದರೆ ನಿಮ್ಮದು ದೇಹ ಮತ್ತು ಮನಸ್ಸಿನ ಸಾಧನೆಯ ಅಭ್ಯಾಸ. ದೇಹವನ್ನು ಅಭ್ಯಾಸ ಮಾಡಲು ಈ ಋತು ಅವಶ್ಯವಾಗಿದೆ. ಒಬ್ಬರ ಮುಟ್ಟು ಬಂದಾಗ ಋತುಸ್ರಾವ ಅಧಿಕವಾಗಿರುವುದಿಲ್ಲ, ಈ ಸದ್ಯಕ್ಕೆ ಇಷ್ಟೆ ಇಷ್ಟು ಸಾಕಾಗುತ್ತದೆ, ಇದೂ ಕೂಡ ಸಾಮಾನ್ಯ ಸಂಗತಿಯೇ. ಇಲ್ಲದಿದ್ದಲ್ಲಿ ಅವರು ತಮ್ಮ ದೇಹವನ್ನು ಹೇಗೆ ತಾನೇ ಅಭ್ಯಾಸ ಮಾಡಬಹುದು. ? ಇದು ಗಂಡಸರ ವಿಷಯದಲ್ಲೂ ನಿಜ : ಅಬಾಲವೃದ್ಧರೂ ಎಲ್ಲರೂ ಕೂಡ ತಮ್ಮ ಸಂಪೂರ್ಣ ದೇಹ ಬಹಳ ಹಗುರವಾಗಿರುವಂತೆ ಅನಿಸುತ್ತದೆ. ಒಬ್ಬ ನಿಜ ಸಾಧಕರಾಗಿ ಅವರು ಈ ರೀತಿಯ ಬದಲಾವಣೆಯನ್ನು ಅನುಭವಿಸುತ್ತಾರೆ.

ನಮ್ಮ ಅಭ್ಯಾಸ ಪ್ರಾಣಿಗಳನ್ನು ಅನುಕರಿಸುವ ವ್ಯಾಯಾಮಗಳುಳ್ಳ ಅನೇಕ ಅಭ್ಯಾಸಗಳಿಗೆ ವಿರುದ್ಧವಾಗಿ, ಬಹಳ ಅಗಾಧವಾದದ್ದನ್ನು ಸಾಧಿಸುತ್ತದೆ. ಈ ಅಭ್ಯಾಸವು ನಿಜವಾಗಿ ಬಹಳ ಅಪರಿಮಿತವಾದದ್ದನ್ನು ಸಾಧಿಸುತ್ತದೆ. ಸಾಖ್ಯಮುನಿ ಮತ್ತು ಲಾವ್ಹೋ–ಡಿಜಿ[34] ತಮ್ಮ ಕಾಲದಲ್ಲಿ ಚರ್ಚಿಸಿದಂತಹ ಎಲ್ಲಾ ತತ್ವಗಳೂ ನಮ್ಮ ಹಾಲು ಹಾದಿಯ ತತ್ವಗಳಿಗೆ ಸೀಮಿತವಾಗಿತ್ತು. ನಮ್ಮ ಫಾಲೂನ್ ದಾಪಾ ಏನನ್ನು ಸಾಧಿಸುತ್ತದೆ? ನಮ್ಮ ಸಾಧನೆಯ ಅಭ್ಯಾಸವು ಈ ಜಗತ್ತಿನ ವಿಶ್ವಾಸದ ತತ್ವಗಳನ್ನು ಆಧರಿಸಿದೆ ಮತ್ತು ಪ್ರಪಂಚದ ಅತ್ಯುನ್ನತ ವೈಶಿಷ್ಟ್ಯಗಳಾದ ಜ್ಹೆನ್–ಷ್ಹನ್–ರ್‌ಹೆನ್ ಮಾನದಂಡದಿಂದ ಮಾರ್ಗದರ್ಶಿತವಾಗಿದೆ. ನಾವು ಸಾಧಿಸುವುದು ಎಷ್ಟು ಅಪರಿಮಿತವಾಗಿದೆಯೆಂದರೆ ಅದು ಪ್ರಪಂಚವನ್ನು ಸಾಧಿಸುವುದಕ್ಕೆ ಸಮವಾಗಿದೆ.

ನಮ್ಮ ಫಾಲೂನ್ ದಾಫಾದಲ್ಲಿ ಬೇರೆ ಯವುದೇ ಅಭ್ಯಾಸದಲ್ಲಿರದ ಮತ್ತೊಂದು ಅತ್ಯಂತ ಅಪೂರ್ವವಾದ, ವಿಭಿನ್ನವಾದ ಸ್ವರೂಪವೊಂದಿದೆ. ಈ ಸದ್ಯದಲ್ಲಿ ನಮ್ಮ ಸಮಾಜದಲ್ಲಿ ಖ್ಯಾತವಾಗಿರುವ ಚೀಗಾಂಗ್ ಅಭ್ಯಾಸವೆಲ್ಲವೂ ಕೂಡ ಡ್ಯಾನ್ ಬೆಳೆಸುವುದು ಅಥವ ಡ್ಯಾನ್ ಅಭ್ಯಾಸದ ಹಾದಿಯನ್ನು ಅನುಸರಿಸುತ್ತದೆ. ಡ್ಯಾನ್ ಬೆಳೆಸುವ ಚೀಗಾಂಗ್ ಅಭ್ಯಾಸಗಳಲ್ಲಿ ಒಬ್ಬರಿಗೆ ಗಾಂಗ್‌ನ ವಿಮುಕ್ತಿಯ ಸ್ಥಿತಿಯನ್ನು ಸಾಧಿಸಲು ಮತ್ತು ಸಾಮಾನ್ಯ ಜನರ ನಡುವೆ ಜ್ಞಾನೋದಯ ಹೊಂದುವುದಕ್ಕೆ ಕಷ್ಟಕರವಾಗಿರುತ್ತದೆ. ನಮ್ಮ ಫಾಲೂನ್ ದಾಫಾ ಡ್ಯಾನ್ ಅನ್ನು ಬೆಳೆಸುವುದೇ ಇಲ್ಲ. ನಮ್ಮ ಅಭ್ಯಾಸವು ಕಿಬ್ಬೊಟ್ಟೆ ಭಾಗದಲ್ಲಿ ಫಾಲೂನ್ ಅನ್ನು ಬೆಳೆಸುತ್ತದೆ. ನಾನು ಸ್ವಯಂ ಅಗಿ ಇದನ್ನು ತರಗತಿಯಲ್ಲಿ ಅಭ್ಯಸಿಗನಿಗೆ ಅಳವಡಿಸುತ್ತೇನೆ. ನಾನಿಲ್ಲಿ ಫಾಲೂನ್ ದಾಫಾವನ್ನು ಬೋಧಿಸುತ್ತಿರುವಂತೆ ನಾವು ಎಲ್ಲರಿಗೂ ಅನುಕ್ರಮವಾಗಿ ಇದನ್ನು ಅಳವಡಿಸುತ್ತೇವೆ. ಹಲವಾರು ಜನರ ಅನುಭವಕ್ಕೆ ಇದು ಬರುತ್ತದೆ, ಮತ್ತೆ ಕೆಲವರಿಗೆ ಬರುವುದಿಲ್ಲ; ಬಹುಸಂಖ್ಯಾತ ಜನರಿಗೆ ಅದು ಅನುಭವಕ್ಕೆ ಬರುತ್ತದೆ. ಇದೇಕೆಂದರೆ ಜನರು ಬೇರೆ ಬೇರೆ ದೈಹಿಕ ಸ್ಥಿತಿಯನ್ನು ಹೊಂದಿರುತ್ತಾರೆ. ನಾವು ಡ್ಯಾ ನ ಬದಲಿಗೆ ಫಾಲೂನ್ ಅನ್ನು ಬೆಳೆಸುತ್ತೇವೆ. ಫಾಲೂನ್ ಈ ಪ್ರಪಂಚದ ಎಲ್ಲಾ ಸಾಮರ್ಥ್ಯವನ್ನು ಹೊಂದಿರುವಂತಹ ಪ್ರಪಂಚದ ಒಂದು ಸಣ್ಣ ಪ್ರತಿಕೃತಿ ಮತ್ತು ಇದು ಸ್ವಯಂಚಾಲಿತವಾಗಿ ಚಲಿಸಬಲ್ಲುದು ಮತ್ತು ತಿರುಗಬಲ್ಲುದು. ಅದು ನಿಮ್ಮ ಕಿಬ್ಬೊಟ್ಟೆ ಭಾಗದಲ್ಲಿ ಎಂದೆಂದಿಗೂ ಸದಾ ತಿರುಗುತ್ತಿರುತ್ತದೆ. ಒಮ್ಮೆ ನಿಮ್ಮ ದೇಹದಲ್ಲಿ ಅಳವಡಿಸಿದರೆ ವರ್ಷಾನುವರ್ಷ ಅದು ನಿಲ್ಲದೆ

---

**34. ಲಾವ್ಹೋ ಡಿಜಿ** – ತಾವ್ಹೋ ಶಾಲೆಯ ಸಂಸ್ಥಾಪಕರು ಮತ್ತು ದಾವ್ಹೋ ದೆ ಚಿಂಗ್‌ನ ಕರ್ತೃಗಳು, ಕ್ರಿ.ಪೂ. 4ನೇ ಅಥವ 5ನೇ ಶತಮಾನದಲ್ಲಿ ಚೀನಾದಲ್ಲಿ ಬದುಕಿದ್ದರು ಮತ್ತು ಉಪದೇಶಿಸುತಿದ್ದರು ಎಂಬ ವಿಚಾರವಿದೆ.

ಎಂದೆಂದಿಗೂ ಅದು ಹೀಗೇ ತಿರುಗುತ್ತಿರುತ್ತದೆ. ಅದು ಪ್ರದಕ್ಷಿಣವಾಗಿ ತಿರುಗಿದರೆ ಅದು ಸ್ವಯಂ ಚಾಲಿತವಾಗಿ ಪ್ರಪಂಚದ ಶಕ್ತಿಯನ್ನು ಹೀರಿಕೊಳ್ಳಬಲ್ಲುದು.
ಇದರೊಂದಿಗೆ, ಅದು ಈ ಶಕ್ತಿಯನ್ನು ಮಾರ್ಪಡಿಸಿ ಇದನ್ನು ನಿಮ್ಮ ದೇಹ ಪ್ರತಿಯೊಂದು ಭಾಗದ ಪರಿವರ್ತನೆಗೆ ಬೇಕಾಗುವ ಶಕ್ತಿಯಾಗಿ ಸರಬರಾಜು ಮಾಡಬಲ್ಲುದು, ಅಲ್ಲದೆ ಇದು ಅಪ್ರದಕ್ಷಿಣ ದಿಕ್ಕಿನಲ್ಲಿ ತಿರುಗಬೇಕಾದರೆ ಅದು ಶಕ್ತಿಯನ್ನು ಹೊರಸೂಸುತ್ತದೆ, ಹೀಗೆ ನಿಮ್ಮ ದೇಹದಲ್ಲಿರುವ ಅನುಚಿತವಾದ ವಸ್ತುಗಳನ್ನು ಹೊರಹಾಕತ್ತದೆ. ಅದು ಶಕ್ತಿಯನ್ನು ಹೊರಸೂಸುವಾಗ, ಈ ಶಕ್ತಿಯು ಬಹಳಷ್ಟು ದೂರದ ತನಕವೂ ಬಿಡುಗಡೆ ಮಾಡಬಹುದು ಮತ್ತು ಪುನಃ ಅದು ಹೊಸ ಶಕ್ತಿಯನ್ನು ಒಳಗೆ ತರುತ್ತದೆ. ಹೀಗೆ ಹೊರಸೂಸಲ್ಪಟ್ಟ ಶಕ್ತಿಯಿಂದ ನಿಮ್ಮ ಸ್ಮುತ್ತಮುತ್ತಲಿರುವ ಜನರಿಗೆ ಅನುಕೂಲವಾಗಬಹುದು. ಬುದ್ಧ ಶಾಲೆಯು ಸ್ವಯಂ – ಮೋಕ್ಷ ಮತ್ತು ಇತರ ಎಲ್ಲಾ ಇಂದ್ರಿಯ ಗ್ರಹಣವಿರುವ ಜೀವಿಗಳಿಗೆಲ್ಲಾ ಮೋಕ್ಷವನ್ನು ಬೋಧಿಸುತ್ತದೆ. ಒಬ್ಬರು ತಮ್ಮಷ್ಟಕ್ಕೆ ತಾವೇ ಸಾಧನೆಯನ್ನು ಮಾಡದೆ ಇತರೆಲ್ಲಾ ಇಂದ್ರಿಯ ಗ್ರಹಣವುಳ್ಳ ಜೀವಿಗಳಿಗೆಲ್ಲಾ ಮೋಕ್ಷವನ್ನು ದಯಪಾಲಿಸುತ್ತಾರೆ. ಇತರರೂ ಕೂಡ ಇದರಿಂದ ಲಾಭ ಪಡೆಯಬಹುದು ಮತ್ತು ನೀವು ಅಪ್ರಯತ್ನಪೂರ್ವಕವಾಗಿ ಇತರ ಜನರ ದೇಹವನ್ನು ಸಂಪಾದಿಸಬಹುದು, ಅವರ ರೋಗ ಗುಣಪಡಿಸಬಹುದು ಮತ್ತು ಇತರೆ. ಹೌದು, ಈ ಶಕ್ತಿಯೇನೂ ಕಳೆಯುವುದಿಲ್ಲ. ಫಾಲೂನ್ ಪ್ರದಕ್ಷಿಣವಾಗಿ ತಿರುಗಿದಾಗ, ಹಾಗೂ ಇದು ನಿರಂತರವಾಗಿ ತಿರುಗುತ್ತಲೇ ಇರುವುದರಿಂದ ಅದು ತಿರುಗಿ ಶಕ್ತಿಯನ್ನು ಶೇಖರಿಸಿಕೊಳ್ಳಬಲ್ಲುದು.

ಕೆಲವು ಜನರು ಯೋಚಿಸಬಹುದು " ಈ ಫಾಲೂನ್ ಏಕೆ ನಿರಂತರವಾಗಿ ತಿರುಗುತ್ತಿರುತ್ತದೆ?" ಹಾಗೂ ನನ್ನನ್ನು ಹೀಗೆ ಕೇಳುವ ಜನರೂ ಇದ್ದಾರೆ, ಅದು ಹೇಗೆ ತಿರುಗಬಲ್ಲದು?" ಇದರ ಕಾರಣವೇನು ? "ಶಕ್ತಿಯು ಕೇಂದ್ರೀಕೃತವಾದಾಗ ಡ್ಯಾನ್ ಬೆಳೆಯುತ್ತದೆಯೆಂದು ಅರ್ಥ ಮಾಡಿಕೊಳ್ಳುವುದು ಸುಲಭ, ಆದರೆ ಫಾಲೂನ್ ತಿರುಗುತ್ತದೆಯೆಂಬುದು ನಂಬುವುದಕ್ಕೆ ಆಗದು. ನಾನೊಂದು ಉದಾಹರಣೆಯನ್ನು ಕೊಡುತ್ತೇನೆ. ಈ ಪ್ರಪಂಚವೇ ಚಲನೆಯಲ್ಲಿದೆ ಮತ್ತು ಪ್ರಪಂಚದ ಎಲ್ಲಾ ಹಾಲುಹಾದಿಗಳು ಮತ್ತು ನಕ್ಷತ್ರ ಪುಂಜಗಳು ಎಲ್ಲವೂ ಕೂಡ ಚಲನೆಯಲ್ಲಿವೆ. ಒಂಭತ್ತು ಗ್ರಹಗಳು ಸೂರ್ಯನ ಸುತ್ತ ತಿರುಗುತ್ತವೆ ಮತ್ತು ಈ ಭಮಿಯೂ ಕೂಡ ತನ್ನಷ್ಟಕ್ಕೆ ತಾನೇ ತಿರುಗುತ್ತದೆ. ಎಲ್ಲರೂ ಯೋಚಿಸಿ ನೋಡಿ: ಯಾರು ಇವುಗಳನ್ನು ತಳ್ಳುತ್ತಿದ್ದಾರೆ ; ಅವುಗಳಿಗೆ ಈ ಬಲವನ್ನು ಕೊಟ್ಟವರು ಯಾರು? ಇದು ಹಾಗೆಯೇ ತಿರುಗುವ ಯಂತ್ರರಚನೆ ಆದುದರಿಂದ ನೀವು ಅದನ್ನು ಈ ಸಾಮಾನ್ಯ ಮನುಷ್ಯರ ಮನೋಬಾವದಿಂದ ಅರ್ಥಮಾಡಿಕೊಳ್ಳಲು ಆಗದು. ಇದು ನಮ್ಮ ಫಾಲೂನ್ ವಿಷಯದಲ್ಲೂ ಸತ್ಯ. ಏಕೆಂದರೆ ಅದು ಹಾಗೆಯೇ ತಿರುಗುತ್ತದೆ. ವ್ಯಾಯಾಮದ ಸಮಯವನ್ನು ಹೆಚ್ಚಿಸುವುದರ ಮೂಲಕ ಅದು ದಿನನಿತ್ಯದ ಜನರು ಸಾಮಾನ್ಯ ಜೀವನ ಪರಿಸ್ಥಿತಿಯ ನಡುವೆ ಸಾಧನೆಯ ಅಭ್ಯಾಸವನ್ನು ನಡೆಸಬೇಕಾಗುವ ತೊಂದರೆಗೆ ಪರಿಹಾರವನ್ನು ತಂದುಕೊಟ್ಟಿದೆ. ಅದು ಹೇಗೆ ಹೆಚ್ಚಿಸಿದೆ ? ಅದು ನಿರಂತರವಾಗಿ ತಿರುಗುವುದರಿಂದ, ಅದು ನಿರಂತರವಾಗಿ ಹೀರಿಕೊಳ್ಳುತ್ತದೆ ಮತ್ತು ಈ ಪ್ರಪಂಚದ ಶಕ್ತಿಯನ್ನು ಪರಿವರ್ತಿಸುತ್ತದೆ. ನೀವು ಕೆಲಸಕ್ಕೆ ಹೋದಾಗ ಅದು ನಿಮ್ಮನ್ನು ಸಾಧನೆ ಮಾಡುತ್ತಿರುತ್ತದೆ. ಹೌದು, ಈ ಫಾಲೂನ್‌ನೊಂದಿಗೆ ನಾವು ನಿಮ್ಮ ದೇಹದಲ್ಲಿ ಇನ್ನೂ ಅನೇಕ ಶಾಕ್ತಿಕ ವ್ಯವಸ್ಥೆ ಮತ್ತು ಯಂತ್ರರಚನೆಯನ್ನು ಅಳವಡಿಸುತ್ತೇವೆ, ಇವು ಫಾಲೂನ್‌ನ ಜೊತೆಗೂಡಿ ಸ್ವಯಂ ತಿರುಗುತ್ತದೆ ಮತ್ತು ನಿಮ್ಮನ್ನು ಪರಿವರ್ತಿಸುತ್ತದೆ. ಆದ್ದರಿಂದ ಈ ಗಾಂಗ್, ಜನರನ್ನು ಸ್ವಯಂ ಆಗಿ ಪರಿವರ್ತಿಸುತ್ತದೆ. ಆದ್ದರಿಂದ ಇದು "ಗಾಂಗ್ ಸಾಧಕರನ್ನು ಸಾಧಿಸುತ್ತದೆ" ಎಂದಾಗುತ್ತದೆ ಮತ್ತಿದನ್ನು "ಫಾ ಸಾಧಕರನ್ನು ಸಾಧಿಸುತ್ತದೆ" ಎಂದೂ ಕರೆಯಬಹುದು. ಈ ಗಾಂಗ್ ನೀವು ಅಭ್ಯಾಸವನ್ನು ಮಾಡುತ್ತಿರುವಾಗ ಸಾಧಿಸುವಂತೆ ನೀವು ಅಭ್ಯಾಸ ಮಾಡದಿರುವಾಗಲೂ ಸಾಧಿಸುತ್ತಿರುತ್ತದೆ. ನೀವು ಊಟ ಮಾಡುವಾಗ, ನಿದ್ದೆ ಮಾಡುವಾಗ ಅಥವ ಕೆಲಸ ಮಾಡುವಾಗ ನೀವು ಗಾಂಗ್‌ನಿಂದ ನಿರಂತರವಾಗಿ ಪರಿವರ್ತಿತರಾಗುತ್ತಿರುತ್ತೀರಿ. ನೀವು ಏತಕ್ಕಾಗಿ ವ್ಯಾಯಾಮವನ್ನು ಮಾಡುತ್ತೀರಿ ? ನಾನು ಕೊಟ್ಟಿರುವ ಫಾಲೂನ್‌ನ್ನು ಬಲಿಷ್ಟಗೊಳಿಸಲು ಮತ್ತು ಇತರ ಎಲ್ಲಾ ಶಾಕ್ತಿಕ ವ್ಯವಸ್ಥೆ ಮತ್ತು ಯಂತ್ರರಚನೆಯನ್ನು ಬೆಂಬಲಿಸುವುದಕ್ಕಾಗಿ ನೀವು ವ್ಯಾಯಾಮಗಳನ್ನು ಮಾಡಬೇಕು. ಒಬ್ಬರು ಉನ್ನತಮಟ್ಟದೆಡೆಗಿನ ಸಾಧನೆಯ ಅಭ್ಯಾಸವನ್ನು

ಕೈಗೊಂಡಲ್ಲಿ ಅದು ಸಂಪೂರ್ಣವಾಗಿ ವೂವೇ[35] ಸ್ಥಿತಿಯಲ್ಲಿ ನಡೆಯಬೇಕು ಮತ್ತು ವ್ಯಾಯಾಮದ ಚಲನೆಗಳು ಈ ಯಂತ್ರರಚನೆಯನ್ನು ಅನುಸರಿಸುತ್ತದೆ. ಇದರಲ್ಲಿ ಬುದ್ಧಿಯ ಯಾವುದೇ ಮಾರ್ಗದರ್ಶನವಿರುವುದಿಲ್ಲ ಮತ್ತು ಒಬ್ಬರು ಯಾವುದೇ ಉಸಿರಾಟದ ಪದ್ಧತಿ ಮುಂತಾದುವುಗಳನ್ನು ಉಪಯೋಗಿಸಬಾರದು.

ನಾವು ಸಾಧನೆಯನ್ನು ಸಮಯ ಅಥವ ಸ್ಥಳದ ಕುರಿತು ಯಾವುದೇ ಕಳಕಳಿಯನ್ನು ಹೊಂದುವುದಿಲ್ಲ. ಹಲವು ಜನರು "ಸಾಧನೆಯನ್ನು ಮಾಡಲು ಯಾವುದು ಪ್ರಶಸ್ತ ಸಮಯ ? ಮಧ್ಯರಾತ್ರಿ, ಮುಂಜಾನೆ ಅಥವ ಮಧ್ಯಾಹ್ನ ?" ನಮ್ಮಲ್ಲಿ ವ್ಯಾಯಾಮದ ಸಮಯಕ್ಕಾಗಿ ಯಾವುದೇ ಕಟ್ಟುನಿಟ್ಟು ಇಲ್ಲ. ನೀವು ಮಧ್ಯರಾತ್ರಿ ಅಭ್ಯಾಸ ಮಾಡಲಾಗದಿದ್ದರೆ, ಗಾಂಗ್ ನಿಮ್ಮನ್ನು ಸಾಧಿಸುತ್ತಿರುತ್ತದೆ. ನಿಮಗೆ ಬೆಳಿಗ್ಗೆ ಸಾಧಿಸಲು ಸಾಧ್ಯವಾಗದಿದ್ದರೆ, ಗಾಂಗ್ ನಿಮ್ಮನ್ನು ಸಾಧಿಸುತ್ತಿರುತ್ತದೆ. ನೀವು ಮಲಗಿರುವಾಗ ಗಾಂಗ್ ನಿಮ್ಮನ್ನು ಸಾಧಿಸುತ್ತಿರುತ್ತದೆ, ನೀವು ನಡೆಯುವಾಗ ಪುನಃ ಗಾಂಗ್ ನಿಮ್ಮನ್ನು ಸಾಧಿಸುತ್ತಿರುತ್ತದೆ. ನೀವು ಕೆಲಸ ಮಾಡುವಾಗಲೂ ಸಹ ಗಾಂಗ್ ನಿಮ್ಮನ್ನು ಸಾಧಿಸುತ್ತಿರುತ್ತದೆ. ಇದು ನಿಮ್ಮ ಸಾಧನೆಯ ಸಮಯವನ್ನು ಬಹುವಾಗಿ ಕಡಿಮೆಮಾಡುವುದಿಲ್ಲವೇ? ನಿಮ್ಮಲ್ಲಿ ಅನೇಕರಿಗೆ ತಾವೋವನ್ನು ಗಳಿಸಬೇಕೆಂಬ ಹೃದಯವಿರುತ್ತದೆ, ಹೌದು, ಇದೇ ಸಾಧನೆಯ ಅಭ್ಯಾಸದ ಗುರಿ. ಸಾಧನೆಯ ಅಭ್ಯಾಸದ ಪರಮ ಗುರಿ ತಾವೋವನ್ನು ಗಳಿಸುವುದು ಮತ್ತು ಪರಿಪೂರ್ಣ ಸಾಧನೆಯನ್ನು ಮಾಡುವುದೇ ಆಗಿದೆ. ಆದರೂ ಕೆಲವು ಜನರಿಗೆ ಜೀವನದಲ್ಲಿ ಬಹಳ ಕಡಿಮೆ ಸಮಯ ಉಳಿದಿರುತ್ತದೆ. ಅವರ ಜೀವಿತಾವಧಿ ಎಣಿಸಲ್ಪಟ್ಟಿರುತ್ತದೆ ಮತ್ತು ಸಾಧನೆಯನ್ನು ಮಾಡುವುದಕ್ಕೆ ಸಾಲದೇ ಹೋಗಬಹುದು. ನಮ್ಮ ಫಾಲೂನ್ ದಾಫಾ ಈ ಸಮಸ್ಯೆಯನ್ನು ಪರಿಹರಿಸಬಲ್ಲದು ಮತ್ತು ಸಾಧನೆಯ ಅವಧಿಯನ್ನು ಕಡಿಮೆಗೊಳಿಸಬಲ್ಲದು. ಅಲ್ಲದೆ, ಇದು ದೇಹ ಮತ್ತು ಮನಸ್ಸಿನ ಸಾಧನೆಯ ಅಭ್ಯಾಸವೂ ಹೌದು. ನೀವು ನಿರಂತರವಾಗಿ ಸಾಧನೆಯ

ಅಭ್ಯಾಸವನ್ನು ಮಾಡುತ್ತಿರುವಂತೆ ನಿಮ್ಮ ಜೀವಿತಾವಧಿ ನಿರಂತರವಾಗಿ ಹಿಗ್ಗುತ್ತಾ ಹೋಗುತ್ತದೆ. ಏಕನಿಷ್ಠಾ ಸ್ಥಿರ ಅಭ್ಯಾಸದಿಂದ ನಿಮ್ಮ ಜೀವಿತಾವಧಿ ನಿರಂತರವಾಗಿ ಹಿಗ್ಗುತ್ತದೆ. ಆಜನ್ಮತಃ ಉತ್ತಮ ಗುಣಗಳನ್ನುಳ್ಳ ವೃದ್ಧ ಜನರು ಸಾಧನೆ ಮಾಡಲು ಸಾಕಷ್ಟು ಸಮಯ ಹೊಂದಿರುತ್ತಾರೆ. ಆದರೆ ಇದಕ್ಕೊಂದು ಮಾನದಂಡವಿದೆ, ಹೀಗೆ ನಿಮ್ಮ ಪೂರ್ವನಿರ್ಧಾರಿತ ಸಮಯಕ್ಕಿಂತ ನಿಮ್ಮ ಜೀವಿತಾವಧಿಯು ಸಂಪೂರ್ಣವಾಗಿ ಸಾಧನೆಯ ಅಭ್ಯಾಸಕ್ಕೆ ಮೀಸಲಿರಿಸಬೇಕು. ನಿಮ್ಮ ಮನಸ್ಸು ಕಿಂಚಿತ್ತೂ ತಪ್ಪಿದ್ದರೂ ಕೂಡ ನಿಮ್ಮ ಜೀವವೇ ಅಪಾಯದಲ್ಲಿರುತ್ತದೆ, ಏಕೆಂದರೆ ನಿಮ್ಮ ಜೀವಿತಾವಧಿಯು ಎಂದಿಗೋ ಮಗಿದುಹೋಗಿರುವುದು. ನಿಮಗೆ ಮೂರು ಲೋಕದಾಚೆಗಿನ ಫಾ ಸಾಧನೆಯನ್ನು ತಲುಪುವ ತನಕ ಈ ನಿರ್ಬಂಧವಿರುತ್ತದೆ. ಇದರ ನಂತರ, ಒಬ್ಬರು ಬೇರೆಯೇ ಸ್ಥಿತಿಯಲ್ಲಿ ಇರುತ್ತಾರೆ.

ಅಭ್ಯಾಸವನ್ನು ಮಾಡಲು ಯಾವುದೇ ಒಂದು ನಿಶ್ಚಿತ ದಿಕ್ಕಿನೆಡೆ ಮುಖ ಮಾಡಬೇಕಾದ ಅಥವ ಅಭ್ಯಾಸವನ್ನು ಇದೇ ರೀತಿ ಕೊನೆಗೊಳಿಸಬೇಕೆಂಬ ಯಾವುದೇ ಅವಶ್ಯಕತೆ ನಮ್ಮಲ್ಲಿಲ್ಲ. ಫಾಲೂನ್ ನಿರಂತರವಾಗಿ ತಿರುಗುವುದರಿಂದ ಅದನ್ನು ನಿಲ್ಲಿಸಲು ಆಗುವುದಿಲ್ಲ. ಯಾವುದಾದರೂ ದೂರವಾಣಿ ಕರೆ ಬಂದರೆ ಅಥವ ಯಾರಾದರೂ ಬಾಗಿಲು ಬಡಿದರೆ ನೀವು ಅಭ್ಯಾಸವನ್ನು ಮುಗಿಸದೆ, ಇವುಗಳನ್ನು ಉತ್ತರಿಸಿ ಬರಬಹುದು. ನೀವು ಅಭ್ಯಾಸವನ್ನು ನಿಲ್ಲಿಸಿದ ಕೂಡಲೇ ಫಾಲೂನ್ ಪ್ರದಕ್ಷಿಣವಾಗಿ ತಿರುಗಿ ನಿಮ್ಮ ದೇಹದ ಸುತ್ತ ಹೊರಸೂಸಿದ ಶಕ್ತಿಯನ್ನು ಹೀರಿಕೊಳ್ಳುತ್ತದೆ. ಉದ್ದೇಶಪೂರ್ವಕವಾಗಿ ಚೀಯನ್ನು ಹಿಡಿದಿಟ್ಟುಕೊಳ್ಳುವವರಿಗೆ ಮತ್ತು ಅದನ್ನು ತಮ್ಮ ತಲೆ ಮೇಲೆ ಸುರಿದುಕೊಳ್ಳುವವರು, ಅದನ್ನು ಎಷ್ಟೇ ಹಿಡಿದಿಟ್ಟರೂ ಅದು ಕಳೆದುಹೋಗುತ್ತದೆ. ಫಾಲೂನ್ ಬುದ್ಧಿವಂತಿಕೆಯುಳ್ಳದ್ದು ಮತ್ತು ಇಂಥವುಗಳನ್ನು ತಾನಾಗಿಯೇ ಮಾಡಲು ತಿಳಿದಿರುವಂಥದು. ನಮಗೆ ಯಾವುದೇ ದಿಕ್ಕಿನ ಅಗತ್ಯವೂ ಇಲ್ಲ, ಏಕೆಂದರೆ,

---

**೩೮. ವೂವೇ –** "ಕ್ರಿಯೆ ಇಲ್ಲದ " "ಕ್ರಿಯೆಮಾಡದ " "ಉದ್ದೇಶ ರಹಿತ"

ಇಡೀ ಪ್ರಪಂಚವೇ ಚಲನೆಯಲ್ಲಿದೆ. ಹಾಲುಹಾದಿಯು ಚಲಿಸುತ್ತಿದೆ. ಮತ್ತು ಈ ಒಂಭತ್ತು ಗ್ರಹಗಳು ಸೂರ್ಯನ ಸುತ್ತಾ ತಿರುಗುತ್ತಿದೆ. ಭೂಮಿಯೂ ಕೂಡ ಸ್ವಯಂ ತಿರುಗುತ್ತಿದೆ. ನಾವು ಈ ಪ್ರಪಂಚದ ಮಹಾನ್ ತತ್ವದ ಆಧಾರದ ಮೇಲೆ ಅಭ್ಯಾಸ ಮಾಡುತ್ತೇವೆ. ಪೂರ್ವ, ಪಶ್ಚಿಮ, ಉತ್ತರ ಅಥವ ದಕ್ಷಿಣ ಎಲ್ಲಿದೆ ? ಇದ್ಯಾವುದೂ ಇಲ್ಲ. ಯಾವುದೇ ದಿಕ್ಕಿನಲ್ಲಿ ಅಭ್ಯಾಸ ಮಾಡಿದರೂ ಎಲ್ಲಾ ದಿಕ್ಕಿನಲ್ಲೂ ಅಭ್ಯಾಸ ಮಾಡಿದಂತೆ ಮತ್ತು ಯಾವುದೇ ದಿಕ್ಕಿನಲ್ಲಿ ಅಭ್ಯಾಸ ಮಾಡಿದರೂ ಅದು ಪೂರ್ವ, ಪಶ್ಚಿಮ, ಉತ್ತರ ಮತ್ತು ದಕ್ಷಿಣ ದಿಕ್ಕಿನಲ್ಲಿ ಏಕಕಾಲದಲ್ಲಿ ಅಭ್ಯಾಸ ಮಾಡುವುದಕ್ಕೆ ಸಮವಾದುದು. ನಮ್ಮ ಫಾಲೂನ್ ದಾಫಾ, ಅಭ್ಯಾಸಿಗರು ದಾರಿ ತಪ್ಪದಂತೆ ಕಾಪಾಡುತ್ತದೆ. ಅದು ನಿಮ್ಮನ್ನು ಹೇಗೆ ಕಾಪಾಡುತ್ತದೆ ? ನೀವು ಒಬ್ಬ ನೈಜ ಅಭ್ಯಾಸಿಗನಾದರೆ ನಮ್ಮ ಫಾಲೂನ್ ನಿಮ್ಮನ್ನು ರಕ್ಷಣೆ ಮಾಡುತ್ತದೆ. ನಾನು ಈ ಪ್ರಪಂಚದಲ್ಲಿ ಬೇರೂರಿದ್ದೇನೆ. ನಿಮಗೆ ಯಾರಾದರೂ ಕೂಡ ಕೇಡು ಮಾಡಬಲ್ಲರಾದರೆ, ಆತ ಅಥವ ಆಕೆ ನನಗೆ ಕೇಡು ಮಾಡಬಲ್ಲವರಾಗಿರುತ್ತಾರೆ. ಸರಳವಾಗಿ ಹೇಳಬೇಕೆಂದರೆ ಆ ವ್ಯಕ್ತಿ ಈ ಜಗತ್ತಿಗೆ ಕೇಡುಮಾಡಬಲ್ಲವನಾಗಿರುತ್ತಾನೆ. ನಾನು ಹೇಳುತ್ತಿರುವುದು ನಂಬಲು ಅಸಾಧ್ಯವೆಂಬಂತೆ ತೋರಬಹುದು. ನೀವು ನಿಮ್ಮ ಅಧ್ಯಯನ ಮುಂದುವರೆದಂತೆ ನಂತರದ ದಿನಗಳಲ್ಲಿ ಇದು ನಿಮಗೆ ಅರ್ಥವಾಗುತ್ತದೆ. ಇಷ್ಟೇ ಅಲ್ಲದೆ ಇನ್ನೂ ಅಗಾಧವಾದ ಹಲವಾರು ಸಂಗತಿಗಳಿದ್ದು ಇವುಗಳನ್ನು ನಾನು ಬಹಿರಂಗಗೊಳಿಸುವಂತಿಲ್ಲ. ನಾವು ಈ ಉನ್ನತ ಮಟ್ಟದ ಫಾವನ್ನು ವ್ಯವಸ್ಥಿತವಾಗಿ, ಸರಳವಾದುದರಿಂದ ಅತ್ಯಂತ ಅಗಾಧದವರೆಗೂ ನಿಮಗೆ ತಿಳಿಯಪಡಿಸುತ್ತೇವೆ. ಇದು ನಿಮ್ಮ ಷಿನ್‌ಷಿಂಗ್ ಸಾತ್ವಿಕವಾಗಿರದಿದ್ದಲ್ಲಿ ಕೆಲಸಕ್ಕೆ ಬರುವುದಿಲ್ಲ. ನೀವು ಏನನ್ನಾದರೂ ಬೆನ್ನಟ್ಟಿ ಅನುಸರಿಸಿದರೆ ನೀವು ತೊಂದರೆಯಲ್ಲಿ ಸಿಲುಕಿಕೊಳ್ಳಬಹುದು. ಅನೇಕ ಅನುಭವಸ್ಥ ಅಭ್ಯಾಸಿಗರ ಫಾಲೂನ್‌ಗಳು ವಿರೂಪಗೊಂಡಿರುವುದನ್ನು ನಾನು ಕಂಡಿದ್ದೇನೆ. ಏಕೆ ? ನೀವು ನಿಮ್ಮ ಅಭ್ಯಾಸದೊಂದಿಗೆ ಇತರ ಸಂಗತಿಗಳನ್ನು ಬೆರೆಸಿದ್ದೀರಿ ಮತ್ತು ನೀವು ಇತರ ಜನರ ಸಂಗತಿಗಳನ್ನು ಒಪ್ಪಿಕೊಂಡಿದ್ದೀರಿ. ಫಾಲೂನ್ ನಿಮ್ಮನ್ನು ಆಗ ಏಕೆ ರಕ್ಷಿಸಲಿಲ್ಲ ? ಅದು ನಿಮಗೆ ಕೊಡಲ್ಪಟ್ಟಿರುತ್ತದೆ, ಅದು ನಿಮ್ಮದು ಮತ್ತದು ನಿಮ್ಮ ಮನಸ್ಸಿನಿಂದ ಆಜ್ಞಾಪಿಸಲ್ಪಟ್ಟಿರುತ್ತದೆ. ನೀವು ಏನನ್ನಾದರೂ ಬೆನ್ನಟ್ಟಿ ಅನುಸರಿಸುತ್ತಿದ್ದಲ್ಲಿ ಅದಕ್ಕೆ ಯಾರೂ ಕೂಡ ಅಡ್ಡಿಪಡಿಸಬಾರದು ಎಂಬುದು ಈ ಪ್ರಪಂಚದ ತತ್ವ. ನೀವು ಸಾಧನೆ ಅಭ್ಯಾಸವನ್ನು ಮಾಡಲಿಚ್ಛಿಸದಿದ್ದಲ್ಲಿ ಯಾರೂ ಕೂಡ ನಿಮಗೆ ಬಲವಂತ ಮಾಡುವಂತಿಲ್ಲ – ಇದು ತಪ್ಪು ಕೆಲಸವನ್ನು ಮಾಡುವುದಕ್ಕೆ ಸಮವಾಗಿರುತ್ತದೆ. ನಿಮ್ಮ ಹೃದಯವನ್ನು ಪರಿವರ್ತಿಸಲು ಯಾರು ತಾನೇ ಬಲವಂತ ಮಾಡಬಲ್ಲರು ? ನಿಮ್ಮನ್ನು ನೀವೇ ಸ್ವಯಂ ಆಗಿ ನಿಗ್ರಹವನ್ನು ಮಾಡಿಕೊಳ್ಳಬೇಕು. ಎಲ್ಲಾ ಶಾಲೆಗಳ ಒಳ್ಳೆಯದನ್ನು ತೆಗೆದುಕೊಳ್ಳುತ್ತಾ ಹೋದರೆ ಅದು ಎಲ್ಲರ ವಿಷಯಗಳನ್ನು ಒಪ್ಪಿಕೊಂಡಂತೆಯೇ ಸರಿ. ನೀವು ನಿಮ್ಮ ರೋಗವನ್ನು ಗುಣಪಡಿಸಿಕೊಳ್ಳಲು ಇಂದು ಒಂದು ಚೀಗಾಂಗ್ ಅಭ್ಯಾಸ ಮತ್ತು ನಾಳೆ ಇನ್ನೊಂದು ಮಾಡುತ್ತಾ ಹೋದರೆ ನಿಮ್ಮ ರೋಗ ಗುಣವಾಗುವುದೇ ಇಲ್ಲ. ನೀವು ಅದನ್ನು ಕೇವಲ ಮುಂದೂಡಬಹುದು ಅಷ್ಟೆ. ಉನ್ನತ ಮಟ್ಟದೆಡೆಗಿನ ಸಾಧನೆಯ ಅಭ್ಯಾಸವು ಒಂದೇ ಶಾಲೆಯಲ್ಲಿ ಏಕಚಿತ್ತತೆ ಮತ್ತು ಅದರಲ್ಲೇ ಮುಂದುವರೆಯಬೇಕೆಂದು ಬಯಸುತ್ತದೆ. ನೀವು ಒಂದು ಅಭ್ಯಾಸವನ್ನು ಅನುಸರಿಸುತ್ತಿದ್ದರೆ, ನೀವು ಆ ಶಾಲೆಯಲ್ಲೆ ಸಂಪೂರ್ಣ ಜ್ಞಾನೋದಯ ಹೊಂದುವ ತನಕ ನಿಮ್ಮ ಸಂಪೂರ್ಣ ತನ್ಮಯತೆಯನ್ನು ಕೊಡಬೇಕಾಗುತ್ತದೆ. ಆವಾಗ ಮಾತ್ರ ನೀವು ಬೇರೊಂದು ಶಾಲೆಯ ಸಾಧನೆಯ ಅಭ್ಯಾಸದಲ್ಲಿ ತೊಡಗಬಹುದು. ಮತ್ತಿದು ಬೇರೆಯದೇ ಆದ ವ್ಯವಸ್ಥೆಯಾಗಿರುತ್ತದೆ. ಒಂದು ನೈಜ ಬೋಧನಾ ವ್ಯವಸ್ಥೆಯು ಅತ್ಯಂತ ಪುರಾತನ ಕಾಲದಿಂದ ಸಾಗಿ ಬಂದಿರುವುದರಿಂದ ಅದು ಅನೇಕ ಸಂಕೀರ್ಣ ಪರಿವರ್ತನಾ ಪ್ರಕ್ರಿಯೆಗಳ ಮೂಲಕ ಬಂದಿರುತ್ತದೆ. ಕೆಲವು ಜನರು ತಮಗೆ ಅಭ್ಯಾಸಿಸುವಾಗ ಹೇಗೆ ಅನಿಸುತ್ತದೆ ಎಂಬುದರ ಮೇಲೆ ಅವಲಂಬಿಸಿರುತ್ತಾರೆ. ನಿಮಗೆ ಹೇಗೆ ಅನಿಸುತ್ತದೆ ಎಂಬುದಕ್ಕೆ ಏನಾದರೂ ಮೌಲ್ಯವಿದೆಯೇ? ಏನೂ ಇಲ್ಲ. ಒಂದು ನೈಜ ಪರಿವರ್ತನೆ ಪ್ರಕ್ರಿಯೆ ಇತರ ಪರಿಮಾಣಗಳಲ್ಲಿ ನೆರೆದಿರುತ್ತದೆ, ಮತ್ತಿದು ಅತ್ಯಂತ ಸಂಕೀರ್ಣ ಮತ್ತು ಗಹನವಾದುದು. ಇದರಲ್ಲಿ ಒಂದು ಸಣ್ಣ ತಪ್ಪೂ ಆಗಬಾರದು. ಇದೂ ಕೂಡ ಯಾವುದಾದರೂ ಅನ್ಯ ಭಾಗವನ್ನು ಸೇರಿಸಿದ ಕೂಡಲೇ ಹಾಳಾಗಿ ಹೋಗುವಂತಹ ನಿಷ್ಕರ್ಶಿತ ಉಪಕರಣದಂತೆಯೇ ಇದೆ. ನಿಮ್ಮ ದೇಹವು ಪ್ರತಿ ಪರಿಮಾಣದಲ್ಲೂ ಬದಲಾಗುತ್ತಿರುತ್ತದೆ ; ಅದು ಅಸಾಧಾರಣವಾಗಿ ಸೂಕ್ಷ್ಮವಾದುದು ಮತ್ತು ಅದು ಇಷ್ಟೇ ಇಷ್ಟು ಕೂಡ ತಪ್ಪಾಗಲು ಸಾಧ್ಯವಿರುವುದಿಲ್ಲ. ಸಾಧನೆಯು ಒಬ್ಬನ ಸ್ವಂತ ಪರಿಶ್ರಮವನ್ನು ಅವಲಂಬಿಸಿರುತ್ತದೆ, ಹಾಗೂ ಗಾಂಗ್‌ನ

ಪರಿವರ್ತನೆ ಗುರುಗಳಿಂದ ನೇರವಾಗಿರುತ್ತದೆಯೆಂದು ನಾನಾಗಲೇ ನಿಮಗೆ ಹೇಳಿದ್ದೇನೆ. ನೀವು ಬೇಕಾಬಿಟ್ಟಿಯಾಗಿ ಇತರರ ವಿಷಯಗಳನ್ನು ತೆಗೆದುಕೊಂಡು ನಿಮ್ಮ ಅಭ್ಯಾಸಕ್ಕೆ ಸೇರಿಸಿದರೆ, ಈ ಅನ್ಯ ಸಂದೇಶಗಳು ನಮ್ಮ ಅಭ್ಯಾಸದ ಶಾಲೆಗೆ ಅಡ್ಡಿಪಡಿಸುತ್ತದೆ ಮತ್ತು ನೀವು ಅಡ್ಡಾ ದಿಡ್ಡಿ ಹೋಗುತ್ತೀರಿ. ಇದರೊಂದಿಗೆ, ಇದು ಸಾಮಾನ್ಯ ಮಾನವ ಸಮಾಜದ ಮೇಲೆ ಪ್ರತಿಫಲನಗೊಳ್ಳುತ್ತದೆ ಮತ್ತು ಸಾಮಾನ್ಯ ಜನರ ತೊಂದರೆಗಳನ್ನು ತಂದುಕೊಡುತ್ತದೆ. ಇದಕ್ಕೆ ನಿಮ್ಮ ಬೆನ್ನಟ್ಟಿ ಅನುಸರಿಸುವುದೇ ಕಾರಣ ಮತ್ತು ಅನ್ಯರಾರೂ ಇದನ್ನು ಅಡ್ಡಿಪಡಿಸಲಾರರು. ಇದು ನಿಮ್ಮ ಜ್ಞಾನೋದಯದ ಗುಣಮಟ್ಟಕ್ಕೆ ಸಂಬಂಧಿಸಿದ ವಿಚಾರವಾಗಿದೆ. ಒಮ್ಮನಸ್ಸಿನಿಂದ ನೀವು ಸೇರಿಸಿದ್ದೆಲ್ಲವೂ ಕೂಡ ನಿಮ್ಮ ಗಾಂಗ್‌ಅನ್ನು ಹಾಳುಗೆಡುಹುತ್ತದೆ ಮತ್ತು ನೀವು ಸಾಧನೆಯ ಅಭ್ಯಾಸವನ್ನು ಮುಂದುವರಿಸಲಾರಿರಿ. ಈ ಒಂದು ಸಮಸ್ಯೆ ಎದುರಾಗುತ್ತದೆ. ನಾನು ಎಲ್ಲರೂ ಫಾಲೂನ್ ದಾಫಾವನ್ನು ಓದಬೇಕೆಂದು ಹೇಳುತ್ತಿಲ್ಲ. ನೀವು ನಿರಂತರ ಚೀಗಾಂಗ್ ಅಭ್ಯಾಸಗಳಿಂದ ನೈಜ ಬೋಧನೆಯನ್ನು ಸ್ವೀಕರಿಸಿದ್ದೀರಿ ಮತ್ತು ಫಾಲೂನ್ ದಾಫಾವನ್ನು ಓದುವುದಿಲ್ಲವೆಂದರೆ ಅದನ್ನು ಕೂಡ ಒಪ್ಪಿಕೊಳ್ಳುತ್ತೇನೆ. ನಾನು ಹೇಳುವುದಿಷ್ಟೇ. ನಿಜವಾಗಿ ಉನ್ನತ ಮಟ್ಟದೆಡೆಗೆ ಸಾಧನೆಯ ಅಭ್ಯಾಸವನ್ನು ಕೈಗೊಳ್ಳಬೇಕಾದರೆ ಒಬ್ಬರು ತಮ್ಮ ಅಭ್ಯಾಸದಲ್ಲಿ ಏಕಚಿತ್ತರಾಗಿರಬೇಕು. ಇನ್ನೊಂದು ವಿಷಯದ ಕುರಿತು ನಾನು ಸ್ಪಷ್ಟಪಡಿಸಬೇಕು : ಈ ಸದ್ಯದಲ್ಲಿ ನನ್ನಂತೆ ಬೇರೆ ಯಾರೂ ಕೂಡ ಉನ್ನತ ಮಟ್ಟದೆಡೆಗೆ ಜನರಿಗೆ ಬೋಧಿಸುತ್ತಿಲ್ಲ. ಭವಿಷ್ಯದಲ್ಲಿ ನಾನು ನಿಮಗೆ ಏನು ಮಾಡಿರುವೆಯೆಂಬುದನ್ನು ನೀವು ಅರಿತುಕೊಳ್ಳುತ್ತೀರಿ. ಆದ್ದರಿಂದ ನೀವು ಅತ್ಯಂತ ಕಳಪೆ ಮಟ್ಟದ ಸುಜ್ಞಾನ ಗುಣವನ್ನು ಹೊಂದಿರುವುದಿಲ್ಲವೆಂದು ನಾನು ಆಶಿಸುತ್ತೇನೆ. ಬಹಳಷ್ಟು ಜನರು ಉನ್ನತ ಮಟ್ಟದೆಡೆಗೆ ಸಾಧನೆಯ ಅಭ್ಯಾಸವನ್ನು ಕೈಗೊಳ್ಳಲು ಬಯಸುತ್ತಾರೆ. ಇದನ್ನು ಈಗ ನಿಮ್ಮ ಮುಂದೆ ತಂದಿರಿಸಲಾಗಿದೆ ಮತ್ತು ಈ ಕುರಿತು ನೀವು ಇನ್ನು ಅರಿತಿಲ್ಲದಿರಬಹುದು. ನೀವು ಒಬ್ಬ ಗುರುವಿಗಾಗಿ ಎಲ್ಲೆಡೆ ಹುಡುಕಾಡಿದ್ದೀರಿ ಮತ್ತು ಅಪಾರ ಹಣವನ್ನು ವ್ಯಯ ಮಾಡಿದ್ದೀರಿ. ಆದರೂ ನಿಮಗೆ ಏನೂ ದೊರೆತಿಲ್ಲ. ಇಂದು, ಅದನ್ನು ನಿಮ್ಮ ಬಾಗಿಲ ಬಳಿಯೇ ದಯಪಾಲಿಸಲಾಗಿದೆ ಮತ್ತು ಅದನ್ನು ನೀವು ಅರಿತಿಲ್ಲದಿರಬಹುದು. ಇದು ನೀವು ಈ ಕುರಿತು ಜ್ಞಾನೋದಯ ಹೊಂದಬಹುದೇ ಮತ್ತು ನಿಮ್ಮನ್ನು ಉಳಿಸಬಹುದೇ ಎಂಬ ವಿಷಯಕ್ಕೆ ಸಂಬಂಧಿಸಿದ್ದಾಗಿದೆ.

# ಉಪನ್ಯಾಸ ಎರಡು

## ದಿವ್ಯ ನೇತ್ರ ಕುರಿತಾದ ಚರ್ಚೆ

ಬಹಳ ಮಂದಿ ಚೀಗಾಂಗ್ ಮಾಸ್ತರರು ದಿವ್ಯ ನೇತ್ರಗಳ ಕುರಿತಾಗಿ ಹೇಳಿದ್ದಾರೆ. ಆದಾಗ್ಯೂ ಫಾ, ಭಿನ್ನಭಿನ್ನ ಮಟ್ಟದಲ್ಲಿ ಭಿನ್ನಭಿನ್ನ ರೀತಿಯಲ್ಲಿ ಅಭಿವ್ಯಕ್ತಗೊಳ್ಳುತ್ತದೆ. ಒಬ್ಬ ಫಾ ಅಭ್ಯಾಸಿಗನ ಅಭ್ಯಾಸ ಯಾವೊಂದು ನಿರ್ದಿಷ್ಟವಾದ ಮಟ್ಟದಲ್ಲಿರುತ್ತದೋ ಆ ಮಟ್ಟಕ್ಕೆ ಸೀಮಿತವಾದ ಅಭಿವ್ಯಕ್ತಿಗಳನ್ನು ಮಾತ್ರ ದರ್ಶಿಸಲು ಸಾಧ್ಯವಾಗುತ್ತದೆ. ಆತ ತನ್ನ ಮಟ್ಟಕ್ಕಿಂತ ಭಿನ್ನ ಮಟ್ಟದ ಸತ್ಯಗಳನ್ನು ದರ್ಶಿಸಲು ಸಾಧ್ಯವಾಗುವುದಿಲ್ಲ ಮತ್ತು ಆತ ಅವನ್ನು ನಂಬುವುದೂ ಇಲ್ಲ. ಆದ್ದರಿಂದ ಆತ ತನ್ನ ಮಟ್ಟದಲ್ಲಿ ದರ್ಶಿಸಿರುವುದನ್ನೇ ಸತ್ಯವೆಂದು ಪರಿಗಣಿಸುತ್ತಾನೆ. ಆತನ ಅಭ್ಯಾಸದ ಮಟ್ಟ ಉನ್ನತ ಸ್ತರಗಳನ್ನು ತಲುಪುವವರೆಗೂ ಆತ ಇದ್ಯಾವದೂ ಅಸ್ತಿತ್ವದಲ್ಲಿಲ್ಲವೆಂದೇ ಭಾವಿಸುತ್ತಾನೆ ಮತ್ತು ನಂಬುವುದೂ ಇಲ್ಲ ; ಅದು ಆತನ ಅಭ್ಯಾಸ ಮಟ್ಟವನ್ನು ಅವಲಂಬಿಸಿರುತ್ತದೆ ಮತ್ತು ಆತನ ಮನಸ್ಸು ಕೂಡ ಉನ್ನತಿಗೇರಲು ಅಸಾಧ್ಯವಾಗುತ್ತದೆ. ಬೇರೆ ಮಾತಲ್ಲಿ ಹೇಳುವುದಾದರೆ, ದಿವ್ಯ ನೇತ್ರದ ಕುರಿತಂತೆ ಹಲವಾರು ಜನ ಒಂದು ರೀತಿ ಹೇಳಿದರೆ ಮತ್ತೆ ಕೆಲವರು ಬೇರೊಂದು ರೀತಿ ಹೇಳುತ್ತಾರೆ. ಇದರ ಪರಿಣಾಮವಾಗಿ, ಈ ವಿಷಯವನ್ನು ಗೊಂದಲಕ್ಕೀಡು ಮಾಡಿದ್ದಾರೆ, ಮತ್ತು ಯಾರೂ ಕೊನೆಯಲ್ಲಿ ಸರಿಯಾಗಿ ವಿವರಿಸಲು ಸಾಧ್ಯವಾಗಿಲ್ಲ. ದಿವ್ಯ ನೇತ್ರಗಳ ವಿಷಯ ಕೆಳಹಂತದ ವಿವರಣೆಯಿಂದ ಯೋಗ್ಯ ರೀತಿಯಲ್ಲಿ ವಿವರಿಸಲು ಸಾಧ್ಯವಾಗುವಂಥಹ ವಿಷಯವಲ್ಲ. ಹಿಂದೆ, ದಿವ್ಯ ನೇತ್ರಗಳ ರಚನೆಯ ವಿಷಯವು ರಹಸ್ಯದಲ್ಲಿ ರಹಸ್ಯ ವಿಷಯವಾಗಿತ್ತು. ಮತ್ತು ದಿನಂಪ್ರತಿ ಮನುಷ್ಯರು ಅದನ್ನು ತಿಳಿಯುವುದನ್ನು ನಿಷೇಧಿಸಲ್ಪಟ್ಟಿತ್ತು. ಆದ್ದರಿಂದ ಇತಿಹಾಸದುದ್ದಕ್ಕೂ ಇದನ್ನು ಕುರಿತು ಯಾರೂ ಮಾತನಾಡಿದ್ದಿಲ್ಲ. ಆದರೆ ನಾವಿಲ್ಲಿ ಈ ವಿಷಯವನ್ನು ಹಿಂದಿನ ಸಿದ್ಧಾಂತಗಳ ಆಧಾರದ ಮೇಲೆ ಉದ್ದೇಶಿಸಿ ಹೇಳುವುದಿಲ್ಲ. ನಾವು ಆಧುನಿಕ ವಿಜ್ಞಾನ ಮತ್ತು ಸರಳವಾದ ಆಧುನಿಕ ಭಾಷೆಯ ಮೂಲಕ ವಿವರಿಸುತ್ತೇವೆ ಮತ್ತು ಅದರ ಮೂಲಭೂತ ವಿಷಯಗಳನ್ನು ಉದ್ದೇಶಿಸುತ್ತೇವೆ.

ನಾವಿಲ್ಲಿ ಉಲ್ಲೇಖಿಸುವಂಥ ದಿವ್ಯ ನೇತ್ರಗಳು ನಮ್ಮಕಣ್ಣು ಹುಬ್ಬುಗಳ ಮಧ್ಯೆ ಮತ್ತು ಸ್ವಲ್ಪ ಮೇಲೆ ಇರುತ್ತವೆ ವ್ಮತ್ತವ ಪೀನಿಯಲ್ ಶರೀರದೊಂದಿಗೆ ಹೊಂದಿಕೊಂಡಿರುತ್ತದೆ. ಇದುವೇ ಮುಖ್ಯವಾದ ಮಾರ್ಗ. ಮಾನವ ಶರೀರವು ಅನೇಕ ಹೆಚ್ಚುವರಿ ಕಣ್ಣುಗಳನ್ನು ಹೊಂದಿರುತ್ತದೆ. ತಾವೋ ಶಾಲೆಯಲ್ಲಿ ದೇಹದ ಒಂದೊಂದು ರಂಧ್ರಗಳೂ ಒಂದೊಂದು ಕಣ್ಣುಗಳೆಂದು ಹೇಳುತ್ತಾರೆ. ತಾವೋ ಶಾಲೆಯು ದೇಹದ ಪ್ರತಿ ಆಕ್ಯುಪಂಕ್ಚರ್ ಬಿಂದುವನ್ನು "ರಂಧ್ರ" ವೆಂದು ಕರೆದರೆ ಚೀನೀ ವೈದ್ಯ ಶಾಸ್ತ್ರ ಅದನ್ನು ಆಕ್ಯುಪಂಕ್ಚರ್ ಬಿಂದುವೆಂದೇ ಕರೆಯುತ್ತದೆ. ಬುದ್ಧ ಶಾಲೆಯು ಪ್ರತಿಯೊಂದು ಬೆವರಿನ ರಂಧ್ರವನ್ನು ಕಣ್ಣುಗಳೆಂದೇ ಪರಿಗಣಿಸುತ್ತದೆ. ಆದ್ದರಿಂದ ಕೆಲವರು ತಮ್ಮ ಕಿವಿಗಳಿಂದ ಓದಬಲ್ಲರು, ಮತ್ತು ಕೆಲವರು ತಮ್ಮ ಕೈಗಳಿಂದ ಅಥವ ತಮ್ಮ ತಲೆಯ ಹಿಂಭಾಗದಿಂದ ನೋಡಬಲ್ಲರು ; ಮತ್ತೂ ಕೆಲವರು ತಮ್ಮ ಕಾಲು ಅಥವ ಹೊಟ್ಟೆಯಿಂದ ನೋಡಬಲ್ಲರು. ಇವೆಲ್ಲವೂ ಸಾಧ್ಯವಾಗುತ್ತದೆ.

ದಿವ್ಯ ನೇತ್ರಗಳನ್ನು ಕುರಿತು ಹೇಳುವ ಮೊದಲು ನಾವು ಮಾನವನ ಬಾಹ್ಯ ಜೋಡಿ ಕಣ್ಣುಗಳ ಕುರಿತು ಹೇಳುತ್ತೇವೆ. ಈ ನಡುವೆ ಕೆಲವು ಜನರು ಈ ನಮ್ಮ ಜೋಡಿ ಕಣ್ಣುಗಳು ಪ್ರಪಂಚದ ಯಾವುದೇ ವಸ್ತು ಅಥವ ಸಂಗತಿಯನ್ನು ನೋಡಬಲ್ಲುದೆಂದು ಭಾವಿಸುತ್ತಾರೆ. ಆದ್ದರಿಂದ ಕೆಲವು ಜನರಲ್ಲಿ ನಾವು ಈ ಕಣ್ಣಿನ ಮೂಲಕ ಏನನ್ನು ನೋಡುತ್ತೇವೋ ಅದೇ ಸತ್ಯ ಮತ್ತು ವಾಸ್ತವವೆಂಬ ಮೊಂಡು ಧೋರಣೆಯನ್ನು ಹೊಂದಿರುತ್ತಾರೆ. ಅವರು ತಮಗೆ ಕಾಣದ್ದನ್ನು ನಂಬುವುದೂ ಇಲ್ಲ, ಹಿಂದೆ, ಇಂತಹ ಜನರನ್ನು ಕಳಪೆ ಸಂಸ್ಕಾರವುಳ್ಳವರೆಂದು ಪರಿಗಣಿಸುತ್ತಿದ್ದರು. ಆದಾಗ್ಯೂ ಇಂತಹ ಜನರು ಏಕೆ ಕಳಪೆ ಸಂಸ್ಕಾರ ಹೊಂದಿದವರಾಗಿರುತ್ತಾರೆ ಎಂದು ಸರಿಯಾಗಿ ವಿವರಿಸಲು ಬಹಳಷ್ಟು ಮಂದಿಗೆ ಸಾಧ್ಯವಾಗುತ್ತಿರಲಿಲ್ಲ. ನೋಡಲಾರದ್ದನ್ನು ನಂಬಬಾರದು. ಈ ಮಾತು ನ್ಯಾಯವಾದದ್ದೆಂದು ಅನಿಸಬಹುದು. ಆದಾಗ್ಯೂ ಇದು ಕೊಂಚ ಉನ್ನತ ಮಟ್ಟದ ದೃಷ್ಟಿಕೋನದಿಂದ ಅಷ್ಟೇನೂ ನ್ಯಾಯವಾದದ್ದು ಎಂದೆನಿಸದು. ಪ್ರತಿಯೊಂದು ಕಾಲ-ಸ್ಥಳವೂ ವಸ್ತುವಿನಿಂದ ಕೂಡಿರುತ್ತದೆ. ಹಾಗೆಯೇ ಭಿನ್ನ ಕಾಲ-ಸ್ಥಳಗಳು ಭಿನ್ನ ಬಾಹ್ಯ ರಚನೆ ಮತ್ತು ಭಿನ್ನ ಜೀವಿಗಳ ಹಲವಾರು ರೂಪಗಳು ವ್ಯಕ್ತವಾಗುತ್ತವೆ.

ನಾನೊಂದು ಉದಾಹರಣೆಯನ್ನು ನಿಮಗೆ ಕೊಡಲು ಬಯಸುತ್ತೇನೆ. ಬುದ್ಧ ಧರ್ಮವು ಮಾನವ ಸಮಾಜದ ಪ್ರತಿಯೊಂದು ವಸ್ತುವೂ ಭ್ರಾಮಕ ಮತ್ತು ಅವಾಸ್ತವವೆಂದು ಪರಿಗಣಿಸುತ್ತದೆ. ಅವು ಹೇಗೆ ಭ್ರಮೆಯಾಗುತ್ತದೆ ? ನಿಜವಾದ ಮತ್ತು ವಾಸ್ತವವಾದ ವಸ್ತುಗಳು ನಮ್ಮ ಮುಂದೆಯೇ ಇರುತ್ತದೆ, ಅದನ್ನು ಯಾರು ತಾನೇ ಅಸತ್ಯವೆಂದು ಹೇಳಬಲ್ಲರು ? ಭೌತಿಕ ವಸ್ತುವಿನ ಅಸ್ತಿತ್ವದ ಆಕಾರ ಈ ತರಹ ಕಾಣಬಹುದಾದರೂ ವಾಸ್ತವವಾಗಿ ಅದು ಈ ತರಹ ಪ್ರಕಟಗೊಳ್ಳುವುದಿಲ್ಲ. ಆದಾಗ್ಯೂ ನಮ್ಮ ಕಣ್ಣುಗಳಿಗೆ ವಾಸ್ತವಿಕ ಪರಿಮಾಣದಲ್ಲಿರುವ ಭೌತಿಕ ವಸ್ತುಗಳನ್ನು ನಮಗೆ ಈಗ ಕಾಣುವ ರೀತಿಯಲ್ಲಿ ಸ್ಥಿರಗೊಳಿಸಿ ತೋರಿಸಬಲ್ಲಂತಹ ಶಕ್ತಿ ಇರುತ್ತದೆ. ಆದರೆ ವಸ್ತುಗಳು ನಿಜವಾಗಿಯೂ ಈ ಸ್ಥಿತಿಯಲ್ಲಿರುವಂಥದ್ದಲ್ಲ. ಮತ್ತು ನಮ್ಮ ಈ ಪರಿಮಾಣದಲ್ಲಿಯೂ ಈ ಸ್ಥಿಯಲ್ಲಿರುವಂಥದ್ದಲ್ಲ. ಉದಾಹರಣೆಗೆ, ಒಬ್ಬ ವ್ಯಕ್ತಿಯನ್ನು ಸೂಕ್ಷ್ಮದರ್ಶಕಯಂತ್ರದ ಮೂಲಕ ನೋಡಿದಾಗ ಹೇಗೆ ಕಾಣಿಸುತ್ತಾನೆ ? ಇಡೀ ದೇಹ ಸಡಿಲ, ಸಣ್ಣ ಅಣುವಿನಂತೆ ಚಲನಶೀಲವಾಗಿರುವ ಮರಳಿನ ಕಣಗಳಂತೆ ಇರುತ್ತದೆ. ನ್ಯೂಕ್ಲಿಯಸ್‌ನ ಸುತ್ತ ಎಲೆಕ್ಟ್ರಾನುಗಳು ಗಿರಕಿ ಹೊಡೆಯುತ್ತಿರುತ್ತವೆ ಮತ್ತು ಇಡೀ ದೇಹವು ತಿರುಚಿಕೊಂಡು ಚಲನಶೀಲವಾಗಿರುತ್ತದೆ. ದೇಹದ ಮೇಲ್ಮೈ ಮೃದುವಾಗಿ ಇಲ್ಲವೆ ಕ್ರಮಬದ್ಧವಾಗಿರುವಂಥದ್ದಲ್ಲ. ಬ್ರಹ್ಮಾಂಡದ ಯಾವುದೇ ವಸ್ತು, ಉಕ್ಕು, ಕಬ್ಬಿಣ ಮತ್ತು ಬಂಡೆ ಯಾವುದೇ ಇರಲಿ ಎಲ್ಲವೂ ಒಂದೇ ಮತ್ತು ಒಳಗಡೆ, ಅವುಗಳ ಅಣ್ವಿಕ ಮೂಲವಸ್ತುಗಳೆಲ್ಲಾ ಚಲನಶೀಲವಾಗಿರುತ್ತದೆ. ಅವುಗಳ ಸಂಪ್ರರ್ಣ ಆಕಾರವನ್ನು ನೋಡಲಿಕ್ಕಾಗುವುದಿಲ್ಲ ಮತ್ತು ಅವು ಅಸ್ಥಿರವಾಗಿರುವಂಥವು. ಈ, ಒಂದು ಮೇಜು ಕೂಡ ಅಸ್ಥಿರವಾಗಿದೆ, ಆದಾಗ್ಯೂ ನಿಮ್ಮ ಕಣ್ಣುಗಳು ಈ ಸತ್ಯವನ್ನು ನೋಡಲಿಕ್ಕಾಗುವುದಿಲ್ಲ. ಈ ಜೋಡಿ ಕಣ್ಣುಗಳು ಕೇವಲ ಈ ಒಂದು ಮಿಥ್ಯ ಅನುಭವವನ್ನು ನೀಡಲು ಸಾಧ್ಯ.

ಅಂದ ಮಾತ್ರಕ್ಕೆ ನಮಗೆ ಸೂಕ್ಷ್ಮದರ್ಶಕ ಮಟ್ಟದ ವಸ್ತುಗಳನ್ನು ನೋಡಲಿಕ್ಕಾಗುವುದಿಲ್ಲ ಅಥವಾ ಮನುಷ್ಯರಿಗೆ ಈ ಶಕ್ತಿ ಇಲ್ಲವೆಂದು ಅರ್ಥವಲ್ಲ. ಮನುಷ್ಯರು ಹುಟ್ಟುತ್ತಲೇ ಈ ಒಂದು ಶಕ್ತಿಯನ್ನು ಹೊಂದಿರುತ್ತಾರೆ ಮತ್ತು ಕೆಲವು ಸೂಕ್ಷ್ಮದರ್ಶಕ ಮಟ್ಟದ ವಸ್ತುಗಳನ್ನು ನೋಡಬಲ್ಲವರಾಗಿರುತ್ತಾರೆ. ಖಂಡಿತವಾಗಿಯೂ ಈ ಸೃಷ್ಟಿಯ ಬಾಹ್ಯ ಪರಿಮಾಣದಿಂದಲೇ ನಮಗೆ ಈ ಜೋಡಿ ಕಣ್ಣುಗಳು ಒದಗಿರುವುದು, ಮನುಷ್ಯರು ಮಿಥ್ಯ ಅನುಭವ ಪಡೆಯುತ್ತಾರೆ ಮತ್ತು ವಾಸ್ತವಿಕ ದರ್ಶನಕ್ಕೆ ಪ್ರತಿಬಂಧಿತರಾಗಿದ್ದಾರೆ. ಹಾಗಾಗಿ, ಹಿಂದೆ, ಯಾರ್‍ಯಾರು ತಾವು ದರ್ಶಿಸಲು ಸಾಧ್ಯವಾಗದ್ದನ್ನು ನಂಬುವುದಿಲ್ಲವೆಂದು, ಅಂಥವರನ್ನು ಸಾಧಕರ ಸಮುದಾಯದಲ್ಲಿ ಕೆಳಮಟ್ಟದ ಜ್ಞಾನೋದಯ ಹೊಂದಿದವರೆಂದೂ, ಮಿಥ್ಯಾನುಭವದಲ್ಲಿ ಕಳೆದುಹೋಗಿರುವ ಸಾಮಾನ್ಯ ಮನುಷ್ಯನೆಂದೂ ಮತ್ತು ದಿನನಿತ್ಯದ ಜನಗಳಲ್ಲಿ ಕಳೆದುಹೋದವರೆಂದೂ ಪರಿಗಣಿಸುತ್ತಿದ್ದರು. ಇದು ಧರ್ಮಗಳು ಮಾಡಿರುವ ಚಾರಿತ್ರಿಕ ಹೇಳಿಕೆಯಾಗಿದೆ. ಆದಾಗ್ಯೂ ಇದನ್ನು ನಾವು ಕೂಡ ಒಪ್ಪತಕ್ಕ ವಿಚಾರವೆಂದೇ ಪರಿಗಣಿಸುತ್ತೇವೆ.

ಈ ನಮ್ಮ ಜೋಡಿ ಕಣ್ಣುಗಳು ಈ ಸೃಷ್ಟಿಯ ಪರಿಮಾಣದಲ್ಲಿರುವ ವಸ್ತುಗಳನ್ನು ಈ ಮಟ್ಟಕ್ಕೆ ಸ್ಥರಗೊಳಿಸಬಲ್ಲದು.ಅಷ್ಟಲ್ಲದೆ ಅವುಗಳಿಗೆ ಬೇರೆ ಯಾವುದೇ ಮಹತ್ವ ಪೂರ್ಣ ಸಾಮರ್ಥ್ಯ ವಿರುವುದಿಲ್ಲ. ನಾವು ಯಾವುದನ್ನಾದರೂ ನೋಡಿದಾಗ ಅದರ ಛಾಯೆ ನೇರವಾಗಿ ಕಣ್ಣಿನ ಮೇಲೆ ಮೂಡುವುದಿಲ್ಲ. ಕಣ್ಣುಗಳು ಕ್ಯಾಮರಾದ ಮಸೂರವಿದ್ದ ಹಾಗೆ, ಕೇವಲ ಒಂದು ಸಾಧನವಾಗಿ ಮಾತ್ರ ಬಳಕೆಯಾಗತ್ತದೆ. ನಾವು ದೂರದಲ್ಲಿರುವುದನ್ನು ದೃಷ್ಟಿಸುವಾಗ ಮಸೂರವು ವಿಸ್ತರಿಸಲ್ಪಡುತ್ತದೆ ; ನಮ್ಮ ಕಣ್ಣುಗಳೂ ಇಂಥದೇ ಕಾರ್ಯವನ್ನು ಮಾಡುತ್ತವೆ. ನಾವು ಕತ್ತಲಲ್ಲಿ ನೋಡಿದಾಗ ಕಣ್ಣುಪಾಪೆ ವಿಸ್ತರಿಸುತ್ತದೆ. ಕ್ಯಾಮರಾದಿಂದ ಕತ್ತಲಲ್ಲಿ ಛಾಯಾಚಿತ್ರ ತೆಗೆಯುವಾಗಲೂ ಕೂಡ ಅದರ ಕಿಂಡಿಗಳು ವಿಸ್ತರಿಸುತ್ತದೆ. ಇಲ್ಲದಿದ್ದಲ್ಲಿ ಇಡೀ ಚಿತ್ರ ಬೆಳಕಿನ ಅಭಾವದಿಂದಾಗಿ ಕಪ್ಪಾಗಿಬಿಡುತ್ತದೆ. ನಾವು ಹೊರಗೆ ಭಾರಿ ಬೆಳಕಿದ್ದಲ್ಲಿ ಒಮ್ಮೆಲೆ ಹೋದಾಗ ಕಣ್ಣುಪಾಪೆಗಳು ಒಮ್ಮೆಲೆ ಕಿರಿದಾಗುತ್ತವೆ. ಇಲ್ಲದಿದ್ದಲ್ಲಿ ಬೆಳಕಿನಿಂದಾಗಿ ನಮ್ಮ ಕಣ್ಣುಗಳು ಕುಕ್ಕುತ್ತವೆ ಮತ್ತು ಜನರು ಸರಿಯಾಗಿ ನೋಡಲು ಅಸಮರ್ಥರಾಗುತ್ತಾರೆ. ಇದೇ ತತ್ವದ ಆಧಾರದ ಮೇಲೆಯೇ ಕ್ಯಾಮರಾವು ಕಾರ್ಯನಿರ್ವಹಿಸುತ್ತದೆ, ಮತ್ತು ಅದರ ಕಿಂಡಿಯೂ ಸಹ ಕಿರಿದಾಗಬೇಕಾಗುತ್ತದೆ. ಅದೂ ಕೂಡ ವಸ್ತುವಿನ ಛಾಯೆಯನ್ನು ಮಾತ್ರ ಸೆರೆಹಿಡಿಯಬಲ್ಲದು ಮತ್ತು ಅದು ಕೇವಲ ಒಂದು ಉಪಕರಣ ಮಾತ್ರ. ನಾವು ಏನನ್ನಾದರೂ

ನೋಡಿದಾಗ, ಅದು ವ್ಯಕ್ತಿ ಅಥವ ವಸ್ತು ಯಾವುದೇ ಆದರೂ ಅದರ ಬಿಂಬ ನಮ್ಮ ಮೆದುಳಿನಲ್ಲಿ ಮೂಡುತ್ತದೆ. ಅಂದರೆ, ನಾವು ಕಣ್ಣಿನ ಮೂಲಕ ಏನನ್ನು ನೋಡುತ್ತೇವೋ ಅದು ಕಣ್ಣಿನ ದೃಷ್ಟಿನರಗಳ ಮೂಲಕ ಮೆದುಳಿನ ಹಿಂಭಾಗದಲ್ಲಿರುವ ಪೀನಿಯಲ್ ಶರೀರವನ್ನು ತಲುಪುತ್ತದೆ. ಮತ್ತು ಅಲ್ಲಿಂದ ಅವು ಛಾಯೆಯ ಪ್ರತಿಫಲನವಾಗಿ ಬರುತ್ತದೆ. ಅಂದರೆ ಅದರ ನಿಜವಾದ ಪ್ರತಿಫಲಿತ ಬಿಂಬವು ಮೆದುಳಿನ ಪೀನಿಯಲ್ ಶರೀರದಲ್ಲಿ ನೋಡಲ್ಪಡುತ್ತದೆ. ಆಧುನಿಕ ವೈದ್ಯಶಾಸ್ತ್ರವೂ ಇದನ್ನು ಮಾನ್ಯ ಮಾಡುತ್ತದೆ.

ನಾವಿಲ್ಲಿ ಉದ್ದೇಶಿಸಿ ಹೇಳುತ್ತಿರುವ ದಿವ್ಯ ನೇತ್ರಗಳು ತೆರೆದುಕೊಂಡಾಗ, ಅದು ಮಾನವ ದೃಷ್ಟಿನರಗಳನ್ನು – ಅವಲಂಬಿಸುವುದಿಲ್ಲ ಮತ್ತು ನೇರವಾಗಿ ನಮ್ಮ ಕಣ್ಣುಬ್ಬುಗಳ ಮಧ್ಯದಿಂದ ಪ್ರವೇಶದ್ವಾರವನ್ನು ತೆರೆಯವುದರಿಂದ, ಪೀನಿಯಲ್ ಶರೀರವು ನೇರವಾಗಿ ಹೊರ ನೋಡಲು ಸಾಧ್ಯವಾಗುತ್ತದೆ. ಇದನ್ನು ದಿವ್ಯನೇತ್ರಗಳ ಅನಾವರಣವೆಂದು ಕರೆಯುತ್ತೇವೆ. ಹಲವರು ಈ ಕುರಿತು ಆಲೋಚಿಸಬಹುದು : "ಇದು ವಾಸ್ತವವಲ್ಲ, ಈ ನಮ್ಮ ಕಣ್ಣುಗಳು ಈಗಲೂ ಸಹ ಉಪಕರಣದ ರೀತಿಯಲ್ಲಿ ಕೆಲಸ ಮಾಡುತ್ತಿವೆ ಮತ್ತು ವಸ್ತುಗಳ ಬಿಂಬವನ್ನು ಸೆರೆಹಿಡಿಯಬಲ್ಲದು, ಹಾಗೂ ಇದ್ಯಾವದೂ ಕಣ್ಣುಗಳಿಲ್ಲದೆ ಅಸಾಧ್ಯವಾದುವಂಥವು." ಆಧುನಿಕ ವೈದ್ಯಶಾಸ್ತ್ರವೂ ಕೂಡ ಅಂಗವಿಚ್ಛೇದನ ಮೂಲಕ ನಮ್ಮ ಪೀನಿಯಲ್ ಶರೀರದ ಮುಂಭಾಗದಲ್ಲಿ ಕಣ್ಣಿನ ಸಂಪೂರ್ಣ ರಚನೆಯನ್ನ ಹೊಂದಿದೆ ಎಂದು ಕಂಡುಹಿಡಿದಿದ್ದಾರೆ. ಇದು ನಮ್ಮ ತಲೆಬುರುಡೆಯ ಒಳಗಡೆ ಬೆಳೆಯುವುದರಿಂದ ಇದನ್ನು ಉಪಯುಕ್ತವಿಲ್ಲದ ಕಣ್ಣೆಂದು ಹೇಳಬಹುದು. ಇವು ಶೇಷವಾಗಿರುವ ಕಣ್ಣು ಹೌದೋ ಅಲ್ಲವೋ ಎನ್ನುವ ಬಗ್ಗೆ ಸಾಧಕರ ಸಮುದಾಯದಲ್ಲಿ ಒಮ್ಮತವಿಲ್ಲ. ಆದಾಗ್ಯೂ ಆಧುನಿಕ ವೈದ್ಯವು ಮನುಷ್ಯ ಮೆದುಳಿನ ಮಧ್ಯದಲ್ಲಿ ಕಣ್ಣುಗಳು ಇದೆಯೆಂದು ಗುರುತಿಸಿದೆ, ನಾವು ಗುರಿಯಾಗಿಸಿಕೊಂಡು ತೆರೆಸುವ ಪ್ರವೇಶಮಾರ್ಗವೂ ಕೂಡ ನಿಶ್ಚಿತವಾಗಿ ಈ ಸ್ಥಳವೇ ಆಗಿದೆ, ಮತ್ತು ಆಧುನಿಕ ವೈದ್ಯವೂ ಕೂಡ ಈ ವಿಷಯದ ಕುರಿತು ಸಂಪೂರ್ಣ ಸಹಮತ ಹೊಂದಿದೆ. ಈ ಕಣ್ಣುಗಳು ನಮ್ಮ ಈಗಿರುವ ಕಣ್ಣುಗಳಂತೆ ಮಿಥ್ಯವಾದ ಬಿಂಬವನ್ನು ಸೃಷ್ಟಿಸುವುದಿಲ್ಲ, ಏಕೆಂದರೆ ಅವು ದೃಷ್ಟಿಸುವ ವಸ್ತುವಿನ ಗುಣ–ಸ್ವಭಾವ ಹಾಗೂ ಸಾರ ಎರಡನ್ನೂ ಗ್ರಹಿಸುತ್ತವೆ. ಆದ್ದರಿಂದಲೇ ಉನ್ನತ ಸ್ತರದ ದಿವ್ಯದೃಷ್ಟಿಯನ್ನು ಹೊಂದಿರುವ ವ್ಯಕ್ತಿಯು ನಮ್ಮ ಪರಿಮಾಣದ ಆಚೆಗೂ ವ್ಯಾಪಿಸಿರುವ ಕಾಲ–ಸ್ಥಳಗಳನ್ನು ನೋಡಬಲ್ಲವನಾಗಿರುತ್ತಾನೆ ಮತ್ತು ಅವನು ಸಾಮಾನ್ಯ ಮನುಷ್ಯರು ನೋಡಲಸಾಧ್ಯವಾದ ದೃಶ್ಯಗಳನ್ನು ನೋಡಬಲ್ಲವನಾಗಿರುತ್ತಾನೆ. ಕೆಳಮಟ್ಟದ ದಿವ್ಯದೃಷ್ಟಿಯನ್ನು ಹೊಂದಿರುವ ವ್ಯಕ್ತಿ ಗೋಡೆಯ ಮೂಲಕ ಮತ್ತು ಮಾನವ ದೇಹದ ಮೂಲಕ ನೋಡಬಲ್ಲಂಥಹ ಭೇದಕ ದೃಷ್ಟಿಯನ್ನು ಪಡೆದಿರುತ್ತಾನೆ. ಹೀಗೆ ಇದು ನಿಶ್ಚಿತವಾಗಿ ಇಂಥಹ ಅಸಾಮಾನ್ಯ ಶಕ್ತಿಯನ್ನು ಹೊಂದಿರುತ್ತದೆ.

ಬುದ್ಧ ಶಾಲೆಯು ಐದು ಮಟ್ಟದ ದೃಷ್ಟಿಯನ್ನು ಕುರಿತು ಹೇಳುತ್ತದೆ ; ದೈಹಿಕ ದೃಷ್ಟಿ, ದಿವ್ಯ ದೃಷ್ಟಿ, ಜ್ಞಾನದೃಷ್ಟಿ, ಫಾ ದೃಷ್ಟಿ ಮತ್ತು ಬುದ್ಧ ದೃಷ್ಟಿ. ಇವುಗಳು ದಿವ್ಯದೃಷ್ಟಿಗಳ ಪ್ರಮುಖ ಐದು ಸ್ತರಗಳು ಮತ್ತು ಪ್ರತಿಯೊಂದರಲ್ಲೂ ಉತ್ತಮ, ಮಧ್ಯಮ ಮತ್ತು ಕೆಳಮಟ್ಟ ಎಂಬ ಉಪವಿಭಾಗಗಳು ಇವೆ. ತಾವೋ ಶಾಲೆಯು ಒಂಭತ್ತು ಒಂಭತ್ತಲೆ ಅಥವ ಎಂಭತ್ತೊಂದು ಸ್ತರದ ಫಾ ದೃಷ್ಟಿಯ ಕುರಿತು ಹೇಳುತ್ತದೆ. ನಾವಿಲ್ಲಿ ಸರ್ವರಿಗೂ ದಿವ್ಯದೃಷ್ಟಿಯನ್ನು ಅನಾವರಣ ಮಾಡಿಸುತ್ತೇವೆ, ಆದಾಗ್ಯೂ ಅವನ್ನು ನಾವು ದಿವ್ಯದೃಷ್ಟಿಯ ಮಟ್ಟ ಅಥವ ಅದಕ್ಕಿಂತ ಕೆಳಗಿನ ಮಟ್ಟದಲ್ಲಿ ಅನಾವರಣಗೊಳಿಸುವುದಿಲ್ಲ ಏಕೆ? ನೀವಿಲ್ಲಿ ಕುಳಿತು ಸಾಧನೆಯ ಅಭ್ಯಾಸವನ್ನು ಮಾಡಲು ಪ್ರಾರಂಭಿಸಿರುತ್ತೀರಿ, ಆದಾಗ್ಯೂ, ನೀವು ಸಾಮಾನ್ಯ ಜನರ ಮಟ್ಟದಿಂದಲೇ ಪ್ರಾರಂಭಿಸುತ್ತಿದ್ದೀರಿ ಹಾಗೂ ಅನೇಕ ಸಾಮಾನ್ಯ ಜನರ ಆಸೆ ಆಕಾಂಕ್ಷೆಗಳನ್ನು ಇನ್ನೂ ಬಿಟ್ಟಿರುವುದಿಲ್ಲ. ನಿಮ್ಮ ದಿವ್ಯನೇತ್ರವನ್ನು ದಿವ್ಯದೃಷ್ಟಿಯ ಮಟ್ಟದಿಂದ ಕೆಳಗಿನ ಮಟ್ಟದಲ್ಲಿ ಅನಾವರಣಗೊಳಿಸಿದರೆ ಜನಸಾಮಾನ್ಯರು ಅಸಾಮಾನ್ಯ ಶಕ್ತಿಯೆಂದು ಭಾವಿಸುವ ಗೋಡೆಯ ಮೂಲಕ ಮತ್ತು ಮಾನವ ದೇಹದ ಮೂಲಕ ನೋಡಬಲ್ಲ ಶಕ್ತಿಯನ್ನು ಪಡೆಯುತ್ತೀರಿ. ಈ ಒಂದು ಅಸಾಮಾನ್ಯ ಶಕ್ತಿಯನ್ನು ವ್ಯಾಪಕವಾಗಿ ಕೊಟ್ಟರೆ ಮತ್ತು ಎಲ್ಲರೂ ದಿವ್ಯನೇತ್ರಗಳನ್ನು ಈ ಮಟ್ಟದಲ್ಲಿ ಅನಾವರಣಗೊಳಿಸಿದರೆ ಅದು ಸಾಮಾನ್ಯ ಮನುಷ್ಯರ ಸಮಾಜವನ್ನು ತೀವ್ರವಾಗಿ ಕದಡುತ್ತದೆ, ಮತ್ತು ಸಾಮಾನ್ಯ ಮಾನವ ಸಮಾಜವನ್ನು

ಅಸ್ಥಿರಗೊಳಿಸುತ್ತದೆ ; ರಾಜ್ಯದ ರಹಸ್ಯಗಳು ಗಂಡಾಂತರಗಳಿಗೊಳಗಾಗುತ್ತವೆ; ಜನರು ಉಡುಪು ಧರಿಸಿದರೂ, ಧರಿಸದೆ ಇದ್ದರೂ ಯಾವುದೇ ವ್ಯತ್ಯಾಸ ಬೀರದು, ಮತ್ತು ನೀವು ಮನೆಯ ಒಳಗಿರುವ ಜನರನ್ನು ಹೊರಗಿನಿಂದಲೇ ನೋಡಬಹುದು ; ಆಚೆ ರಸ್ತೆಯಲ್ಲಿ ಓಡಾಡುತ್ತಿರುವಾಗ ಕಾಣಸಿಗುವ ಲಾಟರಿಯಲ್ಲಿನ ಎಲ್ಲಾ ಬಹುಮಾನಗಳನ್ನು ನೀವೆ ಬಾಚಿಕೊಳ್ಳಬಹುದು, ಇವೆಲ್ಲವೂ ಒಪ್ಪತಕ್ಕದ್ದಲ್ಲ. ಈ ಕುರಿತು ಎಲ್ಲರೂ ಆಲೋಚಿಸಿ ; ಎಲ್ಲರ ದಿವ್ಯನೇತ್ರಗಳು ದಿವ್ಯದೃಷ್ಟಿಯ ಮಟ್ಟದಲ್ಲಿ ಅನಾವರಣಗೊಂಡರೆ ಅದು ಇನ್ನೂ ಮಾನವ ಸಮಾಜವಾಗಿ ಉಳಿಯುತ್ತದೆಯೇ ? ಮಾನವ ಸಮಾಜದ ಸ್ಥಿತಿಯನ್ನು ತೀವ್ರವಾಗಿ ಅಸ್ಥಿರಗೊಳಿಸುವುದು ಖಂಡಿತವಾಗಿಯೂ ನಿಷೇಧಿಸಲ್ಪಟ್ಟಿದೆ. ನಾವು ನಿಮ್ಮ ದಿವ್ಯನೇತ್ರವನ್ನು ಈ ಮಟ್ಟದಲ್ಲಿ ಅನಾವರಣಗೊಳಿಸಿದರೆ ನೀವು ಈ ಕೂಡಲೇ ಚೀಗಾಂಗ್ ಗುರುಗಳಾಗಿಬಿಡುತ್ತೀರಿ, ಹಲವರು ಚೀಗಾಂಗ್ ಗುರುಗಳಾಗುವ ಕುರಿತು, ಹಿಂದೆಯೇ ಕನಸು ಕಂಡಿದ್ದರು. ನಾನು ಅವರ ದಿವ್ಯದೃಷ್ಟಿಯನ್ನು ಈ ಕೂಡಲೇ ಈ ಮಟ್ಟದಲ್ಲಿ ಅನಾವರಣಗೊಳಿಸಿದರೆ, ಅವರು ರೋಗಿಗಳಿಗೆ ಚಿಕಿತ್ಸೆ ನೀಡಬಲ್ಲರು. ಹಾಗಾದ ಪಕ್ಷದಲ್ಲಿ ನಾನು ನಿಮ್ಮನ್ನೆಲ್ಲಾ ಸೈತಾನನ ದಾರಿಯಲ್ಲಿ ಕರೆದುಕೊಂಡು ಹೋದಂತಾಗುವುದಿಲ್ಲವೇ ?

ಹಾಗಾದರೆ ನಾನು ನಿಮ್ಮ ದಿವ್ಯ ನೇತ್ರವನ್ನು ಯಾವ ಮಟ್ಟದಲ್ಲಿ ಅನಾವರಣಗೊಳಿಸುತ್ತೇನೆ? ನಾನು ನಿಮ್ಮ ದಿವ್ಯ ನೇತ್ರವನ್ನು ನೇರವಾಗಿ ಜ್ಞಾನ ದೃಷ್ಟಿಯ ಮಟ್ಟದಲ್ಲಿ ಅನಾವರಣ ಮಾಡುತ್ತೇನೆ. ಈ ಮಟ್ಟಕ್ಕಿಂತ ಉನ್ನತ ಮಟ್ಟದಲ್ಲಿ ಅನಾವರಣಗೊಳಿಸಿದರೆ ನಿಮ್ಮ ಷಿನ್‌ಷಿಂಗ್ ಮಟ್ಟವು ತಕ್ಕದಾಗಿರುವುದಿಲ್ಲ. ಈ ಮಟ್ಟಕ್ಕಿಂತ ಕೆಳಗಿನ ಮಟ್ಟದಲ್ಲಿ ಅನಾವರಣಗೊಳಿಸಿದರೆ ಅದು ಸಾಮಾನ್ಯ ಮಾನವ ಸಮಾಜದ ಸ್ಥಿತಿಯನ್ನು ತೀವ್ರವಾಗಿ ಅಲ್ಲೋಲಕಲ್ಲೋಲಗೊಳಿಸುತ್ತದೆ, ಜ್ಞಾನದೃಷ್ಟಿಯ ಮಟ್ಟದಲ್ಲಿ ನೀವು ಗೋಡೆ ಅಥವ ಮಾನವ ದೇಹದ ಮೂಲಕ ನೋಡುವ ಶಕ್ತಿಯನ್ನು ಪಡೆಯುವುದಿಲ್ಲವಾದರೂ ನೀವು ಬೇರೆ ಪರಿಮಾಣದ ದೃಶ್ಯಗಳನ್ನ ನೋಡಬಲ್ಲಿರಿ. ಹಾಗಾದರೆ ಇದರಿಂದಾಗುವ ಅನುಕೂಲಗಳೇನು ? ಇದರಿಂದ ನಿಮಗೆ ಅಭ್ಯಾಸದ ಮೇಲಿನ ನಂಬಿಕೆ ಹೆಚ್ಚುತ್ತದೆ, ನೀವು ಯಾವಾಗ ಸಾಮಾನ್ಯ ಮನುಷ್ಯರು ಕಾಣದ್ದನ್ನು ನೋಡುವಿರೋ, ನೀವು ಅದನ್ನು ಅಸ್ತಿತ್ವವಿದೆಯೆಂದು ಯೋಚಿಸುತ್ತೀರಿ. ನಿಮಗೆ ಸ್ಪಷ್ಟವಾಗಿ ಕಾಣದಿದ್ದರೂ ಸಹ, ನಿಮ್ಮ ದಿವ್ಯ ದೃಷಿಯು ಈ ಮಟ್ಟದಲ್ಲಿ ಅನಾವರಣವಾಗಿರುತ್ತದೆ. ಮತ್ತು ಇದು ನಿಮ್ಮ ಅಭ್ಯಾಸಕ್ಕೆ ಒಳ್ಳೆಯದಾಗಿರುತ್ತದೆ. ಈ ಪುಸ್ತಕವನ್ನು ಒಬ್ಬ ನಿಷ್ಟ ದಾಫಾ ಅಭ್ಯಾಸಿಗ ಓದಿದಾಗಲೂ ಕೂಡ ಇದೇ ಫಲಿತಾಂಶ ದೊರಕುತ್ತದೆ, ಆತ ತನ್ನ ಷಿನ್‌ಷಿಂಗ್‌ನ್ನು ಸುಧಾರಿಸಲು ಕಟ್ಟುನಿಟ್ಟಾದ ನಿಯಮವನ್ನು ಅನುಸರಿಸಬೇಕು.

ಒಬ್ಬರ ದಿವ್ಯದೃಷ್ಟಿಯ ಮಟ್ಟವನ್ನು ಏನು ನಿರ್ಧರಿಸುತ್ತದೆ? ನಿಮ್ಮ ದಿವ್ಯದೃಷ್ಟಿಯು ಅನಾವರಣಗೊಂಡ ತಕ್ಷಣ, ನಿಮಗೆ ಎಲ್ಲವೂ ಗೋಚರವಾಗುತ್ತದೆ ಎಂದಲ್ಲ – ಅದು ಹಾಗಲ್ಲ, ಅದರಲ್ಲೂ ಮಟ್ಟಗಳ ವಿಂಗಡಣೆಗಳಿವೆ. ಹಾಗಾದರೆ ಯಾವುದು ಮಟ್ಟಗಳನ್ನು ನಿರ್ಧರಿಸುತ್ತದೆ ? ಇದರಲ್ಲಿ ಮೂರು ಅಂಶಗಳಿವೆ. ಮೊದಲಿಗೆ ಒಬ್ಬರ ದಿವ್ಯದೃಷ್ಟಿಯು ಒಳಗಿನಿಂದ ಹೊರಗೆ ಸಾಗುವ ಒಂದು ಕ್ಷೇತ್ರವನ್ನು ಹೊಂದಿರಬೇಕಾಗುತ್ತದೆ ಮತ್ತು ಇದನ್ನು ಚೀಯ ಸಾರವೆಂದು ಕರೆಯುತ್ತೇವೆ, ಹಾಗಾದರೆ ಅದರ ಉಪಯೋಗವೇನು ? ಅದು ದೂರದರ್ಶನದ ಪರದೆಯಂತೆ : ರಂಜಕವಿಲ್ಲದೆ ದೂರದರ್ಶನವನ್ನು ಚಾಲನೆ ಮಾಡಿದಾಗ ಅದು ಕೇವಲ ವಿದ್ಯುದ್ದೀಪ. ಅದು ಕೇವಲ ಪ್ರಕಾಶಿಸುತ್ತದೆ ಹೊರತು ಬಿಂಬಗಳಿರುವುದಿಲ್ಲ. ಏಕೆಂದರೆ ರಂಜಕದಿಂದ ಬಿಂಬಗಳು ಪ್ರದರ್ಶಿಸಲ್ಪಡುತ್ತವೆ. ಆದಾಗ್ಯೂ ಈ ಉದಾಹರಣೆ ಸಂಪೂರ್ಣವಾಗಿ ಹೊಂದಿಕೊಳ್ಳುವುದಿಲ್ಲ. ಏಕೆಂದರೆ ನಾವು ವಸ್ತುಗಳನ್ನು ನೇರವಾಗಿ ನೋಡಿದರೆ, ದೂರದರ್ಶನವು ಪರದೆಯ ಮೇಲೆ ಬಿಂಬಗಳನ್ನು ಪ್ರದರ್ಶಿಸುತ್ತದೆ, ಇದು ಸ್ಥೂಲವಾದ ವಿಚಾರ. ಈ ಕೊಂಚ ಚೀಯ ಸಾರವು ಅತ್ಯಂತ ಅಮೂಲ್ಯವಾದುದು ಮತ್ತು ಡ್ಡ ದಿಂದ ದು ಸಂಸ್ಕರಿಸಲ್ಪಟ್ಟ ಅತಿ ಸೂಕ್ಷ್ಮ ಪದಾರ್ಥದಿಂದ ಮಾಡಲ್ಪಟ್ಟಿರುತ್ತದೆ. ಸಾಮಾನ್ಯವಾಗಿ ಪ್ರತಿಯೊಬ್ಬ ಮನುಷ್ಯನ ಚೀಯ ಸಾರವು ವಿಭಿನ್ನವಾಗಿರುತ್ತದೆ. ಸುಮಾರಾಗಿ ಹತ್ತುಸಾವಿರ ಜನರಲ್ಲಿ ಇಬ್ಬರು ಒಂದೇ ಮಟ್ಟದವರಾಗಿರುತ್ತಾರೆ.

ದಿವ್ಯ ದೃಷ್ಟಿಯ ಮಟ್ಟವು ನಮ್ಮ ವಿಶ್ವದ ಫಾದ ನೇರ ಅಭಿವ್ಯಕ್ತಿ. ಇದು ಅಲೌಕಿಕವಾದದ್ದು ಮತ್ತು ಒಬ್ಬರ ಷಿನ್‌ಷಿಂಗ್‌ಗೆ ನೇರವಾಗಿ ಸಂಬಂಧಿಸಿದ್ದು. ಒಬ್ಬ ವ್ಯಕ್ತಿಯ ಷಿನ್‌ಷಿಂಗ್ ಮಟ್ಟವು

ಕಡಿಮೆಯಿದ್ದಲ್ಲಿ ಆತನ ಮಟ್ಟವು ಕಡಿಮೆಯಿರುತ್ತದೆ. ಕೆಳಮಟ್ಟದ ಷಿನ್‌ಷಿಂಗ್‌ನಿಂದಾಗಿ ಆ ವ್ಯಕ್ತಿಯ ಚೀಯ ಸಾರದ ಬಹುಭಾಗವು ವ್ಯಯವಾಗಿರುತ್ತದೆ. ಒಬ್ಬ ವ್ಯಕ್ತಿಯ ಷಿನ್‌ಷಿಂಗ್ ಮಟ್ಟವು ಉನ್ನತವಾಗಿದ್ದರೆ ಮತ್ತು ಈ ಸಾಮಾನ್ಯ ಮಾನವ ಸಮಾಜದಲ್ಲಿ ಆತ ಬಾಲ್ಯಾವಸ್ಥೆಯಿಂದ ಪ್ರೌಢಾವಸ್ಥೆಯವರೆಗೆ ಖ್ಯಾತಿ, ಲಾಭ, ಅಂತರ್ ವೈಯಕ್ತಿಕ ವಿರಸ, ವೈಯಕ್ತಿಕ ಲಾಭ ಮತ್ತು ಇತರ ಮಾನವ ಮನೋಭಾವನೆ ಮತ್ತು ಆಸೆಗಳಿಗೆ ಹೆಚ್ಚು ಲಕ್ಷ್ಯಗೊಡದೆ ಇದ್ದಾಗ ಆತನ ಚೀಯ ಸಾರವು ತುಲನಾತ್ಮಕವಾಗಿ ಚೆನ್ನಾಗಿ ಸಂರಕ್ಷಿಸಲ್ಪಟ್ಟಿರುತ್ತದೆ. ಆದ್ದರಿಂದ ಆತನ ದಿವ್ಯ ದೃಷ್ಟಿಯು ಅನಾವರಣಗೊಂಡಾಗ ಆತನ ದೃಷ್ಟಿಯು ಹೆಚ್ಚು ಸ್ವಚ್ಛವಾಗಿರುತ್ತದೆ. ಆರು ವರ್ಷದೊಳಗಿನ ಮಗುವಿನ ದಿವ್ಯ ದೃಷ್ಟಿಯು ಅನಾವರಣಗೊಂಡಾಗ ಆತನ ದೃಷ್ಟಿಯು ಅತ್ಯಂತ ಸ್ಪಷ್ಟವಾಗಿ ಗೋಚರಿಸುತ್ತದೆ. ಆತನ ದಿವ್ಯ ದೃಷ್ಟಿಯನ್ನು ಅನಾವರಣಗೊಳಿಸುವುದೂ ಅತ್ಯಂತ ಸುಲಭ. ನಾನೊಂದು ಪದವನ್ನು ಹೇಳಿದರೆ, ಅದು ಅನಾವರಣಗೊಳ್ಳುತ್ತದೆ.

ಸಾಮಾನ್ಯ ಮಾನವ ಸಮಾಜದ ಕಲುಷಿತ ಪ್ರಬಲ ಪ್ರವೃತ್ತಿ ಅಥವ ಬಣ್ಣದ ದೊಡ್ಡ ಪಿಪಾಯಿ ನಿಂದಾಗಿ, ಮಾನವರು ಬಹುವಾಗಿ ಸರಿಯೆಂದು ಪರಿಗಣಿಸುವ ಅನೇಕ ವಿಚಾರಗಳು ಅನೇಕ ಬಾರಿ ತಪ್ಪೇ ಆಗಿರುತ್ತದೆ. ಎಲ್ಲರಿಗೂ ಒಳ್ಳೆಯ ಜೀವನ ನಡೆಸಬೇಕೆಂಬ ಆಸೆ ಇರುವುದಿಲ್ಲವೇ ? ಉತ್ತಮ ಜೀವನದ ಆಸೆಯು ಇತರರ ಆಸಕ್ತಿಗಳನ್ನು ನಿರ್ಲಕ್ಷಿಸಿ ಒಬ್ಬರ ಸ್ವಾರ್ಥ ಆಸೆಗಳನ್ನು ಕೆರಳಿಸುತ್ತದೆ, ಇತರರ ಹಿತವನ್ನು ಕಸಿದುಕೊಳ್ಳುತ್ತದೆ ಅಥವ ಇತರರನ್ನು ಬೆದರಿಸಲು ಮತ್ತು ತೊಂದರೆಗೀಡು ಮಾಡಲು ದಾರಿ ಮಾಡಿಕೊಡಬಹುದು. ಸಾಮಾನ್ಯ ಜನರ ನಡುವೆ ವೈಯಕ್ತಿಕ ಹಿತಾಸಕ್ತಿಗಾಗಿ ಸ್ಪರ್ಧಿಸುವಂತೆ ಮತ್ತು ಹೋರಾಡುವಂತೆ ಒಬ್ಬರನ್ನು ದೂಡುತ್ತದೆ. ಹಾಗಾದಲ್ಲಿ ಇದು ಪ್ರಪಂಚದ ವಿಶೇಷ ಗುಣಗಳ ವಿರುದ್ಧ ಹೋದಂತಲ್ಲವೇ ? ಆದುದರಿಂದ ಯಾವುದನ್ನು ಜನಗಳು ಸರಿಯೆಂದು ಪರಿಗಣಿಸುವರೋ ಅದು ಅಗತ್ಯವಾಗಿ ಸರಿಯಿಲ್ಲದೆ ಇರಬಹುದು. ಮಗುವಿಗೆ ಶಿಕ್ಷಣ ನೀಡುವಾಗ ಸಾಮಾನ್ಯವಾಗಿ ಹಿರಿಯರು ಈ ರೀತಿ ಕಲಿಸಿಕೊಡುತ್ತಾರೆ, "ನೀವು ಚಾಲೂಕಾಗಿರುದನ್ನು ಕಲಿಯಬೇಕು", ಏಕೆಂದರೆ ಮುಂದೆ ಭವಿಷ್ಯದಲ್ಲಿ ಆತನಿಗೆ ಸಾಮಾನ್ಯ ಮಾನವ ಸಮಾಜದಲ್ಲಿ ಆಸರೆಯ ಸ್ಥಳ ದೊರಕುತ್ತದೆ. ನಮ್ಮ ಪ್ರಾಪಂಚಿಕ ದೃಷ್ಟಿಕೋನದಿಂದ "ಚಾಲೂಕಾಗಿರುವುದು" ಎಂಬುದೇ ಸರಿಯಿಲ್ಲದ್ದು, ಏಕೆಂದರೆ ನಾವು ಪ್ರಾಕೃತಿಕ ಮಾರ್ಗವನ್ನ ಅನುಸರಿಸಬೇಕಾಗುತ್ತದೆ. ಚಾಲೂ ಆಗಿರುವುದರಿಂದ ಆತ ತನ್ನ ವೈಯಕ್ತಿಕ ಹಿತಾಸಕ್ತಿಗಳನ್ನು ಬೆನ್ನಟ್ಟಲು ಬಯಸುತ್ತಾನೆ. "ನಿನಗೆ ಯಾರಾದರೂ ಬೆದರಿಸಿದರೆ ಅವರ ಗುರುಗಳ ಬಳಿ ಹೋಗು ಮತ್ತು ಅವನ ತಂದೆತಾಯಿಯನ್ನು ಹುಡುಕು". "ನೆಲದ ಮೇಲೆ ಬಿದ್ದ ಹಣವನ್ನು ಎತ್ತಿಕೋ". ಈ ರೀತಿ ಮಗುವಿಗೆ ಹೇಳಿಕೊಡಲಾಗುತ್ತದೆ. ಬಾಲ್ಯದಿಂದ ವಯಸ್ಕನಾಗುವ ತನಕ ಸಿಗುವ ಹೆಚ್ಚಾದ ಈ ರೀತಿಯ ಬೋಧನೆಗಳಿಂದ ಆತ ಸಾಮಾನ್ಯ ಮಾನವ ಸಮಾಜದಲ್ಲಿ ಹೆಚ್ಚು ಹೆಚ್ಚು ಸ್ವಾರ್ಥಿಯಾಗುತ್ತಾನೆ. ಆತ ಅನ್ಯರನ್ನು ಉಪಯೋಗಿಸಿಕೊಳ್ಳುತ್ತಾನೆ ಮತ್ತು ತನ್ನ ಡ್ಹಾ ವನ್ನು ಕಳೆದುಕೊಳ್ಳುತ್ತಾನೆ.

ಈ ಪದಾರ್ಥ, ಡ್ಹಾ ಕಳೆದುಕೊಂಡಾಕ್ಷಣ ಹೋಗುವಂಥದ್ದಲ್ಲ. ಅದು ಮತ್ತೊಬ್ಬ ವ್ಯಕ್ತಿಗೆ ವರ್ಗವಾಗುತ್ತದೆ. ಆದಾಗ್ಯೂ ಚೀಯ ಸಾರವು ಕಣ್ಮರೆಯಾಗಬಹುದು. ಯಾರಾದರೂ ಚಿಕ್ಕಂದಿನಿಂದಲೇ ಕುತಂತ್ರಿಯಾಗಿದ್ದು ತನ್ನ ವೈಯಕ್ತಿಕ ಆಸಕ್ತಿಯ ಬಗ್ಗೆ ಅತಿಯಾದ ಅಸೆಯುಳ್ಳವನಾಗಿದ್ದು ಮತ್ತು ತನ್ನ ಲಾಭವನ್ನೇ ಬಯಸುವವನಾಗಿದ್ದು, ಅಂಥಹ ವ್ಯಕ್ತಿಯ ದಿವ್ಯದೃಷ್ಟಿಯು ಅನಾವರಣಗೊಂಡಾಗ, ಅದು ಸಾಮಾನ್ಯವಾಗಿ ಕೆಲಸ ಮಾಡುವುದಿಲ್ಲ ಅಥವ ಸರಿಯಾಗಿ ದೃಷ್ಟಿ ಗೋಚರಿಸುವುದಿಲ್ಲ. ಆದಾಗ್ಯೂ ಅದು ಈ ತರಹದ ಸ್ಥಿತಿಯಿಂದ ಕ್ರಿಯಾತ್ಮಕಗೊಳ್ಳುವುದೇ ಇಲ್ಲವೆಂದು ಅರ್ಥವಲ್ಲ. ಏಕೆ? ಏಕೆಂದರೆ ನಾವು ಸಾಧನೆಯ ಹಾದಿಯಲ್ಲಿ ನಮ್ಮ ಮೂಲ, ನಿಜ ವ್ಯಕ್ತಿತ್ವಕ್ಕೆ ಮರಳಲು ಪ್ರಯತ್ನಿಸುತ್ತೇವೆ ಮತ್ತು ಸತತ ಅಭ್ಯಾಸದಿಂದ ಅದನ್ನು ನಿರಂತರವಾಗಿ ಪರಿಹರಿಸುತ್ತೇವೆ ಮತ್ತು ಮರಳಿ ಪಡೆದುಕೊಳ್ಳುತ್ತೇವೆ. ಆದ್ದರಿಂದ ನಮ್ಮ ಷಿನ್‌ಷಿಂಗ್ ಕುರಿತು ಹೆಚ್ಚು ಗಮನ ಕೊಡಬೇಕು. ನಾವು ಸಮಗ್ರ ಸುಧಾರಣೆ ಮತ್ತು ಸಮಗ್ರ ಉನ್ನತಿಗೆ ಒತ್ತು ಕೊಡುತ್ತೇವೆ. ಷಿನ್‌ಷಿಂಗ್ ಒಂದು ಉನ್ನತಿಸಿದರೆ, ಮಿಕ್ಕೆಲ್ಲಾ ಅಂಶವು ಅದನ್ನು ಹಿಂಬಾಲಿಸಿ ಉನ್ನತಿಸುತ್ತದೆ. ಷಿನ್‌ಷಿಂಗ್ ಉನ್ನತಗೊಳ್ಳದೆ ಹೋದರೆ, ಆ ಒಂದು ಚೀ ಸಾರದ ತುಣುಕನ್ನು ಮರಳಿ ಪಡೆಯಲು ಸಾಧ್ಯವಾಗುವುದಿಲ್ಲ. ಇದು ಮೂಲ ತತ್ವ.

ಎರಡನೇ ಅಂಶವೆಂದರೆ, ಒಬ್ಬ ವ್ಯಕ್ತಿಯ ಜನ್ಮಸಿದ್ಧ ಗುಣ ಉತ್ತಮವಾಗಿದ್ದು, ಆತ ಸ್ವಂತವಾಗಿ ಚೀಗಾಂಗ್‌ನ್ನು ಅಭ್ಯಾಸ ಮಾಡಿದಾಗ ಕೂಡ ಆತನ ದಿವ್ಯದೃಷ್ಟಿಅನಾವರಣಗೊಳ್ಳಬಹುದು. ಹಲವುಸಾರಿ, ಕೆಲವು ಜನರು ತಮ್ಮ ದಿವ್ಯದೃಷ್ಟಿ ಅನಾವರಣಗೊಂಡಾಕ್ಷಣ ಭಯಭೀತರಾಗುತ್ತಾರೆ. ಅವರೇಕೆ ಭಯಭೀತರಾಗುತ್ತಾರೆ? ಏಕೆಂದರೆ ಜನರು ಸಾಮಾನ್ಯವಾಗಿ ಕತ್ತಲು ಮತ್ತು ನಿಶ್ಯಬ್ದವಾದ ಮಧ್ಯರಾತ್ರಿಯ ಸಮಯದಲ್ಲಿ ಚೀಗಾಂಗ್ ಅಭ್ಯಾಸ ಮಾಡುತ್ತಾರೆ. ಒಬ್ಬ ವ್ಯಕ್ತಿ ಅಭ್ಯಾಸದಲ್ಲಿ ತೊಡಗಿರುವಾಗ, ಅನಿರೀಕ್ಷಿತವಾಗಿ ತನ್ನ ಕಣ್ಣೆದುರಿಗೆ ದೊಡ್ಡ ಗಾತ್ರದ ಕಣ್ಣನ್ನು ನೋಡುತ್ತಾನೆ, ಹಠಾತ್ತಾಗಿ ಬೆದರುತ್ತಾನೆ, ಈ ಭಯವು ಅಸಾಮಾನ್ಯವಾಗಿ ದೊಡ್ಡದಾಗಿರುತ್ತದೆ ಮತ್ತು ಆ ಬಳಿಕ ಆತ ಚೀಗಾಂಗ್ ಅಭ್ಯಾಸವನ್ನು ಮುಂದುವರೆಸಲು ಧೈರ್ಯಗೆಡುತ್ತಾನೆ. ಎಷ್ಟೊಂದು ಭಯಾನಕ ! ನಿಮ್ಮನ್ನು ನೋಡುತ್ತಿರುವ ದೊಡ್ಡಗಾತ್ರದ ಸ್ಪಷ್ಟವಾದ ಮತ್ತು ಮಿಟುಕಿಸುವ ಕಣ್ಣು. ಪರಿಣಾಮವಾಗಿ ಹಲವು ಜನರು ಅದನ್ನು ರಾಕ್ಷಸ ಕಣ್ಣು, ಇನ್ನೂ ಹಲವರು ಅದನ್ನು ಬುದ್ಧನ ಕಣ್ಣು ಇನ್ನೂ ಮುಂತಾಗಿ ಕರೆಯುತ್ತಾರೆ. ಆದರೆ ವಾಸ್ತವವಾಗಿ ಅದು ನಿಮ್ಮ ಸ್ವಂತ ಕಣ್ಣೇ. ವಾಸ್ತವವಾಗಿ ಅಭ್ಯಾಸವು ಸ್ವಂತ ಪರಿಶ್ರಮವನ್ನು ಅವಲಂಬಿಸಿದ್ದರೆ, ಗಾಂಗ್‌ನ ಪರಿವರ್ತನೆ ಅವರ ಗುರುಗಳಿಂದ ಮಾಡಲ್ಪಡುತ್ತದೆ. ಈ ಸಂಪೂರ್ಣ ಗಾಂಗ್ ಪರಿವರ್ತನೆಯ ಪ್ರಕ್ರಿಯೆ ಬಹಳ ಸಂಕೀರ್ಣವಾದುದು, ಮತ್ತು ಭಿನ್ನವಾದ ಪರಿಮಾಣದಲ್ಲಿ ನಡೆಯುತ್ತದೆ. ದೇಹವು ಈ ಪರಿಮಾಣದಲ್ಲಷ್ಟೇ ಅಲ್ಲದೆ ಇತರ ಎಲ್ಲಾ ಪರಿಮಾಣದಲ್ಲೂ ಮಾರ್ಪಾಟಾಗುತ್ತದೆ. ಅದು ನಿಮ್ಮಿಂದ ಮಾಡಲು ಸಾಧ್ಯವೇ ? ಸಾಧ್ಯವಿಲ್ಲ. ಈ ಎಲ್ಲಾ ಸನ್ನಿವೇಶಗಳನ್ನು ಗುರುಗಳೇ ನಿರ್ವಹಿಸುತ್ತಾರೆ. ಆದ್ದರಿಂದ ಅಭ್ಯಾಸವು ಸ್ವ ಪರಿಶ್ರಮವನ್ನು ಅವಲಂಬಿಸಿದರೆ, ಗಾಂಗ್‌ನ ಪರಿವರ್ತನೆಯನ್ನು ಅವರವರ ಗುರುಗಳು ನಿರ್ವಹಿಸುತ್ತಾರೆ. ನೀವು ಈ ಕುರಿತು ಇಚ್ಛಿಸಬಹುದು ಮತ್ತು ಯೋಚಿಸಬಹುದಷ್ಟೇ, ಆದರೆ ಗುರುಗಳು ಮಾತ್ರವೇ ಇದನ್ನು ನಡೆಸಿಕೊಡುತ್ತಾರೆ.

ಕೆಲವು ಜನ ತಮ್ಮ ಸ್ವಪರಿಶ್ರಮದಿಂದಲೇ ತಮ್ಮ ದಿವ್ಯದೃಷ್ಟಿಯನ್ನು ಅನಾವರಣಗೊಳಿಸಬಲ್ಲರು. ನಾವು ಕೂಡ ನಿಮ್ಮ ಈ ಕಣ್ಣನ್ನೇ ಉದ್ದೇಶಿಸುತ್ತೇವೆ, ಆದರೂ ನೀವು ನಿಮ್ಮ ಸ್ವ ಪರಿಶ್ರಮದಿಂದ ಅವುಗಳನ್ನು ಅಭಿವೃದ್ಧಿಗೊಳಿಸಲು ಸಾಧ್ಯವಿಲ್ಲ. ಕೆಲವಾರು ಜನಗಳಿಗೆ ಗುರುಗಳಿದ್ದು, ಅವರುಗಳು ದಿವ್ಯನೇತ್ರವು ಅನಾವರಣಗೊಂಡಿದ್ದನ್ನು ಕಂಡು ಅವುಗಳನ್ನು ಇವರಿಗಾಗಿ ಪರಿವರ್ತಿಸಿ ಕೊಡುತ್ತಾರೆ. ಇದನ್ನು ವಾಸ್ತವಿಕ ಕಣ್ಣೆಂದು ಹೇಳುತ್ತೇವೆ. ಆದಾಗ್ಯೂ ಹಲವಾರು ಜನರಿಗೆ ಗುರುಗಳಿಲ್ಲದೆ ಇರಬಹುದು, ಆದರೆ ಅವರಿಗೆ ಯಾರಾದರೂ ಸಂಚಾರಿ ಗುರುಗಳು ಇರಬಹುದು. ಬುದ್ಧ ಶಾಲೆಯು ಹೀಗೆ ಹೇಳುತ್ತದೆ : "ಬುದ್ಧರು ಸರ್ವರೂಪಿಯಾಗಿರುವರು" ಅವರು ಅನೇಕ ಸಂಖ್ಯೆಯಲ್ಲಿದ್ದು ಸರ್ವವ್ಯಾಪಿಯಾಗಿರುತ್ತಾರೆ.. ಹಲವಾರು ಜನ ಈ ರೀತಿ ಹೇಳುತ್ತಾರೆ. "ನಮ್ಮ ಶರೀರದ ಮೂರು ಅಡಿ ಮೇಲೆ ಆಧ್ಯಾತ್ಮಿಕ ಜೀವಗಳಿರುತ್ತಾರೆ." ಅರ್ಥಾತ್ ಅವರುಗಳು ಎಣಿಕೆಯಿಲ್ಲದಷ್ಟು ಸಂಖ್ಯೆಯಲ್ಲಿರುವರು. ಒಬ್ಬ ದಾರಿಹೋಕ ಗುರುಗಳು ನಿಮ್ಮನ್ನು ಕಂಡು, ನಿಮ್ಮ ಉತ್ತಮ ಅಭ್ಯಾಸದಿಂದ ನಿಮ್ಮ ದಿವ್ಯದೃಷ್ಟಿ ಅನಾವರಣಗೊಂಡಿದ್ದನ್ನು ನೋಡಿ, ನಿಮಗೆ ದಿವ್ಯನೇತ್ರಗಳ ಅಗತ್ಯವಿದೆಯೆಂದು ಬಗೆದರೆ, ಅವನು ಅಥವ ಅವಳು ನಿಮ್ಮ ದಿವ್ಯನೇತ್ರವನ್ನು ಪರಿವರ್ತಿಸಿ ಕೊಡಬಹುದು, ಹಾಗಾದಾಗ ಅದು ಕೂಡ ನಿಮ್ಮ ಸ್ವ ಸಾಧನೆಯ ಫಲವೆಂದೇ ಪರಿಗಣಿತವಾಗುತ್ತದೆ. ಮೋಕ್ಷವನ್ನು ದಯಪಾಲಿಸುವಾಗ, ಯಾವುದೇ ಮೌಲ್ಯ, ವೆಚ್ಚ, ಬಹುಮಾನ ಅಥವ ಖ್ಯಾತಿಯ ಕುರಿತು ನಿರ್ಬಂಧ ಅಥವ ವಿಚಾರವಿರುವುದಿಲ್ಲ. ಹಾಗಾಗಿ ಅವರುಗಳು ಜನಸಾಮಾನ್ಯರ ನಡುವಿನ ಜನಸಾಮಾನ್ಯರಿಗಿಂತ ಘನತೆವೆತ್ತವರಾಗುತ್ತಾರೆ. ಅವರುಗಳು ಇದನ್ನು ಸಂಪೂರ್ಣವಾಗಿ ಔದಾರ್ಯ ಸಹಾನುಭೂತಿಯಿಂದ ಮಾಡುತ್ತಾರೆ.

ಒಬ್ಬರ ದಿವ್ಯದೃಷ್ಟಿ ಅನಾವರಣಗೊಂಡಾಗ ಈ ಒಂದು ಪರಿಸ್ಥಿತಿ ಉದ್ಭವಿಸಬಹುದು : ನಮ್ಮ ಕಣ್ಣುಗಳು ಬೆಳಕಿನಿಂದ ಅತಿಯಾಗಿ ಕಣ್ಣುಕುಕ್ಕಿ ಉರಿಯುಂಟು ಮಾಡಬಹುದು. ಅದು ನಿಜವಾಗಿಯೂ ನಿಮ್ಮ ಕಣ್ಣುಗಳಿಗೆ ಉರಿಯುಂಟು ಮಾಡುತ್ತಿರುವುದಿಲ್ಲ. ಬದಲಿಗೆ, ವಾಸ್ತವವಾಗಿ ನಮ್ಮ ಪೀನಿಯಲ್ ಶರೀರಕ್ಕೆ ಉರಿಯುಂಟಾದರೆ ನಮಗೆ ನಮ್ಮ ಕಣ್ಣುಗಳಿಗೆ ಉರಿಯಾಗಿದೆಯೆಂದು ಅನಿಸುತ್ತದೆ. ಈ ಕಣ್ಣುಗಳನ್ನು ನೀವಿನ್ನೂ ಪಡೆದಿರುವುದಿಲ್ಲವಾದ್ದರಿಂದ ಹೀಗಾಗುತ್ತದೆ. ನಿಮಗೆ ಈ ಕಣ್ಣು ಸರಬರಾಜು ಆದ ನಂತರ ನಿಮ್ಮ ದೈಹಿಕ ಕಣ್ಣುಗಳಿಗೆ ಉರಿಯುಂಟಾಗುವುದಿಲ್ಲ. ನಮ್ಮ ಹಲವಾರು ಅಭ್ಯಾಸಿಗರು ಈ ಕಣ್ಣುಗಳನ್ನು ನೋಡಲು ಅಥವ ಅನುಭವಿಸಲು ಶಕ್ಯರಾಗಿರುತ್ತಾರೆ. ಇದು ನಮ್ಮ ಪ್ರಪಂಚದ

ಗುಣಗಳನ್ನೇ ಒಳಗೊಂಡಿರುವುದರಿಂದ ಅದು ಮುಗ್ದವಾಗಿಯೂ ಮತ್ತು ಕುತೂಹಲಕಾರಿಯೂ ಆಗಿರುತ್ತದೆ. ಅದು ನಿಮ್ಮ ದಿವ್ಯನೇತ್ರವು ಅನಾವರಣಗೊಂಡಿದೆಯೇ ಮತ್ತು ಅದು ಸ್ಪಷ್ಟವಾಗಿ ನೋಡಬಹುದೇ ಎಂದು ಒಳಗೇ ಪರೀಕ್ಷಿಸಿ ನೋಡುತ್ತದೆ. ಅದು ನಿಮ್ಮೊಳಗೂ ಕೂಡ ನೋಡುತ್ತದೆ. ಈ ಒಂದು ಸನ್ನಿವೇಶದಿಂದ ನಿಮ್ಮ ದಿವ್ಯದೃಷ್ಟಿ ಅನಾವರಣಗೊಳ್ಳುತ್ತದೆ. ಅದು ನಿಮ್ಮನ್ನು ನೋಡುವಾಗ, ಹಠಾತ್ತಾಗಿ ನೀವದನ್ನು ನೋಡಿ ಭಯಗೊಳ್ಳುತ್ತೀರಿ. ಆದರೆ ವಾಸ್ತವವಾಗಿ, ಅವು ನಿಮ್ಮ ಸ್ವಂತ ಕಣ್ಣುಗಳೇ. ಇವಾಗಿನಿಂದ ನೀವು ಏನನ್ನು ನೋಡಿದರೂ ಸಹ ಈ ಕಣ್ಣುಗಳಿಂದಲೇ ನೋಡುತ್ತೀರಿ. ನಿಮ್ಮ ದಿವ್ಯನೇತ್ರವು ಅನಾವರಣಗೊಂಡಿದ್ದರೂ ಸಹ ಈ ಕಣ್ಣು ಇಲ್ಲದೆ ನೀವು ಏನನ್ನೂ ಸಂಪೂರ್ಣವಾಗಿ ನೋಡಲಾಗುವುದಿಲ್ಲ.

ಮೂರನೆಯ ಅಂಶವೇನೆಂದರೆ ಯಾವಾಗ ಒಬ್ಬರು ಆಯಾಮ ಪರವನ್ನು ಬೇಧಿಸುವರೋ ಆಗ ಬೇರೆ ಆಯಾಮಗಳ ವ್ಯತ್ಯಾಸವನ್ನು ತೋರಿಸಲಾಗುತ್ತದೆ. ಈ ಪರಿಮಾಣದಿಂದಲೇ ಒಬ್ಬರ ನಿಜವಾದ ಮಟ್ಟವನ್ನು ನಿರ್ಧರಿಸುತ್ತದೆ. ಈ ಒಂದು ಮುಖ್ಯವಾದ ಮಾರ್ಗದಿಂದ ನೋಡುವುದರ ಜೊತೆಗೆ, ಜನರಿಗೆ ಬೇರೆ ಉಪಮಾರ್ಗಗಳೂ ಇವೆ. ಬುದ್ಧ ಶಾಲೆಯು ಪ್ರತಿಯೊಂದು ಬೆವರುರಂದ್ರವು ಒಂದು ಕಣ್ಣು ಎಂಬುದನ್ನು ಎತ್ತಿಹಿಡಿದರೆ ತಾವೋ ಶಾಲೆಯು ದೇಹದ ಪ್ರತಿ ವಕ್ರತೆಯೂ ಒಂದು ಕಣ್ಣು ಎಂದು ಪ್ರತಿಪಾದಿಸುತ್ತದೆ. ಅಂದರೆ ದೇಹದ ಆಕ್ಯುಪಂಕ್ಚರ್ ಸ್ಥಾನಗಳೆಲ್ಲವೂ ಕಣ್ಣುಗಳಾಗಿರುತ್ತವೆ. ನಿಜವಾಗಿಯೂ ಅವರು ಇಲ್ಲಿ ಏನನ್ನು ಚರ್ಚಿಸುತ್ತಿದ್ದಾರೋ ಅದು ಕೂಡ ದೇಹದಲ್ಲಿ ಆಗುವ ಒಂದು ಬಗೆಯ ಫಾ ಪರಿವರ್ತನೆಗಳು ; ದೇಹದ ಯಾವುದೇ ಭಾಗದಿಂದಲೂ ಕೂಡ ವಸ್ತುಗಳನ್ನು ನೋಡಬಹುದು.

ನಾವಿಲ್ಲಿ ಉಲ್ಲೇಖಿಸುವ ಮಟ್ಟ ಇದಕ್ಕಿಂತ ಭಿನ್ನವಾದುದು. ಮುಖ್ಯವಾಹಿನಿಯ ಜೊತೆಯಲ್ಲಿ ಇತರ ಹಲವಾರು ಜಾಗಗಳಲ್ಲಿ ಅಂದರೆ ಎರಡು ಕಣ್ಣುಬ್ಬುಗಳ ನಡುವೆ, ಕಣ್ಣುರೆಪ್ಪೆಗಳ ಮೇಲೆ ಮತ್ತು ಕೆಳಗೆ ಮತ್ತು ಶಾಫುನ್ ಬಿಂದುವಿನ ಬಳಿ, ಹಲವಾರು ಪ್ರಮುಖ ವಾಹಿನಿಗಳಿರುತ್ತದೆ. ಇದು ಸ್ಥರಗಳಲ್ಲಿ ಮುಖ್ಯವಾದ ಮುನ್ನಡೆವಿನ ವಿಷಯವನ್ನು ನಿರ್ದರಿಸುತ್ತದೆ. ಒಬ್ಬ ಸಾಮಾನ್ಯ ಅಭ್ಯಾಸಿಗ ಈ ಎಲ್ಲಾ ಜಾಗಗಳಿಂದಲೂ ದೃಷ್ಟಿಸಬಲ್ಲವನಾಗಿದ್ದರೆ ಆತ ಈಗಾಗಲೇ ಅತ್ಯಂತ ಉನ್ನತ ಮಟ್ಟ ತಲುಪಿದ್ದಾನೆ ಎಂದು ಅರ್ಥ. ಹಲವಾರು ಜನ ತಮ್ಮ ದೈಹಿಕ ಕಣ್ಣುಗಳಿಂದಲೂ ನೋಡಬಲ್ಲವರಾಗಿರುತ್ತಾರೆ. ಅವರೂ ಕೂಡ ತಮ್ಮ ಕಣ್ಣುಗಳನ್ನು ವಿಕಸಿಸಿ ಹಲವಾರು ಸ್ವರೂಪದ ಅತಿಮಾನುಷ ದಿವ್ಯ ಶಕ್ತಿಗಳಿಂದ ಸಜ್ಜುಗೊಳಿಸಲು ಸಫಲರಾಗಿದ್ದಾರೆ. ಆದಾಗ್ಯೂ ಈ ಕಣ್ಣನ್ನು ಸರಿಯಾಗಿ ಉಪಯೋಗಿಸದಿದ್ದಾಗ ಆತ

ಒಂದು ವಸ್ತುವನ್ನು ಮಾತ್ರ ನೋಡುತ್ತಾನೆ. ಆದರೆ ಬೇರೆ ವಸ್ತುವನ್ನು ನೋಡುವುದಿಲ್ಲ. ಅದೂ ಕೂಡ ಸರಿಯಾಗಿ ಕೆಲಸವನ್ನು ನಿರ್ವಹಿಸುವುದಿಲ್ಲ. ಆದ್ದರಿಂದ ಹಲವಾರು ಜನರಿಗೆ ಸಾಮಾನ್ಯವಾಗಿ ಒಂದು ಕಣ್ಣು ಒಂದು ಕಡೆ ನೋಡಿದರೆ ಮತ್ತೊಂದು ಕಣ್ಣು ಇನ್ನೊಂದು ಕಡೆ ನೋಡುತ್ತದೆ. ಆದರೂ ಈ ಕಣ್ಣಿನ (ಬಲಗಣ್ಣು) ಕೆಳಗೆ ಯಾವುದೇ ಉಪವಾಹಿನಿ ಇರುವುದಿಲ್ಲ ಏಕೆಂದರೆ ಅದು ನೇರವಾಗಿ ಫಾಗೆ ಸಂಬಂಧಿಸಿರುತ್ತದೆ. ಸಾಮಾನ್ಯವಾಗಿ ಜನರು ಕೆಟ್ಟ ಕೆಲಸವನ್ನು ಮಾಡಲು ತಮ್ಮ ಬಲಗಣ್ಣನ್ನು ಉಪಯೋಗಿಸುತ್ತಾರೆ ; ಆದ್ದರಿಂದ ಬಲಗಣ್ಣಿನ ಕೆಳಗೆ ಯಾವುದೇ ಉಪವಾಹಿನಿಗಳಿರುವುದಿಲ್ಲ. ಇದೆಲ್ಲಾ ಹಲವಾರು ಪ್ರಮುಖ ಉಪವಾಹಿನಿಗಳು ಒಬ್ಬರ, ಈ ಮೂರು ಲೋಕದ ಫಾ ಅಭ್ಯಾಸದಲ್ಲಿ ಅಭಿವೃದ್ಧಿಗೊಂಡದ್ದನ್ನು ಉಲ್ಲೇಖಿಸುತ್ತದೆ.

ಅತ್ಯುನ್ನತ ಮೇಲ್ಮಟ್ಟದ ಮತ್ತು ಮೂರು ಲೋಕದ ಫಾದಾಚೆಗಿನ ಅಭ್ಯಾಸವನ್ನು ತಲುಪಿದಾಗ, ಸಂಯುಕ್ತ ಕಣ್ಣನ್ನು ಹೋಲುವ ಕಣ್ಣು ರೂಪುಗೊಳ್ಳುತ್ತದೆ. ನಿರ್ದಿಷ್ಟವಾಗಿ ಹೇಳಬೇಕಾದರೆ, ಸಂಯುಕ್ತ ಕಣ್ಣನ್ನು ಹೋಲುವ ಕಣ್ಣು ರೂಪುಗೊಳ್ಳುತ್ತದೆ. ನಿರ್ದಿಷ್ಟವಾಗಿ ಹೇಳಬೇಕಾದರೆ, ಮೇಲ್ಮುಖದಲ್ಲಿ ಹಲವಾರು ಸಣ್ಣ ಕಣ್ಣುಗಳಿಂದ ಕೂಡಿರುವ ಒಂದು ದೊಡ್ಡ ಕಣ್ಣು

ಕಾಣುತ್ತದೆ. ಕೆಲವು ಮಹಾನ್ ಅತ್ಯುನ್ನತ ಮಟ್ಟದ ಜ್ಞಾನಿಗಳು ತಮ್ಮ ಮುಖದ ತುಂಬೆಲ್ಲಾ ಲೆಕ್ಕವಿಲ್ಲದಷ್ಟು ಕಣ್ಣುಗಳನ್ನು ವಿಕಾಸಗೊಳಿಸಿರುತ್ತಾರೆ. ಈ ಎಲ್ಲಾ ಕಣ್ಣುಗಳು ಈ ದೊಡ್ಡ ಕಣ್ಣಿನ ಮೂಲಕವೇ ನೋಡುತ್ತವೆ. ಮತ್ತು ತಮಗೆ ಬೇಕಾದ್ದನ್ನೆಲ್ಲಾ ನೋಡಬಲ್ಲವು. ಒಮ್ಮೆ ಕಣ್ಣು ಹಾಯಿಸಿದರೆ ಅವುಗಳಿಗೆ ಎಲ್ಲಾ ಮಟ್ಟಗಳೂ ಕಾಣುತ್ತವೆ. ಇಂದು ಪ್ರಾಣಿಶಾಸ್ತ್ರಜ್ಞರು ಮತ್ತು ಕೀಟಶಾಸ್ತ್ರಜ್ಞರು ನೊಣಗಳನ್ನು ಕುರಿತು ಅಧ್ಯಯನ ಮಾಡಿದ್ದಾರೆ. ನೊಣದ ಕಣ್ಣು ಬಹಳ ದೊಡ್ಡದು ; ಸೂಕ್ಷ್ಮದರ್ಶಕದ ಮೂಲಕ ನೋಡಿದಾಗ ಇದು ಹಲವಾರು ಸಣ್ಣ ಕಣ್ಣುಗಳಿಂದ ಕೂಡಿರುವುದೆಂದು ತಿಳಿದುಬರುತ್ತದೆ ಮತ್ತು ಇದನ್ನು ನಾವು ಸಂಯುಕ್ತ ಕಣ್ಣುಗಳೆನ್ನುತ್ತೇವೆ. ಒಬ್ಬ ಅಭ್ಯಾಸಿಗ ಅತ್ಯುನ್ನತ ಮೇಲ್ಮಟ್ಟವನ್ನು ತಲುಪಿದಾಗ ಈ ಪರಿಸ್ಥಿತಿ ಉದ್ಭವಿಸುತ್ತದೆ. ತಥಾಗತ ಮಟ್ಟಕ್ಕಿಂತ ಹಲವಾರು ಪಟ್ಟು ಉನ್ನತಿಗೇರಿದವರಿಂದ ಮಾತ್ರ ಇದು ಸಾಧ್ಯವಾಗುತ್ತದೆ. ಆದಾಗ್ಯೂ ಒಬ್ಬ ಸಾಮಾನ್ಯ ಮನುಷ್ಯನಿಗೆ ಇದು ಗೋಚರಿಸುವುದಿಲ್ಲ. ಸಾಧಾರಣ ಮಟ್ಟದಲ್ಲಿರುವ ಜನರಿಂದಲೂ ಕೂಡ ಇದರ ಅಸ್ತಿತ್ವ ಗುರುತಿಸಲಾಗದು ಮತ್ತು ಇದು ಬೇರೊಂದು ಪರಿಮಾಣದಲ್ಲಿ ಅಸ್ತಿತ್ವ ಹೊಂದಿರುವುದರಿಂದ ಅವರಿಗೆ ಅವನು ಅಥವ ಅವಳು ಕೇವಲ ಸಾಮಾನ್ಯ ಮನುಷ್ಯರಂತೆಯೇ ಕಾಣುತ್ತಾರೆ. ಇದು ಮಟ್ಟಗಳಲ್ಲಾಗುವ ಹೊಸ ಸಾಧನೆಯನ್ನು ವಿವರಿಸುತ್ತದೆ. ಅಂದರೆ, ಇದು ಒಬ್ಬರು ಭಿನ್ನ ಪರಿಮಾಣಗಳನ್ನು ತಲುಪಬಹುದೇ ಎಂಬ ವಿಷಯದ ಕುರಿತಾಗಿದೆ.

ಮೂಲತಃ ನಾನು ದಿವ್ಯದೃಷ್ಟಿಯರಚನೆಯ ಹೊರರೇಖೆಯ ಬಗ್ಗೆ ಸಮಸ್ತರಿಗೂಹೇಳಿದ್ದೇನೆ.ನಾವು ನಿಮ್ಮ ದಿವ್ಯ ದೃಷ್ಟಿಯನ್ನು ಬಾಹ್ಯಬಲದಿಂದ ಅತೀ ವೇಗದಿಂದ ಮತ್ತು ಅತೀ ಸುಲಭವಾಗಿ ತೆಗೆಯುತ್ತೇವೆ. ನಾನು ಯಾವಾಗ ದಿವ್ಯದೃಷ್ಟಿಯ ಬಗ್ಗೆ ಹೇಳುತ್ತಿದ್ದೇನೋ, ಆಗ ಪ್ರತಿಯೊಬ್ಬರಿಗೂ ಕೂಡ ನಿಮ್ಮ ಹಣೆಯು ಬಿಗಿದಂತಾಗಿ ಭಾಸವಾಗುತ್ತದೆ ; ಒಳ ಮಾಂಸಖಂಡಗಳು ಸಂಕಲವಾಗುವಂತೆ ಮತ್ತು ಕೋರೆ ಹೊಡೆಯುವ ಹಾಗೆ ಭಾಸವಾಗುತ್ತದೆ ಅದು ಅದೇ ರೀತಿ ಇತ್ತು, ಹೌದಲ್ಲವೇ ? ಅದು ಹಾಗೆಯೇ ಇತ್ತು. ಎಲ್ಲಿಯವರೆಗೆ, ನೀವು ನಿಜವಾಗಿಯೂ ನಿಮ್ಮ ಮನಸ್ಸನ್ನು ಫಾಲೂನ್ ದಾಫಾ ಓದಲು ಬಯಸುವಿರೋ, ಎಲ್ಲರಿಗೂ ಇದೇ ರೀತಿ ಭಾಸವಾಗುತ್ತದೆ ; ಒಳ ತೊರೆಯುವಾಗಿ ಹೊರಬಲವು ಅತೀ ವೇಗದಿಂದ ಬರುತ್ತದೆ. ದಿವ್ಯಚಕ್ಷುವನ್ನು ತೆರೆಯಲು ನಾನು ನಿರ್ಧಿಷ್ಟವಾದ ಶಕಿಯನ್ನು ಬಿಡುಗಡೆಗೊಳಿಸಿದ್ದೇನೆ. ಈ ಮಧ್ಯೆ ನಾನು ಫಾಲೂನನ್ನು ನಿಮ್ಮ ದಿವ್ಯಚಕ್ಷುವನ್ನು ದುರಸ್ತುಪಡಿಸಲು ಕಳಿಸಿದ್ದೇನೆ. ನಾನು ಯಾವಾಗ ದಿವ್ಯಚಕ್ಷುವಿನ ಬಗ್ಗೆ ಮಾತಾಡುತ್ತಿದ್ದೇನೋ, ನಾನು ಎಲ್ಲರ ದಿವ್ಯಚಕ್ಷುವನ್ನು ತೆರೆಯುತ್ತಿದ್ದೆ. ಆದರೆ ಎಲ್ಲರೂ ಕೂಡ ನಮ್ಮ ಫಾಲೂನ್‌ದಾಫಾ ಅಭ್ಯಾಸ ಮಾಡಿದರೆ ಮಾತ್ರ. ಆದರೆ, ಎಲ್ಲರಿಗೂ ಸ್ಪಷ್ಟವಾಗಿ ಕಾಣುವುದಿಲ್ಲ, ಮತ್ತು ಎಲ್ಲರಿಗೂ ಅದರ ಜೊತೆಗೆ ಕಾಣುವುದಿಲ್ಲ. ಅದು ನೇರವಾಗಿ ನಿಮ್ಮಲ್ಲಿ ನಿಮ್ಮನ್ನು ಅವಲಂಬಿಸಿರುತ್ತದೆ. ಬೇಸರವಿಲ್ಲ, ಅದರೊಂದಿಗೆ ನಿಮಗೆ ಕಾಣದಿದ್ದರೆ ಅಂಥ ದೊಡ್ಡ ವಿಷಯವೇನಿಲ್ಲಾ. ನೀವು ಸತತವಾಗಿ ನಿಮ್ಮ ಮಟ್ಟವನ್ನು ಉನ್ನತಿಗೊಳಿಸುವ ಹಾಗೆ ನಿಮಗೆ ಕ್ರಮೇಣವಾಗಿ ವಸ್ತುವು ಕಾಣತೊಡಗುತ್ತದೆ, ಮತ್ತು ಮೋಡ ಕವಿದ ನಿಮ್ಮ ಕಣ್ಣು ಕೂಡ ಹೆಚ್ಚು ಸ್ಪಷ್ಟವಾಗುತ್ತದೆ. ಎಲ್ಲಿಯವರೆಗೆ ನೀವು ಅಭ್ಯಾಸ ಮಾಡುವಿರೋ ಮತ್ತು ಅಭ್ಯಾಸ ಮಾಡಲು ಧೃಡಮನಸ್ಸಿನವರಾಗಿರುವಿರೋ, ನೀವು ಕಳೆದುಕೊಂಡ ಎಲ್ಲವನ್ನು ಮರುಪಡೆಯುವಿರಿ.

ಈ ದಿವ್ಯಚಕ್ಷುವನ್ನು ನಿಮ್ಮಷ್ಟಕ್ಕೆ ನೀವೇ ತೆರೆದುಕೊಳ್ಳುವುದು ಕಷ್ಟಕರ. ದಿವ್ಯಚಕ್ಷುವನ್ನು ತಮ್ಮಷ್ಟಕ್ಕೆ ತಾವೇ ತೆಗೆದುಕೊಳ್ಳುವ ಅನೇಕ ಬಗೆಗಳ ಬಗ್ಗೆ ಮಾತಾಡುತ್ತೇನೆ. ಉದಾಹರಣೆಗೆ ನೀವು ಕುಳಿತು ಧ್ಯಾನ ಮಾಡುವಾಗ, ನಿಮ್ಮ ಹಣೆಯನ್ನು ಮತ್ತು ದಿವ್ಯಚಕ್ಷುವನ್ನು ನೋಡುವಾಗ ಕೆಲವರಿಗೆ ಹಣೆಯ ಒಳಗೆ ಕತ್ತಲಾಗಿ ಕಾಣುತ್ತಿದೆ ಎಂದು ಭಾಸವಾಗುತ್ತದೆ, ಮತ್ತು ಅಲ್ಲಿ ಏನೂ ಇಲ್ಲವೆಂದು ಅನಿಸುತ್ತದೆ. ಕಾಲಕ್ರಮೇಣವಾಗಿ ಅವರಿಗೆ ಕ್ರಮೇಣವಾಗಿ ಹಣೆಯ ಒಳಗೆ ಬಿಳಿಯಾಗಿ ಪರಿಗಣಿಸುತ್ತದೆ. ಹಲವು ಕಾಲ ಅಭ್ಯಾಸ ಮಾಡಿದಾಗ, ಅವರ ಹಣೆಯ ಒಳಗೆ ಕ್ರಮೇಣವಾಗಿ ಉಜ್ವಲಗೊಳ್ಳುತ್ತಿದೆ ಮತ್ತು ಅದು ಕೆಂಪು ಬಣ್ಣಕ್ಕೆ ತಿರುಗುತ್ತಿದೆ ಎಂದು ಅರಿವಾಗುತ್ತದೆ. ಈ ಸಮಯದಲ್ಲಿ ದೂರದರ್ಶನದ ಮೇಲೆ ಹೂವುಗಳು ಅರಳಿದಂತೆ ಕಾಣುತ್ತದೆ. ಅಥವ ಚಲನಚಿತ್ರದಲ್ಲಿ ಕ್ಷಣದಲ್ಲಿ ಹೂವುಗಳು

1. **ಶಾಘುನ ಬಿಂದು** – ಕಣ್ಣುಬ್ಬುಗಳ ನಡುವೆ ಇರುವ ಆಕ್ಯುಪಂಕ್ಚರ್ ಬಿಂದು.

ಅರಳಿದಂತೆ ಕಾಣುತ್ತದೆ. ಆ ತರಹದ ದೃಶ್ಯಗಳು ಕಾಣುತ್ತವೆ. ಕೆಂಪು ಬಣ್ಣ ಮೊದಲುಶುರುವಾಗುತ್ತದೆ, ಮತ್ತು ಅದು ತಕ್ಷಣವೇ ಮಧ್ಯದಲ್ಲಿ ನಿಂತು ಸತತವಾಗಿ ತಿರುಗುತ್ತದೆ. ಒಂದು ವೇಳೆ ಅದನ್ನು ನೀವು ನಿಮ್ಮಷ್ಟಕ್ಕೆ ಸಂಪೂರ್ಣವಾಗಿ ಅಂತ್ಯದವರೆಗೆ ತಿರುಗಿಸಲು ಬಯಸಿದರೆ ಎಂಟು ಅಥವ ಹತ್ತು ವರುಷಗಳೇ ಕಳೆದರೂ ಸಾಲದು. ಏಕೆಂದರೆ ದಿವ್ಯಚಕ್ಷುವು ಸಂಪೂರ್ಣವಾಗಿ ಮುಚ್ಚಿಹೋಗಿರುತ್ತದೆ.

ಕೆಲವು ಜನರ ದಿವ್ಯದೃಷ್ಟಿಯು ತಡೆಹಿಡಿದಿರುವುದಿಲ್ಲ ಮತ್ತು ಅವು ಒಂದು ಸಂಚಾರಿ ಮಾರ್ಗದಿಂದ ಸಜ್ಜಿತವಾಗಿರುತ್ತದೆ. ಆದರೆ ಅವುಗಳಲ್ಲಿ ಯಾವುದೇ ಶಕ್ತಿ ಇರುವುದಿಲ್ಲ, ಏಕೆಂದರೆ ಅವರು ಚೀಗಾಂಗ್‌ನ್ನು ಅಭ್ಯಾಸ ಮಾಡುವುದಿಲ್ಲ. ಆದ್ದರಿಂದ ಅವರು ಚೀಗಾಂಗ್ ಅಭ್ಯಾಸ ಮಾಡುತ್ತಲೇ, ಚೆಂಡಿನಾಕಾರದ ಕಪ್ಪು ವಸ್ತು ಹಠಾತ್ತಾಗಿ ಕಣ್ಣ ಮುಂದೆ ಕಾಣಿಸಿಕೊಳ್ಳುತ್ತದೆ. ಅವರು ಅಭ್ಯಾಸವನ್ನು ಮುಂದುವರಿಸಿದ ಹಾಗೆ ಅದು ಕ್ರಮೇಣ ಬಿಳಿ ಬಣ್ಣಕ್ಕೆ ತಿರುಗುತ್ತದೆ. ಕೊನೆಗೆ ಅದು ಕಾಂತಿಯುಕ್ತವಾಗಿ ಮತ್ತೂ ಕಾಂತಿಯುಕ್ತವಾಗಿ ಹೊಳೆಯುತ್ತದೆ ಮತ್ತು ಇದರಿಂದ ಕಣ್ಣುಗಳು ಕುಕ್ಕುವಂತಾಗುತ್ತದೆ. ಇದರಿಂದಾಗಿ ಕೆಲವು ಜನರು "ನಾನು ಸೂರ್ಯನನ್ನು ನೋಡಿದೆ" ಅಥವ "ನಾನು ಚಂದ್ರನನ್ನು ನೋಡಿದೆ" ಎಂದು ಹೇಳುವುದುಂಟು ನಿಜವೆಂದರೆ ಅವರು ಸೂರ್ಯನನ್ನೋ ಅಥವ ಚಂದ್ರನನ್ನೋ ಕಂಡಿರುವುದಿಲ್ಲ. ಹಾಗಾದರೆ ಅವರು ನೋಡಿದ್ದೇನು? ಅದೇ ಅವರ ಸಂಚಾರಿ ಮಾರ್ಗ. ಕೆಲವಾರು ಜನ ತಮ್ಮ ಮಟ್ಟಗಳಲ್ಲಿ ಅತ್ಯಂತ ವೇಗವಾಗಿ ಮುಂದುವರಿಯುತ್ತಾರೆ. ಅವರು ಕಣ್ಣನ್ನು ಅಳವಡಿಸಿದ ಕೂಡಲೇ ದೃಷ್ಟಿಸಲು ಆಗುತ್ತದೆ. ಬೇರೆಯವರಿಗೆ ಇದು ಸ್ವಲ್ಪ ಕಠಿಣವಾಗಬಹುದು. ಅವರಿಗೆ ಚೀಗಾಂಗ್‌ನ್ನು ಅಭ್ಯಾಸ ಮಾಡುವ ವೇಳೆ ಸಂಚಾರಿ ಮಾರ್ಗದ ಮೂಲಕ ಹೊರಗೆ ಓಡಿಹೋಗುತ್ತಿರುವಂತೆ ಭಾಸವಾಗುತ್ತದೆ. ಅದು ಸುರಂಗದಂತೆಯೋ ಇಲ್ಲವೆ ಬಾವಿಯಂತೆಯೋ ಇರಬಹುದು. ಅವರಿಗೆ ನಿದ್ದೆಯಲ್ಲೂ ಕೂಡ ಹೊರಗೆ ಓಡುತ್ತಿರುವಂತೆ ಭಾಸವಾಗುತ್ತದೆ. ಕೆಲವರಿಗೆ ಕುದುರೆಯನ್ನು ಓಡಿಸುತ್ತಿರುವಂತೆ ; ಮತ್ತೆ ಕೆಲವರಿಗೆ ಹಾರುತ್ತಿರುವಂತೆ ; ಮತ್ತೆ ಕೆಲವರಿಗೆ ಓಡುತ್ತಿರುವಂತೆ ಮತ್ತು ; ಕೆಲವರಿಗೆ ಕಾರಿನಲ್ಲಿ ಮುನ್ನುಗ್ಗುತ್ತಿರುವಂತೆ ಭಾಸವಾಗಬಹುದು. ದಿವ್ಯಚಕ್ಷುಗಳನ್ನು ತಮ್ಮಿಂದ ತಾವೆ ಅನಾವರಣಗೊಳಿಸುವುದು ಕಠಿಣಸಾಧ್ಯವಾದುದರಿಂದ ಅವರಿಗೆ ಕೊನೆ ಗಮ್ಯವನ್ನು ತಲುಪುವುದಕ್ಕೆ ಸಾಧ್ಯವಾಗುವುದಿಲ್ಲವೆಂದು ಅನಿಸುತ್ತದೆ. ತಾವೋ ಶಾಲೆಯು ಈ ಮಾನವ ದೇಹವನ್ನು ಚಿಕ್ಕ ಪ್ರಪಂಚವೆಂದು ಪರಿಗಣಿಸುತ್ತದೆ. ಒಂದು ವೇಳೆ ಅದು ಪುಟ್ಟ ವಿಶ್ವವೇ ಆಗಿದ್ದಲ್ಲಿ ನೀವು ಯೋಚಿಸಿ, ಹಣೆಯಿಂದ ಪೀನಿಯಲ್ ಶರೀರದ ದೂರವು ಸುಮಾರು 108 ಸಾವಿರ 2 ಲೀ.ಗಿಂತಲೂ ದೂರವಾಗಿರುತ್ತದೆ. ಆದುದರಿಂದ ಒಬ್ಬರಿಗೆ ಯಾವಾಗಲೂ ಹೊರಗೆ ಹೋಗಲು ಮುನ್ನುಗ್ಗುವಂತೆ ಮತ್ತು ಕೊನೆ ಗಮ್ಯವನ್ನು ತಲುಪಲು ಅಸಾಧ್ಯವೆಂಬಂತೆ ಭಾಸವಾಗುತ್ತದೆ.

ತಾವೋ ಶಾಲೆ ಮಾನವ ದೇಹವನ್ನುಚಿಕ್ಕ ಪ್ರಪಂಚವೆಂದು ಪರಿಗಣಿಸುವುದು ಸಮರ್ಥನೀಯವೇ ಆಗಿದೆ. ಹಾಗೆಂದ ಮಾತ್ರಕ್ಕೆ ಅದರ ರಚನೆ ಮತ್ತು ಸ್ವರೂಪ ವಿಶ್ವದಂತೆಯೇ ಇದೆ ಎಂದು ಅರ್ಥವಲ್ಲ ಮತ್ತು ಅದು ಈಗ ಅಸ್ತಿತ್ವದಲ್ಲಿರುವಂತಹ ನಮ್ಮ

ಭೌತಿಕ ಪರಿಮಾಣದಲ್ಲಿನ ದೇಹವನ್ನು ಉಲ್ಲೇಖಿಸುತ್ತಿದೆಯೆಂದರ್ಥವಲ್ಲ. ನಾವು ಕೇಳುವುದೇನೆಂದರೆ "ಆಧುನಿಕ ವಿಜ್ಞಾನದ ತಿಳುವಳಿಕೆಯ ಪ್ರಕಾರ, ಜೀವಕೋಶಗಳಿಂದ ಕೂಡಿರುವ ಈ ಭೌತಿಕ ದೇಹದ ಅವಸ್ಥೆ ಸೂಕ್ಷ್ಮದರ್ಶಕಕ್ಕಿಂತಲೂ ಉನ್ನತ ಮಟ್ಟದಲ್ಲಿ ಏನಾಗಿರುತ್ತಿತ್ತು ?" ಭಿನ್ನವಾದ ಪರಮಾಣು ರಚನೆಗಳಿರುತ್ತದೆ. ಪರಮಾಣುಗಳಿಗಿಂತ ಚಿಕ್ಕದಾಗಿರುವ ಅಣು, ಪ್ರೋಟಾನ್, ನ್ಯೂಕ್ಲಿಯರ್, ಎಲೆಕ್ಟ್ರಾನ್ ಮತ್ತು ಕ್ವಾರ್ಕ್ಸ ಇರುತ್ತವೆ. ಈಗ ಸಂಶೋಧಿಸಿರುವ ಅತ್ಯಂತ ಸೂಕ್ಷ್ಮ ಕಣವೆಂದರೆ ನ್ಯೂಟ್ರಿನೋಸ್. ಹಾಗಾದರೆ ಅತ್ಯಂತ ಸೂಕ್ಷ್ಮ ಕಣವೆಂದರೆ ಯಾವುದು ? ಇದು ನಿಜವಾಗಿಯೂ ಸಂಶೋಧಿಸಲು ಕಠಿಣವಾದುದು. ತನ್ನ ಅನಂತರದ ಕಾಲದಲ್ಲಿ ಸಾಖ್ಯಮನಿಯು ಈ ರೀತಿಯಾಗಿ ಹೇಳಿದ್ದಾನೆ : "ಅದು ಎಷ್ಟೊಂದು ವ್ಯಾಪಕವೆಂದರೆ ಅದಕ್ಕೆ ಹೊರ ರೂಪವೇ ಇಲ್ಲ ಮತ್ತು ಅದು

ಎಷ್ಟು ಸೂಕ್ಷ್ಮವೆಂದರೆ ಅದಕ್ಕೆ ಒಳ ರೂಪವೇ ಇರುವುದಿಲ್ಲ." ಇದರರ್ಥವೇನು ? ತಥಾಗತ ಮಟ್ಟದಲ್ಲಿ ಈ ಪ್ರಪಂಚ ಎಷ್ಟು ವ್ಯಾಪಕವೆಂದರೆ ಅದರ ಗಡಿ ಗ್ರಹಿಸಲಸಾಧ್ಯ, ಹಾಗೂ ಎಷ್ಟು ಚಿಕ್ಕದೆಂದರೆ ಅದರ ವಸ್ತುವಿನ ಅತ್ಯಂತ ಸೂಕ್ಷ್ಮ ಕಣಗಳನ್ನು ಗುರುತಿಸುವುದೂ ಅಸಾಧ್ಯ. ಪರಿಣಾಮವಾಗಿ ಅವರು

ಹೇಳಿದರು "ಅದು ಎಷ್ಟು ವ್ಯಾಪಕವೆಂದರೆ ಅದಕ್ಕೆ ಹೊರರೂಪವಿಲ್ಲ ಹಾಗೂ ಎಷ್ಟು ಸೂಕ್ಷ್ಮವೆಂದರೆ ಅದಕ್ಕೆ ಒಳರೂಪವಿಲ್ಲ."

ಸಾಖ್ಯಮುನಿಯು ಮೂರು ಸಾವಿರ ಪ್ರಪಂಚದ ಸಿದ್ಧಾಂತವನ್ನು ಕುರಿತೂ ಹೇಳಿದ್ದಾರೆ. ಆತ, ನಮ್ಮ ಪ್ರಪಂಚದಲ್ಲಿ ಮತ್ತು ಹಾಲು ಹಾದಿಯಲ್ಲಿ ಮೂರು ಸಾವಿರ ಗ್ರಹಗಳಲ್ಲಿ ನಮ್ಮ ಮಾನವರಂತೆ ಭೌತಿಕ ಶರೀರ ಹೊಂದಿರುವ ಜೀವಿಗಳಿದ್ದಾರೆಂದು ಹೇಳುತ್ತಾರೆ. ಅವರು ಒಂದು ಮರಳಿನ ಕಣದಲ್ಲಿ ಮೂರುಸಾವಿರ ಪ್ರಪಂಚಗಳಿವೆಯೆಂದು ಹೇಳುತ್ತಾರೆ. ಒಂದು ಮರಳಿನ ಕಣವೂ ಕೂಡ ಪ್ರಪಂಚದಂತೆಯೇ, ನಮ್ಮಂತೆ ಬುದ್ಧಿ ಇರುವ ಜನರಿಂದಲೂ, ಗ್ರಹ, ಪರ್ವತ ಮತ್ತು ನದಿಗಳಿಂದ ಕೂಡಿರುತ್ತವೆ. ಇವನ್ನು ಕೇಳಿದಾಗ ಊಹಿಸಲೂ ಸಾಧ್ಯವಾಗುವುದಿಲ್ಲ! ಹಾಗಿದ್ದಲ್ಲಿ, ಅದನ್ನು ಕರಿತು ಎಲ್ಲರೂ ಯೋಚಿಸಿ : ಈ ಮೂರುಸಾವಿರ ಪ್ರಪಂಚದಲ್ಲಿ ಮರಳಿದೆಯಲ್ಲವೇ? ಇದರಲ್ಲಿರುವ ಯಾವುದೇ ಒಂದು ಮರಳಿನ ಕಣದಲ್ಲಿ ಮತ್ತೇ ಮೂರುಸಾವಿರ ಪ್ರಪಂಚವಿದೆಯಲ್ಲವೇ? ಹಾಗಿದ್ದಲ್ಲಿ, ಈ ಮೂರು ಸಾವಿರ ಪ್ರಪಂಚದಲ್ಲಿ ಮರಳಿದೆಯಲ್ಲವೇ? ಹಾಗಿದ್ದಲ್ಲಿ ಮತ್ತೇ ಇದರಲ್ಲಿರುವ ಯಾವುದೇ ಒಂದು ಮರಳಿನ ಕಣದಲ್ಲೂ ಮತ್ತೇ ಮೂರುಸಾವಿರ ಪ್ರಪಂಚವಿರುವುದಿಲ್ಲವೇ? ಆದ್ದರಿಂದ ತಥಾಗತ ಮಟ್ಟದಲ್ಲಿ ಕೊನೆಯನ್ನು ನೋಡಲು ಯಾರಿಗೂ ಸಾಧ್ಯವಾಗುವುದಿಲ್ಲ.

ಇದು ನಮ್ಮ ಮಾನವ ಪರಮಾಣು ಜೀವಕೋಶದ ವಿಷಯದಲ್ಲೂ ಸತ್ಯ. ಜನರು ಈ ಪ್ರಪಂಚ ಎಷ್ಟು ದೊಡ್ಡದಿದೆಯೆಂದು ಹೇಳುತ್ತಾರೆ. ಈ ಪ್ರಪಂಚಕ್ಕೂ ಗಡಿಯೆಂಬುದಿದೆಯೆಂದು ನಾನು ನಿಮಗೆ ಹೇಳುತ್ತೇನೆ. ಆದಾಗ್ಯೂ ತಥಾಗತ ಮಟ್ಟದಲ್ಲಿ ಅದನ್ನು ಮಿತಿಯಿಲ್ಲದ ಮತ್ತು ಅನಂತ ಅಗಾಧವೆಂದು ಪರಿಗಣಿಸುತ್ತಾರೆ. ಆದರೂ ಈ ಮಾನವ ಒಳ ಶರೀರ ಈ ಪ್ರಪಂಚದಂತೆಯೇ ಅಗಾಧವಾಗಿದೆ, ಪರಮಾಣುವಿನಿಂದ ಸೂಕ್ಷ್ಮದರ್ಶಕ ಮಟ್ಟದಿಂದ ಸೂಕ್ಷ್ಮಾತಿಸೂಕ್ಷ್ಮ ಕಣದವರೆಗೂ ಇರುತ್ತದೆ. ಇದನ್ನು ಊಹಿಸಲೂ ಸಾಧ್ಯವಾಗದಿರಬಹುದು. ಯಾವಾಗ ಒಬ್ಬ ಮಾನವ ಅಥವ ಒಂದು ಜೀವಿಯು ಸೃಷ್ಟಿಸಲ್ಪಡುವುದೋ, ಆತನ ವಿಶಿಷ್ಟ ಜೀವಧಾತುಗಳು ಮತ್ತು ಅಗತ್ಯ ಗುಣವಿಶೇಷಗಳು ಅದಾಗಲೇ ಅತ್ಯಂತ ಸೂಕ್ಷ್ಮಾತಿಸೂಕ್ಷ್ಮ ಮಟ್ಟದಲ್ಲಿ ಮಾಡಲ್ಪಟ್ಟಿರುತ್ತದೆ. ಆದ್ದರಿಂದ ಈ ವಿಷಯವನ್ನು ಅಧ್ಯಯನ ಮಾಡುವಾಗ ನಮ್ಮ ಆಧುನಿಕ ವಿಜ್ಞಾನವು ತೀರ ಹಿಂದೆ ಬೀಳುತ್ತದೆ. ವಿಶ್ವದಾದ್ಯಂತ ಇರುವ ಅನೇಕ ಗ್ರಹಗಳಲ್ಲಿರುವ ಉನ್ನತ ಜ್ಞಾನದ ಜೀವಿಗಳಿಗೆ ಹೋಲಿಸಿದರೆ ನಮ್ಮ ಮಾನವ ಜನಾಂಗದ ವೈಜ್ಞಾನಿಕ ಮಟ್ಟ ತೀರ ಕೆಳಗೆ ಇದೆ. ನಮಗೆ ಒಂದೇ ಸ್ಥಳದಲ್ಲಿರುವ ಸಮಕಾಲಿಕವಾಗಿ ಅಸ್ತಿತ್ವದಲ್ಲಿರುವ ಇತರ ಬೇರೆ ಬೇರೆ ಪರಿಮಾಣಗಳನ್ನು ತಲುಪಲು ಆಗುವುದಿಲ್ಲ, ಆದರೆ ಇತರ ಗ್ರಹಗಳ ಹಾರುವ ತಟ್ಟೆಗಳು ನೇರವಾಗಿ ಇತರ ಪರಿಮಾಣಗಳಲ್ಲಿ ಸಂಚರಿಸಬಲ್ಲವು. ಆ ಕಾಲಕ್ಷೇತ್ರದ ಕಲ್ಪನೆ ಸಂಪೂರ್ಣವಾಗಿ

ಭಿನ್ನವಾಗಿರುತ್ತದೆ. ಆದ್ದರಿಂದ ಅವರು ಮಾನವ ಮನಸ್ಸು ಗ್ರಹಿಸಲೂ ಅಸಾಧ್ಯವಾದ ವೇಗದಲ್ಲಿ ತಮಗಿಷ್ಟ ಬಂದಲ್ಲಿ ಬಂದು ಹೋಗಬಹುದು.

ನಾನು ದಿವ್ಯಚಕ್ಷುವಿನ ಬಗ್ಗೆ ಮಾತನಾಡುವಾಗ ಈ ವಿಷಯವನ್ನು ಕುರಿತು ಮಾತಾಡಿದ್ದೆ. ಏನೆಂದರೆ ನೀವು ಹೊರ ಮುನ್ನುಗ್ಗುವ ಹಾಗೆ ಭಾಸವಾದಂತೆ, ನಿಮಗೆ ಅಪಾರ ಮತ್ತು ನಿರಂಕುಶವೆಂದು ಎನಿಸುತ್ತದೆ. ಕೆಲವರು ಇನ್ನೊಂದು ಪ್ರಸಂಗವನ್ನು ನೋಡುತ್ತಾರೆ, ಏನೆಂದರೆ ಅವರಿಗೆ ಮುನ್ನುಗ್ಗುವ ಹಾಗೆ ಭಾಸವಾಗುವುದಿಲ್ಲ, ಆದರೆ ಇತಿಮಿತಿ ಇಲ್ಲದ ಹಾದಿಯಲ್ಲಿ ಹೋಗುವ ಹಾಗೆ ಹೊರಗೆ ನುಗ್ಗುವಾಗ, ಅಲ್ಲಿ ಪರ್ವತಗಳು, ನದಿಗಳು ಮತ್ತು ಪಟ್ಟಣಗಳು ಎರಡೂ ಬದಿಯಲ್ಲಿ ಇರುತ್ತದೆ. ಅದು ಇನ್ನೂ ಊಹಿಸಿಕೊಳ್ಳಲು ಸಾಧ್ಯವೇ ಆಗವುದಿಲ್ಲ. ನಾನು ನೆನಪಿಸಿಕೊಂಡಾಗ ಒಬ್ಬ ಚೀಗಾಂಗ್ ಗುರುವು ಈ ರೀತಿಯಾಗಿ ಹೇಳಿಕೆ ಕೊಟ್ಟಿದ್ದರು: "ಈ ಮಾನವ ದೇಹದಲ್ಲಿರುವ ಪ್ರತಿಯೊಂದು ಬೆವರಿನ ಕೇಂದ್ರದಲ್ಲೂ ಕೂಡ ಒಂದು ಪಟ್ಟಣವಿದೆಯೆಂದು, ಮತ್ತು ಕಾರು, ರೈಲುಗಳೂ ಕೂಡ ಓಡಾಡುತ್ತವೆ " ಇದನ್ನು ಕೇಳಿದಾಗ ಬೇರೆಯವರು ದಿಗ್ಭ್ರಮೆಗೊಂಡು ಅವರಿಗೆ ಊಹಿಸಲೂ ಸಾಧ್ಯವಾಗಲಿಲ್ಲ. ನಿಮಗೆ ಗೊತ್ತಿರುವಂತೆ ಒಂದು ಸೂಕ್ಷ್ಮ ವಸ್ತುವೂ ಕೂಡ ಅಣುಗಳು, ಪರಮಾಣು ಮತ್ತು ಪ್ರೋಟಾನುಗಳಿಂದ

---

**2 ಲೀ** – ಚೀನೀಯರಲ್ಲಿ ದೂರದ ಏಕಮಾನ (= 0.5 ಕಿ.ಮೀ). ಚೀನೀಯರಲ್ಲಿ "108 ಸಾವಿರ ಲೀ" ಎಂಬುದು ಅತ ದೂರವನ್ನು ವರ್ಣಿಸಲು ಉಪಯೋಗಿಸುವ ಭಾವ

ಕೂಡಿರುತ್ತದೆ. ಅದನ್ನು ಮುಂದಕ್ಕೆ ಪರಿಶೀಲಿಸಿದಾಗ, ಒಂದು ವೇಳೆ ನೀವು ಚುಕ್ಕೆಯ ಹೊರತಾಗಿ ಒಂದು ಸಮತಲದ ಪ್ರತಿಯೊಂದು ಮಟ್ಟವನ್ನು ನೋಡಿದಾಗ, ಮತ್ತು ಕಣಗಳ ಸಮತಲವನ್ನು ನೋಡಿದಾಗ, ಪರಮಾಣು ಸಮತಲವನ್ನು, ಪ್ರೋಟಾನ್ ಸಮತಲವನ್ನು ಮತ್ತು ಅದೇ ರೀತಿಯಾಗಿ ನ್ಯೂಕ್ಲಿಯರ್, ನೀವು ಬೇರೆ ಆಯಾಮದಲ್ಲಿರುವ ಅದರ ಅಸ್ತಿತ್ವವನ್ನು ನೋಡುವಿರಿ. ಎಲ್ಲಾ ವಸ್ತು, ಮಾನವ ದೇಹದ ಜೊತೆಗೆ, ಇವೆಲ್ಲವೂ ಸಮಕಾಲೀನವಾಗಿ ಇದರೊಂದಿಗೆ ಆಯಾಮಗಳ ಮಟ್ಟದಲ್ಲಿ ಬಾಹ್ಯಾಕಾಶದಲ್ಲಿ ಇರುತ್ತದೆ. ನಮ್ಮ ಆಧುನಿಕ ಶಾಸ್ತ್ರದಲ್ಲಿ ಸೂಕ್ಷ್ಮ ವಸ್ತುವಿನ ಕಣಗಳ ಬಗ್ಗೆ ಓದುವಾಗ ಆ ಸೂಕ್ಷ್ಮಕಣಗಳನ್ನು ಕೇವಲ ಒಡೆದು ಮತ್ತು ಕೂಡಿಸಿ ಓದಲಾಗತ್ತದೆ ಅಥವ ಮೂಲತತ್ವವನ್ನು ಅಣುವಿಭಜನೆಯ ನಂತರವೇ ಓದಲಾಗುತ್ತದೆ. ಯಾವುದಾದರೂ ಒಂದು ಉಪಕರಣವಿದ್ದಲ್ಲಿ ಮತ್ತು ಅದರ ಮೂಲಕ ಮಟ್ಟವನ್ನು ಹಿಗ್ಗಿಸಿ ನೋಡಿದಾಗ ಎಲ್ಲಾ ಪರಮಾಣುವಿನ ಮೂಲತತ್ವಗಳು ಅಥವ ಅಣುವಿನ ಮೂಲತತ್ವಗಳನ್ನು ಅದರ ಸಂಪೂರ್ಣತೆಯನ್ನು ಅಥವ ಈ ದೃಶ್ಯವನ್ನು ಸೂಕ್ಷ್ಮವಾಗಿ ಗಮನಿಸಿದಾಗ, ನೀವು ಆಯಾಮದ ಆಚೆಯನ್ನು ಮುಟ್ಟಿ ಮತ್ತು ಆ ಆಯಾಮದಲ್ಲಿರುವ ನಿಜವಾದ ದೃಶ್ಯವನ್ನು ನೋಡುವಿರಿ. ಮಾನವ ದೇಹದ ರೂಪಗಳು ಹೊಸ ಆಯಾಮಗಳಲ್ಲಿಯೂ ಕೂಡ ಅಸ್ತಿತ್ವವನ್ನು ಹೊಂದಿರುತ್ತದೆ.

ತಮ್ಮ ದಿವ್ಯಚಕ್ಷುವನ್ನು ತಾವೇ ತೆಗೆಯುವಾಗ, ಇನ್ನೂ ಕೆಲವು ಭಿನ್ನ ಸನ್ನಿವೇಶಗಳುಂಟು. ನಾವು ಇಲ್ಲಿ ಮುಖ್ಯವಾಗಿ ಕೆಲವು ಸಾಮಾನ್ಯವಾಗಿ ಆಗುವ ವಿಷಯವನ್ನು ಮಾತನಾಡಿದ್ದೇವೆ. ಕೆಲವು ಜನರು ತಮ್ಮ ದಿವ್ಯಚಕ್ಷುವು ಚಕ್ರಾಕಾರವಾಗಿ ತಿರುಗುತ್ತಿದೆಯೆಂದು ತಿಳಿದುಕೊಳ್ಳಬಹುದು. ತಾವೋ ಶಾಲೆಯಲ್ಲಿ ಅಭ್ಯಾಸ ಮಾಡುವವರು ಆಗಾಗ್ಗೆ ತಮ್ಮ ದಿವ್ಯಚಕ್ಷುವಿನೊಳಗೆ ಏನೋ ವೃತ್ತಾಕಾರವಾಗಿ ತಿರುಗುತ್ತಿದೆಯೆಂದು ನೋಡಬಹುದು. ತೈಜಿ ತಟ್ಟೆಯು ಬಿರುಕು ಬಿಟ್ಟು ಅರಳಿದ ನಂತರ, ಒಬ್ಬರು ದೃಶ್ಯಗಳನ್ನು ನೋಡಬಹುದು ; ಹಾಗಾದರೆ, ತೈಜಿ ನಿಮ್ಮ ತಲೆಯಲ್ಲಿದೆ ಎಂದು ಅರ್ಥವಲ್ಲ. ಆರಂಭದಲ್ಲಿ ಗುರುಗಳು ನಿಮ್ಮೊಳಗೆ ಗುಂಪಿನ ವಸ್ತುಗಳನ್ನು ಅಳವಡಿಸಿದರು, ಅದರಲ್ಲಿ ತೈಜಿ ಒಂದು. ಅವರು ನಿಮ್ಮ ದಿವ್ಯಚಕ್ಷುವನ್ನು ಮುಚ್ಚಿದರು. ನಿಮ್ಮ ದಿವ್ಯಚಕ್ಷುವು ಇನ್ನೇನು ತೆರೆಯಬೇಕು, ಆಗ ಅದು ಬಿರುಕುಬಿಟ್ಟುಅರಳುತ್ತದೆ.ಗುರುಗಳು ಅದನ್ನು ಉದ್ದೇಶ ಪೂರ್ವಕವಾಗಿ ಹಾಗೆ ಮಾಡಿದರು,ಮತ್ತುಅದು ಮೂಲತ:ನಿಮ್ಮತಲೆಯಲ್ಲಿರುವುದಿಲ್ಲ.

ಇನ್ನೂ ಕೂಡ ಕೆಲವರು ದಿವ್ಯಚಕ್ಷುವನ್ನು ತೆರೆಯಲು ಬಯಸುತ್ತಾರೆ. ಇದರ ಸಲುವಾಗಿಯೇ ಅವರು ಅಭ್ಯಾಸ ಮಾಡಿದರೆ ಅದು ಇನ್ನೂ ಕೂಡ ತೆರೆಯಲು ಅಸಾಧ್ಯವಾಗುತ್ತದೆ. ಅದರ ಕಾರಣವೇನು? ಅದರ ಬಗ್ಗೆ ಅವರಿಗೇ ಅರಿವಿರುವುದಿಲ್ಲ. ಏಕೆಂದರೆ ಮುಖ್ಯವಾಗಿ ದಿವ್ಯಚಕ್ಷುವನ್ನು ಬೆನ್ನಟ್ಟಿ ಹೋದರೆ ದೊರಕದು; ಅದರ ಬಗ್ಗೆ ಹೆಚ್ಚು ಆಸೆ ಪಟ್ಟಷ್ಟು ಅದು ಇನ್ನೂ ದೊರಕುವುದಿಲ್ಲ. ಯಾರು ಅದನ್ನು ಬೇಕೇ ಬೇಕು ಎಂದು ಬಯಸಿದಾಗ ಅದು ತೆರೆಯುವುದಲ್ಲದೇ, ಅದರ ಬದಲಾಗಿ ಕಪ್ಪು ಇಲ್ಲವೆ ಬಿಳಿ ಎಂಬಂತೆ ಅವನ ದಿವ್ಯಚಕ್ಷುವಿನಿಂದ ಹೊರಬರುವುದು. ಅದು ಅವನ ದಿವ್ಯಚಕ್ಷುವನ್ನು ಆವರಿಸಿ ಮನೆಮಾಡಿಬಿಡುತ್ತದೆ. ಕಾಲಕಳೆದಂತೆ ಅದು ದೊಡ್ಡ ಕ್ಷೇತ್ರವನ್ನು ನಿರ್ಮಾಣಿಸುತ್ತದೆ. ಅದು ಹೊರಹೊಮ್ಮಿದಷ್ಟೂ ಅದು ಇನ್ನೂ ಹೆಚ್ಚು ಕೂಡಿಕೊಳ್ಳುತ್ತದೆ. ಹೆಚ್ಚಾಗಿ ದಿವ್ಯಚಕ್ಷುವು ಆಗ ತರೆಯುವುದಿಲ್ಲ, ಅವನು ಅದನ್ನು ಹೆಚ್ಚಾಗಿ ಬೆನ್ನಟ್ಟುವನು, ಇನ್ನೂ ಹೆಚ್ಚಾಗಿ ಈ ಪದಾರ್ಥವು ಹೊರಬರುತ್ತದೆ. ಫಲಿತಾಂಶವಾಗಿ, ಇದು ಅವನ ದೇಹವನ್ನು ಸಂಪ್ರರ್ಣವಾಗಿ ಆವರಿಸಿಕೊಂಡು ಅದು ಬಹಳ ದಪ್ಪವಾಗಿ ಹಾಗೂ ಬಹಳ ದೊಡ್ಡಗಾತ್ರದ ಕ್ಷೇತ್ರವನ್ನು ನಿರ್ಮಾಣ ಮಾಡುತ್ತದೆ, ಒಂದು ವೇಳೆ ಈ ಮನುಷ್ಯನ ದಿವ್ಯಚಕ್ಷುವು ತೆರೆದರೂ ಕೂಡ, ಅವನಿಗೆ ಇನ್ನೂ ಏನೂ ಕಾಣುವುದಿಲ್ಲ ಏಕೆಂದರೆ ಅವನ ಅತಿಯಾದ ಮೋಹದಿಂದಲೇ ಅದು ಮುಚ್ಚಿ ಹೋಗಿರುತ್ತದೆ. ಒಂದು ವೇಳೆ ಅವನು ಅದರ ಬಗ್ಗೆ ಭವಿಷ್ಯದಲ್ಲಿ ಯೋಚಿಸದಿದ್ದರೆ ಮತ್ತು ಸಂಪೂರ್ಣವಾಗಿ ಅವನು ಮೋಹವನ್ನು ಬಿಟ್ಟರೆ, ಅದು ಕ್ರಮೇಣವಾಗಿ ಮಾಯವಾಗುತ್ತದೆ, ಅದು ಹೇಗಿದ್ದರೂ ತುಂಬಾ ಕಠಿಣವಾದುದು ಮತ್ತು ಬಹುಕಾಲದವರೆಗೆ ಸಾಧನೆ ಅಭ್ಯಾಸ ಮಾಡಿದಾಗ ಮಾತ್ರ ಅದನ್ನು ತೆಗೆಯಬಹುದು. ಇದು ಬಹಳ ಅನಾವಶ್ಯಕ. ಕೆಲವರಿಗೆ ಇದು ಗೊತ್ತಿಲ್ಲ. ಆದಾಗ್ಯೂ ಗುರುಗಳು ಅದರ ಬಗ್ಗೆ ಹಿಂಬಾಲಿಸದಿರಲು ಮತ್ತು ಹೋಗದಿರಲು ಹೇಳಿದರೂ ಸಹ, ಅದನ್ನು ಅವರು

ನಂಬುವುದಿಲ್ಲ. ಅವರೆಲ್ಲರೂ ಕೂಡ ಅದನ್ನೇ ಹಿಂಬಾಲಿಸುತ್ತಿರುತ್ತಾರೆ, ಅಂತ್ಯದಲ್ಲಿ ಫಲಿತಾಂಶವು ಅದರ ವಿರುದ್ಧವೇ ಆಗಿರುತ್ತದೆ.

**ಅಸಾಮಾನ್ಯ ಅಲೌಕಿಕ ದಿವ್ಯದೃಷ್ಟಿ ಶಕ್ತಿ**

ದಿವ್ಯ ಚಕ್ಷುಗಳಿಗೆ ನೇರವಾಗಿ ಸಂಬಂಧಿಸಿದ ಒಂದು ಅಸಾಮಾನ್ಯ ಶಕ್ತಿಯೆಂದರೆ ಅಲೌಕಿಕ ದಿವ್ಯದೃಷ್ಟಿ. ಹಲವು ಜನರು ಹೇಳಿಕೊಳ್ಳುತ್ತಾರೆ, "ನನಗೆ ಇಲ್ಲಿ ಕುಳಿತಲ್ಲಿಂದಲೇ ಬೀಜಿಂಗ್ ಮತ್ತು ಅಮೆರಿಕದಲ್ಲಿನ ಹಾಗೂ ಭೂಮಿಯ ಮತ್ತೊಂದು ಬದಿಯ ದೃಶ್ಯಗಳನ್ನು ನೋಡಬಲ್ಲೆ." ಕೆಲವರಿಗೆ ಇದು ತಿಳಿಯುವುದಿಲ್ಲ ಮತ್ತು ವೈಜ್ಞಾನಿಕವಾಗಿ ಇದನ್ನು ವಿವರಿಸುವುದೂ ಸಾಧ್ಯವಿಲ್ಲ. ಇದು ಹೇಗೆ ಸಾಧ್ಯ? ಹಲವಾರು ಜನರು ಇದು ಹಾಗೆ ಅಥವ ಇದು ಹೀಗೆ ಎಂದು ಇದನ್ನು ವಿವರಿಸುತ್ತಾರೆ, ಮತ್ತು ಅರಿವಿಗೆ ಬರುವಂತೆ ವಿವರಿಸುವುದಿಲ್ಲ. ಅವರು ಜನರಿಗೆ ಅಷ್ಟೊಂದು ಸಾಮರ್ಥ್ಯ ಹೇಗೆ ಬರುತ್ತದೆಂದು ಆಶ್ಚರ್ಯ ಪಡುತ್ತಾರೆ. ಇದು ಹಾಗಲ್ಲ, ಮೂರು-ಲೋಕದೊಳಗಿನ-ಫಾ ಸಾಧನೆಯ ಮಟ್ಟದಲ್ಲಿರುವ ಅಭ್ಯಾಸಿಗನಿಗೆ ಈ ಸಾಮರ್ಥ್ಯವಿರುವುದಿಲ್ಲ. ಅಲೌಕಿಕ ದಿವ್ಯದೃಷ್ಟಿ ಮತ್ತು ಮತ್ತು ಇತರ ಹಲವಾರು ಅಸಾಮಾನ್ಯ ಸಾಮರ್ಥ್ಯಗಳನ್ನು ಒಳಗೊಂಡಂತೆ, ಅವನು ಏನೆಲ್ಲಾ ನೋಡುತ್ತಾನೋ ಎಲ್ಲವೂ ಒಂದು ನಿರ್ದಿಷ್ಟ ಪರಿಮಾಣದೊಳಗೆ ಕೆಲಸ ಮಾಡುತ್ತದೆ. ಅತಿ ಹೆಚ್ಚೆಂದರೆ ಅದು ಈ ನಮ್ಮ ಮಾನವ ಜನಾಂಗ ಅಸ್ತಿತ್ವದಲ್ಲಿರುವ ಭೌತಿಕ ಪರಿಮಾಣಕ್ಕೂ ಆಚೆ ಇರುವುದಿಲ್ಲ. ಅದು ವ್ಯಕ್ತಿಯ ಸ್ವಂತ ಪರಿಮಾಣದ ಕ್ಷೇತ್ರದಾಚೆಗೂ ಇರುವುದಿಲ್ಲ.

ಒಂದು ನಿರ್ದಿಷ್ಟ ಪರಿಮಾಣದೊಳಗೆ, ಮಾನವ ದೇಹವು ಡ್ಯಾದ ಕ್ಷೇತ್ರಕ್ಕಿಂತ ಭಿನ್ನವಾದ ಒಂದು ಕ್ಷೇತ್ರವನ್ನು ಹೊಂದಿರುತ್ತದೆ. ಅವು ಒಂದೇ ಪರಿಮಾಣದಲ್ಲಿರುವುದಿಲ್ಲವಾದರೂ, ಒಂದೇ ಗಾತ್ರದ್ದಾಗಿರುತ್ತದೆ. ಈ ಕ್ಷೇತ್ರ ಪ್ರಪಂಚಕ್ಕೆ ಅನುರೂಪವಾಗಿದೆ. ಪ್ರಪಂಚದಾದ್ಯಂತ ಏನೆಲ್ಲಾ ಅಸ್ತಿತ್ವದಲ್ಲಿದೆಯೋ ಅದೆಲ್ಲಾ ಅನುರೂಪವಾಗಿ ಇಲ್ಲಿ ಪ್ರತಿಫಲನ ಗೊಳ್ಳುತ್ತದೆ. ಪ್ರತಿಯೊಂದೂ ಪ್ರತಿಫಲನಗೊಳ್ಳಬಹುದು. ಇದು ಬಿಂಬದ ತರಹದ್ದಾಗಿರುತ್ತದೆ, ಆದರೆ ವಾಸ್ತವವಲ್ಲ. ಉದಾಹರಣೆಗೆ ಈ ಭೂಮಿಯಲ್ಲಿ ಅಮೇರಿಕ ಮತ್ತು ವಾಷಿಂಗ್‌ಟನ್ ಡಿ.ಸಿ ಅಸ್ತಿತ್ವದಲ್ಲಿದೆ. ಒಬ್ಬ ವ್ಯಕ್ತಿಯ ಕ್ಷೇತ್ರದೊಳಗೆ ಅಮೇರಿಕ ಮತ್ತು ವಾಷಿಂಗ್‌ಟನ್ ಡಿ.ಸಿ. ಪ್ರತಿಫಲನಗೊಳ್ಳುತ್ತದೆ, ಆದರಿದು ಪ್ರತಿಫಲಿತ ಬಿಂಬ ಮಾತ್ರ. ಆದಾಗ್ಯೂ ಪ್ರತಿಫಲಿತ ಬಿಂಬಗಳು ವಸ್ತುವಿನ ಅಸ್ತಿತ್ವದ ರೂಪವೇ ಆಗಿರುತ್ತದೆ ಮತ್ತು ಅದು ಇಲ್ಲಿನ ಬದಲಾವಣೆಗನುಸಾರವಾಗಿ ನಡೆಯುವ ಅನುರೂಪ ಪ್ರತಿಫಲನದ ಫಲಿತಾಂಶವಾಗಿರುತ್ತದೆ. ಆದ್ದರಿಂದ ಹಲವು ಜನರು ಹೇಳುವಂತ ಅಸಾಮಾನ್ಯ ಅಲೌಕಿಕ ದಿವ್ಯದೃಷ್ಟಿ ಶಕ್ತಿಯು ಕೇವಲ ಒಬ್ಬರ ಸ್ವಂತ ಪರಿಮಾಣ ಕ್ಷೇತ್ರದ ಒಳಗಷ್ಟೇ ದೃಷ್ಟಿಸಲು ಶಕ್ತವಾಗಿದೆ. ಒಬ್ಬ ವ್ಯಕ್ತಿ ಈ ಮೂರು-ಲೋಕದಾಚೆಗಿನ-ಫಾ ಸಾಧನೆಯಲ್ಲಿ ತೊಡಗಿದ್ದರೆ ಆತ ಈ ರೀತಿಯಾಗಿ ವಸ್ತುಗಳನ್ನು ದೃಷ್ಟಿಸುವುದಿಲ್ಲ. ಆತ ನೇರವಾಗಿ ವಸ್ತುವನ್ನು ದೃಷ್ಟಿಸುತ್ತಾನೆ. ಮತ್ತು ಇದನ್ನು ಬುದ್ಧ ಫಾದ ದೈವಿಕ ಶಕ್ತಿಯೆಂದು ಕರೆಯುತ್ತಾರೆ. ಇದು ಅತೀವ ಶಕ್ತಿಯನ್ನು ಒಳಗೊಂಡದ್ದು.

ಮೂರು-ಲೋಕದೊಳಗಿನ-ಫಾ ಸಾಧನೆಯಲ್ಲಿ ಈ ಅಸಾಮಾನ್ಯ ಅಲೌಕಿಕ ದಿವ್ಯದೃಷ್ಟಿಯ ಶಕ್ತಿಯು ಏನನ್ನೆಲ್ಲಾ ಒಳಗೊಂಡಿರುತ್ತದೆ? ನಾನದನ್ನು ಈಗ ಎಲ್ಲರಿಗೂ ವಿವರಿಸಿ ಹೇಳುತ್ತೇನೆ. ಈ ಕ್ಷೇತ್ರದೊಳಗೆ ಒಬ್ಬರ ಹಣೆಯಲ್ಲಿ ಕನ್ನಡಿಯಿರುತ್ತದೆ. ಒಬ್ಬ ಸಾಧಕನಲ್ಲದವನ ಕನ್ನಡಿಯು ಅವನೆಡೆಯೇ ಮುಖ ಮಾಡಿರುತ್ತದೆ, ಆದರೆ ಸಾಧಕನ ಕನ್ನಡಿಯು ತಿರುಗುತ್ತದೆ. ಒಬ್ಬ ವ್ಯಕ್ತಿಯ ಅಸಾಮಾನ್ಯ ಅಲೌಕಿಕ ದಿವ್ಯದೃಷ್ಟಿಯ ಶಕ್ತಿಯು ಹೊರಹೊಮ್ಮಬೇಕಾದರೆ ಅದು ಹಿಂದಕ್ಕೂ ಮುಂದಕ್ಕೂ ತಿರುಗುತ್ತದೆ. ಚಲನಚಿತ್ರದಲ್ಲಿ ಚಿತ್ರಗಳನ್ನು ನಿರಂತರ ಚಲನೆಯಲ್ಲಿರುವಂತೆ ಮಾಡಲು ಪ್ರತಿ ಸೆಕೆಂಡಿಗೆ ಇಪ್ಪತ್ತನಾಲ್ಕು ಚೌಕಟ್ಟುಗಳನ್ನು ತೋರಿಸಲಾಗುತ್ತದೆಂಬುದು ಗೊತ್ತಾದ ವಿಷಯ. ಪ್ರತಿ ಸೆಕೆಂಡಿಗೆ ಇಪ್ಪತ್ತನಾಲ್ಕು ಚೌಕಟ್ಟುಗಳಿಗಿಂತ ಕಡಿಮೆ ತೋರಿಸಿದಾಗ ಚಿತ್ರಗಳು ನೆಗೆಯುತ್ತದೆ ಮತ್ತು ಜಿಗಿಯುತ್ತದೆ. ಕನ್ನಡಿಯ ತಿರುಗುವ ವೇಗವು ಇಪ್ಪತ್ತನಾಲ್ಕು ಚೌಕಟ್ಟುಗಳಿಗಿಂತಲೂ ಹೆಚ್ಚಿರುವುದು ಮತ್ತು ಅದು ತಾನು ಪಡೆದದ್ದನ್ನೆಲ್ಲಾ ಪ್ರತಿಫಲಿಸುತ್ತದೆ. ಮತ್ತು ನಮಗೆ ಕಾಣುವಂತೆ ಮಾಡಲು ತಿರುಗುತ್ತದೆ. ಅದು ಮತ್ತೊಮ್ಮೆ ಹೊರಳಿದಾಗ ಬಿಂಬಗಳು ಅಳಿಸಿಹೋಗುತ್ತದೆ. ಅದು ಪ್ರತಿಫಲಿಸುತ್ತದೆ ಮತ್ತು

ತಿರುಗುತ್ತದೆ, ಮತ್ತು ಅನಂತರ ಬಿಂಬಗಳನ್ನು ಅಳಿಸಿ ಹಾಕುತ್ತದೆ, ಈ ತಿರುಗುವಿಕೆ ನಿರಂತರವಾಗಿ ಮುಂದುವರೆಯುತ್ತದೆ. ಆದ್ದರಿಂದ ನಾವು ಕಾಣುವುದು ಚಲನೆಯಲ್ಲಿರುತ್ತದೆ. ಅದು ನಿಮ್ಮ ಸ್ವಂತ ಪರಿಮಾಣದ ಕ್ಷೇತ್ರದೊಳಗೆ ಪ್ರತಿಫಲನಗೊಂಡದ್ದನ್ನು ನಿಮಗೆ ಕಾಣಲು ಬಿಡುತ್ತದೆ. ಮತ್ತು ಅದು ಈ ವಿಶಾಲ ಪ್ರಪಂಚದಲ್ಲಿರುವುದರ ಅನುರೂಪವಾಗಿರುತ್ತದೆ.

ಹಾಗಾದಲ್ಲಿ, ನಮ್ಮ ದೇಹದ ಹಿಂದಿರುವುದನ್ನು ನಾವು ಹೇಗೆ ಕಾಣಬಹುದು? ಅಷ್ಟು ಚಿಕ್ಕ ಕನ್ನಡಿಯು ಹೇಗೆ ನಮ್ಮ ದೇಹದ ಸುತ್ತಲಿರುವುದನ್ನೆಲ್ಲಾ ಪ್ರತಿಫಲನಗೊಳಿಸಬಲ್ಲದು? ಒಬ್ಬರ ದಿವ್ಯನೇತ್ರವು ದಿವ್ಯಶಕ್ತಿಗಿಂತಲೂ ಉನ್ನತ ಮಟ್ಟದಲ್ಲಿ ಅನಾವರಣಗೊಂಡಾಗ ಮತ್ತು ಜ್ಞಾನದೃಷ್ಟಿ ಶಕ್ತಿಮಟ್ಟವನ್ನು ಮುಟ್ಟುವುದರಲ್ಲಿದ್ದಾಗ, ಅದು ನಮ್ಮ ಪರಿಮಾಣವನ್ನು ಮೀರುವುದಕ್ಕೆ ತೀರ ಹತ್ತಿರವಾಗಿದೆಯೆಂದು ನಿಮಗೆ ತಿಳಿದಿದೆ. ಈ ಒಂದು ಘಟ್ಟದಲ್ಲಿ ಮುಖ್ಯವಾದ ಮುನ್ನಡೆಯು ಅನಿವಾರ್ಯವಾದಾಗ ದಿವ್ಯ ನೇತ್ರವು ಬದಲಾವಣೆಯನ್ನು ಅನುಭವಿಸುತ್ತದೆ. ಅದು ಭೌತಿಕ ವಸ್ತುಗಳನ್ನು ನೋಡಿದಾಗ ಅವೆಲ್ಲವೂ ಅದೃಶ್ಯವಾಗುತ್ತವೆ. ಜನರು ಮತ್ತು ಈ ಗೋಡೆ ಎಲ್ಲವೂ ಅದೃಶ್ಯವಾಗುತ್ತದೆ. ಭೌತಿಕ ಅಸ್ತಿತ್ವದಲ್ಲಿರುವುದು ಯಾವುದೂ ಇರುವುದಿಲ್ಲ, ಅಂದರೆ ಕೂಲಂಕುಶವಾಗಿ ದಿಟ್ಟಿಸಿ ನೋಡಿದಾಗ ನಿಮಗೆ ಈ ನಿರ್ದಿಷ್ಟ ಪರಿಮಾಣದಲ್ಲಿ ಜನರೇ ಅಸ್ತಿತ್ವದಲ್ಲಿಲ್ಲದಿರುವುದು ಗೋಚರಿಸುತ್ತದೆ; ಅಲ್ಲಿ ನಿಮ್ಮ ಪರಿಮಾಣದ ಕ್ಷೇತ್ರದೊಳಗೆ ಕೇವಲ ಕನ್ನಡಿ ಮಾತ್ರ ನಿಂತಿರುತ್ತದೆ, ಆದರೂ ಈ ನಿಮ್ಮ ಪರಿಮಾಣದ ಕ್ಷೇತ್ರದಲ್ಲಿರುವ ಕನ್ನಡಿಯು ನಿಮ್ಮ ಇಡೀ ಪರಿಮಾಣದ ಕ್ಷೇತ್ರವನ್ನು ವ್ಯಾಪಿಸುವಷ್ಟು ವಿಶಾಲವಾಗಿರುತ್ತದೆ. ಆದ್ದರಿಂದ ಅದು ಹಿಂದಕ್ಕೂ ಮತ್ತು ಮುಂದಕ್ಕೂ ತಿರುಗಿದಾಗ ಎಲ್ಲಾ ಕಡೆಯಿಂದ ಎಲ್ಲವನ್ನು ಪ್ರತಿಫಲಿಸುತ್ತದೆ. ನಿಮ್ಮ ಪರಿಮಾಣದ ಕ್ಷೇತ್ರದೊಳಗೆ ಅದು ನಿಮಗೆ ಎಲ್ಲವನ್ನೂ ತೋರಿಸಬಹುದು, ಆದರದು ಈ ಪ್ರಪಂಚಕ್ಕೆ ಅನುರೂಪವಾಗಿದ್ದಿರಬೇಕು. ಇದನ್ನೇ ನಾವು ಅಸಾಮಾನ್ಯ ಅಲೌಕಿಕ ದಿವ್ಯದೃಷ್ಟಿ ಶಕ್ತಿಯೆನ್ನುವುದು.

ಈ ಮಾನವ ಶರೀರದ ವಿಜ್ಞಾನವನ್ನು ಓದುವವರು ಯಾವಾಗ ಈ ಅಸಾಮಾನ್ಯವಾದ ಶಕ್ತಿಯ ಪರೀಕ್ಷೆಯನ್ನು ನಡೆಸಿದಾಗ, ಅವರು ಸಾಮಾನ್ಯವಾಗಿ ಸುಲಭವಾಗಿ ಇದರ ಬಗ್ಗೆ ಸಂದೇಹ ಪಡುತ್ತಾರೆ. ಉದಾಹರಣೆಗೆ, ಯಾವಾಗ ಒಬ್ಬ ವ್ಯಕ್ತಿಯನ್ನು ಅವನ ಬೀಜಿಂಗ್‌ನಲ್ಲಿರುವ ಸಂಬಂಧಿಕನ ಬಗ್ಗೆ ಕೇಳಿದಾಗ "ಸಂಬಂಧಿಕನು ಮನೆಯಲ್ಲಿ ಏನು ಮಾಡುತ್ತಿದ್ದಾನೆಂದು" ಆ ಸಂಬಂಧಿಕನ ಹೆಸರು ಮತ್ತು ಸಾಮಾನ್ಯ ಮಾಹಿತಿಯನ್ನು ಕೊಟ್ಟಾಗ, ಈ ವ್ಯಕ್ತಿಯು ಆಕೆಯನ್ನು ನೋಡುತ್ತಾನೆ. ಇವನು ಅವಳಿರುವ ಕಟ್ಟಡವನ್ನು ವರ್ಣಿಸುತ್ತಾನೆ, ಹೇಗೆ ಬಾಗಿಲಿನಿಂದ ಒಳಹೋಗುವುದು ಮತ್ತು ಹೇಗೆ ಕೊಠಡಿಯನ್ನು ಅಲಂಕರಿಸುವರು ಎಂದು ವರ್ಣಿಸುತ್ತಾನೆ. ಅವನು ಹೇಳಿದ್ದೆಲ್ಲವೂ ನಿಜ. ಸಂಬಂಧಿಕನು ಏನು ಮಾಡುತ್ತಿದ್ದಾನೆ? ಅವನು ಹೇಳುತ್ತಾನೆ ಸಂಬಂಧಿಕನು ಏನೋ ಬರೆಯುತ್ತಿದ್ದಾನೆಂದು. ಇದನ್ನು ಪರಿಶೀಲಿಸಲು ಅವರು ಆ ಸಂಬಂಧಿಕಳನ್ನು ದೂರವಾಣಿಯ ಮೂಲಕ ಕೇಳುತ್ತಾರೆ, "ನೀನು ಈ ಸಮಯದಲ್ಲಿ ಏನು ಮಾಡುತ್ತಿರುವಿ?" "ನಾನು ಊಟ ಮಾಡತ್ತಿರುವೆ". ಇದು ಅವನು ಹೇಳಿದ್ದನ್ನು ಸುಳ್ಳಾಗಿಸಲಿಲ್ಲವೇ? ಪೂರ್ವದಲ್ಲಿ ಇದೇ ಕಾರಣದಿಂದ ಯಾರೂ ಈ ಅಸಾಮಾನ್ಯ ಶಕ್ತಿಯನ್ನು ಗುರುತಿಸಿರಲಿಲ್ಲ. ಅವನು ನೋಡಿದ ಆ ವಾತಾವರಣ, ಹೇಗೆ ಇದ್ದರೂ ಅದು ಸುಳ್ಳಾಗಿರಲಿಲ್ಲ. ಏಕೆಂದರೆ ನಮ್ಮ ಅಂತರಿಕ್ಷ ಮತ್ತು ಕಾಲ, ನಾವು ಇದನ್ನು "ಅಂತರಿಕ್ಷಕಾಲ" ಎಂದು ಕರೆಯತ್ತೇವೆ, ಬೇರೆ ಆಯಾಮದ ಅಂತರಿಕ್ಷಕಾಲದಲ್ಲಿರುವ ಈ ಅಸಾಮಾನ್ಯವಾದ ಶಕ್ತಿಗೆ ಕಾಲ ವ್ಯತ್ಯಾಸ ಇರುತ್ತದೆ. ಈ ಎರಡು ಕಡೆಯ ಕಾಲಗಳ ತಿಳುವಳಿಕೆಯು ಬೇರೆಯಾಗಿರುತ್ತದೆ. ಅವಳು ಮೊದಲು ಏನನ್ನೋ ಬರೆಯುತ್ತಿದ್ದಳು, ಮತ್ತು ಅವಳು ಈಗ ಊಟವನ್ನು ಮಾಡುತ್ತಿದ್ದಾಳೆ; ಈ ತರಹದ ಕಾಲವ್ಯತ್ಯಾಸವಿದೆ. ಫಲಿತಾಂಶವಾಗಿ ಒಂದು ವೇಳೆ ಈ ಮಾನವ ಶರೀರದ ಬಗ್ಗೆ ಅಧ್ಯಯನ ಮಾಡುವವರು ಪ್ರಕಲ್ಪನೆಗಳನ್ನು ನಿರೂಪಿಸಿ, ಸಾಂಪ್ರದಾಯಿಕ ಸಿದ್ಧಾಂತ ಮತ್ತು ಆಧುನಿಕ ವಿಜ್ಞಾನದ ಮೇಲೆ ಸಂಶೋಧನೆ ನಡೆಸಿದರೆ, ಇನ್ನೂ ಹತ್ತು ಸಾವಿರ ವರ್ಷಗಳು ಕಳೆದರೂ ಕೂಡ ಅವರಿಗೆ ಸಫಲತೆ ಸಿಗುವುದಿಲ್ಲ, ಏಕೆಂದರೆ ಮೊಟ್ಟಮೊದಲನೆಯದಾಗಿ ಇದು ಸಾಮಾನ್ಯ ಮಾನವರಿಗಿಂತ ಮಿಗಿಲಾಗಿರುವುದು. ಈ ರೀತಿಯಾಗಿ ಈ ಮಾನವ ಜನಾಂಗವು ತನ್ನ ಯೋಚಿಸುವ ರೀತಿಯನ್ನು ಬದಲಾಯಿಸಬೇಕು ಮತ್ತು ತಿಳುವಳಿಕೆಯನ್ನೂ ಬದಲಾಯಿಸಬೇಕು.

## ಪೂರ್ವಜ್ಞಾನ ಮತ್ತು ಭವಿಷ್ಯ ತಿಳಿಯುವ ಅದ್ಭುತ ಸಾಮರ್ಥ್ಯ

ದಿವ್ಯಚಕ್ಷುವಿಗೆ ನೇರವಾಗಿ ಸಂಬಂಧಿಸಿರುವ ಮತ್ತೊಂದು ಅಸಾಮಾನ್ಯ ಶಕ್ತಿಯೆಂದರೆ ಪೂರ್ವ ವಿಷಯದ ಜ್ಞಾನ ಮತ್ತು ಮುಂದಾಗುವ ವಿಷಯದ ಜ್ಞಾನ. ಇಂದಿನ ದಿನದಲ್ಲಿ ಆರು ಬಗೆಯ ಅಸಾಮಾನ್ಯವಾದ ಶಕ್ತಿಯನ್ನು ಬಹಿರಂಗವಾಗಿ ನಮ್ಮ ಜಗತ್ತಿನಲ್ಲಿ ಗುರುತಿಸಲಾಗಿದೆ, ದಿವ್ಯ ಚಕ್ಷುವಿನೊಂದಿಗೆ, ಅತೀಂದ್ರೀಯ ದೃಷ್ಟಿ ಮತ್ತು ಪೂರ್ವ ವಿಷಯ ಜ್ಞಾನ ಮತ್ತು ಮುಂದಾಗುವ ವಿಷಯದ ಜ್ಞಾನ. ಪೂರ್ವ ವಿಷಯದ ಜ್ಞಾನ ಮತ್ತು ಮುಂದಾಗುವ ವಿಷಯದ ಜ್ಞಾನವೆಂದರೇನು? ಇದೇನೆಂದರೆ ಯಾರೋ ಒಬ್ಬರು ಇನ್ನೊಂದು ವ್ಯಕ್ತಿಯ ಬಗ್ಗೆ ಪೂರ್ವ ಮತ್ತು ಭವಿಷ್ಯವನ್ನು ಹೇಳಬಲ್ಲವನು. ಈ ಬಲಿಷ್ಟವಾದ ಸಾಮರ್ಥ್ಯದಿಂದ, ಒಬ್ಬರು ಒಂದು ಸಮಾಜದ ಏರಿಳಿತದ ಬಗ್ಗೆ ಹೇಳಬಹುದು. ಇನ್ನೂ ಹೆಚ್ಚು ಸಾಮರ್ಥ್ಯದಿಂದ, ಒಬ್ಬರ ಈ ಒಂದು ವಿಶ್ವದ ಬದಲಾವಣೆಯ ತತ್ವವನ್ನು ನೋಡಬಹುದು. ಇದೊಂದು ಪೂರ್ವ ವಿಷಯದ ಜ್ಞಾನ ಮತ್ತು ಮುಂದಾಗುವ ವಿಷಯದ ಜ್ಞಾನದ ಅಸಾಮಾನ್ಯ ಶಕ್ತಿ. ಏಕೆಂದರೆ ಅಣುವು ಸುತ್ತುತ್ತಲೇ ಇರುತ್ತದೆ ಮತ್ತು ಕೆಲವು ತತ್ವಗಳನ್ನು ಅನುಸರಿಸುತ್ತದೆ, ಒಂದು ವಿಶಿಷ್ಠವಾದ ಆಯಾಮದಲ್ಲಿ ಎಲ್ಲಾ ಅಣುಗಳ ಅಸ್ತಿತ್ವವು ಇತರೇ ಬೇರೆ ಆಯಾಮದಲ್ಲಿಯೂ ಕೂಡ ಇರುತ್ತದೆ. ಉದಾಹರಣೆಗೆ ಒಬ್ಬ ಮನುಷ್ಯನ ಶರೀರವು ಚಲಿಸಿದಾಗ, ದೇಹದಲ್ಲಿ ಅಣುಕೋಶಗಳೂ ಚಲಿಸುತ್ತವೆ ಮತ್ತು ಸೂಕ್ಷ್ಮ ಮಟ್ಟದಲ್ಲಿ ಎಲ್ಲಾ ಧಾತುಗಳು ಅಂದರೆ ಅಣುಗಳು, ಪ್ರೋಟಾನುಗಳು, ಎಲೆಕ್ಟ್ರಾನುಗಳು ಮತ್ತು ಅತೀ ಸೂಕ್ಷ್ಮ ಕಣಗಳೂ ಚಲಿಸುತ್ತವೆ. ಆದರೂ ಅವುಗಳಿಗೆ ತಮ್ಮದೇ ಆದ ಸ್ವಂತ ಅಸ್ತಿತ್ವವಿದೆ, ಮತ್ತು ಬೇರೆ ಆಯಾಮದಲ್ಲಿರುವ ದೇಹದ ರೂಪಗಳೂ ಕೂಡ ಬದಲಾವಣೆಯನ್ನು ಹೊಂದುತ್ತವೆ.

ವಸ್ತುಗಳು ಅಳಿದು ಹೋಗುವುದಿಲ್ಲವೆಂದು ನಾವು ಮೊದಲೇ ಹೇಳಿರಲಿಲ್ಲವೇ? ಒಂದು ನಿರ್ಧಿಷ್ಟವಾದ ಆಯಾಮದಲ್ಲಿ ಒಬ್ಬ ವ್ಯಕ್ತಿಯು ಏನು ಮಾಡಿರುವನೋ ಅಥವ ಕೈಯ್ಯನ್ನು ಹರಿದಾಡಿಸಿ ಒಬ್ಬ ವ್ಯಕ್ತಿಯು ಏನು ಮಾಡುವನೋ ಅವೆಲ್ಲವೂ ವಸ್ತುಗಳ ಇರುವಿಕೆಯನ್ನು ತೋರುತ್ತದೆ, ಮತ್ತು ಅವನು ಏನು ಮಾಡಿದರೂ ಅದರ ಛಾಯೆ ಮತ್ತು ಸಂದೇಶವನ್ನು ಬಿಟ್ಟಿರುತ್ತಾನೆ. ಬೇರೆ ಆಯಾಮದಲ್ಲಿ ಅದು ಮಾಗಿ ಹೋಗುವುದಿಲ್ಲ ಮತ್ತು ಸದಾ ಕಾಲ ಅಲ್ಲೇ ಇರುತ್ತದೆ. ಅಸಾಮಾನ್ಯವಾದ ಶಕ್ತಿಯುಳ್ಳ ವ್ಯಕ್ತಿಗೆ ಪೂರ್ವದಲ್ಲಿ ಉಳಿದುಕೊಂಡ ಛಾಯೆಯನ್ನು ನೋಡಿದಾಗ ಮುಂದೇನಾಗುತ್ತದೆ ಎಂದು ತಿಳಿಯುತ್ತದೆ. ಭವಿಷ್ಯದಲ್ಲಿ ನಿಮಗೆ ಪೂರ್ವ ವಿಷಯದ ಜ್ಞಾನ ಮತ್ತು ಮುಂದಾಗುವ ವಿಷಯದ ಅಸಾಮಾನ್ಯ ಶಕ್ತಿ ಬಂದಾಗ, ಈ ನನ್ನ ಇಂದಿನ ಉಪನ್ಯಾಸದ ರೂಪವು ಇನ್ನೂ ಇರುವುದನ್ನು ನೀವು ನೋಡಿದಾಗ ನಿಮಗೆ ಗೊತ್ತಾಗುತ್ತದೆ. ಇದು ಈಗಾಗಲೇ ಸಮಕಾಲೀನವಾಗಿ ಇರುತ್ತದೆ. ಒಂದು ವಿಶೇಷವಾದ ಆಯಾಮದಲ್ಲಿ ಎಲ್ಲಿ ಕಾಲದ ಪರಿಕಲ್ಪನೆ ಇರುವುದಿಲ್ಲವೋ, ಒಬ್ಬ ಮನುಷ್ಯ ಹುಟ್ಟಿದಾಗ, ಅವನ ಅಥವ ಅವಳ ಸಂಪೂರ್ಣ ಜೀವನಕಾಲವು ಅಲ್ಲಿ ಸಮಕಾಲೀನವಾಗಿ ಅಸ್ತಿತ್ವದಲ್ಲಿರುತ್ತದೆ. ಕೆಲವರಿಗೆ , ಒಂದಕ್ಕಿಂತ ಹೆಚ್ಚು ಜೀವನಕಾಲವು ಅಲ್ಲಿ ಅಸ್ತಿತ್ವದಲ್ಲಿರುವುದು.

ಕೆಲವು ಜನರು ಆಶ್ಚರ್ಯ ಪಡಬಹುದು "ನಮ್ಮ ಸ್ವಪ್ರಯತ್ನದಿಂದ ನಮ್ಮನ್ನು ನಾವು ಬದಲಾಯಿಸಿಕೊಳ್ಳುವುದು ಅವಶ್ಯವಿಲ್ಲವೇ?" ಅವರು ಇದನ್ನು ಒಪ್ಪುವುದಿಲ್ಲ. ನಿಜವಾಗಿಯೂ ಸ್ವಪ್ರಯತ್ನದಿಂದ ಕೆಲವು ಸಣ್ಣ ವಿಷಯಗಳನ್ನು ಸ್ವಲ್ಪ ಬದಲಾಯಿಸಬಹುದು. ಆದರೆ ನಿರ್ದಿಷ್ಟವಾಗಿ, ಬದಲಾಯಿಸುವ ನಿಮ್ಮ ಪ್ರಯತ್ನದಲ್ಲಿ ನೀವು ಕರ್ಮವನ್ನು ಹೊಂದಬಹುದು. ಇಲ್ಲವೆಂದರೆ, ಕರ್ಮವನ್ನು ಹೊಂದುವ ವಿಷಯವೇ ಇರುತ್ತಿರಲಿಲ್ಲ ಮತ್ತು ಒಳ್ಳೆಯ ಕೆಟ್ಟ ಕೆಲಸ ಮಾಡುವ ಪ್ರಶ್ನೆಯೇ ಇರುತ್ತಿರಲಿಲ್ಲ. ಇದೇ ರೀತಿಯಾಗಿ ಮಾಡಬೇಕೆಂದು ಒಬ್ಬನು ಒತ್ತಾಯ ಮಾಡಿದಾಗ, ಬೇರೆಯವರ ಲಾಭ ಪಡೆದು ಒಬ್ಬನು ಕೆಟ್ಟ ಕೆಲಸವನ್ನೇ ಮಾಡುತ್ತಾನೆ. ಈ ರೀತಿಯಾಗಿ, ಆದುದರಿಂದಲೇ ಸಾಧನೆಯ ಅಭ್ಯಾಸವು ಕಾಲವನ್ನು ಬಯಸುತ್ತದೆ ಮತ್ತು ಕ್ರಮೇಣವಾಗಿ ಒಬ್ಬ ವ್ಯಕ್ತಿಯು ಈ ಸೃಷ್ಟಿ ರೀತಿ ನೀತಿಯನ್ನು ಅನುಸರಿಸಲೇಬೇಕು. ಇಲ್ಲವಾದಲ್ಲಿ ನೀವು ಬೇರೆಯವರನ್ನು ನಿಮ್ಮ ಪ್ರಯತ್ನದಿಂದ ತೊಂದರೆಗೀಡುಮಾಡುವಿರಿ. ಒಂದು ವೇಳೆ ನಿಮ್ಮ ಜೀವನವನ್ನು ಆರಂಭಿಸಲು ಏನೂ ಇಲ್ಲದಿದ್ದಲ್ಲಿ ಮತ್ತು ಈ ಸಮಾಜದಲ್ಲಿ ಬೇರೆಯವರಿಗೆ ಸೇರಬೇಕಾದದ್ದು ನಿಮಗೆ ಸಿಕ್ಕರೆ, ನೀವು ಆ ಮನುಷ್ಯನಿಗೆ ಋಣಿ ಆಗಿರುತ್ತೀರಿ.

ಆದರೆ ದೊಡ್ಡ ಘಟನೆಗಳಿಗೆ, ಒಬ್ಬ ಸಾಮಾನ್ಯ ಮನುಷ್ಯನಿಗೆ ಅವನ್ನು ಬದಲಿಸಲು ಸಾಧ್ಯವಿಲ್ಲ. ಹಾಗೆ ಮಾಡಲು ಒಂದೇ ಒಂದು ಮಾರ್ಗವಿದೆ. ಒಂದು ವೇಳೆ ಈ ವ್ಯಕ್ತಿಯು ಬರೀ ಕೆಟ್ಟ ಕೆಲಸವನ್ನು ಮಾಡಿದರೆ, ಕೆಟ್ಟ ಕೆಲಸ ಬಿಟ್ಟು ಬೇರೇನೂ ಮಾಡದೆ ಇದ್ದರೆ, ಆಗ ಅವನು ತನ್ನ ಜೀವನವನ್ನೇ ಬದಲಾಯಿಸಬಹುದು. ಏನನ್ನು ಅವನು ಎದುರಿಸುವನೋ ಅದು ಸಂಪೂರ್ಣ ನಾಶವಾಗುವುದು. ಮೇಲ್ಮಟ್ಟದಿಂದ ನೋಡಿದಾಗ, ಯಾವಾಗ ವ್ಯಕ್ತಿ ಸಾಯುವನೋ, ಆಗ ಅವನ ಪುರಾತನ ಮೂಲ ಜೀವಾತ್ಮ ನಶಿಸುವುದಿಲ್ಲ. ಏಕೆ ಈ ಪುರಾಥನ ಮೂಲ ಜೀವಾತ್ಮ ನಶಿಸುವುದಿಲ್ಲ. ನಿಜವಾಗಿಯೂ, ಒಬ್ಬ ಮನುಷ್ಯನು ಸತ್ತಾಗ, ಶವಾಗ್ರಹದಲ್ಲಿರುವ ಅವನ ಮೃತ ಶರೀರವು ಬರೀ ಮಾನವ ಜೀವಕೋಶಗಳಿಂದ ಕೂಡಿರುತ್ತದೆ ಎಂಬುದನ್ನು ನಾವು ನೋಡಿದ್ದೇವಿ. ಈ ಆಯಾಮದಲ್ಲಿ ಬೇರೆ ಜೀವಕೋಶದಿಂದ ಕೂಡಿದ ಒಳಅಂಗದ ಅಂಗಾಂಶಗಳು ಮತ್ತು ಮಾನವ ದೇಹದ ಎಲ್ಲಾ ಜೀವಕೋಶಗಳು ಸಂಪೂರ್ಣವಾಗಿ ಕೊಳೆತು ಹೋಗುತ್ತವೆ, ಆದರೆ ಬೇರೆ ಆಯಾಮದಲ್ಲಿ ಅಣುಗಳು, ಪರಮಾಣುಗಳು, ಪ್ರೋಟಾನುಗಳು ಮುಂತಾದುವುಗಳಿಗಿಂತಲೂ ಹೆಚ್ಚು ಸೂಕ್ಷ್ಮವಾದ ಕಣಗಳಿಂದ ಮಾಡಲ್ಪಟ್ಟಿರುವ ದೇಹಗಳು ಸತ್ತಿರುವುದಿಲ್ಲ. ಇವುಗಳು ಬೇರೆ ಆಯಾಮದಲ್ಲಿ ಇರುತ್ತವೆ ಮತ್ತು ಇನ್ನೂ ಸೂಕ್ಷ್ಮ ಆಯಾಮಗಳಲ್ಲಿ ಬದುಕಿರುತ್ತವೆ. ಎಲ್ಲಾ ರೀತಿಯ ಕೆಟ್ಟ ಕೆಲಸಗಳನ್ನು ಮಾಡುವವರು ಏನು ಎದುರಿಸುವರೆಂದರೆ ಅವರ ಎಲ್ಲಾ ಜೀವಕಣಗಳು ಸಂಪೂರ್ಣವಾಗಿ ಒಡೆದು ಹೋಗುವುದು, ಬೌದ್ಧ ಧರ್ಮದವರು ಇದನ್ನು ಶರೀರ ಮತ್ತು ಆತ್ಮದ ನಶಿಸುವಿಕೆ ಎಂದು ಕರೆಯುತ್ತಾರೆ.

ಒಬ್ಬರ ಜೀವನವನ್ನು ಬದಲಾಯಿಸಲು ಇನ್ನೊಂದು ಮಾರ್ಗವಿದೆ, ಮತ್ತು ಇದು ಒಂದೇ ದಾರಿ: ಏನೆಂದರೆ ಈಗಿನಿಂದ ಈ ವ್ಯಕ್ತಿಯು ಸಾಧನೆಯ ಅಭ್ಯಾಸದಲ್ಲಿ ನಡೆವುದು. ಸಾಧನೆಯ ಅಭ್ಯಾಸದ ಹಾದಿಯನ್ನು ಹಿಡಿದಾಗ ಏಕೆ ಅವನ ಜೀವನವನ್ನು ಬದಲಾಯಿಸಬಹುದು? ಯಾರಿಗೆ ಇದನ್ನು ಸುಲಭವಾಗಿ ಮಾಡುವುದಕ್ಕೆ ಸಾಧ್ಯ? ಒಂದು ಸಾರಿ ಈ ವ್ಯಕ್ತಿಯು ಸಾಧನೆಯ ಅಭ್ಯಾಸದ ಹಾದಿಯನ್ನು ಅನುಸರಿಸಬೇಕು ಎಂದು ಯೋಚಿಸಿದಾಗ ಮತ್ತು ಒಂದು ಸಲ ಯೋಚನೆ ಬಂದರೆ, ಅದು ಹೊನ್ನಿನ ಹಾಗೆ ಹೊಳೆಯುತ್ತದೆ, ಈ ಜಗತ್ತನ್ನು ಹತ್ತು ದಿಕ್ಕಿನಲ್ಲಿ ಅಲುಗಾಡಿಸುತ್ತದೆ. ವಿಶ್ವದ ನೋಟದಲ್ಲಿ ಬುದ್ಧ ಶಾಲೆಗೆ ಹತ್ತು ದಿಕ್ಕಿನ ವಿಶ್ವ ಎಂಬ ಸಿದ್ಧಾಂತವಿದೆ. ಉನ್ನತವಾಗಿರುವವರ ಕಣ್ಣಿನಲ್ಲಿ ಒಬ್ಬ ವ್ಯಕ್ತಿಯ ಜೀವನವು ಕೇವಲ ಮಾನವನಾಗಿರುವುದಷ್ಟೇ ಅಲ್ಲ. ಈ ಉನ್ನತದವರು, ಒಬ್ಬ ವ್ಯಕ್ತಿಯು ಈ ವಿಶ್ವದ ಅಂತರಿಕ್ಷದಲ್ಲಿ ಒಮ್ಮೆ ಹುಟ್ಟಿದಾಗ ಈ ವಿಶ್ವದ ಗುಣಗಳನ್ನೇ ಹೊಂದಿರುತ್ತಾನೆ ಎಂದು ಯೋಚಿಸುತ್ತಾರೆ; ಜೀವನವು ಕರುಣಾಮಯವಾದುದು ಮತ್ತು ಜ್ಹೆನ್-ಷ್ಹನ್-ರ್ಹೆನ್ ವಸ್ತುಗಳಿಂದ ನಿರ್ಮಿತವಾದುದು. ಆದರೂ ಜೀವನವು ಸಾಮಾಜಿಕ ಸಂಬಂಧಗಳನ್ನು ಸ್ಥಾಪಿಸುತ್ತದೆ. ಸಮುದಾಯದಲ್ಲಿ ಸಾಮಾಜಿಕ ಒಡನಾಟಗಳ ಸಮಯದಲ್ಲಿ, ಕೆಲವು ಜೀವಗಳು ಭ್ರಷ್ಟಗೊಂಡು ಕೆಳಗಿನ ಸ್ತರಗಳಿಗೆ ಬೀಳುತ್ತವೆ. ಅವರು ಆ ಮಟ್ಟದಲ್ಲಿ ಉಳಿಯಲಾಗದೆ ಮತ್ತೂ ಮತ್ತೊಮ್ಮೆ ಕೆಟ್ಟರೆ ಅವರೂ ಮತ್ತೂ ಕೆಳಗಿನ ಮಟ್ಟಕ್ಕೆ ಕುಸಿಯುತ್ತಾರೆ. ಅವರು ನಿರಂತರವಾಗಿ ಕುಸಿದೂ ಕುಸಿದೂ ಕೊನೆಗೆ ಈ ಸಾಮಾನ್ಯ ದಿನನಿತ್ಯದ ಜನರ ಮಟ್ಟವನ್ನು ತಲುಪುತ್ತಾರೆ.

ಈ ಮಟ್ಟದಲ್ಲಿ ಇಂತಹ ಜನರನ್ನು ನಾಶಗೊಳಿಸಬೇಕು ಮತ್ತು ನಿರ್ಮೂಲನಗೊಳಿಸಬೇಕು. ಆದಾಗ್ಯೂ ಆ ಮಹಾನ್ ದಿವ್ಯಜ್ಞಾನಿ ಪುರುಷರು ತಮ್ಮ ಅತ್ಯಂತ ಹೃದಯಪೂರ್ವಕ ಕರುಣೆ, ದಯೆಯಿಂದ ವಿಶೇಷವಾಗಿ ಮಾನವ ಸಮಾಜದ ಈ ಸ್ಥಳವನ್ನು ನಿರ್ಮಾಣ ಮಾಡಿದ್ದಾರೆ. ಈ ಸ್ಥಳದ ಪರಿಮಾಣದಲ್ಲಿ, ಒಬ್ಬರಿಗೆ ಅತಿರಿಕ್ತವಾದ ಮಾನವ ಭೌತ ಶರೀರ ಮತ್ತು ಈ ಭೌತಿಕ ಪರಿಮಾಣವನ್ನಷ್ಟೇ ನೋಡಲು ಯೋಗ್ಯವಾದ ಅಧಿಕವಾದ ಈ ಜೋಡಿ ಕಣ್ಣುಗಳನ್ನು ಕೊಡಲ್ಪಟ್ಟಿರುತ್ತದೆ. ಅಂದರೆ, ಒಬ್ಬರು ಇದಕ್ಕೆ ಮರುಳಾಗಿ ಕಳೆದುಹೋಗುತ್ತಾರೆ ಮತ್ತು ಬೇರೆಲ್ಲಾ ಪರಿಮಾಣದಲ್ಲಿ ಲಭ್ಯವಿರುವಂತೆ ಈ ಜಗತ್ತಿನ ಸತ್ಯಗಳನ್ನು ನೋಡಲು ಸಾಧ್ಯವಾಗುವುದಿಲ್ಲ. ಈ ಮರುಳುತನಕ್ಕಾಗಿ ಮತ್ತು ಇಂತಹ ಪರಿಸ್ಥಿತಿಯಡಿಯಲ್ಲಿ ಒಬ್ಬರಿಗೆ ಈ ತರನಾದ ಅವಕಾಶ ಕೊಡಲಾಗುತ್ತದೆ. ಒಬ್ಬರು ಮರುಳಾಗಿರುವುದರಿಂದ ಇದೂ ಕೂಡ ಅತ್ಯಂತ ನೋವಿನದ್ದಾಗಿರುತ್ತದೆ. ಈ ಒಂದು ದೇಹದಿಂದ ಒಬ್ಬರು ಕಷ್ಟ ಅನುಭವಿಸುವಂತೆ ಮಾಡಲಾಗುತ್ತದೆ. ತಾವೋ ಶಾಲೆಯು, ಒಬ್ಬ ವ್ಯಕ್ತಿಯು ಈ ಪರಿಮಾಣದಿಂದ ತನ್ನ ಮೂಲಕ್ಕೆ ಹಿಂತಿರುಗಬೇಕೆಂದರೆ ಆತ ಸಾಧನೆಯನ್ನು ಅಭ್ಯಸಿಸುವುದರಿಂದ ಮಾತ್ರ ತನ್ನ ಮೂಲ ನೈಜ ಆತ್ಮಕ್ಕೆ ಮರುಳಲು ಸಾಧ್ಯವೆಂದು ಹೇಳುತ್ತದೆ.

ಆತನಿಗೆ ಸಾಧನೆಯನ್ನು ಅಭ್ಯಾಸ ಮಾಡುವ ಹೃದಯವಿದೆಯೆಂದರೆ ಆತನ ಬುದ್ಧ ಗುಣವು ಉದಯಿಸಿದೆಯೆಂದರ್ಥ. ಈ ಹೃದಯವನ್ನು ಅತ್ಯಂತ ಅಮೂಲ್ಯವದದ್ದೆಂದು ಪರಿಗಣಿಸುತ್ತಾರೆ ಮತ್ತು ಜನರು ಇವರಿಗೆ ಸಹಾಯ ಮಾಡಲು ಮುಂದಾಗುತ್ತಾರೆ. ಇಂತಹ ಒಂದು ಕಠಿಣ ಪರಿಸ್ಥಿತಿಯಲ್ಲೂ ಈ ವ್ಯಕ್ತಿಯು ಮರಳಲಾಗಿರುವುದಿಲ್ಲ ಮತ್ತು ಹಿಂದಕ್ಕೆ ಮರಳಬೇಕೆಂದು ಬಯಸುತ್ತಾನೆ. ಪರಿಣಾಮವಾಗಿ ಜನರು ಅವನಿಗೆ ಸಹಾಯ ಮಾಡುತ್ತಾರೆ ಮತ್ತು ಯಾವುದೇ ನಿರ್ಬಂಧವಿಲ್ಲದೆ ಸಹಾಯ ಹಸ್ತ ಚಾಚುತ್ತಾರೆ. – ಆತನಿಗೆ ಯಾವುದರ ಕುರಿತೂ ಸಹಾಯ ಮಾಡುತ್ತಾರೆ. ಇಂತಹ ಸಂಗತಿಗಳನ್ನು ಸಾಮಾನ್ಯ ಜನರಿಗಲ್ಲದೆ ಕೇವಲ ಸಾಧಕರಿಗೇ ಏಕೆ ಮಾಡುತ್ತೇವೆ? ಅದಕ್ಕೆ ಇದೇ ಕಾರಣ.

ಆದಾಗ್ಯೂ ತನ್ನ ರೋಗವನ್ನು ಗುಣಪಡಿಸಿಕೊಳ್ಳಲು ಬಯಸುವ ಸಾಮಾನ್ಯ ದಿನನಿತ್ಯದ ಜನರಿಗೆ ನಾವು ಯಾವುದೇ ರೀತಿಯ ಸಹಾಯ ಮಾಡುವುದಿಲ್ಲ. ದಿನನಿತ್ಯದ ಮನುಷ್ಯ ಕೇವಲ ದಿನನಿತ್ಯದ ಮನುಷ್ಯನೇ. ಈ ದಿನನಿತ್ಯದ ಜನರು ಈ ಸಾಮಾನ್ಯ ಮಾನವ ಸಮಾಜದ ರೀತಿನೀತಿಗೆ ಬದ್ಧನಾಗಿರಬೇಕಾಗುತ್ತದೆ. ಬಹಳ ಜನರು, ಬುದ್ಧನು ಸಕಲ ಜೀವಿಗಳಿಗೆ ಮೋಕ್ಷವನ್ನು ದಯಪಾಲಿಸುತ್ತಾನೆ ಮತ್ತು ಬುದ್ಧ ಶಾಲೆಯು ಸಕಲ ಜೀವಿಗಳಿಗೆ ಮೋಕ್ಷವನ್ನು ದಯಪಾಲಿಸಲು ಬೋಧಿಸುತ್ತದೆ ಎಂದು ಹೇಳುತ್ತಾರೆ, ಆದರೆ ನಾನು ಹೇಳುತ್ತೇನೆ ನೀವು ಎಲ್ಲ ಬುದ್ಧ ಗ್ರಂಥಗಳನ್ನು ಪರಿಶೀಲಿಸಿ, ಮತ್ತು ಅದ್ಯಾವುದೂ ಸಾಮಾನ್ಯ ದಿನನಿತ್ಯದ ಜನರ ರೋಗಗಳಿಗೆ ಚಿಕಿತ್ಸೆ ಕೊಡುವುದು ಸಕಲ ಜೀವಿಗಳಿಗೆ ಮೋಕ್ಷವನ್ನು ದಯಪಾಲಿಸಿದಂತೆ ಎಂದು ಎಲ್ಲೂ ಹೇಳುವುದಿಲ್ಲ. ಈ ವಿಷಯವನ್ನು ಇತ್ತೀಚಿನ ವರ್ಷಗಳ ಕಪಟ ಚೀಗಾಂಗ್ ಗುರುಗಳು ಹಾಳುಗೆಡವಿದ್ದಾರೆ. ಆ ಅಪ್ಪಟ ಶುದ್ಧ ಚೀಗಾಂಗ್ ಗುರುಗಳು, ಯಾರು ಈ ಹೆದ್ದಾರಿಯನ್ನು ನಿರ್ಮಿಸಿದರೋ ಅವರ್ಯಾರೂ ನಿಮಗೆ ಇತರರ ರೋಗಗಳಿಗೆ ಚಿಕಿತ್ಸೆ ಕೊಡಿ ಎಂದು ಎಲ್ಲಿಯೂ ಹೇಳಿಲ್ಲ. ಅವರ ಕೇವಲ ನೀವೇ ಸ್ವಯಂ ಆಗಿ ಅಭ್ಯಸಿಸಿ ರೋಗಮುಕ್ತರಾಗಿ ಮತ್ತು ಗಟ್ಟಿಮುಟ್ಟಾಗಿರಿ ಎಂದಷ್ಟೇ ಹೇಳಿದ್ದಾರೆ. ನೀವೂ ಕೂಡ ದಿನನಿತ್ಯದ ಸಾಮಾನ್ಯ ಮನುಷ್ಯರೇ. ನೀವು ಎರಡು ದಿನ ಅಭ್ಯಾಸ ಮಾಡಿದಾಕ್ಷಣ ರೋಗಗಳನ್ನು ಗುಣಪಡಿಸಲು ಹೇಗೆ ಸಾಧ್ಯ? ಇದು ಇತರರನ್ನು ಮೋಸಗೊಳಿಸಿದಂತಲ್ಲವೇ? ಅದು ನಿಮ್ಮ ಅನುರಾಗವನ್ನು ಉತ್ತೇಜಿಸುವುದಿಲ್ಲವೇ ? ಇದು ಖ್ಯಾತಿ, ಸ್ವ-ಹಿತಾಸಕ್ತಿ ಮತ್ತು ಕೇವಲ ಸಾಮಾನ್ಯ ದಿನನಿತ್ಯದ ಜನರೆದುರಿಗೆ ತೋರಿಸಿಕೊಳ್ಳಲು ಕೆಲವು ಅಸಾಮಾನ್ಯ ವಾದವನ್ನು ಬೆನ್ನಟ್ಟಿದಂತೆ. ಇದು ಸತಾರಾಮಾಗಿ ನಿಷೇಧಿಸಲ್ಪಟ್ಟಿದೆ. ಆದ್ದರಿಂದ ಹಲವು ಜನರಿಗೆ ಹೆಚ್ಚಾಗಿ ಏನನ್ನಾದರೂ ಬೆನ್ನಟ್ಟಿದಷ್ಟೂ ಅವರಿಗೆ ಕಡಿಮೆಯೇ ದೊರೆಯುತ್ತದೆ. ನಿಮಗೆ ಅದನ್ನು ಮಾಡಲು ಬಿಡುವುದಿಲ್ಲ ಮತ್ತು ನೀವು ಈ ಸಾಮಾನ್ಯ ಮಾನವ ಸಮಾಜದ ರೀತಿನೀತಿಗಳನ್ನು ಹಾಗೆ ಸುಮ್ಮನೆ ಕದಡಲು ಬಿಡುವುದಿಲ್ಲ.

ಈ ಪ್ರಪಂಚದಲ್ಲಿರುವ ಮೂಲ ತತ್ವದಂತೆ ನೀವು ನಿಮ್ಮ ಮೂಲ, ನೈಜ ಆತ್ಮದೆಡೆ ಹಿಂತಿರುಗಲು ಬಯಸಿದರೆ, ಅನ್ಯರು ನಿಮಗೆ ಸಹಾಯ ಮಾಡುತ್ತಾರೆ. ಅವರು ಮಾನವ ಜೀವವು ಇಲ್ಲೇ ಸಾಮಾನ್ಯ ದಿನನಿತ್ಯದ ಜನರ ನಡುವೆ ಉಳಿಯುವ ಬದಲು ಅವನು ಬಂದಿರುವೆಡೆ ಹಿಂತಿರುಗಬೇಕೆಂದು ಯೋಚಿಸುತ್ತಾರೆ. ಮನುಷ್ಯರಿಗೆ ಯಾವುದೇ ರೋಗಗಳಿಲ್ಲದೆ ಮತ್ತು ಸುಖವಾಗಿ, ಸಂತೋಷವಾಗಿ ಜೀವಿಸುವಂತಾದರೆ ಅವನಿಗೆ ಅಮರನಾಗುವಂತೆ ಹೇಳಿದರೂ ಕೂಡ ಆತನಿಗೆ ಯಾವುದೇ ಆಸಕ್ತಿಯಿರುವುದಿಲ್ಲ. ಒಬ್ಬರು ಯಾವುದೇ ರೋಗದಿಂದ ನರಳದೆ ಅಥವ ಯಾವುದೇ ಕಷ್ಟಗಳಿಲ್ಲದೆ ಮತ್ತು ತಮಗೆ ಬೇಕಾದದ್ದನ್ನೆಲ್ಲಾ ಹೊಂದುವಂತಾಗಿದ್ದರೆ ಎಷ್ಟು ಅದ್ಭುತವಾಗಿತ್ತು! ಅದು ನಿಜವಾಗಿಯೂ ಅಮರರ ಲೋಕವಾಗುತ್ತಿತ್ತು, ಆದರೆ ನೀವು ಭ್ರಷ್ಟರಾಗಿರುವುದರಿಂದಲೇ ಈ ಮಟ್ಟಕ್ಕೆ ಕುಸಿದಿರುವುದು, ಆದ್ದರಿಂದ ನೀವು ಆರಾಮವಾಗಿರಲಾಗುವುದಿಲ್ಲ. ಮನುಷ್ಯನು ಮರಳುತನದಿಂದ ಸುಲಭವಾಗಿ ತಪ್ಪನ್ನೆಸಗಬಲ್ಲನು ಮತ್ತು ಬುದ್ಧತತ್ವವು ಇದನ್ನು ಕರ್ಮದ ಪ್ರತಿಫಲವೆನ್ನುತ್ತದೆ. ಆದ್ದರಿಂದ, ಹಲವು ಜನರಿಗೆ ಕಷ್ಟಗಳು ಅಥವ ದುರಾದೃಷ್ಟ ಕಾಡಿದಾಗ, ಅವರುಗಳು ತಮ್ಮ ಕರ್ಮಪ್ರತಿಫಲಗಳಿಗನುಸಾರ ತಮ್ಮ ಕರ್ಮವನ್ನು ಹಿಂತಿರುಗಿಸುತ್ತಿರುತ್ತಾರೆ. ಬೌದ್ಧತ್ವವು ಒಬ್ಬರು ಸರ್ವವ್ಯಾಪಿ ಎಂದು ಸಾರುತ್ತದೆ. ಬುದ್ಧ ಒಮ್ಮೆ ತನ್ನ ಕೈಯ್ಯನ್ನು ಸಾರಿದರೆ ಮಾನವ ಕೋಟಿಯ ಎಲ್ಲಾ ರೋಗಗಳು ಹಾಗೆಯೇ ಅಳಿಸಿಹೋಗಬಲ್ಲದು, ಬಹಳಷ್ಟು ಮಂದಿ ಬುದ್ಧರಿದ್ದರೂ ಕೂಡ ಅವರಲ್ಲಿ ಒಬ್ಬರೂ ಕೂಡ ಇದನ್ನೇಕೆ ಮಾಡಿಲ್ಲ? ಏಕೆಂದರೆ ವ್ಯಕ್ತಿಯು ತನ್ನ ಹಿಂದಿನ ತಪ್ಪಿಗಾಗಿ

ಕಷ್ಟಕೋಟಲೆಗಳನ್ನು ಅನುಭವಿಸುತ್ತಾನೆ. ನೀವು ಅವನ ರೋಗವನ್ನು ಗುಣಪಡಿಸಿದರೆ ಇದು ಜಗತ್ತಿನ ನೀತಿಯನ್ನು ಉಲ್ಲಂಘಿಸಿದಂತಾಗುತ್ತದೆ, ಏಕೆಂದರೆ ಆಗ ಒಬ್ಬರು ತಪ್ಪು ಕೆಲಸವನ್ನು ಮಾಡಬಹುದು ಮತ್ತು ಪಾವತಿಸಲ್ಲದೆ ಇತರರಿಗೆ ಋಣಿಯಾಗಬಹುದು. ಇದು ಸಾಧ್ಯವಿಲ್ಲ. ಆದ್ದರಿಂದ ಎಲ್ಲರೂ ಈ ಸಾಮಾನ್ಯ ಮಾನವ ಸಮಾಜದ ಸ್ಥಿತಿಯನ್ನು ಸಂರಕ್ಷಿಸುತ್ತಾರೆ; ಮತ್ತು ಅದನ್ನು ಕೆಡಿಸಲು ಯಾರೂ ಅದನ್ನು ಕೆಡಿಸಲು ಇಚ್ಛಿಸುವುದಿಲ್ಲ. ಹಾಗಾಗಿ ರೋಗಮುಕ್ತವಾಗಿ ಸುಖವಾಗಿರಲು ಮತ್ತು ನಿಜ ಬಂಧ ಮುಕ್ತಿಯ ಗುರಿಯನ್ನು ಸಾಕಾರಗೊಳಿಸಲು ನಿಮಗೆ ಇರುವ ಏಕಮೇವ ಮಾರ್ಗವೆಂದರೆ ಅದು ಅಭ್ಯಾಸದ ಸಾಧನೆ ಮಾತ್ರ. ಅವರನ್ನು ಧರ್ಮನೀತಿಪರ ದಾರಿಯಲ್ಲಿ ಅಭ್ಯಾಸ ಮಾಡಿಸುವ ಮೂಲಕ ಮಾತ್ರ ಸಕಲಜೀವಿಗಳಿಗೆ ಮೋಕ್ಷಸಾಧನೆ ಸಾಧ್ಯ.

ಬಹಳಷ್ಟು ಚೀಗಾಂಗ್ ಗುರುಗಳು ಏಕೆ ರೋಗ ಗುಣಪಡಿಸುವರು? ಏಕೆ ಅವರು ರೋಗಗಳನ್ನು ಗುಣಪಡಿಸುವುದರ ಬಗ್ಗೆ ಮಾತನಾಡುವರು? ಕೆಲವು ಜನರು ಈ ಪ್ರಶ್ನೆಗಳನ್ನು ಪರಿಗಣಿಸಿರಬಹುದು. ಬಹಳಷ್ಟು ಚೀಗಾಂಗ್ ಗುರುಗಳು ಸರಿಯಾದ ಅಭ್ಯಾಸದಿಂದ ಬಂದವರಲ್ಲ. ಒಬ್ಬ ನಿಜ ಚೀಗಾಂಗ್ ಗುರುವಿಗೆ, ಆತನ ಸಾಧನೆಯ ಹಾದಿಯಲ್ಲಿ ಆತನು ಗುರುತಿಸುವ ನೋವನ್ನನುಭವಿಸುತ್ತಿರುವ ಜೀವಿಗಳಿಗೆ ತನ್ನ ಅನುಕಂಪ ಮತ್ತು ದಯೆಯಿಂದ ಸಹಾಯ ಮಾಡುವುದಕ್ಕೆ ಅನುಮತಿ ಇದೆ. ಆದರೆ ಆತನಿಗೆ ಕಾಯಿಲೆಯನ್ನು ಗುಣಪಡಿಸಲು ಸಾಧ್ಯವಿಲ್ಲ. ಆತನು ತಾತ್ಕಾಲಿಕವಾಗಿ ಅದನ್ನು ನಿಯಂತ್ರಿಸಬಹುದು ಅಥವ ಮುಂದೂಡಬಹುದಷ್ಟೆ. ನಿಮ್ಮ ಬಳಿ ಅದು ಈಗ ಇರುವುದಿಲ್ಲ, ಆದರೆ ಮುಂದೊಂದು ದಿನ ನೀವು ಅದನ್ನು ಪಡೆಯುವಿರಿ, ಏಕೆಂದರೆ ಆತ ನಿಮ್ಮ ರೋಗವನ್ನು ಕೆಲಕಾಲ ಮುಂದೂಡುತ್ತಾನೆ. ಆತ ಅದನ್ನು ಬೇರೆಕಡೆ ವರ್ಗಾಯಿಸುತ್ತಾನೆ ಅಥವ ನಿಮ್ಮ ಸಂಬಂಧಿಗಳ ದೇಹಕ್ಕೆ ವರ್ಗಾಯಿಸುತ್ತಾನೆ. ಆತ ನಿಮ್ಮ ಕರ್ಮವನ್ನು ನಿಜವಾಗಿ ಸಂಪೂರ್ಣವಾಗಿ ನಿರ್ಮೂಲನ ಮಾಡಲು ಸಾಧ್ಯವಾಗುವುದಿಲ್ಲ. ಆತನಿಗೆ ಇದನ್ನು ಸಾಮಾನ್ಯ ದಿನನಿತ್ಯ ಮನುಷ್ಯರಿಗೆ ಸಹಜವಾಗಿ ಮಾಡಲು ಅನುಮತಿ ಇಲ್ಲ, ಆದರೆ ಸಾಧಕರಿಗೆ ಮಾತ್ರ ಮಾಡಬಹುದು. ಇದುವೇ ಇದರ ಸಿದ್ಧಾಂತ

ಬುದ್ಧ ಶಾಲೆಯಲ್ಲಿ, "ಸಕಲ ಜೀವಿಗಳಿಗು ಮೋಕ್ಷ" ಎಂದರೆ, ನಿಮ್ಮನ್ನು ಈ ಸಾಮಾನ್ಯ ದಿನನಿತ್ಯ ಜನರ ನೋವಿನ ಸ್ಥಿತಿಯಿಂದ ಉನ್ನತ ಮಟ್ಟಕ್ಕೆ ತರುವುದೇ ಆಗಿದೆ. ನೀವು ಇನ್ನು ಮುಂದೆ ನೋವನ್ನು ಅನುಭವಿಸುವುದಿಲ್ಲ ಮತ್ತು ಬಂಧಮುಕ್ತರಾಗುತ್ತೀರಿ–ಎಂದು ಇದರ ಅರ್ಥ. ಸಾಖ್ಯಮುನಿಗಳು ನಿರ್ವಾಣದ ಮತ್ತೊಂದು ಮುಖದ ಬಗ್ಗೆ ಹೇಳಿರಲಿಲ್ಲವೇ? ಸಕಲ ಜೀವಿಗಳಿಗೂ ಸಾಕ್ಷಾತ್ಕಾರದ ನಿಜವಾದ ಅರ್ಥ ಇದೆ. ನೀವು ಸಾಮಾನ್ಯ ದಿನನಿತ್ಯದ ಜನರ ನಡುವೆ ಸುಖವಾಗಿ ಬಾಳುತ್ತಿದ್ದು, ಅಪಾರ ಹಣವನ್ನು ಹೊಂದಿ, ಮತ್ತು ನಿಮ್ಮ ಹಾಸಿಗೆಯು ಕೂಡ ಹಣದಿಂದಲೇ ತುಂಬಿ ಮತ್ತು ನಿಮಗೆ ಯಾವುದೇ ತರಹದ ನೋವಿಲ್ಲದಿದ್ದಲ್ಲಿ, ನಿಮಗೆ ಅಮರನಾಗು ಎಂದು ಹೇಳಿದರೂ ಆ ಬಗ್ಗೆ ನಿಮಗೆ ಆಸಕ್ತಿ ಇರುವುದಿಲ್ಲ. ಒಬ್ಬ ಸಾಧಕನಾಗಿರುವುದರಿಂದ, ನಿಮ್ಮ ಜೀವನದ ಹಾದಿಯನ್ನು ಬದಲಾಯಿಸಬಹುದು. ಕೇವಲ ಅಭ್ಯಾಸದ ಸಾಧನೆಯಿಂದ ಮಾತ್ರ ನಿಮ್ಮ ಜೀವನದ ಹಾದಿಯನ್ನು ಬದಲಾಯಿಸಬಹುದು.

ಈ ಪೂರ್ವಜ್ಞಾನ ಮತ್ತು ಭವಿಷ್ಯವನ್ನು ತಿಳಿಯುವ ಅಸಾಮಾನ್ಯ ಶಕ್ತಿಯು ಹೇಗೆ ಕೆಲಸ ಮಾಡುತ್ತದೆಂದರೆ ಅದು ನಿಮ್ಮ ಹಣೆಯೊಳಗೆ ಒಂದು ಚಿಕ್ಕ ಟಿ.ವಿ ಪರದೆಯ ಹಾಗೆ. ಕೆಲವರಿಗೆ ಅದು ಹಣೆಯ ಮೇಲೆ ಇರುತ್ತದೆ; ಕೆಲವರಿಗೆ ಹಣೆಯ ಹತ್ತಿರದಲ್ಲಿರುತ್ತದೆ. ಕೆಲವರಿಗೆ ಅದು ಹಣೆಯ ಒಳಗೆ ಇರುತ್ತದೆ. ಕೆಲವರು ತಮ್ಮ ಕಣ್ಣುಗಳನ್ನು ಮುಚ್ಚಿಕೊಂಡೆ ವಸ್ತುಗಳನ್ನು ನೋಡುತ್ತಾರೆ. ಒಂದು ವೇಳೆ ನಿಮ್ಮ ಅರ್ಹತೆಯು ಹೆಚ್ಚಾಗಿದ್ದಲ್ಲಿ, ಒಬ್ಬರಿಗೆ ಕಣ್ಣು ತೆರೆದಿದ್ದರೂ ಕೂಡ ಕಾಣಿಸುತ್ತದೆ. ಕೆಲವರಿಗೆ, ಹೇಗಿದ್ದರೂ, ಅದು ಕಾಣುವುದಿಲ್ಲ, ಏಕೆಂದರೆ ಅದು ಅವರದೇ ಆಯಾಮದ ಮಿತಿಯಲ್ಲಿರುತ್ತದೆ. ಇನ್ನೊಂದು ವಾಕ್ಯದಲ್ಲಿ ಅಂದರೆ, ಈ ಒಂದು ಅಸಾಮಾನ್ಯವಾದ ಶಕ್ತಿಯ ಬೆಳವಣಿಗೆ ಆದ ನಂತರ, ಬೇರೆ ಆಯಾಮದ ದೃಶ್ಯಗಳನ್ನು ಪ್ರತಿಬಿಂಬಿಸಲು ಈ ರೀತಿಯಾದ ಒಂದು ವಾಹನವು ಇರಬೇಕು. ಪರಿಣಾಮವಾಗಿ, ಇದನ್ನು ದಿವ್ಯಚಕ್ಷುವಿನಿಂದ ನೋಡಬಹುದು. ಒಬ್ಬ ಮನುಷ್ಯನ ಪೂರ್ವ ಮತ್ತು

ಭವಿಷ್ಯವು ತುಂಬಾ ಸ್ಪಷ್ಟವಾಗಿ ಕಾಣಿಸುತ್ತದೆ. ಎಷ್ಟೇ ನಿಖರವಾಗಿ ಭವಿಷ್ಯವನ್ನು ಹೇಳಿದರೂ, ಅದು ಸಣ್ಣ ಘಟನೆಗಳ ಬಗ್ಗೆ ಮತ್ತು ಸೂಕ್ಷ್ಮ ವಿಷಯಗಳ ಬಗ್ಗೆ ಹೇಳಲು ಸಾಧ್ಯವಾಗುವುದಿಲ್ಲ. ಈ ವ್ಯಕ್ತಿಗೆ, ಹಾಗೆಯೂ, ಸ್ಪಷ್ಟವಾಗಿ ಕಾಣಿಸುತ್ತದೆ, ಮತ್ತು ನಿಖರವಾಗಿ ಕಾಲವನ್ನು ಹೇಳುತ್ತಾನೆ. ಒಬ್ಬನು ನೋಡಿದಾಗ ಬೇರೆ ಆಯಾಮದಲ್ಲಿರುವ ವಸ್ತುಗಳನ್ನು ಮತ್ತು ನಿಜವಾದ ಜನರ ಪ್ರತಿಬಿಂಬವು ಹಾಗೂ ಬದಲಾವಣೆಯ ಸೂಕ್ಷ್ಮತೆಗಳು ಕಾಣಿಸುತ್ತದೆ.

ಎಲ್ಲಿಯವರೆಗೆ ನೀವೆಲ್ಲರೂ ಫಾಲೂನ್ ದಾಫಾವನ್ನು ಅಭ್ಯಾಸ ಮಾಡುತ್ತೀರೋ, ಪ್ರತಿಯೊಬ್ಬರ ದಿವ್ಯಚಕ್ಷುವು ತೆರೆಯುತ್ತದೆ. ಆದರೆ ನಂತರ ನಾವು ಉದ್ದೇಶಿಸಿ ಹೇಳುವ ಅಸಾಮಾನ್ಯ ಶಕ್ತಿಗಳು ನಿಮಗೆ ನೀಡಲಾಗುವುದಿಲ್ಲ. ನಿಮ್ಮ ಮಟ್ಟವು ಸತತವಾಗಿ ಉನ್ನತಿಕರಣಗೊಂಡಂತೆ, ನಿಮ್ಮ ಪೂರ್ವಜ್ಞಾನ ಮತ್ತು ಭವಿಷ್ಯ ತಿಳಿಯುವ ಜ್ಞಾನವು ಸಹಜವಾಗಿ ಉದ್ಭವಿಸುತ್ತದೆ. ನಿಮ್ಮ ಭವಿಷ್ಯದ ಸಾಧನೆಯ ಅಭ್ಯಾಸದಲ್ಲಿ ಈ ಸನ್ನಿವೇಶ ಉದ್ಭವಿಸುತ್ತದೆ, ಮತ್ತು ಈ ಸಾಮರ್ಥ್ಯವು ಬೆಳವಣಿಗೆಯಾದಾಗ ಏನು ನಡೆಯುತ್ತಿದೆ ಎಂದು ನಿಮಗೆ ತಿಳಿಯುತ್ತದೆ. ಆದ್ದರಿಂದ, ನಿಮಗೆ ಈ ಫಾ ತತ್ವಗಳನ್ನು ಹೇಳಿಕೊಟ್ಟಿದ್ದೇವೆ.

## ಪಂಚಭೂತಗಳನ್ನು ಮತ್ತು ಮೂರು ಲೋಕವನ್ನು ಮೀರುವುದು

"ಪಂಚಭೂತಗಳನ್ನು ಮತ್ತು ಮೂರು ಲೋಕವನ್ನು ಮೀರುವುದು "ಎಂದರೇನು? ಇದು ಹೇಳಲು ಅತ್ಯಂತ ಸೂಕ್ಷ್ಮವಾದ ವಿಷಯ. ಹಿಂದೆ, ಹಲವಾರು ಜನ ಚೀಗಾಂಗ್ ಗುರುಗಳು ಈ ವಿಷಯವನ್ನು ಕುರಿತು ಹೇಳಿದ್ದಾರೆ, ಮತ್ತು ಚೀಗಾಂಗ್‌ನ್ನು ನಂಬದವರು ಎತ್ತುವ ಪ್ರಶ್ನೆಗಳಿಂದ ಉಸಿರುಗಟ್ಟಿ ಹೋಗಿದ್ದರು, "ಚೀಗಾಂಗ್ ಅಭ್ಯಾಸ ಮಾಡುವ ನಿಮ್ಮಲ್ಲಿ ಯಾರು ಐದು ಧಾತುಗಳನ್ನು ಮೀರಿದ್ದಾರೆ ಮತ್ತು ಮೂರು ಪ್ರಪಂಚದ ಒಳಗೆ ಇಲ್ಲ?" ಕೆಲವು ಜನರು ಚೀಗಾಂಗ್ ಗುರುಗಳಾಗಿರುವುದಿಲ್ಲ, ಮತ್ತು ಆದರೂ ತಮ್ಮನ್ನು ತಾವು ಚೀಗಾಂಗ್ ಗುರುಗಳೆಂದು ಹೇಳಿಕೊಳ್ಳುತ್ತಾರೆ. ಒಂದು ವೇಳೆ ಅವರಿಗೆ ಈ ಕುರಿತು ಸ್ಪಷ್ಟತೆ ಇಲ್ಲದಿದ್ದರೆ ಅವರು ಸುಮ್ಮನಿರಬೇಕು. ಆದರೂ, ಅವರು ಈ ಕುರಿತು ಮಾತನಾಡುವ ಧೈರ್ಯ ಮಾಡುತ್ತಾರೆ, ಮತ್ತು ಇತರ ಜನರು ಅವರನ್ನು ಪುನಃ ಮಾತನಾಡದಂತೆ ಮಾಡುತ್ತಾರೆ. ಇದು ಸಾಧಕರ ಸಮುದಾಯಕ್ಕೆ ತುಂಬಾ ಹಾನಿಯುಂಟುಮಾಡಿದೆ, ಅತೀವ ಗೊಂದಲ ಉಂಟುಮಾಡಿದೆ. ಈ ಅವಕಾಶವನ್ನು ಉಪಯೋಗಿಸಿ ಕೆಲವರು ಚೀಗಾಂಗ್ ಮೇಲೆ ದಾಳಿ ಮಾಡುತ್ತಾರೆ. ಸಾಧಕರ ಸಮುದಾಯದಲ್ಲಿ ಐದು ಧಾತುಗಳನ್ನು ಮತ್ತು ಮೂರು ಪ್ರಪಂಚವನ್ನು ಮೀರುವುದು ಎಂಬ ಹೇಳಿಕೆ ಇದೆ. ಇದು ಮೂಲತಃ ಧರ್ಮದಲ್ಲಿಯೇ ಇರುವುದು ಮತ್ತು ಧರ್ಮದಿಂದಲೇ ಬಂದಿರುವುದು. ಆದ್ದರಿಂದ, ಈ ವಿಷಯವಾಗಿ ಇದರ ಐತಿಹಾಸಿಕ ಹಿನ್ನೆಲೆ ಮತ್ತು ಆ ಸಮಯದ ಸನ್ನಿವೇಶಗಳನ್ನು ಅರಿಯದೆ ಮಾತನಾಡುವುದು ಸಾಧ್ಯವಿಲ್ಲ.

ಐದು ಧಾತುಗಳನ್ನು ಮೀರುವುದು ಎಂದರೇನು? ಪುರಾತನ ಚೀನೀ ಭೌತಶಾಸ್ತ್ರ ಮತ್ತು ಆಧುನಿಕ ಭೌತಶಾಸ್ತ್ರ ಎರಡೂ ಕೂಡ ಚೀನೀ ಐದು ಧಾತುಗಳ ಸಿದ್ಧಾಂತವನ್ನು ಸರಿಯೆಂದು ಒಪ್ಪುತ್ತವೆ. ಐದು ಧಾತುಗಳಾದ ಲೋಹ, ಮರ, ನೀರು, ಬೆಂಕಿ ಮತ್ತು ಭೂಮಿಗಳಿಂದ ಈ ಪ್ರಪಂಚವು ಕೂಡಿದೆ ಎಂಬುದು ದಿಟ. ಆದ್ದರಿಂದ ನಾವು ಐದು ಧಾತುಗಳ ಸಿದ್ಧಾಂತವನ್ನು ಕುರಿತು ಮಾತನಾಡುತ್ತೇವೆ. ಒಬ್ಬ ವ್ಯಕ್ತಿಯು ಐದು ಧಾತುಗಳನ್ನು ಮೀರಿರುವವನು ಎಂದರೆ, ಈ ಆಧುನಿಕ ಭಾಷೆಯ ಮೂಲಕ ಹೇಳುವುದಾದರೆ ಆತ ನಮ್ಮ ಈ ಭೌತಿಕ ಪ್ರಪಂಚವನ್ನು ಮೀರಿರುವವನು ಎಂದರ್ಥ. ಇದು ಕೇಳಲು ಅಸಾಧ್ಯವೆನಿಸಬಹುದು. ಈ ವಿಷಯದ ಕುರಿತು ಎಲ್ಲರೂ ಯೋಚಿಸಿ; ಚೀಗಾಂಗ್ ಗುರುಗಳಿಗೆ ಗಾಂಗ್ ಇರುತ್ತದೆ. ನಾನು ಒಂದು ಪ್ರಯೋಗದಲ್ಲಿ ಪಾಲ್ಗೊಂಡಿದ್ದೆ, ಇತರ ಹಲವಾರು ಚೀಗಾಂಗ್ ಗುರುಗಳು ಕೂಡ ತಮ್ಮ ಶಕ್ತಿಯನ್ನು ಅಳೆಯುವ ಪ್ರಯೋಗದಲ್ಲಿ ಪಾಲ್ಗೊಂಡಿದ್ದಾರೆ. ಗಾಂಗ್‌ನಲ್ಲಿರುವ ಅನೇಕ ಭೌತಿಕ ಧಾತುಗಳನ್ನು ಇಂದಿನ ಉಪಕರಣಗಳಿಂದ ಗುರುತಿಸಲು ಸಾಧ್ಯವಿದೆ. ಅಂದರೆ, ಎಲ್ಲಿಯವರೆಗೆ ಇಂತಹ ಉಪಕರಣವಿರುತ್ತದೆಯೋ, ಚೀಗಾಂಗ್ ಗುರುಗಳಿಂದ ಹೊರಡುವ ಧಾತುಗಳನ್ನು ಮತ್ತು ಅವರ ಗಾಂಗ್‌ನ ಅಸ್ತಿತ್ವವನ್ನು ಗುರುತಿಸಬಹುದು. ಆಧುನಿಕ ಉಪಕರಣಗಳು

ರಕ್ತಾತೀತ ಕಿರಣಗಳು, ಅತಿನೇರಳೆ ಕಿರಣಗಳು, ಶ್ರವಣಾತೀತ ಧ್ವನಿಗಳು, ಇನ್ಫ್ರಾಸೋನಿಕ್ ಅಲೆಗಳು, ವಿದ್ಯುತ್, ಕಾಂತೀಯ ಬಲ, ಗಾಮಾ ಕಿರಣಗಳು, ಪರಮಾಣುಗಳು ಮತ್ತು ನ್ಯೂಟ್ರಾನುಗಳನ್ನು ಗುರುತಿಸುತ್ತದೆ. ಒಬ್ಬ ಚೀಗಾಂಗ್ ಗುರುವು ಈ ಎಲ್ಲಾ ವಸ್ತುಗಳನ್ನು ಹೊಂದಿರುತ್ತಾನೆ, ಮತ್ತು ಚೀಗಾಂಗ್ ಗುರುವಿನಿಂದ ಹೊರಡುವ ಗುರುತಿಸಲು ಸಾಧ್ಯವಿಲ್ಲದ ಇನ್ನೂ ಇತರ ಹಲವಾರು ವಸ್ತುಗಳಿವೆ ಏಕೆಂದರೆ ಇದನ್ನು ಗುರುತಿಸುವ ಉಪಕರಣಗಳೇ ಅಸ್ತಿತ್ವದಲ್ಲಿಲ್ಲ. ಈ ತರಹದ ಉಪಕರಣಗಳಿರುವ ತನಕ ಎಲ್ಲವನ್ನೂ ಗುರುತಿಸಬಹುದು. ಚೀಗಾಂಗ್ ಗುರುಗಳಿಂದ ಹೊರಹೊಮ್ಮುವ ವಸ್ತುಗಳು ತುಂಬಾ ಹೇರಳವಾಗಿ ಕಂಡುಬರುತ್ತದೆ.

ಈ ಒಂದು ಕಾಂತಕ್ಷೇತ್ರದ ವಿಶೇಷ ಪರಿಣಾಮದಲ್ಲಿ,ಒಬ್ಬಚೀಗಾಂಗ್ ಗುರುವು ತುಂಬಾ ಶಕ್ತಿಯುತವಾದ ಮತ್ತು ಅತಿ ಸುಂದರವಾದ ದಿವ್ಯಪ್ರಭೆಯನ್ನು ಹೊರಹೊಮ್ಮಿಸಬಹುದು. ಒಬ್ಬರ ಗಾಂಗ್ ಸಾಮರ್ಥ್ಯ ಎಷ್ಟು ಅಧಿಕವಾಗಿ ರುತ್ತದೆಯೋ, ಉದ್ಭವಿಸಿದ ಶಕ್ತಿಯ ಕ್ಷೇತ್ರವು ಅಷ್ಟೇ ದೊಡ್ಡದಾಗಿರುತ್ತದೆ. ಒಬ್ಬ ಸಾಮಾನ್ಯ ಮಾನವನಿಗೂ ಕೂಡ ಆ ದಿವ್ಯಪ್ರಭೆ ಇರುತ್ತದೆ, ಆದರೆ ಇದು ಅತಿ ಸಣ್ಣ ಮತ್ತು ದುರ್ಬಲ. ಈ ಉನ್ನತ-ಶಕ್ತಿ ಭೌತಶಾಸ್ತ್ರದ ಸಂಶೋಧನೆಯಲ್ಲಿ, ಶಕ್ತಿಯು ನ್ಯೂಟ್ರಾನು ಮತ್ತು ಪರಮಾಣುಗಳಂತಹ ಕಣಗಳಿಂದ ಮಾಡಲ್ಪಟ್ಟಿದೆ ಎಂದು ಜನರು ನಂಬುತ್ತಾರೆ. ಚಿರಪರಿಚಿತರಾದವರನ್ನೂ ಒಳಗೊಂಡಂತೆ, ಬಹಳಷ್ಟು ಚೀಗಾಂಗ್ ಗುರುಗಳು ಈ ಪರೀಕ್ಷೆಗೊಳಪಟ್ಟಿದ್ದಾರೆ. ನಾನೂ ಕೂಡ ಪರೀಕ್ಷೆಗೊಳಪಟ್ಟಿರುವೆ, ಮತ್ತು ಉದ್ಭವಿಸಿದ ಗಾಮಾ ಕಿರಣಗಳು ಮತ್ತು ಶಾಖೋ ನ್ಯೂಟ್ರಾನುಗಳಿಂದ ಗುರುತಿಸಿದ ವಿಕಿರಣಗಳು ಸಾಮಾನ್ಯ ಕಣಗಳಿಗಿಂತ ಎಂಭತ್ತರಿಂದ ನೂರ ಎಪ್ಪತ್ತು ಪಟ್ಟು ಹೆಚ್ಚಾಗಿತ್ತು. ಈ ಒಂದು ಘಟ್ಟದಲ್ಲಿ, ಪರೀಕ್ಷಿಸುವ ಉಪಕರಣದ ಸೂಚಕವು ತನ್ನ ಮಿತಿಯನ್ನು ಮುಟ್ಟಿತು, ಅದರ ಸೂಜಿಯು ತನ್ನ ಗರಿಷ್ಟವಾದ ಬಿಂದುವನ್ನು ಮುಟ್ಟಿತು. ಕೊನೆಯಲ್ಲಿ, ಆ ಉಪಕರಣಕ್ಕೆ ನನ್ನಲ್ಲಿ ಎಷ್ಟು ಶಕ್ತಿ ಅಧಿಕವಾಗಿದೆಯೆಂದು ಗುರುತಿಸಲು ಸಾಧ್ಯವಾಗಲಿಲ್ಲ. ಒಬ್ಬ ವ್ಯಕ್ತಿಗೆ ಇಂತಹ ಶಕ್ತಿಶಾಲಿ ನ್ಯೂಟ್ರಾನ್‌ಗಳಿದೆ ಎಂದು ಊಹಿಸಲು ಅಸಾಧ್ಯ! ಒಬ್ಬರು ಹೇಗೆ ಇಂತಹ ಶಕ್ತಿಶಾಲಿ ನ್ಯೂಟ್ರಾನುಗಳನ್ನು ಉದ್ಭವಿಸಬಲ್ಲರು? ನಾವು ಚೀಗಾಂಗ್ ಗುರುಗಳು ಗಾಂಗ್ ಮತ್ತು ಶಕ್ತಿಯನ್ನು ಹೊಂದಿರುತ್ತೇವೆ ಎಂಬುದನ್ನು ಕೂಡ ಇದು ಸಾಬೀತುಪಡಿಸುತ್ತದೆ. ವೈಜ್ಞಾನಿಕ ಮತ್ತು ತಾಂತ್ರಿಕ ಸಮುದಾಯದಿಂದ ಕೂಡ ಇದು ಊರ್ಜಿತಗೊಳಿಸಲ್ಪಟ್ಟಿದೆ.

ಐದು ಧಾತುಗಳನ್ನು ಮೀರಲು, ಸಾಧನೆಯ ಅಭ್ಯಾಸವು ದೇಹ ಮತ್ತು ಮನಸ್ಸು ಎರಡನ್ನೂ ಒಳಗೊಂಡಿರಬೇಕು.

ಒಂದು ವೇಳೆ ಸಾಧನೆಯು ಒಬ್ಬರ ದೇಹ ಮತ್ತು ಮನಸ್ಸುಗಳನ್ನು ಒಳಗೊಂಡಿರದೆ ಮತ್ತು ಆತನ ಗಾಂಗ್ ಮಟ್ಟವನ್ನು ಮಾತ್ರ ಉತ್ತಮಗೊಳಿಸಿ ವ್ಯಕ್ತಿಯ ದೇಹವನ್ನು ಅಭಿವೃದ್ಧಿಗೊಳಿಸದಿದ್ದರೆ, ಅದು ಈ ವಿಷಯದ ಕುರಿತಾಗಿ ಸಂಬಂಧಿಸುವುದಿಲ್ಲ ಮತ್ತು ಐದು ಧಾತುಗಳನ್ನು ಮೀರುವ ಅವಶ್ಯಕತೆ ತಲೆದೋರುವುದಿಲ್ಲ. ದೇಹ ಮತ್ತು ಮನಸ್ಸಿನ ಅಭ್ಯಾಸದ ಸಾಧನೆಯು ದೇಹದ ಪ್ರತಿ ಜೀವಕೋಶದಲ್ಲಿ ಶಕ್ತಿಯನ್ನು ಶೇಖರಿಸುತ್ತದೆ. ಸಾಮಾನ್ಯ ಅಭ್ಯಾಸಿಗರು ಅಥವ ಗಾಂಗ್‌ನ ಅಭಿವೃದ್ಧಿಯನ್ನು ಹೊಸದಾಗಿ ಆರಂಭಿಸಿರುವವರು ಸಂಧಿಗಳಿಂದ ಕೂಡಿರುವ ಮತ್ತು ಕಡಿಮೆ ಸಾಂದ್ರತೆಯುಳ್ಳ ಬಹಳ ಒರಟಾದ ಹರಳುಗಳಿಂದ ಕೂಡಿರುವ ಶಕ್ತಿಯನ್ನು ಉದ್ಭವಿಸುತ್ತಾರೆ. ಆದ್ದರಿಂದ ಅದಕ್ಕೆ ಕಡಿಮೆ ಸಾಮರ್ಥ್ಯವಿರುತ್ತದೆ. ಒಬ್ಬರ ಮಟ್ಟವು ಉನ್ನತಗೊಂಡಾಗ, ಅವರ ಶಕ್ತಿಯ ಸಾಂದ್ರತೆಯು ಸಾಮಾನ್ಯ ನೀರಿನ ಅಣುಗಳಿಗಿಂತ ಒಂದು ನೂರು ಪಟ್ಟು, ಒಂದು ಸಾವಿರ ಪಟ್ಟು ಅಥವ ನೂರು ದಶಲಕ್ಷ ಪಟ್ಟು ಹೆಚ್ಚಾಗುವುದು ಸಂಪೂರ್ಣವಾಗಿ ಸಾಧ್ಯವಿದೆ. ಒಬ್ಬರ ಮಟ್ಟವು ಉನ್ನತವಿದ್ದಷ್ಟು, ಅವರ ಶಕ್ತಿಯು ಹೆಚ್ಚು ಸಾಂದ್ರ, ನಯವಾದ ಹರಳು ಮತ್ತು ಹೆಚ್ಚು ಶಕ್ತಿಶಾಲಿಯಾಗಿರುತ್ತದೆ. ಈ ಒಂದು ಸಂದರ್ಭದಲ್ಲಿ ದೇಹದ ಪ್ರತಿಯೊಂದು ಜೀವಕೋಶದಲ್ಲೂ ಶಕ್ತಿಯು ಶೇಖರಿಸಲ್ಪಡುವುದು. ಈ ರೀತಿಯ ಶಕ್ತಿಯು ಕೇವಲ ಈ ಭೌತಿಕ ಪರಿಮಾಣದ ದೇಹದ ಪ್ರತಿಯೊಂದು ಜೀವಕೋಶದಲ್ಲಷ್ಟೇ ಶೇಖರಗೊಳ್ಳುವುದಿಲ್ಲ, ಆದರೆ ಬೇರೆ ಪರಿಮಾಣದಲ್ಲಿರುವ ಎಲ್ಲಾ ದೇಹದ ಕಣ, ಅಣು, ಪ್ರೋಟಾನ್ ಮತ್ತು ಎಲೆಕ್ಟ್ರಾನ್‌ಗಳಲ್ಲೂ ತುಂಬುತ್ತದೆ, ಅತ್ಯಂತ ಸೂಕ್ಷ್ಮ ಜೀವಕಣವನ್ನು ಮುಟ್ಟುವ ತನಕವೂ ಇದು ಮುಂದುವರೆಯುತ್ತದೆ. ಸಮಯ ಕಳೆದಂತೆ, ಒಬ್ಬರ ದೇಹವು ಸಂಪೂರ್ಣವಾಗಿ ಈ ರೀತಿಯ ಉನ್ನತ ಶಕ್ತಿಯ ಕಣಗಳಿಂದ ತುಂಬುತ್ತದೆ.

ಈಉನ್ನತ–ಶಕ್ತಿ ಕಣಗಳಿಗೆ ಬುದ್ಧಿವಂತಿಕೆ ಇರುತ್ತದೆ, ಮತ್ತು ಇದು ಅತ್ಯಂತ ಸಾಮರ್ಥ್ಯಶಾಲಿ. ಒಮ್ಮೆಇದು ಹೆಚ್ಚಾದಂತೆ ಮತ್ತು ಸಾಂದ್ರವಾದಂತೆ,ಇದು ಮಾನವ ದೇಹ್ದ ಎಲ್ಲಾ ಜೀವಕೋಶಗಳನ್ನು ತುಂಬುತ್ತದೆ ಮತ್ತು ಮಾನವ ಭೌತಿಕ ಜೀವಕೋಶಗಳನ್ನು ಹತ್ತಿಕ್ಕುತ್ತದೆ–ಅತ್ಯಂತ ಅಸಮರ್ಥ ಜೀವಕೋಶಗಳು. ಒಮ್ಮೆ ಜೀವಕೊಶಗಳು ಹತ್ತಿಕೊಂಡಾಗ, ಅವು ಆಹಾರ ಪರಿವರ್ತನ ಕಾರ್ಯದಲ್ಲಿ ತೊಡಗುವುದಿಲ್ಲ. ಕೊನೆಯಲ್ಲಿ, ಮಾನವ ಭೌತಿಕ ಜೀವಕೋಶಗಳೆಲ್ಲವೂ ಬದಲಾಯಿಸಲ್ಪಡುತ್ತದೆ. ಹೌದು, ಇದು ನನಗೆ ಹೇಳಲು ಸುಲಭ. ಸಾಧನೆಯ ಈ ಹಂತಕ್ಕೆ ಬರುವುದು ನಿಧಾನವಾದ ಮತ್ತು ನಿರಂತರವಾದ ಪ್ರಕ್ರಿಯೆ. ನಿಮ್ಮ ಸಾಧನೆಯು ಈ ಮಟ್ಟವನ್ನು ತಲುಪಿದಾಗ, ಉನ್ನತ–ಶಕ್ತಿಯ ಕಣಗಳು ನಿಮ್ಮ ದೇಹದ ಜೀವಕೋಶಗಳನ್ನೆಲ್ಲಾ ಬದಲಾಯಿಸುತ್ತದೆ. ಇದರ ಕರಿತು ಯೋಚಿಸಿ: ನಿಮ್ಮ ದೇಹವು ಇನ್ನೂ ಕೂಡ ಐದು ಧಾತುಗಳಿಂದ ಮಾಡಲ್ಪಟ್ಟಿದೆಯೇ? ಇದು ಈಗಲೂ ಸಹ್ ನಮ್ಮ ಪರಿಮಾಣದ ಕಣವೇ? ಇದು ಈಗಾಗಲೇ ಇತರ ಪರಿಮಾಣಗಳಿಂದ ಸಂಗ್ರಹಿಸಿದಂತಹ ಉನ್ನತ–ಶಕ್ತಿ ಕಣಗಳಿಂದ ಮಾಡಲ್ಪಟ್ಟಿರುತ್ತದೆ. ಡ್ಥದ ಧಾತು ಕೂಡ ಇತರ ಪರಿಮಾಣದಲ್ಲಿ ಅಸ್ತಿತ್ವದಲ್ಲಿರುವ ಕಣವೇ ಆಗಿದೆ. ಇದು ನಮ್ಮ ಪರಿಮಾಣದ ಈ ಸಮಯ ಕ್ಷೇತ್ರದಿಂದ ನಿರ್ಬಂಧಿಸಲ್ಪಡುವುದಿಲ್ಲ.

ಕಾಲಕ್ಕೆ ಕ್ಷೇತ್ರವಿದೆ ಎಂದು ಆಧುನಿಕ ವಿಜ್ಞಾನವು ಹೇಳುತ್ತದೆ. ಒಂದು ವೇಳೆ ಏನಾದರೊಂದು, ಈ ಕಾಲಕ್ಷೇತ್ರದ ಮಿತಿಯೊಳಗೆ ಬರದಿದ್ದರೆ, ಇದು ಆ ಸಮಯದಿಂದ ತಡೆಯಲ್ಪಡುವುದಿಲ್ಲ. ಬೇರೆ ಆಯಾಮಗಳಲ್ಲಿ, ಕಾಲ–ಅವಕಾಶದ ಪರಿಕಲ್ಪನೆಯು ನಮ್ಮದಕ್ಕಿಂತ ಭಿನ್ನವಾಗಿರರುವುದು. ಹೇಗೆ ತಾನೆ ಇಲ್ಲಿನ ಸಮಯವು ಬೇರೆ ಆಯಾಮಗಳಲ್ಲಿರುವ ವಸ್ತುವನ್ನು ನಿಯಂತ್ರಿಸುವುದಕ್ಕೆ ಸಾಧ್ಯ? ಇದು ಹೇಗಿದ್ದರೂ ಸಾಧ್ಯವಿಲ್ಲ. ಎಲ್ಲರೂ, ಇದರ ಕುರಿತು ಯೋಚಿಸಿ: ಅಲ್ಲಿಯವರೆಗೆ ನೀವು ಐದು ಧಾತುಗಳನ್ನು ಮೀರಿರುವುದಿಲ್ಲವೇ? ನಿಮ್ಮ ದೇಹವು ಇನ್ನೂ ಸಾಮಾನ್ಯ ಮಾನವನದೇ ಆಗಿರುತ್ತದೆಯೇ? ಈ ರೀತಿ ಆಗುವುದಕ್ಕೆ ಸಾಧ್ಯವೇ ಇಲ್ಲ, ಆದರೆ ಸಾಮಾನ್ಯ ಜನರಿಗೆ ವ್ಯತ್ಯಾಸವನ್ನು ಹೇಳಲು ಸಾಧ್ಯವಿಲ್ಲ. ಒಬ್ಬರ ದೇಹವು ಈ ಮಟ್ಟಕ್ಕೆ ಪರಿವರ್ತನೆಯಾದರೂ ಕೂಡ, ಇದು ಸಾಧನಾಭ್ಯಾಸದ ಅಂತ್ಯವಲ್ಲ. ಉನ್ನತ ಮಟ್ಟದ ಸಾಧನೆಯೆಡೆಗೆ ಒಬ್ಬರು ಮುನ್ನಡೆಯುವುದನ್ನು ಮುಂದುವರೆಸುವುದು ಅಗತ್ಯವಿದೆ. ಹಾಗಾಗಿ, ಒಬ್ಬರು ಸಾಧನಾಭ್ಯಾಸವನ್ನು ಈ ಸಾಮಾನ್ಯ ಜನರಲ್ಲಿಯೇ ಮಾಡಬೇಕು; ಒಂದು ವೇಳೆ ಜನರಿಗೆ ಈ ವ್ಯಕ್ತಿಯು ಕಾಣದಿದ್ದಾಗ ಇದು ಕೆಲಸ ಮಡುವುದಿಲ್ಲ.

ಹಾಗಾದರೆ ಮುಂದೇನಾಗುವುದು? ಆದಾಗ್ಯೂ ಸಾಧನೆ ಮಾಡುವ ಹಾದಿಯಲ್ಲಿ ಈ ವ್ಯಕ್ತಿಯ ಎಲ್ಲಾ ಜೀವಕೋಶಗಳು ಅಣು ಮಟ್ಟದಲ್ಲಿ ಉನ್ನತ–ಶಕ್ತಿ ಕಣಗಳಿಂದ ಬದಲಾಯಿಸಲ್ಪಡುತ್ತದೆ, ಪರಮಾಣುಗಳಿಗೆ ಅದರದೇ ಆದ ಕ್ರಮಕೂಡಿಕೆ ಇರುತ್ತದೆ, ಮತ್ತು ಅಣುಕೂಡಿಕೆ ಹಾಗೂ ಪರಮಾಣು ವಿನ್ಯಾಸಗಳು ಬದಲಾಗುವುದಿಲ್ಲ. ಜೀವಕೋಶಗಳಿಗೆ ಅಣುಕೂಡಿಕೆಯು ಎಂತಹ ಸ್ಥಿಯಲ್ಲಿರುತ್ತದೆಂದರೆ ನೀವು ಅವನ್ನು ಮುಟ್ಟಿದಾಗ ಅದು ತುಂಬಾ ಮೃದುವಾಗಿರುತ್ತದೆ. ಮೂಳೆಗಳಿಗೆ ಅಣುಕೂಡಿಕೆಯು ಉನ್ನತ ಸಾಂದ್ರತೆಯನ್ನು ಹೊಂದಿರುವುದು ಮತ್ತು ಮೂಳೆಗಳು ಗಟ್ಟಿಯಾಗಿರುವುದನ್ನು ಅನುಭವಿಸಬಹುದು. ರಕ್ತದ ಅಣುಗಳ ಸಾಂದ್ರತೆಯು ಅತಿ ಕಡಿಮೆ, ಹೀಗಾಗಿ ಇದು ರಸದ್ರವ. ಒಬ್ಬ ಸಾಮಾನ್ಯ ಮನುಷ್ಯನು ನಿಮ್ಮಲ್ಲಾಗಿರುವ ಬದಲಾವಣೆಗಳನ್ನು ಮೇಲ್ನೋಟದಿಂದ ಗ್ರಹಿಸಲಾರನು, ಕಾರಣವೇನೆಂದರೆ ನಿಮ್ಮ ಜೀವಕೊಶಗಳ ಅಣುಗಳು ತಮ್ಮ ಮೂಲತಃ ರಚನೆ ಮತ್ತು ಕೂಡಿಕೆಗಳನ್ನು ಹಾಗೆಯೇ ಉಳಿಸಿಕೊಂಡಿರುತ್ತದೆ; ಅವುಗಳ ರಚನೆ ಬದಲಾಗುವುದಿಲ್ಲ. ಆದಾಗ್ಯೂ ಒಳಗಿನ ಶಕ್ತಿಯು ಬದಲಾಗಿರುವುದು. ಹೀಗೆ, ಈ ಸಮಯದಿಂದ ಈ ವ್ಯಕ್ತಿಗೆ ಸ್ವಾಭಾವಿಕವಾಗಿ ವಯಸ್ಸಾಗುವುದಿಲ್ಲ, ಮತ್ತು ಅವನ ಜೀವಕೋಶಗಳು ಸಾಯುವುದಿಲ್ಲ. ಹಾಗೆಯೇ, ಅವನು ನಿರಂತರವಾಗಿ ಯೌವ್ವನದಲ್ಲಿರುತ್ತಾನೆ. ಸಾಧನಾಭ್ಯಾಸ ಮಾಡುವ ಸಮಯದಲ್ಲಿ, ಒಬ್ಬರು ಯೌವ್ವನಸ್ಥರಾಗಿ ಕಾಣಿಸುವರು ಮತ್ತು, ಕೊನೆಯಲ್ಲಿ ಹಾಗೆಯೇ ಇರುವರು.

ನಿಜ, ಒಬ್ಬನ ದೇಹಕ್ಕೆ ಒಂದು ವಾಹನವು ಬಡಿದಾಗ ಅವನ ಮೂಳೆಗಳು ಮುರಿಯುವುದೂ ಸಹಜ. ಚಾಕುವಿನಿಂದ ಕೊಯ್ದಾಗ ಒಬ್ಬನಿಗೆ ರಕ್ತಸ್ರಾವವೂ ಆಗುತ್ತದೆ, ಒಬ್ಬರ ಅಣುಗಳ ಹೊಂದಾಣಿಕೆಯು ಬದಲಾಗಿರುವುದಿಲ್ಲ. ಇಲ್ಲಿ ಕೇವಲ ಜೀವಕೋಶಗಳು ಸ್ವಾಭಾವಿಕವಾಗಿ ಸಾಯುವುದಿಲ್ಲ ಅಥವ ಅವುಗಳಿಗೆ ಸಹಜವಾಗಿ ವಯಸ್ಸಾಗುವುದಿಲ್ಲ. ಆಹಾರ ಪರಿವರ್ತನೆಯ ಕ್ರಿಯೆ

ಇರುವುದಿಲ್ಲ. ಇದನ್ನೇ ನಾವು " ಐದು ಧಾತುಗಳನ್ನು ಮಿರುವುದು" ಎಂದು ಕರೆಯುತ್ತೇವೆ. ಇದು ಯಾವ ಮೂಢನಂಬಿಕೆ? ವೈಜ್ಞಾನಿಕ ತತ್ವದ ಮೂಲಕವೂ ಇದನ್ನು ವಿವರಿಸಬಹುದು. ಕೆಲವರಿಗೆ ಇದನ್ನು ವಿವರಿಸಲು ಆಗುವುದಿಲ್ಲ, ಆದ್ದರಿಂದ ಅವರು ಕಾಳಜಿರಹಿತ ಹೇಳಿಕೆಗಳನ್ನು ನೀಡುತ್ತಾರೆ. ಹೀಗಾಗಿ ಅವರು ಮೂಢನಂಬಿಕೆಗಳನ್ನು ಬೆಳೆಸುತ್ತಿದ್ದಾರೆಂದು ಬೇರೆಯವರು ಹೇಳುತ್ತಾರೆ. ಈ ಹೇಳಿಕೆಯು ಧರ್ಮದಿಂದ ಬಂದಿದ್ದರಿಂದ, ಇದು ನಮ್ಮ ಆಧುನಿಕ ಚೀಗಾಂಗ್‌ನಿಂದ ರಚಿಸಿದ ಪದವಲ್ಲ.

"ಮೂರು ಪ್ರಪಂಚವನ್ನು ಮೀರುವುದು" ಎಂದರೇನು? ನಾನು ಹಿಂದೆ ಹೇಳಿರುವ ಹಾಗೆ ನೀವು ಗಾಂಗ್‌ನ್ನು ಹೆಚ್ಚಿಸಬೇಕೆಂದರೆ ನಿಮ್ಮ ಷಿನ್‌ಷಿಂಗ್‌ನ್ನು ಸಾಧಿಸಬೇಕು ಮತ್ತು ಈ ಪ್ರಪಂಚದ ವೈಶಿಷ್ಟ್ಯ ಗುಣಗಳನ್ನು ಅಳವಡಿಸಿಕೊಳ್ಳಬೇಕು. ಆಗ ವಿಶ್ವದ ವೈಶಿಷ್ಟ್ಯವು ನಿಮ್ಮನ್ನು ತಡೆಹಿಡಿಯುವುದಿಲ್ಲ. ಒಂದು ಸಲ ನೀವು ನಿಮ್ಮ ಷಿನ್‌ಷಿಂಗ್‌ನ್ನು ಉನ್ನತೀಕರಿಸಿದಾಗ, ಈ ಧಾತು ಡ್ಹವು ಗಾಂಗ್‌ನಲ್ಲಿ ಪರಿವರ್ತನೆಗೊಳ್ಳುತ್ತದೆ ಮತ್ತು ಸತತವಾಗಿ ಉನ್ನತ ಮಟ್ಟಕ್ಕೆ ಏರುತ್ತದೆ, ಹೀಗೆ ಗಾಂಗ್ ಕಂಬವು ಮೂಡುತ್ತದೆ. ಈ ಗಾಂಗ್ ಕಂಬದ ಎತ್ತರವು ಎಷ್ಟು ಇರುತ್ತದೆಯೋ ಅಷ್ಟೇ ನಿಮ್ಮ ಶಕ್ತಿಯ ಮಟ್ಟವು ಕೂಡ ಇರುತ್ತದೆ. ಈ ಒಂದು ಹೇಳಿಕೆಯಿದೆ: "ಉತ್ತಮವಾದ ಫ್ಹಾಗೆ ಮಿತಿಯಿಲ್ಲ." ಇದನ್ನು ಸಾಧನೆ ಮಾಡುವುದು ಸಂಪೂರ್ಣವಾಗಿ ನಿಮ್ಮ ಹೃದಯವನ್ನು ಅವಲಂಭಿಸಿರುತ್ತದೆ. ನಿಮ್ಮ ಸಾಧನೆಯ ಮಟ್ಟವು ಎಷ್ಟು ಮೇಲಕ್ಕೆ ಏರಬಹುದು, ಇವೆಲ್ಲವೂ ಕೂಡ ನೀವು ಹೇಗೆ ಕಷ್ಟಗಳನ್ನು ಎದುರಿಸುವಿರೋ ಮತ್ತು ಎಷ್ಟು ಸಹನೆಯಿಂದ ಇರುತ್ತೀರೋ ಎಂಬುವುದರ ಮೇಲೆ ನಿರ್ಧಾರವಾಗುತ್ತದೆ. ಒಂದು ವೇಳೆ ನೀವು ನಿಮ್ಮದೇ ಆದ ಬಿಳಿ ವಸ್ತುವನ್ನು ಉಪಯೋಗಿಸಿಕೊಂಡಿದ್ದರೆ, ಕಷ್ಟಗಳನ್ನು ಎದುರಿಸುತ್ತ ನೀವು ನಿಮ್ಮ ಕಪ್ಪು ವಸ್ತುವನ್ನು ಬಿಳಿ ವಸ್ತುವನ್ನಾಗಿ ಬದಲಾಯಿಸಿಕೊಳ್ಳಬಹುದು. ಒಂದು ವೇಳೆ ಇದು ಕೂಡ ಸಾಲದಿದ್ದರೆ, ಸಾಧನೆಯ ಅಭ್ಯಾಸವನ್ನು ಮಾಡದಿರುವ ನಿಮ್ಮ ಸ್ನೇಹಿತರ ಅಥವ ಸಂಬಂಧಿಕರ ಪಾಪಗಳನ್ನು ನೀವು ಹೊತ್ತುಕೊಂಡು, ನಿಮ್ಮ ಗಾಂಗ್‌ನ್ನು ಇನ್ನೂ ಹೆಚ್ಚಿಸಬಹುದು. ಇದು ಸಾಧನಾಭ್ಯಾಸದಲ್ಲಿ ಅತ್ಯಂತ ಉನ್ನತ ಮಟ್ಟವನ್ನು ಒಬ್ಬರು ತಲುಪಿರುವುದನ್ನು ಬಯಸುತ್ತದೆ. ಒಬ್ಬ ಸಾಮಾನ್ಯ ಅಭ್ಯಾಸಿಗನು ಸಂಬಂಧಿಕರಿಗಾಗಿ ಪಾಪವನ್ನು ಹೊರುವ ಆಲೋಚನೆಯನ್ನು ಮಾಡಬಾರದು. ಆ ದೊಡ್ಡ ಪ್ರಮಾಣದ ಕರ್ಮದೊಂದಿಗೆ, ಒಬ್ಬ ಸಾಮಾನ್ಯ ವ್ಯಕ್ತಿಯು ಸಾಧನೆಯ ಹಾದಿಯಲ್ಲಿ ಉತ್ತೀರ್ಣಗೊಳ್ಳಲು ಸಾಧ್ಯವಾಗುವುದಿಲ್ಲ. ವಿಭಿನ್ನ ಮಟ್ಟದಲ್ಲಿ ತತ್ವಗಳನ್ನು ನಾನು ಇಲ್ಲಿ ವಿವರಿಸುತ್ತಿದ್ದೇನೆ.

ಧರ್ಮಗಳಲ್ಲಿ ಹೇಳಿರುವ ಮೂರು ಪ್ರಪಂಚವು ಒಂಭತ್ತು ಮಟ್ಟಗಳ ಸ್ವರ್ಗ ಅಥವ ಮೂವತ್ತ ಮೂರು ಮಟ್ಟಗಳ ಸ್ವರ್ಗವನ್ನು ಉಲ್ಲೇಖಿಸುತ್ತದೆ – ಅರ್ಥಾತ್ ಮೂರು ಪ್ರಪಂಚದಲ್ಲಿರುವ ಎಲ್ಲಾ ಜೀವಿಗಳನ್ನು ಒಳಗೊಂಡಂತೆ ಸ್ವರ್ಗ, ಭೂಮಿ ಮತ್ತು ಪಾತಾಳ ಲೋಕ. ಅವರ ಅಭಿಪ್ರಾಯದಲ್ಲಿ ಮೂವತ್ತಮೂರು ಮಟ್ಟಗಳ ಸ್ವರ್ಗದಲ್ಲಿರುವ ಎಲ್ಲಾ ಜೀವಿಗಳು ಸಂಸಾರದ ದೇಹಾಂತರ ಚಕ್ರದ ಮೂಲಕ ಸಾಗುತ್ತಾರೆ. "ಸಂಸಾರ" ವೆಂದರೆ ಈ ಜೀವನದಲ್ಲಿ ಒಬ್ಬನು ಮನುಷ್ಯನಾಗಿರುತ್ತಾನೆ, ಮತ್ತು ಮುಂದಿನ ಜೀವನದಲ್ಲಿ ಒಂದು ಪ್ರಾಣಿ ಆಗಬಹುದು. ಬೌದ್ಧತ್ವದಲ್ಲಿ ಹೇಳಲಾಗುತ್ತದೆ: "ಒಬ್ಬರು ಈ ಜೀವನದಲ್ಲಿ ಕೊಟ್ಟಿರುವ ಅಲ್ಪ ಸಮಯವನ್ನು ಚೆನ್ನಾಗಿ ಉಪಯೋಗಿಸಿಕೊಳ್ಳಬೇಕು. ನೀವು ಈಗ ಸಾಧನೆಯ ಅಭ್ಯಾಸವನ್ನು ಮಾಡದಿದ್ದರೆ, ಇನ್ನ್ಯಾವಾಗ ಮಾಡುವಿರಿ?" ಇದು ಏಕೆಂದರೆ ಪ್ರಾಣಿಗಳು ಸಾಧನೆಯ ಅಭ್ಯಾಸವನ್ನು ಮಾಡಲು ನಿಷೇಧಿಸಲಾಗಿದೆ, ಮತ್ತು ಅವು ಫಾವನ್ನೂ ಕೇಳುವ ಹಾಗಿಲ್ಲ. ಸಾಧನೆಯ ಅಭ್ಯಾಸವನ್ನು ಮಾಡಿದರೂ ಕೂಡ, ಅವು ಸಾಧನೆಯಲ್ಲಿ ಯೋಗ್ಯ ಫಲವನ್ನು[3] ಹೊಂದಲಾರವು. ಅವರ ಗಾಂಗ್ ಮಟ್ಟವು ಉನ್ನತಗೊಂಡರೆ, ಸ್ವರ್ಗವು ಅವನ್ನು ಕೊಲ್ಲುತ್ತದೆ. ನಿಮಗೆ ಒಂದು ಮಾನವ ದೇಹವು ಹಲವಾರು ನೂರು ವರ್ಷಗಳ ಕಾಲ ದೊರಕದೆ ಇರಬಹುದು; ಒಂದು ಸಾವಿರ ವರ್ಷಗಳಲ್ಲಿ ಒಮ್ಮೆ ನೀವು ಇದನ್ನು ಪಡೆಯಬಹುದು. ಒಮ್ಮೆ ನಿಮಗೆ ಮಾನವ ದೇಹವು ಲಭಿಸಿದಾಗ ಇದನ್ನು ಹೇಗೆ ಕಾಪಾಡಿಕೊಳ್ಳಬೇಕೆಂದು ಕೂಡ ನಿಮಗೆ ತಿಳಿಯುವುದಿಲ್ಲ. ಒಂದು ಕಲ್ಲಿನ ತುಂಡಾಗಿ ನೀವು ದೇಹಾಂತರ ಹೊಂದಿದರೆ, ಹತ್ತು ಸಾವಿರ ವರ್ಷಗಳಾದರೂ ಅದರಿಂದ ಹೊರಬರುವುದಕ್ಕೆ ನಿಮಗೆ ಆಗುವುದಿಲ್ಲ. ಒಂದು ವೇಳೆ ಆ ಕಲ್ಲಿನ ತುಂಡು ಚೂರು ಚೂರಾಗದಿದ್ದರೆ ಅಥವ ಹವಾಗುಣದಿಂದ ಕರಗದಿದ್ದರೆ, ನೀವು ಅದರಿಂದ ಎಂದಿಗೂ ಹೊರಬರಲಾರಿರಿ. ಒಂದು ಮಾನವ

ದೇಹವನ್ನು ಪಡೆಯುವುದು ತುಂಬಾ ಕಷ್ಟಕರ! ಒಬ್ಬ ವ್ಯಕ್ತಿಯು ನಿಜವಾಗಿಯೂ ದಾಫಾವನ್ನು ಹೊಂದಿದರೆ, ಸರಳವಾಗಿ ಈ ವ್ಯಕ್ತಿಯು ತುಂಬಾ ಪುಣ್ಯವಂತನು. ಒಂದು ಮಾನವ ದೇಹವನ್ನು ಸಂಪಾದಿಸಿಕೊಳ್ಳುವುದು ಕಠಿಣ – ಇದೇ ಅದರ ಅರ್ಥ.

ಸಾಧನೆಯ ಅಭ್ಯಾಸದಲ್ಲಿ ನಮಗೆ ಮಟ್ಟಗಳ ವಿಷಯದ ಕುರಿತು ಕಾಳಜಿ ಇದೆ, ಮತ್ತು ಇದು ಒಬ್ಬರ ಸ್ವಯಂ ಸಾಧನೆಯ ಅಭ್ಯಾಸವನ್ನು ಸಂಪೂರ್ಣವಾಗಿ ಅವಲಂಬಿಸಿದೆ. ನೀವು ಮೂರು ಪ್ರಪಂಚವನ್ನು ದಾಟಿಹೋಗಬೇಕೆಂದರೆ ಮತ್ತು ನಿಮ್ಮ ಗಾಂಗ್ ಕಂಬವು ಅತ್ಯಂತ ಉನ್ನತ ಮಟ್ಟವನ್ನು ಸಾಧಿಸಿದ್ದರೆ, ನೀವು ಮೂರು ಪ್ರಪಂಚದ ಆಚೆಯಾದಂತಲ್ಲವೇ? ಕುಳಿತು ಧ್ಯಾನ ಮಾಡುವಾಗ ಯಾವಾಗ ಒಬ್ಬರ ಮೂಲ ಜೀವಾತ್ಮವು ದೇಹವನ್ನು ಬಿಟ್ಟು ಹೋಗುವುದೋ, ಅದು ಆ ಕೂಡಲೇ ಅತ್ಯಂತ ಉನ್ನತ ಮಟ್ಟವನ್ನು ತಲುಪಬಹುದು. ಒಬ್ಬ ಅಭ್ಯಾಸಿಗನು ತನ್ನ ಅನುಭವದ ವರದಿಯಲ್ಲಿ ಹೀಗೆ ಬರೆದನು, "ಉಪಾಧ್ಯಾಯರೇ[4] ನಾನು ಸ್ವರ್ಗದ ಅನೇಕ ಮಟ್ಟಗಳನ್ನು ತಲುಪಿದ್ದೇನೆ ಮತ್ತು ಕೆಲವು ದೃಶ್ಯಗಳನ್ನು ನೋಡಿದ್ದೇನೆ" ನಾನು ಆತನಿಗೆ ಇನ್ನೂ ಮೇಲೇರಲು ಹೇಳಿದೆನು, "ನನಗೆ ಅದು ಸಾಧ್ಯವಿಲ್ಲ. ನಾನು ಇನ್ನೂ ಮೇಲೇರಲು ಸಾಹಸ ಮಾಡುವುದಿಲ್ಲ, ಮತ್ತು ಇನ್ನೂ ಮೇಲೇರಲು ನಾನು ಅಸಮರ್ಥನಾಗಿರುವೆ." ಎಂದು ಆತ ಹೇಳಿದನು ಏಕೆ? ಇದೇಕೆಂದರೆ ಅವನ ಗಾಂಗ್ ಕಂಬವು ಕೇವಲ ಆ ಮಟ್ಟಕ್ಕಷ್ಟೇ ಇತ್ತು, ಮತ್ತು ಅವನು ತನ್ನ ಗಾಂಗ್

ಕಂಬದ ತುದಿಯಲ್ಲಿ ಕುಳಿತುಕೊಳ್ಳುವುದರ ಮೂಲಕ ಅಲ್ಲಿಗೆ ತಲುಪಿರುವನು. ಇದು ಬೌದ್ಧತ್ವವು ಹೇಳಿರುವ ಸಾಧನೆಯ ಫಲದ ಸ್ಥಿತಿ, ಮತ್ತು ಆತನ ಸಾಧನೆಯು ಆ ಸ್ಥಿತಿಯನ್ನು ತಲುಪಿತ್ತು. ಹೇಗಾದರೂ, ಇದು ಒಬ್ಬ ಸಾಧಕನಿಗೆ, ಸಾಧನೆಯ ಫಲದ ಸ್ಥಿತಿಯ ತುತ್ತತುದಿಯಲ್ಲ. ಒಬ್ಬರು ಸ್ಥಿರವಾಗಿ ಮೇಲೇರುತ್ತಲೇ ಇರುತ್ತಾರೆ ಮತ್ತು ಸ್ಥಿರವಾಗಿ ತಮ್ಮನ್ನು ತಾವೇ ಉನ್ನತೀಕರಿಸಿಕೊಳ್ಳುತ್ತಿರುತ್ತಾರೆ. ನಿಮ್ಮ ಗಾಂಗ್ ಕಂಬವು ಮೂರು ಪ್ರಪಂಚದ ಸರಹದ್ದಿನ ಆಚೆ ತಲುಪಿದರೆ, ನೀವು ಮೂರು ಪ್ರಪಂಚದಿಂದ ಆಚೆಯಾದಂತಲ್ಲವೇ? ಧರ್ಮಗಳಲ್ಲಿ ಹೇಳಿರುವ ಮೂರು ಪ್ರಪಂಚವು ಕೇವಲ ನಮ್ಮ ಒಂಭತ್ತು ಮುಖ್ಯ ಗ್ರಹಗಳ ಕ್ಷೇತ್ರಕ್ಕೆ ಸೀಮಿತವಾಗಿರುವುದನ್ನು ನಾವು ಕಂಡುಹಿಡಿದಿದ್ದೇವೆ ಮತ್ತು ನೋಡಿದ್ದೇವೆ. ಕೆಲವು ಜನರು ಹತ್ತು ಮುಖ್ಯ ಗ್ರಹಗಳ ಕುರಿತು ಮಾತನಾಡುವರು ಹೇಳುತ್ತಾರೆ. ಅವೆಲ್ಲವೂ ಸತ್ಯವಲ್ಲವೇ ಅಲ್ಲ ಎಂದು ನಾನು ಹೇಳುತ್ತೇನೆ. ಹಿಂದೆ ಕೆಲವು ಚೀಗಾಂಗ್ ಗುರುಗಳ ಗಾಂಗ್ ಕಂಬವು ಅತಿ ಎತ್ತರವಿರುವುದನ್ನು ಅದು ಹಾಲು ಹಾದಿಯಾಚೆಗೆ ತಲುಪಿರುವುದನ್ನು ನಾನು ನೋಡಿದ್ದೇನೆ; ಅವರು ಮೂರು ಪ್ರಪಂಚದ ಇನ್ನೂ ಬಹಳ ಆಚೆ ಸಾಗಿದ್ದರು. ಈಗ ತಾನೇ ನಾನು ಮೂರು ಪ್ರಪಂಚವನ್ನು ದಾಟಿ ಹೋಗುವುದನ್ನು ಮಾತನಾಡಿದ್ದೇನೆ. ಇದು ನಿಜವಾಗಿಯೂ ವಿವಿಧ ಮಟ್ಟಗಳ ವಿಷಯವಾಗಿದೆ.

### ಒಂದು ವಿಷಯವನ್ನು ಬೆನ್ನು ಹತ್ತುವ ಕುರಿತು

ಅನೇಕ ಜನರು ನಮ್ಮ ಸಾಧನೆಯ ಸ್ಥಳಕ್ಕೆ ಯಾವುದೋ ಒಂದು ಉದ್ದೇಶದ ಮೋಹದೊಂದಿಗೆ ಬರುತ್ತಾರೆ. ಕೆಲವು ಜನರು ಅಸಾಮಾನ್ಯ ಶಕ್ತಿಗಳನ್ನು ಪಡೆಯಲು ಬಯಸುತ್ತಾರೆ; ಕೆಲವರು ಯಾವುದೋ ತತ್ವವನ್ನು ಕೇಳಲು ಬಯಸುತ್ತಾರೆ; ಕೆಲವರು ಕೆಲವು ತತ್ವಗಳನ್ನು ಕೇಳಲು ಬಯಸುತ್ತಾರೆ; ಕೆಲವರು ತಮ್ಮ ರೋಗವನ್ನು ನಿವಾರಿಸಿಕೊಳ್ಳಲು ಬಯಸುತ್ತಾರೆ; ಇನ್ನೂ ಕೆಲವರು ಫಾಲೂನ್‌ನ್ನು ಪಡೆಯಲು ಬಯಸುತ್ತಾರೆ. ಎಲ್ಲಾ ಬಗೆಯ ಮಾನಸಿಕ ಆಲೋಚನೆಗಳಿರುತ್ತವೆ. ಇನ್ನೂ ಕೆಲವರು ಹೇಳುತ್ತಾರೆ: "ನನ್ನ ಕುಟುಂಬದವರಲ್ಲಿ ಒಬ್ಬರಿಗೆ ಈ ಉಪನ್ಯಾಸವನ್ನು ಕೇಳಲು ಇಲ್ಲಿಗೆ ಬರುವುದಕ್ಕೆ ಸಾಧ್ಯವಾಗಲಿಲ್ಲ. ನಾನು ನಿಮಗೆ ಕಲಿಸುವ ಬೆಲೆಯನ್ನು ಕೊಡುತ್ತೇನೆ, ಅವರಿಗೆ ದಯಮಾಡಿ ಫಾಲೂನ್‌ನ್ನು ಕೊಡಿ" ಈ ಫಾಲೂನ್‌ನ್ನು ತಯಾರಿಸಲು ತುಂಬಾ ಕಾಲವೇ ಹಿಡಿದಿದೆ ಅನೇಕ ತಲೆಮಾರುಗಳೇ ಕಳೆದಿವೆ, ಮತ್ತು ಬೆಚ್ಚಿಹೋಗುವಷ್ಟು ವರ್ಷಗಳೇ ಕಳೆದಿವೆ. ಕೇವಲ ಕೆಲವು ಡಝುನ್ ಯುವೆನ್[5] ಗೆ ನೀವು ಒಂದು ಫಾಲೂನ್‌ನ್ನು ಕೊಂಡುಕೊಳ್ಳಲು ಹೇಗೆ ಸಾಧ್ಯ? ಯಾವುದೇ ನಿಬಂಧನೆಯಿಲ್ಲದೆ ನಾವೇಕೆ ನಿಮ್ಮೆಲ್ಲರಿಗೂ ಇದನ್ನು ನೀಡುತ್ತೇವೆ? ಇದೇಕೆಂದರೆ ನೀವು ಅಭ್ಯಾಸಿಗರಾಗಲು ಬಯಸುತ್ತಿದ್ದೀರಿ. ಎಷ್ಟೇ ದೊಡ್ಡ ಮೊತ್ತವು ಈ ಹೃದಯವನ್ನು ಕೊಂಡುಕೊಳ್ಳಲು

ಸಾಧ್ಯವಿಲ್ಲ. ಯಾವಾಗ ನಿಮ್ಮ ಬುದ್ಧ–ಮನಸ್ಸು ಉದ್ಭವವಾಗುವುದೋ ಆಗ ಮಾತ್ರ ನಾವು ಈ ರೀತಿ ಮಾಡಬಲ್ಲೆವು.

ನೀವು ಯಾವುದನ್ನೋ ಪಡೆದುಕೊಳ್ಳುವ ಹಿಂದೆ ಬಿದ್ದಿದ್ದೀರಿ. ನೀವು ಕೇವಲ ಇದರ ಸಲುವಾಗಿಯೇ ಇಲ್ಲಿಗೆ ಬಂದಿರುವಿರಾ? ನಿಮ್ಮ ಮನದಲ್ಲಿ ಇರುವುದೆಲ್ಲವನ್ನೂ ಬೇರೆ ಆಯಾಮದಲ್ಲಿರುವ ನನ್ನ ಫಾಷೆನ್‌ಗೆ ಗೊತ್ತಿದೆ. ಇದೇಕೆಂದರೆ ಕಾಲ–ಅಂತರಿಕ್ಷದ ಎರಡು ಪರಿಕಲ್ಪನೆಗಳು ಭಿನ್ನವಾಗಿದೆ, ಬೇರೆ ಆಯಾಮದಲ್ಲಿ ನಿಮ್ಮ ಆಲೋಚನೆಗಳ ಉಂಟಾಗುವಿಕೆಯನ್ನು ಒಂದು ಅತ್ಯಂತ ನಿಧಾನಗತಿಯ ಪ್ರಕ್ರಿಯೆಯಾಗಿ ಕಾಣಲಾಗುತ್ತಿದೆ. ನೀವು ಆಲೋಚನೆ ಮಾಡುವ ಮೊದಲೇ ಇದು ಎಲ್ಲವನ್ನೂ ತಿಳಿದುಕೊಳ್ಳುವುದು. ಆದ್ದರಿಂದ, ನೀವು ನಿಮ್ಮ ಕೆಟ್ಟ ಆಲೋಚನೆಗಳೆಲ್ಲವನ್ನು ರದ್ದುಪಡಿಸಬೇಕು. ಇಲ್ಲಿಗೆ ಪ್ರತಿಯೊಬ್ಬರೂ ಬಂದಿರುವುದು ಪೂರ್ವನಿರ್ಧಾರಿತ ಸಂಬಂಧದಿಂದಲೇ. ನಿಮಗೆ ಅದು ದೊರಕಿದರೆ, ಬಹುಷಃ ಅದು ನಿಮಗೆ ದೊರಕಬೇಕಾದದ್ದೆ. ಆದ್ದರಿಂದ ನೀವದನ್ನು ಕಾಪಾಡಿಕೊಳ್ಳಬೇಕು ಮತ್ತು ಯಾವುದೇ ವ್ಯಾಮೋಹಕ್ಕೆ ಒಳಗಾಗಬಾರದು.

ಹಿಂದಿನ ಧಾರ್ಮಿಕ ಸಾಧನಾಭ್ಯಾಸದಲ್ಲಿ, ಬುದ್ಧ ಶಾಲೆಯು ಶೂನ್ಯತ್ವವನ್ನು ಬಯಸುತ್ತಿತ್ತು. ಒಬ್ಬ ವ್ಯಕ್ತಿಯು ಯಾವುದರ ಬಗ್ಗೆಯೂ ಯೋಚಿಸಬಾರದು ಮತ್ತು ಶೂನ್ಯತೆಯ ದ್ವಾರವನ್ನು ಪ್ರವೇಶಿಸಬೇಕು. ತಾವೋ ಶಾಲೆಯು ಏನೂ ಇಲ್ಲದಿರುವುದರಿಂದ, ಇಲ್ಲದಿರುವಿಕೆಯ ಬಗ್ಗೆ ತಿಳಿಸಿದೆ. ಒಬ್ಬನು ಏನನ್ನೂ ಬಯಸಬಾರದು, ಮತ್ತು ಯಾವುದರ ಬಗ್ಗೆಯೂ ಬೆನ್ನಟ್ಟಬಾರದು. ಒಬ್ಬ ಅಭ್ಯಾಸಿಗನು ಗಾಂಗ್ ಪಡೆಯುವತ್ತ ಗಮನಹರಿಸದೆ, ಕೇವಲ ಅಭ್ಯಾಸದ ಮೇಲೆ ಕೇಂದ್ರೀಕರಿಸಬೇಕಾದ್ದನ್ನು ನಂಬುತ್ತಾನೆ. ಸಾಧನೆ ಮತ್ತು ಅಭ್ಯಾಸದಲ್ಲಿ ಒಬ್ಬನು ಯಾವುದೇ ಉದ್ದೇಶಮುಕ್ತ ಸ್ಥಿತಿಯಲ್ಲಿರಬೇಕು. ಎಲ್ಲಿಯವರೆಗೆ ನೀವು ನಿಮ್ಮ ಷಿನ್‌ಶಿಂಗ್‌ನ್ನು ಅಭಿವೃದ್ಧಿಪಡಿಸಿಕೊಳ್ಳುವತ್ತ ಕೇಂದ್ರೀಕರಿಸುವಿರೋ, ನೀವು ನಿಮ್ಮ ಹಾದಿಯಲ್ಲಿ ಬರುವ ಅಡೆತಡೆಗಳನ್ನು ದಾಟಿ ನಿಮಗೆ ನಿಜವಾಗಿಯೂ ದೊರಕಬೇಕಾದ ವಸ್ತುಗಳು ಲಭಿಸುತ್ತದೆ. ನಿಮಗೆ ಏನಾದರೊಂದನ್ನು ಬಿಟ್ಟುಕೊಡಲಾಗದಿದ್ದಲ್ಲಿ, ಅದು ಒಂದು ಬಯಕೆಯಲ್ಲವೆ? ನಾವಿಲ್ಲಿ ಎಲ್ಲವನ್ನೂ ಒಂದೇ ಬಾರಿಗೆ ಈ ಬಗೆಯ ಉನ್ನತ–ಮಟ್ಟದ ಫಾವನ್ನು ಬೋಧಿಸಿದ್ದೇವೆ. ನಿಮ್ಮ ಷಿನ್‌ಶಿಂಗ್‌ನ ಅಗತ್ಯತೆಯೂ ಉನ್ನತ ಮಟ್ಟದಲ್ಲಿರಬೇಕಾದದ್ದೂ ನಿಜ. ಆದ್ದರಿಂದ ಒಬ್ಬರು ಯಾವುದೇ ರೀತಿಯಾದ ವ್ಯಾಮೋಹದಿಂದ ಫಾ ಕಲಿಯಲು ಬರಬಾರದು.

ನಾವು ಎಲ್ಲರಿಗೂ ಜವಾಬ್ದಾರಿಯುತರಾಗಿರುವಂತೆ, ನಿಮ್ಮನ್ನು ಸರಿಯಾದ ಮಾರ್ಗದಲ್ಲಿ ಮುನ್ನಡೆಸುತ್ತೇವೆ, ಮತ್ತು ಈ ಫಾವನ್ನು ನಾವು ನಿಮಗೆ ಕೂಲಂಕುಶವಾಗಿ ವಿವರಿಸಲೇಬೇಕು. ಒಬ್ಬರು ದಿವ್ಯಚಕ್ಷುವಿನ ವ್ಯಾಮೋಹದಲ್ಲಿ ಇದ್ದಾಗ, ಅದು ತನ್ನಷ್ಟಕೆ ತಾನೇ ತಡೆಯಾಗಿಬಿಡುತ್ತದೆ ಮತ್ತು ಮುಚ್ಚಿಹೋಗುತ್ತದೆ. ಮೂರುವಿಶ್ವದೊಳಗಿನ ಫಾಸಾಧನೆಯ ಅಭ್ಯಾಸದಲ್ಲಿಒಬ್ಬರು ಅಭಿವೃದ್ಧಿಪಡಿಸಿಕೆ ೂಳ್ಳುವ ಎಲ್ಲಾ ಅಸಾಮಾನ್ಯ ಸಾಮರ್ಥ್ಯಗಳು, ಹುಟ್ಟಿನಿಂದಲೇ ಬರುವ ಈ ಭೌತಿಕ ಶರೀರದ ಅಸಲಿ ಸಾಮರ್ಥ್ಯಗಳಾಗಿರುತ್ತದೆ ಎಂದು ನಾನು ಎಲ್ಲರಿಗೂ ಹೇಳುತ್ತಿದ್ದೇನೆ. ಈ ದಿನಗಳಲ್ಲಿ ನಾವು ಅವುಗಳನ್ನು ಅಸಾಮಾನ್ಯ ಸಾಮರ್ಥ್ಯಗಳು ಎಂದು ಕರೆಯುತ್ತೇವೆ. ಅದು ನಮ್ಮ ಆಯಾಮದಲ್ಲಿಮಾತ್ರ ಕೆಲಸ ಮಾಡಬಲ್ಲದು ಮತ್ತು ಸಾಮಾನ್ಯ ಮಾನವರನ್ನು ನಿಗ್ರಹಿಸುತ್ತದೆ. ಈ ಸಣ್ಣ ಪುಟ್ಟ ತಂತ್ರದ ಹಿಂದೆ ನೀವೇಕೆ ಹೋಗುವಿರಿ? ಇದರ ಅಥವ ಬೇರೆಯದರ ವ್ಯಾಮೋಹದಲ್ಲಿ ನೀವು ಇರುವಿರಿ, ಆದರೆ ಮೂರು– ಲೋಕದೊಳಗಿನ ಫಾದ ಆಚೆ ಹೋದಾಗ ಇವುಗಳು ಬೇರೆ ಆಯಾಮಗಳಲ್ಲಿ ಕೆಲಸ ಮಾಡುವುದಿಲ್ಲ. ಈ ಮೂರು–ಲೋಕದಾಚೆಗಿನ ಫಾ ಮೀರುವಷ್ಟರಲ್ಲಿ, ಈ ಎಲ್ಲಾ ಅಸಾಮಾನ್ಯ ಶಕ್ತಿಗಳನ್ನು ತ್ಯಜಿಸಲೇಬೇಕು ಮತ್ತು ಅತಿ ಆಳವಾದ ಆಯಾಮದಲ್ಲಿ ಸಂರಕ್ಷಿಸಲು ಸಂಕುಚಿಸಬೇಕು. ಭವಿಷ್ಯದಲ್ಲಿ, ಇವು ನಿಮ್ಮ ಸಾಧನಾಭ್ಯಾಸದ ಒಂದು ದಾಖಲೆಯಾಗಿ ಕಾರ್ಯ ನಿರ್ವಹಿಸುವುದು, ಮತ್ತು

---

3. **ಯೋಗ್ಯ ಫಲ** – ಬುದ್ಧ ಶಾಲೆಯಲ್ಲಿ ಸಾಧನೆಯ ಫಲದ ಸ್ಥಿತಿಯನ್ನು ಪ್ರಾಪ್ತಿಯಾಗುವುದು

4. **ಉಪಾಧ್ಯಾಯ** – (ಗುರು ಎಂದು ಸಹ ಕರೆಯುವರು) ಚೀನಾದಲ್ಲಿ ಉಪಾಧ್ಯಾಯರನ್ನು ಪೂಜ್ಯವಾಗಿ ಕರೆಯುವುದು

ಇದನ್ನು ಇಷ್ಟು ಸಣ್ಣ ಕೆಲಸಕ್ಕಾಗಿ ಮಾತ್ರ ಊಹಿಸಿಕೊಳ್ಳಬಹುದು. ಮೂರು–ಲೋಕದಾಚೆಗಿನ ಫಾವನ್ನು ತಲುಪಿದ ನಂತರ, ಒಬ್ಬರು ಸಾದನೆಯನ್ನು ಪೂರ್ಣ ಪ್ರಮಾಣದಲ್ಲಿ ಮತ್ತೊಮ್ಮೆ ಆರಂಭಿಸಬೇಕು. ನಾನು ಈಗ ತಾನೆ ಹೇಳಿದಂತೆ, ಒಬ್ಬರದು ಐದು ಧಾತುಗಳನ್ನು ಮೀರಿದ ಒಂದು ಶರೀರವಾಗಿರುತ್ತದೆ. ಇದು ಬುದ್ಧ–ಶರೀರ. ಈ ವಿಧದ ಶರೀರವನ್ನು ಬುದ್ಧ–ಶರೀರವೆಂದು ನಾವು ಕರೆಯಬಾರದೇಕೆ? ಈ ಬುದ್ಧ–ಶರೀರವು ಸಾಧನಾಭ್ಯಾಸವನ್ನು ಪೂರ್ಣವಾಗಿ ಪುನಃ ಮೊದಲಿನಿಂದ ಆರಂಭಿಸಲೇಬೇಕು ಮತ್ತು ಅಸಾಮಾನ್ಯ ಸಾಮರ್ಥ್ಯಗಳನ್ನು ಪನಃ ಅಭಿವೃದ್ಧಿಗೊಳಿಸಿಕೊಳ್ಳಬೇಕು. ಇದನ್ನು "ಅಸಾಮಾನ್ಯ ಸಾಮರ್ಥ್ಯಗಳು" ಎಂದು ಕರೆಯುವುದರ ಬದಲಾಗಿ ಅವು ಈಗ "ಬುದ್ಧ ಫಾದ ದೈವಶಕ್ತಿ" ಎಂದು ಕರೆಯಲ್ಪಡುವುದು. ಅವು ಮಿತಿ ಮೀರಿದ ಶಕ್ತಿಯಿಂದ ಕೂಡಿರುತ್ತವೆ ಮತ್ತು ಬೇರೆ ಆಯಾಮಗಳ ಮೇಲೆ ಪ್ರಬಾವ ಬೀರಬಲ್ಲುದು, ಅತ್ಯಂತ ಪರಿಣಾಮಕಾರಿಯೂ ಆಗಿರುವುದು. ಅಸಾಮಾನ್ಯ ಶಕ್ತಿಗಳ ಹಿಂದೆ ನೀವು ಹೋಗುವುದರ ಉಪಯೋಗವಾದರೂ ಏನು? ಯಾರು ಈ ಅಸಾಮಾನ್ಯ ಸಾಮರ್ಥ್ಯಗಳ ಹಿಂದೆ ಹೋಗುವರೋ, ಅವರೆಲ್ಲರಿಗೆ ನೀವದನ್ನು ಉಪಯೋಗಿಸುವ ಮತ್ತು ಸಾಮಾನ್ಯ ಮಾನವರಲ್ಲಿ ತೋರ್ಪಡಿಸುವ ಯೋಜನೆಯನ್ನು ನೀವು ಮಾಡುತ್ತಿಲ್ಲವೇ? ಇಲ್ಲವಾದಲ್ಲಿ, ಇವು ನಿಮಗೇಕೆ ಬೇಕು? ಇವುಗಳು ಅಗೋಚರ ಮತ್ತು ಸ್ಪರ್ಷಾತೀತ. ಅಲಂಕಾರ ಮಾಡುವ ಸಲುವಾಗಿಯೂ ಕೂಡ, ಒಬ್ಬನು ಚೆನ್ನಾಗಿ ಕಾಣುವ ವಸ್ತುವನ್ನು ಹುಡುಕಲು ಬಯಸುವನು. ಇದನ್ನು ಉಪಯೋಗಿಸಿಕೊಳ್ಳುವ ಉದ್ದೇಶವು ನಿಮ್ಮ ಸುಪ್ತಮನಸ್ಸಿನಲ್ಲಿ ಇರುವುದನ್ನು ಖಾತ್ರಿಪಡಿಸಿದೆ. ಅವು ಸಾಮಾನ್ಯ ಮಾನವ ಕೌಶಲಗಳೆಂದು ಪರಿಗಣಿಸಲು ಸಾಧ್ಯವಿಲ್ಲ. ಇವೆಲ್ಲವೂ ಸಂಪೂರ್ಣವಾಗಿ ಅಲೌಕಿಕ ಮತ್ತು ಸಾಮಾನ್ಯ ಮಾನವರಲ್ಲಿ ನೀವು ಇದನ್ನು ತೋರ್ಪಡಿಸಿಕೊಳ್ಳುವುದನ್ನು ನಿಷೇಧಿಸಲಾಗಿದೆ. ತೋರಿಕೆಯೆನ್ನುವುದೇ ಒಂದು ಅತಿ ಬಲವಾದ ಆಸೆ ಮತ್ತು ಸಾಧಕನು ಇವನ್ನು ತ್ಯಜಿಸಬೇಕು. ಇದರೊಂದಿಗೆ ನೀವು ಹಣ ಮತ್ತು ಆಸ್ತಿಯನ್ನು ಮಾಡಲು ಬಯಸಿದ್ದಲ್ಲಿ, ಅಥವ ಇದರೊಂದಿಗೆ ನೀವು ಸಾಮಾನ್ಯ ದಿನನಿತ್ಯದ ಜನರ ನಡುವೆ ನಿಮ್ಮ ವೈಯಕ್ತಿಕ ಗುರಿಗಳನ್ನು ಸಾಧಿಸಲು ಬಯಸುವುದನ್ನು ನಿಷೇಧಿಸಲಾಗಿದೆ. ಅದು ಸಾಮಾನ್ಯ ಮಾನವ ಸಮಾಜವನ್ನು ಅಡಚಣೆಗೊಳಪಡಿಸಲು ಮತ್ತು ದಬ್ಬಿಹಾಕಲು ಉನ್ನತ ಹಂತದ

ವಸ್ತುಗಳನ್ನು ಉಪಯೋಗಿಸಿದಂತಾಗುವುದು. ಆ ಯೋಚನೆಯೇ ಅಸಹ್ಯ. ಆದ್ದರಿಂದ, ಇವುಗಳ ಸಾಮಾನ್ಯ ಬಳಕೆಯನ್ನು ತಿರಸ್ಕರಿಸಿದೆ.

ಸಾಮಾನ್ಯವಾಗಿ ಈ ಅಸಾಮಾನ್ಯ ಶಕ್ತಿಗಳು ಎರಡು ತರಹದ ಗುಂಪಿನವರಲ್ಲಿ ಉದ್ಭವಿಸುತ್ತದೆ : ಮಕ್ಕಳಲ್ಲಿ ಮತ್ತು ವಯಸ್ಸಾದವರಲ್ಲಿ. ನಿರ್ದಿಷ್ಟವಾಗಿ ವಯಸ್ಸಾದ ಹೆಂಗಸರು ಸಾಮಾನ್ಯ ಮಾನವರ ಮಧ್ಯೆ ಯಾವುದೇ ರೀತಿಯಾದ ವ್ಯಾಮೋಹ ಇಲ್ಲದೆ ತಮ್ಮ ಷಿನ್‌ಷಿಂಗ್‌ನ್ನು ಒಳ್ಳೆಯ ರೀತಿಯಾಗಿ ಸಮತೋಲನ ಮಾಡುತ್ತಾರೆ. ಇವರಿಗೆ ಅಸಾಮಾನ್ಯ ಶಕ್ತಿಗಳು ಉದ್ಭವ ಆದಮೇಲೆ , ಇದನ್ನು ತೋರಿಸುವ ವ್ಯಾಮೋಹವಿಲ್ಲದೆ ತುಂಬಾ ಸುಲಭವಾಗಿ ತಮ್ಮನ್ನು ತಾವು ನಿಯಂತ್ರಣದಲ್ಲಿಟ್ಟುಕೊಳ್ಳುತ್ತಾರೆ. ಯೌವ್ವನಾವಸ್ಥೆಯಲ್ಲಿರುವ ಯುವಕರಿಗೆ ಏಕೆ ಈ ಅಸಾಮಾನ್ಯ ಶಕ್ತಿಗಳು ಉದ್ಭವಿಸಲು ಕಷ್ಟಕರ? ವಿಶೇಷವಾಗಿ, ಯುವಕರು ಈ ಸಾಮಾನ್ಯ ಮಾನವ ಸಮಾಜದಲ್ಲಿ ಇನ್ನೂ ಏನನ್ನಾದರೂ ಸಾಧಿಸಬೇಕೆಂಬ ಆಸೆಯನ್ನು ಇಟ್ಟುಕೊಂಡಿರುತ್ತಾರೆ! ಒಂದು ಸಲ ಇವನಿಗೆ ಅಸಾಮಾನ್ಯ ಶಕ್ತಿಗಳು ಬಂದರೆ, ಇದನ್ನು ತನ್ನ ವೈಯ್ಯಕ್ತಿಕ ಗುರಿಯನ್ನು ಮುಟ್ಟಲು ಉಪಯೋಗಿಸುವುದಕ್ಕೆ ನಿಷೇಧಿಸಲಾಗಿದೆ, ಆದ್ದರಿಂದ ಇವನಿಗೆ ಅಸಾಮಾನ್ಯ ಶಕ್ತಿಗಳು ಉದ್ಭವವಾಗುವುದಿಲ್ಲ.

ಈ ಸಾಧನೆಯ ಅಭ್ಯಾಸದ ವಿಷಯವು ಮಕ್ಕಳಾಟವಲ್ಲ, ಮತ್ತು ಇದು ಸಮಾನ್ಯ ಮಾನವರ ರೀತಿ ಅಲ್ಲ – ಇದು ಒಂದು ಗಂಭೀರವಾದ ವಿಷಯ. ನೀವು ಸಾಧನೆಯ ಅಭ್ಯಾಸವನ್ನು

---

**5.ಯುವೆನ್** – ಚೀನೀಯರ ಒಂದು ಹಣದ ಏಕಮಾನ (ಸರಿಸುಮಾರು $0.12ಯು.ಎಸ್.ಡಿ)
**6. ಫಾಶೆನ್** – "ನಿಯಮ ಶರೀರ" ; ಫಾ ಮತ್ತು ಗಾಂಗ್‌ನಿಂದ ಮಾಡಲ್ಪಟ್ಟ ಒಂದು ಶರೀರ.

ಮಾಡಬೇಕೆಂಬುದು ಅಥವ ಸಾಧನೆಯ ಅಭ್ಯಾಸವನ್ನು ಮಾಡಲು ಸಾಧ್ಯವಿದೆಯೇ ಎಂಬುದು ಸಂಪೂರ್ಣವಾಗಿ ನಿಮ್ಮ ಷಿನ್‌ಷಿಂಗ್‌ನ್ನು ಉತ್ತೀರ್ಣಗೊಳಿಸುವುದರಲ್ಲಿರುತ್ತದೆ. ಒಂದು ವೇಳೆ ಯಾರಾದರೂ ಇದನ್ನು ಇದರ ಮೇಲಿರುವ ವ್ಯಾಮೋಹದಿಂದ ಅಸಾಮಾನ್ಯವಾದ ಶಕ್ತಿಯನ್ನು ಪಡೆದುಕೊಂಡರೆ ಅದು ತುಂಬಾ ತಪ್ಪು. ಇವನು ಸಾಧನೆಯಲ್ಲಿ ಆಸಕ್ತಿಯನ್ನು ಹೊಂದಿರುವುದಿಲ್ಲ. ಅಥವ ಇದನ್ನು ಕುರಿತು ಯೋಚನೆಯು ಇಲ್ಲವೆಂದು ನೀವು ತಿಳಿದುಕೊಳ್ಳುತ್ತೀರಿ. ಏಕೆಂದರೆ ಇವನ ಷಿನ್‌ಷಿಂಗ್ ಸಾಮಾನ್ಯ ಮಾನವರ ಮಟ್ಟದಲ್ಲಿರುತ್ತದೆ ಮತ್ತು ಇವನು ಅಸಾಮಾನ್ಯ ಶಕ್ತಿಗಳನ್ನು ವ್ಯಾಮೋಹದಿಂದ ಪಡೆದುಕೊಂಡಿರುತ್ತಾನೆ, ಇವನು ಎಲ್ಲ ರೀತಿಯ ಕೆಟ್ಟ ಕೆಲಸಗಳಲ್ಲಿ ತೊಡಗಬಹುದು. ಬ್ಯಾಂಕಿನಲ್ಲಿ ಸಾಕಷ್ಟು ಹಣವಿದೆ, ಇವನು ಅದರಿಂದ ಸ್ವಲ್ಪ ಹಣವನ್ನು ತೆಗೆಯಬಹದು. ದಾರಿಯಲ್ಲಿ ಸಾಕಷ್ಟು ಲಾಟರಿ ಟಿಕೆಟುಗಳನ್ನು ಮಾರಾಟಕ್ಕೆ ಇಟ್ಟಿರುತ್ತಾರೆ, ಮತ್ತು ಇವನಿಗೆ ಮೊದಲನೆಯ ಬಹುಮಾನ ಬರಬಹುದು. ಈ ತರಹದ ಕೆಲಸಗಳು ಆಗಿಲ್ಲವೇಕೆ? ಕೆಲವು ಚೀಗಾಂಗ್ ಗುರುಗಳು ಹೇಳಿದ್ದಾರೆ. " ಒಳ್ಳೆಯವರಾಗದೆ ಹೋದರೆ ಅವರಿಗೆ ಅಸಾಮಾನ್ಯ ಶಕ್ತಿಗಳು ಉದ್ಭವವಾದ ಕೂಡಲೇ ಅವನು ಸುಲಭವಾಗಿ ಕೆಟ್ಟ ಕೆಲಸಗಳಲ್ಲಿ ತೊಡಗುತ್ತಾನೆ." ಇದು ತಪ್ಪು ಹೇಳಿಕೆ ಎಂದು ನಾನು ಹೇಳುತ್ತೇನೆ–ಈ ರೀತಿ ಆಗುವುದೇ ಇಲ್ಲ. ನೀವು ಒಳ್ಳೆಯತನವನ್ನು ಗೌರವಿಸದಿದ್ದರೆ ಅಥವ ನಿಮ್ಮ ಷಿನ್‌ಷಿಂಗ್‌ನ್ನು ಸಾಧನೆಯ ಮೂಲಕ ಉತ್ತೀರ್ಣಗೊಳಿಸದಿದ್ದರೆ, ನೀವು ಸುಮ್ಮನೆ ಅಸಾಮಾನ್ಯ ಶಕ್ತಿಗಳನ್ನು ಉದ್ಭವಿಸಲು ಸಾಧ್ಯವಾಗುವುದಿಲ್ಲ. ಒಳ್ಳೆಯ ಷಿನ್‌ಷಿಂಗ್ ಇದ್ದಲ್ಲಿ, ಕೆಲವರಿಗೆ ಅಸಾಮಾನ್ಯ ಶಕ್ತಿಗಳು ಅವರವರ ಮಟ್ಟದಲ್ಲಿಯೇ ಉದ್ಭವವಾಗುತ್ತದೆ. ಆಮೇಲೆ, ತಮ್ಮನ್ನು ತಾವೇ ಸಂಬಾಳಿಸುವುದಕ್ಕೆ ಸಾಧ್ಯವಾಗುವುದಿಲ್ಲ. ಮತ್ತು ಮಾಡಬಾರದ್ದನ್ನು ಮಾಡುತ್ತಾರೆ. ಈ ಸನ್ನಿವೇಶ ಕೂಡ ಇರುತ್ತದೆ. ಒಮ್ಮೆ ಒಬ್ಬರು ಕೆಟ್ಟದನ್ನು ಮಾಡಿದರೆ, ಹೇಗಾದರೂ, ಒಬ್ಬರ ಅಸಾಮಾನ್ಯ ಶಕ್ತಿಗಳು ಬಲಹೀನವಾಗುತ್ತದೆ ಅಥವಾ ಕ್ಷೀಣಿಸುತ್ತದೆ. ಒಂದು ಸಲ ಅವು ಹೋದರೆ ಪುನಃ ಪಡೆಯಲು ಸಾಧ್ಯವಾಗುವುದಿಲ್ಲ. ಮುಂದೆಯೂ ಕೂಡ, ಅಸಹ್ಯಕರವಾದದ್ದೇನೆಂದರೆ ಅವುಗಳು ಒಬ್ಬರಿಗೆ ವ್ಯಾಮೋಹವನ್ನು ಹುಟ್ಟಿಸುತ್ತದೆ.

ಒಬ್ಬ ವ್ಯಕ್ತಿಯು ತನ್ನ ಅಭ್ಯಾಸವನ್ನು ಮೂರು ಅಥವ ಐದು ದಿನ ಮಾಡಿದರೆ, ಈ ವ್ಯಕ್ತಿಯು ರೋಗವನ್ನು ಗುಣಪಡಿಸಬಲ್ಲ ಎಂದು ಒಬ್ಬ ಚೀಗಾಂಗ್ ಗುರುಗಳು ಪ್ರತಿಪಾದಿಸುತ್ತಾರೆ. ಇದು ಒಂದು ಜಾಹಿರಾತಿನಂತೆ, ಮತ್ತು ಆತನನ್ನು ಚೀಗಾಂಗ್ ವ್ಯಾಪಾರಿಗನೆಂದು ಕರೆಯಬೇಕಾಗುತ್ತದೆ. ಇದರ ಬಗ್ಗೆ, ಎಲ್ಲರೂ ಯೋಚಿಸಿ: ಒಬ್ಬ ಸಾಮಾನ್ಯ ಮಾನವನಾಗಿ, ನೀವು ಕೇವಲ ನಿಮ್ಮ ಚೀ ಹೊರಹೊಮ್ಮಿಸುವ ಮೂಲಕ ಮತ್ತೊಬ್ಬ ವ್ಯಕ್ತಿಯ ರೋಗವನ್ನು ಹೇಗೆ ಗುಣಪಡಿಸುವಿರಿ? ನೀವು ಮಾಡಿದಂತೆ, ಸಾಮಾನ್ಯ ಮಾನವನ ದೇಹದಲ್ಲಿಯೂ ಕೂಡ ಚೀ ಇರುತ್ತದೆ. ನೀವು ಈಗಷ್ಟೇ ಅಭ್ಯಾಸವನ್ನು ಆರಂಭಿಸಿದ್ದೀರಿ, ಮತ್ತು ಕೇವಲ ನಿಮ್ಮ ಲಾವ್‌ಗಾಂಗ್[7] ಬಿಂದುವು ತೆರೆದಿರುತ್ತದೆ, ಇದರಿಂದ ನೀವು ಚೀಯನ್ನು ಹೀರಿಕೊಳ್ಳಬಹುದು ಮತ್ತು ಬಿಡಬಹುದು. ಯಾವಾಗ ನೀವು ಬೇರೆಯವರ ರೋಗವನ್ನು ನಿವಾರಿಸುವಿರೋ, ಅವರ ದೇಹದಲ್ಲಿಯೂ ಕೂಡ ಚೀ ಇರುತ್ತದೆ. ಬಹುಷಃ ಅವರ ಚೀ ನಿಮ್ಮ ರೋಗವನ್ನು ಗುಣಪಡಿಸಬಹುದು! ಒಬ್ಬರ ಚೀ ಯು ಇನ್ನೊಬ್ಬರ ಮೇಲೆ ಹತೋಟಿ ಮಾಡಲು ಹೇಗೆ ಸಾಧ್ಯ? ಚೀ ಇಂದ ರೋಗವನ್ನು ಗುಣಪಡಿಸಲು ಸಾಧ್ಯವೇ ಇಲ್ಲ. ಇದರೊಂದಿಗೆ, ಯಾವಾಗ ನೀವು ರೋಗಿಗೆ ಚಿಕಿತ್ಸೆ ನೀಡುವಿರೋ ಆಗ, ನೀವು ಮತ್ತು ನಿಮ್ಮ ರೋಗಿಯು ಒಂದು ಕ್ಷೇತ್ರವನ್ನು ನಿರ್ಮಿಸುತ್ತೀರಿ, ಇದರ ಮೂಲಕ ನಿಮ್ಮ ರೋಗಿಯ ರೋಗಗ್ರಸ್ತ ಚೀಯು ಬಂದು ನಿಮ್ಮ ದೇಹಕ್ಕೆ ಅಂಟಿಕೊಳ್ಳುತ್ತದೆ. ನಿಮ್ಮ ರೋಗಿಯಷ್ಟೆಯೇ ಇದು ನಿಮಗೂ ಬಂದುಬಿಡುತ್ತದೆ, ಇದರ ಮೂಲವು ರೋಗಿಯ ದೇಹದಲ್ಲೇ ಇರುತ್ತದೆ. ತುಂಬಾ ಹೆಚ್ಚು ರೋಗಗ್ರಸ್ತ ಚೀಯು ನಿಮ್ಮನ್ನೇ ರೋಗಿಯನ್ನಾಗಿ ಮಾಡಬಹುದು. ಒಂದು ಸಲ ನೀವು ರೋಗವನ್ನು ನಿವಾರಿಸಬಹುದು ಎಂದು ಯೋಚಿಸಿದಾಗ, ರೋಗಿಗಳನ್ನು ನೋಡುವ ಅಭ್ಯಾಸವನ್ನು ಮಾಡುವಿರಿ. ನೀವು ಯಾರ ಬೇಡಿಕೆಯನ್ನು ನಿರಾಕರಿಸವುದಿಲ್ಲ

ಮತ್ತು ಇದರ ಬಗ್ಗೆ ವ್ಯಾಮೋಹವನ್ನು ಬೆಳೆಸಿಕೊಳ್ಳುವಿರಿ. ಬೇರೆಯವರ ಕಾಯಿಲೆಯನ್ನು ಗುಣಪಡಿಸುವುದು ಎಷ್ಟು ಸಂತೋಷವನ್ನು ತರುತ್ತದೆ! ಅವರನ್ನು ಗುಣಪಡಿಸುವುದೇಕೆ? ನೀವು ಇದರ ಬಗ್ಗೆ ಯೋಚಿಸಲಿಲ್ಲವೇ? ಸುಳ್ಳು ಚೀಗಾಂಗ್ ಗುರುಗಳೆಲ್ಲರ ದೇಹವನ್ನು ದುಷ್ಟಶಕ್ತಿಯಿಂದ ಅಥವ ಪ್ರಾಣಿಯಿಂದ ಆವರಿಸಿಕೊಂಡಿರುತ್ತದೆ. ನಿಮಗೆ ಅವರ ಮೇಲೆ ನಂಬಿಕೆ ಬರಲಿ ಎಂದು, ಅವರು ನಿಮಗೆ

ತಮ್ಮ ಕೆಲವು ಸಂದೇಶಗಳನ್ನು ಕೊಡುತ್ತಾರೆ, ಇವುಗಳು ಮುಂದೆ ನೀವು ಮೂರು ಐದು, ಎಂಟು ಅಥವ ಹತ್ತು ರೋಗಿಗಳನ್ನು ಗುಣಪಡಿಸುವ ವರೆಗೆ ಉಪಯೋಗಿಸಲ್ಪಡುತ್ತದೆ. ಇದು ಶಕ್ತಿಯನ್ನು ನುಂಗುತ್ತದೆ, ನಂತರ ಈ ತುಣುಕು ಶಕ್ತಿಯು ಅಸ್ತಿತ್ವದಲ್ಲಿರಿರುವುದಿಲ್ಲ. ನಿಮಗೆ ನಿಮ್ಮದೇ ಆದ ಗಾಂಗ್ ಇರುವುದಿಲ್ಲ, ಆದ್ದರಿಂದ ಅದು ಎಲ್ಲಿಂದ ನಿಮಗೆ ದೊರಕಲು ಸಾಧ್ಯ? ಚೀಗಾಂಗ್ ಗುರುಗಳಂತೆ, ಹಲವು ಡಜನ್ ವರ್ಷಗಳು ನಾವು ಸಾಧನಾಭ್ಯಾಸವನ್ನು ಮಾಡಿದ್ದೇವೆ. ಹಿಂದಿನ ಕಾಲದಲ್ಲಿ ಸಾಧನೆಯ ಅಭ್ಯಾಸವನ್ನು ಮಾಡುವುದು ತುಂಬಾ ಕಷ್ಟವಾಗಿತ್ತು. ಒಬ್ಬನು ಪ್ರಾಮಾಣಿಕ ಮಾರ್ಗವನ್ನು ಅನುಸರಿಸದೆ ತಪ್ಪುಹಾದಿ ಅಥವ ಸಣ್ಣ ದಾರಿ ಹಿಡಿದರೆ ಸಾಧನೆಯ ಅಭ್ಯಾಸವನ್ನು ಮಾಡುವುದು ಇನ್ನೂ ಕಷ್ಟಕರ.

ಕೆಲವು ಶ್ರೇಷ್ಟ ಚೀಗಾಂಗ್ ಗುರುಗಳು ಹೆಸರುವಾಸಿ ಎಂದು ನಿಮಗೆ ಅನಿಸಿದರೂ, ಈ ತುಣುಕು ಗಾಂಗ್‌ನ್ನು ಪಡೆಯಲು ಅವರು ಹಲವು ದಶವರ್ಷಗಳ ಕಾಲ ಈ ಸಾಧನಾಭ್ಯಾಸ ಮಾಡಿದ್ದಾರೆ. ನೀವು ಸಾಧನೆಯ ಅಭ್ಯಾಸವನ್ನು ಮಾಡಿಯೇ ಇಲ್ಲ. ಚೀಗಾಂಗ್ ಪಾಠವನ್ನು ಕೇಳಿದ ನಂತರ ನಿಮಗೆ ಹೇಗೆ ಗಾಂಗ್ ದೊರಕುತ್ತದೆ? ಅದು ಹೇಗೆ ಸಾಧ್ಯ? ತದನಂತರ ನಿಮಗೆ ಇದರ ಬಗ್ಗೆ ವ್ಯಾಮೋಹ ಬೆಳೆಯುತ್ತದೆ. ಒಮ್ಮೆ ಈ ವ್ಯಾಮೋಹ ಬೆಳೆದಾಗ, ನೀವು ಕಾಯಿಲೆಯನ್ನು ಗುಣಪಡಿಸದೆ ಹೋದರೆ ನಿಮಗೆ ತಳಮಳ ಉಂಟಾಗುತ್ತದೆ. ಒಬ್ಬರ ಹೆಸರನ್ನು ಉಳಿಸಿಕೊಳ್ಳುವುದಕ್ಕಾಗಿ, ಕಾಯಿಲೆಯನ್ನು ಗುಣಪಡಿಸುವಾಗ ಅವರ ಮನಸ್ಸಿನಲ್ಲಿ ಏನು ನಡೆಯುತ್ತಾ ಇರುತ್ತದೆ? "ಈ ರೋಗವು ದಯಮಾಡಿ ನನಗೆ ಬರಲಿ ಇದರಿಂದ ರೋಗಿಯು ಗುಣವಾಗಬಹುದು." ಅದು ಒಳ್ಳೆಯತನದಿಂದಲ್ಲ, ಅವರ ಪ್ರತಿಷ್ಟೆ ಮತ್ತು ವೈಯಕ್ತಿಕ ಆಸೆಗಳನ್ನೊಳಗೊಂಡ ಈ ವ್ಯಾಮೋಹವನ್ನು ಬಿಟ್ಟಿರುವುದೇ ಇಲ್ಲ. ಈ ವ್ಯಕ್ತಿಗೆ ಒಂದು ಚೂರೂ ಕೂಡ ಒಳ್ಳೆತನವನ್ನು ಉದ್ಭವಿಸಲು ಸಾಧ್ಯವೇ ಇಲ್ಲ. ಅವನಿಗೆ ತನ್ನ ಹೆಸರನ್ನು ಕಳೆದುಕೊಳ್ಳುವೆನೋ ಎಂಬ ಭಯವಿರುತ್ತದೆ. ತನ್ನ ಹೆಸರನ್ನು ಉಳಿಸಿಕೊಳ್ಳುವುದಕ್ಕೆ ಆತನು ತಾನೇ ರೋಗವನ್ನು ಅನುಭವಿಸುವುದಕ್ಕೂ ಸಿದ್ಧನಾಗಿರುತ್ತಾನೆ. ಹೆಸರು ಗಳಿಸಿಕೊಳ್ಳುವುದಕ್ಕೋಸ್ಕರ ಇದು ಎಂತಹ ವ್ಯಾಮೋಹ! ಒಮ್ಮೆ ಈ ಇಚ್ಛೆಯು ಮೂಡಿದಾಗ, ಹೌದು, ಆ ಕಾಯಿಲೆಯು ಒಮ್ಮೆಗೆ ಆತನ ಶರೀರಕ್ಕೆ ವರ್ಗಾಯಿಸಲ್ಪಡುತ್ತದೆ – ಇದು ಖಂಡಿತವಾಗಿಯೂ. ಸಂಭವಿಸುತ್ತದೆ. ರೋಗಿಗೆ ಕಾಯಿಲೆ ಗುಣವಾಗಿರುತ್ತದೆ. ಆದರೆ ಈತನು ಕಾಯಿಲೆಯೊಂದಿಗೆ ಮನೆಗೆ ಹೋಗುವನು. ರೋಗಿಯನ್ನು ನೋಡಿದ ನಂತರ, ಇವನು ಮನೆಯಲ್ಲಿ ನೋವಿನಿಂದ ನರಳುತ್ತಾನೆ. ರೋಗವನ್ನು ಗುಣಪಡಿಸಿದ್ದೇನೆಂದು ಆತನಿಗನಿಸುತ್ತದೆ. ಬೇರೆಯವರು ಈತನನ್ನು ಚೀಗಾಂಗ್ ಗುರು ಎಂದು ಯಾವಾಗ ಕರೆಯುವರೋ ಆಗ ಈತನು ಅತ್ಯಾನಂದದಿಂದ ತೃಪ್ತನಾಗುತ್ತಾನೆ. ಇದು ವ್ಯಾಮೋಹವಲ್ಲವೇ? ಈತನಿಗೆ ಯಾವಾಗ ಕಾಯಿಲೆ‌ಯನ್ನು ಗುಣಪಡಿಸುವದಕ್ಕೆ ಆಗುವುದಿಲ್ಲವೋ, ಆಗ ಇವನಿಗೆ ತಲೆ ತಗ್ಗಿಸುವಂತಾಗುತ್ತದೆ ಮತ್ತು ವ್ಯರ್ಥವೆಂಬ ಭಾವನೆಯುಂಟಾಗುತ್ತದೆ. ಪ್ರತಿಷ್ಟೆ ಮತ್ತು ವೈಯಕ್ತಿಕ ಲಾಭದ ಒಂದು ವ್ಯಾಮೋಹವೇ ಹೀಗಾಗಲು ಕಾರಣವಲ್ಲವೆ ? ಇದರ ಜೊತೆಗೆ, ಎಲ್ಲಾ ರೋಗಗ್ರಸ್ತ ಚೀಯು ಆ ರೋಗಿಯಿಂದ ಇವನ ದೇಹಕ್ಕೆ ಬರುತ್ತದೆ. ಆದಾಗ್ಯೂ, ಆ ಸುಳ್ಳು ಚೀಗಾಂಗ್ ಗುರುಗಳು ಇವನಿಗೆ ಅದನ್ನು ಹೇಗೆ ಆತನ ದೇಹದಿಂದ ತೆಗೆಯಬೇಕೆಂದು ಹೇಳಿಕೊಟ್ಟಿದ್ದರೂ, ಇದನ್ನು ತೆಗೆಯಲು ಇವನಿಂದ ಆಗುವುದೇ ಇಲ್ಲ ಎಂದು ನಾನು ಹೇಳುತ್ತೇನೆ, ಒಂದು ಚೂರೂ ಕೂಡ, ಏಕೆಂದರೆ ಒಳ್ಳೆಯ ಚೀಯನ್ನು ಕೆಟ್ಟ ಚೀಯಿಂದ ಬೇರ್ಪಡಿಸುವ ಸಾಮರ್ಥ್ಯ ಆತನಿಗೇ ಇರುವುದಿಲ್ಲ. ಕಾಲಕ್ರಮೇಣ, ಇವನ ದೇಹವು ಒಳಗಿನಿಂದ ಕಪ್ಪಾಗಿರುತ್ತದೆ, ಮತ್ತು ಇದು ಕರ್ಮ.

ಸಾಧನೆಯ ಅಭ್ಯಾಸವನ್ನು ನೀವು ನಿಜವಾಗಿಯೂ ಮಾಡಬೇಕೆಂದು ಇಚ್ಛಿಸಿದರೆ, ಅದು ಸ್ವಲ್ಪ ಕಷ್ಟಕರವಾಗಿರುತ್ತದೆ. ಇದರ ಬಗ್ಗೆ ನೀವು ಏನು ಮಾಡುವಿರಿ? ನಿಮ್ಮ ಕರ್ಮವನ್ನು ಬಿಳಿ ಧಾತುವಾಗಿ ಪರಿವರ್ತಿಸಲು ನೀವು ಅನುಭವಿಸಲೇ ಬೇಕಾದ ನೋವೆಷ್ಟು? ಇದು ಬಹಳ ಕಷ್ಟಕರ. ನಿರ್ದಿಷ್ಟವಾಗಿ, ಒಳ್ಳೆಯ ಹುಟ್ಟುಗುಣವುಳ್ಳವರಿಗೆ, ಈ ವಿಷಯವನ್ನು ಎದುರಿಸುವುದು ಸುಲಭ. ಕೆಲವು ಜನರು ರೋಗವನ್ನು ನಿವಾರಿಸುವುದರ ಬಗ್ಗೆಯಷ್ಟೇ ಯೋಚಿಸುತ್ತಾರೆ. ನಿಮಗೆ ವ್ಯಾಮೋಹವಿದ್ದಲ್ಲಿ, ಒಂದು ಪ್ರಾಣಿಯು ಅದನ್ನು ನೋಡುತ್ತದೆ ಮತ್ತು ನಿಮ್ಮನ್ನು ಆವರಿಸಿಕೊಳ್ಳಲು ಬರುತ್ತದೆ. ಇದು ದುಷ್ಟಶಕ್ತಿ ಅಥವ ಪ್ರಾಣಿಯ ಆವರಿಸಿಕೊಳ್ಳುವಿಕೆ. ರೋಗವನ್ನು ಗುಣಪಡಿಸಲು ನೀವು ಬಯಸುವುದಿಲ್ಲವೇ? ಇದನ್ನು ಮಾಡಲು ಇದು ನಿಮಗೆ ಸಹಾಯ ಮಾಡುತ್ತದೆ. ಆದರೆ ಕಾರಣವಿಲ್ಲದೆ ಚಿಕಿತ್ಸೆ ಮಾಡಲು

ಇದು ನಿಮಗೆ ಸಹಾಯ ಮಾಡುವುದಿಲ್ಲ. ಕಳೆಯುವುದೂ ಇಲ್ಲ ಪಡೆಯುವುದೂ ಇಲ್ಲ. ಇದು ಅತೀ ಅಪಾಯಕರ, ಮತ್ತು ಇದನ್ನು ಆಹ್ವಾನಿಸಲು ನೀವು ಮುಕ್ತಾಯ ಮಾಡುವಿರಿ. ನೀವು ನಿಮ್ಮ ಸಾಧನೆಯ ಅಭ್ಯಾಸವನ್ನು ಹೇಗೆ ಮುಂದುವರೆಸುವಿರಿ? ಇವೆಲ್ಲವೂ ಮುಗಿದು ಹೋಗುತ್ತದೆ.

ಉನ್ನತ ಹುಟ್ಟು ಗುಣಗಳೊಂದಿಗೆ ಕೆಲವು ಜನರು ತಮ್ಮ ಹುಟ್ಟುಗುಣವನ್ನು ಬೇರೆಯವರ ಜೊತೆಗೆ ಕರ್ಮಕ್ಕಾಗಿ ಬದಲಾಯಿಸಿಕೊಳ್ಳುತ್ತಾರೆ. ಆ ವ್ಯಕ್ತಿ ಅಸ್ವಸ್ಥರಾಗಿರುತ್ತಾರೆ ಮತ್ತು ಬಹಳ ಕರ್ಮವನ್ನು ಹೊಂದಿರುತ್ತಾರೆ. ಗಂಭೀರವಾದ ಕಾಯಿಲೆಯಿರುವ ರೋಗಿಯನ್ನು ನೀವು ಗುಣಪಡಿಸಿದರೆ, ಚಿಕಿತ್ಸೆಯ ನಂತರ ಮನೆಯಲ್ಲಿ ನಿಮಗೆ ಬಹಳ ಅಹಿತಕರವೆನಿಸುತ್ತದೆ. ಹಿಂದೆ, ಬಹಳ ಜನರು ಒಬ್ಬ ರೋಗಿಯನ್ನು ನೋಡಿದ ನಂತರ ಈ ರೀತಿ ಅನುಭವಿಸಿದ್ದಾರೆ: ರೋಗಿಯು ಗುಣವಾಗುತ್ತಿದ್ದಾನೆ, ಆದರೆ ಮನೆಯಲ್ಲಿ ನೀವು ತೀರಾ ಅಸ್ವಸ್ಥರಾಗಿರುವಿರಿ. ಕಾಲಕಳೆದಂತೆ, ಇನ್ನೂ ಹೆಚ್ಚಿನ ಕರ್ಮ ನಿಮಗೆ ವರ್ಗಾವಣೆಯಾಗುವುದು; ಬೇರೆಯವರ ಕರ್ಮಕ್ಕಾಗಿ ನಿಮ್ಮ ಡ್ವವನ್ನು ನೀಡುವಿರಿ. ಕಳೆಯುವುದೂ ಇಲ್ಲ ಪಡೆಯುವುದೂ ಇಲ್ಲ. ಅಷ್ಟಾಗಿಯೂ ನಿಮಗೆ ಸಿಗುವುದು ಕಾಯಿಲೆಯಾದರೂ, ಡ್ವಗಾಗಿ ಕರ್ಮವನ್ನು ಕಳೆಯಬೇಕಾಗುತ್ತದೆ. ಈ ವಿಶ್ವಕ್ಕೆ ಈ ತತ್ವವಿದೆ ಏನೆಂದರೆ ಎಲ್ಲಿಯವರೆಗೆ ಇದನ್ನೇ ನೀವು ಪಡೆಯಲು ಬಯಸುವಿರೋ, ಅಲ್ಲಿಯವರೆಗೆ ಯಾರೂ ನಿಮ್ಮನ್ನು ತಡೆಯಲಾರರು ಮತ್ತು ಯಾರೊಬ್ಬರೂ ಕೂಡ ನಿಮ್ಮನ್ನು ಒಳ್ಳೆಯವರು ಎಂದು ಹೇಳಲಾರರು. ವಿಶ್ವಕ್ಕೆ ಒಂದು ನಿರ್ದಿಷ್ಟವಾದ ನಿಯಮವಿದೆ, ಏನೆಂದರೆ, ಹೆಚ್ಚು ಕರ್ಮವಿರುವ ಯಾವುದೇ ವ್ಯಕ್ತಿಯು ಒಬ್ಬ ಕೆಟ್ಟ ಮನುಷ್ಯನೆಂದು. ನೀವು ನಿಮ್ಮ ಹುಟ್ಟುಗುಣವನ್ನು ಇನ್ನೊಬ್ಬ ವ್ಯಕ್ತಿಯ ಕರ್ಮಕ್ಕಾಗಿ ಕೊಟ್ಟುಬಿಡುತ್ತಿದ್ದೀರಿ. ಹೆಚ್ಚು ಕರ್ಮದೊಂದಿಗೆ, ನೀವು ಸಾಧನೆಯ ಅಭ್ಯಾಸವನ್ನು ಹೇಗೆ ಮಾಡುವಿರಿ? ನಿಮ್ಮಲ್ಲಿರುವ ಹುಟ್ಟುಗುಣವು ಆ ವ್ಯಕ್ತಿಯಿಂದ ಸರ್ವನಾಶವಾಗುತ್ತದೆ. ಇದು ಭಯಾನಕವಲ್ಲವೇ? ಆ ವ್ಯಕ್ತಿಯ ರೋಗವು ಹೋಗಿದೆ; ಅವನಿಗೆ ಈಗ ಆರಾಮವೆನಿಸುತ್ತದೆ, ಆದರೆ ಮನೆಯಲ್ಲಿ ನೀವು ನೋವನ್ನು ಅನುಭವಿಸುತ್ತಿರುತ್ತೀರಿ. ಒಂದು ವೇಳೆ ನೀವು ಕೆಲವು ಕ್ಯಾನ್ಸರ್ ರೋಗಿಗಳನ್ನು ಗುಣಪಡಿಸಿದರೆ, ನೀವು ಅವರ ಸ್ಥಾನವನ್ನು ತೆಗೆದುಕೊಳ್ಳಬೇಕಾಗುತ್ತದೆ. ಇದು ಅಪಾಯಕರವಲ್ಲವೇ? ಅದು ಸದ್ಯಕ್ಕೆ ಇದೇ ರೀತಿಯಲ್ಲಿ ಇರುವುದು, ಮತ್ತು ಅನೇಕ ಜನರು ನಿಜಾಂಶವನ್ನು ತಿಳಿದಿಲ್ಲ.

ಹೆಸರುವಾಸಿಯಾಗಿದ್ದಾರೆಂದು ಸುಳ್ಳು ಚೀಗಾಂಗ್ ಗುರುಗಳಿಗೆ ನೀವು ಮೋಸ ಹೋಗದಿರಿ. ಚಿರಪರಿಚಿತನಾದ ವ್ಯಕ್ತಿಗೆ ಸಂಪೂರ್ಣ ಜ್ಞಾನವಿದೆ ಎಂದರ್ಥವಲ್ಲ. ಸಾಮಾನ್ಯ ಮಾನವನಿಗೆ ಏನು ಗೊತ್ತು? ವಿಷಯಗಳನ್ನು ಒಮ್ಮೆ ಉತ್ಪ್ರೇಕ್ಷಿಸಿ ಹೇಳುವುದರಿಂದ, ಅವರು ಅವನ್ನು ಸ್ವೀಕರಿಸುತ್ತಾರೆ. ಅವರು ಈಗ ಆ ಕಾರ್ಯಗಳನ್ನು ಮಾಡುವುದನ್ನು ನೀವು ನೋಡಿದರೂ ಕೂಡ, ಅವರು ಬೇರೆಯವರಿಗೆ ಹಾನಿಯುಂಟುಮಾಡುವುದಷ್ಟೇ ಅಲ್ಲದೇ ತಮಗೂ ಕೂಡ ಹಾನಿಯನ್ನುಂಟುಮಾಡಿಕೊಳ್ಳುತ್ತಾರೆ. ಒಂದೆರಡು ವರ್ಷಗಳಲ್ಲಿ ಅವರಿಗೆ ಏನಾಗುವುದೆಂದು ನೀವು ನೋಡುವಿರಿ. ಸಾಧನಾಭ್ಯಾಸವನ್ನು ಹೀಗೆ ಕೆಡಿಸಲು ಸಾಧ್ಯವಿಲ್ಲ. ಸಾಧನಾಭ್ಯಾಸವು ಕಾಯಿಲೆಗಳಿಗೆ ಚಿಕಿತ್ಸೆ ನೀಡಬಲ್ಲುದು, ಆದರೆ ಇದನ್ನು ರೋಗವನ್ನು ಗುಣಪಡಿಸುವ ಉದ್ದೇಶಕ್ಕೆ ಉಪಯೋಗಿಸಬಾರದು. ಇದು ಸಾಮಾನ್ಯ ಮಾನವನ ತಂತ್ರವಾಗಿರದೆ ಒಂದು ಅಸಾಮಾನ್ಯ ವಿಷಯವಾಗಿದೆ. ನಿಮ್ಮ ಈ ರೀತಿಯ ಹಾಳುಮಾಡುವಿಕೆಯನ್ನು ಸಂಪೂರ್ಣವಾಗಿ ನಿಷೇಧಿಸಲಾಗಿದೆ. ಈಗಿನ ಕಾಲದಲ್ಲಿ ಕೆಲವು ಸುಳ್ಳು ಚೀಗಾಂಗ್ ಗುರುಗಳು ವಿಷಯಗಳ ಬಗ್ಗೆ ಗಲಿಬಿಲಿಯನ್ನುಂಟುಮಾಡಿದ್ದಾರೆ, ಮತ್ತು ಚೀಗಾಂಗ್‌ನ್ನು ತಮ್ಮ ಪ್ರತಿಷ್ಟೆ ಅಥವ ಆಸ್ತಿಯನ್ನು ಉಳಿಸಿಕೊಳ್ಳುವ ಒಂದು ಮಾಧ್ಯಮವಾಗಿ ಬಳಸುತ್ತಿದ್ದಾರೆ. ಇವರೆಲ್ಲರೂ ತಮ್ಮ ದುಷ್ಟಶಕ್ತಿಯನ್ನು ಬೆಳೆಸುವಂತಹ ತಾಂತ್ರಿಕರು, ಮತ್ತು ಇವರ ಸಂಖ್ಯೆಯು ನಿಜವಾದ ಚೀಗಾಂಗ್ ಗುರುಗಳ ಸಂಖ್ಯೆಯನ್ನು ಮೀರಿ ಅನೇಕ ಪಟ್ಟು ಇದೆ. ಸಾಮಾನ್ಯ ಜನರು ವಿಷಯಗಳನ್ನು ಅದು ಹಾಗಿದೆ ಹೀಗಿದೆ ಎಂದು ಹೇಳುತ್ತಾರೆ, ಮತ್ತು ಈ ರೀತಿ ಮಾಡುತ್ತಾರೆ, ಅವನ್ನೆಲ್ಲಾ ನೀವು ನಂಬುವಿರಾ? ಚೀಗಾಂಗ್ ಕೂಡ ಇದೇ ರೀತಿಯಾಗಿ ಇದೆ ಎಂದು ನಿಮಗೆ ಅನಿಸಬಹುದು, ಆದರೆ ಅದು ಹಾಗಲ್ಲ. ನಾನು ಹೇಳುತ್ತಿರುವುದು ನಿಜವಾದ ತತ್ವ.

---

**7 ಲಾವ್‌ಗಾಂಗ್ ಬಿಂದು**–ಹಸ್ತದ ಮಧ್ಯದಲ್ಲಿರುವ ಒಂದು ಆಕ್ಯುಪಂಕ್ಚರ್ ಬಿಂದು

ಈ ಸಾಮಾನ್ಯ ಮಾನವರಲ್ಲಿ ಬೇರೆ ಬೇರೆ ರೀತಿಯ ಸಮಾಜದ ವಹಿವಾಟುಗಳು ನಡೆದಾಗ, ವೈಯಕ್ತಿಕ ಉನ್ನತಿಗೋಸ್ಕರ ಕೆಟ್ಟ ಕಾರ್ಯಗಳನ್ನು ಮಾಡುತ್ತಾರೆ. ಮತ್ತು ಇನ್ನೊಬ್ಬರ ಋಣದಲ್ಲಿ ಬೀಳುತ್ತಾರೆ. ಋಣವನ್ನು ತೀರಿಸಲು ಒಬ್ಬನು ನೋವನ್ನು ಅನುಭವಿಸಲೇ ಬೇಕು. ಒಂದು ವೇಳೆ ನೀವು ಸ್ವ ಇಚ್ಛೆಯಿಂದ ಕಾಯಿಲೆಗೆ ಚಿಕಿತ್ಸೆ ನೀಡಿದರೆ, ಕಾಯಿಲೆ ಗುಣಪಡಿಸಲು ನಿಮಗೆ ಅನುಮತಿಸುವುದಾದರೂ ಹೇಗೆ? ಬುದ್ಧರು ಎಲ್ಲಾ ಕಡೆಯೂ ಇದ್ದಾರೆ. ಇಷ್ಟೊಂದು ಬುದ್ಧರು ಇರುವಾಗ, ಈ ತರಹದ ಕೆಲಸವನ್ನೇಕೆ ಅವರು ಮಾಡುವುದಿಲ್ಲ? ಬುದ್ಧನು ಈ ಇಡೀ ಮಾನವ ಕುಲವನ್ನು ಸುಖವಾಗಿಸಿದರೆ ಎಷ್ಟೊಂದು ಅದ್ಭುತವಾಗಿರುತ್ತದೆ! ಅದನ್ನೇಕೆ ಇವನು ಮಾಡುವುದಿಲ್ಲ? ಒಬ್ಬರು ಅವರ ಕರ್ಮಗಳನ್ನು ಅವರೇ ಅನುಭವಿಸಬೇಕು, ಮತ್ತು ಈ ತತ್ವವನ್ನು ಉಲ್ಲಂಘಿಸುವುದಕ್ಕೆ ಯಾರೂ ಧೈರ್ಯ ಮಾಡುವುದಿಲ್ಲ. ಸಾಧನೆಯ ಅಭ್ಯಾಸದ ಮಾರ್ಗದಲ್ಲಿ, ಒಬ್ಬ ಅಭ್ಯಾಸಿಗನು ಪ್ರಸಂಗವಿದ್ದಲ್ಲಿ ಇನ್ನೊಬ್ಬ ವ್ಯಕ್ತಿಗೆ ಕರುಣೆಯನ್ನು ತೋರಿ ಸಹಾಯ ಮಾಡಬಹುದು; ಹಾಗಾಗ್ಯೂ ಅದು ರೋಗವನ್ನು ಕೇವಲ ಮುಂದೆ ಹಾಕುತ್ತದೆ. ಈಗ ನೋವನ್ನು ನೀವು ಅನುಭವಿಸದಿದ್ದರೆ, ಮುಂದೆ ಖಂಡಿತವಾಗಿಯೂ ಅನುಭವಿಸುತ್ತೀರಿ. ಹಾಗೂ, ಒಬ್ಬನು ಹಣವನ್ನು ಕಳೆದುಕೊಳ್ಳುವಂತೆ ಇದನ್ನು ಮಾರ್ಪಾಡಿಸಬಹುದು ಅಥವಾ ರೋಗಿಯಾಗುವ ಬದಲಿಗೆ ಯಾವುದಾದರೂ ಒಂದು ಕಷ್ಟಕ್ಕೆ ಸಿಲುಕಿಕೊಳ್ಳುವಂತಾಗಬಹುದು. ಇದು ಈ ರೀತಿಯಾಗಿರಬಹುದು. ವ್ಯಕ್ತಿಯ ಕರ್ಮವನ್ನು ಒಂದೇ ಸಲ ನಿಜವಾಗಿಯೂ ನಿವಾರಿಸಬೇಕೆಂದರೆ ಅದು ಅಭ್ಯಾಸಿಗನಿಗೆ ಮಾತ್ರ ಮಾಡಲು ಸಾಧ್ಯ, ಮತ್ತು ಸಾಮಾನ್ಯ ಮಾನವರಿಗಲ್ಲ. ನಾನು ಇಲ್ಲಿ ಕೇವಲ ನನ್ನ ಸಾಧನೆಯ ತತ್ವಗಳನ್ನಷ್ಟೇ ಬೋಧಿಸುತ್ತಿಲ್ಲ. ನಾನು ಇಲ್ಲಿ ಇಡೀ ವಿಶ್ವದ ತತ್ವವನ್ನು ಹೇಳುತ್ತಿದ್ದೇನೆ, ಮತ್ತು ಅಭ್ಯಾಸಿಗರ ಸಮುದಾಯದಲ್ಲಿ ನಿಜ ಸಂಗತಿಗಳ ಬಗ್ಗೆ ಚರ್ಚಿಸುತ್ತಿದ್ದೇನೆ.

ಇಲ್ಲಿ, ನಾವು ನಿಮಗೆ ಕಾಯಿಲೆಯನ್ನು ಗುಣಪಡಿಸುವುದನ್ನು ಕಲಿಸುವುದಿಲ್ಲ. ನಾವು ನಿಮ್ಮನ್ನು ಶ್ರೇಷ್ಠವಾದ ದಾರಿಯಲ್ಲಿ, ಒಳ್ಳೆಯ ಹಾದಿಯಲ್ಲಿ ಮುನ್ನಡೆಸುತ್ತಿದ್ದೇವೆ ಮತ್ತು ನಾವು ನಿಮ್ಮನ್ನು ಮೇಲಕ್ಕೇರಿಸುತ್ತಿದ್ದೇವೆ. ಆದ್ದರಿಂದ, ನಾನು ನನ್ನ ಉಪನ್ಯಾಸದಲ್ಲಿ ಯಾವಾಗಲೂ ಫಾಲೂನ್‌ದಾಫಾ ಅಭ್ಯಾಸಿಗರಿಗೆ ಕಾಯಿಲೆಗೆ ಚಿಕಿತ್ಸೆ ನೀಡುವ ಅನುಮತಿ ಇಲ್ಲವೆಂದು ಹೇಳುತ್ತಿದ್ದೇನೆ. ನೀವು ಕಾಯಿಲೆಗೆ ಚಿಕಿತ್ಸೆ ನೀಡಿದರೆ, ನೀವು ಫಾಲೂನ್‌ದಾಫಾದ ಒಬ್ಬ ಅಭ್ಯಾಸಿಗರಲ್ಲ. ಏಕೆಂದರೆ ನಾವು ನಿಮ್ಮನ್ನು ಒಳ್ಳೆಯ ಮಾರ್ಗದತ್ತ ನಡೆಸಿಕೊಂಡು ಹೋಗುತ್ತಿದ್ದೇವೆ, ಮೂರು-ವಿಶ್ವದೊಳಗಿನ-ಫಾ ಸಾಧನೆಯ ಅಭ್ಯಾಸದಲ್ಲಿ ನಿಮ್ಮ ದೇಹವನ್ನು ಅದು ಉನ್ನತ ಶಕ್ತಿಯ ಕಣವಾಗಿ ಪರಿವರ್ತನೆಯಾಗುವವರೆಗೂ ಸ್ಥಿರತೆಯಿಂದ ಶುದ್ಧೀಕರಿಸಲಾಗುತ್ತಿರುವುದು. ನಿಮ್ಮ ದೇಹದಲ್ಲಿ ಕಪ್ಪುವಸ್ತುಗಳನ್ನು ಇನ್ನೂ ಸಂಗ್ರಹಿಸುತ್ತಾ ಇದ್ದರೆ ನೀವು ಸಾಧನೆಯನ್ನು ಹೇಗೆ ಅಭ್ಯಸಿಸುವಿರಿ? ಅವೆಲ್ಲವೂ ಕರ್ಮ! ನಿಮಗೆ ಸಾಧನೆಯ ಅಭ್ಯಾಸವನ್ನು ಮಾಡಲು ಆಗುವುದೇ ಇಲ್ಲ. ಅತೀ ಹೆಚ್ಚಿನ ಕರ್ಮದೊಂದಿಗೆ, ನೀವು ಅದನ್ನು ಸಹಿಸಿಕೊಳ್ಳಲೂ ಕೂಡ ಕಷ್ಟವಾಗುತ್ತದೆ. ನೀವು ಹೆಚ್ಚು ನೋವನ್ನನುಭವಿಸಿದರೂ, ಸಾಧನೆಯ ಅಭ್ಯಾಸವನ್ನು ಮಾಡಲು ನಿಮಗೆ ಸಾಧ್ಯವಾಗುವುದಿಲ್ಲ. ಇದೇ ಕಾರಣ. ನಾನು ದಾಫಾವನ್ನು ಸಾರ್ವಜನಿಕಗೊಳಿಸಿದ್ದೇನೆ, ಮತ್ತು ಇನ್ನೂ ಕೂಡ ನಿಮಗೆ ನಾನು ಏನು ಬೋಧಿಸಿದ್ದೇನೆ ಎಂಬುದು ತಿಳಿಯದಿರಬಹುದು. ಈ ದಾಫಾವನ್ನು ಸಾರ್ವಜನಿಕಗೊಳಿಸ ಬಹುದಾಗಿರುವುದರಿಂದ, ಇದನ್ನು ರಕ್ಷಿಸಲು ದಾರಿಗಳಿವೆ. ನೀವು ಬೇರೆಯವರ ಕಾಯಿಲೆಗೆ ಚಿಕಿತ್ಸೆ ನೀಡಲು ಹೋದರೆ, ಸಾಧನೆಗಾಗಿ ನಿಮ್ಮ ದೇಹಕ್ಕೆ ಕೊಟ್ಟಿದ್ದನ್ನೆಲ್ಲಾ ನನ್ನ ಫಾಷೆನ್ ಹಿಂತೆಗೆದುಕೊಳ್ಳುತ್ತದೆ. ಇಷ್ಟೊಂದು ಅಮೂಲ್ಯವಾದುದನ್ನು ಕೇವಲ ನಿಮ್ಮ ಪ್ರತಿಷ್ಟೆ ಮತ್ತು ಸ್ವಂತ ಇಚ್ಛೆಗೋಸ್ಕರ ಸಹಜವಾಗಿ ಹಾಳುಮಾಡಲು ಅನುಮತಿಸುವುದು ನಮಗೆ ಸಾಧ್ಯವಿಲ್ಲ. ನೀವು ಫಾಗೆ ಬೇಕಾದ ಅಗತ್ಯತೆಗಳನ್ನು ನೀವು ಅನುಸರಿಸದೆ ಹೋದಲ್ಲಿ, ನೀವು ಫಾಲೂನ್‌ದಾಫಾ ಅಭ್ಯಾಸಿಗರಲ್ಲ, ಏಕೆಂದರೆ ನೀವು ಸಾಮಾನ್ಯ ಮಾನವನಾಗಿರಬೇಕೆಂದು ಬಯಸುವಿರಿ, ನಿಮ್ಮ ದೇಹವನ್ನು ಸಾಮಾನ್ಯ ಮಾನವನ ಮಟ್ಟಕ್ಕೆ ಮರುಹೊಂದಿಸಲಾಗುತ್ತದೆ ಮತ್ತು ಕೆಟ್ಟ ವಸ್ತುಗಳನ್ನು ನಿಮಗೆ ಹಿಂತಿರುಗಿಸಲಾಗುತ್ತದೆ.

ನಿನ್ನೆ ನನ್ನ ಉಪನ್ಯಾಸದ ನಂತರ, ನಿಮ್ಮಲ್ಲಿ ಅನೇಕರು ನಿಮ್ಮ ಇಡೀ ದೇಹವು ಹಗುರವಾಗಿರುವುದಾಗಿ ಅನುಭವಿಸಿದರು. ಏನೇ ಇರಲಿ, ಗಂಭೀರ ಕಾಯಿಲೆಯಿರುವ ಕೆಲವೇ ಕೆಲವರು

ನಿನ್ನೆ ಮುನ್ನಡೆದು ಬಳಲಿಕೆಯನ್ನು ಅನುಭವಿಸಿದರು. ನಿನ್ನೆ ನಿಮ್ಮ ದೇಹದಲ್ಲಿದ್ದ ಕೆಟ್ಟ ವಸ್ತುಗಳನ್ನು ತೆಗೆದ ನಂತರ ನಿಮ್ಮಲ್ಲಿ ಬಹಳಷ್ಟು ಜನರು ತಮ್ಮ ದೇಹವು ತುಂಬಾ ಹಗುರವಾಗಿಯೂ ಮತ್ತು ಆರಾಮದಾಯಕವಾಗಿಯೂ ಇರುವುದನ್ನು ಅನುಭವಿಸಿದ್ದಾರೆ. ಏನೇ ಇರಲಿ, ನಮ್ಮ ವಿಶ್ವಕ್ಕೆ "ಕಳೆಯುವುದೂ ಇಲ್ಲ ಪಡೆಯುವುದೂ ಇಲ್ಲ" ಈ ತತ್ವವಿದೆ. ನಾವು ನಿಮಗಾಗಿ ಎಲ್ಲವನ್ನೂ ತೆಗೆಯಲು ಸಾಧ್ಯವಿಲ್ಲ. ನೀವು ಯಾವುದೇ ರೀತಿಯ ದುಃಖವನ್ನು ಅನುಭವಿಸದೆ ಇರುವುದನ್ನು ಸಂಪೂರ್ಣವಾಗಿ ನಿಷೇಧಿಸಿದೆ. ಅಂದರೆ, ನಾವು ನಿಮ್ಮ ಕಾಯಿಲೆಯ ಮತ್ತು ನಿಮ್ಮ ಅನಾರೋಗ್ಯದ ಮೂಲ ಕಾರಣವನ್ನು ತೆಗೆದಿದ್ದೇವೆ. ಆದರೆ ಕಾಯಿಲೆಯ ಕ್ಷೇತ್ರವು ನಿಮಗೆ ಇನ್ನೂ ಇದೆ. ಅತ್ಯಂತ ಕೆಳಸ್ಥರದಲ್ಲಿ ತೆರೆಯುವ ದಿವ್ಯಚಕ್ಷುವಿನಿಂದ ಒಬ್ಬ ವ್ಯಕ್ತಿಯು ನಿಮ್ಮ ದೇಹದಲ್ಲಿ ಕಪ್ಪು ಚೀ ಗುಚ್ಛವನ್ನು ಮತ್ತು ರಾಡಿಯಾದ ರೋಗಗ್ರಸ್ಥ ಚೀಯನ್ನು ನೋಡಬಹುದು. ಇದೂ ಕೂಡ ಉನ್ನತ ಸಾಂದ್ರತೆಯ ಕಪ್ಪು ಚೀಯ ಸಾಂದ್ರೀಕರಿಸಿದ ಒಂದು ಗುಚ್ಛವಾಗಿದೆ. ಇದು ಒಂದು ಸಲ ಹಬ್ಬಿದಾಗ, ನಿಮ್ಮ ದೇಹದ ಎಲ್ಲಾ ಕಡೆಯೂ ಹರಡುತ್ತದೆ.

ಈ ದಿನದಿಂದ ಕೆಲವರು ತಮ್ಮ ಇಡೀ ಶರೀರದಲ್ಲಿ ಚಳಿ ಅನುಭವಿಸಬಹುದು, ತುಂಬಾ ಜೋರಾಗಿ ನೆಗಡಿ ಅನುಭವಿಸಬಹುದು ಮತ್ತು ಅವರ ಮೂಳೆಗಳೂ ಸಹ ನೋಯಬಹದು. ಬಹಳಷ್ಟು ಜನರಿಗೆ ಎಲ್ಲೋ ಒಂದು ಕಡೆ ಆರಾಮವಿಲ್ಲ ಎಂದೆನಿಸಬಹುದು. ನಿಮ್ಮ ಕಾಲುಗಳು ನೋಯಬಹುದು ಮತ್ತು ನಿಮ್ಮ ತಲೆ ಭಾರವಾಗುತ್ತಿದೆ ಎಂದೆನಿಸಬಹುದು. ಕಾಯಿಲೆ ಬಿದ್ದ ನಿಮ್ಮ ದೇಹದ ಒಂದು ಭಾಗವು ಚೀಗಾಂಗ್ ವ್ಯಾಯಾಮದಿಂದ ಅಥವ ಚೀಗಾಂಗ್ ಗುರುಗಳಿಂದ ಗುಣಪಟ್ಟಿದೆ ಎಂದು ತಿಳಿದಿದ್ದ ನಿಮಗೆ, ಆ ಭಾಗದಲ್ಲಿ ಮತ್ತೆ ಕಾಯಿಲೆ ಬರುವುದು. ಇದು ಏಕೆಂದರೆ ಆ ಚೀಗಾಂಗ್ ಗುರುಗಳು ನಿಮ್ಮ ರೋಗವನ್ನು ಸಂಪೂರ್ಣವಾಗಿ ಗುಣಪಡಿಸಿರಲಿಲ್ಲ – ಅವನು ಅದನ್ನು ಮುಂದೂಡಿದ್ದ ಅಷ್ಟೇ. ಅದು ಆಗ ಬರದಿದ್ದರೆ ಮುಂದೊಂದು ದಿನ ಮತ್ತೇ ಬಂದೆ ಬರುತ್ತದೆ ಏಕೆಂದರೆ ಅದು ಅಲ್ಲಿಯೇ ಇತ್ತು. ನಾವು ಅದನ್ನು ಮೂಲದಿಂದಲೇ ಅಗೆಯಬೇಕು ಮತ್ತು ಅದನ್ನು ಸಂಪೂರ್ಣವಾಗಿ ನಾಶಮಾಡಬೇಕು. ಈ ರೀತಿಯಾಗಿ, ನಿಮ್ಮ ಅಸ್ವಸ್ಥತೆಯು ಮತ್ತೇ ಸಂಭವಿಸಿದೆ ಎಂದು ನಿಮಗೆ ಅನಿಸಬಹುದು. ನಿಮ್ಮ ಕರ್ಮವನ್ನು ಮೂಲಭೂತವಾಗಿ ತೆಗೆಯಬೇಕು. ಹೀಗಾಗಿ, ನಿಮಗೆ ಪ್ರತಿಕ್ರಿಯೆಗಳಿರುತ್ತವೆ. ಕೆಲವರಿಗೆ ಎಲ್ಲೋ ಒಂದು ಕಡೆ ಭೌತಿಕ ಪ್ರತಿಕ್ರಿಯೆಗಳಾಗಬಹುದು ಕೆಲವರಿಗೆ ಒಂದು ರೀತಿಯಾಗಿ ಆರಾಮಾಗಿಲ್ಲ ಎಂದು ಅನಿಸಬಹುದು ಅಥವ ಇನ್ನೊಂದು ರೀತಿಯಾಗಿ ಬದಲಾವಣೆ ಆಗುತ್ತಿದೆ ಎಂದೆನಿಸಬಹುದು. ಇವೆಲ್ಲವೂ ಸಾಮಾನ್ಯ. ನಾನು ಎಲ್ಲರಿಗೂ ಹೇಳುತ್ತಿದ್ದೇನೆ ನಿಮಗೆ ಎಷ್ಟೇ ಕಷ್ಟವೆನಿಸಿದರೂ ಕೂಡ, ಈ ಪಾಠಕ್ಕೆ ಹಾಜರಾಗುವುದನ್ನು ನೀವು ಮುಂದುವರಿಸಲೇಬೇಕು. ಒಮ್ಮೆ ನೀವು ಪಾಠಶಾಲೆಯಲ್ಲಿ ಕಾಲಿಟ್ಟರೆ ಸಾಕು, ನಿಮ್ಮೆಲ್ಲರ ಕಾಯಿಲೆಯ ಲಕ್ಷಣಗಳು ಮರೆಯಾಗುತ್ತವೆ ಮತ್ತು ಯಾವುದೇ ರೀತಿಯ ಅಪಾಯ ಇರುವುದಿಲ್ಲ. ಇಲ್ಲಿ ಎಲ್ಲರಿಗೂ ಹೇಳಬೇಕಾದ ಒಂದು ವಿಷಯವಿದೆ: ನೀವು "ಕಾಯಿಲೆ" ಯಿಂದ ಎಷ್ಟೇ ಬಳಲಿದರೂ ಕೂಡ, ಇಲ್ಲಿಗೆ ಬರುವುದನ್ನು ನೀವು ಮುಂದುವರೆಸುವಿರಿ ಎಂದು ನಾನು ಆಶಿಸುತ್ತೇನೆ, ಏಕೆಂದರೆ ಫಾ ಪಡೆಯುವುದು ತುಂಬಾ ಕಷ್ಟಕರ. ನಿಮಗೆ ಯಾವಾಗ ತೀರ ಕಷ್ಟಕರ ಎಂದೆನಿಸುವುದೋ, ತುತ್ತತುದಿಯನ್ನು ಮುಟ್ಟಿದಾಕ್ಷಣ ಎಲ್ಲವೂ ಬದಲಾಗುತ್ತದೆ ಎಂಬುದನ್ನು ಇದು ಸೂಚಿಸುತ್ತದೆ. ನಿಮ್ಮ ಇಡೀ ಶರೀರವು ಶುದ್ಧಗೊಳ್ಳುತ್ತದೆ ಮತ್ತು ಅದನ್ನು ಸಂಪೂರ್ಣವಾಗಿ ಪರಿಶುದ್ಧಗೊಳಿಸಬೇಕು. ನಿಮ್ಮ ರೋಗಕ್ಕೆ ಕಾರಣವಾಗಿದ್ದನ್ನು ತೆಗೆದಾಗಿದೆ, ಮತ್ತು ಏನು ಉಳಿದಿದೆಯೆಂದರೆ ಆ ಚೂರು ಕಪ್ಪು ಚೀ ನಿಮಗೆ ಸ್ವಲ್ಪ ಕಷ್ಟ ಮತ್ತು ನೋವನ್ನು ಕೊಡುವುದಕ್ಕೆ ಇದೂ ಕೂಡ ತಾನಾಗಿಯೇ ಹೊರಗೆ ಬರುತ್ತದೆ. ಸ್ವಲ್ಪವಾದರೂ ನೀವು ಕಷ್ಟವನ್ನು ಅನುಭವಿಸದಿರುವುದನ್ನು ನಿಷೇಧಿಸಿದೆ

ಈ ಸಾಮಾನ್ಯ ಮಾನವ ಸಮಾಜದಲ್ಲಿ, ನೀವು ಬೇರೆಯವರೊಂದಿಗೆ ಖ್ಯಾತಿಗಾಗಿ ಮತ್ತು ಸ್ವಂತ ಲಾಭಕ್ಕೋಸ್ಕರ ಸ್ಪರ್ಧಿಸುತ್ತೀರಿ. ನಿಮಗೆ ಚೆನ್ನಾಗಿ ನಿದ್ದೆಯೂ ಬರುವುದಿಲ್ಲ ಮತ್ತು ಊಟವೂ ಸೇರುವುದಿಲ್ಲ, ಹಾಗೂ ನಿಮ್ಮ ದೇಹವೂ ಕೂಡ ತೀರ ಕೆಟ್ಟ ಆಕಾರದಲ್ಲಿರುತ್ತದೆ. ನಿಮ್ಮ ದೇಹವನ್ನು ಬೇರೊಂದು ಆಯಾಮದಿಂದ ನೋಡಿದಾಗ, ಮೂಳೆಗಳೆಲ್ಲಾ ಕಪ್ಪಾಗಿರುತ್ತವೆ. ಈ ತರಹದ ದೇಹವನ್ನಿಟ್ಟುಕೊಂಡು ಎಲ್ಲವೂ ಒಂದೇ ಬಾರಿಗೆ ಶುದ್ಧೀಕರಿಸಿದಾಗ ನಿಮಗೆ ಯಾವುದೇ ರೀತಿಯ

ಪ್ರತಿಕ್ರಿಯೆಗಳಾಗದೆ ಇರುವುದು ಅಸಾಧ್ಯ, ಆದ್ದರಿಂದ ನಿಮ್ಮಲ್ಲಿ ಪ್ರತಿಕ್ರಿಯೆಗಳು ಇರುತ್ತವೆ. ಕೆಲವರಿಗೆ ವಾಂತಿಯಾಗುತ್ತದೆ ಮತ್ತು ಅತಿಸಾರವಾಗಬಹುದು. ಬೇರೆ ಬೇರೆ ಸ್ಥಳಗಳಿಂದ ಬಹಳಷ್ಟು ಅಭ್ಯಾಸಿಗರು ಹಿಂದೆ, ಈ ವಿವಾದದ ಕುರಿತು ತಮ್ಮ ಅನುಭವದ ವರದಿಯಲ್ಲಿ ಕೇಳಿದ್ದಾರೆ, "ಗುರುಗಳೇ ನಿಮ್ಮ ತರಗತಿಯನ್ನು ಕೇಳಿದ ನಂತರ ನಾನು ಮನೆಯನ್ನು ಮುಟ್ಟುವವರೆಗೆ ಶೌಚಾಲಯವನ್ನು ಹುಡುಕುತ್ತಾ ಹೋದೆ". ಇದು ಏಕೆಂದರೆ ನಿಮ್ಮ ಒಳಅಂಗಗಳನ್ನೆಲ್ಲ ಶುದ್ಧೀಕರಿಸಲೇಬೇಕು, ಕೆಲವರು ನಿದ್ದೆ ಹೋಗಬಹುದು ಮತ್ತು ನನ್ನ ಉಪನ್ಯಾಸ ಮುಗಿದ ಕೂಡಲೇ ಅವರು ಎದ್ದು ಕುಳಿತುಕೊಳ್ಳುತ್ತಾರೆ. ಇದು ಏಕೆ ಹೀಗೆ? ಏಕೆಂದರೆ ಅವರ ಮಿದುಳಿನಲ್ಲಿ ರೋಗವಿರುತ್ತದೆ ಅದನ್ನು ಗುಣಪಡಿಸಬೇಕಾಗಿರುತ್ತದೆ. ಅವನ ಮಿದುಳಿನ ಮೇಲೆ ಕೆಲಸ ಮಾಡತ್ತಿದ್ದಲ್ಲಿ, ಇದನ್ನು ತಡೆದುಕೊಳ್ಳುವ ಶಕ್ತಿ ಇರುವುದಿಲ್ಲ. ಆದ್ದರಿಂದ, ಒಬ್ಬರನ್ನು ಅನಸ್ತೇಷಿಯ ಸ್ಥಿತಿಯಲ್ಲಿಡಬೇಕು ಅಥವ ಮೂರ್ಛೆಗೊಳಿಸಬೇಕು. ಇಲ್ಲವಾದಲ್ಲಿ, ಕೆಲವರಿಗೆ ನಾನು ಹೇಳುವುದನ್ನು ಕೇಳುವುದಕ್ಕೆ ಯಾವುದೇ ರೀತಿಯ ತೊಂದರೆ ಆಗುವುದಿಲ್ಲ. ಅವರು ಆರಾಮವಾಗಿ ಮಲಗಿದರೂ, ಒಂದೂ ಪದ ಬಿಡದೆ ಎಲ್ಲವನ್ನೂ ಕೇಳಿಸಿಕೊಳ್ಳುತ್ತಾರೆ. ಆನಂತರ ಅವರು ಶಕ್ತಿವಂತರಾಗುತ್ತಾರೆ. ಆಮೇಲೆ ಅವರು ಎರಡು ದಿನ ಮಲಗದೆ ಹೋದರು ಅವರಿಗೆ ಮಲಗಬೇಕೆನ್ನಿಸುವುದಿಲ್ಲ. ಸರಿಪಡಿಸಲು ಅಗತ್ಯವಿರುವ ಬೇರೆ ಬೇರೆ ಲಕ್ಷಣಗಳಿರುತ್ತವೆ. ನಿಮ್ಮ ಸಂಪೂರ್ಣ ದೇಹವನ್ನು ಶುದ್ಧೀಕರಿಸಲಾಗುತ್ತದೆ.

ನೀವು ನಿಜವಾಗಿಯೂ ಫಾಲೂನ್‌ದಾಫಾ ಅಭ್ಯಾಸಿಗರಾಗಿದ್ದರೆ, ಮತ್ತುನೀವು ವ್ಯಾಮೋಹಗಳನ್ನು ಬಿಡುವಿರಾದರೆ, ಪ್ರತಿಯೊಬ್ಬರಿಗೂ ಈ ಸಮಯದಿಂದ ಪ್ರತಿಕ್ರಿಯೆಗಳಾಗುತ್ತವೆ. ಯಾರಿಗೆ ತಮ್ಮ ವ್ಯಾಮೋಹವನ್ನು ಬಿಡುವುದಕ್ಕೆ ಆಗುವುದಿಲ್ಲವೋ ಅವರು ಅವನ್ನು ಬಿಟ್ಟಿದ್ದೇವೆಂದು ಹೇಳಿಕೊಳ್ಳುತ್ತಾರೆ, ಆದರೆ ನಿಜವಾಗಿಯೂ ಅವರು ಅದನ್ನು ಬಿಟ್ಟಿರುವುದಿಲ್ಲ. ಆದ್ದರಿಂದ ಇದನ್ನು ಪಡೆಯುವುದು ತುಂಬಾ ಕಷ್ಟಕರ. ನಾನು ಹೇಳಿರುವ ಉಪನ್ಯಾಸದಲ್ಲಿ ಬರುವ ವಿಷಯವನ್ನು ಕಾಲ ಕಳೆದಂತೆ ಅರಿತುಕೊಳ್ಳುವ ಇನ್ನೂ ಕೆಲವರಿದ್ದಾರೆ. ಅವರು ತಮ್ಮ ವ್ಯಾಮೋಹಗಳನ್ನು ಬಿಡಲು ಆರಂಭಿಸುತ್ತಾರೆ ಮತ್ತು ಅವರ ದೇಹವು ಸಂಪೂರ್ಣವಾಗಿ ಪರಿಶುದ್ಧಗೊಳ್ಳುತ್ತದೆ. ಬೇರೆಯವರ ದೇಹಗಳೂ ಹಗುರವಾಗಿದ್ದಲ್ಲಿ, ಇವರ ಕಾಯಿಲೆಯು ಈಗ ತಾನೇ ಗುಣಹೊಂದುವ ಮತ್ತು ಆರಾಮವಿಲ್ಲದ ಹಾಗೆ ಅನಿಸುತ್ತದೆ. ಪ್ರತೀ ವರ್ಗದಲ್ಲೂ ಕಳಪೆ ಸಂಸ್ಕಾರದ ಗುಣವುಳ್ಳ ಕೆಲವು ಜನರು ಹಿಂದೆ ಉಳಿದು ಬಿಡುತ್ತಾರೆ. ಆದ್ದರಿಂದ, ನೀವು ಏನನ್ನು ಎದುರಿಸಿದರೂ ಕೂಡ ಅವೆಲ್ಲವೂ ಸಹಜ. ಬೇರೆ ಸ್ಥಳದಲ್ಲೂ ನಾನು ತರಗತಿಯನ್ನು ತೆಗೆದುಕೊಂಡಾಗಲೆಲ್ಲ ಈ ತರಹದ ಸನ್ನಿವೇಶಗಳು ಯಾವಾಗಲೂ ಉದ್ಭವಿಸುತ್ತಿದ್ದವು. ಕೆಲವರು ಅತ್ಯಂತ ಕಷ್ಟದಲ್ಲಿದಲ್ಲಿರುತ್ತಿದ್ದರು ಮತ್ತು ಅವರ ಜಾಗವನ್ನು ಬಿಟ್ಟು ಕದಲುತ್ತಲೂ ಇರಲಿಲ್ಲ, ಅವರಿಗೆ ಚಿಕಿತ್ಸೆ ನೀಡುವುದಕ್ಕಾಗಿ ನಾನು ಪೋಡಿಯಂನಿಂದ ಕೆಳಗಿಳಿದು ಬರುವುದನ್ನೇ ಅವರು ಎದುರು ನೋಡುತ್ತಿದ್ದರು. ನಾನು ಅದನ್ನು ಮಾಡುತ್ತಿರಲಿಲ್ಲ. ಈ ಪರೀಕ್ಷೆಯಲ್ಲಿ ನೀವು ಉತ್ತೀರ್ಣಗೊಳ್ಳದೆ ಹೋದರೆ, ಭವಿಷ್ಯದಲ್ಲಿ ನೀವು ಸಾಧನೆಯ ಅಭ್ಯಾಸವನ್ನು ಹೇಗೆ ಮಾಡುವಿರಿ ಮತ್ತು ದೊಡ್ಡ ದೊಡ್ಡ ತೊಂದರೆಗಳು ಬಂದಾಗ ಹೇಗೆ ಎದುರಿಸುವಿರಿ? ಇಂಥ ಚಿಕ್ಕ ಕಷ್ಟದಿಂದ ಹೊರಬರಲು ನಿಮಗೆ ಸಾಧ್ಯವಿಲ್ಲವೇ? ಎಲ್ಲರಿಂದಲೂ ಸಾಧ್ಯ. ಆದ್ದರಿಂದ ಯಾರೂ ಕೂಡ ನನ್ನಲ್ಲಿ ರೋಗವನ್ನು ಗುಣಪಡಿಸುವ ಅಪೇಕ್ಷೆಯಿಂದ ಬರಬಾರದು, ಮತ್ತು ನಾನು ಅದನ್ನು ಗಣಪಡಿಸುವುದೂ ಇಲ್ಲ. ಒಂದು ಸಲ ನೀವು ರೋಗವೆಂಬ ಪದವನ್ನು ತಂದಿರೆಂದರೆ, ನಾನು ಅದನ್ನು ಕೇಳುವುದಕ್ಕೂ ಇಷ್ಟಪಡುವುದಿಲ್ಲ.

ಮಾನವರನ್ನು ಉಳಿಸುವುದು ತುಂಬಾ ಕಷ್ಟ. ಪ್ರತಿಯೊಂದು ವರ್ಗದಲ್ಲಿ ಬೇರೆಯವರೊಂದಿಗೆ ಮುಂದೆ ಹೋಗಲು ಸಾಧ್ಯವಿಲ್ಲದಿರುವ ಶೇಕಡ ಹತ್ತು ಅಥವ ಐದು ಜನರು ಯಾವಾಗಲೂ ಇದ್ದೇ ಇರುತ್ತಾರೆ. ಎಲ್ಲರಿಗೂ ತಾವೋ ಪ್ರಾಪ್ತವಾಗುವುದು ಅಸಾಧ್ಯ. ಸಾಧನೆಯ ಅಭ್ಯಾಸದಲ್ಲಿ ಮುಂದುವರೆಯಬೇಕೆನ್ನುವವರಿಗೂ ಕೂಡ, ಇದನ್ನು ಉತ್ತೀರ್ಣಿಸುವರೋ ಮತ್ತು ಸಾಧನೆಯ ಅಭ್ಯಾಸವನ್ನು ಮಾಡಬೇಕೆಂದು ನಿರ್ಧರಿಸುವಿರೋ ಎಂಬುದನ್ನು ಕಾದು ನೋಡಬೇಕು. ಎಲ್ಲರೂ ಬುದ್ಧನಾಗುವುದು ಅಸಾಧ್ಯ. ನಿಜವಾದ ದಾಫಾ ಅಭ್ಯಾಸಿಗರಿಗೂ ಕೂಡ ಈ ಪುಸ್ತಕವನ್ನು ಓದಿದಾಗ ಇದೇ ರೀತಿಯ ಅನುಭವಗಳಾಗುತ್ತವೆ, ಮತ್ತು ಅವರು ಏನನ್ನೆಲ್ಲ ಪಡೆಯಲು ಅರ್ಹರಿರುತ್ತಾರೋ ಅವನ್ನೆಲ್ಲಾ ಪಡೆಯಲು ಅವರಿಗೆ ಸಾಧ್ಯವಾಗುವುದು. "ಕಳೆಯುವುದೂ ಇಲ್ಲ ಪಡೆಯುವುದೂ ಇಲ್ಲ,

# ಉಪನ್ಯಾಸ ಮೂರು

## ಎಲ್ಲಾ ವಿದ್ಯಾರ್ಥಿಗಳನ್ನು ನಾನು ಅನುಯಾಯಿಗಳನ್ನಾಗಿ ಸ್ವೀಕರಿಸುತ್ತಿದ್ದೇನೆ

ನಿಮಗೇನು ತಿಳಿದಿದೆ? ನಾನಿಲ್ಲೇನು ಮಾಡುತ್ತಿದ್ದೇನೆಂದು ತಿಳಿದಿದೆಯೆ? ನಾನು ಎಲ್ಲಾ ವಿದ್ಯಾರ್ಥಿಗಳನ್ನು ಅನುಯಾಯಿಗಳನ್ನಾಗಿ ಮಾರ್ಗದರ್ಶನ ನೀಡಲು ಸ್ವೀಕರಿಸುತ್ತಿದ್ದೇನೆ. ಇವರೊಂದಿಗೆ ಯಾರು ಸ್ವಯಂ ಕಲಿಯುತ್ತಾರೊ, ಯಾರು ಇನ್ನೂ ಅಭ್ಯಾಸ ಮಾಡಲು ಶಕ್ತರಾಗಿರುತ್ತಾರೋ, ಅವರೂ ಸಹ ಸೇರಿದ್ದಾರೆ. ಉನ್ನತ ಹಂತಕ್ಕೆ ಕೊಂಡೊಯ್ಯುವ ಒಂದು ಸಂಪ್ರದಾಯಬದ್ಧ ಆಚರಣೆಯಿದು. ನಾನು ಈ ರೀತಿಯ ಮಾರ್ಗದರ್ಶನವನ್ನು ಮಾಡದಿದ್ದರೆ ಇದು ಯಾವುದೇ ಕೆಲಸವನ್ನು ಮಾಡುವುದಿಲ್ಲ – ಅದು ಬೇಜವಾಬ್ದಾರಿಯಾಗುತ್ತದೆ. ಮತ್ತು ಕಷ್ಟಗಳನ್ನು ನಾನೇ ಕೇಳಿ ಕೊಂಡಂತಾಗುತ್ತದೆ. ನಾವು ನಿಮಗೆ ಹೆಚ್ಚಿನದನ್ನೇ ಕೊಡುತ್ತಿದ್ದೇವೆ. ಪ್ರತಿದಿನ ಸಾಮಾನ್ಯ ಜನಗಳಿಗೆ ಗೊತ್ತಿಲ್ಲದಂತಹ ಎಷ್ಟೋ ಸತ್ಯಗಳನ್ನು ನಾವು ನಿಮಗೆ ತಿಳಿಸುತ್ತಿದ್ದೇವೆ. 'ಶ್ರೇಷ್ಠವಾದ ನಿಯಮ' ವನ್ನು ನಾನು ನಿಮಗೆ ಮುಟ್ಟಿಸುತ್ತಿದ್ದೇನೆ. ನಾನು ನಿಮಗೆ ಹೆಚ್ಚು, ಹೆಚ್ಚು ವಸ್ತುಗಳನ್ನು ಕೊಡುತ್ತೇನೆ. ನಿಮಗಾಗಿ ನಿಮ್ಮ ದೇಹವನ್ನು ಶುದ್ಧಿಗೊಳಿಸಲಾಗುತ್ತಿದೆ. ಇದರ ಜೊತೆಗೆ ಇನ್ನೂ ಕೆಲವು ವಿಷಯಗಳು ಭಾಗವಹಿಸಿರುತ್ತದೆ. ಛಾತ್ರರನ್ನಾಗಿ ನಿಮಗೆ ನಾನು ಮಾರ್ಗದರ್ಶನವನ್ನು ಮಾಡದಿದ್ದಲ್ಲಿ ಖಂಡಿತವಾಗಿಯೂ ಇದು ಕೆಲಸ ಮಾಡುವುದಿಲ್ಲ. ಸುಮ್ಮನೆ ಸುತ್ತಲೂ ತಿರುಗುತ್ತಾ ದೈವರಹಸ್ಯಗಳನ್ನು ಸಾಮಾನ್ಯರೊಂದಿಗೆ ಒಸರುವುದಕ್ಕೆ ಅನುಮತಿಯಿಲ್ಲ. ಆದರೆ ಒಂದು ವಿಷಯವಿದೆ, ಕಾಲ ಬದಲಾಗಿದೆ. ಈಗ ನಾವು ವಿಧಿವತ್ತಾದ ಆಚರಣೆಗಳಾದ ಮೊಣಕಾಲೂರಿ ಬಗ್ಗಿ ನಮಸ್ಕರಿಸುವುದು ಅಥವಾ ಸಾಂಪ್ರದಾಯಿಕ ರೀತಿಯ ನಮಸ್ಕಾರಗಳನ್ನು ಉಪಯೋಗಿಸುವುದಿಲ್ಲ. ಅಂತಹ ನಿಯಮಗಳ ಉಪಯೋಗ ಹೆಚ್ಚಿಲ್ಲ. ಅದನ್ನು ಮಾಡುವುದು ಧಾರ್ಮಿಕವೆಂಬಂತೆ ಕಾಣುತ್ತದೆ. ಆದ್ದರಿಂದ ಅಂತಹವುಗಳನ್ನು ನಾವು ಮಾಡುವುದಿಲ್ಲ. ಕಾರಣವೇನೆಂದರೆ ಬಹುಶ: ನೀವು ಮೊಣಕಾಲೂರಿ ನಮಸ್ಕರಿಸುತ್ತೀರಿ ಅಥವಾ ದೀಕ್ಷೆಯ ಮುಖಾಂತರ ತೆರಳುತ್ತೀರಿ. ಆದರೆ ನಂತರ ನೀವು ಮೊದಲಿನ ನಿಮ್ಮ ರೀತಿಯನ್ನೇ ನಡೆದುಕೊಳ್ಳುತ್ತೀರಿ. ಮತ್ತೆ ನೀವು ನಿಮ್ಮ ಪ್ರತಿಷ್ಠೆ ಮತ್ತು ಲಾಭಕ್ಕಾಗಿ ಸ್ಪರ್ಧಿಸುತ್ತೀರಿ. ಹಾಗಾದರೆ ಅದೇನು ಒಳ್ಳೆಯದು ಮಾಡಿದೆ? ನಿಮ್ಮ ಶಕ್ತಿಸಾಮರ್ಥ್ಯದಿಂದ ನೀವು ದಾಫಾದ ಕಲ್ಪನೆಯನ್ನು ನಿಮ್ಮ ಹೆಸರಿನಲ್ಲಿ ಮಾಸಲು ಮಾಡಬಹುದು.

ನಿಜವಾದ ಅಭಿವೃದ್ಧಿಯು ನಿಮ್ಮ ಮನಸ್ಸನ್ನು ಸಂಪೂರ್ಣವಾಗಿ ಅಭಿವೃದ್ಧಿ ಪಡಿಸುವುದರ ಮೇಲೆ ಅವಲಂಬಿಸಿದೆ. ಆದ್ದರಿಂದ ಎಲ್ಲಿಯವರೆಗೂ ನೀವು ಪಾಲನೆ ಮಾಡಲು ಸಾಧ್ಯವಿಲ್ಲವೋ, ದೃಢನಿಶ್ಚಯದಿಂದ ಸ್ಥಿರವಾಗಿ ಎಲ್ಲಿಯವರೆಗೂ ನೀವು ಅಭ್ಯಾಸವನ್ನು ಮಾಡುತ್ತೀರೊ, ನಾವು ನಿಮಗೆ ನಮ್ಮ ವಿದ್ಯಾರ್ಥಿಯಾಗಿ ಮಾರ್ಗದರ್ಶನವನ್ನು ಮಾಡುತ್ತೇವೆ.

ನಿಮ್ಮನ್ನು ಬೇರೆ ರೀತಿಯಾಗಿ ನಡೆಸಿಕೊಂಡರೆ ಅದು ಕೆಲಸ ಮಾಡುವುದಿಲ್ಲ. ಆದರೆ ಕೆಲವರು ತಮ್ಮನ್ನು ತಾವೇ ನಿಜವಾದ ಅಭ್ಯಾಸಿಗರೆಂದು ಪರಿಗಣಿಸುವುದಿಲ್ಲ ಮತ್ತು ಅಭ್ಯಾಸವನ್ನು ಮಾಡುತ್ತಲೇ ಇರುತ್ತಾರೆ. ಕೆಲವರಿಗೆ ಇದನ್ನು ಮಾಡುವ ಶಕ್ತಿಯಿರುವುದಿಲ್ಲ. ಆದರೂ ಹೆಚ್ಚಿನ ಮಂದಿ ಅಭ್ಯಾಸವನ್ನು ಮಾಡುತ್ತಲೇ ಇರುತ್ತಾರೆ ಮತ್ತು ಎಲ್ಲಿಯವರೆಗೂ ನೀವು ಅಭ್ಯಾಸವನ್ನು ಮಾಡುತ್ತಲೇ ಇರುತ್ತೀರೋ, ಅಲ್ಲಿಯವರೆಗೂ ನಿಮ್ಮನ್ನು ಛಾತ್ರರನ್ನಾಗಿ ಪರಿಗಣಿಸಿ ನಾವು ಮಾರ್ಗದರ್ಶನ ಮಾಡುತ್ತಲೇ ಇರುತ್ತೇವೆ.

ಆದ್ದರಿಂದ ಯಾರಾದರೂ ಸುಮ್ಮನೆ ಚಲನವಲನಗಳನ್ನು ಮಾಡಿದರೆ ಅವರನ್ನು ಫಾಲೂನ್‌ದಾಫಾ ವಿದ್ಯಾರ್ಥಿಗಳಾಗಿ ಎಣಿಕೆಯಿಡಲಾಗುವುದೆಂದು ನೀವು ಯೋಚಿಸು ತ್ತೀರಾ? ಬಹುತೇಕ ಮಟ್ಟಿಗೆ ಇಲ್ಲ, ಕಾರಣವೇನೆಂದರೆ, ನೀವು ನಿಜವಾಗಿಯೂ ಅಭ್ಯಾಸ ಮಾಡುತ್ತಿದ್ದರೆ ನಾವು ಮಾತನಾಡುವ ನಡತೆಯ ಪ್ರಮಾಣದಿಂದ ನಿಮ್ಮನ್ನು ನೀವೇ ತಿದ್ದುಪಡಿ ಮಾಡಿಕೊಳ್ಳಬೇಕು. ನೀವು ಖಂಡಿತವಾಗಿಯೂ ನಿಮ್ಮ ನಡತೆಯನ್ನು ಸುಧಾರಣೆ ಮಾಡಿಕೊಳ್ಳಬೇಕು. ಮತ್ತು ನಂತರ ಕೇವಲ ನಂತರವೇ ಅದು ನಿಜವಾದ ಅಭ್ಯಾಸ ವಾಗುತ್ತದೆ. ಸುಮ್ಮನೆ ದಾಫಾ ಚಲನೆಗಳನ್ನು ಮಾಡಿದರೆ ನಿಮ್ಮ

ನಡತೆಯ ಸುಧಾರಣೆಯಾಗುವುದಿಲ್ಲ. ಸಂಪೂರ್ಣ ವಿಷಯವನ್ನು ಬಲಪಡಿಸಲು ಬೇಕಾದ ಬಲವಾದ ಶಕ್ತಿಯು ನಿಮಗಿರುವುದಿಲ್ಲ. ಆದ್ದರಿಂದ ನಂತರ ನಿಮ್ಮನ್ನು ಫಾಲೂನ್‌ದಾಫಾ ಛಾತ್ರರನ್ನಾಗಿ ತೆಗೆದುಕೊಳ್ಳುವುದಕ್ಕಾಗುವುದಿಲ್ಲ. ನೀವು ನಿಮ್ಮ ನಡತೆಯ ಸುಧಾರಣೆಯನ್ನು ಮಾಡಿ ಕೊಳ್ಳುತ್ತಿಲ್ಲ ಮತ್ತು ನೀವು ಸಾಮಾನ್ಯ ಜನರೊಂದಿಗೆ ಹಳೆಯ ರೀತಿಗಳಿಗೆ ನೀವು ಅಂಟಿ ಕೊಂಡಿರುತ್ತೀರಿ. ಆದ್ದರಿಂದ ನೀವು ಇತರೆ ಸಮಸ್ಯೆಗಳಲ್ಲಿ ಸಿಲುಕಿಕೊಳ್ಳುವ ಅವಕಾಶಗಳು ಹೆಚ್ಚಾಗಿರುತ್ತವೆ. ಅಥವಾ ಫಾಲೂನ್‌ದಾಫಾ ಅಭ್ಯಾಸವು ನಿಮ್ಮನ್ನು ದಾರಿ ತಪ್ಪಿಸಿತೆಂದೂ ಸಹ ನೀವು ಹೇಳಬಹುದು. ಅದರ ಸಾಧ್ಯತೆಯುಂಟು ಹಾಗಾಗಿ ನಿಮ್ಮ ಕೃತ್ಯಗಳಲ್ಲಿ ನೀವು ನಿಮ್ಮ ನಡತೆಯ ಪ್ರಮಾಣವನ್ನು ಅನುಸರಿಸಬೇಕು. ಆ ನಂತರವೇ ನೀವೊಬ್ಬ ನಿಜವಾದ ಅಭ್ಯಾಸಿಗರಾಗುವಿರಿ. ನಿಮಗೆ ಇದನ್ನು ಸ್ಪಷ್ಟಗೊಳಿಸಿದ್ದೇನೆ. ಆದ್ದರಿಂದ ಇನ್ನು ಮುಂದೆ ಈ ನಿಯಮಾನುಷ್ಠಾನವನ್ನು ಮಾಡೆಂದು ಕೇಳಬಾರದು, ನಾನು ನಿಮ್ಮನ್ನು ಈ ರೀತಿಯಲ್ಲೇ ನಡೆಸಿಕೊಳ್ಳುವುದು ಎಣಿಸಲು ಸಾಧ್ಯವಿಲ್ಲದಷ್ಟು 'ಕಾನೂನಿನ ಅಂಗಗಳು' ನನ್ನಲ್ಲಿ ಬಹಳಷ್ಟಿವೆ. ಹಾಗಾಗಿ ಎಷ್ಟೇ ವಿದ್ಯಾರ್ಥಿಗಳಿದ್ದರೂ ಅವರ ಕ್ಷೇಮವನ್ನು ನಾನು ನೋಡಿಕೊಳ್ಳುತ್ತೇನೆ. ಸಭಿಕರಲ್ಲಿ ಎಷ್ಟೇ ವಿದ್ಯಾರ್ಥಿಗಳಿದ್ದರೂ ಸಹ ನಾನು ಅವರನ್ನು ಗಮನಕ್ಕೆ ತೆಗೆದುಕೊಳ್ಳುತ್ತೇನೆ.

## ಬೌದ್ಧ ಚಿಗಾಂಗ್ ಮತ್ತು ಬೌದ್ಧ ಧರ್ಮ ಮತ್ತು ಬೌದ್ಧ ಧರ್ಮ.

ಬೌದ್ಧ ಚಿಗಾಂಗ್ ಬೌದ್ಧ ಧರ್ಮವಲ್ಲವೆಂಬುದನ್ನು ನೀವು ತಿಳಿದುಕೊಂಡಿದ್ದೀ ರೆಂಬುದನ್ನು ನಾನು ಸ್ಪಷ್ಟಪಡಿಸಿಕೊಳ್ಳಲಿಚ್ಚಿಸುತ್ತೇನೆ. ಮತ್ತು ಸತ್ಯವಾಗಿಯೂ ಡಯಸ್ಟ್ ಚಿಗಾಂಗ್ ಡಾಯಿಸಮ್ ಎಂಬ ಧರ್ಮವಲ್ಲ. ನಮ್ಮಲ್ಲಿ ಕೆಲವರಿಗೆ ಈ ವಿಷಯದ ಬಗ್ಗೆ ಸ್ಪಷ್ಟೀಕರಣವಿಲ್ಲ. ಬೌದ್ಧ ದೇವಾಲಯಗಳಲ್ಲಿ ಅಭ್ಯಾಸ ಮಾಡುತ್ತಿರುವ ಬೌದ್ಧ ಸನ್ಯಾಸಿಗಳು ಮತ್ತು ಇನ್ನೂ ಕೆಲವು ಕ್ರಮವಿಲ್ಲದ ಬೌದ್ಧರು ಇತರರಿಗಿಂತ ತಮಗೇ ಬೌದ್ಧ ವಿಷಯಗಳ ಬಗ್ಗೆ ಹೆಚ್ಚು ತಿಳಿದಿದೆಯೆಂದು ಯೋಚಿಸುತ್ತಾರೆ. ಆದ್ದರಿಂದ ಖಂಡಿತವಾಗಿಯೂ ಇವರು ಬೌದ್ಧ ಧರ್ಮದ ವಿಷಯಗಳನ್ನು ನಮ್ಮ ವಿದ್ಯಾರ್ಥಿಗಳೊಳಗೆ ಕದಡಲು ಉತ್ತೇಜಿಸುತ್ತಾರೆ. ನಾನು ನಿಮಗೆ ಹೇಳಬಯಸುತ್ತೇನೆ. ಅದನ್ನು ಮಾಡಬೇಡಿ, ಏಕೆಂದರೆ ಅದು ಬೇರೆಯೇ ಆದಂತಹ ನೀತಿ ಶಿಕ್ಷಣದ ವಿಷಯಗಳು. ಧರ್ಮಗಳಿಗೆ ತನ್ನದೇ ಆದಂತಹ ಮತ ಶ್ರದ್ಧೆಯುಳ್ಳ ರೂಪಗಳಿದೆ. ನಮ್ಮ ನೀತಿ ಶಿಕ್ಷಣದ ಒಂದು ಭಾಗವನ್ನು ಅಭಿವೃದ್ಧಿಪಡಿಸಲು ನಾವು ರೂಪಾಂತರಗೊಳಿಸುತ್ತೇವೆ. ನೀವು ಛಾತ್ರರಾಗಿ ಫಾಲೂನ್ ದಾಫಾ ತಜ್ಞರಾಗಿದ್ದರೆ ನಾವು ಧಾರ್ಮಿಕ ರೂಪಗಳ ಬಗ್ಗೆ ಯೋಚಿಸುವುದಿಲ್ಲ. ಆದ್ದರಿಂದ ಎಂತಾದರೂ ಈ ಯುಗದ ಕಾನೂನಿನ ಎಲ್ಲೆಯಲ್ಲಿ ನಾವು ಬೌದ್ಧ ಧರ್ಮದ ಭಾಗವಲ್ಲ.

ಬೌದ್ಧ ಧರ್ಮದ ನಿಯಮವು ಬೌದ್ಧ ನಿಯಮದ ಕೇವಲ ಒಂದು ಭಾಗವಾಗಿದೆ. ಇತರ ಹೆಚ್ಚಿನ ಅಗಾಧವಾದ ಶ್ರೇಷ್ಠ ನಿಯಮದ ಅಭ್ಯಾಸಗಳು ಇವೆ ಮತ್ತು ಪ್ರತಿ ಹಂತಕ್ಕೂ ವಿಭಿನ್ನ ನಿಯಮಗಳಿವೆ. ೮೪,೦೦೦ ಅಭ್ಯಾಸಿಗರಾದ ಅನುಯಾಯಿಗಳಿದ್ದಾರೆಂದು ಶಾಕ್ಯ ಮುನಿಗಳು ಹೇಳಿದ್ದಾರೆ ಮತ್ತು ಎಷ್ಟು ನೀತಿ ಶಿಕ್ಷಣಗಳು ಬೌದ್ಧಧರ್ಮದಲ್ಲಿದೆ? ಟೆಂಡೈ ಸೆಕ್ಟ್ (Tendai Sect) ಹ್ಯುಯೆನ್ ಸೆಕ್ಟ್ (Huayan Sect), ಝೆನ್ ಸೆಕ್ಟ್ (Zen Sect), ಪ್ಯೂರ್ ಲ್ಯಾಂಡ್ (Pure Land) ಮತ್ತು ಈಸೋಟೆರಿಕ್ ಸೆಕ್ಟ್ (Esoteric Sect) ಎಂಬ ಕೆಲವೇ ನೀತಿ ಶಿಕ್ಷಣಗಳಿವೆ. ಇದರೊಂದಿಗೆ ಅವರು ಲವಶೇಷವನ್ನು ಸೇರಿಸುವುದಿಲ್ಲ. ಆದ್ದರಿಂದ ಇದು ಸಂಪೂರ್ಣ ಬೌದ್ಧ ನಿಯಮವನ್ನು ವ್ಯಾಪಿಸುವುದಿಲ್ಲ. ಆದರೆ ಬೌದ್ಧ ನಿಯಮದ ಕೇವಲ ಒಂದು ಚಿಕ್ಕ ಭಾಗವಾಗಿರುತ್ತದೆ. ನಮ್ಮ ಫಾಲೂನ್‌ದಾಫಾ ಸಹ ಎಂಬತ್ತನಾಲ್ಕು ಸಾವಿರ ನೀತಿಶಿಕ್ಷಣಗಳಲ್ಲಿ ಒಂದಾಗಿದೆ.

---

1. **ಸಮಾಧಿ** – ಭೌದ್ದ ಧರ್ಮದ ಪ್ರಕಾರ "ಧ್ಯಾನದಿಂದ ಸಿದ್ಧಿ ಹೊಂದುವುದು.

ಇದು ಎಂದಿಗೂ ಬೌದ್ಧ ಧರ್ಮಕ್ಕೆ ಸಂಬಂಧಿಸಿದುದಲ್ಲ. ಪ್ರಸ್ತುತ ಧರ್ಮಗಳೊಂದಿಗೆ ಇದಕ್ಕೆ ಯಾವುದೇ ಕೆಲಸವಿಲ್ಲ. ಆದರೆ ಮೂಲಧರ್ಮದಿಂದ ಧರ್ಮಶಾಸ್ತ್ರದ ಕಾಲದ ಕೊನೆಯವರೆಗೂ ಅದು ಬೌದ್ಧ ಧರ್ಮಕ್ಕೆ ಸಂಬಂಧಿಸಿದ್ದಾಗಿರಲಿಲ್ಲ.

ಪುರಾತನ ಭಾರತದಲ್ಲಿ 2,500 ವರ್ಷಗಳ ಹಿಂದೆ ಶಾಕ್ಯ ಮುನಿಗಳಿಂದ ಬೌದ್ಧ ಧರ್ಮದ ಸ್ಥಾಪನೆಯಾಯಿತು. ಆ ಸಮಯದಲ್ಲಿ ಸಾಖ್ಯ ಮುನಿಗಳು ರಹಸ್ಯವನ್ನು ಬೇಧಿಸಿದ ನಂತರ ಮತ್ತು ಜ್ಞಾನೋದಯವಾದ ನಂತರ ತಾವು ಹಿಂದೆ ಮಾಡಿದ ಅಭ್ಯಾಸವನ್ನು ಪುನರ್‌ಸ್ಮರಿಸುತ್ತಾರೆ ಮತ್ತು ಅದನ್ನು ಜನರನ್ನು ಉಳಿಸುವುದಕ್ಕಾಗಿ ಪ್ರಸಾರ ಮಾಡುತ್ತಾರೆ. ಆತನ ನೀತಿ ಶಿಕ್ಷಣದಲ್ಲಿ ಹತ್ತಾರು ಸಾವಿರ ಸೂತ್ರಗಳನ್ನು ಬರೆದಿದ್ದರೂ ಪರವಾಗಿಲ್ಲ. ಪ್ರತ್ಯಕ್ಷವಾಗಿ ಅದರಲ್ಲಿ ಮೂರು ಪದಗಳಿವೆ. ವಿಧಿ, ಏಕಾಗ್ರತೆ, ವಿವೇಕ ಇವೇ ನೀತಿ ಶಿಕ್ಷಣದ ವೈಶಿಷ್ಟ್ಯಗಳು, ಸಾಮಾನ್ಯ ಜನರಿಗಿರುವ ಅಪೇಕ್ಷೆಗಳಿಂದ ಕಳಚಿ ಕೊಳ್ಳುವುದನ್ನು ವಿಧಿ ಅಥವಾ ದೈವಾಜ್ಞೆಗೆ ಸಂಬಂಧಪಟ್ಟದ್ದಾಗಿದೆ. ಐಹಿಕ ಪ್ರಪಂಚದಲ್ಲಿನ ಎಲ್ಲಾ ಸಂಬಂಧಗಳನ್ನು, ತನ್ನಿಂದ ತಾನು ಬೇರ್ಪಡಿಸಿಕೊಳ್ಳುವುದು. ತಾನು ಅಪೇಕ್ಷೆ ಪಟ್ಟಂತಹ ವಸ್ತುಗಳಿಂದ ಬಲವಂತವಾಗಿ ದೂರ ಸರಿಯುವುದು ಮೊದಲಾದವು. ಆದ್ದರಿಂದ ಆತನು ಎಲ್ಲಾ ರೀತಿಯ ಸಂಬಂಧಗಳನ್ನು ಕಳಚಿಕೊಳ್ಳುತ್ತಾನೆ. ಆತನ ಮನಸ್ಸಿನಲ್ಲೀಗ ಏನಿಲ್ಲ ಮತ್ತು ಸ್ವಾಭಾವಿಕವಾಗಿ ಆತನು ಏಕಾಗ್ರತೆಯನ್ನು ಪ್ರವೇಶಿಸುತ್ತಾನೆ. ಅವು ಒಂದಕ್ಕೊಂದು ಪೂರಕವಾಗಿವೆ. ಆತನು ಏಕಾಗ್ರತೆಯನ್ನು ಪ್ರವೇಶಿದ ನಂತರ ಆತನು ಧ್ಯಾನದಲ್ಲಿ ಕೂಡುವ ಅವಶ್ಯಕತೆಯಿದೆ ಮತ್ತು ನಿಜವಾಗಿಯೂ ಇದರ ಪಾಲನೆಯನ್ನು ಮಾಡಬೇಕಾಗಿದೆ. ತನ್ನ ಏಕಾಗ್ರತೆಯ ಶಕ್ತಿಯ ಆಧಾರ ಅಥವಾ ನಂಬಿಕೆಯ ಮೇಲೆ ಇನ್ನೂ ಹೆಚ್ಚಿನ ಅಭಿವೃದ್ಧಿಯನ್ನು ಮಾಡಬೇಕು. ಆದ್ದರಿಂದ ಇದೇ ಆ ನೀತಿಶಿಕ್ಷಣದ ಸತ್ಯವಾದ ಅಭಿವೃದ್ಧಿಪಡಿಸುವ ಭಾಗ ಇದರಲ್ಲಿ ತಂತ್ರಜ್ಞಾನಕ್ಕೆ ಸಂಬಂಧಿಸಿದ ಯಾವುದೇ ಬೋಧನೆಯಿಲ್ಲ. ಅವರು ಸ್ವಭಾವಸಿದ್ಧವಾದ ಒಡಲಿನ ಪರಿವರ್ತನೆಯನ್ನು ಮಾಡುವುದಿಲ್ಲ. ಹಂತಗಳನ್ನು ನಿಷ್ಕರ್ಷಿಸುವಂತಹ ಕೃಷಿ ಶಕ್ತಿಯನ್ನು ಮಾತ್ರ ಅವರು ಅಭಿವೃದ್ಧಿಪಡಿಸುತ್ತಾರೆ. ಆದ್ದರಿಂದ ಆತನು ಒಂದೇ ಮನಸ್ಸಿನಿಂದ ನಡತೆಯನ್ನು ಅಭಿವೃದ್ಧಿಪಡಿಸಿಕೊಳ್ಳುತ್ತಾನೆ.

ಆ ನಿಮಿತ್ತದಿಂದ ಯಾವ ವ್ಯಕ್ತಿಯು ದೀರ್ಘಾಯುಷ್ಯದ ಬಗ್ಗೆ ಲಕ್ಷ್ಯ ಕೊಡುವುದಿಲ್ಲವೋ ಕೃಷಿ ಶಕ್ತಿಯನ್ನು ನೈಸರ್ಗಿಕವಾಗಿ ವಿಸ್ತರಿಸುವುದರ ಬಗ್ಗೆ ಲಕ್ಷ್ಯ ಕೊಡುವುದಿಲ್ಲ. ಅದೇ ಸಮಯದಲ್ಲಿ ಆತನು ಏಕಾಗ್ರತೆಯಲ್ಲಿದ್ದರೆ ತನ್ನ ಏಕಾಗ್ರತೆಯ ಶಕ್ತಿಯನ್ನು ಸಾಮರ್ಥ್ಯಗೊಳಿಸುತ್ತಾನೆ. ಧ್ಯಾನದಲ್ಲಿ ಉಂಟಾಗುವ ಕಷ್ಟಗಳನ್ನು ಸಹಿಸಿ ಕೊಳ್ಳುತ್ತಾನೆ ಮತ್ತು ತನ್ನ ಕರ್ಮಗಳನ್ನು ಕಳೆದುಕೊಳ್ಳುತ್ತಾನೆ. ವಿವೇಕವು ಜ್ಞಾನೋದಯಕ್ಕೆ ಸಂಬಂಧಿಸಿರುತ್ತದೆ. ಅತ್ಯುತ್ತಮ ವಿವೇಕವು ಅದರಿಂದ ಉಂಟಾಗುತ್ತದೆ. ವಿಶ್ವದ ಸತ್ಯವನ್ನು ಆತನು ನೋಡುತ್ತಾನೆ. ಜಗತ್ತಿನ ಪ್ರತಿ ಆಯಾಮದಲ್ಲಿನ ಸತ್ಯವನ್ನು ನೋಡುತ್ತಾನೆ. ಆತನ ಅತ್ಯದ್ಭುತ ದೈವೀಕ ಶಕ್ತಿಗಳನ್ನು ಮಹಾವೈಭವದಿಂದ ಪ್ರದರ್ಶನಗೊಳಿಸಬಹುದು. ಮತ್ತು ಆತನು ಜ್ಞಾನ ಮತ್ತು ಜ್ಞಾನೋದಯದ ರಹಸ್ಯವನ್ನು ಬೇಧಿಸಬಹುದು. ಇದನ್ನು ರಹಸ್ಯ ಬೇಧಿಸುವುದೆಂದೂ ಸಹ ಕರೆಯುತ್ತಾರೆ.

ಸಾಖ್ಯ ಮುನಿಗಳು ತಮ್ಮ ನೀತಿ ಶಿಕ್ಷಣವನ್ನು ಸ್ಥಾಪಿಸಿದಾಗ ಭಾರತದಲ್ಲಿ ಎಂಟು ಧರ್ಮಗಳು ಹರಡುತ್ತಿತ್ತು. ಅವುಗಳಲ್ಲೊಂದಾದ ಬ್ರಾಹ್ಮಣ ಧರ್ಮವು ಆಳವಾಗಿ ಬೇರು ಬಿಟ್ಟಿತ್ತು. ಶಾಕ್ಯ ಮುನಿಗಳು ಜೀವಂತರಿದ್ದಾಗ ತತ್ವಶಾಸ್ತ್ರದ ಆಧಾರದ ಮೇಲೆ ಇತರ ಧರ್ಮ ಗಳೊಂದಿಗೆ ಅಚಲವಾದ ಕಾಳಗವನ್ನು ಮಾಡುತ್ತಿದ್ದರು. ಸಾಖ್ಯ ಮುನಿಗಳು ಕಲಿಸಿದ್ದು ನಿಜವಾದ ಬೋಧನೆಯನ್ನು ಆದ್ದರಿಂದ ಆತನ ನಿಬಂಧನೆಯನ್ನು ಬೋಧಿಸುವ ಈ ಪಥದಲ್ಲಿ ಆತನು ಬೋಧಿಸಿದ ಬೌದ್ಧ ನಿಯಮವು ಹೆಚ್ಚು ಹೆಚ್ಚಾಗಿ ವರ್ಧಿಸಿತು. ಆಗೊಮ್ಮೆ ಈಗೊಮ್ಮೆ ಇತರ ಧರ್ಮಗಳು ದುರ್ಬಲವಾಗುತ್ತಿದ್ದವು. ಆಳವಾಗಿ ಬೇರೂರಿದ್ದ ಬ್ರಾಹ್ಮಣ ಧರ್ಮವೂ ಸಹ ಅವನತಿಯ ಅಂಚಿನಲ್ಲಿದ್ದವು, ಆದರೆ ಸಾಖ್ಯ ಮುನಿಗಳು **ನಿರ್ವಾಣ** ಹೊಂದಿದ ನಂತರ ಇತರ ಧರ್ಮಗಳು ವೇಗವಾಗಿ ಬೆಳೆಯಲಾರಂಭಿಸಿದವು. ಗಮನಾರ್ಹವಾಗಿ ಬ್ರಾಹ್ಮಣ ಧರ್ಮ, ಹಾಗಾದರೆ ಬೌದ್ಧಧರ್ಮದೊಂದಿಗೆ ಏನಾಯಿತು? ಕೆಲವು ಸನ್ಯಾಸಿಗಳು ವಿಭಿನ್ನ ಹಂತಗಳಲ್ಲಿ ರಹಸ್ಯವನ್ನು ಬೇಧಿಸಿ ಜ್ಞಾನೋದಯವನ್ನು ಪಡೆದುಕೊಂಡರು. ಆದರೆ ಅವರು ಸೇರಿದ ಹಂತಗಳು

ಪ್ರಶಂಸನೀಯವಾಗಿ ಕೆಳಮಟ್ಟದ್ದು. ಸಾಖ್ಯ ಮುನಿಗಳು 'ತಾತಘಾಟ' ಹಂತವನ್ನು ತಲುಪಿದ್ದರು, ಆದರೆ ಬಹಳಷ್ಟು ಸನ್ಯಾಸಿಗಳು ಈ ಹಂತವನ್ನು ಸೇರಲಿಲ್ಲ.

ಬೌದ್ಧ ಶಾಸನದಲ್ಲಿ ವಿವಿಧ ಪ್ರದರ್ಶನಗಳುಂಟು, ಅದು ಎಷ್ಟು ಉನ್ನತ ಹಂತದ್ದಾದರೆ ಸತ್ಯಕ್ಕಿದು ಹತ್ತಿರವಾಗಿರುತ್ತದೆ. ಕೆಳ ಹಂತದ್ದಾದರೆ ಇದು ಸತ್ಯದಿಂದ ದೂರವಾಗಿರುತ್ತದೆ. ಆದ್ದರಿಂದ ಆ ಸನ್ಯಾಸಿಗಳು ರಹಸ್ಯವನ್ನು ಬೇಧಿಸಿ ಮತ್ತು ಕೆಳಹಂತದಲ್ಲಿಯೇ ಜ್ಞಾನೋದಯಗೊಂಡ ನಂತರ ಶಾಕ್ಯ ಮುನಿಗಳು ಹೇಳಿದ ವಿಶ್ವಪ್ರದರ್ಶನವನ್ನು ತಾವು ತಮ್ಮ ಹಂತದಲ್ಲಿ ಕಂಡಂತೆ ಹೇಳಿದರು ಮತ್ತು ಸತ್ಯವನ್ನು ತಾವು ಅರ್ಥ ಮಾಡಿಕೊಂಡಂತೆ ವಿವರಿಸಿದರು. ಇತರ ಪದಗಳಲ್ಲಿ ಹೇಳಬೇಕೆಂದರೆ ಶಾಕ್ಯ ಮುನಿಗಳು ಕಲಿಸಿದ ಪ್ರತಿ ಯಾವುದೇ ಹಾದಿಯ ಬಗ್ಗೆ ಸನ್ಯಾಸಿಗಳು ಆ ನಿಯಮದ ಬಗ್ಗೆ ಅರ್ಥ ವಿವರಣೆ ಮಾಡಿದರು. ಇನ್ನೂ ಕೆಲವು ಸನ್ಯಾಸಿಗಳಿದ್ದಾರೆ ಅವರು ತಾವು ಏನು ಅರ್ಥ ಮಾಡಿಕೊಂಡಿರುತ್ತಾರೋ ಅದೇ ಶಾಕ್ಯ ಮುನಿಗಳು ಹೇಳಿದ ಮಾತೆಂಬಂತೆ ಅವರು ಮಾತನಾಡುತ್ತಾರೆ. ಜನಗಳಿಗೆ ಸಾಖ್ಯ ಮುನಿಗಳು ಹೇಳಿದ ಮೂಲ ವಾಕ್ಯಗಳನ್ನು ಹೇಳುವುದನ್ನು ಬಿಟ್ಟು ತನ್ನದೇ ಮಾತುಗಳಲ್ಲಿ ಹೇಳುತ್ತಾರೆ. ಇದರ ಪರಿಣಾಮವಾಗಿ ಗುರ್ತಿಸಲಾರದ ಆಚೆ ಬೌದ್ಧ ನಿಯಮವು ಬದಲಾಯಿಸಿತ್ತು ಮತ್ತು ಇದು ಶಾಕ್ಯ ಮುನಿಗಳು ಬೋಧಿಸಿದ ನಿಯಮವಾಗಿ ಉಳಿದಿರಲಿಲ್ಲ. ಸಂಭವನೀಯ ಸಂಗತಿಯ ಕಾರಣದಿಂದ ಬೌದ್ಧ ಧರ್ಮದಲ್ಲಿನ ಬೌದ್ಧ ನಿಯಮವು ಭಾರತ ದೇಶದಲ್ಲಿ ಕಾಣೆಯಾಯಿತು ಇತಿಹಾಸದಿಂದ ಇದೊಂದು ಮುಖ್ಯ ಪಾಠ. ತತ್ ಪಶ್ಚಾತ್ ಬೌದ್ಧ ಧರ್ಮವು ಭಾರತ ದೇಶದಲ್ಲಿ ಮಾತ್ರ ಕಾಣೆಯಾಯಿತು. ಇದು ಶೂನ್ಯವಾಗುವ ಮುಂಚೆ ಬೌದ್ಧ ಧರ್ಮವು ಬಹಳ ಮಾಪಾಡುಗಳನ್ನು ಕಂಡಿತು. ಅಂತಿಮವಾಗಿ ಬ್ರಾಹ್ಮಣ ಧರ್ಮದೊಂದಿಗೆ ಸಂಯೋಜನೆಗೊಂಡು ಇಂದು ಭಾರತದೇಶದಲ್ಲಿ ಕಾಣುತ್ತಿರುವ ಹಿಂದುತ್ವವಾಗಿ ಮಾರ್ಪಟ್ಟಿತು. ಇದು ಬುದ್ಧನನ್ನು ಪೂಜಿಸುವುದಿಲ್ಲ, ಬೇರೆ ವಸ್ತುಗಳನ್ನು ಪೂಜಿಸುತ್ತದೆ. ಮತ್ತು ಇನ್ನೆಂದಿಗೂ ಶಾಕ್ಯ ಮುನಿಗಳನ್ನು ನಂಬುವುದಿಲ್ಲ, ಇಂದು ಇದು ಹೀಗೆ ಇದೆ.

ಬೌದ್ಧ ಧರ್ಮವು ವರ್ಧಿಸುತ್ತಿದ್ದ ಹಾಗೆಯೇ ಅದು ಹಲವು ನಿರ್ಮಲವಾದ ಸುಧಾರಣೆಗಳ ಮುಖಾಂತರ ಪಕ್ವಗೊಂಡಿತ್ತು. ಇಂತಹ ಸುಧಾರಣೆಯು ಶಾಕ್ಯ ಮುನಿಗಳು ದೈವಾಧೀನರಾದ ಒಡನೆಯೇ ಆಯಿತು.

ಆ ಒಂದು ಸಂದರ್ಭದಲ್ಲಿಯೇ ಕೆಲವರು **ಮಹಾಯಾನದ** ಸ್ಥಾಪನೆಯನ್ನು ಮಾಡಿದರು. ಅಥವಾ ಅತಿ ದೊಡ್ಡ ವಾಹನ/ಗ್ರೇಟರ್ ವೆಹಿಕಲ್ (Greater Vehicle) ಶಾಕ್ಯ ಮುನಿಗಳು ಬೋಧಿಸಿದಂತಹ ಅತ್ಯಂತ ಉಚ್ಚ ಹಂತದ ಸತ್ಯದ ತಳಹದಿಯ ಮೇಲೆ ಬೌದ್ಧ ಧರ್ಮವು ನಿಂತಿದೆ. ಶಾಕ್ಯ ಮುನಿಗಳು ಬಹಿರಂಗವಾಗಿ ಬೋಧಿಸಿದ ನಿಯಮಗಳನ್ನು ಸಾಮಾನ್ಯ ಜನರಿಗಾಗಿ ಎಂದು ಅವರು ನಂಬಿದ್ದರು ಮತ್ತು ಇದು ಜನರು ತಮ್ಮ ಸ್ವಯಂ ಆತ್ಮೋದ್ಧಾರಕ್ಕಾಗಿ ಮತ್ತು ಅರ್ಹತೆಯ ಅಭಿಷ್ಟಸಿದ್ಧಿಯ ಸಾಧನೆಗಾಗಿ. ಇಂದ್ರಿಯ ವ್ಯಾಪಾರವುಳ್ಳ ವ್ಯಕ್ತಿಗಳನ್ನು ಕಾಪಾಡುವ ಬಗ್ಗೆ ಇದು ಮಾತನಾಡುವುದಿಲ್ಲ. ಆದ್ದರಿಂದ ಅದನ್ನು ಅವರು **ಹಿನಯಾನ** ಅಥವಾ ಕಡಿಮೆ ಪ್ರಮಾಣದ ವಾಹನ/ಲೆಸ್ಸರ್ ವೆಹಿಕಲ್, ಬೌದ್ಧ ಧರ್ಮದಲ್ಲಿ ಶಾಕ್ಯ ಮುನಿಗಳ ಕಾಲದಿಂದಲೂ ಸೌತ್‌ಈಸ್ಟ್ ಏಷಿಯಾದಲ್ಲಿನ ಸನ್ಯಾಸಿಗಳು ಮೂಲ ಅಭ್ಯಾಸ ಮಾರ್ಗವನ್ನೇ ಅನುಸರಿಸುತ್ತಿದ್ದಾರೆ. ಮತ್ತು ನಮ್ಮ ಹ್ಯಾನ್ ಪ್ರದೇಶದಲ್ಲಿ ಹಿನಯನ ಎಂದು ಕರೆಯುತ್ತೇವೆ. ಬಹುಶಃ ಅವರು ಇದನ್ನು ಆ ರೀತಿ ನೋಡುವುದಿಲ್ಲ, ಸಾಖ್ಯ ಮುನಿಗಳು ಮೂಲ ವಿಷಯಗಳನ್ನು ತಾವು ವಂಶ ಪಾರಂಪರ್ಯವಾಗಿ ಪಡೆದುಕೊಂಡಿದ್ದೇವೆಂದು ಅವರು ನಂಬುತ್ತಾರೆ. ಇದು ಸತ್ಯವೆಂದು ಪರಿಣಮಿಸುತ್ತದೆ. ಅವರು ವಂಶಪಾರಂಪರ್ಯವಾಗಿ ಅಭಿವೃದ್ಧಿಯ ಪದ್ಧತಿಯನ್ನು ಬಹುತೇಕ ಭಾಗ ಪಡೆದುಕೊಂಡಿದ್ದಾರೆ.

---

2. **ನಿರ್ವಾಣ** – ಮೋಕ್ಷ ಹೊಂದುವುದು.
3. **ಹಿನಯಾನ** – ಭೌದ್ಧ ಧರ್ಮದ ಚಿಕ್ಕ ಪಂಥ.
4. **ಮಹಾಯಾನ** – ಭೌದ್ಧ ಧರ್ಮದ ದೊಡ್ಡ ಪಂಥ

ಸುಧಾರಣೆಗೊಂಡಂತಹ **ಮಹಾಯಾನ**ವನ್ನು ಚೈನಾದಲ್ಲಿ ಪರಿಚಯಿಸಿದ ನಂತರ ತನ್ನಷ್ಟಕ್ಕೇ ತಾನೇ ಇದು ನಮ್ಮ ದೇಶದಲ್ಲಿ ಸ್ಥಾಪನೆಯಾಯಿತು. ಮತ್ತು ಬೌದ್ಧ ಧರ್ಮವಾಗಿ ಈಗ ಇದು ನಮ್ಮ ದೇಶದಲ್ಲಿ ಹರಡಿದೆ. ಆದರೆ ಇದು ಶಾಕ್ಯ ಮುನಿಗಳ ಕಾಲದಲ್ಲಿದ್ದಂತಹ ಬೌದ್ಧ ಧರ್ಮಕ್ಕಿಂತಲೂ ಸಂಪೂರ್ಣವಾಗಿ ವಿಭಿನ್ನವಾಗಿದೆ. ತಮ್ಮ ಉಡುಗೆಗಳಿಂದ ಸಂಪೂರ್ಣ ಜ್ಞಾನೋದಯದ ಸ್ಥಿತಿಯ ಮಾರ್ಗದವರೆಗೆ ಮತ್ತು ಅಭಿವೃದ್ಧಿ ಪ್ರಕ್ರಿಯೆಯವರೆಗೂ ಎಲ್ಲಾ ಬದಲಾವಣೆಗಳಾಗಿವೆ. ಮೂಲ ಬೌದ್ಧ ಧರ್ಮವೂ ಶಾಕ್ಯ ಮುನಿಗಳನ್ನು ತಮ್ಮ ಪೂಜ್ಯ ಪೂರ್ವಜರೆಂದು ಪೂಜಿಸುತ್ತಿದ್ದರು. ಆದರೆ ಇಂದಿನ ಬೌದ್ಧ ಧರ್ಮದಲ್ಲಿ ಬಹಳಷ್ಟು ಮಂದಿ ಬುದ್ದರುಗಳಿದ್ದಾರೆ.

ಶ್ರೇಷ್ಠರಾದ ಬೋಧಿಸತ್ವರು ಮೊದಲಾದವರಿದ್ದಾರೆ, ಹೆಚ್ಚೇನು, ಬಹುತೇಕ ಬುದ್ಧರು ಗಳನ್ನು ಪೂಜಿಸುವ ಒಂದು ನಂಬಿಕೆ ಇದಾಯಿತು. ಜನಗಳು ಅನೇಕ ತಾತಘಾಟಗಳನ್ನು ನಂಬುತ್ತಾರೆ. ಆದ್ದರಿಂದ ಇದು ಅನೇಕ ಬುದ್ಧರುಗಳನ್ನು ಪೂಜಿಸುವ ಒಂದು ಬೌದ್ಧ ಧರ್ಮವಾಗಿದೆ. ಬುದ್ಧ ಅಮಿತಾಭ, ಬೈಶಾಜ್ಯಗುರು, ಬುದ್ಧ ವಿರೋಚನ ಮೊದಲಾದವು ಮತ್ತು ನಂತರ ಇಲ್ಲಿ ಹೆಚ್ಚಿನ ಮಂದಿ ಬೋಧಿಸತ್ವರೂ ಸಹ ಇದ್ದಾರೆ. ಶಾಕ್ಯಮುನಿಗಳು ತಮ್ಮ ಕಾಲದಲ್ಲಿ ಮಾಡಿದ ಮೂಲ ಬೌದ್ಧ ಧರ್ಮಕ್ಕಿಂತಲೂ ಸಂಪೂರ್ಣ ವಿಭಿನ್ನವಾಗಿ ಈ ಎಲ್ಲಾ ಬೌದ್ಧಧರ್ಮಗಳಿವೆ. ಆ ಸಮಯದ ಕಾಲಾವಧಿಯವರೆಗೂ ಕ್ರಮವಾದ ಸುಧಾರಣೆಯು ನಡೆಯಿತು. ಬೋಧಿಸತ್ವ ನಾಗಾರ್ಜುನರು ತಿಳಿಸಿಕೊಟ್ಟಂತಹ ರಹಸ್ಯ ಅಭಿವೃದ್ಧಿ ಮಾರ್ಗವು ಭಾರತ ದೇಶದ ಮೂಲಕ ಆಫ್ಘಾನಿಸ್ಥಾನಕ್ಕೆ ತಲುಪಿತು. ಅಲ್ಲಿಂದ ಮುಂದೆ ಅದು **ಶೀನ್ ಜಿಯಾಂಗ್** ಕ್ಷೇತ್ರವನ್ನು ತಲುಪಿ ಅಲ್ಲಿಂದ ಹ್ಯಾನ್ ಕ್ಷೇತ್ರದಲ್ಲಿ ಹರಡಿತು. ಇದು ತಾಂಗ್ ರಾಜವಂಶದವರಿದ್ದ ಸಮಯದಲ್ಲಿ ಉಂಟಾಯಿತು. ಆದ್ದರಿಂದ ಜನರು ಇದನ್ನು ತಾಂಗ್ ತಾಂತ್ರಿಸಮ್ ಎಂದು ಕರೆದರು. ಕನ್‌ಫ್ಯೂಷಿಯಸ್ ಧರ್ಮವು ಭಾರಿ ಪ್ರಭಾವವನ್ನು ಚೈನಾದಲ್ಲಿ ಬೀರಿತು. ಇತರ ರಾಷ್ಟ್ರಗಳ ನೈತಿಕ ಮೌಲ್ಯಗಳ ನಮ್ಮ ರಾಷ್ಟ್ರದ ನೈತಿಕ ಮೌಲ್ಯಗಳಿಗಿಂತ ವಿಭಿನ್ನವಾಗಿತ್ತು. ತಾಂತ್ರಿಕ ಅಭಿವೃದ್ಧಿ ಮಾರ್ಗವು ಗಂಡು ಹೆಣ್ಣಿನ ಇಬ್ಬಗೆಯ ಅಭಿವೃದ್ಧಿಯಾಗಿತ್ತು. ಇದು ಯಾವುದೇ ಏನಾದರೊಂದು ಅಂದಿನ ಕಾಲದ ಸಮಾಜವು ಒಪ್ಪಿಕೊಳ್ಳಲಾಗದಂತಹದ್ದಾಗಿತ್ತು. ಬೌದ್ಧ ಧರ್ಮವು ನಿಗ್ರಹಗೊಂಡಾಗ **ತಾಂಗ್ ರಾಜವಂಶದ** ಹ್ಯೂಚಾಂಗ್ ರವರ ಕಾಲದಲ್ಲಿ ತಾಂತ್ರಿಕ ಅಭಿವೃದ್ಧಿಯನ್ನು ಅಳಿಸಿ ಹಾಕಲಾಯಿತು. ಮತ್ತು ತಾಂಗ್ ತಾಂತ್ರಿಕತೆಯೆಂಬುದೊಂದಿಗೆ ಹಿಂದೆ ಚೀನಾದಿಂದ ಅವರು ಕಲಿತದ್ದು, ಆದರೆ ಅವರು ಅನುಲೇಪನದ ಮುಖಾಂತರ ತೆರಳಲಿಲ್ಲ ಮತ್ತು ತಾಂತ್ರಿಕತೆಯ ಪ್ರಕಾರ ಯಾರು ತಾಂತ್ರಿಕತೆಯ ವಿಷಯಗಳನ್ನು ಅನುಲೇಪನವಿಲ್ಲದೇ ಕಲಿಯುತ್ತಾರೋ ಅವರು ಆ ಧರ್ಮಶಾಸ್ತ್ರವನ್ನು ಕದ್ದ ಹಾಗೆ ಪರಿಗಣಿಸಲಾಗುತ್ತದೆ. ಒಬ್ಬ ಗುರುವಿನಿಂದ ಕಲಿತ ವ್ಯಕ್ತಿಯನ್ನು ಗುರುತಿಸಿದ ಹಾಗೆ ಈತನನ್ನು ಗುರುತಿಸುವುದಿಲ್ಲ. ಇನ್ನೊಂದು ಶಾಖೆಯು ಭಾರತದಿಂದ ಹೊರಟು ನೇಪಾಳದ ಮೂಲಕ ಟಿಬೆಟ್‌ನ್ನು ತಲುಪಿತು. ಇದನ್ನು ಟಿಬೆಟ್ ತಾಂತ್ರಿಕತೆಯೆಂದು ಕರೆಯಲಾಯಿತು. ಇದನ್ನು ಇಂದಿನವರೆಗೂ ಮುಂದುವರೆಸಿಕೊಂಡು ಬರಲಾಗಿದೆ.

ಅಂತಹ ಹೆಚ್ಚು ಆಕರ್ಷಕವಾದ ಸಂಗತಿಗಳು ಬೌದ್ಧ ಧರ್ಮದಲ್ಲಿ ಆಗಿವೆ. ನಾನು ಈಗ ನಿಮಗೆ ಸಂಕ್ಷಿಪ್ತವಾಗಿ ಮತ್ತು ಸಾಮಾನ್ಯ ಜ್ಞಾನದಿಂದ ಇದು ಹೇಗೆ ಅಭಿವೃದ್ಧಿ ಯಾಯಿತು. ಮತ್ತು ಆರಂಭವಾಯಿತೆಂದು ತಿಳಿಸಿದ್ದೇನೆ. ಬೌದ್ಧ ಧರ್ಮವು ಅಭಿವೃದ್ಧಿ ಹೊಂದುತ್ತಿದ್ದ ಕಾಲದಲ್ಲಿ ವಿವಿಧ ಹಂತಗಳಲ್ಲಿ ಇತರ ನೀತಿ ಶಿಕ್ಷಣಗಳು ಅದರೊಂದಿಗೆ ಬಂದಿತು. ಬೌದ್ಧ ಧರ್ಮ ಸ್ಥಾಪಿಸಿದಂತಹ ಜೆನ್‌ಸೆಕ್ಟ್, ಪ್ಯೂರ್‌ಲ್ಯಾಂಡ್ ಸೆಕ್ಟ್, ಹ್ಯೂಯನ್ ಸೆಕ್ಟ್, ಮುಂತಾದವುಗಳು. ಶಾಕ್ಯ ಮುನಿಗಳು ಹಿಂದೆ ತಮ್ಮ ಕಾಲದಲ್ಲಿ ಕಲಿಸಿದಂತಹ ಅರ್ಥ ವಿವರಣೆ ಮತ್ತು ಒಡಂಬಡಿಕೆಯ ತಳಹದಿಯ ಮೇಲೆ ಇದು ಆಧಾರವಾಗಿದೆ. ಆದ್ದರಿಂದ ಇವೆಲ್ಲವೂ ಬೌದ್ಧ ಧರ್ಮದ ಸುಧಾರಣೆಗೊಂಡ ಭಾಗಗಳೂ ಸಹ. ಬೌದ್ಧ ಧರ್ಮದಲ್ಲಿ ಹನ್ನೆರಡೂ ಅಥವಾ ಅದಕ್ಕೂ ಹೆಚ್ಚಿನ ನೀತಿ ಶಿಕ್ಷಣಗಳಿವೆ. ಅವುಗಳೆಲ್ಲವುಗಳನ್ನು ಧರ್ಮಗಳ ರೂಪದಲ್ಲಿ ತೆಗೆದುಕೊಳ್ಳಲಾಗಿದೆ. ಆದ್ದರಿಂದ ಅವೆಲ್ಲವೂ ಬೌದ್ಧ ಧರ್ಮದ ಭಾಗಗಳು.

---

**೫. ಶೀನ್ ಜಿಯಾಂಗ್** – ವಾಯುವ್ಯ ಚೈನಾದ ಒಂದು ಪ್ರದೇಶ.

**೬. ತಾಂಗ್** – ಚೀನಾ ಚರಿತ್ರೆಯ ಪ್ರಖ್ಯಾತ ರಾಜವಂಶ ಕ್ರಿಸ್ತ ಪೂರ್ವ ೬೧೮ ರಿಂದ ೯೦೭.

ಈ ಶತಮಾನದಲ್ಲಿ ನಿರ್ಮಾಣಗೊಂಡಂತಹ ಧರ್ಮಗಳು ಅಥವಾ ಈ ಶತಮಾನದ್ದು ಮಾತ್ರವಲ್ಲ ಹಿಂದಿನ ಕೆಲವು ಶತಮಾನಗಳಿಂದಲೂ ಪ್ರಪಂಚದಾದ್ಯಂತ ಹೆಚ್ಚು ಹೊಸ ಧರ್ಮಗಳು ನಿರ್ಮಾಣಗೊಂಡವು. ಇವುಗಳಲ್ಲಿ ಬಹಳಷ್ಟು ಧರ್ಮಗಳು ಸತ್ಯವಾದದ್ದಲ್ಲ. ಶ್ರೇಷ್ಠ ಜ್ಞಾನವನ್ನು ಪಡೆದುಕೊಂಡಂತಹ ವ್ಯಕ್ತಿಯು ತನ್ನದೇ ಆದಂತಹ ದೈವೀಕ ಜ್ಞಾನವನ್ನು ಹೊಂದಿ ಜನಗಳನ್ನು ಕಾಪಾಡುತ್ತಿರುತ್ತಾರೆ. ತಾತಘಾಟದ ಸಮಾನ ರಾದಂತಹ ಶಾಕ್ಯಮುನಿ, ಬುದ್ಧ ಅಮಿತಾಭ ಮತ್ತು ಬುದ್ಧ ವಿರೋಚನರು ತಮ್ಮದೇ ಆದ ಪ್ರಪಂಚಕ್ಕೆ ಅಧಿಪತಿಗಳಾಗಿ ಜನಗಳನ್ನು ಕಾಪಾಡುತ್ತಿದ್ದರು. ನೂರರಷ್ಟು ವಿಶ್ವವು ಈ ಆಕಾಶಗಂಗೆಯಲ್ಲಿದೆ ಮತ್ತು ನಮ್ಮ ಫಾಲೂನ್ ದಾಫಾ ಫಾಲೂನ್ ವಿಶ್ವದಲ್ಲಿದೆ.

ಆದ್ದರಿಂದ ನನಗೆ ಹೇಳಿ ಜನಗಳನ್ನು ಕಾಪಾಡಿದಂತಹ ಈ ಸುಳ್ಳು ನೀತಿ ಶಿಕ್ಷಣವು ಅವರನ್ನು ಎಲ್ಲಿಗೆ ಕೊಂಡೊಯ್ಯುತ್ತದೆ. ಅವರು ಏನನ್ನು ಬೋಧಿಸುತ್ತಾರೋ ಅದು ಧರ್ಮಶಾಸ್ತ್ರವಲ್ಲ. ಬಹುಶಃ ಕೆಲವ್ಯಕ್ತಿಗಳು ಮೊದಲ ಬಾರಿಗೆ ತಮ್ಮದೇ ಆದ ಧರ್ಮವನ್ನು ಸ್ಥಾಪಿಸಿದಾಗ ಮೂಲ ಧರ್ಮವನ್ನು ಹಾಳು ಮಾಡುವಂತಹ ಮನುಷ್ಯನಾಗಬಯಸಲಿಲ್ಲ. ವಿವಿಧ ಹಂತಗಳಲ್ಲಿ ಅವರು ರಹಸ್ಯವನ್ನು ಬೇಧಿಸಿ ಜ್ಞಾನವಂತರಾದರು ಮತ್ತು ಕೆಲವು ಸತ್ಯಗಳನ್ನು ನೋಡಿದರು.

ಆದರೆ ಅವರು ಜನಗಳನ್ನು ರಕ್ಷಿಸುವಂತಹ ಜ್ಞಾನವಂತ ವ್ಯಕ್ತಿಗಳಿಗಿಂತ ಬಹಳ ದೂರದಲ್ಲಿದ್ದರು. ಅವರು ಬಹಳ ಕೆಳಹಂತದಲ್ಲಿದ್ದರು. ಅವರು ಕೆಲವು ಸತ್ಯಗಳನ್ನು ಕಂಡು ಹಿಡಿದಿದ್ದರು. ಸಾಮಾನ್ಯ ಜನರು ನಂಬುವಂತಹ ಕೆಲವು ವಿಷಯಗಳು ತಪ್ಪೆಂಬ ಗ್ರಹಿಕೆ ಅವರಿಗುಂಟಾಗಿತ್ತು ಮತ್ತು ಅವರು ಹೇಗೆ ಒಳ್ಳೆಯ ಕೆಲಸಗಳನ್ನು ಮಾಡುವುದೆಂಬುದನ್ನು ಹೇಳಿದರು. ಮೊದಲಿಗೆ ಅವರು ಇತರ ಧರ್ಮಗಳನ್ನು ವಿರೋಧಿಸಲಿಲ್ಲ. ಆದರೆ ಸಮಯ ಕಳೆದ ಹಾಗೆ ಜನಗಳು ನಂಬಲು ಮೊದಲಿಟ್ಟರು ಮತ್ತು ಅದರಲ್ಲಿ ಅನುರಕ್ತರಾದರು. ತಾವು ಮಾಡಿದ ವಿಚಾರ ವಿವೇಕಪರವಾದದ್ದೆಂದು ಅವರು ಅರಿತರು ಆನಂತರ ಅದರಲ್ಲಿ ಹೆಚ್ಚಿನ ನಂಬಿಕೆಯನ್ನಿಟ್ಟರು. ಆದ್ದರಿಂದ ಜನರು ಅವರಿಗೆ ದೃಢನಿಷ್ಠೆಯುಳ್ಳವರಾದರು ಮತ್ತು ಧರ್ಮಗಳಲ್ಲಿ ಅನುರಕ್ತರಾಗುವುದನ್ನು ನಿಲ್ಲಿಸಿದರು. ಒಮ್ಮೆ ಪ್ರಸಿದ್ಧಿ ಮತ್ತು ಲಾಭ ಅವರ ಅಕ್ಕರೆಯ ಉಗಮವಾದರೆ ತಮಗೆ ಬಂದು ಶಿರೋನಾಮೆಯನ್ನು ಕೊಡಬೇಕೆಂದು ಅವರು ಸಾರ್ವಜನಕರನ್ನು ಕೇಳುತ್ತಾರೆ. ಅಲ್ಲಿಂದಾಚೆ ಅವರು ನೂತನ ಧರ್ಮದ ಅಡಿಯಲ್ಲಿ ಕಾರ್ಯ ನಡೆಸಲಾರಂಭಿಸುತ್ತಾರೆ. ನಾನು ಹೇಳುತ್ತಿದ್ದೇನೆ ಅದೆಲ್ಲವೂ ಕೆಟ್ಟ ಧರ್ಮಗಳೆಂದು ಏಕೆಂದರೆ ಅವರು ಜನರ ಮೂಲಧರ್ಮದ ನಂಬಿಕೆಗೆ ಅಡ್ಡಿಯುಂಟು ಮಾಡಿದ್ದಾರೆ. ಮೂಲ ಧರ್ಮಗಳು ಜನರನ್ನು ಕಾಪಾಡಬಲ್ಲವು. ಆದರೆ ಬೇರೆಯವು ಈ ರೀತಿ ಮಾಡಲಾಗದು. ಆದರೆ ಸಮಯ ಕಳೆದ ಹಾಗೆ ಅವರು ಕಪಟದಿಂದ ಕೆಟ್ಟ ಕೆಲಸಗಳನ್ನು ಮಾಡುತ್ತಾರೆ. ಇತ್ತೀಚೆಗೆ ಇಂತಹ ಹೆಚ್ಚಿನ ಸಂಗತಿಗಳು ಚೈನಾದಲ್ಲಿ ಹರಡಿವೆ. ಇದರಲ್ಲೊಂದಾದ **ಗಯಾನ್ ಸೆಕ್ಟ್** ಎಂಬುದಿದೆ. ಆದ್ದರಿಂದ ನೀವು ಗಮನಿಸುತ್ತಿದ್ದೀರೆಂದು ಖಾತ್ರಿ ಮಾಡಿಕೊಳ್ಳಿ. ಈಸ್ಟ್ ಏಷಿಯಾದಲ್ಲಿನ ಒಂದೇ ದೇಶದಲ್ಲಿ ಇಂತಹ 2000 ಜನರಿದ್ದಾರೆಂದು ಅವರು ಹೇಳುತ್ತಾರೆ. ಸೌತ್ ಈಸ್ಟ್ ಏಷಿಯಾದಲ್ಲಿ ಮತ್ತು ಪಾಶ್ಚಾತ್ಯ ದೇಶಗಳಲ್ಲಿ ಜನರು ನಂಬುವಂತಹ ಎಲ್ಲಾ ರೀತಿಯ ಸಂಗತಿಗಳುಂಟು. ಒಂದು ದೇಶವು ಖುಲ್ಲಂಖುಲ್ಲಾಗಿ ಮಾಟ ಮಾಡುವಷ್ಟು ಮುಂದುವರೆಯುತ್ತದೆ. ನಿಯಮದ ಕೊನೆಯ ಕಾಲದಲ್ಲಿ ಭೀಕರವಾದ ವಿಷಯಗಳು ಕಾಣಿಸಿಕೊಳ್ಳುತ್ತವೆ. ನಿಯಮದ ಕೊನೆಯ ಕಾಲ ಕೇವಲ ಬೌದ್ಧ ಧರ್ಮಕ್ಕೆ ಮಾತ್ರ ಸಂಬಂಧಿಸಿದದ್ದಲ್ಲ. ಉಚ್ಚ ಹಂತದ ಎಷ್ಟೋ ಆಯಾಮಗಳು ಕೆಟ್ಟದ್ದಾಗಿ ಪರಿಣಮಿಸಿತ್ತು ಮತ್ತು ನಿಯಮದ ಅಂತ್ಯ ಬೌದ್ಧ ನಿಯಮದ ಅಂತ್ಯದೊಂದಿಗೆ ಏನೂ ಮಾಡಬೇಕಿದ್ದಿಲ್ಲ ನಿಯಮವನ್ನು ಅಂಕೆಯಲ್ಲಿಟ್ಟುಕೊಂಡು ತಮ್ಮ ಹೃದಯದಲ್ಲಿ ನೈತಿಕ ಸಂರಕ್ಷಣೆಯಿಲ್ಲದಿದ್ದರೆ ಈ ವಿಶ್ವವು ಹೇಗಿರುತ್ತದೆಂಬುದನ್ನು ತಿಳಿಸುತ್ತದೆ.

**ಮೂರನೆಯ ಕಣ್ಣು – ಥರ್ಡ್ ಐ (Third Eye) ದಿವ್ಯ ದೃಷ್ಟಿ.**

---

7. **ಗಯಾನ್ ಸೆಕ್ಟ್** – ಕಪಟ ಭೋಧಿ ಸತ್ವ.

## ಅಭ್ಯಾಸದಲ್ಲಿ ನೀವು ಒಂದು ನಿಯಮಕ್ಕೆ ಬದ್ಧರಾಗಿರಬೇಕಾದ ಅವಶ್ಯಕತೆ

ಅಭ್ಯಾಸದಲ್ಲಿ ನೀವು ಒಂದು ನಿಯಮಪಾಲನೆಗೆ ಬದ್ಧರಾಗಿರಬೇಕಾದ ಅವಶ್ಯಕತೆ ಇದೆಯೆಂದು ನಾವು ಬೋಧಿಸುತ್ತೇವೆ. ಇಲ್ಲಿ ನೀವು ಯಾವ ನಿಯಮ ಪಾಲನೆಯನ್ನು ಮಾಡುತ್ತಿದ್ದೀರೆಂಬುದು ಅಪ್ರಸ್ತುತ. ಇತರೇ ವಿಷಯಗಳನ್ನು ನೀವು ಇದರಲ್ಲಿ ಬೆರೆಸಬಾರದು ಮತ್ತು ಚಿಂತನೆಯಿಲ್ಲದೆ ಅಭ್ಯಾಸ ಮಾಡಬಾರದು.

ಕೆಲವು ಬೌದ್ಧರು ಅಭ್ಯಾಸ ಮಾಡುವ ವಿಷಯಗಳನ್ನು ಬೌದ್ಧ ಧರ್ಮದಲ್ಲೂ ಹಾಗೂ ಫಾಲೂನ್‌ದಾಫಾ ವಿಷಯಗಳಲ್ಲಿಯೂ ಹರಡುತ್ತಾರೆ. ನಾನು ನಿಮಗೆ ಹೇಳಬಯಸುತ್ತೇನೆ. ನಿಮಗೆ ಎಂದೆಂದಿಗೂ ಏನೂ ಸಿಗುವುದಿಲ್ಲ. ಯಾರೂ ನಿಮಗೆ ಏನನ್ನು ಕೊಡುವುದಿಲ್ಲ, ಕಾರಣವೇನೆಂದರೆ ನಾವೆಲ್ಲರು ಬೌದ್ಧರಾಗಿದ್ದರೂ ಸಹ ಇಂದಿಗೂ ನಡತೆಯ ಬಗ್ಗೆ ವಿವಾದವಿದೆ. ಮತ್ತು ಒಂದು ನಿಯಮ ಪಾಲನೆಗೆ ಬದ್ಧರಾಗಿರಬೇಕಾದಂತಹ ವಿವಾದವಿದೆ. ನಿಮಗೆ ಕೇವಲ ಒಂದು ಶರೀರವಿದೆ. ಆದ್ದರಿಂದ ಯಾವುದಾದರೊಂದು ನಿಯಮಪಾಲನೆಯ ಕೃಷಿ ಶಕ್ತಿಯನ್ನು ನಿಮ್ಮ ಶರೀರವು ಬೆಳೆಸಿಕೊಳ್ಳುತ್ತದೆ. ಅದು ಹೇಗೆ ನಿಮ್ಮಲ್ಲಿ ಕ್ರಮವಾಗಿ ಬೆಳೆಯುತ್ತದೆ? ಮತ್ತು ನೀವು ಎಲ್ಲಿ ಹೋಗಬಯಸುತ್ತೀರಿ? ಅಭ್ಯಾಸದಲ್ಲಿ ನೀವು ಯಾವ ನಿಯಮ ಪಾಲನೆ ಅನುಸರಿಸಿ, ಅಲ್ಲಿಗೆ ನೀವು ತಲುಪುವಿರಿ. ಸ್ವಚ್ಛ ನೆಲವನ್ನು ಅನುಸರಿಸಿ (Pure Land) ನೀವು ಅಭ್ಯಾಸವನ್ನು ಮಾಡಿದಲ್ಲಿ ನೀವು ಬುದ್ಧ ಅಮಿತಾಬರ ವೆಸ್ಟರ್ನ್ ಪ್ಯಾರಡೈಸ್ (Buddha's Amitabha's Westers Paradise) ತಲುಪುವಿರಿ ಮತ್ತು ನೀವು ಬೈಶಾಜ್ಯ ಗುರು (Bhaishjya Guru)ಗಳನ್ನು ಅನುಸರಿಸಿದಲ್ಲಿ ನೀವು ಎಮೆರಾಲ್ಡ್ (Emerald) ಪ್ರಪಂಚಕ್ಕೆ/ವಿಶ್ವಕ್ಕೆ ಹೋಗುವಿರಿ. ಅಥವಾ ಕೊನೆಯ ಪಕ್ಷ ಧರ್ಮಗಳು ಇದನ್ನು ಹೀಗೆ ಹೇಳುತ್ತವೆ. ಮತ್ತು ಇದನ್ನು ನೋ ಸೆಕೆಂಡ್ ಡಿಸಿಪ್ಲಿನ್ (ಎರಡನೇ ನಿಯಮ ಪಾಲನೆಯಿಲ್ಲ) ಎಂದು ಕರೆಯಲಾಗುತ್ತದೆ.

ನಾವಿಲ್ಲಿ ಯಾವ ಕೃಷಿ ಶಕ್ತಿಯ ಬಗ್ಗೆ ಮಾತನಾಡುತ್ತಿದ್ದೇವೋ ಅದು ಖಂಡಿತ ವಾಗಿಯೂ ಕೃಷಿ ಶಕ್ತಿಯನ್ನು ಕ್ರಮವಾಗಿ ಬೆಳೆಸುವ ಒಂದು ಪ್ರಕ್ರಿಯೆಯಾಗಿದೆ. ಮತ್ತು ಇದು ಒಬ್ಬ ವ್ಯಕ್ತಿಯು ಮಾಡುವ ವಿಶಿಷ್ಟ ಶಿಸ್ತು ಕ್ರಮವನ್ನು ಅನುಸರಿಸುತ್ತದೆ. ಆದ್ದರಿಂದ ನೀವೆಲ್ಲಿ ಸಾಗುತ್ತಿರುವಿರೆಂದು ನೀವು ಯೋಚಿಸಿರುವಿರಾ? ನೀವು ಎರಡು ದೋಣಿಗಳಲ್ಲಿ ಕಾಲಿಟ್ಟಿದ್ದೀರಿ ಮತ್ತು ನಿಮಗೆ ಏನೂ ಸಿಗುವುದಿಲ್ಲ. ಬೌದ್ಧ ದೇವಾಲಯಗಳಲ್ಲಿ ಅಭ್ಯಾಸ ಮಾಡುವ ಬೌದ್ಧ ಧರ್ಮವನ್ನು ಚಿಗಾಂಗ್‌ನೊಂದಿಗೆ ಬೆರೆಸುವುದು ಮಾತ್ರವಲ್ಲದೆ ಇತರ ಯಾವುದೇ ಅಭ್ಯಾಸ ಮಾರ್ಗಗಳಲ್ಲಿ ಬೆರಕೆ ಇರಬಾರದು. ವಿಭಿನ್ನ ಚಿಗಾಂಗ್ ಅಥವಾ ವಿಭಿನ್ನ ಧರ್ಮಗಳಲ್ಲಿ ಒಂದೇ ಧರ್ಮದಲ್ಲಿನ ಇತರೆ ಕಟ್ಟುಪಾಡುಗಳನ್ನು ಒಬ್ಬ ವ್ಯಕ್ತಿಯ ಅಭ್ಯಾಸದಲ್ಲಿ ಬೆರೆಸಲಾಗುವುದಿಲ್ಲ.

ನೀವು ಕೇವಲ ಒಂದು ನಿಯಮಪಾಲನೆಯನ್ನು ಆರಿಸಿಕೊಳ್ಳಬಹುದು. ನೀವು ಸ್ವಚ್ಛ ನೆಲದ ಅಭ್ಯಾಸ ಮಾಡಿದರೆ ನಂತರ ಅದು ಸ್ವಚ್ಛ ನೆಲವಾಗಿರುತ್ತದೆ. ನೀವು ತಾಂತ್ರಿಕತೆಯನ್ನು ಅಭ್ಯಾಸ ಮಾಡಿದರೆ ಅದು ತಾಂತ್ರಿಕತೆಯಾಗಿರುತ್ತದೆ. ನೀವು ಜೆನ್‌ಸೆಕ್ಟ್ (Zen Sect) ಅಭ್ಯಾಸ ಮಾಡಿದರೆ, ಅದು ಜೆನ್ ಸೆಕ್ಟ್ ಆಗಿರುತ್ತದೆ. ನೀವು ಎರಡು ದೋಣಿ ಗಳಲ್ಲಿ ಕಾಲಿಟ್ಟರೆ ಇಲ್ಲಿನ ಅಭ್ಯಾಸವನ್ನು ಸ್ವಲ್ಪ ಮಾಡುವಿರಿ. ನಂತರ ನಿಮಗೇನು ಸಿಗುವುದಿಲ್ಲ. ಇತರ ಮಾತುಗಳಲ್ಲಿ ಹೇಳಬೇಕೆಂದರೆ ಬೌದ್ಧ ಧರ್ಮದಲ್ಲೂ ಸಹ ಎರಡನೇ ನಿಯಮಪಾಲನೆಯನ್ನು ಬೋಧಿಸುವುದಿಲ್ಲ. ಮತ್ತು ನಿಮ್ಮ ಅಭ್ಯಾಸದಲ್ಲಿ ಇತರ ವಿಷಯ ಗಳನ್ನು ಬೆರೆಸಲು ನಿಮಗೆ ಅನುಮತಿಯಿಲ್ಲ. ಒಂದು ಗುಂಪಿಗೆ ತನ್ನದೇ ಆದ ಅಭ್ಯಾಸ ಮಾರ್ಗವಿದೆ. ಮುಂದಿನ ಗುಂಪಿಗೂ ತನ್ನದೇ ಆದ ಅಭ್ಯಾಸ ಮಾರ್ಗವಿದೆ. ಪ್ರತಿ ಗುಂಪು ತನ್ನದೇ ನಿಯಮಪಾಲನೆಯ ಅಭ್ಯಾಸ ಮಾರ್ಗವನ್ನು ಅನುಸರಿಸುತ್ತಾರೆ. ಇದರ ಕ್ರಮವಾಗಿ ಬೆಳೆಯುವ ಮಾರ್ಗವು ತನ್ನ ಕೃಷಿ ಶಕ್ತಿಯನ್ನು ಬೆಳೆಸುವ ಮಾರ್ಗವಾಗಿದ್ದರೆ ಮಾತ್ರ ಸಾಧ್ಯವಾಗುತ್ತದೆ. ಇತರ ಆಯಾಮಗಳಲ್ಲಿ ಹೇಳುವುದಾದರೆ ಕೃಷಿ ಶಕ್ತಿ/ಗಾಂಗ್ ಬೆಳೆಸುವ ಒಂದು ಪ್ರಕ್ರಿಯೆಯಾಗಿದೆ. ಅದೂ ಸಹ ವಿಸ್ಮಯಕಾರಿಯಾದಷ್ಟು ನಂಬಲಾಗದಷ್ಟು ಜಠಿಲವಾಗಿದೆ. ಅದೂ ಸಹ ನಂಬಲಾರದಷ್ಟು ಆಸಕ್ತಿ ಹುಟ್ಟಿಸುವ ಮೋಡಿ ಮಾಡುವ ಪ್ರಕ್ರಿಯೆಯಾಗಿದೆ. ಅಭ್ಯಾಸ ಮಾಡುವಾಗ ನೀವು ಇತರ ವಿಷಯಗಳನ್ನು ಸುಲಭವಾಗಿ ಇದರೊಂದಿಗೆ ಬೆರೆಸಲಾಗುವುದಿಲ್ಲ.

ನಾವು ಬೌದ್ಧ ಚಿಗಾಂಗ್ ಅಭ್ಯಾಸ ಮಾಡುತ್ತಿದ್ದೀವೆಂದು ಬೌದ್ಧ ಧರ್ಮದ ಸ್ಥಾಪಕರು ಕೇಳಿದ ಒಡನೆಯೇ ಅವರು ನಮ್ಮ ವಿದ್ಯಾರ್ಥಿಗಳನ್ನು ದೇವಾಲಯಗಳಿಗೆ ಎಳೆದುಕೊಂಡು ಹೋಗಿ ಅವರನ್ನು ಬೌದ್ಧ ಧರ್ಮಕ್ಕೆ ಮತಾಂತರಿಸುತ್ತಾರೆ. ನಾನು ನಿಮಗೆ ಹೇಳ ಬಯಸುತ್ತೇನೆ. ಪ್ರೇಕ್ಷಕರಲ್ಲಿರುವ ವಿದ್ಯಾರ್ಥಿಗಳು ಅದನ್ನು ಮಾಡುವುದಿಲ್ಲ. ನೀವು ನಿಮ್ಮ ಫಾಲೂನ್‌ದಾಫಾಗೆ ಹಾನಿ ಮಾಡುತ್ತೀರಿ ಮತ್ತು ಬೌದ್ಧ ಧರ್ಮದಲ್ಲಿನ ದೈವಾಜ್ಞೆಗೆ ಹಾನಿ ಮಾಡುತ್ತೀರಿ. ಅವರು ಏನೂ ಪಡೆದುಕೊಳ್ಳಲಾಗುವುದಕ್ಕೆ ಕಾರಣರಾಗುತ್ತೀರಿ. ನೀವು ಅದನ್ನು ಮಾಡಲಾಗುತ್ತಿಲ್ಲ. ಅಭ್ಯಾಸವು ಒಂದು ಅತಿ ಮುಖ್ಯ ವಿಷಯ. ಮತ್ತು ಅದರಲ್ಲಿ ನೀವು ಒಂದು ಶಿಸ್ತಿಗೆ ಬದ್ಧರಾಗಿರಬೇಕು. ಆದಾಗ್ಯೂ ನಾವು ಸಾಮಾನ್ಯ ಜನರೊಂದಿಗೆ ಬೋಧಿಸುವ ಭಾಗವು ಧರ್ಮದಲ್ಲಿ ಅಭ್ಯಾಸದ ಗುರಿಯು ಒಂದೇ. ಇದು ನಾವು ರಹಸ್ಯ ಬೇಧಿಸಲು ಅಥವಾ ಜ್ಞಾನೋದಯ ಪಡೆಯಲು ಮತ್ತು ಅಭ್ಯಾಸದಲ್ಲಿ ಸಿದ್ಧಿ ಹೊಂದುವುದಾಗಿರುತ್ತದೆ ಮತ್ತು ಪರಿಪೂರ್ಣತೆಯನ್ನು ಸಾಧಿಸುವುದಾಗಿರುತ್ತದೆ. ಅದೇ ಗುರಿ.

ಸಾಖ್ಯ ಮುನಿಗಳು ಹೇಳಿದ್ದಾರೆ ಕಾನೂನಿನ ಕೊನೆಯ ಕಾಲದಲ್ಲಿ, ಕಾನೂನಿನ ಅಂತಿಮ ಘಟ್ಟದಲ್ಲಿ ದೇವಾಲಯಗಳಲ್ಲಿರುವ ಸನ್ಯಾಸಿಗಳಿಗೆ ತಮ್ಮನ್ನು ತಾವೇ ರಕ್ಷಿಸಿ ಕೊಳ್ಳುವುದು ಕಷ್ಟಕರವಾಗಿರುತ್ತದೆ ಹಾಗೂ ಬೌದ್ಧ ಧರ್ಮದ ಸ್ಥಾಪಕರಿಂದ ಹೆಚ್ಚೇನನ್ನು ನಿರೀಕ್ಷಿಸಲು ಸಾಧ್ಯ? ದೇವಾಲಯಗಳಲ್ಲಿರುವವರಿಗಿಂತ ಕಡಿಮೆ ರಕ್ಷಣೆ ಇವರಿಗೆ ಸಿಗುತ್ತಿತ್ತು. ನೀವು ಯಾರನ್ನಾದರೂ ಗುರುಗಳನ್ನಾಗಿ ಸ್ವೀಕರಿಸಿದ್ದಲ್ಲಿ ನೀವು ಯಾರನ್ನು ಗುರುವೆಂದು ಕರೆಯುವಿರೋ ಆತನು ಸಹ ಅಭ್ಯಾಸ ಮಾಡುವವನೇ ಆಗುತ್ತಿದ್ದ. ಆತನು ನಿಜವಾಗಿಯೂ ಅಭ್ಯಾಸವನ್ನು ಮಾಡದಿದ್ದಲ್ಲಿ ನಿಮ್ಮ ಸಮಯವೆಲ್ಲವೂ ವ್ಯರ್ಥ. ಒಬ್ಬ ವ್ಯಕ್ತಿಯು ತನ್ನ ಮನಸ್ಸನ್ನು ನಿಗ್ರಹಿಸದಿದ್ದಲ್ಲಿ ಆತನು ಉನ್ನತ ಮಟ್ಟಕ್ಕೆ ಏರಲಾರ. ಆತನು ಯಾರೇ ಆಗಿರಲಿ, ಮತಾಂತರವು ಸಾಮಾನ್ಯ ಜನಗಳ ವಿಷಯ. ಒಮ್ಮೆ ನೀವು ಬೌದ್ಧ ಧರ್ಮಕ್ಕೆ ಮತಾಂತರಗೊಂಡರೆ ನಿಮ್ಮನ್ನು ನೀವೇ ಬೌದ್ಧರನ್ನಾಗಿ ಮಾಡಿಕೊಂಡಂತಲ್ಲವೇ? ನಂತರ ಬುದ್ಧನು ನಿಮ್ಮ ಕ್ಷೇಮ ನೋಡಿಕೊಳ್ಳಬೇಕಲ್ಲವೇ? ಅಂತಹದ್ದೇನು ಇಲ್ಲ. ಪ್ರತಿದಿನವು ಹಣೆಯಿಂದ ರಕ್ತ ಬರುವವರೆಗೂ ನೀವು ಅವನಿಗೆ ಬಗ್ಗಿ ಸಾಷ್ಟಾಂಗ ನಮಸ್ಕಾರ ಮಾಡಬಹುದು, ಸುಗಂಧ ಕಡ್ಡಿಯ ಕಂತೆ, ಕಂತೆ ಹಚ್ಚಬಹುದು. ಆದರೂ ಇವೆಲ್ಲ ಉಪಯೋಗವಿಲ್ಲ.

ಕೇವಲ ನಿಮ್ಮ ಮನಸ್ಸನ್ನು ವಿಕಾಸಗೊಳಿಸಿಕೊಂಡರೆ ಮಾತ್ರ ಇವೆಲ್ಲವೂ ನಡೆಯುತ್ತದೆ. ನಿಬಂಧನೆ/ಧರ್ಮಶಾಸ್ತ್ರ/ಕಟ್ಟಳೆಯ ಹಂತಕ್ಕೆ ತಲುಪಿದಾಗ ಈ ವಿಶ್ವದಲ್ಲಿ ಬಹಳಷ್ಟು ಬದಲಾವಣೆಗಳಾಗುತ್ತದೆ. ಮತ್ತು ಎಲ್ಲಾ ಜನರು ಎಲ್ಲಿ ಅಭ್ಯಾಸ/ಅನುಷ್ಟಾನ ಆಚರಣೆಯನ್ನು (Practice) ಮಾಡುತ್ತಾರೋ ಅಲ್ಲಿನ ಧಾರ್ಮಿಕ ನಂಬಿಕೆಗಳು ಸಹ ಇನ್ನು ಮುಂದೆ ಒಳ್ಳೆಯದಾಗಿರುವುದಿಲ್ಲ. ಸಾಮರ್ಥ್ಯವಿರುವ ಜನರು ಈಗಾಗಲೇ ಇದನ್ನು ಕಂಡು ಹಿಡಿದಿದ್ದಾರೆ (ಮತ್ತು ಇದು ಅಲ್ಲಿನ ಸನ್ಯಾಸಿಗಳನ್ನು ಸೇರಿಸಿಕೊಳ್ಳುತ್ತದೆ). ಈಗ ನಾನೊಬ್ಬನೇ ಪ್ರಪಂಚದಲ್ಲಿ ಬಹಿರಂಗವಾದ ಸತ್ಯ ಬೋಧನೆಯನ್ನು ಹರಡುತ್ತಿರುವುದು. ಇದಕ್ಕೂ ಮೊದಲು ಯಾರೂ ಮಾಡದ ಕೆಲಸವನ್ನು ನಾನು ಮಾಡುತ್ತಿದ್ದೇನೆ. ಧರ್ಮಶಾಸ್ತ್ರ/ ಕಟ್ಟಳೆಯ ಕೊನೆಯ ಕಾಲದಲ್ಲಿ ನಾನು ಇದನ್ನು ಪ್ರತಿಯೊಬ್ಬರಿಗೂ ಸಿಗುವಂತೆ ಮಾಡಿದ್ದೇನೆ. ಸತ್ಯವೇನೆಂದರೆ ಒಬ್ಬ ವ್ಯಕ್ತಿಗೆ ಸಾವಿರ ವರ್ಷಗಳಾದರೂ ಸಿಗುವುದಿಲ್ಲ, ಆದರೆ ಅದು ನಿಮ್ಮನ್ನು ರಕ್ಷಿಸಲಾಗುತ್ತದೆಯೇ. ಇದು ನೀವು ಅಭಿವೃದ್ಧಿ ಹೊಂದುವುದರ ಮೇಲೆ ಅವಲಂಬಿತವಾಗಿರುತ್ತದೆ. ಇದು ನಿಮ್ಮ ಮೇಲೆ ಅವಲಂಬಿಸಿರುತ್ತದೆ. ವಿಶ್ವದ ಬಗೆಗಿನ ಅತಿ ಗಾಢವಾದ ಸತ್ಯವನ್ನು ನಾನು ನಿಮಗೆ ಬೋಧಿಸಿದ್ದೇನೆ.

ನೀವು ನಿಮ್ಮ ಫಾಲೂನ್ ದಾಫಾ ಕಲಿಯಬೇಕೆಂದು ನಾನು ನಿಮಗೆ ಹೇಳುತ್ತಿಲ್ಲ. ಆದರೆ ನಾನು ನಿಮಗೆ ಏನು ಹೇಳುತ್ತಿದ್ದೇನೆಂದರೆ ನಾನು ಕೆಲವು ಸಿದ್ಧಾಂತಗಳನ್ನು ನಿಮ್ಮೊಂದಿಗೆ ಹಂಚಿಕೊಳ್ಳುತ್ತಿದ್ದೇನೆ. ನೀವು ಅಭ್ಯಾಸವನ್ನು ಮಾಡಬೇಕಾದರೆ ಒಂದು ನಿಯಮಕ್ಕೆ ಬದ್ಧರಾಗಿರಬೇಕಾಗುತ್ತದೆ. ಇಲ್ಲದಿದ್ದರೆ ಒಂದು ಸ್ವಲ್ಪ ಅಭ್ಯಾಸವನ್ನೂ ನಿಮಗೆ ಮಾಡಲಾಗುವುದಿಲ್ಲ. ಬಹುಶ: ನಿಮಗೆ ಅಭ್ಯಾಸ ಮಾಡಲು ಇಷ್ಟವಿಲ್ಲದಿದ್ದರೆ, ನಿಮ್ಮನ್ನು ನಾವು ಒಂಟಿಯಾಗಿ ಬಿಟ್ಟುಬಿಡುತ್ತೇವೆ. ಯಾರು ನಿಜವಾದ ಅಭ್ಯಾಸವನ್ನು ಮಾಡುತ್ತಾರೋ ಅವರು ಮಾತ್ರ ಈ ನಿಬಂಧನೆಗಳನ್ನು ಕೇಳಿಸಿಕೊಳ್ಳಲು ಅರ್ಹರಾಗಿರುತ್ತಾರೆ. ಆ ಕಾರಣ

ದಿಂದಲೇ ನೀವು ಒಂದು ನಿಯಮಕ್ಕೆ ಬದ್ಧರಾಗಿರಬೇಕು. ಇತರ ಯಾವುದೇ ಅಭ್ಯಾಸದ ವಿಚಾರಗಳನ್ನು ನೀವು ಇದರಲ್ಲಿ ಬೆರೆಸಲು ಸಾಧ್ಯವಿಲ್ಲ. ವಿಷಯ ಸೂಚಿಯನ್ನು ಉಪಯೋಗಿಸುವ ಬೋಧನೆಯನ್ನು ನಾನಿಲ್ಲಿ ಮಾಡುವುದಿಲ್ಲ. ಮತ್ತು ನಮ್ಮ ಫಾಲೂನ್ ದಾಫಾ ವಿಷಯ ಸೂಚಿಯ ಬಗ್ಗೆ ಹೆಚ್ಚು ತಲೆಕೆಡಿಸಿಕೊಳ್ಳುವುದಿಲ್ಲ. ಆದ್ದರಿಂದ ಯಾವುದೇ ವಿಷಯಗಳನ್ನು ಇದಕ್ಕೆ ಸೇರಿಸಲು ಪ್ರಯತ್ನಿಸಬೇಡಿ. ಈ ಬಗ್ಗೆ ಖಂಡಿತವಾಗಿಯೂ ನೀವು ಎಚ್ಚರಿಕೆ ವಹಿಸುವುದು ಒಳ್ಳೆಯದು. ಹೆಚ್ಚಿನ ಭಾಗಗಳಿಗೆ ನಮಗೆ ವಿಷಯ ಸೂಚಿಗಳಿಲ್ಲ. ಶೂನ್ಯತೆಯ ಬಗ್ಗೆ ಬೌದ್ಧರು ಮತ್ತು ಡಯಸ್ಟ್ ಶೂನ್ಯದ ಬಗ್ಗೆ ಮಾತನಾಡುವುದಿಲ್ಲವೇ?

ಒಂದು ಕಾಲದಲ್ಲಿ ನನ್ನ ಮನಸ್ಸು ನಾಲ್ಕು ಅಥವಾ ಐದು ಅತ್ಯುತ್ತಮ ಜ್ಞಾನವಂತ ವ್ಯಕ್ತಿಗಳೊಂದಿಗೆ ಸಂಬಂಧವನ್ನು ಹೊಂದಿತ್ತು. ಅತ್ಯುನ್ನತ ಹಂತವನ್ನು ಹೊಂದಿದ ಗ್ರೇಟ್ ಡೋಯಸ್ (Great Daos) ರವರೊಂದಿಗೆ ಸಂಬಂಧವಿತ್ತು. ನೀವು ಅತ್ಯುನ್ನತ ಹಂತದ ಬಗ್ಗೆ ಮಾತನಾಡಲು ಇಚ್ಚಿಸುತ್ತೀರಿ? ಅವರೆಷ್ಟು ಎತ್ತರದಲ್ಲಿದ್ದರೆಂದರೆ ಸಾಮಾನ್ಯ ಮನುಷ್ಯರು ಅವರನ್ನು ಕಂಡು ದಿಗ್ಭ್ರಮೆಗೊಳ್ಳುತ್ತಿದ್ದರು. ನಾನು ಯಾವುದರ ಬಗ್ಗೆ ಯೋಚಿಸುತ್ತಿದ್ದೇನೆಂದು ಪ್ರಯತ್ನಿಸುತ್ತಿದ್ದರು. ಇಷ್ಟು ವರ್ಷಗಳ ನನ್ನ ಅಭ್ಯಾಸ ಕಾಲದಲ್ಲಿ ನನ್ನ ಮನಸ್ಸನ್ನು ಓದಲು/ ಅರಿತುಕೊಳ್ಳಲು ಯಾರಿಂದಲೂ ಸಾಧ್ಯವಾಗಲಿಲ್ಲ. ಇತರ ಜನರ ಸಾಮರ್ಥ್ಯಗಳು ಕಿಂಚಿತ್ತೂ ನನ್ನ ಮೇಲೆ ಪರಿಣಾಮವನ್ನು ಬೀರಿಲ್ಲ. ಯಾರೂ ನನ್ನನ್ನು ಅರ್ಥ ಮಾಡಿಕೊಳ್ಳಲಾಗಲಿಲ್ಲ. ಮತ್ತು ನಾನು ಏನು ಯೋಚಿಸುತ್ತಿದ್ದೇನೆಂದು ಯಾರಿಗೂ ಅರ್ಥ ಮಾಡಿಕೊಳ್ಳಲಾಗಲಿಲ್ಲ. ನನ್ನ ಮನಸ್ಸಿನಲ್ಲಿ ಏನಾಗುತ್ತಿದೆಯೆಂದು ಅವರು ತಿಳಿದುಕೊಳ್ಳಲು ಬಯಸುತ್ತಿದ್ದರು. ಆದ್ದರಿಂದ ನಾನು ಇದಕ್ಕೆ ಒಪ್ಪಿಕೊಂಡ ಮೇಲೆ ಕೆಲವು ಸಮಯದವರೆಗೆ ಅವರು ನನ್ನ ಮನಸ್ಸಿನೊಂದಿಗೆ ಸಂಪರ್ಕವನ್ನು ಬೆಳೆಸಿದರು. ಅವರು ಸಂಪರ್ಕವನ್ನು ಸಾಧಿಸಿದ ನಂತರ ನನಗೆ ಇದನ್ನು ಸಹಿಸಿಕೊಳ್ಳಲು ಸ್ವಲ್ಪ ಕಷ್ಟವಾಯಿತು. ನನ್ನ ಹಂತ ಯಾವುದೆಂಬುದು ಇಲ್ಲಿ ಮುಖ್ಯವಲ್ಲ. ಅಂದಿನಿಂದಲೂ ನಾನು ಸಾಮಾನ್ಯ ಜನರೊಂದಿಗಿದ್ದೇನೆ. ಜನರನ್ನು ರಕ್ಷಿಸುವ ಕಾರ್ಯವನ್ನು ನಾನು ಉದ್ದೇಶಪೂರ್ವಕವಾಗಿ ಮಾಡುತ್ತಿದ್ದೇನೆ ಮತ್ತು ನನ್ನ ಮನಸ್ಸೆಲ್ಲ ಜನರನ್ನು ರಕ್ಷಿಸುವುದರ ಮೇಲಿದೆ. ಆದರೂ ಅವರ ಮನಸ್ಸುಗಳು ಹೇಗಿವೆ? ಆದ್ದರಿಂದಲೇ ಅದು ಭಯಭೀತಗೊಳ್ಳುವದಾಗಿರುತ್ತದೆ. ಇದು ಕೇವಲ ಒಬ್ಬ ವ್ಯಕ್ತಿಯೊಂದಿಗೆ ಮಾಡುವ ದೊಡ್ಡ ವ್ಯವಹಾರವಲ್ಲ. ಆದರೆ ನಾಲ್ಕು ಅಥವಾ ಐದು ಜನರು ಕುಳಿತಿದ್ದಾರೆ ಮತ್ತು ಅವರೆಲ್ಲರೂ ಒಂದು ಸರೋವರದಲ್ಲಿನ ನೀರು ತಟಸ್ಥ ವಾಗಿರುವಂತೆ ತಟಸ್ಥರಾಗಿದ್ದಾರೆ. ಅಲ್ಲಿ ಏನೂ ಇಲ್ಲ ಅವರ ಇಂದ್ರಿಯಾನುಭವವನ್ನು ಪಡೆಯಲು ಪ್ರಯತ್ನಿಸಿದೆ. ಆದರೆ ಆಗಲಿಲ್ಲ. ಆ ದಿನಗಳಲ್ಲಿ ನನಗೆ ಬಹಳ ಮುಜುಗರ ವೆನಿಸಿತ್ತು. ನನಗೆ ಆ ರೀತಿಯ ಒಂದು ಅನುಭವವಾಗಿತ್ತು. ಇದು ಹೆಚ್ಚಿನ ಜನಗಳು ಊಹಿಸಲಾಗದಂತಹ ಮತ್ತು ಅನುಭವಿಸಲಾಗದಂತಹ ಒಂದಷ್ಟು ಪ್ರಮಾಣವಾಗಿತ್ತು. ಇದು ಸಂಪೂರ್ಣ ಬಾಲಿಶ ಮತ್ತು ಶೂನ್ಯ (Nonaction)

ನೀವು ಅಭ್ಯಾಸವನ್ನು ಉಚ್ಚ ಹಂತದಲ್ಲಿ ಮಾಡಿದಾಗ ಅಲ್ಲಿ ವಿಷಯ ದಿಕ್ಸೂಚಿ ಇರುವುದಿಲ್ಲ. ಕಾರಣವೇನೆಂದರೆ ನೀವು ಸಾಮಾನ್ಯ ವ್ಯಕ್ತಿಯಾಗಿದ್ದಾಗಲೇ ನಿಮ್ಮ ತಳಹದಿಯನ್ನು ಕಟ್ಟುವ ಹಂತದಲ್ಲಿತ್ತು. ಒಂದು ಮೂಲತತ್ವಗಳ ಗುಂಪು ನಿಮ್ಮಲ್ಲಿ ಹಾಸು ಹೊಕ್ಕಾಗಿದ್ದು ನಿಮ್ಮ ಅಭ್ಯಾಸವು ಉತ್ತಮ ಸ್ಥಿತಿಯನ್ನು ತಲುಪಿದಾಗ ಅಭ್ಯಾಸವು ಸಂಪೂರ್ಣವಾಗಿ ಸ್ವಯಂಚಾಲಿತವಾಗಿರುತ್ತದೆ. (Automatic) ನಮ್ಮ ಅಭ್ಯಾಸದಲ್ಲಿ ಇದು ಪ್ರಮುಖ/ಅಸಾಧಾರಣ ಸತ್ಯವಾಗಿದೆ. ಎಲ್ಲಿಯವರೆಗೆ ನೀವು ನಿಮ್ಮ ನಡತೆಯನ್ನು ಸುಧಾರಿಸಿಕೊಳ್ಳುತ್ತಿರುತ್ತಿರೋ ನಿಮ್ಮ ಕೃಷಿ ಶಕ್ತಿಯು ಬೆಳೆಯುತ್ತದೆ ಮತ್ತು ನೀವು ಯಾವುದೇ ಚಲನೆಗಳನ್ನು ಮಾಡುವ ಅಗತ್ಯವಿರುವುದಿಲ್ಲ. ನಮ್ಮ ವ್ಯಾಯಾಮವು ನಿಮ್ಮ ಸ್ವಯಂಚಾಲಿತ ಯಾಂತ್ರಿಕ ವ್ಯವಸ್ಥೆಯನ್ನು ಭದ್ರಪಡಿಸುವುದಾಗಿರುತ್ತದೆ. ಆಳವಾದ ಧ್ಯಾನದಲ್ಲಿ ಜನರು ಏಕೆ ಸ್ತಬ್ಧರಾಗಿರುತ್ತಾರೆ? ಇದು ಸಂಪೂರ್ಣ ಡಯಸ್ಟರು (Daoists) ಎಷ್ಟು ರೀತಿಯ ಚಲನವಲನಗಳನ್ನು ಉಪಯೋಗಿಸುತ್ತಾರೆಂಬುದನ್ನು ನೀವು ನೋಡಿರ ಬಹುದು. ಉದಾಹರಣೆಗೆ : ವಿಚಾರ ಚಟುವಟಿಕೆಗಳು ವಿಚಾರ ಮಾರ್ಗದರ್ಶನಗಳು ಮೊದಲಾದವು. ಆದರೆ ನಾನು ನಿಮಗೆ ಹೇಳಬಲ್ಲೆ ಡಯಸ್ಟರು ಕ್ವಿ (Qi) ಹಂತದಿಂದ ಸ್ವಲ್ಪ ಹಿಂದೆ ಹೋದರೆ ಪರವಾಗಿಲ್ಲ. ಇನ್ನು ಮುಂದೆ ಅವರು ಇಂತಹ ವಿಚಾರಗಳನ್ನು

ಉಪಯೋಗಿಸುವುದಿಲ್ಲ. ಆದ್ದರಿಂದ ಇತರ ಗಾಂಗ್ ಅಭ್ಯಾಸಗಳನ್ನು ಮಾಡುವಂತಹ ಕೆಲ ಜನರು ಉಸಿರಾಡುವ ತಂತ್ರಜ್ಞಾನದಂತೆ ಮತ್ತು ವಿಚಾರಗಳಂತೆ ತಮ್ಮ ತೊಂದರೆಗಳಿಂದ ಕಳಚಿಕೊಳ್ಳುತ್ತಾರೆ. ಕಾಲೇಜಿನ ಹಂತದ ವಿಷಯಗಳನ್ನು ನಾನು ಬೋಧಿಸುತ್ತೇನೆ. ಆದರೆ ಅವರು ಪ್ರಾಥಮಿಕ ಶಾಲಾ ಮಕ್ಕಳು ಕೇಳುವಂತಹ ವಿಷಯಗಳನ್ನು ಕೇಳುತ್ತಾರೆ. ಉದಾಹರಣೆಗೆ: ಹೇಗೆ ಇದಕ್ಕೆ ಅಥವಾ ಅದಕ್ಕೆ ಮಾರ್ಗದರ್ಶನವನ್ನು ಮಾಡುವುದು. ಇತರ ವಿಚಾರಗಳನ್ನು ಹೇಗೆ ಉಪಯೋಗಿಸಿಕೊಳ್ಳುವುದು ಮುಂತಾದವು. ಅಂತಹ ಕೆಲಸಗಳನ್ನು ಮಾಡಲು ಅವರು ಈಗ ಉಪಯುಕ್ತರಾಗಿದ್ದಾರೆ. ಅದು ಅದೇ ಚಿಗಾಂಗ್ ಎಂದು ತಿಳಿದಿರುತ್ತಾರೆ. ಆದರೆ ಅದು ಅಸತ್ಯ.

## ಸಾಮರ್ಥ್ಯ ಮತ್ತು ಸಮರ್ಥ

ಚಿಗಾಂಗ್ ಪದಗಳ ಬಗ್ಗೆ ಸ್ಫುಟವಾದ ತಿಳುವಳಿಕೆಯು ನಮ್ಮಲ್ಲಿ ಹೆಚ್ಚಿನ ಮಂದಿಗೆ ಇರಲಿಲ್ಲ. ಮತ್ತು ಕೆಲ ಜನಗಳು ಕಲಬೆರಕೆಯ ಬೆರೆಸಿದ ಪದಗಳನ್ನು ಪಡೆಯುತ್ತಾರೆ. ಅವರು ಸಾಮರ್ಥ್ಯವನ್ನು ಸಮರ್ಥವೆಂದೂ ಮತ್ತು ಸಮರ್ಥನನ್ನು ಸಾಮರ್ಥ್ಯವೆಂದು ಕರೆಯುತ್ತಾರೆ. ನಮ್ಮ ನಡತೆಯನ್ನು ಅಭಿವೃದ್ಧಿಪಡಿಸಿಕೊಂಡು ಪಡೆದುಕೊಂಡಂತಹ ಕೃಷಿ ಶಕ್ತಿಯು (ಗಾಂಗ್) ವಿಶ್ವದ ಸ್ವಭಾವವನ್ನು ಸಂಪೂರ್ಣವಾಗಿ ರಕ್ತಗತ ಮಾಡಿಕೊಂಡ ನಂತರ ಬಂದಂತಾಗಿರುತ್ತದೆ. ಮತ್ತು ಇದು ನಮ್ಮ ಸದ್ಗುಣದಿಂದ ಅರಳಿದಂತಾಹದ್ದಾ ಗಿರುತ್ತದೆ. ಒಬ್ಬ ವ್ಯಕ್ತಿಯ ಉತ್ಕೃಷ್ಟತೆಯ ಹಂತವನ್ನು ಇದು ಅಳೆಯುವುದಾಗಿರುತ್ತದೆ. ಆತನ ದೃಢ ಸಾಮರ್ಥ್ಯ ಮತ್ತು ಆತನ ಉತ್ಪನ್ನ ಎಷ್ಟು ಉಚ್ಛಮಟ್ಟದ್ದು ಕೃಷಿ ಶಕ್ತಿಗಳಲ್ಲಿ ಇದು ಅತಿ ಮುಖ್ಯವಾದದ್ದು. ಆದ್ದರಿಂದ ಒಬ್ಬ ವ್ಯಕ್ತಿಯು ಅಭಿವೃದ್ಧಿ ಹೊಂದುವ ಪ್ರಕ್ರಿಯೆ ಯಲ್ಲಿದ್ದಾಗ ಯಾವ ರೀತಿಯ ಅಭಿವೃದ್ಧಿಯ ಸ್ಥಿತಿಯು ಪೂರ್ಣ ಸಾಮರ್ಥ್ಯದಿಂದ ಹೊರಬರಬಹುದು? ಆತನಲ್ಲಿರುವ ಕೆಲವು ಅಲೌಕಿಕ ಶಕ್ತಿಗಳು ಹೊರಬೀಳಬಹುದು. ಅದನ್ನು ನಾವು ಸಂಕ್ಷಿಪ್ತವಾಗಿ ಸಾಮರ್ಥ್ಯವೆಂದು ಕರೆಯುತ್ತೇವೆ. ಈಗ ತಾನೇ ನಾನು ಮಾತನಾಡಿದಂತಹ ಕೃಷಿ ಶಕ್ತಿಯು ನಿಮ್ಮ ಹಂತಗಳನ್ನು ಹೆಚ್ಚಿಸುತ್ತದೆ. ಅದನ್ನು ನಾವು ಸಮರ್ಥನೆಂದು ಕರೆಯುತ್ತೇವೆ. ನೀವು ಎಷ್ಟು ಉಚ್ಚ ಹಂತದಲ್ಲಿದ್ದರೆ ಅಷ್ಟು ಹೆಚ್ಚು ಸಮರ್ಥರಾಗಿರುವಿರಿ. ಮತ್ತು ನಿಮ್ಮ ಸಾಮರ್ಥ್ಯಗಳು ಹೆಚ್ಚು ಪ್ರಬಲವಾಗಿರುತ್ತದೆ.

ಅಭ್ಯಾಸ ಪ್ರಕ್ರಿಯೆಯು ಕೇವಲ ಸಾಮರ್ಥ್ಯದ ಉಪವಸ್ತುಗಳು, ಅವು ನಿಮ್ಮ ಹಂತವನ್ನು ಪ್ರತಿನಿಧಿಸುವುದಿಲ್ಲ. ಅದು ಒಬ್ಬ ವ್ಯಕ್ತಿಯು ಎಷ್ಟು ಉನ್ನತ ಹಂತದಲ್ಲಿದ್ದಾನೆನ್ನು ವುದನ್ನಾಗಲೀ ಅಥವಾ ಆತನ ಸಾಮರ್ಥ್ಯವು ಎಷ್ಟು ತೀಕ್ಷ್ಣವೆಂಬುದನ್ನಾಗಲಿ ಪ್ರತಿಬಿಂಬಿಸುವುದಿಲ್ಲ. ಕೆಲವರಲ್ಲಿ ಈ ಸಾಮರ್ಥ್ಯವು ಹೆಚ್ಚಿದ್ದು, ಹೆಚ್ಚಾಗಿ ಹೊರಬರುತ್ತವೆ. ಮತ್ತು ಕೆಲವರಲ್ಲಿ ಕಡಿಮೆ ಸಾಮರ್ಥ್ಯವನ್ನೇ ಮುಖ್ಯ ಗುರಿಯನ್ನಾಗಿ ಅಭಿವೃದ್ಧಿಯಲ್ಲಿ ತೆಗೆದುಕೊಳ್ಳಲಾಗುವುದಿಲ್ಲ. ಮತ್ತು ಅವುಗಳನ್ನು ಅನ್ವೇಷಿಸುವುದರಿಂದ ಪಡೆದು ಕೊಳ್ಳಲಾಗುವುದಿಲ್ಲ. ಒಬ್ಬ ವ್ಯಕ್ತಿಯು ಸತ್ಯವಾಗಿ ಅಭ್ಯಾಸ ಮಾಡಬೇಕೆಂಬುದನ್ನು ನಿರ್ಣಯಿಸಿದ ಪಕ್ಷದಲ್ಲಿ ಮಾತ್ರ ಆತನ ಸಾಮರ್ಥ್ಯಗಳು ಹೊರಬರುತ್ತವೆ. ಸಾಮರ್ಥ್ಯಗಳನ್ನೇ ಆತನ ಗುರಿಯನ್ನಾಗಿ ಮಾಡಿಕೊಳ್ಳಲಾಗುವುದಿಲ್ಲ. ಅಂತಹ ವಿಷಯಗಳು ನಿಮಗೇತಕ್ಕೆ ಬೇಕು? ನಿಮ್ಮ ಮುಖ್ಯ ಗುರಿಯು ಇದು. ಜನಗಳಿರುವೆಡೆಯಲ್ಲೆಲ್ಲ ಉಪಯೋಗಿಸುವುದಾಗಿದೆ ಅಲ್ಲವೇ? ಆದರೆ ಸಂಪೂರ್ಣವಾಗಿ ಯಾವುದೇ ಮಾರ್ಗದಿಂದ ಸಾಮಾನ್ಯ ಜನರೊಡನೆ ಸುಮ್ಮನೆ ತೆರಳಿ ಸ್ವಚ್ಛಂದವಾಗಿ ಇವುಗಳನ್ನು ಉಪಯೋಗಿಸುವ ಅನುಮತಿಯಿಲ್ಲ. ಆದ್ದರಿಂದಲೇ ನಿಮಗೆ ಹೆಚ್ಚು ಬೇಕೆನ್ನಿಸಿದರೂ ನಿಮಗೆ ಕಡಿಮೆ ಸಿಗುತ್ತದೆ. ಇದು ಏಕೆಂದರೆ ನೀವು ಹುಡುಕುತ್ತಿದ್ದೀರಿ. ಹೇಳುವ ಅಗತ್ಯವಿಲ್ಲ, ವಸ್ತುಗಳನ್ನು ಬೇಕೆನಿಸುವುದು ಒಂದು ಬಂಧನ ಮತ್ತು ಕರಾರುವಕ್ಕಾಗಿ ಅಭ್ಯಾಸದಲ್ಲಿ ಇಂತಹ ಸ್ನೇಹ ಸಂಬಂಧಗಳನ್ನೇ ಕಳಚಿಕೊಳ್ಳಲು ಪ್ರಯತ್ನಿಸುವುದು.

ಅತ್ಯುತ್ತಮ ಕ್ಷೇತ್ರದಲ್ಲಿ ಅಭ್ಯಾಸ ಮಾಡಿದಂತಹ ಎಷ್ಟೋ ಮಂದಿಯಿದ್ದಾರೆ. ಆದರೆ ಅವರಿಗೆ ಯಾವುದೇ ಸಾಮರ್ಥ್ಯವಿಲ್ಲ. ಅವರ ಗುರುಗಳು ಅವರಿಗೆ ಕೀಲಿ ಹಾಕಿದ್ದಾರೆ. ಏಕೆಂದರೆ ಇವರು ಅದನ್ನು ಸರಿಯಾಗಿ ನಿರ್ವಹಿಸಲಾರರು. ಮತ್ತು ಕೆಟ್ಟ ಕೆಲಸಗಳನ್ನು ಮಾಡಬಹುದು. ಆದ್ದರಿಂದ ತಮ್ಮ ದೈವೀಕ

ಶಕ್ತಿಗಳನ್ನು ಈ ಮಾರ್ಗದಲ್ಲಿ ಉಪಯೋಗಿಸಲು ಅವರನ್ನು ಬಿಡುವುದಿಲ್ಲ. ಅಂತಹ ಎಷ್ಟೋ ಹೆಚ್ಚು ಮಂದಿಯಿದ್ದಾರೆ. ಸಾಮರ್ಥ್ಯಗಳು ವ್ಯಕ್ತಿಯ ಮಾನಸದಿಂದ ನಿರ್ದೇಶಿಸಲ್ಪಟ್ಟಿರುತ್ತದೆ. ಒಬ್ಬ ವ್ಯಕ್ತಿಯು ನಿದ್ರಿಸುತ್ತಿದ್ದಾಗ ತನ್ನನ್ನು ತಾನೇ ಸರಿಯಾಗಿ ನಿರ್ವಹಿಸಿಕೊಳ್ಳದ ಸ್ಥಿತಿಯಲ್ಲಿರುತ್ತಾನೆ ಅಥವಾ ಆತನು ಏನೋ ಕನಸು ಕಾಣಬಹುದು. ಮೂರನೇ ದಿನ ಎಲ್ಲವೂ ಸಂಪೂರ್ಣವಾಗಿ ಉತ್ಕ್ರಾಂತಿಯಲ್ಲಿರುವುದನ್ನು ಆತ ಕಂಡು ಹಿಡಿಯುತ್ತಾನೆ. ಮತ್ತು ಅದನ್ನು ಮಾಡಲು ಅನುಮತಿಯಿಲ್ಲ. ಅಭ್ಯಾಸವು ಸಾಮಾನ್ಯ ಜನರೊಂದಿಗೆ ಸ್ಥಾಪಿಸುವುದಾಗಿರುತ್ತದೆ. ಆದ್ದರಿಂದ ಸಾಮಾನ್ಯವಾಗಿ ಹೆಚ್ಚಿನ ಸಾಮರ್ಥ್ಯವಿರುವ ಯಾವುದೇ ಜನರು ಅದನ್ನು ಉಪಯೋಗಿಸಲು ಬಿಡುವುದಿಲ್ಲ. ಆದರೆ ಹೆಚ್ಚಿನ ಮಂದಿಗೆ ಕೀಲಿ ಹಾಕಿದೆ. ಆದರೆ ಅದೇ ಕೊನೆಯಲ್ಲ. ಆಕರ್ಷಕವಾದ ಅಭ್ಯಾಸವನ್ನು ಮಾಡಿದ ಎಷ್ಟೋ ಮಂದಿಯಿದ್ದಾರೆ. ಅವರು ತಮ್ಮನ್ನು ನಿರ್ವಹಿಸಿಕೊಳ್ಳಬಲ್ಲರು. ಆದ್ದರಿಂದ ತಮ್ಮ ಸಾಮರ್ಥ್ಯದ ಒಂದು ಭಾಗವನ್ನು ಅವರು ಉಪಯೋಗಿಸಿಕೊಳ್ಳಲು ಅನುಮತಿಸಲಾಯಿತು. ನೀವು ಯಾರ ಬಳಿಯಾದರೂ ಹೋಗಿ ತಮ್ಮ ಕೆಲವು ಸಾಮರ್ಥ್ಯಗಳನ್ನು ತಮಗೆ ತೋರಿಸಲೆಂದು ಕೇಳಿದಲ್ಲಿ ಅವರಿಗೆ ಯಾವುದೇ ಮಾರ್ಗವಿರುವುದಿಲ್ಲ. ಅವರಿಗೆ ಈ ಸಂದರ್ಭಗಳನ್ನು ನಿರ್ವಹಿಸುವ ಸಾಮರ್ಥ್ಯವಿರುತ್ತದೆ.

## ವಿರುದ್ಧ ಅಭ್ಯಾಸ ಮತ್ತು ಕೃಷಿ ಶಕ್ತಿಯ ಬದಲು

ಕೆಲ ಜನಗಳು ಎಂದಿಗೂ ಚಿಗಾಂಗ್/ಕೃಷಿ ಶಕ್ತಿಯ ಅಭ್ಯಾಸವನ್ನು ಮಾಡಿಲ್ಲ ಅಥವಾ ಅವರು ಚಿಗಾಂಗ್ ತರಗತಿಯಲ್ಲಿ ಕೆಲವು ಚಲನವಲನಗಳನ್ನು ಕಲೆತಿರಬಹುದು. ಆದರೆ ಅದೆಲ್ಲ ಕೇವಲ ಉಪಶಮನ ಹಾಗೂ ಯುಕ್ತತೆ/ಅರ್ಹತೆಗಾಗಿ ಆದರೆ ಅದು ಅಭ್ಯಾಸವಲ್ಲ (Cultivation). ಆದ್ದರಿಂದ ಇತರ ಪದಗಳಿಂದ ಹೇಳಬೇಕೆಂದರೆ ಈ ಜನರಿಗೆ ಎಂದಿಗೂ ನಿಜವಾದ ಆದೇಶ ಸಿಕ್ಕಿಲ್ಲ. ಆದರೆ ಅವರಿಗೆ ಒಮ್ಮೆಲೇ ರಾತ್ರೋರಾತ್ರಿ ಕೃಷಿಶಕ್ತಿ/ ಗಾಂಗ್ ಸಿಗುತ್ತದೆ. ಈ ರೀತಿಯ ಕೃಷಿ ಶಕ್ತಿಯು ಎಲ್ಲಿಂದ ಬರುತ್ತದೆಂಬುದರ ಬಗ್ಗೆ ಮಾತನಾಡೋಣ. ಇಲ್ಲಿ ಹಲವು ದೃಶ್ಯ ಚಿತ್ರಣಗಳಿವೆ.

ಒಂದು ವ್ಯತಿರಿಕ್ತ/ವಿರುದ್ಧ ಅಭ್ಯಾಸ ಎಂದರೇನು? ಇದು ಹೀಗೆ ನಡೆಯುವುದು. ನಮ್ಮಲ್ಲಿ ಕೆಲವರು ಸ್ವಲ್ಪ ವಯಸ್ಸಾದವರು ಮತ್ತು ಇದನ್ನು ಅಭ್ಯಾಸ ಮಾಡಲು ಇಚ್ಛಿಸುವವರು ಆರಂಭದಿಂದ ಅಭ್ಯಾಸ ಮಾಡಲು ಅವರಲ್ಲಿ ಸಾಕಷ್ಟು ಸಮಯವಿಲ್ಲದ ಕಾರಣ ಅವರ ವಯಸ್ಸು ಪರಿಗಣಿಸಲಿಲ್ಲ. ಚಿಗಾಂಗ್‌ನ ಅಲೆಗಳು ಬೀಸುತ್ತಿದ್ದಾಗ ಅವರು ಸಹ ಮಾಡಬಯಸಿದರು. ಚಿಗಾಂಗ್‌ನ ಸಹಾಯದಿಂದ ಇತರರಿಗಾಗಿ ಉತ್ತಮ ಕೆಲಸಗಳನ್ನು ಜನಗಳು ಮಾಡಬಲ್ಲರೆಂಬುದನ್ನು ಅವರು ಅರಿತಿದ್ದರು. ಮತ್ತು ಅದೇ ವೇಳೆಯಲ್ಲಿ ಅವರು ಉತ್ತಮೀಕರಿಸಿಕೊಳ್ಳಲು ಸಹ ಸಾಧ್ಯವಿತ್ತು. ಆದ್ದರಿಂದ ಅವರಿಗೆ ಈ ಬಯಕೆ ಇತ್ತು. ಅವರು ಸುಧಾರಣೆಗೊಳ್ಳ ಬಯಸಿದರು ಮತ್ತು ಅವರು ಅಭ್ಯಾಸ ಮಾಡ ಬಯಸಿದರು. ಕೆಲವು ವರ್ಷಗಳ ಹಿಂದೆ ಚಿಗಾಂಗ್‌ನ ಅಲೆಗಳಿದ್ದ ಕಾಲದಲ್ಲಿ ಚಿಗಾಂಗ್ ಬೋಧಿಸುತ್ತಿದ್ದ ಬೋಧಕರು ಕೇವಲ ಚಿಗಾಂಗ್ ಪ್ರಖ್ಯಾತ ಗೊಳಿಸಲಿಚ್ಚಿಸುತ್ತಿದ್ದರು. ಮತ್ತು ಯಾರೊಬ್ಬರೂ ಉತ್ತಮ ಹಂತದ ವಿಷಯಗಳನ್ನು ಇತರರಿಗೆ ಮುಟ್ಟಿಸುತ್ತಿರಲಿಲ್ಲ. ಸತ್ಯವಾಗಿಯೂ ಇಂದಿಗೂ ಸಹ ನಾನೊಬ್ಬನೇ ಉನ್ನತ ಹಂತದ ಚಿಗಾಂಗ್‌ನ್ನು ಬಹಿರಂಗವಾಗಿ ರವಾನಿಸುತ್ತಿರುವುದು ಹೊರತು ಬೇರಿನ್ಯಾರು ಅಲ್ಲ. ಯಾರು ವಿರುದ್ಧ ಅಭ್ಯಾಸವನ್ನು ಮಾಡುತ್ತಾರೋ ಅವರು 50 ವರ್ಷದವರು. ಆದ್ದರಿಂದ ಅವರು ಸ್ವಲ್ಪ ವಯಸ್ಸಾದರೂ ಅವರಿಗೆ ಉತ್ತಮ ತಳಹದಿಯಿದೆ. ಹಾಗೂ ಅವರ ವಿಚಾರಧಾರೆಗಳು ಶ್ರೇಷ್ಠವಾದದ್ದು. ಇಂತಹದಲ್ಲಿ ಮುಕ್ಕಾಲು ಮೂರು ವಾಸಿ ಜನರನ್ನು ಒಬ್ಬ ಗುರುವು ತನ್ನ ಅನುಯಾಯಿಯಾಗಿ ಇರಿಸಿಕೊಳ್ಳುತ್ತಾನೆ. ಗುರುಗಳು ತಮ್ಮ ವಿಷಯಗಳನ್ನು ಇತರರಿಗೆ ವರ್ಗಾಯಿಸಲು ಅರ್ಹನಾದಂತಹ ವಾರಸುದಾರರನ್ನಾಗಿ ಆರಿಸಿಕೊಳ್ಳುವಂತಹವ ರಾಗಿರುತ್ತಾರೆ. ಇದು ಹೇಳುವುದು ಸುಲಭ ಮಾಡುವುದು ಕಷ್ಟ!. ಅವರು ತಮ್ಮ ಗುರುಗಳನ್ನು ಎಲ್ಲಿ ಹುಡುಕುತ್ತಾರೆ? ಆದರೆ ಅಭ್ಯಾಸವನ್ನು ಮಾಡಬೇಕೆಂಬ ವಿಚಾರದಿಂದ ಕೇವಲ ತಮ್ಮ ಮನಸ್ಸಿನಲ್ಲುಂಟಾದ ಅಪೇಕ್ಷೆಯಿಂದ ಇದು ಬಂಗಾರದಂತೆ ಹೊಳೆಯುತ್ತದೆ. ಮತ್ತು ಮೂರು ದಿಕ್ಕುಗಳ ಪ್ರಪಂಚವನ್ನು ಅಲುಗಾಡಿಸುತ್ತದೆ. ನೀವು ಯಾವಾಗಲೂ ಜನರು ಬುದ್ಧನ ಸ್ವಭಾವ ಇದೂ ಅದೂ ಮಾತನಾಡಿಕೊಳ್ಳುವುದನ್ನು ಕೇಳಿದ್ದೀರಿ. ಯಥಾರ್ಥವಾಗಿ ಅವರ ಅರ್ಥವೇನೆಂದರೆ ಇದು ಬುದ್ಧನು ಹೊರಹೊಮ್ಮಿದ ಪ್ರಕೃತಿ ಸಹಜಗುಣ.

ಉನ್ನತ ಹಂತದಿಂದ ನೋಡಿದಾಗ ಜೀವನದ ಅರ್ಥವು ಕೇವಲ ಮಾನವ ನಾಗಿರುವುದು ಮಾತ್ರವಲ್ಲ, ಮಾನವ ಜೀವನವು ವಿಶ್ವದ ಅಂತರದಲ್ಲಿ ಅಸ್ತಿತ್ವಕ್ಕೆ ಬಂದಿತು. ಆದ್ದರಿಂದ ಇದು ಸೃಷ್ಟಿಯ ಲಕ್ಷಣವನ್ನು ಸಂಪೂರ್ಣವಾಗಿ ತಿಳಿದುಕೊಳ್ಳುವುದಾಗಿದೆ. ಸತ್ಯವಾಗಿರುವುದಾದರೆ ಕ್ಷೇಮ ಮತ್ತು ಸಹನೆ ಮತ್ತು ಮೂಲತ: ಇದು ಹಿತವಾದದ್ದು ಮತ್ತು ಸಹೃದಯವಾದದ್ದು. ಆದರೆ ವೃತ್ತಿಗಳ ಸಂಖ್ಯೆಯು ಹೆಚ್ಚಾದ ಹಾಗೆ ಅವರು ಸಾಮಾಜಿಕ ಸಂಬಂಧಗಳನ್ನು ಬೆಳೆಸಿಕೊಂಡರು ಮತ್ತು ಆನಂತರ ಕೆಲವರು ಸ್ವಾರ್ಥಿಗಳಾದರು ಅಥವಾ ಕೆಟ್ಟವರಾದರು. ಹೀಗಾಗಿ ಅವರು ಉನ್ನತ ಹಂತದಲ್ಲಿ ಇರಲಾಗಲಿಲ್ಲ. ಹೀಗಾಗಿ ಅವರು ಒಂದು ನಿಶ್ಚಿತ ಹಂತದವರೆಗೆ ಪತನಗೊಂಡರು. ಆ ಹಂತದಲ್ಲಿ ಅವರು ಮತ್ತೆ ಕೆಟ್ಟವರಾದರು. ಆದ್ದರಿಂದ ಅವರು ಬೀಳುತ್ತಲೇ ಹೋದರು, ಎಲ್ಲಿಯವರೆಗೆಂದರೆ ಅವರು ಸಾಮಾನ್ಯ ಜನರ ಹಂತಕ್ಕೆ ಬಂದು ತಲುಪುವವರೆಗೂ. ಈ ಹಂತಕ್ಕೆ ಬಿದ್ದಂತಹ ವ್ಯಕ್ತಿಯೂ ಸಂಪೂರ್ಣವಾಗಿ ನಿರ್ನಾಮವಾಗುತ್ತಾನೆಂದು ಊಹಿಸಬಹುದು. ಆದರೆ ದಯಾಪರರಾದ ಶ್ರೇಷ್ಠ ಜ್ಞಾನಿಗಳಾದ ವ್ಯಕ್ತಿಗಳು ನಿಷ್ಠುರ ಪರಿಸ್ಥಿತಿಯಲ್ಲಿ ಇನ್ನೊಂದು ಅವಕಾಶ ಕೊಡ ಬೇಕೆಂದು ನಿರ್ಧರಿಸಿದರು. ಹೀಗಾಗಿ ಅವರು ಈ ಆಯಾಮಗಳನ್ನು ಸೃಷ್ಟಿಸಿದರು.

ಇತರ ಆಯಾಮಗಳಲ್ಲಿರುವ ಜನರಿಗೆ ಇಂತಹ ಒಡಲು ಇರುವುದಿಲ್ಲ. ಅದು ಗಾಳಿಯಲ್ಲಿ ತೇಲಾಡಬಹುದು ಮತ್ತು ವಿಸ್ತರಿಸಬಹುದು ಅಥವಾ ಮುದುಡಬಹುದು. ಆದರೆ ಈ ಆಯಾಮದಲ್ಲಿ ಜನರು ನಾವು ಹೊಂದಿರುವ ಈ ಭೌತ ಶರೀರವನ್ನು ಹೊಂದುವಂತೆ ಮಾಡುತ್ತಾರೆ. ಇಂತಹ ದೇಹವನ್ನು ಹೊಂದಿದಲ್ಲಿ ಚಳಿಯಾದರೆ ಅದನ್ನು ಪರಿಗಣಿಸು ವಂತಿಲ್ಲ. ಸೆಕೆಯಾದರೂ ಪರಿಗಣಿಸುವಂತಿಲ್ಲ. ಹಸಿವಾದರೂ ಸಹ ಪರಿಗಣಿಸುವಂತಿಲ್ಲ. ನೀವು ಏನನ್ನು ಅನುಭವಿಸುತ್ತಿರುವಿರೆಂಬ ಊಹೆ ಉಂಟಾಗುತ್ತದೆ. ಅನಾರೋಗ್ಯ ವುಂಟಾದಾಗ ಅದನ್ನು ತಾಳಿಕೊಳ್ಳುವುದು ಕಷ್ಟ. ಹೀಗಿದ್ದರೂ ನೀವು ಹುಟ್ಟುತ್ತೀರಿ, ವಯಸ್ಸಾಗುತ್ತದೆ, ಕಾಯಿಲೆ ಬರುತ್ತದೆ ಮತ್ತು ಸಾವನ್ನಪ್ಪುತ್ತೀರಿ. ಇದೇನೆಂದರೆ ಯಾತನೆಯನ್ನು ಅನುಭವಿಸುವುದರ ಮೂಲಕ ಕರ್ಮವನ್ನು ಕಳೆದುಕೊಳ್ಳುವುದು ಮತ್ತು ಮರುಜನ್ಮ ಪಡೆಯಲು ಅವಕಾಶವನ್ನು ಪಡೆಯಬಹುದು. ಆದ್ದರಿಂದಲೇ ಮಾನವ ಮಾತ್ರರು ತಪ್ಪು ತಿಳುವಳಿಕೆಯ ಕ್ಷೇತ್ರಕ್ಕೆ ಬಿದ್ದಿದ್ದಾರೆ. ನೀವು ಈ ಕೂಪದಲ್ಲಿ ಬಿದ್ದ ನಂತರ ನಿಮ್ಮ ಕಣ್ಣುಗಳು ವಿಷಯ ವಸ್ತುಗಳು ನಿಜವಾಗಿಯೂ ಹೇಗಿದೆ ಎಂದು ನೋಡಲೋಸುಗ ಸೃಷ್ಟಿಸಿರುತ್ತದೆ. ನೀವು ಇದನ್ನು ಹಿಂದಿರುಗಿ ನೋಡಬಲ್ಲವರಾದರೆ ಬಹಳ ನೋವಿನಿಂದ ಕೂಡಿದ ಸಂಕಷ್ಟಗಳು ಸಹ ಅತ್ಯುತ್ತಮ ಬೆಲೆಯುಳ್ಳದ್ದಾಗಿ ಕಂಡು ಬರುತ್ತದೆ.

ಭ್ರಮೆಯ ಲೋಕದ ಮಧ್ಯದಿಂದ ನೀವು ಹಿಂತಿರುಗುವ ಅಭ್ಯಾಸವನ್ನು ಮಾಡಬೇಕಾದರೆ ನೀವು ಬಹಳ ಸಂಕಷ್ಟಗಳನ್ನು ಅನುಭವಿಸಬೇಕಾಗುತ್ತದೆ. ಮತ್ತು ಬಹು ಬೇಗ ಈ ರೀತಿಯಾಗಿ ಹಿಂದಿರುಗಬಹುದು. ಇದಕ್ಕಿಂತ ಹೆಚ್ಚು ನೀನು ಕೆಟ್ಟರೆ ನೀನು ನಿರ್ನಾಮವಾಗುತ್ತಿ. ಆದ್ದರಿಂದ ಅವರ ಪ್ರಕಾರ ಬರಿ ಮನುಷ್ಯನಾಗಿರುವುದು ಮಾತ್ರ ಜೀವನದ ಅರ್ಥವಲ್ಲ. ನಿಮ್ಮ ಮೂಲ ರೂಪಕ್ಕೆ ಹಿಂತಿರುಗುವುದು, ಆತ್ಮಸಾಕ್ಷಿಯಾಗಿ ಹಿಂತಿರುಗಿ ಹೋಗಲು ಸಾಮಾನ್ಯ ಜನರು ಇದಕ್ಕೆ ಎಚ್ಚೆತ್ತುಕೊಳ್ಳಲಾಗುವುದಿಲ್ಲ. ಅವರು ಕೇವಲ ಸಾಮಾನ್ಯರು ಮತ್ತು ಅವರು ಕೇವಲ ಜೀವನದಲ್ಲಿ ಹೇಗೆ ಮುಂದುವರೆಯುವುದು ಮತ್ತು ಉತ್ತಮ ಜೀವನವನ್ನು ಹೇಗೆ ಸಾಗಿಸುವುದೆಂದು ಯೋಚಿಸುತ್ತಿರುತ್ತಾರೆ. ಎಷ್ಟು ಒಳ್ಳೆಯ ಜೀವನ ನಡೆಸಿದರೆ ಅಷ್ಟು ಸ್ವಾರ್ಥಿಗಳಾಗುತ್ತಾರೆ. ಇನ್ನು ಹೆಚ್ಚು ಬೇಕೆಂದು ಬಯಸುತ್ತಾರೆ. ವಿಶ್ವದ ಸಹಜ ಗುಣದಿಂದ/ಪ್ರಕೃತಿಯಿಂದ ಇನ್ನೂ ಹೆಚ್ಚು ದೂರ ಅಲೆದಾಡುತ್ತಾರೆ. ಆದ್ದರಿಂದ ಅವರು ವಿನಾಶದ ಅಂಚಿನೆಡೆ ಸಾಗುತ್ತಾರೆ.

ಮೇಲ್ನೋಟಕ್ಕೆ ಇದು ಹೀಗೆಯೇ ಕಾಣಿಸುವುದು. ನೀನು ಯೋಚಿಸುತ್ತಿದ್ದಿ ಮುಂದೆ ನಡೆಯುತ್ತಿದ್ದೀನೆಂದು. ನಿಜದಲ್ಲಿ ನೀನು ಹಿನ್ನಡೆಯುತ್ತಿರುವೆ. ಮನುಷ್ಯ ಜನಾಂಗ ತಿಳಿಯುತ್ತಿದ್ದಾನೆ. ವಿಜ್ಞಾನದಿಂದ ಬೆಳವಣಿಗೆಯಾಗಿ ಅವನು ಮುಂದುವರೆಯುತ್ತಿದ್ದಾನೆಂದು ಆದರೆ ನಿಜಾಂಶವೇನೆಂದರೆ ಪೃಥ್ವಿಯು ನಿಯಮಗಳ ಅನುಸಾರದಲ್ಲಿ ನಡೆಯುತ್ತಿದೆ. ಮಾಸ್ಟರ್ ಜಾನ್ ಗ್ವೊ. ಎಂಟನೆಯ ದೈವಿಕ **ಡಯಸ್ಟ್**ಗಳಲ್ಲಿ ಒಬ್ಬರಾದ ಇವರು ಕತ್ತೆಯ ಮೇಲೆ ಹಿಮ್ಮುಖವಾಗಿ ಸಾಗಿದರು. ನಿಜದಲ್ಲಿ ಅವರು ಹಾಗೆ

---

೮. **ಡಯಸ್ಟ್** – ಚೈನಾ ಚರಿತ್ರೆಯಲ್ಲಿ ಬರುವ ತಾವೋಗಳು.

ಏಕೆ ಹೋದರೆಂದು ಯಾರಿಗೂ ತಿಳಿಯಲಿಲ್ಲ. ಅವರಿಗೆ ಮುಂದೆ ಸಾಗುತ್ತಿದ್ದದ್ದು. ಹಿಂದೆ ಸಾಗುವಂತೆ ಅರಿವಾಗಿತ್ತು. ಹೀಗಾಗಿ ಅವರು ಕತ್ತೆಯ ಮೇಲೆ ಹತ್ತಿ ಒಂದು ಸುತ್ತು ಹೊಡೆದರು. ಯಾವ ಕ್ಷಣದಿಂದ ಈ ಅಭ್ಯಾಸವನ್ನು ಮಾಡಲು ಜನರು ಇಚ್ಚಿಸಿದರೋ ಜ್ಞಾನಿಗಳು ಆ ಕೋರಿಕೆಯನ್ನು ಅತ್ಯಂತ ಮಹತ್ವದೆಂದು ಪರಿಗಣಿಸುತ್ತಾರೆ. ಮತ್ತು ಏನೇ ನಿರೀಕ್ಷೆಯಿಲ್ಲದೆ ಸಹಾಯ ಮಾಡುತ್ತಾರೆ. ಇದೇ ರೀತಿಯಲ್ಲಿ ಇಲ್ಲಿ ಕುಳಿತಿರುವಂತಹ ವಿದ್ಯಾರ್ಥಿಗಳಲ್ಲಿ ಯಾರು ಅಭ್ಯಾಸವನ್ನು ಮಾಡಲು ಇಚ್ಚಿಸುತ್ತಾರೋ ಅವರಿಗೆ ಯಾವ ನಿರೀಕ್ಷೆಯಿಲ್ಲದೆ ಸಹಾಯ ಮಾಡಬಲ್ಲೆ. ಆದರೆ ನೀವೊಬ್ಬ ಸಾಧಾರಣ ಮನುಷ್ಯನಾಗ ಬಯಸಿದ್ದಲ್ಲಿ ಮತ್ತು ಇದರಿಂದ ಉಪಶಮನವಾಗಲು ಯೋಚಿಸಿದ್ದು ಹಾಗೂ ಅದೂ ಇದೂ ಮತ್ತೊಂದು ಬೇಕೆಂದು ಯೋಚಿಸಿದಲ್ಲಿ ಇದನ್ನು ಮರೆತುಬಿಡಿ, ನಾನು ನಿಮಗೆ ಸಹಾಯ ಮಾಡಲಾರೆ, ಯಾಕೆ? ಯಾಕೆಂದರೆ ನೀನು ಸಾಮಾನ್ಯ ಮನುಷ್ಯನಾಗಿರಲು ಇಚ್ಚಿಸುತ್ತಿದ್ದೀಯ. ಹೀಗಾಗಿ ಒಬ್ಬ ಸಾಧಾರಣ ವ್ಯಕ್ತಿ ಹುಟ್ಟು, ಸಾವು, ನೋವು, ಇವುಗಳನ್ನು ಅನುಭವಿಸಲೇಬೇಕು. ಅದು ಹಾಗೆಯೇ ಇರಬೇಕು ಕೂಡ. ಪ್ರತಿಯೊಂದಕ್ಕೂ ತನ್ನದೆಯಾದ ಕಾರಣಗಳಿರುತ್ತವೆ. ಮತ್ತು ಅದನ್ನು ನಾವು ಮುಚ್ಚಿಡಲಾಗುವುದಿಲ್ಲ. ಅಭ್ಯಾಸ ಮಾಡುವುದು ನಿಮ್ಮ ನಿಜ ಜೀವನದ ಒಂದು ಭಾಗವಾಗಿರಲಿಲ್ಲ. ಆದರೆ ಈಗ ನೀವು ಅಭ್ಯಾಸ ಮಾಡಬಯಸಿದ್ದಲ್ಲಿ ನಿಮ್ಮ ಮುಂದಿನ ದಾರಿಯನ್ನು ಮರು ವ್ಯವಸ್ಥೆ ಮಾಡಬೇಕಾಗುತ್ತದೆ. ಮತ್ತು ಈಗ ನಿಮ್ಮ ದೇಹವನ್ನು ಇದಕ್ಕೆ ಹೊಂದಿಸಬೇಕು.

ಒಬ್ಬ ಮನುಷ್ಯ ಇದನ್ನು ಅಭ್ಯಾಸ ಮಾಡಬಯಸಿದ ತಕ್ಷಣ ಜ್ಞಾನಿಗಳು ಅದನ್ನು ಪರಿಗಣಿಸುತ್ತಾರೆ. "ಇದು ಎಷ್ಟು ಅಮೂಲ್ಯವಾದದ್ದು" ಆದರೆ ಅವರು ಯಾವ ರೀತಿ ಅವರಿಗೆ ಸಹಾಯ ಮಾಡಬಹುದು? ಈ ಜಗತ್ತಿನಲ್ಲಿ ಇದನ್ನು ಬೋಧಿಸತಕ್ಕ ಗುರುವನ್ನು ಹೇಗೆ ಹುಡುಕಬಹುದು? ಅವನೀಗಾಗಲೇ 50 ದಾಟಿದಿದ್ದಾನೆ. ಅವನಿಗೆ ದೊಡ್ಡ ಜ್ಞಾನಿಗಳ್ಯಾರು ಬೋಧನೆ ಮಾಡಲಾಗುವುದಿಲ್ಲ. ಏಕೆಂದರೆ ಅವರು ನಿಮಗೆ ಇಲ್ಲಿದ್ದು ಹೇಳಿ ಕೊಡುವುದನ್ನು ಬಯಸಿದಲ್ಲಿ, ನಿಯಮಗಳನ್ನು ಹೇಗೆ ಜಾರಿಗೊಳಿಸಬೇಕೆಂದಲ್ಲಿ ಅವರು ಮುಕ್ತಿಯ ಮಾರ್ಗವನ್ನು ಬಹಿರಂಗಪಡಿಸಿದಂತಾಗುತ್ತದೆ. ಮತ್ತು ಅವರು ತಮ್ಮನ್ನು ತಾವೇ ಕೂಡ ಮುಕ್ತಿ ಮಾರ್ಗದಿಂದ ಬೀಳುವುದನ್ನು ಕಾಪಾಡಿಕೊಳ್ಳಲಾಗುವುದಿಲ್ಲ. ಮಾನವನು ಬಹಳಷ್ಟು ಕೆಟ್ಟ ಕೆಲಸಗಳನ್ನು ಮಾಡಿ ಭ್ರಮೆಯ ಸಾಮ್ರಾಜ್ಯಕ್ಕೆ ಬಿದ್ದಿರುತ್ತಾನೆ. ಹೀಗಾಗಿ ಅವನು ಭ್ರಮೆಯ ಮಧ್ಯದಲ್ಲೇ ಅಭ್ಯಾಸದಿಂದ ಎಚ್ಚೆತ್ತುಕೊಳ್ಳಬೇಕು. ಆದ್ದರಿಂದಲೇ ಜ್ಞಾನಿಗಳು ಇವರಿಗೆ ಬೋಧನೆ ಮಾಡಲಾಗುವುದಿಲ್ಲ. ಪ್ರತ್ಯಕ್ಷ ಬುದ್ಧನೇ ಬಂದು ನಿಯಮಗಳು ಮತ್ತು ಅದರ ಪರಿಪಾಲನೆಯನ್ನು ಬೋಧಿಸಿದಲ್ಲಿ ಕ್ಷಮಿಸಲಾರದ ಪಾಪಗಳನ್ನು ಮಾಡಿದ ಜನರು ಕೂಡ ಬಂದು ಕಲಿಯುತ್ತಾರೆ. ಆಗ ಪ್ರತಿಯೊಬ್ಬರು ನಂಬುತ್ತಾರೆ. ಹಾಗಿದ್ದಲ್ಲಿ ಎಚ್ಚೆತ್ತುಕೊಳ್ಳುವುದಕ್ಕೆ ಏನಿರುತ್ತದೆ? ಅಲ್ಲಿ ಎಚ್ಚೆತ್ತುಕೊಳ್ಳುವ ಯಾವ ವಿಷಯವು ಇರುವುದಿಲ್ಲ. ತಾವೇ ಮಾಡಿಕೊಂಡಂತಹ ತಪ್ಪುಗಳಿಂದ ಭ್ರಮೆಯಲ್ಲಿ ಬಿದ್ದುದ್ದಕ್ಕೆ ಮಾನವ ಜನಾಂಗ ಪತನಗೊಳ್ಳಬೇಕಾಗುತ್ತದೆ. ಆದರೆ ನಿನಗೆ ಈ ಭ್ರಾಂತಿಯಿಂದ ಹೊರಬರಲು ಮತ್ತೊಂದು ಅವಕಾಶ ನೀಡಲಾಗಿರುತ್ತದೆ. ನಿನಗೆ ಇದರಿಂದ ಹೊರಬರಲಾದರೆ ಹೊರಬರಲು ಮತ್ತೊಂದು ಅವಕಾಶ ನೀಡಲಾಗಿರುತ್ತದೆ. ನಿನಗೆ ಇದರಿಂದ ಹೊರಬರಲಾದರೆ ಹೊರಗೆ ಬಾ. ಆದರೆ ನೀನು ಬರಲಾಗದಿದ್ದಲ್ಲಿ ನಿನ್ನ ಕರ್ಮಗಳು ಏನಿರುತ್ತದೆಯೋ ಅದು ಮುಂದಿನ ಜನ್ಮದಲ್ಲೂ ಮುಂದುವರೆದು ನಾಶಕ್ಕೀಡಾಗುತ್ತೀಯ.

ಒಬ್ಬ ಮನುಷ್ಯ ತನ್ನದೇ ಆದ ದಾರಿಯಲ್ಲಿ ನಡೆಯಬೇಕು. ನೀವು ಇದನ್ನು ಪಾಲಿಸಬೇಕಾಗಿದ್ದರೆ, ಅದನ್ನು ಹೇಗೆ ನಿರ್ವಹಿಸುತ್ತೀರಿ? ಅದು ಹೇಗೆ ಮಾಡಬೇಕೆಂಬುದನ್ನು ಇಲ್ಲಿ ಉಲ್ಲೇಖಿಸಲಾಗಿದೆ. ಹಿಂದೊಮ್ಮೆ ಚಿಗಾಂಗ್ ಕ್ರಾಂತಿ ನಡೆದದ್ದು ಮತ್ತು ಸೌರಮಂಡಲ ಚಮತ್ಕಾರದಿಂದ ಆದಂತಹ ಒಂದು ಬದಲಾವಣೆಯ ಪ್ರಕ್ರಿಯೆ. ಸೌರಮಂಡಲದ ಚಮತ್ಕಾರದಿಂದಾದ ಬದಲಾವಣೆಗೆ ಸರಿದೂಗಿಸಲು, ಅವನ ಚಾರಿತ್ರ್ಯಕ್ಕೆ ಸಮನಾದ ಕೃಷಿ ಶಕ್ತಿ (ಗಾಂಗ್) ಕೊಡಲಾಯಿತು. ಅವರು ಅವನ ದೇಹಕ್ಕೆ ಮೃದುವಾದ ನಾಳವನ್ನು ಲಗತ್ತಿಸಿದಾಗ, ನೀರಿನ ನಲ್ಲಿಯಂತೆ ಕೆಲಸ ಮಾಡುತ್ತದೆ. ಮತ್ತು ಅದನ್ನು ತಿರುಗಿಸಿದಾಗ ಗಾಂಗ್ ಹೊರಬರುತ್ತದೆ. ಅವನು ತನ್ನಿಂದ ಸ್ವಲ್ಪ ಗಾಂಗ್‌ನ್ನು ಹೊರಹಾಕಲು ಯತ್ನಿಸಿದಾಗ ಗಾಂಗ್ ಹೊರಬರುತ್ತದೆ. ಆದರೆ ಅವನು ಅವನಾಗಿಯೇ ಗಾಂಗ್‌ನ್ನು ಹೊರಹಾಕಲಾಗು ವುದಿಲ್ಲ. ಕಾರಣ ಅವನ ಸ್ವಂತದ ಗಾಂಗ್ ಅವನಲ್ಲಿ ಇರಲಿಲ್ಲ. ಅವನ ಕೃಷಿಯು ಈ ರೂಪದಲ್ಲಿ ಇತ್ತು ಹಾಗೂ ಇದನ್ನು

ವಿರುದ್ಧಾಭಿವೃದ್ಧಿ ಎಂದು ಕರೆಯುತ್ತೇವೆ. ನೀನು ಪಾರಂಗತನಾಗುವವರೆಗೂ ಮೇಲಿಂದ ಕೆಳಗೆ ಅಭಿವೃದ್ಧಿ ಮಾಡು.

ನಾನು ಸಾಧಾರಣವಾಗಿ ಅಭಿವೃದ್ಧಿಯ ಬಗ್ಗೆ ಮಾತನಾಡುವಾಗ ಇದು ಸಾಧಾರಣವಾಗಿ ಕೆಳಮಟ್ಟದಿಂದ ಮೇಲ್ಮಟ್ಟಕ್ಕೇರುತ್ತದೆ. ಎಲ್ಲಿಯವರೆಗೆಂದರೆ ಆ ಮನುಷ್ಯನ ರಹಸ್ಯ ಬೇಧಗೊಳ್ಳುವುದಲ್ಲದೆ ಪಾರಂಗತನಾಗುವುದಕ್ಕೆ ಅಭ್ಯಾಸ ಮಾಡಿರುತ್ತಾನೆ. ಯಾವ ಅಭಿವೃದ್ಧಿಯ ಬಗ್ಗೆ ಮಾತನಾಡುತ್ತಿದ್ದೆವೋ, ಅದು ವಯಸ್ಸಾದವರಿಗೆ ಕೆಳಮಟ್ಟದಿಂದ ಅಭಿವೃದ್ಧಿಯಾಗಲು ಹೆಚ್ಚು ಸಮಯವಿರದ ಜನಗಳಿಗೆ ಅನ್ವಯಿಸುತ್ತದೆ. ಆದ್ದರಿಂದ ವೇಗವಾಗಿ ಅವರಿಗೆ ಮೇಲ್ಮಟ್ಟದಿಂದ ಕೆಳಮಟ್ಟಕ್ಕೆ ಅಭಿವೃದ್ಧಿಯಾಗಲು ಸಾಧ್ಯವಾಗುತ್ತದೆ. ಆ ಕಾಲಕ್ಕೆ ಬಂದಂತಹ ಮತ್ತೊಂದು ಸಂಗತಿಯಾಗಿತ್ತು. ಅವರ ಚಾರಿತ್ರ್ಯವು ಅತ್ಯುನ್ನತ ಮಟ್ಟದ್ದಾಗಿರಬೇಕಾಗಿತ್ತು. ಮತ್ತು ಅವರ ಚಾರಿತ್ರ್ಯಕ್ಕನುಗುಣವಾಗಿ ಅವರಲ್ಲಿ ಶಕ್ತಿಯನ್ನು ತುಂಬಲಾಗುತ್ತಿತ್ತು. ಅವರು ಹಾಗೇಕೆ ಮಾಡಿದರು? ಒಂದು ಮಾತಿನಲ್ಲಿ ಹೇಳುವುದಾದರೆ ಆ ಸಮಯದಲ್ಲಿದ್ದಂತಹ ಸೌರಮಂಡಲದ ಚಮತ್ಕಾರದ ಜೊತೆಗೆ ಹೋಗಲಾಗಿ ಅಂತಹವರಲ್ಲಿ ಯಾರಾದರೊಬ್ಬರು ಬೇರೆಯವರಿಗೆ ಒಳ್ಳೆಯ ಕೆಲಸಗಳನ್ನು ಮಾಡುತ್ತಿದ್ದಾಗ, ಬಹಳ ಕಷ್ಟಗಳನ್ನು ಸಹಿಸಿಕೊಳ್ಳುತ್ತಿದ್ದರು. ಅದು ಏಕೆಂದರೆ ನೀವು ಸಾಧಾರಣ ಮನುಷ್ಯರೊಡನೆ ಬೆರೆತು ಮಾತಾಡುವಾಗ ಎಲ್ಲಾ ರೀತಿಯ ಸಾಧಾರಣ ಬಂಧನಗಳ ನಡುವೆ ಬರುತ್ತದೆ. ಕೆಲ ಮನುಷ್ಯರು ಅವರನ್ನು ಗುಣ ಮಾಡಿದಂತಹವರನ್ನು ಕೂಡ ನಂಬುವುದಿಲ್ಲ. ಅವನು ಅವರಿಗೆ ಚಿಕಿತ್ಸೆ ಮಾಡುವಾಗ ಅವನು ಅವರಿಂದ ಕೆಲವಾರು ಕೆಟ್ಟ ವಿಷಯಗಳನ್ನು ಹೊರದೋಡಿಸುತ್ತಾನೆ. ಆದರೆ ಆ ಸಮಯಕ್ಕೆ ಎಷ್ಟು ಗುಣವಾಗಿರುವನೆಂದು ಸ್ಪಷ್ಟವಾಗಿರುವುದಿಲ್ಲ. ಹೀಗಾಗಿ ಅವರು ಸಂತುಷ್ಟರಾಗಿರುವುದಿಲ್ಲ ಮತ್ತು ಧನ್ಯವಾದಗಳನ್ನು ಹೇಳುವುದಿಲ್ಲ ಮತ್ತು ಅವನನ್ನು ಮೋಸಗಾರನೆಂದು ಹೆಸರಿಟ್ಟು 'ಮೋಸ ಮಾಡಿದ್ದಿ' ಎಂದು ಹೇಳುತ್ತಾರೆ. ಈ ತರಹದ ತೊಂದರೆಗಳ ಹಿಡಿತದಲ್ಲಿರುವಂತಹ ಪರಿಸರದಲ್ಲಿ ಅವನ ಬುದ್ಧಿ ವಿಚಲಿತಗೊಳ್ಳುತ್ತದೆ. (ಅವನಿಗೆ ಕೃಷಿ ಶಕ್ತಿಯನ್ನು ಕೊಡಲಾಯಿತು) ಅವನು ಮೇಲ್ಮಟ್ಟಕ್ಕೆ ಹೋಗಿ ಅಭ್ಯಾಸ ಮಾಡಿ ಅಭಿವೃದ್ಧಿಯನ್ನು ಹೊಂದಲು ಅವನಿಗೆ ಕೃಷಿ ಶಕ್ತಿಯನ್ನು ಕೊಡಲಾಯಿತು. ಮತ್ತು ಅವನು ಬೇರೆಯವರಿಗೆ ಒಳ್ಳೆಯ ಕೆಲಸಗಳನ್ನು ಮಾಡುವಾಗ ಅವನು ತನ್ನ ಸಾಮರ್ಥ್ಯವನ್ನು ಬೆಳೆಸಿಕೊಂಡು ಹಾಗೆಯೇ ಕೃಷಿ ಶಕ್ತಿಯನ್ನು ಹೆಚ್ಚಿಸಿ ಕೊಂಡನು. ನಾನು ಇದನ್ನು ವಿವರಿಸಲಿಲ್ಲವೇ? ಅವರು ಇಂತಹ ಜನಗಳಿಗೆ ನಿಯಮಗಳನ್ನು ಸರಿಯಾಗಿ ಬೋಧಿಸಲಾಗಲಿಲ್ಲ. ಹೀಗಾಗಿ ಯಾವುದು ಸರಿ ಎಂದು ಪರಿಗಣಿಸುವುದು ಅವರಿಗೆ ಬಿಟ್ಟಿದ್ದು. ಇದು ಒಂದು ಎಚ್ಚೆತ್ತುಕೊಳ್ಳುವ ವಿಷಯವಾಗಿದೆ. ಯಾವುದು ಏನೆಂದು ಪರಿಗಣಿಸಲಾಗದಿದ್ದರೆ ಸಹಾಯ ಮಾಡಲು ಯಾವ ದಾರಿಯು ಅವರಿಗಿಲ್ಲ.

ಕೆಲ ವ್ಯಕ್ತಿಗಳು ಕೃಷಿ ಶಕ್ತಿಯನ್ನು ಪಡೆದಾಗ ಇದ್ದಕ್ಕಿದ್ದ ಹಾಗೆ ಒಂದು ರಾತ್ರಿ ಮಲಗಿದ್ದಾಗ ಅವರಿಗೆ ತಡೆಯಲಾರದಷ್ಟು ತಾಪವು ಹೆಚ್ಚಾಗಿ ಹೊದ್ದಿಕೊಂಡು ಮಲಗಲೂ ಸಾಧ್ಯವಾಗಲಿಲ್ಲ. ಮರುದಿನ ಬೆಳಗ್ಗೆ ಅವರು ಎದ್ದಾಗ ಏನನ್ನು ಮುಟ್ಟಿದರೂ ಅವರಿಗೆ ಸಿಡಿಲು ಬಡಿದಂತಾಯಿತು. ಆಗಲೇ ಅವರಿಗೆ ತನ್ನಲ್ಲಿ ಕೃಷಿಶಕ್ತಿಯಿದೆ ಎಂದು ಅರಿವಾದದ್ದು. ಯಾರಿಗಾದರೂ ದೇಹದ ಯಾವುದೇ ಭಾಗದಲ್ಲಿ ನೋವು ಕಂಡು ಬಂದಾಗ ಅವರು ಆ ಭಾಗವನ್ನು ಉಜ್ಜಿದಾಗ ನೋವು ಕಡಿಮೆಯಾದಂತ ಅನುಭವ ಅವರಿಗೆ ಆಯಿತು. ಹಾಗಾಗಿ ಅದು ಬಹಳಷ್ಟು ಚೆನ್ನಾಗಿಯೇ ಕೆಲಸ ಮಾಡಿತು. ಆಗಲೇ ಅವರಿಗೂ ಅರಿವಾದದ್ದು ತಾವು ಸಹ ಕೃಷಿ ಶಕ್ತಿಯನ್ನು ಆಜ್ಞಾಪಿಸಲು ಸಮರ್ಥರೆಂದು. ಹೀಗಾಗಿ ಈ ಮನುಷ್ಯ ತನ್ನನ್ನು ತಾನೇ ಚಿಗಾಂಗ್ ಮಾಸ್ಟರ್‌ನೆಂದು ತಿಳಿದು ತನ್ನ ಹೆಸರಿನ ರಟ್ಟು ತಗಲಿಸಿ ತಾನೇ ಚಿಗಾಂಗ್ ಮಾಸ್ಟರ್ ಎಂದು ಪದವಿ ಕೊಟ್ಟುಕೊಳ್ಳುತ್ತಾನೆ. ಹೊಸತರಲ್ಲಿ ಅವನು ಒಳ್ಳೆಯವನೆಂಬ ಕಾರಣದಿಂದ ಗುಣಮುಖರಾದ ಜನಗಳು ಒತ್ತಾಯಿಸಿ ನೀಡುತ್ತಿದ್ದ ಹಣವನ್ನಾಗಲೀ ಅಥವಾ ಉಡುಗೊರೆಗಳನ್ನಾಗಲಿ ಸ್ವೀಕರಿಸುತ್ತಿರಲಿಲ್ಲ. ಆದರೆ ಸಾಮಾನ್ಯ ಜನಗಳ ರಂಗು ರಂಗಿನ ಬಲವಂತದ ಮಲಿನಗೊಳಿಸುವಂತಹ ದೊಡ್ಡ ಮದ್ಯದ ಪಿಪಾಯಿ ಯನ್ನು ಸ್ವೀಕರಿಸದೆ ಇರಲಾಗಲಿಲ್ಲ. ಕಾರಣವೇನೆಂದರೆ ವಿರುದ್ಧಾಭಿವೃದ್ಧಿಯನ್ನು ಅಭ್ಯಾಸ ಮಾಡಿದ ಜನಗಳು ನಿಜವಾಗಿಯೂ ತನ್ನ ಚಾರಿತ್ರ್ಯವನ್ನು ಅಭಿವೃದ್ಧಿಪಡಿಸಿ ಕೊಂಡಿರುವುದಿಲ್ಲ. ಹೀಗಾಗಿ ಅವರ ಚಾರಿತ್ರ್ಯವನ್ನು ಉಳಿಸಿಕೊಳ್ಳಲು ಅವರಿಗೆ ಕಷ್ಟಕರ ವಾಗಿರುತ್ತದೆ. ನಿಧಾನವಾಗಿ ಆ ಮನುಷ್ಯನು ಜನರಿಂದ ಮೆಚ್ಚುಗೆಯ ಕಾಣಿಕೆಯನ್ನು ಸ್ವೀಕರಿಸುವನು. ಕ್ರಮೇಣ ದೊಡ್ಡ ವಸ್ತುಗಳನ್ನು ಸ್ವೀಕರಿಸುವನು

ಮತ್ತು ಕೊನೆಗೆ ಮನಸ್ಸಿಗೆ ಬಂದಿರುವುದಕ್ಕಿಂತಲೂ ಕಡಿಮೆಯಾಗಿದ್ದರೆ ಸ್ವೀಕರಿಸುವುದೇ ಇಲ್ಲ. ಕೊನೆ ಕೊನೆ ಯಲ್ಲಂತೂ ಈ ಚಿಲ್ಲರೆ ಜಿನಸುಗಳನ್ನು ನನಗೆ ಕೊಡುವುದರ ಅರ್ಥವೇನು? ಹಣದ ಬಗ್ಗೆ ಏನೆನ್ನುತ್ತೀರಿ! ಎಂದು ದೂರಲು ಮುಂದಾಗುತ್ತಾನೆ. ಮತ್ತು ಜನಗಳು ಹಣ ಕೊಡದೆ ಇದ್ದಾಗ ಅವರನ್ನು ಹಾಗೆಯೇ ಹೋಗಲು ಬಿಡುತ್ತಿರಲಿಲ್ಲ. ಇನ್ನು ಹೆಚ್ಚೆಂದರೆ ಅವನು ಚಿಗಾಂಗ್ ಮಾಸ್ಟರ್‌ರ ನೈಜ ಅಭ್ಯಾಸಗಳನ್ನು ಗೌರವಿಸುವುದನ್ನು ನಿಲ್ಲಿಸಿದನು. ಜನಗಳು ತನ್ನ ಕೌಶಲ್ಯದ ಬಗ್ಗೆ ಮಿಥ್ಯ ಪ್ರಶಂಸೆ ಮಾಡುವುದನ್ನು ಮಾತ್ರ ಆಲಿಸುತ್ತಿದ್ದನು. ಯಾರೇ ಆಗಲಿ ಅವನ ಬಗ್ಗೆ ಕೆಟ್ಟದಾಗಿ ಮಾತನಾಡಿದಾಗ ಬೇಸರಗೊಳ್ಳುತ್ತಿದ್ದ. ಅವನ ಯಶಸ್ಸು ಮತ್ತು ಲಾಭದ ಮೋಹವು ಬಲೂನಿನಂತೆ ಉಬ್ಬತೊಡಗಿತು ಮತ್ತು ನಾನು ಎಲ್ಲರಿಗಿಂತ ಅತಿ ಬುದ್ಧಿವಂತನೆಂದು ತಿಳಿದುಕೊಂಡನು ಮತ್ತು ಅಸಾಮಾನ್ಯ ಎನಿಸಿತು. ಚಿಗಾಂಗ್ ಮಾಸ್ಟರ್ ಆಗಿದ್ದು ಹೆಚ್ಚು ಹಣ ಸಂಪಾದಿಸಲೆಂದೇ ಕೃಷಿ ಶಕ್ತಿಯನ್ನು ಪಡೆದದ್ದು ಎಂದು ತಿಳಿಯುತ್ತಾನೆ. ಆದರೆ ಅದು ಅವನು ಕೃಷಿ ಮಾಡುವ ಸಲುವಾಗಿಯೇ ನೀಡಲಾಗಿತ್ತು. ಯಾವಾಗ ಅವನ ಮೋಹ ಲಾಭ ಮತ್ತು ಕೀರ್ತಿಯ ಕಡೆಗೆ ಹೆಚ್ಚಾಯಿತೋ, ಅವನ ಚರಿತ್ರೆಯು ಅಲ್ಲೇ ಕುಸಿಯಿತು.

ನಾನು ಹೇಳಿದ್ದೇನೆ, ಮನುಷ್ಯನ ಚರಿತ್ರೆಯು ಎಷ್ಟು ಉತ್ತಮವಾಗಿರುತ್ತದೆಯೋ ಅಷ್ಟು ಉತ್ತಮ ಮಟ್ಟದಲ್ಲಿ ಅವನ ಕೃಷಿಶಕ್ತಿ ಇರುತ್ತದೆ. ಹೀಗಾಗಿ ಆ ಮನುಷ್ಯನ ಚಾರಿತ್ರ್ಯವು ಕುಸಿದುಬಿದ್ದಾಗ ಅವನ ಚಾರಿತ್ರ್ಯಕ್ಕೆ ಸಮವಾಗಿ ಕೃಷಿಶಕ್ತಿಯನ್ನು ನೀಡಲಾಗುವುದಿಲ್ಲ. ಅವನ ಚಾರಿತ್ರ್ಯವು ಎಷ್ಟು ದೊಡ್ಡದಾಗಿರುತ್ತದೆಯೋ, ಅಷ್ಟು ದೊಡ್ಡದು ಅವನ ಕೃಷಿ. ಅವನ ಮೋಹ ಲಾಭ ಹಾಗೂ ಕೀರ್ತಿಯ ಕಡೆಗೆ ಹೆಚ್ಚಿದಂತೆ ಅವನು ಸಾಧಾರಣ ಜನಗಳ ವಾತಾವರಣಕ್ಕೆ ಕುಸಿದನು ಮತ್ತು ಅವನೊಂದಿಗೆ ಅವನ ಕೃಷಿಶಕ್ತಿಯು ಕುಸಿಯಿತು. ಕೊನೆಗೆ ಅವನು ಸಂಪೂರ್ಣವಾಗಿ ಬಿದ್ದಾಗ ಅವನು ಮುಂದಕ್ಕೆ ಕೃಷಿಶಕ್ತಿಯನ್ನು ಕೊಡಲಾಗಲಿಲ್ಲ ಮತ್ತು ಅವನಲ್ಲಿ ಕೃಷಿ ಶಕ್ತಿಯ ಕುರುಹು ಇಲ್ಲದಂತೆ ಮುದುಡಿಕೊಂಡನು. ಈ ರೀತಿಯೇ ಸುಮಾರು ಜನಗಳಿದ್ದಾರೆಂದು ಇತ್ತೀಚಿನ ವರ್ಷಗಳಲ್ಲಿ ತಿಳಿದುಬಂತು ಮತ್ತು ಅದರಲ್ಲಿ ೫೦ ದಶಕದ ವೃದ್ದೆಯರೇ ಇದ್ದರು. ನೀವು ಸ್ವಲ್ಪ ವಯಸ್ಸಾದ ಹೆಂಗಸನ್ನು ಚಿಗಾಂಗ್ ವ್ಯಾಯಾಮವನ್ನು ಮಾಡುತ್ತಿರುವುದನ್ನು ನೋಡಿರಬಹುದು. ಆದರೆ ಆಕೆ ನಿಜವಾದ ಬೋಧನೆಯನ್ನು ಪಡೆದಿರುವುದಿಲ್ಲ. ಇರಬಹುದು, ಆಕೆ ಗುಣಮುಖ ಮಾಡುವುದನ್ನು ಮತ್ತು ಸಮರ್ಥರಾಗಿಸುವುದನ್ನು ಚಿಗಾಂಗ್ ತರಗತಿಗಳಲ್ಲಿ ಕಲಿತಿರ ಬಹುದು. ಆದರೆ ಒಂದು ದಿನ ಅವಳಲ್ಲಿ ಇದ್ದಕ್ಕಿದ್ದ ಹಾಗೆ ಕೃಷಿಶಕ್ತಿ ಪಡೆದಳು. ಆದರೆ ಅವಳ ಚಾರಿತ್ರ್ಯ ಕೆಟ್ಟದಾಗ ತೊಡಗಿ ಮತ್ತು ಲಾಭ ಯಶಸ್ಸಿನ ಕಡೆಗೆ ಮೋಹ ಹೆಚ್ಚಾದಾಗ ಅವಳು ಕೆಳಮಟ್ಟಕ್ಕೆ ಕುಸಿದು, ಈಗ ಅವಳು ಕೀರ್ತಿ ಇಲ್ಲದವಳಾದಳು ಮತ್ತು ಅವಳ ಕೃಷಿಶಕ್ತಿಯು ಹೊರಟು ಹೋಯಿತು. ಇದೇ ತರಹ ವಿರುದ್ಧಾಭಿವೃದ್ಧಿಯನ್ನು ಅಭ್ಯಾಸ ಮಾಡಿ ಕುಸಿದು ಬಿದ್ದಂತಹವರ ಸಂಖ್ಯೆ ಬಹಳಷ್ಟು ಇದೆ. ಉಳಿದವರಲ್ಲಿ ಎಲ್ಲೋ ಇಲ್ಲೊಬ್ಬರು, ಅಲ್ಲೊಬ್ಬರು ಇದ್ದಾರೆ. ಯಾಕೆ ಹೀಗೆ? ಕಾರಣವೇನೆಂದರೆ ಇದು ಅವರ ಕೃಷಿಗಾಗಿ ಇದೆ ಎಂಬುದನ್ನು ತಿಳಿದುಕೊಳ್ಳಲಿಲ್ಲ. ಅವರು ಏನು ಯೋಚಿಸಿದ್ದರೆಂದರೆ ಇದೆಲ್ಲ ಅವರು ಹಣವಂತರಾಗಲು, ಪ್ರಖ್ಯಾತರಾಗಲು ಮತ್ತು ಸಾಮಾನ್ಯ ಜನಗಳಲ್ಲಿ ಚಿಗಾಂಗ್ ಮಾಸ್ಟರ್ ಆಗಬಹುದೆಂದು ನಿಜದಲ್ಲಿ ಇದು ಅವರ ಕೃಷಿಶಕ್ತಿಗಾಗಿತ್ತು.

ಕೃಷಿ ಶಕ್ತಿಯ ಕಡ ತೆಗೆದುಕೊಳ್ಳುವುದೆಂದರೇನು? ಇದಕ್ಕೆ ವಯಸ್ಸಿನ ಮಿತಿ ಇಲ್ಲ. ಆದರೆ ಇದಕ್ಕೆ ಬೇಕಾದಂತಹ ಒಂದು ಅವಶ್ಯಕತೆ ಏನೆಂದರೆ ಆ ಮನುಷ್ಯನು ಕೆಲವು ಒಳ್ಳೆಯ ಗುಣಗಳನ್ನು ಹೊಂದಿರಬೇಕು. ಈ ತರಹದ ಮನುಷ್ಯರು ಕೆಲವರಿದ್ದರು. ಅವರಿಗೆ ತಿಳಿದಿತ್ತು ಏನೆಂದರೆ ನೀವು ಅವರಿಗೆ ಚಿಗಾಂಗ್‌ನ್ನು ಅಭ್ಯಾಸ ಮಾಡಿಸಬಹುದಿತ್ತು. ಹಾಗೂ ಅವರಿಗೂ ಈ ಅಭ್ಯಾಸ ಬೇಕಿತ್ತು. ಅವರಿಗೆ ಅಭ್ಯಾಸ ಮಾಡಲು ಬಹಳ ಆಸಕ್ತಿ ಇತ್ತು. ಆದರೆ ಅವರು ಗುರುವನ್ನು ಎಲ್ಲಿ ಹುಡುಕಬೇಕು? ಕೆಲವಾರು ವರ್ಷಗಳ ಹಿಂದೆ ಕೆಲವು ಚಿಗಾಂಗ್ ಮಾಸ್ಟರ್‌ರು ಅವರು ಹೇಳುತ್ತಿದ್ದರು ಆದರೆ ಗುಣಮುಖವಾಗಿ ಮತ್ತು ಸಮರ್ಥ ರಾಗುವಂತಹ ವಿಷಯಗಳನ್ನು ಮಾತ್ರ ಹೇಳಿದ್ದರು. ಯಾರೊಬ್ಬರು ಉನ್ನತ ಮಟ್ಟದ ವಿಷಯಗಳನ್ನು ಹರಡಲಿಲ್ಲ. ಮತ್ತು ಅಂತಹದನ್ನು ಬೋಧಿಸಲು ಬೇರಾರು ಇರಲಿಲ್ಲ.

ನಾವು ಈಗ ಕೃಷಿಶಕ್ತಿಯನ್ನು ತೆಗೆದುಕೊಳ್ಳುವುದರ ಬಗ್ಗೆ ಚರ್ಚಿಸುತ್ತಿರುವಾಗ ನಾನು ಇನ್ನೊಂದು ವಿಷಯವನ್ನು ಹೇಳಬಯಸುತ್ತೇನೆ. ಒಬ್ಬ ಮನುಷ್ಯನಿಗೆ ತನ್ನ **ಉತ್ಕೃಷ್ಟ ಆತ್ಮ** (Main

spirit) ದೊಂದಿಗೆ ತನ್ನ **ಅಧೀನದ ಆತ್ಮ** (Asistant spirit) ಇರುತ್ತದೆ. ಕೆಲವು ಮನುಷ್ಯರಿಗೆ ಒಂದು, ಎರಡು, ಮೂರು, ನಾಲ್ಕು, ಐದು ಅನುಯಾಯಿಗಳ ತಿಳಿವಿರುತ್ತದೆ. ಆ ಮನುಷ್ಯನ ಅನುಯಾಯಿಗಳ ಆತ್ಮವು ಅವನದೇ ಆದ ಲಿಂಗದಾಗಿರಬೇಕಂತಿಲ್ಲ. ಅವರಲ್ಲಿ ಕೆಲವರು ಗಂಡಸರಿರಬಹುದು ಅಥವಾ ಹೆಂಗಸರಿರಬಹುದು. ಹೀಗೆ ಅವರೆಲ್ಲರು ಬೇರೆಯಾಗಿರುತ್ತಾರೆ. ನಿಜದಲ್ಲಿ ಉತ್ಕೃಷ್ಟ ಆತ್ಮವು ಆ ಲಿಂಗದ ದೇಹವನ್ನು ಹೊಂದಿರಬೇಕಿಲ್ಲ. ಕಾರಣವೇನೆಂದರೆ ಈ ನಡುವೆ ಎಷ್ಟೋ ಸ್ತ್ರೀಯರ ಆತ್ಮಗಳು ಪುರುಷರದ್ದಾಗಿರುವುದನ್ನು ಹಾಗೂ ಎಷ್ಟೋ ಪುರುಷರ ಆತ್ಮವು ಸ್ತ್ರೀಯರದ್ದಾಗಿರುವುದನ್ನು ನಾವು ಕಂಡು ಹಿಡಿದಿದ್ದೇವೆ. ಇದು ಸೌರ ಸಂಗತಿಗಳಿಗೆ ಸರಿಯಾಗಿದ್ದು ಇದರಲ್ಲಿ **'ಯಿನ್' ಮತ್ತು 'ಯಾಂಗ್'** ನ್ನು ತಿರುಗು ಮುರುಗು ಮಾಡಲಾಗಿದೆ. ಇಲ್ಲಿ **'ಯಿನ್' ಎಂದರೆ ಉನ್ನತಿ,** 'ಯಾಂಗ್' ಎಂದರೆ ಅವನತಿ ಎಂದು ಡಯಸ್ಟ್ರ ಹೇಳಿಕೆ.

ಒಬ್ಬ ಮನುಷ್ಯನ ಉತ್ಕೃಷ್ಟ ಆತ್ಮಕ್ಕಿಂತಲೂ ಅಧೀನದ ಆತ್ಮವು ಸಾಮಾನ್ಯವಾಗಿ ಉನ್ನತ ಆತ್ಮದಿಂದ ಬಂದದ್ದಾಗಿರುತ್ತದೆ. ಇನ್ನು ಹೇಳಬೇಕೆಂದರೆ ಕೆಲ ವ್ಯಕ್ತಿಗಳ ಅಧೀನದ ಆತ್ಮಗಳು ನಿಜವಾಗಿ ಉನ್ನತ ಮಟ್ಟದಿಂದ ಬಂದಿರುತ್ತದೆ. ಆದರೆ ನಿಮಗೆ ತಿಳಿದಿರಬೇಕು ಅಧೀನದ ಆತ್ಮವು ಒಡೆತನದ ಆತ್ಮವಲ್ಲ. ಅವು ನಿನ್ನೊಡನೆ ನಿನ್ನ ತಾಯಿಯ ಗರ್ಭದಿಂದಲೇ ಬಂದಿರುತ್ತದೆ. ನಿನ್ನಂತಹ ಹೆಸರನ್ನೇ ಪಡೆದಿರುತ್ತಾನೆ ಮತ್ತು ನಿನ್ನ ದೇಹದ ಭಾಗವಾಗಿಯೂ ಇರುತ್ತಾನೆ. ಮನುಷ್ಯರು ನಿಜ ಜೀವನದಲ್ಲಿ ಕೆಲವು ಸಂಗತಿಗಳನ್ನು ಯೋಚಿಸಲು ಹಾಗೂ ಕಾರ್ಯ ನಿರ್ವಹಿಸಲು ಅವರ ಉತ್ಕೃಷ್ಟ ಆತ್ಮವು ಆದೇಶ ನೀಡಿರುತ್ತದೆ. ಅಧೀನದಾತ್ಮವು ಏನು ಮಾಡುತ್ತದೆಂದರೆ ಅದು ಉತ್ಕೃಷ್ಟ ಆತ್ಮವನ್ನು ಹದ್ದಿನಲ್ಲಿಟ್ಟುಕೊಂಡು ಅವನು ಕೆಲವು ತಪ್ಪು ಮಾಡಲು ಪ್ರೇರೇಪಿಸುತ್ತದೆ. ಆದರೆ ಉತ್ಕೃಷ್ಟ ಆತ್ಮವು ಬಹಳ ಹತ್ತಿರವಿರುವುದರಿಂದ ಅಧೀನದಾತ್ಮವು ಏನೂ ಮಾಡಲಾಗುವುದಿಲ್ಲ. ಜಗತ್ತಿನ ನಡುವಳಿಕೆಗಳಿಂದ ಅಧೀನದಾತ್ಮವು ದಾರಿ ತಪ್ಪಿರುವುದಿಲ್ಲ. ಆದರೆ ಉತ್ಕೃಷ್ಟ ಆತ್ಮವು ತಪ್ಪುದಾರಿಗಳಿಗೆ ದಾರಿ ಕೊಡುವಂತಹದ್ದಾಗಿರುತ್ತದೆ.

ಕೆಲವು ಅಧೀನದಾತ್ಮವು ಉನ್ನತ ಮಟ್ಟದಿಂದ ಬಂದಿರುವುದಂತಹದ್ದಾಗಿರುತ್ತೆ. ಮತ್ತು ಇರಬಹುದು, ಅದು ನಿಜವಾದ ಸಾಫಲ್ಯ ಪಡೆಯಲು ಕೆಲವು ಹೆಜ್ಜೆಗಳು ಮಾತ್ರ ಇರುತ್ತದೆ. ಅಧೀನದಾತ್ಮವು ಅಭ್ಯಾಸ ಮಾಡಲು ಇಚ್ಚಿಸಿದಾಗ ಉತ್ಕೃಷ್ಟ ಆತ್ಮಕ್ಕೆ ಬೇಡವಾದಲ್ಲಿ ಅವನ್ನು ಏನನ್ನು ಮಾಡಲಾಗುವುದಿಲ್ಲ. ಹಿಂದೆ ಚಿಗಾಂಗ್‌ನ ಅಲೆಯು ಬೀಸುತ್ತಿದ್ದಾಗ ಒಂದು ದಿನ ಅವನ ಉತ್ಕೃಷ್ಟ ಆತ್ಮವು ಬೇರೆ ವ್ಯಕ್ತಿಗಳಂತೆ ಚಿಗಾಂಗ್ ಅಭ್ಯಾಸಿಸಿ ಉನ್ನತ ಮಟ್ಟಕ್ಕೇರಲು ಇಚ್ಚಿಸಿತು.

ನಿಜ ಅವನ ಉದ್ದೇಶ ಮುಗ್ಧವಾಗಿರಬಹುದು. ಆದರೆ ಅವನಿಗೆ ಹಣವಂತನಾಗಲು ಅಥವಾ ಪ್ರಖ್ಯಾತಿ ಪಡೆಯಲು ಬಯಸಿರುವುದಿಲ್ಲ. ಒಂದು ಸಂತಸದ ಅಲೆ ತಕ್ಷಣ ಅಧೀನ ದಾತ್ಮಕ್ಕೆ ಬಂದು " ನಾನು ಅದನ್ನು ಅಭ್ಯಾಸಿಸಲು ಇಚ್ಚಿಸಿದೆ ಆದರೆ ನನಗೆ ಆದೇಶ ಸಿಗಲಿಲ್ಲ" ಈಗ ನೀನು ಅಭ್ಯಾಸ ಮಾಡಲು ಇಚ್ಚಿಸಿದೆ, ನಾನೂ ಅದನ್ನೇ ಮಾಡಬಯಸುವೆ. ಆದರೆ ಅವನು ಗುರುವನ್ನು ಎಲ್ಲಿ ಹುಡುಕಬೇಕು? ಆದರೆ ಅವನ ಅಧೀನದಾತ್ಮವು ಮೇಧಾವಿಯಾಗಿತ್ತು. ಅವನು ಅವನ ದೇಹವನ್ನು ಬಿಟ್ಟು ಅವನ ಹಿಂದಿನ ಜನ್ಮದಲ್ಲಿ ಜ್ಞಾನಿಗಳಾಗಿದ್ದವರನ್ನು ಹುಡುಕಲು ಹೊರಟ ಕೆಲವು ಅಧೀನದಾತ್ಮವು ಉತ್ಕೃಷ್ಟರಾಗಿರುವು ದರಿಂದ ಅವರು ದೇಹವನ್ನು ತ್ಯಜಿಸಿಹೋಗಬಹುದು. ಅವನು ಅಲ್ಲಿ ಸೇರಿದ ಮೇಲೆ ಅವರಿಗೆ ಹೇಳಿದ ಅವನು ಸ್ವಲ್ಪ ಕೃಷಿ ಶಕ್ತಿಯನ್ನು ಕಡತವಾಗಿ ಪಡೆದು ಅಭ್ಯಾಸ ಮಾಡಲು ಇಚ್ಚಿಸಿದ. ಅವರಿಗೆ ಈತ ಸರಿಯೆಂದೆನಿಸಿ ಅವನಿಗೆ ಬೋಧನೆ ನೀಡಲು ಮುಂದಾದರು. ಈ ರೀತಿಯಾಗಿ ಅಧೀನದಾತ್ಮವು ಕೃಷಿಶಕ್ತಿಯನ್ನು ಕಡತವಾಗಿ ತೆಗೆದುಕೊಂಡಿತು. ಈ ಕೃಷಿ ಶಕ್ತಿಯು ಕೆಲವೊಮ್ಮೆ ಪ್ರಜ್ವಲಿತ ಶಕ್ತಿಯನ್ನು ಹೊರಬಿಟ್ಟಿತು ಮತ್ತು ನಾಳದ ಮೂಲಕ ನೀಡಲಾಯಿತು. ಅದಾದ ನಂತರ ಅಲ್ಲಿ ಕಡತವಾಗಿ ತಂದಂತಹ ವಸ್ತುಗಳು ಪೂರ್ಣಗೊಂಡ ರೀತಿಯಲ್ಲಿತ್ತು ಮತ್ತು ಪೂರ್ಣಗೊಂಡ ವಸ್ತುಗಳೆಲ್ಲವು ಒಳ್ಳೆಯ ಗುಣಗಳೊಂದಿಗೆ ಬಂದಿದ್ದವು.

---

9. **'ಯಿನ್' ಮತ್ತು 'ಯಾಂಗ್'** – ತಾವೋ ಶಾಲೆಯ ನಂಬಿಕೆಯ ಪ್ರಕಾರ ಎಲ್ಲವೂ ಯಿನ್ ಮತ್ತು ಯಾಂಗ್ ಎಂಬ ವಿರುದ್ಧ ಶಕ್ತಿಗಳನ್ನು ಹೊಂದಿವೆ. ಅವು ಸದಾ ಒಂದನ್ನೊಂದು ಅವಲಂಭಿಸಿರುತ್ತವೆ.

ಹೀಗಾದಾಗ ಅದೇ ಸಮಯಕ್ಕೆ ಆ ವ್ಯಕ್ತಿಯಲ್ಲಿ ಸಾಮರ್ಥ್ಯವಿರುತ್ತದೆ. ಮತ್ತು ಒಂದು ನಿಮಿಷದ ಹಿಂದೆ ನಾನು ಏನು ಹೇಳಿದೆ ಅದನ್ನು ಅನುಭವಿಸುತ್ತಾನೆ. ಮಲಗಿದ್ದಾಗ ತಡೆಯಲಾರದಷ್ಟು ತಾಪ ಹೆಚ್ಚಾಗುವುದು, ಮರುದಿನ ಎದ್ದಾಗ ಕೃಷಿಶಕ್ತಿ ಅನುಭವ ವಾಯಿತು. ಏನೇ ಮುಟ್ಟಿದರು ಸಿಡಿಲು ಬಡಿದ ಅನುಭವವಾಗಿ ಮತ್ತು ಬೇರೆ ವ್ಯಕ್ತಿಗಳನ್ನು ಗುಣ ಪಡಿಸುವಂತಾದ ಅವನಲ್ಲಿ ಕೃಷಿ ಶಕ್ತಿಯಿದೆ ಎಂದು ಅರಿವಾಯಿತು. ಅದು ಎಲ್ಲಿಂದ ಬಂತು? ಅವನಿಗೆ ಖಚಿತವಾಗಿರಲಿಲ್ಲ. ಅವನಿಗೆ ಸಂದಿಗ್ಧ ರೀತಿಯಲ್ಲಿ ಅರಿವಾಗಿದ್ದು ಇದು ಜಗತ್ತಿನ ಒಂದು ಮೂಲೆಯಿಂದ ಬಂದಿತೆಂದು ಆದರೆ ಅದು ಎಲ್ಲಿಂದ ಬಂತು ಎಂದು ಖಚಿತವಾಗಿ ತಿಳಿದಿರಲಿಲ್ಲ. ಮತ್ತು ಅವನ ಅಧೀನದಾತ್ಮ ಅವನಿಗೆ ಹೇಳಲಾಗಲಿಲ್ಲ. ಯಾಕೆಂದರೆ ಆ ಮನುಷ್ಯನಿಗೆ ಗೊತ್ತಿದ್ದು ಒಂದೇ ಅದೇನೆಂದರೆ ಅವನಿಗೆ ಕೃಷಿಶಕ್ತಿಯ ಅನುಭವವಾಗಿತ್ತು.

ಕೃಷಿ ಶಕ್ತಿಯನ್ನು ಕಡತವಾಗಿ ಪಡೆಯುವಂತಹ ಮನುಷ್ಯರು ಯಾವ ವಯಸ್ಸಿ ನವರಾದರೂ ಇರಬಹುದು. ಆದರೆ ಅದರಲ್ಲಿ ಹೆಚ್ಚಾಗಿ ಯುವ ಜನಾಂಗದವರೇ ಆಗಿರುತ್ತಿದ್ದರು. ಹಲವು ವರ್ಷಗಳ ಹಿಂದೆ ಭಿನ್ನ ವಯಸ್ಸಿನ ವ್ಯಕ್ತಿಗಳಿದ್ದರು, ಅವರಲ್ಲಿ ಬಂದಂತಹ ಕೆಲವರು ಇಪ್ಪತ್ತರ ಪ್ರಾಯದವರು, ಕೆಲವರು ಮೂವತ್ತರ ಪ್ರಾಯದವರು, ಇನ್ನೂ ಕೆಲವರು ನಲವತ್ತರ ಪ್ರಾಯದವರು ಹಾಗೂ ಕೆಲವರು ವಯಸ್ಸಾದವರು ಸಹ ಇದ್ದರು. ಯುವ ಜನಾಂಗದವರು ಸರಿಯಾಗಿ ನಡೆದುಕೊಳ್ಳಲು ಕಷ್ಟ ಪಡುತ್ತಿದ್ದರು. ಪ್ರಪಂಚದಲ್ಲಿ ಅವರನ್ನು ದಿನನಿತ್ಯ ಒಳ್ಳೆಯವರಾಗಿ ಕಾಣಬಹುದಿತ್ತು ಮತ್ತು ಅವರು ಪಡೆದ ಖ್ಯಾತಿಯನ್ನು ಹಗುರವಾಗಿ ತೆಗೆದುಕೊಂಡರು. ಆದರೆ ಒಮ್ಮೆ ಅವರು ಅವರ ಸಮಾನ ದವರಿಗಿಂತ ದೂರ ಸರಿದಾಗ ಅವರು ಪಡೆದ ಖ್ಯಾತಿಗೆ ಕುಂದುಂಟಾಗುತ್ತಿತ್ತು. ಬದುಕುವುದು ಇನ್ನು ಇದೆ ಎಂದು ಯೋಚಿಸಿದ್ದರು ಮತ್ತು ಏನಾದರೂ ಗುರಿಯಿಟ್ಟು ಕೊಂಡು ಸಾಧನೆ ಮಾಡಲು ಪ್ರಯತ್ನದಲ್ಲಿ ಒಂದು ಹೆಜ್ಜೆ ಮುಂದೆ ಹೋಗಿ ಸಾಧಾರಣ ಮನುಷ್ಯರು ಸಾಧಿಸುವಂತಹ ಗುರಿಯನ್ನು ತಲುಪಿದರು. ಆದರೆ ಅದು ಅವರ ಮಾರ್ಗದ ದಾರಿಯೇ ಆಗಿರಲಿಲ್ಲ. ಹೀಗಾಗಿ ಅವರನ್ನು ಉಪಯುಕ್ತಗೊಳಿಸಲು ಬಿಡಲಾಗುತ್ತಿರಲಿಲ್ಲ. ಹೆಚ್ಚು ಹೆಚ್ಚು ಕೃಷಿ ಶಕ್ತಿಯನ್ನು ಬಳಸಲು ಯತ್ನಿಸಿದಾಗ ಅವರಲ್ಲಿ ಕೃಷಿಶಕ್ತಿ ಕಡಿಮೆಯಾಗ ತೊಡಗಿತು ಮತ್ತು ಕಡೆಯಲ್ಲಿ ಏನೂ ಸಿಗದಂತಾಗುತ್ತದೆ. ಈ ರೀತಿಯ ವ್ಯಕ್ತಿಗಳೇ ಬಹಳಷ್ಟು ಮಂದಿ ಬಿದ್ದಿರುವುದು, ನನಗೆನಿಸುವುದಿಲ್ಲ. ಇದರಿಂದ ಒಬ್ಬನು ಕೂಡ ತಪ್ಪಿಸಿಕೊಂಡಿದ್ದಾನೆಂದು.

ಈಗ ನಾನು ಚರ್ಚಿಸಿದಂತಹ ಎರಡು ಚಿತ್ರಣಗಳಲ್ಲೂ ಒಳ್ಳೆ ವ್ಯಕ್ತಿಯುಳ್ಳವರಿದ್ದರೆ ಕೃಷಿ ಶಕ್ತಿಯನ್ನು ಪಡೆದಿರುತ್ತಾರೆ. ಕೃಷಿ ಶಕ್ತಿಯು ಅಭ್ಯಾಸ ಬಲದಿಂದ ಬಂದದ್ದಲ್ಲ. ಇದು ಜ್ಞಾನಿಗಳಿಂದ ಬಂದಂತಹದ್ದು. ಆದ್ದರಿಂದ ಕೃಷಿ ಶಕ್ತಿಯು ಸ್ವಾಭಾವಿಕವಾಗಿ ಒಳ್ಳೆಯದು.

## ಆತ್ಮದ ಸ್ವಾಧೀನ

ನರಿಗಳು, ಮುಂಗುಸಿ, ದೆವ್ವ ಅಥವಾ ಹಾವುಗಳು ಮುಂತಾದ ಪ್ರಾಣಿಗಳು ಮಾನವ ದೇಹವನ್ನು ಸ್ವಾಧೀನ ಪಡೆಸಿಕೊಂಡಂತಹ ಕಥೆಗಳನ್ನು ಅಭ್ಯಾಸ ಪ್ರಪಂಚದಲ್ಲಿ ನಮ್ಮಂತಹ ಹೆಚ್ಚಿನ ಮಂದಿ ಕೇಳಿರಬಹುದು. ಮತ್ತು ಈ ಎಲ್ಲಾ ವಿಷಯಗಳು ಯಾವುದರ ಬಗ್ಗೆ? ಚಿಗಾಂಗ್ ಅಭ್ಯಾಸ ಮಾಡುವುದರಿಂದ ಅಲೌಕಿಕ ಸಾಮರ್ಥ್ಯವು ವರ್ಧಿಸುತ್ತದೆಂದು ಕೆಲವರು ಹೇಳುತ್ತಾರೆ – ಆ " ಅಲೌಕಿಕ ಸಾಮರ್ಥ್ಯಗಳು" ಕೇವಲ ಒಬ್ಬ ವ್ಯಕ್ತಿಯ ಸ್ವಭಾವ ಸಿದ್ಧವಾದ ಸಾಮರ್ಥ್ಯವಾಗಿರುತ್ತದೆ. ನಮ್ಮ ಈ ಭೌತಿಕ ಆಯಾಮದಲ್ಲಿ, ಸಮಾಜವು ಮುಂದುವರೆದಂತೆ ಜನರು ಕೇವಲ ಕಣ್ಣಿಗೆ ಕಾಣುವ ಸಂಗತಿಗಳಿಗೆ ಮಾತ್ರ ಹೆಚ್ಚಿನ ಗಮನ ವನ್ನು ಕೊಡುತ್ತಾರೆ ಮತ್ತು ಅವರು ನಮ್ಮ ಸುಶಿಕ್ಷಿತ ಯಂತ್ರೋಪಕರಣಗಳನ್ನು ಹೆಚ್ಚು ಹೆಚ್ಚಾಗಿ ನಂಬಲು ಆರಂಭಿಸುತ್ತಾರೆ. ಆದ್ದರಿಂದಲೇ ಮಾನವನ ಸ್ವಾಭಾವಿಕ ಸಾಮರ್ಥ್ಯಗಳು ಸ್ಥಿರವಾಗಿ ದುರ್ಬಲಗೊಂಡಿದೆ ಮತ್ತು ಇದು ಈಗ ಸಂಪೂರ್ಣವಾಗಿ ಅದೃಶ್ಯವಾಗುವ ಸ್ಥಿತಿ ಬಂದು ತಲುಪಿದೆ.

ಯಾರಾದರೂ ಸಾಮರ್ಥ್ಯಗಳನ್ನು ಹೊಂದಲು ಇಚ್ಛಿಸಿದಲ್ಲಿ ಅಭ್ಯಾಸ ಮುಖೇನ, ಆತ್ಮಶುದ್ಧಿಯಿಂದ ತನ್ನ ಮೂಲಸ್ಥಿತಿಗೆ ಹಿಂದಿರುಗಿ ಅಭ್ಯಾಸದಿಂದ ತಮ್ಮ ಸಾಮರ್ಥ್ಯವನ್ನು ಹೊರಗೆಡವಬೇಕಾಗುತ್ತದೆ. ಇತರ ಮಾತುಗಳಲ್ಲಿ ಹೇಳಬೇಕೆಂದರೆ ಮಾನವರಿಗಿದ್ದಂತಹ ಜಟಿಲ ವಿಚಾರಗಳು ಪ್ರಾಣಿಗಳಿಗಿರುವುದಿಲ್ಲ. ಆದ್ದರಿಂದ ಅವುಗಳನ್ನು ವಿಶ್ವದ ಸ್ವಭಾವಕ್ಕೆ ಸಂಬಂಧಿಸಲಾಗಿದೆ. ಮತ್ತು ಅವುಗಳಿಗೆ ಹುಟ್ಟು ಸಹಜ, ಸ್ವಭಾವಸಿದ್ಧವಾದ ಸಾಮರ್ಥ್ಯ ಗಳಿರುತ್ತವೆ. ಕೆಲವರು ಹೇಳುತ್ತಾರೆ, ಪ್ರಾಣಿಗಳಿಗೂ ಸಹ ಅಭ್ಯಾಸಮಾಡುವುದು ತಿಳಿದಿದೆ. ನರಿಗಳಿಗೆ ದಿವ್ಯೌಷಧಿಯನ್ನು ತಯಾರಿಸುವುದು ತಿಳಿದಿದೆ. ಹಾವುಗಳೂ ಮತ್ತು ಮುಂತಾದ ಪ್ರಾಣಿಗಳಿಗೂ ಸಹ ಅಭ್ಯಾಸ ಮಾಡುವುದು ತಿಳಿದಿದೆ. ಆರಂಭದಲ್ಲಿ ಅಭ್ಯಾಸದ ಸಂಗತಿಗಳು ಅವರಿಗೆ ತಿಳಿದಿರಲಿಲ್ಲ. ಕೇವಲ ಅವರಿಗೆ ಸಹಜವಾದ ಸಾಮರ್ಥ್ಯ ವಿತ್ತು. ಆದ್ದರಿಂದ ಕೆಲವು ನಿಯಮಗಳ ಅಡಿಯಲ್ಲಿ, ಕೆಲವು ಸಂದರ್ಭಗಳಲ್ಲಿ ಮತ್ತು ಹೆಚ್ಚು ಸಮಯದ ನಂತರ ಅವರ ಆಂತರಿಕ ಸಾಮರ್ಥ್ಯಗಳು ಪರಿಣಾಮ ಪಡೆದುಕೊಳ್ಳಬಹುದು ಮತ್ತು ಅವರಿಗೆ ಕೃಷಿಶಕ್ತಿ ಹೊಂದಲು ಆಗುತ್ತದೆ ಮತ್ತು ಅವರು ಹೊಂದಿರುವ ಸಾಮರ್ಥ್ಯಗಳು ಹೊರಬೀಳುತ್ತದೆ.

ಈಗ ಆ ಸಂಗತಿಗಳು ಈ ರೀತಿಯಲ್ಲಿವೆ, ಏನೆಂದರೆ ಪ್ರಾಣಿಗಳು ಕೆಲವು ವಿಶಿಷ್ಟ ಸಾಮರ್ಥ್ಯಗಳನ್ನು ಪಡೆದುಕೊಂಡಿರುತ್ತದೆ. ಅವುಗಳು ಗೂಢಶಕ್ತಿಗಳನ್ನು ಪಡೆದುಕೊಂಡಿ ರುತ್ತದೆಂದು ಅಥವಾ ವಿಶಿಷ್ಟ ಸಾಮರ್ಥ್ಯಗಳನ್ನು ಪಡೆದುಕೊಂಡಿರುತ್ತವೆಂದು ಒಂದು ಸಮಯದಲ್ಲಿ ನಾವು ಹೇಳಿದ್ದೆವು. ಪ್ರಾಣಿಗಳು ಕೇವಲ ನಂಬಲು ಅಸಾಧ್ಯವಾದಷ್ಟು ಕ್ರೂರವಾಗಿರುತ್ತದೆ. ಮತ್ತು ಜನರನ್ನು ಸುಲಭವಾಗಿ ಹತೋಟಿಯಲ್ಲಿಟ್ಟುಕೊಳ್ಳುತ್ತದೆಯೆಂದು ಹೆಚ್ಚಿನ ಜನರು ನಂಬುತ್ತಾರೆನಿಸುತ್ತದೆ. ನಿಜವಾಗಿಯೂ ನಾನು ಹೇಳುತ್ತೇನೆ ಅವುಗಳು ಕ್ರೂರವಾಗಿಲ್ಲ. ಒಬ್ಬ ಅಭ್ಯಾಸಿಗನ ಮುಂದೆ ಇದೇನು ಅಲ್ಲ, ಒಂದು ಸಾವಿರ ವರ್ಷಗಳವರೆಗೆ ಅಭ್ಯಾಸ ಮಾಡಿದ್ದರೂ ಸಹ ಅದೊಂದು ದೊಡ್ಡ ವ್ಯಾಪಾರವೇ ಸರಿ, ಅವುಗಳನ್ನು ತುಳಿಯಲು ಒಂದು ಕಿರುಬೆರಳು ಸಾಕು. ಆದ್ದರಿಂದ ಪ್ರಾಣಿಗಳಿಗೂ ಸ್ವಭಾವಸಿದ್ಧವಾದ ಸಾಮರ್ಥ್ಯಗಳಿವೆಯೆಂದು ನಮಗೆ ತಿಳಿದಿದೆ. ಮತ್ತು ಅವುಗಳು ಕೆಲವು ವಿಶಿಷ್ಟ ಸಾಮರ್ಥ್ಯ ಗಳನ್ನು ಹೊಂದಬಹುದೆಂದು ಸಹ ತಿಳಿದಿದೆ. ನಮ್ಮ ಈ ವಿಶ್ವದಲ್ಲಿ ಇನ್ನೊಂದು ನಿಯಮ ವಿದೆ. ಪ್ರಾಣಿಗಳು ಅಭ್ಯಾಸದಲ್ಲಿ ಸಿದ್ಧಿ ಹೊಂದುವುದಕ್ಕೆ ಬಿಡುವುದಿಲ್ಲ. ಆದ್ದರಿಂದಲೇ ಈ ಪ್ರಾಣಿಗಳು ಹಲವು ನೂರು ವರ್ಷಗಳಿಗೊಮ್ಮೆ ಬಹು ದೊಡ್ಡ ದುರ್ಘಟನೆಯಲ್ಲಿ ಅಥವಾ ಯಾವುದೋ ದುರಂತದಿಂದ ಕೊಲ್ಲಲ್ಪಡುತ್ತದೆಂದು ನೀವು ಹಲವು ಪುರಾತನ ಪುಸ್ತಕ ಗಳಲ್ಲಿ ಹೇಳಿರುವಿರಿ. ಕೆಲ ಸಮಯದ ನಂತರ ಪ್ರಾಣಿಯ ಕೃಷಿ ಶಕ್ತಿಯು ಒಂದು ಹಂತದವರೆಗೂ ಬೆಳೆದ ನಂತರ ವಜ್ರಾಯುಧದಿಂದ ಅದು ನಾಶಗೊಳ್ಳುತ್ತದೆ. ಅಥವಾ ಅದು ನಾಶವಾಗಲು ಅಥವಾ ಅಭ್ಯಾಸ ಮಾಡುವುದನ್ನು ನಿಲ್ಲಿಸಲು ಇನ್ನೇನಾದರೂ ಕಾರಣವುಂಟಾಗುತ್ತದೆ. ಅದು ಏಕೆಂದರೆ ಪ್ರಾಣಿಗಳಿಗೆ ಮನುಷ್ಯನಿಗಿರುವ ಅವಶ್ಯಕ ಗುಣ ಗಳಿರುವುದಿಲ್ಲ. ಮತ್ತು ಮನುಷ್ಯನು ಅಭ್ಯಾಸ ಮಾಡಿದಂತೆ ಅವುಗಳಿಗೆ ಅಭ್ಯಾಸ ಮಾಡ ಲಾಗುವುದಿಲ್ಲ. ಅಂದಿನಿಂದಲೂ ಪ್ರಾಣಿಗಳಿಗೆ ವಿಶೇಷ ಗುಣವಿಲ್ಲದಿರುವುದರಿಂದ ಅವುಗಳೇನಾದರೂ ಅಭ್ಯಾಸ ಮಾಡುವುದರಲ್ಲಿ ಸಿದ್ಧಿ ಹೊಂದಿದರೆ ಅವುಗಳು ದೈತ್ಯ/ದೆವ್ವ ಗಳಾಗಿ ಬಿಡುತ್ತವೆ. ಆದ್ದರಿಂದಲೇ ಅವುಗಳನ್ನು ಅಭ್ಯಾಸ ಮಾಡಲು ಬಿಡುವುದಿಲ್ಲ ಮತ್ತು ಅದರಿಂದಲೇ ದೈವವು ಅವುಗಳನ್ನು ನಾಶ ಮಾಡಿದೆ. ಅವುಗಳಿಗೂ ಸಹ ಇದು ಗೊತ್ತು. ಆದರೆ ನಾನು ಹೇಳಿದಂತೆ ಕೆಲಕಾಲದಿಂದ ಪ್ರಪಂಚದಲ್ಲಿ ಮೌಲ್ಯಗಳು ಕಡಿಮೆಯಾಗುತ್ತಿವೆ, ಅಲ್ಲಿ ಕೆಟ್ಟದ್ದು ಮಾತ್ರ ಇದೆ ಎಂದಲ್ಲ. ಕೆಲವರು ಕೆಟ್ಟದ್ದು ಮಾಡುವುದಿಲ್ಲ, ಆದರೆ ಯಾವಾಗ ಪ್ರಪಂಚ ಈ ಮಟ್ಟವನ್ನು ಮುಟ್ಟುತ್ತದೆಯೋ ಆಗ ಅದು ಅಪಾಯದಲ್ಲಿರುವುದಿಲ್ಲವೇ?

"ಏನಾದರೂ ಅತಿರೇಕವನ್ನು ಮುಟ್ಟಿದಾಗ ಅದು ವ್ಯತಿರಿಕ್ತವಾಗುತ್ತದೆ" ಇದು ಯಾವಾಗಲೂ ಮಾನವ ಜನಾಂಗದ ನೈತಿಕತೆಯು ದಾರುಣವಾಗಿ ಅವನತಿ ಹೊಂದಿದಾಗೆಲ್ಲ ಪ್ರಪಂಚವು ನಾಶ ಹೊಂದಿದೆಯೆಂದು ಇತಿಹಾಸ ಪೂರ್ವ ಕಾಲಚಕ್ರದಿಂದ ನಾವು ಕಂಡು ಹಿಡಿದಿದ್ದೇವೆ. ಈಗ ಮಾನವನು ಅಸ್ತಿತ್ವದಲ್ಲಿರುವ ಆಯಾಮವು ಮತ್ತು ಇನ್ನೂ ಹೆಚ್ಚಿನ ಇತರ ಆಯಾಮಗಳು ಅಪಾಯದಲ್ಲಿವೆ. ಇದೇ ಹಂತದಲ್ಲಿನ ಇತರ ಆಯಾಮಗಳಿಗೂ ಇದು ಸತ್ಯ. ಅಲ್ಲಿರುವ ಜೀವಿಗಳೂ ಸಹ ಎಷ್ಟು ಬೇಗ ಆದರೆ ಅಷ್ಟು ಬೇಗ ಹೊರಡಲಿಚ್ಛಿಸು ತ್ತಾರೆ. ಮತ್ತು ಅವರು ಉನ್ನತ ಹಂತವನ್ನು ಏರಬಯಸುತ್ತಾರೆ. ಉತ್ತಮ

ಹಂತಕ್ಕೆ ಏರಿದರೆ ಅವರು ತಪ್ಪಿಸಿಕೊಳ್ಳಬಹುದೆಂದು ಯೋಚಿಸುತ್ತಾರೆ. ಅದು ಹೇಳುವುದು ಸುಲಭ ಮಾಡುವುದು ಕಷ್ಟವಲ್ಲವೇ? ಅಭ್ಯಾಸವನ್ನು ಮಾಡಬೇಕಾದರೆ ನಿಮಗೊಂದು ಮಾನವ ಶರೀರ ಬೇಕು ಮತ್ತು ಅದೇ ಒಂದು ಕಾರಣದಿಂದ ಚಿಗಾಂಗ್ ಅಭ್ಯಾಸಿಗರು ಅಭ್ಯಾಸವನ್ನು ದೊರಕಿಸಿಕೊಂಡು ಅದರ ಸಾಮ್ಯ ಪಡೆದುಕೊಳ್ಳುತ್ತಾರೆ.

ನಿಮ್ಮಲ್ಲಿ ಕೆಲವರು ಯೋಚಿಸುತ್ತಿರಬಹುದು, "ಶ್ರೇಷ್ಟ ಜ್ಞಾನಿಗಳಾದಂತಹ ವ್ಯಕ್ತಿಗಳು ಮತ್ತು ಶಕ್ತಿವಂತ ಉಪಾಧ್ಯಾಯರುಗಳು ಇದರ ಬಗ್ಗೆ ಏನನ್ನು ಏಕೆ ಮಾಡುತ್ತಿಲ್ಲ? ನಮ್ಮ ವಿಶ್ವದಲ್ಲಿ ಇನ್ನೊಂದು ನಿಯಮವಿದೆ. ನೀವು ಏನನ್ನಾದರೂ ಹೊಂದಲಿಚ್ಛಿಸಿದಲ್ಲಿ ಅಥವಾ ಪಡೆಯಬೇಕೆಂದಿಚ್ಛಿಸಿದಲ್ಲಿ ಯಾರೂ ನಿಮ್ಮನ್ನು ತಡೆಯಲಾರರು. ನೀವು ಸರಿಯಾದ ಮಾರ್ಗವನ್ನು ಅನುಸರಿಸಿರೆಂದು ನಾವಿಲ್ಲಿ ಬೋಧಿಸುತ್ತಿದ್ದೇವೆ. ಇದರ ಜೊತೆಯಲ್ಲಿ ನಾವು ಒಳ ಹಾಗೂ ಹೊರ ನಿಯಮಗಳನ್ನು ಬೋಧಿಸಿ ಅದನ್ನು ನೀವು ನಿಮ್ಮಂತೆ ಅರ್ಥ ಮಾಡಿಕೊಳ್ಳಲು ಪ್ರೇರೇಪಿಸುತ್ತಿದ್ದೇವೆ. ಆದರೂ ಸಹ ಇದನ್ನು ಕಲಿಯಲು ನಿರ್ಧರಿಸುವುದು ನಿಮಗೇ ಬಿಟ್ಟದ್ದು. "ಗುರುಗಳು ನಿಮ್ಮನ್ನು ಬಾಗಿಲಿನ ಒಳ ಹೋಗುವ ಮಾರ್ಗವನ್ನು ಸೂಚಿಸುತ್ತಾರೆ, ಆದರೆ ಅಭ್ಯಾಸ ಮಾಡುವುದು ನಿಮಗೇ ಸೇರಿದ್ದು". ಯಾರಾದರೂ ನಿಮ್ಮನ್ನು ಅಭ್ಯಾಸ ಮಾಡಿರೆಂದು ಒತ್ತಾಯ ಮಾಡಲಾರರು. ಅಭ್ಯಾಸ ಮಾಡುವುದೂ, ಬಿಡುವುದು ನಿಮಗೇ ಬಿಟ್ಟದ್ದು ಅಥವಾ ಇದನ್ನು ಇನ್ನೊಂದು ರೀತಿಯಲ್ಲಿ ಹೇಳುವುದಾದರೆ ನಿಮ್ಮ ಮಾರ್ಗವನ್ನು ನೀವೇ ಆರಿಸಿಕೊಂಡಾಗ, ನಿಮಗೇನು ಬೇಕೆಂದು ನೀವೇ ನಿರ್ಧರಿಸಿ ಕೊಂಡಾಗ ಅಥವಾ ನೀವೇನನ್ನಾದರೂ ಪಡೆದುಕೊಳ್ಳಲು ಇಚ್ಛಿಸಿದಲ್ಲಿ, ಯಾರೂ ನಿಮ್ಮನ್ನು ತಡೆಯುವುದಿಲ್ಲ. ನಿಮ್ಮನ್ನು ಕೇವಲ ಮನವೊಲಿಸುವ ಪ್ರಯತ್ನವನ್ನು ಮಾಡಬಹುದು.

ಕೆಲವರು ಚಿಗಾಂಗ್ ವ್ಯಾಯಾಮಗಳನ್ನು ಅಲ್ಲಿ ಮಾಡುತ್ತಿರುವುದನ್ನು ನೋಡಿದಾಗ ಅದರ ಒಡೆತನ ಹೊಂದಿರುವ ಆತ್ಮ ಅದೆಲ್ಲವನ್ನೂ ಪಡೆದುಕೊಳ್ಳುತ್ತದೆ. ಅದು ಹೇಗೆ ಒಡೆತನದ ಆತ್ಮಗಳನ್ನು ಆಕರ್ಷಿಸಿತು? ದೇಶದಲ್ಲೆಲ್ಲಾ ಚಿಗಾಂಗ್ ಅಭ್ಯಾಸ ಮಾಡುತ್ತಿರುವ ಜನರನ್ನು ಗಮನಿಸಿ, ಅವರಲ್ಲಿ ಎಷ್ಟು ಮಂದಿಗೆ ತಮ್ಮ ಹಿಂದಿರುವ ಒಡೆತನ ಪಡೆದ ಆತ್ಮಗಳಿವೆಯೆಂದು ತಿಳಿದಿದೆ? ನಾನು ನಿಮಗೆ ಹೇಳಿದ್ದರೆ ಎಷ್ಟೋ ಮಂದಿ ಚಿಗಾಂಗ್ ಅಭ್ಯಾಸ ಮಾಡುವ ಧೈರ್ಯ ಮಾಡುವುದಿಲ್ಲ. ಚಿಗಾಂಗ್ ಅಭ್ಯಾಸ ಮಾಡುವವರ ಸಂಖ್ಯೆ ಬಹಳ ವಿರಳವಾಗಿರುತ್ತದೆ. ಆದ್ದರಿಂದ ಹೀಗಾಗಲು ಕಾರಣವೇನು? ನಿಜವಾಗಿಯೂ ಆ ಸಂಗತಿಗಳು ಸಾಮಾನ್ಯ ಪ್ರಪಂಚವನ್ನು ನಾಶಮಾಡುತ್ತಿದೆ. ಆದ್ದರಿಂದ ಈ ರೀತಿಯ ಗಂಭೀರ ವಿಷಯವು ಹೇಗೆ ಬಂದಿತು? ಇದು ಜನರ ತಮ್ಮದೇ ಆದಂತಹ ಕೆಲಸಗಳು ಏಕೆಂದರೆ ಜನರು ಕೆಟ್ಟವರಾಗುತ್ತಿದ್ದಾರೆ. ಎಲ್ಲೆಲ್ಲೂ ದೈತ್ಯ/ದೆವ್ವಗಳಿದ್ದಾರೆ. ಅತಿ ಕೆಟ್ಟ ವಿಷಯ ವೆಂದರೆ ನಕಲು ಚಿಗಾಂಗ್ ಮಾಸ್ಟರ್‌ರ ದೇಹದ ಮೇಲೂ ಆತ್ಮದ ಒಡೆತನವಿದೆ. ಅವರು ಚಿಗಾಂಗ್ ಅಭ್ಯಾಸವನ್ನು ತಮ್ಮಿಂದ ಇತರರಿಗೆ ಮುಟ್ಟಿಸುವಾಗ ಆ ಸತ್ವವನ್ನು ಸಹ ಮುಟ್ಟಿಸುತ್ತಾರೆ. ಮಾನವನ ದೇಹವನ್ನು ಪ್ರಾಣಿಗಳು ಸೇರಲೂ ಎಂದೂ ಬಿಟ್ಟಿಲ್ಲವೆಂದು ಇತಿಹಾಸವು ಹೇಳುತ್ತದೆ.

ಅದೇನಾದರೂ ಮಾನವ ದೇಹವನ್ನು ಆಕ್ರಮಿಸಿಕೊಂಡರೆ ಅವನ್ನು ಕೊಲ್ಲ ಲಾಗುತ್ತದೆ. ಯಾರಾದರೂ ನೋಡಿದರೆ ಅದನ್ನು ತಡೆದುಕೊಳ್ಳಲಾಗುವುದಿಲ್ಲ. ಆದರೆ ನೀವು ನಂಬುವಿರಾ, ಅವುಗಳಿಗೆ ಬಲಿಯನ್ನು ಕೊಡಲಾಗುತ್ತದೆ. ಇದನ್ನು ಕೇಳಿ ಹಲವರು ಸಂತೋಷಪಡಲಾರರು. "ಆದರೆ ನಾನು ನಿಮ್ಮನ್ನು ಕೇಳಿದ್ದು ಅದಲ್ಲ" ನೀವು ಅದನ್ನು ಕೇಳಲಿಲ್ಲ, ಆದರೆ ನೀವು ಸಾಮರ್ಥ್ಯವನ್ನು ಕೊಡಿರೆಂದು ಕೇಳಿಕೊಂಡಿರಿ ಮತ್ತು ನಿಜವಾದ ಅಭ್ಯಾಸವನ್ನು ಮಾಡಿದಂತಹ ಶ್ರೇಷ್ಟ ಜ್ಞಾನಿಗಳಾದ ವ್ಯಕ್ತಿಗಳು ನಿಮಗದನ್ನು ಕೊಡು ತ್ತಾರೆಯೇ? ಅಂತಹ ಸಂಗತಿಗಳನ್ನು ಕೊಡಿ ಎಂದು ಕೇಳುವುದೇ ಸಾಮಾನ್ಯರಿಗಿರುವ ಸಂಬಂಧಗಳು ಮತ್ತು ಅಂತಹ ಕೋರಿಕೆಗಳು ಹೋಗಬೇಕು ನಂತರ ನಿಮಗೆ ಇದನ್ಯಾರು ಕೊಡಬಹುದೆಂದು ಯೋಚಿಸುವಿರಿ? ಕೇವಲ ದೈತ್ಯರು ಮತ್ತು ಇತರ ಆಯಾಮದಲ್ಲಿರುವ ವಿಭಿನ್ನ ರೀತಿಯ ಪ್ರಾಣಿಗಳು. ಆ ಸಂಗತಿಗಳನ್ನು ಕೊಡೆಂದು ಅವರನ್ನು ನೀವೇ ಕೇಳಿದ್ದಲ್ಲವೇ? ಅದು ಒಡನೆಯೇ ಬಂದಿದೆ.

ಚಿಗಾಂಗ್ ವ್ಯಾಯಾಮಗಳನ್ನು  ಮಾಡುತ್ತಿರುವಾಗ ಉತ್ತಮ ವಿಚಾರಗಳನ್ನು ಹೊಂದಿರುವ ಎಷ್ಟು ಜನರಿರುತ್ತಾರೆ? ಯಾವ ವ್ಯಕ್ತಿಯು ಚಿಗಾಂಗ್ ಅಭ್ಯಾಸವನ್ನು ಮಾಡುತ್ತಾನೋ ಆತನು ಸದ್ಗುಣವನ್ನು ಗಂಭೀರವಾಗಿ ಪರಿಗಣಿಸಬೇಕು, ಇತರರಿಗೆ ಒಳ್ಳೆಯದನ್ನು ಮಾಡುವುದು ಮತ್ತು ದಯಾಪರರಾಗಿರಬೇಕು. ಆತನು ತನ್ನ ಶಿಸ್ತನ್ನು ತಾನೇ ಪ್ರತಿ ಕೃತ್ಯದಲ್ಲೂ ಮತ್ತು ಪ್ರತಿ ಸಂದರ್ಭದಲ್ಲಿಯೂ ಕಾಪಾಡಿಕೊಳ್ಳಬೇಕು. ಚಿಗಾಂಗ್ ವ್ಯಾಯಾಮವನ್ನು ಉದ್ಯಾನವನಗಳಲ್ಲಿ ಮಾಡುತ್ತಿರುವವರನ್ನು ಗಣನೆಗೆ ತೆಗೆದು ಕೊಳ್ಳಿ ಮತ್ತು ಮನೆಗಳಲ್ಲಿ ಚಿಗಾಂಗ್ ವ್ಯಾಯಾಮವನ್ನು ಮಾಡುತ್ತಿರುವವರನ್ನು ಪರಿಗಣಿಸಿ ಇವರಲ್ಲಿ ಎಷ್ಟು ಮಂದಿ ಆ ಮಾರ್ಗದಲ್ಲಿ ಯೋಚಿಸುವವರು ಸಿಗುತ್ತಾರೆ? ಸತ್ಯವಾಗಿ ಹೇಳಬೇಕೆಂದರೆ ಕೆಲ ವ್ಯಕ್ತಿಗಳು ಚಿಗಾಂಗ್ ವ್ಯಾಯಾಮವನ್ನು ಅವರೇನು ಮಾಡುತ್ತಿದ್ದಾರೆಂದು ಯಾರಿಗೆ ಗೊತ್ತು?

ಅವರು ಅತ್ತ ಕಡೆ ವ್ಯಾಯಾಮವನ್ನು ಮಾಡುತ್ತಿರುತ್ತಾರೆ. ಅವರ ದೇಹವನ್ನು ಸುತ್ತಲೂ ಉಯ್ಯಾಲೆಯಂತಾಡಿಸುತ್ತಾ ಮತ್ತು ಅದೇ ಸಮಯದಲ್ಲಿ ವಿಷಯ ಸಂಗತಿ ಗಳಿಂದ ಬಹುದೂರ ಹೋಗಿರುತ್ತಾರೆ. "ಓಹ್! ನನ್ನ ಸೊಸೆಗೆ ನನ್ನನ್ನು ಕಂಡರೆ ಗೌರವ ವಿಲ್ಲ. ನನ್ನ ಅತ್ತೆಯು ಮಹಾ ಪಾಪಿ ಎಂದು ಕೆಲಜನಗಳು ಹೇಳುತ್ತಲೇ ಹೋಗುತ್ತಾರೆ. ವಿಷಯಗಳಿಂದ ಆರಂಭಿಸಿ ವಾರ್ತೆಗಳ ಮುಖ್ಯಾಂಶಗಳವರೆಗೂ ಅವರು ಹರಟೆ ಹೊಡೆಯದ ಯಾವುದೇ ವಿಷಯವಿಲ್ಲ. ಅವರ ಗುಟ್ಟು ರಟ್ಟಾಗುವಂತಹ ಸಂಗತಿಗಳನ್ನು ಅವರು ಒಪ್ಪುವುದಿಲ್ಲ. ಈಗ ಹೇಳಿ ಇದು ವ್ಯಾಯಾಮದ ಅಭ್ಯಾಸಗಳನ್ನು ಮಾಡುವ ರೀತಿಯೇ? ಮತ್ತು ಇನ್ನೂ ಕೆಲ ವ್ಯಕ್ತಿಗಳಿದ್ದಾರೆ. ಅವರು ಇಲ್ಲಿ ನಿಂತೇ ವ್ಯಾಯಾಮವನ್ನು ಮಾಡುತ್ತಾರೆ, ತುಂಬಾ ಸುಸ್ತಾಗಿರುತ್ತಾರೆ, ಅವರ ಕಾಲುಗಳು ನಡುಗುತ್ತಿರುತ್ತವೆ. ಮತ್ತು ಆತನ ಮನಸ್ಸು ಶಾಂತಿಯಿಂದಿರುವುದಿಲ್ಲ. "ಈ ದಿನಗಳಲ್ಲಿ ವಸ್ತುಗಳು ಹೆಚ್ಚು ಬೆಲೆಯುಳ್ಳ ದ್ದಾಗಿವೆ, ಬೆಲೆಗಳು ಹೆಚ್ಚಾಗಿವೆ ನನ್ನ ಸಂಸ್ಥೆಯು ನನಗೆ ಹೆಚ್ಚಿನ ಸಂಬಳವನ್ನು ಮಾಡಲಾಗುವುದಿಲ್ಲ, ಏಕೆ ಕೆಲವು ಅಭ್ಯಾಸಗಳು ನನಗೆ  ಸಾಮರ್ಥ್ಯಗಳನ್ನು ತಂದು ಕೊಡಲಾಗುವುದಿಲ್ಲ? ನನಗೆ ಕೆಲವು ಸಾಮರ್ಥ್ಯಗಳು ಬಂದರೆ ನಾನು ಒಬ್ಬ ಚಿಗಾಂಗ್ ಗುರುವಾಗಲು ಸಾಧ್ಯ ಮತ್ತು ನಾನು ಶ್ರೀಮಂತನಾಗಬಹುದು" ಜನಗಳಿಗೆ ಚಿಕಿತ್ಸಾ ಕ್ರಮವನ್ನು ಕೊಟ್ಟು ನಾನು ಹಣವನ್ನು ಮಾಡಬಹುದು, ಇತರ ವ್ಯಕ್ತಿಗಳ ಸಾಮರ್ಥ್ಯಗಳು ಹೊರಹೊಮ್ಮಿರುವುದನ್ನು ಆತನು ಕಂಡರೆ ಆತನು ಇನ್ನೂ ಹೆಚ್ಚಿನ ಕ್ಷೋಭೆಗೊಳಗಾಗುತ್ತಾನೆ. ಮೂರನೆಯ ಕಣ್ಣನ್ನು (ದಿವ್ಯ ದೃಷ್ಟಿ) ಪಡೆದುಕೊಂಡಿರುವುದರಿಂದ ಮತ್ತು ಉಪಶಮನದ ಕೌಶಲವನ್ನು ಪಡೆದು ಕೊಂಡಿದ್ದರಿಂದ ಆತನು ಪಡೆದುಕೊಂಡ ಸಾಮರ್ಥ್ಯವು ಆತನನ್ನು ಕಾಡಲಾರಂಭಿಸುತ್ತದೆ. ಈಗ ಅದರ ಬಗ್ಗೆ ಯೋಚಿಸಿ, ಪ್ರಕೃತಿ ಸಹಜ ವಿಶ್ವದಿಂದ ಏನನ್ನು ಪಡೆದುಕೊಳ್ಳುತ್ತೀರೋ ನೀವು ಪಡೆದುಕೊಂಡ ಸಾಮರ್ಥ್ಯವು ಅಷ್ಟೇ ಅಲ್ಲವೇ?

ಸತ್ಯವಾಗಿ ಹೇಳುವುದಾದರೆ, ಉತ್ತಮವಾದದ್ದು ಮತ್ತು ಸಹಿಸಿಕೊಳ್ಳುವುದಾಗಿರುತ್ತದೆ. ಈತನು ಇದಕ್ಕೆ ಸುಮ್ಮನೆ ಬೆನ್ನು ತಿರುಗಿಸುತ್ತಾನೆ. ಇನ್ನೂ ಸ್ವಲ್ಪ ಹೆಚ್ಚಿನ ಗಂಭೀರವಾಗಿ ಇದನ್ನಿಡಬೇಕೆಂದರೆ ಈತನು ಅಭ್ಯಾಸವನ್ನು ಕೆಟ್ಟ ಮಾರ್ಗದಲ್ಲಿ ಮಾಡುತ್ತಿರುತ್ತಾನೆ. ಆದರೆ ಆತನಿಗೆ ಅದು ತಿಳಿದಿಲ್ಲ. ಆತನು ಹೆಚ್ಚಾಗಿ ಈ ರೀತಿ ಯೋಚಿಸಿದರೆ ಆತನ ವಿಚಾರಗಳು ಇನ್ನೂ ಕೆಟ್ಟದ್ದಾಗಿ ಆತನ ಮಾನಸದಿಂದ ಹೊರಹೊಮ್ಮುತ್ತದೆ. ಆ ರೀತಿಯ ವ್ಯಕ್ತಿಗೆ ಅದರ ಮೇಲೆ ಹಿಡಿತವಿರುವುದಿಲ್ಲ. ಆತನಿಗೆ ಪವಿತ್ರ ಗುಣಗಳನ್ನು ಗಂಭೀರವಾಗಿ ಪರಿಗಣಿಸ ಬೇಕೆಂದು ತಿಳಿದಿಲ್ಲ ಮತ್ತು ಇಂತಹ ಚಲನೆಗಳನ್ನು ಮಾಡುವುದರಿಂದ ಆತನಿಗೆ ಕೃಷಿ ಶಕ್ತಿಯು ದೊರೆಯುವುದೆಂದು ಆತ ಯೋಚಿಸುತ್ತಾನೆ. ಅದನ್ನು ಅರಸಿ ಹೋಗುವುದರಿಂದ ತಾನು ಶ್ರೀಮಂತನಾಗಬಹುದೆಂದು ಅದು ಹೀಗೆಯೇ ನಡೆಯುತ್ತದೆಯೆಂದು ಆತನು ಯೋಚಿಸುತ್ತಾನೆ.

ಒಬ್ಬ ವ್ಯಕ್ತಿಯು ನಿಖರವಾದ ಕೆಟ್ಟ ವಿಷಯಗಳನ್ನು ಆಕರ್ಷಿಸುತ್ತಾನೆ. ಏಕೆಂದರೆ ಆತನು ಸರಿಯಾದ ವ್ಯಕ್ತಿಯಲ್ಲ. ನಂತರ ಆ ಪ್ರಾಣಿಯು ಅದನ್ನು ನೋಡುತ್ತದೆ. "ಈ ಮನುಷ್ಯನು ಚಿಗಾಂಗ್‌ನಿಂದ ಶ್ರೀಮಂತನಾಗ ಬಯಸುತ್ತಾನೆ. ಮತ್ತು ಆತನು ಪ್ರಖ್ಯಾತ  ನಾಗ ಬಯಸುತ್ತಾನೆ. ಹಾಗೂ ಸಾಮರ್ಥ್ಯಗೊಳ್ಳ ಬಯಸುತ್ತಾನೆ. ಹುಡುಗನೇ ಆತನ ದೇಹವು ಅಂದವಾಗಿರುತ್ತದೆ. ಮತ್ತು

ಆತನು ಹೊಂದಿರುವುದೆಲ್ಲವೂ ಆಕರ್ಷಕವಾಗಿರುತ್ತದೆ. ಆದರೆ ಆತನ ಮನಸ್ಸು ಮಾತ್ರ ಕೆಟ್ಟದ್ದಾಗಿರುತ್ತದೆ. ಆತ ಸಾಮರ್ಥ್ಯದ ಹಿಂದೆ ಬಿದ್ದಿರುತ್ತಾನೆ. ಆತನಿಗೊಬ್ಬ ಗುರುವೂ ಇರಬಹುದು. ಆದರೆ ಆತನು ಅದನ್ನು ನೋಡಿದರೂ ಸಹ ನಾನು ಹೆದರುವುದಿಲ್ಲ. ಅದಕ್ಕೆ ತಿಳಿದಿದೆ. ನಿಜವಾದ ಅಭ್ಯಾಸವನ್ನು ಮಾಡಿದ ಗುರುವು ಆತನ ಸಾಮರ್ಥ್ಯದ ಹಿಂದೆ ಬಿದ್ದಿರುವುದನ್ನು ನೋಡುತ್ತಾನೆ.

ಆತನು ಎಷ್ಟು ಅದನ್ನು ಅರಸಿ ಹೋಗುತ್ತಾನೋ, ಗುರುಗಳು ಆತನಿಗೆ ಅದನ್ನು ಕೊಡಲು ಇನ್ನೂ ಕಡಿಮೆ ಅವಕಾಶವಿರುತ್ತದೆ. ಏಕೆಂದರೆ ಇದು ಒಂದು ಬಂಧನ. ಈ ಬಂಧನದಿಂದಲೇ ಆತ ಬಿಡಿಸಿಕೊಳ್ಳಬೇಕಾಗಿರುವುದು. ಈತನು ಈ ಮಾರ್ಗವಾಗಿ ಯೋಚಿಸಿದರೆ ಯಾವುದೇ ಸಾಮರ್ಥ್ಯವನ್ನು ಈತನಿಗೆ ಕೊಡುವ ಅವಕಾಶ ಕಡಿಮೆ ಇರುತ್ತದೆ. ಆದ್ದರಿಂದ ಮೂಲತಃ ಇದು ಹೇಗೆ ದೊರೆಯುವುದೆಂದು ಮರೆಯುವ ಸ್ವಭಾವದವನಾಗುತ್ತಾನೆ. ಇದನ್ನು ಎಷ್ಟು ಹೆಚ್ಚಾಗಿ ಬಯಸುತ್ತಾನೋ ಆತನ ವಿಚಾರಗಳು ಅಷ್ಟು ಕೆಟ್ಟದ್ದಾಗಿರುತ್ತದೆ. ಈತನ ಕೆಲಸ ಮುಗಿಯಿತೆಂದು ಕಂಡ ಗುರುಗಳು ಕೊನೆಯದಾಗಿ ದೀರ್ಘ ನಿಟ್ಟುಸಿರು ಬಿಡುತ್ತಾರೆ ಮತ್ತು ಈತನೊಂದಿಗೆ ಇನ್ಯಾವುದೇ ಕೆಲಸ ವಿಲ್ಲವೆಂದು ತಿಳಿಯುತ್ತಾನೆ. ಕೆಲ ವ್ಯಕ್ತಿಗಳಿಗೆ ಗುರುಗಳಿರುವುದಿಲ್ಲ ಮತ್ತು ಅವರ ಮುಂದೆ ಹಾದು ಹೋದ ವ್ಯಕ್ತಿಗಳು ಇವರನ್ನು ಒಂದು ಕ್ಷಣ ದಿಟ್ಟಿಸಿ ನೋಡುತ್ತಾರೆ. ಏಕೆಂದರೆ ಹಾದುಹೋಕರಲ್ಲಿ ಎಷ್ಟೋ ಮಂದಿ ವಿವಿಧ ಆಯಾಮಗಳಲ್ಲಿನ ಜ್ಞಾನವಂತರಾದ ವ್ಯಕ್ತಿ ಗಳಿರುತ್ತಾರೆ. ಯಾವುದೋ ಜ್ಞಾನಿ ಒಮ್ಮೆ ಆತನನ್ನು ನೋಡಬಹುದು, ಆತನನ್ನು ಪರೀಕ್ಷಿಸ ಬಹುದು ಮತ್ತು ಆತನನ್ನು ಒಂದು ದಿನದ ಮಟ್ಟಿಗೆ ಹಿಂಬಾಲಿಸಬಹುದು. ಆತನು ಉತ್ತಮ ನಲ್ಲವೆಂದು ತಿಳಿದು ಬಂದರೆ ಆತನನ್ನು ಬಿಟ್ಟುಬಿಡಬಹುದು. ಮೂರನೆಯ ದಿನ ಮತ್ತೊಬ್ಬ ವ್ಯಕ್ತಿ ಬರಬಹುದು, ಒಮ್ಮೆ ದಿಟ್ಟಿಸಿ ನೋಡಬಹುದು, ಈತನು ಒಳ್ಳೆಯವನಲ್ಲವೆಂದು ತಿಳಿದ ಮೇಲೆ ಅವನೂ ಈತನನ್ನು ಬಿಟ್ಟು ಹೊರಟು ಹೋಗಬಹುದು.

ಪ್ರಾಣಿಗೆ ತಿಳಿದಿರುತ್ತದೆ, ಆತನಿಗೆ ವಿಧಿಬದ್ಧವಾದ ಗುರುವಾಗಲೀ ಅಥವಾ ಒಬ್ಬ ದಾರಿಹೋಕ ಗುರುವಾಗಲೀ ಈತನು ಅರಸುತ್ತಿರುವುದನ್ನು ಕೊಡುವುದಿಲ್ಲವೆಂದು ತಿಳಿದಿರುತ್ತದೆ. ಶ್ರೇಷ್ಟ ಜ್ಞಾನಿಗಳಾದಂತಹ ವ್ಯಕ್ತಿಗಳಿರುವಂತಹ ಆಯಾಮಗಳನ್ನು ಆ ಪ್ರಾಣಿಗಳು ಕಾಣಲಾಗುವುದಿಲ್ಲ. ಆದ್ದರಿಂದ ಅವರು ಭಯಭೀತರಾಗುವುದಿಲ್ಲ. ತಪ್ಪಿಸಿಕೊಳ್ಳುವ ಪ್ರಯೋಜನವನ್ನು ಅವರು ಪಡೆದುಕೊಂಡಿದ್ದಾರೆ. ನಮ್ಮ ವಿಶ್ವಕ್ಕೆ ಒಂದು ನಿಯಮವಿದೆ. ಅದೇನೆಂದರೆ ಯಾರಾದರೂ ಏನನ್ನಾದರೂ ಅನ್ವೇಷಿಸ ಬಯಸಿದರೆ ಅಥವಾ ಏನನ್ನಾದರೂ ಬೇಕೆಂದರೆ ಸಾಮಾನ್ಯವಾಗಿ ಅವರನ್ನು ಅಡ್ಡಿ ಪಡಿಸುವುದಿಲ್ಲ. ಇದು ತಪ್ಪಿಸಿಕೊಳ್ಳುವ ಉಪಾಯದ ಲಾಭ ಪಡೆಯುತ್ತದೆ. “ಅವನು ಅದನ್ನು ಪಡೆಯಲಿಚ್ಚಿಸುತ್ತಾನೆ. ನಂತರ ನಾನು ಅವನಿಗೆ ಅದನ್ನು ಕೊಡುತ್ತೇನೆ. ಆತನಿಗೆ ಸಹಾಯ ಮಾಡುವುದು ತಪ್ಪೇನಲ್ಲ, ಸರಿಯೇ?” ಆದ್ದರಿಂದ ಆತನು ಅವರಿಗೆ ಬಯಸಿದ್ದನ್ನು ಕೊಡುತ್ತಾನೆ. ಮೊದಲಿಗೆ ಆ ಪ್ರಾಣಿಗೆ ಆತನ ದೇಹವನ್ನು ಸೇರುವ ಧೈರ್ಯ ಬರುವುದಿಲ್ಲ. ಆದ್ದರಿಂದ ಆತನನ್ನು ಪರೀಕ್ಷಿಸಲು ಅವನಿಗೆ ಸ್ವಲ್ಪ ಕೃಷಿ ಶಕ್ತಿಯನ್ನು ಕೊಡುತ್ತದೆ. ವ್ಯಕ್ತಿಯು ಅದನ್ನು ಅರಸುತ್ತಿರುತ್ತಾನೆ. ಒಂದು ದಿನ ನಿಜವಾಗಿ ಆತನಿಗೆ ಗಾಂಗ್ ಸಿಗುತ್ತದೆ ಮತ್ತು ಜನಗಳಿಗೆ ಆತನು ವಾಸಿ ಮಾಡುತ್ತಾನೆ. ಪ್ರಾಣಿಯು ತಾನು ಆಕರ್ಷಕವಾದ ಕೆಲಸವನ್ನು ಮಾಡಿರುವುದನ್ನು ಕಾಣುತ್ತದೆ. ಇದು ಕೇವಲ ಒಂದು ಪ್ರದರ್ಶನವು ನಿಜವಾಗಿ ಪ್ರಾರಂಭ ವಾಗುವ ಮುಂಚೆ ಆಡುವ ಮುನ್ನುಡಿಯಂತೆ ಇರುತ್ತದೆ. ಆತನಿಗೆ ಅದು ಬೇಕಾಗಿದೆ, ಆದ್ದರಿಂದ ನಾನು ನೇರವಾಗಿ ಆತನ ದೇಹವನ್ನು ಸೇರುತ್ತೇನೆ. ಒಮ್ಮೆ ನಾನಲ್ಲಿ ಸೇರಿದರೆ ಆತನಿಗೆ ಹೆಚ್ಚಿನದನ್ನು ನಾನು ಕೊಡಬಹುದು. ನಾನು ಸುರಿಯುತ್ತಲೇ ಹೋಗುತ್ತೇನೆ!. ನಿಮಗೆ ದಿವ್ಯದೃಷ್ಠಿ (ಮೂರನೆಯ ಕಣ್ಣು) ಬೇಕಾಗಿದೆ ನಿಜವೇ? ಈ ಬಾರಿ ನಾನು ನಿಮಗೆ ಎಲ್ಲವನ್ನೂ ಕೊಡುತ್ತೇನೆ. ಆದ್ದರಿಂದ ನೇರವಾಗಿ ಇದು ಆತನ ದೇಹವನ್ನು ಸೇರುತ್ತದೆ.

ಅದು ಬೇಕೆಂಬ ವಿಚಾರವು ಆತನ ಮನಸ್ಸಿನಲ್ಲಿದ್ದಾಗ, ಆ ಕೆಲಸವನ್ನು ಮಾಡಲು ತಯಾರಿದ್ದಾಗ ಆತನ ದಿವ್ಯದೃಷ್ಠಿ (ಮೂರನೆಯ ಕಣ್ಣು) ಥಟ್ಟನೆ ಚಲಿಸುತ್ತದೆ. ಮತ್ತು ಈತನು ಕೃಷಿಶಕ್ತಿ ಕಲಿಸುವಷ್ಟು ಸಮರ್ಥನಾಗಿರುತ್ತಾನೆ. ಮತ್ತು ಈತನು ಸ್ವಲ್ಪ ಸಾಮರ್ಥ್ಯವನ್ನು ಸಹ ಪಡೆದುಕೊಂಡಿರುತ್ತಾನೆ. ತನ್ನಷ್ಟಕ್ಕೆ

ತಾನೇ ಸಂತೋಷದಿಂದಿ ರುತ್ತಾನೆ. ಮತ್ತು ಈತನು ಬಯಸಿ ಬಯಸಿ ಕೊನೆಯದಾಗಿ ಇದನ್ನು ಪಡೆದುಕೊಂಡಿದ್ದಾನೆ.

ಮತ್ತು ಇದು ಅಭ್ಯಾಸ ಮಾಡಿದ್ದರಿಂದ ಬಂದಿದೆಯೆಂದು ಆತ ತಿಳಿಯುತ್ತಾನೆ. ಆದರೆ ನಿಜವಾಗಿಯೂ ಈತನ ಅಭ್ಯಾಸ ಈತನಿಗೇನೂ ತಂದುಕೊಟ್ಟಿಲ್ಲ. ಆತನು ಒಂದು ಶರೀರದ ಮುಖಾಂತರ ನೋಡಬಹುದೆಂದುಕೊಳ್ಳುತ್ತಾನೆ ಮತ್ತು ಇತರರ ದೇಹದಲ್ಲಿನ ಸಮಸ್ಯೆಯೆಲ್ಲದೆ ಎಂಬುದನ್ನು ನೋಡಬಲ್ಲ ಶಕ್ತಿಯಿದೆಯೆಂದು ಆತ ಯೋಚಿಸುತ್ತಾನೆ. ನಿಜದಲ್ಲಿ ಆದರೂ ಆತನ ದಿವ್ಯದೃಷ್ಟಿ ಸ್ವಲ್ಪ ಕೂಡ ತೆರೆದಿರುವುದಿಲ್ಲ. ಇದೇಕೆಂದರೆ ಆತನ ಪುಸ್ತಕವನ್ನು ಈ ಪ್ರಾಣಿಯು ತನ್ನ ಅಂಕೆಯಲ್ಲಿಟ್ಟುಕೊಂಡಿರುತ್ತದೆ. ಈ ಪ್ರಾಣಿಯು ವಿಷಯಗಳನ್ನು ತನ್ನ ಕಣ್ಣಿನಿಂದ ನೋಡುತ್ತದೆ. ನಂತರ ತಾನು ನೋಡಿದ್ದನ್ನು ಆತನ ತಲೆಗೆ ಪ್ರತಿಬಿಂಬಿಸುತ್ತದೆ ಮತ್ತು ಆಗ ಆತನು ತನ್ನ ದಿವ್ಯದೃಷ್ಟಿ ತೆರೆದಿದೆಯೆಂದು ಯೋಚಿಸುತ್ತಾನೆ. "ಕೃಷಿಶಕ್ತಿಯನ್ನು ಹೊರಕಳುಹಿಸಬೇಕೇ? ಅದಕ್ಕೆ ಹೋಗಿ ಗಾಂಗ್ ಹೊರ ಕಳಿಸಲು ಕೈಗಳನ್ನು ಹಿಡಿದುಕೊಂಡಾಗ ಆ ಪ್ರಾಣಿಯ ಸಣ್ಣ ಪಂಜವು ದೇಹದ ಹಿಂದಿನಿಂದ ಮುಂಚಾಚುತ್ತದೆ. ಆತ ಕೃಷಿ ಶಕ್ತಿಯನ್ನು ಹೊರಗೆಡವಿದಾಗ ಸಣ್ಣ ಹಾವಿನಂತಹ ತಲೆಯಿಂದ ಹೊರಚಾಚಿದ ಸೀಳುನಾಲಿಗೆಯು, ರೋಗಗ್ರಸ್ತ ಅಥವಾ ಊದಿಕೊಂಡ ಜಾಗವನ್ನು ನೆಕ್ಕುತ್ತದೆ. ಇಂತಹ ಎಷ್ಟೋ ಸಂಗತಿಗಳಿವೆ. ಈ ಜನರ ದೇಹವನ್ನು ಆತ್ಮಗಳು ವಶಪಡಿಸಿಕೊಂಡಿರುತ್ತವೆ, ಏಕೆಂದರೆ ಅದಕ್ಕೆ ಅವರೇ ಕೇಳಿಕೊಂಡಿದ್ದಾರೆ.

ಆದ್ದರಿಂದ ಅವರ ಹಿಂದೆ ಅರಸುತ್ತಾ ಹೋಗುತ್ತಾನೆ, ತಾನು ಶ್ರೀಮಂತನಾಗುವ ಕನಸು ಕಾಣುತ್ತಾನೆ ಮತ್ತು ಪ್ರಸಿದ್ಧನಾಗುವ ಕನಸು ಕಾಣುತ್ತಾನೆ. ಸರಿ ಹಾಗಾದರೆ ಆತನಿಗೆ ಸಾಮರ್ಥ್ಯ ಬರುತ್ತದೆ. ಆತ ಜನರಿಗೆ ವಾಸಿ ಮಾಡಬಲ್ಲವನಾಗುತ್ತಾನೆ ಮತ್ತು ತನ್ನ ದಿವ್ಯ ದೃಷ್ಟಿಯಿಂದ ನೋಡಬಲ್ಲವನಾಗುತ್ತಾನೆ. ಅದು ಆತನಿಗೆ ಸಂತೋಷ ಕೊಡುತ್ತದೆ. ಪ್ರಾಣಿಯು ಆತನನ್ನು ಒಮ್ಮೆ ನೋಡುತ್ತದೆ. ನೀನು ಶ್ರೀಮಂತನಾಗ ಬಯಸುತ್ತೀಯೋ? ಸರಿ ಹಾಗಾದರೆ, ನೀನು ಶ್ರೀಮಂತನಾಗಲು ನಾನು ಸಹಾಯ ಮಾಡುತ್ತೇನೆ. ಒಬ್ಬ ಸಾಮಾನ್ಯ ಮನುಷ್ಯನ ಮನಸ್ಸನ್ನು ಹಿಡಿತದಲ್ಲಿಡುವ ಅತ್ಯಂತ ಸುಲಭ ಮಾರ್ಗ, ಈ ಪ್ರಾಣಿಯು ಎಷ್ಟೋ ಮಂದಿಯನ್ನು ತನ್ನ ನಿಯಂತ್ರಣದಲ್ಲಿಟ್ಟುಕೊಳ್ಳಬಲ್ಲದು ಮತ್ತು ತನ್ನ ಬಳಿ ಉಪಚಾರಕ್ಕಾಗಿ ಬರುವಂತೆ ಮಾಡಬಹುದು ಮತ್ತು ಅವು ದಂಡು ದಂಡಾಗಿ ಬರುತ್ತವೆ. ಅಯ್ಯೋ ದೇವರೆ! ಆತ ರೋಗಿಗಳನ್ನು ಇಲ್ಲಿ ನೋಡುತ್ತಿರುವಾಗಲೇ ವರದಿಗಾರರಿಗೆ ಆತನ ಬಗ್ಗೆ ಪತ್ರಿಕೆಗಳಲ್ಲಿ ಬರೆಯಲು ಹುರಿದುಂಬಿಸುತ್ತದೆ. ಯಾರಾದರೂ ಈತನ ಬಳಿಗೆ ವೈದ್ಯೋಪಚಾರಕ್ಕಾಗಿ ಬಂದರೆ ಮತ್ತು ಈತನಿಗೆ ಸರಿಯಾದ ಹಣವನ್ನು ಕೊಡದಿದ್ದರೆ ಆತನು ಅವರ ಮೇಲಿನ ಹಿಡಿತವನ್ನು ಬಿಡುವುದಿಲ್ಲ.

ಅವರಿಗೆ ತಲೆನೋವು ಬರುವಂತೆ ಮಾಡುತ್ತಾನೆ, ನೀವು ಆತನಿಗೆ ಹೆಚ್ಚಿನ ಹಣವನ್ನು ಪಾವತಿಸಬೇಕಾದಂತಹ ಸಂದರ್ಭವನ್ನು ಉಂಟುಮಾಡಿರುತ್ತದೆ. ಆ ಮನುಷ್ಯನು ಪ್ರಸಿದ್ಧಿ ಮತ್ತು ಶ್ರೀಮಂತಿಕೆ ಎರಡನ್ನೂ ತನ್ನೆಡೆ ಸೆಳೆದುಕೊಂಡಿರುತ್ತಾನೆ. ಇದನ್ನು ಒಂದು ಕಂತೆಯನ್ನಾಗಿ ಮಾಡಿರುತ್ತಾನೆ. ಈತನು ಪ್ರಸಿದ್ಧಿ ಹೊಂದಿದ್ದಾನೆ, ಈಗ ಈತನೇ ಒಬ್ಬ ಚಿಗಾಂಗ್ ಗುರು ಇಂತಹ ಜನಗಳು ನಡತೆಯನ್ನು ಪರಿಗಣಿಸುವುದಿಲ್ಲ ಮತ್ತು ಅವರು ಏನನ್ನಾದರೂ ಹೇಳುವಷ್ಟು ಧೈರ್ಯವಂತರಾಗಿರುತ್ತಾರೆ. "ದೇವರ ನಂತರ ನಾನೇ" ಇವರು ಎಷ್ಟು ಮುಂದುವರೆದಿರುತ್ತಾರೆಂದರೆ ಇವರೇ ದೇವರ ಅವತಾರವೆಂದು ಹೇಳಿಕೊಳ್ಳುತ್ತಾರೆ. ಉದಾ: **ಕ್ವೀನ್ ಮದರ್, ಜೇಡ್ ಎಂಪೆರರ್** ಮತ್ತು ತಾನೇ ಬುದ್ಧನೆಂದು ಹೇಳಿಕೊಳ್ಳು ವವರೆಗೂ ಮುಂದುವರೆಯುತ್ತಾರೆ. ನಿಜವಾಗಿ ಅವರು ನಡತೆಯ ಅಭ್ಯಾಸವನ್ನು ಮಾಡಿರುವುದಿಲ್ಲ. ಆದ್ದರಿಂದ ಅವರು ಸಾಮರ್ಥ್ಯ ಪಡೆಯಲು ಹೋಗಿ ಈ ಸಾಧನೆಯನ್ನು ಮಾಡುವಾಗ ಪ್ರಾಣಿಗಳ ಹಿಡಿತದಲ್ಲಿ ಕೊನೆಗೆ ಸಿಲುಕಿಕೊಳ್ಳುತ್ತಾರೆ.

---

10. **ಕ್ವೀನ್ ಮದರ್,** – ಮೂರು ಆಯಾಮಗಳಲ್ಲಿ ಅತಿ ಉನ್ನತ ಮಟ್ಟದ ಡಯಟಿ.
11. **ಜೇಡ್ ಎಂಪೆರರ್** – ಮೂರು ಆಯಾಮಗಳನ್ನು ನೋಡಿ ಕೊಳ್ಳುವ ಮೇಲ್ವಿಚಾರಕಿ.

ನಿಮ್ಮಲ್ಲಿ ಕೆಲವರು ಯೋಚಿಸುತ್ತಿರಬಹುದು "ಇದರಲ್ಲಿ ತಪ್ಪೇನೆಂದು"? ಎಲ್ಲಿಯ ವರೆಗೂ ನಾನು ಹಣ ಮಾಡಲು ಸಾಧ್ಯವೋ ಅಥವಾ ಶ್ರೀಮಂತನಾಗಲು ಸಾಧ್ಯವೋ ಮತ್ತು ಪ್ರಸಿದ್ಧಿ ಹೊಂದಲು ಸಾಧ್ಯವೋ ಅಲ್ಲಿಯವರೆಗೂ ಇದೆಲ್ಲವೂ ಸರಿ ಎಂದು ಹಲವು ಮಂದಿ ಚಿಂತಿಸುತ್ತಾರೆ. ಆದರೆ ನಾನು ಹೇಳುತ್ತೇನೆ. ಆ ಪ್ರಾಣಿಯು ಯಾವುದೇ ಉದ್ದೇಶ ವಿಲ್ಲದೆ ಹೀಗೆ ಮಾಡುವುದಿಲ್ಲ. ಇದು ಹೀಗಾಗುತ್ತದೆ ಏನೆಂದರೆ ಯಾವ ಲಾಭವೂ ಅದಕ್ಕಿಲ್ಲದೆ ನಿಮಗೇನನ್ನೂ ಕೊಡುವುದಿಲ್ಲ, ವಿಶ್ವದಲ್ಲಿ ಒಂದು ನಿಯಮವಿದೆ, ಲಾಭವಿಲ್ಲ, ನಷ್ಟವಿಲ್ಲ, ಈ ಪ್ರಾಣಿಗೆ ಏನು ಸಿಗುತ್ತದೆ? ಇದರ ಬಗ್ಗೆ ಹಿಂದೆ ನಾನು ಮಾತನಾಡಿದ್ದೇ ಅಲ್ಲವೇ? ಮಾನವ ರೂಪಕ್ಕೆ ತಾನು ಬದಲಾಗಲು ನಿಮ್ಮ ದೇಹದಲ್ಲಿನ ಸ್ವಲ್ಪ ಮೂಲಸತ್ವ ವನ್ನು ತಾನು ಪಡೆದುಕೊಳ್ಳಲು ಪ್ರಯತ್ನಿಸುತ್ತಿರುತ್ತದೆ. ಆದ್ದರಿಂದ ಕೇವಲ ಇದು ಮಾನವನ ಶರೀರದ ಸತ್ವವನ್ನು ಸಂಗ್ರಹಿಸುತ್ತದೆ. ಆದರೆ ಮಾನವನ ದೇಹದಲ್ಲಿ ಈ ರೀತಿಯ ಸತ್ವವಿದೆ. ಏನೆಂದರೆ ಯಾರು ಅದನ್ನು ಅಭ್ಯಾಸ ಮಾಡುತ್ತಾರೋ ಆತನಿಗೆ ಮಾತ್ರ ಆ ಒಂದು ಭಾಗ ದೊರೆಯುತ್ತದೆ. ನೀವು ಇದನ್ನು ಆ ಪ್ರಾಣಿಯು ಕೊಂಡೊಯ್ಯಲು ಬಿಟ್ಟರೆ ನೀವು ಅಭ್ಯಾಸ ಮಾಡುವುದನ್ನು ಮರೆತು ಬಿಡಬಹುದು. ನಂತರ ಹೇಗೆ ಅಭ್ಯಾಸ ಮಾಡುವಿರಿ? ನೀವು ಎಲ್ಲವನ್ನೂ ಕಳೆದುಕೊಂಡು ಬಿಡುತ್ತೀರಿ ಮತ್ತು ನೀವು ಅಭ್ಯಾಸ ಮಾಡಲು ಸಾಧ್ಯವೇ ಆಗುವುದಿಲ್ಲ. ಕೆಲವರು ಹೇಳಬಹುದು, " ನಾನು ಅಭ್ಯಾಸ ಮಾಡಲು ಬಯಸುವುದಿಲ್ಲ, ನಾನು ಕೇವಲ ಶ್ರೀಮಂತನಾಗ ಬಯಸುತ್ತೇನೆ, ಎಲ್ಲಿಯವರೆಗೂ ನನ್ನಲ್ಲಿ ಹಣವಿರುತ್ತದೆಯೋ ಎಲ್ಲವೂ ಚಿನ್ನಾಗಿರುತ್ತದೆ, ನಾನು ಹೆಚ್ಚಿನ ಲಕ್ಷ್ಯ ಕೊಡದಿರಲಾಗಲಲ್ಲ!"

ನೋಡಿ ನಾನು ಹೇಳುತ್ತೇನೆ, ನೀವು ಶ್ರೀಮಂತರಾಗಬಯಸುತ್ತೀರಿ, ಇದರ ಪರಿಣಾಮವೇನಾಗುತ್ತದೆಂದರೆ ನಾನು ನಿಮಗೆ ವಿವರಿಸಿದ ನಂತರ ನೀವು ನಿಮ್ಮ ಮನಸ್ಸನ್ನು ಬದಲಾಯಿಸುವಿರಿ. ಅದರಿಂದ ಏನಾಗುತ್ತದೆ. ಬಹಳ ನಿಧಾನವಾಗಿಯಲ್ಲದಿದ್ದರೂ ನಿಮ್ಮ ದೇಹವನ್ನು ಬಿಟ್ಟು ಹೋದಲ್ಲಿ ನೀವು ತರಕಾರಿಯಂತಾಗಿರುತ್ತೀರಿ. ಒಂದು ಎಳೆಯಲ್ಲಿ ತೂಗಾಡುತ್ತಾ ಜೀವನ ಪರ್ಯಂತ ಹಾಸಿಗೆ ಹಿಡಿದಿರುತ್ತೀರಿ. ನಿಮ್ಮ ಬಳಿಯಲ್ಲಿ ಹಣವಿದ್ದರೂ ಸಹ ನಿಮ್ಮಿಂದ ಖರ್ಚು ಮಾಡಲಾಗುವುದೇ? ನಿಮಗೆ ಯಶಸ್ಸಿದ್ದರೂ ಸಹ ಅದನ್ನು ಅನುಭವಿಸಲು ಸಾಧ್ಯವೇ? ಅದು ಬಹಳ ಭೀಕರವಾಗಿರುವುದಿಲ್ಲವೇ?

ಈ ಸಂಗತಿಗಳು ನಿಜವಾಗಿಯೂ ಗಂಭೀರವಾಗಿ ಪರಿಣಮಿಸಿದೆ ಮತ್ತು ಈ ಮಧ್ಯೆ ಚಿಗಾಂಗ್ ಅಭ್ಯಾಸ ಮಾಡುತ್ತಿರುವ ಜನರಲ್ಲಿ ಇದು ಸಾಮಾನ್ಯವಾಗಿದೆ. ಈ ಪ್ರಾಣಿಯು ದೇಹವನ್ನು ಆಕ್ರಮಿಸುವುದು ಮಾತ್ರವಲ್ಲ, ಇದು ಆ ವ್ಯಕ್ತಿಯ ಶ್ರೇಷ್ಠ ಆತ್ಮ (Master Soul) ವನ್ನು ಕೊಲ್ಲುತ್ತದೆ. ಮತ್ತು ಇದು ಬಿಲವನ್ನು ತೋಡುತ್ತಾ ವ್ಯಕ್ತಿಯ **ನೀವಾನ್ ಅರಮನೆ** ಯನ್ನು ಸೇರಿ ಅಲ್ಲಿ ಪದ್ಮಾಸನ ಹಾಕಿಕೊಂಡು ಕೂಡುತ್ತದೆ. ಆ ವ್ಯಕ್ತಿಯು ಮಾನವನಂತೆ ಕಾಣುತ್ತಾನೆ. ಆದರೆ ಮಾನವನಾಗಿರುವುದಿಲ್ಲ. ಈ ಮಧ್ಯೆ ಇಂತಹ ಸಂಗತಿಗಳನ್ನು ನೀವು ನೋಡುತ್ತೀರಿ, ಮಾನವನ ಮೌಲ್ಯಗಳು ಬದಲಾಗಿವೆ. ಆದ್ದರಿಂದ ಕೆಲವರು ಕೆಟ್ಟದ್ದನ್ನೇನಾದರೂ ಮಾಡುತ್ತಿದ್ದಲ್ಲಿ ಅವರು ಕೆಟ್ಟದ್ದನ್ನು ಮಾಡುತ್ತಿದ್ದಾರೆಂದು ನೀವು ಹೇಳುವಿರಿ. ಆದ್ದರಿಂದ ಅವರು ನಿಮ್ಮನ್ನು ನಂಬುವುದಿಲ್ಲ, ಹಣ ಮಾಡುವುದು, ಹಣಕ್ಕಾಗಿ ಬಯಸುವುದು, ಶ್ರೀಮಂತರಾಗುವುದು ಇವೆಲ್ಲವೂ ತಮ್ಮ ಜನ್ಮಸಿದ್ಧ ಹಕ್ಕು ಮತ್ತು ಇದೆಲ್ಲವನ್ನೂ ಮಾಡುವುದು ಸರಿಯೆಂದು ಅವರು ಯೋಚಿಸುತ್ತಾರೆ. ಆದ್ದರಿಂದ ಅವರು ಇತರರಿಗೆ ತೊಂದರೆ ಕೊಡುತ್ತಾರೆ. ಇತರರಿಗೆ ನೋವುಂಟು ಮಾಡುತ್ತಾರೆ. ಹಣ ಮಾಡುವುದೊಂದೇ ಅವರ ಗುರಿ. ಯಾವ ಕಾರಣದಿಂದಲೂ ಅದನ್ನು ನಿಲ್ಲಿಸುವುದಿಲ್ಲ. ಏನನ್ನು ಬೇಕಾದರೂ ಅವರು ಮಾಡುತ್ತಾರೆ. ಆ ಪ್ರಾಣಿಯು ತಾನು ಏನನ್ನಾದರೂ ಕಳೆದು ಕೊಳ್ಳದಿದ್ದರೆ ಕೊಡುತ್ತದೆಯೇ? ನಿಮ್ಮ ದೇಹದಲ್ಲಿನ ಸಂಗತಿಗಳನ್ನು ತಾನು ಪಡೆದುಕೊಳ್ಳ ಬಚ್ಚಿಸುತ್ತದೆ. ಬಹುಶ: ಜನರಿಗೆ ಸರಿಯಾದ ಕಲ್ಪನೆ ಇಲ್ಲದಿರುವುದರಿಂದ ಅವರು ಈ ತೊಂದರೆಗಳನ್ನು ಆಹ್ವಾನಿಸುತ್ತಾರೆಂದು ನಾವು ಹೇಳುತ್ತೇವೆ. ನಮ್ಮ ಫಾಲೂನ್ ಧಾಫಾ ಅದರ ಬಗ್ಗೆ ಏನು ಹೇಳುವುದಿದೆಯೆಂದು ನೋಡೋಣ. ನಮ್ಮ ಶಿಸ್ತಿನಲ್ಲಿ ನೀವು ಅಭ್ಯಾಸವನ್ನು ಮಾಡಿದ್ದೇ ಆದರೆ ಎಲ್ಲಿಯವರೆಗೂ ನಿಮ್ಮ ನಡತೆಯನ್ನು ನೀವು ಉಳಿಸಿಕೊಂಡಿರುತ್ತೀರೋ ಅಲ್ಲಿಯವರೆಗೂ ಒಂದು ಒಳ್ಳೆಯದು ನೂರು ಕೆಟ್ಟದ್ದನ್ನು ಜಯಿಸುತ್ತದೆ. ನೀವು ಯಾವುದೇ ಕಷ್ಟಗಳಿಗೂ ಸಿಲುಕುವುದಿಲ್ಲ,

---

12. **ನೀವಾನ್ ಅರಮನೆ** – ಶರೀರದ ಅಂತ್ಯ.

ಮತ್ತೊಂದು ಮಾತಲ್ಲಿ ಹೇಳಬೇಕೆಂದರೆ ನಿಮ್ಮ ನಡತೆಯನ್ನು ಸರಿಯಿರಿಸಿಕೊಳ್ಳದೇ ನೀವು ಎಲ್ಲವನ್ನೂ ಅರಸುತ್ತಾ ಹೋದರೆ ಖಂಡಿತವಾಗಿಯೂ ನೀವು ತೊಂದರೆಗಳನ್ನು ಆಹ್ವಾನಿಸುತ್ತೀರಿ. ತಾವು ಅಭ್ಯಾಸ ಮಾಡುತ್ತಿರುವ ಸಂಗತಿಗಳನ್ನು ಎಷ್ಟೋ ಜನರು ತಮ್ಮಿಂದ ಹೋಗಗೊಡುವುದಿಲ್ಲ. ಚಿಗಾಂಗ್ ಅಭ್ಯಾಸ ಮಾಡುತ್ತಿರುವಾಗ ನಾವೆಲ್ಲರೂ ಶಿಸ್ತಿಗೆ ಬದ್ಧರಾಗಿರಬೇಕೆಂಬುದು ನಮಗೆಲ್ಲಾ ತಿಳಿದಿದೆ. ನಿಜವಾದ ಅಭ್ಯಾಸದಲ್ಲಿ ನೀವು ಇದನ್ನು ಮಾಡಲೇಬೇಕು. ಕೆಲವು ಚಿಗಾಂಗ್ ಮಾಸ್ತರರು ಪುಸ್ತಕಗಳನ್ನು ಬರೆದಿದ್ದಾರೆ. ಆದರೇನು? ಅದೇನೆಂದು ನಿಮಗೆ ತಿಳಿದಿದೆ. ಆ ಪುಸ್ತಕಗಳೆಲ್ಲಾ ಅವ್ಯವಸ್ಥೆಯ ಹೊಲಸು, ತಾವು ಅಭ್ಯಾಸ ಮಾಡುವಂತಹ ಸಂಗತಿಗಳಾದ ಹಾವುಗಳು, ನರಿಗಳು ಮತ್ತು ಮುಂಗುಸಿಗಳೆಲ್ಲಾ ಅದರಲ್ಲಿರುತ್ತದೆ. ನೀವು ಈ ಪುಸ್ತಕಗಳನ್ನು ಓದಿದಾಗ ಈ ಸಂಗತಿಗಳು ಪದಗಳಿಂದ ಎಗರಿ ಬಂದು ಓದುಗನನ್ನು ಹಿಡಿದುಕೊಳ್ಳುತ್ತದೆ. ನಾನು ನಿಮಗೆ ಹೇಳಬೇಕು. ಈ ನಕಲಿ ಚಿಗಾಂಗ್ ಮಾಸ್ತರರು ಅಸಲಿ ಚಿಗಾಂಗ್ ಮಾಸ್ತರರುಗಳಿಗಿಂತ ಹೆಚ್ಚಿನ ಸಂಖ್ಯೆಯಲ್ಲಿದ್ದಾರೆ. ಅವರಲ್ಲಿ ಅಸಲಿ ಯಾರೋ, ನಕಲಿ ಯಾರೋ ಹೇಳಲಾಗುವುದಿಲ್ಲ. ಆದ್ದರಿಂದ ನೀವೇನು ಮಾಡುತ್ತಿರುವಿರೆಂದು ನಿಮಗೆ ತಿಳಿದಿರಬೇಕು. ಇದರ ಅರ್ಥ ನಾನು ಯಾವುದಕ್ಕೂ ಬಗ್ಗುವುದಿಲ್ಲವೆಂದಲ್ಲ. ಆದರೆ ನೀವು ನಿಮ್ಮ ಫಾಲೂನ್ ದಾಫಾ ಅಭ್ಯಾಸ ಮಾಡುತ್ತಿರುವಿರಿ. ನಿಜ ಹೇಳಬೇಕೆಂದರೆ ನೀವು ಯಾವ ಶಿಸ್ತನ್ನು ಆಯ್ಕೆ ಮಾಡಿಕೊಂಡರೆ ಅದನ್ನು ನೀವು ಅಭ್ಯಾಸ ಮಾಡಬಹುದು. ಆದರೆ ಒಂದು ಪುರಾತನ ಮಾತಿದೆ. **"ಸಾವಿರಾರು ವರ್ಷಗಳಿಂದ ಯಾವುದೇ ಸತ್ಯವಾದ ಬೋಧನೆಯಿಲ್ಲದಿರುವುದು, ಒಂದು ದಿನದ ನಾಸ್ತಿಕತೆಗಿಂತ ಮೇಲು"** ಆದ್ದರಿಂದ ನೀವೇನು ಮಾಡುತ್ತೀದ್ದೀರೆಂದು ನಿಮಗೆ ತಿಳಿದಿರಬೇಕು ಮತ್ತು ಖಂಡಿತವಾಗಿಯೂ ಸತ್ಯವಾದ ಬೋಧನೆಯನ್ನು ನೀವು ಅಭ್ಯಾಸ ಮಾಡಬೇಕು. ನಿಮ್ಮ ಅಭ್ಯಾಸದಲ್ಲಿ ಇನ್ನೇನನ್ನೂ ಬೆರೆಸ ಬೇಡಿ. ಯಾವ ವಿಚಾರವನ್ನೂ ಸಹ ಅದರ ಜೊತೆ ಕೂಡಿಸಬೇಡಿ, ಕೆಲವರ ನಿಯಮ ಚಕ್ರಗಳು ತಮ್ಮ ಆಕಾರವನ್ನೇ ಕಳೆದುಕೊಂಡಿದೆ. ಅದು ಏಕೆ? ಅವು ರಕ್ಷಣಾತ್ಮಕ, **"ಆದರೆ ನಾನು ಇನ್ನೊಂದು ಚಿಗಾಂಗ್ ಅಭ್ಯಾಸ ಮಾಡಲಿಲ್ಲ"**. ಆದರೆ ಎಂದು ಅವರ ವ್ಯಾಯಾಮ ಗಳನ್ನು ಮಾಡುತ್ತಾರೋ ಅವರು ಹಿಂದೆ ಮಾಡಿದ ಅಭ್ಯಾಸದ ಬಗೆಗಿನ ವಿಚಾರದ ಗುಟ್ಟು ಹೊರಗೆಡುವುತ್ತಿರುತ್ತದೆ. ಇದು ಅದರ ಜೊತೆ ಸೇರಿಕೊಳ್ಳಲಿಲ್ಲವೇ? ಆತ್ಮದ ಸ್ವಾಧೀನದ ಬಗ್ಗೆ ಅಷ್ಟನ್ನೇ ನಾನು ಹೇಳಲಿಚ್ಛಿಸುವುದು.

## ದೈವಿಕ ಭಾಷೆ

ಕಾಸ್ಮಿಕ್ ಭಾಷೆ (ದೈವಿಕ ಭಾಷೆ) ಎಂದರೇನು? ಅದು ಒಬ್ಬ ಮನುಷ್ಯನ ಬಗ್ಗೆ ಅಂದರೆ ಅವನು ತನಗೆ ಅರಿವಿಲ್ಲದಂತೆ ಹುಚ್ಚು ಹುಚ್ಚಾಗಿ ಜಂಬೊ ಮುಂಬೊ ಎಂದು ಮಾತನಾಡು ವುದು, ಅದನ್ನು ದೂರದಲ್ಲಿನ ಇನ್ನೊಬ್ಬರ ಮನಸ್ಸಿನಲ್ಲಿ ಉಂಟಾಗುವ ಕ್ರಿಯೆಯನ್ನು ಗ್ರಹಿಸಬಲ್ಲ ವ್ಯಕ್ತಿಗಳು ಅದರ ಬಗ್ಗೆ ಊಹಿಸಬಹುದು. ಆದರೆ ಅವರು ಏನನ್ನು ಹೇಳುತ್ತಿದ್ದಾನೆಂದು ಖಚಿತವಾಗಿ ಹೇಳಲು ಸಾಧ್ಯವಿಲ್ಲ. ಕೆಲವರು ಹಲವಾರು ಭಾಷೆಗಳನ್ನು ಮಾತಾಡಬಹುದು. ಇನ್ನೂ ಹೆಚ್ಚಾಗಿ ಹೇಳಬೇಕೆಂದರೆ ಕೆಲವರು ತಮ್ಮನ್ನು ತಾವೇ ವಿಸ್ಮಯಕಾರಿ ಎಂದು ತಿಳಿಯುತ್ತಾರೆ ಹಾಗೂ ಯೋಚಿಸುತ್ತಾರೆ. ಅವರು ಬಹಳ ಬುದ್ಧಿವಂತರೂ ಹಾಗೂ ಅವರು ಬಹಳ ಮೇಧಾವಿಗಳೆಂದು ಅದನ್ನು ವಿವರವಾಗಿ ತಿಳಿಯೋಣ ಏನೆಂದರೆ ಅದು ಅವರ ಕೌಶಲ್ಯವಲ್ಲ ಹಾಗೂ ತಲತಲಾಂತರದಿಂದ ಕಲಿತ ಕೌಶಲ್ಯತೆಯಲ್ಲಿ ಇನ್ನೂ ಹೇಳಬೇಕೆಂದರೆ ಅದು ನಿಮ್ಮ ಕೌಶಲ್ಯಕ್ಕೂ ಸಮಾನವಿರುವುದಿಲ್ಲ. ಹಾಗಿದ್ದರೆ ಅವು ಏನು? ನಿಜದಲ್ಲಿ ಅದೊಂದು ಅಪ್ರಾಕೃತ ಶಕ್ತಿ ನಿಮ್ಮನ್ನು ನಿಗ್ರಹಿಸುತ್ತಿದೆ. ಯಾಕೋ ಏನೋ ಕೆಲವು ಕಾರಣಗಳಿಗೆ ಅದು ನಿಮಗೆ ಬಹಳ ಚೆನ್ನಾಗಿ ಕಾಣಿಸುತ್ತದೆ. ನೀವು ಅದನ್ನು ಹೊಂದಲು ಇಚ್ಛಿಸುತ್ತೀರಿ ಹಾಗೂ ಅದನ್ನು ಹೊಂದುವುದರಿಂದ ಸಂತೋಷ ಪಡುತ್ತೀರಿ. ನೀವು ಈ ತರಹ ಶಕ್ತಿಯಿಂದ ಎಷ್ಟು ಸಂತೋಷವನ್ನು ಅನುಭವಿಸುತ್ತೀರೊ ಅದು ಅಷ್ಟೇ ನಿಮ್ಮನ್ನು ಹಿಡಿತದಲ್ಲಿಟ್ಟುಕೊಳ್ಳುತ್ತದೆ. ನೀವು ನಿಮ್ಮನ್ನೇ ಬಹಳ ಕಲಿತವನು ಕೌಶಲ್ಯತೆಯನ್ನು ಹೊಂದಿದವನು ಎಂದು ತಿಳಿದರೆ, ನೀವು ಅಂತಹ ಅಪ್ರಾಕೃತ ವಿಷಯವು ನಿಮ್ಮಲ್ಲಿ ನಿಗ್ರಹಿಸಲು ಹೇಗೆ ಬಿಡುತ್ತೀರಿ? ನಿಜದಲ್ಲಿ ಅದರ ಗುಣಮಟ್ಟ ಬಹಳ ಕಡಿಮೆ ಹಾಗಾಗಿ ಜೀವನದಲ್ಲಿ ಮುಂಬರುವ ಮನುಷ್ಯ ಈ ತರಹ ಅಧಿಕೃತ ವಿಷಯಗಳು ತನ್ನನ್ನು ಅಧೀನದಲ್ಲಿರಿಸಿಕೊಳ್ಳುವುದಕ್ಕೆ ಅವಕಾಶ ಕೊಡಬಾರದು.

ಮಾನವನ ಅಸ್ತಿತ್ವವು ಬಹಳ ಅನರ್ಘ್ಯವಾದದ್ದು ಮತ್ತು ಜೀವ ಜಂತುಗಳಿಗಿಂತ ಮಾನವನು ಬಹಳ ಮೇಧಾವಿ. ಹಾಗಾಗಿ ನಿಮ್ಮನ್ನು ಅಂತಹ ಸಂಗತಿಗಳು ಹೇಗೆ ನಿರ್ಬಂಧಿಸುತ್ತದೆ? ಇನ್ನು ಮುಂದೆ ನಿಮ್ಮ ದೇಹವೂ ನಿಮಗೆ ಬೇಕಾಗುವುದಿಲ್ಲ, ಎಂತಹ ವಿಷಾದಕರವಿದು. ಇಂತಹ ಕೆಲವು ಸಂಗತಿಗಳು ನಮ್ಮ ದೇಹಕ್ಕೆ ಅಗಳ ಹಾಕಿಕೊಂಡಿರುತ್ತದೆ ಆದರೆ ತಮ್ಮ ಕೈಚಳಕವನ್ನು ತೋರಿಸುತ್ತದೆ ಮತ್ತು ನಿಮ್ಮನ್ನು ನಿಯಂತ್ರಿಸುತ್ತಿರುತ್ತದೆ. ಅವು ಸ್ವಲ್ಪ ದೂರದಲ್ಲಿದ್ದರೂ ಸಹ ಅವರನ್ನು ಮಾತನಾಡಬಯಸುತ್ತೀರಿ. ಅಂತಹುದನ್ನು ಮಾಡಲು ಅವರು ಬಹಳ ಸಂತೋಷಿಸುತ್ತಾರೆ. ಆದ್ದರಿಂದ ನೀವು ಹೋಗಿ ಮುಂಬೊ ಜಂಬೋ ಒದರುತ್ತೀರಿ ಮತ್ತು ಅದನ್ನು ಮತ್ತೊಬ್ಬನಿಗೆ ಬೋಧಿಸುತ್ತೀರಿ. ಮತ್ತೊಬ್ಬ ವ್ಯಕ್ತಿಯು ಮುಂದೆ ಬರುತ್ತಾನೆ ಮತ್ತು ಕಲಿಯಲಿಚ್ಚಿಸುತ್ತಾನೆ. ಆತನು ತನ್ನ ಧೈರ್ಯ ಒಗ್ಗೂಡಿಸಿ ತನ್ನ ಬಾಯಿ ತೆರೆಯುತ್ತಾನೆ ಮತ್ತು ತಾನೂ ಸಹ ಒದರಲಾರಂಭಿಸುತ್ತಾನೆ. ಅಂತಹ ಸಂಗತಿಗಳು ಪ್ರತ್ಯಕ್ಷವಾಗಿ ಅಂತರಂಗದಿಂದ ಬರುತ್ತದೆ. ನೀವು ಅದರ ಬಗ್ಗೆ ಮಾತನಾಡಲಿಚ್ಚಿಸಿದಾಗ ಅವುಗಳಲ್ಲೊಂದು ತಮ್ಮ ಆತ್ಮದ ಮೇಲೆ ಎರಗುತ್ತದೆ ಮತ್ತು ನಿಮಗೆ ಮಾತನಾಡಲು ಸಹಾಯ ಮಾಡುತ್ತದೆ.

ಇದನ್ನು ತಡೆಯದೆ ಮುಂದುವರೆಯಲು ಹೇಗೆ ಬಿಡಲಾಗುತ್ತದೆ? ಮತ್ತೊಮ್ಮೆ ನಾನು ಹೇಳಿದಂತೆ ಅದು ತನ್ನ ಹಂತವನ್ನು ಹೆಚ್ಚಿಸಿಕೊಳ್ಳ ಬಯಸುತ್ತದೆ. ಆದರೆ ಅಲ್ಲಿ ಯಾವುದೇ ಸಂಕಷ್ಟಗಳಿರುವುದಿಲ್ಲ. ಆದ್ದರಿಂದ ಅದು ಅಭ್ಯಾಸ ಮಾಡಲಾಗುವುದಿಲ್ಲ ಅಥವಾ ತನ್ನನ್ನೇ ತಿದ್ದಿಕೊಳ್ಳಲಾಗುವುದಿಲ್ಲ. ಆದ್ದರಿಂದ ಅವರು ಒಂದು ಊಹೆ/ಕಲ್ಪನೆಯೊಂದಿಗೆ ಬಂದರೂ ಇತರರಿಗೆ ಸಹಾಯ ಮಾಡಲು ಜನಗಳಿಗೆ ಸಹಾಯ ಮಾಡಲು ನಿರ್ಧರಿಸಿದಿರು. ಆದರೆ ಅದು ಹೇಗೆ ಮಾಡುವುದೆಂದು ಅವರಿಗೆ ತಿಳಿದಿಲ್ಲ. ಆದರೆ ತಾವು ಕಳುಹಿಸುತ್ತಿರುವ ಶಕ್ತಿಯು ಜನರ ಜಿಗುಪ್ಸೆಯನ್ನು ಕಡಿಮೆ ಮಾಡುವಲ್ಲಿ ಪರಿಣಾಮವನ್ನು ಬೀರಬಹುದೆಂಬ ನಂಬಿಕೆ ಅವರಲ್ಲಿತ್ತು. ಮತ್ತು ಆ ಸಮಯದಲ್ಲಿ ರೋಗಿಗಳಿಗಿದ್ದ ನೋವನ್ನು ಉಪಶಮನ ಮಾಡಬಹುದೆಂದು ತಿಳಿದಿದ್ದರು. ಆದರೆ ಇದು ವ್ಯಾಧಿಯನ್ನು ವಾಸಿ ಮಾಡಲಾಗಲಿಲ್ಲ. ಅದು ಹೀಗೆನೇ, ಅದನ್ನು ಕಳುಹಿಸಲು ಒಬ್ಬ ವ್ಯಕ್ತಿಯ ನಾಲಿಗೆಯನ್ನು ಉಪಯೋಗಿಸುವುದರಿಂದ ಅಂತಹ ಪರಿಣಾಮವಾಗುತ್ತದೆ ಎಂದು ಅವರಿಗೆ ತಿಳಿದಿತ್ತು. ಕೆಲ ಜನರು ಇದನ್ನು ದೇವ ಲೋಕದ ಭಾಷೆಯೆಂದು ಕರೆಯುತ್ತಾರೆ ಮತ್ತು ಇದನ್ನು ಬುದ್ಧನ ಭಾಷೆಯೆಂದು ಕರೆಯುವ ಜನರೂ ಇದ್ದಾರೆ. ಅದು ಬುದ್ಧನ ದೇವದೂಷಣೆ! ಅದು ಕೇವಲ ಹುಚ್ಚು ಸಾಹಸ!

ನಿಮಗೆ ತಿಳಿದಿದೆಯೇ, ಬುದ್ಧನು ಕ್ಷುಲ್ಲಕ ಮಾತನ್ನಾಡುವುದಿಲ್ಲ. ಅವರು ಹೋಗಿ ನಮ್ಮ ಆಯಾಮದಲ್ಲೇನಾದರೂ ಹೇಳಿದ್ದಲ್ಲಿ ಅವರು ಮಾನವ ಪ್ರಪಂಚದಲ್ಲೂ ಭೂಕಂಪ ವನ್ನು ಮಾಡಬಹುದು. ಅದು ಬಹಳ ಭಯಂಕರವಾಗಿರುತ್ತದೆ. ಒಮ್ಮೆ ಅಬ್ಬರಿಸುವ ಆ ಧ್ವನಿಯ ಬಗ್ಗೆ ಚಿಂತಿಸಿ ಕೆಲ ವ್ಯಕ್ತಿಗಳು ಹೇಳಿದ್ದರು. "ಆತನು ನನ್ನೊಂದಿಗೆ ಮಾತನಾಡಿದ್ದನ್ನು ನಾನು ಮೂರನೇ ಕಣ್ಣಿನಿಂದ ನೋಡಿದ್ದೇನೆ". ಅವರು ನಿಮ್ಮೊಂದಿಗೆ ಮಾತನಾಡಲಿಲ್ಲ. ಆತನು ಕಳುಹಿಸುವ ವಿಚಾರವು ಧ್ವನಿ ಸುರುಳಿಯಲ್ಲಿರುತ್ತದೆ. ಆದ್ದರಿಂದ ಅದನ್ನು ನೀವು ಕೇಳಿದಾಗ ಆತನು ಮಾತನಾಡುತ್ತಿರುವ ಧ್ವನಿ ಕೇಳಿದಂತಾಗುತ್ತದೆ. ಸಾಮಾನ್ಯವಾಗಿ ಆತನು ತನ್ನ ಆಯಾಮದಲ್ಲಿ ಮಾತನಾಡಬಲ್ಲ. ಆದರೆ ಒಮ್ಮೆ ಇದನ್ನು ಇಲ್ಲಿಗೆ ರವಾನಿಸಿದರೆ ಆತನು ಏನು ಹೇಳುತ್ತಿದ್ದಾನೆಂದು ಸ್ಪಷ್ಟವಾಗಿ ಕೇಳಿಸುವುದಿಲ್ಲ. ಅದು ಏಕೆಂದರೆ ಆಂತರಿಕ್ಷ ಸಮಯ ಎರಡರ ಕಲ್ಪನೆಯೂ ವಿವಿಧ ಆಯಾಮಗಳಲ್ಲಿ ಬೇರೆಯಾಗಿರುತ್ತದೆ. ಈ ನಡುವೆ ಒಂದು **ಶಿಚನ್** ಸಮಯದ ಗುಂಪು ಸುಮಾರು ಎರಡು ಘಂಟೆಗಳು ಆದರೆ ಆ ಬೃಹತ್ತಾದ ಆಯಾಮದಲ್ಲಿ ನಮ್ಮ ಚಿಕ್ಕ ಸಮಯದ ಪ್ರತಿಬಂಧ ಅವರ ಒಂದು ವರ್ಷಕ್ಕೆ ಸಮ ನಮ್ಮ ಸಮಯವು ಅವರ ಸಮಯಕ್ಕಿಂತ ನಿಧಾನ ಇದು ಹೊರದೂಡುತ್ತದೆ.

---

13. **ಶಿಚನ್** – ಚೀನಿಯರ ಎರಡು ಘಮಟೆಗಳ ಕಾಲ ಮಾನ.

ಒಂದು ಹಳೆಯ ನಾಣ್ಣುಡಿಯಿದೆ. "ಕೇವಲ ಒಂದು ದಿನದ ಸ್ವರ್ಗ ಆದರೆ ಭೂಮಿಯ ಮೇಲೆ ಸಾವಿರ ವರ್ಷ" ಇದು ಒಂದೇ ಒಂದಾದ ಸ್ವರ್ಗಕ್ಕೆ ಸಂಬಂಧಿಸಿರುತ್ತದೆ. ಅಲ್ಲಿ ಸ್ಥಳ, ಅಂತರಿಕ್ಷ ಮತ್ತು ಸಮಯದ ಪರಿಕಲ್ಪನೆಗಳಲ್ಲಿ ಅಥವಾ ವಿಶೇಷವಾಗಿ ಹೇಳುವುದಾದರೆ, ಶ್ರೇಷ್ಟ ಜ್ಞಾನೋದಯವಾದಂತಹ ವ್ಯಕ್ತಿಗಳು ಇರುವ ವಿಶ್ವವಾದ ವೆಸ್ಟರ್ನ್ ಪ್ಯಾರಡೈಜ್, ದಿ ಎಮೆರಾಲ್ಡ್ ಪ್ಯಾರಡೈಸ್, ದಿ ಫಾಲೂನ್ ವರ್ಲ್ಡ್, ದಿ ಲೋಟಸ್ ವರ್ಲ್ಡ್ ಮುಂತಾದವು – ಇವು ಆ ಜಾಗಗಳು. ಆದರೆ ಈ ಬೃಹತ್ತಾದ ಆಯಾಮಗಳಲ್ಲಿ ಸಮಯವು ಬಹಳ ವೇಗವಾಗಿ ಸಾಗುತ್ತದೆ. ನೀವು ಊಹಿಸಿದಕ್ಕಿಂತ ವಿರೋಧವಾಗಿ ಸಾಗುತ್ತದೆ. ನಿಮಗೆ ಅವರ ಮಾತುಗಳನ್ನು ಕೇಳಿಸಿಕೊಳ್ಳಲು ಮತ್ತು ಸ್ವೀಕರಿಸಲು ಸಾಧ್ಯವಾದರೆ (ಕೆಲ ವ್ಯಕ್ತಿಗಳು ದೈವಿಕ ಕಿವಿಗಳು ತೆರೆದುಕೊಂಡಿರುತ್ತವೆ ಮತ್ತು ಯಾವಾಗ ಆ ಕಿವಿಗಳು ತೆರೆದುಕೊಂಡಿರುತ್ತವೆಯೋ ಅವರು ಮಾಡನಾಡುತ್ತಿರುವುದನ್ನು ಕೇಳಿಸಿಕೊಳ್ಳಬಹುದು) ಅಷ್ಟು ಸ್ಪಷ್ಟವಾಗಿ ನೀವು ಕೇಳಿಸಿಕೊಳ್ಳಲಾಗುವುದಿಲ್ಲ. ನೀವು ಕೇಳುತ್ತಿರುವುದೆಲ್ಲ ಒಂದೇ ರೀತಿಯದ್ದಾಗಿರುತ್ತದೆ. ಪಕ್ಷಿಗಳ ಕಲರವದಂತೆ ಅಥವಾ ಒಂದು ತಿರುಗು ಕುರ್ಚಿಯು ವೇಗವಾಗಿ ಸುತ್ತಿದಂತೆ ಇವೆಲ್ಲವೂ ಅವಿಚಾರದಿಂದ ಆಯ್ದಂತೆ. ಬಹುಶಃ ಕೆಲವರಿಗೆ ಸಂಗೀತ ಕೇಳಸಬಹುದು ಮತ್ತು ವ್ಯಕ್ತಿಗಳು ಮಾತನಾಡುತ್ತಿರುವುದು ಕೇಳಸಬಹುದು. ಆದರೆ ಆ ಧ್ವನಿಯು ನಿಮ್ಮ ಕಿವಿಗಳನ್ನು ತಲುಪುವ ಮೊದಲೇ ತಮ್ಮ ಸಾಮರ್ಥ್ಯವನ್ನು ವಾಹನವನ್ನಾಗಿ ಉಪಯೋಗಿಸಿ ಆ ಸಮಯದ ವ್ಯತ್ಯಾಸವನ್ನು ವರ್ಜಿಸಬೇಕಾಗುತ್ತದೆ. ಆನಂತರವೇ ನಿಮಗಿದು ಸ್ಪಷ್ಟವಾಗಿ ಕೇಳಿಸುತ್ತದೆ. ಅದು ಹಾಗೆಯೇ ಕೆಲಸ ಮಾಡುತ್ತದೆ. ಕೆಲ ವ್ಯಕ್ತಿಗಳು ಈ ಹುರುಳನ್ನು ಬುದ್ಧನ ಭಾಷೆಯೆಂದು ಕರೆಯುತ್ತಾರೆ. ಆದರೆ ಅದರಿಂದ ಮುಂದೇನು ಧಕ್ಕುವುದಿಲ್ಲ.

ಇಬ್ಬರು ಜ್ಞಾನಿಗಳಾದ ವ್ಯಕ್ತಿಗಳು ಸಂಧಿಸಿದಾಗ ತಮ್ಮ ಮುಖದ ಮುಗುಳ್ನಗುವಿನಲ್ಲಿ ಅಡಗಿರುವ ಸಂಗತಿಗಳಿಂದಲೇ ಅರಿತುಕೊಳ್ಳುತ್ತಾರೆ. ಅದು ಏಕೆಂದರೆ ಅದು ಮೌನವಾದ ಮಾನಸಿಕ ಟೆಲಿಪತಿ (ಭಾವತಾತ್ಮ ಪ್ರಭಾವದಿಂದ ಒಂದು ಮನಸ್ಸು ದೂರದಲ್ಲಿರುವ ಇನ್ನೊಂದು ಮನಸ್ಸಿನ ಮೇಲೆ ಉಂಟು ಮಾಡುವ ಕ್ರಿಯೆ ಮತ್ತು ಏನನ್ನು ಸ್ವೀಕರಿಸುತ್ತೇವೆಯೋ ಅದು ಧ್ವನಿಸುರುಳಿಯಾಗಿರುತ್ತದೆ. ಅವರು ಒಬ್ಬರನ್ನೊಬ್ಬರು ನೋಡಿಕೊಂಡು ನಕ್ಕಾಗ ಅದಾಗಲೇ ಅವರು ತಮ್ಮ ಕಲ್ಪನೆ/ಊಹೆಗಳನ್ನು ಬದಲಿಸಿ ಕೊಂಡಿರುತ್ತಾರೆ. ಅವರು ಕೇವಲ ಅದೊಂದು ರೂಪವನ್ನು ಮಾತ್ರ ಉಪಯೋಗಿಸುವುದಿಲ್ಲ. ಕೆಲವೊಮ್ಮೆ ಅವರು ಇನ್ನೊಂದು ಮಾರ್ಗವನ್ನು ಉಪಯೋಗಿಸುತ್ತಾರೆ.

ನಿಮಗೆ ತಿಳಿದಿದೆಯೇ ತಾಂತ್ರಿಕತೆಯಲ್ಲಿ ಟಿಬೆಟ್ಟಿನ ಬೌದ್ಧ ಗುರುಗಳು ಕೈಗಳ ಸಂಜ್ಞೆಗಳನ್ನು ಗಂಭೀರವಾಗಿ ತೆಗೆದುಕೊಳ್ಳುತ್ತಾರೆ. ಆದರೆ ನೀವು ಒಬ್ಬ ಬೌದ್ಧ ಗುರುಗಳನ್ನು ಈ ಕೈಗಳ ಸಂಜ್ಞೆಯ ಬಗ್ಗೆ ಕೇಳಿದಾಗ ಅದು (Mega Yoga) ಮೆಗಾ ಯೋಗವೆಂದು ಅವರು ಹೇಳುತ್ತಾರೆ. ನಿಷ್ಪಷ್ಟವಾಗಿ ಹಾಗೆಂದರೇನು? ಅವರಿಗೇ ಅದು ತಿಳಿದಿಲ್ಲ. ಪ್ರತ್ಯಕ್ಷವಾಗಿ ಇದು ಶ್ರೇಷ್ಟ ಜ್ಞಾನಿಗಳಾದ ವ್ಯಕ್ತಿಗಳ ಭಾಷೆ ಎಂದಾದರೂ ಹೆಚ್ಚು ಜನರಿದ್ದಾಗ, ಅವರು ಅಂತಹ ಕೈಗಳ ಸಂಜ್ಞೆಗಳನ್ನು ಹೆಚ್ಚಾಗಿ ಮಾಡುತ್ತಾರೆ. ಆಶ್ಚರ್ಯಕರವಾದ ರೀತಿಯಲ್ಲಿ ಇದು ಸುಂದರವಾಗಿರುತ್ತದೆ. ಮತ್ತು ಅವರು ದೊಡ್ಡದಾದ ಎಲ್ಲಾ ರೀತಿಯ ಕೈ ಸಂಜ್ಞೆಗಳನ್ನು ಮಾಡುತ್ತಾರೆ. ಎಂದಾದರೂ ಕಡಿಮೆ ಶ್ರೋತೃಗಳಿದ್ದರೆ, ಕಡಿಮೆ ಕೈ ಸಂಜ್ಞೆಗಳನ್ನು ಬಳಸುತ್ತಾರೆ. ಮತ್ತು ಅವು ಸಹ ಸುಂದರವಾಗಿದೆ. ಚಿಕ್ಕದಾದ ಕೈಗಳ ಸಂಜ್ಞೆಗಳನ್ನು ಎಲ್ಲಾ ರೀತಿಯ ಸೋಗಿನಲ್ಲಿ ಮಾಡುತ್ತಾರೆ. ಅಂದಿನಿಂದಲೂ ಅವು ಸಮಾವೇಶಗೊಂಡ ಮತ್ತು ಶ್ರೀಮಂತ ಭಾಷೆಯಾಗಿದೆ. ಇವೆಲ್ಲವೂ ದೈವ ರಹಸ್ಯಗಳಾಗಿರುತ್ತಿತ್ತು ಮತ್ತು ಈಗ ನಾವು ಈ ರಹಸ್ಯಗಳನ್ನು ಅನಾವರಣ ಮಾಡಿದ್ದೇವೆ. ಟಿಬೆಟ್ಟಿನಲ್ಲಿ ಅವರು ಉಪಯೋಗಿಸುವಂತಹ ಕೆಲವು ಚಲನೆಗಳು ಕೇವಲ ಅಭ್ಯಾಸವನ್ನು ಮಾಡಲು ಮಾತ್ರವಾಗಿರುತ್ತದೆ. ಅವರು ಅವುಗಳ ಒಂದು ಪಟ್ಟಿಯನ್ನು ಮಾಡಿದ್ದಾರೆ ಮತ್ತು ಅದನ್ನು ಒಂದು ಪದ್ಧತಿಯನ್ನಾಗಿ ಮಾಡಿದ್ದಾರೆ. ತಮ್ಮ ಅಭ್ಯಾಸಕ್ಕಾಗಿ ಇರುವ ಒಂದೇ ಆಯಾಮದ ಭಾಷೆ ಅದಾಗಿರುತ್ತದೆ. ಅವರು ಕೇವಲ ಕೆಲವು ಅಭ್ಯಾಸ ರೂಪಗಳನ್ನು ಹೊಂದಿಸುತ್ತಾರೆ. ನಿಜವಾದ ಕೈ ಸಂಜ್ಞೆಗಳು ಹೆಚ್ಚಿನ ಗೋಜಲಿನದ್ದಾಗಿರುತ್ತದೆ.

## ನಿಮ್ಮ ಗುರುಗಳು ತಮ್ಮ ವಿದ್ಯಾರ್ಥಿಗಳಿಗೆ ಕೊಡುವ ಸಂಗತಿಗಳು

ಕೆಲವರು ನನ್ನನ್ನು ನೋಡಿದಾಗ ನನ್ನ ಕೈಗಳನ್ನು ಎಳೆದುಕೊಂಡು ಕುಲುಕುತ್ತಾರೆ. ಮತ್ತು ನನ್ನನ್ನು ಮುಂದೆ ಹೋಗಲು ಬಿಡುವುದಿಲ್ಲ. ಇತರರು ನನ್ನ ಕೈಗಳನ್ನು ಮಂದಿ ಕುಲುಕುವುದನ್ನು ನೋಡಿದಾಗ ತಾವೂ ಸಹ ಇಂತಹ ಪ್ರವರ್ತನೆಯನ್ನು ಮಾಡುತ್ತಾರೆ. ಅವರು ಏಕೆ ಹೀಗೆ ಮಾಡುತ್ತಾರೆಂದು ನನಗೆ ಗೊತ್ತು, ಕೆಲ ಮಂದಿ ತಮ್ಮ ಗುರುಗಳ ಕೈಗಳನ್ನು ಕುಲುಕುತ್ತಾರೆ ಏಕೆಂದರೆ ಅದು ಮಾಡಲು ಆನಂದದಾಯಕ ವಿಷಯ, ಇತರರು ನನ್ನಿಂದ ಕೆಲವು ವರ್ತಮಾನಗಳನ್ನು ಪಡೆಯಲಿಚ್ಛಿಸುತ್ತಾರೆ. ಆದ್ದರಿಂದ ನನ್ನ ಕೈಯನ್ನು ಕುಲುಕಲು ಎಳೆದುಕೊಂಡ ಮೇಲೆ ಅದನ್ನು ಬಿಡಲು ಇಚ್ಛಿಸುವುದಿಲ್ಲ. ನಾವು ನಿಮಗೆ ಹೇಳುತ್ತಿದ್ದೇವೆ ನಿಮ್ಮಷ್ಟಕ್ಕೆ ನೀವು ಮಾಡುವುದೇ ನಿಜವಾದ ಅಭ್ಯಾಸ, ನಾವು ಇಲ್ಲಿ ಗುಣ ಮಾಡುವುದಿಲ್ಲ ಮತ್ತು ಇಲ್ಲಿ ಅರ್ಹತೆಯ ವಿಷಯಗಳನ್ನು ಇಲ್ಲಿ ಮಾತನಾಡುವುದಿಲ್ಲ ಅಥವಾ ನಿಮಗೆ ಗುಣ ಮಾಡುವಂತಹ ಸಂದೇಶಗಳನ್ನು ಕೊಡುವುದಿಲ್ಲ. ಅದು ನಮ್ಮ ಅಭ್ಯಾಸದ ಒಂದು ಭಾಗವಲ್ಲ. ನೇರವಾಗಿಯೇ ನಾನು ನಿಮ್ಮ ಆರೋಗ್ಯದ ಸಮಸ್ಯೆಗಳನ್ನು ಬಗೆಹರಿಸುತ್ತೇನೆ. ಅಭ್ಯಾಸದ ಸ್ಥಳಗಳಿಂದ ನಿಯಮದ ಅಂಗಗಳಿಂದ ಅವುಗಳನ್ನು ನಿವಾರಿಸಲಾಗುವುದು. ಪುಸ್ತಕಗಳನ್ನು ಓದಿಕೊಂಡು ಅಭ್ಯಾಸವನ್ನು ಮಾಡುವವರಿಗೂ ಸಹ ನಮ್ಮ ಕಾನೂನಿನ ಅಂಗಗಳು ಅವರದನ್ನೂ ಸಹ ಗುಣಪಡಿಸಲಾಗುವುದು. ನನ್ನ ಕೈಗಳನ್ನು ಮುಟ್ಟುವುದರಿಂದ ನಿಮ್ಮ ಕೃಷಿಶಕ್ತಿಯು ಹೆಚ್ಚಾಗುತ್ತದೆಯೆಂದು ಯೋಚಿಸುತ್ತಿರುವಿರಾ? ನೀವು ತಮಾಷೆ ಮಾಡುತ್ತಿರುವಿರಾ?

ನಿಮ್ಮ ನಡತೆಯ ಅಭಿವೃದ್ಧಿಯಿಂದ ಕೃಷಿ ಶಕ್ತಿಯು ಬರುತ್ತದೆ. ನಿಜವಾಗಿಯೂ ನಿಮ್ಮನ್ನು ನೀವು ಅಭಿವೃದ್ಧಿಪಡಿಸಿಕೊಳ್ಳದಿದ್ದರೆ, ನಿಮ್ಮ ಕೃಷಿಶಕ್ತಿಯು ಎತ್ತರಕ್ಕೆ ಬೆಳೆಯುವುದಿಲ್ಲ. ಏಕೆಂದರೆ ನಡತೆಯ ಒಂದು ನಿರ್ಧಿಷ್ಟ ಮಾನವಿದೆ. ನಿಮ್ಮ ಕೃಷಿಶಕ್ತಿಯು ಹೆಚ್ಚಾದಾಗ ನಿಮ್ಮನ್ನು ಹೊಂದಿಕೊಂಡ ನಂತರ ಉನ್ನತ ಹಂತದಲ್ಲಿರುವ ವ್ಯಕ್ತಿಗಳು ನಿಮ್ಮನ್ನು ನೋಡಬಲ್ಲರು, ಜಾತಿಯ ನಿವಾರಣೆಯನ್ನು ಮಾಡಬಲ್ಲರು ನಂತರ ಒಂದು ಅಳತೆಗೋಲು ನಿಮ್ಮ ತಲೆಯ ಮೇಲೆ ಬೆಳೆಯುತ್ತದೆ ಮತ್ತು ಈ ಅಳತೆಗೋಲು ಕೃಷಿ ಶಕ್ತಿಯ ಆಧಾರಸ್ಥಂಭವಾಗಿ ರೂಪುಗೊಳ್ಳುತ್ತದೆ. ಅಳತೆಗೋಲು ಎಷ್ಟು ದೊಡ್ಡದಾಗಿದ್ದರೆ ಕೃಷಿಶಕ್ತಿಯ ಆಧಾರಸ್ಥಂಭವೂ ಸಹ ಅಷ್ಟು ಎತ್ತರದ್ದಾಗಿರುತ್ತದೆ. ನೀವು ಅಭಿವೃದ್ಧಿಪಡಿಸಿ ಕೊಂಡ ಕೃಷಿ ಶಕ್ತಿಯನ್ನು ಇದು ಪ್ರತಿನಿಧಿಸುತ್ತದೆ ಮತ್ತು ನಿಮ್ಮ ನಡತೆಯು ಎಷ್ಟು ಎತ್ತರದಲ್ಲಿದೆಯೆಂಬುದನ್ನು ಇದು ಪ್ರತಿನಿಧಿಸುತ್ತದೆ.

ಇದಕ್ಕೆ ಇನ್ನೂ ಹೆಚ್ಚಿನದೇನನ್ನು ಸೇರಿಸಲಾಗಿದೆ ಎಂದು ಪರಿಗಣಿಸಲಾಗುವುದಿಲ್ಲ. ಅಥವಾ ನಿಮಗೆ ಅವರು ಎಷ್ಟನ್ನು ಸೇರಿಸುತ್ತಾರೆ ಎಂದು ಪರಿಗಣಿಸುವುದಿಲ್ಲ. ಅತ್ಯಲ್ಪವನ್ನು ನೀವು ಅದಕ್ಕೆ ಸೇರಿಸಿದರೂ ಸಹ ಅದು ನಿಲ್ಲುವುದಿಲ್ಲ. ಇದು ನೇರವಾಗಿ ಬಂದುಬಿಡುತ್ತವೆ. ನಿಂತ ನಿಲುವಿಕೆಯಲ್ಲಿ ತಲೆಯ ಮೇಲಿನ ಮೂರು ಹೂವುಗಳನ್ನು ನೀವು ಸೇರುವಂತೆ ಮಾಡಬಲ್ಲೆ. ಆದರೆ ಯಾವ ಕ್ಷಣ ನೀವು ಹೊರಗೆ ಕಾಲಿಡುವಿರೋ ನಿಮ್ಮ ಕೃಷಿಶಕ್ತಿಯು ಹೊರಬಂದು ಬಿಡುತ್ತದೆ. ಅದೀಗ ನಿಮ್ಮದಲ್ಲ, ನೀವು ಅದನ್ನು ಅಭ್ಯಾಸ ಮಾಡಿಲ್ಲ. ಆದ್ದರಿಂದ ಅದು ನಿಲ್ಲುವುದಿಲ್ಲ. ಏಕೆಂದರೆ ನಡತೆಯ ನಿರ್ದಿಷ್ಟ ಮಾಪನವು ನಿಮಗಿಲ್ಲ. ಯಾರೋ ಇದಕ್ಕೆ ಮತ್ತೇನನ್ನೂ ಕೊಡಿಸಲಾರರು. ಇವೆಲ್ಲವೂ ನಿಮ್ಮ ಸ್ವಂತ ಅಭ್ಯಾಸದಿಂದ ಬಂದಿರುವಂತಹದ್ದು, ನಿಮ್ಮ ಮನಸ್ಸಿಗೆ ಲಕ್ಷ್ಯ ಕೊಡಿ, ದೃಢತೆಯಿಂದ ನಿಮ್ಮ ಕೃಷಿ ಶಕ್ತಿಯನ್ನು ಹೆಚ್ಚಿಸಿ, ಯಾವಾಗಲೂ ನಿಮ್ಮನ್ನು ನೀವು ತಿದ್ದಿಕೊಳ್ಳಿ, ಜಗತ್ತಿನ ಪ್ರಕೃತಿ ಸಹಜ ಗುಣವನ್ನು ಸಂಪೂರ್ಣವಾಗಿ ತಿಳಿದುಕೊಳ್ಳಿ, ನಂತರ ಮತ್ತು ಕೇವಲ ನಂತರವೇ ನೀವು ಮೇಲೇರಲು ಸಾಧ್ಯ, ಕೆಲವರು ನನ್ನ ಸ್ವಹಸ್ತಾಕ್ಷರವನ್ನು ಕೊಡಿ ಎಂದು ಹೇಳುತ್ತಾರೆ. ಮತ್ತು ಅವರಿಗೆ ನಾನು ಕೊಡಬಯಸುವುದಿಲ್ಲ. ಕೆಲವರು ಇತರ ಮಂದಿಗೆ ತಾವು ಹೇಗೆ ಗುರುಗಳ ಹಸ್ತಾಕ್ಷರವನ್ನು ಪಡೆದುಕೊಂಡರೆಂದು ಹೇಳಬಹುದು. ಬಹುಶ: ತಾವು ಇದನ್ನು ತೋರಿಸಿಕೊಳ್ಳಲಿಚ್ಛಿಸಬಹುದು. ಇದು ಇನ್ನೊಂದು ಬಂಧನವಲ್ಲವೇ? ಅಭ್ಯಾಸದಲ್ಲಿ ಸಂದೇಶದ ಬಗ್ಗೆ ಮಾತನಾಡುತ್ತಿರುವಿರಿ. ಅತ್ಯುನ್ನತ ಹಂತದ ಅಭಿವೃದ್ಧಿಯನ್ನೇರಿದಾಗ ಆ ಹುರುಳಿನ/ಸತ್ಯದ ಬಗ್ಗೆ ಲಕ್ಷ್ಯಕೊಡುವುದಿಲ್ಲವೇ? ನೂರನೆಯ ಒಂದು ಭಾಗದಷ್ಟು ಕೂಡ

ಬೆಲೆಬಾಳುವಂತಹದಲ್ಲ. ಗುಣಪಡಿಸಿಕೊಳ್ಳಲು ಮತ್ತು ಅರ್ಹತೆಯನ್ನು ಪಡೆದುಕೊಳ್ಳು ವುದಕ್ಕಾಗಿ ಜನರು ಅದರ ಕಡೆ ಲಕ್ಷ್ಯ ಕೊಡುತ್ತಾರೆ.

ಆಳವಾದ ಸೂಕ್ಷ್ಮ ಜಗತ್ತಿನಲ್ಲಿ ನೀವು ಅಭಿವೃದ್ಧಿಪಡಿಸಿಕೊಂಡ ಕೃಷಿ ಶಕ್ತಿಯ ಸೂಕ್ಷ್ಮ ಜಗತ್ತಿನ ಕಣಗಳು ಕರಾರುವಕ್ಕಾಗಿ ನಿಮ್ಮಂತೆಯೇ ಕಾಣುತ್ತದೆ. ಟ್ರಿಪಲ್–ವರ್ಲ್ಡ್‌ನ ಲಾ ಗಿಂತ (ನಿಯಮ) ಇನ್ನೂ ಮುಂದೆ ಹೋದರೆ ನೀವು ಬುದ್ಧನ ಒಡಲನ್ನು/ಶರೀರವನ್ನು ಅಭಿವೃದ್ಧಿಪಡಿಸುತ್ತೀರಿ. ನಿಮ್ಮ ಕೃಷಿಶಕ್ತಿಯು ಬುದ್ಧನ ಒಡಲಿನಾಕಾರದಲ್ಲಿತ್ತದೆ. ಇದು ನಂಬಲಾರದಷ್ಟು ಸುಂದರವಾಗಿರುತ್ತದೆ. ಅದು ಒಂದು ತಾವರೆಯ ಹೂವಿನಲ್ಲಿ ಕುಳಿತಿರುತ್ತದೆ.

ಪ್ರತಿ ಸಣ್ಣ ಕಣವೂ ಸಹ ಹಾಗೆಯೇ ಇರುತ್ತದೆ. ಆದರೂ ಒಂದು ಪ್ರಾಣಿಯ ಕೃಷಿ ಶಕ್ತಿಯು ಚಿಕ್ಕ ನದಿಗಳ ಸತ್ವದಂತೆ ಮತ್ತು ಚಿಕ್ಕ ಹಾವಿನಂತೆ. ಅಷ್ಟೇ ಅಲ್ಲದೆ ಆಳವಾದ ಸೂಕ್ಷ್ಮ ಜಗತ್ತಿನ ಕಣಗಳಲ್ಲಿನ, ಸೂಕ್ಷ್ಮಕಣಗಳೂ ಸಹ ಅದರ ಸತ್ವಗಳು ಜೊತೆಗೆ ಜನಗಳು ಸಂದೇಶವಾಕ್ಯಗಳನ್ನು ನಂಬುತ್ತಾರೆ. ನೆನೆಸಿದಂತಹ ಟೀ ಸೊಪ್ಪಿಗೆ ಸ್ವಲ್ಪ ನೀರನ್ನು ಬೆರೆಸಿ ಕಲಕುತ್ತಾರೆ ಮತ್ತು ಅದನ್ನು ಕುಡಿಯಲು ಹೇಳುತ್ತಾರೆ. ಅದೇ ಕೃಷಿಶಕ್ತಿಯೆಂದು ಕುಡಿಸ ಲಾಗುತ್ತದೆ. ತಮ್ಮ ನೋವುಗಳಿಂದ ತಾತ್ಕಾಲಿಕ ಉಪಶಮನವನ್ನು ಸಾಮಾನ್ಯ ಜನಗಳು ಬಯಸುತ್ತಾರೆ ಮತ್ತು ತಮ್ಮ ಖಾಯಿಲೆಗಳನ್ನು ಮುಂದೂಡಲು ಮತ್ತು ದಮನ ಮಾಡಲು ನೋಡುತ್ತಾರೆ. ಸಾಮಾನ್ಯರು ನಿಮಗೆ ತಿಳಿದಂತೆ ಸಾಮಾನ್ಯ ಕೆಲಸಗಳನ್ನು ಮಾಡುತ್ತಾರೆ. ಎಷ್ಟು ಕೆಟ್ಟದ್ದಾಗಿ ತಮ್ಮ ದೇಹವನ್ನು ಅಸ್ತವ್ಯಸ್ಥಗೊಳಿಸಿಕೊಂಡರೂ ಸಹ ನಮ್ಮೊಂದಿಗೆ ಅವರಿಗೇನೂ ಕೆಲಸವಿಲ್ಲ. ಆದರೆ ನೀವೆಲ್ಲಾ ಅಭ್ಯಾಸಿಗರು, ಹೀಗಾಗಿ ನಾನು ನಿಮಗಿದನ್ನು ಹೇಳಿದ್ದು, ಅಂತಹದನ್ನು ಮತ್ತೆ ಮಾಡಬೇಡಿ, ಅಂತಹ ತಿಳಿಗೇಡಿ ಸಂದೇಶ ವಾಕ್ಯಗಳು ಮತ್ತು ಏನೇನು ಯಾರಿಗೆ ಗೊತ್ತು? ಅದೇನೆಂದು ಅಂತಹ ಸತ್ವ ಬೇಕೆಂದು ಚಿಂತಿಸಲೂ ಬೇಡಿ, ಕೆಲವು ಚಿಗಾಂಗ್ ಮಾಸ್ತರರು ಹೇಳುತ್ತಾರೆ. ನಾನು ನಿಮಗೆ ಸಂದೇಶ ವಾಕ್ಯವನ್ನು ಕಳುಹಿಸುತ್ತೇನೆ. ದೇಶದಾದ್ಯಂತ ನೀವು ಅದನ್ನು ಪಡೆದುಕೊಳ್ಳಬಹುದು. ಪಡೆದು ಕೊಳ್ಳುವುದು ಏನನ್ನು? ನಾನು ನಿಮಗೆ ಹೇಳಿದ್ದೇನೆ, ಅವುಗಳಿಂದೇನು ಹೆಚ್ಚಾಗಿ ಮಾಡಲು ಸಾಧ್ಯವಿಲ್ಲ, ಮಾಡಿದರೂ ಸಹ ಕೆಲವು ಒಳಿತುಗಳಾದ ಕೇವಲ ವಾಸಿ ಮಾಡುವುದು ಮತ್ತು ಅರ್ಹತೆ ಮಾತ್ರ. ನೀವು ಅಭ್ಯಾಸಿಗರು, ಆದ್ದರಿಂದ ನಿಮ್ಮ ಕೃಷಿಶಕ್ತಿಯು ನಿಮ್ಮ ಅಭ್ಯಾಸ ದಿಂದ ಬರುತ್ತದೆ. ಯಾವುದೇ ಸಂದೇಶ ವಾಕ್ಯವನ್ನು ಇತರರು ಕಳುಹಿಸಿದರೂ ಸಹ ಅದು ನಿಮ್ಮ ಕೃಷಿಶಕ್ತಿಯನ್ನು ಮೇಲಕ್ಕೇರಿಸುವುದಿಲ್ಲ. ಅಂದಿನಿಂದಲೂ ಅದು ವಾಸಿ ಮಾಡಲು ಮತ್ತು ಅರ್ಹತೆಗಾಗಿ ಮಾತ್ರ ಇದೆ. ನಿಮ್ಮ ಯೋಚನೆಯನ್ನು ನೇರವಾಗಿಸಿಕೊಳ್ಳಿ, ನಿಮಗಾಗಿ ಯಾರೋ ಅಭ್ಯಾಸವನ್ನು ಮಾಡಲು ಸಾಧ್ಯವಿಲ್ಲ. ನಿಮ್ಮಷ್ಟಕ್ಕೆ ನೀವೇ ಅಭ್ಯಾಸ ವನ್ನು ಮಾಡುವುದಕ್ಕಿಳಿದರೆ ನಿಮ್ಮ ಹಂತವು ಮೇಲೇರಲಾರಂಭಿಸುತ್ತದೆ.

ಆದ್ದರಿಂದ ನಾನು ನಿಮಗೇನನ್ನು ಕೊಡಲು ಸಾಧ್ಯ? ನಿಮಗೆ ತಿಳಿದಿದೆ. ನಮ್ಮಲ್ಲಿ ಬಹಳಷ್ಟು ಮಂದಿ ಚಿಗಾಂಗ್ ಅಭ್ಯಾಸ ಮಾಡಿಲ್ಲ ಮತ್ತು ನಮ್ಮ ದೇಹಗಳು ರೋಗಗ್ರಸ್ತ ವಾಗಿದೆ ಅಥವಾ ಗಾಯಗೊಂಡಿವೆ. ನಮ್ಮಲ್ಲಿ ಕೆಲವರು ವರ್ಷಗಟ್ಟಲೇ ಚಿಗಾಂಗ್ ಅಭ್ಯಾಸ ವನ್ನು ಮಾಡಿದ್ದೇವೆ. ಆದರೂ ನಾವು ಇನ್ನೂ **ಚೀಜಿ, (Qiji)** ಹಂತದಲ್ಲೇ ಯಂತ್ರಶಾಲೆಯನ್ನು (milling) ಮಾಡುತ್ತಿದ್ದೇವೆ.

ನಮ್ಮಲ್ಲಿ ಯಾವುದೇ ಕೃಷಿಶಕ್ತಿಯಲ್ಲಿ ಬಹುಶಃ ಇತರರಿಗೆ ವಾಸಿ ಮಾಡುವ ಜನರಿದ್ದಾರೆ. ಅವರು ಹೇಗೆ ವಾಸಿ ಮಾಡುತ್ತಾರೆಂದು ನಿಮಗೆ ಆಶ್ಚರ್ಯವಾಗಬಹುದು, ನಾನು ಸ್ವಾಧೀನಪಡಿಸಿಕೊಳ್ಳುವುದರ ಬಗ್ಗೆ ಮಾತನಾಡಿದಾಗ ಅದು ಯಾವ ಸಂಗತಿಯೇ ಆಗಿರಲಿ, ಆ ಎಲ್ಲಾ ಕೆಟ್ಟ ಸಂಗತಿಗಳು. ಫಾಲೂನ್ ಧಾಫಾ ಅಭ್ಯಾಸ ಮಾಡುವ ಯಾವುದೇ ಜನರ ಶರೀರದ ಮೇಲಿರಲಿ ಅಥವಾ ಒಳಗಿರಲಿ, ನಿಮ್ಮ ಮನೆಯ ವಾತಾವರಣವನ್ನು ಸಹ ಸ್ವಚ್ಛ ಮಾಡುವ ಅವಶ್ಯಕತೆಯಿದೆ ಮತ್ತು ಎಂದೂ ತಮ್ಮಷ್ಟಕ್ಕೆ ತಾವೇ ಅಭ್ಯಾಸವನ್ನು ಮಾಡುವ ಅಭ್ಯಾಸಿಗರು ಈ ಶ್ರೇಷ್ಠ ನಿಯಮವನ್ನು ಓದಿದಾಗ ಇದೇ ರೀತಿಯಲ್ಲಿ ನಾನು

---

14. **ಚೀಜಿ, (Qiji)** – ಶಕ್ತಿ ತಂತ್ರಜ್ಞಾನ.

ಅವರ ದೇಹವನ್ನು ಶುದ್ಧಿಗೊಳಿಸುತ್ತೇನೆ. ಮತ್ತು ನಿಮ್ಮ ಮನೆಯ ವಾತಾವರಣವನ್ನು ಸ್ವಚ್ಛ ಮಾಡುವ ಅವಶ್ಯಕತೆ ಸಹ ಇದೆ. ತ್ವರೆಮಾಡಿ ಮತ್ತು ನರಿ ಮತ್ತು ಮುಂಗುಸಿಗಳು ವ್ಯಾಪಿಸಿ ನೆನಪು ಕೊಡುವ ಗುಳಿಗೆಗಳನ್ನು ಬಿಸಾಡಿ, ಇಂತಹ ವಿಚಾರಗಳನ್ನೆಲ್ಲಾ ನಿಮಗಾಗಿ ಸ್ವಚ್ಛ ಮಾಡಲಾಗಿದೆ ಮತ್ತು ಆ ಸ್ವತ್ತುಗಳು ಈಗ ನಿಷ್ಕ್ರಿಯವಾಗಿದೆ. ನೀವು ಅಭ್ಯಾಸ ಮಾಡ ಬಯಸುತ್ತೀರಿ. ಆದ್ದರಿಂದ ನಿಮ್ಮ ಮಾರ್ಗವನ್ನು ಸ್ವಚ್ಛಗೊಳಿಸುವುದಕ್ಕೆ ನಾವು ಸಂತೋಷಿಸುತ್ತೇವೆ. ಮತ್ತು ಇದೆಲ್ಲವನ್ನೂ ನಿಮಗಾಗಿ ಮಾಡುತ್ತಿದ್ದೇನೆ. ಆದರೆ ನಾವು ನಿಜವಾದ ಅಭ್ಯಾಸಿಗರಿಗೆ ಮಾತ್ರ ಸಹಾಯ ಮಾಡುತ್ತೇವೆ. ಬಹುಶ: ಅವರಿಗೆ ಅರ್ಥವಾಗಿಲ್ಲ ನಾವು ನಿಜವಾಗಲೂ ಅವರಿಗೆ ಸಹಾಯ ಮಾಡಲಾಗುವುದಿಲ್ಲ, ನಿಜವಾದ ಅಭ್ಯಾಸಿಗರನ್ನು ನಾವು ಹುಡುಕುತ್ತಿದ್ದೇವೆ.

ಇಲ್ಲಿ ಇನ್ನೊಂದು ರೀತಿಯ ವ್ಯಕ್ತಿಗಳದ್ದಾರೆ. ಈತನನ್ನು ಸ್ವಾಧೀನಪಡಿಸಿಕೊಳ್ಳುವ ಮುಂಚೆ ಇತರರು ಆತನಿಗೆ ಹೇಳಿದ್ದರು ಮತ್ತು ಆತನಲ್ಲೂ ಸಹ ತಾನೂ ಸ್ವಾಧೀನಗೊಂಡಿದ್ದೇವೆಂಬ ಈ ರೀತಿಯ ಅನುಭೂತಿಯಿತ್ತು. ಆದರೆ ಅದನ್ನು ಹೊರತೆಗೆದ ನಂತರವೂ ಆತನು ಇನ್ನೂ ಯೋಚಿಸುವುದನ್ನು ನಿಲ್ಲಿಸಲಾಗಿಲ್ಲ. ಈಗಲೂ ಅದೇ ಸ್ಥಿತಿಯಿದೆಯೆಂದು ಯಾವಾಗಲೂ ಆತನು ಚಿಂತಿಸುತ್ತಾನೆ. ಆದರೆ ಅದೇ ಒಂದು ರೀತಿಯ ವಿಶ್ವಾಸ ಮತ್ತು ಅದನ್ನು ಅನುಮಾನವೆಂದು ಕರೆಯುತ್ತೇವೆ. ಸಮಯ ಕಳೆದ ಹಾಗೆಲ್ಲಾ ತಾನು ಹೆಚ್ಚು ಜಾಗ್ರತೆಯಿಂದಿರದಿದ್ದಲ್ಲಿ ಅದನ್ನು ಮತ್ತೆ ಸ್ವಾಗತಿಸಬಹುದು. ಸಂಬಂಧಗಳನ್ನು ನೀವು ಕಳಚಿ ಕೊಳ್ಳಬೇಕು. ಇದು ಈಗ ಅಸ್ತಿತ್ವದಲ್ಲಿಯೇ ಇಲ್ಲ. ನಾವು ಈಗಾಗಲೇ ಅಂತಹ ಸಮಸ್ಯೆ ಇರುವ ವ್ಯಕ್ತಿಗಳ ಬಗ್ಗೆ ಆಸಕ್ತಿಯನ್ನು ಹಿಂದಿನ ತರಗತಿಗಳಲ್ಲಿ ತೆಗೆದುಕೊಂಡಿದ್ದೇವೆ. ನಾನು ಈಗಾಗಲೇ ಆ ಕೆಲಸಗಳನ್ನು ಮಾಡಿದ್ದೇವೆ, ಸ್ವಾಧೀನಪಡಿಸಿಕೊಂಡ ಆತ್ಮಗಳನ್ನು ನಾನಾಗಲೇ ಹೊರಹಾಕಿದ್ದೇನೆ.

ಕೆಳಹಂತದಲ್ಲಿ ಅಭ್ಯಾಸದ ವ್ಯಾಯಾಮಗಳನ್ನು ಮಾಡುವಾಗ ಡಯಸ್ಟರು ಆಧಾರ ವನ್ನು ಸ್ಥಾಪಿಸುವ ಅವಶ್ಯಕತೆಯಿದೆ. ಅವರು ವಿಶ್ವದ ಕಕ್ಷೆಯನ್ನು ರೂಪಿಸುವ ಅವಶ್ಯಕತೆ ಇದೆ ಮತ್ತು ದಿವ್ಯಕ್ಷೇತ್ರದ ಕ್ಷೇತ್ರವು ಅಲ್ಲಿ ರೂಪುಗೊಳ್ಳಬೇಕು. ಮತ್ತು ಇನ್ನಿತರ ಸಂಗತಿಗಳು ರೂಪುಗೊಳ್ಳಬೇಕು, ಇಲ್ಲಿ ನಾವು ಒಂದು ನಿಯಮಚಕ್ರವನ್ನು ಸ್ಥಾಪಿಸುತ್ತೇವೆ. ಶಕ್ತಿಯ ಯಾಂತ್ರಿಕತೆ ಅಭ್ಯಾಸಕ್ಕಾಗಿ ಮಾಡುವ ಯಾಂತ್ರಿಕ ಕೌಶಲ ಮತ್ತು ಇತರೆ ಹೆಚ್ಚಿನ ಸಂಗತಿಗಳು ಇದರಲ್ಲಿ ಹತ್ತು ಸಾವಿರಕ್ಕಿಂತ ಹೆಚ್ಚಿದೆ, ಅದನ್ನೆಲ್ಲಾ ನಾವು ನಿಮಗೆ ಕೊಡಬೇಕು ಮತ್ತು ಅವುಗಳನ್ನು ನಿಮ್ಮ ದೇಹದಲ್ಲಿ ಬೀಜದ ರೂಪದಲ್ಲಿ ಸ್ಥಾಪಿಸಬೇಕು, ನಿಮ್ಮ ಆರೋಗ್ಯದ ಸಮಸ್ಯೆಗಳನ್ನು ನಾವು ವಾಸಿ ಮಾಡಿದ ನಂತರ ಏನೇನು ಮಾಡಬೇಕು, ಅದನ್ನೆಲ್ಲಾ ಮಾಡಿದ ನಂತರ ಮತ್ತು ನಿನ್ನಲ್ಲಿ ಏನಿರಬೇಕೋ ಅದನ್ನೆಲ್ಲಾ ಇರಿಸಿದ ನಂತರ ಮತ್ತು ಕೇವಲ ನಂತರವೇ ನಿಮ್ಮ ಅಭ್ಯಾಸದಲ್ಲಿ ನೀವು ಯಶಸ್ಸು ಗಳಿಸುವಿರಿ. ನಾವು ಇದೆಲ್ಲವನ್ನು ಕೊಡದಿದ್ದಲ್ಲಿ ಇದು ಕೇವಲ ವಾಸಿ ಮಾಡುವುದು ಮತ್ತು ಅರ್ಹತೆ ಪಡೆಯುವುದಾಗಿರುತ್ತದೆ. ನೋಡಿ ನ್ಯಾಯವಾಗಿ ಹೇಳಬೇಕೆಂದರೆ ಕೆಲವರು ತಮ್ಮ ನಡತೆಯ ಬಗ್ಗೆ ಲಕ್ಷ್ಯ ಮಾಡದಿದ್ದಲ್ಲಿ ಒಳ್ಳೆಯದು. ಅವರು ಹೋಗಿ ಸಂಗೀತವಾದ್ಯ ತಾಳಕ್ಕನುಸಾರವಾಗಿ ಮಾಡುವ ಶಾರೀರಿಕ ವ್ಯಾಯಾಮ ಮಾಡುವುದು ಒಳ್ಳೆಯದು.

ನೀವು ನಿಜವಾದ ಅಭ್ಯಾಸವನ್ನು ಮಾಡುವಾಗ ನಾವು ಜವಾಬ್ದಾರಿಯಿಂದ ನಡೆದು ಕೊಳ್ಳಬೇಕಾಗುತ್ತದೆ. ಅದೇ ರೀತಿಯ ಸಂಗತಿಗಳನ್ನು ಸ್ವಯಂ ಕಲಿಕೆದಾರರು ಪಡೆಯುತ್ತಾರೆ. ಆದರೆ ಅವರು ನಿಜವಾದ ಅಭ್ಯಾಸಿಗರಾಗಿರಬೇಕು. ಆ ವಿಷಯಗಳನ್ನು ನಾವು ನಿಜವಾದ ಅಭ್ಯಾಸಿಗನಿಗೆ ಮಾತ್ರ ಕೊಡುತ್ತೇವೆ. ನಾನು ಹೇಳಿದಂತೆ ಶಿಷ್ಯರಾಗಿ, ನಿಜವಾದ ಮಾರ್ಗದರ್ಶನವನ್ನು ನಿಮಗೆ ಮಾಡುತ್ತೇನೆ. ಇದರೊಂದಿಗೆ ನೀವು ಉನ್ನತ ಹಂತದ ನಿಯಮದ ಒಳಹೊರಗನ್ನು ಖಂಡಿತವಾಗಿ ಅಧ್ಯಯನ ಮಾಡಬೇಕು ಮತ್ತು ಹೇಗೆ ಅಭ್ಯಾಸ ಮಾಡುವುದೆಂದು ಅರಿತುಕೊಳ್ಳಬೇಕು.

ಎಲ್ಲಾ ಐದು ವ್ಯಾಯಾಮಗಳನ್ನು ಒಟ್ಟಾಗಿ ಕಲಿಯುವುದು ಮತ್ತು ಅವೆಲ್ಲದರಲ್ಲೂ ಪಾರಂಗತರಾಗುವುದು ಅನಂತರ ನೀವು ಇನ್ನೂ ಆಕರ್ಷಕವಾದ ಹಂತವನ್ನು ಸೇರಲು ಸಾಧ್ಯವಾಗುತ್ತದೆ. ನೀವು ಊಹಿಸಿರುವುದಕ್ಕಿಂತ ಉನ್ನತ ಹಂತವಿದು. ನಿಜವಾದ ಫಲವನ್ನು ಪಡೆಯುವುದಕ್ಕೆ ಯಾವುದೇ ಸಮಸ್ಯೆಯಿಲ್ಲ. ನಾನು ಬೋಧಿಸುತ್ತಿರುವ ಈ ನಿಯಮವು ಒಂದೇ

ಸಮಯದಲ್ಲಿ ವಿವಿಧ ಹಂತಗಳನ್ನು ವ್ಯಾಪಿಸುತ್ತದೆ. ಆದ್ದರಿಂದ ನೀವು ಎಲ್ಲಿಯವರೆಗೆ ಅಭ್ಯಾಸ ಮಾಡುತ್ತಿರುವಿರೋ ಅಲ್ಲಿಯವರೆಗೂ ಇನ್ನು ಮುಂದೆ ವಿವಿಧ ಹಂತಗಳಲ್ಲಿ ಇದು ನಿಮಗೆ ಮಾರ್ಗದರ್ಶನ ನೀಡುತ್ತದೆಂಬುದನ್ನು ನೀವು ಕಂಡು ಹಿಡಿಯುವಿರಿ.

ನೀವು ಒಬ್ಬ ಅಭ್ಯಾಸಿಗರು ಆದ್ದರಿಂದ ನಿಮ್ಮ ಜೀವನವು ಆರಿಸಿಕೊಂಡಂತಹ ಮಾರ್ಗವು ಇಂದಿನಿಂದ ಬದಲಾಗುತ್ತದೆ. ನನ್ನ ನಿಯಮದ ಅಂಗಗಳು ನಿಮಗೆ ಹೊಸ ಕ್ರಮವನ್ನು ನೀಡುತ್ತದೆ. ಅದು ಹೇಗೆ ವ್ಯವಸ್ಥೆಯನ್ನು ಮಾಡುತ್ತದೆ? ಅವಕ್ಕೇ ತಿಳಿದಿಲ್ಲ. ಕೆಲವು ಮಂದಿ ನಿಜವಾಗಿಯೂ ಒಂದೇ ವರ್ಷ ಅಥವಾ ಅರ್ಧ ವರ್ಷದಲ್ಲಿ ತೀರಾ ಅಸ್ವಸ್ಥತೆಗೆ ಬರಬಹುದು. ಅದೇ ರೀತಿ ಅವರು ವರ್ಷಗಟ್ಟಲೆ ಖಾಯಿಲೆ ಬೀಳಬಹುದು. ಇನ್ನೂ ಕೆಲ ಮಂದಿಗೆ ಪೆಟ್ಟು ಬಿದ್ದಿರಬಹುದು ಅಥವಾ ಇನ್ಯಾವುದೇ ಆರೋಗ್ಯದ ತೊಂದರೆ ಇರಬಹುದು, ಆ ಕಾರಣದಿಂದ ನಡೆದಾಡಲೂ ಆಗದಿರಬಹುದು. ಆದಕಾರಣ ಉಳಿದಿರುವ ವರ್ಷಗಳಲ್ಲಿ ಹೇಗೆ ಅಭ್ಯಾಸ ಮಾಡುವಿರಿ, ನಿಮಗಾಗಿ ನಾವು ಎಲ್ಲವನ್ನೂ ಸ್ವಚ್ಛಗೊಳಿಸ ಬೇಕಾಗುತ್ತದೆ ಮತ್ತು ಅಂತಹ ಸಂಗತಿಗಳು ನಡೆಯದಂತೆ ತಡೆಯಬೇಕಾಗುತ್ತದೆ. ಆದರೆ ನಿಮ್ಮ ಮುಂದೆಯೇ ಇದನ್ನು ಸ್ವಚ್ಛಗೊಳಿಸಲಿಚ್ಛಿಸುತ್ತೇನೆ. ನಾವು ಇದೆಲ್ಲವನ್ನೂ ನಿಜವಾದ ಅಭ್ಯಾಸಿಗರಿಗೆ ಮಾತ್ರ ಮಾಡಲಿಚ್ಛಿಸುತ್ತೇವೆ. ನಿಮಗಿಷ್ಟ ಬಂದಂತೆ ಸಾಮಾನ್ಯ ಜನರಿಗಾಗಿ ಕೆಲಸ ಮಾಡುವುದಿಲ್ಲ. ಅದು ಕೆಟ್ಟ ಕೆಲಸ ಮಾಡಿದಂತೆ, ಸಾಮಾನ್ಯ ಜನರು ಅನುಭವಿಸು ವಂತಹ ಜನನ, ವಯಸ್ಸಾಗುವುದು, ಖಾಯಿಲೆ ಮತ್ತು ಸಾವು ಎಲ್ಲದಕ್ಕೂ ತಮ್ಮದೇ ಆದ ಮೂಲ ಕಾರಣಗಳಿವೆ ಮತ್ತು ನೀವು ಸುಮ್ಮನೆ ಹೋಗಿ ಅದರ ಉಲ್ಲಂಘನೆ ಮಾಡಲಾಗು ವುದಿಲ್ಲ.

ಒಬ್ಬ ಅಭ್ಯಾಸಿಗರಿಗಿಂತ ಬೆಲೆ ಬಾಳುವುದು ಇನ್ಯಾವುದೂ ಇಲ್ಲವೆಂದು ನಾವು ನೋಡುತ್ತೇವೆ. ಆದ್ದರಿಂದಲೇ ಅಭ್ಯಾಸಿಗನಿಗಾಗಿ ನಾವು ಈ ಸಂಗತಿಗಳನ್ನು ಬದಲಾಯಿಸು ತ್ತೇವೆ. ನಾವು ಇದನ್ನು ಹೇಗೆ ಬದಲಿಸುತ್ತೇವೆ? ಬೋಧಕರ ಪರೋಪಕಾರಿ ಶಕ್ತಿ ಸಾಮರ್ಥ್ಯ ಗಳು ಉನ್ನತ ಮಟ್ಟದ್ದಾಗಿದ್ದರೆ ಆತನು ನಿಮ್ಮ ಕರ್ಮವನ್ನು ಕಳೆಯಲು ಸಾಧ್ಯ.

ಗುರುಗಳ ಕೃಷಿಶಕ್ತಿಯು ಹೆಚ್ಚಾಗಿದ್ದರೆ ಅದರ ಹೆಚ್ಚಿನಂಶವನ್ನು ಆತನು ನಿವಾರಿಸಲು ಸಾಧ್ಯ ಮತ್ತು ಆತನ ಕೃಷಿಶಕ್ತಿಯು ಕ್ಷೀಣಮಟ್ಟದ್ದಾಗಿದ್ದರೆ ಆತನು ಕೇವಲ ಸ್ವಲ್ಪ ಮಾತ್ರ ನಿವಾರಣೆ ಮಾಡಲು ಸಾಧ್ಯ. ಇದನ್ನು ವಿಷದಗೊಳಿಸುವ ಮಾರ್ಗವೊಂದಿಲ್ಲದೆ, ನಿಮ್ಮ ಮುಂದಿನ ಸಂಪೂರ್ಣ ಜೀವನದ ಮಾರ್ಗದಲ್ಲಿ ಎಷ್ಟು ರೀತಿಯ ಕರ್ಮಗಳಿವೆಯೋ ಅವೆಲ್ಲವನ್ನು ಒಟ್ಟುಗೂಡಿಸಿಕೊಂಡಿರುತ್ತೇನೆ. ಮತ್ತು ಇದರಲ್ಲಿ ಸ್ವಲ್ಪ ನಾವು ನಿವಾರಣೆಯನ್ನು ಮಾಡುತ್ತೇವೆ, ಹೇಳಿ ಎಷ್ಟು? ಅರ್ಧದಷ್ಟು ಇನ್ನರ್ಧದಿಂದಲೂ ಸಹ ನೀವು ಮಾಡಲಾಗುವು ದಿಲ್ಲ. ಈ ಅರ್ಧವೂ ಸಹ ಬೆಟ್ಟಕ್ಕಿಂತ ಎತ್ತರವಾಗಿರುತ್ತದೆ. ಆದ್ದರಿಂದ ಇದನ್ನು ನಾವು ಹೇಗೆ ನಿಭಾಯಿಸಬಹುದು? ನೀವು ಡಯೋ(Dao) ಪಡೆದುಕೊಂಡ ನಂತರವೇ? ಎಷ್ಟು ಮಂದಿಗೆ ಇದರಿಂದ ಅನುಕೂಲವಾಗಿದೆ. ಆದ್ದರಿಂದ ಹೆಚ್ಚಿನ ಮಂದಿ ನಿಮ್ಮೊಂದಿಗೆ ಹಂಚಿಕೊಳ್ಳ ಬಯಸುತ್ತಾರೆ. ಬಹುಶ: ಅವರಿಗೆ ಇದೊಂದು ದೊಡ್ಡ ವ್ಯಾಪಾರವೇನಲ್ಲ, ನಿಮಗಾಗಿ, ಅಭ್ಯಾಸ ಮಾಡಿ ನೀವು ಪಡೆದುಕೊಂಡಂತಹ ಜೀವಂತ ಅಸ್ತಿತ್ವವುಳ್ಳ ವಸ್ತುಗಳು ನಿಮ್ಮಲ್ಲಿವೆ. ಮತ್ತೂ ಜೊತೆಗೆ ನಿಮ್ಮ ಶ್ರೇಷ್ಠ ಆತ್ಮ ಮತ್ತು ಅದರ ಕೈಕೆಳಗಿರುವ ಆತ್ಮ ಮತ್ತು ಇನ್ನೆಷ್ಟೋ ಅವರುಗಳು. ಎಲ್ಲವೂ ತಮ್ಮ ತಮ್ಮ ಭಾಗ ನಿಮಗೆ ಭುಜಗೊಡುತ್ತವೆ. ನಿಮಗೆ ಸಂಕಟ ವೊದಗಿದಾಗ ಕಡಿಮೆ ಮಾತ್ರ ಉಳಿದಿರುತ್ತದೆ. ನಾವು ಹೆಚ್ಚೇನು ಉಳಿದಿಲ್ಲವೆಂದು ಹೇಳಿದರೂ ಸಹ ಇದು ಸಾಕಷ್ಟು ಹೆಚ್ಚಾಗಿರುತ್ತದೆ. ನೀವು ಇದನ್ನು ಪಾರು ಮಾಡಿಕೊಂಡು ಹೋಗ ಲಾಗುವುದಿಲ್ಲ. ಆದ್ದರಿಂದ ನಾವೇನು ಮಾಡುತ್ತೇವೆ? ನಾವು ಎಣಿಸಲಾಗದಷ್ಟು ವಿವಿಧ ಭಾಗಗಳಾಗಿ ವಿಂಗಡಿಸಿ ಅಭ್ಯಾಸದ ವಿವಿಧ ಹಂತಗಳಲ್ಲಿ ಇರಿಸುತ್ತೇವೆ ಮತ್ತು ನಿಮ್ಮ ನಡತೆ ಯನ್ನು ಸುಧಾರಣೆ ಮಾಡಲು ಅವುಗಳನ್ನು ಉಪಯೋಗಿಸುತ್ತೇವೆ. ನಿಮ್ಮ ಕರ್ಮದ ರೂಪಾಂತರ ಮಾಡಲು ಮತ್ತು ನಿಮ್ಮ ಕೃಷಿಶಕ್ತಿಯನ್ನು ಹೆಚ್ಚಿಸಲು ಬಳಸುತ್ತೇವೆ.

ನಾನು ಇದರೊಂದಿಗೆ ಇನ್ನೂ ಕೂಡಿಸಲಿಚ್ಛಿಸುತ್ತೇನೆ. ಯಾರಾದರೂ ಅಭ್ಯಾಸ ಮಾಡಬಯಸಿದರೆ ಅದು ಉದ್ಯಾನವನದಲ್ಲಿ ಓಡಾಡಿದಷ್ಟು ಸುಲಭವಲ್ಲ, ನಾನು ನಿಮಗೆ ಹೇಳಿದ್ದೇನೆ

ಇದೊಂದು ಗಂಭೀರವಾದಂತಹ ವಿಷಯ ಎಲ್ಲಕ್ಕಿಂತ ಹೆಚ್ಚಾಗಿ ಇದು ಸಾಮಾನ್ಯರಿಗಿಂತ ಎತ್ತರದಲ್ಲಿರುತ್ತದೆ. ಇದು ಸಾಮಾನ್ಯ ಮನುಷ್ಯರು ಮಾಡುವುದಕ್ಕಿಂತ ಹೆಚ್ಚು ಕಠಿಣವಾಗಿರುತ್ತದೆ. ಇದು ಅತ್ಯುನ್ನತ ಸಂಗತಿಯಲ್ಲವೇ? ಆದ್ದರಿಂದ ಸಾಮಾನ್ಯರಿ ಗಿಂತ ಹೆಚ್ಚಿನದನ್ನು ಇದು ನಿಮ್ಮಿಂದ ಬಯಸುತ್ತದೆ.

ಮಾನವರಾದ ನಮಗೆ ಶ್ರೇಷ್ಠ ಆತ್ಮವಿದೆ ಮತ್ತು ಈ ಆತ್ಮಕ್ಕೆ ಸಾವಿಲ್ಲ. ನಮ್ಮ ಶ್ರೇಷ್ಠ ಆತ್ಮಕ್ಕೆ ಸಾವಿಲ್ಲವೆಂತಾದರೆ ಅದರ ಬಗ್ಗೆ ಯೋಚಿಸಿ, ನಿಮ್ಮ ಹಿಂದಿನ ಜನ್ಮದಲ್ಲಿ ನಿಮ್ಮ ಆತ್ಮವು ಇತರರೊಡನೆ ಸಂವಹಿಸುವಾಗ ಕೆಟ್ಟದ್ದನ್ನೇನು ಮಾಡಿಲ್ಲವೇ? ಇಲ್ಲೊಂದು ಉತ್ತಮ ಅವಕಾಶವುಂಟು, ನೀನು ಯಾರನ್ನಾದರೂ ಕೊಂದಿರಬಹುದು, ಇನ್ನೊಬ್ಬರನ್ನು ಉಪಯೋಗಿಸಿಕೊಂಡಿರಬಹುದು. ಇನ್ಯಾರಿಗಾದರೂ ಸಾಲ ಕೊಡಬೇಕಾಗಿರಬಹುದು. ಜನರನ್ನು ನೋಯಿಸಿರಬಹುದು. ಇವುಗಳಲ್ಲಿ ಏನನ್ನಾದರೂ ನೀವು ಮಾಡಿರಬಹುದು, ನೀವು ಇಂತಹದ್ದೇನಾದರೂ ಮಾಡಿದ್ದರೆ, ನೀವು ಇಲ್ಲಿ ಅಭ್ಯಾಸ ಮಾಡಲು ಬಂದಾಗ ಅವರು ಸಂಪೂರ್ಣವಾಗಿ ಇದನ್ನು ನೋಡುತ್ತಾರೆ. ನಿಮಗಾಗಿ ಉಪಶಮನ ಮಾಡಿ ಕೊಳ್ಳಲು ನೀವು ಈ ಅಭ್ಯಾಸವನ್ನು ಮಾಡಿಕೊಳ್ಳುತ್ತಿದ್ದರೆ ಅವರು ಲಕ್ಷ್ಯ ಕೊಡುವುದಿಲ್ಲ. ಅಥವಾ ಆರೋಗ್ಯ ಕಾಪಾಡಿಕೊಳ್ಳಲು ಮಾಡಿದ್ದರೂ ಲಕ್ಷ್ಯ ಕೊಡುವುದಿಲ್ಲ. ಅವರಿಗೆ ತಿಳಿದಿದೆ ನೀವು ಕೇವಲ ಮುಂದೂಡುತ್ತಿರುವಿರೆಂದು ಈಗ ನೀವು ಸಾಲವನ್ನು ಹಿಂದಿರುಗಿಸ ದಿದ್ದಲ್ಲಿ ಮುಂದೆ ಹಿಂದಿರುಗಿಸಬೇಕಾಗುತ್ತದೆ. ಆದ್ದರಿಂದಲೇ ಈಗ ನೀವು ಹಿಂದಿರುಗಿಸ ದಿದ್ದರೂ ಅದನ್ನು ಪರಿಗಣಿಸುವುದಿಲ್ಲ.

ಅಭ್ಯಾಸವನ್ನು ನೀವು ಮಾಡಲಿಚ್ಚಿಸಿದಾಗ ಅವರು ಇದಕ್ಕೊಪ್ಪುವುದಿಲ್ಲ. ನೀವು ಅಭ್ಯಾಸ ಮಾಡಲಿಚ್ಚಿಸುವಿರಿ. ನೀವು ಅನುಮತಿಯನ್ನು ಪಡೆಯಬೇಕು. ನೀವು ಕೃಷಿಶಕ್ತಿ ಯನ್ನು ಬೆಳೆಸಿಕೊಂಡರೆ ನಾನು ನಿಮ್ಮನ್ನು ಕಲೆತುಕೊಳ್ಳಲಾಗುವುದಿಲ್ಲ. ನಾನು ನಿಮ್ಮನ್ನು ಮುಟ್ಟಲೂ ಆಗುವುದಿಲ್ಲ. ಅವರು ಅದನ್ನಾಗಗೊಡುವುದಿಲ್ಲ. ಆದರೆ ನೀವು ಅಭ್ಯಾಸ ಮಾಡುವುದನ್ನು ನಿಲ್ಲಿಸಲು ಪ್ರಯತ್ನಿಸುತ್ತಾರೆ. ನಿಮ್ಮ ಅಭ್ಯಾಸವನ್ನು ನಿಲ್ಲಿಸಲು ಏನು ಬೇಕಾದರೂ ಮಾಡುತ್ತಾರೆ. ಮತ್ತು ಹೇಗಾದರೂ ಮಾಡಿ ಅಭ್ಯಾಸವನ್ನು ನೀವು ನಿಲ್ಲಿಸುವಂತೆ ಮಾಡಲು ಪ್ರಯತ್ನಿಸುತ್ತಾರೆ.

ಆದ್ದರಿಂದ ಅವರು ಎಲ್ಲಾ ರೀತಿಯ ಯುಕ್ತಿಗಳನ್ನು ನಿಮ್ಮ ನಡುವೆ ತರಲು ಪ್ರಯತ್ನಿಸುತ್ತಿರುತ್ತಾರೆ. ಮತ್ತು ನಿಮ್ಮನ್ನು ಸಾಯಿಸಲೂ ಸಹ ಬರಬಹುದು. ಬಹುಶ: ಈ ರೀತಿ ಆಗುವುದಿಲ್ಲ. ಏಕೆಂದರೆ ನೀವಿಲ್ಲಿ ಧ್ಯಾನಾಸಕ್ತರಾಗಿರುವಿರಿ. ಮತ್ತು ನಿಮ್ಮ ಮನಸ್ಸು ಅದರೊಂದಿಗೆ ಸಂಪರ್ಕ ಕಡಿದುಕೊಳ್ಳುತ್ತದೆ. ಅದು ಸಾಧ್ಯವೇ ಇಲ್ಲ ಸಾಮಾನ್ಯ ಪ್ರಪಂಚದ ಸಂಗತಿಯ ಮಾರ್ಗಗಳಿಗೆ ಅಂದಿನಿಂದಲೂ ಇದು ಹೊಂದಿಕೊಳ್ಳಬೇಕಾಗಿದೆ. ಮನೆಯಿಂದ ನೀವು ಹೊರ ಹೊರಟಾಗ ಒಂದು ಕಾರು ನಿಮಗೆ ಗುದ್ದಬಹುದು.

ಅಥವಾ ನೀವೊಂದು ಕಟ್ಟಡದಿಂದ ಬೀಳಬಹುದು ಅಥವಾ ಇನ್ಯಾವುದೇ ರೀತಿಯ ಅಪಾಯ ನಿಮಗೊದಗಬಹುದು. ಇಂತಹ ಯಾವುದೇ ಸಂಗತಿಗಳು ನಡೆಯುವ ಸಂಭಾವ್ಯತೆ ಇದೆ. ಇದು ಬಹಳ ಅಪಾಯಕರ. ನಿಜವಾದ ಅಭ್ಯಾಸವು ನೀವು ಅಂದುಕೊಂಡಷ್ಟು ಸುಲಭವಲ್ಲ. ಕೇವಲ ನೀವು ಅಭ್ಯಾಸ ಮಾಡಬೇಕೆಂದು ಬಯಸಿದ್ದರಿಂದ ಅತ್ಯುನ್ನತ ಮಟ್ಟದ ಅಭ್ಯಾಸ ಮಾಡಲು ಸಾಧ್ಯವೇ? ನೀವು ನಿಜವಾಗಿಯೂ ಅಭ್ಯಾಸ ಮಾಡಲು ಆರಂಭಿಸಿದೊಡನೆಯೇ ನಿಮಗೆ ಜೀವ ಭಯದಂತಹ ಅಪಾಯವಿರುತ್ತದೆ. ಈ ಸಮಸ್ಯೆಯು ಒಡನೆಯೇ ಆರಂಭವಾಗುತ್ತದೆ. ಎಷ್ಟೋ ಚಿಗಾಂಗ್ ಮಾಸ್ತರರಿದ್ದಾರೆ, ಅವರು ಜನರಿಗೆ ಉನ್ನತ ಹಂತದ ಮಾರ್ಗದರ್ಶನವನ್ನು ಮಾಡುವ ಧೈರ್ಯ ಮಾಡುವುದಿಲ್ಲ. ಅದು ಏಕೆ? ನಿಷ್ಪಷ್ಟವಾಗಿ ಏಕೆಂದರೆ ಈ ಒಂದು ಸಮಸ್ಯೆಗಳನ್ನು ಗುರುತಿಸಲಾಗುವುದಿಲ್ಲ. ಅವರು ನಿಮ್ಮನ್ನು ರಕ್ಷಿಸಲಾಗುವುದಿಲ್ಲ.

ಹಿಂದೆ ಎಷ್ಟೋ ಮಂದಿ ಋಷಿಗಳಿದ್ದರು, ಅವರು ಕೇವಲ ಒಬ್ಬ ಅನುಯಾಯಿಗೆ ಬೋಧಿಸಬಲ್ಲವರಾಗಿದ್ದರು. ಅವರು ಒಬ್ಬ ವಿದ್ಯಾರ್ಥಿಯ ರಕ್ಷಣೆ ಮಾಡಿದರೆ ಅದು ಸರಿ, ಹೆಚ್ಚು ವಿದ್ಯಾರ್ಥಿಗಳಿಗೆ ಬೋಧಿಸುವುದು, ಆದರೂ ಸಾಮಾನ್ಯ ಮನುಷ್ಯರು ಅದನ್ನು ಮಾಡಲು ಧೈರ್ಯ ಮಾಡುವುದಿಲ್ಲ. ಆದರೆ ನಿಮಗೆ ನಾನು ಹೇಳುತ್ತಿದ್ದೇನೆ ನಾನು ಇದನ್ನು ಮಾಡಬಲ್ಲೆನೆಂದು ಏಕೆಂದರೆ ದೈವಿಕ ನಿಯಮದ ಅಪರಿಮಿತ ಶಕ್ತಿಯ ಎಣಿಸಲಾರದಷ್ಟು ನಿಯಮದ ಅಂಗಗಳು ನನ್ನಲ್ಲಿವೆ ಮತ್ತು ಅವರು ಶ್ರೇಷ್ಠ ದೈವಿಕ ಶಕ್ತಿಯನ್ನು ಮತ್ತು ಶ್ರೇಷ್ಠ ನಿಯಮದ ಶಕ್ತಿಯನ್ನು ಪ್ರದರ್ಶಿಸಬಲ್ಲರು. ಅಷ್ಟೇ ಅಲ್ಲ, ನಾವಿಂದು ಏನು ಮಾಡುತ್ತಿದ್ದೇವೆಯೋ ಅದು ಹೊರ ಕಾಣುವಷ್ಟು ಸುಲಭವಲ್ಲ, ಯಾವುದೋ ಮನಸ್ಸಿನ ಪ್ರಚೋದನೆಯಿಂದ ನಾನು ಇದನ್ನು ಮಾಡಲು ಬರಲಿಲ್ಲ. ಎಷ್ಟೋ ಮಂದಿ ಶ್ರೇಷ್ಠ ಜ್ಞಾನಿಗಳಾದಂತಹ ವ್ಯಕ್ತಿಗಳು ಈ ಸನ್ನಿವೇಶವನ್ನು ಗಮನಿಸುತ್ತಿದ್ದಾರೆ. ನಿಯಮದ ಅಂತ್ಯದ ಕಾಲದಲ್ಲಿ ಕೊನೆಯ ಬಾರಿಗೆ ಈ ಸತ್ಯ ಬೋಧನೆಯನ್ನು ರವಾನಿಸುತ್ತಿದ್ದೇವೆ. ಇದನ್ನು ಮಾಡುವಾಗ ನಾವು ಹೊರಹೋಗಲು ಅನುಮತಿಯಿಲ್ಲ. ನೀವು ಸತ್ಯ ಮಾರ್ಗದಲ್ಲಿ ನಡೆಯುತ್ತಾ ಅಭ್ಯಾಸವನ್ನು ಮಾಡುತ್ತಿದ್ದರೆ ನಿಮಗೆ ತೊಂದರೆ ಕೊಡುವಂತಹ ಧೈರ್ಯ ಯಾರಿಗೂ ಬರುವುದಿಲ್ಲ ಮತ್ತೆ ಹೆಚ್ಚೇನು ನಮ್ಮ ನಿಯಮದ ಅಂಗಗಳು ನಿಮ್ಮನ್ನು ಕಾಪಾಡುತ್ತಿವೆ. ಆದ್ದರಿಂದ ನಿಮಗೆ ಯಾವುದೇ ಅಪಾಯವಿಲ್ಲ.

ಸಾಲಗಳನ್ನು ತೀರಿಸಬೇಕು, ಆದ್ದರಿಂದ ನಿಮ್ಮ ಅಭ್ಯಾಸ ಮಾರ್ಗದಲ್ಲಿ ನಿಮಗೆ ಯಾವುದಾದರೂ ಅಪಾಯ ಒದಗಬಹುದು. ಆದರೆ ಈ ಸಂಗತಿಗಳು ನಡೆದಾಗ ನಿಮಗೆ ಭಯವೇನೂ ಆಗುವುದಿಲ್ಲ ಮತ್ತು ನಿಮಗೆ ಯಾವುದೇ ಅಪಾಯವಾಗಲು ನಾವು ಬಿಡುವುದಿಲ್ಲ. ನಾನು ನಿಮಗೆ ಕೆಲವು ಉದಾಹರಣೆಗಳನ್ನು ಕೊಡಬಲ್ಲೆ. ನಾನು ಬೀಜಿಂಗ್‌ನಲ್ಲಿ ಒಂದು ತರಗತಿಯನ್ನು ತೆಗೆದುಕೊಳ್ಳುತ್ತಿದ್ದಾಗ ಓರ್ವ ವಿದ್ಯಾರ್ಥಿನಿಯು ತನ್ನ ಬೈಕ್‌ಮೇಲೆ ಕುಳಿತು ರಸ್ತೆಯನ್ನು ದಾಟುತ್ತಿದ್ದಳು. ಆಕೆಯು ಒಂದು ತಿರುವನ್ನು ಕ್ರಮಿಸುತ್ತಿದ್ದಾಗ ಒಂದು ಬೆಲೆಬಾಳುವ ಸಿಡಾನ್ ತೀಕ್ಷ್ಣ ತಿರುವಿನಲ್ಲಿ ಆಕೆಗೆ ಗುದ್ದಿಬಿಟ್ಟಿತು. ಆ ವಿದ್ಯಾರ್ಥಿನಿಯು ಐವತ್ತು ವರ್ಷಗಳ ಆಸುಪಾಸಿನಲ್ಲಿದ್ದಳು. ಆ ಕಾರ್ ಭಯಂಕರ ಸದ್ದಿನೊಂದಿಗೆ ಗುದ್ದಿತ್ತು ಮತ್ತು ಅದು ನಿಜವಾದ ಹೊಡೆತವಾಗಿತ್ತು. ಆಕೆಯ ತಲೆ ಕಾರಿಗೆ ಬಡಿದಾಗ ದೊಡ್ಡ ಧಡ್! ಶಬ್ಧ ಕೇಳಿಸಿತ್ತು. ಆಕೆಯ ತಲೆಯು ಕಾರಿನ ಮುಂಭಾಗಕ್ಕೆ ನೇರವಾಗಿ ಬಡಿದಿತ್ತು. ಈ ಘಟನೆಯು ನಡೆದಾಗ ವಿದ್ಯಾರ್ಥಿನಿಯ ಕಾಲುಗಳು ಬೈಕಿನ ಮೇಲೆ ಕಿಸಿಗಾಲು ಹಾಕಿತ್ತು. ಆಕೆಯ ತಲೆಗೆ ಪೆಟ್ಟಾಗಿತ್ತು. ಆದರೆ ಆಕೆಗೆ ಯಾವುದೇ ನೋವಿನ ಅನುಭವವಾಗುತ್ತಾ ಇರಲಿಲ್ಲ. ಆಕೆಗೆ ನೋವು ಕಾಣದುದು ಮಾತ್ರವಲ್ಲ, ರಕ್ತ ಸಹ ಸೋರಿರಲಿಲ್ಲ. ಊತ ಸಹ ಇರಲಿಲ್ಲ. ಆದರೆ ಚಾಲಕನಿಗೆ ಭಯವಾಗಿತ್ತು. ಆತ ವಾಹನದಿಂದ ಧುಮುಕಿದ ಮತ್ತು ಆತುರದಿಂದ ಓಡಿಹೋಗಿ ಕೇಳಿದ, "ನಿಮಗೆ ಪೆಟ್ಟಾಗಿದೆಯೇ?, ಆಸ್ಪತ್ರೆಗೆ ಹೋಗೋಣವೇ?" ಆಕೆಯು ತಾನು ಚೆನ್ನಾಗಿದ್ದೇನೆಂದು ಉತ್ತರಿಸಿದಳು. ಬಹುಶ: ಆ ವಿದ್ಯಾರ್ಥಿನಿಯು ಅತ್ಯುತ್ತಮ ನಡತೆಯನ್ನು ಹೊಂದಿದವಳಾಗಿದ್ದಳು. ಆದ್ದರಿಂದ ಆಕೆಯು ಚಾಲಕನಿಗೆ ಯಾವುದೇ ತೊಂದರೆ ಕೊಡ ಬಯಸಲಿಲ್ಲ. ಆಕೆ ತಾನು ಚೆನ್ನಾಗಿದ್ದೇನೆಂದು ಹೇಳಿದಳು, ಆದರೆ ಕಾರಿಗೆ ಒಂದು ದೊಡ್ಡ ನೆಗ್ಗು ಆಗಿತ್ತು.

ಅಂತಹ ಎಷ್ಟೋ ಸಂಗತಿಗಳು ನಿಮ್ಮ ಜೀವ ತೆಗೆಯಲು ಬರುತ್ತವೆ. ಆದರೆ ನೀವು ಯಾವುದೇ ಅಪಾಯದಲ್ಲಿ ಸಿಲುಕಿಕೊಳ್ಳುವುದಿಲ್ಲ. ಹಿಂದೊಮ್ಮೆ ಜಾಲಿನ್ ಯೂನಿವರ್ಸಿಟಿ ಯಲ್ಲಿ (Jalin University) ತರಗತಿ ನಡೆಯುತ್ತಿದ್ದಾಗ ನಮ್ಮ ಓರ್ವ ವಿದ್ಯಾರ್ಥಿಯು ಯೂನಿವರ್ಸಿಟಿಯ ಮುಖ್ಯ ದ್ವಾರದಿಂದ ತನ್ನ ಬೈಕನ್ನು ತಳ್ಳಿಕೊಂಡು ಹೊರನಡೆದು, ಆತನು ರಸ್ತೆಯ ಮಧ್ಯೆ ತಲುಪಿದಾಗ ಒಮ್ಮೆಲೆ ಎರಡು ಕಾರುಗಳು ಆತನನ್ನು ನಜ್ಜುಗುಜ್ಜಾಗಿಸಿದವು ಮತ್ತು ಆತನನ್ನು ಎರಡನೇ ಬಾರಿಗೆ ಹೊಸಕಿ ಬಿಡಲು ಮುಂದಾದವು. ಆದರೆ ಆತ ಸ್ವಲ್ಪ ಕೂಡ ಹೆದರಲಿಲ್ಲ. ಸ್ವಾಭಾವಿಕವಾಗಿ ಇಂತಹ ಸನ್ನಿವೇಶಗಳು ನಮಗೆ ಎದುರಾದರೆ ನಾವು ಹೆದರುವುದಿಲ್ಲ, ಆ ಕ್ಷಣದಲ್ಲಿ ವಾಹನಗಳು ನಿಂತವು ಮತ್ತು ಇನ್ಯಾವುದೇ ಘಟನೆ ನಡೆಯಲಿಲ್ಲ.

ಬೀಜಿಂಗ್‌ನಲ್ಲಿ ಇನ್ನೊಂದು ಸಂಗತಿಯಾಯಿತು. ಚಳಿಗಾಲದಲ್ಲಿ ಕತ್ತಲೆ ಬೇಗ ಆಗುತ್ತದೆ. ಮತ್ತು ಜನಗಳು ಬೇಗ ಮಲಗಲು ಹೋಗುತ್ತಾರೆ. ರಸ್ತೆಗಳೆಲ್ಲ ನಿರ್ಜನವಾಗಿರು ತ್ತದೆ ಮತ್ತು ಶಾಂತವಾಗಿರುತ್ತದೆ.

ನಮ್ಮ ಒಬ್ಬ ವಿದ್ಯಾರ್ಥಿಯು ಬೈಕ್ ಸವಾರಿ ಮಾಡುತ್ತಾ ಮನೆಗೆ ಹಿಂದಿರುಗುತ್ತಿದ್ದ. ರಸ್ತೆಯಲ್ಲಿ ಒಂದೇ ಒಂದು ಜೀಪ್ ಮುಂದೆ ಹೋಗುತ್ತಿತ್ತು. ಒಮ್ಮೆಲೆ ಅದು ಬ್ರೇಕ್ ಹಾಕಿತು. ಈ ವಿದ್ಯಾರ್ಥಿಯು ಅದರ ಕಡೆ ಗಮನ ಕೊಡದೆ ತಲೆ ತಗ್ಗಿಸಿಕೊಂಡು ವಾಹನವನ್ನು ಓಡಿಸುತ್ತಿದ್ದ. ಆದರೆ ಒಮ್ಮೆಲೇ ಆ ಜೀಪ್ ಹಿಂದೆ ಹಿಂದೆ ಬರಲಾರಂಭಿಸಿತು. ಅದು ಬಹಳ ವೇಗವಾಗಿ ಹಿಂದೆ ಹಿಂದೆ ಬರುತ್ತಿತ್ತು. ಈತನ ಜೀವವನ್ನು ತೆಗೆಯಲು ಈ ಎರಡೂ ಒತ್ತಡಗಳ ಕೆಲಸ ಮಾಡಲಾರಂಭಿಸಿದವು. ಸರಿ ಇನ್ನೇನು ಎರಡೂ ವಾಹನಗಳು ಒಂದಕ್ಕೊಂದು ಡಿಕ್ಕಿ ಹೊಡೆಯುವುದರಲ್ಲಿದ್ದಾಗ ಒಮ್ಮೆಲೇ ಆತನ ವಾಹನವನ್ನು ಯಾವುದೋ ಶಕ್ತಿಯು ಎರಡು ಯಾರ್ಡ್‌ಗಳಷ್ಟು ದೂರ ಎಳೆದಾಗಿತ್ತು. ಈತನ ವಾಹನದ ಚಕ್ರದ ಮುಂದೆ ಜೀಪ್ ನಿಂತಿತು. ಆತನ ಹಿಂದೆ ಯಾರೋ ಇದ್ದಾರೆಂದು ಜೀಪ್ ಚಾಲಕನಿಗೆ ಅರಿವಾಗಿರಬೇಕು. ಯಾರಿಗೆ ಇಂತಹ ಅನುಭವವಾದರೂ ಹೆದರುತ್ತಾರೆ. ಅವರು ಹಿಂದಿನ ಅನುಭವವನ್ನು ಯೋಚಿಸಿದಾಗ ಭಯಪಡಬಹುದು. ಮೊದಲನೇ ವಿಚಾರ ಅವರ ಮನಸ್ಸಿಗೆ ಬರುವುದು "ಓಹ್! (phew) ಯಾರು ನನ್ನನ್ನು ಹಿಂದಕ್ಕೆಳೆದರು? ಅವರಿಗೆ ನಾನು ಧನ್ಯವಾದಗಳನ್ನು ಅರ್ಪಿಸಬೇಕು. ಆತ ಧನ್ಯವಾದಗಳನ್ನ ಅರ್ಪಿಸಲು ಹಿಂದೆ ತಿರುಗಿ ನೋಡುತ್ತಾನೆ. ಆದರೆ ಅಲ್ಲಿ ನಿರ್ಜನ ಮತ್ತು ಶಾಂತಿಯುತವಾದ ರಸ್ತೆ ಮಾತ್ರವಿದೆ. ಅಲ್ಲಿ ಯಾವುದೇ ವ್ಯಕ್ತಿಯಿಲ್ಲ, ಆಗ ಆತನಿಗೆ ಅರಿವಾಗುತ್ತದೆ "ಇದು ನಿಜವಾಗಿಯೂ ಗುರುಗಳು ತನ್ನನ್ನು ರಕ್ಷಿಸುತ್ತಿದ್ದಾರೆಂದು".

**ಚಾಂಗ್‌ಚುನ್ (Chang Chun)** ನಲ್ಲಿ ಸಹ ಒಂದು ಸಂಗತಿ ನಡೆಯಿತು. ಓರ್ವ ವಿದ್ಯಾರ್ಥಿಯ ಮನೆಯ ಬಳಿ ಒಂದು ಕಟ್ಟಡವನ್ನು ಕಟ್ಟುತ್ತಿದ್ದರು. ಈ ದಿನಗಳಲ್ಲಿ ಕಟ್ಟಡ ಗಳನ್ನು ಬಹು ಎತ್ತರ ಕಟ್ಟುತ್ತಾರೆ, ಎರಡು ಇಂಚು ದಪ್ಪ ಮತ್ತು ನಾಲ್ಕು ಯಾರ್ಡ್ ಉದ್ದವಿರುವ ಸ್ಟೀಲ್ ಕಂಬಿಗಳಿಂದ ಅಟ್ಟಳಿಕೆಯನ್ನು ಕಟ್ಟುತ್ತಾರೆ. ಈ ವಿದ್ಯಾರ್ಥಿಯು ಒಮ್ಮೆ ನಡೆದು ಹೋಗುತ್ತಿದ್ದಾಗ ಒಂದು ಸ್ಟೀಲ್ ರಾಡ್ ಆ ಕಟ್ಟಡದಿಂದ ಬೀಳಲಾರಂಭಿಸಿತು ಮತ್ತು ನೇರವಾಗಿ ಅದು ಆತನ ತಲೆಯ ಕಡೆಗೆ ಬೀಳಲಾರಂಭಿಸಿತು. ರಸ್ತೆಯಲ್ಲಿ ಬರುತ್ತಿ ದ್ದವರೆಲ್ಲಾ ಕಲ್ಲಾಗಿ ನಿಂತುಬಿಟ್ಟರು. ಆದರೆ ಯಾರು ತನ್ನನ್ನು ತಟ್ಟಿದರೆಂದು ಆತನು ಕೇಳಿದ? ತನ್ನ ತಲೆಯ ಮೇಲೆ ಯಾರೋ ತಟ್ಟಿದರೆಂದು ಆತ ತಿಳಿದಿದ್ದ ನಂತರ ಆತ ತಿರುಗಿ ನೋಡಿದ ಒಂದು ದೊಡ್ಡ ನಿಯಮ ಚಕ್ರವು ತನ್ನ ತಲೆಯ ಮೇಲೆ ಸುತ್ತುತ್ತಿರುವುದನ್ನು ನೋಡಿದ. ಸ್ಟೀಲ್ ರಾಡ್ ಆತನ ಪಕ್ಕದಿಂದ ಜಾರಿ ನಿಲದಲ್ಲಿ ಸಿಲುಕಿಕೊಂಡು ಮಣ್ಣಿನಲ್ಲಿ ಹೂತುಕೊಂಡಿತ್ತು. ಅದು ನಿಜವಾಗಿಯೂ ಯಾರನ್ನಾದರೂ ತಾಕಿದ್ದರೆ, ಯೋಚಿಸಿ ಅದೆಷ್ಟು ಭಾರವಾಗಿತ್ತೆಂದರೆ ಅದು ಆತನ ದೇಹವನ್ನು ಸಂಪೂರ್ಣ ಹೊಕ್ಕು ಜವುಳು ಭೂಮಿಯಲ್ಲಿ ಒಂದು ಜಾತಿಯ ಹೂವಿನ ಗಿಡ ಚುಚ್ಚಿದಂತಾಗಿತ್ತು, ಅದು ಅಷ್ಟು ಅಪಾಯಕರವಾಗಿತ್ತು.

ಇಂತಹ ಎಷ್ಟೋ ಎಣಿಸಲಾಗದಷ್ಟು ಉದಾಹರಣೆಗಳಿವೆ. ಆದರೆ ಯಾರಿಗೂ ಯಾವ ಅಪಾಯವೂ ಸಂಭವಿಸಿಲ್ಲ. ನಾವೆಲ್ಲರೂ ಇಂತಹ ಅನುಭವಗಳನ್ನು ಹೊಂದಬೇಕೆಂದೇನೂ ಇಲ್ಲ, ಆದರೆ ಕೆಲವರಿಗೆ ಇಂತಹ ಅನುಭವಗಳಾಗುತ್ತವೆ. ನಿಮಗೆ ಇಂತಹ ಅನುಭವ ಗಳಾಗಲಿ ಬಿಡಲಿ ನಾನು ನಿಮಗೆ ಗ್ಯಾರಂಟಿ ಕೊಡುತ್ತೇನೆ. ನಿಮಗೆ ಯಾವುದೇ ಅಪಾಯವಾಗುವುದಿಲ್ಲವೆಂದು – ನಾನು ನಿಮಗೆ ಭರವಸೆ ಕೊಡಬಲ್ಲೆ. ಕೆಲವು ವಿದ್ಯಾರ್ಥಿ ಗಳ ಚಟುವಟಿಕೆಗಳು ನಾವು ಇಚ್ಛಿಸಿದಂತಹ ನಡತೆಗಳಾಗಿರುವುದಿಲ್ಲ. ಅವರು ಕೇವಲ ವ್ಯಾಯಾಮವನ್ನು ಮಾಡುತ್ತಾರೆ. ತಮ್ಮ ನಡತೆಯನ್ನು ಸರಿಪಡಿಸಿಕೊಂಡಿರುವುದಿಲ್ಲ. ಆದ್ದರಿಂದ ನೀವು ಅವರನ್ನು ಅಭ್ಯಾಸಿಗರೆಂದು ಕರೆಯಲಾಗುವುದಿಲ್ಲ.

ನಿಮ್ಮ ಗುರುಗಳು ನಿಮಗೇನು ಕೊಟ್ಟರೆಂದು ನೀವು ನನ್ನನ್ನು ಕೇಳಿದರೆ, ಇದನ್ನೇ ನಾನು ನಿಮಗೆ ಕೊಡುವುದು ನಿಮ್ಮನ್ನು ನೀವು ರಕ್ಷಿಸಿಕೊಳ್ಳಲಾಗುವವರೆಗೂ ನನ್ನ ನಿಯಮದ ಅಂಗಗಳು ನಿಮಗೆ ರಕ್ಷಣೆಯನ್ನು ಒದಗಿಸುತ್ತಿರುತ್ತವೆ. ಆ ಹಂತದಲ್ಲಿ ನೀವು ತ್ರಿಪಲ್-ವರ್ಲ್ಡ್-ಲಾ ಅಭ್ಯಾಸಕ್ಕೂ ಮುಂದೆ ಹೋಗಬಲ್ಲವರಾಗಿರುತ್ತೀರಿ ಮತ್ತು ನೀವು ಡಯೋ (Dao) ಪಡೆದುಕೊಂಡಿರುತ್ತೀರಿ. ಆದರೆ ನೀವು ನಿಜವಾದ ಅಭ್ಯಾಸಿಗನಂತೆ ವರ್ತಿಸಬೇಕು, ಆ ನಂತರವೇ ನೀವು ಇದನ್ನು ಮಾಡಲು ಸಾಧ್ಯ.

---

15. **ಚಾಂಗ್‌ಚುನ್ (Chang Chun)** – ಜಿಲಿನ್ ಪ್ರಾಂತ್ಯದ ರಾಜಧಾನಿ.

ಯಾರೋ ಒಬ್ಬನಿದ್ದ, ಆತನು ನನ್ನ ಪುಸ್ತಕವನ್ನು ತನ್ನ ಕೈಯಲ್ಲಿ ತೆಗೆದುಕೊಂಡು ಈ ರೀತಿ ಕಿರುಚುತ್ತಾ ಹೊರಟ " ಲೀ ರಕ್ಷಣೆಗಾಗಿ ಗುರುಗಳಿದ್ದಾರೆ, ನನಗೆ ತಿಳಿದಿದೆ, ಕಾರುಗಳು ನನಗೆ ಹೊಡೆತ ಕೊಡಲಾರವು". ಈ ವರ್ತನೆ ದಾಫಾಗೆ ಲುಕ್ಸಾನು ಮಾಡುತ್ತದೆ ಮತ್ತು ಅಂತಹ ವ್ಯಕ್ತಿಗೆ ನಾವು ರಕ್ಷಣೆಯನ್ನೊದಗಿಸುವುದಿಲ್ಲ. ಸತ್ಯವೇನೆಂದರೆ ನಿಜವಾದ ಅನುಯಾಯಿ ಈ ರೀತಿ ವರ್ತಿಸುವುದಿಲ್ಲ.

**: Third Eye – ಮೂರನೆಯ ಕಣ್ಣು – ದಿವ್ಯ ದೃಷ್ಟಿ**

## ಶಕ್ತಿಯ ಕಾರ್ಯಕ್ಷೇತ್ರ

ಅಭಿವೃದ್ಧಿಯ ಸಾಧನೆಯನ್ನು ನಾವು ಮಾಡಲಾರಂಭಿಸಿದಾಗ ನಮ್ಮ ಸುತ್ತಲು ಒಂದು ಕಾರ್ಯಕ್ಷೇತ್ರವು ರೂಪುಗೊಳ್ಳುತ್ತದೆ. ಇದು ಯಾವ ರೀತಿಯ ಕಾರ್ಯಕ್ಷೇತ್ರ ಇದು ಕ್ವಿ (Qi – ಚೈನಾದಲ್ಲಿ 479–502 ರ ದಶಕಗಳಲ್ಲಿ ಆಳುತ್ತಿದ್ದಂತಹ ಎರಡು ರಾಜವಂಶಗಳು ಪರಿಪಾಲಿಸುತ್ತಿದ್ದಂತಹ ನೀತಿ ನಿಯಮಗಳು) ಅಥವಾ ಆಯಸ್ಕಾಂತ ಕಾರ್ಯಕ್ಷೇತ್ರ ಅಥವಾ ವಿದ್ಯುತ್ ಕಾರ್ಯಕ್ಷೇತ್ರವೆಂದು ಕೆಲವರು ಹೇಳುತ್ತಾರೆ. ಆದರೆ ನಿಜದಲ್ಲಿ ಅದ್ಯಾವುದೂ ಅಲ್ಲ ನೀವು ಇದನ್ನು ಹೇಗಾದರೂ ಕರೆಯಬಹುದು, ಅದು ತಪ್ಪಾಗಲಾರದು. ಕಾರಣವೇನೆಂದರೆ, ಈ ಕಾರ್ಯಕ್ಷೇತ್ರವು ಯಾವ ವಿಷಯವನ್ನು ಹೊಂದಿದೆಯೋ ಅದು ನಂಬಿಕೆಗೆ ಮೀರಿದ್ದಾಗಿರುತ್ತದೆ. ವಿಶ್ವದ ಎಲ್ಲಾ ಆಯಾಮಗಳನ್ನು ಒಳಗೊಂಡಿರುವ ಹೆಚ್ಚಿನ ಸಂಖ್ಯೆಯು ಎಲ್ಲಾ ವಿಷಯಗಳನ್ನು ಈ ಕೃಷಿಶಕ್ತಿಯು ಒಳಗೊಂಡಿರುತ್ತದೆ. ಆದ್ದರಿಂದ ಇದು ಸ್ವಲ್ಪ ಹೆಚ್ಚಿನ ಮಟ್ಟಕ್ಕೆ ಕಾರ್ಯಕ್ಷೇತ್ರವೆಂದು ಕರೆಯಲು ಸಮಂಜಸವಾಗಿರುತ್ತದೆ. ಆದ್ದರಿಂದಲೇ ಸಾಮಾನ್ಯವಾಗಿ ಇದನ್ನು ಕಾರ್ಯಕ್ಷೇತ್ರವೆಂದು ಕರೆಯುತ್ತೇವೆ. ಹಾಗಿದ್ದರೆ ಈ ಕಾರ್ಯ ಕ್ಷೇತ್ರದ ಯಾವ ಪರಿಣಾಮವನ್ನು ಹೊಂದಿರುತ್ತದೆ? ನಿಮಗೆ ತಿಳಿದಿರುವಂತೆ ಸತ್ಯ ಬೋಧನೆಯನ್ನು ಅಭ್ಯಾಸ ಮಾಡುವಂತಹ ನಾವು ಇದರ ಅನುಭವವನ್ನು ಪಡೆದಿದ್ದೇವೆ. ಅಂದಿನಿಂದಲೂ ನಾವು ಸತ್ಯಬೋಧನೆಯ ಅಭ್ಯಾಸಕ್ಕೆ ಒಳಗಾಗುವುದರಿಂದ ಇದು ನಮಗೆ ಅನುಕಂಪವನ್ನು ಒತ್ತಿ ಹೇಳುತ್ತದೆ. ಮತ್ತು ವಿಶ್ವದ ಸೃಷ್ಟಿಯೊಂದಿಗೆ ಸಮಗೊಳ್ಳುತ್ತದೆ. ಸತ್ಯವಾಗಿ ಹೇಳಬೇಕೆಂದರೆ ಒಳ್ಳೆಯ ಯೋಗ್ಯ ಮತ್ತು ನಮ್ಮ ವಿದ್ಯಾರ್ಥಿಗಳು ಈ ಕಾರ್ಯಕ್ಷೇತ್ರದಲ್ಲಿ ಕುಳಿತುಕೊಂಡಾಗ ಅವರ ಮನಸ್ಸುಗಳು ಕೆಟ್ಟ ವಿಚಾರಗಳಿಂದ ಮುಕ್ತ ವಾಗಿರುತ್ತದೆ. ಹೆಚ್ಚಿನ ಮಂದಿ ವಿದ್ಯಾರ್ಥಿಗಳು ಇಲ್ಲಿ ಕುಳಿತಿರುವಾಗ ಧೂಮಪಾನದ ಬಗ್ಗೆ ಸಹ ಚಿಂತಿಸುವುದಿಲ್ಲ. ಇದು ನಿಜವಾಗಿಯೂ ಶಾಂತಿಯುತ ವಾತಾವರಣವೆಂದು ಪ್ರತಿಯೊಬ್ಬರೂ ತಿಳಿದುಕೊಳ್ಳುತ್ತಾರೆ. ಶಕ್ತಿಯ ಕಾರ್ಯಕ್ಷೇತ್ರದ ಒಳಶ್ರೇಣಿಯಲ್ಲಿನ ಇದರ ಪರಿಣಾಮವು ಸತ್ಯಬೋಧನೆಯ ಅಭ್ಯಾಸವನ್ನು ಮಾಡುವವನಿಗಿರುತ್ತದೆ. ನೀವು ಈ ವರ್ಗ ವನ್ನು ಬಿಡುವ ವೇಳೆಗೆ ನಿಮಗೆ ಕೃಷಿಶಕ್ತಿಯುಂಟಾಗುತ್ತದೆ. ಸತ್ಯವಾಗಿಯೂ ನಿಮ್ಮಲ್ಲಿ ಕೃಷಿಶಕ್ತಿಯಿರುತ್ತದೆ. ಏಕೆಂದರೆ ನಾನು ನಿಮಗೆ ಮುಟ್ಟಿಸಿರುವ ವಿಷಯಗಳು ಸತ್ಯವಾದ ಅಭ್ಯಾಸದ ವಿಷಯಗಳು ಮತ್ತು ಈ ನಡತೆಯ ಅಗತ್ಯದ ಆಧಾರದ ಮೇಲೆ ನಿಮ್ಮನ್ನು ನೀವು ಶಿಸ್ತುಗೊಳ್ಳುತ್ತೀರಿ. ನೀವು ಬಿಡದೆ ಈ ಅಭ್ಯಾಸವನ್ನು ಮಾಡುತ್ತಿದ್ದರೆ ನಿಮ್ಮ ನಡತೆಯ ಅಗತ್ಯತೆಯ ಆಧಾರದ ಮೇಲೆ ನಿಮ್ಮ ಶಕ್ತಿಯು ಸ್ಥಿರವಾಗಿ ಏಕಪ್ರಕಾರವಾಗಿ ಹೆಚ್ಚು ಹೆಚ್ಚಾಗುತ್ತದೆ.

ನಾವು ನಮ್ಮನ್ನು ಕಾಪಾಡಿಕೊಳ್ಳುವುದರ ಜೊತೆಗೆ ಇಂದ್ರೀಯ ಜ್ಞಾನಯುಕ್ತ ಹೊಂದಿರುವ ವ್ಯಕ್ತಿಯನ್ನು ನಂಬುತ್ತೇವೆ. ಎಲ್ಲಾ ಚೇತನಯುಕ್ತ ಜೀವಿಸಿರುವ ವ್ಯಕ್ತಿಗಳನ್ನು ಕಾನೂನಿನ ಚಕ್ರವು ನಮ್ಮೊಳಗೆ ತಿರುಗಿದಾಗ ಅದು ನಮ್ಮನ್ನು ಕಾಪಾಡುತ್ತದೆ. ಕಾನೂನಿನ ಚಕ್ರವು ಹೊರ ತಿರುಗಿದಾಗ ಇತರರನ್ನು ಅದು ಕಾಪಾಡುತ್ತದೆ. ಇದು ಮಾಡುವುದರಿಂದ ಯಾವ ವ್ಯಕ್ತಿಗಳು ನಿಮ್ಮ ಶಕ್ತಿಯ ವ್ಯಾಪ್ತಿಗೆ ಒಳಪಡುತ್ತಾರೋ ಅವರಿಗೆಲ್ಲಾ ಉಪಯೋಗವಾಗುತ್ತದೆ ಅಥವಾ ಅವರು ಅತ್ಯುತ್ತಮರೆಂಬ ಅನುಭೂತಿಯುಂಟಾಗುತ್ತದೆ. ಈ ಒಂದು ಪರಿಣಾಮವು ನೀವೆಲ್ಲಿದ್ದರೂ ಆಗುತ್ತದೆ. ನೀವು ರಸ್ತೆಯಲ್ಲಿ ನಡೆಯುತ್ತಿರು ವಾಗಲೇ, ಕೆಲಸದ ಮೇಲಿರುವಾಗಲೇ ಅಥವಾ ಮನೆಯಲ್ಲಿರುವಾಗಲೇ ಅಥವಾ ಎಲ್ಲಿದ್ದ ರಾಗಲೀ ನಿಮಗೆ ತಿಳಿಯದೆಯೇ ನಿಮ್ಮ ಶಕ್ತಿಯ ಕಾರ್ಯಕ್ಷೇತ್ರದೊಳಗೆ ಪ್ರಾಪ್ತಿ ಬಂದಂತಹವರನ್ನು ಹೊಂದಿಸಿಕೊಂಡಿರುತ್ತೀರಿ. ಏಕೆಂದರೆ ಈ ಕ್ಷೇತ್ರವು ತಪ್ಪು ಸ್ಥಿತಿಗಳನ್ನು ನೆಲೆಗೊಳಿಸುತ್ತದೆ. ಒಬ್ಬ ವ್ಯಕ್ತಿಯ ದೇಹವು ಖಾಯಿಲೆಯಿಂದಿರಬಾರದು ಅಥವಾ ಗಾಯ ವಾಗಿರಬಾರದು. ಖಾಯಿಲೆಗಳಿರುವುದು ಕೆಟ್ಟ ಸ್ಥಿತಿ

ಮತ್ತು ಅದು ಕೆಟ್ಟ ಸ್ಥಿತಿಯನ್ನು ಸರಿಪಡಿಸಬಲ್ಲದು. ಯಾರಿಗೆ ಕೆಟ್ಟ ವಿಚಾರಗಳಿರುತ್ತದೆಯೋ ಅವರು ಕೆಟ್ಟ ಯೋಚನೆ ಮಾಡುತ್ತಾರೆ. ನಿಮ್ಮ ಶಕ್ತಿಯುತ ಕಾರ್ಯಕ್ಷೇತ್ರದಿಂದ ಅವರು ತಮ್ಮ ವಿಚಾರಗಳನ್ನು ಬದಲಾಯಿಸಿಕೊಳ್ಳಬಹುದು. ಆ ಕ್ಷಣಕ್ಕಾದರೂ ಅವರು ಕೆಟ್ಟ ವಿಚಾರಗಳ ಕೈ ಬಿಡಬಹುದು. ಯಾರಾದರೂ ಇನ್ನೊಬ್ಬರ ಬಗ್ಗೆ ಕೆಟ್ಟದಾಗಿ ಮಾತನಾಡ ಬಯಸಬಹುದು. ಮನೋವ್ಯಥೆ ಯಿಂದ ಈತನು ತನ್ನ ಮನಸ್ಸನ್ನು ಬದಲಾಯಿಸಿ ಆತನ ಬಗ್ಗೆ ಮುಂದೆಂದೂ ಕೆಟ್ಟ ಮಾತನಾಡದಿರಬಹುದು. ಕೇವಲ ಸತ್ಯ ಬೋಧನೆಯಿಂದ ಅಭ್ಯಾಸ ಮಾಡಿದ ಶಕ್ತಿಯ ಕಾರ್ಯಕ್ಷೇತ್ರಕ್ಕೆ ಮಾತ್ರ ಇಂತಹ ಪರಿಣಾಮವಿರುತ್ತದೆ. ಆದ್ದರಿಂದಲೇ ಬೌದ್ಧ ಧರ್ಮದಲ್ಲಿ ಒಂದು ಮಾತಿದೆ. ಬುದ್ಧನ ಬೆಳಕು ಎಲ್ಲೆಡೆ ಹೊಳೆಯುತ್ತದೆ. ಯುಕ್ತತೆ ಮತ್ತು ಪ್ರಾಮಾಣಿಕತೆಯು ಎಲ್ಲದರಲ್ಲಿಯೂ ಸಾಮರಸ್ಯವನ್ನುಂಟು ಮಾಡುತ್ತದೆ. ಇದೇ ಅದರ ಅರ್ಥ.

## ಫಾಲೂನ್ ದಾಫಾದ ವಿದ್ಯಾರ್ಥಿಗಳು ತಮ್ಮ ಅಭ್ಯಾಸವನ್ನು ಹೇಗೆ ಹರಡಬೇಕು

ಅಭ್ಯಾಸದ ನಂತರ ಎಲ್ಲಾ ವಿದ್ಯಾರ್ಥಿಗಳು ತಮ್ಮ ಮನೆಗೆ ಹಿಂದೆರಳಿದಾಗ ಈ ಅಭ್ಯಾಸವು ಮಹತ್ವದ್ದು ಎಂದೆನಿಸುತ್ತದೆ ಮತ್ತು ಅವರ ಕುಟುಂಬದೊಂದಿಗೆ ಹಾಗೂ ಸ್ನೇಹಿತರೊಂದಿಗೆ ಹಂಚಿಕೊಳ್ಳಲು ಬಯಸುತ್ತಾರೆ. ಸರಿ, ಅದು ಒಳ್ಳೆಯದೆ, ನೀವು ಹಂಚಿ ಕೊಳ್ಳಬಹುದು – ಅದನ್ನು ಯಾರಿಗಾದರೂ ಹೇಳಿಯೂ ಕೊಡಬಹುದು. ಆದರೆ ನಾನು ನಿಮಗೆ ಒಂದು ವಿಚಾರವನ್ನು ಸ್ಪಷ್ಟಪಡಿಸಲಿಚ್ಛಿಸುತ್ತೇನೆ. ನಾವು ನಿಮಗೆ ಬೇಕಾದುದನ್ನು ನೀಡುತ್ತೇವೆ. ಆದರೆ ನೀವು ಅದಕ್ಕೆ ಬೆಲೆ ಕಟ್ಟುವುದು ಸರಿಯಲ್ಲ. ನಾವು ಇದನ್ನು ಏಕೆ ಕೊಡುತ್ತೇವೆ? ನಿಮಗೆ ಅಭ್ಯಾಸ ಮಾಡಲು! ನೀವು ಅಭ್ಯಾಸ ಮಾಡುವುದಾದರೆ ಮಾತ್ರ ನಾವು ನಿಮಗೆ ಇದನ್ನು ಕೊಡಲು ಸಾಧ್ಯ. ಇದರ ಅರ್ಥವೇನೆಂದರೆ, ನೀವು ಇದನ್ನು ಬೇರೆಯವರಿಗೆ ಬೋಧಿಸಬಹುದು. ಆದರೆ ನಿಮಗೆಂದೆ ಲಾಭ ಪಡೆಯಲು ಅಥವಾ ಖ್ಯಾತಿ ಪಡೆಯಲು ಉಪಯೋಗಿಸಲಾಗುವುದಿಲ್ಲ. ಹೀಗಾಗಿ ನೀವು ನನ್ನ ಹಾಗೆ ತರಬೇತಿ ಕೊಟ್ಟು ಹಣ ತೆಗೆದುಕೊಳ್ಳುವ ಹಾಗಿಲ್ಲ. ಪುಸ್ತಕ ಅಥವಾ ಇನ್ನಿತರವುಗಳನ್ನು ಮುದ್ರಿಸುವ ಸಲುವಾಗಿ, ನಮ್ಮದೇ ಆದ ಆದಾಯಗಳು ನಮಗಿರುತ್ತವೆ ಮತ್ತು ನಮ್ಮ ಅಭ್ಯಾಸಗಳನ್ನು ಹರಡಲು ಸಂಚರಿಸಬೇಕಾಗುತ್ತದೆ. ನಮ್ಮ ದೇಶದಲ್ಲಿ ಇದಕ್ಕೆ ಕನಿಷ್ಠ ಬೆಲೆಯನ್ನು ತೆಗೆದು ಕೊಳ್ಳುತ್ತೇವೆ. ನಾವು ನಿಜವಾಗಿಯೂ ಜನರನ್ನು ಉತ್ತಮ ಮಟ್ಟಕ್ಕೇರಿಸಲು ಮಾರ್ಗದರ್ಶನ ನೀಡುತ್ತಿದ್ದೇವೆ ಮತ್ತು ಮುಂದಿನದ್ದೇನು ಎಂದು ನಿಮಗೆ ತಿಳಿದಿದೆ. ನೀವೊಬ್ಬ ಫಾಲೂನ್ ದಾಫಾದ ವಿದ್ಯಾರ್ಥಿ ನೀವು ಮುಂದೆ ಎಂದಾದರೂ ಬೋಧನೆ ಮಾಡಲು ಬಯಸಿದ್ದಲ್ಲಿ ನಿಮಗೆ ಎರಡು ನಿಯಮಗಳನ್ನು ಹೇಳುತ್ತೇವೆ.

ಮೊದಲನೆಯ ನಿಯಮವೇನೆಂದರೆ, ನೀವು ಇದಕ್ಕೆ ಯಾವ ರೀತಿಯಲ್ಲೂ ಹಣ ತೆಗೆದುಕೊಳ್ಳುವ ಹಾಗಿಲ್ಲ. ನೀವು ಹಣವಂತರಾಗಲು ಹಾಗೂ ಪ್ರಖ್ಯಾತರಾಗಲು ಬೇಕಾದಂತಹ ಯಾವುದೇ ವಸ್ತುವನ್ನು ನಿಮಗೆ ನಾವು ನೀಡುವುದಿಲ್ಲ. ಆದರೆ ನಿಮ್ಮನ್ನು ನೀವು ಕಾಪಾಡಿಕೊಳ್ಳುವುದಕ್ಕೆ ಮತ್ತು ಅಭ್ಯಾಸ ಮಾಡಿಕೊಳ್ಳಲು ಮಾತ್ರ ಕೊಡುತ್ತೇವೆ. ನೀವು ಹಣವನ್ನು ಸುಲಿಗೆ ಮಾಡಿದರೆ ನಿಯಮ ದಳಗಳು ನಿಮ್ಮಿಂದ ಎಲ್ಲವನ್ನು ಹಿಂಪಡೆಯುತ್ತದೆ. ಮತ್ತು ನೀವು ನಮ್ಮ ಫಾಲೂನ್ ದಾಫಾಗೆ ಸೇರಿದವರಾಗಿರುವುದಿಲ್ಲ ಮತ್ತು ನೀವು ಮಾಡುವ ಪ್ರಚಾರ ಫಾಲೂನ್ ದಾಫಾದ್ದು ಆಗಿರುವುದಿಲ್ಲ.

ನೀವು ಇದರ ವಿಷಯವನ್ನು ಅಭ್ಯಾಸಿಸುವಾಗ ಹೆಸರು ಮಾಡಬೇಕೆಂಬ ಯೋಚನೆ ಯನ್ನು ಇಟ್ಟುಕೊಳ್ಳಬಾರದು ಅಥವಾ ಇದರಿಂದ ಯಾವುದನ್ನು ನಿರೀಕ್ಷೆ ಮಾಡಬಾರದು. ನೀನು ಸ್ವಇಚ್ಛೆಯಿಂದ ಸಹಾಯ ಮಾಡಬೇಕು. ದೇಶದಾದ್ಯಂತ ನನ್ನ ಅನುಯಾಯಿಗಳು ಈ ರೀತಿಯ ಬೋಧನೆ ಮಾಡುತ್ತಿದ್ದಾರೆ ಹಾಗೂ ನನ್ನ ಅನುಯಾಯಿಗಳೇ ಅದಕ್ಕೆ ಒಂದು ಒಳ್ಳೆಯ ಉದಾಹರಣೆ ಯಾರೇ ಆಗಲಿ ನಮ್ಮ ಅಭ್ಯಾಸವನ್ನು ಕಲಿಯಲು ಇಚ್ಛಿಸಿದಲ್ಲಿ ಬಂದು ಕಲಿಯಬಹುದು, ನಿಮ್ಮ ಜವಾಬ್ದಾರಿಯನ್ನು ನಾವು ತೆಗೆದುಕೊಳ್ಳುತ್ತೇವೆ ಹಾಗೂ ಒಂದು ನಯಾ ಪೈಸೆಯನ್ನು ಕೇಳುವುದಿಲ್ಲ.

ಎರಡನೆಯ ನಿಯಮವೇನೆಂದರೆ, ನೀವು ನಿಮ್ಮದೆ ಆದ ತರ್ಕವನ್ನು ಫಾಲೂನ್ ದಾಫಾದ ಜೊತೆಗೆ ಸೇರಿಸುವಂತಿಲ್ಲ. ಇತರ ಮಾತುಗಳಲ್ಲಿ ಹೇಳುವುದಾದರೆ ನೀವು ಅಭ್ಯಾಸವನ್ನು ಹರಡುವಾಗ ನಿಮ್ಮ ಮೂರನೆಯ ಕಣ್ಣು ತೆರೆದಿರಬೇಕೆಂದಿಲ್ಲ. ನೀವು ಏನನ್ನೆ ನೋಡಿದರೂ ಅಥವಾ ನಿಮ್ಮ ಸಾಮರ್ಥ್ಯಗಳು ಏನೇ ಆಗಿದ್ದರು, ಅವುಗಳ ಆಧಾರದ ಮೇಲೆ ಫಾಲೂನ್ ದಾಫಾದ ಬಗ್ಗೆ ಮಾತನಾಡುವ ಹಾಗಿಲ್ಲ. ನಿಮ್ಮ ಹಂತಕ್ಕೆ ನೀವು ನೋಡುವಂತಹ ಸಣ್ಣ ಸಣ್ಣ ವಿಷಯಗಳು ಅಷ್ಟರಲ್ಲೇ ಇರುತ್ತವೆ ಮತ್ತು ನಾವು ಬೋಧಿಸುವ ಸತ್ಯಕ್ಕಿಂತ ಬಹಳ ದೂರವಿರುತ್ತವೆ. ಇನ್ನು ಮುಂದೆ ನೀವು ಫಾಲೂನ್ ದಾಫಾವನ್ನು ಹರಡುವ ಮುನ್ನ ಒಂದು ವಿಚಾರವನ್ನು ಮನಸ್ಸಿನಲ್ಲಿಟ್ಟುಕೊಳ್ಳಬೇಕು. ಏನೆಂದರೆ ಫಾಲೂನ್ ದಾಫಾದ ಮೂಲ ಸಂಗತಿಗಳನ್ನು ಯಾವ ಕಾರಣಕ್ಕೂ ಬದಲಾವಣೆಯಾಗದಿರಲಿ.

ಹಾಗೆಯೇ ಈ ಅಭ್ಯಾಸವನ್ನು ನಾನು ಬೋಧಿಸುವ ಹಾಗೆ, ನೀವು ಮಾಡುವ ಹಾಗಿಲ್ಲ, ನಾನು ಹೆಚ್ಚು ಸಂಖ್ಯೆಯ ಪ್ರೇಕ್ಷಕರಿಗೆ ಹೇಗೆ ಮಾಡುವೆನೊ, ನೀವು ಹಾಗೆಯೇ ಮಾಡುವಂತಿಲ್ಲ – ನೀವು ನಿಯಮವನ್ನು ಬೋಧನೆ ಮಾಡಲು ಅಶಕ್ತರು. ಕಾರಣ ವೇನೆಂದರೆ ನಾನು ಏನು ಬೋಧಿಸುತ್ತೇನೊ ಅದರ ಅರ್ಥ ಬಹಳ ಗಾಢವಾದದ್ದು ಮತ್ತು ವಿಶಾಲವಾದದ್ದು ಮತ್ತು ನಾನು ಬೋಧಿಸುವ ವಿಷಯಗಳಲ್ಲಿ ಉನ್ನತ ಮಟ್ಟದ ವಿಷಯ ಗಳಿರುತ್ತವೆ. ನೀನು ಭಿನ್ನ ಹಂತದಲ್ಲಿ ಅಭ್ಯಾಸಿಸುತ್ತೀಯ ಮತ್ತು ಕಾಲ ಕಳೆದಂತೆ ಅಭಿವೃದ್ಧಿ ಹೊಂದಿರುತ್ತೀಯ ಮತ್ತು ಕೇಳಿದ್ದನ್ನೆ ಕೇಳಿದರೆ ನಿನಗೆ ಇನ್ನು ಸುಲಭವಾಗಿ ಅರ್ಥವಾಗುತ್ತದೆ. ಹಾಗೆಯೇ ಕಲಿಕೆಯನ್ನು ಆನಂದಿಸುತ್ತೀಯ, ಇವೆಲ್ಲವನ್ನು ಪುಸ್ತಕ ರೂಪದಲ್ಲಿ ನೀನು ಅನುಗ್ರಹಿಸಿದರೆ, ಹೀಗೆಯೇ ಎಲ್ಲವನ್ನು ಕಲಿಯಬಹುದು, ನಾನು ನನ್ನ ಬೋಧನೆಗಳಲ್ಲಿ ಗಾಢವಾದ ವಿಷಯಗಳನ್ನು ಅಳವಡಿಸಿದ್ದೇನೆ, ಹೀಗಾಗಿ ಈ ನಿಯಮ ನಿಮ್ಮ ಹಂತಕ್ಕೆ ಬೋಧನೆ ಮಾಡುವ ವಿಚಾರವಲ್ಲ, ನಾನು ಬಳಸಿದ ಪದಗಳನ್ನು ನಿಮ್ಮದೇ ಎಂದು ಬೋಧಿಸುವ ಹಾಗಿಲ್ಲ. ಹಾಗೇನಾದರೂ ಮಾಡಿದ್ದಲ್ಲಿ ಅದು ಕೃತಿ ಚೌರ್ಯ ಮಾಡಿದಂತಾಗುತ್ತದೆ.

ಇದಕ್ಕೆ ಇರುವ ಒಂದೇ ಮಾರ್ಗವೇನೆಂದರೆ ನನ್ನ ಮೂಲಪದಗಳನ್ನು ಉಪಯೋಗಿಸಿ, ಗುರುಗಳು ಹೀಗೆಯೇ ಹೇಳಿರುತ್ತಾರೆ ಅಥವಾ ಪುಸ್ತಕದಲ್ಲಿ ಹೀಗೆಯೇ ಇರುವುದು ಎಂದು ಸೇರಿಸಿ ಹೇಳಬೇಕು. ಇದೊಂದೆ ಮಾರ್ಗದಲ್ಲಿ ಮಾತ್ರ ಬೋಧನೆ ಮಾಡಬಹುದು. ಮತ್ತೇಕೆ ಹೀಗೆ? ಏಕೆಂದರೆ ನೀವು ಅದರ ಬಗ್ಗೆ ಮಾತನಾಡಿದಾಗ ನಿಮ್ಮ ಮಾತಿನಲ್ಲಿ ಮಹತ್ವದ ನಿಯಮದ ಬಲವಿರುತ್ತದೆ. ಫಾಲೂನ್ ದಾಫಾ ನಿಮ್ಮದೇ ಎಂದು ನಿಮ್ಮ ಮನಸ್ಸಿಚ್ಚೆಯಿಂದ ಬೋಧಿಸುವ ಹಾಗಿಲ್ಲ. ಹಾಗೆ ಮಾಡಿದಲ್ಲಿ ಅದು ಫಾಲೂನ್ ದಾಫಾ ಆಗಿರುವುದಿಲ್ಲ. ಹಾಗೂ ನೀವು ಬೋಧಿಸುವ ವಿಷಯಗಳು ಫಾಲೂನ್ ದಾಫಾಗೆ ಹಾನಿ ಮಾಡಿದಂತಾಗುತ್ತದೆ. ನೀವು ನಿಮ್ಮ ಕಲ್ಪನೆಯ ಅಥವಾ ತಿಳುವಳಿಕೆಯ ಆಧಾರದ ಮೇಲೆ ಏನಾದರೂ ಹೇಳಿದಲ್ಲಿ, ಅದು ನಿಯಮ ಎನಿಸಿಕೊಳ್ಳುವುದಿಲ್ಲ. ಮತ್ತು ಅದು ಜನ ಗಳನ್ನು ಉಳಿಸುವುದಿಲ್ಲ ಹಾಗೂ ಪರಿಣಾಮಕಾರಿಯಾಗಿರುವುದಿಲ್ಲ. ಹೀಗಾಗಿ ಈ ನಿಯಮವನ್ನು ಯಾರಿಂದಲೂ ಬೋಧಿಸಲು ಸಾಧ್ಯವಿಲ್ಲ.

ನೀವು ಅಭ್ಯಾಸವನ್ನು ಹರಡುವ ರೀತಿ ಹೇಗಿರಬೇಕೆಂದರೆ, ವಿದ್ಯಾರ್ಥಿಗಳಿಗೆ ಅಭ್ಯಾಸ ಸ್ಥಳದಲ್ಲಿ ಶ್ರವಣೋಪಕರಣವನ್ನಾಗಲಿ ಅಥವಾ ಚಲನಚಿತ್ರೀಕರಣದಿಂದಾಗಲಿ ಬೋಧಿಸಬೇಕು. ಮತ್ತು ವ್ಯಾಯಾಮವನ್ನು ಬೋಧಿಸಲು ಅಲ್ಲಲ್ಲಿ ಸಹಾಯಕರನ್ನು ಇರಿಸ ಬೇಕು. ನೀವು ಗುಂಪು ಚರ್ಚೆಯ ವ್ಯವಸ್ಥೆಯನ್ನು ಉಪಯೋಗಿಸಬಹುದು. ಏಕೆಂದರೆ ಜನಗಳು ಇತರರೊಂದಿಗೆ ಚರ್ಚಿಸಿ ಹಂಚಿಕೊಳ್ಳುವುದರ ಮೂಲಕ ಹಲವಾರು ವಿಷಯಗಳನ್ನು ಕಲಿಯುತ್ತಾರೆ. ನೀವು ಅದೇ ರೀತಿ ಕಲಿಸಬೇಕೆಂದೇ ನಮ್ಮ ಬಯಕೆ. ಈಗ ಇನ್ನೊಂದು ದೊಡ್ಡ ವಿಚಾರವೇನೆಂದರೆ ಫಾಲೂನ್ ದಾಫಾವನ್ನು ಬೋಧನೆ ಮಾಡುವ ವಿದ್ಯಾರ್ಥಿಯನ್ನು ಪಾರಂಗತ ಅಥವಾ ಗುರು ಅಥವಾ ಇನ್ನಾವುದೇ ರೀತಿಯಲ್ಲಿ ಕರೆಯ ಬಾರದು. ದಾಫಾದಲ್ಲಿ ಒಬ್ಬನೇ ಒಬ್ಬನು ಪಾರಂಗತ ಮಾತ್ರ ಇರುತ್ತಾನೆ. ಯಾರು ಈ ಅಭ್ಯಾಸವನ್ನು ಎಷ್ಟೇ ಬೇಗ ಕಲಿತರು, ಅವರು ಅನುಯಾಯಿಗಳಾಗಿಯೇ ಉಳಿಯುತ್ತಾರೆ.

ನೀವು ಈ ಅಭ್ಯಾಸವನ್ನು ಹರಡುವಾಗ ನಿಮ್ಮಲ್ಲಿ ಯಾರಾದರೊಬ್ಬರು ಆಶ್ಚರ್ಯ ಪಡಬಹುದು. ಏನೆಂದರೆ ಗುರುಗಳು ಮನುಷ್ಯರಲ್ಲಿ ನಿಯಮ ಚಕ್ರವನ್ನು ಇರಿಸಿ ಮತ್ತು ಅವರ ದೇಹವನ್ನು ಮರು ವ್ಯವಸ್ಥೆ ಮಾಡುತ್ತಾರೆ. ಆದರೆ ನಮ್ಮ ಕೈಯಲ್ಲಿ ಆಗುವ ಕೆಲಸ ಅದಲ್ಲ. ಯೋಚಿಸಬೇಡಿ, ನಾನೀಗ ನಿಮಗೆ ಮರು ಆಶ್ವಾಸನೆ ಕೊಡುತ್ತೇನೆ. ಪ್ರತಿಯೊಬ್ಬ ವಿದ್ಯಾರ್ಥಿಯ ಹಿಂದೆ ನನ್ನ ನಿಯಮ ದಳಗಳು ಆ ಕೆಲಸಗಳನ್ನು ಮಾಡುತ್ತವೆ. ನೀವು ಯಾರಿಗಾದರೂ ಬೋಧಿಸಿದ್ದಲ್ಲಿ ಆ ಕ್ಷಣದಲ್ಲೇ ಅವನಿಗೆ ನಿಯಮಚಕ್ರ ಸಿಗುತ್ತದೆ ಮತ್ತು ಅದರೊಂದಿಗೆ ಅವನ ಸಂಚಿತ ಕರ್ಮ ಬೆಳೆದುಕೊಳ್ಳುತ್ತದೆ.

ಒಂದು ವೇಳೆ ಅವನಲ್ಲಿ ಕಡಿಮೆ ಇದ್ದಲ್ಲಿ ಅವನ ದೇಹ ಮರುಸಮತೋಲನ ಗೊಂಡಾಗ ಅಭ್ಯಾಸ ಮಾಡಿದ್ದಲ್ಲಿ ಅವನಿಗೆ ನಿಧಾನವಾಗಿ ನಿಯಮ ಚಕ್ರ ಬರುವುದು ಮತ್ತು ನನ್ನ ನಿಯಮ ದಳಗಳು ಅವನನ್ನು ಸಮತೋಲನಗೊಳಿಸಲು ಸದಾ ಅವನ ಸಹಾಯಕ್ಕಿರುತ್ತವೆ. ಇನ್ನು ಹಲವಾರು ವಿಧಾನಗಳನ್ನು ನಾನು ನಿಮಗೆ ಹೇಳಬಲ್ಲೆ ಯಾವ ವ್ಯಕ್ತಿಗಳು ನನ್ನ ನಿಯಮದ ಪುಸ್ತಕದ ಮೂಲಕ ಅಭ್ಯಾಸ ಮಾಡುವವರೋ ಅಥವಾ ಚಲನಚಿತ್ರದ ಮೂಲಕ ತಿಳಿಯುವವರೋ ಅಥವಾ ಶ್ರವಣೋಪಕರಣ ಕೇಳುವವರೋ, ಅವರು ನಿಜವಾದ ಅಭ್ಯಾಸಿಗರಾಗಿದ್ದರೆ, ಅವರಿಗೆ ಬೇಕಾದ ವಿಷಯಗಳು ಬೇಕಾದಷ್ಟು ಖಂಡಿತ ವಾಗಿಯೂ ಸಿಗುತ್ತವೆ.

ನಾವು ನಮ್ಮ ವಿದ್ಯಾರ್ಥಿಗಳಿಗೆ ಇತರರನ್ನು ಗುಣಪಡಿಸಲು ಬಿಡುವುದಿಲ್ಲ. ಫಾಲೂನ್ ದಾಫಾದ ವಿದ್ಯಾರ್ಥಿಗಳಿಗೆ ಗುಣಪಡಿಸುವ ಅನುಮತಿಯೇ ಇಲ್ಲ, ನಾವು ಹೇಳಿಕೊಡುವುದು ಅಭ್ಯಾಸ ಮಾಡಲು ಹೊರತು, ನಿಮಗೆ ಯಾವ ಒಂದು ಸಂಬಂಧವನ್ನು ಬೆಳೆಸಿಕೊಳ್ಳಲು ಬಿಡುವುದಿಲ್ಲ. ನಾವು ಅಭ್ಯಾಸ ಮಾಡುವ ಕ್ಷೇತ್ರ ಬೇರೆ ಕ್ಷೇತ್ರಕ್ಕಿಂತಲೂ ಉನ್ನತವಾಗಿರುತ್ತದೆ ನೀವು ಈ ಕ್ಷೇತ್ರದಲ್ಲಿ ಅಭ್ಯಾಸ ಮಾಡಿದ್ದೇ ಆದಲ್ಲಿ ನಿಮ್ಮ ಶರೀರದ ತೊಂದರೆಗಳಿಗೆ ಚಿಕಿತ್ಸೆ ಪಡೆಯುತ್ತಿದ್ದಲ್ಲಿ ಈ ವ್ಯಾಯಾಮವನ್ನು ಬಿಡುವುದೇ ಲೇಸು. ನನ್ನ ನಿಯಮ ದಳಗಳು ವೃತ್ತಾಕಾರದಲ್ಲಿ ಕುಳಿತಿರುತ್ತವೆ. ನಾವು ಅಭ್ಯಾಸ ಮಾಡುವ ಶಕ್ತಿ ಕ್ಷೇತ್ರದ ಮೇಲೆ ಒಂದು ಗುಮ್ಮಟವಿರುತ್ತದೆ. ಗುಮ್ಮಟದ ಮೇಲೆ ಒಂದು ದೊಡ್ಡ ನಿಯಮ ಚಕ್ರವಿರುತ್ತದೆ ಮತ್ತು ದೊಡ್ಡ ನಿಯಮ ದಳ ಅದರ ಕಾವಲಿಗಿರುತ್ತದೆ. ಇದು ಸಾಮಾನ್ಯ ಕ್ಷೇತ್ರವಲ್ಲ ಇದು ಸಾಮಾನ್ಯ ಅಭ್ಯಾಸ ಕ್ಷೇತ್ರವಲ್ಲ, ಇದು ಕೃಷಿಕ್ಷೇತ್ರ. ಫಾಲೂನ್ ದಾಫಾದ ಸಂಪೂರ್ಣ ಸಂಗತಿಯು ಕೆಂಪಗಿದ್ದು, ಕೆಂಪು ದೀಪದಿಂದ ಆವೃತ್ತಗೊಂಡಿರುತ್ತದೆ. ಇದನ್ನು ಸಾಮಾರ್ಥ್ಯವಿರುವ ಹೆಚ್ಚು ಮಂದಿ ಕಂಡಿದ್ದಾರೆ.

ನನ್ನ ನಿಯಮ ದಳಗಳು ತಾನಾಗಿಯೇ ನಿಯಮ ಚಕ್ರವನ್ನು ಇರಿಸುತ್ತದೆ. ಆದರೆ ನಿಮ್ಮ ಬಂಧಗಳನ್ನು ಹೆಚ್ಚಿಸುವುದು ನಮಗೆ ಇಷ್ಟವಿಲ್ಲ. ನೀವು ಯಾರಿಗಾದರೂ ವ್ಯಾಯಾಮಗಳನ್ನು ಬೋಧಿಸಿದ್ದಲ್ಲಿ ಆಹಾ! ನನ್ನಲೂ ಸಹ ನಿಯಮ ಚಕ್ರವಿದೆ ಎಂಬ ಭಾವನೆಯನ್ನು ಹೊಂದುತ್ತಾನೆ. ಅದನ್ನು ನೀವೇ ನಡೆಸಿದ್ದೆಂದು ನೀವು ತಿಳಿಯಬಹುದು. ಆದರೆ ಹಾಗೆ ಆಗುವುದಕ್ಕೆ ಸಾಧ್ಯವಿಲ್ಲ. ನಾನೇಕೆ ಇದರ ಬಗ್ಗೆ ಹೇಳುತ್ತಿದ್ದೇನೆಂದರೆ ಇದು ಈ ಸಂಬಂಧಕ್ಕೆ ಉರುವಲನ್ನು ಹಾಕುವುದಿಲ್ಲ. ಇವೆಲ್ಲವನ್ನು ಮಾಡುವುದು ನನ್ನ ನಿಯಮ ದಳಗಳು. ಈ ರೀತಿಯಾಗಿಯೇ ನಮ್ಮ ಫಾಲೂನ್ ದಾಫಾದ ಅನುಯಾಯಿಗಳು ಈ ಅಭ್ಯಾಸವನ್ನು ಹರಡಬೇಕು.

ಯಾರಾದರೂ ಫಾಲೂನ್ ದಾಫಾದ ವ್ಯಾಯಾಮಗಳ ಗೋಜಿಗೆ ಹೋದರೆ ಅವನು ದಾಫಾವನ್ನು ಹಾನಿ ಮಾಡಿದಂತಾಗುತ್ತದೆ. ಹಾಗೆಯೇ ಈ ಕ್ಷೇತ್ರವನ್ನು ಸಹ ಹಾನಿ ಮಾಡಿದಂತಾಗುತ್ತದೆ. ಹಾಗೆಯೇ ಈ ಕ್ಷೇತ್ರವನ್ನು ಸಹ ಹಾನಿ ಮಾಡದಂತಾಗುತ್ತದೆ. ಕೆಲವು ವ್ಯಕ್ತಿಗಳು ನಮ್ಮ ವ್ಯಾಯಾಮದ ಸೂಚನೆಗಳನ್ನು ಮನೋರಂಜನೆಯಾಗಿ ಪರಿವರ್ತಿಸಿಕೊಂಡಿದ್ದಾರೆ. ಇದನ್ನು ಕ್ಷಮಿಸಲಾಗುವುದಿಲ್ಲ. ಎಲ್ಲಾ ನೈಜ ಅಭ್ಯಾಸದ ರೀತಿಯನ್ನು ಪಾರಂಪರ್ಯವಾಗಿ ಇತಿಹಾಸ ಪೂರ್ವದಿಂದಲೂ ತೆಗೆದುಕೊಂಡದ್ದು, ಪುರಾತನ ಕಾಲದಿಂದಲೂ ತೆಗೆದುಕೊಂಡದ್ದು ಮತ್ತು ಅಗಣನೀಯ ಶ್ರೇಷ್ಠ ಜ್ಞಾನಿಗಳನ್ನು ಅಭ್ಯಾಸದ ಮೂಲಕ ತಯಾರಿಸಿದೆ. ಯಾರೊಬ್ಬರು ಅದರ ತೃಣ ಮಾತ್ರವನ್ನು ಸಹ ಮುಟ್ಟುವ ಧೈರ್ಯ ಮಾಡಲಿಲ್ಲ. ನಿಯಮದ ಕೊನೆಯೆಂದು ಈ ಯುಗದಲ್ಲಿ ಬಂದಿತ್ತೆ ಹೊರತಾಗಿ, ಹಿಂದೆಂದು ಹೀಗಾಗಿರಲಿಲ್ಲ. ಇದನ್ನು ಎಂದೆಂದಿಗೂ ಮರೆಯಬೇಡ.

# ಉಪನ್ಯಾಸ ನಾಲ್ಕು

**ನಷ್ಟ ಮತ್ತು ಲಾಭ :**

ಅಭ್ಯಾಸ ಪ್ರಪಂಚದಲ್ಲಿ ಜನಗಳು ಆಗಾಗ್ಗೆ ನಷ್ಟ ಮತ್ತು ಲಾಭದ ಜೊತೆಗಿನ ಸಂಬಂಧದ ಬಗ್ಗೆ ಮಾತನಾಡುತ್ತಿರುತ್ತಾರೆ. ಮತ್ತು ಸಾಮಾನ್ಯ ಜನರೂ ಸಹ ಇದರ ಬಗ್ಗೆ ಮಾತನಾಡುತ್ತಾರೆ. ವೃತ್ತಿಪರರಾದ ನಾವು ಹೇಗೆ ಲಾಭ ಮತ್ತು ನಷ್ಟದೊಂದಿಗೆ ವ್ಯಾಪಾರ ಮಾಡಬಹುದು? ಸಾಮಾನ್ಯ ಜನರು ಮಾಡುವಂತಲ್ಲ. ಸಾಮಾನ್ಯ ಜನರು ಯೋಚಿಸುವ ಒಂದೇ ವಿಷಯವೆಂದರೆ ತಮ್ಮ ಸ್ವಯಂ ಲಾಭ ಮತ್ತು ಹೇಗೆ ತಾವು ಚೆನ್ನಾಗಿ ಮತ್ತು ಸುಖಮಯವಾಗಿ ಬದುಕಬೇಕೆಂಬುದು ಅಭ್ಯಾಸಿಗರಾದ ನಾವು ಹಾಗಲ್ಲ. ನಾವು ಇದಕ್ಕೆ ವ್ಯತಿರಿಕ್ತ ಸಾಮಾನ್ಯ ಜನರು ಪಡೆಯಲಿಚ್ಚಿಸುವ ವಸ್ತುಗಳನ್ನು ನಾವು ಪಡೆಯ ಲಿಚ್ಚಿಸುವುದಿಲ್ಲ. ಆದರೆ ಸಾಮಾನ್ಯ ಜನರು ಪಡೆಯಲಾಗದ್ದನ್ನು ನಾವು ಪಡೆದಿರುತ್ತೇವೆ. ಅವರು ಪಡೆಯಲಿಚ್ಚಿಸಿದರೂ ಅಭ್ಯಾಸ ಮಾಡದಿದ್ದರೆ ಅದು ಸಾಧ್ಯವಿಲ್ಲ.

ಸಾಮಾನ್ಯವಾಗಿ ನಾವು ನಷ್ಟದ ಬಗ್ಗೆ ಗಮನವನ್ನು ಹರಿಸಿದಾಗ ಅದೇನಂತಹ ಸಂಕುಚಿತ ವಿಷಯವೆನಿಸುವುದಿಲ್ಲ. ನೀವು ನಷ್ಟದ ಬಗ್ಗೆ ಮಾತನಾಡಿದಾಗ, ಕೆಲ ಜನಗಳು ಆಶ್ಚರ್ಯಪಡಬಹುದು. ಇದು ಸ್ವಲ್ಪ ಹಣವನ್ನು ದಾನಕೊಡುವುದು, ಅವಶ್ಯಕತೆಯಿರುವ ಯಾವುದಾದರೂ/ಯಾರಾದರೂ ಜನಗಳಿಗೆ ಸ್ವಲ್ಪ ಸಹಾಯಧನವನ್ನು ಮಾಡುವುದರ, ಅಥವಾ ರಸ್ತೆಯಲ್ಲಿ ಕಂಡ ಯಾವುದಾದರೂ ಬಿಕ್ಷುಕನಿಗೆ ಸ್ವಲ್ಪ ಸಹಾಯವನ್ನು ಮಾಡುವುದು ಅದು ಸಹ ಒಂದು ರೀತಿಯ ಕೊಡುಗೆಯೇ. ಅದೂ ಸಹ ಒಂದು ರೀತಿಯ ನಷ್ಟವೇ ಹಣ ಅಥವ ಪ್ರಾಪಂಚಿಕ ವಸ್ತುಗಳನ್ನು ಕೊಡುವುದು ಸಹ ಒಂದು ರೀತಿಯ ಹಗುರಾದ ಪ್ರಕಟಣೆಯೇ ಸರಿ ಹಣವನ್ನು ಕೊಡುವುದು ಒಂದು ರೀತಿಯ ನಷ್ಟವೇ ಸರಿ. ಮತ್ತು ಇದು ದೊಡ್ಡದು ಸಹ ಆದರೆ ನಾವು ಮಾತನಾಡುತ್ತಿರುವ ನಷ್ಟ ಸಂಕುಚಿತವಾದದ್ದಲ್ಲ. ಅಭ್ಯಾಸ ಮಾಡುವ ಪ್ರತಿಕ್ರಿಯೆಯಲ್ಲಿ ನಾವೆಲ್ಲಾ ಅಭ್ಯಾಸಿಗಳು ಹಾಗಾಗಿ ನಾವು ಮೋಹಪಾಶಗಳಿಂದ ಬಿಡಿಸಿಕೊಳ್ಳುವ ಅವಶ್ಯಕತೆಯಿದೆ. ಪ್ರದರ್ಶನ, ಹೊಟ್ಟೆಕಿಚ್ಚು, ಸ್ಪರ್ಧೆ, ಹೆಚ್ಚಿನ ಸಂತೋಷ ಪಡುವುದು ಈ ಸಂಪೂರ್ಣ ಮೋಹಪಾಶದಿಂದ ಪೂರ್ತಿಯಾಗಿ ಬಂದ ವಿಮುಕ್ತರಾಗಬೇಕು. ಯಔ ನಷ್ಟದ ಬಗ್ಗೆ ನಾವು ಮಾತನಾಡು ತ್ತಿದ್ದೇವೆಯೇ ಅದು ವಿಶಾಲವಾದದ್ದು. ಅಭ್ಯಾಸ ಪಥದ ಕೊನೆಯವರೆಗೂ ನಾವು ಎಲ್ಲಾ ರೀತಿಯ ಮೋಹಪಾಶಗಳನ್ನು ಮತ್ತು ಸಾಮಾನ್ಯ ಜನರಿಗಿರುವ ಆಸೆ/ಇಚ್ಚೆಗಳನ್ನು ಬಿಡಬೇಕು.

ಈಗ ಕೆಲ ಜನಗಳು ಯೋಚಿಸುತ್ತಿರುವುದು "ನಾವು ನಮ್ಮ ಅಭ್ಯಾಸವನ್ನು ಸಾಮಾನ್ಯ ಜನರ ನಡುವೆ ಮಾಡುತ್ತಿದ್ದೇವೆಂದು ನಾವು ಎಲ್ಲವನ್ನು ಕಳೆದುಕೊಂಡಾಗ ಅದು ನಮ್ಮನ್ನು ಸನ್ಯಾಸಿ ಮತ್ತು ಸನ್ಯಾಸಿಯರ ಸ್ತರಕ್ಕೇರಿಸುವುದಿಲ್ಲವೇ? ಎಲ್ಲವನ್ನೂ ಸಂಪೂರ್ಣವಾಗಿ ಕಳೆದುಕೊಳ್ಳುವುದು ಅಸಾಧ್ಯವೆಂದು ಕಂಡು ಬರುತ್ತದೆ. ನಮ್ಮ ಶಿಸ್ತಿನಲ್ಲಿ ಯಾವ ಭಾಗವನ್ನು ನಾವು ಸಾಮಾನ್ಯ ಜನರ ನಡುವೆ ಅಭ್ಯಸಿಸುತ್ತೇವೆಯೋ, ಈ ಅಭ್ಯಾಸವನ್ನು ಸಾಮಾನ್ಯ ಪ್ರಪಂಚದಲ್ಲಿ ಮಾಡುವ ಅವಶ್ಯಕತೆಯಿರುತ್ತದೆ ಮತ್ತು ಸಾಮಾನ್ಯ ಜನರ ರೀತಿನೀತಿಗಳನ್ನು ಆದಷ್ಟು ಅನುಸರಿಸಬೇಕಾಗುತ್ತದೆ. ನಾವು ನಿಮ್ಮನ್ನು ಯಾವುದೇ ರೀತಿಯ ಪ್ರಾಪಂಚಿಕ ವಸ್ತುಗಳನ್ನು ಕಳೆದುಕೊಳ್ಳಲು ನಿಜವಾಗಿಯೂ ಹೇಳುವುದಿಲ್ಲ. ನೀವು ಎಷ್ಟೇ ದೊಡ್ಡ ಅಧಿಕಾರಿಯಾಗಿರಿ ಅಥವಾ ನೀವು ಎಷ್ಟು ದೊಡ್ಡ ಶ್ರೀಮಂತರಾಗಿದ್ದೀರಿ ಎನ್ನುವುದಲ್ಲ, ನೀವು ಈ ಮೋಹಪಾಶದಿಂದ ಬಿಡಿಸಿಕೊಳ್ಳಲು ಸಾಧ್ಯವೇ ಎಂಬುದು.

ನಮ್ಮ ಶಿಸ್ತು ನೇರವಾಗಿ ನಿಮ್ಮ ಮನಸ್ಸಿನ ಮೇಲೆ ಕೇಂದ್ರೀಕರಣಗೊಳ್ಳುತ್ತದೆ. ನೀವು ಯಾವುದೇ ಪೇಚಿನಲ್ಲಿ ಸಿಲುಕಿಕೊಂಡಿದ್ದಲ್ಲಿ, ನಿಮಗೆ ಯಾರೊಂದಿಗಾದರೂ ಸಮಸ್ಯೆಯುಂಟಾಗಿದ್ದಲ್ಲಿ, ನೀವು ಇವುಗಳನ್ನು ಹಗುರಾಗಿ ತೆಗೆದುಕೊಳ್ಳಲು ಸಾಧ್ಯವೇ ಅದೇ ನಿಮ್ಮ ಸಮಸ್ಯೆ ಬೇದನಾದ ಕೀಲಿಕೈ ಅಭ್ಯಾಸವನ್ನು ದೇವಾಲಯಗಳಲ್ಲಿ ಮಾಡುವುದು ಬೆಟ್ಟಗಳಲ್ಲಿ ಅಥವಾ ಕಾಡುಗಳಲ್ಲಿ ಮಾಡುವುದು. ಏಕೆಂದರೆ ಸಾಮಾನ್ಯ ಪ್ರಪಂಚದ ನಿಮ್ಮನ್ನು ಬಂಧಮುಕ್ತರನ್ನಾಗಿಸಲು ಸಾಮಾನ್ಯ ಜನರಿಗಿರುವಂತಹ ಮೋಹಪಾಶಗಳನ್ನು ಬಲವಂತವಾಗಿ ನಿಮ್ಮಿಂದ ಬಿಡಿಸಲು ಒತ್ತಡವನ್ನು ಹೇರುತ್ತದೆ. ಇದು ಪ್ರಾಪಂಚಿಕ ವಸ್ತುಗಳನ್ನು ನಿರಾಕರಿಸುವುದರಿಂದ ನೀವು ಅದರ ಕೈಬಿಡಬೇಕಾಗುತ್ತದೆ. ಆದರೆ ಯಾವ ವ್ಯಕ್ತಿಗಳು ಈ ಅಭ್ಯಾಸವನ್ನು ಸಾಮಾನ್ಯ ಜನರ ಸಮಕ್ಷಮದಲ್ಲಿ ಮಾಡುತ್ತಾರೋ ಅವರು ಈ ಮಾರ್ಗವನ್ನನುಸರಿಸುವುದಿಲ್ಲ. ಸಾಮಾನ್ಯ ಜನರ ಶೈಲಿಗೆ ಅಂಟಿಕೊಂಡಿರುವ ವಿಷಯಗಳಿಗೆ ನಾವು

ತಟಸ್ಥರಾಗಿರಬೇಕು. ಅದು ನಿಜವಾಗಿಯೂ ಬಹಳ ಕಠಿಣ ಬಹುಶಃ ಅದೇ ನಮ್ಮ ಶಿಸ್ತಿನಲ್ಲಿ ನಿರ್ಧಾರಕ. ಆದ್ದರಿಂದ ನಾವು ಮಾತನಾಡುತ್ತಿರುವ ನಷ್ಟ ಬಹಳ ವಿಶಾಲವಾದದ್ದು. ಸಂಕುಚಿತವಲ್ಲ. ಆದ್ದರಿಂದ ಒಂದು ಉತ್ತಮ ಕೆಲಸವನ್ನು ಮಾಡುವುದಾಗಲಿ ಅಥವಾ ಯಾರಿಗಾದರೂ ಸ್ವಲ್ಪ ಹಣವನ್ನು ಮಾಡುವ ಮೊದಲು ರಸ್ತೆಯಲ್ಲಿ ಕಾಣುವ ಈಗಿನ ಬಿಕ್ಷುಕರನ್ನು ಗಮನಿಸಿ ಅವರಲ್ಲಿ ಕೆಲವರು ಧನಾತ್ಮಕವಾಗಿರುವವರು ಮತ್ತು ನಿಮಗಿಂತ ಹೆಚ್ಚಿನ ಹಣ ಹೊಂದಿರುವವರು.

ನಾವು ಉತ್ತಮ ವಿಷಯಗಳೆಡೆ ಗಮನ ಹರಿಸಬೇಕು. ಕ್ಷುಲ್ಲಕ ವಿಷಯಗಳೆಡೆಯಲ್ಲ ಅದೇ ಅಭ್ಯಾಸ ಸರಿಯಾದುದು. ನಂತರ ನಾವು ಉತ್ತಮ ವಿಷಯಗಳಡೆಗೆ ಮನಸ್ಸನ್ನು ಕೇಂದ್ರೀಕಡಿಸಬೇಕು. ಮತ್ತು ನಾವು ಮುಕ್ತವಾಗಿ ಮತ್ತು ಗೌರವದಿಂದ ಈ ಅಭ್ಯಾಸವನ್ನು ಮಾಡಬೇಕು. ಈ ಕಳೆದುಕೊಳ್ಳುವ ಪ್ರಕ್ರಿಯೆಯಲ್ಲಿ ನಾವು ನಿಜವಾಗಿ ಕಳೆದುಕೊಳ್ಳುವುದು ಕೆಟ್ಟ ವಿಚಾರಗಳನ್ನು.

ತಮಗೆ ಬೇಕಿರುವುದು ಉತ್ತಮವಾದ ವಸ್ತುಗಳೆಂದು ಜನರು ಆಗಾಗ್ಗೆ ಯೋಚಿಸುತ್ತಾರೆ. ಆದರೆ ನೈಜವಾಗಿ ನಾವು ಇದನ್ನು ಉಚ್ಚ ಹಂತದಿಂದ ಗಮನಿಸಿದಾಗ ಇವೆಲ್ಲಾ ಸಾಮಾನ್ಯ ಜನರು ತಮ್ಮ ತತ್‌ಕ್ಷಣದ ಸಂತೃಪ್ತಿಗೆ ಒದಗಿಸುವುದಾಗಿದೆ.
ಧರ್ಮಗಳು ಹೇಳಿವೆ; ನೀವು ಎಷ್ಟೇ ಶ್ರೀಮಂತರಾಗಿರಿ ಅಥವಾ ಎಷ್ಟೇ ದೊಡ್ಡ ಅಧಿಕಾರದಲ್ಲಿರಿ ಇವೆಲ್ಲಾ ಕೆಲವೇ ಡಜನ್ ವರ್ಷಗಳವರೆಗೆ ಇರುವಂತಹದ್ದು. ಇವುಗಳನ್ನು ನಮ್ಮ ಜನನದೊಂದಿಗೆ ತರಲಾಗುವುದಿಲ್ಲ ಮತ್ತು ಮರಣದೊಂದಿಗೆ ತೆಗೆದುಕೊಂಡು ಹೋಗಲಾಗುವುದಿಲ್ಲ. ಆದ್ದರಿಂದ ಏಕೆ ಈ ಕೃಷಿಶಕ್ತಿ ಅಷ್ಟು ಮಹತ್ವವುಳ್ಳದ್ದಾಗಿದೆ? ಏಕೆಂದರೆ ಇದು ನೇರವಾಗಿ ನಿಮ್ಮ ಆತ್ಮದಲ್ಲಿನ ಪರಮಾತ್ಮನೊಂದಿಗೆ ಬೆಳೆಯುತ್ತದೆ ಇದನ್ನು ನಿಮ್ಮ ಜನನದೊಂದಿಗೆ ತರಬಹುದು. ಮತ್ತು ಸಾವಿನೊಂದಿಗೆ ಕೊಂಡೊಯ್ಯಬಹುದು. ಮತ್ತು ಇದು ನೇರವಾಗಿ ನಿಮ್ಮ ಅಭಿಷ್ಟವನ್ನು ನಿರ್ಧರಿಸುತ್ತದೆ. ಹಾಗಾಗಿ ಇದನ್ನು ಅಭ್ಯಾಸ ಮಾಡುವುದು ಅಷ್ಟು ಸುಲಭವಲ್ಲ. ಬೇರೆ ಮಾತುಗಳಿಂದ ಹೇಳಬೇಕೆಂದರೆ ನೀವು ಬಿಡುವುದು ಕೆಟ್ಟ ವಿಚಾರಗಳನ್ನು ಇದೊಂದೇ ಮಾರ್ಗದಿಂದಲೇ ನೀವು ನಿಮ್ಮ ಮೂಲ ಆತ್ಮ ಪರಿಶೀಲನೆಯನ್ನು ಹಿಂದಿರುಗಿ ಮಾಡಿಕೊಳ್ಳಲು ಸಾಧ್ಯ. ಆದ್ದರಿಂದ ನೀವು ಪಡೆದುಕೊಂಡದ್ದೇನು? ನೀವು ಉಚ್ಚಮಟ್ಟವನ್ನು/ಹಂತವನ್ನು ತಲುಪಿದ್ದೀರಿ. ನೀವು ಕೊನೆಗೆ ಇದರ ಫಲವನ್ನು ಪಡೆಯುತ್ತೀರಿ. ಮತ್ತು ನೀವು ಪರಿಪೂರ್ಣತೆಯನ್ನು ಹೊಂದುತ್ತೀರಿ. ಇದು ಮೂಲಭೂತ ಸಮಸ್ಯೆಯನ್ನು ಪರಿಹರಿಸುತ್ತದೆ. ಬಹುಶಃ ನಾವು ಸಾಮಾನ್ಯ ಜನಗಳಂತೆ ಹೊಂದಿರುವ ಇಚ್ಚೆಗಳನ್ನು ಬಿಟ್ಟು ನಿಜವಾದ ಉತ್ತಮ ಅಭ್ಯಾಸಿಗ ನಾಗಬೇಕೆಂದರೆ ಇವೆಲ್ಲವನ್ನು ತತ್ಕ್ಷಣವೇ ಮಾಡಬೇಕೆಂದರೆ ಅದು ಅಷ್ಟು ಸುಲಭವಲ್ಲ. ಇದನ್ನು ನೀವು ಹಂತಹಂತವಾಗಿ ಮಾಡಬೇಕಾಗುತ್ತದೆ. ನಾವು ಹೇಳುವುದನ್ನು ಕೇಳು, "ಹಂತ ಹಂತವಾಗಿ ಮಾಡು" ಮತ್ತು ನೀನು ಹೇಳು "ಗುರುಗಳು ನನಗೆ ಹಂತ ಹಂತವಾಗಿ ಮಾಡಲು ಹೇಳಿದ್ದಾರೆ. ಹಾಗಾಗಿ ನಾವು ಅವಶ್ಯವಿರುವಷ್ಟು ಸಮಯವನ್ನು ತೆಗೆದುಕೊಳ್ಳುತ್ತೇನೆ.

ಆದರೆ ಅದು ಸರಿಯಲ್ಲ! ನೀವೇ ನಿಮ್ಮೊಂದಿಗೆ ಬಹಳ ಕಟ್ಟುನಿಟ್ಟಾಗಿ ನಡೆದುಕೊಳ್ಳಬೇಕು. ಆದರೆ ನಾವು ನಿಮ್ಮನ್ನು ಹಂತಹಂತವಾಗಿ ತಿದ್ದಿಕೊಳ್ಳಲು ಅವಕಾಶ ಮಾಡಿಕೊಡುತ್ತೇವೆ. ಈ ದಿನ ನೀವು ತತ್‌ಕ್ಷಣದ ಸಾಧನೆಯನ್ನು ಮಾಡಿದ್ದರೆ, ನೀವು ಈ ದಿನ ಬುದ್ಧನಾಗಿರುತ್ತೀರಿ. ಆದರೆ ಇದು ಸತ್ಯವಾದದ್ದಲ್ಲ. ಆ ಹಂತವನ್ನು ನೀವು ಹಂತಹಂತವಾಗಿ ತಲುಪುತ್ತೀರಿ.

ನಾವು ನಿಜವಾಗಿಯು ಏನನ್ನ ಕಳೆದುಕೊಳ್ಳುತ್ತೇವೆಯೋ ಅದು ತುಸು ಕೆಟ್ಟದ್ದು. ಮತ್ತು ಅದೇನದು? ಇದೇ ಕರ್ಮ ಮತ್ತು ಜನನಗಳಿಗಿರುವ ವಿಭಿನ್ನ ಮೋಹಪಾಶಗಳೊಂದಿಗೆ ಇದು ಹೆಣೆದುಕೊಂಡಿರುತ್ತದೆ. ಉದಾಹರಣೆಗೆ ಸಾಮಾನ್ಯ ಜನರಿಗೆ ತಮ್ಮದೇ ಆದ ಚರಿತಹೀನತೆಯಿರುತ್ತದೆ. ತಮ್ಮ ಸ್ವಯಂ ಲಾಭಕ್ಕಾಗಿ ಅವರು ಎಲ್ಲಾ ರೀತಿಯ ಕೆಟ್ಟ ಕೆಲಸಗಳನ್ನು ಮಾಡುತ್ತಾರೆ. ಆದ್ದರಿಂದಲೇ ಇವರಿಗೆ ಕರ್ಮ ಸುತ್ತಿಕೊಳ್ಳುತ್ತದೆ. ಇದು ನೇರವಾಗಿ ನಮ್ಮ ಸ್ವಂತ ಮೋಹದಂಶವನ್ನವಲಂಭಿಸಿದೆ. ಈ ಕೆಟ್ಟ ವಿಚಾರಗಳನ್ನು ನಿರ್ಮೂಲನಮಾಡಲು ನಮ್ಮ ಯೋಚನಾಲಹರಿಯನ್ನು ಸುತ್ತಮುತ್ತಲೂ ಮೊದಲು ವಿಸ್ತರಿಸಿಕೊಳ್ಳಬೇಕು.

**ಕರ್ಮದ ಸ್ಥಾನಾಂತರೀಕರಣ :**

ಪ್ರತಿಯೊಬ್ಬರಲ್ಲಿಯೂ ಪುಣ್ಯ ಮತ್ತು ಪಾಪಗಳ ಸ್ಥಳಾಂತರೀಕರಣಗೊಳ್ಳುವಂತಹ ಪ್ರಕ್ರಿಯೆಯುಂಟು. ಜನಗಳಲ್ಲಿ ಸಂಘರ್ಷವುಂಟಾದಾಗ ಈ ಪ್ರಕ್ರಿಯೆಲ್ಲಿ ಮಾರ್ಪಾಟುಂಟಾಗುತ್ತದೆ. ನೀವು ಒಳ್ಳೆಯದೇನನ್ನಾದರೂ ಮಾಡಿದ್ದರೆ, ಪವಿತ್ರಗುಣವಾದ ಒಳ್ಳೆಯದು/ಪುಣ್ಯ ಬರುತ್ತದೆ. ನೀವು ಕೆಟ್ಟದ್ದನ್ನೇನಾಥರೂ ಮಾಡಿದ್ದರೆ ನಿಮಗೆ ಕೆಟ್ಟದ್ದು/ಪಾಪ ಬರುತ್ತದೆ. ಅನಿವಂಶೀಯವಾಗಿ ಮತ್ತು ವರ್ಗಾವಣೆಯಾಗುವಂತಹ ಪ್ರಕ್ರಿಯೆಯುಂಟು. ಯಾರಾದರೂ ನಿಮ್ಮನ್ನು ಕೇಳಬಹುದು. ನಿಮ್ಮ ಹಿಂದಿನ ಜೀವನದಲ್ಲಿ ಕೆಟ್ಟದ್ದು ಮಾಡಿದ್ದರಿಂದ ಹೀಗಾಗಿದೆಯೇ? ಪರಿಸ್ಥಿತಿ ಯಾವಾಗಲೂ ಹಾಗೆಯೇ ಇರುವುದಿಲ್ಲ. ಏಕೆಂದರೆ ನೀವು ಒಗ್ಗೂಡಿಸಿಕೊಂಡಿರುವ ಕರ್ಮ ಒಂದು ಜನ್ಮದ್ದಲ್ಲ. ಅಭ್ಯಾಸ ಪ್ರಪಂಚದಲ್ಲಿ ಪರಮಾತ್ಮನಿಗೆ ಸಾವಿಲ್ಲವೆಂಬ ನಂಬಿಕೆಯುಂಟು. ಜೀವಾತ್ಮನು ನಾಶವಾಗದಿದ್ದಲ್ಲಿ ಈ ಜನ್ಮಕ್ಕೆ ಹಿಂದಿನ ಜನ್ಮದಲ್ಲಿ ಆತನು ಸಾಮಾಜಿಕ ಸಂವಹನದಲ್ಲಿ ಉಪಕಾರ ಬದ್ಧನಾಗಿರ ಬಹುದು. ಯಾರಿಂದಲಾದರು ಉಪಕಾರವನ್ನು ಪಡೆದುಕೊಂಡಿರಬಹುದು. ಅಥವಾ ಯಾರಾನ್ನಾಥರೂ ಸಾಯಿಸುವಂತಹ ಕೆಟ್ಟ ಕೆಲಸವನ್ನು ಮಾಡಿರಬಹುದು. ಆದ್ದರಿಂದಲೇ ಇಂಥ ಫಲ ಬಂದಿರುವುದು. ಇದು ಬೇರೇ ಆಯಾಮಗಳಂದ ಒಟ್ಟುಗೂಡಿಕೊಳ್ಳುತ್ತದೆ. ಮತ್ತು ಇದು ಯಾವಾಗಲೂ ನಿಮ್ಮ ಜೊತೆಯಲ್ಲಿಯೇ ಅಂಟಿಕೊಂಡಿರುತ್ತದೆ. ಪುಣ್ಯಕ್ಕೂ ಸಹ ಇದೇ ಸಿದ್ಧಾಂತವೇ. ಆದರೆ ಇದೊಂದೇ ಪಾಪ,ಪುಣ್ಯಗಳ ಸಿದ್ಧಾಂತದ ಮೂಲವಲ್ಲಿ ಇಲ್ಲಿ ಮತ್ತೊಂದು ಸಂಗತಿಯುಂಟು. ನಿಮ್ಮ ಕುಟುಂಬದಲ್ಲಿ ಒಟ್ಟುಗೂಡಿರುವಂತಹದ್ದು ಅಥವಾ ನಿಮ್ಮ ಪೂರ್ವಿಕರಿಂದ ಬಿದ್ದಂತಹವುಗಳಾಗಿರುತ್ತವೆ. ಹಿರಿಯ ವ್ಯಕ್ತಿಗಳು ಹೇಳುತ್ತಿದ್ದರು. “ಪವಿತ್ರ ಗುಣಗಳನ್ನು ಬೆಳೆಸಿಕೊ, ಪವಿತ್ರ ಗುಣಗಳನ್ನು ಬೆಳಸಿಕೋ!” ನಿಮ್ಮ ಪೂರ್ವಜರು ಪವಿತ್ರ ಗುಣಗಳನ್ನು ಬೆಳಸಿಕೊಂಡಿದ್ದರು”, ಈ ವ್ಯಕ್ತಿಯ ಉತ್ತಮ ಗುಣಗಳನ್ನು ಕಳೆದುಕೊಳ್ಳುತ್ತಿದ್ದಾನೆ, ಆತನು ತನ್ನ ಉತ್ತಮ ಗುಣಗಳನ್ನು ಕಡಿಮೆಮಾಡಿಕೊಳ್ಳುತ್ತಿದ್ದಾನೆ! ಅವರು ಏನು ಹೇಳಿದ್ದರೊ ಅದು ಸರಿ ಎನ್ನಿಸುತ್ತದೆ. ಈಚಿನ ದಿನಗಳಲ್ಲಿ ಸಾಮಾನ್ಯ ಜನರು ಈ ವಿಷಯದ ಬಗ್ಗೆ ಕಿವುಡರಂತೆ ನಡೆದುಕೊಳ್ಳುತ್ತಾರೆ. ಆದರೆ ಸತ್ಯವೇನೆಂದರೆ ಇದರ ಅರ್ಥವು ಬಹಳ ಆಳವಾಗಿದೆ. ಈಗಿನ/ಆಧುನಿಕ ಪೀಳಿಗೆಯ ಯೋಚನಾಲಹರಿಯಿಂದ ಮತ್ತು ಚಿಕ್ಕ ಸಂಕಲ್ಪದಿಂದ ಉಂಟಾಗುವಂತಹ ಯಾವುದೋ ಸಂಕಲ್ಪವಲ್ಲ. ಇದು ಸತ್ಯವಾಗಿಯೂ ಪ್ರಾಪಂಚಿಕವಾಗಿ ಅಸ್ತಿತ್ವದಿಂದಿರುತ್ತದೆ. ನಮ್ಮ ಮಾನವ ದೇಹಗಳು ಈ ಎರಡೂ ರೀತಿಯ ಚೌಕದ್ರವ್ಯದಿಂದುಂಟಾಗಿರುತ್ತದೆ.

ಕೆಲವು ವ್ಯಕ್ತಿಗಳು ಕೇಳುತ್ತಾರೆ.”ನಿಮಗೆ ಹೆಚ್ಚಿಗೆ ಕರ್ಮವುಂಟಾಗಿದ್ದರೆ ನೀವು ಉತ್ತಮ ಹಂತದ ಅಭ್ಯಾಸವನ್ನು ತಲುಪಲು ಸಾಧ್ಯವಿಲ್ಲ. ಇದು ಸತ್ಯವು? ಹೌದು, ಇದು ಹೀಗೆಂದು ನೀವು ಹೇಳಬಹುದು.

ಯಾರು ಹೆಚ್ಚಿನ ಕರ್ಮದ ಫಲಾನುಭವಿಗಳಾಗಿರುತ್ತಾರೋ ಅವರ ಸಂಪೂರ್ಣ ಅರಿವಿಗೆ ಮಸುಕುಂಟಾಗಿರುತ್ತದೆ. ಇದು ನಿಮ್ಮ ಶರೀರದ ಸುತ್ತಲಿನ ಕ್ಷೇತ್ರವನ್ನು ಆಕ್ರಮಿಸಿಕೊಳ್ಳುತ್ತದೆ. ಮತ್ತು ನಮ್ಮನ್ನು ಆವರಿಸಿಕೊಳ್ಳುತ್ತದೆ. ಇದು ನಾವು ವಿಶ್ವದೊಂದಿಗೆ ಹೊಂದಿರುವ ಸಹಜಗುಣಗಳ ಸಂಪರ್ಕವನ್ನು ಕಡಿದುಹಾಕುತ್ತದೆ. ಈ ತರಹದ ವ್ಯಕ್ತಿಗೆ ಕನಿಷ್ಟ ಅರಿವಾಗುತ್ತದೆ. ಸತ್ಯವಾಗಿ ಹೇಳಬೇಕೆಂದರೆ ಇದು ಒಳ್ಳೆಯದು ಮತ್ತು ಅನುಭವಿಸಬಲ್ಲದ್ದು. ಬೇರೆಯ ವ್ಯಕ್ತಿಗಳು ಅಭ್ಯಾಸ ಮತ್ತು ಚಿಗಾಂಗ್ (ಪ್ರಮುಖ ಶಕ್ತಿ) ಬಗ್ಗೆ ಮಾತನಾಡಿದಾಗ ಇವೆಲ್ಲಾ ಕುರುಡುನಂಬಿಕೆಯಿಂದ ಅವರು ಅಂದುಕೊಳ್ಳುತ್ತಾರೆ. ಮತ್ತು ಆತನು ಇದನ್ನು ನಂಬುವುದೇ ಇಲ್ಲ. ಇದು ಹಾಸ್ಯಸ್ಪದವೆಂದು ಆತನು ಅಂದುಕೊಳ್ಳುತ್ತಾನೆ. ಇದು ಹೀಗೆಯೇ ನಡೆಯುತ್ತದೆ. ಆದರೆ ಇದೇ ಅಂತಿಮವಲ್ಲ. ಆತನ ಅಭ್ಯಾಸಮಾಡಬೇಕೆಂದರೆ ಅದು ನಿಜವಾಗಿಯೂ ಕಷ್ಟವೇ ಮತ್ತು ಆತನ ಕೃಷಿ ಶಕ್ತಿಯು (goug)ಹೆಚ್ಚಿನ ಎತ್ತರಕ್ಕೇರಲು ಸಾಧ್ಯವಿಲ್ಲವೇ? ಇಲ್ಲ. ಖಂಡಿತವಾಗಿಯೂ ಇಲ್ಲ. “ಶ್ರೇಷ್ ಕಾನೂನಿಗೆ ಮಿತಿಯಿಲ್ಲ”– ಅಭ್ಯಾಸವು ಸಂಪೂರ್ಣವಾಗಿ ನಿಮ್ಮ ಮನೋಚಾಲವನ್ನವಲಂಬಿಸಿರುತ್ತದೆ. ಗುರುವು ಬಾಗಿಲಿನ ಒಳಗಡೆ ಹೋಗಲು ಮಾರ್ಗದರ್ಶನವನ್ನೀಯುತ್ತಾರೆ. ಆದರೆ ಅಭ್ಯಾಸ ಮಾಡುವುದು ಮಾತ್ರ ನಿಮ್ಮನ್ನವಲಂಭಿಸಿರುತ್ತದೆ. ಇದೆಲ್ಲಾ ನೀವು ಎಷ್ಟರ ಮಟ್ಟಿಗೆ ಅಭ್ಯಾಸ ಮಾಡಬಲ್ಲವೆಂಬುದರ ಮೇಲೆ ಅವಲಂಬಿಸಿರುತ್ತದೆ. ನಿಮ್ಮಿಂದ ಅಭ್ಯಾಸ ಮಾಡಲು ಸಾಧ್ಯವೇ, ಇದು ನೀವು ಎಷ್ಟರ ಮಟ್ಟಿಗೆ ತಾಳಿಕೊಳ್ಳುವಿರೆಂಬುದರ ಮೇಲೆ ಅವಲಂಭಿಸಿರುತ್ತದೆ. ನಿಮ್ಮಿಂದ ತ್ಯಾಗವನ್ನು ಮಾಡಲು ಸಾಧ್ಯವೇ, ನಿಮ್ಮಿಂದ ಕಷ್ಟಕಾರ್ಪಣ್ಯಗಳನ್ನು ಸಹಿಸಿಕೊಳ್ಳಲು ಸಾಧ್ಯವೇ. ನೀವು ನಿಮ್ಮ ಮನಸ್ಸನ್ನು

ನಿಗ್ರಹಿಸಿಕೊಂಡಲ್ಲಿ ನಿಮ್ಮನ್ನು ಯಾವುದೇ ಸಮಸ್ಯೆ ಆವರಿಸುವುದಿಲ್ಲ ಮತ್ತು ಇದೇನು ಸಮಸ್ಯೆಯಿಲ್ಲವೆಂದು ನಾನು ಹೇಳುತ್ತೇನೆ.

ಸಾಮಾನ್ಯವಾಗಿ ವೈಟ್ ಮ್ಯಾಟರ್ ಇರುವವರಿಗಿಂತ ಹೆಚ್ಚಾಗಿ ಬ್ಲಾಕ್ ಮ್ಯಾಟರ್ ಇರುವವರು ತ್ಯಾಗವನ್ನು ಮಾಡಬೇಕಾಗುತ್ತದೆ. ಅಂದಿನಿಂದ ವೈಟ್‌ಮ್ಯಾಟಲ್ ವಿಶ್ವವ್ಯಾಪಿಯ ಸಹಜಗುಣದ ಶ್ರೇಣಿಯಲ್ಲಿರುತ್ತದೆ. ಅದೇ ಸತ್ಯ, ಉತ್ತಮ ಮತ್ತು ಭರವಸೆಯುಳ್ಳದ್ದು. ಯಾವಾಗ ವ್ಯಕ್ತಿಯು ಭಿನ್ನಾಭಿಪ್ರಾಯದಲ್ಲಿರುತ್ತಾನೆಯೋ, ಎಲ್ಲಿಯವರೆಗೂ ಆತನು ತನ್ನ ನಡತೆಯನ್ನು ಉತ್ತಮಕರಿಸುಕೊಳ್ಳತ್ತಾನೆಯೋ ಮತ್ತು ತನ್ನನ್ನು ತಾನು ಸುಧಾರಣೆ ಮಾಡಿಕೊಳ್ಳುತ್ತಾನೆಯೋ ಆತನ ಕೃಷಿಶಕ್ತಿ ಬೆಳೆಯುತ್ತದೆ. "ದೇಹವನ್ನು ದಂಡಿಸಿ, ಚಿತ್ತ ಶಾಂತತೆ ಕಾಪಾಡಿ"–ಆತನು ತನ್ನ ದೇಹವನ್ನು ಹೆಚ್ಚು ದಂಡಿಸಿ ಮನಸ್ಸನ್ನು ಸ್ವಲ್ಪ ಕಡಿಮೆ ಹತೋಟಿಯಲ್ಲಿಟ್ಟರೂ ಸಹ ಈತನ ಕೃಷಿ ಶಕ್ತಿ ಹೆಚ್ಚಾಗುತ್ತದೆ. ಆದರೆ ಈ ಹೇಳಿಕೆಯು ಬ್ಲಾಕ್ ಮ್ಯಾಟರ್ ಹೆಚ್ಚಾಗಿರುವವರಿಗೆ ಸಾಧ್ಯವಿಲ್ಲ.

ಬ್ಲಾಕ್ ಮ್ಯಾಟರ್, ವೈಟ್ ಮ್ಯಾಟರ್ ಆಗಿ ರೂಪಾಂತರಗೊಳ್ಳುವಂತಹ ಪ್ರಕ್ರಿಯೆಯ ಮೂಲಕ ಇವರು ಮೊದಲು ಹಾದು ಹೋಗಬೇಕು. ಅದೇ ಈ ಪ್ರಕ್ರಿಯೆ ಮತ್ತು ಇದು ಬಹಳ ನೋವಿನಿಂದ ಕೂಡಿದ್ದು, ಆದ್ದರಿಂದಲೇ ಯಾವ ವ್ಯಕ್ತಿಗೆ ಕಡಿಮೆ ಅರ್ಥಮಾಡಿಕೊಳ್ಳುವ ಶಕ್ತಿಯಿರುತ್ತದೆಯೋ ಸಾಧಾರಣವಾಗಿ ಅವರು ಅಭ್ಯಾಸ ಮಾಡುವುದು ಇನ್ನೂ ಕಠಿಣ ವಾಗುತ್ತದೆ.

ಕೆಲವು ವ್ಯಕ್ತಿಗಳು ಹೇಗೆ ಅಭ್ಯಾಸವನ್ನು ಮಾಡುತ್ತಾರೆಂಬುದನ್ನು ನಿರೂಪಿಸಲು ನಾನು ನಿಮಗೆ ಒಂದು ಸ್ಥಿರ ಉದಾಹರಣೆಯನ್ನು ಕೊಡುತ್ತೇನೆ.

ಧ್ಯಾನದ ಮೂಲಕ ಅಭ್ಯಾಸ ಮಾಡಲು ನೀವು ಹೆಚ್ಚು ಸಮಯ ಕಾಲನ್ನು ಮಡಚಿ ಧ್ಯಾನ ಮುದ್ರೆಯಲ್ಲಿ ಕುಳಿತುಕೊಳ್ಳಬೇಕು. ಒಮ್ಮೆ ಕಾಲುಗಳನ್ನು ಮಡಚಿ ಕುಳಿತರೆ ನಿಮ್ಮ ಕಾಲುಗಳು ನೋವಲಾರಂಭಿಸುತ್ತದೆ. ಮತ್ತು ಕಾಲುಗಳು ಜೋಮು ಹಿಡಿದಂತಾಗುತ್ತದೆ. ಕೆಲ ಕಾಲದ ನಂತರ ಮನಸ್ಸಿಗೆ ವ್ಯಾಕುಲವುಂಟಾದ ಅನುಭವವಾಗುತ್ತದೆ. ನಂತರ ನಿಮಗೆ ನಿಜವಾಗಿಯೂ ವ್ಯಾಕುಲವುಂಟಾಗುತ್ತದೆ ನೀವು" ದೇಹವನ್ನು ದಂಡಿಸುವುದು, ಮನಸ್ಸನ್ನು ಶಾಂತತೆಯಿಂದಿಡುವುದು" ನಿಮ್ಮ ದೇಹವು ಸ್ಥಿಮಿತದಲ್ಲಿರುವುದಿಲ್ಲ. ಮತ್ತು ನಿಮ್ಮ ಮನಸ್ಸು ಸಹ ಸ್ಥಿಮಿತದಲ್ಲಿರುವುದಿಲ್ಲ. ಕೆಲ ವ್ಯಕ್ತಿಗಳು ಕಾಲನ್ನು ಮಡಚಿ ಕುಳಿತುಕೊಳ್ಳುವುದರಿಂದುಂಟಾಗುವ ನೋವಿಗೆ ಭಯಪಡುತ್ತಾರೆ. ಹಾಗಾಗಿ ತಮ್ಮ ಮಡಿಚಿದ ಕಾಲುಗಳನ್ನು ತೆಗೆದುಬಿಡುತ್ತಾರೆ. ಹಾಗಾಗಿ ಧ್ಯಾನ ಮುಂದುವರೆಸಲು ತಡೆಯುಂಟಾಗುತ್ತದೆ. ಮುಂದುವರೆಸಲಾಗುವುದಿಲ್ಲ. ಕೆಲ ವ್ಯಕ್ತಿಗಳಿಗೆ ತಮ್ಮ ಕಾಲುಗಳನ್ನು ನಿರ್ದಿಷ್ಟ ಸಮಯದ ನಂತರ ಸ್ವಲ್ಪ ಹೆಚ್ಚು ಕಾಲವೂ ಕುಳಿತುಕೊಳ್ಳಲಾಗುವುದಿಲ್ಲ. ಆದರೆ ಅವರು ಕಾಲನ್ನು ಮಡಚಿಕೊಳ್ಳದೆ ಧ್ಯಾನಾಸಕ್ತರಾದರೆ ಅವರು ಮಾಡುವ ಧ್ಯಾನ ವ್ಯರ್ಥ ಯಾವ ಕ್ಷಣದಲ್ಲಿ ಮಡಚಿರುವ ಕಾಲುಗಳಿಗೆ ನೋವಾಗಲಾರಂಭಿಸುತ್ತದೆಯೋ ತಕ್ಷಣವೇ ಅವರು ಮೇಲೇಳುತ್ತಾರೆ. ಸುತ್ತಲೂ ಒಮ್ಮೆ ಸುತ್ತಾಡುತ್ತಾರೆ. ಮತ್ತೆ ಕಾಲುಗಳನ್ನು ಮಡಚಿ ಕುಳಿತುಕೊಳ್ಳುತ್ತಾರೆ. ಇದು ಅಷ್ಟು ಸಮರ್ಪಕವಾಗಿರುವುದಿಲ್ಲವೆಂದು ನಾವು ಯೋಚಿಸುತ್ತೇವೆ. ಕಾರಣವೇನೆಂದರೆ ಅವರ ಕಾಲುಗಳಿಗೆ ನೋವುಂಟಾದಾಗ ಬ್ಲಾಕ್ ಮ್ಯಾಟರ್ ಅವರ ಕಾಲುಗಳಿಗೆ ದಾಳಿ ಮಾಡಿರುತ್ತದೆ. ಈ ಬ್ಲಾಕ್ ಮ್ಯಾಟರ್ ಕರ್ಮ ಕಷ್ಟ ಸಹನೆ ಈ ಕರ್ಮವನ್ನು ಪವಿತ್ರ ಗುಣವನ್ನಾಗಿ ಮಾರ್ಪಡಿಸುತ್ತದೆ. ಒಮ್ಮೆ ನೋವಲಾರಂಭಿಸಿದಾಗ ಕರ್ಮವು ಸವೆಯಲಾರಂಭಿಸುತ್ತದೆ. ಕರ್ಮವು ಹೆಚ್ಚಿನ ಒತ್ತಡವನ್ನು ಹಾಕಿದಾಗ ಹೆಚ್ಚಿನ ಕಾಲುಗಳ ನೋವುಂಟಾಗುತ್ತದೆ.

ಆತನ ಕಾಲುಗಳ ನೋವಿನ ಹಿಂದೆ ಒಂದು ಕಾರಣವಿದೆ. ಯಾರು ಧ್ಯಾನಾಸಕ್ತರಾಗಿರುತ್ತಾರೆಯೋ ಅವರ ಕಾಲುಗಳಲ್ಲಿ ನೋವು ಅಲೆಯಲೆಯಾಗಿ ಬರಲಾರಂಭಿಸುತ್ತದೆ. ಮತ್ತು ಅದು ಕೆಲ ಕಾಲದವರೆಗೂ ಇರುತ್ತದೆ. ಇದು ಯಾತನಾಮಯವಾಗಿರುತ್ತದೆ. ಈ ನೋವು ಉಪಶಮನವಾದನಂತರ ಸ್ವಲ್ಪ ಸಮಾಧಾನವಾಗುತ್ತದೆ. ಆದರೆ ಈ ಸಮಾಧಾನ ಹೆಚ್ಚು ಕಾಲದವರೆಗಿರುವುದಿಲ್ಲ. ಏಕೆಂದರೆ ಕಾಲುಗಳು ಪುನಃ ನೋವಲಾರಂಭಿಸುತ್ತದೆ. ಸಾಮಾನ್ಯವಾಗಿ ಇದು ಈ ರೀತಿಯಲ್ಲಾಗುತ್ತದೆ.

ಕರ್ಮವು ಒಮ್ಮೆಲೇ ಬರುವುದಿಲ್ಲ. ಭಾಗವಾಗಿ ಬರುತ್ತದೆ. ಒಂದೊಂದು ಭಾಗವೂ ಕಳೆದಾಗ ಕಾಲಿನ ನೋವುಗಳು ಕಡಿಮೆಯಾದಂತೆನಿಸುತ್ತದೆ. ಆದರೆ ಕೆಲಕಾಲದ ನಂತರ ಇಲ್ಲಿ ಇನ್ನೊಂದು ಕರ್ಮದ ಭಾಗವು ನಿಮ್ಮನ್ನಾವರಿಸುತ್ತದೆ. ಮತ್ತು ನಿಮ್ಮ ಕಾಲುಗಳು ಮತ್ತೊಮ್ಮೆ ನೋವಲಾರಂಭಿಸುತ್ತದೆ. ಬ್ಲಾಕ್ ಮ್ಯಾಟರ್ ಕಳೆದ ನಂತರ, ಇದು ವ್ಯರ್ಥವಾಗುವುದಿಲ್ಲ. ಈ ವಿಷಯವು ವ್ಯರ್ಥವಾಗುವುದಿಲ್ಲ. ಇದು ಸಂಪೂರ್ಣ ಕಳೆದ ನಂತರ ನೇರವಾಗಿ ಇದು ವೈಟ್ ಮ್ಯಾಟರ್ ಆಗಿ ರೂಪಾಂತರಗೊಳ್ಳುವುದು. ಮತ್ತು ಈ ವೈಟ್ ಮ್ಯಾಟರ್ ಪವಿತ್ರ ಗುಣ. ಇದು ಏಕೆ ಈ ರೀತಿ ರೂಪಾಂತರಗೊಳ್ಳಬೇಕು? ಏಕೆಂದರೆ ಈತ ಕಷ್ಟವನ್ನು ಸಹಿಸಿಕೊಂಡಿದ್ದಾನೆ. ಬೆಲೆಯನ್ನು ತೆತ್ತಿದ್ದಾನೆ. ಮತ್ತು ಈತನು ನೋವನ್ನು ಸಹಿಸಿಕೊಂಡಿದ್ದಾನೆ. ನೀವು ನೋವನ್ನು ಸಹಿಸಿಕೊಂಡಾಗ, ಕಷ್ಟಗಳನ್ನು ಸಹಿಸಿಕೊಂಡಾಗ ಒಳ್ಳೆಯ ಕೆಲಸವನ್ನು ಮಾಡಿದಾಗ ನಾವು ಪವಿತ್ರ ಗುಣಗಳನ್ನು ಹೊಂದುತ್ತೇವೆಂದು ನಂಬುತ್ತೇವೆ. ಆದ್ದರಿಂದಲೇ ಇದು ಧ್ಯಾನಸಕ್ತರಾಗಿದ್ದಾಗ ಆಗುತ್ತದೆ. ಕೆಲವ್ಯಕ್ತಿಗಳು, ತಮ್ಮ ಕಾಲುಗಳು ಸ್ವಲ್ಪ ನೋವುಂಟಾದಾಗಲೇ ಎದ್ದು ಬಿಡುತ್ತಾರೆ. ಸುತ್ತಲೂ ಓಡಾಡುತ್ತಾರೆ. ಮತ್ತೆ ಕುಳಿತುಕೊಳ್ಳುತ್ತಾರೆ. ಇಂಥಹ ಧ್ಯಾನ ಪರಿಣಾಮಕಾರಿಯಾಗಿ ರುವುದಿಲ್ಲ. ಕೆಲವು ವ್ಯಕ್ತಿಗಳು ನಿಂತುಕೊಳ್ಳುವುದನ್ನು ಸಹಿಸ ಲಾರಂಭಿಸುತ್ತಾರೆ. ಅವರ ಕಾಲುಗಳು ಶಕ್ತಿಗುಂದುತ್ತವೆ. ಅದನ್ನು ಸಹಿಸಲಾಗುವುದಿಲ್ಲ. ಹಾಗಾಗಿ ಕುಳಿತುಕೊಳ್ಳುತ್ತಾರೆ. ಅದೂ ಸಹ ಪರಿಣಾಮಕಾರಿಯಾಗಿರುವುದಿಲ್ಲ. ಈ ಸಣ್ಣ ನೋವೇನದು? ಯಾರಾದರೂ ತಮ್ಮ ಕೈಗಳನ್ನು ಎತ್ತಿ ಅಭ್ಯಾಸ ಮಾಡುವುದನ್ನು ಸಾಧಿಸಿದ್ದರೆ ಉತ್ತಮವೇ, ಆ ಮಾರ್ಗವೂ ಬಹಳ ಸುಲಭವೇ. ಜನಗಳು ಅಭ್ಯಾಸಿಗರಾಗಿದ್ದಾಗ ಧ್ಯಾನಾಸಕ್ತರಾಗಿದ್ದಾಗ ಈ ರೀತಿಯ ವಿಷಯಗಳು ನಡೆಯುವುದು.

ಹೆಚ್ಚಿನ ಭಾಗದ ಕರ್ಮವನ್ನು ನಮ್ಮ ಈ ಶಿಸ್ತಿನಿಂದ ಅನುಸಂಧಾನ ಮಾಡಲಾಗುವುದಿಲ್ಲ. ಆದರೂ ಸಹ ತನ್ನದೇ ಆದ ಕೆಲವು ಪಾತ್ರವಿದೆ. ನಮ್ಮ ನಡತೆಯನ್ನು ಪರೀಕ್ಷಿಸುವಂತಹ ಇತರರೊಂದಿಗೆ ಉಂಟಾದ ಮಾನಸಿಕ ಉದ್ವೇಗದ ಮುಖಾಂತರ ಮುಖ್ಯವಾಗಿ ನಾವು ಕರ್ಮದ ಪರಿವರ್ತನೆಯನ್ನು ಮಾಡುತ್ತೇವೆ. ಸಾಮಾನ್ಯವಾಗಿ ಇದು ಹೀಗೆ ನಡೆಯುವುದು. ಯಾರೋಂದಿಗಾದರೂ ನಿಮಗೆ ವಿವಾದವುಂಟಾದರೆ, ಅಥವಾ ಹೆಚ್ಚಿನ ಘರ್ಷಣೆಯುಂಟಾದರೆ ಇದು ಆ ನೋವಿಗಿಂತ ಅತಿ ಹೀನವಾಗಿರುತ್ತದೆ. ನಾನು ಹೇಳುತ್ತೇನೆ. ದೇಹಕ್ಕಾಗುವ ನೋವು ನಮಗೆ ಸಹಿಸಲು ಸುಲಭ ನೀವು ಹಾಗೆಯೇ ಹಲ್ಲನ್ನು ಕಚ್ಚಿ ಮತ್ತು ಈ ನೋವನ್ನು ಸಹಿಸಿಕೊಳ್ಳಬಹುದು. ಆದರೆ ಜನಗಳು ಒಬ್ಬರ ಮೇಲೋಬ್ಬರು ಒಳಸಂಚು ಮಾಡುತ್ತಿದ್ದರೆ ಆಗ ಮನಸ್ಸನ್ನು ಹತೋಟಿಯಲ್ಲಿಟ್ಟುಕೊಳ್ಳಲು ಬಹಳ ಕಷ್ಟವಾಗುತ್ತದೆ.

ಇಲ್ಲಿ ಒಂದು ಉದಾಹರಣೆಯಿದೆ. ಇಲ್ಲಿ ಈ ವ್ಯಕ್ತಿಯಿದ್ದಾನೆ. ಮತ್ತು ಒಮ್ಮೆ ಈತನು ತಾನು ಕೆಲಸ ಮಾಡುವ ಸ್ಥಳಕ್ಕೆ ಬಂದರೆ, ಆತನು ಇಬ್ಬರು ವ್ಯಕ್ತಿಗಳು ತನ್ನ ಬಗ್ಗೆ ಆಡಿಕೊಳ್ಳುವ ಕೆಟ್ಟ ವಿಚಾರಗಳನ್ನು ಕದ್ದು ಆಲಿಸುತ್ತಾನೆ. ಅವರು ಆಡುವ ಮಾತುಗಳು ಕರ್ಣಭಯಂಕರವಾಗಿರುತ್ತದೆ. ಮತ್ತು ಆತನು ಕೋಪದಿಂದ ತಳಮಳಿಸುತ್ತಾನೆ. ನಿಮ್ಮ ಮೇಲೆ ಆಕ್ರಮಣ ಮಾಡಿದಾಗ ನೀವು ತಕ್ಷಣವೇ ಆಕ್ರಮಣ ಮಾಡಬಾರದು. ನಿಮ್ಮನ್ನು ಅವಮಾನಿಸಿದಾಗ ನೀವು ಅವರನ್ನು ಅವಮಾನಗೊಳಿಸಬಾರದು. ಒಂದು ನಿರ್ಧಿಷ್ಟ ಪ್ರಮಾಣದವರೆಗೂ ನಾವು ನಮ್ಮನ್ನು ಹಿಡಿತದಲ್ಲಿಟ್ಟುಕೊಳ್ಳಬೇಕು. " ಗುರುಗಳು ಹೇಳಿದ್ದಾರೆ ಅಭ್ಯಾಸಿಗರಾದ ನಾವು ಇತರ ವ್ಯಕ್ತಿಗಳಿಗಿಂತ ಭಿನ್ನ ಮತ್ತು ನಾವು ಕ್ಷಮಿಸುವ ಬುದ್ಧಿಯುಳ್ಳವರಾಗಿರಬೇಕು". ಆತನು ಈ ಇಬ್ಬರು ವ್ಯಕ್ತಿಗಳೊಂದಿಗೆ ಚರ್ಚೆ ಮಾಡುವುದಿಲ್ಲ. ಆದರೆ ಸಾಮಾನ್ಯವಾಗಿ ಘರ್ಷಣೆಯುಂಟಾದಾಗ ಅದು ನಿಮ್ಮನ್ನು ಉದ್ರೇಕಿಸದಿದ್ದರೆ, ಅದು ಲೆಕ್ಕಕ್ಕೆ ಬರುವುದಿಲ್ಲ. ಮತ್ತು ನೀವು ಅದರಿಂದ ತಿದ್ದಿಕೊಳ್ಳಲಾಗುವುದಿಲ್ಲ. ಆದ್ದರಿಂದ ಈತನು ಆ ಮಾತುಗಳನ್ನು ತನ್ನ ಮನಸ್ಸಿನಿಂದ ಹೊರಹಾಕಲಾಗುವುದಿಲ್ಲ. ಆತನು ಕೆರಳುತ್ತಾನೆ, ಆತನಿಗೆ ಈ ಮಾತುಗಳನ್ನು ತನ್ನ ಮನಸ್ಸಿನಿಂದ ಅಳಿಸಿ ಹಾಕಲಾಗುವುದಿಲ್ಲ, ಈತನ ಬಗ್ಗೆ ಕೆಟ್ಟ ಮಾತುಗಳನ್ನಾಡುವ ಆ ಇಬ್ಬರು ವ್ಯಕ್ತಿಗಳ ಕ್ಷಣಿಕ ದರ್ಶನಕ್ಕಾಗಿ ಆತನು ಅಲ್ಲಲ್ಲಿ ಸುತ್ತಾಡಿ ಅವರನ್ನು ಕಾಣಬಯಸುತ್ತಾರೆ. ಈತನು ಅಲ್ಲಲ್ಲಿ ಸುತ್ತಾಡುತ್ತಾನೆ. ಮತ್ತು ಅಲ್ಲಿ ಆ ಇಬ್ಬರೂ ವ್ಯಕ್ತಿಗಳು ಸಂಕುಚಿತ ಮುಖಭಾವದಿಂದ ಗಹನವಾದ ಚರ್ಚೆಯಲ್ಲಿ ತೊಡಗಿರುವುದನ್ನು ಕಾಣುತ್ತಾನೆ. ಒಂದು ಕ್ಷಣ ಕೂಡ ಈತನಿಗೆ ಆ ದೃಶ್ಯವನ್ನು ನೋಡಿ ಸಹಿಸಲಾಗುವುದಿಲ್ಲ. ಈತನ ಕೋಪ ಭುಗಿಲೆದ್ದಿದೆ. ಆತ ತಕ್ಷಣವೇ ಆ ಇಬ್ಬರೊಂದಿಗೆ ಸ್ಥಳದಲ್ಲೇ ಕಾದಾಟಕ್ಕಿಳಿಯುವ ಸಾಧ್ಯತೆಗಳಿವೆ.

ಯಾರೊಂದಿಗಾದರೂ ಸಮಸ್ಯೆಯುಂಟಾಗಿದ್ದಾಗ ಮಧ್ಯದಲ್ಲಿ ನಮ್ಮ ಮನಸ್ಸನ್ನು ನಿಗ್ರಹಿಸಲು ಬಹಳ ಕಷ್ಟವಾಗುತ್ತದೆ. ನಾನು ಹೇಳುತ್ತೇನೆ. ಪ್ರತಿಯೊಂದನ್ನು ನಾವು ಧ್ಯಾನದಿಂದ ಹಿಡಿತದಲ್ಲಿಡಬಹುದಾದರೆ, ಅದು ಸುಲಭವಾಗುತ್ತದೆ. ಆದರೆ ಅದನ್ನು ಹಾಗೆ ಮಾಡಲಾಗುವುದಿಲ್ಲ.

ಆದ್ದರಿಂದ ಇನ್ನು ಮುಂದೆ ನೀವು ನಿಮ್ಮ ಅಭ್ಯಾಸದಲ್ಲಿ ಎಲ್ಲಾ ರೀತಿಯ ಯಾತನೆಯನನ್ನುಭವಿಸುತ್ತೀರಿ. ಯಾತನೆಯಿಲ್ಲದೆ ನೀವು ಹೇಗೆ ಅಭ್ಯಾಸವನ್ನು ಮಾಡುತ್ತೀರಿ. ಪ್ರತಿಯೊಬ್ಬರು ಮತ್ತೊಬ್ಬರನ್ನು ಉತ್ತಮವಾಗಿ ನಡೆಸಿಕೊಂಡರೆ ತಾವು ಮುನ್ನಡೆಯಲು ಯಾವುದೇ ಘರ್ಷಣೆಮಾಡಿಕೊಳ್ಳದಿದ್ದರೆ ಮತ್ತು ಯಾವುದೇ ಅಡಚಣೆಯುಂಟಾಗದಿದ್ದರೆ, ನೀವು ಸುಮ್ಮನೆ ಅಲ್ಲಿ ಕುಳಿತಿದ್ದರೆ ನಿಮ್ಮ ನಡತೆ ಉತ್ತಮಗೊಳ್ಳುತ್ತದೆಯೇ? ಅದು ಹಾಗೆ ಕೆಲಸಮಾಡುವುದಿಲ್ಲ. ನಿಜ ಜೀವನದ ಸಂದರ್ಭಗಳಲ್ಲಿ ವ್ಯಕ್ತಿಯು ಶಾಂತತೆಯಿಂದಿರಬೇಕಾಗುತ್ತದೆ. ಅದೊಂದೇ ಮಾರ್ಗದಿಂದಲೇ ನೀವು ಪ್ರಗತಿ ಹೊಂದಲು ಸಾಧ್ಯ. ಕೆಲವರು ಆಶ್ಚರ್ಯಪಡುತ್ತಾರೆ." ಹೇಗೆ ನಾವು ಯಾವಾಗಲೂ ಪ್ರತಿ ದಿನದ ಅಭ್ಯಾಸಗಳಲ್ಲಿ ತೊಂದರೆಗಳ ನನ್ನುಭವಿಸುತ್ತೇವೆ? ಅವೆಲ್ಲಾ ಸಾಮಾನ್ಯ ಜನರು ಅನುಭವಿಸುವಂತಹದ್ದು ಆಗಿರುತ್ತದೆ." ಆದೇಕೆಂದರೆ ನೀವು ಅಭ್ಯಾಸವನ್ನು ಸಾಮಾನ್ಯ ಜನರ ನಡುವೆ ಮಾಡಿರುತ್ತೀರಿ ನೀವು ಒಮ್ಮೆಲೆ ತಲೆಕೆಳಗಾಗಿ ಮೀಟಲಾಗುವುದಿಲ್ಲ. ಮೇಲೆ ತೇಲಲಾಗುವುದಿಲ್ಲ. ಮತ್ತು ಗಾಳಿಯಲ್ಲಿ ತೂಗಲಾಗುವುದಿಲ್ಲ. ಥಟ್ಟನೆ ಕಷ್ಟವನ್ನನುಭವಿಸಲು ಗಾಳಿಯಲ್ಲಿ ಎಳೆದು ಹಾಕಲಾಗುವುದಿಲ್ಲ. ಅದೆಲ್ಲಾ ಆಗುವುದಿಲ್ಲ. ಇವೆಲ್ಲಾ ಸಾಮಾನ್ಯರಿಗೆ ಆಗುವಂತಹ ಸಂಧರ್ಭಗಳು, ಕೆಲವರು ನಿಮಗೆ ತೊಂದರೆಯನ್ನುಂಟುಮಾಡುವುದು. ಕೆಲವರು ನಿಮ್ಮ ಮೇಲೆ ಕೋಪ ಮಾಡಿಕೊಳ್ಳುವುದು ನಿಮ್ಮನ್ನು ಕೆಟ್ಟದಾಗಿ ನಡೆಸಿಕೊಳ್ಳುವುದು, ಅಥವಾ ನಿಮಗೆ ಒರಟಾಗಿ ಏನನ್ನಾದರೂ ಹೇಳುವುದು ಯಾವುದೇ ಕಾರಣವಿಲ್ಲದೆ ಇದೆಲ್ಲವನ್ನು ನೀವು ಹೇಗೆ ನಿರ್ವಹಿಸುತ್ತೀರಿ ಎಂಬುವುದೇ ನೋಡುವುದು ಆಗಿರುತ್ತದೆ.

ನೀವು ಈ ಸಮಸ್ಯೆಗಳಲ್ಲಿ ಏಕೆ ಸಿಲುಕಿಕೊಳ್ಳುತ್ತೀರಿ? ಇದೆಲ್ಲಾ ನಿಮ್ ಸ್ವಂತ ಕರ್ಮದಿಂದುಟಾದದ್ದು. ಎಣಿಕೆ ಮಾಡಲಾಗದಷ್ಟು ಭಾಗವನ್ನು ನಾವು ನಿಮಗಾಗಿ ಈಗಾಗಲೇ ಕಡಿಮೆ ಮಾಡಿದ್ದೇವೆ. ಈಗ ಕೆಲ ಅಂಶಮಾತ್ರ ಉಳಿದಿದೆ. ನಿಮ್ಮ ನಡತೆಯನ್ನು ಉತ್ತಮ ಪಡಿಸಿಕೊಳ್ಳಲೋಸುಗ ಈ ಅಂಶವನ್ನು ವಿವಿಧ ಹಂತಗಳಲ್ಲಿ ಹಂಚಲಾಗಿದೆ. ನಿಮ್ಮ ಮನೋ ನಿಗ್ರಹಕ್ಕಾಗಿ ಮತ್ತು ಬಂಧನಗಳನ್ನು ಕಳಚಿಕೊಳ್ಳಲೋಸುಗ ಯಾತನೆಯನ್ನು ನಿರ್ದೇಶಿಸಲಾಗಿದೆ. ನೀವು ಇವೆಲ್ಲವನ್ನೂ ಗೆಲ್ಲಬೇಕು. ನೀವು ಎಲ್ಲಿಯವರೆಗೂ ನಿಮ್ಮ ನಡತೆಯನ್ನು ಉತ್ತಮ ಪಡಿಸಿಕೊಳ್ಳುತ್ತೀರೋ, ನೀವು ಇವುಗಳ ಮೇಲೆ ವಿಜಯವನ್ನು ಸಾಧಿಸಬಹುದಾಗಿದೆ. ಇದು ಕೇವಲ ನೀವು ಕರ್ಮದ ಅಂಶದ ಮೇಲೆ ವಿಜಯ ಸಾಧಿಸುವ ಇಚ್ಛೆ ಇಲ್ಲದಿರಬಹುದು. ನಿಮಗೆ ವಿಜಯ ಸಾದಿಸಬೇಕೆಂಬ ಇಚ್ಛೆಯಿದ್ದರೆ ಖಂಡಿತ ವಾಗಿಯೂ ನೀವು ಜಯಪಡೆಯಬಹುದು.

ಇನ್ನು ಮುಂದೆ, ಎನಾದರೂ ಘರ್ಷಣೆಯಾದರೆ, ನೀವು ಅದನ್ನು ಸಾಂಧರ್ಭಿಕ ವೆಂದು ಕೊಳ್ಳಬಾರದು. ಏಕೆಂದರೆ ಯಾವುದೇ ಘರ್ಷಣೆಯುಂಟಾದಾಗ ಇದು ಎಲ್ಲಿಂದಲೋ ಬಂದಂತಹದ್ದಾಗಿರುವುದಿಲ್ಲ. ಇದು ಸಾಂಧರ್ಭಿಕವೂ ಆಗಿರುವುದಿಲ್ಲ. ಇದು ನಿಮ್ಮ ನಡತೆಯನ್ನು ಉತ್ತಮ ಪಡಿಸಿಕೊಳ್ಳಲೇ ಆಗಿರುತ್ತದೆ. ಎಲ್ಲಿಯವರೆಗೂ ನಿಮ್ಮನ್ನು ನೀವು ಅಭ್ಯಾಸಿಗರಾಗಿ ನೋಡುತ್ತೀರೋ ನೀವು ಇದನ್ನು ಚೆನ್ನಾಗಿ ನಿರ್ವಹಿಸುವಿರಿ.

ಬಹುಶಃ ಯಾತನೆಯಾಗಲಿ ಅಥವಾ ಘರ್ಷಣೆಯಾಗಲಿ ಯಾವಾಗ ಬರುತ್ತದೆಂದು ನಿಮಗೆ ಹೇಳಲಾಗುವುದಿಲ್ಲ. ಎಲ್ಲವನ್ನು ನಿಮಗೆ ಹೇಳಿಬಿಟ್ಟರೆ ನೀವು ಹೇಗೆ ಅಭ್ಯಾಸವನ್ನು ಮಾಡುವಿರಿ? ಅದು ಉದ್ದೇಶವನ್ನೇ ಸೋಲಿಸುತ್ತದೆ. ಸಾಮಾನ್ಯವಾಗಿ ಅದು ಅನಿರೀಕ್ಷಿತವಾಗಿ ಬರುತ್ತದೆ. ಕೇವಲ ಇದೊಂದು ಮಾರ್ಗದಿಂದ ಮಾತ್ರ ನಿಮ್ಮ ನಡತೆಯನ್ನು ಪರೀಕ್ಷಿಸಲಾಗುವುದು. ಕೇವಲ ಇದೊಂದು ಮಾರ್ಗದಿಂದಲೇ ನಿಮ್ಮ ನಡತೆ ಸತ್ಯವಾಗಿಯೂ ಉತ್ತಮಗೊಳ್ಳುತ್ತದೆ. ಈ ಮಾರ್ಗದಿಂದ ನಿಮ್ಮ ನಡತೆಯನ್ನು ಕಾಪಾಡಿಕೊಳ್ಳಲಾಗುವುದೇ ಎಂಬುದನ್ನು ಹೇಳಬಹುದು. ಆದ್ದರಿಂದಲೇ ಘರ್ಷಣೆಗಳು ಸಾಂಧರ್ಭಿಕವಾಗಿ ಬರುವುದಿಲ್ಲ. ಆದ್ದರಿಂದ ನಿಮ್ಮ ಅಭ್ಯಾಸದ ಸಂಪೂರ್ಣ ಪಥದಲ್ಲಿ ಕರ್ಮದ ರೂಪಾಂತರವಾಗಬೇಕಾದಾಗ ಈ ಪರೀಕ್ಷೆಯನ್ನನುಭವಿಸಬೇಕಾಗುತ್ತದೆ. ಇದು ನಮ್ಮ ದೇಹದಂಡನೆಗಿಂತ ಹೆಚ್ಚು ಕಠಿಣವಾಗಿರುತ್ತದೆ. ಸಾಮಾನ್ಯ ಜನರ ಚಿತ್ರಣದಂತೆ, ನೀವು ಕೆಲವು

ಸಾಧನೆಗಳನ್ನು ಮಾಡುತ್ತೀರಿ. ಇದನ್ನು ಕೆಲ ಹೆಚ್ಚಿನ ಸಮಯದವರೆಗೂ ಮಾಡಿ, ತಾಳಿಕೊಳ್ಳುವವರೆಗೂ ಕೈಗಳನ್ನು ಮೇಲಕ್ಕೆತ್ತಿ ನಿಲ್ಲಿ, ಅಥವಾ ನಿಮ್ಮ ಕಾಲುಗಳು ಸೋತುಹೋಗುವವರೆಗೂ ನಿಂತುಕೊಂಡಿರಿ ನಂತರ ನಿಮ್ಮ ಕೃಷಿ ಶಕ್ತಿ ಬೆಳೆಯುವುದೇ? ಅದು ಮಾತ್ರವೇ ನಿಮ್ಮ ಆಂತರಿಕ ನಿವಾಸಿಯ ರೂಪ ಪರಿವರ್ತನೆಯಾಗುತ್ತದೆ. ಪುನರ್ಬಲವನ್ನು ನೀಡಲು ಇನ್ನೂ ಹೆಚ್ಚಿನ ಶಕ್ತಿ ಬೇಕಾಗುತ್ತದೆ. ಮತ್ತು ಇದು ನಿಮ್ಮ ಹಂತವನ್ನು ಮೇಲೇರಿಸುವುದಿಲ್ಲ. ದೇಹವನ್ನು ದಂಡಿಸಿ ನಾವು ಉತ್ತಮ ಸ್ಥಿತಿಗೇರುತ್ತೇವೆಂದು ಕೊಂಡರೆ ನಾನು ಹೇಳುತ್ತೇನೆ. ಬೇಸೀ ರೈತರು ಹೆಚ್ಚು ಕಷ್ಟವನ್ನನುಭವಿಸುತ್ತಾರೆ. ಆದ್ದರಿಂದ ಅವರೆಲ್ಲರೂ ಚಿಗಾಂಗ್ ಭವ್ಯ ಮಾಸ್ತರರಾಗಬೇಕಿತ್ತಲ್ಲವೇ? ನಿಮಗೆ ಎಷ್ಟು ಬೇಕೋ ಅಷ್ಟು ದೇಹವನ್ನು ದಂಡಿಸಬಹುದು. ಅವರು ಮಾಡುವುದಕ್ಕೆ ಇದನ್ನು ಹೋಲಿಸಲಾಗುವುದಿಲ್ಲ. ದಿನ ಪ್ರತಿ ದಿನ ಉರಿಯುವ ಬಿಸಿಲಿನಲ್ಲಿ ಹೊಲದಲ್ಲಿ ಕೆಲಸಮಾಡಿ ತಮ್ಮ ಸಂಪೂರ್ಣ ಶಕ್ತಿಯನ್ನು ಬರಿದು ಮಾಡುವುದು. ಆದ್ದರಿಂದ ಇದು ಅಷ್ಟು ಸುಲಭವಲ್ಲ. ಆದ್ದರಿಂದಲೇ ನಾವು ಹೇಳುತ್ತೇವೆ. ನಿಮ್ಮನ್ನು ನೀವು ತಿದ್ದಿಕೊಳ್ಳಬೇಕಾದರೆ ನಿಮ್ಮ ಮನಸ್ಸನ್ನು ಮೊದಲು ತಿದ್ದಿಕೊಳ್ಳಬೇಕು. ಅದೇ ನಿಜವಾದ ಸದುಪಯೋಗ.

ಕರ್ಮವು ರೂಪಾಂತರಗೊಳ್ಳಬೇಕಾದಲ್ಲಿ ನಾವು ಅದನ್ನು ವ್ಯವಸ್ಥಿತ ರೂಪದಲ್ಲಿ ನಿರ್ವಹಿಸಬೇಕಾದಲ್ಲಿ, ಸಾಮಾನ್ಯ ಜನರಂತೆ ವಿಷಯಗಳನ್ನು ಅವ್ಯವಸ್ಥೆ ಮಾಡಬಾರದು. ನಮಗೆ ಕರುಣೆ ತುಂಬಿದ ಹೃದಯ ಮತ್ತು ಶಾಂತವಾದ ಮನಸ್ಸು ನಮಗೆ ಅವಶ್ಯವಿದೆ. ಎಂದಾದರೂ ಸಮಸ್ಯೆಗಳು ನಿಮಗೆ ಆಕಸ್ಮಿಕವಾಗಿ ಬಂದಲ್ಲಿ ಮನಸ್ಸು ನಮಗೆ ಅವಶ್ಯವಿದೆ. ಎಂದಾದರೂ ಸಮಸ್ಯೆಗಳು ನಿಮಗೆ ಆಕಸ್ಮಿಕವಾಗಿ ಬಂದಲ್ಲಿ ನೀವು ಸಮಸ್ಯೆಯನ್ನು ಚೆನ್ನಾಗಿ ನಿರ್ವಹಿಸಬಲ್ಲವರಾಗಿರುತ್ತಿರಿ. ನಿಮ್ಮ ಮನಸ್ಸು ಶಾಂತಿಯಿಂದಲೂ ಮತ್ತು ಸಂತೃಪ್ತಿ ಯಿಂದಿದ್ದಾಗ, ಆಕಸ್ಮಿಕವಾಗಿ ಯಾವುದೇ ಸಮಸ್ಯೆ ನಿಮಗೆ ಬಂದರೆ ಸಾಮಾನ್ಯವಾಗಿ ನಿಮಗೆ ಬಂದರೆ ಸಾಮಾನ್ಯವಾಗಿ ನಿಮಗೆ ಅದರ ಬಗ್ಗೆ ಯೋಚಿಸುವ ಸಾಧನ ಮತ್ತು ಅವಕಾಶ ದೊರೆಯುತ್ತದೆ. ಆದರೆ ನಿಮ್ಮ ಮನಸ್ಸು ಇತರರೊಂದಿಗೆ ಒಮ್ಮತವಿಲ್ಲದಿರುವುದನ್ನು ಯೋಚಿಸುತ್ತಿದ್ದರೆ, ಇದರೊಂದಿಗೆ, ಅದರೊಂದಿಗೆ ಹೋರಾಡುತ್ತಿದ್ದರೆ ಮತ್ತೆ ನಾನು ಹೇಳುತ್ತೇನೆ. ಒಮ್ಮೆ ನೀವು ಈ ಸಮಸ್ಯೆಯ ಸುಳಿಯಲ್ಲಿ ಸಿಲುಕಿಕೊಂಡರೆ ನೀವು ಕಾದಾಡಲು ಮೊದಲಿಡುತ್ತೀರಿ. ಇದಕ್ಕೆ ನಾನು ಭರವಸೆ ಕೊಡುತ್ತೇನೆ. ಹಾಗಾಗಿ ನೀವು ಯಾವುದಾದರೂ ಘರ್ಷಣೆಯಲ್ಲಿ ಸಿಲುಕಿಕೊಂಡರೆ, ಇದರ ಉದ್ದೇಶವು ಪಾಪವನ್ನು ಪುಣ್ಯವನ್ನಾಗಿ ಪರಿವರ್ತಿಸುವ ಒಂದು ಸಾಧನೆ. ಅದೇ ಪವಿತ್ರಗುಣವೆಂದು ನಾನು ಹೇಳುತ್ತೇನೆ.

ಮಾನವರಾದ ನಾವು ಈ ದಿನ ಈ ಹಂತಕ್ಕೆ ತಲುಪಿದ್ದೇವೆ. ಮತ್ತು ಹೆಚ್ಚು ಕಮ್ಮಿ ಪ್ರತಿಯೊಬ್ಬರೂ ಕರ್ಮದ ಮೇಲೆ ಕರ್ಮವನ್ನು ಕ್ರೋಡೀಕರಿಸುತ್ತೇವೆ. ಪ್ರತಿಯೊಬ್ಬರಿಗೂ ಕ್ರೋಢೀಕರಿಸಿದ ಹೆಚ್ಚು ಕರ್ಮವುಂಟು. ಆದ್ದರಿಂದ ಕರ್ಮದ ರೂಪಾಂತರದಲ್ಲಿ ಸಾಮಾನ್ಯವಾಗಿ ಹೀಗಾಗುತ್ತದೆ. ನಿಮ್ಮ ಗಾಂಗ್ ಬೆಳೆಯುತ್ತಿದ್ದಾಗ, ನಿಮ್ಮ ನಡತೆಯು ಉತ್ತಮಗೊಳ್ಳುತ್ತಿದ್ದಾಗ ಅದೇ ಸಮಯದಲ್ಲಿ ನಿಮ್ಮ ಕರ್ಮ ಕಡಿಮೆಯಾಗು ತ್ತಿರುತ್ತದೆ/ಕರಗುತ್ತಿರುತ್ತದೆ ಮತ್ತು ಅದೇ ಸಮಯದಲ್ಲಿ ರೂಪಾಂತರಗೊಳ್ಳುತ್ತಿರುತ್ತದೆ, ನೀವು ಬೇರೊಬ್ಬರೊಂದಿಗೆ ಸಮಸ್ಯೆಯ ಸುಳಿಯಲ್ಲಿ ಸಿಲುಕಿಕೊಂಡರೆ ನಮ್ಮ ನಡತೆಯ ಸ್ವಭಾವವು ಘರ್ಷಣೆಯ ರೂಪದಲ್ಲಿ ಕಾಣಿಸಿಕೊಳ್ಳುತ್ತದೆ. ನೀವು ಇದನ್ನು ತಾಳಿಕೊಂಡರೆ ನಿಮ್ಮ ಕರ್ಮವು ವರ್ಜಿತವಾಗುತ್ತದೆ.

ಅಭ್ಯಾಸದಲ್ಲಿ, ನಿಜವಾಗಿಯೂ ನಿಮಗೆ ಯಾರೊಂದಿಗಾದರೂ ಸಮಸ್ಯೆವುಂಟಾಗಿದ್ದಲ್ಲಿ ಅಥವಾ ಇತರರು ನಿಮ್ಮೊಂದಿಗೆ ಕೆಟ್ಟದ್ದಾಗಿ ನಡೆಸಿಕೊಂಡಲ್ಲಿ ಇದು ಇವೆರಡರಲ್ಲಿ ಒಂದು ಚಿತ್ರಣವಾಗಿರುತ್ತದೆ. ಮೊದಲನೆಯದು ನೀವು ಹಿಂದಿನ ಜನ್ಮದಲ್ಲಿ ಅವರನ್ನು ಸರಿಯಾಗಿ ಆದರಿಸಿರುವುದಿಲ್ಲ. ಎಲ್ಲೋ ತಪ್ಪಾದಂತೆನಿಸುತ್ತದೆ ನಿಮಗೆ "ಅವರು ನನ್ನನ್ನೇಕೆ ಅನಾವರಿಸುತ್ತಿದ್ದಾರೆ?" ಸರಿ, ನೀವೇಕೆ ಅವರನ್ನು ಮೊದಲು ಈ ರೀತಿ ಅನಾದರಿಸಿದ್ದೀರಿ? ನೀವು ಹೇಳುತ್ತೀರಿ, "ಹಿಂದೇನು ನಡೆದಿತ್ತೋ ಅದರ ಬಗ್ಗೆ ನನಗೆ ತಿಳಿದಿಲ್ಲವೆಂದು ಈ ಜನ್ಮಕ್ಕೂ ಹೋದ ಜನ್ಮಕ್ಕೂ ಯಾವುದೇ ಸಂಬಂಧವಿಲ್ಲವೆಂದು ನೀವು ಹೇಳುತ್ತೀರಿ" ಆದರೆ ಅದು ಹೀಗೆ ಕೆಲಸ ಮಾಡುವುದಿಲ್ಲ.

ಇಲ್ಲಿ ಇನ್ನೊಂದು ಚಿತ್ರಣವಿದೆ. ನೀವು ಇನ್ನೊಬ್ಬರೊಂದಿಗೆ ಘರ್ಷಣೆಯಿಟ್ಟು ಕೊಂಡಲ್ಲಿ ಇಲ್ಲಿ ಸಮಾವೇಶಗೊಂಡಂತಹ ಕರ್ಮವು ರೂಪಾಂತರಗೊಂಡು ಹೊರ ಬೀಳುತ್ತದೆ. ನಾವು ಈ ಪ್ರತಿಯೊಂದನ್ನು ನಿರ್ವಹಿಸುತ್ತಿರುವಾಗ ನಾವು ಬಹಳ ಕ್ಷಮಾ ಶೀಲರಾಗಬೇಕಾಗಿರುತ್ತದೆ. ಮತ್ತು ನಾವು ಸಾಮಾನ್ಯ ಜನರಂತೆ ವರ್ತಿಸಲಾಗುವುದಿಲ್ಲ. ಕೆಲಸದ ಮೇಲೆ ಇತರರೊಂದಿಗೆ ಸಂವಹನವಿರುತ್ತದೆ. ನೀವು ಕೆಲಸ ಮಾಡುವ ಇತರ ವಾತಾವರಣದಲ್ಲೂ ಸಹ ಇದು ಒಂದೇ ರೀತಿಯದ್ದಾಗಿರುತ್ತದೆ. ಅಥವಾ ನೀವು ಸ್ವಯಂ ಉದ್ಯೋಗಿಯಾಗಿದ್ದಾಗಿದ್ದಾಗಲೂ ಸಹ ಇದು ಒಂದೇ ರೀತಿಯಾಗಿರುತ್ತದೆ. ಹೊರ ಪ್ರಪಂಚದೊಂದಿಗೆ  ನೀವು ಯಾವುದೇ ಸಂಪರ್ಕವಿಟ್ಟುಕೊಂಡಿಲ್ಲದಿರಲು ಸಾಧ್ಯವೇ ಇಲ್ಲ–ಆದಷ್ಟು ಮಿತಿಯಿಂದ ನಿಮ್ಮ ಅಕ್ಕಪಕ್ಕದವರೊಂದಿಗೆ ಸಂವಹನ ಹೊಂದಿರಿ.

ನಿಮ್ಮ ಸಾಮಾಜಿಕ ವ್ಯವಹಾರಗಳಲ್ಲಿ ನಿಮಗೆ ಎಲ್ಲಾ ರೀತಿಯ ಭಿನ್ನಾಭಿಪ್ರಾಯಗಳುಂಟು ಸಾಮಾನ್ಯ ಜನರ ಸುತ್ತಲಿನ ಪರಿಸರದಲ್ಲಿ ಅಭ್ಯಾಸಮಾಡುವ ಒಂದು ಭಾಗವು, ನಿಮ್ಮಲ್ಲಿ ಎಷ್ಟು ಹಣವಿದೆಯೆಂದು ಇದು ಪರಿಗಣಿಸುವುದಿಲ್ಲ. ಎಷ್ಟು ಉನ್ನತ ಮಟ್ಟದ ಅಧಿಕಾರದ ಸ್ಥಾನವನ್ನು ಪಡೆದಿದ್ದೀರೆಂಬುದಲ್ಲ. ನೀವೆಂತಹ ವ್ಯವಹಾರವನ್ನು ಮಾಡುತ್ತಿದ್ದೀರೆಂದು ಇದು ಪರಿಗಣಿಸುವುದಿಲ್ಲ. ಮಾಡುವ ಕೆಲಸವನ್ನು ಸರಿಯಾಗಿ ಮಾಡಿ ಮತ್ತು ಒಮ್ಮತವಾಗಿ ನಡೆದುಕೊಳ್ಳಿ. ಅಲ್ಲಿರುವಂತಹ ಪ್ರತಿ ಉದೋಗಗಳೂ ಅಸ್ತಿತ್ವದಲ್ಲಿರೇಕು. ಇದು ಕೇವಲ ಜನರು ಒಮ್ಮತದಲ್ಲಿಲ್ಲದಿರುವುದು ತಿಳಿಯುತ್ತದೆ. ಇದು ನೀವು ಯಾವ ಉದ್ಯೋಗದಲ್ಲಿರುವಿರಿ ಎಂಬುದರ ಬಗ್ಗೆ ಅಲ್ಲ. ಹಿಂದಿನ ಒಂದು ನಾಣ್ನುಡಿಯುಂಟು. "ಹತ್ತರಲ್ಲಿ ಒಂಭತ್ತು ವ್ಯಾಪಾರಿಗಳು ಮೋಸಗಾರರೇ". ಹಾಗೆಂದು ಸಾಮಾನ್ಯ ಜನರು ಹೇಳುತ್ತಾರೆ. ಆದರೆ ನಾನು ಹೇಳುತ್ತೇನೆ. ಇದು ಒಮ್ಮತದ ಸಮಸ್ಯೆ ಜನರಲ್ಲಿ ಒಮ್ಮತವಿದ್ದರೆ, ಜನರು ತಮ್ಮ ವ್ಯವಹಾರವನ್ನು ಸರಿಯಾಗಿ ಮಾಡುತ್ತಿದ್ದರೆ. ಹೆಚ್ಚಿನ ಪರಿಶ್ರಮ ಮಾಡಿದರೆ ಹೆಚ್ಚಿನ ಹಣ ಪಡೆಯಬಹುದು. ನೀವು ಇದನ್ನು ಪಡೆಯುವಿರಿ. ಏಕೆಂದರೆ ಸಾಮಾನ್ಯ ಪ್ರಪಂಚದಲ್ಲಿ ನೀವು ಹೆಚ್ಚಿನ ಪರಿಶ್ರಮದಿಂದ ದುಡಿದಿರುವಿರಿ ನಷ್ಟವಿಲ್ಲ, ಲಾಭವಿಲ್ಲ–ಇದು ಪ್ರಯತ್ನದಿಂದ ಮಾತ್ರ ಸಾಧ್ಯ ಸಮಾಜಿಕ ವರ್ಗದಲ್ಲಿ ನೀವು ಉತ್ತಮ ಪ್ರಜೆಯಾಗಿರುವುದು ವಿಭಿನ್ನ. ಸಾಮಾಜಿಕ ವರ್ಗಗಳಲ್ಲಿ ವಿವಿಧ ರೀತಿಯ ಘರ್ಷಣೆ ಗಳಿರುತ್ತವೆ. ಮೇಲ್ವರ್ಗಗಳಲ್ಲಿ ಮೇಲ್ವರ್ಗ ರೀತಿಯ ಘರ್ಷಣೆಗಳು ಮತ್ತು ಅವುಗಳನ್ನು ಸರಿಯಾದ ರೀತಿಯಲ್ಲಿ ನಿರ್ವಹಿಸುವುದು–ನೀವು ಯಾವುದೇ ಸಾಮಾಜಿಕ ವರ್ಗದಲ್ಲಿರಿ, ಹೇಗೆ ಉತ್ತಮ ವ್ಯಕ್ತಿಯಾಗುವುದು? ನೀವು ನಿಮ್ಮ ಆಕಾಂಕ್ಷೆಗಳನ್ನು ಮತ್ತು ಮೋಹವನ್ನು ಬಿಡಬೇಕು. ಸಮಾಜದ ವಿಭಿನ್ನ ವರ್ಗಗಳಲ್ಲಿ ನಿಮ್ಮನ್ನು ನೀವು ಉತ್ತಮರೆಂದು ಪ್ರತಿಪಾದಿಸಬಹುದು. ಮತ್ತೆ ನೀವೆಲ್ಲರೂ ನಿಮ್ಮದೇ ಆದ ಸಾಮಾಜಿಕ ವರ್ಗಗಳಲ್ಲಿ ಅಭ್ಯಾಸವನ್ನು ಮಾಡಬಹುದು.

ಪ್ರಸ್ತುತದಲ್ಲಿ ಚೈನಾದಲ್ಲಿ ರಾಜ್ಯ ನಡೆಸುತ್ತಿರುವ ಸಾಹಸೋಧ್ಯಮವಾಗಲಿ ಅಥವಾ ಇತರ ಯಾವುದೇ ಉದ್ಯಮವಾಗಲಿ ಸಮಸ್ಯೆಯಿಲ್ಲ. ಇವೆರಡರ ನಡುವೆ ಜನ ಎದುರಿಸುತ್ತಿರುವ ಸಮಸ್ಯೆ ಅನನ್ಯ. ಇತರ ದೇಶಗಳಲ್ಲಿ ಇಂತಹ ಅಸಾಧಾರಣ ಅದ್ಭುತಗಳಿರಲಿಲ್ಲ. ತಾವು ಮುಂದೆ ಬರುವ ಸಲುವಾಗಿ ಜನರು ಇಟ್ಟುಕೊಂಡಂತಹ ಘರ್ಷಣೆಗಳು ಗಮನಾರ್ಹವಾಗಿ ತೀವ್ರವಾಗಿತ್ತು. ಒಬ್ಬರ ವಿರುದ್ಧ ಮತ್ತೊಬ್ಬರು ಸಂಚುಮಾಡುತ್ತಾ ಮತ್ತು ವಾದ ಮಾಡುತ್ತಾ, ತಮ್ಮ ಕ್ಷುಲ್ಲಕ ಲಾಭಕ್ಕಾಗಿ ಬಡಿದಾಡುವವರು, ಅವರು ಹೊಂದಿರುವ ವಿಚಾರಗಳು ಮತ್ತು ಅವರು ಮಾಡುವ ವಂಚನೆ ಭಯಂಕರವಾಗಿರುತ್ತದೆ. ಉತ್ತಮ ವ್ಯಕ್ತಿಯಾಗುವುದು ಸಹ ಬಹಳ ಕಷ್ಟ. ಉದಾ ಯಾವುದಾದರೂ ಒಬ್ಬ ವ್ಯಕ್ತಿ ಉದ್ಯೋಗಾರ್ಥಿಯಾಗಿ ಬರುತ್ತಾರೆ. ತಾನು ಕೆಲಸ ಮಾಡುತ್ತಿರುವ ವಾತಾವರಣ ಸರಿಯಿಲ್ಲವೆಂಬ ಸಂವೇದನೆಯುಂಟಾಗುತ್ತದೆ. ನಂತರ ಯಾರೋ ಈತನಿಗೆ ಹೇಳುತ್ತಾರೆ. ಇನ್ನೊಬ್ಬ ವ್ಯಕ್ತಿಯು ಈತನ ಬಗ್ಗೆ ಗುಲ್ಲೆಬ್ಬಿಸಿದ್ದಾನೆಂದು ಮತ್ತು ಆತನು  ಸೂಪರ್‌ವೈಸರ್‌ಗೆ ಚಾಡಿ ಹೇಳಿರುವುದಾಗಿ ತಿಳಿಸುತ್ತಾನೆ. "ಆತನು ನಿಮ್ಮ ಗೌರವಕ್ಕೆ ಕುಂದು ತಂದಿದ್ದಾನೆಂದು ಅರಹುತ್ತಾರೆ." ಪ್ರತಿಯೊಬ್ಬರೂ ಆತನನ್ನು ವಿಚಿತ್ರವಾಗಿ ನೋಡುತ್ತಾರೆ. ಸಾಮನ್ಯ ಜನರು ಇದನ್ನು ಹೇಗೆ ಸಹಿಸಬಲ್ಲರು? ಅವರು ಹೇಗೆ ಇಂತಹ ರೀತಿಯ ಅಸತ್ಕಾರವನ್ನು ಸಹಿಸಲು ಸಾಧ್ಯ? "ಆತನು ನನಗೆ ಕೆಟ್ಟದ್ದನ್ನು ಮಾಡುತ್ತಾನೆ. ನಾನು ಅವನಿಗೆ ಕೆಟ್ಟದ್ದನ್ನು ಮಾಡುತ್ತೇನೆ. ಆತನ ಕಡೆ ಜನರಿದ್ದಾರೆ. ನನ್ನ ಕಡೆಗೂ ಸಹ ಜನರಿದ್ದಾರೆ. ಕಾದಾಡೋಣ" ಸಾಮಾನ್ಯ ಜನರೊಂದಿಗೆ ನೀವು ಹೀಗೆ ಮಾಡಿದರೆ ನೀವು ಹೆಚ್ಚಿನ ಶಕ್ತಿವಂತರೆಂದು ಅವರು ಭಾವಿಸುತ್ತಾರೆ. ಆದರೆ ಒಬ್ಬ ಅಭ್ಯಾಸಿಗನಿಗೆ ಇದು ಘೋರವಾಗಿರುತ್ತದೆ. ನಾವು ಸಾಮಾನ್ಯರಂತೆ

ಕಾದಾಟ ಮತ್ತು ಹೋರಾಟ ಮಾಡಿದರೆ, ನೀವು ಒಬ್ಬ ಸಾಮಾನ್ಯ ವ್ಯಕ್ತಿಯಾಗುತ್ತೀರಿ. ಆತನಿಗಿಂತ ಹೆಚ್ಚೇನು ವಿಶೇಷವಾಗಿ ನೀವು ಮಾಡಿದ್ದರೆ ನೀವು ಸಾಮಾನ್ಯನಿಗಿಂತ ಕೀಳ್ಮಟ್ಟದಲ್ಲಿರುತ್ತೀರಿ.

ಹಾಗಾದರೆ ನಾವು ಈ ಪ್ರಸಂಗಗಳನ್ನು ಹೇಗೆ ಎದುರಿಸಬೇಕು? ನಿಮಗೆ ಇಂತಹ ಒಂದು ಸಮಸ್ಯೆ ಎದುರಾದಾಗ, ಮೊದಲು ನಾವು ಶಾಂತಚಿತ್ತರಾಗಿರಬೇಕು. ಮತ್ತು ಅವರು ನಿರ್ವಹಿಸಿದ ಮಾರ್ಗದಲ್ಲಿ ನಾವು ಈ ಪ್ರಸಂಗವನ್ನು ನಿರ್ವಹಿಸಬಾರದು. ಬಹುಶಃ ನಾವು ಇದನ್ನು ಸಹೃದಯದಿಂದ ವಿವರಿಸಬಹುದು. ವಿಷಯವನ್ನು ಸ್ಪಷ್ಟೀಕರಿಸಬಹುದು. ಅದು ಒಂದು ಸಮಸ್ಯೆಯಲ್ಲ. ಆದರೆ ಆ ಸಮಸ್ಯೆಗೆ ನೀವು ಹೆಚ್ಚು ಅಂಟಿಕೊಂಡಿರಬಾರದು. ಈ ಸಮಸ್ಯೆಗಳನ್ನು ನಾವು ಎದುರಿಸಬೇಕಾದಾಗ ಸಮಾನ್ಯ ಜನರಂತೆ ನಾವು ಕಾದಾಡುವುದಾಗಲಿ ಸ್ಪರ್ಧೆಗೆ ಬೀಳುವುದಾಗಲಿ ಮಾಡಬಾರದು. ಅವರು ನಡೆದಂತೆ ನೀವೂ ಸಹ ನಡೆದರೆ, ನೀವು ಒಬ್ಬ ಸಾಮಾನ್ಯ ವ್ಯಕ್ತಿಯಾಗಲಿಲ್ಲವೇ? ಅವರೊಂದಿಗೆ ಕಾದಾಡುವುದೂ, ಸ್ಪರ್ಧೆಗೆ ಬೀಳುವುದು ಹಾಗಿರಲಿ, ನೀವೂ ಆತನನ್ನು ದ್ವೇಷಿಸಲುಬಾರದು.

ಒಮ್ಮೆ ಆತನನ್ನು ದ್ವೇಷಿಸಲಾರಂಭಿಸಿದರೆ ನಿಮಗೆ ಕೋಪ ಬರಲಾರಂಭಿಸಿರುವು ದಿಲ್ಲವೇ? ನೀವು ತಾಳ್ಮೆಯಿಂದ ಬಾಳುವುದರಲ್ಲಿ ಅನುತ್ತೀರ್ಣರಾಗಿರುತ್ತೀರಿ. ನಾವು ಸತ್ಯವಂತರೂ, ಉತ್ತಮರೂ ಮತ್ತು ತಾಳ್ಮೆಯುಳ್ಳವರಾಗಲು ವಿಶೇಷ ಪ್ರಯತ್ನವನ್ನು ಮಾಡುತ್ತೇವೆ. ಹೆಚ್ಚೇನು ನಿಮ್ಮ ಒಳ್ಳೆಯತನ ಎಲ್ಲೂ ಕಾಣಸಿಗುವುದಿಲ್ಲ. ಆದ್ದರಿಂದ ನೀವು ಅವರಂತೆ ನಟಿಸಬಾರದು. ಮತ್ತು ನೀವು ಸತ್ಯವಾಗಿಯೂ ಅವರೊಂದಿಗೆ ಕೋಪಿಸಿಕೊಳ್ಳಬಾರದು. ಅವರು ನಿಮ್ಮ ಗೌರವಕ್ಕೆ ಧಕ್ಕೆ ತಂದು ಅಪಮಾನ ಮಾಡಿದ್ದರೂ ಸಹ ನೀವು ಅವರಂತೆ ನಡೆಯಬಾರದು. ಆತನೊಂದಿಗೆ ಕೋಪಿಸಿಕೊಳ್ಳಬಾರದು. ಮತ್ತು ನಿಮ್ಮ ಹೃದಯಾಂತರಾಳದಿಂದ ಆತನಿಗೆ ಧನ್ಯವಾದಗಳನ್ನರ್ಪಿಸಬೇಕು. ಸತ್ಯವಾಗಿಯೂ ಧನ್ಯವಾದಗಳನ್ನರ್ಪಿಸಿ ಒಬ್ಬ ಅತಿ ಸಾಮಾನ್ಯನು ಈ ರೀತಿ ಯೋಚಿಸಬಹುದು. ಆ ವ್ಯಕ್ತಿಯನ್ನು ನೋಡಿದೆ ಅನುಕಂಪ ಮೂಡುವುದಿಲ್ಲವೇ? **ಆಹ್–ಕ್ಕು?** ನಾನು ಹೇಳುತ್ತೇನೆ ಇದು ಹಾಗಲ್ಲ.

ಇದರ ಬಗ್ಗೆ ವಿಚಾರಮಾಡೋಣ. ನೀವು ಒಬ್ಬ ಅಭ್ಯಾಸಿಗರು. ನೀವು ಒಂದು ಉಚ್ಚ ಪ್ರಮಾಣವನ್ನು ಅನುಸರಿಸುವುದಿಲ್ಲವೇ? ಸಾಮಾನ್ಯ ಜನರು ಅನುಸರಿಸುವಂತಹ ಅಳತೆಗೋಲನ್ನು ನೀವು ಉಪಯೋಗಿಸಬಾರದು. ನೀವು ಅಭ್ಯಾಸಿಗರು. ಆದ್ದರಿಂದ ನೀವು ಪಡೆಯುವಂತಹ ವಸ್ತುಗಳೆಲ್ಲ ಉಚ್ಚಮಟ್ಟದ್ದಲ್ಲವೇ? ನಂತರ ನೀವು ಉಚ್ಚಮಟ್ಟದ ಅಳತೆಗೋಲನ್ನು ನೀವು ಅನುಸರಿಸಬೇಕು. ಆತನು ನಡೆದಂತೆ ನೀವೂ ನಡೆದರೆ ನೀವೂ ಆತನಂತಗಲಿಲ್ಲವೇ? ಮತ್ತೆ ನೀವೇಕೆ ಆತನಿಗೆ ಧನ್ಯವಾದಗಳನ್ನರ್ಪಿಸಬೇಕು? ಅದರ ಬಗ್ಗೆ ಯೋಚಿಸಿ, ನಿಮಗೇನು ಸಿಗುತ್ತದೆ. ಈ ಪ್ರಪಂಚದಲ್ಲಿ ಒಂದು ನಿಯಮದಂತೆ "ನಷ್ಟವಿಲ್ಲ, ಲಾಭವಿಲ್ಲ"– ನೀವೇನನ್ನಾದರೂ ಪಡೆಯಬೇಕೆಂದರೆ ನೀವೇನನ್ನಾಧರೂ ಕಳೆದುಕೊಳ್ಳ ಬೇಕು. ಸಾಮಾನ್ಯ ಜನಗರೊಟ್ಟಿಗೆ ನಿಮ್ಮ ಚಾರಿತ್ರ್ಯಕ್ಕೆ ಮಸಿಹಚ್ಚಿರುತ್ತಾನೆ. ಇತರರ ಖರ್ಚಿನ ಬಾಬತ್ತಿನಿಂದ ಲಾಭ ಪಡೆಯುವ ವ್ಯಕ್ತಿಯೆಂದು ಅವರನ್ನು ಪರಿಗಣಿಸುತ್ತೇವೆ. ಆತನು ಎಷ್ಟು ಕೆಟ್ಟ ಮಸಿ ಬಳಿಯುವ ಕೆಲಸ ಮಾಡಿರುತ್ತಾನೆಯೋ ಅದರ ಪರಿಣಾಮವು ಅಷ್ಟು ಗಂಭೀರವಾಗಿರುತ್ತದೆ. ನೀವು ಅದಕ್ಕೆ ಹೆಚ್ಚು ಹೆಗಲುಕೊಟ್ಟಷ್ಟು ಆತನು ತನ್ನ ಪವಿತ್ರ ಗುಣಗಳನ್ನು ಕಳೆದುಕೊಳ್ಳುತ್ತಾನೆ. ಮತ್ತು ಆ ಪವಿತ್ರಗುಣಗಳನ್ನು ನಿಮಗೆ ಕೊಡಲಾಗುತ್ತದೆ. ಅದೇ ಸಂದರ್ಭದಲ್ಲಿ ನೀವು ಅದಕ್ಕೆ ಭುಜಕೊಡುವಾಗ ನೀವದನ್ನು ಹಗುರವಾಗಿ ತೆಗೆದುಕೊಳ್ಳಬಹುದು ಮತ್ತು ಮನಸ್ಸಿಗೆ ಹಚ್ಚಿಕೊಳ್ಳದಿರಬಹುದು.

ಈ ಜಗತ್ತಿನಲ್ಲಿ ಇನ್ನೊಂದು ನಿಯಮವುಂಟು. ಹೆಚ್ಚು ಕಷ್ಟವನ್ನು ಅನುಭವಿಸಿದಂತಹ ವ್ಯಕ್ತಿ ನೀವು, ಆದ್ದರಿಂದ ನಿಮ್ಮ ಸ್ವಂತ ಕರ್ಮ ಮಾತ್ರ ರೂಪಾಂತರಗೊಳ್ಳುತ್ತದೆ. ನೀವಿದಕ್ಕೆ ಬೆಲೆಯನ್ನು ತೆತ್ತಿದ್ದೀರಿ. ನೀವು ಎಷ್ಟು ಹೆಚ್ಚು ತಾಳಿಕೊಂಡಿದ್ದರೆ. ಅಷ್ಟು ಹೆಚ್ಚು ಕರ್ಮದ ರೂಪಾಂತರಗೊಂಡಿರುತ್ತದೆ. ಮತ್ತು ಇದೆಲ್ಲವೂ ಪವಿತ್ರಗುಣವಾಗಿ ಮಾರ್ಪಾಡಾಗಿರುತ್ತದೆ.

---

1. **ಆಹ್–ಕ್ಕು?** – ಚೀನಿಯರ ಕಾದಂಬರಿಗಳಲ್ಲಿನ ಮೂರ್ಖ ಪಾತ್ರ.

ಅಭ್ಯಾಸಿಗನಿಗೆ ಈ ಪವಿತ್ರಗುಣವಲ್ಲವೇ ಬೇಕಾಗಿರುವುದು? ಎರಡು ರೀತಿಯಿಂದ ನೀವು ಲಾಭ ಪಡೆಯಲಿಲ್ಲವೇ? ನಿಮ್ಮ ಕರ್ಮ ಸಹ ಕಳೆದು ಹೋಗಿರುತ್ತದೆ. ಆತನು ನಿಮಗೆ ಈ ಸಂದರ್ಭವನ್ನು ಸೃಷ್ಟಿಸದಿದ್ದಲ್ಲಿ ನಿಮ್ಮ ನಡತೆಯನ್ನು ಎಲ್ಲಿ ಉತ್ತಮಪಡಿಸಿ ಕೊಳ್ಳುತ್ತಿದ್ದೀರಿ? ನೀವು ನಮ್ಮನ್ನು ಚೆನ್ನಾಗಿ ಸತ್ಕರಿಸುತ್ತೀರಿ. ನಾವೂ ನಿಮ್ಮನ್ನು ಚೆನ್ನಾಗಿ ಸತ್ಕರಿಸುತ್ತೇವೆ. ನಾವಲ್ಲಿ ಕುಳಿತು ನಮ್ಮನ್ನು ನಾವೇ ಹೆಚ್ಚೆಂದು ಪರಿಗಣಿಸಿಕೊಳ್ಳುತ್ತೇವೆ. ಮತ್ತೆ ನಿಮ್ಮ ಕೃಷಿ ಶಕ್ತಿ ಬೆಳೆಯುತ್ತದೆ. ಅದು ಹೇಗಾಗಲೂ ಸಾಧ್ಯ? ಅದು ನಿಷ್ಕೃಷ್ಟವಾಗಿ/ನಿಖರವಾಗಿ ಹಾಗೆ ಏಕೆಂದರೆ ನಿಮಗಾಗಿಯೇ ಈತನು ಆ ಸಂಘರ್ಷವನ್ನು ಸೃಷ್ಟಿಸಿರುವನು. ಏಕೆಂದರೆ ಈ ಅವಕಾಶವನ್ನು ನಿಮ್ಮ ನಡತೆಯನ್ನು ಉತ್ತಮ ಪಡಿಸಿ ಕೊಳ್ಳುವುದಕ್ಕಾಗಿಯೇ ಸೃಷ್ಟಿಸಿರುವನು. ಅದರ ಮೂಲಕ ನೀವು ನಿಮ್ಮ ನಡತೆಯನ್ನು ಉತ್ತಮಪಡಿಸಿಕೊಳ್ಳಲೆಂದು ಈಗ ನಿಮ್ಮ ನಡತೆಯು ಉತ್ತಮಗೊಳ್ಳಲಿಲ್ಲವೇ? ನೀವು ಮೂರು ರೀತಿಯಲ್ಲಿ ಲಾಭ ಹೊಂದಿರುತ್ತೀರಿ. ನೀವೊಬ್ಬ ಅಭ್ಯಾಸಿಗರು ಆದ್ದರಿಂದ ಈಗ ನಿಮ್ಮ ನಡತೆಯು ಉತ್ತಮಗೊಂಡಿರುವುದು, ನಿಮ್ಮ ಗಾಂಗ್ ಹೆಚ್ಚಾಗಲಿಲ್ಲವೇ? ಒಂದೇ ಗುಂಡಿನಿಂದ ನಾಲ್ಕು ರೀತಿಗಳಲ್ಲಿ ನೀವು ಲಾಭ ಹೊಂದಿರುತ್ತೀರಿ. ಹೇಗೆ ಆ ವ್ಯಕ್ತಿಗೆ ಧನ್ಯವಾದಗಳನ್ನರ್ಪಿಸದೇ ಇರುವಿರಿ? ನಿಮ್ಮ ಹೃದಯಾಂತರಾಳದಿಂದ ಆ ವ್ಯಕ್ತಿಗೆ ನೀವು ಧನ್ಯವಾದಗಳನ್ನರ್ಪಿಸಬೇಕು. ಅದು ಹಾಗೆಯೇ.

ಬಹುಶ: ಆತನ ಇಂಗಿತ ಒಳ್ಳೆಯದಲ್ಲ. ಇಲ್ಲದಿದ್ದಲ್ಲಿ ಆತನು ನಿಮಗೆ ಪವಿತ್ರ ಗುಣವನ್ನು ಕೊಡುತ್ತಿರಲಿಲ್ಲ. ಆದರೆ ಆತನು ನಿಮ್ಮ ನಡತೆಯನ್ನು ಉತ್ತಮಪಡಿಸಿಕೊಳ್ಳಲು ಒಂದು ಅವಕಾಶವನ್ನು ಇತ್ತಿದ್ದಾನೆ. ಎಲ್ಲಾ ಸಮಯದಲ್ಲೂ ನೀವೂ ಅಭ್ಯಾಸವನ್ನು ಮಾಡುತ್ತಿದ್ದರೆ ನಿಮ್ಮ ಕರ್ಮ ಸಂಪೂರ್ಣ ನಶಿಸುವುದು. ಇದು ಪವಿತ್ರಗುಣವಾಗಿ ರೂಪಾಂತರ ಹೊಂದುವುದು. ಈ ಮಾರ್ಗದಿಂದ ಮಾತ್ರ ನಮ್ಮ ಸ್ಥಿತಿಯನ್ನು ಉತ್ತಮ ಪಡಿಸಿಕೊಳ್ಳಬಹುದು. ಇವು ಒಂದಕ್ಕೊಂದು ಪೂರಕವಾಗಿರತ್ತದೆ. ನೀವು ಉಚ್ಚ ಹಂತದಿಂದ ಇದನ್ನು ನೋಡಿದಾಗ ಸತ್ಯವೆಲ್ಲವೂ ಬದಲಾಗಿರುತ್ತದೆ. ಸಾಮಾನ್ಯ ವ್ಯಕ್ತಿಯು ಇದನ್ನು ಅರ್ಥಮಾಡಿಕೊಳ್ಳಲಾಗುವುದಿಲ್ಲ. ನೀವು ಇದನ್ನು ಉಚ್ಚ ಮಟ್ಟದಿಂದ ನೋಡಿದಾಗ ಸಂಪೂರ್ಣ ವಿಷಯಗಳು ತಲೆಕೆಳಗಾಗಿ ಕಾಣುತ್ತವೆ. ಸಾಮಾನ್ಯ ಜನರು ನೋಡುವಂತೆ, ಆದಾಗ್ಯೂ ಇದು ಸರಿ ಆದರೆ ಸತ್ಯವಾಗಿಯೂ ಇದು ಸರಿಯಿಲ್ಲ. ವಿಷಯಗಳನ್ನು ನೀವು ಉಚ್ಚ ಮಟ್ಟದಿಂದ ಕಂಡಾಗ ಅವು ಸತ್ಯವಾಗಿಯೂ ಸರಿಯಾಗಿರುತ್ತದೆಯೇ. ಸಾಮಾನ್ಯವಾಗಿ ಇದು ಹಾಗೆಯೇ.

ನನ್ನ ಊಹೆಯನ್ನು ಸಾಧ್ಯಂಥವಾಗಿ ವಿವರಿಸಿದ್ದೇನೆ. ನಿಮ್ಮ ಮುಂದಿನ ಕೃಷಿಯಲ್ಲಿ ನಿಮ್ಮನ್ನು ನೀವೇ ಅಭ್ಯಾಸಿಗರಾಗಿ ಕಾಣಬಯಸುವಿರೆಂದು ಊಹಿಸುತ್ತೇನೆ. ಏಕೆಂದರೆ, ಇದರ ಮೂಲ ತತ್ವ ಇಲ್ಲೇ ಇದೆ. ಅಂದಿನಿಂದಲೂ ಸಾಮಾನ್ಯರೊಡನಿರುವ ಕೆಲ ವ್ಯಕ್ತಿಗಳು ಅಲ್ಲಿ ತಮ್ಮ ಮುಂದಿರುವಂತಹ ಪ್ರತ್ಯಕ್ಷ, ಸುಸ್ಪಷ್ಟ ಅನುಕೂಲಗಳನ್ನು ಹೆಚ್ಚು ಪ್ರಾಯೋಗಿಕವೆಂದು ನಂಬುತ್ತಾರೆ. ಸಾಮಾನ್ಯ ಜನರ ಪ್ರಬಲ ಪ್ರವಾಹದಲ್ಲಿ ಅವರು ತಮ್ಮನ್ನು ತಾವು ಉನ್ನತ ಪ್ರಮಾಣದಲ್ಲಿರಿಸಿಕೊಳ್ಳಲಾರರು. ನೀವು ಒಬ್ಬ ಉತ್ತಮ ಸಾಮಾನ್ಯ ವ್ಯಕ್ತಿಯಾಗಬೇಕಾದರೆ ಒಬ್ಬ ನಾಯಕರನ್ನೋ ಮತ್ತು ಮಾದರಿ ಪ್ರಜೆಯನ್ನು ಉದಾಹರಣೆಯಾಗಿ ತೆಗೆದುಕೊಳ್ಳಬಹುದು. ಆದರೆ ನೀವೊಬ್ಬ ಅಭ್ಯಾಸಿಗರಾಗಬಯಸಿದರೆ ನಿಮ್ಮ ಅಭ್ಯಾಸವು ಸಂಪೂರ್ಣವಾಗಿ ನಿಮ್ಮ ಮನಸ್ಸನ್ನು ಅವಲಂಭಿಸಿರುತ್ತದೆ. ನೀವು ಅರ್ಥಮಾಡಿಕೊಳ್ಳುವುದು ಸಹ ನಿಮ್ಮ ಸ್ವಯಂ ಆಧಾರಿತವಾಗಿರುತ್ತದೆ. ಇಲ್ಲಿ ಯಾವುದೇ ಮಾಧರಿ ನಟಿಸಿರುವುದಿಲ್ಲ. ಒಳ್ಳೆಯ ವಿಷಯವೇನೆಂದರೆ "ಶ್ರೇಷ್ಠ ಕಾನೂನನ್ನು" ಕಲಿಯುವ ಅವಕಾಶ ಮಾಡಿಕೊಡಲಾಗಿದೆ. ಆದರೆ ಹಿಂದೆ ನೀವು ಅಭ್ಯಾಸಮಾಡಬೇಕೆಂದರೂ ಕಲಿಸಿಕೊಡಲು ಯಾರೊಬ್ಬರೂ ಸಿಗುತ್ತಿರಲಿಲ್ಲ. ಆದ್ದರಿಂದ ಶ್ರೇಷ್ಠ ಕಾನೂನನ್ನು ಅನುಸರಿಸಿ ಮತ್ತು ನೀವು ಸ್ವಲ್ಪ ಸುಧಾರಣೆಗೊಂಡಿದ್ದೀರೆನಿಸಬಹುದು. ನೀವು ಅಭ್ಯಾಸ ಮಾಡಬಹುದಾ, ಇದು ಉಪಯುಕ್ತದ ಯಾವ ಹಂತಕ್ಕೇರಬಲ್ಲದ್ದು?–ಇದೆಲ್ಲವೂ ನಿಮ್ಮನ್ನವಲಂಭಿಸಿದೆ.

ಬಹುಶಃ ಕರ್ಮದ ರೂಪಾಂತರವು ನಾನು ಮೇಲೆ ಹೇಳಿದ ಮಾರ್ಗದಲ್ಲೇ ಆಗಬೇಕೆಂದೇನಿಲ್ಲ. ಇದನ್ನು ಬೇರೆ/ಇತರೆ ರಂಗ ಸ್ಥಳಗಳಲ್ಲೂ ಸಹ ವಿವರಿಸಬಹದು. ಹೊರ ಪ್ರಪಂಚದಲ್ಲಿ, ಮನೆಯಲ್ಲಿ ಇದು ಎಲ್ಲಿ ಬೇಕಾದರೂ ಆಗಬಹುದು. ನೀವೂ ರಸ್ತೆಯಲ್ಲಿ ನಡೆಯುತ್ತಿದ್ದಾಗ ನಿಮಗೆ ಯಾವುದೇ ಸಮಸ್ಯೆ ಎದುರಾಗಬಹುದು. ಅಥವಾ ಇದು ಇನ್ಯಾವುದೇ ಹೊರ ಪ್ರಪಂಚದಲ್ಲಾಗಬಹುದು. ಸಾಮಾನ್ಯ

ಜನರೊಂದಿಗಿರುವ ಸಂಪರ್ಕವನ್ನು ಬಾಂದವ್ಯವನ್ನು ಬಿಡಲಾಗುವುದಿಲ್ಲ. ಆದರೆ ಈ ಬಂಧನವನ್ನು ಕಳಚಿಕೊಳ್ಳಬೇಕು. ಎಲ್ಲಿಯವರೆಗೂ ಈ ಬಾಂಧವ್ಯವವನ್ನು ಇಟ್ಟುಕೊಂಡಿರುತ್ತೀರೋ ಅವೆಲ್ಲವುಗಳನ್ನು ವಿವಿಧ ಹಿನ್ನಲೆಯಲ್ಲಿ ಧರಿಸಬೇಕು. ನೀವು ಎಡವುತ್ತೀರಿ ಅವರಿಂದ ನೀವು ಸತ್ಯವನ್ನರಿಯುತ್ತೀರಿ. ಈ ರೀತಿಯಿಂದಲೇ ನೀವು ಅಭ್ಯಸಿಸುವುದು.

ಇಲ್ಲಿ ಇನ್ನೊಂದು ಪ್ರಶಂಸನೀಯ ಸಾಂಕೇತಿಕ ಸಂಧರ್ಭವುಂಟು. ಹೆಚ್ಚಿನ ಜನಗಳಿಗೆ ಅಭ್ಯಾಸ ಪ್ರಕ್ರಿಯೆಯಲ್ಲಿ ನೀವು ಅಭ್ಯಾಸವನ್ನು ಮಾಡುತ್ತಿದ್ದಾಗೆ ನಿಮ್ಮ ಜೊತೆಗಾರ್ತಿ/ಜೊತೆಗಾರ ಆಗಾಗ ಅಸಂತೋಷಗೊಳ್ಳುತ್ತಾನೆ. ಮತ್ತು ನೀವು ನಿಮ್ಮ ಅಭ್ಯಾಸವನ್ನು ಆರಂಬಿಸಿದ ತಕ್ಷಣವೇ ಆತನು ನಿಮ್ಮೊಂದಿಗೆ ಜಗಳಕ್ಕಿಳಿಯುತ್ತಾನೆ. ಆದರೆ ನೀವು ಬೇರೇನಾದರೂ ಮಾಡುತ್ತಿದ್ದಲ್ಲಿ ಆತನು ನಿಮ್ಮ ಗೊಡವೆಗೆ ಬರುವುದಿಲ್ಲ. ಬಹುಶಃ ನೀವು **'ಮಾಜಾಂಗ್' (MahJong)** ಆಟವಾಡಿ ಸಮಯ ವ್ಯರ್ಥ ಮಾಡುತ್ತೀರೆಂದುಕೊಳ್ಳಿ ಆಗಲೂ ಸಹ ಆತ ಸಂತೋಷಿಸುವುದಿಲ್ಲ. ಆದರೆ ನೀವು ಅಭ್ಯಾಸಮಾಡುತ್ತಿದ್ದಾಗ ಅಸಂತೋಷಪಟ್ಟಷ್ಟು ಈಗ ಅಸಂತೋಷ ಪಡುವುದಿಲ್ಲ. ನಿಮ್ಮ ಅಭ್ಯಾಸವು ಆತನಿಗೆ ಯಾವುದೇ ತೊಂದರೆಯನ್ನುಂಟುಮಾಡುವುದಿಲ್ಲ. ಅವರ ನಡುವೆ ಬರದಂತಹ ಕೆಲಸವನ್ನು ನಿಮ್ಮ ದೇಹಕ್ಕೆ ಕೊಟ್ಟಿರಿತ್ತೀರಿ. ಆದರೆ ನೀವು ನಿಮ್ಮ ಅಭ್ಯಾಸ ಆರಂಭಿಸಿದ ನಂತರ ಆತನು ಎಲ್ಲವನ್ನೂ ಎಸೆದು ನಿಮ್ಮೊಡನೆ ಕಾದಾಡಲಾರಂಭಿಸುತ್ತಾನೆ. ಕೆಲವು ಜೋಡಿಗಳು ವಿವಾಹವಿಚ್ಛೇದನದ ಹಂತದವರೆಗೂ ತಲುಪುತ್ತಾರೆ. ಏಕೆಂದರೆ ಅವರಲ್ಲೊಬ್ಬರು ಅಭ್ಯಾಸವನ್ನು ಮಾಡುತ್ತಿರುತ್ತಾರೆ. ಹೆಚ್ಚು ಮಂದಿಯು ವಿಚ್ಛೇದನವನ್ನು ನಿಲ್ಲಿಸಿ ಇದೇಕಾಗುತ್ತಿದೆಯೆಂದು ಯೋಚಿಸುವುದಿಲ್ಲ. ಆನಂತರ ಅವರನ್ನು ನೀವು ಪ್ರಶ್ನಿಸಿ "ನಾನು ಅಭ್ಯಾಸ ಮಾಡುತ್ತಿರುವಾಗ ನೀವೇಕಷ್ಟು ಕೋಪಗೊಳ್ಳುತ್ತಿರೆಂದು"? ಆತನು ಒಂದು ಕಾರಣವನ್ನು ಹುಡುಕಲಾರ. ಸತ್ಯವಾಗಿಯೂ ಒಂದೂ ಕಾರಣವನ್ನು ಹುಡುಕಲಾರ. "ಹೇ ನಾನಷ್ಟು ಕೋಪ ಗೊಳ್ಳಬಾರದಿತ್ತೆಂದುಕೊಳ್ಳುತ್ತಾರೆ" ಆದರೆ ಆ ಸಮಯದಲ್ಲಿ ಆತ ಅತಿಕೋಪಗೊಂಡಿರುತ್ತಾನೆ. ಹಾಗಾದರೆ ನಿಜವಾಗಿಯೂ ಏನಾಗುತ್ತಿದೆ? ನೀವು ಅಭ್ಯಾಸವನ್ನು ಮಾಡುತ್ತಿದ್ದಾಗ ನಿಮ್ಮ ಕರ್ಮವು ರೂಪಾಂತರಗೊಳ್ಳಬೇಕು-ನಷ್ಟವಿಲ್ಲ, ಲಾಬವಿಲ್ಲ. ನಾವು ಕಳೆದುಕೊಂಡಿರುವುದು ಕೆಟ್ಟ ವಿಚಾರಗಳು ಮತ್ತು ಅದಕ್ಕೆ ನಾವು ಬೆಲೆಯನ್ನು ತೆರಬೇಕು.

ನೀವು ಮುಂಬಾಗಿಲಿನಿಂದ ಕಾಲಿಟ್ಟೊಡನೆಯೇ ನಿಮ್ಮ ಅರ್ಧಾಂಗಿಯು ನಿಮ್ಮ ಮುಖದ ಮೇಲೆ ಬಿರುನುಡಿಗಳನ್ನು ನುಡಿಯಬಹುದು. ನೀವು ಇದನ್ನು ಸಹಿಸಿಕೊಂಡರೆ ಈ ದಿನದ ನಿಮ್ಮ ಅಭ್ಯಾಸವು ವ್ಯರ್ಥವಾಗುವಂತಾಗುವುದಿಲ್ಲ. ಯಾರಾದರೊಬ್ಬರು ನಿಮ್ಮ ಹೆಂಡತಿಗೆ ಹೇಳಕೊಡಬಹುದು. ಅಂದಿನಿಂದ ಆತನಿಗೆ ತಿಳಿದಿದೆ. ನೀವು ಪವಿತ್ರಗುಣಗಳನ್ನು ತರಬೇತಿ ಪಡೆಯುವಾಗ ಬಹಳ ಗಂಭೀರವಾಗಿ ಪರಿಗಣಿಸುವಿರೆಂದು. ಆದ್ದರಿಂದ ಆತನು ಯೋಚಿಸುತ್ತಾನೆ. "ಸಾಮಾನ್ಯವಾಗಿ ಆಕೆಯು ನನ್ನ ಮಾತುಗಳನ್ನು ಒಪ್ಪದಿರುವುದಿಲ್ಲ. ಆದರೆ ಈ ದಿನ ಆಕೆ ನನ್ನನ್ನೆದುರಿಸಿ ಮಾತನಾಡುತ್ತಿದ್ದಾಳೆ.

ನಿಮ್ಮ ಕೋಪ ಕುದಿಯಲಾರಂಭಿಸುತ್ತದೆ ಮತ್ತು ನೀವು ಆಕೆಯೊಂದಿಗೆ ಕಾದಾಡಲಾರಂಭಿಸುತ್ತೀರಿ. ನಂತರ ಈ ದಿನದ ನಿಮ್ಮ ತರಬೇತಿಯು ನಿಷ್ಪ್ರಯೋಜಕವಾಗಿರುತ್ತದೆ. ಅದೇಕೆಂದರೆ ಅಲ್ಲಿ ಕರ್ಮವಿದೆ. ಮತ್ತು ಸಂಪೂರ್ಣವಾಗಿ ಆ ಕರ್ಮವನ್ನು ಅಳಿಸಲು ಆಕೆಯು ನಿಮಗೆ ಸಹಾಯ ಮಾಡುತ್ತಿರುತ್ತಾರೆ. ಆದರೆ ಆಕೆಯು ನಿಮಗೆ ಸಹಾಯ ಮಾಡಲು ನೀವು ಬಿಡುವುದಿಲ್ಲ. ಆಕೆಯೊಂದಿಗೆ ಜಗಳ ಶುರುಮಾಡುತ್ತೀರಿ. ಆದ್ದರಿಂದ ನಿಮ್ಮ ಕರ್ಮ ಕಳೆದುಕೊಳ್ಳಲು ಸಾಧ್ಯವಾಗಲಿಲ್ಲ. ಇಂತಹ ಎಷ್ಟೋ ಸಂಗತಿಗಳು ನಡೆಯುತ್ತವೆ. ಇಂತಹ ಸಂದರ್ಭಗಳು ನಮ್ಮಂತಹ ಎಷ್ಟೋ ಜನರಿಗೆ ಒದಗುತ್ತವೆ. ಆದರೆ ಒಂದೇ ಕ್ಷಣವೂ ಸಹ ತಡೆದು ನಾವು ಇದಕ್ಕೆ ಕಾರಣವನ್ನು ಆಲೋಚಿಸುವುದಿಲ್ಲ. ನೀವು ಬೇರೇನನ್ನಾದರೂ ಮಾಡುತ್ತಿರುವಾಗ ಆಕೆಯು ನಿಮ್ಮನ್ನು ಪ್ರೀತಿಸುವುದಿಲ್ಲ. ನೀವು ಉತ್ತಮವಾದ ಕೆಲಸವನ್ನು ಮಾಡುತ್ತಿದ್ದರೂ ಸಹ ಆಕೆ ನಿರ್ಲಕ್ಷ್ಯಮಾಡುತ್ತಾಳೆ. ಆಕೆಗೆ ಗೊತ್ತಿಲ್ಲದಂತೆಯೇ ಆಕೆಯು

---

2. **'ಮಾಜಾಂಗ್' (MahJong)** – ಚೀನಿಯರ ಸಾಂಪ್ರದಾಯಕ ಆಟ.

ಪ್ರತ್ಯಕ್ಷವಾಗಿ ಮತ್ತು ಪ್ರಾಮಾಣಿಕವಾಗಿ ನಿಮ್ಮ ಕರ್ಮವನ್ನು ಕಳೆಯಲು ಪ್ರಯತ್ನಿಸುತ್ತಿದ್ದಾಳೆ. ಆಕೆಯು ಕೇವಲ ಮೇಲ್ನೋಟಕ್ಕೆ ನಿಮ್ಮೊಂದಿಗೆ ಕಾದಾಡುತ್ತಿಲ್ಲ. ಆಂತರಿಕವಾಗಿ ಆಕೆಯು ನಿಮಗೆ ಒಳ್ಳೆಯವಳಾಗಿದ್ದಾಳೆ ಇದು ಹಾಗಲ್ಲ. ಆಕೆಯು ಯಾಥಾರ್ಥವಾಗಿಯೂ ಕೋಪ ಗೊಂಡಿದ್ದಾಳೆ. ಅದು ಏಕೆಂದರೆ ಯಾರಿಗೆ ಕರ್ಮವುಂಟಾಗಿರುತ್ತದೆಯೋ ಅವರು ಆ ನೋವನ್ನನುಭವಿಸುತ್ತಾರೆ. ಇದು ಖಂಡಿತವಾಗಿಯೂ ಅದೇ ಮಾರ್ಗದಲ್ಲಿ ನಡೆಯವುದು.

## ನಡತೆಯ ಸುಧಾರಣೆ : Improving Character

ಹಿಂದೆ ಹೆಚ್ಚಿನ ಜನರು ತಮ್ಮ ನಡತೆಯ ಬಗ್ಗೆ ಎಚ್ಚರವಹಿಸಲಾಗುತ್ತಿರಲಿಲ್ಲ. ಆದ್ದರಿಂದ ಅವರು ತೊಂದರೆಗೆ ಸಿಲುಕಿಕೊಳ್ಳುತ್ತಿದ್ದರು. ಮತ್ತು ಒಂದು ಹಂತದವರೆಗೂ ಅಭ್ಯಾಸ ಮಾಡಿದ ನಂತರ ಅವರು ಅಲ್ಲಿಂದ ಮುಂದೆ ಹೋಗಲಾರದವರಾಗಿದ್ದರು. ಕೆಲ ಮಂದಿ ಜನ್ಮದಿಂದಲೇ ಆಕರ್ಷಕ ಗುಣಗಳನ್ನು ಹೊಂದಿರುತ್ತಾರೆ. ಮತ್ತು ಅವರು ಅಭ್ಯಾಸ ಸಾಧನೆಯನ್ನು ಮಾಡುತ್ತಿದ್ದಾಗ ಅವರ ಮೂರನೆಯ ಕಣ್ಣು **(Third Eye)**ತತ್‌ಕ್ಷಣ ತೆರೆದುಕೊಳ್ಳುತ್ತದೆ. ಮತ್ತು ಅವರು ಖಚಿತವಾಗಿ ಉತ್ತಮ ಲೋಕವನ್ನು ತಲುಪುತ್ತಾರೆ. ಆ ವ್ಯಕ್ತಿಯ ಬುನಾದಿಯು/ಅಡಿಪಾಯವು ಆಕರ್ಷಕವಾಗಿ ಉತ್ತಮವಾಗಿರುತ್ತದೆ. ಆತನ ನಡತೆಯು ಅತ್ಯುತ್ತಮವಾಗಿರುತ್ತದೆ. ಆದ್ದರಿಂದ ಆತನ ಕೃಷಿಶಕ್ತಿಯು (ಗಾಂಗ್) ಶೀಘ್ರವಾಗಿ ಹೆಚ್ಚುತ್ತಾ ಹೋಗುತ್ತದೆ. ಆತನ ಗಾಂಗ್ ಆತನ ನಡತೆಯ ಹಂತಕ್ಕೆ ತಲುಪಿದಾಗ ಆತನು ತನ್ನ ಗಾಂಗ್ ಇನ್ನು ಹೆಚ್ಚಿಸಬೇಕೆಂದು ಬಯಸಿದಾಗ ಸ್ಪಷ್ಟವಾದ ಮಾನಸಿಕ ಉದ್ವೇಗವುಂಟಾಗುತ್ತದೆ. ಮತ್ತು ಆತನು ತನ್ನ ನಡತೆಯ ಸುಧಾರಣೆಯನ್ನು ಮಾಡಿಕೊಳ್ಳುವ ಅವಶ್ಯಕತೆಯಿರುತ್ತದೆ. ಯಾವ ವ್ಯಕ್ತಿಯು ಉತ್ತಮವಾದ ಬುನಾದಿಯೊಂದಿಗೆ ಜನ್ಮತಾಳಿರುತ್ತಾನೆಯೋ ಆ ವ್ಯಕ್ತಿಯ ವಿಷಯದಲ್ಲಿ ಇದು ಇನ್ನೂ ಸತ್ಯ ಆತನ ಕೃಷಿಶಕ್ತಿಯು ಆತನೊಂದಿಗೆ ಉತ್ತಮವಾಗಿ ಬರುತ್ತಿದೆ ಎಂಬುವುದು ಆತನಿಗೆ ಅನುಭವ ವೇದ್ಯವಾಗುತ್ತದೆ. ಹೇಗೆ ಒಮ್ಮೆಲೇ ಇದ್ದಕ್ಕಿದ್ದ ಹಾಗೆ ತೊಂದರೆಗಳು ಬರುತ್ತವೆ? ಹೇಗೆ ಎಲ್ಲವೂ ಇಷ್ಟು ಕಠೋರವಾಗಿರುತ್ತವೆ? ಪ್ರತಿಯೊಬ್ಬರೂ ಆತನನ್ನು ಕೆಟ್ಟದಾಗಿ ನಡೆಸಿಕೊಳ್ಳುತ್ತಾರೆ. ಆತನ ಮೇಲಾಧಿಕಾರಿ ಆತನನ್ನು ಕೀಳಾಗಿ ಕಾಣುತ್ತಾನೆ. ಮತ್ತು ಮನೆಯಲ್ಲಿನ ವಿಷಯಗಳು ಒತ್ತಡಮಯವಾಗಿರುತ್ತವೆ? ಹೇಗೆ ಒಮ್ಮೇಲೇ ಇಷ್ಟೊಂದು ಸಮಸ್ಯೆಗಳುಂಟಾಗುತ್ತವೆ? ಆತನಿಗೆ ಇದು ಇನ್ನೂ ಅರ್ಥವಾಗಿಲ್ಲ. ಆತನ ಬುನಾದಿ ಉತ್ತಮವಾಗಿತ್ತು? ಹಾಗಾಗಿ ಆತನು ಒಂದು ನಿಗಧಿತವಾದ ಹಂತವನ್ನು ತಲುಪಲು ಸಾಧ್ಯವಾಯಿತು. ಮತ್ತು ಈಗ ಈ ಅಭ್ಯಾಸ ಸ್ಥಿತಿಯು ಕಾಣಸಿಗುತ್ತದೆ. ಆದರೆ ಒಬ್ಬ ಅಭ್ಯಾಸಿಗನಿಗೆ ಅದೇ ಅಂತಿಮ ಸಮಗ್ರತೆಯ ಪ್ರಮಾಣವೇ? ಈತನ ಅಭ್ಯಾಸವು ಇನ್ನೂ ಹೆಚ್ಚಿನ ಕಾಲದವರೆಗೂ ನಡೆಯಬೇಕಾಗಿದೆ? ನಿಮ್ಮನ್ನು ನೀವೇ ಸುಧಾರಣೆ ಮಾಡಿಕೊಳ್ಳಬೇಕು. ನೀವು ನಿಮ್ಮೊಂದಿಗೆ ತಂದಂತಹ ಸ್ವಲ್ಪ ಬುನಾದಿಯ ಫಲಿತಾಂಶವೇ ಆಗಿದೆ. ಆದ್ದರಿಂದಲೇ ನೀವು ಆ ಅಭ್ಯಾಸ ಸ್ಥಿತಿಯನ್ನು ತಲುಪಲು ಸಾಧ್ಯವಾಗಿದೆ. ನೀವು ಇನ್ನೂ ಹೆಚ್ಚಿನ ಸುಧಾರಣೆಯನ್ನು ಮಾಡಿಕೊಳ್ಳಬೇಕಾದರೆ ನಿಮ್ಮ ಅಭ್ಯಾಸದ ಪ್ರಮಾಣವನ್ನು ಹೆಚ್ಚಿಸಿಕೊಳ್ಳಬೇಕಾಗುತ್ತದೆ.

ಕೆಲ ಮಂದಿ ಹೇಳುತ್ತಾರೆ, " ನಾನು ಇನ್ನೂ ಹೆಚ್ಚಿನ ಹಣವನ್ನು ಸಂಪಾದಿಸುತ್ತೇನೆ, ಮತ್ತು ನನ್ನ ಸಂಸಾರಕ್ಕೆ ಜೀವನಪರ್ಯಂತ ಯಾವುದೇ ಹಣದ ಸಮಸ್ಯೆಯಿಲ್ಲವೆಂದು ದೃಢಪಡಿಸಿಕೊಳ್ಳುತ್ತೇನೆ. ಹಾಗಾಗಿ ನಾನು ಯಾವುದರ ಬಗ್ಗೆಯೂ ಚಿಂತೆಮಾಡಬೇಕಿಲ್ಲ ಮತ್ತು ನಾನು ಅಭ್ಯಾಸವನ್ನು ಮಾಡಲು ಹೊರಡುತ್ತೇನೆ." ನೀನು ಕನಸು ಕಾಣುತ್ತಿರುವೆಯೆಂದು ನಾನು ಹೇಳುತ್ತೇನೆ. ಮತ್ತೊಬ್ಬರ ಜೀವನದಲ್ಲಿ ನಾನು ಅತಿಕ್ರಮ ಪ್ರವೇಶ ಮಾಡಲು ಸಾಧ್ಯವಿಲ್ಲ, ನೀವು ಅವರ ಹಣೆಬರಹವನ್ನು ನಿರ್ಭಂಧಿಸಲು ಸಾಧ್ಯವಿಲ್ಲ, ಅವರು ನಿಮ್ಮ ಶ್ರೀಮತಿಯವರಾಗಿರಬಹುದು. ನಿಮ್ಮ ಮಕ್ಕಳಾಗಿರಬಹುದು. ಅಥವಾ ನಿಮ್ಮ ಬಂಧುಗಳದ್ದಾಗಿರಬಹುದು. ಇದು ನೀವು ತೆಗೆದುಕೊಳ್ಳುವ ತೀರ್ಮಾನವಾಗಿರುತ್ತದೆ. ಅಷ್ಟೇ ಅಲ್ಲ ನಿಮಗೆ ಮನೆಯಲ್ಲಿ ಯಾವುದೇ ಯೋಚನೆಯಿಲ್ಲದಿದ್ದರೆ ಮತ್ತು ನಿಮಗೆ ಯಾವುದೇ ತೊಂದರೆಯಿಲ್ಲದಿದ್ದರೆ ಅಭ್ಯಾಸ ಮಾಡಲು ನಿಮಗೆ ತೊಂದರೆಯೆನಿಸಿದೆ.

ಸಂಪೂರ್ಣ ಜೀವನದ ಸುಖಸಾಧನಗಳೊಂದಿಗೆ ಅಭ್ಯಾಸ ಮಾಡಿದರೆ ಯಾರು ಇದರ ಬಗ್ಗೆ ಕೇಳಿದ್ದಾರೆ? ಸಾಮಾನ್ಯ ಜನರ ದೃಷ್ಟಿಕೋನದಂತೆ ನೀವೂ ಸಹ ಇದರ ಬಗ್ಗೆ ಯೋಚಿಸುವಿರಿ.

ಯಾವುದಾದರೊಂದು ಅಭ್ಯಾಸವನ್ನು ನೀವು ಹೆಚ್ಚು ಯಾತನೆಯ ನಡುಯವೆಯೂ ಮಾಡಿರುತ್ತೀರಿ. ಅದು ನೀವು ನಿಮ್ಮ ಮನಸ್ಸಿನ ಆ ವೇಗವನ್ನು ಮತ್ತು ಅಭಿಲಾಷೆಗಳಿಂದ ಬೇರ್ಪಡಿಸಲು ಸಾಧ್ಯವೇ ಎಂಬುದನ್ನು ಪರೀಕ್ಷಿಸುತ್ತಿರುತ್ತದೆ ಮತ್ತು ನೀವು ಅವುಗಳನ್ನು ಹಗುರವಾಗಿ ತೆಗೆದುಕೊಳ್ಳುತ್ತೀರೋ ಎಂಬುದನ್ನು ನೋಡುತ್ತಿರುತ್ತದೆ. ನೀವು ಈ ಬಂಧನಗಳಿಗೆ ಒಳಗಾದರೆ ನೀವು ನಿಮ್ಮ ಅಭ್ಯಾಸವನ್ನು ಪೂರೈಸಲಾಗುವುದಿಲ್ಲ. ಪ್ರತಿಯೊಂದಕ್ಕೂ ತನ್ನದೇ ಆದ ಕಾರಣಗಳಿಗೆ ಮಾನವರು ಏಕೆ ಮಾನವತಾ ವಾದಿಗಳಾಗಬೇಕು? ಇದು ಖಂಡಿತವಾಗಿಯೂ ಏಕೆಂದರೆ ಮನುಷ್ಯನಲ್ಲಿ ಮನೋಭಾವ ವಿದೆ. ಜನರು ಮನೋಭಾವಕ್ಕಾಗಿ ಮಾತ್ರ ಬದುಕುತ್ತಾರೆ. ಕುಟುಂಬದ ಸದಸ್ಯರೊಡನೆಯ ಪ್ರೇಮ ಬಾಂಧವ್ಯ, ಸ್ನೇಹಕ್ಕಾಗಿ ಮಾಡುವ ಕ್ರಿಯೆಗಳು ನೀವು ಎಲ್ಲಿ ಹೋದರೂ ಸಹ ಈ ಮನೋಸ್ಥಿತಿಯಿಂದ ಹೊರಬರಲು ಸಾಧ್ಯವಿಲ್ಲ. ನೀವು ಏನನ್ನಾದರೂ ಮಾಡಲು ಇಚ್ಚಿಸುವಿರಿ, ನೀವೂ ಏನೂ ಮಾಡಲಾಗುವುದಿಲ್ಲ. ನೀವು ಸಂತೋಷವಾಗಿದ್ದೀರಿ. ನೀವು ಸಂತೋಷವಾಗಿಲ್ಲ. ನೀವು ಏನನ್ನು ಪ್ರೀತಿಸುವಿರಿ. ನೀವು ಏನನ್ನೂ ದ್ವೇಷಿಸುವಿರಿ. ಸಮಾಜದಲ್ಲಿ ಪ್ರತಿಯೊಂದೂ ಸಂಪೂರ್ಣವಾಗಿ ನಮ್ಮ ಮನೋಭಾವದಿಂದಲೇ ಬರುತ್ತದೆ.

ಈ ಭಾವೋದ್ವೇಗಗಳನ್ನು ಕಡಿದುಕೊಳ್ಳದಿದ್ದರೆ ನೀವು ಅಭ್ಯಾಸವನ್ನು ಮಾಡಲಾಗುವುದಿಲ್ಲ. ಅಕಸ್ಮಾತಾಗಿ ನೀವು ಈ ಆವೇಗಗಳಿಂದ ಹೊರಬಂದರೆ, ಯಾವುದರ ಪರಿಣಾಮವೂ ನಿಮ್ಮ ಮೇಲಾಗುವುದಿಲ್ಲ. ಮತ್ತು ಸಾಮಾನ್ಯ ಬಂಧನಗಳು ನಿಮ್ಮನ್ನು ಕೊಚ್ಚಿಕೊಂಡು ಹೋಗಲಾಗುವುದಿಲ್ಲ. ಉದಾತ್ತ ಗುಣವಾದ ಕರುಣೆ ಆ ಸ್ಥಾನವನ್ನು ಆಕ್ರಮಿಸಿಕೊಂಡಿರುತ್ತದೆ. ಆಧರೆ ಈ ಉದ್ವೇಗಗಳಿಂದ ಒಮ್ಮಲೇ ಬೇರ್ಪಡಲು ಸಾಧ್ಯವಿಲ್ಲ. ಅಭ್ಯಾಸವು ಒಂದು ದೀರ್ಘವಾದ ಪ್ರಕ್ರಿಯೆ, ಇದು ಬಂಧನಗಳಮದ ಕಳಚಿಕೊಳ್ಳುವಂತಹ ಒಂದು ನಿಧಾನವಾದ ಪ್ರಕ್ರಿಯೆ. ಆದರೆ ನೀವು ಖಂಡಿತವಾಗಿಯೂ ಶಿಸ್ತು ಬದ್ಧವಾಗಿರಬೇಕಾಗುವುದು.

ನಮಗೆ ಅಭ್ಯಸಿಗರ ಘರ್ಷಣೆಗಳು ತತ್ಕ್ಷಣವೇ ಬರುತ್ತಿರುತ್ತದೆ. ಆದ್ದರಿಂದ ನಾವೇನು ಮಾಡಬೇಕು? ನೀವು ಯಾವಾಗಲೂ ನಿಮ್ಮ ಮನಸ್ಸನ್ನು ಸಂತೃಪ್ತಿಯಿಂದಿಟ್ಟುಕೊಂಡರೆ, ನೆಮ್ಮದಿಯ ಮನಸ್ಥಿತಿಯನ್ನಿಟ್ಟುಕೊಂಡರೆ, ನೀವು ಯಾವುದೇ ರೀತಿಯ ಸಮಸ್ಯೆಯಲ್ಲಿ ಸಿಲುಕಿಕೊಂಡರೆ ನೀವು ಅದನ್ನು ಸುಲಭವಾಗಿ ನಿರ್ವಹಿಸಬಲ್ಲವರಾಗುತ್ತೀರಿ. ಏಕೆಂದರೆ ನಿಮ್ಮ ಅದು ನಿಮ್ಮ ನೆಮ್ಮದಿ ಮತ್ತು ಸಂತೃಪ್ತಿಯ ಸಮಸ್ಯೆಗಳನ್ನು ಬಿಡಿಸುವ ಮಧ್ಯಸ್ಥನಾಗಿ ಕೆಲಸ ಮಾಡುತ್ತದೆ. ನೀವು ಇತರರಲ್ಲಿ ಕರುಣೆಯಿಂದಿದ್ದರೆ ಮತ್ತು ಸ್ನೇಹದಿಂದಿದ್ದರೆ, ನೀವೇನಾದರೂ ಮಾಡುವಾಗ ಇತರರನ್ನು ಗಣನೆಗೆ ತೆಗೆದುಕೊಂಡರೆ ಮತ್ತು ಎಂದಾದರೂ ಇತರರೊಂದಿಗೆ ಗೊಡವೆಯುಂಟಾದರೆ ಮೊದಲು ಅವರು ಇದನ್ನು ಪರಿಗಣಿಸುವರೇ ಎಂದು ಯೋಚಿಸಿ ಅಥವಾ ಅವರಿಗೆ ಇದರಿಂದೇನಾಧರೂ ಹಾನಿಯುಂಟಾಗುವುದೇ ಎಂದು ಯೋಚಿಸಿ ನಂತರ ನಿಮಗ್ಯಾವುದೇ ಸಮಸ್ಯೆಯಾಗುವುದಿಲ್ಲ. ಆದ್ದರಿಂದ ನೀವು ಅಭ್ಯಾಸವನ್ನು ಮಾಡುವಾಗ ನೀವು ಉತ್ತಮ ಮತ್ತು ಅದಕ್ಕಿಂತ ಹೆಚ್ಚಿನ ಗುಣಮಟ್ಟವನ್ನು ಕಾಯ್ದುಕೊಳ್ಳಬೇಕು.

ಹಲವು ಬಾರಿ ಕೆಲ ಜನಗಳು ಇದನ್ನು ಯುಕ್ತವಾಗಿ ಅರ್ಥಮಾಡಿಕೊಳ್ಳುವುದಿಲ್ಲ. ಕೆಲವರ ಮೂರನೆಯ ಕಣ್ಣು ತೆರೆದಿರುತ್ತದೆ ಮತ್ತು ಅವರು ಬುದ್ಧನನ್ನು ಕಾಣುತ್ತಾರೆ. ಈತನು ತನ್ನ ಮನೆಗೆ ಹಿಂತುರಿಗಿ, 'ನೀವು ಹೇಗೆ ನನ್ನ ಬಗ್ಗೆ ಕಾಳಜಿ ವಹಿಸಿವು ದಿಲ್ಲವೆಂದು ಗೊಣಗುತ್ತಾ ಬುದ್ಧನನ್ನು ಪೂಜಿಸುತ್ತಾನೆ' ದಯವಿಟ್ಟು ಈ ಸಮಸ್ಯೆಯನ್ನು ಬಗೆಹರಿಸಲು ನನಗೆ ಸಹಾಯ ಮಾಡಿ!, ಆದರೆ ಬುದ್ಧನು ಹೆಜ್ಜೆಯಿಡುವುದಿಲ್ಲ. ಏಕೆಂದರೆ ಈ ಯಾತನೆಯನ್ನು ಕೊಟ್ಟವನು ಅವನೇ ಇದು ನಿಮ್ಮ ನಡತೆಯನ್ನು ಸುಧಾರಣೆಗೆ ಮಾಡಿಕೊಳ್ಳಲೆಂದು ಮತ್ತು ಇದು ನಿಮ್ಮ ನಡತೆಯನ್ನು ಸ್ಪರ್ಧೆಯ ಮುಖಾಂತರ ಉತ್ತಮಪಡಿಸಿಕೊಳ್ಳಲೆಂದು ಈ ಯಾತನೆಯನ್ನು ಕೊಟ್ಟಿರುತ್ತಾನೆ. ಹೇಗೆ ಆತನು ನಿಮಗಾಗಿ ಈ ಸಮಸ್ಯೆಯನ್ನು ಬಿಡಿಸುತ್ತಾನೆ? ಅಪರಿಮಿತವಾಗಿ ಆತನು ನಿಮ್ಮ ಸಮಸ್ಯೆಯನ್ನು ಬಿಡಿಸುವುದಿಲ್ಲ. ಆತನು ನಿಮ್ಮ ಸಮಸ್ಯೆಯನ್ನು ಬಿಡಿಸಿದರೆ ನಿಮ್ಮ 'ಕೃಷಿ ಶಕ್ತಿ' ಗಾಂಗ್ ಹೇಗೆ ಬೆಳೆಯುತ್ತದೆ.

ನೀವು ನಿಮ್ಮ ನಡತೆಯನ್ನು ಹೇಗೆ ಸುಧಾರಣೆ ಮಾಡಿಕೊಳ್ಳುವಿರಿ ಮತ್ತು ಹೇಗೆ ನಿಮ್ಮ ಹಂತವನ್ನು ಏರುವಿರಿ? ಅತಿಮುಖ್ಯವಾದುದ್ದೇನೆಂದರೆ, ನಿಮ್ಮ ಕೃಷಿಶಕ್ತಿಯನ್ನು ಬೆಳೆಸುವುದು. ಜ್ಞಾನಿಗಳು ನೋಡುವಂತೆ ಒಬ್ಬ ಮನುಷ್ಯನ ಜೀವನದ ಗುರಿಯು ಕೇವಲ ಮಾನವನಾಗಿರುವುದಲ್ಲ. ಮಾನಕುಲಕ್ಕೆ ಆತನ ಕೊಡುಗೆಯೇನೆಂಬುದು ಜನರು ತಾವು ಬಹಳ ಯಾತನೆಯನ್ನನುಭವಿಸುತ್ತಿರುವುದಾಗಿ ಹೇಳುತ್ತಾರೆ. ನೀವು ಎಷ್ಟು ಯಾತನೆಯನ್ನನುಭವಿಸಿದರೆ ಅಷ್ಟು ಉತ್ತಮವೆಂದು ಅವರು ಭಾವಿಸುತ್ತಾರೆ. ಏಕೆಂದರೆ ಇದು ನಿಮ್ಮ ಸಾಲಗಳನ್ನು (ಪಾಪಗಳನ್ನು) ಬೇಗ ತೀರಿಸುತ್ತದೆಯೆಂದು ಇವರು ಭಾವಿಸುತ್ತಾರೆ. ಅವರು ಹಗೆಯೇ ಯೋಚಿಸುತ್ತಾರೆ. ಕೆಲವರು ಇದನ್ನು ಅರ್ಥಮಾಡಿಕೊಳ್ಳುವುದಿಲ್ಲ. ಬುದ್ಧನನ್ನು ಈ ಸಂದಿಗ್ಧತೆಯಿಂದ ಪಾರುಮಾಡುತ್ತಿಲ್ಲ.? ದಿನನಿತ್ಯವೂ ನಾನು ನಿನಗೆ ಸುಗಂಧದ ಕಡ್ಡಿಗಳನ್ನು ಹಚ್ಚಿ ವಿಧೇಯತೆಯಿಂದ ನಿನಗೆ ಶಿರಭಾಗಿ ನಮಿಸಿದ್ದೇನೆ. ಕೆಲವರು ಬುದ್ಧನ ವಿಗ್ರಹವನ್ನು ಅಪ್ಪಳಸಿಬಿಡುತ್ತಾರೆ. ಮತ್ತು ಅವಾಚ್ಯ ಶಬ್ದಗಳಂದ ನಿಂದಿಸುತ್ತಾರೆ. ಆತನು ಅವಾಚ್ಯ ಶಬ್ದಗಳನ್ನುಉಯೋಗಿಸಲಾರಂಭಿಸಿ ದೊಡನೆಯೇ ಆತನ ನಡತೆಯು ಋಣಾತ್ಮಕವಾಗುತ್ತದೆ. ಆತನ ಕೃಷಿಶಕ್ತಿಯು ನಶಿಸುತ್ತದೆ. ಇನ್ನೇನು ಉಳದಿಲ್ಲವೆಂದು ಆತನಿಗೆ ತಿಳದಿರುತ್ತದೆ. ಆದ್ದರಿಂದ ಆತನು ಬುದ್ಧನ ಮೇಲೆ ಇನ್ನೂ ತೀವ್ರ ಅಸಮಾಧಾನಗೊಳ್ಳುತ್ತಾನೆ. ಬುದ್ಧನ ನಡತೆಯನ್ನು ಅಳೆಯಲು ಆತನು ಸಾಮಾನ್ಯ ಜನರ ತರ್ಕವನ್ನುಪಯೋಗಿಸಿರುತ್ತಾನೆ. ಆ ಮಾರ್ಗದಲ್ಲಿ ನೀವು ಅಳಯಲು ಸಾಧ್ಯವೇ? ಆತನು ಸಾಮಾನ್ಯ ಜನರ ಮಾಪನವನ್ನು ಅತ್ಯುತ್ತಮ ವಿಷಯಗಳನ್ನು ತಿಳಯಲು ಉಪಯೋಗಿಸುತ್ತಾನೆ? ಅದು ಹೇಗೆ ಕೆಲಸಮಾಡುತ್ತದೆ? ಆದ್ದರಿಂದ ಈ ರೀತಿಯ ತೊಂದರೆಗಳು ಆಗಾಗ್ಗೆ ಆಗುತ್ತದೆ. ಈತನಿಗೆ ಜೀವನದಲ್ಲಿ ತಾನು ಎದುರಿಸುವ ನೋವು ಆತನಿಗೆ ಅನ್ಯಾಮಾಡಿದಂತೆನಿಸುತ್ತದೆ. ಈ ರೀತಿಯಲ್ಲಿ ಜೀವನದಲ್ಲಿ ಎಷ್ಟೋ ಮಂದಿ ಎಡವಿದ್ದಾರೆ.

ಕೆಲವರ್ಷಗಳ ಹಿಂದಿನಿಂದಲು ಎಷ್ಟೋ ಮಂದಿ ಚಿಗಾಂಗ್ ಮಾಸ್ತರರು ಎಡವಿದ್ದಾರೆ. ಇವರಲ್ಲಿ ಕೆಲವು ದೊಡ್ಡ ಹೆಸರುಗಳೂ ಸಹ ಸೇರಿವೆ. ಬಹುಶಃ ನಿಜವಾದ ಚಿಗಾಂಗ್ ಮಾಸ್ತರರು ಹಿನ್ನಡೆಸಾಧಿಸಿದ್ದಾರೆ. ಅವರು ತಮ್ಮ ಇತಿಹಾಸ ಪ್ರಸಿದ್ಧ ಧರ್ಮಪ್ರಚಾರವನ್ನು ಮುಗಿಸಿ ಹಿಂದಿರಿಗಿದ್ದಾರೆ. ಈಗ ಕೇವಲ ಕೆಲವೇ ಮಂದಿ ಉಳದಿದ್ದಾರೆ. ಅವರು ತಮ್ಮ ಋಣಾತ್ಮಾಕ ನಡತೆಯಿಂದ ಸಾಮಾನ್ಯ ಜನರ ಮಧ್ಯೆ ಕಳೆದುಹೋಗಿದ್ದಾರೆ. ಈಗಲೂ ಅವರು ಉತ್ಸಾಹದಿಂದಿರುತ್ತಾರೆ. ಆದರೆ ಈಗ ಅವರಲ್ಲಿ ಯಾವುದೇ ಕೃಷಿಶಕ್ತಿಯಿಲ್ಲ. ಪ್ರಸಿದ್ಧಿಗೊಂಡಿರುವಂತಹ ಕೆಲವು ಚಿಗಾಂಗ್ ಮಾಸ್ತರರು ಈಗಲೂ ಪ್ರಪಂಚದಲ್ಲಿ ಉತ್ಸಾಹದಿಂದಿದ್ದಾರೆ. ಇವರು ಸಾಮಾನ್ಯ ಜನರೊಡನೆ ಕಳೆದು ಹೋಗಿರುವುದನ್ನು ಇವರ ಗುರುಗಳು ನೋಡಿದ್ದಾರೆ.

ಇವರು ಪ್ರಸಿದ್ಧಿಪಡೆಯುವುದಕ್ಕೆ ಮತ್ತು ಲಾಭ ಹೊಂದುವುದರಲ್ಲಿ ಮುಳುಗಿದ್ದಾನೆ. ಅದರಿಂದ ತಮ್ಮನ್ನು ತಾವು ಮೇಲೆಳೆದುಕೊಳ್ಳಲಾಗಿಲ್ಲ. ಆದ್ದರಿಂದಲೇ ಅವರಿಗೆ ಯಾವುದೇ ಭರವಸೆಯಿಲ್ಲ. ಆದ್ದರಿಂದ ತಮ್ಮ ಅಧೀನರಾದಂತಹ ಆತ್ಮಗಳನ್ನು ಇವರ ಮಾಸ್ತರರು ತೆಗೆದುಕೊಂಡು ಹೋದರು. ಕೃಷಿ ಶಕ್ತಿಯು ಅಧೀನ ಆತ್ಮಗಳ ದೇಹದ ಮೇಲತ್ತು ಅವುಗಳ ವಿಷಯಗಳು ಸಾಂಕೇತಿಕ ಮತ್ತು ಅಂತಹವುಗಳು ಬಹಳಷ್ಟಿದೆ.

ನಮ್ಮ ನೀತಿಶಿಕ್ಷಣದಲ್ಲಿ ಅಂತಹ ಸಂಗತಿಗಳು ಕೆಲವು ಮಾತ್ರವೇ ಮತ್ತು ಕೆಲವೇನಾದರೂ ಇದ್ದರೆ ಅವು ಪರಿಗಣನೆಗೆ ಬರುವುದಿಲ್ಲ. ನಮ್ಮಲ್ಲಿ ಇಂತಹ ಹೆಚ್ಚಿನ ನಡುವಳಕೆಯ ಸುಧಾರಣೆಯ ಉದಾಹರಣೆಗಳುಂಟು. ಶೌನ್‌ಡಾಂಗ್ ಕ್ಷೇತ್ರದ ಒಂದು ಬಟ್ಟೆಯ ಗಿರಣಿಯಲ್ಲಿ ಒಬ್ಬ ವಿದ್ಯಾರ್ಥಿಯು ಕೆಲಸಮಾಡುತ್ತಿದ್ದ. ಆತನು ಫಾಲೂನ್ ಧಾಫಾ ಕಲತನಂತರ ಗಿರಣಿಯ ಇತರ ಕೆಲಸಾಗಾರರಿಗೂ ಇದನ್ನು ಕಲಯಲು ಹೇಳದ ಇದರ ಪರಿಣಾಮವಾಗಿ ಸಂಪೂರ್ಣ ಗಿರಣಿಯಲ್ಲಿ ಈತನು ಮೌಲ್ಯಗಳನ್ನು ತಂದಿದ್ದ. ಆತನು ಕೈವಸ್ತ್ರದ ತುಂಡುಗಳನ್ನು ಆತನು ಗಿರಣಿಯಿಂದ ಮನೆಗೆ ಕೊಂಡೊಯ್ಯುತ್ತಿದ್ದ ಹಾಗೆಯೇ ಇತರ ಕೆಲಸಗಾರರೂ ಸಹ ಕೊಂಡೊಯ್ಯುತ್ತಿದ್ದರು. ಆತನು ಈ ತರಭೇತಿಯನ್ನು ಪಡೆದುಕೊಂಡ ನಂತರ ಆತನು ಗಿರಣಿಯಿಂದ ವಸ್ತುಗಳನ್ನು ತನ್ನ ಮನೆಗೆ ಕೊಂಡೊಯ್ಯುವುದನ್ನು

ನಿಲ್ಲಿಸಿದ್ದು ಮಾತ್ರವಲ್ಲದೆ, ತನ್ನ ಮನೆಗೆ ಕೊಂಡೊಯ್ದಿದ್ದ ವಸ್ತುಗಳನ್ನು ಹಿಂದಿರುಗಿಸಿದ. ಈತನು ಈ ರೀತಿ ಮಾಡಿದ್ದನ್ನು ನೋಡಿದ ಇತರ ಕೆಲಗಾರರು ತಾವೂ ವಸ್ತುಗಳನ್ನು ತಮ್ಮ ಮನೆಗೆ ಕೊಂಡೊಯ್ಯುವುದನ್ನು ನಿಲ್ಲಿಸಿದರು. ಕೆಲವು ಕೆಲಸಗಾರರು ತಾವೂ ಮೊದಲು ಕೊಂಡುಹೋಗಿದ್ದ ವಸ್ತುಗಳನ್ನು ಹಿಂದಿರುಗಿಸಿದರು. ಈ ಕಾರ್ಯವು ಸಂಪೂರ್ಣ ಗಿರಣಿಯಲ್ಲಿ ನಡೆಯಿತು.

ಒಂದು ಪಟ್ಟಣದ ಅಸಿಸ್ಟೇನ್ಸ್ ಸೆಂಟರ್‌ನ ಮೇಲ್ವಿಚಾರಕನು ಒಂದು ಕೈಗಾರಿಕೆಯಲ್ಲಿನ ಫಾಲೂನ್ ಧಾಫಾ ವಿದ್ಯಾರ್ಥಿಗಳ ತರಬೇತಿಯು ಹೇಗೆ ನಡೆಯುತ್ತಿದೆಯೆಂಬುದನ್ನು ತಿಳಿದುಕೊಳ್ಳಲು ಹೋದನು. ಆ ಕೈಗಾರಿಕೆಯ ಮುಖ್ಯಸ್ಥನು ತಾನೇ ಖುದ್ದಾಗಿ ಈ ವ್ಯಕ್ತಿಯನ್ನು ಕಾಣಲು ಬಂದನು."ಎಂದಿನಿಂದ ಈ ನೌಕರರು ಫಾಲೂನ್ ಧಾಫಾ ಕಲಿಯಲಾರಂಭಿಸಿದ್ದಾರೋ, ಅಂದಿನಿಂದಲೂ ಆ ನೌಕರರು ಕೆಲಸಕ್ಕೆ ಬೇಗ ಬರುತ್ತಾರೆ ಮತ್ತು ಮನೆಗೆ ತಡವಾಗಿ ಹಿಂದಿರುಗುತ್ತಾರೆ. ಅವರು ತಮ್ಮ ಕೆಲಸಗಳನ್ನು ಉತ್ತಮವಾಗಿ ಮತ್ತು ಪ್ರಾಮಾಣಿಕತೆಯಿಂದ ಮಾಡುತ್ತಿದ್ದರು. ಅವರಿಗೆ ಅವರ ಮುಖ್ಯಸ್ಥರು ಯಾವ ಕೆಲಸವನ್ನು ವಹಿಸಿಕೊಟ್ಟರೂ ಮಾಡುತ್ತಿದ್ದರು. ತಾವೇ ಇಂತಹ ಕೆಲಸವೇ ಬೇಕೆಂದು ಆರಿಸಿಕೊಳ್ಳುತ್ತಿರಲಿಲ್ಲ.

ತಮ್ಮ ಸ್ವಯಂ ಲಾಭಕ್ಕಾಗಿ ತಾವು ಹೋರಾಡುವುದನ್ನು ನಿಲ್ಲಿಸಿದರು. ಒಮ್ಮೆ ಅವರು ಈ ರೀತಿ ವರ್ತಿಸುವುದಕ್ಕಾರಂಭಿಸಿದೊಡನೆಯೆ ಸಂಪೂರ್ಣ ಕೈಗಾರಿಕೆಯ ನೈತಿಕತೆ ಹೆಚ್ಚಿತು. ಕೈಗಾರಿಕೆಯ ಹಣಕಾಸಿನ ಸ್ಥಿತಿಯು ಉತ್ತಮಗೊಂಡಿತು. ನಿಮ್ಮ ತರಬೇತಿಯು ಬಹಳ ಶಕ್ತಿಯುತವಾಗಿದೆ. ನಿಮ್ಮ ಗುರುಗಳು ಯಾವಾಗ ಬರುತ್ತಾರೆ? ಅವರೊಂದಿಗೆ ಸಹ ನಾನು ಮಾತನಾಡಬೇಕು. "ಫಾಲೂನ್ ಧಾಫಾದ ಮುಖ್ಯ ಗುರಿಯು, ಜನಗಳನ್ನು ಉನ್ನತ ಹಂತಕ್ಕೇರಿಸಲು ಮಾರ್ಗದರ್ಶನವನ್ನು ಮಾಡುವುದು. ಇದು ಅಂತಹ ಕೆಲಸವನ್ನು ಮಾಡುವುದು ಮಾತ್ರವಲ್ಲ ಸಮಾಜದಲ್ಲಿನ ನಾಗರೀಕರಲ್ಲಿ ಸಾಮಾಜಿಕ ಸಭ್ಯತೆಯನ್ನು ಮೂಡಿಸುವಲ್ಲಿ ಬಹಳ ಕೆಲಸ ಮಾಡಬಲ್ಲದಾಗಿದೆ. ಪ್ರತಿಯೊಬ್ಬರೂ ತಮ್ಮ ಆತ್ಮ ವಿಮರ್ಶೆ ಮಾಡಿಕೊಂಡರೆ ಪ್ರತಿಯೊಬ್ಬರೂ ಹೇಗೆ ಉತ್ತಮವಾಗಿ ನಡೆದುಕೊಳ್ಳಬಹುದೆಂದು ಅರಿತುಕೊಂಡರೆ ಸಮಾಜವು ಮೌಲ್ಯಗಳಿಂದ ತುಂಬಿ ಸ್ಥಿರತೆಯಿಂದಿರುತ್ತದೆ ಎಂದು ನಾನು ಹೇಳುತ್ತೇನೆ.

**ತೈವಾನ್** ಪಟ್ಟಣದಲ್ಲಿ ನಾನು ಕಾನೂನಿನ ಮತ್ತು ತರಬೇತಿಯ ಶಿಕ್ಷಣವನ್ನು ಕೊಡುತ್ತಿದ್ದಾಗ, ೫೦ ವರ್ಷಗಳ ಆಸುಪಾಸಿನ ಒಬ್ಬ ವಿದ್ಯಾರ್ಥಿನಿ ಇದ್ದಳು. ಆಕೆ ಮತ್ತು ಆಕೆಯ ಪತಿ ತರಗತಿಗೆ ಹಾಜರಾಗಲು ಬರುತ್ತಿದ್ದರು. ಅವರು ಈ ರಸ್ತೆಯನ್ನು ದಾಟುವಾಗ ರಸ್ತೆಯ ಮಧ್ಯದಲ್ಲಿ ಒಂದು ಕಾರ್ ಇವರನ್ನು ತಳ್ಳಿಬಿಟ್ಟಿತು. ಪಾರ್ಶ್ವನೋಟದ ಕನ್ನಡಿಯು ಆ ವಯಸ್ಸಾದ ಹೆಂಗಸಿನ ಬಟ್ಟೆಗೆ ತಗುಲಿಕೊಂಡಿತು. ಹಿಡಿದುಕೊಂಡ ಆ ಬಟ್ಟೆಯೊಂದಿಗೆ ಆ ಕಾರ್ ಆಕೆಯನ್ನು ೧೦ ಯಾರ್ಡ್‌ವರೆಗೆ ಎಳೆದುಕೊಂಡು ಹೋಯಿತು. ಮತ್ತೆ "ವಾಮ್!" ಆಕೆಯನ್ನು ನೆಲಕ್ಕೆಸೆದು ಬಿಟ್ಟಿತು. ಈ ಕಾರ್ ಮತ್ತು ಆಕೆ ಇಪ್ಪತ್ತಕ್ಕೂ ಹೆಚ್ಚಿನ ಯಾರ್ಡ್‌ವರೆಗೂ ಓಡುವುದು ನಿಲ್ಲಲಿಲ್ಲ. ಕಾರಿನ ಚಾಲಕನು ವಾಹನದಿಂದ ನೆಗೆದನು. ಮತ್ತು ಅವನು ಸಂತುಷ್ಟನಾಗಿರಲಿಲ್ಲ. "ಹೇ, ರಸ್ತೆಯನ್ನು ದಾಟುವಾಗ ನೀವು ಜಾಗರೂಕರಾಗಿರಲಿಲ್ಲವೇ"? ಈಗಿನ ಕಾಲದ ಜನಗಳಿರುವುದು ಹಾಗೆಯೇ-ಅವರಿಗೇನಾದರೂ ಸಮಸ್ಯೆಯುಂಟಾದರೆ ಮಾಡುವ ಮೊದಲ ಕೆಲಸವೆಂದರೆ ತಮ್ಮ ತಪ್ಪಿದ್ದರೂ ಸಹ ತಪ್ಪನ್ನು ಇನ್ನೊಬ್ಬರ ಮೇಲೆ ಹಾಕುವುದು. ನಂತರ ಕಾರಿನಲ್ಲಿ ಪ್ರಯಾಣಿಕ ಹೇಳಿದ "ಆಕೆ ಎಷ್ಟು ಗಂಭೀರವಾಗಿ ಗಾಯಗೊಂಡಿದ್ದಾಳೆಎಂದು ಪರೀಕ್ಷಿಸು ಎಂದ". ಆಕೆಯನ್ನು ಆಸ್ಪತ್ರೆಗೆ ಕಳುಹಿಸೋಣ ಎಂದು ಹೇಳಿದ, ನಿಮಗೆ ಈಗ ಹೇಗೆ ಅನಿಸುತ್ತದೆ? ಆಸ್ಪತ್ರೆಗೆ ಹೋಗಿ ತಪಾಸಣೆ ಮಾಡಿಸಿಕೊಂಡು ಬರೋಣ ಎಂದು. ಆ ವಿದ್ಯಾರ್ಥಿನಿಯು ನಿಧಾನವಾಗಿ ನೆಲದಿಂದ ಮೇಲೆದ್ದು ಹೇಳಿದಳು."ನಾನು ಸ್ವಸ್ಥವಾಗಿದ್ದೇನೆ ನೀವಿನ್ನು ಹೋಗಬಹುದು" ಆಕೆಯು ತನ್ನ ಮೈಮೇಲೆ ಮೆತ್ತಿಕೊಂಡಿದ್ದ ಕಸವನ್ನು ಕೆಡವಿಕೊಂಡಳು ಮತ್ತು ತನ್ನ ಗಂಡನ ಕೈಹಿಡಿದು ಹೊರಟಳು.

ಆಕೆ ತರಗತಿಗೆ ಬಂದ ನಂತರ ಈ ಕಥೆಯನ್ನು ನನಗೆ ಹೇಳಿದಳು. ಮತ್ತು ಇದನ್ನು ಕೇಳಿ ನನಗೆ ಸಂತೋಷವಾಯಿತು. ನಮ್ಮ ವಿದ್ಯಾರ್ಥಿಗಳು ಸಹ ತಮ್ಮ ನಡತೆಯನ್ನು ಉತ್ತಮಪಡಿಸಿಕೊಂಡಿರುತ್ತಾರೆ. ಆಕೆ ನನಗೆ ಹೇಳಿದಳು. ನೋಡಿ ಗುರುಗಳೇ ನಾನು ಫಾಲೂನ್ ಧಾಫಾ ಕಲಿಯುತ್ತಿದ್ದೇನೆ. ನಾನು

---

೩. **ತೈವಾನ್** – ಶಾಂಗ್ ಶೀ ಪ್ರಾಂತ್ಯದ ರಾಜಧಾನಿ

ಫಾಲೂನ್ ಧಾಪಾ ಕಲಿಯದಿದ್ದರೆ ಈ ದಿನದ ಸಂಧರ್ಭವನ್ನು ನಾನು ಹೀಗೆ ಎದುರಿಸಲುಸಾಧ್ಯವಾಗುತ್ತಿರಲಿಲ್ಲ. ಇದರ ಬಗ್ಗೆ ವಿಚಾರ ಮಾಡುವ. ಆಕೆ ನಿವೃತ್ತಿ ಜೀವನ ಮಟ್ಟವು ಬಹಳ ಅಧಿಕವಾಗಿತ್ತು. ಕ್ಷೇಮಾಭಿವೃದ್ಧಿಯ ಅನುಕೂಲಗಳು ಸಹ ಇರಲಿಲ್ಲ. ಆಕೆಗೆ ೫೦ ವರ್ಷಕ್ಕಿಂತಲೂ ಹೆಚ್ಚಿನ ವಯಸ್ಸಾಗಿತ್ತು. ಮತ್ತು ಆಕೆಯನ್ನು ಅಷ್ಟು ದೂರದವರೆಗೂ ಕಾರ್ ಎಳೆದುಕೊಂಡು ಹೋಗಿ ನೆಲಕ್ಕೆಸೆದುಯಬಿಟ್ಟಿತು. "ನಿಮಗೆಲ್ಲ ನೋವಾಗಿದೆ?" "ಎಲ್ಲೆಡೆ" ಆಕೆ ಸುಮ್ಮನೆ ನೆಲದ ಮೇಲೆ ಏಳದೆಯೆ ಮಲಗಿರಬಹುದಾಗಿತ್ತು. "ಆಸ್ಪತ್ರೆಗೆ ಹೋಗಬೇಕೇ? ಹೋಗೋಣ ಮತ್ತು ಆಕೆ ಆಸ್ಪತ್ರೆಯನ್ನು ಬಿಟ್ಟು ಬರದೇ ಅಲ್ಲೇ ಇರಬಹುದಾಗಿತ್ತು. ಇದು ಸಾಮಾನ್ಯ ಜನರಿಗೆ ಆಗುತ್ತದೆ. ಆದರೆ ಈಕೆ ತರಬೇತಿದಾರಳು. ಆದ್ದರಿಂದ ಆಕೆ ಹಾಗೆ ಮಾಡಲಿಲ್ಲ. ಒಳ್ಳೆಯದು ಮತ್ತು ಕೆಟ್ಟದ್ದು ನಮ್ಮ ವಿಚಾರದಿಂದ ಮಾತ್ರ ಬರುತ್ತದೆ ಎಂದು ನಾವು ಹೇಳಬಹುದು. ವ್ಯತ್ಯಾಸವೇನೆಂದರೆ ಒಂದೇ ವಿಚಾರವು ನಮ್ಮನ್ನು ಬಹಳಷ್ಟು ವಿಚಾರಗಳೆಡೆಗೆ/ ಫಲಿತಾಂಶಗಳೆಡೆಗೆ ಕೊಂಡೊಯುತ್ತವೆ. ಆ ವಯಸ್ಸಿನಲ್ಲಿ ಆಕೆಯು ಸಾಮಾನ್ಯಗಳಾಗಿದ್ದರೆ, ಆಕೆಗೆ ನೋವಾಗದೆ ಹೇಗಿರುತ್ತಿತ್ತು? ಆದರೆ ಆಕೆಗೆ ಒಂದು ಗಿರು ಗಾಯವು ಆಗಿರಲಿಲ್ಲ. ಆಕೆಯು ಅಲ್ಲೇ ನಿಸ್ಸತ್ವಳಾಗಿ ಹೇಳಿದ್ದರೆ," ಓಹ್ ನಾನು ತೊಂದರೆಯಲ್ಲಿ ಸಿಲುಕಿದ್ದೇನೆ. ಈ ಭಾಗವು ನೋಯುತ್ತಿದೆ. ಆ ಭಾಗವು ನೋಯುತ್ತಿದೆ......" ನಂತರ ಆಕೆಯ ಯಾವುದೇ ಮೂಳೆ ಮುರಿದಿದ್ದರೆ ಅಥವಾ ಆಕೆಯ ಅಸ್ಥಿ ಬಂಧ ಮುರಿದಿದ್ದರೆ ಅಥವಾ ಆಕೆಗೆ ಪಾರ್ಶ್ವವಾಯು ಬಡಿದಿದ್ದರೆ ಅವರು ಎಷ್ಟೆ ಹಣ ಕೊಟ್ಟರೂ ಸಹ ಆಕೆಯು ಜೀವನ ಪರ್ಯಂತ ಆಸ್ಪತ್ರೆಯಲ್ಲಿರಬೇಕಾಗುತ್ತಿತ್ತು. ನೀವು ಅದನ್ನು ಅನುಭವಿಸಲು ಸಾಧ್ಯವಿತ್ತೇ. ಈಕೆಯು ಚಾಲಕನಿಂದ ಬಲತ್ಕಾರದಿಂದ ಹಣವನ್ನು ಏಕೆ ಸುಲಿಗೆ ಮಾಡಲಿಲ್ಲವೆಂದು ಪ್ರೇಕ್ಷಕರಿಗೆ ವಿಚಿತ್ರವೆನಿಸಿತ್ತು. "ಆತನಿಂದ ಹಣ ಕೇಳಿತಿ, ಜನರ ಮೌಲ್ಯಗಳ ಪ್ರಮಾಣವೆಲ್ಲವೂ ಮಾರ್ಗತಪ್ಪಿಸುವುದಾಗಿದೆ. ಖಂಡಿತವಾಗಿಯೂ ಚಾಲಕನು ಬಹಳ ವೇಗವಾಗಿ ಹೋಗುತ್ತಿದ್ದ. ಆದರೆ ಆತನು ಯಾರಿಗೂ ಉದ್ದೇಶಪೂರ್ವಕವಾಗಿ ತಾಕಲಿಲ್ಲ. ಆತನಿಗೆ ಹಾಗೆ ಮಾಡಬೇಕೆಂಬ ಮನಸ್ಸಿರಲಿಲ್ಲ. ಆದರೆ ಈಗಿನ ಕಾಲದ ಜನರು ಹೀಗಿದ್ದಾರೆ. ನೀನು ಅವನಿಂದ ಹಣವನ್ನು ಕೀಳದಿದ್ದರೆ ಪ್ರೇಕ್ಷಕನು ಸಹ ಅದನ್ನು ಅನ್ಯಾಯವೆಂದು ಕೊಳ್ಳುತ್ತಾನೆ. ಈಗಿನ ಕಾಲದ ಜನಗಳಿಗೆ ಸಹ ತಪ್ಪು ಸಹ ಕಂಡುಹಿಡಿಯ ಲಾಗುವುದಿಲ್ಲವೆಂದು ನಾನು ಹೇಳುತ್ತೇನೆ. ನೀವು ಯಾರಿಗಾದರೂ ನೀವು ಮಾಡು ತ್ತಿರುವುದು ತಪ್ಪು ಎಂದು ಹೇಳಿದರೆ ಅವರು ನಂಬುವುದಿಲ್ಲ. ಏಕೆಂದರೆ ಜನಗಳ ಮೌಲ್ಯದ ಪ್ರಮಾಣವು ಬದಲಾಗಿದೆ.

ಕೆಲವರು ಬರಿಯ ಲಾಭವನ್ನು ಬಯಸುತ್ತಾರೆ. ನೀವು ಸಂಖ್ಯೆ ಒಂದಕ್ಕೆ ಹೆಚ್ಚಿನ ಲಕ್ಷ್ಯವನ್ನು ಕೊಡದಿದ್ದರೆ ಜೀವನವು ನಿಮ್ಮಿಂದ ಅತ್ಯುತ್ತಮವಾದುದನ್ನು ಪಡೆದುಕೊಳ್ಳುತ್ತದೆ. ಅದೂ ಸಹ ಒಂದು ಗುರಿಯಾಗುತ್ತದೆ.

ಬೀಜಿಂಗ್‌ನಲ್ಲಿದ್ದಂತಹ ಒಬ್ಬ ವಿದ್ಯಾರ್ಥಿಯು ಒಮ್ಮೆ ತನ್ನ ಮಕ್ಕಳನ್ನು **ಕ್ಷಿಮೆನ್ ಶಾಪಿಂಗ್ ಏರಿಯಾಗೆ** ಊಟದ ನಂತರ ಅಡ್ಡಾಡಲು ಕರೆದುಕೊಂಡು ಹೋದ. ಧ್ವನಿಸುರುಳಿಯ ಮೂಲಕ ಲಾಟರಿಯ ವಿನೋದದಾಟವನ್ನು ಪ್ರೋತ್ಸಾಹಿಸುವಂತಹ ಒಂದು ವಾಹನ (ವ್ಯಾನ್) ನೋಡಿದರು. "ನೀನು ಆಡಬಯಸಿದರೆ ಆಡು ಎಂದು ಹೇಳಿ ಆತನು ಒಂದು ಡಾಲರ್ ಆ ಮಗುವಿಗೆ ಆಡಲು ಕೊಟ್ಟನು. ಆ ಮಗುವ ಒಡನೆಯೇ ಎರಡನೆಯ ಬಹುಮಾನವಾಗಿ ಡೀಲಕ್ಸ್ ಕಿಡ್ಸ್ ಬೈಕನ್ನು ಪಡೆಯಿತು. ಆ ಮಗುವು ಭಾವೋದ್ರೇಕಗೊಂಡಿತು. ಆದರೆ ಒಮ್ಮೆಲೇ, "ಬೀಂಗ್!" ತಂದೆಯ ತಲೆಯಲ್ಲಿ ಒಮ್ಮೆಲೇ ಬೆಳಕು ಮೂಡಿತು. ನಾನು ಒಬ್ಬ ವೃತ್ತಿಪರ, ಇಂತಹದ್ದನ್ನು ನಾನು ಹೇಗೆ ಕೇಳಬಹುದು? ಈ ವಸ್ತುವು ನಾನೇನು ವೆಚ್ಚಮಾಡದೆಯೇ ಪಡೆದುಕೊಂಡಿರುವುದು. ನಾನೆಷ್ಟು ಪಾವಿತ್ರ ಗುಣಗಳನ್ನು ಇದರ ಬದಲಾಗಿ ಹಿಂದಿರುಗಿಸಬೇಕಾಗಬಹುದು?" ಆತನು ತನ್ನ ಮಗುವಿಗೆ ಈ ಬೈಕನ್ನು ಕೊಂಡೋಯ್ಯುವುದು ಬೇಡವೆಂದು ಹೇಳಿದ ನಿನಗೆ ಬೇಕಾದರೆ ನಾನೇ ಒಂದು ಕೊಂಡುಕೊಡುವೆನೆಂದ. " ಮಗುವು ಗೊಂದಲದಲ್ಲಿ ಬಿದ್ದಿತು. ಮತ್ತು ತಂದೆಗೆ ಹೇಳಿತು ನಾನು ನಿನಗೆ ಕೊಂಡುಕೊಡುವುದಕ್ಕೆ ಹೇಳಿದ್ದೆ ಆದರೆ ನೀನು ಕೊಂಡುಕೊಡಲಿಲ್ಲ. ಈಗ ನಾನೇ ನನಗಾಗಿ ಒಂದನ್ನು

---

**4. ಕ್ಷಿಮೆನ್ ಶಾಪಿಂಗ್ ಏರಿಯಾ –** ಬೀಜಿಂಗ್‌ನ ಒಂದು ವ್ಯಾಪಾರ ವಹಿವಾಟಿನ ಸ್ಥಳ.

ಗೆದ್ದಿದ್ದೇನೆ. ಆದರೆ ನೀನು ಅದನ್ನು ತೆಗೆದುಕೊಳ್ಳಬೇಡವೆಂದು ಹೇಳುತ್ತೀಯೆ" ಮಗನು ಅತಿಯಾದ ಕೋಪಗೊಂಡು ಈ ಅವಕಾಶವನ್ನು ಬಿಟ್ಟುಕೊಡಲಿಲ್ಲ, ತಂದೆಗೆ ಬೇರೆ ಮಾರ್ಗವಿಲ್ಲದೆ ಈ ಬೈಕನ್ನು ಮನೆಗೆ ತೆಗೆದುಕೊಂಡು ಹೋದನು. ಮನೆ ಸೇರಿದ ನಂತರ, ಅದರ ಬಗ್ಗೆ ಎಷ್ಟು ವಿಚಾರಮಾಡಿದರೆ ಆತನಿಗೆ ಅಷ್ಟು ಚಡಪಡಿಕೆಯುಂಟಾಗುತ್ತಿತ್ತು. "ನಾನು ಹಣವನ್ನು ಇದಕ್ಕೆ ಪಾವತಿಸುತ್ತೇನೆ. ಮತ್ತೆ ಅವನು ಯೋಚಿಸಿದ, ಈಗ ಲಾಟರಿ ಟಿಕೆಟ್‌ಗಳು ಮುಗಿದಿವೆ. ನಾನೀಗ ಹಣ ಪಾವತಿಸಿದರೆ ಆ ಹಣವನ್ನು ಅವರೇ ಕಿಸೆಗೆ ಹಾಕಿಕೊಳ್ಳುತ್ತಾರೆ. ಆದ್ದರಿಂದ ಹಣವನ್ನು ನಾನು ನನ್ನ ಕಂಪನಿಗೆ ದಾನ ಮಾಡುತ್ತೇನೆ.

ಆತನು ಅದೃಷ್ಟವಂತ ಏಕೆಂದರೆ ಆತನ ಕಂಪನಿಯಲ್ಲಿ ಹೆಚ್ಚಿನ ಮಂದಿ ಫಾಲೂನ್ ಧಾಪಾ ವಿದ್ಯಾರ್ಥಿಗಳಾಗಿದ್ದರು. ಮತ್ತು ಆತನ ಮಾಲೀಕ ಇದನ್ನು ಅರ್ಥಮಾಡಿಕೊಳ್ಳ ಬಲ್ಲವನಾಗಿದ್ದ. ಇದೇನಾದರೂ ಒಂದು ಸಾಂಕೇತಿಕ ಪರಿಸರದಲ್ಲಾಗಿದ್ದರೆ ಅಥವಾ ಒಂದು ಲಾಕ್ಷಣಿಕ ಕಂಪನಿಯಲ್ಲಾಗಿದ್ದರೇ, ನೀನೊಬ್ಬ ವೃತ್ತಿಪರನೆಂದು ಹೇಳರುತ್ತೀಯೆ ಮತ್ತು ಲಾಟರಿಯಲ್ಲಿ ಗೆದ್ದಂತಹ ಬೈಕನ್ನು ನೀವು ಇಟ್ಟುಕೊಳ್ಳಬಯಸುವುದಿಲ್ಲ.

ಮತ್ತು ಅದರ ಮೌಲ್ಯವನ್ನು ನಿನ್ನ ಕಂಪನಿಗೆ ಕೊಡಬಯಸುತ್ತೀಯ. ಆಗ ನಿಮ್ಮ ಮಾಲೀಕನೂ ಸಹ ನಿಮ್ಮನ್ನು ಅಸ್ಥಿರ ಬುದ್ಧಿಯವ ಅಥವಾ ಉನ್ಮತ್ತನೆಂದು ತಿಳಿದುಕೊಳ್ಳುತ್ತಾರೆ. ಜನರು ಇವರ ಬಗ್ಗೆಯೇ ಮಾತನಾಡಿಕೊಳ್ಳುತ್ತಲೇ ಇರುತ್ತಾರೆ. " ಈ ಒಂದು ಅಭ್ಯಾಸದಲ್ಲಿ ಏನಾದರೂ ಎಡವುಂಟಾಗಿದೆಯೇ? ಆತ ಚಿತ್ತಭ್ರಾಂತನಾದನೇ? ನಾನಾಗಲೇ ಹೇಳಿದ್ದೇನೆ. ನೀತಿ ಮೌಲ್ಯಗಳು ತಪ್ಪುದಾರಿ ತುಳಿದಿದೆಯೆಂದು 1950 ಮತ್ತು ಅರವತ್ತರಲ್ಲಿ ಇದು ಒಂದು ದೊಡ್ಡ ವ್ಯಾಪಾರವಾಗಿತ್ತು. ಇದು ಸಂಪೂರ್ಣವಾಗಿ ಕ್ರಮಬದ್ಧವಾಗಿರಬಹುದಾಗಿತ್ತು. ಮತ್ತು ಯಾರೂ ಆಶ್ಚರ್ಯಚಕಿತರಾಗುತ್ತಿರಲಿಲ್ಲ.

ನಾವೇನು ಹೇಳುತ್ತೇವೆಂದರೆ, ಮಾನವನ ನೀತಿ ಮೌಲ್ಯಗಳು ಎಷ್ಟು ಬದಲಾದರೂ ಪರವಾಗಿಲ್ಲ. ವಿಶ್ವದ ಸಹಜಗುಣ, ಸತ್ಯವಾಗಿಯೂ, ಒಳ್ಳೆಯದು ಮತ್ತು ಹೆಚ್ಚು ಕಾಲ ಉಳಿಯುವಂತಹದ್ದು. ಇದು ಬದಲಾಗುವುದಿಲ್ಲ. ಯಾರಾದರೂ ನೀವು ಒಳ್ಳೆಯವರೆಂದು ಹೇಳಿದರೆ, ನಿಜವಾಗಿಯೂ ನೀವು ಉತ್ತಮರಾಗಿರುವುದಿಲ್ಲ. ಈ ಒಳ್ಳೆಯದು ಮತ್ತು ಕೆಟ್ಟದನ್ನು ಅಳೆಯುವ ಪ್ರಮಾಣಗಳಲ್ಲಿ ವ್ಯತ್ಯಾಸವಾಗಿದೆ. ಯಾರು ವಿಶ್ವದ ಪರಿಸ್ಥಿತಿಯನ್ನು ಅನುಸರಿಸಿ ಹೊಂದಿಕೊಳ್ಳುತ್ತಾರೋ ಅವರು ಒಳ್ಳೆಯವರಾಗುತ್ತಾರೆ. ಈ ಪ್ರಮಾಣದಿಂದಲೇ ವ್ಯಕ್ತಿಯು ಒಳ್ಳೆಯವನೇ ಅಥವಾ ಕೆಟ್ಟವನೇ ಎಂಬುದನ್ನು ಕಂಡುಹಿಡಿಯಲು ಸಾಧ್ಯ. ಇದನ್ನು ಜಗತ್ತು ಗುರುತಿಸುತ್ತದೆ. ಸಮಾಜ ಎಷ್ಟು ಬದಲಾದರೂ ಪರವಾಗಿಲ್ಲ. ಜನಗಳ ಮೌಲ್ಯಗಳು ಎಷ್ಟು ಜಾರಿದರೂ ಪರವಾಗಿಲ್ಲ ಪ್ರತಿದಿನ ಕಳೆದಂತೆ ಪ್ರಪಂಚವು ಎಷ್ಟು ಅವನತಿ ಹೊಂದಿದರೂ ಪರವಾಗಿಲ್ಲ. ಜನರು ಎಷ್ಟು ಹಣದ ಬಗ್ಗೆ ಚಿಂತಿಸಿದರೂ ಪರವಾಗಿಲ್ಲ. ಜಗತ್ತು ಮಾತ್ರ ಮಾನವನು ಬದಲಾದಂತೆ ಬದಲಾಗುವುದಿಲ್ಲ. ಒಬ್ಬ ಅಭ್ಯಸಿಗನು ಸಾಮಾನ್ಯ ಜನರ ಪ್ರಮಾಣವನ್ನು ಅನುಸರಿಸಬಾರದು. ಸಾಮಾನ್ಯ ಜನರು ಇದು ಸರಿ ಎಂದು ಹೇಳಿದರೆ ಆ ಆಧಾರದ ಮೇಲೆ ನೀವು ಅವರು ಹೇಳಿದಂತೆ ಮಾಡುವಿರ? ಅದು ಸರಿಯಲ್ಲ. ಸಾಮಾನ್ಯ ಜನರು ಒಳ್ಳೆಯದೆಂದು ಹೇಳಿದ್ದು, ಒಳ್ಳೆಯದಾಗಬೇಕೆಂಬುದೇನು ಇಲ್ಲ. ಕೆಟ್ಟದ್ದೆಂದು ಹೇಳಿದರೆ ಕೆಟ್ಟದ್ದಾಗಬೇಕುಂಬುದೇನು ಇಲ್ಲ. ಈಗಿನ ತಿರುಚಿಕೊಂಡ ಮಾಲ್ಯಗಳಲ್ಲಿ ಒಬ್ಬ ವ್ಯಕ್ತಿಯು ತಪ್ಪು ಮಾಡುತ್ತಿದ್ದರೆ, ನೀವು ಅದನ್ನು ತಪ್ಪೆಂದು ತೋರಿಸಿಕೊಟ್ಟಲ್ಲಿ. ಆತನು ನಿಮ್ಮನ್ನು ನಂಬಲೇಲಾರ! ನೀವು ಒಬ್ಬ ಅಭ್ಯಸಿಗನಾಗಬೇಕಾದರೆ ಜಗತ್ತಿನ ಸಹಜಗುಣದಿಂದ ವಿಷಯ ವಸ್ತುವನ್ನು ಬಗೆಹರಿಸಿದೆರೆ ಮಾತ್ರ ನಿಜವಾಗಿಯೂ ಯಾವುದು ಒಳ್ಳೆಯದು ಮತ್ತು ಯಾವುದು ಕೆಟ್ಟದೆಂದು ಹೇಳಬಹುದು.

## ಬೌದ್ಧ ಧರ್ಮಾಚರಣೆ

ಅಭ್ಯಾಸ ಪ್ರಪಂಚದಲ್ಲಿ ಧರ್ಮಾಚರಣೆಯೆಂಬ ಸಾಧನವುಂಟು, ತಾಂತ್ರಿಕ ಬೌದ್ಧ ಆಚರಣೆಯಲ್ಲಿ ಇದು ಬೇರೆಯಾಗಿರುತ್ತದೆ. ಧಾರ್ಮಿಕ ಸಂಪ್ರದಾಯದ ಉದ್ದೇಶ ನೀವು ಬೇರೆ ಧರ್ಮದ ಶಿಸ್ತನ್ನು ಅಳವಡಿಸಿಕೊಳ್ಳುವುದಲ್ಲ. ನಿಮ್ಮನ್ನು ಒಬ್ಬ ನಿಷ್ಟಾವಂತ ಶಿಷ್ಯನೆಂದು ಗುರುತಿಸುವುದಾಗಿದೆ.

ವಿಚಿತ್ರವೇನೆಂದರೆ ಈ ಧಾರ್ಮಿಕ ಆಚರಣೆಗಳು ಚಿಗಾಂಗ್ ಅಭ್ಯಾಸಗಳಲ್ಲಿ ಕಾಣಿಸಿಕೊಳ್ಳುತ್ತಿದೆ. 'ಡಯಸ್ಟ್ ಚಿಗಾಂಗ್' ಸಹ ಈ ಧರ್ಮಾಚರಣೆಯನ್ನು ಆಚರಿಸುವುದೇ ಆಗಿದೆ. ಇದು ಕೇವಲ ತಾಂತ್ರಿಕತೆಯಲ್ಲ. ಸಮಾಜದಲ್ಲಿ ತಾಂತ್ರಿಕ ಅಭ್ಯಾಸಗಳನ್ನು ತಾಂತ್ರಿಕತೆಯ ಹೆಸರಿನಲ್ಲಿ ಬೋಧಿಸುತ್ತಿದ್ದರೆ, ನಾನು ಹೇಳುತ್ತೇನೆ. ಅದು ಸುಳ್ಳೆಂದು. ನಾನೇಕೆ ಅದನ್ನು ಹೇಳಬೇಕು? ಏಕೆಂದರೆ ಟಾಂಗ್ ತಾಂತ್ರಿಕತೆಯು ಸಾವಿರ ವರ್ಷಗಳ ಹಿಂದೆಯಿತ್ತು. ಈಗ ಇದು ಅಸ್ತಿತ್ವದಲ್ಲಿಲ್ಲ. ಭಾಷೆಯ ತೊಡಕಿನಿಂದ ಟಿಬೇಟ್ ತಾಂತ್ರಿಕತೆಯು **ಹಾನ್ ಪ್ರದೇಶ** ದಲ್ಲಿ ಸಂಪೂರ್ಣವಾಗಿ ಹರಡಲಾಗಲಿಲ್ಲ. ನೆನಪಿನಲ್ಲಿಡಿ ಇದು ಗೋಪ್ಯವಾದ ಬೋಧನೆ. ಆದ್ದರಿಂದ ದೇವಾಲಯಗಳಲ್ಲಿ ಇದನ್ನು ಗೋಪ್ಯವಾಗಿ ಬೋಧಿಸುತ್ತಾರೆ. ಅಭ್ಯಾಸ ಮಾಡುವ ವ್ಯಕ್ತಿಯು ಬೋಧನೆಯನ್ನು ಗೋಪ್ಯವಾಗಿ ಗುರುಗಳಿಂದ ಪಡೆದುಕೊಳ್ಳಬೇಕಾಗುತ್ತದೆ. ಮತ್ತು ಆತನೊಂದಿಗೆ ಶಿಷ್ಯನು ಗೋಪ್ಯವಾಗಿ ಅಭ್ಯಾಸ ಮಾಡಬೇಕಾಗುತ್ತದೆ. ಈ ಮೇಲಿನ ಎಲ್ಲಾ ಒಪ್ಪಂದಗಳೂ ಒಂದಕ್ಕೊಂದು ತಾಳೆಯಾಗುವ ತನಕ ಇದನ್ನು ಖಂಡಿತವಾಗಿ ಬೋಧಿಸಲಾಗುವುದಿಲ್ಲ.

ಹೆಚ್ಚಿನ ಜನಗಳು ಟಿಬೆಟ್ಟಿಗ್ ಚಿಗಾಂಗ್ ಕಲಿಯುವ ಉದ್ದೇಶದಿಂದ ತೆರಳುತ್ತಾರೆ. ಟಿಬೆಟ್‌ನ ತಾಂತ್ರಿಕತೆಯನ್ನು ಬೋಧಿಸುವ ಗುರುಗಳನ್ನು ಹುಡುಕಿ ತಾವು ಕಲಿತು ತಾವು ಚಿಗಾಂಗ್ ಬೋಧಕರಾಗಿ ಅದರಿಂದ ಶ್ರೀಮಂತಿಕೆಯನ್ನು ನಂತರ ಪ್ರಸಿದ್ಧಿಯನ್ನು ಪಡೆಯಲಿಚ್ಚಿಸುತ್ತಾರೆ. ಜೀವಂತವಿರುವ ಬೌದ್ಧ ಭಿಕ್ಷುಗಳು ನಿಜವಾದ ಬೋಧನೆಯನ್ನು ಪಡೆದಿರುತ್ತಾರೆ. ಅವರೆಲ್ಲರಿಗೂ ಬಲವಾದ ಸಾಮಾರ್ಥ್ಯವಿರುತ್ತದೆ. ಮತ್ತು ಶಿಷ್ಯನ ಮನಸ್ಸಿನಲ್ಲಿ ಏನಾಗುತ್ತದೆಯೆಂಬುದನ್ನು ಅರಿಯಬಲ್ಲರು. ಆತನು ಅಲ್ಲಿಗೆ ಏಕೆ ಬಂದಿದ್ದಾನೆಂದು ಒಮ್ಮೆ ಆತನನ್ನು ದೃಷ್ಟಿಸಿ ನೋಡಿದಾಗ ತಿಳಿಯುತ್ತದೆ. "ಆತನು ಈ ಅಭ್ಯಾಸವನ್ನು ಕಲಿಯಲು ಬಂದಿದ್ದಾನೆ ಹಾಗಾಗಿ ಆತನು ಇಲ್ಲಿಂದ ಹೊರಡುವಾಗ ಒಬ್ಬ ಚಿಗಾಂಗ್ ಮಾಸ್ತರನಾಗಿರುತ್ತಾನೆ. ಮತ್ತು ಅದರಿಂದ ಶ್ರೀಮಂತಿಕೆಯನ್ನು ಮತ್ತು ಪ್ರಸಿದ್ಧಿಯನ್ನು ಪಡೆಯಲಿಚ್ಚಿಸುತ್ತಾನೆ." ಆತನು ನಮ್ಮ ಶಿಸ್ತುಬದ್ಧವಾದ ಬೌದ್ಧಾಚರಣೆಯನ್ನು ನಾಶ ಮಾಡಲು ಬಂದಿದ್ದಾನೆ. ಚಿಗಾಂಗ್ ಅತಿಮುಖ್ಯವಾದ ಶಿಸ್ತುಬದ್ಧನಾದ ಬೌದ್ಧಧರ್ಮದಾಚರಣೆಯ ಅಭ್ಯಾಸ. ತಾನು ಪಡೆಯಲೋಸುಗ ಈ ಆಚರಣೆಯನ್ನು ನಾಶಮಾಡ ಬಹುದೇ?

ಇದು ಎಂತಹ ಪ್ರೇರಣೆ? ಹಾಗಾಗಿ ಆತನಿಗೆ ಅವರು ಏನನ್ನೂ ಬೋಧಿಸುವುದಿಲ್ಲ. ಮತ್ತು ಈತನಿಗೆ ನಿಜವಾದ ಬೋಧನೆ ಸಹ ಸಿಗುವುದಿಲ್ಲ. ಆದರೆ ಅಲ್ಲಿ ಬಹಳಷ್ಟು ಬೌದ್ಧ ದೇವಾಲಯಗಳಿರುತ್ತದೆ. ಮತ್ತು ಆತನಿಗೆ ಕೆಲವು ಕೃತಕ ವಿಷಯಗಳು ಸಹ ಸಿಗಬಹುದು. ಈತನ ವಿಚಾರಗಳು ಸರಿಯಿಲ್ಲದಿದ್ದರೆ ಆತನು ಒಬ್ಬ ಚಿಗಾಂಗ್ ಮಾಸ್ತರನಾದ ಕೆಟ್ಟ ಕೆಲಸಗಳನ್ನು ಮಾಡಲಿಚ್ಚಿಸಿದ್ದಲ್ಲಿ ಆತ್ಮಗಳಿಗೆ ಆತನು ತನ್ನ ವಾಸಸ್ಥಾನವನ್ನಾಗಿ ಮಾಡಿಕೊಳ್ಳಲು ಆಕರ್ಷಿಸುತ್ತಾನೆ. ಪ್ರಾಣಿಗಳ ಆತ್ಮಕ್ಕೂ ಸಹ ಹೆಚ್ಚಿನ ಶಕ್ತಿಯಿರುತ್ತದೆ. ಆದರೆ ಅದು ಟಿಬೆಟ್ಟಿನ ತಾಂತ್ರಿಕತೆಯಲ್ಲ. ಯಾರೂ ನಿಜವಾದ ಕಾನೂನು ನಿಯಮವನ್ನು ಹುಡುಕಿಕೊಂಡು ಟಿಬೆಟ್ಟಿಗೆ ಹೋಗುತ್ತಾರೊ ಅವರು ಹಿಂದಿರುಗಿ ಬರುವುದಿಲ್ಲ. ಅಲ್ಲಿಯೇ ಇದ್ದು ಬಿಡುತ್ತಾರೆ. ಅವರೇ ನಿಜವಾದ ಅಭ್ಯಾಸಿಗರು.

ಡಯಸ್ಟ್ (Dadist) ಆಚರಣೆಯನ್ನು ಮಾಡುವಂತಹವರು ಸಹ ಈಗ ಬೌದ್ಧ ಧರ್ಮಾಚರಣೆಯನ್ನು ಮಾಡುತ್ತಿರುವುದು, ವಿಚಿತ್ರವೆನಿಸುತ್ತದೆ. ಡಯಸ್ಟ್ ಶಕ್ತಿಯ ಮಾರ್ಗಗಳನ್ನನುಸರಿಸುತ್ತಾರೆ. ಇವರು ಏತಕ್ಕಾಗಿ ಬೌದ್ಧ ಧರ್ಮಾಚರಣೆಯನ್ನು ಮಾಡುತ್ತಿರುವರು. ನಾನು ಈ ಆಚರಣೆಯನ್ನು ದಕ್ಷಿಣದಲ್ಲಿ ವಿಶೇಷವಾಗಿ ಗಾಂಗ್‌ಡಾಂಗ್ ಪ್ರದೇಶದಲ್ಲಿ ಹರಡುತ್ತಿದ್ದಾಗ ಒಂದು ಅವ್ಯವಸ್ಥೆಯಾಗಿತ್ತು. ಏನೆಂದರೆ ಒಂದು ಡಜನ್ ಮತ್ತು ಇನ್ನೂ ಅದಕ್ಕೂ ಹೆಚ್ಚಿನ ಜನ ಚಿಗಾಂಗ್ ಆಚರಣೆ ಮಾಡುವವರು. ಬೌದ್ಧ ಧರ್ಮಾಚರನೆಯನ್ನು ಮಾಡುತ್ತಿದ್ದರು. ಆದರೆ ಅದು ಏತಕ್ಕೆ? ಅಂತಹ ಬೋಧಕರು ನಿಮಗೆ ಅಭ್ಯಾಸವನ್ನು ಮಾಡಿಸಿದಾಗ ನೀವು ಅವರ ಅನುಯಾಯಿಗಳಾಗಬೇಕಾಗುತ್ತದೆ. ಹಾಗಾಗಿ ನೀವು ಇತರೆ ಆಚರಣೆಯನ್ನು ಕಲಿಯಲು ಸಾಧ್ಯವಿಲ್ಲ. ನೀವು ಕಲಿಯಲು ಪ್ರಯತ್ನಿಸಿದರೆ

---

**೫. ಹಾನ್ ಪ್ರದೇಶ** – ಚೀನಾದ ಹಿಂದುಳಿದ ಪ್ರಾಂತ್ಯ.

ಅವರು ನಿಮ್ಮನ್ನು ಶಿಕ್ಷಕಿಸುತ್ತಾರೆ. ಅವರು ಹಾಗೆಯೇ ಮಾಡುವುದು. ಅವರು ಕುಟಿಲ ಕೆಲಸಗಳನ್ನು ಮಾಡುತ್ತಿಲ್ಲವೇ? ಅಪಶಮನ ಹಾಗೂ ಆರೋಗ್ಯವನ್ನು ಸುಸ್ಥಿತಿಯಲ್ಲಿಡಲು ಬೇಕಾದ ವಿಷಯಗಳನ್ನು ಮಾತ್ರ ಇವರು ಹರಡಿಸುತ್ತಿದ್ದಾರೆ. ಮತ್ತು ಸಾಮಾನ್ಯ ಜನರು ತಮ್ಮ ಆರೋಗ್ಯವನ್ನು ಕಾಪಾಡಿಕೊಳ್ಳಲು ಬೇಕಾದ ವಿಷಯವನ್ನು ಮಾತ್ರ ಕಲಿಯುತ್ತಿದ್ದಾರೆ. ಅದನ್ನು ಮಾಡುವ ಅವಶ್ಯಕತೆಯೇನಿದೆ? ಇಲ್ಲೊಬ್ಬ ವ್ಯಕ್ತಿಯಿದ್ದಾನೆ. ಆತ ಏನನ್ನು ಸಾಧಿಸುತ್ತಾನೆಂದರೆ ಒಮ್ಮೆ ನೀವು ಆತನ ಚಿಗಾಂಗ್ ಮಾಡಿದ್ದೇ ಆದರೆ ನೀವು ಇನ್ಯಾವುದೇ ಆಚರಣೆಯನ್ನು ಮಾಡಲಾಗುವುದಿಲ್ಲ. ಇಂತಹ ವ್ಯಕ್ತಿಯು ಜನಗಳನ್ನು ಕಾಪಾಡಬಲ್ಲವೇ? ಈತನು ಜನಗಳನ್ನು ಒಗ್ಗೂಡಿಸಿ ಅವರ ಅವಕಾಶಗಳನ್ನು ನಾಶಮಾಡುತ್ತಿದ್ದಾನೆ. ಹೆಚ್ಚು ಜನಗಳು ಹೀಗೆ ಮಾಡುತ್ತಾರೆ. ಡಯಸ್ಟ್ ಪದ್ದತಿಯಲ್ಲಿ ಆಚರಣೆಯನ್ನು ಮಾಡುವುದಿಲ್ಲ. ಆದರೆ ಈಗ ಅದು ಅಲ್ಲೂ ಕಾಣಿಸಿಕೊಳ್ಳುತ್ತಿದೆ. ಬಹು ಕೆಟ್ಟ ಆಚರಣೆಯನ್ನು ಮಾಡುವಂತಹ ಚಿಗಾಂಗ್ ಬೋಧಕನನ್ನು ನಾನು ಕಂಡಿದ್ದೇನೆ. ನಿಮಗೆ ತಿಳಿದಿದೆಯೇ ಆತನ ಕೃಷಿ ಶಕ್ತಿಯ ಸ್ಥಂಭ ಎಷ್ಟು ಎತ್ತರದಲ್ಲಿದೆಯೆಂದು? ಇದು ಎರಡು ಅಥವಾ ಮೂರು ಮಜಲುಗಳಷ್ಟು ಎತ್ತರವಿದೆ. ಆದರೂ ಸಹ ಆತನು ಆ ಸಮಯದ ದೊಡ್ಡ ಚಿಗಾಂಗ್ ಮಾಸ್ಟರ್. ಈತನ ಕೃಷಿಶಕ್ತಿ ಬಹಳ ಕ್ಷಿಣಿಸಿತು. ನಾನು ನೋಡಿದಂತೆ ಆತನ ಕೃಷಿಶಕ್ತಿ ಕರಣಾಜನಕವಾದಷ್ಟು ಕಡಿಮೆಯಾಗಿತ್ತು.

ನೂರಾರು ಮತ್ತು ಸಾವಿರಾರು ಜನಗಳು ತಮ್ಮ ಸರದಿಗಾಗಿ ಕಾಯುತ್ತಾ ನಿಂತಿರುತ್ತಾರೆ. ಈತನ ಕೃಷಿಶಕ್ತಿ ಮಿತಿಯುಳ್ಳದ್ದಾಗಿರುತ್ತದೆ. ಇದು ಎಷ್ಟು ಕಡಿಮೆ ಎತ್ತರದಲ್ಲಿ ಇರುತ್ತದೆಯೆಂದರೆ ಅದು ಯಾವ ಕ್ಷಣದಲ್ಲಾದರೂ ನೆಲಕ್ಕೆ ಬೀಳಬಹುದು. ಆತನು ಜನಗಳಿಗೆ ಧರ್ಮಾಚರಣೆಯನ್ನು ಕಲಿಸಬೇಕಾದರೆ ಏನು ಮಾಡುತ್ತಿರಬಹುದು? ಅದು ಜನಗಳನ್ನು ಮೋಸಮಾಡುವುದಿಲ್ಲವೇ? ನಿಜವಾದ ಧರ್ಮಾಚರಣೆಯು ವಿವಿಧ ಆಯಾಮಗಳಿಂದ ನೋಡಿದಾಗ, ಮನುಷ್ಯನ ಮೂಳೆಗಳು ತಲೆಯಿಂದ ಕಾಲಿನವರೆಗೆ ಬೆಲೆಯುಳ್ಳ ಹರಳುಗಳಂತಾಗಿ ಕಾಣುತ್ತದೆ. ನಿಮ್ಮ ದೇಹವನ್ನು ತಲೆಯಿಂದ ಕಾಲಿನವರೆಗೆ ಶುದ್ಧೀಕರಿಸಲು ಉತ್ಕೃಷ್ಟ ಶಕ್ತಿಯಾದ ಕೃಷಿ ಶಕ್ತಿಯನ್ನು ಇದು ಬಳಸುತ್ತದೆ, ಆ ಚಿಗಾಂಗ್ ಮಾಸ್ತರನು ಹೀಗೆ ಮಾಡಬಲ್ಲನೇ? ಅವನು ಮಾಡಲಾರ. ಆತನೇನು ಮಾಡುತ್ತಿದ್ದಾನೆ. ಬಹುಶಃ ಆತನು ಅವಶ್ಯಕವಾಗಿ ಧಾರ್ಮಿಕ ಆಚರಣೆಗಳನ್ನು ಮಾಡುತ್ತಿರುವುದಿಲ್ಲ, ಇದರ ಉದ್ದೇಶವೇನೆಂದರೆ ಒಮ್ಮೆ ನೀವು ಅವರ ಆಚರಣೆಯನ್ನು ಅಭ್ಯಾಸ ಮಾಡಿದರೆ ನೀವು ಅವರಿಗೆ ಸೇರುತ್ತೀರಿ ಮತ್ತು ನೀವು ಅವರ ತರಗತಿಗಳಿಗೆ ಹೋಗಬೇಕಾಗಬಹುದು. ಮತ್ತು ಅವರು ಕಲಿಸಿದ್ದನ್ನು ಕಲಿಯಬೇಕಾಗಬಹುದು. ನಿಮ್ಮಿಂದ ಹಣವನ್ನು ಪಡೆಯಲು ಆತನು ಹೀಗೆ ಮಾಡುತ್ತಾನೆ. ಆತನು ಕಲಿಸಿದ್ದನ್ನು ಯಾರು ಕಲಿಯದಿದ್ದರೆ ಆತನು ಹಣ ಮಾಡಲಾಗುವುದಿಲ್ಲ.

ಫಾಲುನ್ ಧಾಫಾ ವಿದ್ಯಾರ್ಥಿಗಳೂ ಸಹ ಇತರೆ ಬೌದ್ಧ ಶಿಸ್ತಿನ ವಿದ್ಯಾರ್ಥಿಗಳಿದ್ದಂತೆ, ಈ ಶಿಸ್ತಿನಲ್ಲಿ ಅವರ ಗುರುಗಳು ಅವರಿಂದ ಧರ್ಮಾಚರಣೆಯನ್ನು ಬಹಳ ಬಾರಿ ಮಾಡಿಸಿರುತ್ತಾರೆ. ಆದರೆ ಅದನ್ನು ಅವರಿಗೆ ಹೇಳಿರುವುದಿಲ್ಲ. ಯಾರಿಗೆ ಅರಿವಿನ ಸಾಮರ್ಥ್ಯವಿರುತ್ತದೆಯೋ ಅವರು ಅದನ್ನು ತಿಳಿದುಕೊಂಡಿರುತ್ತಾರೆ. ಸೂಕ್ಷ್ಮಮತಿಗಳು ಇದರ ಅನುಭವವನ್ನು ಪಡೆದುಕೊಳ್ಳುತ್ತಾರೆ. ಅವರು ಮಲಗಿರುವಾಗ ಅಥವಾ ಕೆಲವು ಬಾರಿ ತಲೆಯಿಂದ ತಮ್ಮ ದೇಹದಾದ್ಯಂತ ವಿದ್ಯುತ್ ಸಂಚಾರವಾದಂತೆನಿಸುತ್ತದೆ. ಧರ್ಮಾಚರಣೆಯ ಉದ್ದೇಶ ನಿಮ್ಮ ಗಾಂಗ್ ಹೆಚ್ಚಿಸುವುದಿಲ್ಲ. ಗಾಂಗ್ ನೀವೇ ಕೃಷಿ ಮಾಡಿಕೊಳ್ಳಬೇಕಾದಂತಹದ್ದು. ಧರ್ಮಾಚರಣೆಯು ಒಂದು ಶಕ್ತಿ ಕೊಡುವ ಮಾರ್ಗ ಮತ್ತು ಇದು ದೇಹವನ್ನು ಶುದ್ಧೀಕರಿಸಿ ಮುಂದೂ ಸಹ ಸ್ವಚ್ಛವಾಗಿಡುತ್ತದೆ. ಇದನ್ನು ಹಲವು ಬಾರಿ ಮಾಡಬೇಕಾಗುತ್ತದೆ. ಕೃಷಿ ಮಾಡುವುದು ಅಗತ್ಯ. ಕೃಷಿಮಾಡುವುದು ನಿಮ್ಮನ್ನ ವಲಂಭಿಸಿರುತ್ತದೆ. ಗಾಂಗ್ ಗುರುವನ್ನವಲಂಭಿಸಿದೆ. ಆದ್ದರಿಂದ ನಾವು ಸಾಂಪ್ರದಾಯಿಕ ಆಚರಣೆಗಳನ್ನು ಮಾಡುವುದಿಲ್ಲ.

ಕೆಲವು ಮಂದಿ ಔಪಚಾರಿಕ ಆಚಾರವಿಧಿಗಳನ್ನನುಸರಿಸಿ ತಮ್ಮ ಗುರುವಿನ ಶಿಷ್ಯರಾಗಬಯಸುತ್ತಾರೆ. ನಾನೀಗ ಇದನ್ನು ಪ್ರಸ್ತಾಪಿಸಿದ್ದೇನೆ. ನಾನು ನಿಮಗೀಗ ಹೇಳಬಲ್ಲೆ. ಹೆಚ್ಚು ಮಂದಿ ತಮ್ಮ ಔಪಚಾರಿಕೆ ಆಚಾರವಿಧಿಯನ್ನು ಅನುಸರಿಸಿ ನನ್ನ ವಿದ್ಯಾರ್ಥಿಗಳಾಗಿದ್ದಾರೆ. ನಮ್ಮ ಪ್ರಚಲಿತ ಸಮಯದ ಇತಿಹಾಸವು ಚೈನಾದ ಊಳಿಗಮಾನದ ಸಮಾಜಕ್ಕಿಂತ ಭಿನ್ನವಾದುದು.

ವಿದ್ಯಾರ್ಥಿಯಾಗುವ ಮುನ್ನ ಮೊಣ ಕಾಲೂರಿರುವುದು ಮತ್ತು ವಿಧೆಯತೆಯಿಂದ ನೆಲಕ್ಕೆ ಹಣೆಯಿಟ್ಟು ನಮಸ್ಕರಿಸುವುದನ್ನು (Knowtowing) ಪರಿಗಣಿಸಲಾಗುತ್ತದೆಯೇ? ಇಲ್ಲಿದೆನೋಡಿ ಹೆಚ್ಚಿನ ಜನ ಹೇಗೆ ಯೋಚಿಸುತ್ತಾರೆಂದು ನಾನು ನೆಲಕ್ಕೆ ಹಣೆ ಹಚ್ಚಿ ನಮಸ್ಕರಿಸುತ್ತೇನೆ. ಸುವಾಸನಾ ಕಡ್ಡಿಯನ್ನು ಹಚ್ಚುತ್ತೇನೆ. ಮತ್ತು ಬುದ್ದನನ್ನು ಪೂಜಿಸುತ್ತೇನೆ. ನನಗೆ ಸ್ವಲ್ಪವಾದರೂ ಧಾರ್ಮಿಕ ಭಾವನೆಯಿದ್ದರೆ ನನ್ನ ಗಾಂಗ್ ಬೆಳೆಯುತ್ತದೆ. ಅದು ಹಾಸ್ಯಾಸ್ಪದ ನಿಜವಾದ ಅಭ್ಯಾಸವು ಸಂಪೂರ್ಣವಾಗಿ ನೀವೇ ಹೇಗೆ ಅಭ್ಯಾಸ ಮಾಡಿರುವಿರೆಂಬುದನ್ನವಲಂಬಿಸಿರುತ್ತದೆ. ವಿಷಯಗಳನ್ನು ಊಹಿಸುವುದು ಉಪಯೋಗವಿಲ್ಲದ್ದು. ನೀವು ಬುದ್ಧನಿಗೆ ನೆಲಕ್ಕೆ ಹಣೆಹಚ್ಚಿ ನಮಸ್ಕರಿಸುವ ಅಗತ್ಯವಿಲ್ಲ. ಸುಗಂಧ ಕಡ್ಡಿಯನ್ನು ಹಚ್ಚುವ ಅಗತ್ಯವಿಲ್ಲ./ ಆದರೆ ನಿಗಧಿತ ಪ್ರಮಾಣಕ್ಕನುಸಾರವಾಗಿ ನೀವು ಅಭ್ಯಾಸವನ್ನು ಮಾಡಬೇಕು. ಆಗ ಆತನು ನಿಮ್ಮನ್ನು ನೋಡಿದೊಡನೆಯೇ ಸಂತೋಷಿಸುತ್ತಾನೆ. ಆದರೆ ನೀವು ಯಾವಾಗಲು ಕೆಟ್ಟ ಕೆಲಸಗಳನ್ನು ಮಾಡುತ್ತಿದ್ದರೆ ಮತ್ತು ನೀವು ಈ ಪ್ರಪಂಚದಲ್ಲಿ ಕಳೆದುಹೋಗಿದ್ದರೆ ನೀವು ಬುದ್ಧನಿಗೆ ನೆಲಕ್ಕೆ ಹಣೆಹಚ್ಚಿ ನಮಸ್ಕರಿಸಿದರೂ ಸುಗಂಧ ಕಡ್ಡಿ ಹಚ್ಚಿದರೂ ನಿಮ್ಮನ್ನು ಕಂಡೊಡನೆಯೇ ಆತನು ಬಲವಿಲ್ಲದವನಾಗುತ್ತಾನೆ. ಇದು ಸತ್ಯವಾಗಿ ಹಾಗೆಯೇ ಅಲ್ಲವೇ? ನಿಜವಾದ ಅಭ್ಯಾಸ ನಿಮ್ಮನ್ನವಲಂಭಿಸಿದೆ. ಈ ದಿನ ನೀವು ನನಗೆ ಕೋಟೋ ಮಾಡಬಹುದು. ಮತ್ತು ಕೆಲವು ಔಪಚಾರಿಕೆ ಆಚಾರ ವಿಧಿಗಳಂದ ತೃಪ್ತಿಪಡಿಸಿ ನನ್ನ ಶಿಷ್ಯರಾಗಿರಬಹುದು. ಮತ್ತೆ ನೀನು ಸ್ವಾವಲಂಬಿಯಾದಾಗ ಮತ್ತೆ ನಿಮ್ಮ ಹಳೆಯ ದಾರಿಯಲ್ಲಿ ನಡೆದರೆ ಅದರಲ್ಲೇ ನಾನಾ ಹುರುಳದೆಯೇ? ನಾವು ಅಂತಹ ಆಚರಣೆಯನ್ನು ಮಾಡುವುದಿಲ್ಲ. ನೀವು ನನ್ನ ಹೆಸರನ್ನು ಕೆಡೆಸಲೂಬಹುದು.

ಪ್ರತಿಯಬ್ಬರಿಗೂ ನಾವು ಬಹಳಷ್ಟನ್ನು ಕೊಟ್ಟಿದ್ದೇವೆ. ನೀವು ಎಲ್ಲಿಯವರೆಗೆ ನಿಜವಾದ ಅಭ್ಯಾಸವನ್ನು ಮಾಡುತ್ತಿರುವಿರೋ, ಎಲ್ಲಿಯವರೆಗೂ **'ಶ್ರೇಷ್ಟ ನಿಯಮದ'** ಪಾಲನೆ ಮಾಡುತ್ತಿರುವಿರೊ ನಾನು ನಿನ್ನನ್ನು ಶಿಷ್ಯನನ್ನಾಗಿ ಸ್ವೀಕರಿಸುತ್ತೇನೆ. ನಿನಗೆ ಮಾರ್ಗದರ್ಶನ ಮಾಡುತ್ತೇನೆ. ಎಲ್ಲಿಯವರೆಗೆ ನೀವು ಫಾಲುನ್ ಧಾಫಾ ಅಭ್ಯಸಿಸುತ್ತೀರೋ ಅಲ್ಲಿಯವರೆಗೂ ನಾವು ನಿಮ್ಮನ್ನು ಶಿಷ್ಯರನ್ನಾಗಿ ಸ್ವೀಕರಿಸುತ್ತೇವೆ. ಮತ್ತು ಮಾರ್ಗದರ್ಶನ ಮಾಡುತ್ತೇವೆ. ಆದರೆ ನೀವು ಅಭ್ಯಾಸವನ್ನು ಮಾಡದಿದ್ದರೆ, ನಿಮಗಾಗಿ ನಾವು ಏನನ್ನು ಮಾಡಲಾಗುವುದಿಲ್ಲ. ಅಭ್ಯಾಸವನ್ನು ನಿಲ್ಲಿಸಿದರೆ, ಈ ಶಿರೋನಾಮೆಯನ್ನು ಕೊಂಡೊಯ್ಯುವ ಯಾವ ಒಳ್ಳೆಯದನ್ನು ಅದು ಮಾಡುತ್ತದೆ? ನೀವು ಮೊದಲ ಶ್ರೇಣಿಯ ಶಿಷ್ಯರೋ ಅಥವಾ ಎರಡನೇ ಶ್ರೇಣಿಯ ಶಿಷ್ಯರೋ ಎನ್ನುವುದು ಮುಖ್ಯವಲ್ಲ. ನೀವು ಚಲನೆಗಳನ್ನು ಮಾಡುತ್ತೀರೆಂಬ ಒಂದೇ ಕಾರಣದಿಂದ ನಿಮ್ಮನ್ನು ಶಿಷ್ಯರನ್ನಾಗಿ ಪರಿಗಣಿಸಲು ಸಾಧ್ಯವೇ? ನೀವು ಸತ್ಯವಾಗಿ ನಮ್ಮ ಗುಣದ ಪ್ರಮಾಣಕ್ಕನುಗುಣವಾಗಿ ಅಭ್ಯಾಸವನ್ನು ಮಾಡಿದರೆ ನೀವು ಆರೋಗ್ಯವಂತ ದೇಹವನ್ನು ಹೊಂದಲು ಸಾಧ್ಯ ಮತ್ತು ನಂತರವೇ ನೀವು ಉಚ್ಚ ಹಂತನ್ನು ತಲುಪಲು ಸಾಧ್ಯ. ಆದ್ದರಿಂದ ನಾವು ಈ ಆಚರಣೆಗಳನ್ನು ಮಾಡುವುದಿಲ್ಲ. ಎಲ್ಲಿಯವರೆಗೂ ನೀವು ಅಭ್ಯಾಸವನ್ನು ಮಾಡುತ್ತೀರೋ ಅಲ್ಲಿಯವರೆಗೂ ನೀವು ನಮ್ಮ ಶಿಷ್ಯರು. ನಮ್ಮ ಕಾನೂನಿನ ಅಂಗಗಳಿಗೆ ಇವೆಲ್ಲದರ ಅರಿವಿದೆ. ನೀವೇನನ್ನು ಯೋಚಿಸಿದರೂ, ಅವರಿಗೆ ಇದರ ಅರಿವಿದೆ. ಮತ್ತು ಅವರೇನು ಬೇಕಾದರೂ ಮಾಡಬಲ್ಲರು. ನೀವು ಅಭ್ಯಾಸವನ್ನು ಮಾಡದಿದ್ದರೆ ಅವರು ನಿಮ್ಮ ಯೋಗಕ್ಷೇಮ ನೋಡಿಕೊಳ್ಳುವುದಿಲ್ಲ. ಆದರೆ ನೀವು ಅಭ್ಯಾಸವನ್ನು ಮಾಡಿದರೆ ಕೊನೆಯವರೆಗೂ ಅವರು ನಿಮಗೆ ಸಹಯ ಮಾಡುತ್ತಾರೆ.

ಕೆಲವು ಚಿಗಾಂಗ್‌ನಲ್ಲಿ ಅಭ್ಯಾಸಿಗರು ತಮ್ಮ ಗುರುಗಳನ್ನು ಸಂದಿಸಿರುವುದೇ ಇಲ್ಲ. ಒಂದು ನಿರ್ದಿಷ್ಟ ದಿಕ್ಕಿಗೆ ತಿರುಗಿ ಹಣೆಯನ್ನು ನೆಲಕ್ಕೆ ತಾಗಿಸಿ ನಮಸ್ಕರಿಸುವಂತೆ ಅವನಿಗೆ ಸೂಚಿಸಲಾಗಿರುತ್ತದೆ. ಮತ್ತು ನೂರು ಡಾಲರ್‌ಗಳನ್ನು ಪಾವತಿಸಿದರೆ ಅದು ಕೆಲಸದ ಸಾಧನೆ ಮಾಡಿಸುತ್ತದೆಂದು ತಿಳಿಸಿರುತ್ತಾರೆ. ಅವರು ತಮ್ಮನ್ನು ತಾನೇ ಮೂರ್ಖರನ್ನಾಗಿ ಮಾಡಿಕೊಳ್ಳುತ್ತಿಲ್ಲವೇ?

ಹೆಚ್ಚೇನು..........ಆನಂತರ ಆತನು ಅಭ್ಯಾಸವನ್ನೂ ಮತ್ತು ಅವನ ಗುರುಗಳನ್ನೂ ಸಮರ್ಥಿಸಿಕೊಳ್ಳಲಾರಂಭಿಸುತ್ತಾನೆ. ಅಷ್ಟೇ ಅಲ್ಲ ಈತನು ಬೇರೆಯವರಿಗೆ ಬೇರಾವುದು ಅಭ್ಯಾಸಗಳನ್ನು ಕಲಿಯಬೇಡಿರೆಂದು ಹೇಳುತ್ತಾನೆ. ಅದು ಬಹಳ ಹಾಸ್ಯಾಸ್ಪದ ವಾಗಿರಬಹುದು. ಕೆಲ ಜನಗಳಿದ್ದಾರೆ.

ಅವರು **'ಮೋಡಿಂಗ್'** ಆಚರಣೆಯನ್ನು ಮಾಡುತ್ತಾರೆ. ಆ ಸ್ಪರ್ಷವು ಏನನ್ನೂ ಬೇಕಾದರೂ ಹೇಗೆ ಮಾಡಬಹುದೆಂಬುದರ ಅರಿವಿಲ್ಲ.

ಯಾವ ವ್ಯಕ್ತಿಗಳು ತಾಂತ್ರಿಕತೆಯ ಹೆಸರಿನಲ್ಲಿ ಚಿಗಾಂಗ್ ಬೋಧಿಸುತ್ತಾರೋ ಅವರೆಲ್ಲ ಸುಳ್ಳು, ಯಾರು ಬೌದ್ಧ ಧರ್ಮದ ಹೆಸರಿನಲ್ಲಿ ಚಿಗಾಂಗ್ ಬೋಧಿಸುತ್ತಾರೊ, ಅವರಿಗೆ ಸಹ ಇದು ಅನ್ವಯಿಸುತ್ತದೆ. ಈಗ ಅದರ ಬಗ್ಗೆ ಯೋಚಿಸಿ, ಬೌದ್ಧಧರ್ಮ, ಆಚರಣೆಯಲ್ಲಿ ಸಹಸ್ರಾರು ವರ್ಷಗಳಿಂದ ಈ ಅಭ್ಯಾಸವನ್ನು ಪಾಲಿಸಿಕೊಂಡು ಬರಲಾಗುತ್ತಿದ್ದು, ಇದನ್ನು ಕೆಲವರು ಬದಲಾಯಿಸಲು ಸಾಧ್ಯವೇ? ಈ ಅಭ್ಯಾಸಿ ರೀತಿಯು ಗಂಭೀರವಾಗಿ ಬೌದ್ಧಿಕತೆಯನ್ನು ಅಭ್ಯಾಸಿಸುವುದಾಗಿದೆ. ಮತ್ತು ಅತ್ಯದ್ಭುತವಾಗಿದೆ. ಒಂದು ಸಣ್ಣ ತಪ್ಪು ಇಡೀ ವ್ಯವಸ್ಥೆಯನ್ನು ನಾಶಪಡಿಸುತ್ತದೆ. ಈ ಕೃಷಿ ಶಕ್ತಿಯನ್ನು ಉತ್ಪನ್ನ ಮಾಡುವ ಪ್ರಕ್ರಿಯೆಯು ಬಹಳ ಜಟಿಲವಾದುದು. ನಿಮಗೆ ಏನನ್ನಿಸುತ್ತದೆಯೋ ಅದು ಮುಖ್ಯವಲ್ಲ. ಅನಿಸಿಕೆ ಭಾವದಿಂದ ನಾವು ಅಭ್ಯಾಸ ಮಾಡಬಾರದು. ಧಾರ್ಮಿಕ ರೂಪಗಳೇ ಸನ್ಯಾಸಿಗಳ ಅಭ್ಯಾಸ ಮಾರ್ಗಗಳು ಒಮ್ಮೆ ಅದನ್ನು ಬದಲಾಯಿಸಿದರೆ ಅದು ಆ ಶಿಸ್ತಿಗೆ ಇನ್ನು ಮುಂದೆ ಸೇರುವುದಿಲ್ಲ. ಪ್ರತಿ ಧರ್ಮದಲ್ಲಿಯು "ಜ್ಞಾನೋದಯವಾದಂತಹ ಉತ್ಕೃಷ್ಟವಾದಂತಹ ಪ್ರತಿವಾದಿಗಳು ಆ ಧರ್ಮದ ಮೇಲ್ವಿಚಾರಕರಾಗಿರುತ್ತಾರೆ. ಮತ್ತು ಪ್ರತಿ ಧರ್ಮವೂ, ವ್ಯವಸ್ಥೆಯು ಉತ್ಕೃಷ್ಟವಾದ ಜ್ಞಾನೋದಯ ಹೊಂದಿದವರನ್ನು ರೂಢಿಸಿ ಕೊಂಡು ಬಂದಿದೆ. ಇಂತಹ ಒಂದು ವ್ಯವಸ್ಥೆಯನ್ನು ಯಾರೊಬ್ಬರೂ ಸಹ ಬದಲಾಯಿಸುವ ಧೈರ್ಯ ಹೊಂದಿರುವುದಿಲ್ಲ. ಯಾವ ಧರ್ಮಶೀಲನಾದಂತಹ ಚಿಗಾಂಗ್ ಮಾಸ್ತರನು ತನ್ನ ಮಾಸ್ತರನಿಗೆ ಮೋಸಮಾಡಿ ಈ ಬೌದ್ಧಿಕತೆಯನ್ನು ಆಚರಿಸುವಂತಹ ಶಿಸ್ತಿನ ಆಚರಣೆಯ ಬದಲಾವಣೆ ಮಾಡಲಾಗುತ್ತದೆ. ಅದನ್ನು ನಿಜವಾಗಿಯು ಬದಲಾಯಿಸಬಹುದಾದರೆ ಈಗಲೂ ಸಹ ಅದು ಮೊದಲಿನ ಆಚರಣೆಯೇ ಆಗಿರುತ್ತದೆಯೇ? ನಕಲಿ ಚಿಗಾಂಗ್ ಎಂದರೇನೆಂದು ನೀವು ಹೇಳಬಹುದು.

## ನಿಶ್ಚಿತ ಸ್ಥಳದ ರಹಸ್ಯಮಾರ್ಗ (Placement of the Mysterious pasth)

' ನಿಶ್ಚಿತ ಸ್ಥಳದ ರಹಸ್ಯಮಾರ್ಗವನ್ನು **(Placement of the Mysterious pasth)** ರಹಸ್ಯಮಾರ್ಗದ ಒಂದು ಕಿಂಡಿ' ಎಂದೂ ಸಹ ಕರೆಯಲಾಗುತ್ತದೆ. ಈ ಶಬ್ದಗಳು ನಿಮಗೆ ಈ ಪುಸ್ತಕಗಳಲ್ಲಿ ಸಿಗುತ್ತವೆ. 'ಬುಕ್ ಆಫ್ ಎಲಿಕ್ಸಿರ್' **(Book of Elixiv)** 'ಡಯಸ್ಟ್ ಕ್ಯಾನನ್' **(Daoist Canon)** ಮತ್ತು ಗೈಡ್ ಟು ನೇಚರ್ ಅಂಡ್ ಲಾಂಜೆವಿಟಿ **(Guide to Nature and Longevity)** ಹಾಗಾದರೆ ಇದೇನು? ಹೆಚ್ಚಿನ ಚಿಗಾಂಗ್ ಬೋಧಕರು ಇದನ್ನು ವಿವರಿಸಲಾಗಿಲ್ಲ. ಸಾಮಾನ್ಯ ಚಿಗಾಂಗ್ ಬೋಧಕರು ತಮ್ಮ ಹಂತದಿಂದ ಇದನ್ನು ಕಾಣಲೇ ಆಗಿಲ್ಲ, ಅವರಿಗೆ ಇದನ್ನು ನೋಡಲು ಅನುಮತಿಯಿಲ್ಲ. ಒಬ್ಬ ಅಭ್ಯಾಸಿಗನು ಅದನ್ನು ನೋಡಬಯಸಿದರೆ ಇದನ್ನು ನೋಡುವ ಮೊದಲು ಜ್ಞಾನಾತ್ಮಕ ಕಣ್ಣುಗಳಿಂದ **(Wisdom Eye)** ಈತನು ಉಚ್ಚ ಹಂತವನ್ನು ತಲುಪಿರಬೇಕು. ಸಾಮಾನ್ಯ ಚಿಗಾಂಗ್ ಬೋಧಕರು ಈ ಹಂತವನ್ನು ತಲುಪಲಾಗು ವುದಿಲ್ಲ. ಆದ್ದರಿಂದ ಅವರು ಇದನ್ನು ನೋಡಲಾಗುವುದಿಲ್ಲ. ಪುರಾತನ ಕಾಲದಿಂದಲೂ ಸಂಸ್ಕರಣ ವರ್ತುಲವು/ಮಂಡಲವು ಈ ರಹಸ್ಯ ಮಾರ್ಗವೆಂದರೇನೆಂದು ಕಂಡುಹಿಡಿಯಲು ಪ್ರಯತ್ನಿಸುತ್ತಿದ್ದಾರೆ, ಆ ಒಂದು ಕಿಂಡಿ ಎಲ್ಲಿದೆಯೆಂದು ಮತ್ತು ಹೇಗೆ ಅದನ್ನು ಕಂಡುಹಿಡಿ ಯುವುದು ಎಂದು 'ಬುಕ್ ಆಫ್ಎಲಿಕ್ಸಿರ್' 'ಡಯಸ್ಟ್ ಕ್ಯಾನನ್' ಮತ್ತು ಗೈಡ್ ಟು ನೇಚರ್ ಅಂಡ್ ಲಾಂಜೆವಿಟಿಗಳಲ್ಲಿ ತಾತ್ವಿಕವಾಗಿ ಮಾತ್ರ ಚರ್ಚಿಸುತ್ತಾರೆ. ಮತ್ತು ಅವರು ಮೂಲ ತತ್ವವನ್ನು ಸ್ಪರ್ಶಿಸಲಾಗಿಲ್ಲ. ಅವರು ಇದನ್ನು ಪದೇ ಪದೇ ವಿವರಿಸುತ್ತಾರೆ. ಮತ್ತು

ಕೇವಲ ನಿಮ್ಮನ್ನು ತಬ್ಬಿಬ್ಬು ಮಾಡುತ್ತಾರೆ. ಯಾರೂ ಇದನ್ನು ಸರಿಯಾಗಿ ವಿವರಿಸಲಾರರು ಏಕೆಂದರೆ ಸಾಮಾನ್ಯ ಜನರಿಗೆ ಇದರ ಮೂಲತತ್ವನ್ನು ತಿಳಿದುಕೊಳ್ಳಲು ಅನುಮತಿಯಿಲ್ಲ. ಜೊತೆಗೆ ನಾನಿನ್ನೂ ನಿಮಗೆ ಕೆಲವು ವಿಷಯಗಳನ್ನು ಹೇಳಬಲ್ಲೆ. ಇದು ಕೇವಲ ಏಕೆಂದರೆ ನೀವು ನಮ್ಮ ಫಾಲುನ್ ಧಫ ಅನುಯಾಯಿಗಳು ಆದ್ದರಿಂದ ಇದನ್ನು ನಿಮಗೆ ಹೇಳುತ್ತಿದ್ದೇನೆ. ಖಾತ್ರಿ

---

6. **ಮೋಡಿಂಗ್'** – ಬೇರೊಬ್ಬರ ತಲೆಯನ್ನು ಸ್ಪರ್ಶಿಸಿ ಶಕ್ತಿಯನ್ನು ನೀಡುವುದು.

ಮಾಡಿಕೊಳ್ಳಿ ದಿಕ್ಕು ತೋರದಂತೆ ಮಾಡುವ ಚಿಗಾಂಗ್ ಪುಸ್ತಕಗಳನ್ನು ಓದುವುದಿಲ್ಲವೆಂದು ನಾನು ಈಗತಾನೆ ಪ್ರಸ್ತಾಪಿಸಿದ ಪುರಾತನ ಪುಸ್ತಕಗಳ ಬಗ್ಗೆ ಮಾತನಾಡುತ್ತಿಲ್ಲ. ಪ್ರಸ್ತುತದಲ್ಲಿ ಜನಗಳು ಬರೆಯುತ್ತಿರುವ ನಕಲಿ ಚಿಗಾಂಗ್ ಪುಸ್ತಕದ ಬಗ್ಗೆ ಪ್ರಸ್ತಾಪಿಸುತ್ತಿದ್ದೇನೆ. ಅಂತಹ ಪುಸ್ತಕಗಳನ್ನು ತೆಗೆದು ನೋಡಬೇಡಿ ಒಂದು ಸಣ್ಣ ವಿಚಾರವೂ  ನಮ್ಮ ಮನಸ್ಸಿಗೆ ಬಂದೊಡನೆಯೇ, "ಓ, ಈ ವಾಕ್ಯವು ಸ್ವಲ್ಪ ಅರ್ಥವನ್ನು ಕೊಡುತ್ತದೆ..........ಈ ಕಲ್ಪನೆಯು ನಿಮ್ಮ ಮಾನಸದ ಮೂಲಕ ಹೊಳೆದೊಡನೆಯೇ ಆ ಪುಸ್ತಕದಲ್ಲಿರುವ ಅಧೀನಪಡಿಸಿಕೊಳ್ಳುವಂತಹ ಆತ್ಮಗಳು ನಮ್ಮ ದೇಹವನ್ನು ಸೇರುತ್ತವೆ.

ಕೀರ್ತಿ ಮತ್ತು ಲಾಭಕ್ಕಾಗಿ ಮೋಹಗೊಂಡಿರುವ ವ್ಯಕ್ತಿಗಳನ್ನು ಹಿಡತದಲ್ಲಿಟ್ಟುಕೊಂಡು ಯುಕ್ತಿಯಿಂದ ನಿಭಾಯಿಸಬಲ್ಲಂತಹ ವಶಪಡಿಸಿಕೊಳ್ಳುವ ಆತ್ಮಗಳ ಬಗ್ಗೆ ಬಗಳ ಪುಸ್ತಕಗಳನ್ನು ಬರೆಯಲಾಗಿದೆ. ಬಹಳಷ್ಟು ನಕಲಿ ಚಿಗಾಂಗ್ ಪುಸ್ತಕಗಳಿವೆ. ಬಹಳಷ್ಟು ಸಂಖ್ಯೆಯಲ್ಲಿ ಹೆಚ್ಚಿನ ಜನಗಳು ಬೇಜವಾಬ್ದಾರರಾಗಿರುತ್ತಾರೆ ಮತ್ತು ಇವರು ವಶಪಡಿಸಿಕೊಂಡ ಆತ್ಮಗಳು ಹಾಗೂ ಪ್ರಯೋಜನವಿಲ್ಲದ ಇತರೆ ವಿಷಯಗಳ ಬಗ್ಗೆ ಬರೆಯುತ್ತಾರೆ. ನಾನು ಮೇಲೆ ಹೇಳಿದಂತಹ ಪುರಾತನ ಪುಸ್ತಕಗಳಾಗಲಿ ಅಥವಾ ಇನ್ಯಾವುದೇ ಇತರ ಪುರಾತನ ಪುಸ್ತಕಗಳಾಗಲಿ ಹೆಚ್ಚಿನ ಭಾಗಕ್ಕಾಗಿ ಅದನ್ನು ಓದದಿರುವುದೇ ಒಳ್ಳೆಯದು. ಏಕೆಂದರೆ ಒಂದೇ ಆಚರಣೆಗೆ ಬದ್ಧನಾಗಿರಬೇಕಾಗುತ್ತದೆ.

ಚೈನಾ ಚಿಗಾಂಗ್ ಅಸೋಸಿಯೇಷನ್ನಿನ ಒಬ್ಬ ಅಧಿಕಾರಿಯು ಒಮ್ಮೆ ಬಂದು ಕಥೆಯನ್ನು ಹೇಳಿದನು.  ಅದು ನಿಜವಾಗಿಯೂ ನನ್ನನ್ನು ನಗುವಂತೆ ಮಾಡಿತು. ಬೇಜಿಂಗ್‌ನಲ್ಲಿ ಒಬ್ಬ ವ್ಯಕ್ತಿಯಿರುವುದಾಗಿಯೂ ಆತನು ಯಾವಾಗಲೂ ಚಿಗಾಂಗ್ ಉಪನ್ಯಾಸಗಳಿಗೆ ಹೋಗುತ್ತಿದ್ದನೆಂದು ಆ ಅಧಿಕಾರಿಯು ಹೇಳಿದನು. ಈತನು ಒಂದರ ನಂತರ ಒಂದು ಉಪನ್ಯಾಸಗಳನ್ನು ಕೇಳುತ್ತಿದ್ದ ಮತ್ತು ಕೆಲ ಸಮಯದ ನಂತರ ತಾನು ಕೇಳಿದ ಉಪನ್ಯಾಸಗಳನ್ನು ಹೇಳುತ್ತಿದ್ದ. ಮತ್ತು ಕೆಲ ಸಮಯದ ನಂತರ ತಾನು ಕೇಳಿದ ಉಪನ್ಯಾಸಗಳಿಗಿಂತ ಹೆಚ್ಚಿನ ಚಿಗಾಂಗ್ ಇಲ್ಲವೆಂದೆನಿಸುತ್ತಿತ್ತು. ಅವೆಲ್ಲವುಗಳೂ ಒಂದೇ ಹಂತದಲ್ಲಿದ್ದುದರಿಂದ ಅವೆಲ್ಲವೂ ಒಂದೇ ವಿಷಯದ ಬಗ್ಗೆ ಮಾತನಾಡುತ್ತಿದ್ದೆವು. ನಕಲಿ ಚಿಗಾಂಗ್ ಬೋಧಕರಂತೆ, ಅದೊಂದೇ ಅರ್ಥ ಚಿಗಾಂಗ್‌ಗೆ ಇರುವುದೆಂದುಕೋಮಡ! "ಸರಿ, ಹಾಗಾದರೆ ನಾನೂ ಸಹ ಒಂದು ಚಿಗಾಂಗ್ ಪುಸ್ತಕವನ್ನು ಬರೆಯುತ್ತೇನೆ." ಇದರ ಬಗ್ಗೆ ಯೋಚಿಸಿರಿ. ಯಾವನು ಚಿಗಾಂಗ್ ಅಭ್ಯಾಸಮಾಡುವುದಿಲ್ಲವೋ ಆತನು ಪುಸ್ತಕವನ್ನು ಬರೆಯುತ್ತಾನೆ. ಈ ನಡುವೆ ಚಿಗಾಂಗ್ ಪುಸ್ತಕಗಳನ್ನು ಒಂದನ್ನೊಂದು ನೋಡಿ ನಕಲಿ ಮಾಡುತ್ತಿದ್ದಾರೆ. ಆತನು ನಿಮ್ಮದನ್ನು ನಕಲಿ ಮಾಡುತ್ತಾನೆ. ನೀವು ಅವನದನ್ನು ನಕಲಿ ಮಾಡುತ್ತೀರಿ. ರಹಸ್ಯ ಮಾರ್ಗದ ವಿಷಯ ಸಿಗುವವರೆಗೂ ಆತ ಬರೆಯುತ್ತಾನೆ. ಮತ್ತು ಮತ್ತೆ ಮತ್ತೆ ಬರೆಯುತ್ತಾನೆ. ಆದರೆ ಅದಕ್ಕಿಂತ ಆತನಿಗೆ ಮುಂದೆ ಹೋಗಲಾಗುವುದಿಲ್ಲ. ಈ ರಹಸ್ಯ ಮಾರ್ಗವೇನೆಂದು ಯಾರಿಗೆ ನಿಜವಾಗಿ ತಿಳಿದಿದೆ? ಕೇವಲ ಕೆಲವೇ ಚಿಗಾಂಗ್ ಮಾಸ್ತರನನ್ನು ಕೇಳುತ್ತಾನೆ. ಆತನು ನಕಲಿಯೆಂದು ಈತನಿಗೆ ತಿಳಿದಿಲ್ಲ. ಆದರೂ, ಏಕೆಂದರೆ, ಚಿಗಾಂಗ್ ಹೇಗೆ ಆರಂಭಿಸಬೇಕೆಂದು ಅವನಿಗೆ ತಿಳಿದಿಲ್ಲ.

ಆದರೆ ನಕಲಿ ಚಿಗಾಂಗ್ ಮಾಸ್ತರನು ಪ್ರಶ್ನೆಗಳಿಗೆ ಉತ್ತರಿಸಲಾಗದಿದ್ದರೆ, ಜನಗಳಿಗೆ ಆತನು ನಕಲಿ ಚಿಗಾಂಗ್ ಮಾಸ್ತರನೆಂದು ಅರ್ಥವಾಗುವುದಿಲ್ಲವೇ? ಆದ್ದರಿಂದ ಈತನು ಏನನ್ನಾದರೂ ಹೇಳಬೇಕೆಂಬ ಧೈರ್ಯಮಾಡುತ್ತಾನೆ. ಮತ್ತು ಆತನು ಹೇಳಿದ ರಹಸ್ಯ ಮಾರ್ಗದ ಒಂದು ರಂಧ್ರವು ಮನುಷ್ಯನ ಖಾಸಗಿ ಭಾಗದ ಒಂದು ತುದಿಯಲ್ಲಿದೆ. ಇದು ಆಕರ್ಷಕ ಅಸಂಬದ್ಧವೆಂದು ಭಾಸವಾಗುತ್ತದೆ. ಆದರೆ ಇನ್ನೂ ನಗಬೇಡಿ ಈ ಪುಸ್ತಕವನ್ನು ಪ್ರಕಟಗೊಳಿಸಲಾಗಿದೆ. ನಾನು ಏನು ಹೇಳುತ್ತೇನೆಂದರೆ, ಈಗ ಚಿಗಾಂಗ್ ಪುಸ್ತಕಗಳು ಹಾಸ್ಯಾಸ್ಪದವಾಗಿರುತ್ತದೆ. ಇದರ ಸತ್ವವನ್ನೋದುವ ಅವಶ್ಯಕತೆಯಿದೆಯೇ? ಖಂಡಿತ ವಾಗಿಯೂ ಅವಶ್ಯಕತೆಯಿಲ್ಲ. ಏಕೆಂದರೆ ಅದು ನಿಮ್ಮನ್ನು ತೊಂದರೆಗೀಡು ಮಾಡುತ್ತದೆ.

ಹಾಗಾದರೆ 'ನಿಶ್ಚಿತ ಸ್ಥಳದ ರಹಸ್ಯಮಾರ್ಗವೆಂದರೇನು? ನಿಮ್ಮ ಪ್ರಪಂಚದ ಮೂರನೆಯ ಕಾನೂನಿನಲ್ಲಿನ ಅಭ್ಯಾಸದಲ್ಲಿ ನೀವು ಮಧ್ಯಮ ಹಂತಕ್ಕಿಂತ ಹೆಚ್ಚು ಅಭ್ಯಾಸವನ್ನು ಮಾಡಿದಾಗ,

ಅರ್ಥಾತ್ ನೀವು ಉಚ್ಚ ಹಂತದ ಟ್ರಿಪಲ್, ವರ್ಲ್ಡ್–ಲಾ ಅಭ್ಯಾಸವನ್ನು ಪ್ರವೇಶಿಸಿದ ನಂತರ, ಅಭ್ಯಸಿಸಿದಂತಹ ಹಸುಳೆಗಳು ಪಕ್ವಗೊಳ್ಳ ಲಾರಂಭಿಸುತ್ತಾರೆ. ಸುಂದರವಾದ ಮಗುವೆಂದು ನಮಗೇನು ತಿಳಿದಿದೆಯೋ ಅಭ್ಯಸಿಸಿ ದಂತಹ ಶಿಶುವು ಅವರಿಗಿಂತ ಭಿನ್ನವಾಗಿ ಕಾಣುತ್ತಾನೆ............ ಸುಂದರವಾದ ಮಗುವು ಚಿಕ್ಕದಾಗಿರುತ್ತದೆ. ಉಲ್ಲಾಸಮಯವಾಗಿರುತ್ತದೆ. ಮತ್ತು ತುಂಟನಾಗಿರುತ್ತದೆ. ಅಭ್ಯಸಿಸಿದ ಮಗುವು ಚಲಿಸುವುದಿಲ್ಲ. ಪರಮಾತ್ಮನು ಆತನನ್ನು ಹಿಡಿತದಲ್ಲಿಟ್ಟುಕೊಂಡಿರುವವರೆಗೂ ಆತನು ಕದಲದೇ ಕೈಗಳನ್ನು ಜೋಡಿಸಿಕೊಂಡು ಜೇಯಿನ್ (Jieyin) ಸ್ಥಿತಿಯಲ್ಲಿ ಕಾಲುಗಳನ್ನು ಮಡಚಿ ಕಮಲದ ಹೂವಿನ ಮೇಲೆ ಕುಳಿತಿರುತ್ತಾನೆ. ಅಭ್ಯಸಿಸಿದ ಮಗುವು ದಿವ್ಯಕ್ಷೇತ್ರದಲ್ಲಿ ಜನಿಸಿರುತ್ತದೆ. ಆತನು ಸೂಜಿ ಮೊನೆಯಷ್ಟು ಸಣ್ಣದಾಗಿದ್ದರೂ ಸಹ, ನೀವು ಆತನನ್ನು ಅಂತಿಮ ಸೂಕ್ಷ್ಮ ಜಗತ್ತಿನಲ್ಲಿ ನೋಡಬಹುದು.

ನಾನು ಇನ್ನೊಂದು ವಿಷಯವನ್ನು ಸ್ಪಷ್ಟಗೊಳಿಸಲಿಚ್ಛಿಸುತ್ತೇನೆ. ಸತ್ಯವಾಗಿಯೂ ಒಂದೇ ಒಂದು **ದಿವ್ಯ ಕ್ಷೇತ್ರ**ವಿದೆ. ಮತ್ತು ಇದು ನಮ್ಮ ಕೆಳ ಹೊಟ್ಟೆಯ ಸುತ್ತಲಿನ ಪ್ರದೇಶದಲ್ಲಿದೆ. ಒಳ್ಳೆಯದು, ದೇಹದೊಳಗಿರುವ ಈ ಕ್ಷೇತ್ರವು **ಪೆರಿನಮ್** ಬಳಿ **ಹ್ಯೂಯಾನ್ ಆಕ್ಯುಪಾಯಿಂಟ್ (acpoint)** ಮೇಲೆ ಮತ್ತು ಕೆಳಹೊಟ್ಟೆಯ ಕೆಳಗಿದೆ. ಎಷ್ಟೊ ರೂಪದ ಗಾಂಗ್ ಹಲವು ಸಾಮರ್ಥ್ಯಗಳು, ಅನೇಕ ತಂತ್ರಗಳು– ಅದೇ ಬಗೆಯ ಸಂಗತಿಗಳು, ಕಾನೂನುನ ಸಂಸ್ಥೆಗಳು ಅಭ್ಯಸಿಸಿದ ಶಿಶು, ಸುಮಧುರವಾದ ಮಗು/ದೇವಪುರುಷ ಇನ್ನೂ ಎಷ್ಟೋ ವ್ಯಕ್ತಿಗಳು ಈ ಕ್ಷೇತ್ರದಲ್ಲಿ ಜನಿಸಿದ್ದಾರೆ.

ಹಿಂದೆ ಕೆಲವು ಅಭ್ಯಾಸಿಗರಿದ್ದರು ಅವರು ಪ್ರಭುತ್ವ ದಿವ್ಯಕ್ಷೇತ್ರ, ಮಧ್ಯಮ ದಿವ್ಯ ಕ್ಷೇತ್ರ ಮತ್ತು ಕೆಳ ದಿವ್ಯ ಕ್ಷೇತ್ರದ ಬಗ್ಗೆ ಮಾತನಾಡುತ್ತಿದ್ದರು. ಅವರ ಹೇಳಿಕೆ ತಪ್ಪೆಂದು ನಾನು ಹೇಳುತ್ತೇನೆ. ಪುಸ್ತಕದಲ್ಲಿ ಈ ರೀತಿ ಬರೆದಿದೆ. ಏನೆಂದರೆ ಕೆಲವರು ಹೇಳುತ್ತಿದ್ದರು. ಇದನ್ನು ತಲೆತಲಾಂತರಗಳಿಂದಲೂ ಅವರ ಗುರುಗಳು ವರ್ಗಾಯಿಸುತ್ತಿದ್ದರೆಂದು. ನಾನು ಹೇಳುತ್ತೇನೆ. ಹಳೆಯ/ಪುರಾತನ ಕಾಲದಿಂದಲೂ ಬೇಡದ ವಸ್ತುಗಳು ಸುತ್ತಲೂ ಹರಡಿವೆ. ಇದೆಷ್ಟು ವರ್ಷಗಳಿಂದ ನಡೆದು ಬರುತ್ತಿದೆಯೆಂದು ನೋಡಬೇಡಿ– ಹಾಗೆಂದರೆ ಇದು ಸರಿ ಎಂಬರ್ಥವಲ್ಲ. ಕೆಲವು ಪ್ರಾಪಂಚಿಕ ಸಣ್ಣ ಮಾರ್ಗಗಳು, ಸಾಮಾನ್ಯ ಜನರ ಪರಿಸರದ ಸುತ್ತಲೂ ಹರಡಿಕೊಂಡಿರುತ್ತದೆ. ಆದರೆ ಅದು ಅಭ್ಯಾಸಮಾಡಲು ಸಹಾಯ ಮಾಡುವುದಿಲ್ಲ. ಅದೆಲ್ಲ ಕ್ಷುಲ್ಲಕ ವಿಷಯ ಪ್ರಭುತ್ವ ದಿವ್ಯಕ್ಷೇತ್ರ, ಮಧ್ಯಮ ದಿವ್ಯಕ್ಷೇತ್ರ, ಮತ್ತು ಕೆಳ ದಿವ್ಯಕ್ಷೇತ್ರಗಳ ಬಗ್ಗೆ ಮಾತನಾಡಿದಾಗ ಅದರರ್ಥವೇನೆಂದರೆ, ನೀವು ಎಲ್ಲಿ ದಿವ್ಯತೆಯನ್ನು ಉತ್ಪತಿಮಾಡುತ್ತೀರೋ ಅದೇ ದಿವ್ಯಕ್ಷೇತ್ರ ಅದು ತಮಾಷೆಯಲ್ಲವೇ? ಒಬ್ಬ ವ್ಯಕ್ತಿಯು ತನ್ನ ಮನಸ್ಸನ್ನು ಒಂದೇ ವಿಷಯದ ಮೇಲೆ ಕೇಂದ್ರೀಕರಿಸಿದಾಗ, ಕೆಲಸಮಯದ ನಂತರ ಇದು ಒಂದು ಅದ್ಭುತ ಶಕ್ತಿಯ ಉತ್ಪಾದನೆಯನ್ನು ಮಾಡುತ್ತದೆ. ಅದೇ ದಿವ್ಯ ಸ್ವರೂಪವನ್ನು ಹೊಂದುತ್ತದೆ. ನೀವಿದನ್ನು ನಂಬದಿದ್ದರೆ, ನಿಮ್ಮ ಮನಸ್ಸನ್ನು ತೋಳಿನ ಮೇಲೆ ಕೇಂದ್ರೀಕರಿಸಿ ಅಲ್ಲೆ ಕೆಲಸಮಯವು ಇರಿಸಿ, ಕೆಲಸಮಯದ ನಂತರ ದಿವ್ಯತೆಯ ಸ್ವರೂಪ ಅಲ್ಲಿ ಉಂಟಾಗುತ್ತದೆ. ಅದ್ದರಿಂದ ಕೆಲ ವ್ಯಕ್ತಿಗಳು ಇದನ್ನು ನೋಡಿದಾಗ, ದಿವ್ಯಕ್ಷೇತ್ರವು ಎಲ್ಲೆಲ್ಲೂ ಇದೆಯೆಂದು ಅವರು ಹೇಳುತ್ತಾರೆ. ಅದು ಇನ್ನೂ ತಮಾಷೆಯಾಗಿರುತ್ತದೆ. ಎಲ್ಲೆಲ್ಲಿ ದಿವ್ಯತೆಯು ಸ್ವರೂಪಗೊಳ್ಳುತ್ತದೆಯೋ, ಅದೇ ದಿವ್ಯ ಕ್ಷೇತ್ರವೆಂದು ಅವರು ನಂಬುತ್ತಾರೆ. ಸತ್ಯವೇನೆಂದರೆ ಅದು ದಿವ್ಯ ಆದರೆ ಕ್ಷೇತ್ರವಲ್ಲ. ದಿವ್ಯತೆ ಎಲ್ಲೆಲ್ಲೂ ಇದೆಯೆಂದು ನೀವು ಹೇಳಬಹುದು. ಅಥವಾ ಪ್ರಭುತ್ವ ದಿವ್ಯಕ್ಷೇತ್ರ, ಮಧ್ಯಮ ದಿವ್ಯಕ್ಷೇತ್ರ ಮತ್ತು ಕೆಳ ದಿವ್ಯ ಕ್ಷೇತ್ರಗಳಿದೆಯೆಂದು ನೀವು ಹೇಳಬಹುದು. ಅದು ಸರಿ, ಆದರೆ ಎಣಿಕೆ ಮಾಡಲಾಗದಷ್ಟು ಕಾನೂನಿನ ಉತ್ಪಾದನೆ ಮಾಡುವಂತಹ ಸತ್ಯವಾದ ಒಂದೇ ಒಂದು ಕ್ಷೇತ್ರವಿದೆ. ಮತ್ತು ಇದರ ನೆಲೆಯು ಕೆಳ ಹೊಟ್ಟೆಯ ಪ್ರದೇಶದಲ್ಲಿರುತ್ತದೆ.

ಆದ್ದರಿಂದ ಪ್ರಭುತ್ವ ದಿವ್ಯಕ್ಷೇತ್ರ, ಮಧ್ಯಮ ದಿವ್ಯ ಕ್ಷೇತ್ರ ಮತ್ತು ಕೆಳ ದಿವ್ಯಕ್ಷೇತ್ರಗಳೆಂಬ ಹೇಳಿಕೆಗಳೆಲ್ಲ ತಪ್ಪು ನಿಮ್ಮ ಮನಸ್ಸನ್ನು ನೀವು ಎಲ್ಲಿ ಕೆಲಕಾಲದವರೆಗೂ ಕೇಂದ್ರಿಕರಿಸುವಿರೊ ಅಲ್ಲಿ ದಿವ್ಯತೆಯು ರೂಪಗೊಳ್ಳುತ್ತದೆ.

---

7. **ಹ್ಯೂಯಾನ್** – ಗುದ ದ್ವಾರದ ಬಳಿಯಿರುವ ಆಕ್ಯುಪಂಕ್ಚರ ಬಿಂದು.

ಅಭ್ಯಸಿಸಿದ ಶಿಶುವು ದಿವ್ಯ ಕ್ಷೇತ್ರವಾದ ಕೆಳ ಹೊಟ್ಟೆಯಿಂದ ಜನ್ಮಿಸುತ್ತಾನೆ/ ಜನಿಸುತ್ತಾನೆ. ಮತ್ತು ನಿಧಾನವಾಗಿ ದೊಡ್ಡ ದೊಡ್ಡದಾಗುತ್ತಾ ಹೋಗುತ್ತಾನೆ. ಆತನ ಆಕಾರವು ಒಂದು ಪಿಂಗ್-ಪಾಂಗ್ ಚೆಂಡಿನಷ್ಟಿದ್ದಾಗ ಆತನ ಸಂಪೂರ್ಣ ದೇಹವು ಕಾಣಿಸುತ್ತದೆ. ಮತ್ತು ಕಣ್ಣುಗಳು ಪೂರ್ಣ ವಿಕಸನಗೊಂಡಿರುತ್ತದೆ. ಆತನು ಪಿಂಗ್-ಪಾಂಗ್ ಚೆಂಡಿನಷ್ಟಿದ್ದಾಗ, ಒಂದು ಚಿಕ್ಕ ಗುಂಡಗಿನ ಬುದ್ದುದವು ಆತನ ಪಕ್ಕದಲ್ಲಿ ಬೆಳೆಯುತ್ತದೆ. ಇದರ ಆಕಾರಗೊಂಡ ನಂತರ ಅಭ್ಯಸಿಸಿದ ಶಿಶುವು ಬೆಳೆದಂತೆಲ್ಲ ಬುದ್ದುದವೂ ಬೆಳೆಯುತ್ತಾ ಹೋಗುತ್ತದೆ. ಅಭ್ಯಸಿಸಿದ ಶಿಶುವು ಐದು ಇಂಚುಗಳಷ್ಟು ಎತ್ತರ ಬೆಳೆದಾಗ ಒಂದೇ ಒಂದು ತಾವರೆ ಹೂವಿನ ದಳ ಗೋಚರವಾಗುತ್ತದೆ. ಆತನು ಏಳರಿಂದ ಎಂಟು ಇಂಚುಗಳಷ್ಟು ಎತ್ತರ ಬೆಳೆದಾಗ, ಮೂಲಭೂತ, ತಾವರೆ ದಳಗಳು ರಚನೆಯಾಗಿರುತ್ತದೆ. ಮತ್ತು ಒಂದು ವರಸೆ ತಾವರೆ ದಳಗಳು ಮೂಡುತ್ತವೆ. ಬಂಗಾರದ ಬಣ್ಣದಿಂದ ಹೊಳೆಯುತ್ತಿರುವ ಈ ಅಭ್ಯಸಿಸಿದ ಶಿಶುವುದು ಬಂಗಾರದ ಹರಿವಾಣದ ಮೇಲೆ ಕುಳಿತಿರುತ್ತಾನೆ. ಅದು ಸುಂದರವಾಗಿರುತ್ತದೆ. ಅದು ಅವಿನಾಶಿ ವಜ್ರದಂತಹ ದೇಹವಾಗಿರುತ್ತದೆ. ಬೌದ್ಧರು ಇದನ್ನು ಬುದ್ದ ದೇಹವೆಂದೂ ಮತ್ತು ಡಯಸ್ಟ್ (Daoists) ಅಭ್ಯಸಿಸಿದ ಶಿಶುವೆಂದು (Cultivated Infant) ಕರೆಯುತ್ತಾರೆ.

ನಮ್ಮ ಶಿಸ್ತಿನಲ್ಲಿ ನಾವು ಎರಡು ರೀತಿಯ ದೇಹಗಳನ್ನು ಬೆಳೆಸುತ್ತೇವೆ. ಮತ್ತು ಅವೆರಡರ ಅವಶ್ಯಕತೆಯಿದೆ. ನಿಮ್ಮ ಸ್ವಾಭಾವಿಕ ದೇಹದ ಪರಿವರ್ತನೆಯನ್ನು ಸಹ ಮಾಡಬೇಕು. ಅಥವಾ ನಿಮ್ಮ ಸುಪ್ತ ದೇಹವನ್ನು ಸಹ ಪರಿವರ್ತನೆಗೊಳಿಸಬೇಕು. ನಿಮಗೆ ತಿಳಿದಿದೆಯಲ್ಲವೇ, ಬುದ್ಧನ ದೇಹವನ್ನು ಸಾಮಾನ್ಯ ಜನರ ಸುತ್ತಲೂ ಪ್ರಕಟಣೆಗೊಳಿಸಲಾಗುವುದಿಲ್ಲ. ಹೆಚ್ಚಿನ ಪ್ರಯತ್ನದಿಂದ ಅದರ ಆಕಾರವನ್ನು ತೋರಿಸಬಹುದು. ಮತ್ತು ಸಾಮಾನ್ಯ ಜನರ ಕಣ್ಣುಗಳು ಅದರ ಬೆಳಕನ್ನು ಕಾಣಬಹುದು. ಆದರೆ ಸಾಮಾನ್ಯ ಜನರಿಗೆ, ಈ ದೇಹದ ಪರಿವರ್ತನೆಯಾಧನಂತರವೂ, ಸಾಮಾನ್ಯ ಜನರ ದೇಹದಂತೆಯೇ ಕಾಣುತ್ತದೆ. ಮತ್ತು ಸಾಮಾನ್ಯ ಜನರಿಗೆ ಇದರ ವ್ಯತ್ಯಾಸವನ್ನು ಹೇಳಲಾಗುವುದಿಲ್ಲ. ಆದರೆ ಅದು ಸ್ವಚ್ಛಂದವಾಗಿ ಆ ವಿಸ್ತೀರ್ಣದ ನಡುವೆ ಚಲಿಸುತ್ತಿರುತ್ತದೆ. ಅಭ್ಯಸಿಸಿದ ಮಗುವು ಐದರಿಂದ ಏಳು ಇಂಚುಗಳಷ್ಟು ಎತ್ತರ ಬೆಳೆದಾಗ, ಗಾಳಿಯ ಬುದ್ದದವು ಅದೇ ಎತ್ತರಕ್ಕೆ.

ಇದು ಒಂದು ಬಲೂನಿನ ಸೂಕ್ಷ್ಮ ಪೊರೆಯಹಾಗಿರುತ್ತದೆ. ಮತ್ತು ಇದು ಪಾರದರ್ಶಕವಾಗಿರುತ್ತದೆ. ಅಭ್ಯಸಿಸಿದ ಶಿಶುವು ಕಾಲುಗಳನ್ನು ಮಡಚಿ ಪದ್ಮಾಸನವನ್ನು ಹಾಕಿ ಕದಲದೆ ಕುಳಿತುಕೊಂಡಿರುತ್ತಾನೆ. ಆತನು ಅಷ್ಟು ದೊಡ್ಡವನಾದನಂತರ ಗಾಳಿಯ ಬಲೂನು ಇದು ಸಂಪೂರ್ಣ ಬೆಳೆದು ದಿವ್ಯ ಕ್ಷೇತ್ರದಿಂದ ಹೊರ ಬಂದಿರುತ್ತದೆ. "ಒಂದು ಕಲ್ಲಂಗಡಿಯು ಸಂಪೂರ್ಣ ಪಕ್ವಗೊಂಡನಂತರ ಕೆಳಬೀಳುತ್ತದೆ" ಎಂಬ ಮಾತಿದೆ. ಹಾಗಾಗಿ ಇದು ಮುನ್ನಡೆಯುತ್ತದೆ. ಈ ಮುನ್ನಡೆಯ ಪ್ರಕ್ರಯೆಯು ನಿಧಾನಗತಿಯದ್ದಾಗಿರುತ್ತದೆ. ಆದರೆ ಪ್ರತಿದಿನವೂ ಇದರ ಚಲನೆಯನ್ನು ನೋಡಬಹು ದಾಗಿದೆ. ಇದು ನಿಧಾನವಾಗಿ ಚಲಿಸಿ ಎತ್ತರಕ್ಕೇರುತ್ತದೆ. ಸೂಕ್ಷ್ಮವಾಗಿ ಇದನ್ನು ನಾವು ಅನುಭವಿಸಿ ಗಮನಿಸಿದಾಗ ಇದರ ಅಸ್ಥಿತ್ವವು ನಮ್ಮ ಇಂದ್ರಿಯದ ಅನುಭವಕ್ಕೆ ಬರುತ್ತದೆ.

ಇದು ನಮ್ಮ ಹೃದಯದ ಮಧ್ಯಭಾಗದ **ಟಾಂಜಾಂಗ್** ಆಕ್ಯೂಪಾಯಿಂಟ್ (Tanzhoug acupoint) ತಲುಪಿದಾಗ ಅಲ್ಲಿ ಕೆಲಕಾಲದವರೆಗಿರುತ್ತದೆ. ಅದೇಕೆಂದರೆ, ಮಾನವನ ದೇಹದ ಮೂಲಸ್ವಭಾವ ಮತ್ತು ಇನ್ನೂ ಹಲವು ವಸ್ತುಗಳು (ಹೃದಯವೂ ಸಹ ಇಲ್ಲಿ ಸೇರಿದೆ) ತಮ್ಮದೇ ಆದಂತಹ ಒಂದು ಗುಂಪಾಗಿ ಈ ಗಾಳಿಯ ಬಲೂನಿನಲ್ಲಿರುತ್ತದೆ. ಈ ಗಾಳಿಯ ಬಲೂನಿಗೆ ಮೂಲತತ್ವದ ಸಮೃದ್ಧಿಗೊಳಿಸುವ ಅವಶ್ಯಕತೆಯಿರುತ್ತದೆ. ಕೆಲ ಸಮಯದ ನಂತರ ಇದು ಮತ್ತೆ ಮೇಲೇರುತ್ತದೆ. ಇದು ಕುತ್ತಿಗೆಯ ಮುಖಾಂತರ ಹಾದು ಹೋಗುವಾಗ ನಿಮಗೆ ಉಸಿರುಗಟ್ಟಿದ ಹಾಗಾಗುತ್ತದೆ. ರಕ್ತನಾಳಗಳು, ರಕ್ತ ಸಂಚಲನವನ್ನು ನಿಲ್ಲಿಸಿದ ಹಾಗಾಗುತ್ತದೆ. ಇದು ಊದಿಕೊಂಡಂತಾಗಿ ಬಹಳ ನೋವನ್ನುಂಟು ಮಾಡುವುದಾಗಿರುತ್ತದೆ. ಇದು ಒಂದೆರಡು ದಿನಗಳವರೆಗೂ ನಡೆಯುತ್ತದೆ. ಆನಂತರ ಇದು ಮಸ್ತಕವನ್ನು ತಲುಪುತ್ತದೆ. ಇದನ್ನು ನಾವು 'ನಿರ್ವಾಣಕ್ಕೇರುವುದು' ಎನ್ನುತ್ತೇವೆ. ಇದು ನಿರ್ವಾಣದ ಬಳಿ ತಲುಪುತ್ತದೆಂದರೂ. ಇದು

---

೮. **ಟಾಂಜಾಂಗ್** – ಎದೆಯ ಮಧ್ಯಭಾಗದಲ್ಲಿನ ಆಕ್ಯುಪಾಯಂಟ್.

ನಿಜವಾಗಿಯೂ ನಿಮ್ಮ ಸಂಪೂರ್ಣ ಮೆದುಳಿನಷ್ಟು ದೊಡ್ಡದಾಗಿರುತ್ತದೆ. ನಿಮ್ಮ ತಲೆಯು ಊದಿಕೊಂಡಂತೆ ನಿಮಗೆ ಅನುಭವವಾಗುತ್ತದೆ. ನಿರ್ಮಾಣವು ನಮ್ಮ ದೇಹದಲ್ಲಿನ ಅತಿ ಮುಖ್ಯ ಭಾಗವಾದುದರಿಂದ ಇವರ ಮೂಲತತ್ವವು ಸಹ ಈ ಬಲೂನಿನಲ್ಲಿ ರೂಪಗೊಳ್ಳಬೇಕಾಗಿರುತ್ತದೆ. ಇದಾದನಂತರ, ಮೊದಲನೆಯ ಕಣ್ಣಿನ ಮುಖಾಂತರ ಈ ಬಲೂನು ಮಣ್ಣು ಬರುತ್ತದೆ. ಇದರ ಅನುಭವವು ಬಹಳ ನೋವುಂಟುಮಾಡುವುದಾಗಿರುತ್ತದೆ. ಮೂರನೆಯ ಕಣ್ಣು ಊದಿಕೊಂಡು ನೋವುಂಟುಮಾಡುತ್ತದೆ. ಹಣೆಯು ಊದಿಕೊಂಡ ಅನುಭವವಾಗುತ್ತದೆ. ಮತ್ತು ಕಣ್ಣುಗಳು ಕಳೆಗುಂದಿರುತ್ತದೆ. ಹಣೆಯ ಮುಂಭಾಗದಲ್ಲಿ ತಗಲಿಕೊಳ್ಳುತ್ತದೆ. ಇದನ್ನೇ ನಾವು ನಿಶ್ಚಿತ ಸ್ಥಳದ ರಹಸ್ಯ ಮಾರ್ಗವೆಂದು ಕರೆಯುತ್ತೇವೆ. ಇದು ಅಲ್ಲಿ ಅನಿಶ್ಚಿತ ಸ್ಥಿತಿಯಲ್ಲಿ ರುತ್ತದೆ.

ಆ ಕ್ಷಣದಲ್ಲಿ ಯಾವ ವ್ಯಕ್ತಿಗೆ ಮೂರನೆಯ ಕಣ್ಣು ತೆರದಿರುತ್ತದೆಯೋ ಅವರಿಗೆ ನೋಡಲಾಗುವುದಿಲ್ಲ. ಅದು ಏಕೆಂದರೆ ಬೌದ್ಧ ಮತ್ತು ಡಯಸ್ಟ್ (Daoist) ಅಭ್ಯಾಸಗಳಲ್ಲಿನ ಬಾಗಿಲುಗಳನ್ನು ಮುಚ್ಚಿರುತ್ತದೆ. ಏಕೆಂದರೆ ರಹಸ್ಯಮಾರ್ಗದಲ್ಲಿನ ಕಲಿಕೆಯು ಶೀಘ್ರವಾಗಿರುತ್ತದೆ. ಹೆಚ್ಚಿನ ಬಾಗಿಲುಗಳ ಗುಂಪು ಮುಂದೆಯೂ ಮತ್ತು ಒಂದು ಗುಂಪು ಹೊಂದಿನ ಬಗಿಲುಗಳೂ ಇರುತ್ತವೆ. ಮತ್ತು ಈ ಬಾಗಿಲುಗಳೆಲ್ಲ ಮುಚ್ಚಿರುತ್ತವೆ/ ಅತ್ತ ಇತ್ತ ಒಂದು ಗುಂಪು ಬಾಗಿಲುಗಳ ಮಧ್ಯೆ ಬೀಜಿಂಗ್‌ನಲ್ಲಿರುವ **ತೈಯನನ್‌ಮ್ಯೂ** (Tiananmeu) ಸುರಂಗಮರ್ಗದಲ್ಲಿನ ಗೇಟಿನ ಹಾಗೆ ಈ ಬಾಗಿಲುಗಳು ಮುಚ್ಚಿರುತ್ತವೆ. ಈ ವಿಸ್ಮಯಾತ್ಮಕ ಮಾರ್ಗವನ್ನು ತ್ವರಿತಗೊಳಿಸಲು ಮತ್ತು ಸಮೃದ್ಧಿಗೊಳಿಸಲು ಈ ಬಾಗಿಲುಗಳನ್ನು ವಿಶಿಷ್ಠ ಸಂದರ್ಭಗಳಲ್ಲಿ ಮಾತ್ರ ತೆರೆಯಲಾಗುವುದು. ಯಾರು ಮೂರನೆಯ ಕಣ್ಣಿನಿಂದ ನೋಡಬಲ್ಲರೋ ಅವರು ಈ ಹಂತದಲ್ಲಿ ನೋಡಲಾಗುವುದಿಲ್ಲ. ಅವುಗಳೊಂದಿಗೆ ನೋಡಲು ಅವಕಾಶವಿರುವುದಿಲ್ಲ. ಅಲ್ಲಿ ಅನಿಶ್ಚಿತ ಸ್ಥಿತಿಯಲ್ಲಿರುವ ಅವಶ್ಯಕತೆಯೇನು? ನಮ್ಮ ದೇಹದಲ್ಲಿರುವ ನೂರಾರು ಶಕ್ತಿಯ ಮಾರ್ಗಗಳು ಈ ವಿಸ್ಮಯಾತ್ಮಕ ಮಾರ್ಗವನ್ನು ಸುತ್ತಿಕೊಂಡು ಹೊರಬರಬೇಕು. ಮತ್ತು ಇವೆಲ್ಲವು ವಿಸ್ಮಯಾತ್ಮಕ ಮಾರ್ಗದ ಮೂಲಕ ಹಾದು ಹೋಗಬೇಕು. ಇನ್ನೂ ಹೆಚ್ಚಿನ ಕೆಲವು ಅಡಿಪಾಯಗಳನ್ನು ಹಾಕಲೂ ಮತ್ತು ರಹಸ್ಯ ಮಾರ್ಗದಲ್ಲಿನ ಒಂದು ಗುಂಪಾಗಲು ಇದನ್ನು ಮಾಡಲಾಗುತ್ತದೆ. ಮಾನವ ದೇಹವೇ ಒಂದು ಸಣ್ಣ ಪ್ರಪಂಚ. ಇದು ತನ್ನದೇ ಆದ ಸನ್ನ ಪ್ರಪಂಚವನ್ನು ರೂಪಿಸುತ್ತದೆ. ಮತ್ತು ಎಲ್ಲಾ ಮಾನವ ದೇಹದಲ್ಲಿನ ಮೂಲ ತತ್ವವು ಇದರೊಳಗೆ ರೂಪುಗೊಳ್ಳುತ್ತದೆ. ಇದೊಂದು ಅನುಕೂಲಗಳ ಗುಂಪಾಗಿರುತ್ತದೆ. ಇದು ಇನ್ನೂ ಕಾರ್ಯಕ್ರಿಯೆ ಮಾಡಲು ತಯಾರಾಗಿರುವುದಿಲ್ಲ.

ಚೀಮೆನ್ (Qimen) ಅಭ್ಯಾಸದಲ್ಲಿ ಈ ವಿಸ್ಮಯಾತ್ಮಕ ಮಾರ್ಗವನ್ನು ಮುಕ್ತ ವಾಗಿಡಲಾಗಿರುತ್ತದೆ. ಈ ವಿಸ್ಮಯಾತ್ಮಕ ಮಾರ್ಗವು ಹೊರಹೊಮ್ಮಿದಾಗ ಇದು ಒಂದು ನಳಿಕೆಯ ರೂಪದಲ್ಲಿರುತ್ತದೆ. ಮತ್ತು ನಿಧಾನವಾಗಿ ಇದು ವರ್ತುಲಾಕಾರವಾಗುತ್ತದೆ. ಆದ್ದರಿಂದ ಇದರ ಅಕ್ಕಪಕ್ಕದಲ್ಲಿರುವ ಬಾಗಿಲುಗಳು ತೆರೆದುಕೊಂಡಿರುತ್ತದೆ. ಕೀಮೆನ್ ಅಭ್ಯಾಸಗಳು ಬೌದ್ಧ ಅಥವಾ ಡಯಾಸ್ (Daos) ಅಭ್ಯಾಸಗಳನ್ನು ಮಾಡುವುದಿಲ್ಲ. ಆದ್ದರಿಂದ ಅವರು ತಮ್ಮನ್ನ ತಾವೇ ಕಾಪಾಡಿಕೊಳ್ಳ ಬೇಕಾಗುತ್ತದೆ/ರಕ್ಷಿಸಿಕೊಳ್ಳಬೇಕಾಗುತ್ತದೆ. ಹೆಚ್ಚಿನ ಬೌದ್ಧ ಮತ್ತು ಡಯಸ್ಟ್ ಮಾಸ್ತರರಿದ್ದಾರೆ. ಮತ್ತು ಅವರೆಲ್ಲರೂ ನಿಮ್ಮನ್ನು ಕಾಪಾಡ ಬಲ್ಲರು. ಆದ್ದರಿಂದ ನೀವು ಚೀಮೆನ್ ನ ಯಾವುದೇ ಕೆಲಸಕ್ಕೆ ಬರುವುದಿಲ್ಲ. ಅವರು ತಮ್ಮನ್ನು ತಾವೇ ರಕ್ಷಿಸಿಕೊಳ್ಳಬೇಕು. ಆದ್ದರಿಂದ ಅವರು ನೋಡಬಲ್ಲವರಾಗುತ್ತಾರೆ.

ಆದರೆ ಅವರು ಮೂರನೆಯ ಕಣ್ಣಿಂದ ನೋಡಿದರೆ ಆಗ ಇದು ಒಂದು ಟೆಲಿಸ್ಕೋಪಿನ ನಳಿಕೆಯ ಮುಖಾಂತರ ನೋಡಿದಂತೆ ಈ ಗುಂಪಿನ ವಿಷಯಗಳು ರೂಪುಗೊಂಡನಂತರ ಒಂದು ತಿಂಗಳಿನ ಅವಧಿಯಲ್ಲಿ ಇದು ಹಿಂದಿರುಗಲಾರಂಭಿಸುತ್ತದೆ. ಇದು ಮುಸ್ತಕದೊಳಗೆ ಹಿಂದುರುಗಲಾರಂಭಿಸಿದ ನಂತರ ಇದನ್ನು " ವಿಸ್ಮಯಾತ್ಮಕ ಮಾರ್ಗದ ಬದಲಾಗುವ ಪ್ರವೃತ್ತಿ".

ಅದು ಮತ್ತೆ ಹಿಂದೆ ಹೋಗುವಾಗ ನಿಮ್ಮ ತಲೆಯು ಮತ್ತೆ ಊದಿಕೊಂಡ ಅನುಭವವಾಗುತ್ತದೆ. ಅದು ನೋವಿನಿಂದ ಕೂಡಿರುತ್ತದೆ. ಇದು **ಯೂಶೆನ್** ಅಕ್ಯುಪಾಯಿಂಟ್ (Yuzhen acupoint) ನಿಂದ ಹಿಂಡಿದಂತಾಗಿ ಕುತ್ತಿಗೆಯ ಹಿಂಭಾಗದ ಮುಖಾಂತರ ಹೊರಬರುತ್ತದೆ. ಇದು ಹಿಂಡಿದಂತಾದ ಅನುಭವ ಮತ್ತೊಮ್ಮೆ ತೀವ್ರವಾಗಿರುತ್ತದೆ. ಇದು ನಿಮ್ಮ ತಲೆಯನ್ನು ಬಡಿದು ಹೋಳಾಗಿಸಿದ ಅನುಭವವಾಗುತ್ತದೆ. ಇದು ಸಂಪೂರ್ಣವಾಗಿ ಒಮ್ಮೇಲೆ ಹೊರಬರುತ್ತದೆ. ನಂತರ ನಿಮಗೆ ತತ್‌ಕ್ಷಣವೇ ನೋವಿನ ಉಪಶಮನವಾಗುತ್ತದೆ. ಇದು ಹೊರಬಂದ ನಂತರ ಆಳವಾದ ವಿಸ್ತೀರ್ಣದಲ್ಲಿ ಅನಿಶ್ಚಿತಸ್ಥಿತಿಯಲ್ಲಿರುತ್ತದೆ. ಈ ಆಳವಾದ ಆಯಾಮದಲ್ಲಿ ಇದರ ಅಸ್ತಿತ್ವವು ದೇಹರೂಪದ್ದಾಗಿರುತ್ತದೆ. ಆದ್ದರಿಂದ ನೀವು ನಿದ್ರೆ ಮಾಡುವಾಗ ಅದರ ಮೇಲೆ ವಿರುದ್ಧವಾಗಿ ಒತ್ತಡವನ್ನು ಹೇರುವುದಿಲ್ಲ. ಆದರೆ ಇಲ್ಲೊಂದು ವಿಷಯವುಂಟು. ಮೊದಲನೆಯ ಬಾರಿಗೆ ಈ ರಹಸ್ಯಮಾರ್ಗವನ್ನು ಕಂಡುಹಿಡಿದಾಗ ನಿಮ್ಮ ಕಣ್ಣು ಮುಂದೆ ಏನೋ ಇರುವ ಅನುಭವವಾಗುತ್ತದೆ. ಇದು ಇನ್ನೊಂದು ಆಯಾಮದಲ್ಲಿದ್ದರೂ ನಿಮ್ಮ ಕಣ್ಣು ಮಂಜಾದಂತಹ ಅನುಭವ ಯವಾಗಲೂ ಆಗುತ್ತಿರುತ್ತದೆ. ನಿಮ್ಮ ದೃಷ್ಟಿಗೆ ಏನೋ ಅಡ್ಡಬಂದಂತಾಗುತ್ತದೆ. ಮತ್ತು ಇದು ಆಹ್ಲಾದಕರವಾಗಿರುವುದಿಲ್ಲ. ಯುಜೆನ್ ಆಕ್ಯುಪಾಯಿಂಟ್ (Yuzhen acupoint) ಮಹಾದ್ವಾರವಾದುದರಿಂದ ನಿಮ್ಮ ಶಿರದ ಹಿಂಭಾಗದಲ್ಲಿ ವಿಷಯಗಳು ಗುಂಪು ರೂಪುಗೊಳ್ಳುವುದರ ಅವಶ್ಯಕತೆಯಿದೆ. ನಂತರ ಇದು ಹಿಮ್ಮೆಟ್ಟಲಾರಂಭಿಸುತ್ತದೆ. "ರಹಸ್ಯ ಮಾರ್ಗದ ಒಂದು ರಂಧ್ರ" ಸಾಮಾನ್ಯವಾಗಿ ಇದು ಒಂದೇ ರಂಧ್ರದಲ್ಲಿ ಇದನ್ನು ಅನೇಕ ಬಾರಿ ಕಂಡುಹಿಡಿಯಬೇಕಾಗುತ್ತದೆ. ಇದು ನಿರ್ವಾಣಕ್ಕೆ ಹಿಂದಿರುಗಿದ ನಂತರ ಕೆಳಕ್ಕೆ ಬರಲಾರಂಭಿಸುತ್ತದೆ. ಇದು ಕಿಡ್ನಿಗಳು ಮಧ್ಯೆ ಇರುವ ಸ್ಥಳದಲ್ಲಿರುವ **ಮಿಂಗ್‌ಮೆನ್** ಆಕ್ಯುಪಾಯಿಂಟ್ (Mingmen acupoint) ವರೆಗೂ ದೇಹದ ಮುಖಾಂತರ ಕೆಳಗಿಳಿಯುತ್ತದೆ. ಮಿಂಗ್‌ಮೆನ್ ಅಕ್ಯುಪಾಯಿಂಟ್ ಬಳಿ ಮತ್ತೊಮ್ಮೆ ಹೊರದಬ್ಬುತ್ತದೆ.

ನಿಮ್ಮ ಮಿಂಗ್‌ಮೆನ್ ಆಕ್ಯುಪಾಯಿಂಟ್ ಅಂತಿಮವಾದ ಪ್ರಧಾನ ರಂಧ್ರ ಡಯಸ್ಟ್ (Daoists) ಅದನ್ನು ರಂದ್ರವೆಂದು ಕರೆಯುತ್ತಾರೆ. ಮತ್ತು ನಾವು ಅದನ್ನು ಮಾರ್ಗವೆಂದು ಕರೆಯುತ್ತೇವೆ. ಇದು ಒಂದು ಮುಖ್ಯವಾದ ಪ್ರಧಾನವಾದ ಮಾರ್ಗ ಮತ್ತು ಇದು ನಿಜವಾಗಿಯೂ ಒಂದು ಸ್ಟೀಲ್ ಗೇಟ್ ಇದ್ದಂತೆ ಎಣಿಸಲಸಾಧ್ಯವಾದ ಸ್ಟೀಲ್ ಗೇಟ್‌ಗಳ ಪದರಗಳಿದ್ದಂತೆ.

ನಿಮಗೆ ತಿಳಿದಿದೆಯೇ ನಮ್ಮ ದೇಹದಲ್ಲಿ ಪದರುಗಳ ಮೇಲೆ ಪದರುಗಳಿರುತ್ತವೆ. ನಮ್ಮ ಮಾಂಸದಲ್ಲಿನ ಕೋಶಗಳು ಒಂದು ಪದರವಾಗುತ್ತದೆ. ಮತ್ತು ಅದರೊಳಗಿನ ಅಣುಗಳು ಇನ್ನೊಂದು ಪದರಾಗುತ್ತದೆ. ಆಟಮ್, ಪ್ರೋಟಾನ್, ಎಲೆಕ್ಟ್ರಾನ್, ಅಸಂಖ್ಯಾತ ಚಿಕ್ಕ ಚಿಕ್ಕ ಕಣಗಳು, ಚಿಕ್ಕ ಮತ್ತು ಅತಿ ಚಿಕ್ಕ ಕಣಗಳು, ಸೂಕ್ಷ್ಮದರ್ಶಕದಿಂದ ಕಾಣಬುದಾದಂತಹ ಕಣಗಳವರೆಗೂ ಅಂತಿಮವಾಗಿ ಪ್ರಯಾಣಿಸುತ್ತದೆ. ಪ್ರತಿ ಪದರಕ್ಕೂ ಒಂದು ಗೇಟ್‌ನ ಪದರದ ಜೋಡಣೆಯಿರುತ್ತದೆ. ಆ ಕಾರಣದಿಂದಲೇ ಹೆಚ್ಚು ಹೆಚ್ಚಿನ ಸಾಮಾರ್ಥ್ಯ ಮತ್ತು ತಾಂತ್ರಿಕತೆ ಮೊದಲಾದ ವಸ್ತು/ವಿಷಯಗಳು ಈ ಗೇಟಿನ ಪದರುಗಳಲ್ಲಿನ ಒಳಗೆ ಕೀಲಿ ಹಾಕಿಸಿಕೊಂಡಿರುತ್ತದೆ. ಬೇರೆಯ ಅಭ್ಯಾಸಗಳಲ್ಲಿ ದಿವ್ಯತೆಯನ್ನು ಅಭ್ಯಸಿಸುವ ಕ್ಷೇತ್ರದಲ್ಲಿ ಈ ದಿವ್ಯತೆಯು ಸ್ಫೋಟಗೊಂಡಾಗ, ಮಿಂಗ್‌ಮೆನ್‌ನನ್ನು ಸ್ಫೋಟಗೊಳಿಸಿ ಮೊದಲು ತೆರೆಯಬೇಕು ಇದನ್ನು ಸ್ಫೋಟಗೊಳಿಸಿ ತೆರೆಯದಿದ್ದರೆ ನಿಮ್ಮ ಸಾಮರ್ಥ್ಯಗಳು ಬಿಡುಗಡೆ ಆಗಲಾರವು, ಈ ವಿಸ್ಮಯಾತ್ಮಕ ಮಾರ್ಗವು ರೂಪುಗೊಂಡ ನಂತರ ಮಿಂಗ್‌ಮೆನ್ ಆಕ್ಯುಪಾಯಿಂಟ್ ಬಳಿಯಿರುವ ಸಂಗತಿಗಳು ಮತ್ತೊಮ್ಮೆ ಒಳಹೋಗುತ್ತದೆ. ಒಮ್ಮೆ ಇದು ಒಳಸೇರಿದರೆ, ಕೆಳ ಹೊಟ್ಟೆಯ ಆಯಾಮದೆಡೆಗೆ ಹಿಂದುರಿಸಲಾರಂಭಿಸುತ್ತದೆ. ರಹಸ್ಯ ಮಾರ್ಗವು ತನ್ನ ಸ್ವಸ್ಥಿತಿಗೆ ಹಿಂದಿರುಗುವುದು. ಈ ರಹಸ್ಯಮಾರ್ಗವು ಹಿಂದಿರುಗಿದ ನಂತರ ಇದು ತನ್ನ ಸ್ವಸ್ಥಾನವನ್ನು ಸೇರುವುದಿಲ್ಲ. ಆಗ ಅಭ್ಯಸಿಸಿದ ಮಗುವು ಬಹಳ ದೊಡ್ಡದಾಗಿ ಬೆಳೆದಿರುತ್ತದೆ. ಈ ಗಾಳಿಯ ಸಂಚಾರವು ಆಭ್ಯಸಿಸಿದ ಮಗುವನ್ನಾವರಿಸಿಕೊಂಡಿರುತ್ತದೆ. ಮತ್ತು ಈ ಅಭ್ಯಾಸಿಸಿದ ಮಗುವನ್ನು ತನ್ನ ಹೊದಿಕೆಯಲ್ಲಿ ಸೇರಿಸಿಕೊಳ್ಳುತ್ತದೆ. ಅಭ್ಯಸಿಸಿದ ಮಗುವು ಬೆಳೆದ ಹಾಗೆಲ್ಲ. ಅದೂ ಸಹ ಆತನೊಂದಿಗೆ ಬೆಳೆಯುತ್ತದೆ.

---

**9. ಯೂಶೆನ್** – ಹಿಂದಲೆಯ ಕೆಳಭಾಗದಲ್ಲಿರುವ ಆಕ್ಯುಪಾಯಂಟ್.

**10. ಮಿಂಗ್‌ಮೆನ್** – ಬೆನ್ನು ಮೂಳೆಯ ಕಳಗಿನ ಮಧ್ಯ ಬಿಂದು.

ಈ ಶಿಶುವು ಡಯಸ್ಟ್ ಆಗಿದ್ದರೆ ಸಾಮಾನ್ಯವಾಗಿ ಆತನಿಗೆ ಆರು ಅಥವಾ ಏಳು ವರ್ಷದ ಮಗುವಾಗಿದ್ದಾಗೆ ಆತನು ತನ್ನ ದೇಹವನ್ನು ಬಿಡಲು ಅನುಮತಿಸಲಾಗುತ್ತದೆ. ಮತ್ತು ಅದನ್ನು ಅಭ್ಯಸಿಸಿದ ಮಗುವಿನ ಜನ್ಮವೆಂದು ಹೇಳುತ್ತೇವೆ. ಆತನು ಹೊರಬರಬಹುದು ಮತ್ತು ಪ್ರಧಾನ ಚೈತನ್ಯದಡಿಯಲ್ಲಿ ಸುತ್ತಲೂ ಚಲಿಸಬಹುದು. ಮಾನವ ದೇಹ ಅಲ್ಲೇ ನಿಲ್ಲುತ್ತದೆ, ನೆಲೆಗೊಳ್ಳುತ್ತದೆ ಅದೇ ವೇಳೆಯಲ್ಲಿ 'ಪ್ರಧಾನ ಚೈತನ್ಯವು' ಹೊರಬರುತ್ತದೆ. ಈ ಶಿಶುವು ಬೌದ್ಧನಾಗಿದ್ದರೆ, ಸಾಮಾನ್ಯವಾಗಿ ನಿಮ್ಮ ಆಕಾರಕ್ಕೆ ಸರಿಯಾಗಿ ನಿಮ್ಮ ಅಭ್ಯಾಸವಾದರೆ ಅಲ್ಲಿ ಯಾವುದೇ ಅಪಾಯವಿಲ್ಲ. ಅದೇ ಸಮಯದಲ್ಲಿ, ಈ ಅಭ್ಯಸಿಸಿದ ಶಿಶುವನ್ನು ಸಾಮಾನ್ಯವಾಗಿ ದೇಹವನ್ನು ಬಿಡಲು ಅವಕಾಶ ಮಾಡಿಕೊಡಲಾಗುತ್ತದೆ. ದೇಹದಿಂದ ಅದು ಹೊರಬರಬಹುದು ಆ ಸಮಯದಲ್ಲಿ ಅಭ್ಯಾಸಗೊಂಡ ಶಿಶುವು ನಿಮ್ಮಷ್ಟು ದೊಡ್ಡದಾಗಿ ಬೆಳೆದಿರುತ್ತದೆ ಮತ್ತು ಅದರ ಪದರವೂ ದೊಡ್ಡದಾಗಿರುತ್ತದೆ. ಈ ಹೊದಿಕೆಯು ನಿಮ್ಮ ದೇಹದ ಹೊರಗೂ ಹಿಗ್ಗಿರುತ್ತದೆ, ಮತ್ತು ' ಅದೇ ವಿಸ್ಮಯಾತ್ಮಕ ಮಾರ್ಗ.

ಅಭ್ಯಸಿಸಿದ ಶಿಶುವು ದೊಡ್ಡದಾಗಿ ಬೆಳೆದಿರುವುದರಿಂದ ಸ್ವಾಭಾವಿಕವಾಗಿ ಈ ವಿಸ್ಮಯಾತ್ಮಕ ಮಾರ್ಗವು ದೇಹದಿಂದ ಹೊರಕ್ಕೆ ವಿಸ್ತರಿಸಿರುತ್ತದೆ.

ನೀವು ದೇಗುಲಗಳಲ್ಲಿರುವ ಬುದ್ಧನ ವಿಗ್ರಹಗಳನ್ನು ಮತ್ತು ಪೇಂಟಿಂಗ್‌ನ್ನು ನೋಡಿರಬಹುದು. ಬುದ್ಧರು ಒಂದು ವರ್ತುಲದೊಳಗಿರುವುದನ್ನು ಗುರ್ತಿಸಿರಬಹುದು. ಇದು ವಿಶಿಷ್ಟವಾಗಿ ಬುದ್ಧನ ಪೇಂಟಿಂಗ್‌ನಲ್ಲಿರುತ್ತದೆ. ಯಾವಾಗಲೂ ಒಂದು ವರ್ತುಲದೊಳಗೆ ಬುದ್ಧನು ಕುಳಿತಿರುತ್ತಾನೆ. ಎಷ್ಟೋ ಬುದ್ಧನ ಪ್ರತಿಬಿಂಬಗಳು ಹಾಗಿವೆ. ಅವರು ಏತಕ್ಕೆ ಈ ವರ್ತುಲದೊಳಗೆ ಕುಳಿತಿರುತ್ತಾರೆ ? ಯಾರಿಗೂ ತಿಳಿದಿಲ್ಲ. ನಾನು ಹೇಳುತ್ತೇನೆ. ಅದೇ ವಿಸ್ಮಯಾತ್ಮಕ ಮಾರ್ಗ. ಆದರೆ ಅದನ್ನು ವಿಸ್ಮಯಾತ್ಮಕ ಮಾರ್ಗವೆಂದು ಕರೆಯಲಾಗುವುದಿಲ್ಲ. ಇದೇ ಒಂದು ಪ್ರಪಂಚ. ಪ್ರತ್ಯೇಕವಾಗಿ ಈಗಲೂ ಇದೇ ಒಂದು ಪ್ರಪಂಚ. ಪ್ರತ್ಯಕ್ಷವಾಗಿ ಈಗಲೂ ಇದೇ ಒಂದು ಪ್ರಪಂಚವೆಂದು ಪ್ರಮಾಣಿಕವಾಗಿ ಹೇಳಲಾಗುವುದಿಲ್ಲ. ಇದಕ್ಕೆ ತನ್ನದೇ ಆದಂತಹ ಅನುಕೂಲತೆಗಳಿವೆ. ಒಂದು ಕೈಗಾರಿಕೆಯಲ್ಲಿ ತನ್ನದೇ ಆದ ಅನುಕೂಲಗಳಿದ್ದು. ಯಾವ ಉತ್ಪಾದನೆಯನ್ನು ಮಾಡಲಾರದ ಸ್ಥಿತಿಯಲ್ಲಿದ್ದಂತಿರುತ್ತದೆ. ಇದು ಉತ್ಪಾದನೆಯನ್ನು ಆರಂಭಿಸವ ಮುನ್ನ ಶಕ್ತಿ ಮತ್ತು ಖಚ್ಚಾ ವಸ್ತುಗಳು ಅವಶ್ಯಕತೆಯಿರುತ್ತದೆ. ಕೆಲ ವರ್ಷಗಳ ಹಿಂದೆ ಕೆಲವು ಅಭ್ಯಸಿಗರು ಹೇಳಿದ್ದರು. "ನನ್ನ ಕೃಷಿ ಶಕ್ತಿಯು ಬೋಧಿಸತ್ವನಿಗಿಂತ ಹಿರಿದು" ಅಥವಾ " ನನ್ನ ಕೃಷಿ ಶಕ್ತಿಯು ಬುದ್ಧನಿಗಿಂತ ಹಿರಿದು. ಇತರರು ಇದನ್ನು ನಂಬಲರ್ಹ ವಾದುದಲ್ಲವೆಂದು ಕೊಂಡರು ಪ್ರತ್ಯಕ್ಷವಾಗಿ ಅವರು ಹೇಳಿದ್ದೇ ನಂಬಲರ್ಹವಾದುದಲ್ಲ. ನೀವು ಮಾನವ ಪ್ರಪಂಚದಲ್ಲಿರುವಾಗಲೇ ನಿಮ್ಮ ಕೃಷಿಶಕ್ತಿಯನ್ನು ಬಹಳ ಉನ್ನತ ಮಟ್ಟಕ್ಕೆ ಹೆಚ್ಚಿಸಬೇಕಾಗಿದೆ.

ಆದರೆ ಇದು ಹೇಗೆ ಬಂದಿತು?-ಆತನು ಬುದ್ದನಿಗಿಂತ ಹೆಚ್ಚಿನ ಅಭ್ಯಾಸ ಮಾಡಿರುತ್ತಾನೆಯೇ? ಈ ವಾದಕ್ಕೆ ಹುರುಳಿಲ್ಲವೆಂದು ನೀವು ತಿಳಿಯಬಾರದು. ಆತನ ಕೃಷಿಶಕ್ತಿಯು ಖಂಡಿತವಾಗಿಯೂ ಉತ್ತಮ ಮಟ್ಟದ್ದಾಗಿರಬೇಕು. ಅದು ಏಕೆಂದರೆ ಆತ ಅತ್ಯತ್ತಮ ಮಟ್ಟದ ಅಭ್ಯಾಸ ಮಾಡಿರಬಹುದು. ಮತ್ತು ಸಂಪೂರ್ಣ ಜ್ಞಾನೋದಯದ ಹಂತಕ್ಕೆ ತಲುಪಿರಬಹುದು. ಅಥವಾ ರಹಸ್ಯ ಬೇದಿಸದಿರಬಹುದು. ಆತನ ಕೃಷಿಶಕ್ತಿಯು ಖಂಡಿತವಾಗಿಯೂ ಬಹಳ ಎತ್ತರದಲ್ಲಿರುತ್ತದೆ. ನಿಮಗೆ ತಿಳಿದಂತೆ, ಒಬ್ಬ ಅಭ್ಯಸಿಗನ ಗಾಂಗ್ ಗಮನಾರ್ಹವಾಗಿ ಆತನ ನಡತೆಯ ಹಂತದ ಜೊತೆಯಲ್ಲಿರುತ್ತದೆ. ಆತನ ಜೀವನಪರ್ಯಂತ ಎಣಿಸಲಾಗದ ಕಷ್ಟಕಾರ್ಪಣ್ಯಗಳನ್ನೆದುರಿಸಿ, ತನ್ನ ಮನಸ್ಸನ್ನು ಹಿಡಿತದಲ್ಲಿಟ್ಟುಕೊಂಡು ಗಂಜಿ ಕುಡಿಯುವ ಸನ್ನಿವೇಶಗಳನ್ನೆದುರಿಸಿ ಪಡೆದುಕೊಂಡ ದ್ದಾಗಿರುತ್ತದೆ. ಆದ್ದರಿಂದ ಇದು ಗಮನಾರ್ಹವಾಗಿ ಅತಿ ಬೆಲೆಯುಳ್ಳದ್ದಾಗಿರುತ್ತದೆ. ಅದರಲ್ಲಿ ಹತ್ತರಲ್ಲಿ ಎಂಟು ಭಾಗವನ್ನು ಆತನ ಪ್ರಪಂಚವನ್ನು ಸಮೃದ್ಧಿಗೊಳಿಸಲು ಉಪಯೋಗಿಸಲಾಗಿದೆ.

ಮತ್ತು ಈ ಕಾರಣದಿಂದ ಆತನು ಅಭ್ಯಾಸದಲ್ಲಿ ತೇರ್ಗಡೆ ಹೊಂದಿದರೆ ನಂತರ ಆತನು ತನ್ನ ಕೈಯನ್ನು ವಿಸ್ತಿರಿಸುವುದರ ಮೂಲಕ ತನಗೇನು ಬೇಕೋ ಪಡೆದುಕೊಳ್ಳಬಹುದಾಗಿದೆ. ಆತನಿಗೇನು ಬೇಕೋ ಪಡೆದುಕೊಳ್ಳುತ್ತಾನೆ. ಆತನು ಏನು ಬೇಕೋ ಮಾಡುವ ಶಕ್ತಿಯುಳ್ಳವನಾಗಿರುತ್ತಾನೆ. ಆತನ

ಪ್ರಪಂಚದಲ್ಲಿ ಅವನು ಬಯಸ್ಸಿದ್ದೆಲ್ಲವೂ ಇರುತ್ತದೆ. ಇದು ಆತನು ಕಷ್ಟಗಳನ್ನು ಸಹಿಸಿಕೊಂಡು ಪಡೆದುಕೊಂಡಂತಹ ದಯಾಗುಣ.

ಈತನಿಗಿರುವ ಈ ಶಕ್ತಿಯನ್ನು ಸುಲಭವಾಗಿ ರೂಪಾಂತರಗೊಳಸಬಹುದು. ಆದ್ದರಿಂದ ಬುದ್ಧನಿಗೆ ಏನು ಬೇಕೋ, ಅಥವಾ ಆತನಿಗೆ ಏನು ತಿನ್ನಬೇಕೆನಿಸುತ್ತದೆಯೋ ಅಥವಾ ಆಡಬೇಕೆನಿಸುತ್ತದೆಯೋ ಅದೆಲ್ಲಾ ಆತನಲ್ಲಿದೆ. ಅದನ್ನು ಆತನು ತನಗಾಗಿ ಅಭ್ಯಾಸ ಮಾಡಿಕೊಂಡಿದ್ದಾನೆ. ಅದೇ ಆತನ ಸ್ಥಾನಮಾನ ಅದಿಲ್ಲದೆ ಆತನು ತನ್ನ ಅಭ್ಯಾಸವನ್ನು ಸಂಪೂರ್ಣಗೊಳಸಲಾಗುವುದಿಲ್ಲ. ಈಗ ಇದನ್ನು ಈತನ ಪ್ರಪಂಚವೆನ್ನ ಬಹುದು. ಈಗ ಡಯೋ ಪಡೆದುಕೊಳ್ಳಲು ಹತ್ತರಲ್ಲಿ ಎರಡು ಭಾಗದ ಕೃಷಿ ಶಕ್ತಿಯನ್ನು ಮಾತ್ರ ಸಮಗ್ರಗೊಳಸಬೇಕಾಗಿರುತ್ತದೆ. ಹತ್ತರಲ್ಲಿ ಎರಡು ಭಾಗ ಮಾತ್ರ ಕೃಷಿಶಕ್ತಿ ಉಳಿದಿದ್ದರೂ ಸಹ ಆತನ ದೇಹವು ಹಿಡಿತದಲ್ಲಿರುವುದಿಲ್ಲ. ಅಥವಾ ಆತನಿಗೆ ದೇಹವೇ ಇರುವುದಿಲ್ಲ. ಆತನೇನು ಮಾಡಿದರೂ ಸಹ ಅದು ಉತ್ತಮ ಶಕ್ತಿಯ ಘಟಕವಾಗಿ ರೂಪಾಂತರಗೊಂಡಿರುತ್ತದೆ. ಆತನ ದೈವಿಕ ಶಕ್ತಿಯು ಸಂಪೂರ್ಣವಾಗಿ ಪ್ರಕಟ ಗೊಂಡಿರುತ್ತದೆ. ಮತ್ತು ಅವು ತಮ್ಮ ಸಾಮಾರ್ಥ್ಯ ಬಲಕ್ಕೆ ಹೊಂದುವುದಿಲ್ಲ. ಆತನು ಸಮಾನ್ಯ ಜನರ ನಡುವೆ ಅಭ್ಯಸಿಸುತ್ತಿರುವಾಗ ಆತನ ದೇಹವು ಸಾಮಾನ್ಯವಾಗಿ ಹಿಡಿತದಲ್ಲಿರುತ್ತದೆ. ಆತನಿಗೆ ಅಂತಹ ಉತ್ತಮ ಕೌಶಲ್ಯಗಳರುವುದಿಲ್ಲ ಮತ್ತು ಆತನು ಗಾಂಗ್ ಎಷ್ಟು ಎತ್ತರದಲ್ಲಿದ್ದರೂ ಸಹ ಆತನು ಅದನ್ನು ನಿಗ್ರಹಿಸುತ್ತಾನೆ. ಆದರೆ ಈಗ ಪ್ರತಿಯೊಂದು ಭಿನ್ನವಾಗಿರುತ್ತದೆ.

# ಉಪನ್ಯಾಸ ಐದು

**ಸಾಧನೆಯ ಸಂಕೇತ**

ನಮ್ಮ ಅಭ್ಯಾಸದ ಹಾದಿಯ ಪ್ರತೀಕವೇ ಸಾಧನೆ. ಯಾವಾಗ ಅಲೌಕಿಕ ಸಾಮಾರ್ಥ್ಯಗಳನ್ನು ಕಾಣಲು ಸಾಧ್ಯವಾಗುತ್ತದೋ ಆಗ ಫಾಲೂನ್ ತಿರುಗುತ್ತಿದೆ. ಅಂತೆಯೇ ಫಾಲೂನ್ (ಸಾಧನೆ) ಗುರುತುಗಳು ಜೊತೆಗೆ ತಿರುಗುತ್ತವೆ ಎಂಬುದು ಸತ್ಯ. ನಮ್ಮ ಸಾಧನೆಯ ಅಭ್ಯಾಸವು ವಿಶ್ವದ ಲಕ್ಷಣಗಳು ಮತ್ತು ಬ್ರಹ್ಮಾಂಡ ತತ್ವದ ವಿಕಾಶ ಜೆನ್-ಶೆನ್-ರೆನ್‌ದಿಂದ ಮಾರ್ಗದರ್ಶನ ಪಡೆಯುತ್ತದೆ. ಆದ್ದರಿಂದ, ನಾವು ಏನನ್ನು ಅಭ್ಯಾಸ ಮಾಡುತ್ತಿದ್ದೇವೋ ಅದು ವಾಸ್ತವವಾಗಿ ಅಗಾಧವಾದುದು. ಒಂದರ್ಥದಲ್ಲಿ, ಈ ಸಾಧನೆಯ ಸಂಕೇತವು ವಿಶ್ವದ ಪ್ರತಿಕೃತಿ ಬುದ್ಧ ತತ್ವದ ಪ್ರಕಾರ ಸೃಷ್ಟಿಯ ಪರಿಕಲ್ಪನೆಯೆಂದರೆ ದಶದಿಕ್ಕುಗಳ ಚತುರ್ಮುಖ ಮತ್ತು ಎಂಟು ಭಾಗ ಪ್ರಾಯಶ: ಕೆಲವರು ಲಂಬಾತ್ಮಕ ಶಕ್ತಿಯ ಸಾಲಿನ ತುದಿ ಮತ್ತು ತಳದಲ್ಲಿ ಫಾಲೂನ್‌ಅನ್ನು ಕಾಣುತ್ತಾರೆ. ಫಾಲೂನ್ ಇದರ ತುದಿ ಮತ್ತು ತಳದ ದಶದಿಕ್ಕುಗಳ ಪ್ರಪಂಚವನ್ನು ಮತ್ತು ಈ ಸೃಷ್ಟಿಯನ್ನು ಕರಾರುವಕ್ಕಾಗಿ ನಿರ್ಮಿಸುತ್ತದೆ. ಇದು ಬೌದ್ಧ ತತ್ವದ ಸೃಷ್ಠಿಯ ಸಾರಾಂಶವನ್ನು ಪ್ರತಿನಿಧಿಸುತ್ತದೆ.

ಹೌದು, ಈ ಸೃಷ್ಠಿ ಅಸಂಖ್ಯಾ ಆಕಾಶಗಂಗೆಗಳನ್ನು, ಮಿಲ್ಕಿ ವೇಗಳಂತವುಗಳನ್ನು ಒಳಗೊಂಡಿದೆ. ಸಮಗ್ರ ಸೃಷ್ಠಿಯೇ ಚಲನಶೀಲವಾಗಿದೆ. ಅಂತೆಯೇ ಎಲ್ಲ ಆಕಾಶಗಂಗೆಗಳೂ ಅದರೊಳಗಿವೆ. ಆದ್ದರಿಂದ ಟೈಜಿ ಸಂಕೇತ ಮತ್ತು ಸಂಕೇತಗಳು ಕೂಡ ಸುತ್ತುತ್ತಿವೆ. ಸಮಗ್ರ ಫಾಲೂನ್ ಸುತ್ತುತ್ತಿದೆ. ಮತ್ತು ವಿಸ್ತಾರವಾದ ಕೇಂದ್ರದಲ್ಲಿರುವ ಚಿಹ್ನೆಗಳು ಸುತ್ತುತ್ತಿವೆ. ಒಂದರ್ಥದಲ್ಲಿ, ಇದು ನಮ್ಮ ಮಿಲ್ಕಿವೇಯನ್ನು ಸಂಕೇತಿಸುತ್ತದೆ. ಏಕೆಂದರೆ, ನಾವು ಬುದ್ಧ ತತ್ವದದವರು ; ಇದರ ಹೊರ ಮೈ ಹೇಗೆ ಕಾಣುತ್ತದೊ ಹಾಗೆ. ಎಲ್ಲ ಭಿನ್ನ ವಸ್ತುಗಳೂ ತಮ್ಮದೇ ರೂಪದಲ್ಲಿ ಅಸ್ಥಿತ್ವ ಹೊಂದಿವೆ. ಈ ಅಸ್ಥಿತ್ವದ ರೂಪದ ಇನ್ನಿತರ ಆಯಾಮಗಳಲ್ಲಿ ಅವುಗಳು ಬೃಹತ್ ಪ್ರಮಾಣದ ಹಾಗೂ ಸಂಕೀರ್ಣ ಪ್ರಕ್ರಿಯೆಯ ಹಂತಗಳಿಂದ ವಿಕಾಸ ಹೊಂದಿವೆ. ಈ ಸಾಧನೆಯ ಸಂಕೇತವು ಸೃಷ್ಠಿಯ ಪ್ರತಿಸೃಷ್ಠಿ, ಜೊತೆಗೆ ಇದು ತನ್ನದೇ ಅಸ್ಥಿತ್ವ ಹೊಂದಿದೆ. ಮತ್ತು ಇದು ಎಲ್ಲ ಆಯಾಮಗಳಲ್ಲಿ ವಿಕಾಶದ ಸ್ಥಿತಿ, ನಾನು ಇದನ್ನು ಪ್ರಪಂಚ ಎನ್ನುತ್ತೇನೆ. ಯವಾಗ ಫಾಲೂನ್ ಗಡಿಯಾರದ ಗತಿಯಲ್ಲಿ ಸುತ್ತುತ್ತದೆಯೊ, ಆಗ ಅದು ತಂತಾನೆ ಶಕ್ತಿಯನ್ನು ಸೃಷ್ಠಿಯಿಂದ ಗ್ರಹಿಸುತ್ತದೆ. ಪ್ರತಿ ಸುತ್ತುವಿಕೆ ಗಡಿಯಾರದ ಗತಿ, ಇದು ಶಕ್ತಿಯನ್ನು ಹೊರಸೂಸುತ್ತದೆ. ಅಂತಹರ್ಮುಖ (ಗಡಿಯಾರ ಗತಿ) ಸುತ್ತುವಿಕೆಯ ವೇಳೆಯಲ್ಲಿ ಇತರರ ಬಿಡುಗಡೆಗೆ ಕೊಡುಗೆ ನೀಡುತ್ತದೆ. ಇದು ನಮ್ಮ ಸಾಧನೆಯ ಲಕ್ಷಣವಾಗಿದೆ. ಕೆಲವರು ಪ್ರಶ್ನೆ ಕೇಳಿದರು. "ನಾವು ಬೌದ್ಧ ತತ್ವದವರು ಇಲ್ಲಿಯೂ ಯಾಕೆ ಟೈಜಿ? ಟೈಜಿ ತಾವೋ ತತ್ವಕ್ಕೆ ಸೇರುವುದಿಲ್ಲವೇ"? ಇದು, ಏಕೆಂದರೆ ನಾವು ಯಾವುದನ್ನು ಅಭ್ಯಾಸ ಮಡುತ್ತಿದ್ದೇವೆಯೋ ಅದು ಮಹತ್ತರವಾದುದು. ಇಡೀ ಸೃಷ್ಟಿಯು ಯಾವುದನ್ನು ಅಭ್ಯಾಸ ಮಾಡುತ್ತಿದೆಯೋ ಅದು ಈಗ ಪ್ರತಿಯೊಬ್ಬರೂ ಅದರ ಬಗ್ಗೆ ಯೋಚಿಸಿ, ಈ ಸೃಷ್ಠಿ ಮುಖ್ಯವಾಗಿ ಎರಡು ತತ್ವಗಳನ್ನೊಳಗೊಂಡಿದೆ. ಬೌದ್ಧ ತತ್ವ ಮತ್ತು ತಾವೋ ತತ್ವ ಇವೆರಡರಲ್ಲಿ ಒಂದು ಹೊರಹಾಕಲ್ಪಡುತ್ತದೆ. ಇದು ಸಮಗ್ರ ಸೃಷ್ಠಿಯನ್ನು ರಚಿಸುವುದಿಲ್ಲ. ಎರಡರಲ್ಲಿ ಯಾವ್ರೊಂದು ಅಲ್ಲದುದನ್ನು ಸಮಗ್ರ ಸೃಷ್ಠಿಯೆಂದು ಕರೆಯುವುದು. ಆದುದರಿಂದ ನಾವು ತಾವೋ ತತ್ವದ ಅಂಶಗಳನ್ನು ಒಳಗೊಳ್ಳುತ್ತೇವೆ. ಜೊತೆಗೆ ಕೆಲವರು ತಾವೋ ತತ್ವಗಳ ಜೊತೆಗೆ ಕ್ರಿಶ್ಚಿಯನ್, ಕನ್‌ಫ್ಯೂಶಿಯಸ್, ಇತರ ಧರ್ಮಗಳು ಇತ್ಯಾದಿ ಸೇರಿವೆಯೆಂದು ಹೇಳಿದರು. ಈ ಅಭ್ಯಾಸದ ನಂತರ ತಲುಪುವ ಉನ್ನತ ಹಂತದ ಬಗ್ಗೆ ಹೇಳಲು ನನಗೆ ಅವಕಾಶ ಕೊಡಿ, ಕನ್‌ಫ್ಯೂಶಿಯಸ್ ತತ್ವವು ತಾವೋ ತತ್ವಕ್ಕೆ ಸಂಬಧಿಸಿದೆ : ಬೌದ್ಧ ತತ್ವದಂತೆ, ಯಾವಾಗ ಕೆಲವು ಪಾಶ್ಚಿಮಾತ್ಯ ಧಾರ್ಮಿಕ ಕೃಷಿಯ ಅಭ್ಯಾಸಗಳು ಉನ್ನತ ಹಂತ ತಲುಪುತ್ತವೆಯೋ, ಅವುಗಳನ್ನು ನಮ್ಮ ಪದ್ಧತಿಯಡಿಯೇ ವರ್ಗಿಕರಿಸಲಾಗುತ್ತದೆ. ಮುಖ್ಯವಾಗಿ ಅಲ್ಲಿರುವುದು ಎರಡು ಪ್ರಸ್ಥಾನಗಳು.

ಹಾಗಾದರೆ, ಟೈಜಿ ಮಾದರಿಗಳಲ್ಲಿ ಎರಡನ್ನು ಮಾಡುವುದೇಕೆ? ಕೆಂಪನ್ನು ಮೇಲೆ ಮತ್ತು ನೀಲಿಯನ್ನು ಕೆಳಗೆ, ಹಾಗೂ ಇತರೆ ಎರಡು ಟೈಜಿ ಮಾದರಿಗಳು ಕೆಂಪನ್ನು ಮೇಲೆ ಮತ್ತು

ನೀಲಿಯನ್ನು ಕೆಳ ಸ್ಥಾನದಲ್ಲಿಟ್ಟಿರುವುದೇಕೆ? ನಾವು ಯಾವುದನ್ನು ಸಾಮಾನ್ಯವಾಗಿ ಅರ್ಥೈಸಿಕೊಳ್ಳುತ್ತೇವೆಯೋ ಕಪ್ಪು ಮತ್ತು ಬಿಳುಪಿನ ಎರಡು ಮಹತ್ವದ ಅಂಶಗಳಿಂದ ಟೈಜಿ ಹಾಗೂ ಯಿನ್ ಮತ್ತು ಯಾನ್ (ಪ್ರಕೃತಿ ಮತ್ತು ಪುರುಷ) ವೈರುಧ್ಯಗಳಿಂದ ಚೀ (ಚೈತನ್ಯ) ಮಾಡಲ್ಪಟ್ಟಿದೆ. ಆ ಕಲ್ಪನೆಯು ತೀರಾ ಕೆಳಹಂತದಿಂದ ಬರುತ್ತದೆ. ಟೈಜಿ ಭಿನ್ನ ಪ್ರಕಾರಗಳನ್ನು ಭಿನ್ನ ಆಯಾಮಗಳಿಂದ ಹೊಂದಿದೆ. ಉನ್ನತ ಹಂತದಲ್ಲಿ ನೀಲಿ ಮತ್ತು ಕೆಂಪು ಬಣ್ಣಗಳ ಭಿನ್ನ ಹಂತದಲ್ಲಿರುವುದೂ ಕೂಡ ಒಂದು ಪ್ರಕಾರವಾಗಿದೆ. ತಾವೋದಲ್ಲಿ ನಾವು ಸಾಮಾನ್ಯವಾಗಿ ಕೆಂಪನ್ನು ಮೇಲೆ ಮತ್ತು ಕಪ್ಪನ್ನು ಕೆಳಗೆಂದು ಅರ್ಥೈಸಿಕೊಳ್ಳುತ್ತೇವೆ. ನಿದರ್ಶನಕ್ಕೆ, ನಮ್ಮ ಕೆಲವು ಅಭ್ಯಾಸಿಗರ ದಿವ್ಯಚಕ್ಷುಗಳ ತೆರೆದಿವೆ. ಮತ್ತು ಅವರು ಕಂಡುಕೊಂಡಿರುವುದೇನೆಂದರೆ, ಕೆಂಪನ್ನು ಅವರು ಕಾಣುತ್ತಾರೆ. ಪಾಶ್ವದ ಆಯಾಮದಿಂದ ಅವರ ಬರಿಯ ಕಣ್ಣುಗಳು ಹಸಿರಾಗಿರುತ್ತವೆ. ಇನ್ನೊಂದು ಆಯಾಮದಲ್ಲಿ ಬಂಗಾರದ ಬಣ್ಣವು ನೇರಳೆಯಾಗಿ ಕಾಣುತ್ತದೆ. ಅಂತೆಯೆ ಅದು ತಲೆಕೆಳಗಾಗಿರುತ್ತದೆ. ಮತ್ತೊಂದು ರೀತಿಯಲ್ಲಿ, ಭಿನ್ನ ಆಯಾಮಗಳಲ್ಲಿ ಬಣ್ಣಗಳು ಬದಲಾಗುತ್ತವೆ. ಮೂಲ ತಾವೋ ತತ್ವದಡಿಯಲ್ಲಿ ಟೈಜಿಯ ಜೊತೆ ಕೆಂಪು ಮೇಲ್ಭಾಗದಲ್ಲಿ ಮತ್ತು ನೀಲಿ ಕೆಳಗೆ ಬರುತ್ತದೆ. ಇದು ಚೀಮನ್ ತತ್ವದ (ಅಸಾಂಪ್ರದಾಯಿಕ ತತ್ವ ಅಥವಾ ಶಾಲೆ) ಅಭ್ಯಾಸಗಳನ್ನು ಒಳಗೊಳ್ಳುತ್ತದೆ. ನಾಲ್ಕು ಚಿಕ್ಕದಾದ ಚಿಹ್ನೆಗಳು ಬೌದ್ಧ ತತ್ವದವು. ಅವು ಕೇಂದ್ರದಲ್ಲಿ ಇರುವವುಗಳಂತೆಯೇ, ಬೌದ್ಧ ತತ್ವದಲ್ಲಿರುವಂತೆಯೆ ಇವೆ. ಫಾಲೂನ್‌ನಲ್ಲಿರುವ (ಸಾಧನೆಯ ಹಾದಿಯಲ್ಲಿರುವ) ಈ ಬಣ್ಣಗಳು ಸಾಪೇಕ್ಷವಾಗಿ ಉಜ್ವಲವಾಗಿವೆ. ಅದನ್ನು ನಾವು ಅದನ್ನು ಫಾಲೂನ್ ದಫಾ (ಸಾಧನೆಯ ಮಹಾ ಮಾರ್ಗ) ದ ಸಂಕೇತವಾಗಿ ಬಳಸುತ್ತೇವೆ.

ದಿವ್ಯಚಕ್ಷುವಿನಿಂದ ಫಾಲೂನನ್ನು ನಾವು ಈ ಬಣ್ಣಗಳಿಂದ ನೋಡಬೇಕಾಗಿಲ್ಲ. ಏಕೆಂದರೆ ಇದರ ಹಿನ್ನಲೆಯ ವರ್ಣ ಬದಲಾಗಬಹುದು. ಆದಾಗ್ಯೂ ಇದರ ಮಾದರಿ ಬದಲಾಗುವುದಿಲ್ಲ. ನಾನು ಯಾವಾಗ ನಿಮ್ಮೊಳಗೆ ಫಾಲೂನನನ್ನು ಸ್ಥಾಪಿಸುತ್ತೇನೆಯೋ ಆಗ ನಿಮ್ಮ ಹೊಟ್ಟೆಯ ಕೆಳಭಾಗ ತಿರುಗಲು ತೊಡಗುತ್ತದೆ. ನಿಮ್ಮ ದಿವ್ಯಚಕ್ಷು ಇದನ್ನು ಕೆಂಪಾಗಿ, ನೇರಳೆ, ಹಸಿರು ಅಥವಾ ಒಂದು ವೇಳೆ ವರ್ಣರಹಿತವಾಗಿ ಕಾಣಬಹುದು. ಇದರ ಹಿನ್ನಲೆಯ ವರ್ಣಗಳು ಕೆಂಪು, ಕಿತ್ತಳೆ, ಹಳದಿ, ಹಸಿರು, ಆಕಾಶನೀಲಿ, ನೀಲಿ ಮತ್ತು ನೇರಳೆಯ ಕ್ರಮದಲ್ಲಿ ಬದಲಾಗಿತ್ತಿರುತ್ತವೆ. ಫಲಿತಾಂಶವೆಂದರೆ, ನೀವು ಭಿನ್ನ ವರ್ಣಗಳನ್ನು ನೋಡಬಹುದು. ಆದರೆ **ಶ್ರೀವತ್ಸ** (ಸಂಸ್ಕೃತದಲ್ಲಿ **'ಬೆಳಕಿನ ಚಕ್ರ'**) ಸಂಕೇತ ಅಥವಾ ಟೈಜಿಯ ಬಣ್ಣಗಳು ಮತ್ತು ಮಾದರಿಗಳಲ್ಲಿ ಅದು ಅದರಂತೆಯೇ ಉಳಿಯುತ್ತದೆ. ನಾವು ಕಂಡುಕೊಂಡಿರುವಂತೆ ಈ ಹಿನ್ನಲೆಯ ವರ್ಣಗಳು ಸಾಪೇಕ್ಷವಾಗಿ ಹಿತವಾಗಿ ಕಾಣುತ್ತದೆ. ಆದ್ದರಿಂದ ನಾವು ಇದನ್ನು ಅಳವಡಿಸಿಕೊಂಡಿದ್ದೇವೆ. ಯಾವ ಅತೀಂದ್ರಿಯ ಸಾಮಾರ್ಥ್ಯಗಳಿಂದ ಅತೀತವಾಗಿರುವ ಬಹಳಷ್ಟು ವಸ್ತುಗಳನ್ನು ಈ ಆಯಾಮಾಗಳಿಂದ ನೀಡಬಹುದು.

ಕೆಲವರು ಹೇಳುತ್ತಾರೆ. "ಈ ಸಂಕೇತವು ಹಿಟ್ಲರ್‌ನ ಹುರುಳಿನಂತೆ ಕಾಣುತ್ತದೆ" ಎಂದು, ಆದರೆ ಈ ಸಂಕೇತವು ತಂತಾನೇ ವರ್ಗ ಪರಿಕಲ್ಪನೆಗಳ ಅರ್ಥವನ್ನು ಹೊಂದಿಲ್ಲ. ಕೆಲವರ ಪ್ರಕಾರ "ಒಂದು ವೇಳೆ ಈ ಸಂಕೇತದ ಕೊನೆಯನ್ನು ಈ ಕಡೆ ಓರೆ ಮಾಡಿದರೆ, ಇದು ಹಿಟ್ಲರ್‌ನ ವಸ್ತುವಾಗುತ್ತದೆ". ಇದು ಹಾಗಲ್ಲ, ಏಕೆಂದರೆ, ಇದು ಎರಡೂ ಕಡೆ ತಿರುಗುತ್ತದೆ. ನಮ್ಮ ಮಾನವ ಸಮಾಜವು ಈ ಸಂಕೇತವನ್ನು ಅರ್ಥಮಾಡಿಕೊಳ್ಳಲು ತೊಡಗಿದ್ದು 2500 ವರ್ಷಗಳ ಹಿಂದೆ, ಶಾಖ್ಯಮುನಿಯ ಕಾಲದಲ್ಲಿ ಹಿಟ್ಲರ್‌ನ ಕಾಲವು ಕೆಲವೇ ದಶಕಗಳ ಹಿಂದಿನ ದ್ವಿತೀಯ ಮಹಾಯುದ್ದ ಕಾಲದ್ದು. ಅವನು ಇದನ್ನು ತನ್ನದಾಗಿ ಬಳಸಿಕೊಂಡಿದ್ದಾನೆ. ಆದರೆ ಅವನು ಬಳಸಿದ್ದು ನಾವು ಬಳಸುತ್ತಿರುವ ಬಣ್ಣಕ್ಕಿಂತ ಭಿನ್ನವಾದುದು. ಅದು ಕಪ್ಪು ಹಾಗೂ ಮೇಲ್ಮುಖವಾಗಿ ಮತ್ತು ನೇರವಾದ ಸ್ಥಿತಿಯಲ್ಲಿ ಬಳಸಿದ್ದಾನೆ. ನಾನು ಹೇಳುತ್ತಿರುವುದು ಫಾಲೂನ್‌ಗೆ ಹೆಚ್ಚು ಸಂಬಂಧಿಸಿದ್ದು, ಆದಾಗ್ಯೂ ನಾನು ಹೇಳಿರುವುದು ಬಾಹ್ಯ ರೂಪವನ್ನು ಮಾತ್ರ.

---

1. **ಶ್ರೀವತ್ಸ**–2500 ವರ್ಷಗಳ ಹಿಂದಿನ ಸಂಕೇತ. ಇದರ ಅರ್ಥ ಧನಾತ್ಮಕ ಸೂರ್ಯನ ಕಿರಣಗಳ ಚಕ್ರ.

ಹಾಗಾದರೆ, ನಮ್ಮ ಬೌದ್ಧ ತತ್ವದಲ್ಲಿ ಈ ಶ್ರೀವತ್ಸ ಸಂಕೇತದ ಅರ್ಥವೇನು? ಕೆಲವರ ಪ್ರಕಾರ, ಇದರರ್ಥ ಅದೃಷ್ಟ, ಸಾಮಾನ್ಯ ಮಾನವರಲ್ಲಿ ಈ ವ್ಯಾಖ್ಯಾನವನ್ನು ಕಾಣಬಹುದು. ನನ್ನ ಪ್ರಕಾರ ಇದು ಸಂಕೇತವನ್ನು ಸಂಕೇತಿಸುತ್ತಿರುವುದು ಬುದ್ದನ ಹಂತವನ್ನು ಇದು ಅಸ್ಥಿತ್ವದಲ್ಲಿಟ್ಟಿರುವುದು ಕೇವಲ ಬೌದ್ಧ ಹಂತದಲ್ಲಿ ಬೋದಿಸತ್ವ ಅಥವಾ ಅಹರ್ತ್ ಇದನ್ನು ಹೊಂದಿರುವುದಿಲ್ಲ. ಆದರೆ ಹಿರಿಯ ಬೋಧಿಸತ್ವರು, ನಾಲ್ಕು ಹಿರಿಯ ಬೋಧಿಸತ್ವರು ಹೊಂದಿದ್ದಾರೆ. ನಮಗೆ ತಿಳಿದಿರುವಂತೆ, ಈ ಹಿರಿಯ ಬೋಧಿಸತ್ವರು ಸಾಮಾನ್ಯ ಬೌದ್ಧರ ಹಂತವನ್ನು ಮೀರಿ ದೂರದಲ್ಲಿದ್ದಾರೆ. ಮತ್ತು ತಥಾಗತ ಮಟ್ಟಕ್ಕಿಂತ ಮೇಲಿದ್ದಾರೆ. ತಥಾಗತ ಹಂತದ ಆಚೆ, ಅಸಂಖ್ಯಾತ ಬುದ್ಧರಿದ್ದಾರೆ. ಒಬ್ಬ ತಥಾಗತ ಈ ಒಂದು ಸಂಕೇತವನ್ನು ಹೊಂದಿದ್ದಾನೆ. ತಥಾಗತ ಹಂತದ ಆಚೆ ಇರುವವರು ಒಂದಕ್ಕಿಂತ ಹೆಚ್ಚು

ಈಸಂಕೇತವನ್ನು ಹೊಂದುತ್ತಾರೆ. ತಥಾಗತನಿಗಿಂತ ಮೇಲಿನ ಹಂತದಲ್ಲಿರುವ ಬುದ್ಧ ಈ ಎರಡೂ ಸಂಕೇತಗಳನ್ನು ಹೆಚ್ಚಾಗಿ ಪಡೆಯುತ್ತಾರೆ. ಈ ಹಣತಕ್ಕಿಂತ ಮೇಲಿರುವವರು, ಮೂರು, ನಾಲ್ಕು, ಐದು, ಶ್ರೀವತ್ಸ ಸಂಕೇತಗಳನ್ನು ಹೀಗೇ ಪಡೆಯುತ್ತಾರೆ. ಅನೇಕ ಶ್ರೀವತ್ಸಗಳನ್ನು ಪಡೆದವರು ತಮ್ಮ ದೇಹ, ತಲೆಯನ್ನು, ಭುಜಗಳನ್ನು ಮತ್ತು ತೊಡೆಗಳನ್ನು ಒಳಗೊಂಡಂತೆ ಶ್ರೀವತ್ಸಗಳಿರುತ್ತವೆ. ಯಾವಾಗ ಅನೇಕ ಶ್ರೀವತ್ಸಗಳಿವೆಯೋ ಆಗ, ಅಂಗೈ, ಬೆರಳುಗಳು, ಪಾದಗಳ ಕೊನೆಗಳಲ್ಲಿ, ಕಾಲ್ಬೆರಳುಗಳು ಇತ್ಯಾದಿಗಳ ಮೇಲೆಲ್ಲ ಶ್ರೀವತ್ಸಗಳು ಕಾಣಿಸಿಕೊಳ್ಳುತ್ತವೆ. ಒಬ್ಬನ ಹಂತವು ನಿರಂತರವಾಗಿ ಹೆಚ್ಚಾದರೆ, ಅವನು ಹೆಚ್ಚು ಹೆಚ್ಚು ಈ ಸಂಕೇತಗಳನ್ನು ಪಡೆಯುತ್ತಾನೆ. ಆದ್ದರಿಂದ, ಈ ಸಂಕೇತವು ಬೌದ್ಧತತ್ವದ ಸ್ಥಿತಿಯನ್ನು ಪ್ರತಿನಿಧಿಸುತ್ತದೆ. ಉನ್ನತ ಹಂತದ ಬೌದ್ಧ ಸ್ಥಿತಿಯೆಂದರೆ ಈ ಹೆಚ್ಚು ಸಂಕೇತಗಳನ್ನು ಹೊಂದಿರುವುದು.

**ಚೀಮನ್ ತತ್ವಗಳು**

ಬೌದ್ಧ ಹಾಗೂ ತಾವೋ ತತ್ವದಂತೆಯೇ ಚೀಮನ್ ತತ್ವವೂ ಇದೆ, ಚೀಮನ್ ಸಾಧನೆಯ ಅಭ್ಯಾಸವೆಂದು ಇದನ್ನು ಕರೆಯಲಾಗುತ್ತದೆ. ಗಮನವಿಟ್ಟು ಈ ಸಾಧನೆಯ ಅಭ್ಯಾಸ ನಡೆಸಿದರೆ, ದಿನನಿತ್ಯದ ವ್ಯವಹಾರದಲ್ಲಿ ಮುಳುಗಿರುವ ಜನರು ಈ ಜ್ಞಾನವನ್ನು ಪಡೆಯಬಹುದು: ಪ್ರಾಚೀನ ಚೀನಾದಿಂದ ಇಂದಿನವರೆಗೆ, ಬೌದ್ಧ ತತ್ವ ಹಾಗೂ ತಾವೋ ತತ್ವವನ್ನು, ಪಾರಂಪರಿಕ ಅಭ್ಯಾಸ ಪದ್ಧತಿಯ ಮಾರ್ಗಗಳನ್ನು ಗೌರವಿಸಿದ್ದಾರೆ, ಮತ್ತು ಇವುಗಳನ್ನು ಅಭ್ಯಾಸಕ್ಕಾಗಿ ನೈತಿಕವಾದ ತತ್ವಗಳೆಂದು ಕರೆದಿದ್ದಾರೆ. ಈ ಚೀಮನ್ ತತ್ವವನ್ನು ಈ ಹಿಂದೆ ಸಾರ್ವಜನಿಕಗೊಳಿಸಿಲ್ಲ. ಮತ್ತು ಕೆಲವೇ ಜನ ಇದರ ಅಸ್ಥಿತ್ವದ ಬಗ್ಗೆ ಕೇಳಿದ್ದಾರೆ.

**ಚೀಮನ್** ತತ್ವ ಇದೆಯೇ? ಹೌದು. ನನ್ನ ಕೃಷಿಯ ಅಭ್ಯಾಸದ ಅವಧಿಯಲ್ಲಿ, ವಿಶೇಷವಾಗಿ ನಾನು ಚೀಮನ್ ತತ್ವದಲ್ಲಿ ಉನ್ನತ ಸಾಧನೆಗೈದವರನ್ನು ಕೆಲವು ವರ್ಷಗಳ ನಂತರ ಕಂಡೆ. ಅವರು ತಮ್ಮ ಅಭ್ಯಾಸದ ಮೂಲಸತ್ವ ಹಾಗೂ ಅದು ಅತ್ಯಪೂರ್ವವಾದುದು ಮತ್ತು ಅತ್ಯಂತ ಒಳ್ಳೆಯದೆಂದು ನನ್ನೊಡನೆ ಹಂಚಿಕೊಂಡಿದ್ದಾರೆ. ಏಕೆಂದರೆ, ಇದು ಅತ್ಯಪೂರ್ವವಾದುದು. ಇಲ್ಲಿ ಯಾವುದು ವಿಕಾಸಗೊಳ್ಳುತ್ತದೆಯೋ ಅದು ತೀರಾ ಅಸಾಂಪ್ರದಾಯಿಕವಾದುದು ಮತ್ತು ಬಹುತೇಕ ಜನರು ಇದನ್ನು ಅರ್ಥಮಾಡಿಕೊಳ್ಳಲಾರರು. ಇದಕ್ಕೆ ಹೊಂದಿಕೊಂಡಂತೆ, ಅವರ ಪ್ರಕಾರ ಬೌದ್ಧತತ್ವ ಅಥವಾ ತಾವೋ ತತ್ವವನ್ನು ಅಭ್ಯಾಸ ಮಾಡುತ್ತಿಲ್ಲ. ಕೆಲವರು ಅವರನ್ನು "ಪಾರ್ಶ್ವ ಬಾಗಿಲು ಮತ್ತು ಒರಟಾದ ದಾರಿ" (ಪಾಂಗ್‌ಮನ್ ಜೂಡೋ) ಎಂದು ಕರೆಯುತ್ತಾರೆ. ಈ ವರ್ಗದವರು ತಮ್ಮನ್ನು ತಾವು ಚೀಮನ್ ತತ್ವದವರೆಂದು ಕರೆದುಕೊಳ್ಳುತ್ತಾರೆ. ಖಚಿತವಾಗಿ ಹೇಳುವುದಾದರೆ, ಪಾರ್ಶ್ವದ ಬಾಗಿಲು ಮತ್ತು ಒರಟಾದ ದಾರಿ ಅಸಮ್ಮತವಾದ ಒಳಾರ್ಥಗಳನ್ನು ಹೊಂದಿದೆ, ಆದರೆ ಇಲ್ಲಿ ಇದು ನಕರಾತ್ಮಕ ಅಭಿಪ್ರಾಯವಲ್ಲ. ಹಾಗೆಯೇ ಈ ತತ್ವವು ಕೆಟ್ಟ ಅಭ್ಯಾಸವೆಂಬ ಆಪಾದನೆಯಲ್ಲ. ಸಾಹಿತ್ಯಕವಾದ ವ್ಯಾಖ್ಯಾನಗಳೂ ಕೂಡ ಇದನ್ನು ಕೆಟ್ಟ ಅಭ್ಯಾಸವೆಂದು ಪರೋಕ್ಷವಾಗಿ ಸೂಚಿಸಿಲ್ಲ. ಇತಿಹಾಸದಲ್ಲಿ, ಬೌದ್ಧ ತತ್ವ ತಾವೋ ತತ್ವಗಳನ್ನು ಸಾಧನೆಯ ಅಭ್ಯಾಸದ "ಸಾಂಪ್ರದಾಯಿಕ ತತ್ವ"ಗಳೆಂದು ಕರೆಯಲಾಗಿದೆ.

---

**2. ಚೀಮನ್** – ಅಸಾಂಪ್ರದಾಯಿಕ

ಯಾವಾಗ ಈ ಅಭ್ಯಾಸವನ್ನು ಜನರು ಅರ್ಥಮಾಡಿಕೊಳ್ಳಲಿಲ್ಲವೊ ಆಗ, ಜನ ಇದನ್ನು "ಪಾರ್ಶ್ವದ ಬಾಗಿಲು" ಅಥವಾ ಅಡ್ಡದಾರಿ ಮತ್ತು ಅಸಾಂಪ್ರದಾಯಿಕ ತತ್ವವೆಂದು ಕರೆದರು. "ಒರಟಾದ ದಾರಿ" ಹಾಗೆಂದರೇನು? "ಒರಟಾದ" ಶಬ್ದದ ಅರ್ಥವು ವಿಚಿತ್ರವಾದ ಅಥವಾ ಒಡ್ಡೊಡ್ಡಾದ ಮಾರ್ಗಕ್ಕೆ ಅನ್ವಯವಾಗುತ್ತದೆ. ಪ್ರಾಚೀನ ಚೀನಾದ ಅವಧಿಯಲ್ಲಿ ಆಗಾಗ್ಗೆ "ಒರಟಾದ" ಶಬ್ದವನ್ನು ವಿಚಿತ್ರವಾಗಿರುವುದಕ್ಕೆ ಸೂಚಿಸಲಾಗಿದೆ. ಪಾರ್ಶ್ವದ ಬಾಗಿಲು ಮತ್ತು ಒರಟಾದ ಮಾರ್ಗಗಳು ಈ ಅರ್ಥವನ್ನು ಮುಂದುವರೆಸಿವೆ.

ಇದು ಒಂದು ಕೆಟ್ಟ ಅಭ್ಯಾಸವಲ್ಲವೇ? ಇದೇಕೆಂದರೆ, ಇದು ಕೂಡ ಶಿನ್‌ಶಿಂಗ್‌ನ (ಹೃದಯದ ಪ್ರಕೃತಿ : ನೈತಿಕ ಗುಣ) ಅವಶ್ಯಕತೆಗಳನ್ನು ಹೊಂದಿದೆ. ಈ ಸಾಧನೆಯ ಅಭ್ಯಾಸವು ವಿಶ್ವತತ್ವಗಳನ್ನು ಅನುಸರಿಸುತ್ತದೆ. ಇದು ವಿಶ್ವತತ್ವ ಹಾಗೂ ಅದರ ನಿಯಮಗಳನ್ನು ಮೀರುವುದಿಲ್ಲ. ಮತ್ತು ತಪ್ಪಾದ ಒಪ್ಪಂದಗಳಲ್ಲಿ ಕಾರ್ಯನಿರತವಾಗಿ ದ್ವಂದ್ವಕ್ಕೆ ಒಳಗಾಗುವುದಿಲ್ಲ. ಆದ್ದರಿಂದ ಇದನ್ನು ಕೆಟ್ಟ ಅಭ್ಯಾಸವೆಂದು ಕರೆಯಲಾಗದು. ಬೌದ್ಧ ತತ್ವ ಮತ್ತು ತಾವೋ ತತ್ವಗಳು ಸಾಂಪ್ರದಾಯಿಕ ತತ್ವಗಳಲ್ಲ. ಏಕೆಂದರೆ ವಿಶ್ವತತ್ವಗಳು ಅಭ್ಯಾಸವನ್ನು ಹೋಲುತ್ತವೆ. ಆದರೆ ಬೌದ್ಧ ಮತ್ತು ತಾವೋ ತತ್ವಗಳು ವಿಶ್ವ ತತ್ವಗಳನ್ನು ಪಾಲಿಸುತ್ತವೆ. ಒಂದು ವೇಳೆ ಚೀಮನ್ ತತ್ವದ ಸಾಧನೆಯ ಅಭ್ಯಾಸವೂ ಕೂಡ ವಿಶ್ವ ತತ್ವಗಳನ್ನು ಅನುಸರಿಸುತ್ತದೆ. ಇದು ಕೆಟ್ಟ ಅಭ್ಯಾಸವಲ್ಲ. ಆದರೆ ನೈತಿಕವಾಗಿ ಸರಿಯಾದ ಮಾರ್ಗ, ಏಕೆಂದರೆ, ಒಳ್ಳೆಯದು ಮತ್ತು ಕೆಟ್ಟದೆಂಬ ಅರ್ಥ ಗ್ರಹಿಕೆಯ ಹಾಗೂ ದಯಾಪರತೆ ಅಥವಾ ಕೆಡುಕಿನ ವಿಶಿಷ್ಟ ಲಕ್ಷಣಗಳ ಮಾನದಂಡವೇ ಇದು. ಇದರ ಅಭ್ಯಾಸವು ವಿಶ್ವದ ವಿಶಿಷ್ಟ ಲಕ್ಷ್ಣಗಳನ್ನು ಅನುಸರಿಸುತ್ತದೆ. ಹಾಗಾಗಿ ಇದು ಕೂಡ ನೈತಿಕವಾದ ಮಾರ್ಗ, ಆದಾಗ್ಯೂ ಅದು ಅದರ ಅವಶ್ಯಕತೆಗಳಿಗನುಗುಣವಾಗಿ ಬೌದ್ಧ ಹಾಗೂ ತಾವೋ ತತ್ವಗಳಿಗಿಂತ ಭಿನ್ನವಾಗಿದೆ. ಇಲ್ಲಿ ವಿಸ್ತಾರವಾದ ಅನುಯಾಯಿಗಳಿಗೆ ಬೋಧಿಸುವುದಿಲ್ಲ. ಮತ್ತು ಅತಿ ಚಿಕ್ಕ ಸಂಖ್ಯೆಯ ಜನರಿಗೆ ಬೋಧಿಸಬೇಕಾಗುತ್ತದೆ. ತಾವೋ ತತ್ವವು ಬಹು ಅನುಯಾಯಿಗಳಿಗೆ ಬೋಧಿಸುತ್ತದೆ. ಆದರೆ ಒಬ್ಬನೆ ಒಬ್ಬ ಅನುಯಾಯಿ ವಾಸ್ತವವಾದ ತತ್ವಗಳನ್ನು ಸ್ವೀಕರಿಸುತ್ತಾನೆ. ಬೌದ್ಧ ತತ್ವವು ಎಲ್ಲ ಜೀವಿಗಳಿಗೆ ಮುಕ್ತಿಯಿದೆಯೆಂದು ನಂಬುತ್ತದೆ. ಹಾಗಾಗಿ ಯಾರು ಸಾಧನೆಯ ಅಭ್ಯಾಸದಲ್ಲಿ ತೊಡಗುತ್ತಾರೋ ಅವರು ಮುಕ್ತಿ ಪಡೆಯಬಹುದು. ಚೀಮನ್ ತತ್ವದ ಅಭ್ಯಾಸವು ಇಬ್ಬರಿಗೆ ಪಾರಂಪರಿಕವಾಗಿ ಬರುವುದಿಲ್ಲ. ಅದಕ್ಕಾಗಿ ಇದನ್ನು ಇತಿಹಾಸದ ದೀರ್ಘಕಾಲದಲ್ಲಿ ಆಯ್ದ ಒಬ್ಬ ವ್ಯಕ್ತಿಗೆ ವರ್ಗಾಯಿಸಲಾಗುತ್ತದೆ. ಆದ್ದರಿಂದ ಇತಿಹಾಸದಾದ್ಯಂತ ಇದನ್ನು ಸಾಮಾನ್ಯ ಜನರಲ್ಲಿ ಕಾಣಲು ಸಾಧ್ಯವಿಲ್ಲ ಹೌದು, ಚೀಗಾಂಗ್ ಜನಪ್ರಿಯವಾದಾಗ, ನನಗೆ ತಿಳಿದಂತೆ ಈ ತತ್ವದ ಕೆಲವರು. ಬೋಧಿಸಲು ಮುಂದಾದರು. ಕೆಲವು ಸಾರ್ವಜನಿಕ ಬೋಧನೆಗಳ ನಂತರ, ಹೇಗೋ ಅವರು ಇದನ್ನು ಮಾಡಲಾಗದು. ಏಕೆಂದರೆ, ಇದರಲ್ಲಿನ ಕೆಲವು ಅಂಶಗಳನ್ನು ಗುರುಗಳು ಸಾರ್ವಜನಿಕವಾಗಿ ತಿಳಿಸುವುದನ್ನು ನಿಷೇಧಿಸಿದ್ದಾರೆ ಎಂಬುದನ್ನು ಅರ್ಥಮಾಡಿಕೊಂಡರು. ಒಂದು ವೇಳೆ ಸಾರ್ವಜನಿಕರಿಗೆ ಇದನ್ನು ಬೋಧಿಸುವುದಾದರೆ, ನೀವು ಅಭ್ಯಾಸಿಗರನ್ನು ಆಯ್ದುಕೊಳ್ಳಲಾಗದು. ಅಭ್ಯಾಸಕ್ಕಾಗಿ ಬರುವವರಲ್ಲಿನ ಕಲಿಕೆಯ ಮಟ್ಟದಲ್ಲಿ ಭಿನ್ನ ಶಿನ್ಶಿಂಗ್ ಹಂತ ಹಾಗೂ ಭಿನ್ನ ಮನಸ್ಥಿತಿಗಳಿಗೆ ಇದು ಕಾರಣವಾಗುತ್ತದೆ. ಅಂತೆಯೇ ಆ ವ್ಯಕ್ತಿಗಳು ಭಿನ್ನ ರೀತಿಯವರಾಗಿರುತ್ತಾರೆ. ಆಗ ನೀವು ಬೋಧನೆಗಾಗಿ ಅನುಯಾಯಿಗಳನ್ನು ಆಯ್ದುಕೊಳ್ಳಲು ವಿಫಲರಾಗುತ್ತೀರಿ. ಆದ್ದರಿಂದ, ಚೀಮನ್ ತತ್ವವನ್ನು ವಿಸ್ತಾರವಾದ ಪ್ರದೇಶಗಳಲ್ಲಿ ಸಾರ್ವಜನಿಕವಾಗಿ ಬೋಧಿಸಲಾಗುವುದಿಲ್ಲ. ಹಾಗೆ ಬೋಧಿಸಿದರೆ ಅದು ಅಪಾಯಕಾರಿಯಾಗುತ್ತದೆ. ಏಕೆಂದರೆ ಇದರ ಅಭ್ಯಾಸವು ಅತ್ಯಂತ ವಿಶಿಷ್ಟವಾದುದು.

ಬೌದ್ಧ ತತ್ವದ ಅಭ್ಯಾಸದ ಸಮಯದಲ್ಲಿ ಬೌದ್ಧ ತತ್ವವನ್ನು, ತಾವೋ ತತ್ವದ ಅಭ್ಯಾಸದ ಸಮಯದಲ್ಲಿ ತಾವೋ ತತ್ವವನ್ನೂ ಅಭ್ಯಾಸ ಮಾಡುವುದರಿಂದ ಕೆಲವರಿಗೆ ಅಚ್ಚರಿಯಾಗುತ್ತದೆ. ಚೀಮನ್ ತತ್ವದ ಅಭ್ಯಾಸದ ನಂತರ ಈ ಅಭ್ಯಾಸಿಗ ಏನಾಗುತ್ತಾನೆ? ಇಂತಹ ವ್ಯಕ್ತಿಯು ನಿರ್ದಿಷ್ಟ ಮೇರೆಗಳಿಲ್ಲದ ಈ ವಿಶ್ವದಲ್ಲಿ ತಿರುಗಾಡುವ ದೇವರಾಗುತ್ತಾನೆ! ಎಲ್ಲರಿಗೂ ತಿಳಿದಿರುವಂತೆ ತಥಾಗತ ಶಾಕ್ಯಮುನಿ ಸಹ ಸ್ವರ್ಗವನ್ನು ಹೊಂದಿದ್ದಾನೆ. ಬುದ್ಧ ಅಮಿತಾಭ ಅಂತಿಮ ಪರಮಾನಂದದ ಸ್ಥಿತಿಯನ್ನು ಹೊಂದುತ್ತಾನೆ. ಧ್ಯಾನಸ್ಥ ಬುದ್ಧನು ಪ್ರಖರವಾದ ಸ್ವರ್ಗವನ್ನು ಹೊಂದುತ್ತಾನೆ. ಪ್ರತಿ ತಥಾಗತ ಅಥವಾ ಮಹಾಬುದ್ಧ ಅವನು ಅಥವಾ ಅವಳು ತಮ್ಮ ಸದ್ವಂತ ಸ್ವರ್ಗವನ್ನು ಹೊಂದುತ್ತಾರೆ. ಮಹಾಜ್ಞಾನ ಉಂಟಾದ

ಪ್ರತಿಯೊಬ್ಬರು ತಮ್ಮ ತಮ್ಮ ಸ್ವರ್ಗವನ್ನು ಕಟ್ಟಿಕೊಳ್ಳುತ್ತಾರೆ. ಮತ್ತು ಅವನ ಅಥವಾ ಅವಳ ಅನೇಕ ಅನುಯಾಯಿಗಳು ಅಲ್ಲಿ ಜೀವಿಸುತ್ತಾರೆ. ಅಲ್ಲಿಯವರೆಗೂ ಚೀಮನ್ ತತ್ವದ ಈ ವಿಶ್ವದಲ್ಲಿ ನಿಯಮಿಸಿದ ಎಲ್ಲೆ ಇರುವುದಿಲ್ಲ. ಮತ್ತು ಈ ವ್ಯಕ್ತಿಯು ಏಕಾಂಗಿಯಾಗಿ ಅಮರವಾದುದಕ್ಕಾಗಿ ಅಲೆಯುವ ದೇವರಂತೆ.

**ಪಾಪಕರವಾದ ಮಾರ್ಗದಲ್ಲಿ ಅಭ್ಯಾಸಿಸುವುದು.'**

**'ಪಾಪಕರವಾದ ಮಾರ್ಗದಲ್ಲಿ ಅಭ್ಯಾಸಿಸುವುದು'** ಎಂದರೇನು? ಇದು ಹಲವು ರೂಪಗಳನ್ನು ಹೊಂದಿದೆ. ಇತಿಹಾಸದಾದ್ಯಂತ ವಿಶೇಷವಾಗಿ ಅಭ್ಯಾಸ ನಿರತರಾದ ಕೆಲವರಿಂದ ಈ ಪಾಪಕರವಾದ ಮಾರ್ಗದಲ್ಲಿ ಅಭ್ಯಾಸವು ನೀಡಲ್ಪಟ್ಟಿದೆ. ಅವರು ಇದನ್ನು ಮುಂದುವರೆಸಿದ್ದೇಕೆ?', ಅವರು ಕೀರ್ತಿಯನ್ನು, ವೈಯುಕ್ತಿಕ ಗಳಿಕೆಯನ್ನು ಮತ್ತು ದೈನಂದಿನ ವ್ಯವಹಾರ ಶ್ರೀ ಸಾಮಾನ್ಯರಿಂದ ಹಣವನ್ನು ಬಯಸುತ್ತಿದ್ದರು. ಅವುಗಳೇ ಅವರಿಗೆ ಬೇಕಾಗಿದ್ದುದು. ಹೌದು ಈ ತರದ ವ್ಯಕ್ತಿಗಳು ಉನ್ನತ ಶಿನ್‌ಶಿಂಗ್‌ನ ಹಂತವನ್ನು ಪಡೆಯುವುದಿಲ್ಲ. ಮತ್ತು ಗಾಂಗ್ ಅನ್ನು (ಶಕ್ತಿಗಳಿಸುವ ಸಾಧನೆಯ ಅಭ್ಯಾಸ) ಕೂಡ ಪಡೆಯಲಾರದು. ಹಾಗಾದರೆ ಏನನ್ನು ಪಡೆಯುತ್ತಾರೆ? ಕರ್ಮ ಒಂದು ವೇಳೆ ಒಬ್ಬ ಹೆಚ್ಚಿನ ಕರ್ಮವನ್ನು ಹೊಂದಿದ್ದರೆ, ಅದು ಕೂಡ ಒಂದು ಬಗೆಯ ಶಕ್ತಿಯಾಗುತ್ತದೆ. ಆದರೆ ಇವರು ಯವ ಸ್ಥಿತಿಯನ್ನು ಹೊಂದಲಾರರು ಮತ್ತು ಇವರನ್ನು ಅಭ್ಯಾಸಿಗರಿಗೆ ಹೋಲಿಸಲಾಗದು. ಸಾಮಾನ್ಯರಿಗೆ ಹೋಲಿಸಿದರೆ, ಹೇಗಾದರೂ ಅವನು ಅವರನ್ನು ನಿಯಂತ್ರಿಸುತ್ತಾನೆ. ಏಕೆಂದರೆ ಕರ್ಮವೂ ಕೂಡ ಒಂದು ರೂಪದ ಶಕ್ತಿ ಯಾವಾಗ ಇದರ ಸಾಂದ್ರತೆ ಹೆಚ್ಚುತ್ತದೆಯೋ, ಆದ ಅಂಥವನ ದೇಹದಲ್ಲಿ ಅಸಾಮಾನ್ಯ ಸಾಮರ್ಥ್ಯಗಳನ್ನು ಬಲಪಡಿಸಿ, ಇಂಥ ಪರಿಣಾಮಗಳನ್ನು ಬೀರುತ್ತದೆ. ಆದ್ದರಿಂದ ಇತಿಹಾಸದಾದ್ಯಂತ ಕೆಲವರು ಇದನ್ನು ಬೋಧಿಸಿದ್ದಾರೆ. ಇಂತಹ ಕೆಲವರು ಹೀಗೆ ಸಾಧಿಸುತ್ತಾರೆ. ''ಕೆಟ್ಟ ಕೆಲಸಗಳನ್ನು ಮತ್ತು ಪ್ರತಿಜ್ಞೆ ಮಾಡುವುದರ ಮೂಲಕ ತನ್ನ ಗಾಂಗನ್ನು ಪಾಪಕಾರ್ಯವನ್ನು ವೃದ್ಧಿಸಿಕೊಳ್ಳುತ್ತಾನೆ. ಕೆಟ್ಟ ಕೆಲಸಗಳು ಪಾಪಕಾರ್ಯದ ಕರ್ಮದೆಡೆಗೆ ಸೆಳೆಯುತ್ತದೆ. ಆದ್ದರಿಂದ ಇಂತಹ ವ್ಯಕ್ತಿಗಳಲ್ಲಿ ಕ್ಷುಲ್ಲಕವಾಗಿ ಜನಿಸಿದ ಅಸಾಮಾನ್ಯ ಸಾಮರ್ಥ್ಯಗಳನ್ನು ಈ ಕರ್ಮದಿಂದ ಬಲಪಡಿಸಿಕೊಳ್ಳಬಹುದು. ಅವನು ಕೆಲವು ಸಣ್ಣ ಅಸಾಮಾನ್ಯ ಸಾಮರ್ಥ್ಯಗಳನ್ನು ಅಭಿವೃದ್ಧಿಪಡಿಸಿಕೊಳ್ಳಬಹುದು. ಆದಾಗ್ಯೂ ಸಾಂಕೇತಿಕವಾಗಿ ಏನನ್ನಾದರೂ ಮಾಡುವಲ್ಲಿ ಅಂಥವರು ಅಸಮರ್ಥರಾಗುತ್ತಾರೆ. ಇಂಥ ವ್ಯಕ್ತಿಗಳು ಕೆಟ್ಟ ಕರ್ತವ್ಯಗಳನ್ನು ಮಾಡುವ ಮೂಲಕ ಅದನ್ನು ಹಿಡಿದಿಡುತ್ತಾರೆ. ಅವರು ಕೂಡ ಗಾಂಗ್‌ನ್ನು ವೃದ್ಧಿಪಡಿಸಿಕೊಳ್ಳಬಹುದು. ಇದನ್ನು ಅವರು ಹೇಳುತ್ತಾರೆ.

ಕೆಲವರ ಪ್ರಕಾರ : ''ತಾವೋ ತತ್ವವು ಒಂದು ಹೆಜ್ಜೆ ಎತ್ತರದ್ದು, ಒಬ್ಬ ಭಯಂಕರ ವ್ಯಕ್ತಿ (ರಾಕ್ಷಸ) ಮೂರು ಅಡಿ ಅಧಿಕ ಎತ್ತರವಿರಬಹುದು''. ಅದು ಜನಸಾಮಾನ್ಯರಿಂದ ಮಾಡಲಾಗುವ ತಪ್ಪು ಹೇಳಿಕೆ. ಒಬ್ಬ ಭಯಂಕರ ವ್ಯಕ್ತಿ ಎಂದಿಗೂ ತಾವೋಗಿಂತ ಎತ್ತರದಲ್ಲಿರುವುದು ಸಾಧ್ಯವಿಲ್ಲ. ನಮಗೆ ತಿಳಿದಿರುವಂತೆ, ಅನಂತ ವಿಶ್ವಗಳಲ್ಲಿ ಮಾನವ ಜೀವಿಗಳದ್ದು ತೀರಾ ಸಣ್ಣ ಜಗತ್ತು, ಮತ್ತು ನಾವು ಅದನ್ನು ಸಣ್ಣ ಜಗತ್ತೆಂದು ಕರೆಯುತ್ತೇವೆ. ಪ್ರತಿ ಬಾರಿಯೂ ನಮ್ಮ ವಿಶ್ವವು ದೀರ್ಘಾವಧಿಯ ಕೆಲವು ವರ್ಷಗಳಲ್ಲಿ ಸಾಗುತ್ತದೆ. ಈ ವಿಶ್ವದಲ್ಲಿರುವ ಗ್ರಹಗಳು, ಜೀವಿಗಳನ್ನು ಒಳಗೊಂಡಂತೆ ಈ ಅನುಭವದಲ್ಲಿ ಮಹಾಪ್ರಳಯಗಳಿಂದ ನಾಶವಾಗುತ್ತವೆ. ವಿಶ್ವದ ಚಲನೆಯ ತತ್ವವು ಕೆಲವು ನಿಯಮಗಳನ್ನು ಅನುಸರಿಸುತ್ತದೆ. ಈ ವಿಶ್ವ ತತ್ವದ ಸಂದರ್ಭದಲ್ಲಿ, ಮಾನವ ಜನಾಂಗಕ್ಕೆ ಸಂಬಂಧಿಸಿದ ವರ್ಗಗಳು ಮಾತ್ರ ಭ್ರಷ್ಟಗೊಂಡಿಲ್ಲ. ಅನೇಕ ಜೀವಿಗಳು ಈ ಸ್ಥಿತಿಯನ್ನು ಅನುಭವಿಸಿವೆ. ಪ್ರಸ್ತುತ ಸಂದರ್ಭಕ್ಕೆ ಸಂಬಂಧಿಸಿದಂತೆ, ಈ ವಿಶ್ವದಲ್ಲಿ ಒಂದು ಮಹಾಸ್ಫೋಟ ಸಂಭವಿಸಿದೆ. ಇಂದು, ಖಗೋಳಶಾಸ್ತ್ರಜ್ಞರು ಇದನ್ನು ಗ್ರಹಿಸಲಾಗುತ್ತಿಲ್ಲ. ಏಕೆಂದರೆ ನಾವು ಏನನ್ನು ಈಗ ಅತ್ಯಂತ ಬಲಿಷ್ಟ ದೂರದರ್ಶಕಗಳ ಮೂಲಕ ಹಿಂದಿನ ನೂರೈವತ್ತು ಸಾವಿರ ಜ್ಯೋತಿರ್ವರ್ಷಗಳನ್ನು ಕಾಣುತ್ತೇವೆ. ಕಾಲಾನುಕ್ರಮದಲ್ಲಿ ವಿಶ್ವದಲ್ಲಾಗಿರುವ ಅಥವಾ ಉಂಟಾಗಿರುವ ಬದಲಾವಣೆಯನ್ನು ನೋಡಿ ನಾವು ಮತ್ತೆ ನೂರೈವತ್ತು ಸಾವಿರ ಜ್ಯೋತಿರ್ವರ್ಷಗಳಷ್ಟು ಕಾಲ ಕಾಯಬೇಕಾಗಿದೆ. ಅದು ತೀರಾ ದೂರದ ಅವಧಿ.

ವರ್ತಮಾನದಲ್ಲಿ, ಇಡೀ ವಿಶ್ವವೇ ಈಗಾಗಲೇ ಅವಸ್ಥಾಂತರಕ್ಕೆ ಒಳಗಾಗಿದೆ. ಯಾವಾಗ ಈ ಬಗೆಯ ಬದಲಾವಣೆ ಆರಂಭವಾಗುತ್ತದೆಯೊ, ಆಗ ವಿಶ್ವದ ಸಕಲ ಜೀವಿಗಳೂ ಸಂಪೂರ್ಣವಾಗಿ ಅದಃಪತನದ ಸ್ಥಿತಿ ತಲುಪುತ್ತವೆ ಮತ್ತು ನಾಶವಾಗುತ್ತವೆ. ಪ್ರತಿ ಬಾರಿ ಇಂಥ ಸಂದರ್ಭ ಘಟಿಸುತ್ತದೆ. ಈ ಲಕ್ಷಣಗಳು ಮತ್ತು ಒಳಗಿರುವ ಇನ್ನಿತರ ಎಲ್ಲ ಅಂಶಗಳು ಈ ಹಿಂದಿನ ವಿಶ್ವವನ್ನು ಒಳಗೊಂಡು ಸ್ಫೋಟಗೊಳ್ಳಲೇಬೇಕು. ಸಾಮಾನ್ಯವಾಗಿ ಈ ಸ್ಫೋಟದಲ್ಲಿ ಎಲ್ಲ ಜೀವಿಗಳು ಕೊಲ್ಲಲ್ಪಡುತ್ತವೆ. ಆದಾಗ್ಯೂ ಪ್ರತಿ ಆಸ್ಫೋಟದಲ್ಲಿ ಪ್ರತಿಯೊಬ್ಬರೂ ಅಳಿಸಿ ಹಾಕಲ್ಪಡುವುದಿಲ್ಲ. ಆ ನಂತರ ಮಹಾ ಪ್ರಕಾಶದ ಜೀವಿಗಳಿಂದ ಉನ್ನತ ಹಂತದ ವಿಶ್ವ ಪುನರ್‌ರಚಿತವಾಗುತ್ತದೆ. ಅಲ್ಲಿ ಈಗಲೂ ಕೆಲವರು ಸ್ಫೋಟದಿಂದ ಉಳಿದುಕೊಳ್ಳುತ್ತಾರೆ. ಈ ಮಹಾ ಪ್ರಕಾಶದ ಜೀವಿಗಳು ತಮ್ಮ ಲಕ್ಷಣಗಳು ಹಾಗೂ ಗುಣಮಟ್ಟಗಳಿಗನುಗುಣವಾಗಿ ವಿಶ್ವವನ್ನು ನಿರ್ಮಿಸುತ್ತಾರೆ. ಆದ್ದರಿಂದ ಈ ವಿಶ್ವವು ಈ ಹಿಂದಿನ ವಿಶ್ವವಕ್ಕಿಂತ ಭಿನ್ನವಾದ ಲಕ್ಷಣಗಳನ್ನು ಹೊಂದಿರುತ್ತದೆ.

ಹಿಂದಿನ ಸ್ಫೋಟದಲ್ಲಿ ಉಳಿದವರು ಈ ಹಿಂದಿನ ಲಕ್ಷಣಗಳು ಹಾಗೂ ತತ್ವಗಳ ಆಧಾರದಲ್ಲಿ ಈ ವಿಶ್ವದಲ್ಲಿ ಕಾರ್ಯ ನಿರ್ವಹಿಸುತ್ತಾರೆ. ಹೊಸದಾಗಿ ರೂಪುಗೊಂಡ ವಿಶ್ವವು ತನ್ನ ಕಾರ್ಯಾಚರಣೆಯಲ್ಲಿ ಆ ಲಕ್ಷಣಗಳನ್ನು ಮತ್ತು ತತ್ವಗಳನ್ನು ಗ್ರಹಿಸುತ್ತದೆ. ಹೀಗೆ ಸ್ಫೋಟದಿಂದ  ಜೀವಂತವಾಗಿ ಪಾರಾದವರು ಭಯಂಕರ ವ್ಯಕ್ತಿಗಳಾಗುತ್ತಾರೆ. ಅದು ವಿಶ್ವ ತತ್ವಗಳ ಜೊತೆ ಹಸ್ತಕ್ಷೇಪ ಮಾಡುತ್ತದೆ. ಆದಾಗ್ಯೂ ಅವರೇನು ಕೆಟ್ಟವರಲ್ಲ. ಈಗಲೂ ಅವರು ಈ ಹಿಂದಿನ ಅವಧಿಯ ವಿಶ್ವದ ತತ್ವಗಳನ್ನು ಅನುಸರಿಸುತ್ತಿದ್ದಾರೆ. ಸಾಮಾನ್ಯರು ಅವರನ್ನು ಸ್ವರ್ಗೀಯ ರಾಕ್ಷಸರೆಂದು ಕರೆಯುತ್ತಾರೆ. ಆದರೂ ಅವರಿಂದ ಸಾಮಾನ್ಯ ಮನುಷ್ಯರಿಗೆ ಅಪಾಯವಿಲ್ಲ. ಮತ್ತು ಅಪಾಯಕಾರಿ ವ್ಯಕ್ತಿಗಳ ಆಚೀಚೆ ಇರುತ್ತಾರೆ. ಅವರು ಕಾರ್ಯ ನಿರ್ವಹಿಸಲು ತಮ್ಮ ತತ್ವಗಳಿಗೆ ಬದ್ಧರಾಗಿರುತ್ತಾರೆ. ಭೂತಕಾಲದ ಬಗ್ಗೆ ಸಾಮನ್ಯ ಮನುಷ್ಯರಿಂದ ಇದನ್ನು ಭಾವಿಸಿ ತಿಳಿದುಕೊಳ್ಳಲಾಗದು. ನಾನು ಹೇಳುವಂತೆ ತಥಾಗತನ ಆಚೆ ಅನೇಕ ಬುದ್ಧರುಗಳಿದ್ದಾರೆ. ಅವರನ್ನು ಭಯಂಕರ ವ್ಯಕ್ತಿಗಳ ಗುಂಪಿಗೆ ಸೇರಿಸಬಹುದೇ? ಅವರು ಹೋಲಿಕೆಯಲ್ಲಿ ಅತ್ಯಲ್ಪ ಹಳೆಯುಗ, ರೋಗ ಮತ್ತು ಸಾವುಗಳು ಕೂಡ ಭಯಂಕರವಾದವು. ಆದರೆ ಅವರು ವಿಶ್ವದ ತತ್ವಗಳನ್ನು ನಿರ್ವಹಿಸಲು ಉದ್ಭವಿಸಿದ್ದಾರೆ.

ಬೌದ್ಧ ತತ್ವವು **ಅಸುರ** (ಕೆಟ್ಟದನ್ನು ಬಯಸುವವ) ವಿಷಯದ ಬಗ್ಗೆ ಹೇಳುವಾಗ ಸಂಸಾರದಲ್ಲಿ ನಂಬಿಕೆ ಹೊಂದಿದೆ. ಇದು ಒಂದರ್ಥದಲ್ಲಿ ಜೀವಿಗಳನ್ನು ಭಿನ್ನ ಆಯಾಮಗಳಲ್ಲಿ ನಿರ್ದೇಶಿಸುತ್ತದೆ. ಆದರೆ ನೈಸರ್ಗಿಕವಾಗಿ ಹುಟ್ಟನಿಂದ ಇವರು ಅದನ್ನು ಹೊರುವುದಿಲ್ಲ. ಮಹಾ ಪ್ರಕಾಶದ ವ್ಯಕ್ತಿಗೆ (ಜ್ಞಾನಿ) ಹೋಲಿಸಿದರೆ, ಅವರು ತೀರಾ ಕೆಳಹಂತದವರಂತೆ ಅಸಮರ್ಥರು, ಆದಾಗ್ಯೂ ಅವರು ಸಾಮಾನ್ಯರ ಕಣ್ಣಿಗೆ ಕೆಲ ಪ್ರಮಾಣದ ಶಕ್ತಿ ಇರುವುದರಿಂದ ಭಯಸ್ತರಾಗಿ ಕಾಣುತ್ತಾರೆ. ಅವರು ಸಾಮಾನ್ಯರನ್ನು ಪ್ರಾಣಿಗಳಂತೆ ಪರಿಗಣಿಸುತ್ತಾರೆ. ಆದ್ದರಿಂದ ಮಾನವರು ಮೇಲೆ ಸುಖಿಸುತ್ತಾರೆ. ಈಚಿನ ವರ್ಷಗಳಲ್ಲಿ ಅವರು ಕೂಡ ಬೋಧನೆಗೆ ಮುಂದಾಗಿದ್ದಾರೆ. ಯಾವ ಬಗೆಯ ವಸ್ತುಗಳು ಅವರ ಬಳಿ ಇವೆ? ಅವರು ಹೇಗೆ ಮನುಷ್ಯರಂತೆ ಕಾಣಿಸುತ್ತಾರೆ.? ಅವರು ಭಯಸ್ತರಾಗಿ ಕಾಣುತ್ತಾರೆ. ಒಂದು ಬಾರಿ ನೀವು ಅವರ ಮಾದರಿಗಳನ್ನು ಕಲಿತರೆ, ನೀವು ಅವರ ಜೊತೆ ಹೋಗಬೇಕಾಗುತ್ತದೆ ಮತ್ತು ಅವರ ಉಪಜೀವಿಗಳಾಗಬೇಕಾಗುತ್ತದೆ. ಚೀಗಾಂಗ್ ಅಭ್ಯಾಸದಲ್ಲಿ ಒಂದು ವೇಳೆ ಕೆಲವರು ಕೆಟ್ಟ ಚಿಂತನೆಗಳನ್ನು ಅವರ ಮನಸ್ಥಿತಿಯ ಪ್ರಕಾರ ಹೊಂದಿದ್ದಾರೆ. ಅಂತಹವರು ಇಂತಹ ವ್ಯಕ್ತಿಗಳಿಗೆ ಬೋಧಿಸಲು ಬರುತ್ತಾರೆ. ಒಂದು ಸರಿಯಾದ ಮನಸ್ಸು ನೂರು ಕೆಡುಕುಗಳನ್ನು ಜಯಿಸಬಲ್ಲದು. ಒಂದು ವೇಳೆ ನೀವು ಏನನ್ನೂ ಗಳಿಸದಿದ್ದರೆ, ನಿಮ್ಮನ್ನು ಯಾರೂ ಪರಿಗಣಿಸುವುದಿಲ್ಲ. ನೀವು ಕೆಟ್ಟ ಚಿಂತನೆಗಳನ್ನು ಅಭಿವೃದ್ಧಿಪಡಿಸಿಕೊಂಡರೆ ಅಥವಾ ಅದರಾಚೆಗಿನ ಕೆಲವನ್ನು ಹೊಂದಿದರೆ, ಅವರು ನಿಮಗೆ ಸಹಾಯ ಹಸ್ತವನ್ನು ಚಾಚುತ್ತಾರೆ. ಮತ್ತು ನೀವು ಆಗ ಪೈಶಾಚಿಕ ಅಭ್ಯಾಸ ಪದ್ದತಿಯನ್ನು ಹಿಂಬಾಲಿಸುತ್ತೀರಿ. ಈ ಸಮಸ್ಯೆ ಇಲ್ಲಿ ಎದುರಾಗುತ್ತದೆ.

ಇನ್ನೊಂದು ಸಂದರ್ಭದಲ್ಲಿ ಹೀಗೆ ಕರೆಯಲಾಗುತ್ತದೆ. “ತಿಳಿದುಕೊಳ್ಳದೆ ಅಭ್ಯಾಸಿಸುವುದು ಒಂದು ಕೆಡುಕಿನ ಅಭ್ಯಾಸದ ಮಾರ್ಗ”. ಹೀಗೆಂದರೇನು ? ಯಾರಾದರೊಬ್ಬರು ಅಭ್ಯಾಸವನ್ನು

---

3. **ಅಸುರ** – ರಾಕ್ಷಸ.

ಅರ್ಥೈಸಿಕೊಳ್ಳದೆ ಕೆಡುಕಿನ ಮಾರ್ಗವನ್ನು ಹಿಡಿಯುವುದು. ಈ ಸಮಸ್ಯೆ ತೀರಾ ಸಾಮಾನ್ಯ ಹಾಗೂ ಸರಳವಾಗಿ ಎಲ್ಲೆಡೆ ಹಬ್ಬಿದೆ. ನಾನು ಹೇಳಿದಂತೆ ಮತ್ತೊಂದು ದಿನ ಅನೇಕರು ಚೀಗಾಂಗ್ ಅಭ್ಯಾಸವನ್ನು ಕೆಟ್ಟ ಯೋಚನೆಗಳು ಮತ್ತು ಮನಸ್ಸಿನಿಂದ ಕೈಗೊಳ್ಳುತ್ತಾರೆ. ಆದರೂ ಅಂತಹವರು ದೈಹಿಕ ಚಲನೆಗಳ ಆಯಾಸಕರವಾದ ಅಭ್ಯಾಸವನ್ನು ಮಾಡುತ್ತಾರೆ. ಅಂತಹವರ ಮನಸ್ಸು ನಿರ್ಮಲವಾಗಿರುವುದಿಲ್ಲ. ಮನಸ್ಸಿನಲ್ಲಿ ಒಂದು ಯೋಚನೆ ಆರಂಭವಾಗುತ್ತದೆ. " ಬೆಲೆಗಳು ಏರುಮುಖವಾಗಿವೆ. ದೈಹಿಕ ವ್ಯಾಯಾಮದ ನಂತರ ನಾನು ಕೊಳ್ಳಲು ಹೋಗಬೇಕು. ಒಂದು ವೇಳೆ ಬೇಗ ಹೋಗದಿದ್ದರೆ, ವಸ್ತುಗಳ ಬೆಲೆ ಇನ್ನೂ ಹೆಚ್ಚಾಗುತ್ತದೆ". ಮತ್ತೊಬ್ಬ ವ್ಯಕ್ತಿ ಹೀಗೆ ಯೋಚಿಸುತ್ತಾನೆ", ಉದ್ಯೋಗ ಸಂಸ್ಥೆಯು ಈಗ ಮನೆಗಳನ್ನು ನೀಡುತ್ತಿದೆ. ನಾನೂ ಅದನ್ನು ಪಡೆಯುತ್ತೇನೆಯೇ? ಮನೆಗಳನ್ನು ಹಂಚುವವನು ಯಾವಾಗಲೂ ನನ್ನ ವಿರುದ್ಧವಾಗಿದ್ದಾನೆ" ಈ ವ್ಯಕ್ತಿ ಅದರ ಬಗ್ಗೆ ಚಿಂತಿತನಾಗಿದ್ದಾನೆ. ಅವನು ಕೋಪಗೊಳ್ಳುತ್ತಾನೆ. "ಅವನು ನನಗೆ ಹೇಗೂ ಮನೆಯನ್ನು ಹಂಚಲಾರ. ನಾನು ಹೇಗೆ ಹೋರಾಡಬೇಕು ....?" ಈ ಬಗೆಯ ಎಲ್ಲ ಚಿಂತನೆಗಳು ಬೆಳೆಯುತ್ತವೆ. ನಾನು ಈ ಹಿಂದೆ ಹೇಳಿದಂತೆ, ಇಂತವರು ತಮ್ಮ ಕುಟುಂಬದಿಂದ ಪ್ರಭುತ್ವದವರೆಗಿನ ಸಂಬಂಧಗಳ ಬಗ್ಗೆ ಟೀಕಿಸುತ್ತಾರೆ. ಯಾವಾಗ ಅವರು ಅಸಂತೋಷದ ವಿಷಯಗಳನ್ನು ಮಾತಾಡುತ್ತಾರೋ ಆವರು ಇನ್ನೂ ಹೆಚ್ಚು ಕೋಪಿಸಿಕೊಳ್ಳುತ್ತಾರೆ.

ಚೀಗಾಂಗ್ ಪದ್ಧತಿಯ ಒಳ್ಳೆಯದರೆಡೆಗೆ ಗೌರವ ಇಟ್ಟುಕೊಳ್ಳುವುದು ಅವಶ್ಯಕ. ವ್ಯಾಯಾಮ ಮಾಡುವಾಗ ನೀವು ಒಳ್ಳೆಯ ವಿಷಯಗಳ ಬಗ್ಗೆ ಯೋಚಿಸಬೇಕು. ಕನಿಷ್ಠ ಈ ಸಂದರ್ಭದಲ್ಲಾದರೂ ಕೆಟ್ಟ ವಿಷಯಗಳ ಬಗ್ಗೆ ಯೋಚಿಸಬಾರದು. ಯಾವ ವಿಷಯದ ಬಗ್ಗೆಯೂ ಯೋಚಿಸದಿರುವುದು ಒಳ್ಳೆಯದು. ಏಕೆಂದರೆ, ಕೆಳಹಂತದ ಚೀಗಾಂಗ್ ಅಭ್ಯಾಸದ ಅವಧಿಯಲ್ಲಿ ಒಂದು ತಳಹದಿಯು ನಿಮ್ಮನ್ನು ನಡೆಸುತ್ತದೆ. ಈ ತಳಹದಿಯು ನಿರ್ಣಾಯಕ ಪಾತ್ರವನ್ನು ವಹಿಸುತ್ತದೆ. ಮಾನ ಮನಸ್ಸುಗಳ ಕ್ರಿಯಾ ಶೀಲತೆಯು ಕೂಡ ಈ ಸಂದರ್ಭದಲ್ಲಿ ಪಾತ್ರವಹಿಸುತ್ತದೆ. ಎಲ್ಲರೂ ಇದರ ಬಗ್ಗೆ ಯೋಚಿಸಿ, ನೀವು ನಿಮ್ಮ ಗಾಂಗ್‌ಗೆ ಏನನ್ನು ಸೇರಿಸುತ್ತಿದ್ದೀರಿ? ನೀವು ಅಭ್ಯಾಸ ಮಾಡುವುದು ಒಳ್ಳೆಯದೇ? ಇದು ಉತ್ಪಲವೇ? ಎಷ್ಟು ಜನ ಚೀಗಾಂಗ್ ಅಭ್ಯಾಸಿಗರು ಈ ಯೋಚನೆಗಳಿಂದ ಮುಕ್ತರಾಗಿದ್ದಾರೆ? ಆದಾಗ್ಯೂ ನೀವು ಚೀಗಾಂಗನ್ನು ಯಾವಾಗಲೂ ಅಭ್ಯಾಸ ಮಾಡಬಹುದು. ನಿಮ್ಮ ರೋಗಗಳು ದೂರವಾಗುವುದಿಲ್ಲವೇ? ವ್ಯಾಯಾಮದ ದೃಷ್ಟಿಯಿಂದ ಕೆಲವರು ಈ ಕೆಟ್ಟ ಯೋಚನೆಗಳನ್ನು ಹೊಂದಿರುವುದಿಲ್ಲ. ಅಂತಹವರು ಅಸಾಮಾನ್ಯ ಸಾಮರ್ಥ್ಯಗಳ ಸಂಬಂಧದಿಂದ ಚೀಗಾಂಗನ್ನು ಅಭ್ಯಸಿಸುತ್ತಾರೆ. ಅದು ಅಥವಾ ಇದಕ್ಕಾಗಿ ಹಿಂಬಾಲಿಸಿ ಹೋಗುವುದು, ಭಿನ್ನ ಮನಸ್ಥಿತಿಗಳು ಮತ್ತು ಒಂದು ವಿಧದ ಬಲಿಷ್ಠ ಬಯಕೆಗಳು. ನಿಶ್ಚಿತವಾಗಿ, ಅವರು ಈಗಾಗಲೇ ಕೆಡುಕಿನ ಅಭ್ಯಾಸವನ್ನು ತಮಗೆ ಅರಿವಿಲ್ಲದಂತೆಯೇ ಅಭ್ಯಸಿಸಿದ್ದಾರೆ. ನೀವು ಇದನ್ನು ಈ ವ್ಯಕ್ತಿಗಳಿಗೆ ಇದು ಕೆಡುಕಿನ ಮಾರ್ಗವೆಂದು ಹೇಳಿದರೆ, ಅವನು ಅಥವಾ ಅವಳು ಅಸಂತೋಷಗೊಳ್ಳುತ್ತಾರೆ. "ಪ್ರಸಿದ್ಧ ಚೀಗಾಂಗ್ ಗುರುಗಳಿಂದ ನಾನು ಬೋಧಿಸಿಕೊಂಡಿದ್ದೇನೆ" ಎನ್ನುತ್ತಾರೆ. ಆದರೆ ಆ ಪ್ರಸಿದ್ಧ ಚೀಗಾಂಗ್ ಗುರು ಒಳ್ಳೆಯದನ್ನು ಗೌರವಿಸಲು ಹೇಳುತ್ತಾರೆ. ನೀವು ಅದನ್ನು ಮಾಡಿದ್ದೀರಾ? ಚೀಗಾಂಗ್ ಅಭ್ಯಾಸದ ಅವಧಿಯಲ್ಲಿ ನೀವು ಹೊರಬರಬಹುದೆಂದು ಹೇಗೆ ಹೇಳುತ್ತೀರಿ? ಇದುವೇ ಸಮಸ್ಯೆ ಮತ್ತು ಇದು ತಿಳಿಯದೆಯೆ ಕೆಟ್ಟ ಅಭ್ಯಾಸವನ್ನು ಮಾಡುವುದು–ಇದು ತೀರಾ ಸಾಮಾನ್ಯ.

**ಪುರುಷ ಮತ್ತು ಸ್ತ್ರೀಯರ 'ಯುಗಳ' ಅಭ್ಯಾಸ :**

ಅಭ್ಯಾಸಿಗರ ಸಮುದಾಯದಲ್ಲಿ, ಪುರುಷ ಮತ್ತು ಸ್ತ್ರೀಯರ 'ಯುಗಳ' ಸಾಧನೆಯೆಂದು ಕರೆಯಲಾಗುವ ಅಭ್ಯಾಸವಿದೆ. ಬಹುಶಃ ಇದನ್ನು ಟಿಬೇಟಿಯನ್ ತಂತ್ರದ ಸಾಧನೆಯ ಅಭ್ಯಾಸದಲ್ಲಿ ನೋಡಬಹುದು. ಬೌದ್ಧ ಶಿಲ್ಪಗಳಲ್ಲಿ ಅಥವಾ ವ್ಯಕ್ತಿ ಚಿತ್ರಗಳಲ್ಲಿ, ಅಭ್ಯಾಸದ ಅವಧಿಯಲ್ಲಿ ಪುರುಷ ಚಿತ್ರವು ಹೆಣ್ಣಿನ ದೇಹವನ್ನು ಹಿಡಿದುಕೊಂಡಿರುತ್ತದೆ. ಪುರುಷನ ಚಿತ್ರವು ಕೆಲವೊಮ್ಮೆ ಬುದ್ಧನಂತೆ ಕಾಣುತ್ತದೆ. ಮತ್ತು ಅವನು ಬೆತ್ತಲೆ ಹೆಣ್ಣನ್ನು ಹಿಡಿದುಕೊಂಡಿರುತ್ತಾನೆ. ಕೆಲವು ಗೋವಿನ ತಲೆ ಮತ್ತು

ಕುದುರೆಮುಖವುಳ್ಳ ವಜ್ರದ ಹೆಣ್ಣನ್ನು ಹಿಡಿದುಕೊಂಡಿರುತ್ತಾನೆ. ಕೆಲವು ಗೋವಿನ ತಲೆ ಮತ್ತು ಕುದುರೆಮುಖವುಳ್ಳ ವಜ್ರದ ಪಾತ್ರವಾಗಿ ರೂಪಾಂತರವಾಗಿ, ಬೆತ್ತಲೆಯಾಗಿರುವ ಹೆಣ್ಣಿನ ದೇಹವನ್ನು ಹೊಂದಿರುತ್ತವೆ. ಇದು ಹೀಗೇಕೆ? ನಾನು ಮೊದಲು ಇದನ್ನು ಎಲ್ಲರಿಗೂ ವಿವರಿಸುತ್ತೇನೆ. ನಮ್ಮ ಗ್ರಹದಲ್ಲಿ ಕನ್‌ಫ್ಯೂಶಿಯಸ್ ತತ್ವದಿಂದ ಪ್ರಭಾವಿತವಾಗಿರುವುದು ಕೇವಲ ಚೈನಾ ಮಾತ್ರವಲ್ಲ. ಕೆಲವು ಶತಮಾನಗಳ ಹಿಂದೆ ನಮ್ಮ ಸಮಸ್ತ ಜನಾಂಗವೂ ಸಮಾನ ನೈತಿಕ ಆದರ್ಶಗಳನ್ನು ಹೊಂದಿದೆ. ಆದ್ದರಿಂದ ಈ ಅಭ್ಯಾಸವು ವಾಸ್ತವವಾಗಿ ಈ ನಮ್ಮ ಗ್ರಹದಿಂದ ಬಂದಿದ್ದಲ್ಲ. ಇದು ಇನ್ನೊಂದು ಗ್ರಹದಿಂದ ಬಂದಿದೆ. ಆದರೆ ಈ ವಿಧಾನ ನಿಶ್ಚಯವಾಗಿಯೂ ಯಾವೊಬ್ಬನಿಗೂ ಅಭ್ಯಾಸವನ್ನು ಸಾಧ್ಯವಾಗಿಸಿದೆ. ಈ ಅಭ್ಯಾಸವನ್ನು ಯಾವಾಗ ಪರಿಚಯಿಸಲಾಯಿತೋ ಆ ಕಾಲಘಟ್ಟದ ಚೀನಾದಲ್ಲಿ ಗಂಡು ಮತ್ತು ಹೆಣ್ಣಿನ ಯುಗಳ ಅಭ್ಯಾಸ ಪದ್ಧತಿ ಮತ್ತು ಗುಪ್ತ ಪದ್ಧತಿಯದ್ದರಿಂದ ಕರಾರುವಕ್ಕಾಗಿ ಇದು ಒಪ್ಪಿತವಾಗಲಿಲ್ಲ. ಆದ್ದರಿಂದ ಹಾನ್ ಪ್ರಾಂತ್ಯದ ಹುಯಿಚಾಂಗ್ ಚಕ್ರಾಧಿಪತ್ಯದ ಅವಧಿಯಲ್ಲಿ ಟಾಂಗ್ ಸಾಮ್ರಾಜ್ಯದಲ್ಲಿ ಇದು ನಿಷೇಷಧಿಸಲ್ಪಟ್ಟಿತು. ಹಾನ್ ಪ್ರಾಂತ್ಯದಲ್ಲಿ ಇದರ ಬೋಧನೆಯನ್ನು ನಿಷೇಧಿಸಲಾಯಿತು. ಮತ್ತು ಈ ಅವಧಿಯನ್ನು ಟಾಂಗ್ ತಂತ್ರದ ಅವಧಿ ಎಂದು ಕರೆಯಲಾಗಿದೆ. ಆದರೂ ಟಿಬೇಟ್‌ನ ವಿಶೇಷವಾದ ಪ್ರಾಂತ್ಯದ ಪೂರ್ವವಾದ ಪರಿಸರದವರಲ್ಲಿ ಇದು ವಿಸ್ತರಿಸಿತು. ಅವರು ಇದನ್ನು ಈ ಮಾರ್ಗದಲ್ಲೇಕೆ ಅಭ್ಯಸಿಸುತ್ತಾರೆ? ಗಂಡು ಹೆಣ್ಣಿನ ಯುಗಳ ಅಭ್ಯಾಸವು ಯಿನ್ ಮತ್ತು ಯಾಂಗ್ (ಪುರುಷ-ಪ್ರಕೃತಿ: ಗಂಡು-ಹೆಣ್ಣು)ನಿಂದ ಪರಸ್ಪರ ಶೇಖರಿಸುವುದು, ಪರಸ್ಪರ ಅಭ್ಯಾಸವನ್ನು ಮಾಡುವುದು. ಯಿನ್-ಯಾಂಗ್‌ಗಳ ಹೊಂದಾಣಿಕೆಯನ್ನು ಕಾರ್ಯಗತಗೊಳಿಸುವ ಸಲುವಾಗಿ.

ಈಗಾಗಲೇ ತಿಳಿದಿರುವಂತೆ ಬೌದ್ಧತತ್ವ ಅಥವಾ ತಾವೋ ತತ್ವಗಳ ಪ್ರಕಾರ, ನಿರ್ಧಿಷ್ಠವಾಗಿ ತಾವೋ ತತ್ವದ ಪ್ರಕಾರ ಮಾನವ ದೇಹವು ಸ್ವಾಭಾವಿಕವಾಗಿ ಯಿನ್ ಮತ್ತು ಯಾಂಗ್‌ಗಳನ್ನು ಹೊಂದಿದೆ. ಏಕೆಂದರೆ, ಇದು ಅಭ್ಯಾಸದ ಮೂಲಕ ಅಸಾಮಾನ್ಯ ಸಾಮರ್ಥ್ಯಗಳ ಬಗೆಗಳನ್ನು ಮತ್ತು ಜೀವಂತ ದೇಹಗಳನ್ನು ಅಮರವಾಗಿರುವ ಶಿಶುವಿನಂತೆ, ಎಳೆಗೂಸು, ಇತ್ಯಾದಿಗಳಾಗಿ ಅಭಿವೃದ್ಧಿಪಡಿಸಬಹುದು. ಯಿನ್ ಮತ್ತು ಯಾಂಗ್ ಅಸ್ಥಿತ್ವದಲ್ಲಿರುವುದರಿಂದ ಒಬ್ಬನು ಅನೇಕ ಜೀವಿಗಳನ್ನು ಸಾಧನೆಯ ಅಭ್ಯಾಸದ ಮೂಲಕ ಅಭಿವೃದ್ಧಿಪಡಿಸಬಹುದು: ಪುರುಷ ಅಥವಾ ಸ್ತ್ರೀ ಯಾವುದಾದರೂ ಹೊಟ್ಟೆಯ ಕೆಳಭಾಗದಲ್ಲಿ ಸಾಧನೆಯ ಅಭ್ಯಾಸ ಬೆಳೆಯುತ್ತದೆ. ಇಬ್ಬರಲ್ಲೂ ಒಂದೇ ಈವೊಂದು ತತ್ವ ನಿಜವಾಗಿಯೂ ಸಂವೇದನೆಯನ್ನುಂಟು ಮಾಡುತ್ತದೆ. ತಾವೋ ತತ್ವದಲ್ಲಿ ಸಾಮಾನ್ಯವಾಗಿ ದೇಹದ ಮೇಲ್ಭಾಗವನ್ನು ಯಾಂಗ್ ಎಂದು ಮತ್ತು ದೇಹದ ಕೆಳಭಾಗವನ್ನು ಯಿನ್ ಎಂದು ಪರಿಗಣಿಸಲಾಗುತ್ತದೆ. ಕೆಲವರು ದೇಹದ ಹಿಂಭಾಗವನ್ನು ಯಾಂಗ್ ಎಂದು ಮತ್ತು ದೇಹದ ಹಿಂಭಾಗವನ್ನು ಯಿನ್ ಎಂದು ಪರಿಗಣಿಸುತ್ತಾರೆ. ಇನ್ನಿತರು ದೇಹದ ಎಡಭಾಗವನ್ನು ಯಾಂಗ್ ಎಂದು ಮತ್ತು ದೇಹದ ಬಲಭಾಗವನ್ನು ಯಿನ್ ಎಂದು ಪರಿಗಣಿಸುತ್ತಾರೆ. ಚೀನಾದಲ್ಲಿ ದೇಹದ ಎಡಭಾಗವನ್ನು ಯಾಂಗ್ ಎಂದು ಮತ್ತು ದೇಹದ ಬಲಭಾಗವನ್ನು ಯಿನ್ ಎಂದು ಪರಿಗಣಿಸುತ್ತಾರೆ. ಚೀನಾದಲ್ಲಿ ನಾವು ಒಂದು ಹೇಳಿಕೆಯನ್ನು ಹೊಂದಿದ್ದೇವೆ. ಅದೇನೆಂದರೆ, ದೇಹದ ಎಡಭಾಗವು ಪುರುಷ ಮತ್ತು ಬಲಭಾಗವು ಸ್ತ್ರೀ, ಮತ್ತು ಇದು ಸೂಕ್ಷ್ಮ ಕಾರಣಗಳಿಂದಲೇ ಉದ್ಭವಿಸಿದೆ. ಏಕೆಂದರೆ ಮಾನವ ದೇಹವು ಸ್ವಾಭಾವಿಕವಾಗಿ ಯಿನ್ ಮತ್ತು ಯಾಂಗ್‌ಗಳನ್ನು ಹೊಂದಿದೆ, ಜೊತೆಗೆ ಯಿನ್ ಮತ್ತು ಯಾಂಗ್‌ಗಳ ನಡುವೆ ಹೊಂದಾಣಿಕೆಯನ್ನು ಸಾಧಿಸುತ್ತದೆ: ಇದು ಅನೇಕ ಜೀವಿಗಳಿಗೆ ಜೀವ ನೀಡಬಲ್ಲದು.

ಇದು ಒಂದು ವಿಷಯವನ್ನು ಸ್ಪಷ್ಟೀಕರಿಸುತ್ತದೆ: ಪುರುಷ ಮತ್ತು ಸ್ತ್ರೀಯ ಯುಗಳ ಅಭ್ಯಾಸವನ್ನು ಅನ್ವಯಿಸಿದೆ. ನಾವು ಸಾಧನೆಯಲ್ಲಿ ಉನ್ನತ ಹಂತವನ್ನು ತಲುಪಬಹುದು. ಈ ಯುಗಳ ಸಾಧನೆಯ ವಿಧಾನಕ್ಕೆ ಸ್ಥಳ ಕೊಡುವುದರಿಂದ, ಒಂದು ವೇಳೆ ಇದು ಅನುಚಿತವಾಗಿ ಬಳಕೆಯಾದರೆ, ಅಂಥವರು ಪೈಶಾಚಿಕ ಅಡ್ಡಬರುವಿಕೆಗೆ ಈಡಾಗುತ್ತಾರೆ. ಮತ್ತು ಇದು ಪಾಪಕರವಾದ ಅಭ್ಯಾಸವಾಗುತ್ತದೆ. ತಂತ್ರದಲ್ಲಿ ಒಂದು ವೇಳೆ ಗಂಡು ಮತ್ತು ಹೆಣ್ಣಿನ ಯುಗಳ ಸಾಧನೆಯು ಉನ್ನತ ಹಂತದಲ್ಲಿ ಬಳಕೆಯಾದಾಗ, ಸಂನ್ಯಾಸಿ ಅಥವಾ ಬೌದ್ಧ ಸಂನ್ಯಾಸಿಯು (ಲಾವಣ) ಅತ್ಯುನ್ನತ ಸಾದನೆಯ ಹಂತವನ್ನು ತಲುಪಿರಲೇಬೇಕು. ಆ ಸಂಧರ್ಭದಲ್ಲಿ, ಗುರು ಇಂಥವರಿಗೆ ಈ ಮಾದರಿಯ ಸಾಧನೆಯ

ಅಭ್ಯಾಸವನ್ನು ಮರ್ಗದರ್ಶನ ಮಾಡಬಹುದು. ಏಕೆಂದರೆ, ಈ ವ್ಯಕ್ತಿಗಳ ಶಿನ್‌ಶಿಂಗ್ (ಹೃದಯದ ಪ್ರಕೃತಿ: ನೈತಿಕ ಗುಣ)ನ ಹಂತವು ಉನ್ನತವಾಗಿರುತ್ತದೆ. ಅವನು ತನ್ನನ್ನು ತಾನೇ ಪಾಪಿಯಾಗದಂತೆ ನಿಯಂತ್ರಿಸಿಕೊಳ್ಳಬಲ್ಲ. ಆದರೆ ಶಿನ್‌ಶಿಂಗ್‌ನ ಹಂತವು ಕೆಳಗಿರುವವನು ನಿರಂಕುಶವಾಗಿ ಈ ಬಗೆಯ ಮಾರ್ಗವನ್ನು ಹಿಡಿಯಬಾರದು. ಇಲ್ಲವಾದಲ್ಲಿ ಅಂಥ ವ್ಯಕ್ತಿಯು ಪಾಪಕರವಾದ ಅಭ್ಯಾಸಕ್ಕೆ ಬದ್ಧನಾಗುತ್ತಾನೆ. ಏಕೆಂದರೆ ಶಿನ್‌ಶಿಂಗ್‌ನ ಸೀಮಿತ ಹಂತದಿಂದಾಗಿ ಅಂಥವನು ಸಾಮಾನ್ಯರಂತೆ ಬಯಕೆಗಳು ಹಾಗೂ ವಿಷಯಾಭಿಲಾಷೆಗಳನ್ನು ತ್ಯಜಿಸಲಾರ, ಅದಕ್ಕೆ ಕಾರಣ ಅವನ ಶಿನ್‌ಶಿಂಗ್‌ನ ಹಂತ ಮತ್ತು ಇದನ್ನು ಬಳಸಿದರೆ ಕೆಡುಕಿಗೆ ಬದ್ಧವಾಗುತ್ತದೆ. ಆದ್ದರಿಂದ ನಾನು ಹೇಳಿದ್ದೇನೆ. ಯಾವಾಗ ಸಾಮಾನ್ಯವಾಗಿ ಈಕೆಳಹಂತದಿಂದ ಉತ್ತೇಜಿಸಲ್ಪಟ್ಟರೆ, ಇದರ ಬೋಧನೆಯು ಒಂದು ಪಾಪಕರ ಅಭ್ಯಾಸವಾಗುತ್ತದೆ.

ಇತ್ತೀಚಿನ ವರ್ಷಗಳಲ್ಲಿ, ಕೆಲವು ಚೀಗಾಂಗ್ ಗುರುಗಳು ಗಂಡು ಮತ್ತು ಹೆಣ್ಣಿನ ಯುಗಳ ಅಭ್ಯಾಸವನ್ನು ಬೋಧಿಸತೊಡಗಿದ್ದಾರೆ. ಇದರಲ್ಲಿ ಹೆಚ್ಚೇನಿದೆ? ಸ್ತ್ರೀ ಮತ್ತು ಪುರುಷರ ಯುಗಳ ಸಾಧನೆಯೂ ಕೂಡ ತಾವೋ ತತ್ವದ ಅಭ್ಯಾಸದಲ್ಲಿ ಕಾಣಿಸಿಕೊಂಡಿದೆ. ಇದು ಈಗ ಆರಂಭವಾಗಿಲ್ಲ. ಆದರೆ ಟಾಂಗ್ ಸಾಮ್ರಾಜ್ಯದಲ್ಲಿ ಆರಂಭವಾಗಿದೆ. ಪುರುಷ ಮತ್ತು ಸ್ತ್ರೀಯರ ಯುಗಳ ಸಾಧನೆಯು ತಾವೋ ತತ್ವದಲ್ಲಿ ಹೇಗೆ ಪ್ರಚಲಿತವಾಯಿತು? ತಾವೋ ಶಾಲೆಯ ಟೈಜಿ ಸಿದ್ಧಾಂತದ ಪ್ರಕಾರ, ಒಬ್ಬನ ದೇಹವು ಯಿನ್ ಯಾಂಗ್‌ನ್ನು ಒಳಗೊಂಡಿರುವ ಒಂದು ಚಿಕ್ಕ ವಿಶ್ವ. ಎಲ್ಲ ವಾಸ್ತವವಾದ ಮಹಾ ಪ್ರಾಮಾಣಿಕ ಬೋಧನೆಗಳು ಬಹುದೂರದ ಕಾಲದಿಂದ ವರ್ಗಾಯಿಸಲ್ಪಟ್ಟಿವೆ. ಯಾವುದಾದರೂ ಸಾಮಾನ್ಯ ಬದಲಾವಣೆಗಳು ಅಥವಾ ಸಾಮಾನ್ಯ ಅನುಬಂಧಗಳು ನಿರ್ಧಿಷ್ಟ ಶಾಲೆಗಳ ಅಭ್ಯಾಸಗಳಿಗೆ ಅಂಟಿಕೊಂಡಿವೆ. ಮತ್ತು ನಿರ್ದಿಷ್ಟವಾದ ಸಾಧನೆಯ ಅಭ್ಯಾಸವನ್ನು ಸಾಧಿಸಲು ಅಸಾಧ್ಯವಾಗಿವೆ. ಆದ್ದರಿಂದ ಒಂದು ವೇಳೆ ನಿಮ್ಮ ಅಭ್ಯಾಸವನ್ನು ಸಾಧಿಸಲು ಅಸಾಧ್ಯವಾಗಿವೆ. ಆದ್ದರಿಂದ ಒಂದು ವೇಳೆ ನಿಮ್ಮ ಅಭ್ಯಾಸವು ಪುರುಷ ಮತ್ತು ಸ್ತ್ರೀಯರು ಯುಗಳ ಅಭ್ಯಾಸವನ್ನು ಹೊಂದಿಲ್ಲದಿದ್ದರೆ, ನೀವು ಸಾಧನೆಯಲ್ಲಿ ಅದನ್ನು ಮಾಡಬಾರದು. ಇಲ್ಲವಾದರೆ, ನೀವು ತಪ್ಪಾದ ದಾರಿಯಲ್ಲಿ ಕ್ರಮಿಸುತ್ತೀರಿ ಮತ್ತು ತೊಂದರೆಗಳಲ್ಲಿ ಸಿಲುಕುತ್ತೀರಿ. ನಿರ್ದಿಷ್ಟವಾಗಿ ಫಾಲೂನ್ ದಫಾ (ಸಾಧನಾ ಹಾದಿ) ಶಾಲೆಯಲ್ಲಿ (ತತ್ವದಲ್ಲಿ) ಪುರುಷ ಮತ್ತು ಸ್ತ್ರೀಯರ ಯುಗಳ ಸಾಧನೆಯಿಲ್ಲ, ಮತ್ತು ಇವೆರಡರಲ್ಲೊಂದು ನಮಗೆ ಬೇಕೆ? ಅದು ಹೇಗೆ ಸಮಸ್ಯಾತ್ಮಕ ಎಂಬುದನ್ನು ನೋಡೋಣ.

## ಮನಸ್ಸು ಮತ್ತು ದೇಹದ ಸಾಧನೆ

ದೇಹ ಮತ್ತು ಮನಸ್ಸುಗಳ ಸಾಧನೆಯನ್ನು ಕುರಿತು ಈಗಾಗಲೇ ನಿಮ್ಮೆಲ್ಲರಿಗೆ ವಿವರಿಸಲಾಗಿದೆ. ದೇಹ ಮತ್ತು ಮನಸ್ಸುಗಳ ಸಾಧನೆಯು ಏಕಕಾಲಕ್ಕೆ, ಅಭ್ಯಾಸಿಗರ ಶಿನ್‌ಶಿಂಗ್ ಹಾಗೂ ದೇಹವೂ ಸಾಧನೆಗೊಳಗಾಗುವುದನ್ನು ಉಲ್ಲೇಖಿಸುತ್ತದೆ. ಬೇರೆ ಶಬ್ದಗಳಲ್ಲಿ ಬಹುಸಂಖ್ಯಾತರ ಸುಖವಾಗಿ ರೂಪಾಂತರಗೊಳ್ಳುತ್ತದೆ. ಈ ರೂಪಾಂತರದ ಪ್ರಕ್ರಿಯೆಯಲ್ಲಿ ಮಾನವ ಜೀವಕೋಶಗಳು ಉನ್ನತ ಶಕ್ತಿಯ ಅಂಶದಲ್ಲಿ ಹಂತಹಂತವಾಗಿ ಅದಲುಬದಲಾಗುತ್ತದೆ. ಮತ್ತು ಆಯಸ್ಸು ಕಡಿತಗೊಳ್ಳುತ್ತದೆ. ಒಬ್ಬರ ದೇಹವು ಅನುಕ್ರಮವಾಗಿ ಯೌವನಾವಸ್ಥೆಗೆ ತಿರುಗಿ ಮತ್ತೆ ಅದರ ಅನುಭವ ರೂಪಾಂತರವಾಗುತ್ತಿರುವರೆಗೂ, ಹಾಗೂ ಕೊನೆಗೆ ಇದು ಉನ್ನತ ಶಕ್ತಿಯ ಅಂಶದಿಂದ ಸ್ಥಾನ ಪಲ್ಲಟಗೊಳ್ಳುವಂತೆ ಕಾಣುತ್ತದೆ. ಇದರಿಂದ ಈ ವ್ಯಕ್ತಿಯ ದೇಹವು ಈಗಾಗಲೇ ಇನ್ನೊಂದು ರೀತಿಯ ದೇಹವಾಗಿ ಪರಿವರ್ತನೆಗೊಂಸಿರುತ್ತದೆ. ಆ ದೇಹವು ನಾನು ಈ ಹಿಂದೆ ಹೇಳಿದಂತೆ, ಪಂಚಭೂತಗಳಿಂದ ಅತೀತವಾಗುತ್ತದೆ. ಅಂದಿನಿಂದ ಇದು ಪಂಚಭೂತಗಳ ಮಿತಿಯನ್ನು ಮೀರುತ್ತದೆ. ಇಂಥವ್ಯಕ್ತಿಯ ದೇಹವು ಮುಂದೆ ಭ್ರಷ್ಟವಾಗದು.

ದೇವಾಲಯಗಳಲ್ಲಿನ ಸಾದನೆಯ ಅಭ್ಯಾಸವು ಕೇವಲ ಮನಸ್ಸಿನ ಸಾಧನೆಗೆ ಸಂಬಂಧಿಸಿದೆ, ಹಾಗಾಗಿ ದೈಹಿಕ ವ್ಯಾಯಾಮ ಅಥವಾ ದೈಹಿಕ ಸಾಧನೆಯ ಬಗ್ಗೆ ಬೋಧಿಸುವುದಿಲ್ಲ. ಇದು ಶಾಖ್ಯಮುನಿ ಬೋಧಿಸಿದ ಪದ್ಧತಿಯಾದ ನಿರ್ವಾಣವನ್ನು ಬಯಸುತ್ತದೆ. ನಿಜವಾಗಿಯೂ ಶಾಖ್ಯಮುನಿ ಸ್ವತಃ ಉನ್ನತ ಹಂತದ ಧರ್ಮವನ್ನು ಹೊಂದಿದ್ದ ಮತ್ತು ಅವನು ಸಂಪೂರ್ಣವಾಗಿ ತನ್ನ

ಬಹುಸಂಖ್ಯಾತರ ಸುಖವನ್ನು ಉನ್ನತ ಹಂತದ ಶಕ್ತಿಯನ್ನಾಗಿ ಪರಿವರ್ತಿಸಬಲ್ಲವನಾಗಿದ್ದ ಮತ್ತು ಅದು ಅವನನ್ನು ಅದರಿಂದ ದೂರಕ್ಕೆ ಕೊಂಡೊಯ್ಯಿತು. ಕ್ರಮಾನುಗತವಾಗಿ ಈ ಅಭ್ಯಾಸದಿಂದ ಬಿಡುಗಡೆ ಹೊಂದಲು ಅವನು ನಿರ್ವಾಣದ ಮಾರ್ಗವನ್ನು ಹಿಡಿದ. ಅವನು ಈ ಮಾರ್ಗವನ್ನೇಕೆ ಬೋಧಿಸಿದ? ಅವನು ಮಾಡಿದಂತೆ ಜನರೂ ಬಿಡಬೇಕೆಂದು, ಅವನಿಂದ ಉನ್ನತ ಹಂತದಲ್ಲಿ, ಸಂಬಂಧಗಳು ಮತ್ತು ಎಲ್ಲವುಗಳೂ ಅಂತಿಮವಾಗಿ ಅವರ ದೇಹಗಳನ್ನು: ಎಲ್ಲ ಬಗೆಯ ಸಂಬಂಧಗಳನ್ನು ತ್ಯಜಿಸಲಾಯಿತು. ಇದೇ ಕ್ರಮದಲ್ಲಿ ಜನರೂ ಎಷ್ಟು ಸಾಧ್ಯವೋ ಅಷ್ಟನ್ನು ಸಾಧಿಸಬೇಕು. ಅವನು ನಿರ್ವಾಣದ ಮಾರ್ಗವನ್ನು ಹಿಡಿದ. ಆನಂತರ ಎಲ್ಲ ಬೌದ್ಧ ಸನ್ಯಾಸಿಯು ದೇಹವನ್ನು ತ್ಯಜಿಸಿದಾಗ, ಅವನ ಆದಿಮ ಚೈತನ್ಯವು ಗಾಂಗ್‌ನ ಜೊತೆ ವೃದ್ಧಿಸುವುದು.

ದೇವಾಲಯಗಳಲ್ಲಿನ ಸಧನೆಯ ಅಭ್ಯಾಸವು ಕೇವಲ ಮನಸ್ಸಿನ ಸಾಧನೆಗೆ ಸಂಬಂಧಿಸಿದೆ. ಹಾಗಾಗಿ ದೈಹಿಕ ವ್ಯಾಯಾಮ ಅಥವಾ ದೈಹಿಕ ಸಾಧನೆಯ ಬಗ್ಗೆ ಬೋಧಿಸುವುದಿಲ್ಲ. ಇದು ಶಾಕ್ಯಮುನಿ ಬೋಧಿಸಿದ ಪದ್ಧತಿಯಾದ ನಿರ್ವಾಣವನ್ನು ಬಯಸುತ್ತದೆ. ನಿಜವಾಗಿಯೂ, ಶಾಕ್ಯಮುನಿ ಸ್ವತಃ ಉನ್ನತ ಹಂತದ ಧರ್ಮವನ್ನು ಹೊಂದಿದ್ದ, ಮತ್ತು ಅವನು ಸಂಪೂರ್ಣವಾಗಿ ತನ್ನ ಬಹುಸಂಖ್ಯಾತರ ಸುಖವನ್ನು ಉನ್ನತ ಹಂತದ ಶಕ್ತಿಯನ್ನಾಗಿ ಪರಿವರ್ತಿಸಬಲ್ಲವನಾಗಿದ್ದ ಮತ್ತು ಅದು ಅವನನ್ನು ಅದರಿಂದ ದೂರಕ್ಕೆ ಕೊಂಡೊಯ್ಯಿತು. ಕ್ರಮಾನುಗತವಾಗಿ ಈ ಅಭ್ಯಾಸದಿಂದ ಬಿಡುಗಡೆ ಹೊಂದಲು ಅವನು ನಿರ್ವಾಣದ ಮಾರ್ಗವನ್ನು ಹಿಡಿದ. ಅವನು ಈ ಮಾರ್ಗವನ್ನೇಕೆ ಬೋಧಿಸಿದ? ಅವನು ಮಾಡಿದಂತೆ ಜನರೂ ಬಿಡಬೇಕೆಂದು ಅವನಿಂದ ಉನ್ನತ ಹಂತದಲ್ಲಿ, ಸಂಬಂಧಗಳು ಮತ್ತು ಎಲ್ಲವುಗಳೂ ಅಂತಿಮವಾಗಿ ಅವರ ದೇಹಗಳನ್ನು; ಎಲ್ಲ ಬಗೆಯ ಸಂಬಂಧಗಳನ್ನು ತ್ಯಜಿಸಲಾಯಿತು. ಇದೇ ಕ್ರಮದಲ್ಲಿ ಜನರೂ ಎಷ್ಟು ಸಾಧ್ಯವೋ ಅಷ್ಟನ್ನು ಸಾಧಿಸಬೇಕು. ಅವನು ನಿರ್ವಾಣದ ಮಾರ್ಗವನ್ನು ಹಿಡಿದ. ಆನಂತರ, ಎಲ್ಲ ಬೌದ್ಧ ಸನ್ಯಾಸಿಗಳೂ ಇತಿಹಾಸದಾದ್ಯಂತ ಈ ಮಾರ್ಗವನ್ನು ಹಿಡಿದಿದ್ದಾರೆ. ನಿರ್ವಾಣವೆಂದರೆ, ಬೌದ್ಧ ಸನ್ಯಾಸಿಯು ದೇಹವನ್ನು ತ್ಯಜಿಸಿದಾಗ, ಅವನ ಆದಿಮ ಚೈತನ್ಯವು ಗಾಂಗ್‌ನ ಜೊತೆ ವೃದ್ಧಿಸುವುದು.

ತಾವೋ ತತ್ವವು ದೈಹಿಕ ಸಾಧನೆಗೆ ಪ್ರಾಧಾನ್ಯತೆ ನೀಡುತ್ತದೆ. ಏಕೆಂದರೆ ಇದು ಅನುಯಾಯಿಗಳನ್ನು ಆಯ್ದುಕೊಳ್ಳುತ್ತದೆ ಮತ್ತು ಎಲ್ಲ ಜೀವಿಗಳಿಗೂ ಆತ್ಮೋದ್ಧಾರಕ್ಕಾಗಿ ಕರೆ ನೀಡುವುದಿಲ್ಲ. ಇದು ಕೆಲವೇ ಅತ್ಯುತ್ತಮ ವಿದ್ಯಾರ್ಥಿಗಳನ್ನು ಹೊಂದಿದೆ. ಆದ್ದರಿಂದ ಜೀವನದ ಸಾಧನೆಯನ್ನು ಕುರಿತು ಕೆಲವು ಅಂಶದ ತಂತ್ರಗಳನ್ನು ಬೋಧಿಸುತ್ತದೆ. ಇದುವರೆಗೂ ಈ ವಿಶಿಷ್ಠವಾದ ಬೌದ್ಧತತ್ವದ ಸಾಧನೆಯ ಅಭ್ಯಾಸದಲ್ಲಿ ಹಾಗೂ ನಿರ್ದಿಷ್ಟವಾಗಿ ಬೌದ್ಧತತ್ವದಲ್ಲಿ ಇವುಗಳನ್ನು ಬೋಧಿಸಲಾಗಿಲ್ಲ. ಈ ಎಲ್ಲ ಅಭ್ಯಾಸಗಳನ್ನು ಬೌದ್ಧ ಶಾಲೆಗಳಲ್ಲಿ ಬೋಧಿಸಲಾಗಿಲ್ಲ. ಅನೇಕ ಬೌದ್ಧತತ್ವದ ಉನ್ನತ ಹಂತದ ಅಭ್ಯಾಸಗಳಲ್ಲಿ ಬೋಧಿಸಲಾಗಿದೆ. ನಮ್ಮ ಶಾಲೆಯ ಈ ಅಭ್ಯಾಸವನ್ನು ಬೋಧಿಸಲಾಗುತ್ತದೆ. ನಮ್ಮ ಫಾಲೂನ್ ದಫಾ (ಸಾಧನೆಯ ಹಾದಿ) ಬಹುಸಂಖ್ಯಾತರ ಸುಖ ಹಾಗೂ ಅಮರತ್ವದ ಶೈಶವಗಳನ್ನು ಬಯಸುತ್ತದೆ. ಇವೆರಡೂ ಭಿನ್ನವಾದವುಗಳು ಅಮರತ್ವದ ಶೈಶವೂ ಕೂಡ ದೇಹದಲ್ಲಿರುವ ಉನ್ನತ ಶಕ್ತಿಯ ಅಂಶ. ಆದರೆ ಇದನ್ನು ಸಾಮಾನ್ಯವಾಗಿ ನಮ್ಮ ದೇಹದ ಆಯಾಮಗಳಲ್ಲಿ ತೋರಿಸಲಾಗದು. ಕ್ರಮವಾಗಿ ಸಾಮಾನ್ಯರಲ್ಲಿ ದೀರ್ಘಾವಧಿಯಲ್ಲಿ ಕಾಣಿಸಿಕೊಳ್ಳುತ್ತದೆ. ಬಹುಸಂಖ್ಯಾತರ ಸುಖದ ಅಪೇಕ್ಷೆ ನಮಗಿರಬೇಕು. ಆದ್ದರಿಂದ ಬಹುಸಂಖ್ಯಾತರ ಸುಖಾಪೇಕ್ಷೆಯಡಿ, ಇದರ ಜೀವಕೋಶಗಳು ಉನ್ನತ ಶಕ್ತಿಯ ಅಂಶವಾಗಿ ಮಾರ್ಪಾಡಾದಾಗಲೂ ಒಂಟಿ ಕಣದ ಸಂಯೋಗವು ಬದಲಾಗುವುದಿಲ್ಲ. ಈ ಪ್ರಕಾರ ಈ ದೇಹವು ಸಾಮಾನ್ಯ ಮನುಷ್ಯರಿಗಿಂತ ಭಿನ್ನವಾಗಿ ಕಾಣುವುದಿಲ್ಲ. ಇಲ್ಲಿಯವರೆಗೆ ಇದರಲ್ಲಿ ವ್ಯತ್ಯಾಸವಿದೆ. ಅರ್ಥಾತ್, ಈ ದೇಹವು ಭಿನ್ನ ಆಯಾಮಗಳಿಗೆ ಪ್ರವೇಶಿಸಬಹುದು.

ಯಾವ ಅಭ್ಯಾಸಿಗಳು ದೇಹ ಮತ್ತು ಮನಸ್ಸುಗಳನ್ನು ಒಂದು ಮಾಡಬಲ್ಲವೋ ಅದರಿಂದ ಅಂಥ ಅಭ್ಯಾಸಿಗರು ಯೌವನಾವಸ್ಥೆಯವರಾಗಿ ಕಾಣುತ್ತಾರೆ. ಮತ್ತು ಅವನ ನೈಜ ವಯಸ್ಸಿಗಿಂತ ಭಿನ್ನವಾಗಿ ಕಾಣುತ್ತಾನೆ. ಒಂದು ದಿನ ಒಬ್ಬರು ನನ್ನನ್ನು ಕೇಳಿದರು. "ಗುರುಗಳೆ ನನಗೆ ವಯಸ್ಸೆಷ್ಟಾಗಿದೆ

ಯೋಚಿಸಿ''? ನಿಜವಾಗಿಯೂ ಅವಳ ಪ್ರಕಾರ ಅವಳ ಮುಖ ಸುಕ್ಕು ರಹಿತವಾಗಿತ್ತು. ಸಹಜವಾದ ಕೆಂಪು ಹಾಗೂ ಬಿಳಿಯ ಮಿಶ್ರಣದಿಂದ ಪ್ರಕಾಶಿಸುತ್ತಿದ್ದಳು. ಅವಳು ಎಪ್ಪತ್ತು ವರ್ಷದವಳಂತೆ ಕಾಣುತ್ತಿರಲಿಲ್ಲ. ಹೀಗೆ ನಮ್ಮ ಫಾಲೂನ್ ದಫಾ ಅಭ್ಯಾಸಿಗರಿಗೆ ಆಗುತ್ತದೆ. ಒಂದು ಜೋಕ್ ಹೇಳುವುದಾದರೆ, ಯುವತಿಯರು ಯಾವಾಗಲೂ ಮುಖಕ್ಕೆ ಸೌಂದರ್ಯ ವರ್ಧಕಗಳನ್ನು ಬಳಸಲು ಬಯಸುತ್ತಾರೆ. ಮತ್ತು ತಮ್ಮ ಸ್ವರೂಪವನ್ನು ಬೆಳ್ಳಗೆ ಮತ್ತು ಒಳ್ಳೆಯದಾಗಿ ಮಾಡಿಕೊಳ್ಳಲು ಬಯಸುತ್ತಾರೆ. ನನ್ನ ಪ್ರಕಾರ ಒಂದು ವೇಳೆ ದೇಹ ಮತ್ತು ಮನಸ್ಸುಗಳೆರಡರ ಸಾಧನೆಯ ಅಭ್ಯಾಸದ ಹಾದಿಯನ್ನು ನಿಜವಾಗಿಯೂ ಹಿಂಬಾಲಿಸಿದರೆ, ನೀವು ಸ್ವಾಭಾವಿಕವಾಗಿ ಆ ಗುರಿಯನ್ನು ತಲುಪಬಹುದು. ಪ್ರಮಾಣ ಬದ್ಧವಾಗಿ ನೀವು ಸೌಂದರ್ಯವರ್ಧಕಗಳಿಲ್ಲದೆ ಇದನ್ನು ಸಾಧಿಸಬಹುದು. ನಾನು ಈ ಬಗೆಯ ಉದಾಹರಣೆಗಳನ್ನು ಹೆಚ್ಚಾಗಿ ನೀಡುವುದಿಲ್ಲ. ಕೆಲ ದಿನಗಳ ಹಿಂದೆ, ಭಿನ್ನ ವೃತ್ತಿಗಳಲ್ಲಿರುವ ಹಿರಿಯ ಸಹಚರರನ್ನು ನನ್ನ ಚಿಕಿತ್ಸೆಯ ಮೂಲಕ ಯುವಕರನ್ನಾಗಿಸಿದ್ದೇನೆ. ಈಚಿನ ದಿನಗಳಲ್ಲಿ ಶುಭಸಂಗತಿಗಳು ಘಟಿಸುತ್ತವೆ. ಹೋಲಿಕೆಯ ದೃಷ್ಟಿಯಿಂದ ಈ ಹಿಂದಿಗಿಂತ ಹೆಚ್ಚು ಯುವಕರು ಎಲ್ಲ ವೃತ್ತಿಗಳಲ್ಲಿದ್ದಾರೆ. ವಾಸ್ತವವಾಗಿ ನಾನು ಯುವಕನಲ್ಲ. ನಾನು ಐವತ್ತರ ಗಡಿ ತಲುಪುತ್ತಿದ್ದೇನೆ. ನನಗೆ ಈಗಾಗಲೇ ನಲವತ್ನೂರು ವರ್ಷಗಳು.

**ಪ್ರಭಾವಲಯ ( ಫಾ ಶೆನ್ )**

ಬುದ್ಧ ವಿಗ್ರಹಗಳ ಸುತ್ತ ಮೈದಾನವೇಕಿರುತ್ತದೆ? ಬಹುತೇಕ ಇದನ್ನು ವಿವರಿಸಲಾರರು. ಕೆಲವರ ಪ್ರಕಾರ "ಬೌದ್ಧ ವಿಗ್ರಹಗಳ ಕ್ಷೇತ್ರದಲ್ಲಿ ಮೈದಾನವಿರುವುದು, ಬೌದ್ಧ ಸನ್ಯಾಸಿಗಳು ಪವಿತ್ರ ಗ್ರಂಥ ಅಥವಾ ಧಾರ್ಮಿಕ ಗ್ರಂಥಗಳನ್ನು ಪಠಿಸುವ ಸಲುವಾಗಿ''. ಬೇರೆ ಶಬ್ದಗಳಲ್ಲಿ ಹೇಳುವುದಾದರೆ, ಬೌದ್ಧ ವಿಗ್ರಹದ ಮುಂದೆ ಸನ್ಯಾಸಿಗಳ ಸಾಧನೆಯ ಅಭ್ಯಾಸಕ್ಕಾಗಿ ಮೈದಾನವಿದೆ. ಸನ್ಯಾಸಿಗಳ ಹಾಗೂ ಇತರರ ಸಾಧನೆಯ ಅಭ್ಯಾಸಕ್ಕಾಗಿ ಇದು ರೂಪುಗೊಂಡಿದೆಯೇ?, ಈ ಶಕ್ತಿಯು ಚದುರಲ್ಪಟ್ಟಿದೆ. ಮತ್ತು ದಿಕ್ಸೂಚಕವಾಗಿಲ್ಲ. ಬೌದ್ಧಾಲಯದ ನೆಲ, ಮೇಲ್ಛಾವಣಿ ಮತ್ತು ಗೋಡೆಗಳೆಲ್ಲವೂ ಅದೇ ಬಗೆಯ ಕ್ಷೇತ್ರವನ್ನು ಹೊಂದಿವೆ. ಹಾಗಾದರೆ ಬೌದ್ಧ ವಿಗ್ರಹದ ಕ್ಷೇತ್ರವು ಹೇಗೆ ಶಕ್ತಿಶಾಲಿ? ಬೌದ್ಧ ವಿಗ್ರಹಗಳ ನಿರ್ದಿಷ್ಟವಾಗಿ ಜನ ವಸತಿಯಿಂದ ದೂರಾದ ಪ್ರದೇಶಗಳಲ್ಲಿ, ಗುಹೆಯಲ್ಲಿ ಅಥವಾ ಬಂಡೆಗಳ ಮೇಲೆಲ್ಲ ಸಾಮಾನ್ಯವಾಗಿ ಕ್ಷೇತ್ರವಿರುತ್ತದೆ. ಈ ಕ್ಷೇತ್ರ ಇರುವುದೇಕೆ? ಕೆಲವರು ಇದನ್ನು ಹಾಗೆ ಹೀಗೆ ಎಂದು ವಿವರಿಸುತ್ತಾರೆ. ಇಲ್ಲಿಯವರೆಗೂ ಸ್ಪಷ್ಟವಾಗಿ ವಿವರಿಸಿಲ್ಲ. ವಾಸ್ತವವಾಗಿ ಬೌದ್ಧ ವಿಗ್ರಹವು ಕ್ಷೇತ್ರವನ್ನು ಹೊಂದಿರುವುದೇಕೆಂದರೆ, ಮಹಾ ಪ್ರಕಾಶದ ವ್ಯಕ್ತಿಯ ಪ್ರಭಾವಲಯವನ್ನು ಇದು ಹೊಂದಿದೆ. ಏಕೆಂದರೆ, ಮಹಾ ಪ್ರಕಾಶದ ವ್ಯಕ್ತಿಯ ಪ್ರಭಾವಲಯ (ಮಹಾಪ್ರಭೆ) ಅಲ್ಲಿದೆ. ಅದು ಶಕ್ತಿಯನ್ನು ಹೊಂದಿದೆ.

ಒಂದು ವೇಳೆ ಶಾಕ್ಯಮುನಿ ಅಥವಾ ಬೋಧಿಸತ್ವ **ಅವಲೋಕಿತೇಶ್ವರ** ಒಂದು ವೇಳೆ ಅವರು ನಿಜವಾಗಿಯೂ ಇತಿಹಾಸದಲ್ಲಿ ಅಸ್ತಿತ್ವದಲ್ಲಿದ್ದರೆ ಅದರ ಬಗ್ಗೆ ಯೋಚಿಸಿ ಎಲ್ಲರೂ ನಾವಷ್ಟೇ ಅಲ್ಲ, ಅವರೂ ಕೂಡ ತಮ್ಮ ಸಾಧನೆಯ ಅಭ್ಯಾಸದ ಅಭ್ಯಾಸಿಗಳೇ ಆಗಿದ್ದರಲ್ಲವೇ? ಯಾವೊಬ್ಬನು ತನ್ನ ಉನ್ನತ ಹಂತದಲ್ಲಿ, ತ್ರಿಗುಣ ತತ್ವದ ಹಾದಿಯ ನಂತರದ ಅಭ್ಯಾಸದಲ್ಲಿ ನಿರತನಾಗುತ್ತಾನೋ, ಅವನು ಅಥವಾ ಅವಳು ಪ್ರಭಾವಲಯವನ್ನು ಅಭಿವೃದ್ಧಿಪಡಿಸಿಕೊಳ್ಳಬಲ್ಲರು. ಪ್ರಭಾವಲಯವು ಹೊಟ್ಟೆಯ ಕೆಳಭಾಗದಲ್ಲಿ ಹುಟ್ಟುತ್ತದೆ. ಮತ್ತು ಇದು ಉನ್ನತ ಹಂತಕ್ಕೊಯ್ಯುವ ಮಾರ್ಗ ಹಾಗೂ ಶಕ್ತಿಗಳಿಸುವ ಸಾಧನೆಯ ಅಭ್ಯಾಸ (ಗಾಂಗ್) ದಿಂದ ರೂಪುಗೊಂಡಿರುತ್ತದೆ. ಇದು ಇತರ ಆಯಾಮಗಳನ್ನು ನಿಯಂತ್ರಿಸುತ್ತದೆ. ಪ್ರಭಾವಲಯವು ಮನುಷ್ಯನ ಶಕ್ತಿಯನ್ನು ಒಳಗೊಂಡಿದೆ. ಆದರೆ ಇದರ ಬುದ್ಧಿ ಮತ್ತು ಆಲೋಚನೆಗಳು ಆ ವ್ಯಕ್ತಿಯಿಂದ ನಿಯಂತ್ರಿಸಲ್ಪಡುತ್ತದೆ. ಪ್ರಭಾವಲಯವು ತಂತಾನೇ ಸ್ವಯಂಪೂರ್ಣ, ಸ್ವತಂತ್ರ ಮತ್ತು ನೈಜವಾದ ವೈಯುಕ್ತಿಕವಾದ ಜೀವನ. ಆದ್ದರಿಂದ, ಇದು ಸ್ವತಂತ್ರವಾಗಿ ಏನನ್ನಾದರೂ ಮಾಡಬಲ್ಲರು, ಪ್ರಭಾವಲಯವು ಮಾನವರ ಪ್ರಜ್ಞೆಯು ಮಾಡಬೇಕೆಂದಿರುವುದನ್ನು ಕರಾರುವಕ್ಕಾಗಿ ಮಾಡುತ್ತದೆ. ಒಬ್ಬ ಏನನ್ನಾದರೂ ಖಚಿತವಾದ ಮಾರ್ಗದಲ್ಲಿ ಮಾಡಿದರೆ, ಅವನ ಅಥವಾ ಅವಳ ಪ್ರಭಾವಲಯದಂತೆ ಮಾಡಲಾಗುತ್ತದೆ: ಇದನ್ನು ನಾವು

---

4. **ಅವಲೋಕಿತೇಶ್ವರ** –ತನ್ನ ಸಹಾನುಭೂತಿಯಿಂದ ಪರಿಚಿತಳು, ಅತ್ಯುನ್ನತ ಹಂತದ ಬೋಧಿಸತ್ವರಲ್ಲಿ ಎರಡನೆಯವಳು.

ಪ್ರಭಾವಲಯವೆಂದು ಕರೆಯುತ್ತೇವೆ.

ನಾನು ಮಾಡಬೇಕೆಂದಿರುವುದೆಲ್ಲವನ್ನು ಪ್ರಭಾವಲಯದಿಂದ ಮಾಡಬಹುದು. ನೈಜವಾದ ಅಭ್ಯಾಸಿಗರ ದೇಹಗಳಲ್ಲಿ ಇದನ್ನು ಹೊಂದಿಸಬೇಕಾಗುತ್ತದೆ. ಏಕೆಂದರೆ ಪ್ರಭಾವಲಯವು ಸಾಮಾನ್ಯರ ದೇಹದಲ್ಲಿ ಪ್ರವಹಿಸುವುದಿಲ್ಲ. ಇದು ತಂತಾನೆ ಇತರ ಆಯಾಮಗಳನ್ನು ನಿಯಂತ್ರಿಸಬಲ್ಲದು. ಇದರ ದೇಹವು ನಿಗಧಿಯಾಗಿಲ್ಲ. ಯಾವೊಬ್ಬನೂ ಅದನ್ನು ಬದಲಾಯಿಸಲಾರ: ಅದರ ಬದಲಾಗಿ ಇದು ದೊಡ್ಡದು ಅಥವಾ ಚಿಕ್ಕದಾಗಬಲ್ಲುದು. ಕೆಲವು ವೇಳೆ ಇದು ಅದರ ಸಂಪೂರ್ಣ ತಲೆಯನ್ನು ಕಾಣಲಾಗದಷ್ಟು ತುಂಬಾ ದೊಡ್ಡದಾಗುತ್ತದೆ. ಕೆಲವು ವೇಳೆ ಇದು ತೀರಾ ಚಿಕ್ಕದು. ಅಂದೆರ ಅಣುವಿಗಿಂತ ಚಿಕ್ಕದಾಗುತ್ತದೆ.

## ಬುದ್ಧ ವಿಗ್ರಹದ ಪವಿತ್ರೀಕರಣ

ಕಾರ್ಖಾನೆಯಲ್ಲಿ ಉತ್ಪಾದಿಸಲ್ಪಟ್ಟಿರುವ ಬೌದ್ಧ ವಿಗ್ರಹವು ಕೇವಲ ಕಲೆಯ ಒಂದು ಅಂಶ. ಪವಿತ್ರೀಕರಣವೆಂದರೆ, ಬೌದ್ಧ ಮೂರ್ತಿಯಲ್ಲಿ ಪ್ರಭಾವಲಯವನ್ನು ಆಹ್ವಾನಿಸುವುದು. ನಂತರ ಅದು ಸಾಮಾನ್ಯ ಜನರಿಂದ ದೈಹಿಕವಾಗಿ ಕೈಗೆಟುಕುವ ಬೌದ್ಧಮೂರ್ತಿಯಾಗಿ ಆರಾಧಿಸಲ್ಪಡುತ್ತದೆ. ಸಾಧನೆಯ ಅಭ್ಯಾಸದಲ್ಲಿ ಯಾವ ಅಭ್ಯಾಸಿಗ ಈ ಹೃದಯ ಶ್ರೀಮಂತಿಕೆ ಉಳ್ಳವನೋ, ಅಂಥವನು ಅಥವಾ ಅಂಥವಳು ಅದರ ನಂತರದ್ದನ್ನು ಕಾಣಬಲ್ಲರು. ಹಾಗೂ ತಮ್ಮನ್ನು ರಕ್ಷಿಸಿಕೊಳ್ಳಬಲ್ಲರು. ಅದೇ ಪವಿತ್ರೀಕರಣದ ವಾಸ್ತವಾದ ಉದ್ದೇಶ. ಇದನ್ನು ಸಾಧಿಸಲು ಋಜು ಚಿಂತನೆಗಳನ್ನು ಕ್ರಮಾನುಗತವಾಗಿ ಪವಿತ್ರೀಕರಣದ ವ್ರತದಲ್ಲಿ ಅಭಿವ್ಯಕ್ತಿಸಬೇಕು. ಮಹಾಪ್ರಕಾಶದ ಉನ್ನತ ಹಂತದಲ್ಲಿರುವ ಸಹಾಯದೊಂದಿಗೆ ಇದನ್ನು ಸಾಧಿಸಬಹುದು.

ಚೈತ್ಯಾಲಯಕ್ಕೆ (ದೇವಾಲಯ) ತನ್ನ ಬೌದ್ಧ ಮೂರ್ತಿಯ ಅಗತ್ಯತೆಯಿದೆ. ಪವಿತ್ರೀಕರಣದೊಳಗೆ ಮತ್ತು ಜನರು ಹೇಳುವಂತೆ ಪವಿತ್ರೀಕರಣವಿಲ್ಲದ ಬೌದ್ಧ ಸೇವೆಯಿಂದ ಉಪಯೋಗವಿಲ್ಲ. ಇಂದು ಚೈತ್ಯಾಲಯದೊಳಗಿನ ಭಿಕ್ಷುಗಳು–ಅತ್ಯಂತ ಶ್ರೇಷ್ಟ ಗುರುಗಳಾದವರು. ಹೊರಟು ಹೋಗಿದ್ದಾರೆ. ಮಹಾಸಾಂಸ್ಕೃತಿಕ ಕ್ರಾಂತಿಯಿಂದ ಯಾವ ಕೆಲವು ಕಿರಿಯ ಭಿಕ್ಷುಗಳು ನೈಜ ಬೋಧನೆಗಳನ್ನು ಸ್ವೀಕರಿಸಲಿಲ್ಲವೊ ಅಂಥವರು ಕ್ರೈಸ್ಥ ಧರ್ಮದ ಮುಖ್ಯಸ್ಥರುಗಳಾಗುತ್ತಿದ್ದಾರೆ. ಬಹುಮುಖ್ಯವಾದ ಸಂಗತಿಗಳು ಧಾರೆಯೆರೆಯಲ್ಪಟ್ಟಿಲ್ಲ. ನೀವು ಅದರಲ್ಲೊಂದನ್ನು ಕೇಳಿದರೆ, ''ಪವಿತ್ರೀಕರಣದ ಉದ್ದೇಶವೇನು''? ಅವನು ಹೇಳುತ್ತಾನೆ. ''ಬೌದ್ಧ ಮೂರ್ತಿಯು ಪವಿತ್ರೀಕರಣದ ನಂತರವೂ ಕ್ರಿಯಾಶೀಲವಾಗಿರುತ್ತದೆ.'' ಅವನು ಇದರ ಉಪಯೋಗವನ್ನು ಸ್ಪಷ್ಟವಾಗಿ ನಿರ್ದಿಷ್ಟವಾಗಿ ವಿವರಿಸುವುದಿಲ್ಲ. ಹಾಗಾಗಿ ಅವನು ಕೇವಲ ಆಚರಣೆಯನ್ನು ಹಿಡಿದಿದ್ದಾನೆ. ಅವನು ಬೌದ್ಧ ಮೂರ್ತಿಯೊಳಗೆ ಬೌದ್ಧ ಧರ್ಮಗ್ರಂಥವನ್ನು ಪಠಿಸುತ್ತಾನೆ. ಅವನು ಇದನ್ನು ಪವಿತ್ರೀಕರಣವೆನ್ನುತ್ತಾನೆ. ಆದರೆ ಪವಿತ್ರೀಕರಣದ ಗುರಿಯನ್ನು ಸಾಧಿಸಲಾಯಿತೇ ? ಅದು ಅವನು ಹೇಗೆ ಧರ್ಮಗ್ರಂಥಗಳನ್ನು ಪಠಿಸುತ್ತಾನೆ. ಎಂಬುದರ ಮೇಲೆ ಅವಲಂಭಿತವಾಗಿದೆ. ಶಾಕ್ಯಮುನಿಯ ಪ್ರಕಾರ ಯಾವೊಬ್ಬನು ಧರ್ಮಗ್ರಂಥಗಳನ್ನು ಧಾರ್ಮಿಕ ಮನಸ್ಥಿತಿ ಮತ್ತು ಭಿನ್ನವಾದ ಏಕಾಗ್ರತೆಯಿಂದ ಸ್ತುತಿಸುತ್ತಾನೋ ಅವನು ಕ್ರಮವಾಗಿ ಸ್ವರ್ಗವನ್ನು ಸಾಧನೆಯ ಅಭ್ಯಾಸದಿಂದ ನಡುಗಿಸುತ್ತಾನೆ. ಆಗ ಮಾತ್ರ ಅಂತಹ ಮಹಾಪ್ರಕಾಶದ ವ್ಯಕ್ತಿ ಆಹ್ವಾನಿಸಲ್ಪಡುತ್ತಾನೆ. ಮತ್ತು ಆಗ ಮಾತ್ರ ಮಹಾಪ್ರಕಾಶದ ವ್ಯಕ್ತಿಯ ಪ್ರಭೆ ಆಗಮಿಸುತ್ತದೆ. ಬೌದ್ಧ ಪ್ರತಿಮೆಯ ಮೂಲಕ ಪವಿತ್ರೀಕರಣದ ಮಾರ್ಗ ಸಾಧಿತವಾಗುತ್ತದೆ.

ಧರ್ಮಗ್ರಂಥಗಳನ್ನು ಸ್ತುತಿಸುವಾಗ ಅದರ ನಂತರದ್ದನ್ನು ಕೆಲವು ಭಿಕ್ಷುಗಳು ತಮ್ಮ ಮನಸ್ಸಿನಲ್ಲಿ ಯೋಚಿಸುತ್ತಾರೆ. '' ಪವಿತ್ರೀಕರಣದ ನಂತರ ಎಷ್ಟು ಹಣ ಸಂದಾಯವಾಗಬಹುದು? ಅಥವಾ ಧರ್ಮಗ್ರಂಥಗಳನ್ನು ಸ್ತುತಿಸುವಾಗ, ಒಬ್ಬನು ಹೀಗೆ ಯೋಚಿಸುತ್ತಾನೆ. ''ಅವರು – ಇವರು ನನ್ನೊಂದಿಗೆ ಕೆಟ್ಟದಾಗಿ ವ್ಯವಹರಿಸುತ್ತಾರೆ'' ಅವರು ಕೂಡ ವೈಯುಕ್ತಿಕ ಒಳತೋಟಗಳನ್ನು ಹೊಂದಿದ್ದಾರೆ. ಈಗ ಧರ್ಮ ಮುಗಿಯುತ್ತಿರುವ ಅವಧಿ ನಾನು ಬೌದ್ಧರ್ರವನ್ನು ಇಲ್ಲಿ ಟೀಕಿಸುತ್ತಿಲ್ಲ. ಕೆಲವು ದೇವಲಯಗಳು

ಧರ್ಮ ಮುಗಿಯುತ್ತಿರುವ ಈ ಅವಧಿಯಲ್ಲಿ ಶಾಂತಿಯುತವಾಗಿಲ್ಲ. ಒಬ್ಬನ ಮನಸ್ಸು ಈ ಬಗೆಯ ಆಲೋಚನೆಗಳಿಂದ ತುಂಬಿದ್ದರೆ ಮತ್ತು ಅನಾರೋಗ್ಯಕರ ಚಿಂತನೆಗಳು ಅಭಿವ್ಯಕ್ತಿಗೊಳ್ಳುತ್ತಿರುವ ಸಂದರ್ಭದಲ್ಲಿ ಹೇಗೆ ಆ ಮಹಾಪ್ರಕಾಶದ ವ್ಯಕ್ತಿ ಬರಲು ಸಾಧ್ಯ ? ಹೇಗಾದರೂ,ಪವಿತ್ರೀಕರಣದ ಗುರಿ, ಹೇಗೆ ಆ ಮಹಾಪ್ರಕಾಶದ ವ್ಯಕ್ತಿ ಬರಲು ಸಾಧ್ಯ? ಹೇಗಾದರೂ, ಪವಿತ್ರೀಕರಣದ ಗುರಿ ಸಾಧಿತವಾಗುವುದಿಲ್ಲ. ಆದರೆ ಇದು ಪರಿಪೂರ್ಣವಾದುದಲ್ಲ. ಇನ್ನೂ ಇಲ್ಲಿ ಕೆಲವು ಒಳ್ಳೆಯ ದೇವಾಲಯಗಳಿವೆ. ಮತ್ತು ತಾವೋ ತತ್ವದ ಮತ ಪ್ರಚಾರಕರಿದ್ದಾರೆ.

ಕೈ ಸಂಪೂರ್ಣವಾಗಿ ಕಪ್ಪಾಗಿರುವ ಭಿಕ್ಷುವೊಬ್ಬನನ್ನು ಒಂದು ನಗರದಲ್ಲಿ ಕಂಡೆ ಅವನು ಬೌದ್ಧ ವಿಗ್ರಹದೊಳಗೆ ಧರ್ಮಗ್ರಂಥಗಳನ್ನು ಅಜಾಗರೂಕತೆಯಿಂದ ಇಟ್ಟು ಭದ್ರಪಡಿಸಿದ ನಂತರ ಅವನು ಕೆಲವು ಪದಗಳನ್ನು ಗುನುಗಿದ ಪವಿತ್ರೀಕರಣದ ಪ್ರಕ್ರಿಯೆ ಮುಗಿದು ಹೋಯಿತು. ಅನಂತರ ಅವನು ಮತ್ತೊಂದು ಬೌದ್ಧ ವಿಗ್ರಹದ ಬಳಿ ಹೋಗಿ ಕೆಲವು ಪದಗಳನ್ನು ಗೊಣಗಿದ ಅವನು ಈ ಪ್ರತಿ ಪವಿತ್ರೀಕರಣಕ್ಕೂ ನಲವತ್ತು ಯೂನ್‌ಗಳನ್ನು ಪಡೆದ. ಇತ್ತೀಚಿನ ದಿನಗಳಲ್ಲಿ ಪವಿತ್ರೀಕರಣವನ್ನು ಭಿಕ್ಷುಗಳು ವಾಣಿಜ್ಯೀಕರಿಸಿದ್ದಾರೆ ಮತ್ತು ಅದರಿಂದ ಹಣಗಳಿಸುತ್ತಿದ್ದಾರೆ. ಇದರಿಂದ ನಾನು ಕಂಡುಕೊಂಡದ್ದು. ಪವಿತ್ರೀಕರಣ ಸಾಧಿತವಾಗಿಲ್ಲ ಎಂಬುದನ್ನು, ಅವನು ಇದನ್ನು ಮಾಡಲಾರ ಇತ್ತೀಚಿನ ದಿನಗಳಲ್ಲಿ ಭಿಕ್ಷುಗಳು ಈಗಲೂ ಹೀಗೆ ಮಾಡುತ್ತಿದ್ದಾರೆ. ನಾನು ಏನೆಲ್ಲವನ್ನು ನೋಡಿದ್ದೇನೆಂದರೆ, ಬೌದ್ಧನಂತೆ ಸ್ಥಾಪಿಸಿಕೊಂಡು ಕಾಣಿಸಿಕೊಳ್ಳುವ ಒಬ್ಬ ವ್ಯಕ್ತಿ ದೇವಾಲಯದಲ್ಲಿರುವ ಬೌದ್ಧ ವಿಗ್ರಹವನ್ನು ಪವಿತ್ರೀಕರಿಸುವುದನ್ನು ಕಲ್ಪಸುತ್ತಿದ್ದನು. ಅವನು ಸೂರ್ಯನಿಗೆದುರಾಗಿ ಒಂದು ಕನ್ನಡಿಯನ್ನು ಹಿಡಿದು, ಅದರ ಪ್ರತಿಫಲವನ್ನು ಬೌದ್ಧ ವಿಗ್ರಹದ ಮೇಲೆ ಹಾಯಿಸಿದ ನಂತರ ಪವಿತ್ರೀಕರಿಸಲಾಗಿದೆ ಎಂದು ಸಾಧಿಸಿದ ಇದು ತೀರಾ ಹಾಸ್ಯಾಸ್ಪದವಾಗಿದೆ. ಇಂದು ಬೌದ್ಧತ್ವವು ಈ ಹಂತಕ್ಕೆ ಅಭಿವೃದ್ಧಿಗೊಂಡಿದೆ. ಮತ್ತು ಇದು ತೀರಾ ಸಾಮಾನ್ಯ ಸಂಗತಿಯಾಗಿದೆ.

ಒಂದು ದೊಡ್ಡ ಕಂಚಿನ ಬೌದ್ಧ ವಿಗ್ರಹವು **ನಾಹ್ನ್-ಜಿಂಗ್** ನಲ್ಲಿ ಮಾಡಲ್ಪಟ್ಟಿತು. ಹಾಂಗ್‌ಕಾಂಗ್‌ನ ಲಾನ್ ತಾವೂ ದ್ವೀಪದಲ್ಲಿ ಇದನ್ನು ಪ್ರತಿಷ್ಠಾಪಿಸಲಾಯಿತು. ಇದು ಒಂದು ಬೃಹತ್ ಬೌದ್ಧ ವಿಗ್ರಹ. ಜಗತ್ತಿನಲ್ಲೆಡೆಗಳಿಂದ ತುಂಬಾ ಭಿಕ್ಷುಗಳ ಪವಿತ್ರೀಕರಣಕ್ಕಾಗಿ ಮಾರ್ಗದರ್ಶನ ಪಡೆಯಲು ಬಂದಿದ್ದರು. ಒಬ್ಬ ಭಿಕ್ಷುವು ಸೂರ್ಯನ ಕಿರಣಗಳಿಗೆ ಕನ್ನಡಿಯನ್ನು ಹಿಡಿದು ಅದರ ಪ್ರತಿಫಲವನ್ನು ಬೌದ್ಧ ವಿಗ್ರಹದ ಮುಖದ ಮೇಲೆ ಹಾಯಿಸಿ, ಇದನ್ನು ಪವಿತ್ರೀಕರಣವೆಂದು ಕರೆದ. ಒಂದು ಮಹೋನ್ನತ ಆಚರಣೆಯಲ್ಲಿ ಗಾಂಭೀರ್ಯದ ವ್ಯಕ್ತಿ ಹೀಗೆ ಮಾಡಿದ. ಇಂತಹ ಕೃತ್ಯಗಳೂ ಘಟಿಸುತ್ತವೆ. ನಾನು ಕಂಡುಕೊಂಡಂತೆ ಇದು ವಿಷಾದನೀಯ ಆಶ್ಚರ್ಯವೇನಲ್ಲ. ಶಾಖ್ಯಮುನಿ ಈ ರೀತಿ ಹೇಳಿದ್ದಾನೆ. ''ಧರ್ಮ ಕೊನೆಗೊಳ್ಳುವ ಅವಧಿಯಲ್ಲಿ ಭಿಕ್ಷುಗಳು ತಮ್ಮನ್ನು ತಾವು ಉಳಿಸಿಕೊಳ್ಳುವ ಸಲುವಾಗಿ ಸಮಸ್ಯೆಗಳನ್ನು ಎದುರಿಸುತ್ತಾರೆ. ಇತರರಿಗೆ ಮೋಕ್ಷವನ್ನು ಕರುಣಿಸುವುದರ ಬದಲು ಏಕಾಂಗಿರಲು ಬಿಡಿ'' ಇದಕ್ಕೆ ಹೊಂದಿಕೊಂಡಂತೆ, ಕೆಲವು ಭಿಕ್ಷುಗಳು ಬೌದ್ಧ ಧರ್ಮಗ್ರಂಥಗಳನ್ನು ತಮ್ಮ ದೃಷ್ಟಿಕೋನಗಳಲ್ಲೆ ವ್ಯಾಖ್ಯಾನಿಸುತ್ತಾರೆ. ಮಹಾರಾಣಿಯ ಪ್ರಬಂಧಗಳೂ ಕೂಡ ದೇವಸ್ಥಾನದೊಳಗೆ ಪ್ರವೇಶ ಪಡೆದಿವೆ. ಇಂಥವುಗಳ ಪ್ರವೇಶದಿಂದಾಗಿ ಇಲ್ಲಿ ಅರಾಜಕತೆ ಹಾಗೂ ಕೊಳಕುತನ ತುಂಬಿದೆ. ಆದಾಗ್ಯೂ ಈಗಲೂ ಕೆಲವು ಭಿಕ್ಷುಗಳು ಅತ್ಯುತ್ತಮವಾದ ಸಾಧನೆಯ ಅಭ್ಯಾಸದಲ್ಲಿದ್ದಾರೆ. ಮತ್ತು ಒಳ್ಳೆಯವರಿದ್ದಾರೆ. ವಾಸ್ತವವಾಗಿ ಪವಿತ್ರೀಕರಣವೆಂದರೆ, ಮಹಾಪ್ರಕಾಶದ ವ್ಯಕ್ತಿಯು ಪ್ರಭಾವಲಯವನ್ನು ಬೌದ್ಧ ಮೂರ್ತಿಯಲ್ಲಿ ನೆಲೆಸುವಂತೆ ಮಾಡುವುದು. ಇದೇ ಪವಿತ್ರೀಕರಣ.

ಹಾಗಾಗಿ ಒಂದು ವೇಳೆ ಬೌದ್ಧ ವಿಗ್ರಹವು ಯಶಸ್ವಿಯಾಗಿ ಪವಿತ್ರೀಕರಣಗೊಳ್ಳದಿದ್ದರೆ, ಅದು ಆರಾಧನೆಗೆ ಅರ್ಹವಾಗುವುದಿಲ್ಲ. ಒಂದು ವೇಳೆ ಇದು ಆರಾಧಿಸಲ್ಪಟ್ಟರೆ, ಗಂಭೀರವಾದ ಪರಿಣಾಮಗಳುಮಟಾಗುತ್ತದೆ. ಆ ಗಂಭೀರ ಪರಿಣಾಮಗಳಾವುವು? ಇಂದು ಮನವ ದೇಹವನ್ನು ಅಧ್ಯಯನ ಮಾಡಿರುವವರು ಕಂಡುಕೊಂಡಿರುವುದೇನೆಂದರೆ, ನಮ್ಮ ಮಾನವ ಮನಸ್ಸಿನ ಕ್ರಿಯೆಗಳು

---

**5. ನಾಹ್ನ್-ಜಿಂಗ್ –** ಜಯಾಂಗ್‌ಸು ಪ್ರಾಂತ್ಯದ ರಾಜಧಾನಿ.

ಅಥವಾ ಚಿಂತನೆಗಳು ಒಂದು ಪದಾರ್ಥವನ್ನು ಉತ್ಪಾದಿಸುತ್ತವೆ. ಅತ್ಯುನ್ನತ ಹಂತದಲ್ಲಿ ನಾವು ಕಂಡುಕೊಂಡಿರುವುದೇನೆಂದರೆ, ಅದು ಸತ್ಯವಾಗಿಯೂ ಸಂಪತ್ತು, ಆದರೆ ಆ ಸಂಪತ್ತು ನಾವು ಇಂದು ಸಂಶೋಧನೆಗಳಿಂದ ಕಂಡುಕೊಂಡಿರುವಂತೆ, ಮೆದುಳಿನ ಅಲೆಗಳ ರೂಪದಲ್ಲಿಲ್ಲ. ಅದರ ಬದಲಾಗಿ ಅದು ಮಾನವ ಮೆದುಳಿನ ರೂಪದಲ್ಲಿದೆ. ಒಂದು ವಿಧದಲ್ಲಿ ಯಾವಾಗ ಸಾಮಾನ್ಯ ಮನುಷ್ಯನು ಯಾವುದರ ಬಗ್ಗೆಯಾದರೂ ಯೋಚಿಸುತ್ತಾನೆ. ಆಗ ಅವನು ಅಥವಾ ಅವಳು ಏನನ್ನು ಉತ್ಪಾದಿಸುತ್ತಾರೊ ಅದು ಮೆದುಳಿನ ರೂಪದಿಂದ. ಏಕೆಂದರೆ ಇದು ಶಕ್ತಿಯುತವಾಗಿಲ್ಲ. ಕೆಲವೇ ಕ್ಷಣಗಳಲ್ಲಿ ಇದು ಚದುರಿ ಹೋಗುತ್ತದೆ. ಒಬ್ಬ ಅಭ್ಯಾಸಿಗನ ಶಕ್ತಿ ಇನ್ನೊಂದು ಕೈಯಲ್ಲಿ ದೀರ್ಘಕಾಲದವರೆಗೆ ಕಾಯ್ದುಕೊಳ್ಳಬಹುದು. ಬೌದ್ಧವಿಗ್ರಹವು ಕಾರ್ಖಾನೆಯಲ್ಲಿ ತಯಾರಾದ ಮಾತ್ರಕ್ಕೆ ಅದು ಮನಸ್ಸು ಅಥವಾ ಮೆದುಳನ್ನು ಹೊಂದಿದೆ ಎಂದು ಹೇಳಲಾಗದು. ಕೆಲವು ಬೌದ್ಧ ವಿಗ್ರಹಗಳು ಪವಿತ್ರೀಕರಣದ ಪ್ರಕ್ರಿಯೆಯಲ್ಲಿರುವುದಿಲ್ಲ. ಹೇಗಾದರೂ ದೇವಾಲಯಕ್ಕೆ ತಂದರೂ ಪವಿತ್ರೀಕರಣ ಸಾಧಿತವಾಗದು. ಒಂದು ವೇಳೆ ಪವಿತ್ರೀಕರಣವು ಮಾತುಗಾರ ಚೀಗಾಂಗ್ ಗುರು ಅಥವಾ ಕೆಡುಕಿನ ಅಭ್ಯಾಸದ ವ್ಯಕ್ತಿಯಿಂದ ಉಂಟಾದಲ್ಲಿ ಇದು ಅತ್ಯಂತ ಅಪಾಯಕಾರಿಯಾಗುತ್ತದೆ. ಆಗ ನರಿ ಅಥವಾ ಇತರೆ ಪ್ರಾಣಿಗಳನ್ನು ಕೊಲ್ಲುವ ಮೈತುಂಬ ತುಪ್ಪಳವಿರುವ ಪ್ರಾಣಿ ಸದ್ದಿಲ್ಲದೆ ಬೌದ್ಧ ವಿಗ್ರಹದೊಳಗೆ ಸೇರಿದಂತಾಗುತ್ತದೆ.

ಬೌದ್ಧ ವಿಗ್ರಹದ ಪವಿತ್ರೀಕರಣವು ವೈಧಾನಿಕ ಪ್ರಕ್ರಿಯೆಯಲ್ಲಿ ನಡೆಯದಿದ್ದರೆ, ಈ ಆರಾಧನೆಯು ತೀರಾ ಅಪಾಯಕಾರಿಯಾಗುತ್ತದೆ. ಇದು ಎಷ್ಟು ಅಪಾಯಕಾರಿ. ನಾನು ಹೇಳಿರುವಂತೆ ಮಾನವ ಜೀವಿಗಳು ವಿಕಾಸ ಹೊಂದಿವೆ. ಎಲ್ಲವೂ ಈಗ ಕ್ಷೀಣಿಸುತ್ತಿವೆ. ಇಡೀ ಸಮಾಜ ಮತ್ತು ವಿಶ್ವ ದಲ್ಲಿರುವ ಎಲ್ಲವೂ ಅನುಕ್ರಮವಾಗಿ ಭ್ರಷ್ಟಗೊಳ್ಳುತ್ತಿವೆ. ಸಾಮಾನ್ಯ ಮನುಷ್ಯರಿಗೆ ಏನೆಲ್ಲವೂ ಸಂಭವಿಸುತ್ತದೆಯೊ ಅದಕ್ಕೆ ಕಾರಣ ಅವರಿಗಾಗಿ ಅವರಿಂದಲೇ ಉಂಟಾಗುವಂಥದ್ದು. ಋಜುಮಾರ್ಗವನ್ನು ಕಂಡುಕೊಳ್ಳುವುದು. ಅನುಸರಿಸುವುದು ತೀರಾ ಕಷ್ಟಕರ, ಅನೇಕ ಮೂಲಗಳು ಮಧ್ಯಪ್ರವೇಶದಿಂದಾಗಿ ಋಣಿಯಾಗಿರುವುದು ಕೂಡಾ ಕಷ್ಟ. ಒಬ್ಬನು ಬುದ್ಧನಲ್ಲಿ ಪ್ರಾರ್ಥಿಸಲು ಪ್ರಯತ್ನಿಸುತ್ತಾನೆ. ಆದರೆ ಬುದ್ಧ ಯಾರು? ಪ್ರಾರ್ಥನೆಗಾಗಿ ಒಬ್ಬನನ್ನು ಕಂಡುಕೊಳ್ಳುವುದು ಕೂಡಾ ತೀರಾ ಕಷ್ಟಕರ. ಒಂದು ವೇಳೆ ನೀವು ಏನನ್ನೂ ನಂಬದಿದ್ದರೆ, ಒಂದು ಉದಾಹರಣೆ ನೀಡುತ್ತೇನೆ. ಬೌದ್ಧ ವಿಗ್ರಹದ ಆರಾಧನೆಯಲ್ಲಿ ಪವಿತ್ರೀಕರಣವು ವೈಧಾನಿಕವಾಗಿ ನಡೆಯದಿದ್ದರೆ, ಮೊಟ್ಟಮೊದಲು ಆರಾಧಿಸುವವನ ಕ್ರಿಯೆಯು ಅಪಾಯಕಾರಿಯಾಗುತ್ತದೆ. ಎಷ್ಟೋ ಜನ ಈಗ ಫಲಪದವಿಯನ್ನುಗಳಿಸಲು ಬಯಸುತ್ತಿದ್ದಾರೆ. ಬೌದ್ಧ ಆರಾಧನೆಗಾಗಿ ಜನರಲ್ಲಿರುವ ಹೆಚ್ಚಿನ ಪ್ರೇರಣೆಗಳಿಗೆ ಕಾರಣಗಳೇನು ? ಅವರು ಅಪಾರ ಕಷ್ಟಗಳಿಂದ ಬಿಡುಗಡೆ ಹೊಂದಲು, ಸಮಸ್ಯೆಗಳಿಂದ ಬಿಡುಗಡೆ ಪಡೆಯುವ ಸಲುವಾಗಿ ಹಾಗೂ ಅದೃಷ್ಟಕ್ಕಾಗಿ ಆರಾಧಿಸಲಾಗುತ್ತಿದೆ. ಇವುಗಳು ಬೌದ್ಧ ಧರ್ಮಗ್ರಂಥಗಳಲ್ಲಿವೆಯೇ? ಹೇಗಾದರೂ ಆಗಲೀ ಅವರು ಈ ವಿಷಯಗಳನ್ನು ಒಳಗೊಳ್ಳಲಾರರು. ಬೌದ್ಧ ವಿಗ್ರಹ ಅಥವಾ ಬೋಧಿಸತ್ವ ಅವಲೋಕಿತೇಶ್ವರ ಅಥವಾ ತಥಾಗತ ಪ್ರತಿಮೆಗಳ ಮುಂದೆ ಒಬ್ಬ ಬೌದ್ಧ ಆರಾಧಕ ಹೆಚ್ಚು ಹೆಚ್ಚು ದಂಡ ನಮಸ್ಕಾರಗಳನ್ನು ಮಾಡಿ ಪ್ರಾಯಶಃ ಹೀಗೆ ಹೇಳುತ್ತಾನೆ: "ದಯವಿಟ್ಟು ನನಗೆ ಹಣಗಳಿಸಲು ಸಹಾಯ ಮಾಡು" ಅಂಥವರಿಗೆ ಶುಭವಾಗಲಿ, ಒಂದು ಪರಿಪೂರ್ಣ ಮನಸ್ಸು ರೂಪುಗೊಳ್ಳಲಿ. ಈ ಬಗೆಯ ಬೇಡಿಕೆಯನ್ನು ಬೌದ್ಧ ವಿಗ್ರಹಕ್ಕೆ ಸಲ್ಲಿಸಬಹುದೆ? ಇದರಿಂದ ಇದ್ದಕ್ಕಿದ್ದಂತೆ ಬೌದ್ಧ ವಿಗ್ರಹದ ಮೇಲೆ ಪ್ರತಿಫಲನಗೊಳ್ಳುತ್ತದೆ. ಇನ್ನೊಂದು ಆಯಾಮದಿಂದ ಪದಾರ್ಥವು ದೊಡ್ಡದು ಅಥವಾ ಚಿಕ್ಕದಾಗುತ್ತದೆ, ಈ ಬಗೆಯ ಚಿಂತನೆಗಳು ಅಸ್ತಿತ್ವಕ್ಕೆ ಬಂದಾಗ ಬೌದ್ಧ ವಿಗ್ರಹವು ಮೆದುಳು ಹಾಗೂ ಬುದ್ಧಿಯನ್ನು ಹೊಂದುತ್ತದೆ. ಆದರೆ ಇದು ದೇಹವನ್ನು ಹೊಂದುವುದಿಲ್ಲ. ಬೇರೆ ಜನರೂ ಕೂಡಾ ಬೌದ್ಧ ವಿಗ್ರಹದ ಆರಾಧನೆಗೆ ಬರುತ್ತಾರೆ. ಈ ಬಗೆಯ ಆರಾಧನೆಯಿಂದ ಹಂತಹಂತವಾಗಿ ಕೆಲ ಪ್ರಮಾಣದ ಶಕ್ತಿ ಸಂಚಯನವಾಗುತ್ತದೆ, ಒಂದು ವೇಳೆ ಅಭ್ಯಾಸಿಗರು ಈ ಪದ್ಧತಿಯಲ್ಲಿ ಆರಾಧಿಸಿದರೆ, ಇದು ತೀರಾ ಅಪಾಯಕಾರಿಯಾಗುತ್ತದೆ. ಈ ಆರಾಧನೆಯಿಂದ ಹಂತಹಂತವಾಗಿ ಶಕ್ತಿ ವೃದ್ಧಿಯಾಗುತ್ತದೆ. ಆದಾಗ್ಯೂ ಈ ಮೂರ್ತ ದೇಹವು ಇನ್ನೊಂದು ಆಯಾಮದಿಂದ ರೂಪುಗೊಳ್ಳುತ್ತದೆ. ಇದು ರೂಪುಗೊಂಡ ನಂತರ ಇನ್ನೊಂದು ಆಯಾಮದಲ್ಲಿ ಅಸ್ತಿತ್ವ ಪಡೆಯುತ್ತದೆ. ಕೆಲವು ಸತ್ಯಗಳನ್ನು ಈ ವಿಶ್ವದಿಂದ ಕಲಿಯುತ್ತದೆ. ಆದ್ದರಿಂದ, ಜನರಿಗೆ ಇದು ಏನನ್ನಾದರೂ ಮಾಡಬಲ್ಲುದು. ಇದು ಗಾಂಗನ್ನು

ವೃದ್ಧಿಪಡಿಸಿಕೊಳ್ಳಬಲ್ಲುದು. ಆದರೆ ಇದು ಜನರಿಗೆ ಷರತ್ತುಗಳಿಂದ ಮತ್ತು ಹಣಕ್ಕಾಗಿ ಸಹಾಯ ಮಾಡುವಂಥದ್ದು. ಇದು ಇನ್ನೊಂದು ಆಯಾಮಕ್ಕೆ ಮುಕ್ತವಾಗಿ ಚಲಿಸಬಲ್ಲುದು. ಸಾಮಾನ್ಯ ಜನರನ್ನು ಸುಲಭವಾಗಿ ನಿಯಂತ್ರಿಸಬಲ್ಲುದು. ಬೌದ್ಧ ವಿಗ್ರಹದಲ್ಲಿ ಕಾಣಿಸಿಕೊಳ್ಳುವಂತೆಯೇ ಈ ಮೂರ್ತ ದೇಹದಲ್ಲಿ ನಿಖರವಾಗಿ ಗೋಚರವಾಗುತ್ತದೆ. ಬೌದ್ಧ ವಿಗ್ರಹದ ಜೊತೆ ಬೌದ್ಧ ಗೋಚರಿಸಿದಂತೆಯೇ ಮಾನವರ ಆರಾಧನೆಯು ಮಾತುಗಾರ ಬೋಧಿಸತ್ವ ಅಥವಾ ಮಾತುಗಾರ ಬೋಧಿಸತ್ವರುಗಳ ಮನಸ್ಸು ತೀವ್ರವಾಗಿ ಹಣಕ್ಕೆ ಸಂಬಂಧಿಸಿದ ವಿಷಯಗಳಿಂದ ಕೆಟ್ಟುಹೋಗಿರುತ್ತದೆ. ಇದು ಇನ್ನೊಂದು ಆಯಾಮದಲ್ಲಿ ಹುಟ್ಟುತ್ತದೆ. ಬುದ್ದಿ ತನಗೆ ತಿಳಿದಂತೆ ದೊಡ್ಡ ತಪ್ಪುಗಳನ್ನು ಮಾಡದಂತೆ ತಡೆಯುತ್ತದೆ. ಆದರೆ ಸಣ್ಣ ತಪ್ಪುಗಳನ್ನು ಮಾಡಲು ಅವಕಾಶ ನೀಡುತ್ತದೆ. ಕೆಲವು ಬಾರಿ ಇದು ಕೂಡ ಜನರಿಗೆ ಸಹಾಯ ಮಾಡುತ್ತದೆ. ಇಲ್ಲವಾದಲ್ಲಿ ಇದು ಸಂಪೂರ್ಣವಾಗಿ ಕೆಡುಕು ಮತ್ತು ಸಾವುಂಟು ಮಾಡುವಂಥದ್ದು. ಇದು ಮಾನವರಿಗೆ ಹೇಗೆ ಸಹಾಯಕ? ಯಾವಾಗ ಯಾವನಾದರೂ ಪ್ರಾರ್ಥಿಸುತ್ತಾನೆ: "ಬುದ್ಧ, ನನ್ನ ಮನೆಯ ಸದಸ್ಯರ ರೋಗ ಮುಕ್ತಿಗೆ ಸಹಾಯ ಮಾಡು". ಇದು ಸಹಾಯ ಹಸ್ತವಾಗಿದ್ದರೆ ಒಳ್ಳೆಯದು. ಇದರಿಂದ ನೀವು ಕಾಣಿಕೆ ಹುಂಡಿಗೆ ಹಣ ಹಾಕಬೇಕಾಗುತ್ತದೆ. ಏಕೆಂದರೆ ಬುದ್ಧಿ ಹಣದ ನಂತರ ಹೆಚ್ಚು ಹಣವನ್ನು ದತ್ತಿಯಾಗಿ ಕಾಣಿಕೆ ನೀಡಿದರೆ ಶೀಘ್ರವಾಗಿ ನಿಮ್ಮ ಖಾಯಿಲೆ ಗುಣವಾಗುತ್ತದೆ. ಈಗಲೂ ಇದು ಕೆಲವು ಸಾಮರ್ಥ್ಯವನ್ನು ಹೊಂದಿದೆ. ಇನ್ನೊಂದು ಆಯಾಮದಲ್ಲಿ ಇದು ಸಾಮಾನ್ಯ ವ್ಯಕ್ತಿಗಳನ್ನು ಕುಶಲಕಲೆಯಿಂದ ನಿರ್ವಹಿಸುತ್ತದೆ. ಇದು ಅಭ್ಯಾಸಿಗನ ಆರಾಧನೆಗೆ ನಿರ್ದಿಷ್ಟವಾಗಿ ಅಪಾಯಕಾರಿಯಾದುದು. ಅಭ್ಯಾಸಿಗ ಯಾವುದಕ್ಕಾಗಿ ಪ್ರಾರ್ಥಿಸುತ್ತಾನೆ? ಹಣ ನೀವೆಲ್ಲರೂ ಇದರ ಬಗ್ಗೆ ಆಲೋಚಿಸಿ, ಅಭ್ಯಾಸಿಗ ಹಣದ ನಂತರ ಯಾವುದರತ್ತ ಚಲಿಸುತ್ತಾನೆ? ಕುಟುಂಬದ ಸದಸ್ಯರ ದುರಾದೃಷ್ಟವನ್ನು ಮತ್ತು ರೋಗವನ್ನು ಅಳಿಸಿ ಹಾಕಲು, ಒಬ್ಬನ ಕುಟುಂಬದ ಸದಸ್ಯರ ಭಾವನಾತ್ಮಕ ಸಂಬಂಧಗಳಿಗಾಗಿ ಪ್ರಾರ್ಥನೆಯೇ? ನೀವು ಬೇರೆಯವರ ಅದೃಷ್ಟವನ್ನು ಬದಲಾಯಿಸಬೇಕೆಂದಿದ್ದೀರಾ? ಎಲ್ಲರೂ ಅವರೇ ಸ್ವಂತ ಅದೃಷ್ಟವನ್ನು ಹೊಂದಿದ್ದಾರೆ! ಒಂದು ವೇಳೆ ನೀವು ಆರಾಧಿಸಿದರೆ ಮತ್ತು ಗೊಣಗಿದರೆ, ದಯವಿಟ್ಟು ಹಣ ಗಳಿಸಲು ನನಗೆ ಸಹಾಯ ಮಾಡು, ಇದು ಸಹಾಯಕವೇ? ಇದರಿಂದ ಹಣದ ನಿರೀಕ್ಷೆ ಇನ್ನೂ ಹೆಚ್ಚುತ್ತದೆ, ಇನ್ನೂ ಹೆಚ್ಚು ಹಣ ಬೇಕೆನಿಸುತ್ತದೆ, ಇದು ಹೆಚ್ಚು ವಿಷಯಾಸಕ್ತಿಯತ್ತ ಆಕರ್ಷಿಸುತ್ತದೆ. ಇದು ಒಂದು ಮಾರಾಟ ವ್ಯವಸ್ಥೆ. ಕೆಲವು ಆರಾಧಕರು ಹೆಚ್ಚು ಹೆಚ್ಚು ಹಣವನ್ನು ಕಾಣಿಕೆ ಹುಂಡಿಗೆ ಅರ್ಪಿಸುತ್ತಾರೆ. ಏಕೆಂದರೆ ಇದರಿಂದ ತಮಗೆ ಶುಭವಾಗುತ್ತದೆಂದು ಅದು ಹೇಗೆ ಸಾಧ್ಯ? ನೀವು ವಿಹಾರಕ್ಕೆ ಹೋದಾಗ ಒಂದು ಪರ್ಸ್ ಸಿಕ್ಕಿದರೆ ಅಥವಾ ನಿಮ್ಮ ಉದ್ಯೋಗ ಸಂಸ್ಥೆ ಬೋನಸ್ ನೀಡಿದರೆ? ಹೇಗಾದರೂ ನಿಮ್ಮನ್ನು ಹಣ ಪಡೆಯಲು ಸಜ್ಜುಗೊಳಿಸಲಾಗುತ್ತದೆ. ಇದು ಷರತ್ತು ರಹಿತ ಸಹಾಯ ಹೇಗಾಗುವುದು? ನಷ್ಟವಿಲ್ಲ, ಲಾಭವಿಲ್ಲ. ಇದು ನಿಮ್ಮ ಗಾಂಗ್‌ನ ಕೆಲ ಪ್ರಮಾಣವನ್ನು ತೆಗೆದುಕೊಳ್ಳುತ್ತದೆ ಅಥವಾ ನಿಮ್ಮ ಸಾಧಿತ ಡಾನ್ ನಿಂದ ದೂರ ಕೊಂಡೊಯ್ಯುತ್ತದೆ. ಇದಕ್ಕೆ ಈ ಸಂಗತಿಗಳು ಬೇಕು.

ಈ ಮಾತುಗಾರ ಬೌದ್ಧರು ಕೆಲವು ವೇಳೆ ತುಂಬಾ ಅಪಾಯಕಾರಿ. ದಿವ್ಯಚಕ್ಷುಗಳು ತೆರೆಯಲ್ಪಟ್ಟಿರುವ ನಮ್ಮ ಬಹುತೇಕ ಅಭ್ಯಾಸಿಗರು ತಾವು ಬುದ್ಧನನ್ನು ನೋಡಿದ್ದೇವೆಂದುಕೊಳ್ಳುತ್ತಾರೆ. ಇಂದು ಬುದ್ಧ ಸಮೂಹವು ದೇವಾಲಯಕ್ಕೆ ಬಂದಿದೆಯೆಂದು ಒಬ್ಬನು ಹೇಳಬಹುದು, ಬುದ್ಧ ಕರೆದಿದ್ದಾನೆ, ಹಾಗೆ ಹೀಗೆ ಎಂದು ಹೇಳಿ ಸಮೂಹವನ್ನು ಮುನ್ನಡೆಸಬಹುದು. ಈ ವ್ಯಕ್ತಿ ಯಾವ ಗುಂಪು ನಿನ್ನೆಯ ಹಾಗಿತ್ತೆಂದು, ಇಂದಿನ ಸಮೂಹ ಹೇಗಿತ್ತೆಂದು ಮತ್ತು ಗುಂಪು ತೆರಳಿದ ಕೆಲ ಸಮಯದಲ್ಲಿ ಮತ್ತೊಂದು ಗುಂಪು ಬರುತ್ತದೆಂದು ವಿವರಿಸಬಲ್ಲರು, ಅವರು ಯಾರು? ಅವರು ಈ ವರ್ಗಕ್ಕೆ ಬರುತ್ತಾರೆ, ಅವರು ನೈಜವಾದ ಬೌದ್ಧರಲ್ಲ, ಆದರೆ ಕಪಟಿಗಳು. ಈ ಬಗೆಯ ಪ್ರಕರಣಗಳು ಗಣನೀಯವಾಗಿವೆ.

ದೇವಾಲಯಗಳಲ್ಲಿ ಇದು ನಡೆದರೆ ಹೆಚ್ಚು ಅಪಾಯಕಾರಿ. ನೀವು ನನ್ನನ್ನು ಆರಾಧಿಸುತ್ತಿಲ್ಲವೆ? ಮತ್ತು ನೀವು ಅದನ್ನು ಮಾಡುತ್ತಿರುವುದು ಸ್ವಚ್ಛ ಮನಸ್ಸಿನಿಂದ! ಒಳ್ಳೆಯದು, ಸಾಧನೆಯ ಅಭ್ಯಾಸವನ್ನು ನೀವು ಮಾಡುವುದಿಲ್ಲವೆ? ನಾನು ನಿಮ್ಮ ಜವಾಬ್ದಾರಿ ತೆಗೆದುಕೊಳ್ಳುತ್ತೇನೆ ಮತ್ತು ಸಾಧನೆಯ ಅಭ್ಯಾಸ ಹೇಗೆಂದು ತಿಳಿಸುತ್ತೇನೆ. ಇದು ಅವರಿಗೆ ವ್ಯವಸ್ಥೆಯನ್ನು ಮಾಡುತ್ತದೆ. ಅವರು ಸಾಧನೆಯ ಅಭ್ಯಾಸ

ಮುಗಿದ ನಂತರ ಎಲ್ಲಿಗೆ ಹೋಗುತ್ತಾರೆ? ಎಲ್ಲಿ ಸಾಧನೆಯ ಅಭ್ಯಾಸ ಸಾಧಿತವಾಗುತ್ತದೆ? ಯಾವ ಉನ್ನತ ಹಂತದ ಶಾಲೆಗಳೂ ಈ ಬಗೆಯ ಅಭ್ಯಾಸವನ್ನು ಒಪ್ಪುವುದಿಲ್ಲ. ಆಗಲೂ ಇದು ಎಲ್ಲವನ್ನು ನಿಮಗಾಗಿ ಸಜ್ಜುಗೊಳಿಸುತ್ತದೆ, ನೀವು ಇದನ್ನು ಭವಿಷ್ಯದಲ್ಲಿ ಅನುಸರಿಸಬೇಕಾಗುತ್ತದೆ. ನಿಮ್ಮ ಅಭ್ಯಾಸವು ವ್ಯರ್ಥ ಪ್ರಯತ್ನದಲ್ಲಿ ಕೊನೆಯಾಗುವುದಿಲ್ಲವೆ? ನಾನು ಹೇಳಿದ್ದೇನೆ, ಈಗ ಸಾಧನೆಯಲ್ಲಿ ಫಲ ಪದವಿಯನ್ನು ಪಡೆಯುವುದು ಮಾನವರಿಗೆ ಕಷ್ಟಕರವಾದುದು. ಈ ಸಂಗತಿ ತೀರಾ ಸಾಮಾನ್ಯ. ನಿಮ್ಮಲ್ಲಿ ಕೆಲವರು ಬೌದ್ಧ ಬೆಳಕನ್ನು ಪರಿಚಿತವಾದ ಪರ್ವತಗಳಲ್ಲಿ ಮತ್ತು ಮುಖ್ಯ ನದಿಗಳಲ್ಲಿ ನೋಡಿರುತ್ತೀರಿ. ಇದರಲ್ಲಿ ಬಹುತೇಕ ಈ ವರ್ಗಕ್ಕೆ ಸೇರುತ್ತವೆ. ಇದು ತಂತಾನೇ ಶಕ್ತಿಯುತವಾಗಿದೆ ಮತ್ತು ಕ್ರಿಯಾತ್ಮಕವಾಗಬಲ್ಲದು. ಒಬ್ಬ ನಿಜವಾದ ಮಹಾಪ್ರಕಾಶದ ವ್ಯಕ್ತಿ ತಂತಾನೇ ಏನನ್ನೂ ಬಹಿರಂಗ ಪಡಿಸುವುದಿಲ್ಲ.

ಈ ಹಿಂದೆ ಅನೇಕ ಲೌಕಿಕ ಬೌದ್ಧರು ಮತ್ತು ಲೌಕಿಕ ತಾವೋಗಳು ಸಾಪೇಕ್ಷವಾಗಿದ್ದರು. ಈಗ ಹೇಗಾದರೂ ಇಲ್ಲಿ ಬಹು ಸಂಖ್ಯೆಯಲ್ಲಿದ್ದಾರೆ. ಅವರು ತಪ್ಪುಗಳಿಗೆ ಯಾವಾಗ ಬದ್ಧರಾಗುತ್ತಾರೋ, ಆಗ ಉನ್ನತ ಜೀವಿಗಳು ಅವರನ್ನು ಕೊಲ್ಲುತ್ತಾರೆ. ಇದು ಸಂಭವಿಸಬೇಕು. ಅವರು ಓಡಿ ಹೋಗಿ ಬೌದ್ಧ ಮೂರ್ತಿಗಳಲ್ಲಿ ಸೇರಿಕೊಳ್ಳುತ್ತಾರೆ. ಸಾಮಾನ್ಯವಾಗಿ, ಮಹಾ ಪ್ರಕಾಶದ ವ್ಯಕ್ತಿ ಸಾಮಾನ್ಯ ವ್ಯಕ್ತಿಗಳ ತತ್ವಗಳಲ್ಲಿ ಹಸ್ತಕ್ಷೇಪ ಮಾಡುವುದಿಲ್ಲ. ಉನ್ನತ ಹಂತದ ಮಹಾಪ್ರಕಾಶದ ವ್ಯಕ್ತಿಯ ಹಂತವೆಂದರೆ, ಅಂಥವನು ಅಥವಾ ಅಂಥವಳು ಸಾಮಾನ್ಯ ವ್ಯಕ್ತಿಗಳ ತತ್ವಗಳಲ್ಲಿ ಕೊಂಚ ಕೂಡ ಹಸ್ತಕ್ಷೇಪ ಮಾಡಲು ಯೋಚಿಸುತ್ತಾರೆ. ಆ ನಂತರ ಈ ಉನ್ನತ ಜೀವಿಗಳು ಮಿಂಚಿನಿಂದ ಇದ್ದಕ್ಕಿದ್ದಂತೆ ಬೌದ್ಧ ವಿಗ್ರಹವನ್ನು ಚೂರು ಮಾಡಲಾರರು, ಅದಕ್ಕಾಗಿ ಅವನು ಅಥವಾ ಅವಳು ಇಂಥ ಕೆಲಸಗಳನ್ನು ಮಾಡಲಾರರು. ಈ ಪ್ರಕಾರವಾಗಿ ಉನ್ನತ ಜೀವಿಗಳು ಒಂದು ವೇಳೆ ಬೌದ್ಧ ಮೂರ್ತಿಗಳನ್ನು ಹಿಂಬಾಲಿಸಲು ಹೊರಟರೆ ಏಕಾಂಗಿಯಾಗಿರಲು ಬಿಡಬೇಕು. ಅವರಿಗೆ ಗೊತ್ತು. ತಾವು ಕೊಲೆಗೀಡಾಗುತ್ತೇವೆಂದು, ಹಾಗಾಗಿ ಅವರು ಪಾರಾಗಲು ಪ್ರಯತ್ನಿಸುತ್ತಾರೆ. ಈ ಉದಾಹರಣೆಗಳ ಮೂಲಕ ನೀವು ಕಂಡದ್ದು ನೈಜವಾದ ಬೋಧಿಸತ್ವ ಅವಲೋಕಿತೇಶ್ವರರನ್ನೆ? ನೀವು ನೋಡುವುದು ನೈಜ ಬೌದ್ಧನನ್ನೆ? ಇದನ್ನು ಹೇಳುವುದು ಕಷ್ಟಕರ.

ನಿಮ್ಮಲ್ಲಿ ಬಹುತೇಕರು ಈ ಸಂಗತಿಯ ಬಗ್ಗೆ ಯೋಚಿಸುತ್ತಾರೆ. ಮನೆಯಲ್ಲಿರುವ ಬೌದ್ಧ ವಿಗ್ರಹಗಳನ್ನು ಏನು ಮಾಡುವುದು? ಕ್ರಮವಾದ ಸಾಧನೆಯ ಅಭ್ಯಾಸಕ್ಕಾಗಿ ಸಹಾಯ ಪಡೆಯಲು ಪ್ರಾಯಶ: ಬಹಳ ಜನ ನನ್ನಿಂದ ಬೋಧಿಸಿಕೊಂಡಿದ್ದಾರೆ. ನಾನು ಹೇಳುವಂತೆ ನೀವು ಮಾಡಬಹುದು. ಬೌದ್ಧ ವಿಗ್ರಹವನ್ನು ಹಿಡಿದುಕೊಂಡಿರುವಾಗ ನೀವು ನನ್ನ ಪುಸ್ತಕವನ್ನು ಅಥವಾ ನನ್ನ ಪೋಟೋವನ್ನು (ಏಕೆಂದರೆ ಪುಸ್ತಕದಲ್ಲಿ ನನ್ನ ಪೋಟೋ ಇದೆ) ತೆಗೆದುಕೊಳ್ಳಿ. ನಂತರ ನೀವು ಒಂದು ದೊಡ್ಡ ಗುಲಾಬಿ (ಪವಿತ್ರೀಕರಣಕ್ಕಾಗಿ ಕೈಯಲ್ಲಿ ಮಾಡಬಹುದಾದ ಭಂಗಿ) ಯನ್ನು ಮಾಡಿ ಮತ್ತು ನನ್ನಲ್ಲಿ ಕೇಳಿಕೊಳ್ಳುವಂತೆ ಗುರುಗಳಲ್ಲಿ ಪವಿತ್ರೀಕರಣಕ್ಕಾಗಿ ವಿನಂತಿಸಿಕೊಳ್ಳಿ. ಇದನ್ನು ಅರ್ಧ ನಿಮಿಷದಲ್ಲಿ ಮಾಡಬಹುದು. ಇದನ್ನು ಎಲ್ಲರಿಗೂ ಹೇಳಿದರೂ ನಮ್ಮ ಅಭ್ಯಾಸಿಗರು ಮಾತ್ರ ಮಾಡಬಲ್ಲರು. ಈ ಪವಿತ್ರೀಕರಣವು ನಿಮ್ಮ ಸಂಬಂಧಿಗಳಿಗೆ ಪರಿಣಾಮಕಾರಿಯಾಗದು. ನಮ್ಮ ಅಭ್ಯಾಸಿಗರ ಹೊಣೆ ಮಾತ್ರ ನಮ್ಮದು. ಕೆಲವರು ನನ್ನ ಪೋಟೋ ತೆಗೆದುಕೊಂಡು ಮನೆಗೆ ಹೋಗಿ ಅವರ ಸಂಬಂಧಿಗಳ ಕೆಡುಕನ್ನು ದೂರ ಮಾಡಲು ಉದ್ದೇಶಿಸಿರಬಹುದು. ನಾನು ಇಲ್ಲಿರುವುದು ಎಲ್ಲ ಸಾಮಾನ್ಯ ವ್ಯಕ್ತಿಗಳ ಕೆಡುಕನ್ನು ದೂರ ಮಾಡುವ ಸಲುವಾಗಿಯಲ್ಲ. ಅದು ಗುರುವಿಗೆ ತೋರುವ ಅತ್ಯಂತ ಕೆಟ್ಟ ಅಗೌರವ.

ಲೌಕಿಕ ಬೌದ್ಧರು ಮತ್ತು ಲೌಕಿಕ ತಾವೋಗಳ ಬಗ್ಗೆ ಮಾತನಾಡಿದಾಗ ಇಲ್ಲಿ ಇನ್ನೊಂದು ಪ್ರಸಂಗವಿದೆ. ಪ್ರಾಚೀನ ಚೈನಾದಲ್ಲಿ, ದೂರದ ಪರ್ವತ ಪ್ರದೇಶ ಹಾಗೂ ದಟ್ಟ ಕಾಡುಗಳಲ್ಲಿ ಅನೇಕರು ಸಾಧನೆಯ ಅಭ್ಯಾಸದಲ್ಲಿದ್ದರು. ಅವರಲ್ಲಿ ಯಾರೂ ಇಂದು ಯಾಕೆ ಇಲ್ಲ? ನಿಜವಾಗಿಯೂ ಅವರು ಅದೃಶ್ಯವಾಗಿಲ್ಲ. ಅವರು ಸಾಮಾನ್ಯರ ಕಣ್ಣಿಗೆ ಕಾಣುವುದಿಲ್ಲ. ಮತ್ತು ಅವರಲ್ಲಿ ಒಬ್ಬರೂ ಕಾಣೆಯಾಗಿಲ್ಲ. ಈ ವ್ಯಕ್ತಿಗಳು ಅಸಾಮಾನ್ಯ ಸಾಮರ್ಥ್ಯಗಳನ್ನು ಹೊಂದಿದ್ದಾರೆ. ಈಚೆಗೆ ಅವರು ಇಲ್ಲವೆಂದಲ್ಲ – ನಮ್ಮ ಸುತ್ತಲೂ ಅವರಿದ್ದಾರೆ. ನಿರ್ದಿಷ್ಟವಾದ ಪ್ರಖ್ಯಾತ ಬೃಹತ್ ಪರ್ವತಗಳೂ ಹಾಗೂ ಮುಖ್ಯ ನದಿಗಳಿರುವ ನಮ್ಮ ದೇಶದಲ್ಲಿ ಹೆಚ್ಚಾಗಿಯೇ ಅವರು ನೆಲೆಸಿದ್ದಾರೆ. ಉನ್ನತ ಪರ್ವತಗಳ ಸುತ್ತಲೂ ಅವರಿದ್ದಾರೆ, ಆದರೆ ಅವರು ತಮ್ಮ ಅಸಾಮಾನ್ಯ ಸಾಮರ್ಥ್ಯಗಳಿಂದ ನಮಗೆ ಕಾಣದಂತೆ ತಮ್ಮ ಗುಹೆಗಳಲ್ಲಿ

ಅವಿತುಕೊಂಡು ಮುಚ್ಚಿಕೊಂಡಿದ್ದಾರೆ. ಅವರ ಸಾಧನೆಯ ಪ್ರಗತಿ ನಿಧಾನಗತಿಯಲ್ಲಿದೆ, ಮತ್ತು ಅವರ ವಿಧಾನವು ಕಲಸುಮೇಲೋಗರವಾಗಿದೆ. ಆದ್ದರಿಂದ ಅವರು ಸಾಧನೆಯ ಮೂಲ ದ್ರವ್ಯವನ್ನು ಗ್ರಹಿಸಿಲ್ಲ. ನಾವು ಮತ್ತೊಂದು ವಿಧದಲ್ಲಿ ನಮ್ಮ ಮನಸ್ಸಿನಲ್ಲಿ ಈ ವಿಶ್ವದ ಲಕ್ಷಣಗಳು ಹಾಗೂ ರೂಪಗಳತ್ತ ಗುರಿಯಿಡಬೇಕು. ಸ್ವಾಭಾವಿಕವಾಗಿ ಅತ್ಯಂತ ವೇಗವಾಗಿ ಆಗ ಗಾಂಗ್ ವೃದ್ಧಿಸುತ್ತದೆ. ಏಕೆಂದರೆ ಸಾಧನೆಯ ಅಭ್ಯಾಸದ ಮಾರ್ಗವು ಪಿರಮಿಡ್‌ನಂತಿದೆ. ಕೇಂದ್ರ ಮಾರ್ಗ ಮಾತ್ರವೇ ಹೆದ್ದಾರಿ, ಅಡ್ಡದಾರಿ ಹಾಗೂ ಕಿರು ದಾರಿಗಳಲ್ಲಿ ಅಭ್ಯಸಿಸುತ್ತಿರುವವರ ಶಿನ್‌ಶಿಂಗ್‌ನ ಹಂತ ಸಾಧನೆಯ ಅಭ್ಯಾಸದಲ್ಲಿ ಉನ್ನತ ಹಂತಕ್ಕೇರುವುದಿಲ್ಲ. ಉನ್ನತ ಹಂತದ ಅಭ್ಯಾಸವನ್ನು ತಲುಪದೆ ಒಬ್ಬನು ಜ್ಞಾನಿಯಾಗಬಹುದು. ಅವರು ಹೇಗಾದರೂ ನೈಜ ಸಾಧನೆಯ ಅಭ್ಯಾಸದ ಹೆದ್ದಾರಿಯಿಂದ ತೀರಾ ದೂರದಲ್ಲಿರುತ್ತಾರೆ.

ಇಂಥ ಅಭ್ಯಾಸದ ಶಾಲೆಯು ಕೂಡ ಅನುಯಾಯಿಗಳನ್ನು ಹೊಂದಬಲ್ಲುದು. ಏಕೆಂದರೆ ಈ ಅಭ್ಯಾಸದಲ್ಲಿ ಒಬ್ಬನ ಸಾಧನೆಯ ಹಂತ ಹಾಗೂ ಶಿನ್‌ಶಿಂಗ್ ಉನ್ನತ ಹಂತಕ್ಕೇರಬಹುದು, ಎಲ್ಲ ಅಭ್ಯಾಸಿಗರ ಹಂತವು ಕೆಳಗಿರುತ್ತದೆ. ಅಡ್ಡದಾರಿಯ ಅಭ್ಯಾಸವು ಸಾಧನೆಯ ವೃತ್ತದ ಪರಿಧಿಯಲ್ಲಿರುತ್ತದೆ. ಇದರಲ್ಲಿ ಹೆಚ್ಚಿನ ಸಾಧನೆಯ ಅಗತ್ಯಗಳು ಹಾಗೂ ಸಂಕೀರ್ಣವಾದ ಸಾಧನೆಯ ಅಭ್ಯಾಸಗಳಿರುತ್ತವೆ. ಆದರೂ ಇಲ್ಲಿ ಸಾಧನೆಯ ಮೂಲದ್ರವ್ಯವನ್ನು ಗ್ರಹಿಸಲಾಗದು. ಸಾಧನೆಯಲ್ಲಿ ಮುಖ್ಯವಾಗಿ ತನ್ನ ಶಿನ್‌ಶಿಂಗ್‌ನ್ನು ವೃದ್ಧಿಪಡಿಸಿಕೊಳ್ಳಬೇಕು. ಅವರು ಇದನ್ನು ಅರ್ಥೈಸಿಕೊಳ್ಳದೆ ತಾವು ಯಾತನಾಮಯವಾದ ಸಾಧನೆಯ ಅಭ್ಯಾಸದಲ್ಲಿ ನಿರತರಾಗಿದ್ದೇವೆಂದು ನಂಬುತ್ತಾರೆ. ಆದ್ದರಿಂದ ನೂರು, ಸಾವಿರ ವರ್ಷಗಳ ದೀರ್ಘಾವಧಿಯ ಅಭ್ಯಾಸದ ನಂತರವೂ ಅವರು ಕಡಿಮೆ ಪ್ರಮಾಣದ ಗಾಂಗ್‌ನ್ನು ಗಳಿಸುತ್ತಾರೆ. ನಿಜವಾಗಿಯೂ ಯಾತನೆಯ ಗಾಂಗ್‌ನ್ನು ಗಳಿಸಿದ್ದಾರೆ. ಅವರು ಅದನ್ನು ಹೇಗೆ ಪಡೆದರು? ಇದು ಸಾಮಾನ್ಯ ಮನುಷ್ಯರನ್ನು ಹೋಲುತ್ತದೆ. ಯುವಕರೆಡೆಗಿನ ಆದರವು, ಅವರು ಯೌವನವನ್ನು ಕಳೆದುಕೊಂಡಂತೆ ಭವಿಷ್ಯದಲ್ಲಿ ನಂಬಿಕೆಗೆ ಅನರ್ಹವಾಗುತ್ತದೆ. ಈ ಅಡ್ಡದಾರಿಯ ಅಭ್ಯಾಸಗಳೂ ಕೂಡ ಈ ದಾರಿಯನ್ನು ಹಿಡಿಯುತ್ತವೆ. ಅವರು ಸಾಧನೆಯ ಸಂದರ್ಭದಲ್ಲಿ ಯಾತನೆ, ಕಷ್ಟಗಳು ಧ್ಯಾನ ಮತ್ತು ಭಾವ ಸಮಾಧಿಗಳ ಮೂಲಕ ಗಾಂಗ್‌ನ್ನು ವೃದ್ಧಿಸಿಕೊಳ್ಳಬಹುದೆಂದು ಭಾವಿಸುತ್ತಾರೆ. ಸಾಮಾನ್ಯ ಜನರೂ ಕೂಡ ಇವರಂತೆಯೇ ನಿಧಾನವಾಗಿ ಇವುಗಳೆಡೆಗಿನ ಆದರಗಳಿಂದ ಬಿಡುಗಡೆ ಹೊಂದಿದರೆ, ಕ್ರಮೇಣ ಗಾಂಗ್ ವೃದ್ಧಿಸುತ್ತದೆಂಬುದನ್ನು ಇವರು ಈಗಲೂ ತಿಳಿದುಕೊಂಡಿಲ್ಲ.

ನಮ್ಮ ಅಭ್ಯಾಸವು ಈ ಬಗೆಯ ಸಂಬಂಧಗಳನ್ನು ಕೇಂದ್ರೀಕರಿಸಿ ಎತ್ತಿ ತೋರಿಸುತ್ತದೆ. ಅವುಗಳನ್ನು ತ್ಯಜಿಸುವ ಮೂಲಕ ಸಾಧನೆಯಲ್ಲಿ ಕ್ಷಿಪ್ರವಾಗಿ ಮುಂದುವರೆಯಬಹುದು. ನಾನು ಕೆಲವು ಕಡೆಗಳಲ್ಲಿ ದೀರ್ಘಾವಧಿಯವರೆಗೆ ಅಭ್ಯಾಸ ನಿರತರಾಗಿರುವವರನ್ನು ಮತ್ತೆ ಮತ್ತೆ ನೋಡಿದ್ದೇನೆ. ಅವರ ಪ್ರಕಾರ ಅವರು ಇಲ್ಲಿರುವುದು ಯಾರಿಗೂ ತಿಳಿದಿಲ್ಲ. ನಾವು ಮಾಡುತ್ತಿರುವುದು ಮೇಲಿನ ಗೌರವದಿಂದಾಗಿ, ನಮ್ಮ ಕೆಲಸಗಳಲ್ಲಿ ಅವರು ಮಧ್ಯ ಪ್ರವೇಶಿಸುವುದಿಲ್ಲ ಅಥವಾ ಯಾವ ತೊಂದರೆಗಳನ್ನು ನೀಡುತ್ತಿಲ್ಲ. ಇಂಥ ವ್ಯಕ್ತಿಗಳನ್ನು ಇತರರಿಗೆ ಹೋಲಿಸಿದರೆ ರ್‍ಯಾಂಕ್ ವಿಜೇತರಾಗುತ್ತಾರೆ.

ನಾವು ಕೆಲವೊಮ್ಮೆ ಕೆಟ್ಟವರೊಂದಿಗೂ ವ್ಯವಹರಿಸಬೇಕಾಗುತ್ತದೆ. ಉದಾಹರಣೆಗೆ: ನಾನು **ಗ್ವೇ ಜ್ಹೋ** ದಲ್ಲಿ ಬೋಧಿಸುತ್ತಿದ್ದಾಗ, ಪ್ರಪ್ರಥಮ ಬಾರಿ ಯಾವನೋ ಒಬ್ಬನು ತರಗತಿಯ ಅವಧಿಯಲ್ಲಿ ಬಂದು, ಅವನ ಮುತ್ತಾತ ನನ್ನನ್ನು ನೋಡಬಯಸಿದ್ದಾನೆಂದು ಹೇಳಿ, ಅವನ ಮುತ್ತಾತ ಅನೇಕ ವರ್ಷಗಳ ಕಾಲ ಅಭ್ಯಾಸ ನಿರತನಾಗಿದ್ದನ್ನು ವಿವರಿಸಿದ. ಈ ವ್ಯಕ್ತಿಯಲ್ಲಿ ಋಣಾತ್ಮಕ ಪ್ರಭೆಯನ್ನು ಮತ್ತು ನಿಷ್ಕರುಣೆಯ ಜೊತೆಗೆ ಹಳದಿ ವರ್ಣದ ಮುಖವನ್ನು ನಾನು ಕಂಡೆ, ಆಗ ನಾನು ಅವರನ್ನು ಭೇಟಿಯಾಗಲು ಸಮಯವಿಲ್ಲವೆಂದು ಹೇಳಿ ಕಳುಹಿಸಿದೆ. ಅದರ ಫಲವಾಗಿ ಅವನ ಮುತ್ತಾತ ಅಸಮಾಧಾನಗೊಂಡು, ನನಗೆ ನಿರಂತರವಾಗಿ ತೊಂದರೆ ನೀಡತೊಡಗಿದ. ನಾನು ಬೇರೆಯವರೊಡನೆ ಹೊಡೆದಾಡಲು ಬಯಸುವುದಿಲ್ಲ. ಅವನು ನನ್ನ ಮೇಲೆ ಕೆಟ್ಟ ವಸ್ತುಗಳನ್ನೆಸೆದರೂ, ನಾನು ಅದನ್ನು ನಿವಾರಿಸಿ, ನಂತರ ಬೋಧನೆಯಲ್ಲಿ ನಿರತನಾದೆ.

---

6. **ಗ್ವೇ ಜ್ಹೋ** – ನೈಋತ್ಯ ಚೀನಾದ ಪ್ರಾಂತ್ಯ

**ಮಿಂಗ್ ಸಾಮ್ರಾಜ್ಯ** ದಲ್ಲಿ ತಾವೋ ತತ್ವದ ಅಭ್ಯಾಸಾವಧಿಯಲ್ಲಿ ಹಾವಿನಿಂದ ಆವರಿಸಿದ್ದ ತಾವೋ ತತ್ವಜ್ಞನೊಬ್ಬನಿದ್ದ. ತನ್ನ ಅಭ್ಯಾಸವನ್ನು ಪೂರ್ಣಗೊಳಿಸದೆ ಇವನು ಸಾವನ್ನಪ್ಪಿದ. ಇವರ ದೇಹವನ್ನು ಆವರಿಸಿದ್ದ ಹಾವು ಮಾನವ ರೂಪ ತಾಳಿತು. ಆ ವ್ಯಕ್ತಿಯ ಮುತ್ತಾತ ಮಾನವ ರೂಪದಲ್ಲಿದ್ದ ಹಾವಾಗಿದ್ದ, ಏಕೆಂದರೆ ಅವನ ಸ್ವಭಾವ ಬದಲಾಗಲಿಲ್ಲ. ಅವನು ನನಗೆ ತೊಂದರೆ ನೀಡಲು ದೊಡ್ಡ ಹಾವಾಗಿ ರೂಪಾಂತರಗೊಂಡ. ಅವನು ಹೋದನೆಂದು ಆಲೋಚಿಸಿದೆ, ಹಾಗಾಗಿ ಅವನನ್ನು ನನ್ನ ಕೈಯಿಂದ ಹಿಡಿದೆ, ಆಗ ನಾನು ಕರಗಿಸುವ ಗಾಂಗ್ ಎಂಬ ಶಕ್ತಿಯುತ ಗಾಂಗ್‌ನ್ನು ಅವನ ದೇಹದ ಕೆಳಭಾಗವನ್ನು ಕರಗಿಸಲು ಬಳಸಿದೆ ಮತ್ತು ನೀರಿನಂತೆ ತಿರುಗಿದ. ಆಗ ಅವನ ದೇಹದ ಮೇಲ್ಭಾಗ ಮನೆಯತ್ತ ಓಡಿತು.

ಒಂದು ದಿನ ಗ್ವೇ-ಜ್ಹೋ ನಲ್ಲಿನ ನಮ್ಮ ನಿರ್ದೇಶಕ ಕೇಂದ್ರದ ಸ್ವಯಂಸೇವಕ ನಿರ್ದೇಶಕರ ಅನುಯಾಯಿಯೊಬ್ಬ ಅವನ ಮುತ್ತಜ್ಜನು ಅವರನ್ನು ನೋಡಬಯಸಿದ್ದಾನೆಂದು ಹೇಳಿದ. ನಿರ್ದೇಶಕರು ಅಲ್ಲಿಗೆ ಹೋಗಿ, ಒಬ್ಬ ಕುಳಿತಿರುವ ವ್ಯಕ್ತಿಯ ನೆರಳು, ಅವನ ಪ್ರಖರವಾದ ನೀಲಿನ ಬೆಳಕಿನ ಕಣ್ಣುಗಳ ಹೊರತಾಗಿ ಬೇರೆನನ್ನೂ ನೋಡಲಾಗದಂಥ ಒಂದು ಕಪ್ಪು ಗುಹೆಯನ್ನು ಪ್ರವೇಶಿಸಿದರು. ಆ ವ್ಯಕ್ತಿಯು ಕಣ್ಣುಗಳನ್ನು ತೆರೆದಾಗ, ಆ ಗುಹೆ ಹೊಳೆಯಿತು, ಆತ ಕಣ್ಮುಚ್ಚಿದಾಗ ಆ ಗುಹೆಯಲ್ಲಿ ಕತ್ತಲಾಯಿತು. ಅವನು ಪ್ರಾದೇಶಿಕ ಉಪಭಾಷೆಯಲ್ಲಿ ಹೇಳಿದ, ಲಿ ಹಾಂಗ್ ಜಿ ಮತ್ತೆ ಬರಲಿದ್ದಾರೆ, ಮತ್ತು ನಮ್ಮ ಈ ಸಮಸ್ಯೆಗೆ ಮತ್ತೊಮ್ಮೆ ಯಾರನ್ನೂ ಕರೆತರತಕ್ಕದ್ದಲ್ಲ. ತಪ್ಪು ನನ್ನದು, ಲಿ ಹಾಂಗ್ ಜಿ ಜನರ ಆತ್ಮೋದ್ಧಾರಕ್ಕಾಗಿ ಬರಲಿದ್ದಾರೆ. ಅವನ ಅನುಯಾಯಿ ಅವನನ್ನು ಕೇಳಿದ, ಮುತ್ತಾತ, ದಯವಿಟ್ಟು ನಿಂತುಕೊಳ್ಳಿ, ನಿಮ್ಮ ಕಾಲುಗಳಿಗೇನಾಗಿದೆ? ಆಗ ಅವನು ಉತ್ತರಿಸಿದ ನಾನು ಮತ್ತೆಂದು ನಿಲ್ಲದಂತಹ ಗಾಯಗಳು ಕಾಲುಗಳಿಗೆ ಉಂಟಾಗಿವೆ. ಆಗ ಹೇಗೆ ಗಾಯವಾಯಿತೆಂದು ಕೇಳಲಾಯಿತು. ಅವನು ಸಮಸ್ಯೆಯುಂಟಾದ ಪ್ರಕ್ರಿಯೆಯನ್ನು ವಿವರಿಸಿದ. 1993 ರಲ್ಲಿ ಬೀಜಿಂಗ್‌ನ ಓರಿಯಂಟಲ್ ಹೆಲ್ತ್ ಎಕ್ಸ್‌ಪೋದಲ್ಲಿ ಅವನು ಮತ್ತೆ ನನ್ನ ವಿಷಯದಲ್ಲಿ ತಲೆ ಹಾಕಿದ. ಏಕೆಂದರೆ ಅವನು ಯಾವಾಗಲೂ ಕೆಟ್ಟ ಕೆಲಸಗಳಿಗೆ ಬದ್ಧನಾಗಿರುತ್ತಿದ್ದ. ಮತ್ತು ನನ್ನ ದಫಾ ಬೋಧನೆಯಲ್ಲಿ ಹಸ್ತಕ್ಷೇಪ ಮಾಡುತ್ತಿದ್ದ. ಆಗ ನಾನು ಅವನನ್ನು ಸಂಪೂರ್ಣವಾಗಿ ನಿವಾರಿಸಿದೆ. ನಂತರ ಅವನ ಸಂಬಂಧಿಗಳು ನನ್ನ ಮೇಲೆ ಕ್ರಮ ಕೈಗೊಳ್ಳಲು ಬಯಸಿದರು. ಆ ಸಂದರ್ಭದಲ್ಲಿ ನಾನು ಕೆಲವು ಮಾತುಗಳನ್ನು ಹೇಳಿದೆ. ಆಗ ಅವರು ಆಘಾತಕ್ಕೊಳಗಾಗಿ ಮತ್ತೆ ನನ್ನ ವಿಷಯದಲ್ಲಿ ತಲೆ ಹಾಕಲಿಲ್ಲ. ಅವರು ಕೂಡಾ ಏನಾಗುತ್ತಿದೆಯೆಂದು ಅರ್ಥ ಮಾಡಿಕೊಂಡರು. ಅವರಲ್ಲಿ ಕೆಲವರು ಸಾಧನೆಯ ಅಭ್ಯಾಸವನ್ನು ದೀರ್ಘಾವಧಿಯವರೆಗೆ ಕೈಗೊಂಡರು. ಸಂಪೂರ್ಣವಾಗಿ ಸಾಮಾನ್ಯ ಮನುಷ್ಯರಂತೆಯೇ ಇದ್ದಾರೆ, ಇವು ಪವಿತ್ರೀಕರಣದ ಸಂದರ್ಭದ ಕೆಲವು ಉದಾಹರಣೆಗಳು.

**ಅಭ್ಯಾಸದ ಅನುಬಂಧ (ಜ್ಯೂ-ಯೊ-ಕುಹ್)**

ಅಭ್ಯಾಸದ ಅನುಬಂಧವೆಂದರೇನು? ಅಭ್ಯಾಸಿಗರ ಸಮುದಾಯದ ಚಿಗಾಂಗ್ ಬೋಧನೆಯ ಹಂತದಲ್ಲಿ ಬಹುತೇಕರು ಇದನ್ನು ಸಾಧನೆಯ ವರ್ಗವಾಗಿ ಬೋಧಿಸುತ್ತಾರೆ. ವಾಸ್ತವದಲ್ಲಿ ಇದು ಈ ವರ್ಗದಲ್ಲಿಲ್ಲ. ಇದರಲ್ಲಿ ಕೌಶಲ್ಯ, ಮಂತ್ರಪಠಣ ಮತ್ತು ತಂತ್ರಗಳಾಗಿ ಬೋಧಿಸಲಾಗುತ್ತದೆ. ಇದು ರೋಗವನ್ನು ಗುಣಪಡಿಸಬಲ್ಲದು. ಮತ್ತು ಇದರ ಶುಶ್ರೂಷೆಯ ವಿಧಾನ ಅಪೂರ್ವವಾದುದು. ಉದಾಹರಣೆಗೆ: ಯಾರಿಗಾದರೂ ಮುಖದಲ್ಲಿ ಬೊಕ್ಕೆ ಬೆಳೆದಿದ್ದರೆ, ಅಭ್ಯಾಸಿಗ ನೆಲದ ಮೇಲೆ ಸಿನ್ನಾಬಾರ್‌ನಲ್ಲಿ ಅದ್ದದ ಒಂದು ಬ್ರಶ್‌ನಿಂದ ಘಿ ಬರೆದು ಅದರ ಕೇಂದ್ರದಲ್ಲಿ ನಿಲ್ಲಲು ಹೇಳುತ್ತಾನೆ. ನಂತರ ಅವನು ಮಂತ್ರಪಠಣವನ್ನು ಆರಂಭಿಸುತ್ತಾನೆ. ನಂತರ ಅದೇ ಬ್ರಶ್‌ನಿಂದ ನಿಂತಿರುವ ವ್ಯಕ್ತಿಯ ಮುಖದ ಮೇಲೆ ವೃತ್ತವನ್ನು ರಚಿಸುತ್ತಾನೆ. ಹೀಗೆ ರಚಿಸುವಾಗ ಮಂತ್ರವನ್ನು ಉಚ್ಚರಿಸುತ್ತಾನೆ. ಬೊಕ್ಕೆಯ ಮೇಲೆ ಚುಕ್ಕೆ ಇಡುವವರೆಗೆ ಇದನ್ನು ಮುಂದುವರೆಸುತ್ತಾನೆ. ಅದಾದ ನಂತರ ನೀವು ಹುಷಾರಾಗಿದ್ದೀರೆಂದು ಹೇಳುತ್ತಾನೆ. ನಂತರ ಆ ಬೊಕ್ಕೆ ವಾಸ್ತವವಾಗಿ ಚಿಕ್ಕದಾಗಿ ಮತ್ತು ನೋವಿಲ್ಲದಂತಾಗುತ್ತದೆ. ಇದು ಹೀಗೆ ಪರಿಣಾಮಕಾರಿ. ಅವನು ಸಣ್ಣ ನೋವುಗಳನ್ನು ಗುಣಪಡಿಸಬಲ್ಲ. ಆದರೆ ದೊಡ್ಡ ನೋವುಗಳನ್ನಲ್ಲ, ನಿಮ್ಮ ತೋಳುಗಳು ನೋಯುತ್ತಿದ್ದರೆ, ಮಂತ್ರಪಠಣ ಮಾಡುತ್ತಾ ನಿಮ್ಮ ತೋಳುಗಳನ್ನು ಹೊರಚಾಚಲು ಹೇಳುತ್ತಾನೆ.

---

7. **ಮಿಂಗ್ ಸಾಮ್ರಾಜ್ಯ** – ಚೀನಾದ ಇತಿಹಾಸದಲ್ಲಿ ಕ್ರಿ.ಶ. 1368–1644 ರವರೆಗಿನ ಅವಧಿಯ ಸಾಮ್ರಾಜ್ಯ

**ಹುಹ್–ಗೂ** ಕೇಂದ್ರಕ್ಕೆ ಒಂದು ಉಸಿರು ಬಿಡುತ್ತಾನೆ. ಅನಂತರದ ಕೆಲವು ಸಣ್ಣ ಕ್ರಿಯೆಗಳ ಮೂಲಕ ನೋವು ಉಪಶಮನವಾಗುತ್ತದೆ.

ತಾವ್ರೋ ಶಾಲೆಯಲ್ಲಿನ ಪ್ರಾಪಂಚಿಕ ಅಡ್ಡ ದಾರಿಗಳು ಜೀವನದ ಪ್ರಗತಿಯ ಸಾಧನೆ ಮಾಡಲಾರವು. ಅದು ಸಂಪೂರ್ಣವಾಗಿ ಭವಿಷ್ಯವನ್ನು ಹೇಳಲು, **ಫೆಂಗ್ ಶೂಯಿ** ಕೆಟ್ಟ ಆತ್ಮಗಳನ್ನು ಓಡಿಸಲು ಮತ್ತು ರೋಗ ಗುಣಪಡಿಸುವುದಕ್ಕೆ ಅರ್ಪಿತವಾಗಿದೆ. ಇವುಗಳಲ್ಲಿ ಬಹುತೇಕ ಬಳಕೆಯಾಗುವುದು ಪ್ರಾಪಂಚಿಕ ಅಡ್ಡಹಾದಿಯ ಅಭ್ಯಾಸಗಳಿಗೆ, ಅವರು ರೋಗವನ್ನು ಶಮನಗೊಳಿಸಬಲ್ಲರು. ಆದರೆ ಅದರ ವಿಧಾನಗಳು ಸರಿಯಾದುವಲ್ಲ. ರೋಗ ನಿಧಾನಕ್ಕೆ ಅವರು ಬಳಸುವ ವಿಧಾನದ ಬಗ್ಗೆ ನಾನೇನು ಹೇಳುವುದಿಲ್ಲ. ಆದರೆ ನಮ್ಮ ದಫಾದ ಅಭ್ಯಾಸಿಗರು ಈ ಬಗೆಯ ಕೆಳಹಂತದ ಮತ್ತು ಕೆಟ್ಟ ಸುದ್ದಿಗಳನ್ನು ಕೊಂಡೊಯ್ಯಬಾರದು. ಪ್ರಾಚೀನ ಚೀನಾದಲ್ಲಿ ರೋಗ ನಿವಾರಣೆಯ ವಿಧಾನಗಳನ್ನು ವಿಷಯವಾರು ವಿಂಗಡಣೆ ಮಾಡಲಾಗಿತ್ತು. ಅವುಗಳೆಂದರೆ, ಮೂಳೆ ಮುರಿತ–ಹೊಂದಾಣಿಕೆಯ ವಿಧಾನಗಳು, ಆಕ್ಯುಪಂಕ್ಚರ್ಸ್, ಮರ್ದನ, ಪಾದವೈದ್ಯ, ಆಕ್ಯುಪ್ರೆಶರ್, ಚಿಗಾಂಗ್ ರೋಗ ವಿಧಾನ, ಗಿಡಮೂಲಿಕಾ ವಿಧಾನ, ಮತ್ತಿತರ ಅವುಗಳನ್ನು ಅನೇಕ ವಿಭಾಗಗಳಾಗಿ ವಿಂಗಡಿಸಲಾಗಿದೆ. ಪ್ರತಿಯೊಂದು ರೋಗ ವಿಧಾನವು ಒಂದು ವಿಷಯ. ಈ ಜ್ಯೂ–ಯೊ–ಕುಹ್ ಅನ್ನು ಹದಿಮೂರನೇ ವಿಷಯವಾಗಿ ವಿಭಾಗಿಸಲಾಗಿದೆ. ಇದು ಕೇವಲ ನಮ್ಮ ಸಾಧನೆಯ ಅಭ್ಯಾಸದ ವರ್ಗಕ್ಕಷ್ಟೆ ಸೀಮಿತವಲ್ಲ, ಇದು ಗಾಂಗ್‌ನ್ನು ಸಾಧನೆಯ ಅಭ್ಯಾಸದಲ್ಲಿ ಗಳಿಸುವುದಕ್ಕಾಗಿ ಅಲ್ಲ, ಇದು ಒಂದು ತಂತ್ರವಿದ್ದಂತೆ.

---

೮. **ಹುಹ್–ಗೂ** – ಹೆಬ್ಬೆರಳು ಮತ್ತು ತೋರುಬೆರಳಿನನಡುವಿನ ಆಕ್ಯುಪಂಕ್ಚರ್ ಕೇಂದ್ರ.

೯. **ಫೆಂಗ್ ಶೂಯಿ** – ಚೀನಾದ ಭೂ ಸಂಬಂಧಿತ ಅಧ್ಯಯನ ಶಾಸ್ತ್ರ.

# ಉಪನ್ಯಾಸ ಆರು

**ಸಾಧನೆಯ ಉನ್ಮಾದ :**

ಸಾಧನೆಯ ಉನ್ಮಾದವು ಸಾಧನೆ ಮಾಡುವ ಸಮಾಜದಲ್ಲಿರುತ್ತದೆ. ಇದು ಜನತೆಯ ಮೇಲೆ ಭಾರೀ ಪರಿಣಾಮ ಬೀರುತ್ತದೆ. ಇದನ್ನು ಹೀಗೆಂದು ಕೆಲವರು ಎಷ್ಟೊಂದು ಪ್ರಚಾರ ಮಾಡಿದ್ದಾರೆಂದರೆ, **ಚಿಗಾಂಗ್**ನ್ನು ಅಭ್ಯಾಸ ಮಾಡುವುದಕ್ಕೆ ಭಯ ಪಡುತ್ತಾರೆ. ಚಿಗಾಂಗ್‌ನ್ನು ರೂಢಿಸಿ ಕೊಳ್ಳುವುದರಿಂದ ಸಾಧನೆಯ ಉನ್ಮಾದಕ್ಕೊಳಗಾಗುತ್ತಾರೆಂದು ಕೇಳುವುದರಿಂದ ಅವರು ಇನ್ನೂ ಭಯಭೀತರಾಗುತ್ತಾರೆ. ಪ್ರಸ್ತುತ ನನ್ನ ವಿಚಾರದಲ್ಲಿ ಸಾಧನೆಯ ಉನ್ಮಾದ ಎನ್ನುವುದು ಅಸ್ತಿತ್ವದಲ್ಲೇ ಇಲ್ಲ.

ಕೆಲವರು ಆತ್ಮಾವಲೋಕನದಿಂದ ಗರ ಬಡಿದಂತಿರುತ್ತಾರೆ. ಏಕೆಂದರೆ, ಅವರ ಮನಸ್ಥಿತಿ ನಿಷ್ಕಪಟವಾಗಿರುವುದಿಲ್ಲ ಅವರ ಮನಸ್ಥಿತಿ ಸ್ಥಿಮಿತದಲ್ಲಿರುವುದಿಲ್ಲ. ಅವರ ದೇಹವನ್ನು ಆತ್ಮವು ಆವರಿಸಿದ್ದು ಅವರ ಮನಸ್ಸನ್ನು ಕೇಂದ್ರೀಕರಿಸಲಾಗದೆ ಅವರನ್ನು ಅರಚುವಂತೆ ಮಾಡುತ್ತದೆ. ಚಿಗಾಂಗ್‌ನ್ನು ಅಭ್ಯಸಿಸುವುದರಿಂದ ಈ ರೀತಿ ಆಗುವುದನ್ನು ಕಂಡು ಜನರು ಚಿಗಾಂಗ್‌ನ್ನು ಅಭ್ಯಸಿಸಲು ಭಯಪಡುತ್ತಾರೆ. ಬಹಳಷ್ಟು ಜನ ಇದನ್ನೇ ಚಿಗಾಂಗ್ ಎಂದು ತಿಳಿದಿರುತ್ತಾರೆ. ಆದರೆ ಇದು ಚಿಗಾಂಗ್ ಅಭ್ಯಾಸವಾಗುವುದು ಹೇಗೆ? ಇದು ಕೆಳವರ್ಗದ ಸ್ಥಿತಿಯನ್ನು ಗುಣಪಡಿಸುವುದು ಮತ್ತು ಇದು ಅಪಾಯಕಾರಿ. ನೀವು ಇದರೊಂದಿಗೆ ಹೊಂದಿಕೊಂಡಿದ್ದರೆ, ನಿಮ್ಮ ನಿಮ್ಮ ಮನಸ್ಥಿತಿ ನಿಮ್ಮ ಹಿಡಿತದಲ್ಲಿ ಇರಲು ಸಾಧ್ಯವಿಲ್ಲ. ಹಾಗೆಯೇ ನಿಮ್ಮ ದೇಹವು ಸಹಾಯಕ ಪ್ರಜ್ಞೆಯಿಂದ ನಿಯಂತ್ರಿಸಲ್ಪಡುತ್ತದೆ. ವಿದೇಶಿ ಸುದ್ದಿಗಳು, ಆತ್ಮವನ್ನು ಪಡೆಯುವಿಕೆ, ಪ್ರಾಣಿಗಳು ಇತ್ಯಾದಿ. ನೀವು ಒಂದು ವೇಳೆ ಅಪಾಯಕಾರಿ ಕೃತ್ಯಗಳಲ್ಲಿ ತೊಡಗಿದ್ದರೆ, ಅದರ ಕಾರಣ ದಿಂದಾಗಿ ಅಭ್ಯಾಸಿಗರ ಸಮುದಾಯದ ಮೇಲೆ ದುಷ್ಪರಿಣಾಮ ಉಂಟಾಗುತ್ತದೆ. ಇದು ದುರ್ನೀತಿಯಿಂದ ಆಗುತ್ತದೆ, ಇದು ಸಾಧನೆಯ ಉನ್ಮಾದವಲ್ಲ. ಕೆಲವು ಚಿಗಾಂಗ್ ಅಭ್ಯಾಸಿಗರು ಸಾಧನೆಯ ಉನ್ಮಾದವನ್ನು ಕೂಡ ನಂಬುತ್ತಾರೆ. ಇದರ ಬಗ್ಗೆ ಯಾರಿಗೂ ತಿಳಿದಿಲ್ಲ. ಪ್ರತ್ಯಕ್ಷವಾಗಿ ಚಿಗಾಂಗ್ ಅಭ್ಯಾಸವು ಉನ್ಮಾದಕ್ಕೆ ದಾರಿ ಮಾಡಿಕೊಡುವುದಿಲ್ಲ. ಬಹುತೇಕರು ಈ ಪರಿಭಾಷೆಯನ್ನು ಸಾಹಿತ್ಯ ಕೃತಿಗಳಿಂದ ಉದಾಹರಣೆಗೆ ಯುದ್ಧ ಕಲೆಗಳ ಕಾದಂಬರಿಗಳು ಇತ್ಯಾದಿಗಳಿಂದ ಸಾಧನೆಯ ಉನ್ಮಾದ, ಚಿಗಾಂಗ್ ಎಂಬ ಶಬ್ದಗಳನ್ನು ಕಲಿತರು. ಇದನ್ನು ನಂಬದಿದ್ದರೆ, ಪ್ರಾಚೀನ ಮತ್ತು ಅಭ್ಯಾಸಕ್ಕೆ ಸಂಬಂಧಿಸಿದ ಕೃತಿಗಳಲ್ಲಿ ಇದನ್ನು ನಾವು ಕಾಣಲಾಗದು. ಹಾಗಾದರೆ ಸಾಧನೆಯ ಉನ್ಮಾದವುಂಟಾಗುವುದು ಹೇಗೆ? ಅದು ಅಸ್ತಿತ್ವದಲ್ಲಿರುವುದು ಅಸಾಧ್ಯ.

ಸಾಧನೆಯ ಉನ್ಮಾದದಲ್ಲಿ ಹಲವು ಪ್ರಕಾರಗಳಿವೆ ಎಂದು ನಂಬಲಾಗಿದೆ. ನಾನು ಹೇಳಿರುವುದು ಕೂಡ ಅದರಲ್ಲೊಂದು. ಏಕೆಂದರೆ, ಮನಸ್ಸು ನಿಷ್ಕಪಟವಾಗಿರುವುದಿಲ್ಲ. ಚಿಗಾಂಗ್ ಅಭ್ಯಾಸದ ಆರಂಭದಲ್ಲಿ ಆತ್ಮವು ಅಥವಾ ಪಶುತ್ವವು ಆವರಿಸಿರುವುದರಿಂದ ಹಲವರು ವಿಚಿತ್ರವಾಗಿ ವರ್ತಿಸುತ್ತಾರೆ. ಕೆಲವರು ನೈಜ ಅಭ್ಯಾಸವನ್ನು ಸಿದ್ಧಿಸಿಕೊಂಡಾಗ ಈ ಬಗೆಯ ವಿಚಿತ್ರ ವರ್ತನೆಗಳಿಂದ ಬಿಡುಗಡೆ ಹೊಂದುತ್ತಾರೆ, ಮುಖ್ಯ ಪ್ರಜ್ಞೆಯನ್ನು ಕಳೆದುಕೊಳ್ಳುತ್ತಾರೆ. ಇದರಿಂದ ಅಂಥವರು ಎಲ್ಲ ತಿಳುವಳಿಕೆಯನ್ನು ಕಳೆದುಕೊಂಡು ದೇಹವನ್ನು ಬೇರೊಬ್ಬರ ಹಿಡಿತಕ್ಕೆ ದಾರಿ ಮಾಡಿಕೊಡುತ್ತಾರೆ. ಅವರು ಮಾನಸಿಕವಾಗಿ ಗುರಿ ತಪ್ಪುತ್ತಾರೆ ಮತ್ತು ಅವರ ದೇಹವು ಸಹಾಯಕ ಪ್ರಜ್ಞೆ ಮತ್ತು ಬಾಹ್ಯ ಸುದ್ದಿಗಳಿಂದ ನಿಯಂತ್ರಿಸಲ್ಪಡುತ್ತದೆ. ಆಗ ಅಂಥವರು ವಿಚಿತ್ರವಾಗಿ ವರ್ತಿಸುತ್ತಾರೆ, ಅಂಥವರು ಕಟ್ಟಡದ ಮೇಲಿಂದ ಧುಮುಕುತ್ತಾರೆ ಅಥವಾ ನೀರಿಗೆ ಹಾರುತ್ತಾರೆ. ಹೀಗೆ ಮಾಡಲು ಹೇಳಲಾಗಿದೆಯೇ? ಅವನು ಸ್ವತ: ಜೀವಿಸದೆ ಹಾಗೂ ತನ್ನ ದೇಹದಲ್ಲಿ ಮತ್ತೊಬ್ಬರಿಗೆ ಜಾಗ ಮಾಡಿಕೊಡುತ್ತಾನೆ. ಇದು ಸಾಧನೆಯ ಉನ್ಮಾದವಲ್ಲ. ಆದರೆ ಇದು ಚಿಗಾಂಗ್ ಅಭ್ಯಾಸದಲ್ಲಿನ ಅಡ್ಡದಾರಿಯ ಪಯಣ ಮತ್ತು ಒಬ್ಬನಿಂದ ಆರಂಭದ ಹಂತದ ಉದ್ದೇಶಪೂರ್ವಕವಾಗಿ ಹೀಗೆ ನಡೆದುಕೊಳ್ಳುವುದು ಕಾರಣವಾಗಿದೆ. ಅನೇಕರು ತಮ್ಮ ದೇಹವನ್ನು ಸುತ್ತಲೂ ತಿರುಗಿಸುವುದೇ ಚಿಗಾಂಗ್ ಅಭ್ಯಾಸವೆಂದು ತಿಳಿದಿದ್ದಾರೆ. ವಾಸ್ತವವಾಗಿ

---

1. **ಚಿಗಾಂಗ್ –** ಪಾರಂಪರಿಕ ಚೀನೀ ವ್ಯಾಯಾಮ ಪದ್ಧತಿ

ಒಬ್ಬನು ಚಿಗಾಂಗ್‌ನ ನೈಜ ಅಭ್ಯಾಸದ ಸ್ಥಿತಿಯಲ್ಲಿ ಇದು ಮಹತ್ವವಾದ ಪರಿಣಾಮದೆಡೆಗೆ ಕೊಂಡೊಯ್ಯುತ್ತದೆ. ಅದು ಚಿಗಾಂಗ್ ಅಭ್ಯಾಸವಲ್ಲ, ಆದರೆ ಸಾಮಾನ್ಯ ಜನರ ಹೊಂದಾಣಿಕೆ ಮತ್ತು ಫಲಿತಾಂಶವಾಗಿದೆ.

ಚಿಗಾಂಗ್ ಅಭ್ಯಾಸದ ಮತ್ತೊಂದು ಪ್ರಕರಣದಲ್ಲಿ ಯಾವಾಗ ದೇಹದಲ್ಲಿ **ಚೀ** ತುಂಬಿಕೊಳ್ಳುತ್ತದೆಯೊ ಆಗ ಅಥವಾ ಯಾವಾಗ ಚೀ ತಲೆಯ ಮೇಲಿಂದ ಕೆಳಗಿಳಿಯುವುದಿಲ್ಲವೋ ಆಗ ಭಯಪಡುತ್ತಾನೆ. ಮಾನವ ದೇಹವು ಒಂದು ಚಿಕ್ಕ ವಿಶ್ವ. ವಿಶೇಷವಾಗಿ ತಾವೋ ಅಭ್ಯಾಸದಲ್ಲಿ, ಚೀ ಪ್ರವೇಶಿಸುತ್ತಿರುವಾಗ, ಈ ಬಗೆಯ ಸಮಸ್ಯೆಗಳಿಗೆ ಅಭ್ಯಾಸಿಗ ಒಳಗಾಗುತ್ತಾನೆ. ಒಂದು ವೇಳೆ ಚೀ ಪ್ರವೇಶಿಸದಿದ್ದರೆ ಅದು ಅಲ್ಲಿಯೇ ನೆಲೆಸುತ್ತದೆ. ಇದು ತಲೆಯಲ್ಲಷ್ಟೇ ಇರುವುದಿಲ್ಲ. ದೇಹದ ಬೇರೆ ಅಂಗಗಳಿಗೂ ವ್ಯಾಪಿಸುತ್ತದೆ. ಹೀಗಿದ್ದರೂ ಮಾನವನ ಬಹುಮುಖ್ಯ ಸೂಕ್ಷ್ಮ ಸಂವೇದನೆಯ ಜಾಗವೆಂದರೆ ತಲೆ, ಚೀ ತಲೆಯ ಮೇಲ್ಭಾಗದೆಡೆಗೆ ಆರೋಹಣಗೊಳ್ಳುತ್ತದೆ ಮತ್ತು ನಂತರ ಕೆಳಗೆ ಬರುತ್ತದೆ. ಒಂದು ವೇಳೆ ಚೀ ಹೀಗೆ ಚಲಿಸದಿದ್ದಲ್ಲಿ ಅಂಥವನು ಚೀ ಯಿಂದಾಗಿ ತಲೆಭಾರವನ್ನು ಮತ್ತು ತಲೆಯ ಮೇಲೆ ದಪ್ಪನೆಯ ಟೋಪಿ ಧರಿಸಿರುವಂತೆ ಅನುಭವ ಪಡೆಯುತ್ತಾನೆ ಇತ್ಯಾದಿ. ಆದರೆ ಚೀ ಯಾವುದನ್ನೂ ನಿಯಂತ್ರಿಸುವುದಿಲ್ಲ. ಮತ್ತು ಇತರೆ ತೊಂದರೆಗಳಿಗೆ ಅಥವಾ ಬಳಲುವಿಕೆ ಮುಂತಾದವುಗಳಿಗೆ ಇದು ಕಾರಣವಾಗುವುದಿಲ್ಲ. ಕೆಲವರು ಚಿಗಾಂಗ್ ಬಗ್ಗೆ ಸತ್ಯವನ್ನು ತಿಳಿದಿಲ್ಲ ಮತ್ತು ಅಲೌಖಿಕವಾಗಿ ಅದರ ಬಗ್ಗೆ ಮಾತನಾಡುತ್ತಾರೆ ಮತ್ತು ಇದು ಅರಾಜಕ ಸ್ಥಿತಿಯತ್ತ ತೆರಳುತ್ತದೆ. ಆ ಪ್ರಕಾರವಾಗಿ ಚೀ ತಲೆಯೆಡೆಗೆ ಆರೋಹಣವಾದಾಗ ಮತ್ತು ಕೆಳಗೆ ಬರದಿರುವಾಗ ಅಂಥವನು ಸಾಧನೆಯ ಉನ್ಮಾದಕ್ಕೊಳಗಾಗುತ್ತಾನೆ. ಅಂಥವನು ದಿಕ್ಕು ತಪ್ಪಿದ್ದಾನೆ ಮತ್ತು ಅದಕ್ಕಾಗಿ ಹೀಗಾಗಿದೆ ಎಂದು ಕೆಲವರು ಭಾವಿಸುತ್ತಾರೆ. ಈ ಫಲಿತಾಂಶದಿಂದಾಗಿ ಅನೇಕರು ತಂತಾನೇ ಭಯಪಡುತ್ತಾರೆ.

ಒಂದು ವೇಳೆ ಚೀ ತಲೆಯೆಡೆಗೆ ಆರೋಹಣವಾಗಿ ಅದು ದೇಹದ ಕೆಳಭಾಗವನ್ನು ವ್ಯಾಪಿಸಿಕೊಳ್ಳದಿರುವುದು ಕೇವಲ ತಾತ್ಕಾಲಿಕ ಸ್ಥಿತಿ. ಕೆಲವರಿಗೆ ಇದು ದೀರ್ಘಾವಧಿಯಲ್ಲಿ ಆರು ತಿಂಗಳವರೆಗೆ ಇಳಿಯದಿರಬಹುದು. ಅಂತಹ ಸ್ಥಿತಿಯಲ್ಲಿ ಅವನು ನಿಜವಾದ ಚಿಗಾಂಗ್ ಗುರುಗಳ ಬಳಿ ಮಾರ್ಗದರ್ಶನ ಪಡೆದರೆ, ಅದು ಕೆಳಗೆ ಇಳಿಯಬಹುದು. ಚಿಗಾಂಗ್ ಅಭ್ಯಾಸದಲ್ಲಿ ಇಂತಹ ತೊಂದರೆಯನ್ನು ಅನುಭವಿಸುತ್ತಿರುವವರು ಮೊದಲು ತಮ್ಮ ಆತ್ಮಪ್ರಕೃತಿಯೊಳಗೆ ಕಾರಣಗಳನ್ನು ಹುಡುಕಿಕೊಳ್ಳಬೇಕು. ಒಂದು ವೇಳೆ ಯಾವುದಾದರೂ ಹಂತದಲ್ಲಿ ಬಹುಕಾಲದಿಂದ ನೀವು ಜಡಗೊಂಡಿದ್ದರೆ ಹೇಗಾದರೂ ನೀವು ನಿಮ್ಮ ಆತ್ಮಪ್ರಕೃತಿಯನ್ನು ಉನ್ನತ ಗೊಳಿಸಬೇಕಾಗುತ್ತದೆ. ಒಮ್ಮೆ ನಿಜವಾಗಿ ನೀವು ಆತ್ಮಪ್ರಕೃತಿಯನ್ನು ದೃಢವಾಗಿ ಅಭಿವೃದ್ಧಿಗೊಳಿಸದೆ, ನೀವು ನಿಮ್ಮ ಭೌತಿಕ ದೇಹದೊಳಗೆ ಗಾಂಗನ್ನು ವರ್ಗಾಯಿಸಲಾರಿರಿ. ಅದಾದಾಗ ಮಾತ್ರ ನೀವು ಹೊಸ ಶುದ್ಧ ಬದಲಾವಣೆಯಿಂದ ನಿರ್ಮಾಣಗೊಳ್ಳುತ್ತೀರಿ. ಒಂದು ವೇಳೆ ಚೀ ಕಾರ್ಯವು ಸ್ಥಗಿತಗೊಂಡರೂ, ಅದು ಸಮಸ್ಯೆಯನ್ನೇನೂ ತರುವುದಿಲ್ಲ. ಅದೆಲ್ಲ ನಮ್ಮ ಮನಸ್ಸಿನ ಭ್ರಾಂತಿಗಳಷ್ಟೆ ಸುಳ್ಳು ಚಿಗಾಂಗ್ ಬೋಧಕನೊಬ್ಬನಿಂದ ಕಲಿಯುತ್ತಿರುವವನು ಮಾತ್ರ, ಚೀ ತಲೆಯ ಮೇಲ್ಭಾಗಕ್ಕೆ ಏರುತ್ತಿದ್ದಂತೆ ಗೊಂದಲಕ್ಕೊಳಗಾಗುತ್ತಾನೆ. ಈ ಭಯದ ಕಾರಣದಿಂದ ವ್ಯಕ್ತಿಯು ಕೆಲವು ಸಮಸ್ಯೆಗಳಿಗೆ ಒಳಗಾಗಬಹುದು. ಒಮ್ಮೆ ನೀವು ಭಯಪಟ್ಟರೆ, ಅದು ಭಯದೊಂದಿಗೆ ಬೆಸೆದುಕೊಂಡಂತೆ, ಅದರಿಂದ ನೀವು ಹೆಚ್ಚು ಭಯಗೊಂಡು ರೋಗಗ್ರಸ್ಥರಂತೆ ಕಾಣುತ್ತೀರಿ. ಇಂತಹ ಸಂಬಂಧಗಳನ್ನು ನೀವು ಕಳೆದುಕೊಳ್ಳಬೇಕು. ಇಂದಿನ ಬೋಧನೆಯಿಂದ ನೀವು ಅದನ್ನೆಲ್ಲ ಕಲಿತು, ಮುಂದುವರೆದು ಭಯದಿಂದ ಮುಕ್ತಗೊಳ್ಳುತ್ತೀರಿ.

ಅಭ್ಯಾಸಿಗಳು ಭವಿಷ್ಯತ್ತಿನಲ್ಲಿ ಹಲವು ರೀತಿಯ ಗಾಂಗ್‌ಗಳನ್ನು ಅಭಿವೃದ್ಧಿ ಪಡಿಸಿಕೊಳ್ಳುವಾಗಲೂ, ದೈಹಿಕವಾಗಿ ಸಮತೋಲನವನ್ನು ಹೊಂದಿದಂತೆ ಅನುಭವಗೊಳ್ಳುವುದಿಲ್ಲ. ಹಲವು ಶಕ್ತಿಗಳು ದೇಹದಲ್ಲಿ ಅತ್ತಿಂದಿತ್ತ ಚಲಿಸುವುದರಿಂದ ಅಸಮತೋಲನದ ಅನುಭವವಾಗುತ್ತದೆ.

---

**2. ಚೀ** –ಚೈತನ್ಯ.

ನಿಮ್ಮ ಅಸಮತೋಲನಕ್ಕೆ ಕಾರಣ ನೀವು ಯಾವಾಗಲೂ ಕೆಲವು ತೊಂದರೆ ಗಳಿಂದ ಭಯಕ್ಕೊಳಗಾಗುವುದೂ ಆಗಿರುತ್ತದೆ. ನಿಜವೇನೆಂದರೆ, ನಿಮ್ಮ ದೇಹದಲ್ಲಿ ಬೆಳೆದಿರುವ ಅಂಶಗಳು ಸ್ವಲ್ಪ ಪ್ರಬಲವಾಗಿ, ಗಾಂಗ್, ಅಸಾಮಾನ್ಯ ಸಾಮರ್ಥ್ಯಗಳಾಗಿ ರೂಪುಗೊಂಡು ಸುತ್ತು ತಿರುಗುವಾಗ ನೀವು ದೈಹಿಕವಾಗಿ ನವೆಯನ್ನು, ನೋವನ್ನು, ಅಸಮತೋಲನವನ್ನು ಅನುಭವಿಸುತ್ತೀರಿ. ಉನ್ನತ ಶಕ್ತಿಯನ್ನು ಸಂಪೂರ್ಣವಾಗಿ ನೀವು ಗಳಿಸುವವರೆಗೆ ಹೀಗೆಯೇ ಆಗುತ್ತಿರುತ್ತದೆ. ಇದೊಂದು ರೀತಿಯಲ್ಲಿ ಒಳ್ಳೆಯ ಸಂಗತಿಯೇ ಆಗಿದೆ. ಅಭ್ಯಾಸಿಯಾಗಿ ನಿಮ್ಮಷ್ಟಕ್ಕೇ ನೀವು ಸಾಧಾರಣ ವ್ಯಕ್ತಿಯಾಗಿದ್ದೇನೆಂದು, ರೋಗಗ್ರಸ್ಥನಾಗಿದ್ದೇನೆಂದು ತಿಳಿದುಕೊಳ್ಳದಿದ್ದರೆ ನೀವು ಅಭ್ಯಾಸವನ್ನಾದರೂ ಹೇಗೆ ಮಾಡುತ್ತೀರಿ? ಅಭ್ಯಾಸದಲ್ಲಿ ಇಂತಹ ಗೊಂದಲಗಳು ಬಂದಾಗ ಮಾತ್ರ ನೀವು ಅಭ್ಯಾಸಿಗಳಾಗಿ ಉಳಿಯುತ್ತೀರಿ. ಈ ಕಾರಣಕ್ಕಾಗಿ ಯಾದರೂ ನಿಮ್ಮ ಆತ್ಮಪ್ರಕೃತಿ ದಿನನಿತ್ಯದ ಜನರ ಮಟ್ಟದಲ್ಲಿರುವುದು ಒಳಿತೆನಿಸುತ್ತದೆ.

ನಿಜವಾದ ಅಭ್ಯಾಸಿಯಾಗಿ ನೀವು ದಿನನಿತ್ಯದ ಜನರಿಗಿಂತ ಭಿನ್ನವಾಗಿಯೇ ಉನ್ನತ ಹಂತದಲ್ಲಿ ವಿಚಾರಗಳನ್ನು ನೋಡಬೇಕಾಗುತ್ತದೆ. ನೀವು ರೋಗಗ್ರಸ್ತರಾಗಿದ್ದೀರೆಂದು ನಂಬಿಬಿಟ್ಟರೆ, ಅದೇ ನಿಮ್ಮನ್ನು ರೋಗಿಯನ್ನಾಗಿಸುತ್ತದೆ. ಚಿಗಾಂಗ್‌ನ ಅಭ್ಯಾಸ ಮತ್ತು ನಿಜವಾದ ಸಾಧನಾಭ್ಯಾಸವು ಇಂತಹ ರೋಗಬಾಧೆಯನ್ನು ಪ್ರಚೋದಿಸುವುದಿಲ್ಲ. ಜನರು ರೋಗಕ್ಕೆ ಒಳಗಾಗುವುದಕ್ಕೆ 70 ಭಾಗ ಮಾನಸಿಕ ಮತ್ತು 30 ಭಾಗ ದೈಹಿಕ ಕಾರಣಗಳಿರುತ್ತವೆ ಎಂದು ತಿಳಿದುಬಂದಿದೆ. ಒಬ್ಬನು ಮಾನಸಿಕವಾಗಿ ದುರ್ಬಲಗೊಂಡರೆ, ಅವನ ಬುದ್ಧಿ ಕೆಲಸ ಮಾಡುವುದನ್ನೇ ನಿಲ್ಲಿಸುತ್ತದೆ. ಉದಾಹರಣೆಗೆ ಒಮ್ಮೆ ಒಬ್ಬ ಆಯಾಸದಿಂದ ಹಾಸಿಗೆಯ ಮೇಲೆ ಬಿದ್ದಿದ್ದ. ಅವನು ತನ್ನೊಂದು ಕೈಯಲ್ಲಿ ತನ್ನ ಎದೆಯ ಭಾಗವನ್ನು ಸೀಳಿಕೊಂಡು ರಕ್ತ ಬರುವಂತೆ ಮಾಡಿದ. ನಂತರ ಕಣ್ಣು ಮುಚ್ಚಿಕೊಂಡೇ ತನ್ನ ಎದೆ ಭಾಗವನ್ನು ಮತ್ತೊಮ್ಮೆ ಕೆರೆದುಕೊಂಡ. ಆದರೆ ಹಾಗೇನೂ ಅವನ ಎದೆ ಸೀಳಿರಲಿಲ್ಲ ಮತ್ತು ರಕ್ತ ಹರಿಯುತ್ತಿರಲಿಲ್ಲ. ಆದರೆ ಆ ವೇಳೆಗೆ ನಲ್ಲಿಯಲ್ಲಿ ನೀರು ತೊಟ್ಟಿಕ್ಕಲು ಪ್ರಾರಂಭವಾಗಿತ್ತು. ಆ ಶಬ್ದವನ್ನೇ ಆತ ತನ್ನ ರಕ್ತದ ತೊಟ್ಟಿಕ್ಕುವ ಶಬ್ಧವೆಂದು ಭಾವಿಸಿದ. ಸ್ವಲ್ಪವೇ ಸಮಯದಲ್ಲಿ ಆ ವ್ಯಕ್ತಿ ಸತ್ತುಹೋಗಿದ್ದ. ನಿಜವಾಗಿಯೂ ಅಂತಹದ್ದೇನೂ ಅಲ್ಲಿ ನಡೆದಿರಲಿಲ್ಲ. ಅವನ ಮಾನಸಿಕ ವಿಚಾರಗಳು ಅವನನ್ನು ಸಾವಿಗೆ ತಳ್ಳಿದ್ದವು, ನೀವು ಯಾವಾಗಲೂ ಅನಾರೋಗ್ಯದಿಂದಿದ್ದೇನೆ ಎಂದುಕೊಂಡರೆ ಅದೇ ರೋಗವಾಗಿ ನಿಮ್ಮನ್ನು ಕಾಡುತ್ತದೆ.

ಅಭ್ಯಾಸಿಯಾಗಿ ನೀವು ಯಾವಾಗಲೂ ರೋಗದ ಬಗ್ಗೆ ಚಿಂತಿಸುತ್ತಿದ್ದರೆ, ನೀವದನ್ನು ಬಯಸುತ್ತಿದ್ದೀರಿ ಎಂದಾಗುತ್ತದೆ. ಅದು ಖಂಡಿತವಾಗಿ ನಿಮ್ಮ ದೇಹಕ್ಕೆ ಬರುತ್ತದೆ. ಆದ್ದರಿಂದ ಅಭ್ಯಾಸಿಯಾಗಿ ನಿಮ್ಮ ಆತ್ಮಪ್ರಕೃತಿ ಉತ್ತಮವಾಗಿರಬೇಕಾಗುತ್ತದೆ. ಸಾಧನೆಯ ಅಭ್ಯಾಸದಲ್ಲಿ ಒಬ್ಬನು ಕರ್ಮವನ್ನು ಕಳೆದುಕೊಳ್ಳುವ ಅಗತ್ಯವಿರುತ್ತದೆ ಮತ್ತು ಅದು ನೋವುದಾಯಕವಾದದ್ದು. ಒಬ್ಬನು ಹೇಗೆ ಸಮತೋಲನವಾಗಿ ಗಾಂಗನ್ನು ವೃದ್ಧಿಸಬಲ್ಲನು? ಹೇಗೆ ಒಬ್ಬನು ಮತ್ತೊಬ್ಬನ ಕಾರ್ಯಸಂಬಂಧಗಳನ್ನು ಬೇರೊಂದು ರೀತಿಯಲ್ಲಿ ಹೋಗಲಾಡಿಸಬಲ್ಲನು? ಅದಕ್ಕಾಗಿ ನಾನು ಕಥೆಯೊಂದನ್ನು ಹೇಳುತ್ತೇನೆ. ಅಲ್ಲೊಮ್ಮೆ ಹೆಚ್ಚು ಸಾಧನಾಭ್ಯಾಸದಿಂದ ಅರಹಂತನಾಗಬಹುದಿದ್ದ ವ್ಯಕ್ತಿಯೊಬ್ಬನಿದ್ದ. ಸ್ವಲ್ಪದರಲ್ಲೇ ಅವನು ಪೂರ್ಣಫಲವನ್ನು ಪಡೆದುಕೊಳ್ಳುತ್ತಿದ್ದ. ಇನ್ನು ಹೇಗೆ ಸಂತೋಷಗೊಳ್ಳದಿರಲು ಸಾಧ್ಯ? ತ್ರಿಲೋಕಗಳನ್ನು ಮೀರಿದ ಸಂತೋಷ ಅನುಭವಿಸಿದ, ಇದೂ ಸಹ ಒಂದು ರೀತಿಯ ಬಂಧನವೇ ಆಗಿದೆ. ಅರಹಂತನು ಇಂತಹ ಬಂಧನಗಳಿಂದ ಮುಕ್ತನಾಗಿರಬೇಕು. ಆದರೆ ಅವನು ವಿಫಲನಾದ ಮತ್ತು ಅವನ ಸಾಧನೆಯು ದು:ಖಾಂತವಾಯಿತು. ಅವನು ಸೋತ ಮೇಲೆ ಮತ್ತೆ ಮೊದಲಿಂದ ಎಲ್ಲವನ್ನು ಪ್ರಾರಂಭಿಸಿದ. ಹೆಚ್ಚು ಕಷ್ಟದಿಂದ, ಪರಿಶ್ರಮದಿಂದ ಪುನ: ತನ್ನ ಸಾಧನೆಯಲ್ಲಿ ಯಶಸ್ವಿಯಾದ ಈ ಸಂದರ್ಭದಲ್ಲಿ ಅವನು ಮತ್ತೆ ಸಂತೋಷ ಹೆಚ್ಚಾಗಿ ಕಾರ್ಯ ಕೆಡುತ್ತದೇನೋ ಎಂದು ಮನಸ್ಸಿನಲ್ಲಿ ಯೋಚಿಸಿದ. ಅದರಂತೆಯೇ ಅವನು ವಿಫಲನಾದ, ಭಯವೂ ಸಹ ಒಂದು ರೀತಿಯ ಬಂಧನವೇ ಆಗಿದೆ.

ಇನ್ನೊಂದು ರೀತಿಯ ಪರಿಸ್ಥಿತಿಯೂ ಇದೆ, ಯಾವಾಗ ಒಬ್ಬ ವ್ಯಕ್ತಿ ಮಾನಸಿಕ ಅಸ್ವಸ್ಥತೆಯನ್ನು ಅನುಭವಿಸುತ್ತಾನೋ, ಆಗವನು ಸಾಧನೆಯ ಉನ್ಮಾದವನ್ನು ಹೊಂದಿದ್ದಾನೆಂದೂ ಗುರ್ತಿಸ ಪಡಬಹುದು. ಇನ್ನೂ ಕೆಲವರಿದ್ದಾರೆ ಅವರು ನಾನು ಅವರ ಮಾನಸಿಕ ಅಸ್ವಸ್ಥತೆಯನ್ನು ಗುಣಪಡಿಸಬೇಕೆಂದು ಬಯಸುತ್ತಾರೆ, ನಾನು ಹೇಳಿದ್ದೇನೆ ಮನೋವಿಕಾರವು ಕಾಯಿಲೆಯಲ್ಲ ಮತ್ತು

ಅಂತಹ ಕೆಲಸಗಳಿಗೆ ನನ್ನಲ್ಲಿ ಸಮಯವಿಲ್ಲ. ಏಕೆಂದರೆ ಮನೋವಿಕಾರಕ್ಕೆ ಒಳಗಾಗಿರುವ ವ್ಯಕ್ತಿಯಲ್ಲಿ ಯಾವ ಬಗೆಯ ರೋಗಾಣುವೂ ಇರುವುದಿಲ್ಲ. ರೋಗಲಕ್ಷಣಗಳು ಇರುವುದಿಲ್ಲ. ಹೀಗಿರುವಾಗ ಅದನ್ನು ರೋಗಬಾಧೆಯೆಂದು ಹೇಗೆ ತೀರ್ಮಾನಿಸುವುದು. ವ್ಯಕ್ತಿಯೊಬ್ಬನ ಪ್ರಧಾನ ಚೈತನ್ಯವು/ಪ್ರಜ್ಞೆಯು ದುರ್ಬಲವಾದಾಗ ಮನೋವಿಕಾರವಾಗುತ್ತದೆ. ಅದೆಷ್ಟು ದುರ್ಬಲವಾಗುತ್ತದೆ ಎಂದರೆ ವ್ಯಕ್ತಿ ಪುನ: ಮೊದಲಿನ ಸ್ಥಿತಿಗೆ ಬರಲಾರದಷ್ಟು. ಮಾನಸಿಕ ರೋಗಿಯ ಪ್ರಧಾನ ಚೈತನ್ಯವೂ ಅವನಂತೆಯೇ ಇರುತ್ತದೆ. ಅದು ದೇಹವನ್ನು ಜಡತ್ವದಲ್ಲಿಯೇ ಉಳಿಸುತ್ತದೆ ಮತ್ತು ಜಾಗೃತಾವಸ್ಥೆಗೆ ಬರಲಾರದು. ಈ ಸಂದರ್ಭದಲ್ಲಿ ವ್ಯಕ್ತಿಯ ಸಹಾಯಕ ಪ್ರಜ್ಞೆಯು ಮುಂದಕ್ಕೆ ಬರುತ್ತದೆ. ಅದಕ್ಕೂ ಹಲವು ನೆಲೆಗಳಿವೆ. ಎಲ್ಲ ರೀತಿಯ ಸಂದೇಶಗಳು ಅವನನ್ನು ಬಾಧಿಸುತ್ತವೆ. ಮನೋವಿಕಾರವು ಸಮಸ್ಯೆಯ ಮೂಲವೆನ್ನುವುದು ಈ ಕಾರಣಕ್ಕಾಗಿಯೇ ನಿಮಗಾಗಿ, ನಾನು ಅದನ್ನು ಹೇಗೆ ನಿವಾರಿಸಲಿ? ನಾನು ಮನೋವಿಕಾರ ಹೇಗಾಗುತ್ತದೆ? ಅದಕ್ಕಾಗಿ ಏನು ಮಾಡಬೇಕು? ಎಂದು ಹೇಳಿದ್ದೇನೆ. ಅಂತಹ ವ್ಯಕ್ತಿಗಳಿಗೆ ಬುದ್ಧಿ ಹೇಳಿ, ಜಾಗೃತರಾಗುವುದಕ್ಕೆ ಸಹಕರಿಸಿ, ಆದರೆ ಅದೂ ಸಹ ಕಷ್ಟದ ಕೆಲಸವೇ, ಆಸ್ಪತ್ರೆಯಲ್ಲಿ ಮನೋ ವೈದ್ಯರು **ವಿದ್ಯುತ್ ಪ್ರಚೋದನೆ** ಯ ಉಪಕರಣವನ್ನು ಕೈಯಲ್ಲಿ ಹಿಡಿದಿದ್ದರೆ, ಇದ್ದಕ್ಕಿದ್ದಂತೆ ರೋಗಿಯು ಹೆಚ್ಚು ಭಯಪಡುತ್ತಾನೆ, ಅರಚುತ್ತಾನೆ. ಏಕೆ ಹೀಗೆ? ಆ ಸಂದರ್ಭಕ್ಕೆ ವ್ಯಕ್ತಿಯ ಪ್ರಧಾನ ಚೈತನ್ಯವು ಜಾಗೃತ ಗೊಂಡಿರುತ್ತದೆ ಮತ್ತು ಅದು ವಿದ್ಯುತ್ ಪ್ರಚೋದನೆಯ ಅನುಭವಕ್ಕೆ ಭಯಗೊಂಡಿರುತ್ತದೆ.

ಸಾಮಾನ್ಯವಾಗಿ ವ್ಯಕ್ತಿಯೊಬ್ಬನು ಮನ:ಪೂರ್ವಕವಾಗಿ ತಾವ್ರೋವನ್ನು ಪಾಲಿಸುತ್ತಾ ನಿರಂತರ ಅಭ್ಯಾಸದಲ್ಲಿ ತೊಡಗಿದಾಗ, ಎಲ್ಲರೂ ಅವನನ್ನು ಸಾಧನಾಭ್ಯಾಸಿಯೆಂದು ಗುರ್ತಿಸುತ್ತಾರೆ. ಒಬ್ಬ ನಿಜವಾಗಿಯೂ ಸಾಧನೆಯನ್ನು ಅಭ್ಯಾಸ ಮಾಡುತ್ತಿದ್ದರೆ, ಅದು ಅವನ ಜೀವನವನ್ನು ಬದಲಾಯಿಸುತ್ತದೆ. ಆದರೆ ಕೇವಲ ಸದೃಢತೆ ಮತ್ತು ರೋಗದ ಉಪಶಮನಕ್ಕೆ ಚಿಗಾಂಗ್ ಅಭ್ಯಾಸ ಮಾಡುತ್ತಿರುವವರ ಜೀವನವನ್ನು ಯಾರು ಬದಲಾಯಿಸುತ್ತಾರೆ? ಸಾಮಾನ್ಯ ವ್ಯಕ್ತಿಯಾಗಿ ಅವನು ರೋಗಕ್ಕೆ ಒಂದು ದಿನ ಒಳಗಾಗುತ್ತಾನೆ. ಮತ್ತೊಂದು ದಿನ ತೊಂದರೆಗೊಳಗಾಗುತ್ತಾನೆ. ಮನೋವಿಕಾರಿಯಾಗುತ್ತಾನೆ ಅಥವಾ ಸಾವಿಗೆ ಬೀಳುತ್ತಾನೆ. ಸಾಮಾನ್ಯ ವ್ಯಕ್ತಿಯ ಜೀವನ ಕ್ರಮ ಇಷ್ಟೇ. ಪಾರ್ಕಿನಲ್ಲಿ ಸಾಧನೆಯ ಅಭ್ಯಾಸ ಮಾಡುವವರು, ನಿಜವಾದ ಅಭ್ಯಾಸ ಮಾಡುತ್ತಿರುವುದಿಲ್ಲ. ಅದಾಗ್ಯೂ ಸಾಧನೆಯ ಉನ್ನತ ಹಂತವನ್ನು ತಲುಪಬೇಕೆಂದು ಬಯಸುತ್ತಿರುತ್ತಾರೆ. ಸರಿಯಾದ ಮಾರ್ಗವನ್ನು ಹಿಡಿಯದೆ ಅವರು ಅದನ್ನು ಸಾಧಿಸಲಾರರು. ಯಾವನೂ ಅವರ ದಾರಿಯನ್ನು ತಿದ್ದಿರುವುದಿಲ್ಲ. ಆದ್ದರಿಂದ ಅವರು ರೋಗಬಾಧೆಯನ್ನು ಹೊಂದಿಯೇ ಇರುತ್ತಾರೆ.

ಸಾಧನಭ್ಯಾಸಿಯು ಖಂಡಿತವಾಗಿ ತನ್ನ ಆತ್ಮಪ್ರಕೃತಿಯ ಮೇಲೆ ಹೆಚ್ಚು ಕೇಂದ್ರೀಕೃತನಾಗಿರಬೇಕು. ಏಕೆಂದರೆ ಅದು ದೈಹಿಕ ವ್ಯಾಯಾಮವಲ್ಲ, ಉನ್ನತ ತತ್ವಗಳಿರುವಂತದ್ದು. ಒಬ್ಬನು ಆ ತತ್ವಗಳನ್ನೆಲ್ಲ ಚಾಚೂ ತಪ್ಪದೆ ಅನುಸರಿಸ ಬೇಕಾಗುತ್ತದೆ. ಹೇಗಾದರೂ ರೋಗವನ್ನು ಹೊಂದಿರುವ ವ್ಯಕ್ತಿಯು ಒಮ್ಮೆ ಮನೋವಿಕಾರಕ್ಕೆ ಒಳಗಾದರೆ, ಎಲ್ಲರೂ ಅವನು ಚಿಗಾಂಗ್ ಅಭ್ಯಾಸ ಮಾಡುತ್ತಿದ್ದಾನೆಂದು ತಿಳಿದುಬಿಡುತ್ತಾರೆ. ಅವನೂ ಸಹ ಅಂತಹ ಹಣೆಪಟ್ಟಿಗೆ ಅಂಟಿ ಕೊಂಡು ಬಿಡುತ್ತಾನೆ. ಇದರ ಬಗ್ಗೆ ಯೋಚಿಸಿ, ಇದು ಸರಿಯಾದದ್ದೆ? ಅಲ್ಪವ್ಯಕ್ತಿಗಳು ಈ ಸತ್ಯವನ್ನು ಹೇಗೆ ತಿಳಿಯ ಬಲ್ಲರು. ವ್ಯಕ್ತಿಯು ಮನೆಯೊಳಗೇ ಮನೋವಿಕಾರಕ್ಕೆ ಒಳಗಾದರೆ ಅದೊಂದು ರೀತಿಯಲ್ಲಿ ಕಡಿಮೆ ಸಮಸ್ಯಾತ್ಮಕವಾದದ್ದು. ಆ ಮನೋವಿಕಾರ ಸಾರ್ವಜನಿಕವಾಗಿ ಪ್ರಕಟಗೊಂಡಾಗ ಹೆಚ್ಚು ಭಯಾನಕವಾಗುತ್ತದೆ. ಸುದ್ದಿಪತ್ರಿಕೆಗಳೂ ಚಿಗಾಂಗ್‌ನ ಅಭ್ಯಾಸವು ಸಾಧನೆಯ ಉನ್ಮಾದ ನೀಡುತ್ತದೆಂದು ಬರೆಯುತ್ತವೆ. ದಿನನಿತ್ಯದ ವ್ಯಕ್ತಿಗೆ ಆಗುವ ಇಂತಹ ಅನುಭವಗಳು ಅವನಿಗೆ ಬೇರೆಯ ಸಮಸ್ಯೆಗಳನ್ನು ತಂದೊಡ್ಡುತ್ತವೆ. ಇದೆಲ್ಲಕ್ಕೂ ಚಿಗಾಂಗ್ ಅಭ್ಯಾಸವನ್ನು ನಿಂದಿಸಲಿಕ್ಕಾಗುತ್ತದೆಯೇ? ಡಾಕ್ಟರಾದ ಮಾತ್ರಕ್ಕೆ ರೋಗವೇ ಬರುವುದಿಲ್ಲವೆಂದು ಹೇಳಲಿಕ್ಕಾಗುತ್ತದೆಯೇ?

ಹಲವರು ಚಿಗಾಂಗ್‌ನ ಸತ್ಯವನ್ನು ಅರಿಯದೆ ಬುದ್ಧಿಯಿಲ್ಲದ ಹೇಳಿಕೆಗಳನ್ನು ನೀಡುತ್ತಾರೆ.

---

3. **ವಿದ್ಯುತ್ ಪ್ರಚೋದನೆಯ** – Electric Shock

ಯಾವುದೇ ಸಮಸ್ಯೆ ಯಾದರೂ ಅದನ್ನು ಚಿಗಾಂಗ್‌ನ್ನು ದೂರುವುದಕ್ಕೆ ಬಳಸುತ್ತಾರೆ. ಸಮಾಜದಲ್ಲಿ ಸ್ವಲ್ಪ ಸಮಯದಿಂದಷ್ಟೇ ಚಿಗಾಂಗ್ ಪ್ರಸಿದ್ಧಿಯಾಗುತ್ತಿದೆ. ಆದರೆ ಹಲವರು ಚಿಗಾಂಗ್‌ನ್ನು ದೂರುವುದನ್ನೇ, ತಿರಸ್ಕರಿಸುವುದನ್ನೇ ಪ್ರಚೋದಿಸುತ್ತಿರುತ್ತಾರೆ. ಚಿಗಾಂಗ್‌ನ್ನು ಮೌಢ್ಯವೆಂದು ಕರೆಯುತ್ತಾರೆ. ಚಿಗಾಂಗ್ ಎನ್ನುವುದು ಒಂದು ಉನ್ನತ ವಿಜ್ಞಾನ. ಆದರೆ ಕೆಟ್ಟ ಮನೋಧರ್ಮಗಳಿಂದ ಆಲೋಚನೆಗಳಿಂದ ಅದು ಕಳಂಕ ಹೊತ್ತಿದೆ.

ವಿದ್ಯಾರ್ಥಿ ಸಮುದಾಯದಲ್ಲಿ ಮತ್ತೊಂದು ರೀತಿಯ ಚಿಗಾಂಗ್ ಸ್ಥಿತಿ ಇದೆ. ಅಂತಹ ಸ್ಥಿತಿಯಲ್ಲಿರುವ ವ್ಯಕ್ತಿಯು ಮತಿಭ್ರಮಣೆಯನ್ನು ಹೊಂದಿರುತ್ತಾನೆ. ಸಾಧನೆಯ ಉನ್ಮಾದವನ್ನಲ್ಲ, ಈ ಸ್ಥಿತಿಯಲ್ಲಿರುವ ವ್ಯಕ್ತಿ ಅತಾರ್ಕಿಕನಾಗಿರುತ್ತಾನೆ. ಚಿಗಾಂಗ್‌ನ ಸ್ಥಿತಿ ಹೇಗಿರುತ್ತದೆಯೆಂದರೆ ಅದು ಒಬ್ಬನ ಜನ್ಮತ: ಗುಣವನ್ನು ಒಳಗೊಳ್ಳುತ್ತದೆ. ಜಗತ್ತಿನಲ್ಲೆಲ್ಲ ಹಲವು ಧರ್ಮಗಳಲ್ಲಿ ನಂಬಿಕೆಯಿರುವ ಜನರಿದ್ದಾರೆ. ಹಲವು ವರ್ಷಗಳಿಂದಲೂ ಚೀನಾದಲ್ಲಿ ತಾವೋ ತತ್ವವನ್ನು ನಂಬಿರುವ ಜನರಿದ್ದಾರೆ. ಅವರೆಲ್ಲ ಒಳ್ಳೆಯದನ್ನು ಮಾಡಿದರೆ ಒಳಿತು, ಕೆಟ್ಟದನ್ನೇ ಮಾಡಿದರೆ ಕೆಡಕು ಉಂಟಾಗುತ್ತದೆ ಎಂದು ತಿಳಿದಿದ್ದಾರೆ. ಆದರೂ ಕೆಲವರು ಅದನ್ನು ನಂಬುವುದಿಲ್ಲ. ಸಾಂಸ್ಕೃತಿಕ ಪುನರುತ್ಥಾನದ ಸಮಯದಲ್ಲಿ ಇದನ್ನು ಖಂಡಿಸಲಾಯಿತು. ತಾವು ಅರ್ಥೈಸಿಕೊಳ್ಳಲಾರದ್ದನ್ನು, ಪುಸ್ತಕದಲ್ಲಿ ಓದಿಲ್ಲದ್ದನ್ನು, ಆಧುನಿಕ ವಿಜ್ಞಾನ ವಿವರಿಸಲಾರದ್ದನ್ನು ಕೆಲವರು ಅಂಧಶ್ರದ್ಧೆಯೆಂದು ತಿಳಿದುಬಿಡುತ್ತಿದ್ದರು. ಆದರೀಗ ಅವರು ಅದನ್ನೆಲ್ಲ ಅರ್ಥ ಮಾಡಿಕೊಂಡಿದ್ದಾರೆ. ಅಂತೆಯೇ ಚಿಗಾಂಗ್‌ನ ಬಗ್ಗೆಯೂ ಒಳ್ಳೆಯ ಮಾತುಗಳು ಕೇಳಿಬರುತ್ತಿವೆ.

ಕೆಲವರು ತುಂಬಾ ದುರ್ಮಾರ್ಗಿಗಳಾಗಿದ್ದು, ನೀವೊಮ್ಮೆ ಚಿಗಾಂಗ್‌ನ ಬಗ್ಗೆ ಪ್ರಸ್ತಾಪಿಸಿದರೆ ಜೋರಾಗಿ ನಗುತ್ತಾರೆ. ಅವರು ನಿಮ್ಮನ್ನು ಅಂಧಶ್ರದ್ಧೆಯವರಂತೆ ಹೆಚ್ಚು ನಗೆಪಾಟಲಿನವರಂತೆ ನೋಡುತ್ತಾರೆ. ನೀವು ಚಿಗಾಂಗ್‌ನ ಅಭ್ಯಾಸದಲ್ಲಿ ಸಮರ್ಥರಾಗುವವರೆಗೆ ಅವರು ನಿಮ್ಮನ್ನು ಹಾಗೆಯೇ ಪರಿಗಣಿಸುತ್ತಾರೆ. ಅಂತಹ ಪೂರ್ವಗ್ರಹ ಪೀಡಿತರ ಜನ್ಮತ: ಗುಣವೇನೂ ಕೆಟ್ಟದಾಗಿರುವುದಿಲ್ಲ. ಮನಸ್ಸು ಮಾಡಿದರೆ ಅಂತವನೂ ದಿವ್ಯಚಕ್ಷುವನ್ನು ತೆರೆದು, ಅಸಾಧಾರಣ ಸಾಮರ್ಥ್ಯಗಳನ್ನು ಹೊಂದಬಲ್ಲ. ಅವನು ಚಿಗಾಂಗ್‌ನ್ನು ನಂಬದಿದ್ದರೂ, ರೋಗಕ್ಕೊಳಗಾಗದೆ ಏನೂ ಇರುವುದಿಲ್ಲ. ರೋಗ ಬಂದಾಗ ಆಸ್ಪತ್ರೆಗೆ ಹೋಗುತ್ತಾನೆ. ಪಾಶ್ಚಾತ್ಯ ವೈದ್ಯ ಪದ್ಧತಿಯವನು ರೋಗ ವಾಸಿ ಮಾಡದಿದ್ದಾಗ, ಚೀನೀ ವೈದ್ಯನತ್ತ ಹೋಗುತ್ತಾನೆ. ಅಲ್ಲಿಯೂ ವಾಸಿಯಾಗದಿದ್ದಾಗ ಚಿಗಾಂಗ್‌ನಲ್ಲಿ ತನ್ನ ಅದೃಷ್ಟವನ್ನು ಪರೀಕ್ಷಿಸಲು ತೊಡಗುತ್ತಾನೆ. ಅವನು ಹೆಚ್ಚು ಅನುಮಾನದಿಂದ ಬಂದಿರುತ್ತಾನೆ. ಅವನ ಜನ್ಮತ: ಗುಣದ ಕಾರಣದಿಂದ ಬಹುಬೇಗನೆ ಅವನು ಚಿಗಾಂಗ್‌ನ್ನು ಅಭ್ಯಾಸ ಮಾಡಿದರೆ, ಯಾರಾದರೊಬ್ಬ ಬೋಧಕನು ಅವನಿಗೆ ಸಹಾಯ ಮಾಡುತ್ತಾನೆ. ಬಹು ಬೇಗನೆ ಅವನಿಗೆ ಜ್ಞಾನೋದಯವಾಗುತ್ತದೆ. ಜ್ಞಾನೋದಯದ ದಿವ್ಯಚಕ್ಷುವಿನಿಂದ ಅವನು ಒಮ್ಮೆಗೆ ವಿಶ್ವದ ಕೆಲವು ಸತ್ಯಗಳನ್ನು ಅರಿಯುತ್ತಾನೆ. ಮತ್ತೂ ಮುಂದುವರಿದು ಅಸಾಧಾರಣ ಸಾಮರ್ಥ್ಯಗಳನ್ನು ಪಡೆಯುತ್ತಾನೆ. ಹಿಂದೊಮ್ಮೆ ಅಂಧಶ್ರದ್ಧೆಯೆನಿಸಿದ್ದು, ನಗೆಪಾಟಲೆನಿಸಿದ್ದು, ಈಗ ಅನುಭವದಿಂದಲೇ ನಿಜವೆನಿಸಿರುತ್ತದೆ. ಇಂತಹ ವ್ಯಕ್ತಿಯ ಮನಸ್ಸು ಎಷ್ಟು ಒತ್ತಡಕ್ಕೊಳಗಾಗುತ್ತದೆ ಎಂದರೆ ಅವನು ಹೇಳುವುದು, ಬೇರೆಯವರಿಗೆ ತಿಳಿಯುವುದಿಲ್ಲ, ಅತಾರ್ಕಿಕವೆನಿಸುತ್ತದೆ. ಆದಾಗ್ಯೂ ಅವನ ಮನಸ್ಸು ತಾರ್ಕಿಕವಾಗಿರುತ್ತದೆ. ಮನುಷ್ಯರೆಲ್ಲ ಮಾಡುತ್ತಿರುವ ತಪ್ಪು ಅವನಿಗೆ ಅರಿವಾಗುತ್ತದೆ. ಸರಿಯಾದ ದಾರಿಯಲ್ಲಿ ಅವನು ನಡೆಯುತ್ತಾನೆ, ಆದರೆ ಬೇರೆಯವರಿಗೆ ಅದು ತಪ್ಪಾಗಿ ಕಾಣುತ್ತದೆಯಾದ್ದರಿಂದ ಅವರೆಲ್ಲ ಅವನಿಗೆ ಸಾಧನೆಯ ಉನ್ಮಾದವಾಗಿದೆ ಎಂದು ತಿಳಿಯುತ್ತಾರೆ.

ನಿಜ ಸಂಗತಿಯೆಂದರೆ ಈ ವ್ಯಕ್ತಿಗೆ ಸಾಧನೆಯ ಉನ್ಮಾದವಿರುವುದಿಲ್ಲ. ನಿಮ್ಮಲ್ಲಿ ಬಹುತೇಕರಿಗೆ ಉನ್ಮಾದದ ಅನುಭವವಾಗುವುದಿಲ್ಲ. ಕೇವಲ ಪೂರ್ವಗ್ರಹ ಪೀಡಿತರಿಗೆ ಮಾತ್ರ ಇಂತಹ ಸ್ಥಿತಿಯಾಗುತ್ತದೆ. ವ್ಯಕ್ತಿಯೊಬ್ಬ ಚಿಗಾಂಗ್‌ನ ಸ್ಥಿತಿಯಲ್ಲಿದ್ದ ನಂತರ ಹೆಚ್ಚು ತಾರ್ಕಿಕವಾಗಿ, ಸಕಾರಣವಾಗಿ, ಸೂಕ್ಷ್ಮವಾಗಿ ಮಾತನಾಡುತ್ತಾನೆ. ಆದ್ದರಿಂದಲೇ ಸಾಮಾನ್ಯನಿಗೆ ಅಂತವನ ಮಾತುಗಳು ಅರ್ಥವಾಗುವುದಿಲ್ಲ. ಕೆಲವೊಮ್ಮೆ ಅವನು ಹೇಳಬಹುದು, ನನ್ನ ಮುಂದೆ ಯಾರೋ ನಡೆದಾಡಿದರು, ಏನನ್ನೋ ಮಾಡಲು ಹೇಳಿದರು ಎಂದು ದಿನನಿತ್ಯದ ಜನರು ಇದನ್ನೆಲ್ಲ ಹೇಗೆ ನಂಬಲು ಸಾಧ್ಯ?

ಕಾಲಾನಂತರದಲ್ಲಿ, ಆ ವ್ಯಕ್ತಿಯು ಅದನ್ನೆಲ್ಲ ಜನರಿಗೆ ಹೇಳುವುದನ್ನೇ ಬಿಟ್ಟು ಮನಸ್ಸಿನಲ್ಲೇ ಇಟ್ಟುಕೊಳ್ಳುತ್ತಾನೆ. ಅವನು ಅಸಾಧಾರಣ ಸಾಮರ್ಥ್ಯಗಳನ್ನೂ ಪಡೆದುಕೊಳ್ಳುತ್ತಾನೆ. ಆದರೂ ಅದು ಸಾಧನೆಯ ಉನ್ಮಾದವೇನೂ ಅಲ್ಲ.

ನಿಜವಾದ ಉನ್ಮಾದವೂ ಇದೆ, ಆದರೆ ಅದು ಅಪರೂಪ, ಲಕ್ಷ ಮಂದಿಯಲ್ಲಿ ಒಬ್ಬರಿರಬಹುದು, ಅವರು ಸಮಾಜದ ಮೇಲೆ ಪರಿಣಾಮವನ್ನೇನೂ ಉಂಟು ಮಾಡುವುದಿಲ್ಲ, ಅಂತವರು ಅತ್ಯುನ್ನತ ಜನ್ಮತ: ಗುಣವನ್ನು ಹೊಂದಿರುತ್ತಾರೆ ಮತ್ತು ಹೆಚ್ಚು ವೃದ್ಧರಂತೆ ಕಾಣುತ್ತಾರೆ. ಅವರ ಮೆದುಳಿನ ಕೆಲವು ಚಟುವಟಿಕೆಗಳು ನಿಲ್ಲಿಸಲ್ಪಟ್ಟಿರುತ್ತವೆ. ಉದಾಹರಣೆಗೆ, ಮನುಷ್ಯರಾಗಿ ನಾವು ಅನುಭವಿಸುವ ಚಳಿ ಮತ್ತು ಕೊಳೆಯ ಭಯವನ್ನು ಕಳೆದುಕೊಂಡಿರುತ್ತಾರೆ. ಕೆಲವು ಕ್ರಿಯೆಗಳ ಅಸಮರ್ಥತೆಯಿಂದ ಅವರು ಮಾನಸಿಕವಾಗಿ ತೊಂದರೆಯಲ್ಲಿರುವಂತೆ ಕಾಣುತ್ತಾರೆ. ಆದರೆ ಅವರು ಸಹಜವಾಗಿ ಕೆಟ್ಟ ಕಾರ್ಯಗಳಲ್ಲಿ ತೊಡಗುವುದಿಲ್ಲ, ಒಳ್ಳೆಯದನ್ನೇ ಮಾಡುತ್ತಾರೆ. ಆದರೆ ತಮಗೆ ತಾವೇ ಹೆಚ್ಚು ಕ್ರೂರವಾಗಿ ನಡೆದುಕೊಳ್ಳುತ್ತಿರುತ್ತಾರೆ. ಏಕೆಂದರೆ ಅವರಿಗೆ ಚಳಿಯ ಅನುಭವವೇ ಆಗುತ್ತಿರುವುದಿಲ್ಲ. ಚಳಿಗಾಲದಲ್ಲೇ ಬರಿಗಾಲಲ್ಲಿ, ಕಡಿಮೆ ಬಟ್ಟೆಯಲ್ಲಿ ಓಡಾಡುತ್ತಾರೆ, ಕೊಳಕಿನ ಬಗ್ಗೆ ಜ್ಞಾನವೇ ಇಲ್ಲದಿರುವುದರಿಂದ, ಅವರು ಮನುಷ್ಯರ ಮಲ–ಮೂತ್ರಗಳನ್ನೇ ಸೇವಿಸುವ ಪ್ರಯತ್ನ ಮಾಡುತ್ತಾರೆ. ಸುಮ್ಮನೆ ಕಲ್ಪಿಸಿಕೊಳ್ಳಿ, ಇಂತಹ ಉನ್ಮಾದ ಎಂತಹ ತೊಂದರೆಯನ್ನುಂಟು ಮಾಡುತ್ತದೆ. ಅಂತಹ ವ್ಯಕ್ತಿಗಳು ಅಸಾಧಾರಣ ಸಾಮರ್ಥ್ಯಗಳನ್ನು ಹೊಂದಿರುತ್ತಾರೆ. ಅವರಲ್ಲಿ ಬಹುತೇಕರು ವಯಸ್ಸಾದ ಹೆಂಗಸರಾಗಿರುತ್ತಾರೆ ಎಂಬುದು ನಿಜ. ಅಲ್ಲೊಬ್ಬಳು ವಯಸ್ಸಾದ ಹೆಂಗಸಿದ್ದಳು, ಆಕೆ ತನ್ನ ಕಾಲುಗಳು ಚಿಕ್ಕದಾಗಬೇಕೆಂದು ಹಗ್ಗ ಕಟ್ಟಿಕೊಂಡಿದ್ದಳು. ಆದರೂ ಅಪ್ರಯತ್ನವಾಗಿ ಎರಡು ಮೂರು ಮೀಟರ್ ಎತ್ತರಕ್ಕೆ ಜಿಗಿಯುತ್ತಿದ್ದಳು. ಅದನ್ನು ನೋಡಿದ ಆಕೆಯ ಮನೆಯವರು ಆಕೆಯನ್ನೇ ಮನೆಯೊಳಗೇ ಕೂಡಿ ಹಾಕಿದರು. ಆಕೆ ತನ್ನ ಕೈ ಬೆರಳಿನಿಂದಲೇ ಮನೆಯ ಬೀಗವನ್ನು ತೆಗೆದು ಹೊರಗೋಡಿ ಹೋದಳು. ನಂತರ ಅವರು ಕಬ್ಬಿಣದ ಸರಪಳಿಯಿಂದ ಬಂಧಿಸಿದರು. ಅದರಿಂದಲೂ ಆಕೆ ಸುಲಭವಾಗಿ ತಪ್ಪಿಸಿಕೊಂಡಳು. ಮೂರು ವರ್ಷದವರೆಗೆ ಅದು ಹಾಗೆಯೇ ಮುಂದುವರೆದು, ಹೆಚ್ಚು ತೊಂದರೆಯಾಯಿತು. ತದನಂತರದಲ್ಲಿ ಆಕೆ ಅರಿತುಕೊಂಡಳು, ತನ್ನ ಸಾಧನೆಯ ಅಭ್ಯಾಸವು ಪೂರ್ಣಗೊಂಡಿದೆ ಮತ್ತು ಗಳಿಸಿರುವ ಅದ್ಭುತ ಗಾಂಗ್‌ನ ಶಕ್ತಿಯನ್ನು ಸೂಕ್ತ ರೀತಿಯಲ್ಲಿ ಹಿಡಿದಿಡಬೇಕಾಗಿದೆ ಎಂದು ಇಂತಹ ಪ್ರಕರಣಗಳು ಹೆಚ್ಚು ಅಪರೂಪ.

ಸಾಧನೆಯ ಉನ್ಮಾದದ ಬಗ್ಗೆ ಹೇಳುವುದಾದರೆ, ಖಂಡಿತವಾಗಿ ಅಂತದ್ದು ಇಲ್ಲ, ಯಾವನಾದರೂ ಬೆಂಕಿಯನ್ನು ಉತ್ಪಾದಿಸುತ್ತೇನೆಂದರೆ, ಅದು ಬೆಂಕಿಯಂತೆ ಇದ್ದರೆ, ಅಂತವನನ್ನು ನಾನು ಅದ್ಭುತವೆಂದು ಕರೆಯುತ್ತೇನೆ. ವ್ಯಕ್ತಿಯೊಬ್ಬನು ಬಾಯಲ್ಲಿ ಬೆಂಕಿಯನ್ನು ಉತ್ಪಾದಿಸಿದರೆ, ಕೈಯಿಂದ ಬೆಂಕಿಯನ್ನು ಉತ್ಪಾದಿಸಿದರೆ, ಬೆರಳಿಂದ ಸಿಗರೇಟು ಹಚ್ಚಿದರೆ, ಅದನ್ನು ಮಾತ್ರ ನಾನು ಅಸಾಧಾರಣ ಸಾಮರ್ಥ್ಯವೆನ್ನುತ್ತೇನೆ.

**ಸಾಧನೆಯಲ್ಲಿ ಭಯಾನಕ ತೊಡಕುಗಳು** :

ಸಾಧನೆಯಲ್ಲಿ ಭಯಾನಕ ತೊಡಕುಗಳೇನು? ಅವುಗಳನ್ನು ಚಿಗಾಂಗ್‌ನ ಅಭ್ಯಾಸವು ಹೇಗೆ ಆಹ್ವಾನಿಸುತ್ತದೆ? ಸಾಧನೆಯ ಅಭ್ಯಾಸಕ್ಕೆ ತೊಡಗುವಾಗ ಸಾಧಾರಣವಾಗಿ ಹೆಚ್ಚು ಸಂಕಷ್ಟಗಳಿರುತ್ತವೆ. ಫಲವತ್ತಾದ ಸಾಧನೆಯು ಈ ತೊಡಕುಗಳಿಂದ ಸುಲಭವಾಗಿ ಪಾರಾಗಲಾರದು. ನೀವು ಮನೆಯಿಂದ ಹೊರಗೆ ಹೆಜ್ಜೆ ಇಡುತ್ತಿದ್ದಂತೆ, ನಿಮ್ಮ ಬದುಕು ಅಪಾಯಕ್ಕೆ ಬೀಳುತ್ತದೆ. ಒಬ್ಬನ ಮೂಲ ಚೈತನ್ಯವು ನಾಶವಾಗಿರುವುದಿಲ್ಲ. ಆದರೂ ಹಿಂದಿನ ಸಾಮಾಜಿಕ ಬದುಕಿನಲ್ಲಿ ನೀವು ಯಾವನೋ ಒಬ್ಬನಿಗೆ ಋಣವಾಗಿರುತ್ತೀರಿ, ಕೆಟ್ಟದ್ದನ್ನು ಮಾಡಿರುತ್ತೀರಿ. ಅಂತವರು ನಿಮ್ಮನ್ನು ಎದುರು ನೋಡುತ್ತಿರುತ್ತಾರೆ. ಈ ವಿಚಾರವು ಬುದ್ಧ ಧರ್ಮದಲ್ಲಿ ಹೇಳಲಾಗಿದೆ, ಒಬ್ಬನು ಕರ್ಮದ ಪ್ರತೀಕಾರಕ್ಕಾಗಿಯೇ ಬದುಕಿರುತ್ತಾನೆ. ನೀವೇನಾದರೂ ಅವನಿಂದ ಪಡೆದಿದ್ದರೆ, ಅವನು ನಿಮ್ಮನ್ನು ಋಣಸಂದಾಯಕ್ಕಾಗಿ ಕಂಡುಹಿಡಿಯುತ್ತಾನೆ. ಅವನು ನಿಮ್ಮಿಂದ ಹೆಚ್ಚಿನ ಋಣಸಂದಾಯವನ್ನು ಪಡೆದರೆ, ಮುಂದೆ ಅವನೇ ನಿಮಗೆ ಮತ್ತೆ

ಹಿಂದಿರುಗಿಸಬೇಕಾಗುತ್ತದೆ. ಇದು ಹೀಗೆಯೇ ಪುನರಾವರ್ತಿತವಾಗುತ್ತದೆ. ಇದೆಲ್ಲವು ಸಕಾರಣವಾದ ಕರ್ಮಸಂಬಂಧಗಳು. ಆದ್ದರಿಂದ ತೊಡಕುಗಳು ಸುಮ್ಮನೆ ಬರಲಾರವು.

ತೀರಾ ಸಾಮಾನ್ಯವಾಗಿ ತೊಡಕುಗಳು ಹೀಗೆ ಬರುತ್ತವೆ. ನೀವು ಚಿಗಾಂಗ್‌ನ್ನು ಅಭ್ಯಾಸ ಮಾಡುವ ಮುಂಚೆ ನಿಮ್ಮ ಪರಿಸರ ಶಾಂತವಾಗಿರುತ್ತದೆ. ಚಿಗಾಂಗ್‌ನ್ನು ಕಲಿತ ಮೇಲೆ ನೀವು ಯಾವಾಗಲೂ ಅಭ್ಯಾಸಕ್ಕೆ ತೊಡಗುತ್ತೀರಿ. ಸಾಧ್ಯವಾದಷ್ಟು ಧ್ಯಾನಕ್ಕೆ ಕೂರಲು ಪ್ರಯತ್ನಿಸುತ್ತೀರಿ. ಅದು ಹೇಗೋ ಇದ್ದಕ್ಕಿದ್ದಂತೆ ನಿಮಗೆ ಕೊಠಡಿಯ ಹೊರಗೆ ಗದ್ದಲವೆನಿಸುತ್ತದೆ. ಅಲ್ಲಿ ಕಾರುಗಳ ಹಾರನ್ನಿನ ಶಬ್ಧ, ಮಾತಾಡುವ ಶಬ್ಧ, ಬಾಗಿಲು ಬಡಿಯುವ ಶಬ್ಧ ಮತ್ತು ರೇಡಿಯೋದ ಶಬ್ಧಗಳು ಕೇಳಿಸುತ್ತವೆ. ಇದ್ದಕ್ಕಿದ್ದಂತೆ ಕೇಳಿಸದಂತೆಯೂ ಆಗುತ್ತದೆ. ನೀವು ಚಿಗಾಂಗ್ ಅಭ್ಯಾಸ ಮಾಡದಿದ್ದರೆ ಪರಿಸರವೂ ಶಾಂತವಾಗಿಯೂ, ಆದರೊಮ್ಮೆ ಅಭ್ಯಾಸ ಶುರು ಮಾಡಿಬಿಟ್ಟರೆ ಗದ್ದಲವಾಗುತ್ತಿರುವಂತೆಯೂ ಅನುಭವವಾಗುತ್ತದೆ. ಬಹುತೇಕರು ನೀವೆಲ್ಲ ಅದರ ಬಗ್ಗೆ ಮುಂದಕ್ಕೆ ಯೋಚಿಸುವುದೇ ಇಲ್ಲ, ನಿಜವಾಗಿ ಏನು ನಡೆಯುತ್ತಿರುತ್ತದೆ? ನೀವು ಕೇವಲ ಕಿರಿಕಿರಿ ಎಂದುಕೊಳ್ಳುತ್ತೀರಿ, ಅಭ್ಯಾಸ ಮಾಡಲಾಗದಿರುವುದಕ್ಕೆ ಬೇಸರಗೊಳ್ಳುತ್ತೀರಿ. ಈ ವಿಷಮ ಸ್ಥಿತಿಯು ನಿಮ್ಮ ಅಭ್ಯಾಸವನ್ನು ನಿಲ್ಲಿಸುತ್ತದೆ. ಇದು ಒಂದು ನಿಮ್ಮೊಂದಿಗಿರುವ ತೊಡಕಿನ ದೆವ್ವ, ಅದು ಜನರನ್ನು ನಿಮಗೆ ತೊಂದರೆ ಮಾಡುವಂತೆ ಉತ್ತೇಜಿಸುತ್ತದೆ. ಇದು ಸಾಧಾರಣ ಸ್ವರೂಪದ ತೊಡಕಾಗಿರುತ್ತದೆ. ಒಂದು ವೇಳೆ ನೀವು ಚಿಗಾಂಗ್‌ನ್ನು ಅಭ್ಯಾಸ ಮಾಡಿ, ತಾವೋವನ್ನು ಗಳಿಸಿದ್ದರೆ ಬೇರೆಯವರ ಋಣಬಾಕಿಯನ್ನೇ ನೀವು ಇಟ್ಟು ಕೊಳ್ಳುತ್ತಿರಲಿಲ್ಲ. ಒಮ್ಮೆ ಋಣಸಂದಾಯವಾಗಿ ಬಿಟ್ಟರೆ ಅವರು ನಿಮ್ಮನ್ನು ಮತ್ತೆ ಕಾಡಲಾರರು. ಈ ಕಾರಣದಿಂದಾಗಿಯೇ ನಮ್ಮ ಫಾಲೂನ್ ದಫಾದಲ್ಲಿ ಅಭ್ಯಾಸಕ್ಕೆ ತೊಡಗಿರುವವರು ಹೆಚ್ಚು ಪ್ರಗತಿ ಸಾಧಿಸುತ್ತಾರೆ ಮತ್ತು ಹಲವು ಸಾಧನೆಯ ಹಂತಗಳನ್ನು ಶೀಘ್ರವಾಗಿ ದಾಟುತ್ತಾರೆ.

ಇನ್ನೊಂದು ರೀತಿಯ ತೊಡಕಿದೆ, ಚಿಗಾಂಗ್‌ನ ಅಭ್ಯಾಸದ ಮೂಲಕ ನಮ್ಮ ದಿವ್ಯಚಕ್ಷು ತೆರೆದುಕೊಳ್ಳುತ್ತದೆಂದು ನಿಮಗೆ ತಿಳಿದಿದೆ. ದಿವ್ಯಚಕ್ಷುವಿನೊಂದಿಗೆ ಕೆಲವರು ಭಯಾನಕ ಮುಖಗಳನ್ನು, ಚಿತ್ರಗಳನ್ನು ಅಭ್ಯಾಸದ ಸಂದರ್ಭದಲ್ಲಿ ನೋಡುತ್ತಾರೆ. ಅವು ನಿಮ್ಮ ವಿರುದ್ಧ ಆಕ್ರಮಣ ಮಾಡಿದಂತೆ ಹೆಚ್ಚು ಭಯಗೊಳ್ಳುತ್ತೀರಿ, ಇನ್ನೂ ಕೆಲವು ವೇಳೆ ಎಲ್ಲ ಭೂತಗಳು ಕಿಟಕಿಯಲ್ಲಿ ಕಿರುಚುತ್ತಿರುವಂತೆ, ಭಯಾನಕವಾಗಿ ಕಾಣುತ್ತದೆ. ಇಂತಹ ಸ್ಥಿತಿ ಹೇಗೆ ನಿರ್ಮಾಣವಾಗುತ್ತದೆ? ಇದೂ ಸಹ ಒಂದು ರೀತಿಯ ತೊಡಕಾಗುತ್ತದೆ. ನಮ್ಮ ಫಾಲನ್‌ದಫಾದ ಶಾಲೆಯಲ್ಲಿ ಇಂತಹ ಪ್ರಕರಣಗಳು ನೂರರಲ್ಲಿ ಒಂದು ಎನ್ನುವಷ್ಟು ಕಡಿಮೆ. ಬಹುತೇಕರು ಇಂತಹ ಸ್ಥಿತಿಯಿಂದ ಘಾಸಿಗೊಳ್ಳುವುದಿಲ್ಲ. ಏಕೆಂದರೆ ಅದರಿಂದ ನಿಮ್ಮ ಅಭ್ಯಾಸಕ್ಕೇನೂ ಪ್ರಯೋಜನವಿಲ್ಲ. ಅಂತದಕ್ಕೆ ಅವಕಾಶವೂ ಇರಬಾರದು. ಬೇರೆಯ ಸಾಂಪ್ರದಾಯಿಕ ಅಭ್ಯಾಸಗಳಲ್ಲಿ ಈ ರೀತಿಯ ತೊಡಕು ಸಾಮಾನ್ಯವಾದದ್ದು ಮತ್ತು ನಿರಂತರ ಅಭ್ಯಾಸದಲ್ಲಿ ಶಮನವಾಗುವಂತದ್ದು. ಈ ಕಾರಣಕ್ಕಾಗಿಯೇ ಕೆಲವರು ಚಿಗಾಂಗ್‌ನ್ನು ಅಭ್ಯಾಸ ಮಾಡಲು ಭಯಗೊಳ್ಳುತ್ತಾರೆ. ಸಾಮಾನ್ಯವಾಗಿ ಒಬ್ಬ ಚಿಗಾಂಗ್‌ನ್ನು ರಾತ್ರಿಯ ಪರಿಸರದಲ್ಲಿ ಅಭ್ಯಾಸ ಮಾಡಲು ತೊಡಗುತ್ತಾನೆ. ಯಾವನೋ ಒಬ್ಬ ಅವನ ಹಿಂದೆ ನಿಂತು ನೋಡುತ್ತಿದ್ದರೆ, ಅವನು ಅರ್ಧ ಮನುಷ್ಯ, ಅರ್ಧ ದೆವ್ವವಾಗಿ ಕಾಣುತ್ತಾನೆ. ಇದರಿಂದ ಅಭ್ಯಾಸಕ್ಕೆ ತೊಡಗುವವನು, ಹೆಚ್ಚು ಭಯಗೊಳ್ಳುತ್ತಾನೆ, ನಮ್ಮ ಫಾಲನ್‌ದಫಾದಲ್ಲಿ ಅಂತಹ ಭಯದ ವಾತಾವರಣವಿರುವುದಿಲ್ಲ.

ಮತ್ತೊಂದು ರೀತಿಯ ಅಭ್ಯಾಸದಲ್ಲಿ ಆಂತರಿಕ ಮತ್ತು ಬಾಹ್ಯ ಎಂಬ ಎರಡೂ ಅಭ್ಯಾಸ ಕ್ರಮಗಳಿರುತ್ತವೆ. ಅದು ಯುದ್ಧಕಲೆಯನ್ನು ಜೊತೆಗೆ ಅಂತರಂಗದ ಸಾಧನೆಯನ್ನು ಬಯಸುತ್ತದೆ. ಇಂತಹ ಅಭ್ಯಾಸವು ಸಾಮಾನ್ಯವಾಗಿ ತಾವೋ ಶಾಲೆಯಲ್ಲಿ ಕಾಣಸಿಗುತ್ತದೆ. ಒಮ್ಮೆ ವ್ಯಕ್ತಿಯು ಈ ಅಭ್ಯಾಸವನ್ನು ಮಾಡಿದರೆ, ಅವನು ಮತ್ತೊಂದು ರೀತಿಯ ಭಯಾನಕ ತೊಡಕಿಗೆ ಗುರಿಯಾಗಬೇಕಾಗುತ್ತದೆ. ಅದೆಂದರೆ ಕೆಲವರು ಅವನ ವಿರುದ್ಧ ಜಗಳಕ್ಕೆ ಅಥವಾ ಹೋರಾಟಕ್ಕೆ ಉತ್ಸುಕರಾಗಿರುತ್ತಾರೆ. ಜಗತ್ತಿನಲ್ಲಿ ಹಲವು ತಾವೋ ಅಭ್ಯಾಸಿಗಳು ಯುದ್ಧ ಕಲೆಯ ಅಭ್ಯಾಸಿಗಳೂ ಆಗಿದ್ದಾರೆ. ಯುದ್ಧ ಕಲೆಯ ವಿದ್ಯಾರ್ಥಿಯೊಬ್ಬನು ಸಹ ಗಾಂಗನ್ನು ವೃದ್ಧಿಸಿಕೊಳ್ಳಬಲ್ಲನು, ವ್ಯಕ್ತಿಯೊಬ್ಬನು ಸ್ವಾರ್ಥ ಸಮ್ಮಾನಗಳ ಸಂಬಂಧಗಳ ಗೀಳನ್ನು ಕಳೆದುಕೊಂಡರೆ, ಅವನೂ ಸಹ ಗಾಂಗನ್ನು ವೃದ್ಧಿಸಬಲ್ಲನು, ಅದಾಗ್ಯೂ ಯುದ್ಧ ಕಲಾಭ್ಯಾಸಿಯ ಸ್ಪರ್ಧಾತ್ಮಕತೆಯ ಸಂಬಂಧವು

ನಾಶವಾಗುವುದಕ್ಕೆ ಹೆಚ್ಚು ಸಮಯ ಬೇಕಾಗುತ್ತದೆ. ಅವನು ಸುಲಭವಾಗಿಯೂ ಕೆಲವು ನಿರ್ದಿಷ್ಟ ಹಂತಗಳಲ್ಲಿ ತನ್ನ ಬಂಧನಗಳನ್ನು ಕಳೆದುಕೊಳ್ಳಬಹುದು, ಧ್ಯಾನದಲ್ಲಿ ಕುಳಿತಿರುವಾಗ ಅವನು ಯಾರು ಯುದ್ಧಕಲೆಯನ್ನು ಅಭ್ಯಾಸ ಮಾಡುತ್ತಿದ್ದಾರೆಂದು ತಿಳಿಯಬಹುದು. ಅವನ ಮೂಲ ಚೈತನ್ಯವು ದೇಹವನ್ನು ಬಿಟ್ಟು, ಬೇರೊಬ್ಬನಲ್ಲಿ ಯಾರ ಯುದ್ಧಕಲೆ ಉತ್ತಮವಾಗಿದೆ ಎಂದು ಪಂದ್ಯಕ್ಕೆ ನಿಲ್ಲಬಹುದು. ನಂತರದಲ್ಲಿ ಪಂದ್ಯ ಮುರಿದು ಬೀಳಲೂಬಹುದು. ಬೇರೊಂದು ಮಾರ್ಗದಲ್ಲಿ ಮತ್ತೊಬ್ಬ ಜಗಳಕ್ಕೆ ಬರಬಹುದು. ಒಂದು ವೇಳೆ ಅದನ್ನವನು ತಿರಸ್ಕರಿಸಿದರೆ, ಬೇರೊಬ್ಬ ಅವನನ್ನು ನಿಜವಾಗಿ ಕೊಲ್ಲುತ್ತಾನೆ. ಹೀಗೆ ಜಗಳ ಮುಕ್ತಾಯವಾಗುತ್ತದೆ. ಒಮ್ಮೆ ಈ ವ್ಯಕ್ತಿ ನಿದ್ದೆಗೆ ಜಾರಿದ್ದರೆ, ಯಾವನೋ ಒಬ್ಬ ಅವನನ್ನು ಜಗಳವೊಂದಕ್ಕೆ ಕರೆಯುತ್ತಿದ್ದರೆ, ಅದು ಅವನ ರಾತ್ರಿಯನ್ನು ಹಾಳು ಮಾಡುತ್ತದೆ. ನಿಜವಾಗಿಯೂ ಇದು ಅವನು ತನ್ನ ಸ್ಪರ್ಧಾತ್ಮಕತೆಯ ಗೀಳನ್ನು ಕಳೆದುಕೊಳ್ಳುವುದಕ್ಕೆ ಒಳ್ಳೆಯ ಸಮಯ, ಒಂದು ವೇಳೆ ಕಳೆದುಕೊಳ್ಳದಿದ್ದರೆ, ಅವನು ಯಾವಾಗಲೂ ಹಾಗೆಯೇ ನರಳುತ್ತಿರಬೇಕಾಗುತ್ತದೆ. ಚಿಗಾಂಗ್ ಅಭ್ಯಾಸವನ್ನು ಮುಂದುವರೆಸುವುದಕ್ಕೆ ಅವನು ಅಸಮರ್ಥನಾಗುತ್ತಾನೆ. ಹೀಗೆ ಒಬ್ಬನು ಆಂತರಿಕ ಮತ್ತು ಬಾಹ್ಯ ಎಂಬ ಎರಡೂ ಸಾಧನೆಯಲ್ಲಿರುವಾಗ ಸಂಕಷ್ಟಕ್ಕೆ ಒಳಗಾಗುತ್ತಾನೆ. ನಮ್ಮ ಅಭ್ಯಾಸದ ಕ್ರಮದಲ್ಲಿ ಇಂತಹ ತೊಂದರೆಗಳೂ ಇರುವುದಿಲ್ಲ.

ನಮ್ಮೆಲ್ಲಾ ಅಭ್ಯಾಸಿಗಳೂ ಮತ್ತೊಂದು ಪ್ರಮುಖ ತೊಡಕನ್ನು ಹೊಂದಿಯೇ ಹೊಂದುತ್ತಾರೆ. ಅದೆಂದರೆ ಭೋಗಾಕಾಂಕ್ಷೆಯ ತೊಡಕು, ಇದು ಹೆಚ್ಚು ಗಹನವಾದ ವಿಚಾರ. ಮಾನವ ಸಮಾಜದಲ್ಲಿ ವೈವಾಹಿಕತೆಯ ಕಾರಣದಿಂದಾಗಿ ಮಾನವರು ಸಂತತಿಯನ್ನು ಪಡೆಯುತ್ತಾರೆ. ಮಾನವ ಜನಾಂಗವು ಹೀಗೆಯೇ ಅಸ್ತಿತ್ವಕ್ಕೆ ಬರುತ್ತದೆ. ಮತ್ತು ಜನಾಂಗದಲ್ಲಿ ಭಾವನಾ ಸಂಬಂಧಗಳಿರುತ್ತವೆ. ಈ ಭಾವನಾತ್ಮಕತೆಯಿಂದಾಗಿ ಕೆಲವರು ಕುಗ್ಗುತ್ತಾರೆ, ಹಿಗ್ಗುತ್ತಾರೆ, ಪ್ರೀತಿಸುತ್ತಾರೆ, ದ್ವೇಷಿಸುತ್ತಾರೆ, ಒಂದು ಕೆಲಸದಿಂದ ಖುಷಿಯನ್ನು, ಮತ್ತೊಂದು ಕೆಲಸದಿಂದ ದು:ಖವನ್ನು, ಇಷ್ಟ- ಅನಿಷ್ಟಗಳನ್ನು ಹೊಂದುತ್ತಾರೆ. ಪ್ರತಿಯೊಂದು ಭಾವನಾತ್ಮಕತೆಗೆ ಸಂಬಂಧಿಸಿರುತ್ತದೆ ಮತ್ತು ದಿನನಿತ್ಯದ ಜನ ಕೇವಲ ಅದಕ್ಕಾಗಿಯೇ ಬದುಕುತ್ತಾರೆ. ಅಭ್ಯಾಸಿಯಾಗಿ ನಾವಿದನ್ನು ಮೀರಬೇಕಾಗುತ್ತದೆ. ಹಲವು ಸಂಬಂಧಗಳು ಭಾವನಾತ್ಮಕತೆಯಿಂದ ಉಂಟಾಗುತ್ತದೆ. ಅದನ್ನು ಹಗುರವಾಗಿ ಪರಿಗಣಿಸಿ, ಭೋಗಾಕಾಂಕ್ಷೆಗಳನ್ನು ಉದ್ದೇಶಪೂರ್ವಕವಾಗಿ ಬಿಡಬೇಕಾಗುತ್ತದೆ.

ದಿನನಿತ್ಯದ ಜನರೊಂದಿಗೆ ಸಾಧನೆಯ ಅಭ್ಯಾಸ ಮಾಡುವವರಿಗೆ ನಮ್ಮ ಶಾಲೆಯಲ್ಲಿ ಋಷಿಗಳಾಗಬೇಕೆಂದು ಹೇಳುವುದಿಲ್ಲ, ಯುವ ಅಭ್ಯಾಸಿಗಳು ಸಂಸಾರವನ್ನು ಹೊಂದಬಹುದು. ನಮ್ಮ ಶಾಲೆಯಲ್ಲಿ ನೇರವಾಗಿ ಅಭ್ಯಾಸವು ಮನಸ್ಸನ್ನು ಕೇಂದ್ರೀಕರಿಸಿರುತ್ತದೆ. ಅದು ನಿಮ್ಮ ವೈವಾಹಿಕ ಅನುಕೂಲಗಳಿಗೇನೂ ನಷ್ಟ ಉಂಟು ಮಾಡುವುದಿಲ್ಲ. ನಿಮ್ಮ ಆತ್ಮ ಪ್ರಕೃತಿಯನ್ನು ದಿನನಿತ್ಯದ ಜನರ ಸಂಬಂಧಗಳ ಮಧ್ಯೆ ಅದನ್ನು ರೂಢಿಸಿಕೊಳ್ಳದಿದ್ದರೆ ನಿಮ್ಮ ಆತ್ಮಪ್ರಕೃತಿ ನಿಜವಾಗಿ ಉನ್ನತಗೊಂಡಿದೆ ಎಂಬುದಕ್ಕೆ ಅರ್ಥವೇನು? ನೀವು ಭೋಗ ಸಂಬಂಧಗಳನ್ನು ತ್ಯಜಿಸಬಲ್ಲಿರಾದರೆ, ನೀವು ಎಲ್ಲವನ್ನು ತ್ಯಜಿಸಲು ಶಕ್ತರಾಗುತ್ತೀರಿ. ಇಲ್ಲದಿದ್ದರೆ ಏನನ್ನೂ ತ್ಯಜಿಸಲಾರಿರಿ. ಆದಕಾರಣ ಸಾಧನೆಯ ನಿಜವಾದ ಉದ್ದೇಶ ಹೃದಯವನ್ನು ಸಮತೋಲನ ಮಾಡುವುದಾಗಿರುತ್ತದೆ. ದೇವಸ್ಥಾನಗಳಲ್ಲಿ ಮಾಡುವ ಸಾಧನಾಭ್ಯಾಸಗಳು, ನೀವು ಇಂತಹ ಸಂಬಂಧಗಳಿಂದ ದೂರ ಉಳಿಯುವಂತೆ ಒತ್ತಾಯಿಸುತ್ತವೆ. ಆದರೆ ನಾವು ಹಾಗೆ ಮಾಡಲು ಹೇಳುವುದಿಲ್ಲ. ನಿಮ್ಮ ಭೋಗಾಸಕ್ತಿಗಳ ಬಗ್ಗೆ ಆಸಕ್ತಿ ವಹಿಸದಂತೆ ಹೇಳುತ್ತೇವೆ. ಹೀಗೆ ನಮ್ಮಲ್ಲಿ ಸಾಧನೆಯನ್ನು ಮಾಡುವವರು ಹೆಚ್ಚು ದೃಢರಾಗಿರುತ್ತಾರೆ. ನಾವು ನಿಮಗೆ ಋಷಿಗಳಾಗಬೇಕೆಂದು ಹೇಳುವುದಿಲ್ಲ. ನಮ್ಮಲ್ಲಿ ಅಭ್ಯಾಸ ಮಾಡುವವರೆಲ್ಲ ಅರೆಸನ್ಯಾಸಿಗಳೂ ಆಗುವುದಿಲ್ಲ. ನಿಮ್ಮ ಹೆಂಡತಿಗೆ ವಿಚ್ಛೇದನ ಕೊಡುವಂತೆಯೂ ಆಗುವುದಿಲ್ಲ, ನಾವಿದನ್ನೆಲ್ಲ ಹಗುರವಾಗಿ ಪರಿಗಣಿಸುತ್ತೇವೆ. ಇದೇ ಸಂದರ್ಭದಲ್ಲಿ ಲೈಂಗಿಕ ಸ್ವಾತಂತ್ರ್ಯ ಮತ್ತು ಅಶ್ಲೀಲ ಸಾಹಿತ್ಯ ಜನರೊಂದಿಗೆ ಬೆರೆತು ಹೋಗುತ್ತಿದೆ. ಕೆಲವರು ಅದರಲ್ಲಿ ಹೆಚ್ಚು ಆಸಕ್ತರಾಗಿದ್ದಾರೆ. ಅಭ್ಯಾಸಿಗಳಾಗಿ ನಾವು ಅದಕ್ಕೂ ಸ್ವಲ್ಪ ಪ್ರಾಶಸ್ತ್ಯವನ್ನು ನೀಡಿದ್ದೇವೆ.

ದಿನನಿತ್ಯದ ಜನರು ಸಮಾಜದಲ್ಲಿ ಮಣ್ಣಿನೊಂದಿಗೆ ಅದು ಕೊಳಕು ಎಂಬುದನ್ನು ಅರ್ಥಮಾಡಿಕೊಳ್ಳದೆ ಆಟವಾಡುತ್ತಿರುತ್ತಾರೆ. ಅವರೆಲ್ಲ ಭೂಮಿಯ ಮಣ್ಣಿನೊಂದಿಗೆ ಆಟವಾಡುತ್ತಿದ್ದಾರೆ.

ನಾವು, ಇಂತಹ ವಿಷಯಗಳಿಂದ ನಿಮ್ಮ ಕುಟುಂಬದ ಸ್ವಾಸ್ಥ್ಯವನ್ನು ಹಾಳು ಮಾಡಿಕೊಳ್ಳಬಾರದೆಂದು ಹೇಳುತ್ತೇವೆ. ಈ ಹಂತದಲ್ಲಿ ನೀವು ಅದರ ಬಗ್ಗೆ ಅನಾಸಕ್ತವಾಗಿರುವುದು ಒಳ್ಳೆಯದು. ಅದು ಮುಂದಿನ ನಿಮ್ಮ ಸ್ವಸ್ಥ ವೈವಾಹಿಕ ಜೀವನಕ್ಕೆ ಉತ್ತಮವಾಗಿರುತ್ತದೆ. ಭವಿಷ್ಯತ್ತಿನಲ್ಲಿ ನೀವು ನಿರ್ದಿಷ್ಟ ಹಂತವನ್ನು ತಲುಪಿದಾಗ ಅದನ್ನೆಲ್ಲ ಪಡೆಯಬಹುದು.

ನಮ್ಮ ಅಭ್ಯಾಸಿಗಳ ದೇಹಭಾಗವು ಶಕ್ತಿಯನ್ನು ಪಡೆದಿರುತ್ತದೆಯೆಂದು ನಿಮಗೆ ತಿಳಿದಿದೆ. ಪ್ರಸ್ತುತ ಎಂಬತ್ತರಿಂದ ತೊಂಬತ್ತರಷ್ಟು ಶೇಕಡ ಜನರು ಈ ತರಗತಿಯಿಂದ ಕೇವಲ ರೋಗಬಾಧೆಯನ್ನು ಮಾತ್ರ ಕಳೆದುಕೊಂಡಿಲ್ಲ. ಜೊತೆಗೆ ತಮ್ಮ ಗಾಂಗನ್ನೂ ವೃದ್ಧಿಸಿಕೊಂಡಿದ್ದಾರೆ. ಆದ್ದರಿಂದ ನಿಮ್ಮ ದೇಹ ಹೆಚ್ಚು ಶಕ್ತಿಯನ್ನು ಹೊಂದಿರುತ್ತದೆ. ನಿಮ್ಮ ಗಾಂಗ್ ಮತ್ತು ಪ್ರಸ್ತುತ ಆತ್ಮಪ್ರಕೃತಿಯ ಮಟ್ಟವು ಸಮಾನುಪಾತದಲ್ಲಿರುವುದಿಲ್ಲ. ನಿಮ್ಮ ಗಾಂಗ್ ತಾತ್ಕಾಲಿಕವಾಗಿ ಇದ್ದಕ್ಕಿದ್ದಂತೆ ಉನ್ನತೀಕರಣಗೊಳ್ಳುತ್ತಿದ್ದು, ನಿಮ್ಮ ಆತ್ಮಪ್ರಕೃತಿಯನ್ನೂ ಉನ್ನತೀಕರಿಸಬೇಕಾಗಿದೆ. ಕ್ರಮೇಣ ಅದು ಸಾಧ್ಯವಾಗುತ್ತದೆ. ಖಂಡಿತವಾಗಿ ಈ ಅವಧಿಯಲ್ಲೇ ನಾವು ನಿಮ್ಮಿಂದ ಸಾಧ್ಯ ಮಾಡಿಸುತ್ತೇವೆ. ಮತ್ತೊಂದು ಹಂತದಲ್ಲಿ ನೀವು ಶಕ್ತಿಯ ಮೊತ್ತವನ್ನು ಹೊಂದುತ್ತೀರಿ. ಏಕೆಂದರೆ ಸರಿಯಾದ ಮಾರ್ಗದಲ್ಲಿ ಸಾಧಿತವಾಗಿರುವ ಶಕ್ತಿಯು ಹೆಚ್ಚು ಸರಿಯಾಗಿರುತ್ತದೆ ಮತ್ತು ಧರ್ಮಶೀಲವಾಗಿರುತ್ತದೆ. ಇಲ್ಲಿ ಕುಳಿತಿರುವವರೆಲ್ಲರೂ ದಯೆ ಮತ್ತು ಪ್ರಸನ್ನತೆಯ ಪರಿಸರವನ್ನು ಅನುಭವಿಸುತ್ತೀರಿ. ಇಲ್ಲಿ ಕುಳಿತಿರುವವರೆಲ್ಲರೂ ಯಾವುದೇ ಕೆಟ್ಟ ಆಲೋಚನೆಗಳಿಲ್ಲದೆ ಸಮತೋಲಿನರಾಗಿ ಧೂಮಪಾನವನ್ನಾದರೂ ಮಾಡಬೇಕೆನ್ನುವ ಆಲೋಚನೆಯನ್ನೂ ಬಿಟ್ಟು ಕುಳಿತಿದ್ದೀರಿ. ನೀವು ಹೆಚ್ಚು ಸಹಿಷ್ಣುಗಳಾಗಿದ್ದೀರಿ ಮನಸ್ಸನ್ನು ಹತೋಟಿಯಲ್ಲಿಟ್ಟಿದ್ದೀರಿ. ನೀವು ಬೇರೆಯವರನ್ನು, ನಿಮ್ಮ ಮನೆಯವರನ್ನು ಬಹುಶ: ಹತೋಟಿಯಲ್ಲಿಟ್ಟಿರ ಬಹುದು. ಈ ಸಾಧನಾ ಕ್ಷೇತ್ರವು ಸಾಮರಸ್ಯದ ದಯೆಯ ಮತ್ತು ನಂಬಿಕೆಯ ಕ್ಷೇತ್ರವಾಗಿದೆ. ಆದರೂ ಜನ ತದ್ವಿರುದ್ಧವಾಗಿ ಕೆಟ್ಟ ಕೆಲಸ ಮತ್ತು ಆಲೋಚನೆಗಳನ್ನು ಮಾಡುತ್ತಾರೆ.

ಮತ್ತೊಂದು ದಿನ ನಾನು ಹೇಳಿದ್ದೆ, ಬುದ್ಧ ಬೆಳಕು ಎಲ್ಲ ಕಡೆ ಪ್ರಕಾಶಿಸುತ್ತಿರುತ್ತದೆ. ಮತ್ತು ಎಲ್ಲ ಅಸಹಜತೆಗಳನ್ನು ತಿದ್ದುತ್ತದೆಯೆಂದು, ಮತ್ತೊಂದು ಮಾತಿನಲ್ಲಿ ನಮ್ಮ ದೇಹದಿಂದ ಹರಿಯುವ ಶಕ್ತಿಯೇ ಎಲ್ಲ ಅಸಹಜ ಸ್ಥಿತಿಗಳನ್ನು ತಿದ್ದಬಲ್ಲದು. ಆದ್ದರಿಂದ ಈ ಪ್ರಭಾವಲಯದಲ್ಲಿ ಸಹಜವಾಗಿಯೇ ನೀವು ನಿಮ್ಮವರ ಮೇಲೆ ಹತೋಟಿ ಹೊಂದುತ್ತೀರಿ. ಒಂದು ವೇಳೆ ನೀವು ಮಾಡದ, ಯೋಚಿಸದ ವಿಷಯಗಳ ಬಗ್ಗೆ ಅವರೂ ಯೋಚಿಸದಿರಬಹುದು. ಆದರೆ ಅದನ್ನು ಬಚಿತವೆಂದು ಹೇಳಲಾಗುವುದಿಲ್ಲ. ಪ್ರಸ್ತುತ ದೂರದರ್ಶನದ ಪರಿಸರದಲ್ಲಿ ಏನೆಲ್ಲ ರೀತಿಯ ವಸ್ತುಗಳು ಒಬ್ಬನ ಬಯಕೆಯನ್ನು ಸುಲಭವಾಗಿ ಉತ್ತೇಜಿಸಬಲ್ಲವು. ಆದರೂ ಸಾಮಾನ್ಯ ಪರಿಸ್ಥಿತಿಯಲ್ಲಿ ನೀವು ಈ ಹತೋಟಿಯನ್ನು ಹೊಂದಿರುತ್ತೀರಿ. ಭವಿಷ್ಯತ್ತಿನಲ್ಲಿ ನೀವು ಉನ್ನತ ಹಂತದ ಸಾಧನಾಭ್ಯಾಸವನ್ನು ತಲುಪಿದಾಗ, ನೀವೇ ಏನೂ ಮಾಡಬೇಕೆಂದು ತಿಳಿಯುತ್ತೀರಿ. ಅದಾದ ನಂತರ ಒಂದು ಸಾಮರಸ್ಯದ ಜೀವನ ಹಂತವನ್ನು ಗಳಿಸುತ್ತೀರಿ. ಅದಕ್ಕೋಸ್ಕರ ನೀವು ಹೆಚ್ಚು ಕಾಳಜಿ ವಹಿಸುವ ಅಗತ್ಯವಿಲ್ಲ. ಏಕೆಂದರೆ ಅದೂ ಸಹ ಒಂದು ಬಂಧನವಾಗುತ್ತದೆ. ನೀವೆದೆಲ್ಲವನ್ನು ಎಲ್ಲಿಯವರೆಗೆ ಹಗುರವಾಗಿ, ಸರಿಯಾದ ರೀತಿಯಲ್ಲಿ ಯೋಚಿಸುತ್ತೀರೋ ಅಲ್ಲಿಯವರೆಗೆ ಅವೆಲ್ಲ ಒಳ್ಳೆಯವೇ ಆಗಿರುತ್ತದೆ.

ಎಂತಹ ಭೋಗಾಸಕ್ತ ತೊಡಕುಗಳಿಂದ ವ್ಯಕ್ತಿ ಬಲಿಯಾಗುತ್ತಾನೆ? ನಿಮ್ಮ ಸಮಚಿತ್ತವು ಸರಿಯಾಗಿಲ್ಲದಿದ್ದರೆ, ಇಂತಹ ತೊಡಕುಗಳು ನಿಮ್ಮ ಕನಸಿನಲ್ಲಿ ಕಾಣಿಸಿಕೊಳ್ಳುತ್ತವೆ. ನೀವು ನಿದ್ದೆಯಲ್ಲಿರುವಾಗ ಅಥವಾ ಧ್ಯಾನದಲ್ಲಿರುವಾಗ ಇದ್ದಕ್ಕಿದ್ದಂತೆ ತೊಡಕು ಕಾಣಿಸಿಕೊಳ್ಳಬಹುದು, ನೀವು ಗಂಡಸಾಗಿದ್ದರೆ ಸುಂದರಿಯೊಬ್ಬಳು ಕಾಣಿಸಿಕೊಳ್ಳಬಹುದು. ನೀವು ಹೆಣ್ಣಾಗಿದ್ದರೆ ಕನಸಿನ ಪುರುಷನೊಬ್ಬ ಕಾಣಿಸಿಕೊಳ್ಳಬಹುದು, ಬೆತ್ತಲೆಯಾಗಿಯೂ ಕಾಣಿಸಿಕೊಳ್ಳಬಹುದು. ಒಮ್ಮೆ ನಿಮ್ಮ ಮನಸ್ಸು ಅದನ್ನು ಯೋಚಿಸಿದರೆ, ನೀವದನ್ನು ಸಾಕಾರಗೊಳಿಸಲೂಬಹುದು. ನೀವೆಲ್ಲ ಇದರ ಬಗ್ಗೆ ಯೋಚಿಸಿ, ನಮ್ಮ ಸಾಧಾನಾಭ್ಯಾಸದಲ್ಲಿ ದೇಹದ ಅಗತ್ಯವು ಒಬ್ಬನ ಬದುಕನ್ನು ರೂಪಿಸುವುದಕ್ಕೆ ಆಗಿರುತ್ತದೆ. ಯಾವಾಗಲೂ ನೀವು ಹೀಗೆ ಭೋಗಾಸಕ್ತಿಗೆ ಸ್ಖಲಿತರಾಗುತ್ತಿದ್ದರೆ, ಪರೀಕ್ಷೆಯಲ್ಲಿ ಸಫಲರಾಗುವುದಿಲ್ಲ. ನಾನು ಫಾಲೂನ್ ದಫಾ ವನ್ನು ಬೋಧಿಸುವಾಗ ಪ್ರಬಲವಾದ ಶಕ್ತಿಯನ್ನು ನಿಮ್ಮ ಮನಸ್ಸಲ್ಲಿ

ಮುದ್ರಿಸುತ್ತೇನೆ. ನೀವು ಭೋಗಾಸಕ್ತ ತೊಡಕು ಏರ್ಪಟ್ಟಾಗಲೆಲ್ಲಾ ಅದು ಜ್ಞಾಪಕಕ್ಕೆ ಬರುತ್ತದೆ. ಆಗ ನೀವು ಅಂತಹ ತೊಡಕುಗಳಿಂದ ಬಲಿಯಾಗುವುದಿಲ್ಲ. ನೀವು ಅದನ್ನು ಸ್ವ–ಅಭ್ಯಾಸದಿಂದ ಗಳಿಸಿಕೊಳ್ಳಬೇಕು. ಒಮ್ಮೆಗೇ ಸಫಲತೆ ದೊರೆಯುವುದಿಲ್ಲ. ಮತ್ತೆ ಮತ್ತೆ ಪ್ರಯತ್ನಿಸಿ ಸಾಧನೆಯ ಪರೀಕ್ಷೆಯಲ್ಲಿ ಗೆಲ್ಲಬೇಕಾಗುತ್ತದೆ.

ಈ ರೂಪದ ತೊಡಕುಗಳು ಭೂತಗಳಿಂದ ಅಥವಾ ನಿಮ್ಮನ್ನು ಪರೀಕ್ಷಿಸುವ ಶಿಕ್ಷಕರಿಂದ ಬರಬಲ್ಲವು. ಎರಡು ರೀತಿಯ ತೊಡಕುಗಳೂ ಇರುತ್ತವೆ. ಪ್ರತಿಯೊಬ್ಬರೂ ಈ ಪರೀಕ್ಷೆಯನ್ನು ಪೂರ್ಣಗೊಳಿಸಬೇಕಾಗುತ್ತದೆ. ನಾವು ಸಾಮಾನ್ಯ ವ್ಯಕ್ತಿಗಳಂತೆಯೇ ಸಾಧನಾಭ್ಯಾಸವನ್ನು ಪ್ರಾರಂಭಿಸೋಣ. ಮೊದಲ ಪರೀಕ್ಷೆ ಇದು, ನಾನು ಹುಬೇನ ರಾಜಧಾನಿಯಾದ ವುಹಾನ್‌ನಲ್ಲಿ ತರಗತಿಯೊಂದನ್ನು ಬೋಧಿಸುವಾಗ, ಅಲ್ಲಿ ಮೂವತ್ತು ವರ್ಷದ ವ್ಯಕ್ತಿಯೊಬ್ಬನಿದ್ದ. ನನ್ನ ಉಪನ್ಯಾಸವನ್ನು ಕೇಳಿದ ನಂತರ ಮನೆಗೆ ಹೋಗಿ, ಧ್ಯಾನಕ್ಕೆ ಕುಳಿತುಕೊಂಡ. ಅವನು ಸರಿಯಾದ ರೀತಿಯಲ್ಲಿ ಸಮಚಿತ್ತವನ್ನು ಸಾಧಿಸಿದ. ಅದಾದ ಮೇಲೆ ಇದ್ದಕ್ಕಿದ್ದಂತೆ ಒಂದು ಕಡೆ ಬುದ್ದ ಅಮಿತಾಬ ಮತ್ತು ಇನ್ನೊಂದು ಕಡೆ ಲಾವೋ ಜಿ ಪ್ರತ್ಯಕ್ಷರಾಗ ತೊಡಗಿದರು. ಇದು ಆತ ಹೇಳಿದ ಅನುಭವದ ವರದಿ. ಹಾಗೆ ಕಾಣಿಸಿಕೊಂಡ ಮೇಲೆ ಅವರಿಬ್ಬರೂ ಅವನನ್ನು ಸುಮ್ಮನೆ ಹಾಗೇ ನೋಡಿ ಅಂತರ್ಧಾನರಾದರು. ತದನಂತರ ಬೋಧಿಸತ್ವ ಅವಲೋಕಿತೇಶ್ವರ ಕಾಣಿಸಿಕೊಂಡರು. ಅವರು ಕೈಯಲ್ಲಿ ಬೆಳ್ಳನೆಯ ಹೊಗೆಯನ್ನು ಸೂಸುತ್ತಿರುವ ಕರಂಡಕ ಹಿಡಿದಿದ್ದರು. ಅವನು ಹಾಗೆಯೇ ಕುಳಿತು ಅದನ್ನೆಲ್ಲ ನೋಡಿ ಹೆಚ್ಚು ಧನ್ಯನಾದ. ಇದ್ದಕ್ಕಿದ್ದಂತೆ ಹೊಗೆಯು ಕೆಲವು ಸುಂದರ ಹೆಣ್ಣುಗಳಾಗಿ ಪರಿವರ್ತಿತವಾಯಿತು. ಅವರೆಲ್ಲ ಅವನೊಂದಿಗೆ ಅದ್ಭುತ ನೃತ್ಯವಾಡಿದರು. ಅವನು ತನಗೆ ತಾನೇ ನಾನು ಇಲ್ಲಿ ಅಭ್ಯಾಸ ಮಾಡುತ್ತಿರುವುದರಿಂದ ಬೋಧಿಸತ್ವ ಅವಲೋಕಿತೇಶ್ವರರು ಬಹುಮಾನವಾಗಿ ಸುಂದರಿಯರನ್ನು ಕಳುಹಿಸಿದ್ದಾನೆ ಎಂದು ಯೋಚಿಸಿದ. ಹಾಗೆ ಅಂದುಕೊಂಡದ್ದಕ್ಕೆ ಸುಂದರಿಯರು ಇದ್ದಕ್ಕದ್ದಂತೆ ಬೆತ್ತಲೆಯಾಗಿ, ಅವನ ಸುತ್ತ ವಿವಿಧ ಆಂಗಿಕ ಕ್ರಿಯೆಗಳನ್ನು ಮಾಡಿದರು. ಈ ಅಭ್ಯಾಸಿಯ ಆತ್ಮಪ್ರಕೃತಿಯು ಇದ್ದಕ್ಕಿದ್ದಂತೆ ವೃದ್ಧಿಯಾಗಿತ್ತು. ಆ ಸ್ಥಿತಿಯಲ್ಲಿ ಅವನು ಸರಿದಾರಿಗೆ ಎಚ್ಚೆತ್ತುಕೊಂಡಿದ್ದ, ಅವನ ಮನಸ್ಸಲ್ಲಿ ಮಾಡಿದ್ದೆಂದರೆ ನಾನು ಸಾಮಾನ್ಯ ವ್ಯಕ್ತಿಯಲ್ಲ, ನಾನೊಬ್ಬ ಅಭ್ಯಾಸಿ, ನೀನು ನನ್ನನ್ನು ಹೀಗೆ ನಡೆಸಿಕೊಳ್ಳಬಾರದು. ನಾನೊಬ್ಬ ಫಾಲೂನ್ ದಫಾದ ಅಭ್ಯಾಸಿ ಎಂಬ ಯೋಚನೆ ಬಂತು. ಒಮ್ಮೆ ಈ ಯೋಚನೆ ಬೆಳಕಿಗೆ ಬಂದ ನಂತರ ಎಲ್ಲವೂ ತಕ್ಷಣ ಮರೆಯಾಯಿತು. ನಂತರ ಬುದ್ಧ ಅಮಿತಾಬ ಮತ್ತು ಲಾವೋ ಜಿ ಕಾಣಿಸಿಕೊಂಡರು. ಲಾವೋ ಜಿ ಈ ಅಭ್ಯಾಸಿಯನ್ನು ಗುರ್ತಿಸಿ, ಬುದ್ಧ ಅಮಿತಾಬರಿಗೆ ನಕ್ಕು ಹೇಳಿದರು, ಈ ಮಗು ಬೋಧನೆಗೆ ಯೋಗ್ಯವಾಗಿದೆ ಅದರರ್ಥ ಈ ವ್ಯಕ್ತಿಯು ಉತ್ತಮನಾಗಿದ್ದಾನೆ ಮತ್ತು ಬೋಧನೆಗೆ ಒಗ್ಗುತ್ತಾನೆಂದು.

ಇಲ್ಲಿಯವರೆಗೂ ವ್ಯಕ್ತಿಯೊಬ್ಬನ ಇಷ್ಟ ಭೋಗಗಳನ್ನು ಇತ್ಯರ್ಥಗೊಳಿಸುವುದು ಹೆಚ್ಚು ಕ್ಲಿಷ್ಟವಾಗಿದೆ ಹಾಗೂ ಹೀಗೂ ನಾವು ದಿನನಿತ್ಯದ ಜನರ ನಡುವೆಯೇ ಸಾಧನೆಯ ಅಭ್ಯಾಸ ಮಾಡುತ್ತಿರುತ್ತೇವೆ. ಆದ್ದರಿಂದ ನಾವು ನಿಮ್ಮನ್ನು ಇವೆಲ್ಲವನ್ನು ಸಂಪೂರ್ಣವಾಗಿ ಬಿಟ್ಟು ಬಿಡಿ ಎಂದು ಕೇಳಲಾರೆವು. ಕಡೇ ಪಕ್ಷ ಈ ಹಂತದಲ್ಲಿ ಅವುಗಳ ಬಗ್ಗೆ ಹೆಚ್ಚು ಆಸಕ್ತರಾಗಬೇಡಿ ಎಂದು ಮಾತ್ರ ಹೇಳುತ್ತೇವೆ. ಒಬ್ಬ ಅಭ್ಯಾಸಿಯಾಗಿ ಈ ದಾರಿಯಲ್ಲೇ ಇರಬೇಕಾಗುತ್ತದೆ. ಯಾವಾಗಲಾದರೂ ನಿಮಗೆ ಸಾಧನೆಯಲ್ಲಿ ತೊಡಕುಂಟಾದರೆ ನಿಮ್ಮೊಳಗೇ ಕಾರಣಗಳನ್ನು ಹುಡುಕಿ ಮತ್ತು ಅಗತ್ಯವಿರುವುದೇನು ಎಂದು ಯೋಚಿಸಿ.

**ಸ್ವ ಮನಸ್ಸಿನ ಭಯಾನಕ ತೊಡಕುಗಳು :**

ಹಾಗೆಂದರೇನು? ಮನುಷ್ಯನ ದೇಹವು ಪ್ರತಿಯೊಂದು ದಿಕ್ಕಿನಲ್ಲಿಯೂ ಭೌತಿಕ ಕ್ಷೇತ್ರವನ್ನು ಹೊಂದಿದೆ. ಒಂದು ವಿಶೇಷ ಕ್ಷೇತ್ರವೊಂದರಲ್ಲೇ ನೆರಳಿನಂತೆ ವಿಶ್ವದಲ್ಲಿನ ಎಲ್ಲ ಅಂಶಗಳು ಪ್ರತಿಫಲನಗೊಳ್ಳಬಹುದು. ಆದಾಗ್ಯೂ ಅವೆಲ್ಲ ವಸ್ತು ಅಸ್ತಿತ್ವವುಳ್ಳ ನೆರಳುಗಳಷ್ಟೆ. ಒಂದು ವೇಳೆ ನೀವು ಶಾಂತವಾಗಿ ದಿವ್ಯಚಕ್ಷುವನ್ನು ತೆರೆದು, ನಿಮ್ಮ ಬುದ್ಧಿಯನ್ನು ಬಳಸದೆ ವಸ್ತುವೊಂದನ್ನು ಪರೀಕ್ಷಿಸಿದರೆ ಅದು ಸತ್ಯವಾಗಿರುತ್ತದೆ. ನೀವು ಬುದ್ಧಿಯಿಂದ ಸ್ವಲ್ಪವೇ ಯೋಚಿಸುವುದಕ್ಕೆ ಪ್ರಾರಂಭಿಸಿದರೂ, ನೀವು ಏನು ನೋಡಿರುತ್ತೀರಿ ಅದು ಸುಳ್ಳಾಗುತ್ತದೆ. ಇದನ್ನೇ ಒಬ್ಬನ ಸ್ವಂತ ಮನಸ್ಸಿನ ಭಯಾನಕ

ತೊಡಕುಗಳೆಂದು ಕರೆಯಲಾಗುತ್ತದೆ. ಕೆಲವರು ತಮ್ಮನ್ನು ತಾವು ನಿಯಂತ್ರಿಸಿಕೊಳ್ಳುವುದಕ್ಕೆ ಅಸಮರ್ಥರಿರುತ್ತಾರೆ ಮತ್ತು ತಮ್ಮನ್ನು ತಾವು ಅಭ್ಯಾಸಿಗಳೆಂದು ತಿಳಿದುಕೊಳ್ಳುವುದಿಲ್ಲವಾದ್ದರಿಂದ ಈ ತೊಡಕುಗಳು ಉದ್ಭವಿಸುತ್ತವೆ. ಅವರು ಅಸಾಧಾರಣ ಸಾಮರ್ಥ್ಯಗಳನ್ನು ಗಳಿಸುವದಕ್ಕೆ ಬೆನ್ನಟ್ಟುವುದರಿಂದ ಸುಲಭವಾಗಿ ತಮ್ಮ ಮನಸ್ಸಿನಿಂದಲೇ ತೊಡಕನ್ನು ಹೊಂದಿ, ಕೆಳಸ್ತರಕ್ಕೆ ಜಾರುತ್ತಾರೆ. ಅವರು ಎಷ್ಟೇ ದೊಡ್ಡ ಸಾಧನೆ ಮಾಡಿದ್ದರೂ, ಒಮ್ಮೆ ಈ ಸಮಸ್ಯೆ ತಲೆದೋರಿದರೆ ಎಲ್ಲ ಮಾರ್ಗಗಳಲ್ಲಿಯೂ ಅವರು ನೆಲಕಚ್ಚುತ್ತಾರೆ. ಇದೊಂದು ಅತಿಯಾದ ಸಮಸ್ಯಾತ್ಮಕ ಸಂಗತಿ, ಈ ಸಮಸ್ಯೆ ಬಂದರೆ ಆ ವ್ಯಕ್ತಿಯ ಜೀವನ ನಾಶವಾಗುತ್ತದೆ. ದಿವ್ಯಚಕ್ಷು ತೆರೆದವರಿಗೂ ಕೆಲವು ಹಂತಗಳಲ್ಲಿ ಈ ಸಮಸ್ಯೆ ಸುಲಭವಾಗಿ ಅಂಟಿಕೊಳ್ಳಬಹುದು. ಕೆಲವರು ಯಾವಾಗಲೂ ತಮ್ಮ ಪ್ರಜ್ಞೆಯಲ್ಲಿ ಅಪರವಾದ ವಿಚಾರಗಳಿಂದ ತೊಡಕನ್ನು ಅನುಭವಿಸುತ್ತಾರೆ.

ಉದಾಹರಣೆಯೊಂದನ್ನು ನೀಡುತ್ತೇನೆ, ತನ್ನ ಮನಸ್ಸನ್ನು ಚಂಚಲಮುಕ್ತವಾಗಿ ಇಟ್ಟುಕೊಳ್ಳುವುದು ಒಬ್ಬನಿಗೆ ತುಂಬಾ ಕಷ್ಟದಾಯಕವಾಗಿರುತ್ತದೆ. ನೀವು ನಿಮ್ಮ ಗುರು ಹೇಗಿರುತ್ತಾನೆ ಎಂಬುದನ್ನು ಗುರ್ತಿಸಿಕೊಳ್ಳುವುದಕ್ಕೂ ಅಸಮರ್ಥರಾಗಬಹುದು. ಒಂದು ದಿನ ಇದ್ದಕ್ಕಿದ್ದಂತೆ ಉದ್ದನೆಯ ದೈವಿಕ ವ್ಯಕ್ತಿ ಕಾಣಿಸಿಕೊಂಡು, ಅವನು ನಿಮಗೆ ಕೆಲವು ಹಿತವಚನಗಳನ್ನು ಮತ್ತು ಕೆಲ ಬೋಧನೆಗಳನ್ನು ನೀಡುತ್ತಾನೆ. ನೀವು ಅದನ್ನು ಒಪ್ಪಿ, ಅವನನ್ನು ನಿಮ್ಮ ಗುರುವೆಂದು ಪರಿಗಣಿಸಿದರೆ ನೀವು ಅವನೊಂದಿಗೆ ಹೋಗಬಹುದು. ಆದರೆ ಅವನೂ ಪೂರ್ಣಫಲವನ್ನು ಗಳಿಸಿರುವುದಿಲ್ಲ. ವ್ಯಕ್ತಿಯು ತನ್ನನ್ನು ತಾನು ಸರಿಯಾದ ರೀತಿಯಲ್ಲಿ ಅಭ್ಯಾಸಕ್ಕೆ ತೊಡಗಿಸಿಕೊಳ್ಳದಿದ್ದರೆ, ಅವನನ್ನು ಅಭ್ಯಾಸಿಯಾಗಿಯೇ ಉಳಿಸುವುದು ಕಷ್ಟ. ಅವನು ಸುಲಭವಾಗಿ ತನ್ನನ್ನು ತಾನು ನಾಶಪಡಿಸಿಕೊಳ್ಳಬಲ್ಲನು. ಸ್ವರ್ಗದ ಜನರೆಲ್ಲ ಅಮರರು, ಆದರೂ ಅವರಿಗೂ ಪೂರ್ಣಫಲವಿರುವುದಿಲ್ಲ ಮತ್ತು ಸಂಸಾರ ಚಕ್ರದಲ್ಲಿ ಸಾಗುತ್ತಿರಬೇಕಾಗುತ್ತದೆ. ನೀವು ಸಹಜವಾಗಿ ಇಂತಹವನನ್ನು ಗುರುವೆಂದು ಅನುಸರಿಸಿದರೆ ಫಲವೇನು? ನಿಮ್ಮ ಸಾಧನೆ ನಿಷ್ಫಲಗೊಳ್ಳುವುದಿಲ್ಲವೇ? ಅದರಿಂದ ನಿಮ್ಮ ಸ್ವಂತ ಗಾಂಗ್ ಸಹ ಕಲುಷಿತಗೊಳ್ಳುತ್ತದೆ. ಆದ್ದರಿಂದ ನಾನು ನಿಮಗೆ ಫಾ ಬೋಧಿಸಿದ್ದೇನೆ. ಅದು ನಿಮ್ಮನ್ನು ಹೇಗಾದರೂ ಸರಿಯಾದ ರೀತಿಯಲ್ಲಿ ತೊಡಗಿಕೊಳ್ಳುವಂತೆ ಮಾಡಬಲ್ಲದು. ನೀವು ಬೇರೆ ಶಾಲೆಯ ಬುದ್ಧಿವಂತ ವ್ಯಕ್ತಿಯನ್ನು ನೋಡಿದಾಗ ಚಂಚಲಗೊಳ್ಳಬೇಡಿ. ಒಂದೇ ಒಂದು ಅಭ್ಯಾಸ ಕ್ರಮದೊಂದಿಗೆ ಉಳಿದುಕೊಳ್ಳಿ, ಅದು ಬುದ್ಧ, ತಾವೋ ಇನ್ನೇನೇ ಆಗಿರಲಿ ನಿಮ್ಮ ಹೃದಯವನ್ನು ಕದಲಿಸಲಾರದು, ಯಶಸ್ಸು ಎನ್ನುವುದು ನಮ್ಮ ದೃಷ್ಟಿಕೋನದಲ್ಲಿದೆ.

ಒಬ್ಬನ ಸ್ವಂತ ಮನಸ್ಸಿನ ಭಯಾನಕ ತೊಡಕುಗಳು ಇನ್ನೂ ಬೇರೆಯ ರೂಪದಲ್ಲೂ ರೂಪುಗೊಳ್ಳಬಹುದು. ನೀವು ಕಳೆದುಕೊಂಡ ಸಂಬಂಧಿಕರಿಂದಲೂ ತೊಡಕುಗಳನ್ನು ಅವರು ಅದು ಮಾಡು, ಇದು ಮಾಡು ಎಂದು ಅಳುತ್ತಿರುವಂತೆ, ಬೇಡುತ್ತಿರುವಂತೆ ಅನುಭವಗೊಳ್ಳಬಹುದು. ಎಲ್ಲ ರೀತಿಯವೂ ನಡೆಯಬಲ್ಲವು. ನಿಮ್ಮ ಮನಸ್ಸು ಪ್ರಭಾವಗೊಳ್ಳದಿರುತ್ತದೆಯೇ? ಒಂದು ವೇಳೆ ನಿಮ್ಮ ಪ್ರೀತಿ ಪಾತ್ರ ಮಗು ಅಥವಾ ಪೋಷಕರು ತೀರಿಹೋಗಿ, ಅವರು ನೀವು ಮಾಡಬಾರದ ಕೆಲಸಗಳನ್ನು ಮಾಡುವಂತೆ ಹೇಳಿದರೆ, ನೀವದನ್ನು ಮಾಡಿದರೆ ಅದೂ ಸಹ ಕೆಟ್ಟದ್ದೇ, ಈ ಕಾರಣದಿಂದಾಗಿಯೇ ಅಭ್ಯಾಸಿಯಾಗಿ ಉಳಿಯುವುದು ತುಂಬಾ ಕಷ್ಟ. ಕನ್‌ಫ್ಯೂಶಿಯಸ್ ತತ್ವದಂತೆ ಬುದ್ದ ಧರ್ಮವು ಪೋಷಕರನ್ನು ಗೌರವಿಸಿ, ಮಕ್ಕಳನ್ನು ಪ್ರೀತಿಸಿ ಎಂದು ಹೇಳುವುದಿಲ್ಲ. ಹಾಗೆಂದರೇನು? ಎಲ್ಲಿಯವರೆಗೆ ಒಬ್ಬನ ನಿಜವಾದ ಬದುಕು ಒಬ್ಬನ ಮೂಲ ಚೈತನ್ಯವೇ ಆಗಿರುತ್ತದೆ, ಅಲ್ಲಿ ನಿಮ್ಮ ಮೂಲಚೈತನ್ಯಕ್ಕೆ ಜನ್ಮ ಕೊಟ್ಟದ್ದು ನಿಮ್ಮ ನಿಜವಾದ ತಾಯಿ. ಸಂಸಾರದ ಅವಧಿಯಲ್ಲಿ ನೀವು ಮಾನವ–ಮಾನವೇತರ ಮತ್ತು ಬಹುಸಂಖ್ಯಾತ ತಾಯಿಯರನ್ನು ಹೊಂದಿರುತ್ತೀರಿ. ವಿವಿಧ ಜೀವಿತಾವಧಿಯಲ್ಲಿ ಎಷ್ಟು ಸಂಖ್ಯೆಯ ಮಕ್ಕಳನ್ನು ಪಡೆದಿದ್ದರೆಂಬುದೂ ಗಣನೆಗೆ ಬಾರದ್ದು. ನಿಮ್ಮ ತಾಯಿ ಯಾರು? ನಿಮ್ಮ ಮಗ ಅಥವಾ ಮಗಳು ಯಾರು? ಒಬ್ಬನು ಸತ್ತ ಮೇಲೆ ಏನನ್ನು ಜ್ಞಾಪಕದಲ್ಲಿಟ್ಟಿರುವುದಿಲ್ಲ. ನೀವು ಕೇವಲ ಬೇರೆಯವರಿಂದ ಪಡೆದ ಋಣವನ್ನಷ್ಟೆ ಹಿಂದಿರುಗಿಸಬೇಕಾಗಿರುತ್ತದೆ. ಮನುಷ್ಯರು ಭ್ರಮೆಗಳಲ್ಲಿ ಬದುಕುತ್ತಾರೆ. ಕೆಲವರು ಸತ್ತವರ ಗುಣಗಳನ್ನು ನೆನೆದು, ಅವರನ್ನೇ ಅನುಸರಿಸಿ ಬದುಕಲು ತೊಡಗುತ್ತಾರೆ. ಅದು ನೀವು ನಡೆಸಬಹುದಾಗಿದ್ದ ಒಳ್ಳೆಯ ಜೀವನವನ್ನು ಹಾಳು ಮಾಡುತ್ತದೆ.

ಬಹುತೇಕ ಸಾಮಾನ್ಯ ಜನರು ಇದನ್ನು ಅರ್ಥ ಮಾಡಿಕೊಳ್ಳುವುದಿಲ್ಲ, ನೀವು ಸಾಧನೆಯನ್ನು ಅಭ್ಯಾಸ ಮಾಡಬೇಕಾದರೆ, ಇಂತಹ ಮಾನವ ಸಂಬಂಧಗಳನ್ನು ಮೀರಬೇಕು. ಅಂದರೆ ಎಲ್ಲರನ್ನೂ ಸಮಾನವಾಗಿ ಗೌರವಿಸಬೇಕು. ಇಂತಹ ಹೃದಯವು ನಿಸ್ವಾರ್ಥ ಮತ್ತು ದಯಾಪರವಾಗಿರುತ್ತದೆ. ಒಂದು ವೇಳೆ ನೀವು ದಿನನಿತ್ಯದ ಜನರೊಂದಿಗೆ ತುಂಬಾ ಚೆನ್ನಾಗಿ ಬದುಕುತ್ತಿದ್ದರೆ, ನೀವು ಹೇಗಾದರೂ ಸಾಧನೆಯನ್ನು ಅಭ್ಯಾಸ ಮಾಡುತ್ತೀರಿ? ನಿಮ್ಮ ಕರ್ಮ ಹೇಗೆ ವರ್ಗಾವಣೆಗೊಳ್ಳುತ್ತದೆ? ಹೇಗೆ ನಿಮ್ಮ ಆತ್ಮಪ್ರಕೃತಿಯ ವೃದ್ಧಿಗೆ ಹೊಸ ಪರಿಸರವೊಂದು ದೊರಕುತ್ತದೆ? ಪ್ರತಿಯೊಬ್ಬರೂ ಇದನ್ನು ಖಚಿತವಾಗಿ ನಿಮ್ಮ ಮನಸ್ಸಿನಲ್ಲಿಟ್ಟಿರಬೇಕು. ಒಂದು ದೆವ್ವವೂ ನಿಮ್ಮನ್ನು ಹೊಗಳಬಹುದು. ನೀನೆಷ್ಟು ದೊಡ್ಡ ಜ್ಞಾನಿ, ಮಹತ್ ವ್ಯಕ್ತಿ ಎಂದು, ಅದೆಲ್ಲ ಸುಳ್ಳು. ನಿಜವಾಗಿಯೂ, ಉನ್ನತ ಹಂತಕ್ಕೆ ಅಭ್ಯಾಸವನ್ನು ವಿಸ್ತರಿಸುವವನು ಹಲವು ಭಿನ್ನ ಕಾರ್ಯಸಂಬಂಧಗಳನ್ನು ತ್ಯಜಿಸಲೇಬೇಕು. ಇಂತಹ ವಿಷಯಗಳಿಂದ ನೀವು ಬಲಿಯಾಗುವಾಗ ನಿಮಗೆ ನೀವೇ ಕವಚವಾಗಿರಬೇಕು.

ಸಾಧನೆಯಲ್ಲಿ ದಿವ್ಯಚಕ್ಷು ತೆರೆದರೂ, ತೆರೆಯದಿದ್ದರೂ ಸಂಕಷ್ಟಗಳೇನೂ ಇಲ್ಲವಾಗುವುದಿಲ್ಲ. ಭಿನ್ನ ಸ್ವರೂಪದ ಸಂಗತಿಗಳು ಉದಾಹರಣೆಗೆ ಸುರಸುಂದರಾಂಗಿಯರು ನಿಮ್ಮನ್ನು ಆಕರ್ಷಿಸುತ್ತಾರೆ. ಒಮ್ಮೆ ನೀವು ಆಕರ್ಷಣೆಗೆ ಬಲಿಯಾದರೆ ನಿಮ್ಮ ಗಾಂಗ್ ಸಹ ಅಶುದ್ಧಗೊಳ್ಳುತ್ತದೆ. ಒಮ್ಮೆ ಒಬ್ಬನು ಕೆಟ್ಟ ಆಲೋಚನೆಗಳಿಂದ ಬೆಳೆದಿದ್ದನು. ಅವನು ತನ್ನ ದಿವ್ಯಚಕ್ಷು ತೆರೆದುಕೊಂಡಾಗ ಗರ್ವಪಟ್ಟುಕೊಂಡು, ನಾನು ಚೆನ್ನಾಗಿ ಬುದ್ಧನಾಗಿರಬಹುದೆಂದು ತನ್ನತ್ತಲೇ ನೋಡಿಕೊಂಡ, ಅಲ್ಲಿ ಒಬ್ಬ ಬುದ್ಧನೇ ಕಂಡ, ಇದೇಕೆಂದರೆ ವ್ಯಕ್ತಿಯ ಆಲೋಚನೆಗಳಂತೆಯೇ ಅವನ ದೇಹದ ಸುತ್ತ ಲೋಕವೊಂದು ನಿರ್ಮಾಣ ವಾಗುತ್ತಿರುತ್ತದೆ. ಇದನ್ನೇ ಬುದ್ಧಶಕ್ತಿಯಿಂದಾಗುವ ವರ್ಗಾವಣೆ ಎನ್ನಬಹುದು. ಪ್ರತಿಯೊಂದು ವಸ್ತು ವಿಷಯವು ವ್ಯಕ್ತಿಯೊಬ್ಬನ ಆಲೋಚನಾ ಕ್ರಮದಂತೆಯೇ ವಿಶ್ವದಿಂದ ಪ್ರತಿಫಲನಗೊಳ್ಳುತ್ತದೆ, ಕೆಲವರು ನಾನು ಲೀ ಯಾಂಗ್‌ಜೀ ಅವರಿಗಿಂತ ಉತ್ತಮೋತ್ತಮನಾಗಿದ್ದೇನೆ ಎಂದು ಆಲೋಚಿಸಿಕೊಳ್ಳಬಹುದು. ಹೀಗಾದರೆ ನೀವು ಭವಿಷ್ಯತ್ತಿನಲ್ಲಿ ಸಾಧನೆಯನ್ನು ಹೇಗೆ ಮುಂದುವರೆಸುತ್ತೀರಿ? ಇಂತಹ ಸಮಸ್ಯೆಯಿಂದ ನೀವೇ ಜಾಗೃತಗೊಳ್ಳಬೇಕು.

ಚಾಂಗ್‌ಚುಂಗ್‌ನಂತೆ ನಾವೊಬ್ಬನನ್ನು ಹೊಂದುವುದು ಬೇಡ, ಪ್ರಾರಂಭದಲ್ಲಿ ಚಾಂಗ್‌ಚುಂಗ್ ಒಳ್ಳೆಯವನಿದ್ದ. ನಂತರದಲ್ಲಿ ತನಗೆ ತಾನೇ ಗರ್ವಗೊಂಡು ಹಾಳಾದ, ಬುದ್ಧ ಸಾಧನಾ ಅಭ್ಯಾಸದ ಕ್ರಮವಲ್ಲ, ಈ ತೊಡಕುಗಳನ್ನು ನಿವಾರಿಸಲು ಮಾರ್ಗವೊಂದನ್ನು ಅಥವಾ ಅಭ್ಯಾಸ ಪದ್ಧತಿಯೊಂದನ್ನು ಹೇಳಿಲ್ಲ, ಶಾಕ್ಯಮುನಿಯೂ ಸಹ ಅದರ ಬಗ್ಗೆ ಸಾಧನೆಯಲ್ಲಿ ಕಾಣಬರುವ ಚಿತ್ರಗಳು ಭೂತಭ್ರಮೆಗಳಷ್ಟೆ ಎಂದಷ್ಟೇ ಹೇಳಿದ್ದಾನೆ. ಇದೆಲ್ಲವನ್ನು ಅರಿತುಕೊಳ್ಳದವನು ದಾರಿ ತಪ್ಪಿ ಹಾಳಾಗುತ್ತಾನೆ. ಯಾರೋ ಒಬ್ಬರು ನನ್ನನ್ನು ಕೇಳಿದರು, ಗುರುಗಳೇ ನೀವೇಕೆ ನಮ್ಮ ಸಮಸ್ಯೆಯನ್ನು ಪರಿಹರಿಸಲಾರಿರಿ? ಏಕೆಂದರೆ ಪ್ರತಿಯೊಬ್ಬರದ್ದೂ ಪ್ರತ್ಯೇಕ ಮಾರ್ಗವಿರುತ್ತದೆ. ಆ ಮಾರ್ಗವನ್ನು ಅವರೇ ಕ್ರಮಿಸಬೇಕಾಗುತ್ತದೆ. ಭಯಾನಕ ತೊಡಕುಗಳಿಂದ ಅವರನ್ನು ರಕ್ಷಿಸುವುದು ತುಂಬಾ ಕಷ್ಟದ ಕೆಲಸ. ಅದು ಸುಲಭವಾಗಿ ವ್ಯಕ್ತಿಯನ್ನು ಹಾಳು ಮಾಡುತ್ತದೆ. ನಿಮ್ಮ ಮನಸ್ಸು ಒಮ್ಮೆ ಕೆಟ್ಟರೆ, ನೀವು ಖಂಡಿತವಾಗಿ ಮತ್ತೊಮ್ಮೆ ಹಾಳಾಗುತ್ತೀರಿ.

**ನಿಮ್ಮ ಪ್ರಧಾನ ಪ್ರಜ್ಞೆಯು ಪ್ರಬಲವಾಗಿರಬೇಕು** :

ಏಕೆಂದರೆ ಜನರು ಕೆಟ್ಟ ಕೆಲಸಗಳಲ್ಲಿ ತೊಡಗುತ್ತ, ಭಿನ್ನ ಭಿನ್ನ ಬದುಕಿನ ಅವಧಿಗಳಲ್ಲಿ ತೊಂದರೆಗೊಳಗಾಗಿ, ಕರ್ಮವನ್ನು ಹೊಂದುವಂತೆ ಅದು ಮಾಡುತ್ತಿರುತ್ತದೆ. ಆದ್ದರಿಂದ ಅಲ್ಲಿ ಹುಟ್ಟು, ಸಾವು, ಮುಪ್ಪು ಮತ್ತು ರೋಗ ಬಾಧೆಗಳಿರುತ್ತವೆ. ಇವೆಲ್ಲ ಸಾಮಾನ್ಯ ಕರ್ಮಗಳು ಇವೆಲ್ಲವನ್ನು ಮೀರಿದ ಹೆಚ್ಚು ಪ್ರಭಾವಶಾಲಿಯಾದ ಕರ್ಮವೊಂದಿದೆ. ಅದೇ ಆಲೋಚನೆಯ ಕರ್ಮ ಅಥವಾ ಪಾಪ, ಜನರು ಜೀವನಕ್ಕಾಗಿ ಕೆಟ್ಟದ್ದನ್ನು ಯೋಚಿಸುತ್ತಾರೆ. ಕ್ರಮೇಣ ಈ ಆಲೋಚನೆಗಳೇ ಪ್ರಬಲ ಆಲೋಚನೆಯ ಕರ್ಮವಾಗಿ ರೂಪುಗೊಳ್ಳುತ್ತವೆ. ಸರಿಯಾದ ಮಾರ್ಗದಲ್ಲಿ ಸಾಧನೆಯನ್ನು ಮಾಡುವವನು ಸರಿಯಾದ ರೀತಿಯಲ್ಲಿ ಕರ್ಮವನ್ನೂ ಕಳೆಯಬೇಕಾಗುತ್ತದೆ. ಆಲೋಚನೆಯ ಕರ್ಮವು ನೇರವಾಗಿ ಒಬ್ಬನ ಮನಸ್ಸಿನಿಂದಾದ ತೊಡಕಾಗಿರುತ್ತದೆ. ಕೆಲವರು ಅದು ಅವನ ಮನಸ್ಸಿನಿಂದ ಆದದ್ದೇ ಆಗಿರುತ್ತದೆ. ಕೆಲವರು ಪ್ರಬಲವಾದ ಪ್ರಧಾನ ಪ್ರಜ್ಞೆಯನ್ನು ಹೊಂದಿರುವುದಿಲ್ಲ ಮತ್ತು ಆಲೋಚನೆಯ ಪಾಪದೊಂದಿಗೆ ಜೊತೆಯಾಗಿ ಕೆಟ್ಟ ಕೆಲಸಗಳಿಗೆ ಒಳಗಾಗುತ್ತಾರೆ. ಅಂತಹವರು ನಾಶವಾಗುತ್ತಾರೆ.

ಬಹಳಷ್ಟು ಜನ ಹೇಗೋ ಒಳ್ಳೆಯ ಆಲೋಚನೆಗಳಿಂದ ಕೆಟ್ಟದ್ದನ್ನು ಪರಿಹರಿಸಿಕೊಳ್ಳುತ್ತಾರೆ. ಇದರಿಂದ ವ್ಯಕ್ತಿಯು ಒಳ್ಳೆಯ ಮತ್ತು ಕೆಟ್ಟದ್ದನ್ನು ಬೇರ್ಪಡಿಸಿ ನೋಡುವ ಜ್ಞಾನೋದಯ ಸಾಮರ್ಥ್ಯವನ್ನು ಹೊಂದಿರುತ್ತಾನೆಂದು ತಿಳಿಯುತ್ತದೆ. ಒಬ್ಬನು ತನ್ನದೇ ಕೆಟ್ಟ ಆಲೋಚನೆಗಳನ್ನು ಮೀರಿದರೆ, ಕರ್ಮವೂ ನಾಶವಾಗಬಲ್ಲದು.

**ನಿಮ್ಮ ಚಿಂತನೆಗಳು ಸರಿಯಾಗಿರಬೇಕು** :

ಸರಿಯಾದಚಿಂತನೆಯೆಂದರೆ ಒಬ್ಬನು ತನ್ನನ್ನು ತಾನು ಯಾವಾಗಲೂ ವಿದ್ಯಾಭ್ಯಾಸಿಯೆಂದು ಗುರ್ತಿಸಿಕೊಳ್ಳುವುದು. ಒಬ್ಬ ಅಭ್ಯಾಸಿಯು ಸಾಧನೆಯಲ್ಲಿ ತೊಂದರೆಯನ್ನು ಅನುಭವಿಸಿದಾಗ, ಆಂತರಿಕ ಸಂಘರ್ಷವನ್ನು ಅನುಭವಿಸುತ್ತಾನೆ. ಅಲ್ಲಿ ಮನಸ್ಸಿನ ಆಟಗಳು ಕಾಣಿಸಿಕೊಂಡು, ನೇರವಾಗಿ ನಿಮ್ಮ ಆತ್ಮ ಪ್ರಕೃತಿಯನ್ನು ಪ್ರಭಾವಿಸುತ್ತವೆ. ಇದ್ದಕ್ಕಿದ್ದಂತೆ ದೇಹ ಅಸಮತೋಲನವನ್ನು ಅನುಭವಿಸಬಹುದು. ಇದೇಕೆಂದರೆ ಕರ್ಮದ ಬಾಕಿ ತೀರಿಸುವಿಕೆಯು ವಿಭಿನ್ನವಾಗಿರುತ್ತದೆ. ಅವೆಲ್ಲ ನಿಮ್ಮನ್ನು ಪರೀಕ್ಷೆಗೊಳಪಡಿಸುತ್ತಿರುತ್ತವೆ. ನೀವು ಹೇಳಬೇಕಾಗುತ್ತದೆ, ನಾನು ನೇರ ಮತ್ತು ಸ್ಪಷ್ಟವಾಗಿದ್ದೇನೆ. ಈ ನಿಶ್ಚಯವೇ ನಿಮ್ಮನ್ನು ಕಾಪಾಡುತ್ತದೆ.

ಸಾಧನೆಯ ಅವಧಿಯಲ್ಲಿ ನೀವೆಲ್ಲ ಹೀಗೆಯೇ ಮುಂದುವರೆಯಬೇಕು. ಒಮ್ಮೆ ನೀವು ದೈಹಿಕ ಅಸಮತೋಲನವನ್ನು ಅಲ್ಲೊಲ್ಲಾದರೂ ಅನುಭವಿಸಿದರೆ, ನೀವು ರೋಗಗ್ರಸ್ಥರಾಗಿದ್ದೀರೆಂದು ತಿಳಿಯಬೇಕಾಗುತ್ತದೆ. ನೀವು ಯಾವಾಗಲೂ ನಿಮ್ಮನ್ನು ಅಭ್ಯಾಸಿಯೆಂದು ತಿಳಿಯಲಾಗದಿದ್ದರೆ, ಅದೂ ಸಹ ರೋಗಬಾಧೆಯೆಂದೇ ತಿಳಿಯಬೇಕು. ನಿಮ್ಮ ಯಾತನೆಗಳನ್ನು ನೀವು ಕನಿಷ್ಟವಾದುವೆಂದು ಈಗಾಗಲೇ ತಿಳಿದಿದ್ದೀರಿ. ಹಾಗೆ ತಿಳಿಯದಿದ್ದರೆ ನೀವು ಸಮಸ್ಯೆಗೆ ಒಳಗಾಗುತ್ತೀರಿ. ಉದಾಹರಣೆಗೆ, ನಾನು ಚಾಂಗ್‌ಚುಂಗ್‌ನಲ್ಲಿ ಬೋಧಿಸುವಾಗ, ಅಲ್ಲಿ ಒಬ್ಬ ಉತ್ತಮ ಜನ್ಮತ: ಗುಣವುಳ್ಳ ವ್ಯಕ್ತಿಯಿದ್ದ, ಅವನು ಶೀಘ್ರವಾಗಿ ತನ್ನ ಕ್ಲೇಶಗಳನ್ನು ಪರಿಹರಿಸಿಕೊಂಡು, ಕರ್ಮವನ್ನು ಸಂದಾಯ ಮಾಡಿ, ಜ್ಞಾನಿಯಾದ ಆದರೂ ಒಂದು ದಿನ ತಲೆಸುತ್ತಿ ನೆಲಕ್ಕೆ ಬಿದ್ದು, ಆಸ್ಪತ್ರೆಗೆ ಸೇರಿಸಲಾಯಿತು. ಅವನಿಗೆ ಮೆದುಳಿನಲ್ಲಿ ರಕ್ತ ಹೆಪ್ಪುಗಟ್ಟಿತು. ಸ್ವಲ್ಪವೇ ಸಮಯದಲ್ಲಿ ಅವನು ಆಸ್ಪತ್ರೆಯಿಂದ ಹೊರಗೆ ಬಂದ, ಅವನು ಫಾಲೂನ್ ದಫಾವನ್ನು ಅದಕ್ಕಾಗಿ ನಿಂದಿಸ ತೊಡಗಿದ. ಅವನು ಯೋಚಿಸಲೇ ಇಲ್ಲ. ಅಂತಹ ಕಾಯಿಲೆಯಿಂದ, ಮಾರಣಾಂತಿಕವಾದ ಕಾಯಿಲೆಯಿಂದ ನಾನು ಹೇಗೆ ಬೇಗ ಗುಣಮುಖನಾದೆನೆಂದು, ಅದನ್ನವನು ಅರ್ಥ ಮಾಡಿಕೊಳ್ಳಲೂ ಇಲ್ಲ.

ಕೆಲವರು, ಗುರುಗಳೇ ನನ್ನ ದೇಹ ಯಾವಾಗಲೂ ಅಸಮತೋಲನದಿಂದ ಕೂಡಿರುತ್ತದೇಕೆ? ಯಾವಾಗಲೂ ಆಸ್ಪತ್ರೆಯಲ್ಲಿ ಚುಚ್ಚು ಮದ್ದು ತೆಗೆದುಕೊಳ್ಳುತ್ತೇನೆ. ಅದೂ ಸಹ ನನಗೆ ಸಹಾಯ ಮಾಡುವುದಿಲ್ಲ ಎಂದು ವೈದ್ಯರನ್ನೇ ಕೇಳುತ್ತಿರುತ್ತಾರೆ. ಅಂತಹವರಿಗೆ ವೈದ್ಯರು ಯಾವ ಸಹಾಯ ಮಾಡುತ್ತಾರೆ? ಅಂತಹವರಿಗೆ ಯಾವ ರೋಗವೂ ಇರುವುದೇ ಇಲ್ಲ. ಅವರಿಗೆ ಮಾನಸಿಕ ರೋಗ ಅಂಟಿರುತ್ತದೆ. ಅವರು ಚಿಗಾಂಗ್ ಗುರುಗಳನ್ನು ನೋಡಲು ಬಯಸುತ್ತಾರೆ. ನಿಜವಾದ ಚಿಗಾಂಗ್ ಗುರುಗಳನ್ನು ಹುಡುಕುವುದೆಲ್ಲಿ? ಸುಳ್ಳು ಬೋಧಕರು ಸಿಕ್ಕರೆ ಅವರು ಮತ್ತೊಮ್ಮೆ ಹಾಳಾಗುತ್ತಾರೆ.
ಹಲವು ಚಿಗಾಂಗ್ ಬೋಧಕರು ಸ್ವಯಂ ಘೋಷಿಸಿಕೊಂಡಿರುತ್ತಾರೆ. ಅದರಲ್ಲಿ ಹಲವರು ಸುಳ್ಳು ಮತ್ತು ಮೋಸದ ವ್ಯಕ್ತಿಗಳಾಗಿರುತ್ತಾರೆ. ಇಂತಹ ಕಪಟ ಚಿಗಾಂಗ್ ಬೋಧಕನೂ ರೋಗಬಾಧೆಯನ್ನು ಉಪಶಮನಗೊಳಿಸಬಲ್ಲ. ಶಕ್ತಿಯೊಂದರ ಅಧೀನಕ್ಕೆ ಒಳಪಟ್ಟ ವ್ಯಕ್ತಿಯೂ ಅದನ್ನು ಮಾಡಬಲ್ಲ. ಅದು ಸುಲಭವಾಗಿ ದಿನನಿತ್ಯದ ಜನರನ್ನು ಹತೋಟಿಯಲ್ಲಿಟ್ಟುಕೊಳ್ಳಬಲ್ಲದು.

ನೀವು ನಿಮ್ಮನ್ನು ಸಾಧನೆಯಲ್ಲಿ ತೊಡಗಿಸಿಕೊಳ್ಳದಿದ್ದರೆ, ಬೇರೆಯವರಾರೂ ಒತ್ತಾಯಿಸಲಾರರು. ನಿಮ್ಮ ಆಸಕ್ತಿಯಿಲ್ಲದೆ ಬೇರಾವುದೂ ನಿಮ್ಮ ಸಾಧನೆಯನ್ನು ಉತ್ತೇಜಿಸಲಾರದು. ಕೆಲವರು ಈಗಲೂ ಬೇರೆಯ ಚಿಗಾಂಗ್ ಬೋಧಕರಲ್ಲಿಗೆ ಹೋಗಿ, ಮನೆಯನ್ನು ತಲುಪಿದ ನಂತರ ಅದೇ ಅಸಮತೋಲನವನ್ನು ಅನುಭವಿಸುತ್ತಾರೆ. ಕೆಲವರು ತಮ್ಮ ಫಾಲನ್‌ನ್ನೇ ವಿರೂಪಗೊಳಿಸಿಕೊಂಡಿದ್ದಾರೆ. ಈ ಫಾಲನ್ ನಿಮ್ಮ ಬದುಕಿಗಿಂತ ಬೆಲೆಬಾಳುವಂತದ್ದು. ಚೈನಾ ಚಿಗಾಂಗ್ ವಿಜ್ಞಾನ ಸಂಶೋಧನಾ ಸೊಸೈಟಿಯ ಆಡಳಿತಾಧಿಕಾರಿಗಳಿಗೆ ನಾನು ಹೇಳಿದೆ. ಶಾಂಗ್ ಸಾಮ್ರಾಜ್ಯದ ಕೊನೆಯ ದೊರೆಯ ನೀಚ

ಉಪಪತ್ನಿಯಾದ ಡಾಜಿಯ ದುರಾಚಾರಗಳಿಂತ, ಕಪಟ ಚಿಗಾಂಗ್ ಬೋಧಕರು ಇಡೀ ಸಮಾಜದ ಮೇಲೆ ಉಂಟು ಮಾಡಿರುವ ತೊಂದರೆಗಳು ಕಡಿಮೆಯೇನಲ್ಲ. ಇದರಿಂದ ಎಷ್ಟೊಂದು ಜನ ಬಲಿಪಶುಗಳಾಗಿದ್ದರೆ.

ಇವತ್ತಿನ ಉಪನ್ಯಾಸದಲ್ಲಿ ಪಾಲ್ಗೊಂಡು, ಲಿ ಹಾಂಗ್ ಜಿ ಏನು ಹೇಳಿದರು. ಅದನ್ನು ಕೇಳಿದ ಮೇಲೆ ನಾನು ಚಿಗಾಂಗ್ ಎನ್ನುವುದು ಎಷ್ಟೊಂದು ಮಹತ್ತಾದುದು ಎಂದು ಅರಿತುಕೊಂಡೆ, ಎಂದು ಕೆಲವರು ಯೋಚಿಸಬಹುದು. ಒಂದು ವೇಳೆ ಅಲ್ಲೆಲ್ಲಾದರೂ ಬೇರೆ ಚಿಗಾಂಗ್ ಉಪನ್ಯಾಸಗಳಿದ್ದರೆ, ನಾನು ಮತ್ತೂ ಅವುಗಳಲ್ಲಿ ಭಾಗವಹಿಸುತ್ತೇನೆ ಎಂದು ನೀವು ಯೋಚಿಸಬಹುದು. ನಾನು ನೇರವಾಗಿ ಅಲ್ಲಿಗೆ ಹೋಗಬೇಡಿರೆಂದು ಹೇಳುತ್ತೇನೆ. ನೀವು ಒಂದು ವೇಳೆ ಅವರ ಮಾತುಗಳನ್ನು ಕೇಳಿದರೆ, ಕೆಟ್ಟ ವಿಷಯಗಳು ನಿಮ್ಮ ಕಿವಿಯನ್ನು ಪ್ರವೇಶಿಸುತ್ತವೆ. ಒಬ್ಬ ವ್ಯಕ್ತಿಯನ್ನು ರಕ್ಷಿಸಿ, ಅವನ ಆಲೋಚನೆಗಳನ್ನು ಬದಲಾಯಿಸುವುದು ತುಂಬಾ ಕಷ್ಟದ ಕೆಲಸ. ಒಬ್ಬನ ದೇಹವನ್ನು ಶುದ್ಧೀಕರಿಸುವುದು ಮತ್ತೂ ಕಷ್ಟದ ಕೆಲಸ.

ನೀವು ನಿಜವಾಗಲೂ ಫಾಲನ್‌ದಫಾದಲ್ಲಿ ಸಾಧನೆಯನ್ನು ಅಭ್ಯಾಸ ಮಾಡಲು ಬಯಸಿದರೆ, ನೀವು ಅಲ್ಲಿಗೆ ಹೋಗಬೇಡಿ, ಅವರ ಮಾತು ಕೇಳಬೇಡಿ. ಫಾಲನ್‌ದಫಾವನ್ನು ಬಯಸದಿದ್ದರೆ, ನಾನು ನಿಮ್ಮನ್ನು ತಡೆಯುವುದಿಲ್ಲ. ಏನಾದರೂ ಸಮಸ್ಯೆಯಾದರೆ ಅದಕ್ಕೆ ಫಾಲನ್‌ದಫಾದ ಅಭ್ಯಾಸವನ್ನು ದೂರಬೇಡಿ. ಯಾವಾಗ ನೀವು ಉನ್ನತ ಆತ್ಮಪ್ರಕೃತಿಯನ್ನು ಹೊಂದಿರುತ್ತೀರಿ. ಸಾಧನೆಯನ್ನು ದಫಾದ ಮಾರ್ಗದರ್ಶನದಲ್ಲಿಯೇ ಮಾಡುತ್ತೀರಿ, ಆಗ ಮಾತ್ರ ನೀವು ಸತ್ವಯುತವಾದ ಫಾಲನ್‌ದಫಾ ಅಭ್ಯಾಸಿ ಯಾಗುತ್ತೀರಿ. ಯಾರೋ ಕೇಳಿದರು, ಬೇರೆ ಚಿಗಾಂಗ್ ಅಭ್ಯಾಸದವರೊಂದಿಗೆ ಸೇರಬಹುದೇ? ಎಂದು. ಅದರಲ್ಲೇನೂ ಅಭ್ಯಂತರವಿಲ್ಲ. ಈ ತರಗತಿಯ ನಂತರ ನೀವು ಅವರಿಗಿಂತ ಮುಂದಿರುತ್ತೀರಿ. ಅವರೊಂದಿಗೆ ಸಾಧಾರಣ ಸ್ನೇಹಿತರಾಗಿ ವ್ಯವಹರಿಸಬಹುದು. ನಮ್ಮ ಈ ಫಾಲನ್ ಹಲವು ತಲೆಮಾರುಗಳಲ್ಲಿ ಶಕ್ತಿಯುತವಾಗಿ ಬೆಳೆದಿದೆ. ಆದ್ದರಿಂದ ನೀವು ಅವರೊಂದಿಗೆ ಸಂಪರ್ಕದಲ್ಲಿರುವಾಗಲೂ ಅವರಿಂದ ಏನನ್ನೂ ಸ್ವೀಕರಿಸದೆ ಇರಬಹುದು. ಒಂದು ವೇಳೆ ಸ್ವೀಕರಿಸಿದರೆ ಅದು ತುಂಬಾ ಕೆಟ್ಟದಾಗುತ್ತದೆ. ನಿಮ್ಮ ಸಂಗಾತಿಯು ಬೇರೊಂದು ಚಿಗಾಂಗ್ ಅಭ್ಯಾಸದಲ್ಲಿರುವುದೂ ಸಮಸ್ಯೆಯಲ್ಲ. ಆದರೆ ಸಂಗಾತಿಯು ಕೆಟ್ಟ ಅಭ್ಯಾಸ ಕ್ರಮದಲ್ಲಿದ್ದರೆ, ಅದು ನಿಮ್ಮ ಮೇಲೂ ಪ್ರಭಾವ ಬೀರುತ್ತದೆ.

ನಮಗೊಬ್ಬ ವಿದ್ಯಾರ್ಥಿಯಿದ್ದಾನೆ, ಅವನು ಒಮ್ಮೆ ತನ್ನ ಮನೆಯಲ್ಲಿ ಗುರುವಾದ ನನ್ನ ಬಿಂಬವು ಕಾಣಿಸಿಕೊಂಡದ್ದನ್ನು ನೋಡಿ ರೋಮಾಂಚಿತನಾದನು. ನಂತರ ದಯವಿಟ್ಟು ಒಳಗೆ ಬನ್ನಿ ಎಂದು ಕರೆದನು. ನನ್ನ ಬಿಂಬವು 'ನಿನ್ನ ಕೊಠಡಿ ಹೆಚ್ಚು ಕೊಳಕಾಗಿದೆ' ಎಂದು ಹೇಳಿ ಹೊರಟುಹೋಯಿತು. ಅವನ ಕೊಠಡಿ ಹೇಗೋ ಹಲವು ಕೆಟ್ಟ ಚಿಗಾಂಗ್ ಪುಸ್ತಕಗಳಿಂದ ತುಂಬಿ ಹೋಗಿತ್ತು. ಅದನ್ನವನು ತಿಳಿದುಕೊಂಡು ಪುಸ್ತಕಗಳನ್ನೆಲ್ಲ ಸಾಗಹಾಕಿದ. ನನ್ನ ಬಿಂಬವು ಮತ್ತೆ ವಾಪಸ್ಸಾಯಿತು. ಇದು ವಿದ್ಯಾರ್ಥಿಯು ನನಗೆ ಹೇಳಿದ ವಿಚಾರ.

ಗುರುಗಳೇ ನಾನು ಈಗ ಫಾಲನ್‌ದಫಾವನ್ನು ಕಲಿಯುತ್ತಿದ್ದೇನೆ. ಜೊತೆ ಭವಿಷ್ಯ ಹೇಳುವುದರಲ್ಲೂ ನನಗೆ ಹೆಚ್ಚಿನ ಆಸಕ್ತಿಯಿದೆ. ನಾನದನ್ನು ಮುಂದುವರಿಸಬಹುದೇ? ಎಂದು ನನ್ನನ್ನು ಒಬ್ಬ ಕೇಳಿದ. ಅದನ್ನು ಹೀಗೆ ಪರಿಶೀಲಿಸೋಣ. ನೀವು ಒಂದು ಗಣನೀಯ ಪ್ರಮಾಣದ ಶಕ್ತಿಯ ಮೊತ್ತವನ್ನು ಹೊಂದಿದ್ದರೆ, ನೀವು ಏನು ಹೇಳುತ್ತೀರೋ ಅದಕ್ಕೆ ಒಂದು ಪರಿಣಾಮವೂ ಇರುತ್ತದೆ. ನೀವು ಹೇಳಿದ್ದು ನಡೆಯದಿದ್ದರೆ, ಅದೂ ಸಹ ಕೆಟ್ಟ ವ್ಯವಹಾರದಲ್ಲಿ ತೊಡಗಿಸಿಕೊಂಡಂತೆಯೇ ಆಗುತ್ತದೆ. ದಿನನಿತ್ಯದ ವ್ಯಕ್ತಿಯು ಹೆಚ್ಚು ದುರ್ಬಲನಾಗಿರುತ್ತಾನೆ. ಅವನ ಮಾಹಿತಿಗಳು ಬದಲಾಗ ಬಹುದು. ನಿನ್ನ ಭವಿಷ್ಯ ಚೆನ್ನಾಗಿದೆ ಎಂದು ಅವನಿಗೆ ಹೇಳಿಬಿಟ್ಟರೆ, ಅವನು ಕರ್ಮವನ್ನು ಕಳೆದುಕೊಳ್ಳಲು ಪ್ರಯತ್ನಿಸುವುದಿಲ್ಲ. ಆದ್ದರಿಂದ ನಿಮಗೆ ಗೊತ್ತಿರುವ ಸತ್ಯವನ್ನು, ದೈವಿಕ ರಹಸ್ಯಗಳನ್ನು

ಸಾಮಾನ್ಯರಿಗೆ ಹೇಳಬಾರದು. ಇದೂ ಸಹ ಒಂದು ತತ್ವವಾಗಿದೆ. ಅಲ್ಲದೆ ಕೈಯನ್ನು, ಮುಖವನ್ನು ಹುಟ್ಟಿದ ಗಳಿಗೆಯನ್ನು ನೋಡಿ ಭವಿಷ್ಯ ಹೇಳುವುದು ಸತ್ಯವಾಗುತ್ತದೆಂದು ಹೇಳಲು ಬರುವುದಿಲ್ಲ.

ಕೆಲವರು ಬೇರೆಯ ಧಾರ್ಮಿಕ ಗ್ರಂಥಗಳನ್ನು ಓದಬಹುದೆ ಎಂದು ನನ್ನನ್ನು ಕೇಳಿದ್ದಾರೆ. ಧಾರ್ಮಿಕ ಪುಸ್ತಕಗಳು ಅದರಲ್ಲೂ ಬೌದ್ಧ ಧರ್ಮದ ಪುಸ್ತಕಗಳು ಜನರಿಗೆ ತಮ್ಮ ಆತ್ಮಪ್ರಕೃತಿಯನ್ನು ಹೇಗೆ ಹದಮಾಡಿಕೊಳ್ಳಬೇಕು ಎಂಬುದನ್ನು ಬೋಧಿಸುತ್ತವೆ. ಕೆಲವೊಮ್ಮೆ ಸನಾತನ ಗ್ರಂಥಗಳಲ್ಲಿನ ವಿಷಯಗಳು ತಪ್ಪಾಗಿ ಅನುವಾದಗೊಂಡಿರುತ್ತವೆ ಎಂಬುದನ್ನೂ ತಿಳಿದಿರಬೇಕಾಗುತ್ತದೆ. ಬೇರೆ ಬೇರೆ ಜ್ಞಾನಶಾಖೆಗಳ ವಿಚಾರಗಳು, ಕ್ರಮಗಳು ಭಿನ್ನವಾಗಿರುತ್ತವೆಯಾದ್ದರಿಂದ, ಸಾಧನೆಯ ಅಭ್ಯಾಸದಲ್ಲಿ ಎರಡು ಮಾರ್ಗಗಳನ್ನು ಹಿಡಿಯುವುದು ಸರಿಯಲ್ಲ. ನೀವು ನಿಜವಾಗಿ ಈ ಶಾಲೆಯಲ್ಲಿ ಅಭ್ಯಾಸ ಮಾಡುವುದಿದ್ದರೆ, ಈ ಶಾಲೆಯ ಪುಸ್ತಕಗಳನ್ನಷ್ಟೇ ಓದಿ.

ಚಿಗಾಂಗ್ ಪುಸ್ತಕಗಳೆಂದು ಪ್ರಖ್ಯಾತವಾಗಿರುವ ಪುಸ್ತಕಗಳನ್ನು ನೀವು ಓದಬೇಡಿ, ದಿ ಯೆಲ್ಲೋ ಎಂಪೆರರ್ಸ್ ಕ್ಲಾಸಿಕ್ ಆಫ್ ಇಂಟರ್‌ನಲ್ ಆಲ್ಕೆಮಿ, ಷಿಂಗ್‌ಮಿಂಗ್ ಗೈಝು ಅಥವಾ ತಾವೋ ಜ಼ಾಂಗ್ ನಂತಹ ಪುಸ್ತಕಗಳಿಗೂ ಅದು ಅನ್ವಯಿಸುತ್ತದೆ. ಆದರೂ ಅವರು ಕೆಟ್ಟ ಸಂಗತಿಗಳನ್ನೇನೂ ಅಷ್ಟಾಗಿ ನಿರೂಪಿಸದೆ, ಹಲವು ಹಂತಗಳ ಮಾಹಿತಿಯನ್ನು ನಿರೂಪಿಸಿದ್ದಾರೆ. ಅವರು ಅವರಷ್ಟಕ್ಕೆ ಸಾಧನಾ ಅಭ್ಯಾಸದ ಮಾರ್ಗಗಳನ್ನು ಶೋಧಿಸಿಕೊಂಡಿದ್ದಾರೆ. ಒಮ್ಮೆ ನೀವು ಅವರನ್ನು ಓದಿದರೆ, ಕೆಲವು ವಿಷಯಗಳಲ್ಲಿ ನಿಮ್ಮೊಂದಿಗೆ ಅವರು ಭಾಗಿಯಾಗಿರುತ್ತಾರೆ. ಹೀಗೆ ಇದ್ದಕ್ಕಿದ್ದಂತೆ ನಿಮ್ಮೊಂದಿಗೆ ಭಾಗಿಯಾದಾಗ ನೀವು ಹೇಗೆ ಸಾಧನೆಯನ್ನು ಅಭ್ಯಾಸ ಮಾಡುತ್ತೀರಿ? ದೂರದರ್ಶನದ ಪೆಟ್ಟಿಗೆಯೊಳಗೆ ಬೇಡದ ಉಪಕರಣಗಳನ್ನು ಜೋಡಿಸಿದರೆ ಆಗುವ ತೊಂದರೆಯಂತಾಗುತ್ತದೆ. ಇದು ಇರುವ ತತ್ವ. ಜೊತೆಗೆ ಪ್ರಸ್ತುತದ ಹಲವು ಚಿಗಾಂಗ್ ಪುಸ್ತಕಗಳು ಸುಳ್ಳು ಆಗಿರುತ್ತದೆ. ನಮ್ಮ ಒಬ್ಬ ಅಭ್ಯಾಸಿಯು ಅಂತಹ ಪುಸ್ತಕವನ್ನು ಓದುವಾಗ, ಅದರೊಳಗಿಂದ ಹಾವೊಂದು ಹೊರನೆಗೆದಿತ್ತು. ಇವೆಲ್ಲವುಗಳಿಂದ ನಾನು ಸಾಧನೆಯ ಅಭ್ಯಾಸವು ಎಷ್ಟು ಕಷ್ಟದಾಯಕ ಮತ್ತು ಗಂಭೀರವಾದದ್ದೆಂದು ಸೂಚಿಸುತ್ತಿದ್ದೇನೆ. ನೀವು ಒಂದು ಕ್ಷಣದಲ್ಲಿ ಅಜಾಗರೂಕವಾದರೂ ಪೂರ್ಣವಾಗಿ ಹಾಳಾಗುತ್ತೀರಿ.

## ಯುದ್ಧ ನೈಪುಣ್ಯತೆಯ ಚಿಗಾಂಗ್ :

ಆಂತರಿಕ ಸಾಧನಾ ಅಭ್ಯಾಸಗಳಲ್ಲಿ ಯುದ್ಧ ಕಲೆಯ ಚಿಗಾಂಗ್ ಸಹ ಒಂದಾಗಿದೆ. ಪ್ರಸ್ತುತ ಚಿತ್ರಕಲೆ ಚಿಗಾಂಗ್, ಸಂಗೀತ ಚಿಗಾಂಗ್, ನೃತ್ಯ ಚಿಗಾಂಗ್‌ಗಳೆಂದು ಸಹ ಅಸ್ತಿತ್ವದಲ್ಲಿದೆ. ಇವೆಲ್ಲ ಚಿಗಾಂಗ್‌ಗಳೆ? ನಾನಿದನ್ನು ವಿಲಕ್ಷಣವಾದುದೆಂದ ಗುರ್ತಿಸುತ್ತೇನೆ. ಕೊಳ್ಳೆ ಹೊಡೆಯುವ/ಲೂಟಿ ಮಾಡುವ ಚಿಗಾಂಗ್ ಎಂದು ಹೇಳುತ್ತೇನೆ. ಅವುಗಳ ತಳಹದಿಯೇನು? ಒಬ್ಬನು ಚಿತ್ರಕಲೆಯನ್ನೋ, ಹಾಡನ್ನೋ, ನಾಟ್ಯವನ್ನೋ ಮಾಡುವಾಗ ಏಕಾಗ್ರವಾಗಿರಬೇಕಾಗಿರುತ್ತದೆ. ಇದನ್ನೇ ಚಿಗಾಂಗ್ ಸ್ಥಿತಿಯೆಂದು ಅರ್ಥೈಸಲಾಗುತ್ತದೆ. ಚಿಗಾಂಗ್ ಎನ್ನುವುದು ವಿಸ್ತಾರವಾದ, ಸಂಸ್ಥಾಪಿತವಾದ ಮಾನವ ದೇಹ ಸಾಧನೆಯ ಅಧ್ಯಯನವಾಗಿದೆ. ಎರಡು ವರ್ಷಗಳ ಹಿಂದೆ ಓರಿಯೆಂಟಲ್ ಹೆಲ್ತ್ ಎಕ್ಸ್‌ಪೋ ನಲ್ಲಿ ಸುಂದರಲಿಪಿ ಚಿಗಾಂಗ್ ಬಳಕೆಯಾಗಿತ್ತು. ಸುಂದರಲಿಪಿ ಚಿಗಾಂಗ್ ಎಂದರೆ ಒಬ್ಬ ವ್ಯಕ್ತಿಯು ಅಕ್ಷರಗಳನ್ನು ದುಂಡಾಗಿ ಬರೆಯುತ್ತ, ಅದಕ್ಕೆ ತನ್ನ ಕೈಗಳಿಂದ **ಚಿ** ಯನ್ನು ತುಂಬಿಕೊಡುತ್ತಿದ್ದ. ಆ ಪ್ರಭೆಯೂ ಸಹ ಕಪ್ಪಗಿದ್ದು, ಉತ್ತಮವಾಗಿರಲಿಲ್ಲ. ಜೊತೆಗೆ ಆ ಬರವಣಿಗೆಗಳೆಲ್ಲವೂ ಹೆಚ್ಚಿನ ಬೆಲೆಯನ್ನು ಹೊಂದಿದ್ದು, ವಿದೇಶಿಯರಿಗೆ ಮಾರಾಟವಾಗುತ್ತಿತ್ತು. ಅಲ್ಲಿ ಅಂತರಾಷ್ಟ್ರೀಯ ಸುಂದರ ಲಿಪಿ ಚಿಗಾಂಗ್ ಎಂದೂ ಬೋರ್ಡು ಹಾಕಲಾಗಿತ್ತು. ಇದು ಹೇಗೆ ಚಿಗಾಂಗ್ ಆಗುತ್ತದೆ?

ಶೇಕಡ ಎಂಬತ್ತರಿಂದ ತೊಂಬತ್ತರಷ್ಟು ಜನ ಇಂದಿನ ತರಗತಿಯಿಂದ ಕೇವಲ ರೋಗ ಬಾಧೆಯನ್ನು ಮಾತ್ರ ಉಪಶಮನಗೊಳಿಸಿಕೊಳ್ಳುವುದಿಲ್ಲ. ಜೊತೆಗೆ ನೈಜ ಗಾಂಗನ್ನು ವೃದ್ಧಿಸಿಕೊಳ್ಳುತ್ತೀರಿ, ನಿಮ್ಮ ದೇಹವು ಈಗಾಗಲೇ ಅಸಾಮಾನ್ಯ ಸಾಮರ್ಥ್ಯವನ್ನು ಗಳಿಸಿಕೊಂಡಿದೆ. ಹಲವು ತಲೆಮಾರುಗಳಿಂದ ಸಾಧನೆಗೊಂಡ ಜ್ಞಾನವನ್ನು ನೀವೀಗ ಪಡೆದಿದ್ದೀರಿ. ಅದನ್ನು ಸುಲಭದಲ್ಲಿ ಕಳೆದುಕೊಳ್ಳಬೇಡಿ. ಹೆಚ್ಚು

---

4. **ಚಿ** – ಪ್ರಭೆ.

ಮೌಲ್ಯಯುತವಾದುದಾಗಿದೆ. ಈ ತರಗತಿಯ ನಂತರ ತೆಗೆದುಕೊಂಡು ಹೋಗುವ ಗಾಂಗ್ ಹೆಚ್ಚು ಶಕ್ತಿಶಾಲಿಯಾದುದು. ಅದನ್ನು ಸರಿಯಾಗಿ ಉಳಿಸಿ, ಬೆಳೆಸಿಕೊಳ್ಳಿ.

ನಾನು ನಿಯತಕಾಲಿಕೆಯೊಂದರಲ್ಲಿ ಸುಂದರಲಿಪಿ ಚಿಗಾಂಗ್ ತರಗತಿ ಆಯೋಜಿಸಲಾಗಿದೆ ಎಂದು ಓದಿದೆ. ಹೇಗೆ ಹೇಳಿಕೊಡುತ್ತಾರೆಂದು ಅದನ್ನು ಓದಿದಾಗ, ಮೊದಲು ಉಚ್ವಾಸ ನಿಶ್ವಾಸಗಳನ್ನು ಸಾಧಿಸಿ, ನಂತರದಲ್ಲಿ ಒಬ್ಬನು ಹದಿನೈದರಿಂದ ಮೂವತ್ತು ನಿಮಿಷ ತನ್ನ ಮನಸ್ಸನ್ನು ಡಾಂಟಿಯನ್ನನ ಪ್ರಭೆಯ ಮೇಲೆ ಕೇಂದ್ರೀಕರಿಸಿ, ಮುಂಗೈಯನ್ನು ಆಡಿಸಬೇಕು. ನಂತರ ಒಬ್ಬನು ಕಪ್ಪು ಶಾಯಿಯಲ್ಲಿ ಕುಂಚವನ್ನು ಅದ್ದಿ ಅಂತೆಯೇ ಮಾಡುತ್ತಿದ್ದ. ಇದು ಜನರನ್ನು ಮೋಸಗೊಳಿಸುವುದಲ್ಲವೇ? ಒಂದು ವೇಳೆ ನಾವು ಊಟಕ್ಕೆ ಮುಂಚೆ ಸ್ವಲ್ಪ ಹೊತ್ತು ಧ್ಯಾನಕ್ಕೆ ಕೂತರೆ, ಅದನ್ನೂ ಊಟದ ಚಿಗಾಂಗ್ ಎಂದು ಬಿಡುತ್ತಾರೇನೋ, ಇದೆಲ್ಲ ಸುಳ್ಳು ಎಂಬುದನ್ನು ನಾನು ಸಾರಿ ಹೇಳುತ್ತೇನೆ.

ಯುದ್ಧಕಲೆಯ ಚಿಗಾಂಗ್ ಈಗಾಗಲೇ ಹೇಗೋ ಸ್ವತಂತ್ರ ಚಿಗಾಂಗ್ ಅಭ್ಯಾಸವಾಗಿ ಪರಿಗಣಿತವಾಗಿದೆ. ಏಕೆಂದರೆ ಅದು ಸಾವಿರಾರು ವರ್ಷಗಳ ಪರಂಪರೆಯನ್ನು ಸಂಪೂರ್ಣವಾದ ಸಾಧನಾ ಸಿದ್ಧಾಂತಗಳನ್ನು, ಸಾಧನಾ ಕ್ರಮವನ್ನು ಹೊಂದಿ, ಪರಿಪೂರ್ಣ ವ್ಯವಸ್ಥೆಯೆನಿಸಿದೆ. ಆದಾಗ್ಯೂ ಅದು ಆಂತರಿಕ ಸಾಧನೆಯ ಕೆಳಹಂತದಲ್ಲಿಯೇ ಉಳಿದುಕೊಂಡಿದೆ. ವಿಚಿತ್ರವಾದ ಚಿಗಾಂಗ್ ಒಂದನ್ನು ನಾನು ಹೇಳುತ್ತೇನೆ. ನಮ್ಮ ಫಾಲನ್‌ದಫಾ ತರಗತಿಯನ್ನು ಪೂರ್ಣಗೊಳಿಸಿದ ನಂತರ ಬೀಜಿಂಗ್‌ನ ಅಭ್ಯಾಸಿಯೊಬ್ಬನು ತನ್ನ ಕೈಗಳಿಂದ ಏನನ್ನೂ ಅದುಮದಂತಾದ. ಅವನು ಮಗುವನ್ನು ತಳ್ಳಿಕೊಂಡು ಹೋಗುವ ಗಾಡಿಯನ್ನು ಖರೀದಿಸುವುದಕ್ಕೆಂದು ಹೋದಾಗ, ತಳ್ಳುಗಾಡಿಯ ಗಟ್ಟಿತನವನ್ನು ಪರೀಕ್ಷಿಸಲು ತನ್ನೆರಡು ಕೈಗಳಿಂದ ಅದುಮಿದಾಗ, ಆ ತಳ್ಳುಗಾಡಿ ಅಪ್ಪಚ್ಚಿಯಾಗಿಬಿಟ್ಟಿತು. ಅವನು ಮನೆಗೆ ಹೋದಾಗ ಕೈಯನ್ನು ಒತ್ತದೆ ಕುರ್ಚಿಯಲ್ಲಿ ಕುಳಿತುಕೊಳ್ಳಬೇಕಾಯ್ತು. ಅವನು ತನಗೆ ಏನಾಗುತ್ತಿದೆ ಎಂದು ನನ್ನನ್ನು ಕೇಳಿದ. ನಾನು ಅವನಿಗೆ ಏನನ್ನು ಹೇಳದೆ, ಇದೆಲ್ಲ ನೈಸರ್ಗಿಕವಾದುದೆಂದು ಹೇಳಿದೆ. ಒಂದು ವೇಳೆ ಈ ಅಸಾಮಾನ್ಯ ಸಾಮರ್ಥ್ಯವನ್ನು ಚೆನ್ನಾಗಿ ಬಳಸಿಕೊಂಡರೆ, ಕಲ್ಲನ್ನು ಪುಡಿ ಮಾಡಿಬಿಡಬಹುದು. ಇದು ಬಲದ ಚಿಗಾಂಗೇ? ಅವನು ಅದನ್ನು ಅಭ್ಯಾಸವೇ ಮಾಡಿಲ್ಲ. ಆಂತರಿಕ ಸಾಧನೆಯ ಅಭ್ಯಾಸದಲ್ಲಿ ಇಂತಹ ಅಸಾಮಾನ್ಯ ಸಾಮರ್ಥ್ಯಗಳು ವೃದ್ಧಿಯಾಗಬಲ್ಲವು. ಆದರೆ ಇವುಗಳ ಕಾರಣದಿಂದ ಒಬ್ಬನ ಆತ್ಮಪ್ರಕೃತಿಯನ್ನು ಕಾಪಾಡಿಕೊಳ್ಳುವುದು ಕಷ್ಟವಾಗುತ್ತದೆ.

ಯುದ್ಧಕಲೆಯ ಚಿಗಾಂಗ್‌ನ ಅಭ್ಯಾಸದಲ್ಲಿ ಒಬ್ಬನು ಪ್ರಭೆಯನ್ನು ಉತ್ಪತ್ತಿ ಮಾಡಬೇಕಾಗುತ್ತದೆ. ಆದರೆ ಅದು ಸುಲಭದ ಕೆಲಸವೇನೂ ಅಲ್ಲ, ಬೇಕೆಂದಾಗ ಪ್ರಭೆಯನ್ನು ಉತ್ಪಾದಿಸಲೂ ಆಗುವುದಿಲ್ಲ. ಒಬ್ಬನು ತನ್ನ ಕೈಕಾಲುಗಳ ವ್ಯಾಯಾಮದ ಮೂಲಕ, ಕಲ್ಲಿಗೋ, ಮರಕ್ಕೋ ಕೈಯಿಂದ ಗುದ್ದುವುದರ ಮೂಲಕ ಅಭ್ಯಾಸ ಶುರು ಮಾಡಬೇಕಾಗುತ್ತದೆ. ಆಗಲೂ ಪ್ರಭೆ ಉತ್ಪನ್ನಗೊಳ್ಳಲಾರದು. ಗುದ್ದುವುದನ್ನು ಅಭ್ಯಾಸ ಮಾಡುತ್ತಾ ಹೋದಂತೆಲ್ಲಾ, ನೋವಿನ ಅನುಭವ ಕಡಿಮೆಯಾಗುತ್ತದೆ.ಇದನ್ನು ಏಕಾಂಗಿಯಾಗಿ ಅಭ್ಯಾಸ ಮಾಡುವುದು ಒಳ್ಳೆಯದಲ್ಲ. ಒಬ್ಬನು ಪ್ರಭೆಯನ್ನು ಉತ್ಪತ್ತಿ ಮಾಡಿದ ಮೇಲೆ ಆಕ್ರಮಣವನ್ನು ತಡೆಯುವ ಶಕ್ತಿ ಪಡೆಯುತ್ತಾನೆ. ದೊಡ್ಡ ದೊಣ್ಣೆಯಿಂದ ಪೆಟ್ಟು ಬಿದ್ದಾಗಲೂ ಹೆಚ್ಚಿನ ನೋವು ಆಗದಿರಬಹುದು. ಯುದ್ಧಕಲೆ ಚಿಗಾಂಗ್‌ನ ಅಭ್ಯಾಸದ ಮೂಲಕ ಒಬ್ಬನು ಕಬ್ಬಿಣದಂತಹ ಕೈಯನ್ನು, ವಜ್ರದಂತಹ ಕಾಲುಗಳನ್ನು, ಅರಹಂತ ಪಾದವನ್ನು ಹೊಂದಬಹುದು. ಇವೆಲ್ಲ ಸಾಮಾನ್ಯ ಜನರ ಕೌಶಲ್ಯಗಳೇ ಆಗಿವೆ. ಸತತ ಅಭ್ಯಾಸದಿಂದ ಸಾಮಾನ್ಯನೂ ಇದನ್ನು ಸಾಧಿಸಬಲ್ಲನು.

ಯುದ್ಧಕಲೆ ಚಿಗಾಂಗ್ ಮತ್ತು ಆಂತರಿಕ ಸಾಧನಾ ಅಭ್ಯಾಸಗಳಿಗೆ ಇರುವ ಪ್ರಮುಖ ವ್ಯತ್ಯಾಸ ವೇನೆಂದರೆ , ಯುದ್ಧಕಲೆ ಚಿಗಾಂಗ್‌ನ್ನು ಚಲನೆಯೊಂದಿಗೇ ಮಾಡಬೇಕಾಗುತ್ತದೆ. ಏಕೆಂದರೆ ಅದು ಚಲನೆಯೊಂದಿಗೇ ಅಭ್ಯಾಸ ಮಾಡುವುದನ್ನು ಬಯಸುತ್ತದೆ. ಒಬ್ಬನಿಗೆ ಶಾಂತಚಿತ್ತತೆಯನ್ನು ಸಾಧಿಸುವ ಅಗತ್ಯವಿರುವುದಿಲ್ಲ. ಆದರೆ ನಮ್ಮ ಆಂತರಿಕ ಸಾಧನಾ ಅಭ್ಯಾಸವು ಶಾಂತಚಿತ್ತ ಸ್ಥಿತಿಯೊಂದರಲ್ಲಿ ಅಭ್ಯಾಸ ಮಾಡುವುದನ್ನು ಬಯಸುತ್ತದೆ. ಆ ಪ್ರಭೆ ಚರ್ಮದ ಕೆಳಗೆ ಸಂಚರಿಸುತ್ತದೆ. ಏಕೆಂದರೆ ಇದು ಅಭ್ಯಾಸದಲ್ಲಿ ಚಲನೆಯನ್ನು ಬಯಸುತ್ತದೆ, ಒಬ್ಬನು ಶಾಂತಚಿತ್ತತೆಯನ್ನು ಸಾಧಿಸಲಾಗುವುದಿಲ್ಲ. ಮತ್ತು ಹೇಗಾದರೂ ಒಬ್ಬನ ಪ್ರಭೆ ಹೊಟ್ಟೆಯ ಕೆಳಭಾಗವನ್ನು ಪ್ರವೇಶಿಸಬಲ್ಲದು. ಒಬ್ಬನ ಪ್ರಭೆ ಚರ್ಮದ

ಕೆಳಗೆ ಮತ್ತು ಮಾಂಸಖಂಡಗಳಲ್ಲಿ ಸಂಚರಿಸುತ್ತದೆ. ಆದ್ದರಿಂದ, ಯಾವೊಬ್ಬನು ಉನ್ನತ ಹಂತದ ಅಭ್ಯಾಸವನ್ನು ಹೇಗಾದರೂ ಮಾಡಬಹುದು. ನಮ್ಮ ಆಂತರಿಕ ಸಾಧನೆಯ ಅಭ್ಯಾಸವು ಶಾಂತಚಿತ್ತ ಸ್ಥಿತಿಯಲ್ಲಿ ಅಭ್ಯಸಿಸುವುದನ್ನು ಅಪೇಕ್ಷಿಸುತ್ತದೆ. ಸಾಂಪ್ರದಾಯಿಕ ಪದ್ಧತಿಗಳಲ್ಲಿ ಪ್ರಭೆಯು ಹೊಟ್ಟೆಯ ಕೆಳಭಾಗದಲ್ಲಿ ಪ್ರವೇಶಿಸಬೇಕಾಗುತ್ತದೆ. ಅವರಿಗೆ ಲೋಕವ್ಯವಹಾರಗಳಿಂದ ಮುಕ್ತ ಹಾಗೂ ಶಾಂತಚಿತ್ತ ಸ್ಥಿತಿಯು ಅವಶ್ಯಕ. ಅವರು ದೈಹಿಕ ಅಭ್ಯಾಸದ ಮೂಲಕ ಉನ್ನತ ಹಂತಗಳ ಅಭ್ಯಾಸದೆಡೆಗೆ ಸಾಗಬಹುದು.

ನೀವು ಕೆಲವು ಕಾದಂಬರಿಗಳಿಂದ ಯುದ್ಧಕಲೆಗಳ ತಂತ್ರಗಳನ್ನು ಕಲಿತಿರಬಹುದು. ಅವುಗಳಲ್ಲಿ ಅನೇಕ ಬಗೆಯ ತಂತ್ರಗಳಿಂದ ವಿಚಿತ್ರವಾದ ಕಲೆಗಳನ್ನು ಪ್ರದರ್ಶಿಸಲಾಗುತ್ತದೆ. ಅವುಗಳಲ್ಲಿನ ಕೆಲವಕ್ಕೆ ಬೇರೆ ಆಯಾಮಗಳೂ ಇವೆ. ಈ ಬಗೆಯ ಯುದ್ಧಕಲೆಗಳು ಅಸ್ತಿತ್ವದಲ್ಲಿವೆಯೆ? ಹೌದು, ಅದು ನಿಜ, ಅವುಗಳು ಸಾಮಾನ್ಯ ಜನರಲ್ಲಿ ಅಸ್ಥಿತ್ವದಲ್ಲಿಲ್ಲ. ಯಾರು ನಿಜವಾಗಿಯೂ ಅಭ್ಯಾಸ ಮಾಡಿರುತ್ತಾರೋ ಅವರು ಈ ವಿಶೇಷವಾದ ಯುದ್ಧ ಕಲೆಗಳನ್ನು ಸಾರ್ವಜನಿಕವಾಗಿ ಪ್ರದರ್ಶಿಸುವುದಿಲ್ಲ. ಏಕೆಂದರೆ, ಅಂಥ ವ್ಯಕ್ತಿಯು ಸರಳವಾಗಿ ಯುದ್ಧಕಲೆಗಳನ್ನು ಅಭ್ಯಾಸಿಸುತ್ತಾನೆ. ಮತ್ತು ಅವನು ಸಂಪೂರ್ಣವಾಗಿ ಸಾಮಾನ್ಯ ಮಾನವರ ಹಂತದಿಂದ ಮೇಲಿನ ಹಂತದಲ್ಲಿರುತ್ತಾರೆ. ಅವನು ಆಂತರಿಕ ಅಭ್ಯಾಸ ಪದ್ಧತಿಯನ್ನು ಅನುಸರಿಸಬೇಕಾಗುತ್ತದೆ. ಆ ವ್ಯಕ್ತಿಯು ನೈತಿಕ ಗುಣವನ್ನು ಗೌರವಿಸಬೇಕು ಮತ್ತು ಹೆಚ್ಚಿಸಿಕೊಳ್ಳಬೇಕು. ಅವನು ಈ ಯುದ್ಧಕಲೆಗಳ ಬಗ್ಗೆ ತೀರಾ ಕಡಿಮೆ ಆಸಕ್ತಿಯುಳ್ಳವನಾಗಿರಬೇಕು. ಆದಾಗ್ಯೂ ಅವನು ಕೆಲವು ಯುದ್ಧಕಲೆಗಳನ್ನು ಕಲಿಯಬಲ್ಲ. ಆ ನಂತರ ಸಾಮಾನ್ಯ ಜನರಂತೆ ಇವುಗಳನ್ನು ಬಳಸಿಕೊಳ್ಳಲಾರ. ಅವನನ್ನು ಯಾರೂ ನೋಡಲು ಅಸಾಧ್ಯವಾದ ಸ್ಥಿತಿಯಲ್ಲಿ ಮಾತ್ರ ಇದನ್ನು ಬಳಸಿಕೊಳ್ಳಲು ಅನುಮತಿ ಇರುತ್ತದೆ. ಆ ಕಾದಂಬರಿಗಳನ್ನು ಓದುವುದರ ಮೂಲಕ, ನೀವು ಕಾಣದ ಖಡ್ಗದಿಂದ ಕೊಲೆ ಮಾಡುವುದಕ್ಕಾಗಿ, ಹಣದ ಡಬ್ಬಿಗಾಗಿ, ಹೆಣ್ಣಿಗಾಗಿ ಯುದ್ಧ ಮಾಡುವುದನ್ನು ಕಾಣುತ್ತೀರಿ. ಎಲ್ಲರೂ ಮಹಾ ಸಾಮರ್ಥ್ಯಗಳನ್ನು ಹೊಂದಿರುವಂತೆ ಚಿತ್ರಿಸಲಾಗಿರುತ್ತದೆ. ಇದರ ಬಗ್ಗೆ ಎಲ್ಲರೂ ಆಲೋಚಿಸಿ, ಆ ವ್ಯಕ್ತಿಗಳು ನಿಜವಾದ ಯುದ್ಧಕಲೆಯ ಪರಿಣತಿಯನ್ನು ಆಂತರಿಕ ಅಭ್ಯಾಸದ ಸಾಧನೆಯಿಂದ ಗಳಿಸಿದ್ದಾರೆಯೇ? ಅವರು ತಮ್ಮ ನೈತಿಕ ಗುಣಗಳನ್ನು ತಮ್ಮ ಸಾಧನೆಯಿಂದ ಸಾಧಿಸಿಕೊಂಡಿರುತ್ತಾರೆ. ಮತ್ತು ಈಗಾಗಲೇ ಬಹು ಕಾಲದಿಂದ ಅದೃಷ್ಟ, ಲಾಭ, ಮತ್ತಿತರ ಆಸೆಗಳಿಂದ ಮುಕ್ತರಾಗಿರುತ್ತಾರೆ. ಇಂಥವರು ಹೇಗೆ ಇತರರನ್ನು ಕೊಲೆ ಮಾಡಬಲ್ಲರು? ಅವರು ಹೇಗೆ ಅಷ್ಟೊಂದು ಹಣವನ್ನು ಮತ್ತು ಸಂಪತ್ತನ್ನು ನಿರ್ವಹಿಸಬಲ್ಲರು? ಇದು ಆತ್ಯಂತಿಕವಾಗಿ ಅಸಾಧ್ಯ, ಅವುಗಳು ಕೇವಲ ಕಲಾತ್ಮಕ ಉತ್ಪ್ರೇಕ್ಷೆಗಳು ಮಾನಸಿಕ ಉತ್ತೇಜನ ಪಡೆದ ಜನ ಕತ್ತುಪಟ್ಟಿ ಕಟ್ಟಿಸಿಕೊಂಡು ಏನನ್ನಾದರೂ ಮಾಡುತ್ತಾರೆ. ಲೇಖಕರು ಈ ಅಂಶಗಳನ್ನು ಬಂಡವಾಳ ಮಾಡಿಕೊಂಡಿದ್ದಾರೆ ಮತ್ತು ನಿಮ್ಮ ಕೋರಿಕೆಯಂತೆ ಅವರು ತಮ್ಮ ಉತ್ತಮ ಕೃತಿಯನ್ನು ರಚಿಸುತ್ತಿದ್ದಾರೆ. ಇವೆಲ್ಲವೂ ಕೇವಲ ಕಲಾತ್ಮಕ ಉತ್ಪ್ರೇಕ್ಷೆಗಳು, ನಿಜವಾಗಿಯೂ ಈ ಯುದ್ಧಕಲೆಯ ಸಾಮರ್ಥ್ಯಗಳನ್ನು ಸಾಧಿಸಿದವರು ಹೀಗೆ ವರ್ತಿಸುವುದಿಲ್ಲ. ನಿರ್ದಿಷ್ಟವಾಗಿ, ಅಂಥವರು ಸಾರ್ವಜನಿಕವಾಗಿ ಪ್ರದರ್ಶಿಸುವುದಿಲ್ಲ.

**ಪ್ರದರ್ಶಕ ಧೋರಣೆ :**

ಏಕೆಂದರೆ, ಸಾಮಾನ್ಯ ಜನರ ಸಾಧನೆಯ ಅಭ್ಯಾಸದಲ್ಲಿ, ನಮ್ಮ ಬಹುತೇಕ ಅಭ್ಯಾಸಿಗರು ತಮ್ಮ ಸಂಬಂಧಗಳನ್ನು ಬಿಡಲಾರರು. ಬಹುತೇಕ ಸಂಬಂಧಗಳು ಈಗಾಗಲೇ ದ್ವಿತೀಯ ಪ್ರಕೃತಿಯಾಗಿದೆ. ಮತ್ತು ಈ ವ್ಯಕ್ತಿಗಳು ತಂತಾವೇ ಕಂಡುಕೊಳ್ಳುತ್ತಾರೆ. ಈ ಪ್ರದರ್ಶಕ ಗುಣ ಯಾವ ಸಂದರ್ಭದಲ್ಲೂ ವ್ಯಕ್ತವಾಗಬಹುದು, ಒಳ್ಳೆಯ ಕೆಲಸಗಳು ಮೇಲ್ಮಟ್ಟದಲ್ಲಿರುತ್ತವೆ. ಕ್ರಮವಾಗಿ ಅದೃಷ್ಟವನ್ನು ಗಳಿಸಲು, ವೈಯಕ್ತಿಕ ಲಾಭ ಗಳಿಸಲು ಮತ್ತು ಚಿಕ್ಕ ಲಾಭಕ್ಕಾಗಿ ಕೆಲವರು ಪ್ರದರ್ಶಕ ಧೋರಣೆಯನ್ನು ತಾಳುತ್ತಾರೆ, ನಾನೊಬ್ಬ ಸಮರ್ಥ, ವಿಜಯಿ ಹೀಗೆ ನಾವು ಇನ್ನೂ ಕೆಲವು ಪ್ರಕರಣಗಳನ್ನು ನೋಡಬಹುದು. ಕೆಲವರು ಬೇರೆಯವರಿಗಿಂತ ಉತ್ತಮ ಅಭ್ಯಾಸ ಕೈಗೊಂಡಿರುತ್ತಾರೆ. ಉತ್ತ ದಿವ್ಯಚಕ್ಷುಗಳ ಕಾಣಿಕೆಗಳನ್ನು ಹೊಂದಿರುತ್ತಾರೆ ಅಥವಾ ಯಾರ ದೈಹಿಕ ವ್ಯಾಯಾಮದ ಚಲನೆಗಳು ಉತ್ತಮವಾಗಿದ್ದಂತೆ ಕಾಣುತ್ತವೆಯೋ ಅದು ಕೂಡ ಪ್ರದರ್ಶಕ ಧೋರಣೆ.

ಒಬ್ಬರು ಹೀಗೆ ಪ್ರತಿಪಾದಿಸಬಹುದು, ನಾನು ಲೀ ಗುರುಗಳಿಂದ ಸ್ವಲ್ಪ ಕೇಳಿದೆ. ಜನರು ಅವನ ಸುತ್ತ ನೆರೆದು ಅವನು ಏನನ್ನು ಕೇಳಿದನೆಂದು ಹೇಳುವುದನ್ನು ಕೇಳುತ್ತಾರೆ. ಅವನು ತನ್ನ ಅರ್ಥದಂತೆ ಗಾಳಿ ಮಾತನ್ನು ಅಲಂಕರಿಸಿ ಹೇಳುತ್ತಾನೆ. ಇದರ ಉದ್ದೇಶವೇನು? ಇದು ತನ್ನನ್ನು ತಾನು ಪ್ರದರ್ಶಿಸಿ ಕೊಳ್ಳಲು ಇಲ್ಲಿ ಕೆಲವರು ಒಬ್ಬರಿಂದ ಒಬ್ಬರಿಗೆ ಮಹಾ ಉತ್ಸುಕತೆಯಿಂದ ಗಾಳಿಮಾತನ್ನು ಹಬ್ಬಿಸುತ್ತಾರೆ. ಆದರೂ ಅವರು ಒಳ್ಳೆಯ ಮಾಹಿತಿಯುಳ್ಳವರು, ಮತ್ತು ನಮ್ಮ ಎಲ್ಲ ಅಭ್ಯಾಸಿಗರಿಗೂ ಇದು ಅರ್ಥವಾಗದು ಅಥವಾ ಅವರು ಏನನ್ನು ಮಾಡಿದರೆಂದು ತಿಳಿಯದು. ಇದು ಅವರಿಗೆ ಸ್ವಾಭಾವಿಕವಾಗಿ ಬಿಟ್ಟಿದೆ. ಆದಾಗ್ಯೂ ತಾವೇ ಅದನ್ನು ಅರ್ಥೈಸಿಕೊಂಡಿರುವುದಿಲ್ಲ. ಸುಪ್ತಪ್ರಜ್ಞೆಯಿಂದ ಅವರು ಈ ಪ್ರದರ್ಶಕ ಧೋರಣೆಯನ್ನು ಹೊಂದಿದ್ದಾರೆ, ಇಲ್ಲವಾದಲ್ಲಿ ಗಾಳಿಮಾತನ್ನು ಹಬ್ಬಿಸುವ ಉದ್ದೇಶವೇನು? ಕೆಲವರು ಗುರುಗಳು ಪರ್ವತಕ್ಕೆ ಹಿಂದಿರುಗಿದ ನಂತರ ಗಾಳಿಮಾತನ್ನು ಹಬ್ಬಿಸುತ್ತಾರೆ. ನಾನು ಏಕೆ ಪರ್ವತಗಳಿಗೆ ಮರಳಿದೆ? ಈಗಲೂ ಕೆಲವರು ಕೆಲವರಿಗೆ ನಿರ್ದಿಷ್ಟ ದಿನದಂದು ನಾನು ಆ ವ್ಯಕ್ತಿಯನ್ನು ವಿಶೇಷವಾಗಿ ಸತ್ಕರಿಸಿದೆ ಎಂಬ ಗಾಳಿಸುದ್ದಿಯನ್ನು ಹರಡುತ್ತಾರೆ. ಹೀಗೆ ಮಾಡುವುದರಿಂದ ಯಾವ ಶುಭಕಾರ್ಯವಾಗುತ್ತದೆ? ಇದರಿಂದ ಯಾರಿಗೂ ಒಳ್ಳೆಯದಾಗದು, ನಾನು ನೋಡಿದ್ದೇನೆ, ಹೇಗಾದರೂ ಅದು ಇದು ಅವರ ಸಂಬಂಧಗಳು ಪ್ರದರ್ಶಕ ಧೋರಣೆ.

ಕೆಲವರು ನನ್ನ ಹಸ್ತಾಕ್ಷರ ಪಡೆಯಲು ನನ್ನ ಬಳಿ ಬರುತ್ತಾರೆ. ಇದರ ಉದ್ದೇಶವೇನು? ಇದು ಜನಸಾಮಾನ್ಯರಲ್ಲಿ ರೂಢಿಯಲ್ಲಿರುವ ಯಾರದ್ದಾದರೂ ಹಸ್ತಾಕ್ಷರವನ್ನು ನೆನಪಿನ ಗುರುತಾಗಿ ಇಟ್ಟು ಕೊಳ್ಳುವ ಪದ್ಧತಿ. ಒಂದು ವೇಳೆ ನೀವು ಅಭ್ಯಾಸದಲ್ಲಿ ತೊಡಗದಿದ್ದರೆ ನನ್ನ ಹಸ್ತಾಕ್ಷರ ಏನನ್ನು ಮಾಡಲಾರದು. ನನ್ನ ಪುಸ್ತಕದಲ್ಲಿನ ಪ್ರತಿಯೊಂದು ಅಕ್ಷರಗಳಲ್ಲೂ ನಾನು ಮಾತನಾಡಿರುವ ವಾಕ್ಯಗಳಿವೆ. ನನ್ನ ಭಾವಚಿತ್ರವಿದೆ, **ಫಾಲೂನ್** (ಸಾಧನೆಯ ಹಾದಿ) ಇದೆ, ಆದಾಗ್ಯೂ ನಿಮಗೆ ನನ್ನ ಹಸ್ತಾಕ್ಷರ ಏಕೆ ಬೇಕು? ಕೆಲವರು ಇದನ್ನು ಪ್ರಮಾಣವೆಂದು ಭಾವಿಸುತ್ತಾರೆ. ಗುರುಗಳ ಭಾವಚಿತ್ರದಿಂದ ಅವರ ಸಂದೇಶವು ನನ್ನನ್ನು ರಕ್ಷಿಸುತ್ತದೆ. ಕೆಲವರು ಇದನ್ನು ಈಗಲೂ ನಂಬುತ್ತಾರೆ. ಆದರೆ ನನಗೆ ಅವರಲ್ಲಿ ಆಸಕ್ತಿಯಿಲ್ಲ. ಈ ಕೃತಿಯು ಈಗಾಗಲೇ ಅಮೂಲ್ಯವಾದುದು. ಇದರ ನಂತರ ನೀವು ಏನನ್ನು ಬಯಸುತ್ತಿದ್ದೀರಿ? ಇವೆಲ್ಲವುಗಳೂ ಮಮಕಾರದ ಪ್ರತಿಫಲನಗಳು. ಜೊತೆಗೆ, ಹೀನಾಯವಾಗಿ ವರ್ತಿಸುವ ವಿದ್ಯಾರ್ಥಿಗಳನ್ನು ಕಂಡ ಕೆಲವರು ಅವರು ಮಾಡುತ್ತಿರುವುದು ಒಳ್ಳೆಯದೊ, ಕೆಟ್ಟದ್ದೊ ಎಂದು ತಿಳಿಯದೆ ಅವರನ್ನು ಅನುಕರಿಸುತ್ತಾರೆ.

ವಾಸ್ತವವಾಗಿ ಇವರಿಗೆ ಇರುವುದು ಒಂದೇ ಸಾಧನೆಯ ಹಾದಿಯೆಂದು ತಿಳಿದಿರುವುದಿಲ್ಲ. ಅತ್ಯುನ್ನತ ಹಂತವನ್ನು ತಲುಪಲು ಈ ಸಾಧನೆಯ ಮಹಾಕಾಯ್ದೆ ಅನುಸರಿಸಬೇಕು. ನನ್ನ ಜೊತೆಯ ಕೆಲಸಗಾರರು ನನ್ನಿಂದ ವಿಶೇಷವಾದ ಆದರಗಳನ್ನು ಪಡೆಯಲಾರರು ಮತ್ತು ಅವರು ಎಲ್ಲರಂತಷ್ಟೇ ಅವರು ಸಂಶೋಧನಾ ಸಮಾಜದ ಸದಸ್ಯರು ಮಾತ್ರ. ಆ ಬಗೆಯ ಮಮಕಾರಗಳನ್ನು ಬೆಳೆಸಿಕೊಳ್ಳಬೇಡಿ ಕೆಲವು ಕಾಲಾನಂತರ ಈ ಮಮಕಾರಗಳಿಂದ ನೀವು ಉದ್ದೇಶರಹಿತವಾಗಿ ಸಾಧನೆಯ ಮಹಾ ಕಾಯ್ದೆ ದುರ್ಬಲಗೊಳಿಸುತ್ತೀರಿ. ಉದ್ರೇಕಾತ್ಮಕವಾದ ಗಾಳಿಮಾತುಗಳಿಂದ ಅಭ್ಯಾಸಿಗರು ಒಳತೋಟಿಗೆ ಒಳಗಾಗುತ್ತಾರೆ ಅಥವಾ ಮಮಕಾರಗಳಿಂದ ಕಲಕಲ್ಪಡುತ್ತಾರೆ. ಗುರುಗಳಿಂದ ಹೆಚ್ಚಿನದನ್ನು ತಿಳಿದು ಕೊಳ್ಳಲು ಬಯಸುತ್ತಾರೆ. ಇವುಗಳು ಕೂಡ ಸಮಸ್ಯೆಗಳೇ ಅಲ್ಲವೇ?

ಈ ಬಗೆಯ ಪ್ರದರ್ಶಕ ಧೋರಣೆ ಎತ್ತ ನಡೆಸಬಲ್ಲುದು? ನಾನು ಎರಡು ವರ್ಷಗಳಿಂದ ಅಭ್ಯಾಸವನ್ನು ಬೋಧಿಸುತ್ತಿದ್ದೇನೆ. ನಮ್ಮ ಅಭ್ಯಾಸಿಗರಲ್ಲಿ ಕೆಲವು ಪರಿಣತ ಸಾಧನಾ ಹಾದಿಯ ಅಭ್ಯಾಸಿಗರು ಬಹುಬೇಗ ಶಕ್ತಿ ಗಳಿಸುವ ಸಾಧನೆಯ ಅಭ್ಯಾಸವನ್ನು ಹಿಡಿತದಲ್ಲಿರಿಸಿಕೊಳ್ಳಬಲ್ಲರು. ಕೆಲವರು ತೀರಾ ಕ್ಷಿಪ್ರ ಪ್ರಗತಿಯಲ್ಲಿ ಜ್ಞಾನವನ್ನು ಪಡೆಯಬಲ್ಲರು. ಇವರಿಗೆ ಈ ಮೊದಲೇ ಈ ಅಸಾಮಾನ್ಯ ಸಾಮರ್ಥ್ಯಗಳು ಏಕೆ ಇರಲಿಲ್ಲ? ಏಕೆಂದರೆ ನಾನು ನಿಮ್ಮನ್ನು ಈ ಹಂತಕ್ಕೆ ತಳ್ಳಿದ್ದೇನೆ. ಇದು ಯಾವಾಗಲೂ ಸ್ವಾಗತಾರ್ಹವಲ್ಲ, ನಿಮ್ಮ ಮಮಕಾರಗಳನ್ನು ತೆಗೆಯಲಾಗಿಲ್ಲ. ನಿಶ್ಚಿತವಾಗಿ, ನಿಮ್ಮ ನೈತಿಕ ಗುಣ ಈಗಾಗಲೇ ಗಮನಾರ್ಹವಾಗಿ ವೃದ್ಧಿಯಾಗಿದೆ. ಅನೇಕ ಮಮತೆಗಳಿಂದ ಬಿಡುಗಡೆ ಹೊಂದದಿದ್ದರು. ಆದ್ದರಿಂದ ಆ ಅಸಾಮಾನ್ಯ ಸಾಮರ್ಥ್ಯಗಳನ್ನು ನಿಮಗೆ ಕೊಡಲಾಗಿಲ್ಲ. ಈ ಹಂತ ಮುಗಿದ ನಂತರ ನೀವು ದೃಢರಾಗುತ್ತೀರಿ, ನೀವು ಜ್ಞಾನಿಗಳಾಗುತ್ತೀರಿ. ಈ ಹಂತ ಹಂತದ ಜ್ಞಾನದ

ಸ್ಥಿತಿಯಿಂದ, ನಿಮ್ಮ ದಿವ್ಯಚಕ್ಷು ಪೂರ್ಣವಾಗಿ ತೆರೆದುಕೊಂಡು ಉನ್ನತ ಹಂತದ ಅಸಾಮಾನ್ಯ ಸಾಮರ್ಥ್ಯಗಳು ಅಭಿವೃದ್ಧಿ ಹೊಂದುತ್ತವೆ. ವಾಸ್ತವವಾಗಿ ನಿಮ್ಮ ನೈಜವಾದ ಸಾಧನೆಯ ಅಭ್ಯಾಸದಿಂದ ಈಗಾಗಲೇ ನೀವು ನಿಮ್ಮ ಅಸಾಮಾನ್ಯ ಸಾಮರ್ಥ್ಯಗಳನ್ನು ಅಭಿವೃದ್ಧಿ ಪಡಿಸಿಕೊಳ್ಳಲು ಆರಂಭಿಸಿದ್ದೀರಿ. ನೀವು ಈಗಾಗಲೇ ಈ ಹಂತವನ್ನು ತಲುಪಿದ್ದೀರಿ, ಹಾಗಾಗಿ ನೀವು ಅಸಾಮಾನ್ಯ ಸಾಮರ್ಥ್ಯಗಳನ್ನು ಹೊಂದಿದ್ದೀರಿ. ಈ ಸ್ಥಿತಿ ನಿಮ್ಮಲ್ಲಿ ಹಲವರಿಗೆ ಇತ್ತೀಚೆಗೆ ಉಂಟಾಗಿದೆ. ಕೆಲವರಿಗೆ ಉನ್ನತ ಹಂತದ ಸಾಧನೆಯನ್ನು ತಲುಪಲಾಗದು. ಅವರ ದೈಹಿಕ ಪ್ರವೃತ್ತಿಯಿಂದ ತಾಳ್ಮೆಯ ಗುಣದಿಂದ ಇದಾಗುತ್ತದೆ. ಆದ್ದರಿಂದ ಕೆಲವರ ಸಾಧನೆಯ ಹಂತವು ತೀರಾ ಕೆಳಹಂತದಲ್ಲೇ ಉಳಿಯುತ್ತದೆ.

ಅಂತಹ ವ್ಯಕ್ತಿಗಳನ್ನು ಈ ಸಾಧನೆಯ ಅಭ್ಯಾಸದಲ್ಲಿ ಒಳಗೊಳ್ಳಲಾಗದು. ಇದು ಈ ಅಭ್ಯಾಸದಲ್ಲಿರುವ ತೀವ್ರವಾದ ಸಮಸ್ಯೆ. ಮಹಾ ಹಾದಿಯ ತತ್ವಗಳನ್ನು ಅನುಸರಿಸುವ ಮುಖಾಂತರ ಇದನ್ನು ಸರಿಯಾಗಿ ಮಾಡಬಹುದು. ಇವುಗಳಿಲ್ಲದವನು ನನಗೆ ಅಸಾಮಾನ್ಯ ಸಾಮರ್ಥ್ಯಗಳಿವೆ ಎಂದು ಹೇಳಿದರೆ ಅಂಥವುಗಳನ್ನು ಕೇಳಬೇಡಿ, ಇಂಥವರು ಧರ್ಮಬಾಹಿರರು. ಅವರ ಮಾತುಗಳನ್ನು ನೀವು ಕೇಳದಿದ್ದರೆ, ಅಂತಿಮವಾಗಿ ಅವನು ಸ್ತಂಭೀಭೂತನಾಗುತ್ತಾನೆ. ತನ್ನನ್ನು ತಾನು ಒಳ್ಳೆಯವನನ್ನಾಗಿ ಮಾಡಿಕೊಳ್ಳದವನು, ಬೇರೆಯವರು ಜ್ಞಾನಿಗಳಾದಾಗಲೂ ಸ್ತಂಭೀಭೂತನಾಗುತ್ತಾನೆ. ಸ್ಥಿತಿಯನ್ನು ಸರಿಯಾಗಿ ನಿರ್ವಹಿಸದಿದ್ದಲ್ಲಿ ಬುದ್ಧನೂ ಸ್ತಂಭೀಭೂತನಾಗುತ್ತಾನೆ. ಆದ್ದರಿಂದ ನೀವು ಎಷ್ಟು ಅಸಾಮಾನ್ಯ ಸಾಮರ್ಥ್ಯಗಳನ್ನು ಗಳಿಸಿದಿರಿ. ಅವರು ಎಷ್ಟು ಉನ್ನತ ಹಂತದವರು ಅಥವಾ ಹೇಗೆ ಬಲಯುತರಾದವರು, ಧಾರ್ಮಿಕ ಶಕ್ತಿ ಗಳಿಸಿದರು ಎಂಬುದು ಮುಖ್ಯವಲ್ಲ. ನಿಮ್ಮನ್ನು ನೀವು ಉದ್ಧರಿಸಿಕೊಳ್ಳಬೇಕು. ಇತ್ತೀಚೆಗೆ ಒಂದು ಕ್ಷಣ ಮಾಯವಾಗುವ ಮತ್ತೊಂದು ಕ್ಷಣಕ್ಕೆ ಪ್ರತ್ಯಕ್ಷನಾಗುವವನ ಜೊತೆ ಕುಳಿತಿದ್ದೆ. ಇದು ಕೂಡ ಹಾಗೆಯೇ. ಇದಕ್ಕಿಂತ ಅಸಾಮಾನ್ಯ ಸಾಮರ್ಥ್ಯಗಳನ್ನು ಅಭಿವೃದ್ಧಿಪಡಿಸಿಕೊಳ್ಳಬಹುದು. ಇದರಿಂದ ನೀವು ಏನನ್ನು ಮಾಡುತ್ತೀರಿ? ಇಂಥ ಘಟನೆಗಳಿಂದ ನೀವು ನನ್ನನ್ನು ಗ್ರಹಿಸಬೇಡಿ. ಒಮ್ಮೆ ನಿಮ್ಮ ಬುದ್ಧಿ ಕೆಡುಕಿನ ದಾರಿಯಲ್ಲಿ ಹೊರಟರೆ, ಇದು ಎಲ್ಲೆಡೆ ಹಬ್ಬುತ್ತದೆ, ಮತ್ತು ನೀವು ಪತನವಾಗುತ್ತೀರಿ. ಆದಾಗ್ಯೂ ನೀವು ಅವರಿಗಿಂತ ಉನ್ನತ ಹಂತದಲ್ಲಿದ್ದೀರಿ. ಆದರೆ ನಿಮ್ಮ ಅಸಾಮಾನ್ಯ ಸಾಮರ್ಥ್ಯಗಳೂ ಇನ್ನೂ ಒಂದುಗೂಡಿಲ್ಲ. ಅದರ ಪ್ರಕಾರ, ಎಲ್ಲರೂ ತಮ್ಮ ಚಿತ್ತವನ್ನು ಏಕಾಗ್ರಗೊಳಿಸಬೇಕು. ನಾನು ಇದಕ್ಕೆ ಏಕೆ ಒತ್ತು ನೀಡುತ್ತೇನೆಂದರೆ, ಅನುಪಯುಕ್ತ ಸಂಗತಿಗಳು ಬೇಗ ನಿಮ್ಮಲ್ಲಿ ಆವರಿಸುತ್ತವೆ. ಒಮ್ಮೆ ಇದು ಆವರಿಸಿದರೆ, ನಿಮ್ಮನ್ನು ನೀವು ಉದ್ಧರಿಸಿಕೊಳ್ಳಲಾರಿರಿ.

ಶಕ್ತಿ ಗಳಿಸುವ ಸಾಧನೆಯ ಅಭ್ಯಾಸ ಹಾಗೂ ಅದನ್ನು ಕಾಯ್ದಿಡುವುದನ್ನು ಸಿದ್ದಿಸಿಕೊಂಡಿರುವ ಅಭ್ಯಾಸಿಗರು ತಮ್ಮಷ್ಟಕ್ಕೆ ತಾವೇ ವಿಶೇಷವಾಗಿರುತ್ತಾರೆ. ಇಂಥವರು ಅವರ ಮೋಸಕ್ಕೆ ಒಳಗಾಗುವುದಿಲ್ಲ ತಮ್ಮ ಜ್ಞಾನ, ಬುದ್ಧಿ, ನೈತಿಕ ಗುಣಗಳಲ್ಲಿ ಉನ್ನತ ಹಂತವನ್ನು ತಲುಪುತ್ತೀರಿ, ಕೆಟ್ಟ ದಾರಿಗಳನ್ನು ಅನುಸರಿಸುವುದರಿಂದ ಅಪನಂಬಿಕೆ ಉಂಟಾಗುತ್ತದೆ.

ಶಕ್ತಿ ಗಳಿಸುವ ಸಾಧನೆಯ ಅಭ್ಯಾಸವನ್ನು ಕಾಯ್ದಿರಿಸುವ ಸಿದ್ಧಿಯಿಂದ ಕೆಲವರು ಮುಂದೆ ಹೋಗಲಾರರು. ಇದರ ಫಲಿತಾಂಶದಿಂದ ಈ ಹಂತದ ಫಲಗಳನ್ನು ಮಾತ್ರ ಅವರು ಪಡೆಯಬಲ್ಲರು. ಭವಿಷ್ಯದಲ್ಲಿ ಸಾಧನೆಯ ಅಭ್ಯಾಸವನ್ನು ಪೂರ್ಣಗೊಳಿಸುವವರ ನಡುವೆ ವಿಶ್ವದ ಚಿಕ್ಕ ಮಾರ್ಗಗಳಲ್ಲಿ ಜ್ಞಾನಿಗಳಾಗುತ್ತಾರೆ. ಕೆಲವರು ಭಿನ್ನ ಹಂತಗಳಲ್ಲಿ ಜ್ಞಾನಿಗಳಾಗುತ್ತಾರೆ. ಮತ್ತೆ ಕೆಲವರು ಫಲ ಪದವಿಯನ್ನು ಪಡೆಯುತ್ತಾರೆ. ಜ್ಞಾನಿಯಾದವನು ಮಾತ್ರ ಫಲಪದವಿಯನ್ನು ಏರಬಲ್ಲ. ಕಿರು ದಾರಿಗಳಲ್ಲಿರುವ ಜ್ಞಾನಿಗಳೂ ಕೂಡ ಕೆಲವು ಅಂಶಗಳನ್ನು ಕಾಣಬಲ್ಲರು. ಈ ಕಿರುದಾರಿಯವರು ಫಲಪದವಿಯನ್ನು ಗಳಿಸಲಾರರು. ಇದರ ನಂತರ ಏನು ಮಾಡಬಹುದು? ಈ ಹಂತದಲ್ಲಿ ನೆಲೆಸಬೇಕು. ಇದರ ನಂತರದ ಸಾಧನೆಯು ಭವಿಷ್ಯದ ವಿಷಯ. ಶಕ್ತಿ ಗಳಿಸುವ ಸಾಧನೆಯ ಅಭ್ಯಾಸವನ್ನು ಕಾಯ್ದಿಡುವುದರಿಂದ ಏನು ಸಾಧಿಸಬಹುದು? ಇದರ ನಂತರ ನೀವು ಏನನ್ನು ಮಾಡಲು ಸಾಧ್ಯವಿಲ್ಲ. ಅನೇಕರು ಈ ಹಂತವನ್ನು ತಲುಪಿರುತ್ತಾರೆ. ಮುಂದೇನಾಗುತ್ತದೆಂಬುದು ಮುಖ್ಯವಲ್ಲ. ಇಂಥವನು ನೈತಿಕ ಗುಣವನ್ನು ಕಾಪಾಡಿಕೊಳ್ಳಬೇಕು. ಮಹಾ ಕಾಯ್ದೆಯ ಮೂಲಕ ಮಾತ್ರ ಒಬ್ಬನು ನಿಜವಾಗಿಯೂ ಸತ್ಯವಂತನಾಗಿರಬಲ್ಲ. ಮಹಾ ಕಾಯ್ದೆಯ ಪ್ರಕಾರವೇ ನೀವು ಸಾಧನೆಯ ಹಂತದಲ್ಲಿರುವುದು ಮಹಾ

ಕಾಯ್ದೆಯನ್ನು ನೀವು ದ್ವಿತೀಯ ಆಯ್ಕೆಯನ್ನಾಗಿರಿಸಿದರೆ, ನಿಮ್ಮ ಸಾಧನೆಗಳು ಮುಂದುವರೆಯಲಾರವು. ಇದು ಅಪಾಯಕಾರಿ. ನೀವು ಹಿಂದಿಗಿಂತ ಕೆಳಹಂತ ತಲುಪುತ್ತೀರಿ. ಆ ಸಂದರ್ಭದಲ್ಲಿ ನೀವು ನಿಜವಾಗಿಯೂ ಸಮಸ್ಯೆಯಲ್ಲಿರುತ್ತೀರಿ ಮತ್ತು ನಿಮ್ಮ ಸಾಧನೆಯ ಯಾತನೆಯಲ್ಲಿ ಕೊನೆಯಾಗುತ್ತದೆ. ಸರಿಯಾದ ಮಾರ್ಗದಲ್ಲಿ ಮುನ್ನಡೆಯದಿದ್ದರೆ ನೀವು ಸ್ತಂಭೀಭೂತರಾಗುತ್ತೀರಿ ಮತ್ತು ನಿಮ್ಮ ಸಾಧನೆಯ ಅಭ್ಯಾಸದಲ್ಲಿ ಸೋಲನುಭವಿಸುತ್ತೀರಿ.

ನಾನು ಬೋಧಿಸಿದ ಅನೇಕ ತರಗತಿಗಳ ವಾಸ್ತುಗಳನ್ನು ಹೊಂದಿಸಲಾಗಿರುವ ಕೃತಿ ಇದು. ನನ್ನಿಂದ ಬೋಧಿಸಲಾಗಿರುವ ಎಲ್ಲವನ್ನೂ ಮತ್ತು ಹೇಳಲಾಗಿರುವುದನ್ನು ಇದು ಒಳಗೊಂಡಿದೆ. ಪ್ರತಿಯೊಂದು ಶಬ್ದವನ್ನೂ ಟೇಪ್‌ರೆಕಾರ್ಡ್‌ರ್‌ನಿಂದ ಬರಹ ರೂಪಕ್ಕಿಳಿಸಲಾಗಿದೆ. ನನ್ನ ಅನುಯಾಯಿಗಳು ಮತ್ತು ಅಭ್ಯಾಸಿಗರು ಇದನ್ನು ಬರಹ ರೂಪಕ್ಕಿಳಿಸಲು ಸಹಾಯ ಮಾಡಿದ್ದಾರೆ. ನಂತರ ನಾನು ಇದನ್ನು ಮತ್ತೆ ಮತ್ತೆ ಪರಿಷ್ಕರಿಸಿದ್ದೇನೆ. ಇದು ಪೂರ್ಣವಾಗಿ ನನ್ನನ್ನು " **ಉನ್ನತ ಹಂತಕ್ಕೊಯ್ಯುವ ಮಾರ್ಗ**" ಮತ್ತು ಈ ಉನ್ನತ ಹಂತಕ್ಕೊಯ್ಯುವ ಮಾರ್ಗವನ್ನೇ ನಾನು ಬೋಧಿಸುತ್ತಿರುವ್ಯದು.

# ಉಪನ್ಯಾಸ–ಏಳು

## ಕೊಲೆಯ ವಿವಾದ

ಕೊಲ್ಲುವಿಕೆಯ ವಿವಾದ ತೀರಾ ಸೂಕ್ಷ್ಮವಾದುದು 'ಫಾಲೂನ್ ದ ಫಾ' ದ ಅನುಯಾಯಿಗಳಿಗೆ ಅಥವಾ ಇದರ ಆಚರಣೆಯಲ್ಲಿರುವವರಿಗೆ ಜೀವಿಗಳನ್ನು ಹಿಂಸಿಸಬಾರದೆಂಬುದನ್ನು ನಾವು ಹೇಳಿದ್ದೇವೆ. ಬೌದ್ಧ ಧರ್ಮದ, ಟಾವೋದ ಹಾಗೂ ಕಿಮೆನ್‌ದ ಅನುಯಾಯಿಗಳು ಯಾರೇ ಆಗಿದ್ದರೂ ಅವರಿಗೆ ಇದು ಅನ್ವಯಿಸುತ್ತದೆ. ಹಾಗೆಯೇ ಎಂದೆಂದಿಗೂ ಇದು ಸತ್ಯದ ಪದ್ಧತಿಯಾಗಬೇಕಾಗಿದೆ. ಇದು ನಿಖರವಾಗಿ ಕೊಲ್ಲುವಿಕೆಯನ್ನು ನಿಷೇದಿಸುವುದಾಗಿದೆ. ಇದೆಲ್ಲವೂ ಸತ್ಯ. ಏಕೆಂದರೆ ಜೀವವೊಂದನ್ನು ಕೊಲ್ಲುವುದರ ಹಿಂದಿನ ಪರಿಣಾಮ ತುಂಬಾ ಭಯಂಕರವಾದುದು. ಇದನ್ನು ಸಾಕಷ್ಟು ವಿಸ್ತಾರವಾಗಿ ತಿಳಿದಿರಬೇಕಾಗುತ್ತದೆ. ಬೌದ್ಧಧರ್ಮದಲ್ಲಿ ಕೊಲ್ಲುವುದು ಎಂದರೆ ವ್ಯಕ್ತಿಯೊಬ್ಬನ ಜೀವವನ್ನು ತೆಗೆಯುವುದು ಎಂದರ್ಥ. ಇದು ತುಂಬಾ ಭೀಕರವಾದ ಕ್ರಿಯೆ. ಆನಂತರ ಬೃಹತ್ ಗಾತ್ರದ ಜೀವಗಳು, ದೊಡ್ಡ ಗಾತ್ರದ ಸಾಕು ಪ್ರಾಣಿಗಳು ಅಥವಾ ದೊಡ್ಡ ಪ್ರಾಣಿಗಳ ಕೊಲ್ಲುವಿಕೆಯನ್ನು ಕೂಡ ಭಯಂಕರ ಕೃತ್ಯವಾಗಿ ಪರಿಗಣಿಸಲಾಯಿತು. 'ಫಾ' ಅನ್ನು ಅನುಸರಿಸುವ ಸಮುದಾಯದವರು ಕೊಲ್ಲುವಿಕೆಯನ್ನು ಏಕೆ ಅಷ್ಟು ಗಂಭೀರವಾಗಿ ಪರಿಗಣಿಸುತ್ತಾರೆ. ಸಾಯಲು ಬಯಸದೆ ಇರುವ ಜೀವಗಳನ್ನು ಕೊಂದರೆ ಅವು ಮುಂದೆ ಏಕಾಂತವಾಗಿ ವಾಸಸ್ಥಾನವಿಲ್ಲದ ದೆವ್ವಗಳಾಗಿ ಉಳಿಯುತ್ತದೆ ಎಂದು ಬೌದ್ಧಧರ್ಮ ಬಹಳ ಹಿಂದೆಯೇ ನಂಬಿತ್ತು. ಹಿಂದೆ ಇಂಥ ಆತ್ಮಗಳು ಕಷ್ಟಗಳಿಂದ ವಿಮುಕ್ತರಾಗಲು ಕೆಲ ವಿಧಿಗಳನ್ನು ಕೈಗೊಳ್ಳುತ್ತಿದ್ದರು. ಇಂಥ ಶಾಸ್ತ್ರಗಳನ್ನು ಕೈಗೊಳ್ಳದಿದ್ದಾಗ ಈ ಆತ್ಮಗಳು ಹಸಿವು ಹಾಗೂ ನೀರಡಿಕೆಗಳಿಂದ ಸಾಕಷ್ಟು ತೊಂದರೆಯನ್ನು ಅನುಭವಿಸಬೇಕಾಗುತ್ತಿತ್ತು. ಬಹಳಷ್ಟು ಹಿಂದೆಯೇ ಬೌದ್ಧಧರ್ಮ ಇದನ್ನು ಹೇಳಿತ್ತು.

ಯಾರಾದರೂ ಒಬ್ಬ ವ್ಯಕ್ತಿ ಮತ್ತೊಬ್ಬ ವ್ಯಕ್ತಿಗೆ ಕೆಟ್ಟದನ್ನು ಮಾಡಿದರೆ ಆ ವ್ಯಕ್ತಿ ಸಾಕಷ್ಟು 'ಡಿ' ಅನ್ನು ಪರಿಹಾರವಾಗಿ ನೀಡಬೇಕಾಗುತ್ತದೆ ಎಂದು ನಾವು ನಂಬಿದ್ದೇವೆ. ಆದರೂ ಯಾವುದೇ ಜೀವ ಹಾಗೂ ಪ್ರಾಣಿಯ ಜೀವವನ್ನು ಒಮ್ಮೆಲೆ ತೆಗೆದರೆ ಸಾಕಷ್ಟು ಕರ್ಮ ಸೃಷ್ಟಿಯಾಗುತ್ತದೆ. ಹಿಂದೆ ಕೊಲ್ಲುವುದನ್ನು ವ್ಯಕ್ತಿಯೊಬ್ಬನ ಜೀವನವನ್ನು ತೆಗೆಯುವುದು ಎಂಬ ಅರ್ಥದಲ್ಲಿ ಬಳಕೆ ಮಾಡುತ್ತಿದ್ದರು. ಇದು ಸಾಕಷ್ಟು ಕರ್ಮಕ್ಕೆ ಕಾರಣವಾಗುತ್ತಿತ್ತು. ಆದರೂ ಬೇರೆ ಸಾಮಾನ್ಯ ಜೀವಗಳನ್ನು ಆಶಿಸುವುದು ಕೂಡ ಕಡಿಮೆ ಪಾಪದ ಕೆಲಸವಲ್ಲ. ಇದು ಕೂಡ ಹೆಚ್ಚಿನ ಕರ್ಮಕ್ಕೆ ಕಾರಣವಾಗುತ್ತದೆ. ನಿರ್ಧಿಷ್ಟವಾಗಿ ಇದರ ಅನುಯಾಯಿಗೆ ಅಥವಾ ಇದನ್ನು ಪಾಲಿಸುವವನಿಗೆ ಬೇಸಾಯದ ಅವಧಿಯಲ್ಲಿ ಕಷ್ಟದುಃಖಗಳನ್ನು ಪ್ರತಿಯೊಂದು ಹಂತದಲ್ಲಿಯೂ ಕೊಡಲಾಗುತ್ತೆ. ಇವೆಲ್ಲವೂ ಬರುವುದು ನೀವು ಮಾಡಿದ ಕರ್ಮದಿಂದಲೇ ಅಥವಾ ಅವೆಲ್ಲವೂ ನಿಮ್ಮ ಕಷ್ಟದುಃಖಗಳೇ. ಇವು ನಿಮ್ಮ ಅಭಿವೃದ್ಧಿಗಾಗಿ ಜೀವನದ ವಿಭಿನ್ನ ಹಂತಗಳಲ್ಲಿ ಅಡಕಗೊಂಡಿರುತ್ತದೆ. ನಾವು ಎಲ್ಲಿಯವರೆಗೆ ನಮ್ಮ ನೈತಿಕ ಸ್ವಭಾವವನ್ನು ಎಷ್ಟು ಅಭಿವೃದ್ಧಿ ಪಡಿಸಿಕೊಳ್ಳುತ್ತೇವೆಯೋ ಅಷ್ಟಷ್ಟು ಅದರಿಂದ ಹೊರಬರಲು ಸಾಧ್ಯವಾಗುತ್ತದೆ. ಆದರೆ ಇದ್ದಕ್ಕಿದಂತೆ ಅಷ್ಟು ಕರ್ಮವನ್ನು ಸಂಪಾದಿಸಿದರೆ ಅದರಿಂದ ಹೊರಬರುವುದಾದರೂ ಹೇಗೆ? ನಿಮ್ಮ ನೈತಿಕ ಸ್ವಭಾವದ ಹಂತದಿಂದ ನೀವು ಯಾವುದೇ ಕರ್ಮದಿಂದ ಹೊರಬರಲು ಸಾಧ್ಯವಾಗುವುದೇ ಇಲ್ಲ. ಅಭ್ಯಾಸವನ್ನು ಮಾಡಲು ಸಹ ಅದು ಬಿಡುವುದಿಲ್ಲ.

ವ್ಯಕ್ತಿಯೊಬ್ಬನ ಹುಟ್ಟಿನೊಂದಿಗೆ ಜಗತ್ತಿನಾದ್ಯಂತ ಅವನನ್ನೇ ಹೋಲುವ ಅನೇಕ ಜೀವಿಗಳ ಹುಟ್ಟಾಗುವುದು ನಮ್ಮ ಗಮನಕ್ಕೆ ಬರುತ್ತದೆ. ಅವರೆಲ್ಲರೂ ಒಂದೇ ರೀತಿ ಕಾಣುತ್ತಾರೆ. ಒಂದೇ ಹೆಸರಿನವರಾಗಿರುತ್ತಾರೆ. ಒಂದೇ ತರಹದ ಕೆಲಸವನ್ನು ಮಾಡುವವರಾಗಿರುತ್ತಾರೆ. ಹಾಗಾಗಿ ಇವರೆಲ್ಲರನ್ನು ಇವನ ಬದುಕಿನ ಭಾಗವನ್ನಾಗಿ ಪರಿಗಣಿಸಬಹುದು. ಇದು ಇಂತಹ ವಿಚಾರವನ್ನು ಒಳಗೊಂಡಿದೆ. ಉದಾ: ಯಾರಾದರೂ ಬೇರೆ ದೊಡ್ಡ ಪ್ರಾಣಿಗಳು ಅಥವಾ ಜೀವಿಗಳು ತಕ್ಷಣದಲ್ಲಿ ಬೇರೆ ಬೇರೆ ಬಗೆಗಳಲ್ಲಿರುವ ಉಳಿದ ಪ್ರಾಣಿಗಳು ಅಥವಾ ಜೀವಿಗಳು ತಮಗೆ ಪೂರ್ವನಿಯಮಿತವಾದ ರೀತಿಯಲ್ಲಿ ಜೀವನವನ್ನು ಸಾಕಷ್ಟು ವರ್ಷಗಳ ಕಾಲ ನಡೆಸಬೇಕಾಗುತ್ತದೆ. ಸತ್ತ ಜೀವ ಅಥವಾ ಪ್ರಾಣಿ ನೆಲೆಯಿಲ್ಲದ ವಾತಾವರಣದಲ್ಲಿರುತ್ತಾನೆ. ಇಡೀ ವಿಶ್ವದಲ್ಲಿ ನಿಷ್ಕ್ರಿಯನಾಗಿ ಅಥವಾ ಗೊತ್ತು ಗುರಿಯಿಲ್ಲದವನಾಗಿ ಉಳಿಯಬೇಕಾಗುತ್ತೆ. ಏಕಾಂಗಿ ಆತ್ಮಗಳು ಮತ್ತು ನೆಲೆಯಿಲ್ಲದ ಭೂತಗಳು

ಹಸಿವು, ಬಾಯಾರಿಕೆ ಮತ್ತು ಯಾತನೆಗಳನ್ನು ಅನುಭವಿಸಬೇಕು ಎಂದು ಬಹಳ ಹಿಂದೆಯೇ ವಿವರಿಸದ್ದಾಗಿದೆ. ಇದು ಸತ್ಯ ಇರಬಹುದು. ಆದರೆ ನಾವು ವ್ಯಕ್ತಿಯೊಬ್ಬ ಅನುಭವಿಸುವ ಸಾಕಷ್ಟು ಭಯಂಕರ ಸಂದರ್ಭಗಳನ್ನು ಗಮನಿಸಿದ್ದೇವೆ. ಏಕೆಂದರೆ ಉಳಿದ ಎಲ್ಲಾ ಜೀವಿಗಳು ತಮ್ಮ ಜೀವಿತಾವಧಿಯನ್ನು ಮುಗಿಸುವವರೆಗೆ ಈ ವ್ಯಕ್ತಿ ತನ್ನ ಜೀವನದ ಕೊನೆಯ ಹಂತಕ್ಕಾಗಿ ಕಾಯಬೇಕು. ಇದು ಎಷ್ಟು ದೀರ್ಘವಾಗಿರುತ್ತದೆಯೋ ಅಷ್ಟೇ ಹೆಚ್ಚಾಗಿ ಅವನು ಕಷ್ಟವನ್ನು ಅನುಭವಿಸಬೇಕು. ಅವನು ಹೆಚ್ಚು ಕಷ್ಟಪಟ್ಟರೆ ಹೆಚ್ಚು ಕರ್ಮ ಅವನ ನೋವಿನಿಂದ, ದುಃಖದಿಂದ ಸೃಷ್ಟಿಯಾಗುತ್ತದೆ. ಇದು ಕೊಂದ ವ್ಯಕ್ತಿಯ ದೇಹಕ್ಕೆ ಸೇರ್ಪಡೆಯಾಗುತ್ತದೆ. ಇದರ ಬಗ್ಗೆ ಯೋಚನೆ ಮಾಡಬೇಕು. ನೀವು ಇನ್ನು ಎಷ್ಟು ಹೆಚ್ಚು ಕರ್ಮವನ್ನು ಒಳಗೊಳ್ಳಬಹುದು. ಇದನ್ನೇ ನಾವು ಅಸಾಮಾನ್ಯ ಶಕ್ತಿಗಳ ಮುಖೇನ ಗಮನಿಸಿದ್ದೇವೆ. ನಾವು ಈ ಸಂದರ್ಭವನ್ನು ಗಮನಿಸಿದ್ದೇವೆ. ವ್ಯಕ್ತಿಯೊಬ್ಬನ ಜನನವಾದಾಗ ಆ ವ್ಯಕ್ತಿಯ ಒಟ್ಟು ಬದುಕು ಮತ್ತು ಜೀವನ ಒಂದು ನಿರ್ದಿಷ್ಟ ಆಕಾರದಲ್ಲಿ ರೂಪುಗೊಂಡಿರುತ್ತದೆ. ಇನ್ನೂ ಭಿನ್ನವಾಗಿ ಹೇಳುವುದಾದರೆ ಈತ ತನ್ನ ಜೀವನದಲ್ಲಿ ಎಲ್ಲಿದ್ದಾನೆ. ಅವನು ಏನನ್ನು ಮಾಡಬೇಕು ಎನ್ನುವುದೆಲ್ಲವೂ ಇದರಲ್ಲಿ ಸೇರ್ಪಡೆಯಾಗಿದೆ. ಈತನ ಬದುಕನ್ನು ಯಾರು ರೂಪಿಸಿದರು? ಸ್ಪಷ್ಟವಾಗಿ ಹೇಳುವುದಾದರೆ ಇದು ಸಾಧ್ಯವಾಗಿರುವುದು ಉನ್ನತ ಜೈವಿಕ ಶಕ್ತಿಯಿಂದ ಉದಾಹರಣೆಗೆ ನಮ್ಮ ಸಾಮಾನ್ಯ ಮಾನವ ಸಮಾಜದಲ್ಲಿ, ಹುಟ್ಟಿನ ನಂತರ ಒಬ್ಬ ವ್ಯಕ್ತಿ ಅಥವಾ ಜೀವಿ ಒಂದು ಕುಟುಂಬಕ್ಕೆ, ಒಂದು ಶಾಲೆಗೆ ಕೆಲಸ ಮಾಡುವ ಸ್ಥಳಕ್ಕೆ ಸೇರ್ಪಡೆಗೊಳ್ಳುತ್ತಾನೆ. ವ್ಯಕ್ತಿಯೊಬ್ಬ ನಿರ್ವಹಿಸುವ ಕೆಲಸದಿಂದ ಸಾಕಷ್ಟು ಸ್ನೇಹ ಸಂಬಂಧಗಳು ಉಂಟಾಗುತ್ತವೆ. ಇದು ಒಟ್ಟಾರೆ ಸಮಾಜ ರೂಪುರೇಷೆಯನ್ನು ಹಾಗೆ ಯೋಜಿಸಲಾಗಿದೆ. ಆದರೂ ಈ ಜೀವ ನಿಯಮದ ಪ್ರಕಾರ ಸಾವನ್ನಪ್ಪದಿದ್ದರೆ ಉನ್ನತ ಜೈವಿಕ ಶಕ್ತಿಯು ಕೊಲೆಗಾರನನ್ನು ಕ್ಷಮಿಸುವುದಿಲ್ಲ. ಇಂಥ ವ್ಯಕ್ತಿ ಇನ್ನೂ ಈ ಅಭ್ಯಾಸವನ್ನು ರೂಢಿಯಲ್ಲಿಟ್ಟುಕೊಳ್ಳುವನು ಎಂದು ಯೋಚಿಸಿದ್ದೀರಾ? ಕೆಲ ಶ್ರೇಷ್ಠ ವ್ಯಕ್ತಗಳ ಮಟ್ಟವೂ ಕೂಡ ಇಂತ ಉನ್ನತ ಮಟ್ಟದ ಬದುಕಿನಂತಿರುವುದಿಲ್ಲ. ಹಾಗಾಗಿ ವ್ಯಕ್ತಿಯೊಬ್ಬನ ಗುರುವನ್ನು ಕೂಡ ಶಿಕ್ಷಿಸಲಾಗುತ್ತದೆ. ಅಂತೆಯಥ ಆತನನ್ನು ಕೆಳಮಟ್ಟಕ್ಕೆ ಕಳುಹಿಸಲಾಗುತ್ತದೆ. ಸುಮ್ಮನೆ ಇದರ ಬಗ್ಗೆ ಯೋಚಿಸಿ ಇದು ಸಾಮಾನ್ಯವಾದ ಸಂಗತಿಯೇ? ಹಾಗಾಗಿ ಒಬ್ಬ ವ್ಯಕ್ತಿ ಒಂದು ಬಾರಿ ಇಂಥ ಕೆಲಸವನ್ನು ಮಾಡಿದರೆ ಹೆಣ್ಣಿಗಾಗಲಿ ಅಥವಾ ಗಂಡಿಗಾಗಲಿ ಇದರ ಅಭ್ಯಾಸ ಕಷ್ಟಕರವೆನಿಸುತ್ತದೆ.

'ಫಾಲನ್ ದ ಫಾ' ದ ಅಭ್ಯಾಸಿಗರಲ್ಲಿ ಯುದ್ಧದ ಸಂದರ್ಭಗಳಲ್ಲಿ ಹೋರಾಡಿದವರು ಇದ್ದಾರೆ. ಅಂತಹ ಯುದ್ದಗಳು ಇಡೀ ವಿಶ್ವದಲ್ಲಿ ಆಗುವ ಬೃಹತ್ ಬದಲಾವಣೆಗಳ ಕೆಲ ನಿಯಮಗಳಿಗೆ ಒಳಪಟ್ಟಿರುತ್ತದೆ. ಇಂತಹ ಸನ್ನಿವೇಶದಲ್ಲಿ ನೀವು ಕೇವಲ ಅದರ ಅಂಗ. ಮನುಷ್ಯ ಕ್ರಿಯೆಯಿಲ್ಲದೆ ವಿಶ್ವದಲ್ಲಿ ಅನೇಕ ಬದಲಾವಣೆಗಳು ಆಗುತ್ತವೆ. ಇಂಥ ನಿಯಮಗಳನ್ನು ಸಾಮಾನ್ಯ ಸಹಜ ಮಾನವ ಕುಟುಂಬಕ್ಕೆ ತರಲು ಸಾಧ್ಯವಾಗುವುದಿಲ್ಲ. ಅಥವಾ ಅವುಗಳನ್ನು ವಿಶ್ವದಲ್ಲಿರುವ ಬದಲಾವಣೆಗಳು ಎಂದು ಕರೆಯಲು ಸಾಧ್ಯವಾಗುವುದಿಲ್ಲ. ಇಂತಹ ಘಟನೆಗಳು ರೂಪುಗೊಳ್ಳುವುದು ವಿಶ್ವದ ಬೃಹತ್ ಬದಲಾವಣೆಗಳಿಂದ ಅವು ನಮ್ಮ ತಪ್ಪಿನಿಂದ ಆಗುವಂತಹವಲ್ಲ. ನಾವಿಲ್ಲಿ ಚರ್ಚಿಸುತ್ತಿರುವುದು ಕರ್ಮವನ್ನು ಕುರಿತಂತೆ ತನ್ನ ಸ್ವಂತದ ಲಾಭಕ್ಕಾಗಿ ಯಾವುದೇ ತರಹದ ಹೀನ ಕೃತ್ಯವನ್ನು ಕೈಗೊಂಡಾಗ ಕರ್ಮಕ್ಕೆ ಕಟ್ಟು ಬೀಳುತ್ತಾನೆ. ಕೇವಲ ತನ್ನತನದಲ್ಲಿಯೇ ಆಸಕ್ತಿ ಹೊಂದಿರುತ್ತಾನೆ. ಅಥವಾ ಹೇಗೋ ಹಾಗೆ ಇಂತಹ ಕೃತ್ಯಗಳಲ್ಲಿ ಭಾಗಿಯಾಗಿರುತ್ತಾನೆ. ವಿಸ್ತಾರವಾದ ಇಡೀ ವಿಶ್ವದಲ್ಲಿ ಹಾಗೂ ಸಮಾಜದಲ್ಲಿ ಇದು ಎಲ್ಲಿಯವರೆಗೆ ಬದಲಾವಣೆಯನ್ನು ಒಳಗೊಳ್ಳುತ್ತದೆಯೋ ಅಲ್ಲಿಯವರೆಗೆ ಇದು ನಿಮ್ಮ ತಪ್ಪಲ್ಲ.

ಕೊಲ್ಲುವಿಕೆ ಅಪರಿಮಿತ ಕರ್ಮವನ್ನು ತರುತ್ತದೆ. ಪ್ರತಿಯೊಬ್ಬರೂ ಆಶ್ಚರ್ಯ ಪಡಬಹುದು. ನಾವು ಜೀವವೊಂದನ್ನು ಕೊಲ್ಲುವುದಕ್ಕೆ ಸಾಧ್ಯವಿಲ್ಲ. ಆದರೆ ಮನೆಯಲ್ಲಿ ನಾನೊಬ್ಬ ಅಡಿಗೆಯವ. ನಾನು ಒಂದು ಜೀವಿಯನ್ನು ಕೊಲ್ಲದೆ ಹೋದರೆ ನನ್ನ ಕುಟುಂಬ ಏನನ್ನು ಸೇವಿಸುತ್ತದೆ. ಇಂತಹ ವಿಶೇಷ ಅಂಶ ನನಗೆ ಸಂಬಂಧಿಸಿದ್ದಲ್ಲ. ಪ್ರತಿನಿತ್ಯ ಜನ ಹೇಗೆ ಜೀವಿಸ ಬೇಕು. ಎಂದು ಸುಮ್ಮನೆ ಹೇಳುವುದರ ಬದಲು ನಾನು 'ಫಾ' ನ ಅಭ್ಯಾಸಿಗರಿಗೆ ಬೋಧಿಸುತ್ತೇನೆ. ಇಂತಹ ನಿರ್ಧಿಷ್ಟ ವಿವಾದಗಳಲ್ಲಿ ಹೇಗೆ ವ್ಯವಹರಿಸಬೇಕು. 'ಧಫಾ'ದ ಪ್ರಕಾರ ನ್ಯಾಯ ತೀರ್ಮಾನವನ್ನು ಮಾಡಬೇಕು. ನಿಮಗೆ ಸರಿಹೊಂದುವ ರೀತಿಯಲ್ಲಿ ಕೆಲಸಕಾರ್ಯಗಳನ್ನು ನಿರ್ವಹಿಸಬೇಕು. ಆದರೆ ಜನ ಪ್ರತಿದಿನ ಅವರಿಗೆ ಇಷ್ಟವಾಗುವ ರೀತಿಯಲ್ಲಿ ಕೆಲಸ ಕಾರ್ಯಗಳನ್ನು ನಿರ್ವಹಿಸುತ್ತಾರೆ. ಇದು ಅವರ ವ್ಯವಹಾರವೂ ಆಗಿದೆ.

ನಿಜವಾಗಿಯೂ ಎಲ್ಲರಿಗೂ 'ಫಾಲನ್ ದ ಫಾ'ವನ್ನು ಅಭ್ಯಾಸ ಮಾಡಲು ಕಷ್ಟವಾಗುತ್ತದೆ. ಅಭ್ಯಾಸಿಗರಾಗಿ ಹೇಗಾದರೂ ಪ್ರತಿಯೊಬ್ಬರೂ ಒಂದು ಉನ್ನತ ಮಟ್ಟವನ್ನು ಪಾಲಿಸಬೇಕು. ಹಾಗಾಗಿ ಅಭ್ಯಾಸಿಗರಾಗಿ ನಾನು ಕೆಲ ಅಗತ್ಯತೆಗಳನ್ನು ಮುಂದಿಡುತ್ತೇನೆ.

ಮಾನವ ಜೀವಿಗಳು ಹಾಗೂ ಪ್ರಾಣಿಗಳಂತೆಯೇ ಸಸ್ಯಗಳು ಕೂಡ ಜೀವವನ್ನೊಳ ಗೊಂಡಿವೆ. ಯಾವುದೇ ವಿಷಯದಲ್ಲಿ ಜೀವ ಅಥವಾ ಪ್ರಾಣ ಬೇರೆ ಬೇರೆ ಆಕಾರಗಳಲ್ಲಿ ಸ್ಪಷ್ಟವಾಗಿ ಕಾಣುತ್ತಿರುತ್ತದೆ. ನಿಮ್ಮ ದಿವ್ಯ ದೃಷ್ಟಿ 'ಫಾ' ನ ದಿವ್ಯ ದೃಷ್ಟಿಯ ಮಟ್ಟವನ್ನು ತಲುಪಿದರೆ ಕಲ್ಲುಗಳು, ಗೋಡೆಗಳು ಅಥವಾ ಯಾವುದೇ ಅಂತಹ ವಸ್ತು ನಿಮ್ಮೊಂದಿಗೆ ಸಂವಹನಗೊಳ್ಳುತ್ತದೆ. ಅಂತೆಯೇ ಸ್ವಾಗತಿಸುತ್ತದೆ. ಕ್ಷೇಮ ಸಮಚಾರವನ್ನು ವಿಚಾರಿಸುತ್ತದೆ. ಅಂತೆಯೇ ಯಾರಿಗಾದರೂ ಆಶ್ಚರ್ಯವಾಗಬಹುದು. ನಾವು ತಿನ್ನುವ ದವಸಧಾನ್ಯಗಳಿಗೂ ಮತ್ತು ತರಕಾರಿಗಳಿಗೂ  ಜೀವವಿದೆ. ಮನೆಯಲ್ಲಿರುವ ನೊಣ ಹಾಗೂ ಸೊಳ್ಳೆಗಳಿಗೂ ಕೂಡ. ನಾವು ಏನು ಮಾಡಬೇಕು. ಬೇಸಿಗೆಯಲ್ಲಿ ಸೊಳ್ಳೆಯ ಕಡಿತ ಸ್ವಲ್ಪ ಕಿರಿಕಿರಿಯನ್ನುಂಟುಮಾಡುತ್ತದೆ. ಆದರೂ ಸೊಳ್ಳೆಯ ಕಡಿಯುವಿಕೆಯನ್ನು ನೋಡಿಯೂ ಸ್ಪಂಧಿಸದೆ ಇರಬೇಕು. ತಿನ್ನುವ ಆಹಾರ ಪದಾರ್ಥಗಳ ಮೇಲೆ ಕೂತಿರುವ ನೊಣಗಳನ್ನು ಕೊಲ್ಲಲು ಸಾಧ್ಯವಿಲ್ಲ. ಕಾರಣವಿಲ್ಲದೆ ನಾವು ಯಾವ ಜೀವಿಯನ್ನು ಕೊಲ್ಲಲು ಸಾಧ್ಯವಿಲ್ಲ. ಕಾರಣವಿಲ್ಲದೆ ನಾವು ಯಾವ ಜೀವಿಯನ್ನು ಕೊಲ್ಲಲು ಸಾಧ್ಯವಿಲ್ಲವೆಂಬುದನ್ನು ನಾನು ನಿಮಗೆ ತಿಳಿಸುತ್ತೇನೆ. ಆದರೂ ನಾವು ಅತಿಜಾಗರೂಕತೆಯ ವ್ಯಕ್ತಿಗಳಾಗಬೇಕೆ? ಯಾವಾಗಲೂ ಕ್ಷುಲ್ಲಕ ವಿಷಯಗಳಲ್ಲಿ ತೊಡಗಿ ನಡೆಯುವಾಗ ಹೆಜ್ಜೆಯೂರದಂತೆ, ಇರುವೆಗಳ ಮೇಲೆ ಹೆಜ್ಜೆಯೂರಲು ಚಿಂತಿಸುವುದು. ನೀವು ಆಯಾಸದ ಬದುಕನ್ನು ಅನುಸರಿಸುತ್ತೀರಾ ಎಂದು ಹೇಳುತ್ತೇನೆ. ಇದು ಹೊಂದಿಕೆಯಾಗಿದೆಯೇ. ನಿಮ್ಮ ಜಿಗಿತ ಸುತ್ತಮುತ್ತಲ ಇರುವೆಗಳನ್ನು ಕೊಲ್ಲದೆ ಇದ್ದರೂ, ನೀವು ಅನೇಕ ಸೂಕ್ಷ್ಮಜೀವಿಗಳನ್ನು ಕೊಂದಿರುತ್ತೀರಾ. ಸೂಕ್ಷ್ಮದರ್ಶಕ ಯಂತ್ರದಲ್ಲಿ ಕಾಣುವಂತಹ ಎಷ್ಟೋ ಬಗೆಯ ಜೀವಸಂಕುಲಗಳು ಇವೆ. ಅವುಗಳಲ್ಲಿ ಕೀಟಗಳು ಹಾಗೂ ಅಣುಜೀವಿಗಳು ಇವೆ. ಆದರೂ ನೀವು ಅದೆಷ್ಟೋ ಜೀವ ಸಂಕುಲಗಳ ಮೇಲೆ ಹೆಜ್ಜೆಯೂರಿ ಅವುಗಳಲ್ಲಿ ಅನೇಕ ಜೀವಿಗಳನ್ನು ಕೊಂದಿರುತ್ತೀರಾ. ಇಂತಹ ವಿಷಯದಲ್ಲಿ ಜೀವಿಸುವುದನ್ನು ನಿಲ್ಲಿಸಬಹುದಾ. ನಾವು ಇಂತಹ ವ್ಯಕ್ತಿಗಳಾಗಬಾರದು. ಹೀಗಾದರೆ ಇದರ ಅಭ್ಯಾಸ ಸಾಧ್ಯವಾಗುವುದಿಲ್ಲ. ಪ್ರತಿಯೊಬ್ಬರೂ ವಿಸ್ತಾರವಾದ ದೃಷ್ಟಿಕೋನವನ್ನು ಉಳಿಸಿಕೊಂಡು ದ ಮೇಲೆ ಬೆಳಕು ಚೆಲ್ಲಿ ಈ ಅಭ್ಯಾಸ ಪದ್ಧತಿಯನ್ನು ಉತ್ತಮವಾಗಿ ಹಾಗೂ ಗೌರವಯುತ ರೀತಿಯಲ್ಲಿ ನಡೆಸಬೇಕು.

ಮಾನವ ಜೀವಿಗಳಾಗಿ ಜೀವನವನ್ನು ನಡೆಸುವ ಹಕ್ಕು ನಮಗಿದೆ. ಹಾಗಾಗಿ ನಾವು ಜೀವಿಸುವ ಪರಿಸರ ಮನುಷ್ಯನ ಅಗತ್ಯತೆಗಳನ್ನು ಪೂರೈಸಬೇಕಿದೆ. ಉದ್ದೇಶಪೂರ್ವಕ ವಾಗಿ  ನಾವು ಯಾವುದೇ ಜೀವಿಗಳನ್ನು ಕೊಲ್ಲಲು ಹಾಗೂ ಹಿಂಸಿಸಲು ನಾವು ಬೆಳೆಯುವ ತರಕಾರಿಗಳು ಹಾಗೂ ಧಾನ್ಯಗಳೆಲ್ಲೂ ಜೀವವಿದೆ. ಹಾಗಾದರೆ ಅವುಗಳಿಗೆ ಜೀವವಿದೆ ಎಂದು ನಾವು ತಿನ್ನುವುದನ್ನು ನಿಲ್ಲಿಸಲು ಸಾಧ್ಯವಿಲ್ಲ. ಹಾಗಾದರೆ ನಾವು ಹೇಗೆ ಅಭ್ಯಾಸ ರೂಢಿಯಲ್ಲಿಟ್ಟುಕೊಳ್ಳಬಹುದು. ಯಾರಾದರೂ ಇದರ ಆಚೆಗೆ ನೋಡಬೇಕಾಗುತ್ತದೆ, ಉದಾಹರಣೆಗೆ ನೀವು ಓಡಾಡುವಾಗ ಕೆಲ ಇರುವೆಗಳು ಹಾಗೂ ಕೀಟಗಳು ನಿಮ್ಮ ಕಾಲ ಕೆಳಗೆ ಓಡಾಡಿ ಸಾವನ್ನಪ್ಪಬಹುದು. ನೀವು ಉದ್ದೇಶಪೂರ್ವಕವಾಗಿ ಅವುಗಳನ್ನು ಕೊಂದಿರುವುದಿಲ್ಲ. ಜೀವ ಸಂಕುಲಗಳ ಹಾಗೂ ಅತಿಸೂಕ್ಷ್ಮ ಜೀವಿಗಳ ವಿಷಯದಲ್ಲಿ ಪರಿಸರ ಸಮತೋಲನದ ಪ್ರಶ್ನೆಯೂ ಉದ್ಭವಿಸುತ್ತದೆ. ಇಂತಹ ಅನೇಕ ಜೀವಸಂಕುಲಗಳಿದ್ದರೂ ಸಮಸ್ಯೆ ಎದುರಾಗುತ್ತದೆ. ಹಾಗಾಗಿ ನಾವು ಈ ಅಭ್ಯಾಸವನ್ನು ತುಂಬಾ ಉತ್ತಮವಾಗಿ ಹಾಗೂ ಉನ್ನತ ಮಟ್ಟದಲ್ಲಿ ಕೈಗೊಳ್ಳಬೇಕು. ನೊಣಗಳು ಹಾಗೂ ಕೀಟಗಳು ಮನೆಯಲ್ಲಿದ್ದಾಗ ನಾವು ಅವುಗಳನ್ನು ಹೊರಗೋಡಿಸಬಹುದು. ಅಥವಾ ಅವುಗಳನ್ನು ಹೊರಗಿಡಲು ಕಿಟಕಿಗೆ ಸೊಳ್ಳೆ ಪರದೆಯನ್ನು ಹಾಕಬಹುದು. ಕೆಲವೊಮ್ಮೆ ಅವುಗಳನ್ನು ಓಡಿಸಲು ಸಾಧ್ಯವಾಗುವುದಿಲ್ಲ. ನಂತರ ಅವುಗಳನ್ನು ಸಾಯಿಸಿದ ಅಥವಾ ಅವು ಮನುಷ್ಯರನ್ನು ಕಚ್ಚಿ ಹಿಂಸಿಸಿದರೆ ಯಾರಾದರೂ ಅವುಗಳನ್ನು ಹೊರಗೆಡಹಬೇಕು. ಅವುಗಳನ್ನು ಓಡಿಸಲು ಸಾಧ್ಯವಾಗದೆ ಇದ್ದಾಗ ಯಾರೇ ಆದರೂ ಕಚ್ಚುವುದನ್ನು ನೋಡಿಕೊಂಡು ಸುಮ್ಮನೆ ಇರುವುದಿಲ್ಲ. ಅಭ್ಯಾಸಿಗರಾಗಿ ಅವುಗಳನ್ನು ನೀವು ಲಕ್ಷ್ಯಕ್ಕೆ ತೆಗೆದುಕೊಳ್ಳುವುದಿಲ್ಲ. ಅಂತೆಯೇ ನೀವು ಅವುಗಳಿಂದ ರಕ್ಷಿತರಾಗಿರುತ್ತೀರಾ. ಆದರೆ ಅಭ್ಯಾಸಿಗರಲ್ಲದ

ನಿಮ್ಮ ಕುಟುಂಬವರ್ಗದವರು ದಿನನಿತ್ಯವೂ ಸಾಂಕ್ರಾಮಿಕ ರೋಗಗಳಿಗೆ ತುತ್ತಾಗುತ್ತಾರೆ. ಒಂದು ಸೊಳ್ಳೆ ಮಗುವಿನ ಮುಖದ ಮೇಲೆ ಕಚ್ಚುತ್ತಿದ್ದಾಗ ನೋಡಿಕೊಂಡು ಸುಮ್ಮನೆ ಇರುವುದಕ್ಕೆ ಸಾಧ್ಯವಿಲ್ಲ. ನಾನು ನಿಮಗೊಂದು ಉದಾಹರಣೆಯನ್ನು ಕೊಡುತ್ತೇನೆ. ಸಾಖ್ಯಮುನಿಯ ಆರಂಭದ ವಸ್ತುಗಳ ಕಥೆಯೊಂದಿದೆ. ಒಂದು ದಿನ ಸಾಖ್ಯಮುನಿ ಕಾಡಿನಲ್ಲಿ ಸ್ನಾನಕ್ಕೆ ಹೋಗಲು ಅನುವಾಗಿದ್ದ. ಈತ ತನ್ನ ಶಿಷ್ಯನಿಗೆ ಸ್ನಾನ ಮಾಡುವ ತೊಟ್ಟಿಯನ್ನು ಸ್ವಚ್ಛಗೊಳಸಲು ಸೂಚಿಸಿದ. ಈತನ ಶಿಷ್ಯ ಸ್ನಾನದ ತೊಟ್ಟಿಯ ಹತ್ತಿರ ಹೋದ. ಸ್ನಾನದ ತೊಟ್ಟಿಯ ತುಂಬ ಓಡಾಡುತ್ತಿರುವ ಕೀಟಗಳನ್ನು ಕಂಡ. ಈತ ಏನಾದರೂ ಸ್ನಾನದ ತೊಟ್ಟಿಯನ್ನು ಸ್ವಚ್ಛಗೊಳಸಿದರೆ ಕೀಟಗಳೆಲ್ಲವೂ ಸಾವನ್ನಪ್ಪುತ್ತವೆ. ಶಿಷ್ಯ ಅಲ್ಲಿಂದ ಮರಳ ಸಖ್ಯುಮುನಿಗೆ ಸ್ನಾನದ ತೊಟ್ಟಿಯಲ್ಲಿ ಕೀಟಗಳಗಿರುವ ಸಂಗತಿಯನ್ನು ಹೇಳುತ್ತಾನೆ. ಆದರೆ ಸಖ್ಯುಮುನಿ ಈತನ ಕಡೆ ನೋಡದೆ ನೀನು ಹೋಗಿ ಆ ಸ್ನಾನದ ತೊಟ್ಟಿಯನ್ನು ಸ್ವಚ್ಛಗೊಳಸಬೇಕು ಎನ್ನುತ್ತಾನೆ. ಶಿಷ್ಯ ಸ್ನಾನದ ತೊಟ್ಟಿಯ ಹತ್ತಿರ ಹೋದ. ಆದರೆ ತೊಟ್ಟಿಯನ್ನು ಸ್ವಚ್ಛಗೊಳಸುವ ಪರಿ ತಿಳಿಯಲಿಲ್ಲ. ಹಾಗೇನಾದರೂ ಮಾಡಿದರೆ ಕೀಟಗಳು ಸಾಯಬಹುದು. ಎಂದುಕೊಂಡು ಶಿಷ್ಯ ಮತ್ತೊಮ್ಮೆ ಸಖ್ಯುಮುನಿಯ ಹತ್ತಿರ ಬಂದು ಗುರುವೇ ಸ್ನಾನದ ತೊಟ್ಟಿಯ ತುಂಬ ಕೀಟಗಳವೆ. ನಾನೇನದರೂ ಅದನ್ನು ಸ್ವಚ್ಛಗೊಳಸಿದರೆ, ಕೀಟಗಳು ಸಾಯುತ್ತವೆ ಎಂದ. ಸಾಖ್ಯಮುನಿ ಶಿಷ್ಯವನ್ನು ನೋಡಿ ಹೀಗೆ ಹೇಳುತ್ತಾನೆ. ನಾನು ನಿನಗೆ ಸ್ನಾನದ ತೊಟ್ಟಿಯನ್ನು ಸ್ವಚ್ಛಗೊಳಸುವುದಕ್ಕೆ ಹೇಳದ್ದೇನೆ. ತಕ್ಷಣವೇ ಶಿಷ್ಯನಿವೆ ಅರ್ಥವಾಯಿತು. ಆತ ನೇರವಾಗಿ ಹೋಗಿ ಸ್ನಾನದ ತೊಟ್ಟಿಯನ್ನು ಸ್ವಚ್ಛಗೊಳಸಿದ, ಈ ಕಥೆ ಒಂದು ತತ್ವವನ್ನು ಹೇಳುತ್ತದೆ ಕೀಟಗಳವೆ ಎಂದು ನಾವು ಸ್ನಾನ ಮಾಡುವುದನ್ನು ನಿಲ್ಲಿಸಲು ಸಾಧ್ಯವಿಲ್ಲ. ಸೊಳ್ಳೆಗಳವೆ ಎಂದು ಜೀವಿಸಲು ನಾವು ಬೇರೆ ಸ್ಥಳವನ್ನು ಹುಡುಕಲು ಸಾಧ್ಯವಿಲ್ಲ. ದವಸಧಾನ್ಯಗಳಗೆ ಹಾಗೂ ತರಕಾರಿಗಳಗೆ ಜೀವವಿದೆ ಎಂದು ತಿಳದು ನಾವು ಅವುಗಳನ್ನು ಸೇವಿಸದೆ ಕತ್ತನ್ನು ಬಿಗಿದುಕೊಳ್ಳಲು ಸಾಧ್ಯವಿಲ್ಲ. ಇದು ಈ ರೀತಿ ಇರಬಾರದು. ಇಂತಹ ಸಂದರ್ಭಗಳಲ್ಲಿ ಸರಿಯಾಗಿ ಹೋರಾಡಿ ಅಭ್ಯಾಸವನ್ನು ಅತ್ಯುತ್ತಮವಾಗಿಸಿಕೊಳ್ಳಬೇಕು. ಉದ್ದೇಶಪೂರ್ವಕವಾಗಿ ಯಾವುದೇ ಜೀವಗಳನ್ನು ನಾವು ಕೊಲ್ಲದೆ ಇದ್ದಾಗ ಅದು ಉತ್ತಮವಾಗುತ್ತದೆ. ಈ ಮಧ್ಯೆ ಅಲ್ಲಿಯವರೆಗೆ ಮನುಷ್ಯರಿಗೂ ಜೀವಿಸಲು ಸ್ಥಳಾವಕಾಸವಿರಬೇಕು. ಹಾಗೂ ಜೀವಿಸುವ ಸ್ಥಿತಿಗತಿಗಳು ಉತ್ತಮವಾಗಿರ ಬೇಕು. ಇದನ್ನು ಕಾಪಾಡಬೇಕು. ಆದರೂ ಮನುಷ್ಯರು ತಮ್ಮ ಪ್ರಾಣಗಳನ್ನು ಕಾಪಾಡಿಕೊಂಡು ಬದುಕಬೇಕಾಗಿದೆ.

ಹಿಂದೆ ಕೆಲ ಪೋನಿ ಚೀಗಾಂಗ್ ಗುರುಗಳು ಹೀಗೆ ಹೇಳದರು. ಯಾರಾದರೂ ಪ್ರತಿ ತಿಂಗಳ ಮೊದಲ ಹಾಗೂ ಹದಿನೈದನೆಯ ತಾರೀಖಿನಂದು ಜೀವಿಗಳನ್ನು ಕೊಲ್ಲಬಹುದಾಗಿದೆ. ಇನ್ನೂ ಕೆಲವರು ಎರಡು ಕಾಲಿನ ಪ್ರಾಣಿಗಳನ್ನು ಕೊಂದರೆ ಚೆನ್ನಾಗಿರುತ್ತದೆ. ಅವು ಜೀವಿಗಳಲ್ಲವೆನ್ನುತ್ತಾರೆ. ಮೊದಲ ಹಾಗೂ ಹದಿನೈದನೆಯ ದಿನಗಳಂದು ಕೊಂದರೆ ಒಂದು ಜೀವವನ್ನು ಕೊಂದಂತೆ ಅಲ್ಲವೇ? ಹಾಗಾಗಿ ಅದು ಕೇವಲ ಭೂಮಿಯ ಅಗೆಯುವಿಕೆಯಾಗಿದೆ. ಹೌದಲ್ಲವೇ? ಕೆಲ ಶ್ಯಾಮ್ ಗಿಗಾಂಗ್ ಗುರುಗಳು ತಮ್ಮ ಭಾಷಣಗಳಂದ ಹಾಗೂ ನಡವಳಕೆಗಳಂದ ಅಥವಾ ಅವರು ಏನು ಹೇಳುತ್ತಾರೆ. ಮತ್ತು ಅವರ ಅವಶ್ಯಕತೆಗಳಂದ ಗುರುತಿಸಲ್ಪಟ್ಟಿರುತ್ತಾರೆ. ಎಲ್ಲಾ ಗಿಗಾಂಗ್ ಗುರುಗಳು ಇಂಥ ಹೇಳಕೆಗಳನ್ನು ಮಾಡುವವರು ಪ್ರಾಣಿಗಳ ಆತ್ಮವನ್ನು ಸ್ವಾಧೀನ ಪಡಿಸಿಕೊಂಡಿರುತ್ತಾರೆ. ಉದಾ: ನೋಡಿ ಒಬ್ಬ ಚಿಗಾಂಗ್ ಗುರು ನರಿಯ ಆತ್ಮವನ್ನು ಹೊಂದಿ, ಕೋಳ ಮಾಂಸವನ್ನು ತಿನ್ನುತ್ತಾನೋ, ಇಂತಹ ವ್ಯಕ್ತಿಯು ಆತುರವಾಗಿ ಮಾಂಸವನ್ನು ತಿನ್ನಲು ಮೊದಲಿಟ್ಟುಕೊಂಡರೆ ಮೂಳೆಗಳನ್ನು ಉಗಳಲೂ ಸಹ ಇಷ್ಟ ಪಡುವುದಿಲ್ಲ. ಕೊಲ್ಲುವಿಕೆ ಕೇವಲ ಸಾಕಷ್ಟು ಕರ್ಮವನ್ನು ತರುವುದಲ್ಲದೆ, ಇದು ಕರುಣೆಯ ಅಂಶವನ್ನು ಒಳಗೊಂಡಿದೆ. ಅಭ್ಯಾಸಿಗರಾಗಿ ನಮಗೆ ಕರುಣೆ ಬೇಡವೇ? ನಮ್ಮಲ್ಲಿ ಕರುಣೆ ಉದ್ಭವವಾದಾಗ ಎಲ್ಲ ಜೀವಿಗಳು ಹಾಗೂ ಪ್ರತಿಯೋರ್ವ ವ್ಯಕ್ತಿ ನೋವು ತಿನ್ನುತ್ತಿರು ವುದನ್ನು ಕಾಣಬಹುದಾಗಿದೆ. ಇದು ಸಾಧ್ಯವಾಗುತ್ತದೆ.

## ಮಾಂಸ ತಿನ್ನುವ ವಿವಾದ

ಮಾಂಸ ತಿನ್ನುವಿಕೆ ಕೂಡ ತೀರಾ ಸೂಕ್ಷ್ಮವಾದ ವಿಚಾರವಾಗಿದೆ. ಆದರೆ ಮಾಂಸ ತಿನ್ನುವಿಕೆ ಜೀವವೊಂದರ ಹಿಂಸಿಸುವಿಕೆಯಲ್ಲ. ನೀವೆಲ್ಲರೂ 'ಫಾ' ಅನ್ನು ಇಲ್ಲಿಯವರೆಗೆ ಅಧ್ಯಯನ ಮಾಡಿದ್ದೀರಾ. ಎಲ್ಲರನ್ನೂ ಮಾಂಸ ತಿನ್ನುವುದನ್ನು ನಾವು ತಡೆದಿಲ್ಲ. ನಿಲ್ಲಿಸುವ ಅಗತ್ಯತೆ ಇಲ್ಲ. ಅನೇಕ ಚೀಗಾಂಗ್

ಗುರುಗಳು ತರಗತಿಗಳಿಗೆ ಹೋಗಲು ಆರಂಭಿಸಿದ ಕೂಡಲೇ ಮಾಂಸಸೇವನೆ ನಿಲ್ಲಿಸುವಂತೆ ಸೂಚಿಸುತ್ತಾರೆ. ನೀವು ಯೋಚಿಸಬಹುದು. ತಕ್ಷಣದಲ್ಲಿಯೇ ಮಾಂಸವನ್ನು ತ್ಯಜಿಸಲು ನಾನು ಸಿದ್ಧಗೊಂಡಿಲ್ಲವೆಂದು ಮನೆಯಲ್ಲಿ ಇಂದು ಊಟಕ್ಕೆ ಬಂದ ಕೋಳಿಯನ್ನು ಅಥವಾ ಉರಿದ ಮೀನನ್ನು ಇಟ್ಟಿದ್ದಾರೆ. ಇದು ಪರಿಮಳಯುಕ್ತವಾಗಿದ್ದರೂ ನೀವು ಊಟ ಸೇವಿಸಲು ಅನುಮತಿಯಿಲ್ಲ. ಕೆಲ ಧಾರ್ಮಿಕ ಅಭ್ಯಾಸಗಳಲ್ಲಿಯೂ ಯಾವುದೇ ವ್ಯಕ್ತಿಯನ್ನು ಮಾಂಸಸೇವನೆಯಿಂದ ಮುಕ್ತಗೊಳಿಸುತ್ತಾರೆ. ಬೌದ್ಧ ಧರ್ಮದ ಅಥವಾ ಬೌದ್ಧ ಶಾಲೆಯ ಕೆಲ ಸಾಂಪ್ರಾದಾಯಿಕ ಅಭ್ಯಾಸಗಳು ಮತ್ತು ತಾವು ಶಾಲೆಯ ಕೆಲ ಪದ್ಧತಿಗಳು ಕೂಡ ಹೀಗೆ ಹೇಳುತ್ತವೆ. ಹಾಗೆಯೇ ಮಾಂಸಸೇವನೆಯನ್ನು ನಿಷೇದಿಸುತ್ತವೆ. ಆದರೆ ನಾವು ನಿಮ್ಮನ್ನು ಹಾಗೆ ಮಾಡಿ ಎಂದು ಕೇಳುತ್ತಿಲ್ಲ. ಹಾಗಾದರೆ ನಮಗೇನು ಬೇಕು? ಆದರೆ ನಮ್ಮ ಅಭ್ಯಾಸದಲ್ಲಿ 'ಫಾ' ಅಭ್ಯಾಸಿಗರನ್ನು ಅಭಿವೃದ್ಧಿ ಪಡಿಸುತ್ತದೆ. ಇದರ ಅರ್ಥ 'ಫಾ' ಮತ್ತು 'ಗಾಂಗ್' ದಿಂದ ಕೆಲ ಸಂದರ್ಭ ಸನ್ನಿವೇಶಗಳು ನಿರ್ಮಾಣವಾಗುತ್ತವೆ. ಅಭ್ಯಾಸದ ಕ್ರಮದಲ್ಲಿ ವಿಭಿನ್ನ ಹಂತಗಳು ವಿಭಿನ್ನ ಸನ್ನಿವೇಶ ಸಂದರ್ಭಗಳನ್ನು ನಿರ್ಮಾಣ ಮಾಡುತ್ತವೆ. ಒಂದು ದಿನ ಅಥವಾ ಅನಂತರ ನನ್ನ ಇಂದಿನ ಉಪನ್ಯಾಸದ ನಂತರ ಕೆಲ ಜನರು ಈ ಸ್ಥಿತಿಗೆ ತಲುಪುತ್ತಾರೆ. ಅವರಿಗೆ ಮಾಂಸವನ್ನು ತಿನ್ನಲು ಆಗುವುದಿಲ್ಲ. ಮಾಂಸದ ವಾಸನೆ ಬೇಸರವನ್ನು ತರಿಸುತ್ತದೆ. ಸೇವಿಸಿದರೆ ದಮನ ಮಾಡಬೇಕು ಅನ್ನಿಸುತ್ತದೆ.

ಅನುಭವ ಪಡೆದ ಅಭ್ಯಾಸಿಗರಿಗೆಲ್ಲ ಫಾಲನ್ ದಾಫಾದಲ್ಲಿ ಈ ಸಂದರ್ಭ ಉದ್ಭವವಾಗುತ್ತದೆ. ಅಥವಾ ಎದುರಾಗುತ್ತದೆ ಎಂಬುದು ತಿಳಿದಿದೆ. ಬೇರೆ ಬೇರೆ ಹಂತಗಳು ಬೇರೆ ಬೇರೆ ಸಂದರ್ಭಗಳನ್ನು ಹೊರಹಾಕುತ್ತೇವೆ. (ಕೊಡುತ್ತೇವೆ) ಕೆಲ ಅಭ್ಯಾಸಿಗರಿಗೆ ಮಾಂಸ ಸೇವಿಸುವ ಬಲವಾದ ಆಸೆಯಿರುತ್ತದೆ. ಮತ್ತು ಬಲವಾದ ನಂಟು ಇರುತ್ತದೆ. ಇವರು ಸಾಕಷ್ಟು ಮಾಂಸವನ್ನು ಸೇವಿಸುತ್ತಾರೆ. ಬೇರೆಯವರು ಮಾಂಸವನ್ನು ಬೇರೆ ರೀತಿ ಕಂಡರೆ ಇವರಿಗೆ ಏನೂ ಅನ್ನಿಸುವುದಿಲ್ಲ. ಆದರೂ ತಿನ್ನುತ್ತಾರೆ. ಈ ಬಂಧವನ್ನು ತೆಗೆದುಹಾಕಲು ಏನು ಮಾಡಬೇಕು? ಮಾಂಸವನ್ನು ಸೇವಿಸುತ್ತಾ ಹೋದಂತೆ ಈತನಿಗೆ ಹೊಟ್ಟೆನೋವು ಬರುತ್ತದೆ. ಮಾಂಸವನ್ನು ತ್ಯಾಗ ಮಾಡುವುದರಿಂದ ಈತನಿಗೆ ಅಥವಾ ಆಕೆಗೆ ಹೊಟ್ಟೆನೋವು ಬರುವುದಿಲ್ಲ.

ಈ ಸನ್ನಿವೇಶ ಸಾಧ್ಯವಾಗುತ್ತದೆ. ಆದರೆ ಯಾವುದೇ ವ್ಯಕ್ತಿ ಮಾಂಸವನ್ನು ಸೇವಿಸಬಾಋದು. ಇದರ ಅರ್ಥ ಇಲ್ಲಿಂದೀಚೆಗೆ ನಮ್ಮ ಶಾಲೆಯಲ್ಲಿನ ಅಭ್ಯಾಸವೆಲ್ಲಾ ಮಾಂಸದ ವಿಚಾರವನ್ನು ಒಳಗೊಂಡಿರುವಂತಾಗಬೇಕು. ಏನನ್ನು ಮಾಡಲು ಆಗುವುದಿಲ್ಲವೇ? ಇದು ಹಾಗಲ್ಲ. ಈ ವಿವಾದದ ಬಗ್ಗೆ ಹೇಗೆ ವ್ಯವಹರಿಸಬೇಕು. ಮಾಂಸವನ್ನು ತಿನ್ನಲು ಸಾಧ್ಯವಿಲ್ಲವೆಂಬುದು ಪ್ರತಿಯೊಬ್ಬರ ಹೃದಯಾಂತರಾಳದಿಂದ ಬರಬೇಕು. ಉದ್ದೇಶವೇನು? ಅಭ್ಯಾಸಗಳು ದೇವಾಲಯಗಳಲ್ಲಿ ಪ್ರತಿಯೊಬ್ಬರನ್ನು ಮಾಂಸ ಸೇವಿಸದಂತೆ ಬಲತ್ಕಾರ ಮಾಡುತ್ತವೆ. ಇದರ ಜೊತೆಗೆ ಮಾಂಸವನ್ನು ತಿನ್ನಲು ಸಾಧ್ಯವಿಲ್ಲವೆಂಬುದು ನಮ್ಮ ಅಭ್ಯಾಸ ಕ್ರಮದಲ್ಲಿ ಪ್ರತಿಬಿಂಬಿತವಾಗುತ್ತದೆ. ಇವೆರಡೂ ಮಾನವನ ಆಸೆ ಆಕಾಂಕ್ಷೆಗಳನ್ನು ಅಥವಾ ಮಾಂಸ ತಿನ್ನುವ ವ್ಯಾಮೋಹವನ್ನು ತೆಗೆದು ಹಾಕುತ್ತದೆ.

ಅವರ ಪಾತ್ರೆಗಳಲ್ಲಿ ಮಾಂಸವಿಲ್ಲದೇ ಹೋದರೆ ಕೆಲ ಜನರು ಊಟವನ್ನೇ ಮಾಡುವುದಿಲ್ಲ. ಇದು ಮನುಷ್ಯರ ಪ್ರತಿದಿನದ ಆಸೆ ಒಂದು ದಿನ ಬೆಳಿಗ್ಗೆ ನಾನು ಟ್ರಿಂಪ್ ಪಾರ್ಕ್ (Trimph Park)ನ ಪ್ರವೇಶ ದ್ವಾರದ ಬಳಿ ನಡೆದು ಹೋಗುತ್ತಿದ್ದಾಗ ಮುರು ಜನ ಟ್ರಿಂಪ್ ಪಾರ್ಕ್‌ನ ಪ್ರವೇಶ ದ್ವಾರದೀದಮ ಜೋರಾಗಿ ಕೂಗುತ್ತಾ ಹೊರಬಂದರು. ಅವರಲ್ಲೊಬ್ಬ ಇದು ಎಂತಹ ಚಿಗಾಂಗ್ ಅಭ್ಯಾಸ ಯಾವೊಬ್ಬ ವ್ಯಕ್ತಿಯೂ ಮಂಸವನ್ನು ಸೇವಿಸಬಾರದು ಎನ್ನುತ್ತಾರೆ. ನಾನು ನನ್ನ ಜೀವಿತಾವಧಿಯ ಹತ್ತು ವರ್ಷಗಳನ್ನು ಮಾಂಸಸೇವನೆಗಾಗಿ ತ್ಯಾಗಮಾಡುತ್ತೇನೆ. ಅದು ಎಂತಹ ಬಲವಾದ ಆಸೆ ಪ್ರತಿಯೊಬ್ಬರೂ ಇದರ ಬಗ್ಗೆ ಯೋಚಿಸಿ, ಈ ಆಸೆಯನ್ನು ತೆಗೆದುಹಾಕಲು ಸಾಧ್ಯವಿಲ್ಲವೇ? ನಿಜವಾಗಿಯೂ ಸಾಧ್ಯವಾಗುತ್ತದೆ. ಅಭ್ಯಾಸದ್ ಕ್ರಮದಲ್ಲಿ ಪ್ರತಿಯೊಬ್ಬರೂ ಬೇರೆ ಬೇರೆ ಆಸೆ ಆಕಾಂಕ್ಷೆಗಳನ್ನು ಹಾಗೂ ಮೋಹ ಬಂಧನಗಳನ್ನು ತ್ಯಜಿಸಬೇಕಾಗುತ್ತದೆ. ಸರಳವಾಗಿ ಹೇಳುವುದಾದರೆ ಮಾಂಸ ಸೇವನೆಯ ಆಸೆಯನ್ನು ಬಿಡದೆ ಹೋದರೆ ಮೋಹವನ್ನು ಸಂಪೂರ್ಣವಾಗಿ

ಬಿಟ್ಟಂತಾಗುತ್ತದೆಯೇ? ಪ್ರತಿಯೋರ್ವ ವ್ಯಕ್ತಿ ಹೇಗೆ ಅಭ್ಯಾಸವನ್ನು ಪೂರ್ಣಗೊಳಿಸಬೇಕು. ಹಾಗಾಗಿ ಎಲ್ಲಿಯವರೆಗೆ ಇದು ಮೋಹ, ಪ್ರೇಮ ಪಾಶವಾಗಿರುತ್ತದೆಯೋ ಅದನ್ನು ತೆಗೆಯಲೇಬೇಕು. ಆದರೆ ಇದರ ಅರ್ಥ ಯಾವುದೇ ಒಬ್ಬ ವ್ಯಕ್ತಿ ಮತ್ತೆ ಮಾಂಸ ಸೇವಿಸುವುದಿಲ್ಲ ಎಂದು ಅರ್ಥವಲ್ಲ. ಮಾಂಸ ವರ್ಜಿಸುವುದೇ ಒಂದು ಅವಶ್ಯಕತೆಯಲ್ಲ. ಅಂತಹ ವ್ಯಾಮೋಹವನ್ನು ಬಿಟ್ಟರೆ ಮುಂದೆ ಮಾಂಸವನ್ನು ಸೇವಿಸಲು ಬಯಕೆಯಾಗುತ್ತದೆ. ಮಾಂಸದ ವಾಸನೆ ಹಾಗೂ ರುಚಿ ಬೇಸರವನ್ನು ಉಂಟು ಮಾಡುವುದಿಲ್ಲ. ಆ ಸಮಯದಲ್ಲಿ ಮಾಂಸವನ್ನು ಸೇವಿಸಿದರೆ ಗಣನೆಗೆ ಬರುವುದಿಲ್ಲ.

ನೀವು ಮತ್ತೊಮ್ಮೆ ಮಂಸವನ್ನು ತಿನ್ನಬೇಕಾದ ಸಂದರ್ಭ ಬಂದಲ್ಲಿ ಅದರ ಬಗೆಗಿನ ನಿಮ್ಮ ಮೋಹ ಮತ್ತು ಅಪೇಕ್ಷೆಯನ್ನು ನೀವು ಬಿಟ್ಟುಬಿಟ್ಟಿರುತ್ತಿರಿ. ಬಹಳ ದೊಡ್ಡ ಬದಲಾವಣೆ ನಿಮ್ಮಲ್ಲುಂಟಾಗುತ್ತದೆ. ಏನೇ ಆದರೂ, ಮಾಂಸವು ಇನ್ನೂ ಮುಂದೆ ನಿಮಗೆ ರುಚಿಕರವೆನಿಸುವುದಿಲ್ಲ. ಅದನ್ನು ಮನೆಯಲ್ಲಿ ತಯಾರಿಸಿದ್ದಲ್ಲಿ ನೀವು ನಿಮ್ಮ ಮನೆಯಮಂದಿಯೊಂದಿಗೆ ತಿನ್ನುತ್ತೀರಿ. ಅದನ್ನು ಮನೆಯಲ್ಲಿ ತಯಾರಿಸದಿದ್ದಲ್ಲಿ ನೀವು ಅದನ್ನು ಕಳೆದುಕೊಳ್ಳುವುದಿಲ್ಲ. ಅದನ್ನು ನೀವು ತಿಂದಲ್ಲಿ ಅದು ಸ್ವಾದಿಷ್ಟವೆನಿಸುವುದಿಲ್ಲ. ಈ ದೃಶ್ಯವು ಉಂಟಾಗುತ್ತದೆ. ಪ್ರತಿದಿನವೂ ಜನಗಳ ನಡುವೆ ಚಿಗಾಂಗ್ ಅಭ್ಯಾಸ ಮಾಡುವುದು ಬಹಳ ಕಷ್ಟಕರ. ನಿಮ್ಮ ಕುಟುಂಬದಲ್ಲಿ ಅಪರೂಪವಾಗಿ ಎಂದೋ ಒಂದು ದಿನ ಮಾಂಸವನ್ನು ಮಾಡಿದ್ದಲ್ಲಿ ಅದು ನಿಮಗೆ ರುಚಿಕರವಾಗಿ ಕಂಡು ಬರುತ್ತದೆ. ವರ್ತಮಾನದಲ್ಲಿ ಇಂತಹ ಮರುಕಳಿಸುವಿಕೆಯು ಆಗುತ್ತಲೇ ಇರುತ್ತದೆ. ಅಭ್ಯಾಸದ ಸಂಪೂರ್ಣ ಕಾಲದಲ್ಲಿ ಇದನ್ನು ಮತ್ತೆ ಮತ್ತೆ ಪುನರಾವರ್ತಿಸಲಾಗುತ್ತದೆ. ಒಮ್ಮೆಲೇ ನೀವು ಮತ್ತೆ ಮಾಂಸವನ್ನು ತಿನ್ನಲಾಗುವುದಿಲ್ಲ. ಅದನ್ನು ನೀವು ತಿನ್ನಕಾಗದಿದ್ದರೆ, ನೀವು ಅದನ್ನು ತಿನ್ನಬಾರದು. ಖಂಡಿತವಾಗಿಯೂ ನಿಮಗೆ ತಿನ್ನಲಾಗುವುದಿಲ್ಲ. ಮತ್ತು ಬಲವಂತದಿಂದ ನೀವು ತಿಂದಲ್ಲಿ ಅದನ್ನು ಬಿಸಾಡುತ್ತೀರಿ. ನಿಮಗೆ ಮತ್ತೆ ಮಾಂಸವನ್ನು ತಿನ್ನುವ ಹಾಗಾಗುವವರೆಗೆ ಕಾಯಿತಿ ಮತ್ತು ಪ್ರಕೃತಿ ಸಹಜ ಮಾರ್ಗವನ್ನು ಅನುಸರಿಸಿ ಮಾಂಸವನ್ನು ತಿನ್ನುವುದು ಅಥವಾ ಬಿಡುವುದು ಅದೇ ಒಂದು ಉದ್ದೇಶವಲ್ಲ. ಮೂಲವೇನೆಂದರೆ ಆ ಒಂದು ಬಂಧನವನ್ನು ಕಳಚಿಕೊಳ್ಳುವುದೇ ಆಗಿದೆ. ನಮ್ಮ ಫಾಲೂನ್ ಧಾಪಾ ಶಾಲೆಯು ವ್ಯಕ್ತಿಯನ್ನು ಶೀಘ್ರ ಏಳಿಗೆಗಾಗಿ ಸಮರ್ಥಗೊಳಿಸುತ್ತದೆ. ಎಲ್ಲಿಯವರೆಗೂ ನೀವು ಜಿನ್‌ಜಿಂಗ್ (Xin xing) ಮೇಲಕ್ಕೆತ್ತುತ್ತಿರುತ್ತೀರೋ ಪ್ರತಿ ಹಂತವನ್ನು ನೀವು ಶೀಘ್ರವಾಗಿ ಬೇಧಿಸುತ್ತೀರಿ. ಮೊದಲನೆಯದಾಗಿ ಕೆಲವರು ಮಂಸವನ್ನು ತಿನ್ನಲೇಬೇಕೆಂಬ ಯಾವ ಬಂಧನವನ್ನು ಇಟ್ಟುಕೊಂಡಿರುವುದಿಲ್ಲ. ಮತ್ತು ಅದನ್ನು ತಮ್ಮ ಊಟದಲ್ಲಿ ಸೇರ್ಪಡಿಸಲಾಗಿದೆಯೇ ಇಲ್ಲವೇ ಎಂಬುದನ್ನು ಪರಿಗಣಿಸುವುದೇ ಇಲ್ಲ. ಅವರಿಗೆ ಈ ಬಂಧನವನ್ನು ಕಳಚಿಕೊಳ್ಳಲು ಎರಡು ವಾರಗಳು ಬೇಕಾಗುತ್ತದೆ.

ಕೆಲವರಿಗೆ ಒಂದೇ ವಾರ ಸಾಕಾಗಬಹುದು. ಕೆಲವರಿಗೆ ಎರಡು –ಮೂರು ತಿಂಗಳು ಅಥವಾ ಬಹುಶ: 6 ತಿಂಗಳುಗಳು ಬೇಕಾಗಬಹುದು. ಕೆಲವು ಅಸಾಮಾನ್ಯ ಪರಿಸ್ಥಿತಿಗಳಲ್ಲಿ ಮಾಂಸವನ್ನು ಮತ್ತೆ ತಿನ್ನಲು ಒಂದು ವರ್ಷಕ್ಕಿಂತ ಹೆಚ್ಚಾಗಿ ಬೇಕಾಗುತ್ತದೆ. ಇದು ಏಕೆಂದರೆ ಮಾಂಸವು ಈಗಾಗಲೇ ಜನರ ಮುಖ್ಯ ಆಹಾರವಾಗಿದೆ. ಎನಾದರಾಗಲಿ ವೃತ್ತಿಪರ ಅಭ್ಯಾಸಿಗರು ಮಾಂಸವನ್ನು ತಿನ್ನಬಾರದು.

ಮಾಂಸವನ್ನು ತಿನ್ನುವುದರ ಬಗ್ಗೆ ಬೌದ್ಧಧರ್ಮವು ಹೇಗೆ ಗಣನೆಗೆ ತೆಗೆದುಕೊಳ್ಳುತ್ತದೆಂಬುದರ ಬಗ್ಗೆ ಮಾತನಾಡೋಣ. ಮೊದಲಿನ ಮೂಲ ಬೌದ್ಧ ಧರ್ಮವು ಮಾಂಸ ತಿನ್ನುವುದನ್ನು ನಿಷೇದಿಸಿಲ್ಲ. ಶಾಕ್ಯಮುನಿಗಳು ತಮ್ಮ ಶಿಷ್ಯರನ್ನು ಕಷ್ಟಪಟ್ಟು ಅಭ್ಯಾಸವನ್ನು ಮಾಡಲೆಂದು ಕಾಡಿಗೆ ಕರೆದುಕೊಂಡು ಹೋದಾಗ ಮಾಂಸಹಾಖವನ್ನು ತಿನ್ನಬಖದೆಂಬ ಯಾವ ನಿಯಮವೂ ಇರಲಿಲ್ಲ. ಅಂತಹ ನಿಯಮ ಏಕಿರಲಿಲ್ಲ? ಏಕೆಂದರೆ ಇಪ್ಪತ್ತೈದು ನೂರು ವರ್ಷಗಳ ಹಿಂದೆ ಶಾಕ್ಯಮುನಿಗಳು ಧರ್ಮಪ್ರಚಾರ ಮಾಡಿದಾಗ ಮಾನವ ಸಮಾಜವು ಬಹಳ ಕನಿಷ್ಠ ಪ್ರಗತಿಯನ್ನು ಹೋಮದಿತ್ತು. ಕೆಲವೆಡೆ ವ್ಯವಸಾಯವನ್ನು ಮಾಡುತ್ತಿದ್ದರು. ಕೆಲವೆಡೆ ಅದೂ ಸಹ ಇರಲಿಲ್ಲ. ವ್ಯವಸಾಯ ಮಾಡುವಂತಹ ಭೂಮಿ ಬಹಳ ಕಡಿಮೆಯಿತ್ತು. ಮತ್ತು ಎಲ್ಲೆಲ್ಲೂ ಕಾಡಿತ್ತು. ಆಹಾರ ಧಾನ್ಯಗಳ ಪೂರೈಕೆ ಕಡಿಮೆಯಿತ್ತು. ಮತ್ತು ಅತ್ಯಂತ ವಿರಳವಾಗಿತ್ತು. ಮಾನವರು ಆಗಷ್ಟೇ ಆದಿಕಾಲದ ಸಮಾಜದಿಂದ ಹೊರಬರುತ್ತಿದ್ದರು. ಮತ್ತು ಮುಖ್ಯವಾಗಿ ಬೇಟೆಯಿಂದ ತಮ್ಮ ಜೀವನ ಸಾಗಿಸುತ್ತದ್ದರು. ಎಷ್ಟೋ ಕ್ಷೇತ್ರಗಳಲ್ಲಿ ಜನರು

ಮುಖ್ಯವಾಗಿ ಮಾಂಸಹಾರದ ಮೇಲೆ ಅವಲಂಭಿತವಾಗಿರುತ್ತಿದ್ದರು. ಆದಷ್ಟು ಮಾನವರ ಮೋಹವನ್ನು ಬಿಡಿಸಲೋಸುಗ ಶಾಕ್ಯಮುನಿಗಳು, ಅವರ ಶಿಷ್ಯರು ಹಣವನ್ನು ಪಡೆಯಲಾಗಲಿ ಪ್ರಾಪಂಚಿಕ ವಸ್ತುಗಳಾಗಲಿ ಪಡೆಯುವುದನ್ನು ನಿಷೇಧಿಸಿದ್ದರು. ಅವರು ತಮ್ಮ ಅನುಯಾಯಿಗಳನ್ನು ಕರೆದುಕೊಂಡು ಬಿಕ್ಷೆ ಬೇಡಲು ಹೋಗುತ್ತಿದ್ದರು. ಅವರಿಗೆ ಏನು ಬಿಕ್ಷೆ ಸಿಗುತ್ತಿತ್ತೋ ಅದನ್ನೇ ತಿನ್ನುತ್ತಿದ್ದರು. ಅಭ್ಯಾಸಿಗರಾಗಿ ಅವರು ತಮ್ಮ ಆಹಾರವನ್ನು ಆರಿಸಿಕೊಳ್ಳಲಾಗುತ್ತಿರಲಿಲ್ಲ. ಇದು ಮಾಂಸವನ್ನು ಸಹ ಒಳಗೊಂಡಿರುತ್ತದೆ.

ಮೂಲ ಬೌದ್ಧ ಧರ್ಮದಲ್ಲಿ ಹನ್ (hun) ಆಹಾರದ ನಿಷೇಧವಿತ್ತು. ಈ ಹನ್‌ನ ನಿಷೇಧವು ಮೂಲ ಧರ್ಮದಲ್ಲಿತ್ತು. ಆದರೆ ಈಗ ಮಾಂಸವನ್ನು ತಿನ್ನುವುದು ಹನ್ ಎನ್ನಲಾಗಿದೆ. ಪ್ರತ್ಯಕ್ಷವಾಗಿ ಆ ಕಾಲದಲ್ಲಿ ಹನ್ ಮಾಂಸಕ್ಕೆ ಸಂಬಂಧಿಸಿದ್ದಾಗಿರಲಿಲ್ಲ.

ಆದರೆ ಈರುಳ್ಳಿ, ಶುಂಠಿ ಮತ್ತು ಬೆಳ್ಳುಳ್ಳಿಯಂತಹ ಸಂಗತಿಗಳದ್ದಾಗಿತ್ತು. ಅವುಗಳನ್ನು ಹನ್ ಎಂದು ಏಕೆ ಪರಿಗಣಿಸಲಾಗಿತ್ತು? ಈ ದಿನಗಳಲ್ಲಿ ಎಷ್ಟೋ ಸನ್ಯಾಸಿಗಳು ಇದನ್ನು ಸ್ಪಷ್ಟವಾಗಿ ವಿವರಿಸಲಾರದವರಾಗಿದ್ದಾರೆ. ಏಕೆಂದರೆ ಅವರಲ್ಲಿ ಎಷ್ಟೋ ಮಂದಿ ನಿಜವಾದ ಅಭ್ಯಾಸವನ್ನು ಮಾಡುವುದಿಲ್ಲ. ಎಷ್ಟೋ ವಿಷಯಗಳು ಅವರಿಗೆ ಸ್ಪಷ್ಟವಾಗಿ ತಿಳಿದಿಲ್ಲ. ಶಾಕ್ಯಮುನಿಗಳು ಏನು ಹೇಳಿದ್ದಾರೋ ಅದನ್ನು ವಿಧಿ/ದೈವಾಜ್ಞೆ, ಸಮಾಧಿ, ಚಾತುರ್ಯ ಎಂದು ಕರೆಯಲಾಗಿದೆ. ಪ್ರತಿದಿನದ ಜನಗಳ ಬಂಧನವನ್ನು ಕಳಚಿಕೊಳ್ಳುವುದೇ ವಿಧಿಯಾಗಿದೆ. ಸಮಾಧಿಯೆಂದರೆ ಒಬ್ಬ ಅಭ್ಯಾಶಿಗನು ಸಂಪೂರ್ಣವಾದ ಯೋಗ ಸಮಾಧಿಯಲ್ಲಿ ಮತ್ತು ಧ್ಯಾನದಲ್ಲಿ ಕುಳಿತು ಅಭ್ಯಾಸವನ್ನು ಮಾಡುವುದು. ವ್ಯಕ್ತಿಯು ಸಂಪೂರ್ಣವಾಗಿ ಯೋಗಸಮಾಧಿಯಲ್ಲಿರಬೇಕು. ಏನಾಧರೂ ಕಾರಣದಿಂದ ವ್ಯಕ್ತಿಯ ಯೋಗಸಮಾಧಿ ಮತ್ತು ಅಭ್ಯಾಸಕ್ಕೆ ತೊಂದರೆಯಾದಲ್ಲಿ ಅದನ್ನು ಗಂಭೀರ ಅಡ್ಡಬರುವಿಕೆಯೆಂದು ಪರಿಗಣಿಸಲಾಗುತ್ತದೆ. ಯಾರು ಈರುಳ್ಳಿ, ಶುಂಠಿ ಅಥವಾ ಬೆಳ್ಳುಳ್ಳಿಯನ್ನು ತಿಂದಿದ್ದರೆ ಅವರ ಬಳಿ ಕಟುವಾಸನೆಯಿರುತ್ತದೆ. ಆ ಕಾಲದಲ್ಲಿ ಸನ್ಯಾಸಿಗಳು  ಸಾಮಾನ್ಯವಾಗಿ ಕಾಡುಗಳಲ್ಲಿಯೇ ಅಥವಾ ಗುಹೆಗಳಲ್ಲೋ ಇರುತ್ತದ್ದರು. 7 ಅಥವಾ 8 ಜನರು ಗುಂಪಾಗಿ ಕುಳಿತುಕೊಳ್ಳುತ್ತಿದ್ದರು. ಮತ್ತು ಅವರೆಲ್ಲರೂ ಎಷ್ಟೋ ವರ್ತುಲಗಳಲ್ಲಿ ಧ್ಯಾನಮಾಡಲು ಕುಳಿತುಕೊಳ್ಳುತ್ತಿದ್ದರು. ಇಂತಹ ಪದಾರ್ಥಗಳನ್ನು ವ್ಯಕ್ತಿಯು ತಿಂದಿದ್ದಲ್ಲಿ, ಧ್ಯಾನಾಸಕ್ತರಾಗಿ ಕುಳಿತಿರುವವರನ್ನು ಈ ಕಟುವಾಸನೆಯು ಕೆಣಕುತ್ತದೆ. ಮತ್ತು ಅವರ ಅಭ್ಯಾಸದಲ್ಲಿ ಗಂಭೀರ ಅಡ್ಡಬರುವಿಕೆಯಗಿರುತ್ತದೆ. ಆದ್ದರಿಂದ ಈ ನಿಯಮವನ್ನು ಮಾಡಲಾಯಿತು. ಅಂತಹ ಆಹಾರವನ್ನು ಹನ್ ಎಂದು ಕರೆಯಲಾಯಿತು. ಅದನ್ನು ನಿಷೇಧಿಸಲಾಯಿತು. ತಮ್ಮ ದೇಹವನ್ನು ದಂಡಿಸಿ ಅಭ್ಯಾಸವನ್ನು ಮಾಡಿದ ಎಷ್ಟೋ ವ್ಯಕ್ತಿಗಳು ಅಂತಹ ಕರುವಾಸನೆಯಿಂದ ವಿಕರ್ಷಣಗೊಳ್ಳುತ್ತಾರೆ. ಈರುಳ್ಳಿ, ಶುಂಠಿ ಮತ್ತು ಬೆಳ್ಳುಳ್ಳಿಯ ವಾಸನೆಯು ವ್ಯಕ್ತಿಗೆ ತಿನ್ನುವ ಉತ್ಕಟವಾದ ಉತ್ತೇಜನವನ್ನೀಯುತ್ತದೆ, ಯಾರಾದರೂ ಅದನ್ನು ಹೆಚ್ಚಾಗಿ ಸೇವಿಸಿದರೆ, ಅದಕ್ಕೆ ವಶವಾಗುತ್ತಾನೆ. ಆದ್ದರಿಂದಲೇ ಅವುಗಳನ್ನು ಹನ್ ಎಂದು ಪರಿಗಣಿಸಲಾಗಿದೆ.

ಹಿಂದಿನ ಕಾಲದಲ್ಲಿ ಉನ್ನತ ಹಂತದ ಅಭ್ಯಾಸವನ್ನು ಮುಟ್ಟಿದನಂತರ ಮತ್ತು ಕೃಷಿಶಕ್ತಿಯನ್ನು ಬೇದಿಸುವ ಸ್ಥಿತಿಯನ್ನು ತಲುಪಿದಾಗ ಅಥವಾ ಸ್ವಲ್ಪಮಟ್ಟದ ಕೃಷಿ ಶಕ್ತಿಯನ್ನು ತಲುಪಿದಾಗ ಅಭ್ಯಾಸವನ್ನು ಮಾಡುವಾಗ ಖಂಡಿತವಾಗಿಯೂ ಈ ನಿಯಮಗಳನ್ನು ಪರಿಗಣಿಸುವುದಿಲ್ಲವೆಂದು ಎಷ್ಟೋ ಸನ್ಯಾಸಿಗಳು ಗ್ರಹಿಸಿಕೊಂಡಿದ್ದಾರೆ. ಈ ಬಂಧನವನ್ನು ತ್ಯಜಿಸಿದರೆ, ಆ ವಸ್ತುವಿನಿಂದ ಈ ಬಂಧನವನ್ನು ತ್ಯಜಿಸಿದರೆ, ಆ ವಸ್ತುವಿನೀಮದ ಈ ಬಂಧನವನ್ನು ತ್ಯಜಿಸಿದರೆ, ಆ ವಸ್ತುವಿನಿಂದ ಯಾವ ಪರಿಣಾಮವೂ ಆಗುವುದಿಲ್ಲ. ಒಬ್ಬ ವ್ಯಕ್ತಿಯನ್ನು ಅಡ್ಡಪಡಿಸುವುದೂ ಬಂಧನವೇ ಆದ್ದರೀಮ ಇತಿಹಾಸದ ಕೊನೆಯವರೆಗೆ ಕುಶಲ ಸನ್ಯಾಸಿಗಳೂ ಸಹ ಈ ಮಾಂಶತಿನ್ನುವ ವಿಚಾರವು ಸಂದಿಗ್ಧ ವಿವಾದಾಂಶವಲ್ಲವೆಂಬುದನ್ನು ಕಂಡುಕೊಮಡಿದ್ದಾರೆ. ಮುಖ್ಯ ಪ್ರಶ್ನೆಯೇನೆಂದರೆ ಈ ಬಂಧನದಿಂದ ಕಳಚಿಕೊಳ್ಳಲಾಗುವುದೋ ಇಲ್ಲವೋ ಎಂಬುದೇ ಯಾವುದೇ ಬಂಧನವಿಲ್ಲದಿದ್ದರೆ ಹೊಟ್ಟೆ ತುಂಬಿಸಿಕೊಳ್ಳಲು ಏನನ್ನಾದರೂ  ತಿನ್ನಬಹುದು. ಅಂದಿನಿಂದಲೂ ದೇಔಸ್ಥಾನಗಳಲ್ಲಿನ ಅಭ್ಯಾಶವು ಒಂದು ನಿಶ್ಚಿತ ಮರ್ಗದಲ್ಲಿರುತ್ತದೆ. ಎಷ್ಟೋ ಜನರು ಈಗಾಗಲೇ ಈ ಪದ್ದತಿಗಳಿಗೆ ಹೊಂದಿಕೊಂಡಿದ್ದಾರೆ.

ಜೊತೆಗೆ ಇದು ಇನ್ನು ಮುಂದೆ ಒಂದು ನಿಯಮವಾಗಿರಬೇಕಾದ ಸಾಮಾನ್ಯ ವಿಷಯವಲ್ಲ. ಆದರೆ ದೇವಾಲಯಗಳಲ್ಲಿ ಮಾಂಸವನ್ನು ತಿನ್ನಬಾರದೆಂಬ ರಾಜಶಾಸನದಿಂದ ರಕ್ಷಿತ ಕಟ್ಟುಪಾಡುಗಳುಂಟು. ಆದ್ದರಿಂದ ಈ ಮಾರ್ಗದಿಂದ ಮಾಡುವ ಅಭ್ಯಾಸಕ್ಕೆ ಜನಗಳು ಹೊಂದಿಕೊಂಡಿದ್ದಾರೆ. ಸಾಹಿತ್ಯದ ಕೃತಿಗಳನ್ನು ಬರೆದಂತಹ **ಜಿಗಾಂಗ್** (Jigong) ಸನ್ಯಾಸಿಗಳ ಬಗ್ಗೆ ಮಾತನಾಡೋಣ. ಸನ್ಯಾಸಿಗಳು ಮಾಂಸವನ್ನು ತಿನ್ನಬಾರದು ಆದರೆ ಆತನು ಮಾಂಸವನ್ನು ತಿಂದಿದ್ದಾನೆ. ಆದ್ದರಿಂದ ಎಲ್ಲರೂ ಆತನನ್ನು ಗುರುತಿಸುತ್ತಾರೆ. ಸತ್ಯವೇನೆಂದರೆ ಆತನನ್ನು ಲಿಂಗ್‌ಯಿನ್ (Lingyin) ದೇವಾಲಯದಿಂದ ಹೊರದೂಡಿದ್ದರಿಂದ ಆಹಾರದ ಸರಬರಾಜು ಸ್ವಾಭಾವಿಕವಾಗಿ ಗಂಭೀರ ಸಮಸ್ಯೆಯಗಿತ್ತು. ಏಕೆಂದರೆ ಆತನು ಬದುಕುಳಿದಿರುವುದೇ ಪೇಜಿನಲ್ಲಿತ್ತು. ತನ್ನ ಹೊಟ್ಟೆಯನ್ನು ತುಂಬಲೋಸುಗ ಆತನಿಗೆ ಏನು ಸಿಕ್ಕಿತ್ತೋ ಅದನ್ನತ ತಿಂದಿದ್ದ: ಅದನ್ನೇನು ತುಂಬ ಲೋಸುಗ ಆತನಿಗೆ ಏನು ಸಿಕ್ಕತೋ ಆದನ್ನಾತ ತಿಂದಿದ್ದ. ಅದನ್ನೇನು ಪರಿಗಣಿಸುವುದಿಲ್ಲ. ಏಕೆಂದರೆ ತನ್ನ ಹೊಟ್ಟೆಯನ್ನು ತುಂಬಿಸಲೋಸುಗ ಆ ಆಹಾರಕ್ಕೆ ಯಾವುದೇ ಪ್ರೇಮವಿಲ್ಲದೆ ತಿಂದಿದ್ದ. ಆ ಅಭ್ಯಾಸದ ಹಂತದಲ್ಲಿ ಆತನು ಈ ಮೂಲತತ್ವವನ್ನು ಅರ್ಥೈಮಾಡಿಕೊಮಡಿದ್ದ. ಜಿಂಗ್‌ಜಾಂಗ್ ಒಂದೋ ಅಥವಾ ಎರಡೋ ಬಾರಿಯೋ ಮಾಂಸವನ್ನು ತಿಂದಿದ್ದ. ಸನ್ಯಾಸಿಗಳು ಮಾಂಸವನ್ನು ತಿನ್ನುವ ವಿಷಯವನ್ನು ಕೇಳಿ ಬರಹಗಾರರು ಉದ್ರೇಕ ಗೊಂಡರು. ಅದು ಹೆಚ್ಚು ಗಾಬರಿಹುಟ್ಟಿಸುವಂತಹ ವಿಷಯ. ಅಷ್ಟೇ ಓದುಗರಲ್ಲಿ ಅಭಿರುಚಿ ಯನ್ನು ಹೆಚ್ಚಿಸುತ್ತದೆ. ಸಾಹಿತ್ಯದ ಕೃತಿಗಳು ಜೀವನದ ಘಟನೆಗಳ ಮೇಲೆ ಆಧಾರವಾಗಿದೆ. ಅಥವಾ ಅದಕ್ಕಿಂತಲೂ ಹಿಂದೆ ಹೋಗುತ್ತದೆ. ಆತನು ಹೀಗೆ ಪ್ರಸಿದ್ಧಿಗೊಳ್ಳುತ್ತಾನೆ.

ಸತ್ಯವೇನೆಂದರೆ ಈ ಬಂಧನದಿಂದ ಕಳಚಿಕೊಂಡರೆ ವ್ಯಕ್ತಿಯು ತನ್ನ ಹೊಟ್ಟೆಯನ್ನು ತುಂಬಿಸಿಕೊಳ್ಳಲು ಏನು ತಿನ್ನುತ್ತಾನೆಂಬುದು ಪರಿಗಣನೆಗೆ ಬರುವುದಿಲ್ಲ.

ಸೌತ್ ಈಸ್ಟ್ ಏಷಿಯಾದಲ್ಲಿ **ಗಾಂಗ್‌ಡಾಂಗ್ ಮತ್ತು ಗಾಂಗ್‌ರಿಕ್** (Gong dong and Guangric) ಕ್ಷೇತ್ರಗಳಲ್ಲಿ ಕೆಲವು ಲೇ ಬೌದ್ಧೀಯರು ಒಮ್ಮೆ ಮಾತುಕ\ಕತೆಯ ಮಧ್ಯದಲ್ಲಿ ತಮ್ಮನ್ನು ತಾವೇ ಬೌಧ್ಧಿಯರೆಂದು ಕರೆದುಕೊಳ್ಳಲಾಗುವುದಿಲ್ಲ. ಏಕೆಂದರೆ ಇದು ಬಹಳ ಹಲೆಯ ಸಂಪ್ರದಾಯವೆನಿಸುತ್ತದೆ. ಎಂದು ಹೇಳಿದರು. ತಾವು ಬೌದ್ಧ ನಿಯಮದಂತೆ ಆಹಾರವನ್ನು ಸೇವಿಸುತ್ತೇವೆಂದು ಆವರು ಹೇಳುತ್ತಾರೆ. ಇದು ಏನು ಎಂದರೆ ಅವರು ಸಸ್ಯಹಾರಿಗಳೆಂದು ಹೇಳುತ್ತಾರೆ. ಇದೇನೆಂದರೆ ಅವರು ಸಸ್ಯಹಾರಿ ಬೌದ್ಧರೆಂದು ಇದು ಸೂಚಿಸುತ್ತದೆ. ಬೌದ್ಧ ಅಬ್ಯಾಸವನ್ನು ಇದೊಮದು ಸಾಮಾನ್ಯ ಸಂಗತಿಯೆಂಬಂತೆ ಪರಿಗಣಿಸುತ್ತಾರೆ. ಸಸ್ಯಾಹಾರಿಯಾದ ಮಾತ್ರಕ್ಕೆ ಅದು ಹೇಗೆ ಬೌದ್ಧತೆಯನ್ನು ಅಭ್ಯಾಸಮಾಡುವ ಸಮರ್ಥತೆಯುಂಟಾಗುತ್ತದೆ? ಮಾಂಸವನ್ನು ತಿನ್ನುವುದು ಒಂದು ಬಂಧನ ಮತ್ತು ಇಚ್ಚೆ ಇದು ಕೇವಲ ಒಂದು ಬಂಧನ ಸಸ್ಯಹರಿಯಾಗಿರುವುದರಿಂದ ಮಾತ್ರ ಈ ಬಂಧನದಿಂದ ಕಳಚಿಕೊಳ್ಳಲು ಸಾಧ್ಯ. ವ್ಯಕ್ತಿಯು ಮತ್ಸರವನ್ನು ತ್ಯಜಿಸಬೇಕಾದ ಅವಶ್ಯಕತೆಯಿದೆ. ಸ್ಪರ್ದಾತ್ಮಕ ಮನೋಸ್ಥಿತಿ ಮತಾಂಧತೆಯ ಪ್ರೇಮ, ಪ್ರಕಟಗೊಳ್ಳಬೇಕೆಂಬ ಮನೋಸ್ಥಿತಿ ಮತ್ತು ಇನ್ನೂ ಹಲವು ಬಂಧನಗಳು ಮಾನವರ ಬಂಧನಗಳು ಬಹಳಷ್ಟಿದೆ. ಎಲ್ಲಾ ರೀತಿಯ ಬಂಧನಗಳು ಮತ್ತು ಇಚ್ಚೆಯನ್ನು ತ್ಯಜಿಸುವುದರ ಮೂಲಕ ಮಾತ್ರ ವ್ಯಕ್ತಿಯು ಅಟಭ್ಯಾಸವನ್ನು ಮಾಡಲು ಸಾಧ್ಯ. ಕೇವಲ ಮಾಂಸ ತಿನ್ನುವುದನ್ನು ತ್ಯಜಿಸಿಬಿಟ್ಟರೆ ಬೌಧ್ಧೀಯತೆಯನ್ನು ಅಭ್ಯಾಸಮಾಡಲಾಗುತ್ತದೆಯೇ ಈ ರೀತಿಯ ಹೇಳಿಕೆ ಸರಿಯಲ್ಲ.

ಆಹಾರದ ವಿವಾದದ ಬಗ್ಗೆ ಹೇಳುವುದಾದರೆ ಮಾಂಸವನ್ನು ತಿನ್ನುವುದರ ಜೊತೆಗೆ ವ್ಯಕ್ತಿ ಯಾವುದೇ ವಿಧದ ಆಹಾರದ ಬಗ್ಗೆ ಅಕ್ಕರೆಯನ್ನು ಬೆಳೆಸಿಕೊಳ್ಳಬಾರದು. ಇತರ ವಿಷಯಗಳೊಂದಿಗೂ ಸಹ ಇದು ಸತ್ಯವೆಂದು ಕೆಲವು ಮಂದಿ ಹೇಳುತ್ತಾರೆ. ಒಂದು ನಿರ್ಧಿಷ್ಟ ರೀತಿಯ ಅಪೇಕ್ಷೆ ಒಂದು ನಿರ್ಧಿಷ್ಟ ಹಂತದ ಅಭ್ಯಾಸವನ್ನು ತಲುಪಿದಾಗ ಅಭ್ಯಾಸಿಗನಿಗೆ ಈ ಯಾವ ರೀತಿಯ

---

1. **ಜಿಗಾಂಗ್** – ಭೌದ್ಧ ಸನ್ಯಾಸಿ. **ಗಾಂಗ್‌ಡಾಂಗ್ ಮತ್ತು ಗಾಂಗ್‌ರಿಕ್** – ದಕ್ಷಿಣ ಚೀನಾದ ಎರಡು ಪ್ರಾಂತ್ಯಗಳು.

ಮೋಹವಿರುವುದಿಲ್ಲ. ಬಹುಶಃ 'ಫಾ' ವನ್ನು ಅತ್ಯಂತ ಉನ್ನತ ಮಟ್ಟದಲ್ಲಿ ಬೋಧಿಸಿರುತ್ತೇವೆ ಮತ್ತು ಎಲ್ಲಾ ಹಂತಗಳನ್ನು ಸಂಯೋಜಿಸಿ ಬೋಧಿಸಿರುತ್ತೇವೆ. ಒಮ್ಮೇಲೇ ಒಬ್ಬ ವ್ಯಕ್ತಿಗೆ ಈ ಮೆಟ್ಟಿಲನ್ನೇರುವುದು ಸಾಧ್ಯವಾಗುವುದಿಲ್ಲ. ಆ ನಿರ್ಧಿಷ್ಟ.

ಆಹಾರವನ್ನೇ ನಾನು ತಿನ್ನಬೇಕೆಂಬ ಹಕ್ಕನ್ನು ನಾವು ಚಲಾಯಿಸುವಿರಿ. ಆದರೆ ಆ ಒಂದು ಬಂಧನವನ್ನು ಬಿಡಿಸಿಕೊಳ್ಳುವಂತಹ ಸಮಯ ಅಭ್ಯಾಸಲ್ಲಿ ಬಂದಾಗ ನೀವು ಆ ಆಹಾರ ಪದಾರ್ಥವನ್ನು ತಿನ್ನಲಾಗುವುದಿಲ್ಲ. ನೀವು ಅದನ್ನು ತಿಮದರೆ ಅದರ ಸವಿ ನಿಮಗುಂಟಾಗುವುದಿಲ್ಲ. ಇತರ ಆಹಾರ ಪದಾರ್ಥಗಳಂತೆ ಇದು ಸಹ ಇರುತ್ತದೆ. ನಾನು ಕೆಲಸಕ್ಕೆ ಹೋಗುತ್ತಿದ್ದಾಗ ಅಲ್ಲಿದ್ದಂತಹ ಕೆಫೆಟೇರಿಯಾಗೆ ನಷ್ಟವಾಯಿತು. ಆದ್ದರಿಮದ ಅದನ್ನು ಮುಚ್ಚಿಬಿಟ್ಟರು. ಅದನ್ನು ಮುಚ್ಚಿದ ನಂತರ ಪ್ರತಿಯೊಬ್ಬರೂ ಕೆಲಸಕ್ಕೆ ಹೋಗುತ್ತಿದ್ದಾಗ, ಅಲ್ಲಿದಂತಹ ಕೆಫೆಟೇರಿಯಾಗಿ ನಷ್ಟವಾಯಿತು. ಆದ್ದರಿಂದ ಅದನ್ನು ಮುಚ್ಚಿಬಿಟ್ಟರು. ಅದನ್ನು ಮುಚ್ಚಿದ ನಂತರ ಪ್ರತಿಯೊಬ್ಬರೂ ಕೆಲಸಕ್ಕೆ ಬರುವಾಗ ಊಟವನ್ನು ತರುತ್ತಿದ್ದರು. ಇದು ಕಷ್ಟಕರವಾಗಿತ್ತು ಮತ್ತು ಬೆಳಗಿನ ಹೊತ್ತು ಊಟವನ್ನು ತಯಾರಿಸಲು ಬಹಳ ಗಡಿಬಿಡಿಯಾಗುತ್ತಿತ್ತು. ಕೆಲವು ಬಾರಿ ನಾನು ಆವಿಯಿಂದ ಬೇಯಿಸಿದಂತಹ ಎರಡು ಬನ್ನುಗಳನ್ನು ಮತ್ತು ಒಂದು ತುಂಡು ಟೋಫು (Tofu)ಸೋಯಾ ಸಾಸಿನಲ್ಲಿ ಅದ್ದಿ ತಿನ್ನುತ್ತಿದೆ. ವಿಚಾರಸರಣಿಯಲ್ಲಿ ಇದೊಂದು ಹಗುರವಾದ ಊಟ.. ಆದರೆ ಯಾವಾಗಲೂ ಇದನ್ನೇ ತಿನ್ನುವುದು ಸಹ ಒಳ್ಳೆಯದಲ್ಲ. ಏಕೆಂದರೆ ಈ ಮೋಹದಿಂದ ಕಳಚಿಕೊಳ್ಳಬೇಕು. ಮತ್ತೊಮ್ಮೆ ನಾನು ತಿನ್ನಲು ಬಯಸಿದಾಗ ನಾನು ತಿನ್ನಲಾಗಲಿಲ್ಲ. ಆದರೆ ನಾನು ಅದಕ್ಕೆ ಅಕ್ಕರೆಯನ್ನು ಬೆಳೆಸಿಕೊಂಡಿದ್ದು ಬಹುಶಃ ಇದು ಒಬ್ಬ ವ್ಯಕ್ತಿಯ ಒಂದು ನಿರ್ಧಿಷ್ಟ ಹಂತದ ಅಭ್ಯಾಸ ಮಟ್ಟವನ್ನು ತಲುಪಿದಾಗ ಮಾತ್ರ ಹೀಗಾಗುತ್ತದೆ. ಆರಂಭದಲ್ಲಿ ಇದು ಈ ರೀತಿಯಾಗಿರುವುದಿಲ್ಲ.

ಬೌದ್ಧ ಶಾಲೆಯು ಮಧ್ಯಸೇವನೆಗೆ ಅನುಮತಿ ನೀಡುವುದಿಲ್ಲ. ಬುದ್ಧನು ವೈನ್ ಕಂಟೇನರ್ (ವೈನ್ ಹೋಮದಿರುವಂತಹ ಪಾತ್ರ) ಹೊತ್ತುಕೊಂಡು ಹೋಗುತ್ತಿರುವುದನ್ನು ಕಂಡಿದ್ದೀರಾ? ಇಲ್ಲಿ ವ್ಯಕ್ತಿಗೆ ಮಾಂಸವನ್ನು ತಿನ್ನಲು ಆಗದಿರಬಹುದು. ಆದರೆ ವ್ಯಕ್ತಿಯು ಪ್ರತಿದಿನದ ಜನರ ಮಧ್ಯೆ/ನಡುವೆ ಅಭ್ಯಾಸವನ್ನು ಮಡುತ್ತಿದ್ದಾಗ ಈ ಬಂಧನದಿಂದ ಕಳಚಿಕೊಂಡರೆ ಮತ್ತೆಂದಾದರೂ ಮಾಂಸವನ್ನು ತಿನ್ನಬೇಕಾಗಿ ಬಂದಲ್ಲಿ ಯವುದೇ ಸಮಸ್ಯೆಯಾಗುವುದಿಲ್ಲ. ಮಧ್ಯವನ್ನು ಒಮ್ಮೆ ಕುಡಿಯುವುದನ್ನು ಬಿಟ್ಟ ನಂತರ ಏನಾದರೂ ಮತ್ತೊಮ್ಮೆ ಕುಡಿಯಬಾರದು. ಅಭ್ಯಾಸಿಗನಿಗೆ ತನ್ನ ದೇಹದಲ್ಲಿ ಕೃಷಿಶಕ್ತಿಯಿಲ್ಲವೇ? ವಿಭಿನ್ನ ರೀತಿಯ ಕೃಷಿಶಕ್ತಿ ಮತ್ತು ಕೆಲವು ಹೆಚ್ಚಿನ ಕ್ರಮಬದ್ಧವಾದ ಸಾಮರ್ಥ್ಯಗಳು ನಿಮ್ಮ ದೇಹದ ಮೇಲ್ಮೈಯಲ್ಲಿ ಕಾಣಿಸಿಕೊಳ್ಳುತ್ತದೆ.

ಮತ್ತು ಅದೆಲ್ಲಾ ಶುದ್ಧವಾಗಿರುತ್ತದೆ. ನೀವು ಮಧ್ಯವನ್ನು ಸೇವಿಸಿದೊಡನೆಯೇ ಅವೆಲ್ಲವೂ ನಿಮ್ಮ ದೇಹದಿಂದ ಹೊರಹೋಗುತ್ತದೆ. ಒಂದೇ ಕ್ಷಣದಲ್ಲಿ ನಿಮ್ಮ ದೇಹದಲ್ಲಿ ಏನೂ ಉಳಿದಿರುವುದಿಲ್ಲ. ಏಕೆಂದರೆ ಈ ಕಟುವಾಸನೆಗೆ ಅದೆಲ್ಲಾ ಹೆಸರುತ್ತದೆ.ಈ ದುರಾಬ್ಯಾಸವನ್ನು ನೀವು ರೂಡಿ ಮಾಡಿಕೊಂಡರೆ ಇದು ಅತ್ಯಂತ ಹೇಸಿಗೆಯ ಕೆಲಸ ಏಕೆಂದರೆ ಮಧ್ಯವನ್ನು ಕುಡಿಯುವುದರಿಂದ ಅದು ವ್ಯಕ್ತಿಯನ್ನು ವಿಚಾರಹೀನ ನನ್ನಾಗಿಸುತ್ತದೆ. ಏಕೆ ಕೆಲವು 'ಗ್ರೇಟ್ ತಾವೋಸ್ಟ್' ( Great Taoist ) ಅಭ್ಯಾಸದ ಆಚರಣೆಯಲ್ಲಿ ಮಧ್ಯಸೇವನೆಯು ಅವಶ್ಯವಾಗಿರುತ್ತದೆ. ಇದು ಏಕೆಂದರೆ ಅವರು ಮುಖ್ಯ ಆತ್ಮದ ಅಭ್ಯಾಸವನ್ನು ಮಾಡುವುದಿಲ್ಲ. ಮತ್ತು ಕುಡಿಯುವುದು ವ್ಯಕ್ತಿಯ ಮುಖ್ಯ ಆತ್ಮವು ಜಾಗೃತಾವಸ್ಥೆಯನ್ನು ಕಳೆದುಕೊಳ್ಳುತ್ತದೆ.

ಕೆಲವರು ತಮ್ಮ ಜೀವನವನ್ನು ಎಷ್ಟು ಪ್ರೀತಿಸುತ್ತಾರೋ ಅಷ್ಟು ಮಧ್ಯವನ್ನು ಪ್ರೀತಿಸುತ್ತಾರೆ. ಕೆಲವರು ಮಧ್ಯ ಸೇವಿಸುವುದನ್ನು ಆಸ್ವಾದಿಸುತ್ತಾರೆ. ಕೆಲ ವ್ಯಕ್ತಿಗಳು ಮಧ್ಯಸೇವನೆಯನ್ನು ಮಾಡಿ ತಮ್ಮ ದೇಹವನ್ನು ವಿಷಯುಕ್ತವನ್ನಾಗಿ ಮಾಡಿಕೊಂಡಿದ್ದಾರೆ. ಮತ್ತು ಕುಡಿಯದೇ ಅವರು ತಮ್ಮ ಅನ್ನದ ತಟ್ಟೆಯನ್ನು ಸಹ ಎತ್ತಲಾಗುವುದಿಲ್ಲ. ಸ್ವಲ್ಪ ಕುಡಿಯದಿದ್ದರೆ ಅವರಿಗೆ ಏನೂ ಮಾಡಲಾಗುವುದಿಲ್ಲ.

ಅಭ್ಯಾಸಿಗರಾಗಿ ನಾವು ಈ ಮಾರ್ಗವನ್ನು ಅನುಸರಿಸಬಾರದು. ಮಧ್ಯವನ್ನು ಸೇವಿಸುವುದು ಖಂಡಿತವಾಗಿ ದುರಭ್ಯಾಶವೇ ಇದೂ ಒಂದು ಅಪೇಕ್ಷೆ ಮತ್ತು ದುರಭ್ಯಾಸದ ನರಗಳನ್ನು ಇದು ಉತ್ತೇಜಿಸುತ್ತದೆ. ಹೆಚ್ಚು ಕುಡಿಯುವಂತಹ ವ್ಯಕ್ತಿ ಹೆಚ್ಚು ಹೆಚ್ಚಾಗಿ (ದುರಾಭ್ಯಾಸಕ್ಕೆ) ಅಂಟಿಕೊಳ್ಳುತ್ತಾನೆ. ಇದರ ಬಗ್ಗೆ ಯೋಚಿಸುವ: ಅಭ್ಯಾಶಿಗರಾಗಿ ನಾವು ಈ ಅಕ್ಕರೆಯನ್ನು ಬಿಡಬೇಡವೇ? ಈ ಅಭ್ಯಾಸವನ್ನು ನಾವು ಬಿಟ್ಟುಬಿಡಬೇಕು. ವ್ಯಕ್ತಿಯು ಯೋಚಿಸಬಹುದು. "ಇದು ಸಾಧ್ಯವೇ ಇಲ್ಲ ಏಕೆಂದರೆ ಗ್ರಾಹಕರ ಸತ್ಕಾರವನ್ನು ಮಾಡುವುದು ನನ್ನ ಜವಾಬ್ದಾರಿ" ಅಥವಾ "ವ್ಯವಹಾರ ಸಂಪರ್ಕವನ್ನೊದಗಿಸುವುದು ನನ್ನ ಜವಾಬ್ದಾರಿ" ಮಧ್ಯವನ್ನು ಕುಡಿಯದೇ/ಕುಡಿಸದೇ ಒಂದು ವ್ಯವಹಾರವನ್ನು ಕುದುರಿಸುವುದು ಅಷ್ಟು ಸುಲಭವಲ್ಲ. ನಾನು ಹೇಳುತ್ತೇನೆ. ನಿಜವಾಗಿಯೂ ಇದರ ಅವಶ್ಯಕತೆಯಿಲ್ಲ. ಸಾಮಾನ್ಯವಾಗಿ ಒಂದು ವ್ಯವಹಾರವನ್ನು ಕುದುರಿಸುವಾಗ ವಿಶಿಷ್ಟವಾಗಿ ವ್ಯವಹಾರವನ್ನು ಮಾಡುವಾಗ ಅಥವಾ ಪರದೇಶಿಯರೊಂದಿಗೆ ವ್ಯವಹರಿಸುವಾಗ ನೀವು ಒಂದು ಸೋಡಾ ಕೇಳಬಹುದು. ಅವಳು ಅಥವಾ ಅವನು ಮಿನರಲ್‌ವಾಟರ್ ಕೇಳಬಹುದು ಮತ್ತು ಮತ್ತೊಬ್ಬ ವ್ಯಕ್ತಿಯು ಬೀರ್ ಕೇಳಬಹುದು ಯಾರೂ ನಿಮ್ಮನ್ನು ಬೀರ್ ಕುಡಿಯಿರೆಂದು ಬಲವಂತಪಡಿಸುವುದಿಲ್ಲ.

ನಿಮ್ಮ ಆಯ್ಕೆಯನ್ನು ನೀವೇ ಮಾಡಿಕೊಳ್ಳಿ ಮತ್ತು ನಿಮಗೆಷ್ಟು ಬೇಕೋ ಅಷ್ಟು ಕುಡಿಯಿರಿ. ಬುದ್ಧಿವಂತರ ನಡುವೆ ಈ ಸಂಗತಿಯು ನಡೆಯುತ್ತದೆ. ಸಾಮಾನ್ಯವಾಗಿ ಇದು ಹೀಗಾಗುತ್ತದೆ.

ಧೂಮಪಾನಮಾಡುವುದು ಸಹ ಒಂದು ಬಗೆಯ ಮೋಹ. ಕೆಲವರು ಹೇಳುತ್ತಾರೆ. ಧೂಮಪಾನ ಮಾಡುವುದರಿಮದ ಅವರಿಗೆ ಉಲ್ಲಾಸವುಂಟಾಗುತ್ತದೆಂದು ಆದರೆ ನಾನು ಇದನ್ನು ಆತ್ಮವಂಚನೆಯೆಂದು ಮತ್ತು ಇತರರಿಗೆ ಮೋಸಮಾಡುವುದೆಂದು ಕರೆಯುತ್ತೇನೆ. ಕೆಲಸ ಮಾಡಿ ಸುಸ್ತಾಗಿದ್ದಾಗ ಅಥವಾ ಏನನ್ನಾದರೂ ಬರೆದು ಸುಸ್ತಾಗಿದ್ದಾಗ ಸಿಗರೇಟನ್ನು ಸೇದುತ್ತಾ ವಿರಾಮ ಪಡೆಯಲಿಚ್ಚಿಸುತ್ತಾರೆ. ಒಂದು ಸಿಗರೇಟನ್ನು ಸೇದಿದಾಗ ವ್ಯಕ್ತಿಗೆ ಉಲ್ಲಾಸಮಯವೆನಿಸಬಹುದು. ನಿಜವೇನೆಂದರೆ ಇದು ಸತ್ಯವಲ್ಲ. ಇದು ಏಕೆಂದರೆ. ವ್ಯಕ್ತಿಯು ವಿರಾಮವನ್ನು ಪಡೆದುಕೊಂಡಿರುತ್ತಾನೆ. ಮಾನವನ ಮನಸ್ಸು ತಪ್ಪು ಭಾವನೆ ಮತ್ತು ಭ್ರಾಮತಿಯನ್ನು ಸೃಷ್ಟಿಸಬಹುದು. ಅದು ಸಿಗರೇಟನ್ನು ಸೇದುವುದರಿಂದ ನಮ್ಮನ್ನು ಉಲ್ಲಾಸಮಯರನ್ನಾಗಿಸುತ್ತದೆಂಬ ಭಾವನೆಯು ವ್ಯಕ್ತಿಗೆ ಬರಬಹುದು. ಇದು ಹಾಗೆ ಮಾಡುವುದಿಲ್ಲ. ಅಥವಾ ಈ ಪರಿಣಾಮವು ಸಹ ಆಗುವುದಿಲ್ಲ. ಧೂಮಪಾನ ಮಾಡುವುದರಿಂದ ಮಾನವನ ದೇಹಕ್ಕೆ ಯಾವ ಒಳಿತೂ ಆಗುವುದಿಲ್ಲ. ಯಾವುದೇ ವ್ಯಕ್ತಿಯು ಬಹಳ ಕಾಲದಿಂದ ಮದ್ಯಸೇವನೆಯನ್ನು ಮಾಡುತ್ತಿದ್ದಲ್ಲಿ ಸ್ವಯಂ ಪರೀಕ್ಷೆ ಮಾಡುವ ಸಮಯದಲ್ಲಿ ವೈದ್ಯನು ಈ ವ್ಯಕ್ತಿಯ ವಾಯುನಾಳ ಮತ್ತು ಶ್ವಾಸಕೋಶವು ಕಪ್ಪಾಗಿರುವುದನ್ನು ಕಂಡು ಹಿಡಿಯುತ್ತಾನೆ.

ಅಭ್ಯಾಸಿಗರಾದ ನಾವು ನಮ್ಮ ದೇಹವನ್ನು ಶುದ್ದೀಕರಿಸಿಕೊಳ್ಳಬೇಕಲ್ಲವೇ? ನಾವು ಸತತವಾಗಿ ನಮ್ಮ ದೇಹವನ್ನು ಶುದ್ದೀಕರಿಸಿಕೊಳ್ಳಬೇಕು. ಮತ್ತು ಉಚ್ಚಹಮತದೆಡೆಗೆ ಮುನ್ನಡೆಯಬೇಕು. ಆದರೂ ನೀವು ಇದನ್ನು ನಿಮ್ಮ ದೇಹದಲ್ಲಿ ಸೇರಿಸಿಕೊಳ್ಳುತ್ತೀರಿ. ಆದ್ದರಿಂದ ನೀವು ನಮ್ಮಿಂದ ವಿರುದ್ಧ ದಿಕ್ಕಿನಲ್ಲಿ ಹೋಗುತ್ತೀದ್ದೀರಿ. ಇದಕ್ಕಿಂತ ಹೆಚ್ಚೇನೆಂದರೆ ಇದೂ ಸಹ ಉತ್ಕಟ ಇಚ್ಚೆ. ಇದು ಕೆಲವರಿಗೆ ಒಳ್ಳೆಯದಲ್ಲವೆಂದೂ ಸಹ ತಿಳಿದಿದೆ. ಆದರೆ ಅವರಿಗೆ ಅದನ್ನು ತ್ಯಜಿಸಲಾಗುವುದಿಲ್ಲ. ನಿಜದಲ್ಲಿ ಅವರಿಗೆ ಮಾರ್ಗದರ್ಶನ ವನ್ನೀಯುವಂತಹ ವಿಚಾರಶಕ್ತಿಗಳು ಅವರಿಗೆ ಇರುವುದಿಲ್ಲವೆಂದು ನಾನು ನಿಮಗೆ ಹೇಳ ಬಯಸುತ್ತೇನೆ. ಅವರಿಗೆ ಆ ಮಾರ್ಗವನ್ನು ಬಿಡುವುದು ಸುಲಭವೆನಿಸುವುದಿಲ್ಲ. ಅಭ್ಯಾಸಿ ಗರಾಗಿ ಈ ಬಂಧನದಿಂದ ಕಳಚಿಕೊಳ್ಳಬೇಕೆಂದು ಏಕೆ ಅಂದುಕೊಳ್ಳುವುದಿಲ್ಲ. ಮತ್ತು ಅದನ್ನು ಕಳೆದುಕೊಳ್ಳಲಾಗುವುದೋ ನೋಡಿ. ನಾನು ಪ್ರತಿಯೊಬ್ಬರಿಗೂ ಒಂದು ಸೂಚನೆಯನ್ನು ಕೊಡುತ್ತೇನೆ. ನೀವು ನಿಜವಾಗಿಯೂ ಅಭ್ಯಾಸವನ್ನು ಮಾಡಬೇಕಿದ್ದಲ್ಲಿ ಇಂದಿನಿಂದಲೇ ನೀವು ಧೂಮಪಾನವನ್ನು ಬಿಡಬೇಕು. ಮತ್ತು ನೀವು ಧೂಮಪಾನವನ್ನು ತ್ಯಜಿಸುತ್ತೀರೆಂದು ನಂಬಿಕೆಯಿದೆ. ಈ ತರಗತಿಯ ಕ್ಷೇತ್ರದಲ್ಲಿ ಯಾರೂ ಧೂಮಪಾನ ಮಾಡುವುದರ ಬಗ್ಗೆ ಚಿಂತಿಸುವುದಿಲ್ಲ. ನೀವು ಇದರಿಂದ ಬಿಡಿಸಕೊಳ್ಳಬೇಕೆಂದುಕೊಮಡಲ್ಲಿ ನೀವು ಖಂಡಿತವಾಗಿಯೂ ಇದನ್ನು ಬಿಡುತ್ತೀರೆಂಬ ನಂಬಿಕೆಯುಂಟು. ಇನ್ನೊಮ್ಮೆ ನೀವು ಧೂಮಪಾನ ಮಾಡಿದಾಗ ಅದು ಸರಿಎನಿಸಬಹುದು. ಈ ಉಪನ್ಯಾಸವನ್ನು ಪುಸ್ತಕದಲ್ಲಿ ಓದಿದಾಗ ಅದರ ಪರಿಣಾಮವು ನಿಮ್ಮ ಮೇಲಾಗುತ್ತದೆ. ಬಹುಶ: ನಮಗೆ

ಅಭ್ಯಾಸವನ್ನು ಮಾಡಬಾರದಾಗಿದ್ದಲ್ಲಿ ನೀವು ಅದರ ಬಗ್ಗೆ ಆಸಕ್ತಿವಹಿಸುವುದಿಲ್ಲ. ಅಭ್ಯಾಸಿಗರಾಗಿ ನೀವು ಅದನ್ನು ಬಿಡಬೇಕೆಂದು ನಾನು ಚಿಂತಿಸುತ್ತೇನೆ. ಒಮ್ಮೆ ನಾನು ಈ ಉದಾಹರಣೆಯನ್ನು ಉಪಯೋಗಿಸಿದ್ದೇನೆ. ಬುದ್ಧ ಅಥವಅ ಟಾವೋ (Buddha or Tao) ಬಾಯಲ್ಲಿ ಸಿಗರೇಟನ್ನಿಟ್ಟುಕೊಂಡು ಕುಳಿತಿರುವುದನ್ನು ನೀವೆಂದಾದರೂ ಕಂಡಿದ್ದೀರಾ ? ಅದು ಹೇಗೆ ಸಾಧ್ಯ ? ಅಭ್ಯಾಸಿಗರಾಗಿ ನಿಮ್ಮ ಗುರಿಯೇನು ? ನೀವು ಅದನ್ನು ಬಿಡಲಾಗುವುದಿಲ್ಲವೇ ? ಆದ್ದರಿಂದಲೇ ನಾನು ಹೇಳಿದ್ದು, ನೀವು ಅಭ್ಯಾಸವನ್ನು ಮಾಡಬೇಕಾದರೆ ಧೂಮಪಾನವನ್ನು ಬಿಡಬೇಕು. ಇದು ನಿಮ್ಮ ದೇಹಕ್ಕೆ ಹಾನಿಯನ್ನುಂಟು ಮಾಡುತ್ತದೆ ಮತ್ತು ಇದೊಂದು ಅಪೇಕ್ಷೆ ಸಹ ಇದು ನಮ್ಮ ಅಭ್ಯಾಸಿಗನಿಗೆ ಏನು ಬೇಕೋ ಅದಕ್ಕೆ ತದ್ವಿರುದ್ಧವಾದದ್ದು.

## ಮತ್ಸರ

ಧರ್ಮಶಾಸ್ತ್ರವನ್ನು ನಾನು ಬೋಧಿಸುತ್ತಿರುವಾಗ ಆಗಾಗ್ಗೆ ನಾನು ಮತ್ಸರದ ಬಗ್ಗೆ ಮಾತನಾಡುತ್ತಿರುತ್ತೇನೆ ಮತ್ತು ಅದು ಏಕೆ ಈರ್ಷ್ಯೆಯುಂಟಾಗುತ್ತದೆ? ಏಕೆಂದರೆ ವಾಸ್ತವವಾಗಿ ಚೀನಾದಲ್ಲಿ ಮತ್ಸರವು ಬಹಷ ತೀಕ್ಷ್ಣವಾಗಿದೆ? ಅದೆಷ್ಟು ತೀಕ್ಷ್ಣವಾಗಿದೆ ಯೆಂದರೆ ಅದು ಜನಗಳಲ್ಲಿ ಸ್ವಾಭಾವಿಕವಾಗಿ ಬಿಟ್ಟಿದೆ. ಅದನ್ನು ಅವರು ಗುರುತಿಸಲು ಸಾಧ್ಯವಾಗದಂತಾಗಿದೆ. ಚೀನೀಯರು ಮಾತ್ರ ಅಷ್ಟು ತೀಕ್ಷ್ಣವಾದ ಮತ್ಸರದಿಂದಿದ್ದಾರೆ ಏಕೆ? ಅದಕ್ಕೊಂದು ಕಾರಣವಿದೆ ಹಿಂದೆ ಕಾನ್‌ಫ್ಯಷಿಯನಿಸಮ್‌ನ ಗಾಢವಾದ ಪ್ರಭಾವವು ಚೀನೀ ಜನರ ಮೇಲಾಗಿತ್ತು ಮತ್ತು ಅವರ ವ್ಯಕ್ತಿತ್ವವು ಮನೋಹರವಾದ ಅಂತರ್ಮುಖ ವಾಗಿತ್ತು. ಅವರು ಕೋಪಗೊಂಡಾಗಲೂ ಮತ್ಸರವು ಕಾಣಿಸಿಕೊಳ್ಳುವುದಿಲ್ಲ. ಮತ್ತು ಅವರು ಸಂತೋಷಗೊಂಡಾಗಲೂ ಮತ್ಸರವು ಕಾಣಿಸಿಕೊಳ್ಳುವುದಿಲ್ಲ. ಅಂದಿನಿಂದಲೂ ಇದು ಜನಗಳಲ್ಲಿ ಆಳವಾಗಿ ಬೇರುಬಿಟ್ಟಿದೆ. ಆದ್ದರಿಂದ ನಮ್ಮ ಜನರು ಒಟ್ಟಿನಲ್ಲಿ ಬಹಳ ಅಂತರ್ಮುಖ ವ್ಯಕ್ತಿತ್ವವನ್ನು ಬೆಳೆಸಿಕೊಂಡಿದ್ದಾರೆ. ಬಹುಶ: ಇದರ ಬಗ್ಗೆ ಸ್ವಲ್ಪ ಒಳ್ಳೆಯದೂ ಸಹ ಇದೆ. ಏಕೆಂದರೆ ಈರ್ಷ್ಯೆಯುಳ್ಳ ವ್ಯಕ್ತಿಯು ಸೂಕ್ಷ್ಮಬುದ್ಧಿಯವನಾಗಿರುತ್ತಾನೆ. ಆದರೆ ದುರಭಿಮಾನವಿಲ್ಲದವನಾಗಿರುತ್ತಾನೆ. ನಿಬಂಧನೆಯ ಕೊನೆಯ ಈ ಕಾಲದಲ್ಲಿ ವಿಶೇಷವಾಗಿ ಇದರ ಋಣಾತ್ಮಕ ಭಾಗವು ಹೆಚ್ಚು ಸ್ಪುಟ. ಇದು ಜನರ ಈರ್ಷ್ಯೆಯನ್ನು ಇನ್ನೂ ಹೆಚ್ಚು ಕೆಟ್ಟದ್ದಾಗಿಸುತ್ತದೆ. ಯಾರಿಗಾದರೂ ಒಳ್ಳೆಯ ವಾರ್ತೆಯಿದ್ದರೂ ಮತ್ತು ಅದನ್ನು ಅವರು ಇತರರಲ್ಲಿ ಹಂಚಿಕೊಂಡಲ್ಲಿ ಒಮ್ಮೆಲೇ ಅವರು ನಂಬಲಾರದಷ್ಟು ಈರ್ಷ್ಯೆಯನ್ನು ತೋರಿಸುತ್ತಾರೆ. ಯಾರಿಗಾದರೂ ತಮ್ಮ ಸಂಸ್ಥೆಯಿಂದಾಗಲಿ ಅಥವಾ ಇನ್ನೆಲ್ಲಾದರೂ ಪ್ರಶಸ್ತಿ ದೊರೆತರೆ ಅಥವಾ ಆತನಿಗೆ ಏನಾದರೂ ಒಳ್ಳೆಯದಾದರೆ, ಅದರ ಬಗ್ಗೆ ಒಂದೇ ಒಂದು ಮಾತನ್ನಾಡುವ ಧೈರ್ಯ ಮಾಡುವುದಿಲ್ಲ. ಏಕೆಂದರೆ ಇತರರು ಇದನ್ನು ಕೇಳಿದಾಗ ಅಧೋಮುಖರಾಗುತ್ತಾರೆ. ಪಾಶ್ಚಾತ್ಯರು ಇದನ್ನು 'ಪ್ರಾಚ್ಯಮತ್ಸರ' ಅಥವಾ 'ಏಷಿಯನ್ ಮತ್ಸರ'ವೆಂದು ಕರೆಯುತ್ತಾರೆ. "ಚೈನೀಸ್ ಕಾನ್‌ಫ್ಯುಷಿಯನಿಸಂನ ಗಾಢವಾದ ಪರಿಣಾಮವು ಸಂಪೂರ್ಣ ಏಷಿಯನ್ ಪ್ರಾಂತದ ಮೇಲಾಗಿದೆ ಮತ್ತು ಈ ಮತ್ಸರವು ತಕ್ಕ ಮಟ್ಟಿಗೆ ಎಲ್ಲೆಲ್ಲಿಯೂ ಇದೆ. ಆದರೆ ಚೈನಾದಲ್ಲಿ ಮಾತ್ರ ಇದು ಬಹಳ ಗಾಢವಾಗಿದೆ.

ನಾವು ಅಭ್ಯಾಸ ಮಾಡುತ್ತಿದ್ದಂತಹ ನಿರಂಕುಳ ಸಮತಾವಾದಕ್ಕೆ ಇದು ಸ್ವಲ್ಪ ಮಟ್ಟದ ಸಂಬಂಧವನ್ನು ಹೊಂದಿದೆ. ಆಕಾಶವು ತಲೆಯ ಮೇಲೆ ಕಳಚಿಬಿದ್ದರೆ ಪ್ರತಿಯೊಬ್ಬರೂ ಒಟ್ಟಾಗಿ ಸಾಯುತ್ತೇವೆ, ಕಟ್ಟಕಡೆಗೆ ಪ್ರತಿಯೊಬ್ಬರೂ ಒಳ್ಳೆಯದೇನಾದರೂ ಇದ್ದಲ್ಲಿ ಸಮನಾಗಿ ಹಂಚಿಕೊಳ್ಳಬೇಕು. ವೇತನನ್ನಾದರೂ ಹೆಚ್ಚಿಸಿದಲ್ಲಿ, ಪ್ರತಿಯೊಬ್ಬರಿಗೂ ಒಂದೇ ರೀತಿಯಾದ ಹಂಚಿಕೆಯಾಗಬೇಕು. ಈ ತಂತ್ರವು ಸರಿ ಎಂದು ಕಂಡು ಬರುತ್ತದೆ. ಪ್ರತಿಯೊಬ್ಬರನ್ನೂ ಸಮಾನರನ್ನಾಗಿ ಪರಿಗಣಿಸಲಾಗಿದೆ.

ಆದರೆ ಎಲ್ಲರೂ ಸಮಾನರಾಗಲು ಹೇಗೆ ಸಾಧ್ಯ? ಅವರು ವಿಧ ವಿಧವಾದ ಕೆಲಸಗಳನ್ನು ಮಾಡುತ್ತಾರೆ ಮತ್ತು ಅವರ ಜವಾಬ್ದಾರಿಗಳನ್ನು ಬಗೆಬಗೆಯ ವಿಸ್ತೀರ್ಣದಲ್ಲಿ ಪೂರೈಸಿರುತ್ತಾರೆ. ನೀವು ನೋಡಿ ನಮ್ಮ ಈ ವಿಶ್ವದಲ್ಲಿ ಒಂದು ನಿಯಮವುಂಟು ಅದನ್ನು "ಲಾಭವಿಲ್ಲ, ನಷ್ಟವಿಲ್ಲ" ಎಂದು ಕರೆಯುತ್ತೇವೆ. ಏನನ್ನಾದರೂ ಪಡೆದುಕೊಳ್ಳಬೇಕಾದರೆ ನಾಮ ಏನಾದರೊಂದನ್ನು ಕಳೆದುಕೊಳ್ಳಬೇಕಾಗುತ್ತದೆ. ಸಾಮಾನ್ಯರು ಈ ರೀತಿ ಹೇಳುತ್ತಾರೆ. ಕೆಲಸವಿಲ್ಲ ಲಾಭವೂ ಇಲ್ಲ. ಹೆಚ್ಚು

ಕೆಲಸ, ಹೆಚ್ಚು ಲಾಭ, ಕಡಿಮೆ ಕೆಲಸ, ಕಡಿಮೆ ಲಾಭ ಯಾವ ವ್ಯಕ್ತಿಯು ಹೆಚ್ಚಿನ ತ್ಯಾಗಗಳನ್ನು ಮಾಡುತ್ತಾನೋ ಆತನು ಹೆಚ್ಚಿನ ಲಾಭವನ್ನು ಪಡೆಯಬೇಕು. ಹಿಂದೆ ನಿರಪೇಕ್ಷ ಸಮತಾವಾದವನ್ನು ಅಭ್ಯಾಸ ಮಾಡುತ್ತಿರುವಾಗ ಅವರು ಹೇಳಿದರು. ಜನರೆಲ್ಲರೂ ಒಂದೇ ರೀತಿ ಜನ್ಮ ತಾಳಿರುತ್ತಾರೆ. ಆದರೆ ಜನ್ಮಿಸಿದ ನಂತರದ ಸಂಗತಿಗಳು ನಿಮ್ಮನ್ನು ಬದಲಾಯಿತಸುತ್ತದೆ. ಊಹೆಯು ಸಂಪೂರ್ಣ ನಿರಪೇಕ್ಷವೆಂದು ನಾನು ಹೇಳುತ್ತೇನೆ. ಯಾವುದು ಸಂಪೂರ್ಣ ನಿರಪೇಕ್ಷವಾಗಿರುತ್ತದೆಯೋ ಅದು ತಪ್ಪಾಗಿರುತ್ತದೆ. ಕೆಲವರು ಗಂಡಾಗಿ ಮತ್ತು ಕೆಲವರು ಹೆಣ್ಣಾಗಿ ಏಕೆ ಹುಟ್ಟುತ್ತಾರೆ. ಅವರ ಮುಖಲಕ್ಷಣಗಳಲ್ಲಿ ಬದಲಾವಣೆ ಏಕಿದೆ? ಕೆಲವರು ಹುಟ್ಟುವಾಗಲೇ ಅನಾರೋಗ್ಯ ಹೊಂದಿರುತ್ತಾರೆ ಅಥವಾ ಕುರೂಪಿಗಳಾಗಿರುತ್ತಾರೆ. ಆದ್ದರಿಂದ ಎಲ್ಲರೂ ಒಂದೇ ರೀತಿಯಾಗಿರುವುದಿಲ್ಲ. ನಾವು ಇದನ್ನು ಉನ್ನತ ದೃಷ್ಠಕೋನದಿಂದ ಪರಿಶೀಲಿಸಿದಾಗ ಒಬ್ಬ ವ್ಯಕ್ತಿಯ ಸಂಪೂರ್ಣ ಜೀವನವು ಇನ್ನೊಂದು ಆಯಾಮದಲ್ಲಿ ಇಡಲಾಗಿದೆ. ಆದ್ದರಿಂದ ಜನರೆಲ್ಲ ಒಂದೇ ರೀತಿಯಾಗಿರಲು ಸಾಧ್ಯವೇ? ಪ್ರತಿಯೊಬ್ಬರೂ ಸಮಾನರಾಗಿರಬೇಕೆಂದು ಬಯಸುತ್ತಾರೆ. ಆದರೆ ಯಾವುದಾದರೊಂದು ನಿಮ್ಮ ಜೀವನದ ಅಂಗವಾಗಿಲ್ಲದಿರುವಾಗ ನೀವು ಸಮಾನರಾಗಿರಲು ಹೇಗೆ ಸಾಧ್ಯ? ಜನರೆಲ್ಲರೂ ಸಮಾನರಾಗಿರುವುದಿಲ್ಲ.

ಪಾಶ್ಚಾತ್ಯರು ಹೆಚ್ಚಿನ ಬಹಿರ್ಮುಖಿಗಳಾಗಿರುತ್ತಾರೆ. ಇದು ಕೋಪಗೊಂಡಿರುವಾಗ ಹೇಗೆ ಪ್ರದರ್ಶಿತಗೊಳ್ಳುತ್ತದೆಯೋ ಹಾಗೆಯೇ ಸಂತೋಷಗೊಂಡಿರುವಾಗಲೂ ಇದು ಪ್ರದರ್ಶಿತಗೊಳ್ಳುತ್ತದೆ. ಅದಕ್ಕೆ ತನ್ನದೇ ಆದ ಒಳ್ಳೆಯದು ಮತ್ತು ಕೆಟ್ಟದಿದ್ದರೆ ಸಹಿಸಿಕೊಳ್ಳಲು ಸಾಧ್ಯವಾಗದಷ್ಟು ಸಾಮರ್ಥ್ಯವಿಲ್ಲದಿರುವಂತಹ ತನ್ನದೇ ಆದ ಒಳ್ಳೆಯದು ಮತ್ತು ಕೆಟ್ಟದಿದೆ. ಈ ಎರಡೂ ವ್ಯಕ್ತಿತ್ವಗಳು ವಿವಿಧ ಮೌಲ್ಯಗಳಿಂದ ರೆಂಬೆಯೊಡೆದಿದೆ. ಜನಗಳು ಯಾವುದಾದರೂ ಕೃತ್ಯಗಳನ್ನು ಮಾಡಿದಾಗ ಈ ವ್ಯಕ್ತಿತ್ವವು ವಿವಿಧ ಪರಿಣಾಮದೆಡೆಗೆ ಕೊಂಡೊಯ್ಯುತ್ತದೆ. ಒಬ್ಬ ವ್ಯಕ್ತಿಯನ್ನು ಆತನ ಮೇಲಾಧಿಕಾರಿಯು ಪ್ರಶಂಸಿಸಿದಾಗ ಅಥವಾ ಏನಾದರೂ ಉತ್ತಮವಾದದ್ದನ್ನು ಕೊಟ್ಟಾಗ, ಇತರರು ತಳಮಳಗೊಳ್ಳುತ್ತಾರೆ. ಇದು ಚೀನೀಯರಲ್ಲಿ ಉಂಟಾಗುತ್ತದೆ. ಯಾವುದಾದರೂ ವ್ಯಕ್ತಿಗೆ ಹೆಚ್ಚಿನ ಇನಾಮು ದೊರಕಿದರೆ ಆತನು ಮೌನವಾಗಿ ಯಾರಿಗೂ ತಿಳಿಯದಂತೆ ಜೇಬಿಗಿಳಿಸುತ್ತಾನೆ.

ಈ ನಡುವೆ ಆ ಮಾಸದ ನೌಕರನಗಿರುವದು ಸಹ ಇನ್ನೂ ಕಷ್ಟವಾಗಿದೆ. ನೀನು ಆ ಮಾಸದ ನೌಕರನಾಗಿರುವೆ ಮತ್ತು ನೀನು ಕೆಲಸದ ಮೇಲೆ ಬಹಳ ಬೆನ್ನಾಗಿರುವೆ. ಕೆಲಸಕ್ಕೆ ನೀನುಬೇಗನೆ ಬಂದು ತಡವಾಗಿ ಮನೆಗೆ ಹೋಗುವೆ. ಈ ಎಲ್ಲಾ ಕೆಲಸಗಳನ್ನು ನೀನು ಏಕೆ ಮಾಡುವುದಿಲ್ಲ? ನೀನು ಹೆಚ್ಚು ಉತ್ತಮವಾಗಿ ಕೆಲಸಮಾಡುತ್ತಿರುವೆ ಮತ್ತು ನಾವು ಅದಕ್ಕೆ ತಕ್ಕವರಲ್ಲ. ಜನರು ತೀಕ್ಷ್ಣವಾದ ಕಹಿಯಾದ ಮಾತುಗಳನ್ನು ಉಪಯೋಗಿಸುತ್ತಾರೆ.

ಚೀನಾದ ಹೊರಗೆ ಇದು ಸಂಪೂರ್ಣವಾಗಿ ವಿಭಿನ್ನವಾಗಿರುತ್ತದೆ. ಉದಾ: ಒಬ್ಬ ವ್ಯಕ್ತಿಯ ಮೇಲಾಧಿಕಾರಿ ಆ ವ್ಯಕ್ತಿಯು ಕೆಲಸವನ್ನು ಚೆನ್ನಾಗಿ ಮಾಡಿದ್ದಾನೆಂದು ಗುರುತಿಸುತ್ತಾನೆ. ಆದ್ದರಿಂದ ಧನ್ಯವಾದದ ಒಂದು ಚಿನ್ಹೆಯಾಗಿ ಸ್ವಲ್ಪ ಹಣವನ್ನು ಆತನು ಆ ವ್ಯಕ್ತಿಗೆ ಕೊಡುತ್ತಾನೆ. ಆ ವ್ಯಕ್ತಿಯು ಭಾವೋದ್ರೇಕದಿಂದ ಒಂದೊಂದೇ ನೋಟುಗಳನ್ನು ಎಲ್ಲರೆದುರೇ ಎಣಿಸಲಾರಂಭಿಸುತ್ತಾನೆ. " ಓಹ್ ಮೇಲಾಧಿಕಾರಿಯು ನನಗೆ ಇಷ್ಟೊಂದು ಹಣವನ್ನು ಕೊಟ್ಟಿದ್ದಾನೆ". ಎಂದು ಸಂತೋಷವಾಗಿ ಹೇಳುತ್ತಾ ಒಂದೊಂದೇ ನೋಟನೊಡನೆ ತನ್ನ ಹೆಬ್ಬೆರಳನ್ನಾಡಿಸುತ್ತಾನೆ. ಇಲ್ಲಿ ಯಾವುದೇ ಪರಿಣಾಮವಾಗುವುದಿಲ್ಲ. ಚೀನಾದಲ್ಲಿ ಯಾರಿಗಾದರೂ ಇನಾಮು ಬಂದರೇ ಮೇಲಾಧಿಕಾರಿಯೇ ಆತನಿಗೆ ಇತರರು ನೋಡುವುದಕ್ಕೆ ಮೊದಲೇ ಹಣವನ್ನು ಜೇಬಿಗಿಳಿಸುವಂತೆ ಆತನಿಗೆ ಹೇಳುತ್ತಾನೆ. ಚೀನಾದಿಂದ ಹೊರಗೆ, ಒಬ್ಬ ಮಗುವಿಗೆ ನೂರು ಮಾರ್ಕುಗಳು ಶಾಲೆಯಲ್ಲಿ ಬಂದರೆ, ಆತನು ಸಂತೋಷದಿಂದ ಮನೆಯೆಡೆಗೆ ತಿರುಚುತ್ತಾ ಓಡುತ್ತಾನೆ. ಈ ದಿನ ನನಗೆ ನೂರು ಮಾರ್ಕುಗಳು ಬಂದಿವೆ? ನಾನು ನೂರು ಮಾರ್ಕುಗಳನ್ನು ಒಡೆದಿದ್ದೇನೆ! ಒಬ್ಬ ನೆರೆಮನೆಯವ ಬಾಗಿಲನ್ನು ತೆರೆಯುತ್ತಾನೆ. ಮತ್ತು ಒರಲುತ್ತಾನೆ. ಅಟ್ವಾಬಾಮ್, ಇನ್ನೊಬ್ಬಾಕೆ ಕಿಟಕಿಯನ್ನು ತೆರೆದು ಹೇಳುತ್ತಾಳೆ. ಹೇಜಾಕ್ ಉತ್ತಮ ಕೆಲಸ! ಇದೇ ಚೀನಾದಲ್ಲೇನಾದರೂ ಆಗಿದ್ದರೆ ಇದರ ಪರಿಣಾಮ ಕೆಟ್ಟದ್ದಾಗುತ್ತಿತ್ತು. "ನನಗೆ ನೂರು ಮಾರ್ಕುಗಳು ಬಂದಿವೆ! ನನಗೆ ನೂರು ಮಾರ್ಕುಗಳು ಬಂದಿವೆ! ಮಗುವು ಒರಲುತ್ತಾ ಶಾಲೆಯಿಂದ ಮನೆಯೆಡೆಗೆ

ಓಡುತ್ತದೆ. ನೆರೆಮನೆಯವನು ಬಾಗಿಲನ್ನು ತೆರೆಯುವುದಕ್ಕೆ ಮುಂಚೆ ಹೊಟ್ಟೆಯುರಿಯಿಂದ ಹೊಗೆಯಾಡಲಾರಂಭಿಸುತ್ತಾನೆ. ( fuming ) ಇದೇನು ಬಹಳ ದೊಡ್ಡ ಮೊತ್ತವೇ? ಇದು ಕೇವಲ ನೂರು. ಅದರಲ್ಲಿ ಜಂಬಕೊಚ್ಚುವುದಕ್ಕೇನಿದೆ! ಇದಕ್ಕಿಂತ ಮುಂಚೆ ಯಾರಿಗೂ ನೂರು ಮಾರ್ಕುಗಳು ಬಂದಿಲ್ಲವೇ? ಈ ಎರಡೂ ರೀತಿಯ ಚಿಂತನೆಗಳು ವಿಭಿನ್ನ ಪರಿಣಾಮಗಳನ್ನು ತರುತ್ತದೆ. ಆದ್ದರಿಂದ ಅದು ಮತ್ಸರವನ್ನು ಕಲಕಿಬಿಡಬಹುದು. ಮತ್ತು ಇತರರಿಗೇನಾದರೂ ಒಳ್ಳೆಯದಾದರೆ, ಅವರಿಗಾಗಿ ಸಂತೋಷಪಡುವುದರ ಬದಲು ತಾವು ಮತ್ಸರ ಪಡೆಯಲಾರಂಭಿಸುತ್ತಾರೆ. ಅದೇ ಇಲ್ಲಿ ಆಗುವುದು.

ಕೆಲವು ವರ್ಷಗಳ ಹಿಂದೆ ನಿರಂಕುಶ ಸಮಾನತಾ ಪ್ರತಿಪಾದಕವನ್ನು ಅಭ್ಯಾಸಮಾಡುತ್ತಿದ್ದರು. ಮತ್ತು ಇದು ನಿಜವಾಗಿಯೂ ಜನರ ವಿಚಾರಶಕ್ತಿ ಮತ್ತು ಮೌಲ್ಯಗಳನ್ನು ಹೊಲಸುಮಾಡುತ್ತಿತ್ತು. ನಾನು ನಿಮಗೊಂದು ವಿಶಿಷ್ಟ ಉದಾಹರಣೆಯನ್ನು ಕೊಡುತ್ತೇನೆ. ಒಂದು ಕಂಪನಿಯಲ್ಲಿ ಒಬ್ಬ ವ್ಯಕ್ತಿಯಿದ್ದಾನೆ. ಆತನು ಆ ಕಂಪನಿಯಲ್ಲಿ ತಾನೇ ಎಲ್ಲರಿಗಿಂತಲೂ ಅತ್ಯುತ್ತಮನೆಂದು ಪರಿಗಣಿಸಿದ್ದಾನೆ. ಆತ ಮಾಡುವುದೆಲ್ಲವೂ ಸರಿಯೆಂದು ಆತನು ಪರಿಗಣಿಸಿದ್ದಾನೆ. " ತಾನೇ ಎಲ್ಲರಿಗಿಂತಲೂ ವಿಭಿನ್ನವೆಂದೆಣಿಸಿದ್ದಾನೆ. ಆತನಷ್ಟಕ್ಕೆ ಆತನು ಪರಿಗಣಿಸಿದ್ದಾನೆ. "ಅವರು ನನ್ನನ್ನು ಈ ಕೈಗಾರಿಕೆಯ ಡೈರೆಕ್ಟರ್ ಅಥವಾ ಮ್ಯಾನೇಜರ್ ಆಗೆಂದು ನನ್ನನ್ನು ಕೇಳಿದಲ್ಲಿ ನಾನು ಆ ಕೆಲಸವನ್ನು ನಿರ್ವಹಿಸ ಬಲ್ಲೆ. ಇದಕ್ಕಿಂತ ಉನ್ನತ ಸ್ಥಾನವನ್ನು ಸಹ ನಾನು ನಿರ್ವಹಿಸಬಲ್ಲೆ. "ನಾನು ಇನ್ನೂ ಹೆಚ್ಚಿನ ಸರ್ವಶ್ರೇಷ್ಟನಾಗಬಲ್ಲೆ." ಆತನ ಮೇಲಾಧಿಕಾರಿಯು ಹೇಳಬಹುದು. ಆತನು ಯಾವ ಕೆಲಸವನ್ನು ಮಾಡುತ್ತಾನೆಯೋ ಅದನ್ನು ಸಮರ್ಥಕವಾಗಿ ನಿರ್ವಹಿಸುವ ಶಕ್ತಿ ಮತ್ತು ಉತ್ತಮತೆ ಆತನಿಗೆದೆಯೆಂದು ಆತನು ಹೇಳುತ್ತಾನೆ. ಆತನ ಜೊತೆಯ ಕೆಲಸಗಾರರೂ ಸಹ ಈತನಿಗೆ ಉತ್ತಮ ಸಮರ್ಥತೆಯಿದೆಯೆಂದು ಹೇಳಬಹುದು. ಈತನಿಗೆ ಉತ್ತಮ ಕೆಲಸ ತಿಳಿದಿದೆಯೆಂದು ಮತ್ತು ಈತನಿಗೆ ಮೇದಾಶಕ್ತಿ ಇದೆಯೆಂದು ತಿಳಿಯಬಹುದು. ಆದರೆ ಆತನು ಗುಂಪಿನಲ್ಲಿ ಇರುವಂತಹ ಒಬ್ಬ ವ್ಯಕ್ತಿ ಅಥವಾ ಆತನ ಕಛೇರಿಯನ್ನು ಹಂಚಿಕೊಳ್ಳುವಂತಹ ವ್ಯಕ್ತಿ ಮತ್ತು ಈ ವ್ಯಕ್ತಿಯು ಏನನ್ನೂ ಮಾಡಲಾಗುವುದಿಲ್ಲ. ಅಥವಾ ಎಂದಿಗೂ ಇದರ ಮುಖಾಂತರ ಬರಲಾಗುವುದಿಲ್ಲ. ಮತ್ತು ಒಂದು ದಿನ ಅನರ್ಹ ವ್ಯಕ್ತಿಯು ಬಡ್ತಿಹೊಂದಿ ಸೂಪರ್‌ವೈಸರಿ ಹುದ್ದೆಗೆ ಬರುತ್ತಾನೆ. ಆದರೆ ಈ ವ್ಯಕ್ತಿಗೆ ಬಡ್ತಿಯಾಗಿಲ್ಲ. ಮತ್ತು ಆ ವ್ಯಕ್ತಿಯು ಈತನು ಯೋಚಿಸುತ್ತಾನೆ. ಮತ್ತು ಇದನ್ನು ಮರೆಯಲಾಗದ ಸ್ಥಿತಿಗೆ ತಲುಪುತ್ತಾನೆ. ಇದರ ಬಗ್ಗೆ ಏನಾದರೂ ಮಾಡಬೇಕೆಂದು ಕೇಳುತ್ತಾ ಮತ್ಸರದಿಂದ ಕುದಿಯುತ್ತಾ ಪ್ರತಿಯೊಬ್ಬರ ಬಳಿಗೂ ಹೋಗುತ್ತಾನೆ. ನಿಮಗೆ ಒಂದು ಸತ್ಯವನ್ನು ಹೇಳಬಯಸುತ್ತೇನೆ. ಸಾಮಾನ್ಯರು ಅರ್ಥಮಾಡಿಕೊಳ್ಳಲಾಗದಂತಹ ಸತ್ಯ ನೀವು ಎಲ್ಲ ವಿಷಯಗಳಲ್ಲೂ ಉತ್ತಮರೆಂದು ನೀವು ಚಿಂತಿಸಬಹುದು. ಆದರೆ ಇದು ನಿಮ್ಮ ಹಣೆಯಬರಹದಲ್ಲಿಲ್ಲ. ಆ ವ್ಯಕ್ತಿಯು ಯಾವುದರಲ್ಲೂ ಉತ್ತಮನಲ್ಲದಿದ್ದರೂ ಸಹ ಇದು ಆತನ ಹಣೆಬರಹದಲ್ಲಿದೆ.

ಆದ್ದರಿಂದ ಆ ವ್ಯಕ್ತಿಗೆ ಮ್ಯಾನೇಜರ್ ಸ್ಥಾನ ಸಿಕ್ಕಿದೆ. ಸಾಮಾನ್ಯರು ಏನು ಚಿಂತಿಸುತ್ತಾರೆಂಬುದರ ಬಗ್ಗೆ ನಾವು ತಲೆಕೆಡಿಸಿಕೊಳ್ಳುವುದಿಲ್ಲ. ಏಕೆಂದರೆ ಅವೆಲ್ಲ ಕೇವಲ ಸಾಮಾನ್ಯ ವಿಚಾರಗಳು. ಅತ್ಯುತ್ತಮ ಜೀವಿಗಳ ದೃಷ್ಟಿಯಲ್ಲಿ ಸಮಾಜವು ವಿಶ್ಲೇಷಿಸಿದ ಮಾದರಿಯಂತೆ ಪ್ರಗತಿಹೊಂದುತ್ತದೆ. ಆದ್ದರಿಂದ ಒಬ್ಬ ವ್ಯಕ್ತಿಯು ತನ್ನ ಜೀವನದಲ್ಲಿ ಏನು ಮಾಡಿರುತ್ತಾನೆಂಬುದು ಆತನ ಮೇಧಾಶಕ್ತಿಯ ಆಧಾರದ ಮೇಲೆ ವ್ಯವಸ್ಥೆಗೊಂಡಿರುವುದಿಲ್ಲ. ಬೌದ್ಧಧರ್ಮವು ಕರ್ಮ ಪ್ರತೀಕಾರದ ಬಗ್ಗೆ ಮಾತನಾಡುತ್ತದೆ. ಮತ್ತು ಸಂಗತಿಗಳು ಅವರವರ ಕರ್ಮಾನುಸಾರ ಏರ್ಪಾಡಾಗುತ್ತದೆ. ಆದ್ದರಿಂದ ನಿಮಗೆಷ್ಟು ಸಾಮರ್ಥವಿದೆಯೆಂಬುದು ಮುಖ್ಯವಲ್ಲ. ಆದರೆ ನೀವು ಪವಿತ್ರಗುಣವನ್ನು ಹೊಂದಿರದಿದ್ದರೆ ನಿಮಗೆ ಜೀವನದಲ್ಲಿ ಏನೂ ಸಿಗುವುದಿಲ್ಲ. ಇತರರಿ ಯಾವುದರಲ್ಲೂ ಸಮರ್ಥರಾಗಿಲ್ಲವೆಂದು ನೀವು ಚಿಂತಿಸುವಿರಿ. ಆದರೆ ಆತನಿಗೆ ಬಹಳ ಪವಿತ್ರಗುಣಗಳಿವೆ. ಆದ್ದರಿಂದ ಆತನು ಉನ್ನತ ಶ್ರೇಣಿಯ ನೌಕರನಾಗಿರುತ್ತಾನೆ. ಅಥವಾ ಶ್ರೀಮಂತನಾಗುತ್ತಾನೆ. ಸಾಮಾನ್ಯರು ಇದನ್ನು ಕಾಣಲಾಗುವುದಿಲ್ಲ. ಆದ್ದರಿಂದ ತಮಗ್ಯಾವ ಸಾಮಾರ್ಥ್ಯವಿದೆಯೋ ಅದೇ ರೀತಿಯ ಕೆಲಸವನ್ನು ಮಾಡಬಯಸುತ್ತಾರೆ. ಆದ್ದರಿಂದ ತಮ್ಮೆಲ್ಲಾ ಶಕ್ತಿಸಾಮರ್ಥ್ಯಗಳಿಂದ ಜೀವನವೆಲ್ಲಾ ದುಡಿಯುತ್ತಾನೆ. ಇದರಿಂದ ಬಹಳ ನೋಯುತ್ತಾರೆ. ಜೀವನವು ಬಹಳ ಕಷ್ಟಕರ ಮತ್ತು ಆಯಾಸಕರವೆಂದು ಚಿಂತಿಸುತ್ತಾರೆ. ಮತ್ತು

ಸಂಗತಿಗಳು ಬಹಳ ಪಕ್ಷಪಾತದ್ದೆಂದು ಮತ್ತು ಅದರಿಂದ ಬಿಡಿಸಿಕೊಳ್ಳಲಾಗುವುದಿಲ್ಲವೆಂದು ಅವರು ಚಿಂತಿಸುತ್ತಾರೆ. ತಾವು ಸೇವಿಸುವ ಆಹಾರವನ್ನು ಅವರು ಅನುಭವಿಸಲಾಗುವುದಿಲ್ಲ. ಕಣ್ತುಂಬ ನಿದ್ದೆಮಾಡುವುದಿಲ್ಲ. ಮತ್ತು ಖಂಡಿತವಾಗಿಯೂ ಅವರು ಅದೈರ್ಯಗೊಳ್ಳುತ್ತಾರೆ. ಮತ್ತು ಭರವಸೆಯನ್ನು ಕಳೆದುಕೊಳ್ಳುತ್ತಾರೆ. ಅವರಿಗೆ ವಯಸ್ಸಾಗುವುದರೊಳಗೆ ತಮ್ಮ ದೇಹವನ್ನು ತಲೆಯಿಂದ ಕಾಲಿನವರೆಗೂ ನಾಶಮಾಡಿಕೊಂಡಿರುತ್ತಾರೆ. ಮತ್ತು ಜೊತೆಗೆ ಎಲ್ಲಾ ರೀತಿಯ ಆರೋಗ್ಯದ ತೊಂದರೆಗಳು ಬರುತ್ತವೆ.

ಆದ್ದರಿಂದ ಅಭ್ಯಾಸಿಗರಾದ ನಾವು ಅದನ್ನು ಇನ್ನು ಕಡಿಮೆ ಮಾಡುತ್ತೇನೆ. ಅಭ್ಯಾಸಿಗರಾದ ನಾವು ವಿಷಯಗಳನ್ನು/ಸಂಗತಿಗಳನ್ನು ಸಾಮಾನ್ಯವಾಗಿ/ಸ್ವಾಭಾವಿಕವಾಗಿ ನಡೆಯಲು ಬಿಟ್ಟು ಬಿಡುತ್ತೇವೆ. ಯಾವುದಾದರೂ ನಿಮ್ಮದಾಗಿದ್ದಲ್ಲಿ, ಯಾರೂ ಅದನ್ನು ನಿಮ್ಮಿಂದ ಕಸಿದುಕೊಳ್ಳುವುದಿಲ್ಲ. ಮತ್ತು ಏನಾದರೂ ನಿಮ್ಮದಾಗಿರದಿದ್ದಲ್ಲಿ ಅದಕ್ಕಾಗಿ ಹೋರಾಟವನ್ನು ಮಾಡಿ ಸಹ ನೀವು ಅದನ್ನು ಪಡೆಯಲಾಗುವುದಿಲ್ಲ. ಬಹುಶಃ ಅದೇ ನಿರಪೇಕ್ಷವಲ್ಲ. ಅದು ಅಷ್ಟು ನಿರಪೇಕ್ಷವಾಗಿದ್ದಲ್ಲಿ ಜನರು ತಪ್ಪು ಮಾಡುವ ಪ್ರಶ್ನೆಯೇ ಬರುವುದಿಲ್ಲ. ಇತರ ಮಾತುಗಳನ್ನು ಹೇಳಬೇಕೆಂದರೆ ಅದರಲ್ಲಿ ಕೆಲವು ಅಸ್ಥಿರ ಅಂಶಗಳಿರುತ್ತದೆ.

ಆದರೆ ನೀವು ಒಬ್ಬ ಅಭ್ಯಾಸಿಗರು, ಆದ್ದರಿಂದ ಸಾಮಾನ್ಯ ಸಂಧರ್ಭಗಳಲ್ಲಿ ನಿಮ್ಮನ್ನು ನಿಮ್ಮ ಗುರುಗಳ ನಿಯಮದ ಅಂಗಗಳು ಕಾಪಾಡುತ್ತಿರುತ್ತದೆ. ಯಾರಾದರೂ ನಿಮ್ಮ ವಸ್ತುಗಳನ್ನು ಕೊಂಡೊಯ್ಯಲು ಬಯಸಿದರೂ ಅವರು ಅದನ್ನು ಕೊಂಡೊಯ್ದು ಆ ವಸ್ತುವಿನೊಂದಿಗೆ ಸರಕೊಳ್ಳಲಾಗುವುದಿಲ್ಲ. ಆದ್ದರಿಂದಲೇ ನಾವು ಸಂಗತಿಗಳನ್ನು ಸಾಮಾನ್ಯವಾಗಿ ನಡೆಯಲು ಬಿಟ್ಟುಬಿಡುತ್ತೇವೆ. ಕೆಲವು ಬಾರಿ ಏನಾದರೊಂದನ್ನು ನಿಮ್ಮದೆಂದುಕೊಳ್ಳುತ್ತೀರಿ. ಮತ್ತು ಇತರರೂ ಹೇಳುತ್ತಾರೆ. ಅದು ನಿಮ್ಮದೇ ಎಂದು ಆದರೆ ಸತ್ಯ ಸಂಗತಿಯೇನೆಂದರೆ ಅದು ನಿಮ್ಮದೇ ಅಲ್ಲ. ಆದ್ದರಿಂದ ನೀವು ಅದನ್ನು ನಿಮ್ಮದೆಂದುಕೊಳ್ಳಬಹುದು. ಆದರೆ ಅದು ನಿಮ್ಮದಾಗದ ಹಾಗೆ ಹೋಗುತ್ತದೆ. ನೀವು ಇದರಿಂದ ಕಳಚಿಕೊಳ್ಳಲು ಸಾಧ್ಯವೇ ಎಂಬುದನ್ನು ಅದು ಬಹಿರಂಗಪಡಿಸುತ್ತವೆ. ಆದ್ದರಿಂದ ನೀವು ಬಿಡಿಸಿಕೊಳ್ಳದಿದ್ದರೆ ಅದು ಬಂಧನವಾಗುತ್ತದೆ. ನಿಮ್ಮ ವೈಯಕ್ತಿಕ ಲಾಭಕ್ಕಾಗಿ ಅವರಿಂದ ಬಿಡಿಸಿಕೊಳ್ಳಲು ಆ ಪದ್ಧತಿಯನ್ನು ಉಪಯೋಗಿಸಬೇಕು. ಅದೇ ನಿಜವಾದ ಕಲ್ಪನೆ ಸಾಮಾನ್ಯ ಜನರು ಈ ಸತ್ಯವನ್ನು ಗ್ರಹಿಸಲಾಗುವುದಿಲ್ಲ. ಆದ್ದರಿಂದ ಅವರು ಏನನ್ನಾದರೂ ಪಂದ್ಯದಿಂದ ಗೆಲ್ಲಬೇಕಾದಲ್ಲಿ ಅದಕ್ಕಾಗಿ ಸ್ಪರ್ಧಿಸುತ್ತಾರೆ. ಮತ್ತು ಕಾದಾಡುತ್ತಾರೆ.

ಮತ್ಸರವು ನಂಬಲಾಗದಷ್ಟು "ಶಕ್ತಿಯುತವಾಗಿ ಸಾಮಾನ್ಯರಲ್ಲಿರುತ್ತದೆ. ಮತ್ತು ಇದು ಅಭ್ಯಾಶಿಗರ ವರ್ತುಲದಲ್ಲೂ ಸಹ ಬಳಸಲಾಗುತ್ತದೆ. ಇತರೆ ಚಿಗಾಂಗ್ ಅಭ್ಯಾಶವನ್ನು ಮಾಡುವವರು. ಇತರರು ಉತ್ತಮರೆಂಬ ಕಲ್ಪನೆಯಿಂದ ಎಲ್ಲವನ್ನು ಪೀಡಿಸಿ ಪಡೆದುಕೊಳ್ಳುತ್ತಾರೆ. ಅವರು ಈ ಚಿಗಾಂಗ್ ಅಭ್ಯಾಸವು ಉತ್ತಮವಾಗಿದೆಯೆಂದು ಅಭ್ಯಾಸಮಾಡಲಾರಂಭಿಸುತ್ತಾರೆ. ಅವರು ಎಲ್ಲಾ ರೀತಿಯ ಟೀಕೆಯನ್ನು ಮಾಡುತ್ತಾರೆ. ನಾನು ಕಂಡಂತೆ ಅವೆಲ್ಲವೂ ಉಪಶಮನ ಮತ್ತು ಅರ್ಹತೆಯ ಹಂತದಲ್ಲಿದೆ. ತಮ್ಮ ತಮ್ಮೊಂದಿಗೆ ಹೋರಾಡುವಂತಹ ಇತರ ಅಭ್ಯಾಸಗಳೆಲ್ಲವೂ ಆತ್ಮದ ಸ್ವಾಧೀನತೆ ಯಿಂದುಂಟಾಗಿದೆ. ಮತ್ತು ಇವೆಲ್ಲವೂ ಅವ್ಯವಸ್ಥೆಯಿಂದುಂಟಾದವು. ಮತ್ತು ಇವು ನಡತೆಯ ಬಗ್ಗೆ ಲಕ್ಷ್ಯಕೊಡುವುದಿಲ್ಲ. ಯೋಚಿಸು ಯಾರಾದರೂ 20 ವರ್ಷಗಳವರೆಗೆ ಅಭ್ಯಾಸವನ್ನು ಮಾಡಿದ್ದಾರೆ. ಮತ್ತು ಅವರು ಯಾವುದೇ ಸಾಮರ್ಥ್ಯವನ್ನು ಪಡೆದು ಕೊಂಡಿಲ್ಲ ಆದರೆ ಇನ್ನೊಬ್ಬ ವ್ಯಕ್ತಿ ಅಭ್ಯಾಸ ಆರಂಭಿಸಿದೊಡನೆಯೇ ಈ ಸಾಮಾರ್ಥ್ಯ ಗಳನ್ನು ಪಡೆದುಕೊಳ್ಳುತ್ತೇನೆ. ಇದು ಪಕ್ಷಪಾತ ಅಥವಾ ಅನ್ಯಾವೆಂದು ಆತನೆಣಿಸುತ್ತಾನೆ. ಮತ್ತು ಆತನಿಗೆ ಇದನ್ನು ತಾಳಕೊಳ್ಳಲಾಗುವುದಿಲ್ಲ.

"ನಾನು 20 ವರ್ಷಗಳಿಂದ ಅಭ್ಯಾಸವನ್ನು ಮಾಡುತ್ತಿದ್ದೇನೆ, ಆದರೆ ನಾನು ಯಾವುದೇ ಸಾಮರ್ಥ್ಯಗಳನ್ನು ಪಡೆದುಕೊಳ್ಳಲಾಗಲಿಲ್ಲ. ಆದರೆ ಈತನು ಅಲ್ಪಕಾಲ ದಲ್ಲಿಯೇ ಅದನ್ನು ಪಡೆದುಕೊಂಡಿದ್ದಾರೆ, ಯಾವ ಸಾಮರ್ಥ್ಯಗಳನ್ನು ಆತನು ಪಡೆದು ಕೊಂಡಿದ್ದಾನೆ? ಆತನು ಆವೇಶಪೂರ್ಣನಾಗುತ್ತಾನೆ" ಆತನ ಆತ್ಮವನ್ನು ಅಧೀನಪಡಿಸಿ ಕೊಳ್ಳಲಾಗಿದೆ. ಆತನಿಗೆ ಚಿಗಾಂಗ್

ಸೈಕೋಸಿಸ್, (ಮನೋವೈಕಲ್ಯ) ವುಂಟಾಗಿದೆ. ಅಥವಾ ಚಿಗಾಂಗ್ ಮಾಸ್ತರನು ತರಗತಿಯನ್ನು ಆರಂಭಿಸಿದಾಗ ಅಲ್ಲಿ ಕುಳಿತುಕೊಂಡು ಮಾಸ್ತರನನ್ನು ಪೀಡಿಸುತ್ತಾ ಮತ್ತು ಇವನೆಂತಹ ಚಿಗಾಂಗ್ ಮಾಸ್ತರ್ ಈತನು ಎಂತಹ ಮಹತ್ತರ ವಿಷಯವನ್ನು ಮಾತನಾಡಿದರೂ ನಾನು ಅದರ ಬಗ್ಗೆ ಬಗ್ಗೆ ಕೇಳಿಸಿಕೊಳ್ಳುವುದಿಲ್ಲ ಎಂದುಕೊಂಡು ಕುಳಿತಿರುತ್ತದ್ದೆ. ಖಂಡಿತ ಚಿಗಾಂಗ್ ಮಾಸ್ತರುಗಳು ಮಾತುಗಳನ್ನು ಕಡಿಮೆ ಆಡುತ್ತಾರೆ, ಆದರೆ ತಮ್ಮ ಕೆಲಸವನ್ನು ಮಾಡುತ್ತಿರುತ್ತಾರೆ. ಆದರೆ ಆ ಚಿಗಾಂಗ್ ಮಾಸ್ತರನು ತಾನು ಕಲಿತ ಸಂಗತಿಗಳ ಬಗ್ಗೆ ಮಾತನಾಡುತ್ತಾನೆ. ಆ ವ್ಯಕ್ತಿಯು ಹೋಗುತ್ತಾನೆ ಮತ್ತು ಏನನ್ನಾದರೂ ಕಲಿಯುತ್ತಾನೆ ಮತ್ತು ಈತನ ಬಳಿ ಅಭ್ಯಾಸ ಸಂಪೂರ್ಣಗೊಂಡ ದೊಡ್ಡ ಸರ್ಟಿಫಿಕೇಟ್‌ಗಳ ರಾಶಿಯೇ ಇದೆ. ಆತನು ಯಾವ ಚಿಗಾಂಗ್ ಮಾಸ್ತರನ ತರಗತಿಗಳಿಗೂ ಬೇಕಾದರೂ ಹಾಜರಾಗುತ್ತಾನೆ ಮತ್ತು ಖಂಡಿತ, ಆತನಿಗೆ ಬಹಳಷ್ಟು ತಿಳಿದಿರುತ್ತದೆ. ಆ ಚಿಗಾಂಗ್ ಮಾಸ್ತರನಿಗಿಂತ ಹೆಚ್ಚು ಆತನಿಗೆ ತಿಳಿದಿರುತ್ತದೆ. ಆದರೆ ಏನು ಉಪಯೋಗ? ಅವೆಲ್ಲವೂ ಕೇವಲ ಉಪಶಮನ ಮತ್ತು ಅರ್ಹತೆಯ ಬಗ್ಗೆ ಮಾತ್ರವಿರುತ್ತದೆ. ಇವುಗಳಿಂದ ತಮ್ಮ ಮನಸ್ಸನ್ನು ತುಂಬಿಕೊಂಡಲ್ಲಿ ಇದು ಇನ್ನೂ ಸಿಕ್ಕುಸಿಕ್ಕಾಗುತ್ತದೆ ಮತ್ತು ಆತನ ಸಂದೇಶವು ಕಷ್ಟಕರವಾಗಿರುತ್ತದೆ ಹಾಗೂ ಅಭ್ಯಾಸ ಮಾಡುವುದು ಆತನಿಗೂ ಕಷ್ಟವಾಗುತ್ತದೆ. ಅದೇ ಒಂದು ರೀತಿಯ ಅವ್ಯವಸ್ಥೆಯಿಂದ ಕೂಡಿರುತ್ತದೆ. ನಿಜವಾದ ಅಭ್ಯಾಸವು ನೀವು ಒಂದು ಅಭ್ಯಾಸಕ್ಕೆ ಬದ್ಧರಾಗಿರಬೇಕೆಂದು ಬೋಧಿಸುತ್ತದೆ. ಆದರೆ ನೀವು ಇದರಿಂದ ದೂರ ಹೋಗಲಾಗುವುದಿಲ್ಲ. ಇತರರೂ ಸಹ ಉತ್ತಮರೆಂದು ಯಾವ ಅಭ್ಯಾಸಿಗರು ಒಪ್ಪಿಕೊಳ್ಳುವುದಿಲ್ಲವೋ ಮತ್ತು ತಮ್ಮ ಸ್ವಾರ್ಥಮನೋಭಾವನೆಯನ್ನು ಬಿಡುವುದಿಲ್ಲವೋ ಅಂತಹವರಲ್ಲಿ, ಅಂದರೆ ನಿಜವಾದ ಅಭ್ಯಾಸಿಗರಲ್ಲಿ ಈ ಸಮಸ್ಯೆ ಪ್ರಕಟ ಗೊಳ್ಳುತ್ತದೆ. ಇಂತಹವರು ಮತ್ಸರದಿಂದ ಕುದಿಯುವ ಸಾಧ್ಯತೆ ಇರುತ್ತದೆ.

ಇಲ್ಲಿ ನಿಮಗೊಂದು ಕಥೆಯುಂಟು, ದೇವರ ಅವತಾರದ ಬಗ್ಗೆ ಸಂತ **ಶೇನ್ ಗಾಂಗ್ ಬೋ** (Shen Gong Bao), **ಜಿಯಾಂಗ್ ಜಿಯೊ** (Jiang Ziyo) ಹಳೆಯದು ಮತ್ತು ಅಸಮಂಜಸವಾದದ್ದೆಂದು ಯೋಚಿಸುತ್ತಾರೆ.

ಆದರೂ ಗೌರವಾನ್ವಿತರಾದ ದೈವಸ್ವರೂಪರಾದ ಮೂಲವು ಜಿಯಾಂಗ್ ಜಿಯೊ (Jiang Ziyo) ರವರನ್ನು ದೇವರಿಗೆ ಶಿರೋನಾಮೆಯನ್ನು ಕೊಡು ಎಂದು ಕೇಳುತ್ತಾರೆ. ನಂತರ ಶೇನ್‌ಗಾಂಗ್‌ಬೋ ರವರು ಇದು ಪಕ್ಷಪಾತವೆಂದು ಚಿಂತಿಸುತ್ತಾರೆ. ಮತ್ತು ಅವರು ಅದರೊಂದಿಗೆ ಸಲಿಗೆಯಿಂದ ವರ್ತಿಸಲು ಸಾಧ್ಯವಾಗುವುದಿಲ್ಲ. ಅವರನ್ನು ದೇವರಿಗೆ ಶಿರೋನಾಮೆಯನ್ನು ಕೊಡು ಎಂದು ಏಕೆ ಕೇಳಲಾಯಿತು? ನೋಡಿ ನಾನೆಷ್ಟು ಶಕ್ತಿವಂತ, ಶೇನ್ ಗಾಂಗ್ ಬೋ ತನ್ನ ತಲೆಯನ್ನು ಕತ್ತರಿಸಿದ ನಂತರ ಅದನ್ನು ಮತ್ತೆ ಸ್ವಸ್ಥಾನದಲ್ಲಿಡಲು ನನಗೆ ಸಾಧ್ಯ, ದೇವರಿಗೆ ಶಿರೋನಾಮೆಯನ್ನು ಕೊಡೆಂದು ನನ್ನನ್ನೇಕೆ ಕೇಳಲಿಲ್ಲ? ಏಕೆಂದರೆ ಆತನಲ್ಲಿ ನಂಬಲಾಗದಷ್ಟು ಮತ್ಸರವುಂಟಾಗುತ್ತದೆ ಮತ್ತು ಆತನು ಯಾವಾಗಲೂ ಜಿಯಾಂಗ್ ಜಿಯೋ ರವರಿಗೆ ತೊಂದರೆಯನ್ನುಂಟು ಮಾಡುತ್ತಿರುತ್ತಾನೆ.

ಹಿಂದೆ ಶಾಕ್ಯ ಮುನಿಗಳ ಕಾಲದಲ್ಲಿ ಬೌದ್ಧಧರ್ಮವು ತನ್ನಲ್ಲಿ ಸಾಮರ್ಥ್ಯಗಳನ್ನು ಸಮಾವೇಶಗೊಳಿಸುತ್ತಿತ್ತು. ಆದರೆ ಈ ನಡುವೆ ಬೌದ್ಧಧರ್ಮದಲ್ಲಿ ಅದರ ಬಗ್ಗೆ ಮಾತನಾಡುವ ಧೈರ್ಯವನ್ನು ಯಾರೂ ಮಾಡುವುದಿಲ್ಲ. ನೀವು ಸಾಮರ್ಥ್ಯದ ಬಗ್ಗೆ ಮಾತನಾಡಿದರೆ ನೀವು ಉನ್ಮತ್ತರಾಗಿರುವಿರೆಂದು ಕೊಳ್ಳುತ್ತಾರೆ. ಯಾವ ಸಾಮರ್ಥ್ಯಗಳು? ಅದನ್ನವರು ಒಪ್ಪಿಕೊಳ್ಳುವುದೇ ಇಲ್ಲ. ಮತ್ತು ಏಕೆ ಅವರು ಒಪ್ಪಿಕೊಳ್ಳುವುದಿಲ್ಲ. ಇತ್ತೀಚಿನ ಸನ್ಯಾಸಿಗಳಿಗೆ ಅದರ ಬಗ್ಗೆ ಒಂದು ಸುಳಿವೂ ಸಹ ತಿಳಿದಿರುವುದಿಲ್ಲ. ಶಾಕ್ಯ ಮುನಿಗಳಿಗೆ ಹತ್ತು ಶ್ರೇಷ್ಠ ಅನುಯಾಯಿಗಳಿದ್ದರು ಮತ್ತು ಅವರು ಹೇಳಿದರ ಮೌಧ್ಗಲ್ಯಾನಾನು (Maudagalyaayana) ದೈವೀಕ ಶಕ್ತಿಗಳಲ್ಲಿ ಮೊದಲಿಗರಾಗಿದ್ದು. ಬೌದ್ಧ ಧರ್ಮವು

---

2. **ಶೇನ್ ಗಾಂಗ್ ಬೋ** (Shen Gong Bao)– ಚೈನಾದ ಆಧ್ಯಾತ್ಮಿಕ ಕಥೆಗಳಲ್ಲಿನ ಅಸೂಯೆಯಿಂದ ಕೂಡಿದ ಪಾತ್ರ.

3. **ಜಿಯಾಂಗ್ ಜಿಯೊ** (Jiang Ziyo) – ಚೈನಾದ ಆಧ್ಯಾತ್ಮಿಕ ಕಥೆಗಳಲ್ಲಿನ ಒಂದು ಪಾತ್ರ.

ಚೈನಾದಲ್ಲಿ ಹರಡುವಾಗ ಅದೇ ರೀತಿಯಾಗಿ ಪ್ರತಿ ತಲೆಮಾರಿನಲ್ಲೂ ಹೆಚ್ಚು ಸಂಖ್ಯೆಯ ಸುಶಿಕ್ಷಿತ ಸನ್ಯಾಸಿಗಳಿದ್ದರು ಮತ್ತು ಬೋಧಿ ಧರ್ಮವು ಚೀನಾಗೆ ಬಂದಾಗ ಆತನು ಜೊಂಡಿನ ಮೇಲೆ ಸವಾರಿ ಮಾಡುತ್ತಾ ನದಿಯನ್ನು ದಾಟಿದನು. ಆದರೆ ಸಮಯ ಕಳೆದಂತೆ ದೈವೀಕ ಶಕ್ತಿಗಳನ್ನು ಹೆಚ್ಚು ಹೆಚ್ಚಾಗಿ ಕಡೆಗಣಿಸಲಾಯಿತು. ಇದಕ್ಕೆ ಮುಖ್ಯ ಕಾರಣವೇನೆಂದರೆ ಹಿರಿಯ ಸನ್ಯಾಸಿಗಳು, ಮುಖ್ಯಸ್ಥರಾದ ಸನ್ಯಾಸಿಗಳು ಹಾಗೂ ಬೌದ್ಧ ದೇವಾಲಯ ಗಳಲ್ಲಿರುವ ಮಠಾಧಿಪತಿಗಳು ಮುಂತಾದ ಜನರಿಗೆ ಶ್ರೇಷ್ಠ ಅಡಿಪಾಯವಿಲ್ಲದಿರುವುದೇ ಆಗಿದೆ.

ಖಂಡಿತ ಅವರೆಲ್ಲರೂ ಮಠಾಧಿಪತಿಗಳು ಅಥವಾ ಹಿರಿಯ ಸನ್ಯಾಸಿಗಳು, ಆದರೆ ಅವೆಲ್ಲವೂ ಕೇವಲ ಸಾಮಾನ್ಯ ಜನರ ಸ್ಥಾನಮಾನಗಳು. ಅವರು ಈಗಲೂ ಅಭ್ಯಾಸ ಮಾಡುತ್ತಿದ್ದಾರೆ. ಜೊತೆಗೆ ಕೇವಲ ಪೂರ್ಣ ಸಮಯವೂ ಮಾಡುತ್ತಾರೆ. ಆದರೆ ಮನೆಗಳಲ್ಲಿ ಅರೆಕಾಲಿಕ ಅಭ್ಯಾಸವನ್ನು ಮಾಡುತ್ತಾರೆ. ಕೇವಲ ನಿಮ್ಮ ಮನಸ್ಸನ್ನು ಹಿಡಿತದಲ್ಲಿಟ್ಟು ಕೊಳ್ಳಬೇಕು. ಅಭ್ಯಾಸದಲ್ಲಿ ನೀವು ವಿಜಯ ಹೊಂದುವಿರೋ ಇಲ್ಲವೋ ಎನ್ನುವುದು ನಂತರದ ವಿಷಯ. ಇದು ಎಲ್ಲರಿಗೂ ಸತ್ಯ ನೀವು ಇದರಲ್ಲಿ ಜಯ ಹೊಂದದಿದ್ದಲ್ಲಿ ಇದು ಕೆಲಸ ಮಾಡುವುದಿಲ್ಲ. ಆದರೆ ಒಬ್ಬ ಕಿರಿಯ ಸನ್ಯಾಸಿ ತನಗೆ ತಾನೇ ಎಲ್ಲವನ್ನೂ ಮಾಡಿಕೊಳ್ಳತಕ್ಕವನು. ಆತನಿಗೆ ಕನಿಷ್ಟ ಅಡಿಪಾಯವೇ ಇರಬೇಕೆಂಬ ನಿಯಮವೇನಿಲ್ಲ, ಆತನು ಎಷ್ಟು ಕಷ್ಟಗಳನ್ನು ಸಹಿಸಿಕೊಳ್ಳುತ್ತಾನೆಯೋ ರಹಸ್ಯವನ್ನು ಬೇಧಿಸಲು ಆತನಿಗೆ ಅಷ್ಟೇ ಅನುಕೂಲವಾಗುತ್ತದೆ. ಆದರೆ ಹಿರಿಯ ಸನ್ಯಾಸಿಗಳು ಎಷ್ಟು ಸುಖವನ್ನು ಬಯಸುತ್ತಾರೋ ರಹಸ್ಯವನ್ನು ಬೇಧಿಸಲು ಅವರಿಗೆ ಅಷ್ಟೇ ಕಷ್ಟವಾಗುತ್ತದೆ. ಏಕೆಂದರೆ ಅಂದಿನಿಂದಲೂ ಕರ್ಮದ ರೂಪಾಂತರವು ವಿವಾದಾಂಶವಾಗಿದೆ. ಕಿರಿಯ ಸನ್ಯಾಸಿಯು ಬಹಳಷ್ಟು ಕಷ್ಟಪಟ್ಟು ಸಾಧನೆಯನ್ನು ಮಾಡುತ್ತಾನೆ. ಹೀಗಾಗಿ ಆತನು ತನ್ನ ಕರ್ಮವನ್ನು ಬೇಗ ಕಳೆದುಕೊಳ್ಳುತ್ತಾನೆ ಮತ್ತು ಆದಷ್ಟು ಬೇಗ ಜ್ಞಾನೋದಯ ಪಡೆಯುತ್ತಾನೆ. ಮತ್ತು ಎಂದೋ ಒಂದು ದಿನ ಒಡನೆಯೇ ಆತನು ರಹಸ್ಯವನ್ನು ಬೇಧಿಸಬಹುದು. ಆತನು ಈ ಸಾಧನೆಯಿಂದ ಅಥವಾ ಜ್ಞಾನೋದಯದಿಂದ ಅಥವಾ ಆತನ ಅರೆಜ್ಞಾನ ಜ್ಞಾನೋದಯ ಹಾಗೂ ಆತನ ದೈವೀಕ ಶಕ್ತಿಯು ಪ್ರಕಟಗೊಳ್ಳಬಹುದು. ಆತನಿರುವ ಪ್ರತಿಯೊಬ್ಬರೂ ಆತನಿಂದ ಪ್ರಭಾವಿತರಾಗಬಹುದು. ಆದರೆ ನಂತರ ಮಠಾಧಿಪತಿಯು ಇದನ್ನು ಸಹಿಸ ಲಾಗುವುದಿಲ್ಲ. ಈಗ ನಾನು ಹೇಗೆ ಮಠಾಧಿಪತಿಯಾಗಿರಲಿ? ಎಂತಹ ಜ್ಞಾನೋದಯ? ಆತನು ಹುಚ್ಚಾಗುತ್ತಾನೆ. ಆತನನ್ನು ಇಲ್ಲಿಂದು ಹೊರಹಾಕಿರಿ ಮತ್ತು ಅವರು ದೇವಾಲಯ ದಿಂದ ಆತನನ್ನು ಹೊರಹಾಕುತ್ತಾರೆ. ಕಾಲಕಳೆದಂತೆ ಹಾನ್ (Han) ಕ್ಷೇತ್ರದಲ್ಲಿ ಬೌದ್ಧಧರ್ಮವನ್ನು ಅಭ್ಯಾಸಮಾಡುವ ಯಾವುದೇ ವ್ಯಕ್ತಿ ಸಾಮರ್ಥ್ಯದ ಬಗ್ಗೆ ಮಾತನಾಡುವ ಧೈರ್ಯ ಮಾಡುವುದಿಲ್ಲ. ಚಿಗಾಂಗ್ ಎಷ್ಟು ಶಕ್ತಿಯುಳ್ಳದ್ದೆಂದು ನೋಡಿ, ಎಮ್ಮೀ ಬೆಟ್ಟದ ಮರಗಳ ಬುಡ್ಡೆಗಳನ್ನು ತಂದನು ಮತ್ತು ಅದನ್ನು ಒಂದಾದ ನಮತರ ಒಂದರಂತೆ ಬಾವಿಗೆ ಎಸೆದನು. ಆದರೆ ಕೊನೆಯಲ್ಲಿ ಆತನನ್ನು ಅದೇ ರೀತಿಯಾಗಿ ಲಿಂಗಿನ್ (Lingyin) ದೇವಾಲಯದಿಂದ ಹೊರದೂಡಲಾಯಿತು.

ಮತ್ಸರವು ಬಹಳ ಗಂಭೀರವಾದದ್ದು, ಏಕೆಂದರೆ ನಾವು ಸರಿಯಾದ ಅಭ್ಯಾಸವನ್ನು ಮಾಡುವುದರ ಮೇಲೆ ಇದು ನೇರವಾದ ಪರಿಣಾಮವನ್ನು ಬೀರುತ್ತದೆ. ಮತ್ಸರವನ್ನು ನೀವು ಕಿತ್ತೊಗೆಯದಿದ್ದರೆ, ನೀವು ಅಭ್ಯಾಸ ಮಾಡಿರುವ ವಿಚಾರಗಳೆಲ್ಲವೂ ಬಹಳ ನಾಜೂಕಾಗುತ್ತವೆ. ಇಲ್ಲೊಂದು ನಿಯಮವಿದೆ, ಯಾವ ವ್ಯಕ್ತಿಯು ಅಭ್ಯಾಸ ಮಾಡುತ್ತಿರುವಾಗ ಮತ್ಸರವನ್ನು ಬಿಡಲಾಗುವುದಿಲ್ಲವೋ, ಅವನಿಗೆ ಫಲ ಸಿಗುವುದಿಲ್ಲ, ಖಂಡಿತವಾಗಿಯೂ ಆತನಿಗೆ ಫಲ ಸಿಗುವುದಿಲ್ಲ. ಬಹುಶಃ ನೀವು ಜನಗಳು ಹೇಳಿಕೊಳ್ಳು ವುದನ್ನು ಕೇಳಿರಬಹುದು. ಕರ್ಮಾನುಸಾರ ಸ್ವರ್ಗಕ್ಕೇರುವುದನ್ನು ಬುದ್ಧ ಅಮಿತಾಬನು ಹೇಳಿದ್ದಾನೆ. ಆದರೆ ಮಾತ್ಸರ್ಯವನ್ನು ಬಿಡದಿದ್ದರೆ ಅದು ಸಾಧ್ಯವಾಗುವುದಿಲ್ಲ. ಯಾವುದರಲ್ಲಾದರೂ ನಾವು ಕಡಿಮೆ ಬೀಳಬಹುದು. ಸ್ವರ್ಗಾರೋಹಣವನ್ನು ಮಾಡಲು ಸ್ವಲ್ಪ ಕರ್ಮದೊಂದಿಗೆ ಮತ್ತು ಅಭ್ಯಾಸ ಮುಂದುವರೆಸಲು ಇಲ್ಲಿ ಸಾಧ್ಯವುಂಟು. ಆದರೆ ಇದು ಖಂಡಿತವಾಗಿಯೂ ಸಾಧ್ಯವಾಗುವುದು ಮಾತ್ಸರ್ಯವನ್ನು ಬಿಟ್ಟಾಗಲೇ. ಈ ದಿನ ಅಭ್ಯಾಸಿಗರಿಗೆ ನಾನು ಹೇಳುತ್ತೇನೆ, ನಿಮ್ಮ ಸಮಸ್ಯೆಗೆ ನೀವು ಕುರುಡಾಗಿರಬೇಡಿ, ನಿಮ್ಮ ಗುರಿ ಅತ್ಯುತ್ತಮ ಮಟ್ಟಕ್ಕೇರಲು

ಅಭ್ಯಾಸ ಮಾಡುವುದೇ ಆಗಿದೆ. ಆದ್ದರಿಂದ ನೀವು ಮಾತ್ಸರ್ಯವನ್ನು ಬಿಡಲೇ ಬೇಕು, ಹೀಗಾಗಿ ಮಾತ್ಸರ್ಯವನ್ನೇ ನಾನು ಬೇರ್ಪಡಿಸಿ ಮಾತನಾಡಿದ್ದು.

**ಖಾಯಿಲೆಯ ಚಿಕಿತ್ಸೆಯ ವಿಧಾನ**

ನಾನು ಗುಣ ಮಾಡುವ ವಿಷಯವನ್ನು ಚರ್ಚೆಗೆ ತರುತ್ತಿದ್ದೇನೆ. ಆದರೆ ಗುಣ ಮಾಡುವುದನ್ನು ಬೋಧಿಸಲು ಅಲ್ಲ. ನಿಜವಾದ ಫಾಲೂನ್ ದಾಫಾದ ಕೃಷಿಕರ್ತನೂ ಜನರನ್ನು ಗುಣಮಾಡಲಾಗುವುದಿಲ್ಲ. ನೀವು ವಾಸಿ ಮಾಡಿದ ಕ್ಷಣವೇ ನನ್ನ ನಿಯಮ ದಳಗಳು ನಿಮ್ಮ ದೇಹ ಹೋರುವ ಫಾಲೂನ್ ದಾಫಾದ ಎಲ್ಲಾ ವಿಷಯಗಳನ್ನು ಹಿಂತೆಗೆದುಕೊಳ್ಳುತ್ತದೆ. ನಾವು ಇದನ್ನು ಇಷ್ಟು ಗಂಭೀರವಾಗಿ ಏಕೆ ತೆಗೆದುಕೊಳ್ಳುತ್ತೇವೆ? ಏಕೆಂದರೆ ಫಾಲೂನ್ ದಾಫಾವನ್ನು ಇದು ಹಾನಿ ಮಾಡುವಂತಹ ವಿಷಯ. ಇದು ನಿಮ್ಮ ಆರೋಗ್ಯವನ್ನು ಹಾಳು ಮಾಡುವುದಲ್ಲದೆ, ಯಾರನ್ನೊ ಗುಣ ಮಾಡಿದವರು ಮತ್ತೊಮ್ಮೆ ಗುಣ ಮಾಡಲು ಯತ್ನಿಸುತ್ತಾರೆ ಮತ್ತು ತೋರಿಸಿಕೊಳ್ಳಲು ಯಾರೇ ಸಿಕ್ಕರೂ ಗುಣ ಮಾಡಲು ಯತ್ನಿಸುತ್ತಾರೆ ಮತ್ತು ತೋರಿಸಿಕೊಳ್ಳಲು ಯಾರೇ ಸಿಕ್ಕರೂ ಗುಣ ಮಾಡಲು ಮುಂದಾಗುತ್ತಾರೆ. ಇದು ಬಾಂಧವ್ಯವಲ್ಲವೇ? ಇದು ನಿಮ್ಮ ಅಭ್ಯಾಸದ ಮೇಲೆ ಬಹಳ ಗಂಭೀರವಾದ ಪರಿಣಾಮವನ್ನುಂಟು ಮಾಡುತ್ತದೆ.

ಬಹಳಷ್ಟು ಬಡಾಯಿ ಚಿಗಾಂಗ್ ಮಾಸ್ತರರು ಜನರನ್ನು ಗುಣಪಡಿಸಿರುವುದನ್ನು ಬಂಡವಾಳವಾಗಿಟ್ಟುಕೊಳ್ಳಲು ಬಯಸುತ್ತಾರೆ. ಇದನ್ನು ಸಾಮಾನ್ಯ ಜನಗಳು ಗಾಂಗ್‌ನ್ನು ಕಲಿತ ನಂತರ ಅವರಿಗೆ ಅರಿವಾಗುತ್ತದೆ. ಮುಂದೆ ಅವರು ನಿಮಗೆ ಆ ವಿಷಯಗಳನ್ನು ಬೋಧಿಸುತ್ತಾರೆ ಮತ್ತು 'ಚೀ' ಯನ್ನು ಹೊರದೂಡಿದಾಗ ವಾಸಿ ಮಾಡಿದಂತೆಯೇ ಎಂದು ಸಾಧಿಸುತ್ತಾರೆ. ಇದು ತಮಾಷೆಯಲ್ಲವೇ? ನಿನ್ನದು 'ಚೀ' ಅವನದೂ 'ಚೀ' ಯಾವಾಗ ನೀನು 'ಚೀ' ಯನ್ನು ಹೊರಬಿಟ್ಟಾಗ ಅದು ಅದನ್ನು ಗುಣಪಡಿಸುವುದೇ? ಬಹುಶ: ಅವನ 'ಚೀ' ನಿಮ್ಮ 'ಚೀ' ಯನ್ನು ವಶಪಡಿಸಿಕೊಳ್ಳುತ್ತದೆ!. ಒಂದು 'ಚೀ' ಮತ್ತೊಂದು 'ಚೀ' ಯನ್ನು ಒತ್ತಿ ಹಿಡಿಯಲಾಗುವುದಿಲ್ಲ. ಒಬ್ಬ ಮನುಷ್ಯ ಉನ್ನತ ಮಟ್ಟದ ಗಾಂಗ್ (ಕೃಷಿ ಶಕ್ತಿ) ಯನ್ನು ಅಭ್ಯಾಸಿಸಿದರೆ ಅವನು ಉಚ್ಚ ಭೌತದ್ರವ್ಯವನ್ನು ಹೊರಬಿಡುತ್ತಾನೆ. ಅದು ಖಚಿತ ವಾಗಿಯೂ ಗುಣಪಡಿಸಿ ರೋಗ ನಿರೋಧಕ ಶಕ್ತಿಯನ್ನು ಉಂಟು ಮಾಡುತ್ತದೆ ಮತ್ತು ತನ್ನನ್ನು ನಿಗ್ರಹಿಸಿಕೊಳ್ಳುವ ಪರಿಣಾಮವನ್ನು ಹೊಂದಿರುತ್ತದೆ. ಆದರೆ ಅದರ ಬೇರಿನಿಂದ ಕಿತ್ತೊಗೆಯಲು ಸಾಧ್ಯವಾಗುವುದಿಲ್ಲ. ಹೀಗಾಗಿ ನಿಜವಾಗಿಯೂ ಏನಾದರೊಂದನ್ನು ಗುಣಪಡಿಸಬೇಕಾದರೆ, ಒಬ್ಬ ಮನುಷ್ಯನಿಗೆ ಅದನ್ನು ಸಂಪೂರ್ಣವಾಗಿ ಗುಣಪಡಿಸ ಬೇಕಾದರೆ, ಅಗತ್ಯವಾದ ಸಾಮರ್ಥ್ಯವನ್ನು ಹೊಂದಿರಬೇಕು. ಪ್ರತಿಯೊಂದು ದೇಹದ ತೊಂದರೆಯನ್ನು ಗುಣಪಡಿಸಲು ವಿಶಿಷ್ಟ ಸಾಮರ್ಥ್ಯವಿರುತ್ತದೆ. ನಾನು ನಿಮಗೆ ಹೇಳಬಲ್ಲೆ, ಸುಮಾರು ನೂರಕ್ಕೂ ಹೆಚ್ಚು ವಿಧದ ಸಾಮರ್ಥ್ಯಗಲು ಕೇವಲ ದೇಹದ ತೊಂದರೆಗಳನ್ನು ಗುಣಪಡಿಸಲು ಇದೆ. ಏನಾದರೂ ಎಷ್ಟು ತರಹದ ವ್ಯಾಧಿ ಇರುತ್ತದೆಯೋ ಅಷ್ಟು ಗುಣಪಡಿಸುವ ಸಾಮರ್ಥ್ಯಗಳು ಇರುತ್ತದೆ. ನಿಮ್ಮಲ್ಲಿ ಆ ಸಾಮರ್ಥ್ಯಗಳು ಇಲ್ಲದಿದ್ದರೆ ನೀವು ಏನೇ ಉಪಾಯ ಹೂಡಿದರೂ, ಕೆಲಸ ಆಗುವುದಿಲ್ಲ.

ಇತ್ತೀಚೆಗೆ ಕೆಲವರು ಈ ಅಭ್ಯಾಸದ ಜಗತ್ತನ್ನು ಅವ್ಯವಸ್ಥೆಗೊಳಿಸಿದ್ದಾರೆ. ಚಿಗಾಂಗ್ ಮಾಸ್ತರರು ಬಹಿರಂಗವಾಗಿ ಜನರನ್ನು ಗುಣಪಡಿಸಲು ಬಂದು ಮತ್ತು ಆರೋಗ್ಯವಾಗಿರಿಸಿ ದರು ಅಥವಾ ಬಹಿರಂಗವಾಗಿಯೇ ಬಂದು ಆದಿಗೆ ಹಾದಿ ಮಾಡಿದರು. ಇಂತಹ ಜನಗಳಿಗೆ ಗುಣಪಡಿಸುವುದನ್ನು ಬೋಧನೆ ಮಾಡಿದ್ದಾದರೂ ಯಾರು? ಅವರೆಲ್ಲರೂ ಅವರಾಗಿಯೇ ನಿಮ್ಮನ್ನು ಗುಣಪಡಿಸಿದರು ಅಥವಾ ಅಭ್ಯಾಸ ಮಾಡಿಕೊಳ್ಳಲು ಬೋಧಿಸಿದರೂ ಅಥವಾ ನಿಮ್ಮ ದೇಹವನ್ನು ಚೈತನ್ಯಗೊಳಿಸಿ ನಿಮಗೆ ಕೆಲವು ತರಹದ ಯೋಗಾಭ್ಯಾಸಗಳನ್ನು ಬೋಧಿಸುತ್ತಾರೆ. ಅದಾದ ನಂತರ ನೀವಾಗಿಯೇ ಅಭ್ಯಾಸ ಮಾಡಿಕೊಂಡರೆ ನಿಮ್ಮನ್ನು ನೀವೇ ಗುಣಪಡಿಸಿಕೊಳ್ಳಬಹುದು. ದಿನಗಳು ಕಳೆದಂತೆ ಬಡಾಯಿ ಚಿಗಾಂಗ್ ಮಾಸ್ತರರು ಬಹಿರಂಗವಾಗಿ ಬಂದು ಹೊಲಸು ರೀತಿಯಲ್ಲಿ ಅವ್ಯವಸ್ಥೆಯನ್ನುಂಟು ಮಾಡುತ್ತಾರೆ. ಯಾರೇ ಆಗಲೀ ಜನರನ್ನು ಗುಣಪಡಿಸಲು ಇಚ್ಛಿಸಿದರೆ ಅದರ ಅಧೀನದಲ್ಲಿರಲು ಬಯಸುತ್ತಾರೆ. ಇದರ ಬಗ್ಗೆ ಯಾವ ಪ್ರಶ್ನೆಯೂ ಬರುವಂತಿಲ್ಲ. ಹಿಂದೆ ಇದ್ದಂತಹ ವಾತಾವರಣದಲ್ಲಿ ಕೆಲ

ಚಿಗಾಂಗ್ ಮಾಸ್ತರರು ಗುಣಪಡಿಸುತ್ತಿದ್ದರು. ಹೀಗಾಗಿ ಅದು ಬಾಹ್ಯಾಕಾಶದ ಸಂಗತಿಗಳನ್ನು ಹೊಂದಾಣಿಸಲು ಮಾತ್ರ. ಆದರೆ ಅದು ಒಬ್ಬ ಸಾಧಾರಣ ಮನುಷ್ಯನ ಕೌಶಲ್ಯದಲ್ಲಿ ಮತ್ತು ಅದು ದೀರ್ಘಕಾಲ ಉಳಿಯಲಿಲ್ಲ. ಅದು ಬಾಹ್ಯಕಾಶದ ಸಂಗತಿಗಳಿಂದ ಪರಿಣಾಮವಾಗಿ ಬಂದದ್ದು ಮತ್ತು ಆ ಕಾಲದ ಗುಣಾತ್ಮಕತೆ, ಮುಂದೆ ಮುಂದೆ ಜನರು ಒಬ್ಬರೇ ಬೇರೆಯವರಿಗೆ ಇದನ್ನು ಬೋಧಿಸಲು ತೊಡಗಿದಾಗ, ಅವರು ಆ ನಿಟ್ಟಿನಲ್ಲಿ ಯಶಸ್ಸು ಪಡೆಯಲಿಲ್ಲ. ಒಬ್ಬ ಸಾಮಾನ್ಯ ಮನುಷ್ಯ ಮೂರರಿಂದ ಐದು ದಿನಗಳಲ್ಲಿ ಅಭ್ಯಾಸ ಮಾಡಿಕೊಂಡ ಮಾತ್ರಕ್ಕೆ ಯಾರನ್ನಾದರೂ ಗುಣಪಡಿಸಲು ಸಾಧ್ಯವೇ? ಕೆಲವು ಮನುಷ್ಯರು ನಾನು ರೋಗವನ್ನು ವಾಸಿ ಮಾಡುತ್ತೇನೆ ಎಂದು ಹೇಳಿಕೊಳ್ಳುತ್ತಾರೆ. ನಾನು ನಿಮಗೆ ಹೇಳುತ್ತೇನೆ ಆ ಮನುಷ್ಯರೆಲ್ಲ ಅಧೀನಕ್ಕೊಳಗಾಗಿರುತ್ತಾರೆ. ಅವರಿಗೇನು ಗೊತ್ತು, ಅವರ ಹಿಂದೆ ಏನಾಗಿದೆ ಎಂದು? ಅವರು ಅಧೀನಕ್ಕೊಳಗಾಗಿರುತ್ತಾರೆ. ಆದರೆ ಅದು ಅವರ ಅರಿವಿಗೆ ಬಂದಿರುವುದಿಲ್ಲ ಹಾಗೆಯೇ ತಿಳಿದಿರುವುದಿಲ್ಲ. ಅವರು ಇದು ಬಹಳ ಒಳ್ಳೆಯದು ಎಂದು ಯೋಚಿಸುತ್ತಾರೆ ಮತ್ತು ಕೆಲವು ವಿಶೇಷ ಸಾಮರ್ಥ್ಯಗಳನ್ನು ಹೊಂದಿದ್ದೇನೆ ಎಂದು ತಿಳಿಯುತ್ತಾರೆ.

ನಿಜವಾದ ಚಿಗಾಂಗ್ ಮಾಸ್ತರರು ಇದನ್ನು ಸಾಧಿಸಲು ಸುಮಾರು ವರ್ಷಗಳು ಪ್ರಯಾಸಕರ ಅಭ್ಯಾಸವನ್ನು ಮಾಡಬೇಕಾಗುತ್ತದೆ. ಹಾಗಾದರೆ ಇದರ ಬಗ್ಗೆ ಯೋಚಿಸಿ, ನೀವು ಯಾರಿಗಾದರೂ ಚಿಕಿತ್ಸೆ ಮಾಡಿದಲ್ಲಿ, ನಿಮ್ಮಲ್ಲಿ ಆ ಕರ್ಮವನ್ನು ವರ್ಜಿಸಲು ಪ್ರಬಲ ಸಾಮರ್ಥ್ಯವಿದೆಯೇ? ನೀವೆಂದಾದರೂ ನಿಜವಾದ ಮಾರ್ಗದರ್ಶನ ಪಡೆದಿದ್ದೀರಾ? ನೀವು ಮಾತ್ರ ಎರಡು ದಿನ ಕಲಿಕೆಯಿಂದ ಯಾರನ್ನಾದರೂ ಗುಣಪಡಿಸಬಲ್ಲಿರಾ? ನೀವು ನಿಮ್ಮ ಸಾಧಾರಣ ಮನುಷ್ಯ ಕೈಗಳಿಂದ ಗುಣಮಾಡಬಲ್ಲಿರಾ? ಎಲ್ಲವೂ ಅದೇ, ಆ ಬಡಾಯಿ ಚಿಗಾಂಗ್ ಮಾಸ್ತರರು ನಿಮ್ಮ ದುರ್ಬಲತೆಯಿಂದ ಲಾಭ ಪಡೆದಿದ್ದಾರೆ, ಜನಗಳ ಬಾಂಧವ್ಯದಿಂದ ಅನುಕೂಲತೆಯನ್ನು ಪಡೆದಿದ್ದಾರೆ. ನೀವೂ ಜನಗಳನ್ನು ಗುಣಪಡಿಸಲು ಪ್ರಯತ್ನಿಸುತ್ತಿದ್ದಾರಲ್ಲವೇ? ಇರಲಿ! ಹೀಗಾಗಿ ಅವರು ನಿಮಗೆ ವಿಶಿಷ್ಟವಾಗಿ ಗುಣಮಾಡುವ ಪದ್ಧತಿಗಳನ್ನು ಬೋಧಿಸಲು ಚಿಕಿತ್ಸಾ ತರಬೇತಿಗಳನ್ನು ನಡೆಸುತ್ತಾರೆ. ಅವುಗಳಲ್ಲಿ ಚೀ– ಸೂಜಿ ಸತ್ವ, ಬೆಳಕು–ಚಿಕಿತ್ಸಾ ಸತ್ವ, ಸ್ರಾವ ಮತ್ತು ಅನುಬಂಧ ಸತ್, ಅಕ್ಯೂಪ್ರೆಷರ್ ಸತ್ವ, ಎಲ್ಲವೂ ಬಾಚಿಕೊಳ್ಳುವ ವಿಧಾನಗಳು ಆ ಸತ್ವಗಳಿಗೆ ಇನ್ನು ವಿಚಿತ್ರ ಹೆಸರುಗಳಿವೆ. ನಿಮ್ಮಲ್ಲಿರುವ ಹಣವನ್ನು ಪಡೆದುಕೊಳ್ಳಲು ಅವರು ಮಾಡುತ್ತಿರುವ ಪ್ರಯತ್ನಗಳಿವು.

ಸಾಮಾನ್ಯ ವಿಷಯದ ಬಗ್ಗೆ ಮಾತನಾಡೋಣ, ನಾವು ನೋಡಿದ್ದನ್ನು ನಿಮಗೆ ತೋರಿಸುತ್ತೀವಿ, ಜನಗಳಲ್ಲಿ ಏಕೆ ದೇಹ ತೊಂದರೆಗಳುಂಟಾಗುತ್ತದೆ? ಜನರ ಈ ಎಲ್ಲ ತೊಂದರೆಗಳು ಮತ್ತು ದುರ್ದೆಶೆಗೆ ಮೂಲಕಾರಣ ಅವರ ಕರ್ಮ, ಆ ಕಪ್ಪು ದ್ರವ್ಯ ಕಾರ್ಮಿಕ ಕಾರ್ಯಕ್ಷೇತ್ರ. ಆ ಕೆಟ್ಟ ವಸ್ತುಗಳು ಪ್ರಾಕೃತಿಕವಾಗಿಯೂ 'ಯಿನ್' ಆಗಿರುತ್ತದೆ. ಅವು ಸುಲಭವಾಗಿ ಹೊರಬರಲಾರವು, ವಾತಾವರಣ ಅವರಿಗೆ ಒಗ್ಗುತ್ತದೆ. ಜನಗಳ ದೈಹಿಕ ತೊಂದರೆಗಳಿಗೆ ಇದೇ ಮೂಲಕಾರಣ ಮತ್ತು ಪ್ರಮುಖ ಮೂಲವಾಗಿರುತ್ತದೆ. ಬಹುಶ: ಅವುಗಳಿಗೆ ಎರಡು ಆಕಾರಗಳಿರುತ್ತವೆ. ಅವುಗಳಲ್ಲೊಂದು ಬಹಳಷ್ಟು ಚಿಕ್ಕದು, ಪ್ರಧಾನ ಸಾಂದ್ರ ಪುಟ್ಟ ವಸ್ತುಗಳು. ಅವುಗಳು ಕರ್ಮದ ಗುಂಪಿದ್ದಂತೆ, ಮತ್ತೊಂದು ಏನೆಂದರೆ ಕೊಳವೆಯಲ್ಲಿ ಸಾಗಿಸಿಕೊಂಡು ಬಂದಂತೆ ಆದರೆ ಇದು ಬಲು ಅಪರೂಪ ಮತ್ತು ಇವೆಲ್ಲರೂ ತಲೆತಲಾಂತರದಿಂದ ಕೂಡಿಕೊಂಡು ಬಂದಿರುವಂತಹದ್ದು. ಹೀಗೂ ಆಗುತ್ತದೆ.

ಬನ್ನಿ ಸಾಮಾನ್ಯವಾಗಿರುವ ವಿಷಯದ ಬಗ್ಗೆ ಚರ್ಚಿಸೋಣ, ಒಬ್ಬ ಮನುಷ್ಯನಿಗೆ ದೇಹದ ಯಾವುದಾದರೊಂದು ಭಾಗದಲ್ಲಿ ಗಡ್ಡೆ ಇದ್ದಲ್ಲಿ, ಎಲ್ಲಾದರೂ ಸೋಂಕು ಇದ್ದಲ್ಲಿ, ಎಲ್ಲಾದರೂ ಮೂಳೆಯ ಬೇನೆಯು ಇದ್ದಲ್ಲಿ ಅಥವಾ ಬೇರೆ ಯಾವುದೋ ರೀತಿಯಲ್ಲಿ ತೊಂದರೆ ಇದ್ದರೂ ಮತ್ತೊಂದು ಆಯಾಮದಲ್ಲಿ ಹೇಳುವುದಾದರೆ ಆ ನಿಶ್ಚಿತ ಸ್ಥಳವು ಕುಗ್ಗಿರುತ್ತದೆ. ಈ ಆಯಾಮದಲ್ಲಿ ಒಂದು ವಿಷಯ ಅಡಗಿರುತ್ತದೆ. ಒಬ್ಬ ಆದರ್ಶವುಳ್ಳ ಚಿಗಾಂಗ್ ಮಾಸ್ಟರ್ ಇವೆಲ್ಲವನ್ನು ನೋಡಲಾರ, ಏಕೆಂದರೆ ಅವನ ಸಾಮಾನ್ಯ ಅಲೌಕಿಕತೆ ಅದನ್ನು ನೋಡಲಾರವು ಮತ್ತು ಆ ಮನುಷ್ಯನ ದೇಹದಲ್ಲಿ ಕಪ್ಪು 'ಚೀ' ಇರುವುದನ್ನು ಮಾತ್ರ ಕಾಣುತ್ತಾರೆ. ಎಲ್ಲಾದರೂ ಕಪ್ಪು 'ಚೀ' ಇದ್ದರೆ ಅಲ್ಲಿ ರೋಗವಿರುತ್ತದೆ. ಈ ವಿಚಾರದಲ್ಲಿ ಅವರುಗಳೇ ಸರಿ, ಆದರೆ ಕಪ್ಪು 'ಚೀ' ಅನ್ನುವುದು ತೊಂದರೆಗಳ ಮೂಲಕಾರಣವಲ್ಲ.

ಬದಲಾಗಿ ಇದು ಮತ್ತೂ ಆಳವಾದ ಆಯಾಮವಾಗಿದ್ದು ಆ ವಸ್ತುವೇ ಕಾರ್ಯಕ್ಷೇತ್ರವನ್ನು ಉದ್ಭವಿಸುತ್ತದೆ. ಹೀಗಾಗಿಯೇ ಜನ ಯಾವಾಗ ಕಪ್ಪು ಚೀಯನ್ನು ಹೊರದೂಡಿಸುವ ಬಗ್ಗೆ ಮಾತನಾಡುತ್ತಾರೆ ಮತ್ತು ಕಪ್ಪು ಚೀಯಿಂದ ಮನಸ್ಸು ಸ್ವಚ್ಛ ಮಾಡಿಕೊಳ್ಳುತ್ತಾರೆ. ನೀವು ಕೂಡ ಮುಂದರೆ ಹೋಗಬಹುದು ಮತ್ತು ಮನಸ್ಸು ಶುದ್ಧಿ ಮಾಡಿಕೊಳ್ಳಬಹುದು. ಅದು ಅತಿ ಶೀಘ್ರದಲ್ಲಿ ಪುನಶ್ಚೇತನಗೊಳ್ಳುತ್ತದೆ. ಕೆಲವು ವ್ಯಕ್ತಿಗಳು ಬಹಳ ಬಲವುಳ್ಳವರು ಮತ್ತು ಅವರಿಂದ ಈ ವಿಚಾರ ದೂರ ಮಾಡಿದ ನಂತರದಲ್ಲಿಯೇ, ಅವರತ್ತ ಬರಲು ಯತ್ನಿಸುತ್ತದೆ. ಅವರು ಅದನ್ನು ಪರಿಹರಿಸಬಹುದು, ಕುರುಡು–ಕುರುಡಾಗಿ ಚಿಕಿತ್ಸೆ ನೀಡುವುದರಲ್ಲಿ ಉಪಯೋಗವಿಲ್ಲ.

ಅಲೌಕಿಕ ಜ್ಞಾನವುಳ್ಳ ಸಮರ್ಥ ಜನರು ಕಪ್ಪು ಚೀ ಯನ್ನು ಅಲ್ಲೇ ನೋಡುತ್ತಾರೆ. ಮತ್ತು ಅವರು ಅದನ್ನು ರೋಗಿಷ್ಟ 'ಚೀ'ಯೆಂದು ಪರಿಗಣಿಸುತ್ತಾರೆ. ಚೀನಾದ ವೈದ್ಯಕೀಯದ ಪ್ರಕಾರ ಇವರಲ್ಲಿ ಶಕ್ತಿನಾಳಗಳು ಮುಚ್ಚಿಹೋಗಿರುತ್ತದೆ. ಅದರಲ್ಲಿ 'ಚೀ' ಮತ್ತು 'ರಕ್ತ' ಅಡಿ ಕಟ್ಟಿದ್ದು ಹೆಚ್ಚು ಕಟ್ಟಿರುತ್ತದೆ. ಶಕ್ತಿನಾಳಗಳು ಗಟ್ಟಿ ಕಟ್ಟಿರುತ್ತದೆ. ಪಾಶ್ಚಿಮಾತ್ಯ ವೈದ್ಯರು ಅದನ್ನು ಹುಣ್ಣು, ಗಡ್ಡೆ, ಮೂಳೆ ಬೇನೆ ಉರಿಯುವಿಕೆ ಅಥವಾ ಇನ್ನೇನಲ್ಲ, ರೋಗಲಕ್ಷಣಗಳೆಂದು ಪರಿಗಣಿಸುತ್ತಾರೆ. ಈ ಎಲ್ಲಾ ರೀತಿಯ ಆಯಾಮಗಳಲ್ಲಿ ಪರಿಗಣಿಸುತ್ತಾರೆ. ನೀವು ಅದನ್ನು ನಿಮ್ಮ ದೇಹದಿಂದ ತೆಗೆದ ನಂತರ ನಿಮಗೆ ಅರಿವಾಗಬಹುದು. ನಿಮ್ಮ ದೇಹದಲ್ಲಿ ಏನು ಇಲ್ಲವೆಂದು ನೀವು ನೋಡಬಹುದು ಆ ವಸ್ತುವನ್ನು ನಿಮ್ಮಿಂದ ಹೊರತೆಗೆದ ಕ್ಷಣ ನಿಮ್ಮ ಮೂಳೆ ಬೇನೆ ಅಥವಾ ಸ್ಲಿಪ್ಡ್ ಡಿಸ್ಕ್ ವಾಸಿಯಾಗಿರುವುದು ಕಂಡು ಬರುತ್ತದೆ. ನೀವು ಬೇಕಿದ್ದರೆ ಮತ್ತೊಂದು ಕ್ಷ–ಕಿರಣ ಚಿಕಿತ್ಸೆ ಮಾಡಿಸಿದ್ದಲ್ಲಿ, ನೀವು ನೋಡಬಹುದು ರೋಗದ ಮೂಳೆ ಊತದ ಒಂದು ತೃಣವು ಕಂಡು ಬರುವುದಿಲ್ಲ. ಕಪ್ಪು 'ಚೀ' ಯ ಕಾರ್ಯನಿರ್ವಹಣೆಯೇ ಅದಕ್ಕೆ ಮೂಲ ಕಾರಣ.

ಕೆಲವು ಮನುಷ್ಯರು ಹೇಳುವುದೇನೆಂದರೆ ನೀವು ಮೂರರಿಂದ ಐದು ದಿನದಲ್ಲಿ ಜನರಿಗೆ ವಾಸಿ ಮಾಡಬಹುದು ಮತ್ತು ಅವರು ನಿಮಗೆ ಪಡೆದುಕೊಳ್ಳುವ ವಿಧಾನವನ್ನು ಹೇಳಿಕೊಡುತ್ತಾರೆ. ನಿಮ್ಮ ಆಸಕ್ತಿಯನ್ನು ತೋರಿಸಿ! ಮಾನವರು ಬಹಳ ಬಲಹೀನರು, ಮತ್ತು ರೋಗಾಣುಗಳು ಬಹಳ ತೀಕ್ಷ್ಣವಾದವು. ಅದು ನಿಮ್ಮ ಜೀವವನ್ನು ಬಹಳ ಸುಲಭ ವಾಗಿ ತೆಗೆದುಕೊಳ್ಳುತ್ತದೆ. ನೀವು ಹೇಳಬಹುದು, ನೀವು ಅದನ್ನು ನಿಯಂತ್ರಣದಲ್ಲಿರಿಸಿ ಕೊಳ್ಳುತ್ತೀರೆಂದು ಹೇಗೆ ಅದನ್ನು ನಿಯಂತ್ರಣದಲ್ಲಿಟ್ಟುಕೊಳ್ಳುತ್ತೀರಿ? ನೀವು ಸಾಧಾರಣ ಮನುಷ್ಯರ ಕೈಯಿಂದ ಅವರ ನಿಯಂತ್ರಣವನ್ನು ಇರಿಸಿಕೊಳ್ಳಲಾಗುವುದಿಲ್ಲ. ನೀವು ನಿಮ್ಮ ಸುತ್ತಲೂ ಅದನ್ನು ಉದುರುಗೋಲಾಗಿ ಇಟ್ಟುಕೊಂಡರೆ ಅದು ನಿಮ್ಮನ್ನು ನಿರ್ಲಕ್ಷಿಸುತ್ತದೆ. ಮತ್ತು ನಿಮ್ಮನ್ನು ಹೀಯಾಳಿಸಿಕೊಂಡು ಬರುತ್ತದೆ. ನೀವು ನಿಯಂತ್ರಿಸಿಕೊಳ್ಳುವ ಯತ್ನ ಅದಕ್ಕೆ ಬಹಳ ತಮಾಷೆಯಾಗಿರುತ್ತದೆ. ಆದರೆ ನೀವು ನಿಜವಾಗಿ ಅದನ್ನು ನಿಯಂತ್ರಿಸಿದಲ್ಲಿ ಅದು ನಿಮ್ಮ ಕೈಗಳನ್ನು ತಕ್ಷಣ ಘಾಸಿ ಮಾಡುತ್ತದೆ. ಹಾಗೂ ಅದು ನಿಜವಾದ ಅನುಭವಕ್ಕೆ ಬರುವಂತೆ ಗಾಯವಾಗುತ್ತದೆ. ನಾನು ಈ ಮೊದಲು ಕೆಲವು ಮನುಷ್ಯರನ್ನು ನೋಡಿದ್ದೇನೆ. ಆದರೆ ಅವರಲ್ಲಿ ಯಾವ ದೈಹಿಕ ಹೀನತೆಗಳು ಇರಲಿಲ್ಲ. ಹಾಗೂ ಅವರನ್ನು ಪರೀಕ್ಷಿಸಿದಾಗ ಅವರ ದೇಹದಲ್ಲಿ ಯಾವ ರೀತಿಯ ಕುಂದು ಕೊರತೆಯೂ ಇರಲಿಲ್ಲ ಹಾಗೂ ಅವರ ಕೈಗಳಲ್ಲಿ ಯಾವ ತಪ್ಪೂ ಇರಲಿಲ್ಲ. ಆದರೆ ಅವರ ಕೈಗಳನ್ನು ಮೇಲೆತ್ತಲೂ ಸಹ ಆಗುತ್ತಿರಲಿಲ್ಲ ಮತ್ತು ಕೈಗಳನ್ನು ಕುಂಟಿಸುತ್ತಾ ತೊಡಗಿಸುತ್ತಿದ್ದರು. ಈ ರೀತಿಯಾದ ಮನುಷ್ಯರನ್ನು ನಾನು ಕಂಡಿದ್ದೇನೆ. ಅನ್ಯ ನಿಟ್ಟಿನಲ್ಲಿ ಹೇಳುವುದಾದರೆ ಅವರ ದೇಹದಲ್ಲಿರುವ ಆ ವಸ್ತುಗಳು ಅವರನ್ನೂ ಘಾಸಿ ಮಾಡಿದೆ. ಅದೇ ನಿಜವಾದ ಅರನಾರಿಬೇನೆ (ಪಕ್ಷಪಾತ) ಯಾವಾಗ ನಿಮ್ಮೆಲ್ಲರ ಆ ವಸ್ತುವು ಘಾಸಿಗೊಳ್ಳುತ್ತದೆಯೋ ಆಗ ನೀವು ಪಕ್ಷಪಾತಕ್ಕೊಳ ಗಾಗುತ್ತೀರಿ. ಕೆಲವು ಮನುಷ್ಯರು ನನ್ನನ್ನು ಕೇಳಿದರು, ಗುರುಗಳೇ ನಾನು ಅದನ್ನು ಅಭ್ಯಾಸಿಸಲು ಯೋಗ್ಯನೇ? ನನಗೆ ಮಕ್ಕಳಾಗದಂತೆ ಚಿಕಿತ್ಸೆಯಾಗಿದೆ, ಅಥವಾ ಅವರು ಹೇಳುತ್ತಾರೆ. ತಮ್ಮ ದೇಹದಿಂದ ಅಂಗಗಳನ್ನು ತೆಗೆದಿದ್ದಾರೆಂದು ನಾನು ಅವರಿಗೆ ಹೇಳುವುದೇನೆಂದರೆ ಅದರ ಬಗ್ಗೆ ಚಿಂತೆ ಬೇಡ, ಇನ್ನೊಂದು ಆಯಾಮದಲ್ಲಿನ ನಿಮ್ಮ ದೇಹದ ಭಾಗವು ಶಸ್ತ್ರಚಿಕಿತ್ಸೆಗೆ ಒಳಪಟ್ಟಿರುವುದಿಲ್ಲ. ಅಭ್ಯಾಸವನ್ನು ಮಾಡಿದಾಗ ಆ ಭಾಗವು ಕಾರ್ಯೋನ್ಮುಖವಾಗುತ್ತದೆ. ಅದಕ್ಕೆ ನಾನು ಹೇಳಿದ್ದು ಯಾವಾಗ ನೀವು ಅದನ್ನು ಹಿಡಿತ ದಲ್ಲಿಟ್ಟುಕೊಳ್ಳಲು ಪ್ರಯತ್ನಿಸಿದರೆ ನೀವು ಅದನ್ನು ಮುಟ್ಟಲಾರಿರಿ,

ಅದು ನಿಮ್ಮನ್ನು ನಿರ್ಲಕ್ಷ್ಯ ಮಾಡುತ್ತದೆ. ನೀವು ಅದನ್ನು ಮುಟ್ಟಿದ್ದೇ ಆದರೆ ನಿಮ್ಮ ಕೈಯನ್ನು ಘಾಸಿ ಮಾಡಬಹುದು.

ಚೀನಾ ದೇಶದಲ್ಲಿ ನಡೆದಂತಹ ದೊಡ್ಡ ಪ್ರಮಾಣದ ಚಿಗಾಂಗ್ ಘಟನೆಗಳಿಗೆ ಬೆಂಬಲ ಕೊಡಲು, ಬೀಜಿಂಗ್ ಪಟ್ಟಣದಲ್ಲಿ ನಡೆದಂತಹ ಆರೋಗ್ಯ ಮೇಳಕ್ಕೆ ನಾನು, ನನ್ನ ಕೆಲವು ಅನುಯಾಯಿಗಳನ್ನು ಭಾಗವಹಿಸಲು ಕರೆದೊಯ್ದಿದ್ದೆ. ಎರಡೂ ಮೇಳಗಳಲ್ಲಿ ಎಲ್ಲರಿಗಿಂತ ಮೇಲೆ ನಿಂತಿದ್ದೆವು. ಮೊದಲನೆಯ ಮೇಳದಲ್ಲಿ ನಮ್ಮ ಫಾಲೂನ್ ದಾಫಾವನ್ನು ಚಿಗಾಂಗ್ ತಾರೆಯೆಂದು ಘೋಷಿಸಲಾಯಿತು. ಎರಡನೇ ಮೇಳದಲ್ಲಿ ಎಷ್ಟು ಜನ ಜಂಗುಳಿ ಯಿತ್ತೆಂದರೆ ನಮ್ಮ ಮಳಿಗೆಗಳಲ್ಲಿ ನೂಕು ನುಗ್ಗಲು ಇತ್ತು. ಬೇರೆ ಮಳಿಗೆಗಳಲ್ಲಿ ಹೆಚ್ಚು ಜನಗಳೇ ಇರಲಿಲ್ಲ. ಆದರೂ ನಮ್ಮ ಮಳಿಗೆ ಜನಗಳಿಂದ ತುಂಬಿತ್ತು. ಅಲ್ಲಿ ಮೂರು ನಿರೀಕ್ಷಣ ಸಾಲುಗಳಿದ್ದವು. ಅದರಲ್ಲಿ ಮೊದಲನೆಯ ಸಾಲಿನಲ್ಲಿ ಬಹಳ ಮಂದಿಯಿದ್ದರು ಹಾಗೂ ಪ್ರಾತಃಕಾಲ ಮುಗಿಯುವುದರೊಳಗೆ ಮೊದಲ ಸಾಲಿನ ಮುಕ್ಕಾಲು ಭಾಗ ಮುಗಿದಿತ್ತು. ಎರಡನೇ ಸಾಲಿನ ಜನರು ತಮ್ಮ ಹೆಸರನ್ನು ಮಧ್ಯಾಹ್ನಕ್ಕೆ ನೊಂದಾಯಿಸಿ ಕೊಳ್ಳಲು ಕಾಯುತ್ತಿದ್ದರು. ಹಾಗೂ ಮೂರನೆಯ ಸಾಲಿನವರು ನನ್ನ ಹಸ್ತಾಕ್ಷರಕ್ಕಾಗಿ ಕಾಯುತ್ತಿದ್ದರು. ನಾವು ಗುಣಮುಖ ಮಾಡುವುದಿಲ್ಲ. ನಾವು ಏಕೆ ಮಾಡಬೇಕು? ಇದು ದೇಶದ ದೊಡ್ಡ ಪ್ರಮಾಣದ ಚಿಗಾಂಗ್ ಮೇಳವನ್ನು ಬೆಂಬಲಿಸಲು ಹಾಗೂ ಕದರ ಕಾರಣಕ್ಕಾಗಿ ಹೀಗಾಗಿ ನಾವು ಇದರಲ್ಲಿ ಭಾಗವಹಿಸಿದೆವು.

ನಾನು ನನ್ನ ಗಾಂಗ್ ಕೃಷಿಯನ್ನು ನನ್ನ ಜೊತೆಯಲ್ಲಿ ಕರೆದಂತಹ ಅನುಯಾಯಿ ಗಳಿಗೆ ಹಂಚಿಕೆ ಪ್ರತಿಯೊಬ್ಬರಿಗೂ ಅವರವರ ಭಾಗ ದೊರಕಿತು. ಮತ್ತು ಅವರಲ್ಲಿರುವ ಶಕ್ತಿ ಸಂಕೇತಗಳು ನೂರು ವಿಧದಲ್ಲಿ ಪ್ರಚಲಿತವಾಗಿತ್ತು. ನಾನು ಅವರ ಕೈಗಳನ್ನು ಕಟ್ಟಿ ಹಾಕಿದೆ. ಆದರೂ ಕೆಲವರು ತಮ್ಮ ಕೈಗಳಿಗೆ ಕಡಿತವನ್ನುಂಟು ಮಾಡಿಕೊಂಡರು ಮತ್ತು ಚರ್ಮಕ್ಕೆ ಹಾನಿಯುಮಟು ಮಾಡಿಕೊಂಡರು. ಬೊಬ್ಬೆಗಳನ್ನು ಮಾಡಿಕೊಂಡರು ಅಥವಾ ಅದರಿಂದ ರಕ್ತ ಸ್ರಾವವಾಗುವ ಹಾಗೆ ಮಾಡಿಕೊಂಡರು. ಈ ತರಹ ಎಷ್ಟೋ ಮಂದಿಗೆ ಆಯಿತು. ಅದು ಬಹಳ ಕ್ರೂರವಾಗಿತ್ತು. ನೀವು ಯೋಚಿಸಿ, ನಿಮ್ಮ ಸಾಧಾರಣ ಕೈಗಳಿಂದ ಅವರನ್ನು ಮುಟ್ಟಲು ಸಾಧ್ಯವಾ? ಅದು ಹಾಗಿರಲಿ, ನೀವು ಅವರ ಹತ್ತಿರ ಹೋಗಲಾರಿರಿ. ಅದು ಆ ಯೋಗ್ಯತೆಗಳಲ್ಲಿಲ್ಲದಿದ್ದರೆ ಸಾಧ್ಯವೇ ಆಗಲಾರದು. ಅದು ಯಾಕೆಂದರೆ ಬೇರೆಯ ಆಯಕಟ್ಟಿನಲ್ಲಿ ಅವರಿಗೆ ಗೊತ್ತಿದೆ ನೀವು ಅದನ್ನು ಮಾಡಬೇಕೆಂದಿದ್ದೀರಿ ಎಂದು ಹಾಗೂ ಅವರಿಗೆ ತಿಳಿಯುತ್ತದೆ. ನೀವು ಇದರ ಬಗ್ಗೆ ಯೋಚಿಸುತ್ತಿದ್ದಂತೆಯೇ ಯಾವಾಗ ನೀವು ಅದನ್ನು ಪಡೆಯಲು ಯತ್ನಿಸುವಿರೋ, ಅದಾಗಲೇ ಅಲ್ಲಿಂದ ಹೊರಟು ಹೋಗಿರುತ್ತದೆ. ರೋಗಿಯು ಬಾಗಿಲಿನಿಂದ ಹೊರಟ ಕ್ಷಣವೇ ಅದು ಅವನನ್ನು ತಕ್ಷಣ ಆವರಿಸುತ್ತದೆ. ಹಾಗೂ ಅವನ ಆರೋಗ್ಯ ಮೊದಲಿನ ಹಾಗೆ ಹದಗೆಡುತ್ತದೆ. ಇದನ್ನು ತಡೆಗಟ್ಟಲು ನಿಮಗೆ ಸಾಮರ್ಥ್ಯ ಇರಬೇಕು. ಹೀಗಾಗಿ ನೀವು ನಿಮ್ಮ ಕೈ ಚಾಚುತ್ತೀರಿ ಮತ್ತು ತೈಲವನ್ನು ಲೇಪಿಸುತ್ತೀರಿ. ತೈಲವನ್ನು ಲೇಪಿಸಿದ ನಂತರದಲ್ಲಿ ನಮಗೆ ಇನ್ನೊಂದು ಸಾಮರ್ಥ್ಯ ಇದೆ. ಅದೇನೆಂದರೆ ಉನ್ನತ ಆತ್ಮವನ್ನು ಹಿಡಿಯುವ ಕ್ರಮ ಹಾಗೂ ಆ ಸಾಮರ್ಥ್ಯ ಬಹಳ ಬಲವುಳ್ಳದ್ದು. ಅದು ಒಬ್ಬ ಮನುಷ್ಯನ ವರಿಷ್ಠ ಆತ್ಮವನ್ನು ಹೊರಕ್ಕೆಳೆಯಬಹುದು ಮತ್ತು ಆ ಮನುಷ್ಯನು ಸ್ವಲ್ಪ ಕೂಡ ಕದಲುವುದಕ್ಕೆ ಸಾಧ್ಯವಿಲ್ಲ. ಸಾಮರ್ಥ್ಯವು ಕೆಲವು ನಿರ್ಧಾರಿತ ವಸ್ತುಗಳನ್ನು ಗುರಿಯಾಗಿಸುತ್ತದೆ. ನಿಮಗೆ ತಿಳಿದಿದೆಯಾ, ಹೇಗೆ ತಗಾಟಬುದ್ಧ ತನ್ನ ಕೈಯಲ್ಲಿದ್ದ ಬೋಗುಣಿಯನ್ನು ಮಾಂಕೆ ರಾಜನೆದುರು ಹಿಡಿದು ಹಾಗೂ ಅವನು ಎಷ್ಟು ದೊಡ್ಡವನೆಂದು, ಹೇಗಿದ್ದರೂ ಅದು ಅವನನ್ನು ಎಷ್ಟು ಕುಗ್ಗಿಸಿತು. ಅದೇ ಸಾಮರ್ಥ್ಯದ ಶಕ್ತಿ, ಮನುಷ್ಯ ಎಷ್ಟು ದೊಡ್ಡವನಾಗಲೀ ಅಥವಾ ಚಿಕ್ಕವನಾಗಲೀ ಅದು ಏನು ಲೆಕ್ಕಕ್ಕಿಲ್ಲ. ಒಂದೇ ಬಾರಿಗೆ ಅದು ತನ್ನ ಕೈ ಹಿಡಿತಕ್ಕೆ ತೆಗೆದುಕೊಂಡು ಅದನ್ನು ಸರಿಯಾದ ರೀತಿಯಲ್ಲಿ ಚಿಕ್ಕದಾಗಿ ಪರಿವರ್ತಿಸುತ್ತದೆ.

ಹಾಗೂ ನೀವು ಒಬ್ಬ ರೋಗಿಯ ದೇಹದ ಭಾಗಗಳನ್ನು ಪಡೆದುಕೊಳ್ಳಲು ನಿಮ್ಮ ಕೈಯನ್ನು ನಿರ್ಧರಿಸಕೂಡದು. ಇದು ಸಾಮಾನ್ಯ ಜನರ ಗಮನಕ್ಕೆ ಕ್ರಮವಿಲ್ಲದಿರುವುದಾಗಿ ಕಾಣುವುದು ಹಾಗೂ ಇದು ಯಾವುದೇ ಕಾರಣಕ್ಕೆ ಪರಿಗಣಿಸಲಾಗುವುದಿಲ್ಲ. ನಿಮ್ಮಲ್ಲಿ ಸಾಮರ್ಥ್ಯವಿದ್ದರೂ ನೀವು ಇದನ್ನು ಮಾಡಲಾಗುವುದಿಲ್ಲ. ಯಾರು ಇದನ್ನು ಸಾಧನೆ ಮಾಡುತ್ತಾರೋ ಅವರು ಬೇರೆ ಆಯಾಕಟ್ಟಿನಲ್ಲಿ

ಸಾಧಿಸುತ್ತಾರೆ. ಒಬ್ಬ ಮನುಷ್ಯನಿಗೆ ಹೃದಯದ ಕಾಯಿಲೆ ಇದೆಯೆಂದು ತಿಳಿಯೋಣ, ನೀವು ಯಾವಾಗ ನಿಮ್ಮ ಕೈಯನ್ನು ಅವನ ಹೃದಯದ ಬಗ್ಗೆ/ಕಡೆಗೆ ಬಾಚಲು ಕೊಂಡೊಯ್ಯುವಿರೋ ನಿಮ್ಮ ಬೇರೆ ಆಯಾಕಟ್ಟಿ ನಲ್ಲಿರುವ ಕೈ ತಕ್ಷಣ ಅದನ್ನು ಕುಸಿದುಕೊಳ್ಳುತ್ತದೆ. ಅದು ಎಷ್ಟು ಕ್ರೂರವಾಗಿರುತ್ತದೆ ಎಂದರೆ ಕೆಲವು ಬಾರಿ ಅದು ನಿಮ್ಮ ಕೈ ಮೂಲಕವೇ ನಿಮ್ಮನ್ನು ಕೊರೆಯಲು ಶುರು ಮಾಡುತ್ತದೆ. ಕೆಲವೊಮ್ಮೆ ಕಡಿಯುತ್ತದೆ ಹಾಗೂ ಕೆಲವೊಮ್ಮೆ ಪರಚುತ್ತದೆ. ನಿಮ್ಮ ಕೈಯಲ್ಲಿ ಇಟ್ಟು ಕೊಂಡಾಗ ಅದು ತುಂಬಾ ಚಿಕ್ಕದಾಗಿ ಕಾಣಿಸುತ್ತದೆ. ಆದರೆ ಅದನ್ನು ಬಿಟ್ಟರೆ ಅದು ಬಹಳ ದೊಡ್ಡದಾಗಿ ಬಿಡುತ್ತದೆ. ಇದು ಸಾಧಾರಣ ವಿಷಯದಲ್ಲ ಹಾಗೂ ಯಾರಾದರೂ ಅದರ ಮೇಲೆ ಪ್ರಭಾವ ಬೀರಲಾಗದು ಸರಿಯಾದ ಯೋಗ್ಯತೆ ಇಲ್ಲದವನಿಂದ ಇದನ್ನು ಮಾಡಲು ಸಾಧ್ಯವಿಲ್ಲ ಹಾಗೂ ಇದು ನಾವು ತಿಳಿದಿರುವಷ್ಟು ಸುಲಭವಲ್ಲ.

ಬಹುಶ: ಈ ತರಹದ ಚಿಗಾಂಗ್ ಚಿಕಿತ್ಸೆಯು ಮುಂಬರುವ ದಿನಗಳಲ್ಲಿ ಕಾಣ ಬಹುದು. ಹಿಂದೆ ಇದನ್ನು ಯಾವಾಗಲೂ ನಾವು ನೋಡಿದ್ದೇವೆ. ಆದರೆ ಇದರಲ್ಲಿ ಒಂದು ಷರತ್ತನ್ನು ಪಾಲಿಸಬೇಕಾದರೆ, ವ್ಯಕ್ತಿಯು ಒಬ್ಬ ಅಭ್ಯಾಸಿಗನಾಗಿರಬೇಕು ಮತ್ತು ಅವನು ಇದನ್ನು ಕೆಲವು ಒಳ್ಳೆಯ ಮನುಷ್ಯರಿಗೆ ಅಭ್ಯಾಸದಲ್ಲಿಯೇ ಅಳವಡಿಸಬಹುದು. ಆದರೆ ಅವನು ಅವರ ಕರ್ಮಗಳನ್ನು ಪೂರ್ಣವಾಗಿ ದೂರ ಮಾಡಲಾಗುವುದಿಲ್ಲ. ಯಾಕೆಂದರೆ ಅವನಲ್ಲಿ ಸಾಕಷ್ಟು ಡಯಾಸ್ಟ ಶಕ್ತಿ (ಪರೋಪಕಾರ) ಇರುವುದಿಲ್ಲ. ಆದ್ದರಿಂದ ಅವರ ಯಾತನೆ ಹಾಗೆ ಇರುತ್ತದೆ. ಮತ್ತು ಯಾವುದು ಒಂದು ನಿರ್ದಿಷ್ಟ ಕಾಯಿಲೆ ಮಾತ್ರ ಗುಣವಾಗಿರುತ್ತದೆ. ಸಾಧಾರಣ ಕೀಳು ಮಟ್ಟದ ಚಿಗಾಂಗ್ ಗುರು ತನ್ನ ದಾವು ಅಭ್ಯಾಸದಲ್ಲಿ ಇದನ್ನು ಪಡೆಯಲು ಸಾಧ್ಯವಿಲ್ಲ. ಅವನು ಇದನ್ನು ಮುಂದೂಡಲು ಮಾತ್ರ ಸಾಧ್ಯ, ಅವರಿಗೆ ಅಥವಾ ಬೇರೆಯವರಿಗೆ ವರ್ಗಾಯಿಸಬಹುದು, ಇರಬಹುದು ಅವನು ಬೇರೆ ದುರ್ದೈವಕ್ಕೆ ವರ್ಗಾಯಿಸಿಬಹುದು ಆದರೆ ಅವನು ಮುಂದೂಡುತ್ತಿರುವ ಬಗ್ಗೆ ಅವನಿಗೆ ಅರಿವಿಲ್ಲದಿರಬಹುದು. ಅವನು ಮಾಡುತ್ತಿರುವ ಅಭ್ಯಾಸವು ಅವನ ಪ್ರಜ್ಞೆಯ ಅಧೀನತೆ ಯಿಂದಾದ್ದು, ಅಭ್ಯಾಸಿಗರು ಕೆಲವು ಅಭ್ಯಾಸವನ್ನು ಬಹಳ ಹೆಸರಾದ ರೀತಿಯಲ್ಲಿ ಅಭ್ಯಾಸ ಮಾಡುತ್ತಾರೆ. ಆದರೆ ಬಹಳಷ್ಟು ದೊಡ್ಡ ಪ್ರಮಾಣದ ಚಿಗಾಂಗ್ ಗುರುಗಳು ಗಾಂಗ್‌ನ್ನು ಹೊಂದಿರುವುದಿಲ್ಲ. ಅವರ ಗಾಂಗ್ ಅವರ ಅಧೀನ ಆತ್ಮಗಳ ಮೇಲೆ ಬೆಳೆಯುತ್ತದೆ. ಬೇರೆ ಬೇರೆ ರೀತಿಯಲ್ಲಿ ಹೇಳಬೇಕೆಂದರೆ ಅದು ಅಭ್ಯಾಸದ ಮೇಲೆ ನಿರ್ಧರಿಸುತ್ತಿರುತ್ತದೆ. ಏಕೆಂದರೆ ಕೆಲವರು ಮೂರನೆಯ ಹಂತದಲ್ಲಿಯೇ ಇರುತ್ತಾರೆ. ಹಾಗೂ ಅವರು ಹತ್ತಾರು ವರ್ಷ ಮುಂದಕ್ಕೆ ಹೋಗದೆ ಅದೇ ಹಂತದಲ್ಲಿರುತ್ತಾರೆ. ಹೀಗಾಗಿ ಅವರ ಜೀವನ ಪರ್ಯಂತ ಅವರು ಚಿಕಿತ್ಸೆ ಕೊಡುತ್ತಲೇ ಇರಬೇಕಾಗುತ್ತದೆ. ಹಾಗಾಗಿ ಅವರು ಆ ಮಟ್ಟಕ್ಕೆ ಕೆಲಸ ಮಾಡಲು ಅಪ್ಪಣೆ ಇರುತ್ತದೆ. ಆದರೆ ಫಾಲೂನ್ ದಾಫಾ ಅಭ್ಯಾಸ ಮಾಡುತ್ತಿರುವ ಅನುಯಾಯಿಗಳು ಯಾವುದೇ ಕಾರಣಕ್ಕೂ ಗುಣಪಡಿಸಲು ಸಾಧ್ಯವಿಲ್ಲ. ನೀವು ಈ ಪುಸ್ತಕವನ್ನು ಒಬ್ಬ ಕಾಯಿಲೆ ಮನುಷ್ಯನಿಗೆ ಓದಲು ಕೊಟ್ಟು ಪ್ರಯತ್ನಿಸಬಹುದು. ಮತ್ತು ಅದನ್ನು ಇದರ ತಿರುಳನ್ನು ಅರ್ಥ ಮಾಡಿಕೊಂಡರೆ ಅವನು ಗುಣಮುಖನಾಗಬಹುದು. ಆದರೆ ಅವನು ಎಷ್ಟರ ಮಟ್ಟಿಗೆ ಗುಣಮುಖನಾಗಿದ್ದಾನೆಂಬುದು ಅವನು ಮಾಡಿರುವ ಕರ್ಮದ ಮೇಲೆ ನಿರ್ಧರಿತವಾಗಿರುತ್ತದೆ.

## ಆಸ್ಪತ್ರೆಯ ಚಿಕಿತ್ಸೆ ಮತ್ತು ಚಿಗಾಂಗ್ ಚಿಕಿತ್ಸೆ

ಆಸ್ಪತ್ರೆ ಚಿಕಿತ್ಸೆಗೂ ಹಾಗೂ ಚಿಗಾಂಗ್ ಚಿಕಿತ್ಸೆಗೂ ಒಂದಕ್ಕೊಂದು ಹೇಗೆ ಸಂಬಂಧ ಪಟ್ಟಿದೆ ಅನ್ನುವುದರ ಬಗ್ಗೆ ಚರ್ಚಿಸೋಣ. ಹೊರದೇಶದ ಅದರಲ್ಲೂ ಪಾಶ್ಚಿಮಾತ್ಯ  ದೇಶದ ವೈದ್ಯರೂ ಚಿಗಾಂಗ್ ವೈದ್ಯ ಪದ್ಧತಿಯನ್ನು ನಂಬುವುದಿಲ್ಲ ಮತ್ತು ಹೇಳಬೇಕೆಂದರೆ ಎಲ್ಲರೂ ಅದೇನೇ. ಅವರು ಹೇಳುವುದೇನೆಂದರೆ "ಚಿಗಾಂಗ್ ಪದ್ಧತಿಯ ಮನುಷ್ಯನಿಗೆ ಗುಣವುಂಟು ಮಾಡುವುದಾದರೆ" ಆಸ್ಪತ್ರೆಗಳು ಏತಕ್ಕೆ ಬೇಕು? ಆಸ್ಪತ್ರೆಗಳನ್ನು ಏಕೆ ನೀವು ಬದಲಾಯಿಸಬಾರದು! ನಿಮ್ಮ ಚಿಗಾಂಗ್ ಬರೇ ಕೈಗಳಿಂದ ಅಂದರೆ ಇಂಜೆಕ್ಷನ್ ಇಲ್ಲದೆ ಔಷದೋಪಚಾರವಿಲ್ಲದೆ ಅಥವಾ ಆಸ್ಪತ್ರೆ ಇಲ್ಲದೇ ಬರೀ ಕೈಗಳಿಂದ ಮನುಷ್ಯರನ್ನು ಗುಣ ಪಡಿಸುವುದಾದರೆ, ಬನ್ನಿ ಯಾಕೆ ನೀವು ನಮ್ಮ ಆಸ್ಪತ್ರೆಗಳನ್ನು ನಿಮ್ಮ ವರ್ಷಕ್ಕೆ ತೆಗೆದುಕೊಳ್ಳ ಬಾರದು? ಈ ಉಪಾಯಗಳು ಯಾವುದಕ್ಕೂ ಅರ್ಥವಿಲ್ಲ. ಆ ಜನರು ಒಮ್ಮತ ಮನಸ್ಸಿನವರಲ್ಲ. ಕೆಲವು ಜನರು ಚಿಗಾಂಗ್ ಯಾವುದರ ಬಗ್ಗೆ ಎಂದೂ ಕೂಡ ತಿಳಿದಿಲ್ಲ. ನಿಜ

ಹೇಳಬೇಕೆಂದರೆ ಚಿಗಾಂಗ್ ವೈದ್ಯಕೀಯ ಬೇರೆ ಸಾಧಾರಣ ರೀತಿಯ ಗುಣ ಮಾಡುವ ರೀತಿ ಅಲ್ಲ. ಅದು ಸಾಮಾನ್ಯ ಮನುಷ್ಯನ ಬುದ್ಧಿವಂತಿಕೆಯದಲ್ಲ. ಅದು ಒಂದು ತರಹ ಉನ್ನತ ಮಟ್ಟದ್ದಾಗಿದೆ. ಉನ್ನತ ಮಟ್ಟದ ವಿಷಯಗಳು ಸಾಧಾರಣ ಜಗತ್ತಿನಲ್ಲಿ ದೊಡ್ಡ ಪ್ರಮಾಣದಲ್ಲಿ ತೊಂದರೆ ಮಾಡಲಾಗುತ್ತದೆಯಾ? ಬುದ್ಧನ ಸಾಮರ್ಥ್ಯವು ಭೀಷಣವಾದದ್ದು. ಬುದ್ಧನ ಕೈಚಳಕದಿಂದ ಮಾನವ ಕುಲದ ಎಲ್ಲಾ ಕಾಯಿಲೆಗಳು ಮಾಯವಾಗುವುದು. ಬಹಳಷ್ಟು ಬುದ್ಧರು ಇರುವಾಗ ಯಾರಾದರೊಬ್ಬ ಬುದ್ಧನು ಈ ಕೆಲವನ್ನು ಏಕೆ ಮಾಡಬಾರದು? ಏಕೆ ಅವರು ದಯೆ ತೋರಿಸಿ ನಿಮ್ಮನ್ನು ಗುಣಪಡಿಸಬಾರದು? ಏಕೆಂದರೆ ಅದು ಜಗತ್ತಿನ ನಿಯಮ, ಹುಟ್ಟುವುದು, ವಯಸ್ಸಾಗುವುದು, ಕಾಯಿಲೆ ಬರುವುದು ನಂತರ ಸಾವನ್ನು ಅಪ್ಪುವುದು, ಇದೆಲ್ಲಾ ಜೀವನದ ಒಂದು ನೀತಿ ಅವೆಲ್ಲವೂ ಅವನು ಪೂರ್ವದಲ್ಲಿ ಮಾಡಿದ ಕರ್ಮದ ಕಾರಣದಿಂದಾಗಿರುತ್ತದೆ. ನೀನು ಯಾರಿಂದಾದರೂ ಸಾಲ ಪಡೆದಿದ್ದರೆ ಅದನ್ನು ತೀರಿಸಬೇಕಾಗುತ್ತದೆ.

ನೀನು ಯಾರನ್ನಾದರೂ ಗುಣಪಡಿಸಿದರೆ, ನೀನು ಆ ನಿಯಮಗಳನ್ನು ಉಲ್ಲಂಘಿಸಿದಂತಾಗುತ್ತದೆ. ನೀನು ಆ ಮನುಷ್ಯರು ಕೆಟ್ಟ ಕೆಲಸವನ್ನು ಮಾಡುವುದಕ್ಕೆ ಬಿಟ್ಟಂತಾಗುತ್ತದೆ ಹಾಗೂ ಅವರು ಅದಕ್ಕೆ ಏನನ್ನು ಕೊಡರು. ಇದು ಯಾವ ರೀತಿಯಲ್ಲಿ ಸರಿಯಾಗಿದೆ? ಯಾವ ಜನರು ಕೃಷಿ ಮಾಡುತ್ತಿದ್ದಾರೋ, ಅವರು ಅನುಕಂಪದಿಂದ ಜನರನ್ನು ಗುಣ ಮಾಡುವಂತಾಗಿದೆ. ಆದರೆ ಅವರಲ್ಲಿ ಪ್ರಭಾವಶಾಲಿಯಾಗಿ ಗುಣ ಮಾಡುವ ಶಕ್ತಿ ಇಲ್ಲ. ನೀನು ಅದನ್ನು ಮಾಡಲು ಅನುಮತಿಯಿದೆ. ಕಾರಣ ನೀನು ಅನುಕಂಪ, ಕರುಣೆ ಇವುಗಳಂದ ಹೊರಬಂದಿದ್ದೀಯ. ಆದರೆ ನೀನು ನಿಜವಾಗಿ ಅಂತಹ ತೊಂದರೆಗಳನ್ನು ಬಿಡಿಸುವವನಾದರೆ ಅದರಲ್ಲೂ ದೊಡ್ಡ ಪ್ರಮಾಣದಲ್ಲಿ ಬಿಡಿಸುವವನಾದರೆ ನೀನು ಹಾಗೆ ಮಾಡಲು ಬಿಡಲಾಗುವುದಿಲ್ಲ. ಆಗ ನೀನು ಸಾಮಾನ್ಯ ಪ್ರಪಂಚದಲ್ಲಿ ವಸ್ತುಗಳನ್ನು ಗಂಭೀರ ರೀತಿಯಲ್ಲಿ ಕೆಡಿಸಿದಂತಾಗುತ್ತದೆ. ಹೀಗಾಗಿ ಅದನ್ನು ಮಾಡದೆ ನಿನ್ನನ್ನು ಬಿಡಲಾಗುವುದಿಲ್ಲ. ಇದಕ್ಕಾಗಿಯೇ ಸಾಮಾನ್ಯ ಜನರ ಆಸ್ಪತ್ರೆಗಳನ್ನು ಚಿಗಾಂಗ್ ನಿಂದ ಬದಲಾಯಿಸಲಾಗುವುದಿಲ್ಲ. ಇದು ಒಂದು ಉನ್ನತ ಮಟ್ಟದ ನೀತಿ ನಿಯಮ.

ಒಂದು ವೇಳೆ ನಿನಗೆ ಚೀನಾದ ಎಲ್ಲಾ ಭಾಗಗಳಲ್ಲೂ ಚಿಗಾಂಗ್ ಆಸ್ಪತ್ರೆಗಳನ್ನು ಶುರು ಮಾಡಲು ಅನುಮತಿ ನೀಡಿದಾಗ ಹಾಗೂ ಎಲ್ಲಾ ಚಿಗಾಂಗ್ ಗುರುಗಲು ಅದರಲ್ಲಿ ಭಾಗಿಯಾದಾಗ, ಸ್ವಲ್ಪ ಯೋಚಿಸು ಅದು ಹೇಗೆ ಇರುತ್ತದೆ ಎಂದು? ಅದನ್ನು ಹಾಗೆ ಬಿಡಲು ಸಾಧ್ಯವಿಲ್ಲ. ಏಕೆಂದರೆ ಜನರೆಲ್ಲರೂ ಸಾಮಾನ್ಯ ಜಗತ್ತಿನಲ್ಲಿ ಜೀವನವನ್ನು ಅವರದೇ ಆದ ರೀತಿಯಲ್ಲಿ ನಿರೂಪಿಸಿಕೊಂಡಿದ್ದಾರೆ. ಯಾವಾಗ ಚಿಗಾಂಗ್ ಆಸ್ಪತ್ರೆಗಳು ಶುರುವಾಗುತ್ತದೊ, ಆಗ ಚಿಗಾಂಗ್ ಚಿಕಿತ್ಸಾಲಯಗಳು, ಗೌರವ ಕೊಡುವಂಥ ಕೇಂದ್ರಗಳು, ಆರೋಗ್ಯ ಕೇಂದ್ರಗಳು ಇವೆಲ್ಲವೂ ಶುರುವಾಗುತ್ತದೆ. ಹಾಗೂ ಒಂದು ಸಲ ಇವೆಲ್ಲವೂ ಶುರುವಾದರೆ ಆ ಚಿಗಾಂಗ್ ಗುರುಗಳು ಗುಣ ಮಾಡುವ ಶಕ್ತಿಯೂ ತಾನಾಗಿಯೇ ಕುಂದುತ್ತದೆ ಮತ್ತು ಅದರ ಪರಿಣಾಮ ಗುಣಮಟ್ಟವು ಕೀಳುಮಟ್ಟಕ್ಕೆ ಇಳಿಯುತ್ತದೆ. ಯಾಕೆ ಹೀಗೆ? ಏಕೆಂದರೆ ಅವರು ಸಾಧಾರಣ ಮನುಷ್ಯರು ಮಾಡುವ ವಸ್ತುವನ್ನು ಮಾಡುತ್ತಾರೆ. ಇದು ಸಾಧಾರಣ ಮನುಷ್ಯನ ಮಟ್ಟದ ನಿಯಮಗಳಿಗೆ ಸಮಾನವಾಗಿರಬೇಕು. ಹಾಗೂ ಅದು ಸಾಮಾನ್ಯ ಮನುಷ್ಯನ ಮಟ್ಟದ ನಿಯಮಗಳಿಗೆ ಸಮಾನವಾಗಿರಬೇಕು. ಹಾಗೂ ಅದು ಸಾಮಾನ್ಯ ಮನುಷ್ಯನ ಮಟ್ಟಕ್ಕೆ ಸಮನಾಗಿರಬೇಕು, ಮತ್ತು ಚಿಕಿತ್ಸೆಯ ಗುಣಮಟ್ಟ ಆಸ್ಪತ್ರೆಯ ಗುಣ ಮಟ್ಟದ್ದಾಗಿರಬೇಕು. ಹೀಗಾಗಿ ಅದರ ಚಿಕಿತ್ಸೆಯು ಕೀಳು ಮಟ್ಟದ್ದಾಗುತ್ತದೆ. ಮತ್ತು ಈ ತರಹದ ಚಿಕಿತ್ಸೆಯ ಬಗ್ಗೆ ಅವರು ಹಲವು ವಿಧಾನದಲ್ಲಿ ಚರ್ಚಿಸುತ್ತಾರೆ. ಸಾಮಾನ್ಯವಾಗಿ ಇದೇ ರೀತಿಯಲ್ಲಿ ಇವುಗಳು ಸಾಗುವುದು.

ಚಿಗಾಂಗ್ ಆಸ್ಪತ್ರೆಗಳು ಶುರುವಾಗುತ್ತದೆಯೋ ಇಲ್ಲವೋ, ಯಾರೊಬ್ಬರೂ ಇದರ ಗುಣಮಟ್ಟವನ್ನು ತಳ್ಳಿಹಾಕುವಂತಿಲ್ಲ. ಚಿಗಾಂಗ್ ಸಮಾಜದಲ್ಲಿ ಸ್ವಲ್ಪ ದಿನದಿಂದ ಹರಡಿದೆ ಹಾಗೂ ಬಹಳಷ್ಟು ಜನರು ಅವರ ಆರೋಗ್ಯದ ಗುರಿಯನ್ನು ಅಭ್ಯಾಸ ಮಾಡುವ ಮೂಲಕ ಗುರಿ ಮುಟ್ಟಿದ್ದಾರೆ. ಅನಾರೋಗ್ಯವು ಮುಂದೂಡಲಾಗಿದೆಯೊ ಅಥವಾ ಚಿಗಾಂಗ್ ಗುರುವಿಗೆ ವರ್ಗಾವಣೆ ಮಾಡಲಾಗಿದೆಯೋ ಅಥವಾ ಅದನ್ನು ಗುಣಪಡಿಸಲಾಗಿದೆಯೋ, ಏನಾದರಾಗಿರಲಿ ಈ ಅನಾರೋಗ್ಯ

ಈಗ ಇಲ್ಲ. ಇನ್ನೊಂದು ರೀತಿಯಲ್ಲಿ ಹೇಳುವುದಾದರೆ ನಾವು ಚಿಗಾಂಗ್ ಗುಣಮಾಡುವುದು ಎಂಬುದನ್ನು ತಳ್ಳಿ ಹಾಕುವ ಆಗಿಲ್ಲ. ಚಿಕಿತ್ಸೆಯನ್ನು ಪಡೆಯಲು ಬಹಳಷ್ಟು ಮಂದಿ ಚಿಗಾಂಗ್ ಗುರುಗಳನ್ನು ಹುಡುಕುತ್ತಾರೆ ಹಾಗೂ ಅವರಿಗೆ ಚಿಗಾಂಗ್ ಪದ್ಧತಿ ತಿಳಿಯದಿರದೆ ಇರಬಹುದು. ಅಥವಾ ಅವರಿಗೆ ಅನಾರೋಗ್ಯವನ್ನು ಗುಣ ಮಾಡುವುದು ಕಷ್ಟವಾಗಿ ತೋರಬಹುದು. ಆಸ್ಪತ್ರೆಗಳು ಅವರಿಗೆ ಗುಣ ಮಾಡದಿರಬಹುದು, ಆದ್ದರಿಂದ ಅವರು ಚಿಗಾಂಗ್ ಗುರುಗಳ ಬಳಿಗೆ ತಮ್ಮ ಅದೃಷ್ಟವನ್ನು ಪ್ರಯತ್ನಿಸಲು ಹೋಗುತ್ತಾರೆ. ಹಾಗೂ ಅವರುಗಳಿಗೆ ಸ್ವಲ್ಪ ಹೆಚ್ಚು ಕಡಿಮೆ ಗುಣವಾಗುತ್ತದೆ. ಯಾವ ಮನುಷ್ಯ ಆಸ್ಪತ್ರೆಯಲ್ಲಿ ಗುಣಮುಖ ಹೊಂದುತ್ತಾರೋ ಅವರು ಚಿಗಾಂಗ್ ಗುರುವನ್ನು ಕಾಣುವುದಿಲ್ಲ. ಇದೇ ರೀತಿಯಾಗಿ ಜನರು ಅವರ ಕಡೆ ನೋಡುವುದು, ಅದರಲ್ಲಿ ಹೆಚ್ಚು ಆರಂಭದಲ್ಲಿ ಚಿಗಾಂಗ್ ಗುಣ ಮಾಡಬಹುದು. ಆದರೆ ಜಗತ್ತಿನಲ್ಲಿ ಸಾಮಾನ್ಯ ವಸ್ತುಗಳನ್ನು ಮಾಡಿದ ಹಾಗೆ ಅದು ಮಾಡಲು ಸಾಧ್ಯವಿಲ್ಲ. ದೊಡ್ಡ ಪ್ರಮಾಣದ ಅಪಕೀರ್ತಿ ಖಂಡಿತ ಸಹಿಸಲಾರದು ಅಥವಾ ಬಿಡಲಾಗುವುದಿಲ್ಲ. ಆದರೆ ಸಣ್ಣ ಪ್ರಮಾಣದಲ್ಲಿ ಅಥವಾ ಆಡಂಬರ ವಿಲ್ಲದೆ ಮಾಡುವುದು ಮತ್ತು ಅದರ ಮಹತ್ವವನ್ನು ಹೆಚ್ಚಾಗಿ ಮಾಡದಿರುವುದನ್ನು ಸಹಿಸಿ ಕೊಳ್ಳಲಾಗುವುದು. ಆದರೂ ಸಹ ಅದು ಪೂರ್ತಿಯಾಗಿ ಗುಣ ಮಾಡುವುದೆಂಬ ನಂಬಿಕೆ ಇಲ್ಲ. ಎಲ್ಲವುದಕ್ಕಿಂತ ಉತ್ತಮವಾದುದು ಒಬ್ಬ ಮನುಷ್ಯ ತನ್ನಿಷ್ಟಕ್ಕೆ ತಾನೇ ಚಿಗಾಂಗ್ ವ್ಯಾಯಾಮವನ್ನು ಮಾಡುವುದು.

ಕೆಲವು ಚಿಗಾಂಗ್ ಗುರುಗಳ ಅಭಿಪ್ರಾಯವೇನೆಂದರೆ ಆಸ್ಪತ್ರೆಗಳು ಸರಿಯಾಗಿ ಗುಣ ಮಾಡುವುದಿಲ್ಲವೆಂದು ಮತ್ತು ಇದರಿಂದ ಆಸ್ಪತ್ರೆ ಚಿಕಿತ್ಸೆಯ ಪರಿಣಾಮ ಹೋಗಿದೆ. ಇದನ್ನು ನಾವು ಹಾಗೆ ಹೇಳಬಹುದು. ಇದಕ್ಕೆ ಬಹಳಷ್ಟು ಕಾರಣಗಳಿವೆ. ನನಗೆ ತಿಳಿದ ಹಾಗೆ ಮುಖ್ಯವಾದುದು ಮನುಷ್ಯನ ಕೀಳು ಮಟ್ಟದ ಮೌಲ್ಯ ಪರಿಮಾಣ. ಇದರಿಂದಾಗಿ ಚಿತ್ರ ವಿಚಿತ್ರ ಕಾಯಿಲೆಗಳು ಕಾಣಿಸಿಕೊಳ್ಳುತ್ತದೆ. ಹಾಗೂ ಅದನ್ನು ಆಸ್ಪತ್ರೆಗಳು ಗುಣ ಮಾಡಲಾರದು ಮತ್ತು ಔಷಧಗಳು ಅದಕ್ಕೆ ಏನೂ ಮಾಡಲಾರವು. ಅಷ್ಟೇ ಅಲ್ಲ ನಕಲಿ ಔಷಧಗಳು ಬಹಳಷ್ಟು ಇದೆ. ಇವೆಲ್ಲವೂ ಪ್ರಪಂಚದ ಅವನತಿ ಹೊಂದುತ್ತಿರುವ ವಂಶದಿಂದ ಈ ಮಟ್ಟಕ್ಕೇರಿದೆ ಹಾಗೂ ಇದು ಮನುಷ್ಯ ಕೃತ್ಯವೇ. ಇದಕ್ಕೆ ಬೇರೆಯವರನ್ನು ಯಾರೊಬ್ಬರು ದೂಷಿಸುವ ಹಾಗಿಲ್ಲ. ಏಕೆಂದರೆ ಎಲ್ಲರೂ ಇದಕ್ಕೆ ಕುಮ್ಮಕ್ಕು ಕೊಟ್ಟಿರುತ್ತಾರೆ/ ಹಾಗಾಗಿ ಪ್ರತಿಯೊಬ್ಬರು ಕೃಷಿ ಮಾಡಲು ಬಹಳ ಕಷ್ಟ ಪಡುತ್ತಿದ್ದಾರೆ.

ಕೆಲವು ವ್ಯಕ್ತಿಗಳಲ್ಲಿ ಏನಾದರೊಂದು ತೊಂದರೆಗಳು ಇರುತ್ತವೆ. ಹಾಗೂ ಆ ಅನಾರೋಗ್ಯದ ಕಾರಣಗಳನ್ನು ಆಸ್ಪತ್ರೆಯಲ್ಲಿ ಗುರುತಿಸಲಾಗುವುದಿಲ್ಲ. ಆದರೆ ಕೆಲವರಲ್ಲಿರುವ ದೋಷಗಳನ್ನು ಕಂಡು ಹಿಡಿಯಬಹುದು. ಆದರೆ ಅದೇನೆಂದು ಸರಿಯಾಗಿ ಗುರುತಿಸಲಾಗುವುದಿಲ್ಲ. ಏಕೆಂದರೆ ಇದಕ್ಕೆ ಮುನ್ನ ಆ ವಿಷಯಗಳನ್ನು ಯಾರು ನೋಡಲಿಲ್ಲ. ಹಾಗಾಗಿ ಅದನ್ನು ಆಸ್ಪತ್ರೆಗಳು ಆಧುನಿಕ ರೋಗಗಳೆಂದು ಗುಂಪು ಮಾಡಿ ಪರಿಗಣಿಸುತ್ತಾರೆ. ಈಗ ಹೇಳಿ ಆಸ್ಪತ್ರೆಗಳು ಮನುಷ್ಯರಿಗೆ ಗುಣ ಮಾಡಲಾಗುತ್ತಾ? ಬಹುಶಃ ಮಾಡಬಹುದು, ಆಸ್ಪತ್ರೆಗಳು ರೋಗಗಳನ್ನು ಗುಣ ಮಾಡಲಾಗದಿದ್ದಲ್ಲಿ, ಮನುಷ್ಯರು ಅದರಲ್ಲಿ ಏಕೆ ನಂಬಿಕೆ ಇಡುತ್ತಾರೆ ಹಾಗೂ ಅಲ್ಲಿಗೆ ಹೋಗುತ್ತಾರೆ? ಆಸ್ಪತ್ರೆಗಳು ಗುಣ ಮಾಡುತ್ತವೆ. ಅದು ಸಾಧಾರಣ ಜನಗಳ ಮಟ್ಟಿಗೆ ಸರಿಯಾಗಿರುತ್ತದೆ. ಆದರೆ ನಿಜದಲ್ಲಿ ಕಾಯಿಲೆಗಳು ಸಾಧಾರಣವಾದದ್ದು ಆಗಿರುವುದಿಲ್ಲ. ಹಾಗೂ ಆ ಕಾಯಿಲೆಗಳು ಗಂಭೀರ ರೂಪದಾಗಿರುತ್ತದೆ. ಹೀಗಾಗಿ ಆಸ್ಪತ್ರೆಗಳು ಹೇಳುತ್ತವೆ. ಈ ರೋಗಗಳನ್ನು ಮೂಲ ಹಂತದಲ್ಲಿಯೇ ಗುಣ ಮಾಡಬೇಕು, ಏಕೆಂದರೆ ಈ ರೋಗವು ಗಂಭೀರ ರೂಪಕ್ಕೆ ಹೋದಾಗ ಆಸ್ಪತ್ರೆಗಳು ಗುಣ ಮಾಡಲಾಗುವುದಿಲ್ಲ ಹಾಗೂ ಹೆಚ್ಚು ಪ್ರಮಾಣದ ಔಷಧಿಯು ವ್ಯಕ್ತಿಯಲ್ಲಿ ಅಥವಾ ರೋಗಿಯಲ್ಲಿ ವಿಷವಾಗಿ ಪರಿವರ್ತಿಸುತ್ತದೆ. ಈ ದಿನಗಳಲ್ಲಿ ವೈದ್ಯಕೀಯ ಗುಣಮಟ್ಟ ವಿಜ್ಞಾನ ಮತ್ತು ತಾಂತ್ರಿಕ ಮಟ್ಟದಾಗಿದೆ. ಅವೆಲ್ಲವೂ ಸಾಧಾರಣ ಮನುಷ್ಯರ ಮಟ್ಟಕ್ಕಿದೆ. ಆದ್ದರಿಂದ ಅದರ ಗುಣಮಟ್ಟವೂ ಅಷ್ಟಕ್ಕೆ ಇದೆ. ನಾನು ಒಂದು ವಿಷಯವನ್ನು ಇಲ್ಲಿ ಸ್ಪಷ್ಟಗೊಳಿಸಲು ಇಚ್ಚಿಸುತ್ತೇನೆ. ಅದೇನೆಂದರೆ ಸಾಂಕೇತಿಕ ಚಿಗಾಂಗ್ ಚಿಕಿತ್ಸೆ ಮತ್ತು ಆಸ್ಪತ್ರೆ ಚಿಕಿತ್ಸೆಗಳು, ವಿಷಯಗಳನ್ನು ಮುಂದೂಡುತ್ತಿರುತ್ತವೆ ಮತ್ತು ಅನಾರೋಗ್ಯದ ಮೂಲ ಕಾರಣವನ್ನು ಹಾಗೂ ಸಂಕಟವನ್ನು ಬದಲಾಯಿಸುತ್ತಿರುತ್ತಾರೆ. ಅವರು ಇದನ್ನು ನಿಮ್ಮ ಜೀವನದ ಯಾವುದೋ ಒಂದು

ಭಾಗಕ್ಕೆ ಮುಂದೂಡುತ್ತಾರೆ ಅಥವಾ ಮುಂದಿನ ದಿನಗಳಿಗೆ ಮುಂದೂಡುತ್ತಾರೆ. ಆದರೆ ಅವರಾರು ಕರ್ಮವನ್ನು ಕಿಂಚಿತ್ತು ಕೂಡ ಪರಿಗಣಿಸಲಿಲ್ಲ.

ಚೀನಾ ದೇಶದ ಔಷಧಗಳ ಬಗ್ಗೆ ಚರ್ಚಿಸೋಣ. ಚೀನಾದ ಔಷಧೀಯ ಕ್ರಮವು ಚಿಗಾಂಗ್ ಚಿಕಿತ್ಸೆಗೆ ಬಹಳ ಹತ್ತಿರವಾಗಿದೆ. ಪುರಾತನ ಚೀನಾದಲ್ಲಿ, ಚೀನಾದ ಔಷಧವನ್ನು ಉಪಯೋಗಿಸುತ್ತಿದ್ದಂತಹ ವೈದ್ಯರು ಅಲೌಕಿಕ ಜ್ಞಾನವನು ಹೊಂದಿದ್ದರು. ವೈದ್ಯಕೀಯ ಮೂಲ ಗ್ರಂಥಗಳ ಪ್ರಕಾರ ಹೆಸರು ವಾಸಿಯಾದಂತಹ ವೈದ್ಯರುಗಳಂದ ಸನ್‌ಸಿಮಿಯಾ, ಹ್ಯೂಟುಓ, ಲೀ ಫಿಜೀನ್ ಮತ್ತು ಬಿಯಾನ್‌ಕೀ ಇವರುಗಳೆಲ್ಲರಿಗೂ ಅಲೌಕಿಕ ಜ್ಞಾನವಿತ್ತಂತೆ. ಆದರೂ ಆ ವಸ್ತುಗಳ ತಿರುಳು ಈ ದಿನಗಳಲ್ಲಿ ಬಹಿರಂಗವಾಗಿ ಖಂಡನೆ ಗೊಳಗಾಗಿದೆ. ಚೀನಾದ ಔಷಧಿ ಪದ್ಧತಿ ವಂಶಪರಂಪರೆಯಾಗಿ ಬಂದಂತಹ ಔಷಧ ಚೀಟಿಗಳ ಆಧಾರಿತವಾದದ್ದು ಅಥವಾ ಪ್ರಯತ್ನ ಹಾಗೂ ಅಭಿಪ್ರಾಯದ ಮೇಲೆ ಆಧಾರಿತ ವಾದದ್ದು. ಅದು ಈಗಿನ ವೈದ್ಯಕೀಯ ವಿಜ್ಞಾನಕ್ಕಿಂತ ಬಹಳ ಮುಂದುವರೆದಿದ್ದಾಗಿದ್ದು, ಕೆಲ ವ್ಯಕ್ತಿಗಳ ಪ್ರಕಾರ ಆಧುನಿಕ ಔಷಧಿಗಳು ಬಹಳ ಮುಂದುವರೆದಿದ್ದಾಗಿದೆ. ಕ್ಯಾಟ್ ಸ್ಕಾನ್ ಮನುಷ್ಯನ ದೇಹದೊಳಗಿನ ಭಾಗಗಳನ್ನು ಪರೀಕ್ಷಿಸುತ್ತದೆ ಮತ್ತು ಕ್ಷ-ಕಿರಣ, ಶಬ್ಧ ತರಂಗ ವಿಧಾನ ಇವೆಲ್ಲವನ್ನು ಸಹ ನಾವು ಉಪಯೋಗಿಸಬಹುದು. ನಿಜ ಆಧುನಿಕ ಯಂತ್ರೋಪಕರಣಗಳು ಬಹಳ ಮುಂದುವರೆದಿದ್ದಾಗಿದೆ. ಆದರೆ ಅದು ಹಳೆಯ ಚೀನಾ ದೇಶದ ವೈದ್ಯಕೀಯ ಪದ್ಧತಿಯಷ್ಟು ಉತ್ತಮವಾದದ್ದಲ್ಲ.

ಪ್ರಖ್ಯಾತ ವೈದ್ಯರಾದಂತಹ ಹ್ಯೂ ಟು ಒಂದು ಬಾರಿ ಕೇ ಕೇ ಚಕ್ರವರ್ತಿಯ ಮೆದುಳಿ ನಲ್ಲಿ ಗಡ್ಡೆ ಇರುವುದನ್ನು ಕಂಡನು ಹಾಗೂ ತಲೆಬುರುಡೆಗೆ ಶಸ್ತ್ರಚಿಕಿತ್ಸೆಯನ್ನು ಮಾಡಿ ಆ ಗಡ್ಡೆಯನ್ನು ಹೊರತೆಗೆಯಲು ಇಚ್ಛಿಸಿದನು. ಇದನ್ನು ಕೇಳಿದ ಚಕ್ರವರ್ತಿ ಕೇ ಕೇ ಹ್ಯೂ ಟು ತನ್ನ ತಲೆಯನ್ನು ತೆಗೆಯಲಿದ್ದಾನೆಂದು ತಿಳಿದು ಅವನನ್ನು ಬಂಧಿಖಾನೆಗೆ ಹಾಕಿಸಿದ. ಹೀಗಾಗಿ ವೈದ್ಯ ಹ್ಯೂಟು ಆ ಬಂಧಿಖಾನೆಯಲ್ಲಿಯೇ ಕೊನೆ ಉಸಿರೆಳೆದ. ಯಾವಾಗ ಕೇ ಕೇ ಬಹಳ ಕಾಯಿಲೆಗೆ ಒಳಗಾದನೋ, ಅವನು ಹ್ಯೂಟು ವನ್ನು ಜ್ಞಾಪಿಸಿಕೊಂಡು ಅವನನ್ನು ನೋಡಲು ಹೋದ, ಆದರೆ ಆ ವೇಳೆಗಾಗಲೇ ಹ್ಯೂಟು ಸಾವನಪ್ಪಿದ, ಮತ್ತು ಹ್ಯೂಟು ಇದನ್ನು ಹೇಗೆ ಅರಿತಿದ್ದಾ? ಅವನು ಅದನ್ನು ನೋಡಿದ್ದ ಹೇಗೆಂದರೆ ಮಾನವನಿಗೆ ಇರುವಂತೆ ಅಲೌಕಿಕ ಜ್ಞಾನದಿಂದಾಗಿ ಹಾಗೂ ಇದನ್ನು ನಮ್ಮ ಪೂರ್ವಜ ವೈದ್ಯರು ಹೊಂದಿದ್ದರು. ಒಂದು ಬಾರಿ ಮನುಷ್ಯ ಮೂರನೇ ಕಣ್ಣು ತೆರೆದಿದ್ದರೆ, ಅವನು ಒಂದೇ ಕಡೆಯಿಂದ ಒಬ್ಬ ಮನುಷ್ಯ ದೇಹದ ನಾಲ್ಕು ಭಾಗಗಳಲ್ಲಿ ಒಂದೇ ಸಮಯಕ್ಕೆ ನೋಡಬಹುದು. ಮುಂಭಾಗದಿಂದಲೇ ಅವನ ಹಿಂಭಾಗವನ್ನು ನೋಡಬಹುದು. ಎಡಕ್ಕೆ, ಬಲಕ್ಕೆ ಎಲ್ಲವನ್ನು ನೋಡಬಹುದು. ಅಷ್ಟೇ ಅಲ್ಲ ಅವನು ಭಾಗ ಭಾಗವಾಗಿ ಮತ್ತು ಪದರ ಪದರವನ್ನು ಈ ನಿಟ್ಟಿನಿಂದ ಕಂಡು ಅವನ ಅನಾರೋಗ್ಯದ ಕಾರಣಕ್ಕೆ ಮೂಲ ಕಾರಣವನ್ನು ತಿಳಿಯಬಹುದು. ಆಧುನಿಕ ತಂತ್ರಜ್ಞಾನದ ವೈದ್ಯಕೀಯ ಪದ್ಧತಿ ಇದನ್ನು ಮಾಡಲಾಗದಾ? ಅದರ ಹತ್ತಿರ ಕೂಡ ಬರಲಾರದು. ಬಹುಶಃ ಇನ್ನೊಂದು ಸಾವಿರ ವರ್ಷದಲ್ಲಿ ಕ್ಯಾಟ್ ಸ್ಕಾನ್, ಕ್ಷ-ಕಿರಣ ಹಾಗೂ ಶಬ್ಧಕಿರಣ ಮುಂತಾದವುಗಳಿಂದ ಮಾನವ ದೇಹದಲ್ಲಿರುವುದನ್ನು ನೋಡಬಹುದು. ಆದರೆ ಆ ಆಧುನಿಕ ಯಂತ್ರಗಳು ಬಹಳ ದೊಡ್ಡದಾಗಿರುತ್ತದೆ. ಹಾಗೂ ಅದನ್ನು ಸುಲಭವಾಗಿ ಸ್ಥಳಾಂತರಗೊಳಿಸುವುದಿಲ್ಲ ಮತ್ತು ಅವುಗಳು ವಿದ್ಯುಚ್ಛಕ್ತಿ ಇಲ್ಲದೆ ಕೆಲಸ ಮಾಡುವುದಿಲ್ಲ. ಇನ್ನೊಂದು ರೀತಿಯಲ್ಲಿ ನೀವು ಎಲ್ಲಿಗಾದರೂ ಹೋಗಿರಿ ನಿಮ್ಮ ಮೂರನೇ ಕಣ್ಣು ಕೆಲಸ ಮಾಡುತ್ತದೆ ಹಾಗೂ ಅದಕ್ಕಾಗಿ ವಿದ್ಯುಚ್ಛಕ್ತಿ ಬೇಕಿಲ್ಲ. ಹೀಗಾಗಿ ಹೇಗೆ ನಾವು ಅದನ್ನು ಸಮತೋಲನ ಮಾಡಬಹುದು?

ಕೆಲವು ವ್ಯಕ್ತಿಗಳು ಈಗಿನ ವೈದ್ಯಕೀಯ ಬಗ್ಗೆ ಬಹಳ ಉನ್ನತ ಮಟ್ಟದಲ್ಲಿ ಚರ್ಚಿಸುತ್ತಾರೆ. ಆದರೆ ನಾವು ನೋಡುತ್ತಿರುವ ಹಾಗೆ ಅದು ಆಗಿಲ್ಲ. ಚೀನಾ ದೇಶದ ಪ್ರಾಚೀನ ಗಿಡಮೂಲಿಕೆಗಳು ಎಷ್ಟೋ ಕಾಯಿಲೆಗಳನ್ನು ಬಹಳ ಪರಿಣಾಮಕಾರಿಯಾಗಿ ಗುಣ ಮಾಡುತ್ತವೆ. ದಿನ ಕಳೆದಂತೆ ಅಂತಹ ಕೆಲವಾರು ವಸ್ತುಗಳು ಮರೆಯಾಗಿವೆ. ಆದರೂ ಇನ್ನು ಉಳಿದಿರುವಂತಹ ಹೆಚ್ಚು ಔಷಧಗಳು ನಮ್ಮ ಮನೆ ಮದ್ದಿನ ಸಂಪ್ರದಾಯ ದಲ್ಲಿ ಉಳಿದಿದೆ. ನಾನು ಹಿಂದೊಮ್ಮೆ ಕೀಕಿಹಾರ್ ಪಟ್ಟಣದಲ್ಲಿ ಒಂದು ತರಗತಿಯನ್ನು

ತೆಗೆದುಕೊಳ್ಳುತ್ತಿದ್ದಾಗ, ಒಬ್ಬ ದಾರಿಹೋಕ ವ್ಯಾಪಾರಿ ಬೀದಿಯಲ್ಲೇ ಒಬ್ಬ ಮನುಷ್ಯನ ಹಲ್ಲನ್ನು ಕೀಳುತ್ತಿದ್ದ. ನಾವು ಬಹಳ ಸುಲಭವಾಗಿ ಹೇಳಬಹುದಾಗಿತ್ತು, ಅವನು ದಕ್ಷಿಣ ಕಡೆಯವನೆಂದು, ಏಕೆಂದರೆ ಅವನು ಉತ್ತರ ಪೂರ್ವದವರ ರೀತಿ ಬಟ್ಟೆ ಧರಿಸಿರಲಿಲ್ಲ. ಅವನಲ್ಲಿಗೆ ಹಲ್ಲು ನೋವೆಮದು ಬಂದಂತಹ ಯಾರನ್ನು ಅವನು ಬಿಟ್ಟುಕೊಡುತ್ತಿರಲಿಲ್ಲ ಮತ್ತು ಅವನಲ್ಲಿಗೆ ಯಾರು ಬಂದರೂ ಸರಿ ಹಲ್ಲುಗಳನ್ನು ಕೀಳುತ್ತಿದ್ದ ಮತ್ತು ಅವನು ಇರುವ ಎಲ್ಲ ಹಲ್ಲುಗಳನ್ನು ಕಿತ್ತು ರಾಶಿ ಹಾಕಿದ್ದ, ಅವನ ಗುರಿ ಹಲ್ಲು ಕಿತ್ತುವುದಾಗಿರಲಿಲ್ಲ. ಆದರೆ ಅವನಲ್ಲಿದಂತಹ ರಸಾಯನ ದ್ರವವನ್ನು ಮಾರುವ ಉದ್ದೇಶವಾಗಿತ್ತು. ಆ ದ್ರವವು ಹಳದಿ ಬಣ್ಣದ ತೀವ್ರವಾದ ಹಬೆಯನ್ನು ಬಿಡುತ್ತಿತ್ತು. ಯಾವಾಗ ಅವನು ಒಬ್ಬ ಮನುಷ್ಯನ ಹಲ್ಲನ್ನು ಕಿತ್ತುತ್ತಾನೋ ಆಗ ಅವನು ಆ ಮನುಷ್ಯ ಹುಳುಕು ಹಲ್ಲದ್ದ ದವಡೆಯ ಹತ್ತಿರ ದ್ರವವನ್ನು ಹಿಡಿದು ಮನುಷ್ಯನಿಗೆ ಅದರ ಹಬೆಯನ್ನು ಕೆಲವು ಬಾರಿ ಹಾಕಲು ಹೇಳುತ್ತಿದ್ದ. ಅವನು ಸ್ವಲ್ಪ ಹಬೆಯನ್ನು ತೆಗೆದುಕೊಂಡನೋ ಇಲ್ಲವೋ ಅಷ್ಟರಲ್ಲೇ ಅವನು ಆ ದ್ರವದ ಬಾಟಲಿಗೆ ಮುಚ್ಚಳ ಹಾಕಿ ಬಿಡುತ್ತಿದ್ದ. ನಂತರ ಅವನು ತನ್ನ ಕಿಸೆಯಿಂದ ಒಂದು ಬೆಂಕಿ ಕಡ್ಡಿಯನ್ನು ತೆಗೆದು ಹಾಗೆ ಅದರಲ್ಲಿ ಆ ದ್ರವ್ಯದ ಬಗ್ಗೆ ಮಾತನಾಡುತ್ತಿರುವಾಗ, ಆ ಕಡ್ಡಿಯಿಂದ ತೆಗೆದು ಹಾಗೆ ಅದರಲ್ಲಿ ಆ ದ್ರವ್ಯದ ಬಗ್ಗೆ ಮಾಡನಾಡುತ್ತಿರುವಾಗ, ಆ ಕಡ್ಡಿಯಿಂದ ಒಂದೇ ಸಲ ಮೀಟಿದ ತಕ್ಷಣ ಆ ಹಲ್ಲು ಹೊರಬರುತ್ತಿತ್ತು. ಅದರು ಅವನಿಗೆ ನೋವನ್ನು ಉಂಟು ಮಾಡುತ್ತಿರಲಿಲ್ಲ ಹಾಗೂ ಒಂದೆರಡು ತೊಟ್ಟು ರಕ್ತ ಮಾತ್ರ ಬೀಳುತ್ತಿತ್ತು ಸ್ವಲ್ಪ ಅದರ ಬಗ್ಗೆ ಯೋಚಿಸಿ, ಅವನು ಆ ಹಲ್ಲನ್ನು ಕೀಳಲು ಬಲ ಪ್ರಯೋಗ ಮಾಡಿದ್ದಲ್ಲಿ, ಆ ಬೆಂಕಿ ಕಡ್ಡಿಯು ಮುರಿದು ಹೋಗುತ್ತಿತ್ತು. ಆದರೆ ಆ ಹಲ್ಲನ್ನು ಹೊರತೆಗೆಯಲು ಸ್ವಲ್ಪ ಮಾತ್ರ ಮೀಟಿದಾ ಅವನು.

ನಾನು ಹೇಳಲು ಬಯಸುತ್ತೇನೆ, ಏನೆಂದರೆ ಆ ಕೆಲವು ಮನೆ ಮದ್ದು ಅಥವಾ ನಾಟಿ ಔಷಧಗಳು ಚೀನಾದಿಂದ ಬಂದಂತಹವು ಮತ್ತು ಅವು ಪಾಶ್ಚಾತ್ಯ ದೇಶದ ಔಷಧಿಗಳನ್ನು ಮೀರಿಸುತ್ತದೆ. ಈಗ ನೋಡೋಣ ಯಾವುದು ಚೆನ್ನಾಗಿ ಕೆಲಸ ಮಾಡುತ್ತದೆ ಎಂದು. ಆ ಮನುಷ್ಯ ಒಂದು ಬೆಂಕಿ ಕಡ್ಡಿಯಿಂದ ಹಲ್ಲನ್ನು ಸ್ವಲ್ಪ ಮೀಟಿದಾಕ್ಷಣ ಅದು ಹೊರಕ್ಕೆ ಬಂತು, ಅದೇ ಒಬ್ಬ ಪಾಶ್ಚಾತ್ಯ ವೈದ್ಯ ಆ ಹಲ್ಲನ್ನು ಕೀಳಬೇಕಾದರೆ, ಅವನು ಮೊದಲು ಸ್ಪರ್ಶ ಜ್ಞಾನ ಶೂನ್ಯತೆ ಆ ಸ್ಥಳಕ್ಕೆ ಬರಲು ಒಂದು ಚುಚ್ಚು ಮದ್ದು ಕೊಡುತ್ತಾನೆ ಮತ್ತು ಆ ಹಲ್ಲಿನ ಸುತ್ತಲೂ ಉಪಕರಣಗಳಿಂದ ಬಿಗಿ ಹಿಡಿಯುತ್ತಾರೆ. ಸ್ವಲ್ಪ ಸಮಯದ ನಂತರ ಆ ಸ್ಥಳದಲ್ಲಿ ಸ್ಪರ್ಶ ಶೂನ್ಯತೆ ಆಗುತ್ತಿದ್ದಂತೆ ವೈದ್ಯರು ಹುಳುಕು ಹಲ್ಲನ್ನು ಒಂದು ಇಕ್ಕಳದಿಂದ ಕೀಳುತ್ತಾನೆ. ಇಷ್ಟೆಲ್ಲ ಮಾಡಿ ಕಿತ್ತರೂ ಕೆಲವೊಮ್ಮೆ ಆ ಹಲ್ಲು ಅರ್ಧಕ್ಕೆ ಮುರಿದು ಅದರ ಬೇರು ದವಡೆಯಲ್ಲಿ ಸಿಕ್ಕಿಕೊಳ್ಳಬಹುದು. ಆಗ ಅವನು ಒಂದು ಸುತ್ತಿ ಮತ್ತು ಉಳಿಯನ್ನು ಉಪಯೋಗಿಸಿ ಅದನ್ನು ಬಲವಂತವಾಗಿ ಹೊರತೆಗೆಯುತ್ತಾನೆ. ಇದರಿಂದಾಗಿ ನಿನ್ನಲ್ಲಿ ಒಂದು ತರಹದ ಭಯ ಅಥವಾ ಹೆದರಿಕೆ ಉಂಟಾಗುತ್ತದೆ. ಆಗಲೂ ಆಗದಿದ್ದಲ್ಲಿ ಅವನು ಒಂದು ಕೊರೆಯುವ ಯಂತ್ರದಿಂದ ಆ ಉಳಿದ ಭಾಗದ ಹಲ್ಲನ್ನು ಕೊರೆದು ಸ್ವಲ್ಪ ಸ್ವಲ್ಪವಾಗಿ ತೆಗೆಯಲು ಯತ್ನಿಸಿದಾಗ ನೀವು ಕುಳಿತಿರುವ ಆಸನದಿಂದ ಎದ್ದು ಓಡಲು ಪ್ರಯತ್ನಿಸುವಿರಿ. ಇದು ಖಂಡಿತ ನೋವನ್ನುಂಟುಮಾಡುತ್ತದೆ. ಹಾಗೂ ಬಹಳ ರಕ್ತಸ್ರಾವವಾಗುತ್ತದೆ ಮತ್ತು ನೀವು ಒಮ್ಮಿಂದೊಮ್ಮೆಲೆ ರಕ್ತವನ್ನು ಉಗುಳುತ್ತಿರಬೇಕು. ಈಗ ಹೇಳಿ ಯಾವುದು ನಿಮಗೆ ಸರಿಯೆನಿಸುತ್ತದೆ? ಯಾವುವು ಇದರಲ್ಲಿ ಹೆಚ್ಚು ಆಧುನಿಕವಾದದ್ದು? ನಾವು ಅಲ್ಲಿ ಉಪಯೋಗಿಸಿದಂತಹ ಉಪಕರಣಗಳನ್ನು ನೋಡಬಾರದು, ಆದರೆ ಅದು ಎಷು ಉಪಯುಕ್ತಕರವಾಗಿದೆ ಎಂದು ಯೋಚಿಸಿ, ಪುರಾತನ ಚೀನಾದ ವೈದ್ಯ ಪದ್ಧತಿಯು ಬಹಳ ಮುಂದುವರೆದಿದ್ದು ಮತ್ತು ಇದರ ಮಟ್ಟಕ್ಕೆ ಬರಲು ಪಾಶ್ಚಾತ್ಯ ಪದ್ಧತಿಗೆ ಕೆಲವಾರು ವರ್ಷಗಳೇ ಬೇಕಾಗಿದೆ.

ಪ್ರಾಚೀನ ಚೀನಾದ ವಿಜ್ಞಾನವು ಆಧುನಿಕ ಪಾಶ್ಚಾತ್ಯ ದೇಶಗಳಿಂದ ಕಲಿತಂತಹ ವಿಜ್ಞಾನದಿಂದ ಬೇರೆಯಾದದ್ದು. ಅದು ಬೇರೆ ಮಾರ್ಗವನ್ನು ಅನುಸರಿಸಿತು. ಹಾಗೂ ಬೇರೆ ಒಂದು ದೃಶ್ಯವನ್ನೇ ಸ್ಥಾಪಿಸಿತು. ಆದ್ದರಿಂದ ನಾವು ನಮ್ಮದೇ ಆದ ರೀತಿಯಲ್ಲಿ ಪ್ರಾಚೀನ ಚೀನಾದ ವಿಜ್ಞಾನ ಮತ್ತು ತಾಂತ್ರಿಕತೆಯನ್ನು ಅರ್ಥ ಮಾಡಿಕೊಳ್ಳಲಾಗುವುದಿಲ್ಲ. ಏಕೆಂದರೆ ಇದು ಮನುಷ್ಯ ದೇಹ ಜೀವ ಹಾಗೂ ಜಗತ್ತಿನ ಬಗ್ಗೆ ಕೇಂದ್ರೀಕೃತವಾದದ್ದು. ಅವರು ಈ ವಿಷಯಗಳನ್ನು ನೇರವಾಗಿ ವಿಶ್ಲೇಷಿಸಿದರು. ಹೀಗಾಗಿ

ಇದೊಂದು ಬೇರೆ ಮಾರ್ಗವನ್ನು ಹಿಡಿಯಿತು. ಮತ್ತೆ ಈಗ ಶಾಲೆಯ ವಿದ್ಯಾರ್ಥಿಗಳು ಧ್ಯಾನದ ಬಗ್ಗೆ ಒಲವು ತೋರಿಸುತ್ತಿದ್ದಾರೆ. ಅವರು ಕುಳಿತುಕೊಳ್ಳಲು ಒಳ್ಳೆಯ ವೈಖರಿಯನ್ನು ಒತ್ತಿ ಹೇಳುತ್ತಾರೆ. ಹೀಗಾಗಿ ಇದು ಬಹಳ ಅವರಿಗೆ ಮುಖ್ಯವಾದದಾಗಿತ್ತು. ಏಕೆಂದರೆ ಇದರಿಂದ ಉಸಿರಾಡುವಿಕೆಯು ನಿಯಂತ್ರಣದಲ್ಲಿರುತ್ತದೆ ಮತ್ತು ಅವರು ಲೇಖನಿಗಳನ್ನು ಹಿಡಿಯುವಾಗ ಅವರಲ್ಲಿ 'ಚೀ' ಯನ್ನು ಉಂಟು ಮಾಡುತ್ತದೆ. ಮನುಷ್ಯರು ತಮ್ಮ ಜೀವನದ ಪ್ರತಿಯೊಂದು ದೃಶ್ಯ ಅಥವಾ ಹಂತದಲ್ಲಿಯೂ ತನ್ನ ಚಿತ್ರವನ್ನು ಅಥವಾ ಮನಸ್ಸನ್ನು ಸ್ವಚ್ಛವಾಗಿಟ್ಟುಕೊಂಡು, ಉಸಿರಾಡುವಿಕೆಯನ್ನು ಹಿಡಿತದಲ್ಲಿಟ್ಟುಕೊಳ್ಳುತ್ತಾರೆ. ಹಾಗೂ ಈ ರೀತಿಯಲ್ಲೇ ಸಮಾಜವು ಮುಂದೂಡಿತು.

ಕೆಲವು ವ್ಯಕ್ತಿಗಳು ಹೇಳುತ್ತಾರೆ, ನಾವೇನಾದರೂ ಪ್ರಾಚೀನ ಚೀನಾದ ವಿಜ್ಞಾನವನ್ನು ಅಳವಡಿಸಿಕೊಂಡಿದ್ದರೆ ಈ ವಾಹನಗಳು, ಉಗಿಬಂಡಿಗಳು ಇವೆಲ್ಲವುಗಳು ಇರುತ್ತಿದ್ದವಾ? ನಾವು ಈಗ ಇರುವಷ್ಟು ಆಧುನಿಕವಾಗಿ ಇರಲು ಸಾಧ್ಯವಾಗುತ್ತಿತ್ತಾ? ನಾನು ಹೇಳುವುದೇನೆಂದರೆ ನೀವು ಪ್ರಕೃತಿಯಲ್ಲಿ ಕಣ್ಣಿಗೆ ಕಾಣುವಂತೆ ಜೀವನವನ್ನು ರೂಪಿಸಿಕೊಳ್ಳಲು ಪ್ರಯತ್ನ ಮಾಡಬಾರದು. ನಿಮ್ಮ ಯೋಚನೆಗಳು ಹಾಗೂ ಕಲ್ಪನೆಯು ಒಂದು ಕ್ರಾಂತಿಯಾಗಿ ಬದಲಾವಣೆಯಾಗಬೇಕಾಗಿದೆ. ದೂರದರ್ಶನಗಳಿಲ್ಲದೆಯೇ ಮನುಷ್ಯನು ತನ್ನ ಕಲ್ಪನೆಯಲ್ಲಿ ಏನನ್ನು ಊಹಿಸಿದರೂ ಅದನ್ನು ಮಾನಸಿಕವಾಗಿ ಕಾಣ ಬಹುದು. ಅವರಲ್ಲಿ ಆ ಶಕ್ತಿಯು ಅಡಗಿರುತ್ತದೆ. ರೈಲು ಬಂಡಿ ಅಥವಾ ವಾಹನಗಳಿಲ್ಲದೆಯೇ ಮನುಷ್ಯನು ಅದರಲ್ಲಿ ಕುಳಿತುಕೊಂಡು ತೇಲಾಡಬಹುದು ಮತ್ತು ಅವರಿಗೆ ಯಾವ ಮೇಲಕ್ಕೆತ್ತುವ ಯಂತ್ರವೂ ಬೇಕಾಗಿಲ್ಲ. ಹೀಗೊಂದು ಕಾಲ ಬರಬಹುದು ಅದೇನೆಂದರೆ ಸಮಾಜವು ಬೇರೆ ನಿಟ್ಟಿನಲ್ಲಿ ಬೆಳೆಯತೊಡಗುವುದು ಹಾಗೂ ಇದು ಯಾವುದೂ ಒಂದು ನಿಶ್ಚಿತ ಆಯಾಕಟ್ಟಿನಲ್ಲಿರದಾಗಿರುವುದಿಲ್ಲ. ಎಲಿನ್‌ನ ಹಾರುವ ತಟ್ಟೆಗಳು ಹಿಂದಕ್ಕೆ ಹೋಗುತ್ತವೆ ಮತ್ತು ಬಹಳ ವೇಗವಾಗಿ ಚಲಿಸುತ್ತವೆ. ಹಾಗೂ ಅದು ಆ ನಿಟ್ಟಿನಲ್ಲಿ ದೊಡ್ಡದಾದರೂ ಅಥವಾ ಚಿಕ್ಕದಾದರೂ ಆಗಬಹುದು. ಅವುಗಳು ತೆಗೆದುಕೊಂಡಿರುವ ಮಾರ್ಗ ಇನ್ನು ಕಠಿಣವಾಗಿದೆ ಮತ್ತು ಅದು ಇನ್ನೊಂದು ವಿಜ್ಞಾನದ ಹಾದಿಯಾಗಲಿದೆ.

# ಉಪನ್ಯಾಸ–ಎಂಟು

**ಉಪವಾಸ ಕ್ರಿಯೆ (Bee-goo)**.

**ಕೆ**ಲವರು ಉಪವಾಸ ಕ್ರಿಯೆ(Bee-goo)ಯ ಬಗ್ಗೆ ಪ್ರಸ್ತಾಪಿಸುತ್ತಾರೆ. ಅಲ್ಲಿ ಉಪವಾಸದ ಈ ಸಂಗತಿಯಿರುತ್ತದೆ. ಅದು ವಿದ್ಯಾರ್ಥಿ ಸಮುದಾಯದಲ್ಲಿ ಮಾತ್ರವಲ್ಲದೆ, ಇಡೀ ಮಾನವ ಸಮಾಜದ ಬಹುತೇಕರಲ್ಲಿ ಕಂಡುಬರುತ್ತದೆ. ಅದೇನೆಂದರೆ ಕೆಲವರು ಹತ್ತಾರು ವರ್ಷ ತಿನ್ನುವುದಿಲ್ಲ; ಕುಡಿಯುವುದಿಲ್ಲ. ಆದರೂ ಅವರು ಚೆನ್ನಾಗಿಯೇ ಬದುಕುತ್ತಾರೆ ಎಂಬುದು. ಉಪವಾಸದ ಬಗ್ಗೆ ಮಾತನಾಡುವ ಕೆಲವರು ಉಪವಾಸವನ್ನು ಒಂದು ಹಂತದವರೆಗಿನ ಉತ್ತೇಜಕವಾಗಿ ಪರಿಗಣಿಸಿದರೆ, ಅದೇ ವೇಳೆ ಉಳಿದವರು ಅದನ್ನು ದೇಹ ಶುದ್ಧೀಕರಣದ ಸಂಕೇತವಾಗಿ ಪರಿಗಣಿಸುತ್ತಾರೆ. ಅಲ್ಲದೆ ಕೆಲವರು ಉತ್ಕೃಷ್ಟ ಮಟ್ಟದ ಸಾಧನಾ ಪ್ರಕ್ರಿಯೆಯೆಂದೂ ಗುರುತಿಸುತ್ತಾರೆ / ನಿರ್ಧರಿಸುತ್ತಾರೆ.

ಮೂಲತಃ ಉಪವಾಸವೆಂದರೆ ಇದ್ಯಾವುದೂ ಅಲ್ಲ. ಹಾಗಾದರೆ ಇನ್ನೇನು? ಉಪವಾಸವೆಂಬುದು ಒಂದು ನಿರ್ದಿಷ್ಟ ಪರಿಸರದಲ್ಲಿ ಅನುಸರಿಸುವ ಒಂದು ವಿಶಿಷ್ಟ ಸಾಧನಾ ಪದ್ಧತಿಗೆ ಅನ್ವಯಿಸುತ್ತದೆ. ಯಾವ ಸನ್ನಿವೇಶದಲ್ಲಿ ಅದು ಬಳಕೆಯಾಗುತ್ತದೆ? ಪ್ರಾಚೀನ ಚೀನಾದಲ್ಲಿ, ಧರ್ಮಗಳು ಪ್ರಚಾರಕ್ಕೆ ಬರುವ ಮುಂಚೆ, ಜನವಸತಿಯಿಂದ ದೂರವಿರುವ ಪರ್ವತ ಶ್ರೇಣಿಗಳಲ್ಲಿ ಹಲವು ಸಾಧಕರು ಒಂದು ರಹಸ್ಯವಾದ ಜೀವನ ಕ್ರಮವನ್ನು ಅನುಸರಿಸುತ್ತಿದ್ದರು. ಒಮ್ಮೆ ಅವರು ಈ ಪದ್ಧತಿಯನ್ನು ಅನುಸರಿಸಿದ ಮೇಲೆ, ಆಹಾರ ಪೂರೈಕೆಯ ವಿಷಯದೊಂದಿಗೆ ಅದು ಬೆರೆತು ಹೋಯಿತು. ಒಂದು ವೇಳೆ ಯಾವನಾದರೂ ಉಪವಾಸ ಪದ್ಧತಿಯನ್ನು ಅನುಸರಿಸದಿದ್ದರೆ, ಕಲಿಯದಿದ್ದರೆ, ಅಂಥವನು ಅಲ್ಲಿ ಹಸಿವು–ಬಾಯಾರಿಕೆಯಿಂದ ಸಾಯಬೇಕಿತ್ತು. ನಾನು ಚಾಂಗ್‌ಚಿಂಗ್‌ನಿಂದ (ಅತಿ ಹೆಚ್ಚು ಜನಸಂಖ್ಯೆಯುಳ್ಳ ನೈಋತ್ಯ ಚೀನಾದ ನಗರ) ಉಹಾನ್‌ಗೆ 'ಫಾ' ಬೋಧಿಸಲೆಂದು ಹೊರಟಿದ್ದೆ. ನಾನು ಹೊರಟ ದೋಣಿಯು ಯಾಂಗ್ಟ್ಜಿ ನದಿಯ ಪೂರ್ವಕ್ಕೆ ಸಾಗುತ್ತಿತ್ತು. ಅಲ್ಲಿ ಪರ್ವತಗಳ ಮಧ್ಯದಲ್ಲಿರುವ ಮೂರು ಗಿರಿಕಂದರಗಳಲ್ಲಿ ಎರಡೂ ಕಡೆ ಕೆಲವು ಗುಹೆಗಳಿದ್ದುದನ್ನು ನೋಡಿದೆ. ನನಗೆ ಪರಿಚಯವಿದ್ದ ಪರ್ವತಗಳಲ್ಲಿಯೂ ಕೂಡ ಅಂತಹ ಗುಹೆಗಳಿದ್ದುವು. ಹಿಂದಿನ ಕಾಲದಲ್ಲಿ ಹಗ್ಗದ ಸಹಾಯದಿಂದ ಗುಹೆಗೆ ಏರಿದ ನಂತರ, ಸಾಧಕನು ಆ ಗುಹೆಯಲ್ಲೇ ಅಭ್ಯಾಸ ಮಾಡುವುದಕ್ಕಾಗಿ ಹಗ್ಗವನ್ನು ಕತ್ತರಿಸುತ್ತಿದ್ದ. ಈ ವ್ಯಕ್ತಿಯು ಸಾಧನೆಯಲ್ಲಿ ಯಶಸ್ವಿಯಾಗದಿದ್ದರೆ, ಗುಹೆಯೊಳಗೇ ನೀರು–ಆಹಾರಗಳಿಲ್ಲದೆ ಸಾಯಬೇಕಿತ್ತು. ಇಂತಹ ವಿಶೇಷವಾದ ಸನ್ನಿವೇಶದಲ್ಲಿ ಅವನು ನಿರ್ದಿಷ್ಟವಾದ ಈ ಸಾಧನಾ ಪದ್ಧತಿಯನ್ನು ಅನುಸರಿಸಿದ.

ವಂಶಪಾರಂಪರ್ಯದಿಂದ ಅನೇಕ ರೂಢಿಗಳು / ಅಭ್ಯಾಸಗಳು ಸಾಗಿಬರುತ್ತವೆ. ಅಂತೆಯೇ ಅವರು ಉಪವಾಸ ಕ್ರಿಯೆಯನ್ನು ಸೇರಿಸಿಕೊಂಡಿದ್ದಾರೆ. ಒಂದಷ್ಟು ಆಚರಣೆಗಳು ಉಪವಾಸವನ್ನು ಒಳಗೊಳ್ಳುವುದಿಲ್ಲ. ಇವತ್ತು ಸಾರ್ವಜನಿಕರನ್ನು ರೂಪಿಸುತ್ತಿರುವ ಬಹಳಷ್ಟು ಆಚರಣೆಗಳೂ ಉಪವಾಸವನ್ನು ಸಂಯೋಜಿಸಿಕೊಳ್ಳುವುದಿಲ್ಲ. ಒಂದು ವಿಚಾರಕ್ಕೆ ಒಗ್ಗಿ ಹೋಗಿರುವವರನ್ನು ನಾವು ಬದಲಾಯಿಸಲಾಗುವುದಿಲ್ಲ. ನೀವು ಉಪವಾಸ ಕ್ರಿಯೆಯು ಒಳ್ಳೆಯದು ಮತ್ತು ಅನುಸರಿಸಬಹುದೆಂದು ಯೋಚಿಸಿರಬಹುದು. ಏತಕ್ಕಾಗಿ ಅದನ್ನು ಬಯಸುತ್ತೀರಿ? ಕೆಲವರು ಅದು ಚೆನ್ನಾಗಿದೆ, ಆಸಕ್ತಿದಾಯಕವಾಗಿದೆ ಎಂದು ಯೋಚಿಸುತ್ತಾರೆ. ಬಹುತೇಕ ಸಂದರ್ಭಗಳಲ್ಲಿ ಅನುಸರಿಸುವ ಇಂತಹ ಕ್ರಿಯೆ–ಗುಣ–ನಡತೆಗಳು ಅವರ ಆಡಂಭರಕ್ಕೆ ಹೆಚ್ಚು ಸಹಾಯಕವಾಗಿರುತ್ತವೆ. ಸಾರ್ವಜನಿಕರಲ್ಲಿ ಎಲ್ಲ ರೀತಿಯ ವ್ಯಕ್ತಿತ್ವದವರಿರುತ್ತಾರೆ. ಆದಾಗ್ಯೂ ಸಾಧನೆಯ ಅಭ್ಯಾಸದಲ್ಲಿ ಈ ಪದ್ಧತಿ ಉಪಯೋಗವಾದರೆ, ಒಬ್ಬನು ತನ್ನ ಸ್ವಯಾರ್ಜಿತ ಶಕ್ತಿಯನ್ನು ವ್ಯಯಿಸಿಯೇ ಈ ಭೌತಿಕ ದೇಹವನ್ನು ಉಳಿಸಿಕೊಳ್ಳಬೇಕು. ಅದು ಹೆಚ್ಚು ಪರಿಶ್ರಮದ್ದೂ ಅಲ್ಲ. ಧರ್ಮಗಳು ಸ್ಥಾಪನೆಯಾದ ನಂತರ ದೇವಸ್ಥಾನದಲ್ಲಿ ಒಬ್ಬನು ಅನ್ನಾಹಾರಗಳನ್ನು ಪಡೆಯುತ್ತ ಧ್ಯಾನ ಮಾಡುವುದನ್ನು (ನೋಡಿರುತ್ತೀರಿ) ತಿಳಿದಿರುತ್ತೀರಿ. ಅದು ಈ ವಿಚಾರವನ್ನು ಒಳಗೊಳ್ಳುವುದಿಲ್ಲ. ವ್ಯವಸ್ಥಿತವಾಗಿ ನಾವು ಸಾಮಾನ್ಯ ಮಾನವ ಸಮಾಜದ ಮಧ್ಯೆಯೇ ಸಾಧನೆಯನ್ನು ಅಭ್ಯಾಸ ಮಾಡುತ್ತೇವೆ. ಕೊನೆಗೂ ನೀವು ಈ ವಿಧಾನವನ್ನು ಅನುಸರಿಸದಿದ್ದರೆ, ನಿಮ್ಮ

ಮತ–ಪಂಥ ಅದನ್ನು ಹೊಂದದಿದ್ದರೆ, ನೀವು ಸಹಜವಾಗಿ ಕೆಲವನ್ನು ಇಚ್ಛೆಯಿಂದ ಮಾಡಲಾರಿರಿ. ಒಂದು ವೇಳೆ ನೀವು ನಿಜವಾಗಿಯೂ ಉಪವಾಸವನ್ನು ಅಭ್ಯಾಸ ಮಾಡುವುದಿದ್ದರೆ, ಹೇಗಾದರೂ ನೀವೂ ಮುಂದುವರೆಯಿರಿ. ನನಗೆ ಗೊತ್ತಿರುವಂತೆ, ಯಾವಾಗ ಗುರುವೊಬ್ಬ ಉನ್ನತಮಟ್ಟದ ಅಭ್ಯಾಸವನ್ನು ಕೃತಕತೆಯಿಲ್ಲದೆ ಶಿಷ್ಯನಿಗೆ ಬೋಧಿಸುವನೋ ಮತ್ತು ಒಬ್ಬನ ಅಭ್ಯಾಸದ ಕ್ರಮವು ಉಪವಾಸವನ್ನು ಹೊಂದುತ್ತದೆಯೋ, ಅಲ್ಲಿ ಈ ಸಂಗತಿ ಸ್ಥಾನ ಪಡೆಯಬಹುದು. ಅದಾಗದಿದ್ದಲ್ಲಿ ಒಬ್ಬನು ಉಪವಾಸ ಕ್ರಿಯೆಯನ್ನು ಸಾರ್ವಜನಿಕವಾಗಿ ಉತ್ತೇಜಿಸ ಲಾಗುವುದಿಲ್ಲ; ಒಬ್ಬನು ಆದರ್ಶಪ್ರಾಯವಾಗಿ ಶಿಷ್ಯನನ್ನು ಪ್ರತ್ಯೇಕವಾಗಿ ಅಭ್ಯಾಸ ಮಾಡಲು ದೂರಕ್ಕೆ ಕರೆದುಕೊಂಡು ಹೋಗಬಹುದು.

ಪ್ರಸ್ತುತ ಅಲ್ಲಲ್ಲಿ ಚೀಗಾಂಗ್ (ಪಾರಂಪರಿಕ ಚೀನೀ ವ್ಯಾಯಾಮ ವ್ಯವಸ್ಥೆ) ಬೋಧಕರೂ ಉಪವಾಸ ಕ್ರಿಯೆಯನ್ನು ಬೋಧಿಸುತ್ತಿದ್ದಾರೆ. ಉಪವಾಸ ಕ್ರಿಯೆ ನೆಲೆ ಕಂಡುಕೊಂಡಿದೆಯೇ? ಕೊನೆಗೂ ಹಾಗೆನ್ನಲು ಆಗುವುದಿಲ್ಲ. ಉಪವಾಸದ ಜೊತೆ ಯಶಸ್ಸು ಗಳಿಸಿದವರ್‍ಯಾರಿದ್ದಾರೆ? ಹಲವರು ಆಸ್ಪತ್ರೆ ಸೇರುವುದನ್ನು ನೋಡುತ್ತಿದ್ದೇನೆ ಮತ್ತು ಕೆಲವರ ಬದುಕು ಗಂಡಾಂತರದಲ್ಲಿದೆ. ಯಾಕಲ್ಲಿ ಇಂತಹ ಪರಿಸ್ಥಿತಿಯಾಗಿದೆ? ಉಪವಾಸದ ಸಂಗತಿ ಅಸ್ತಿತ್ವಕ್ಕೆ ಬಂದಿಲ್ಲವೆ? ಹೌದು ಬಂದಿದೆ. ಏನಾದರೂ ಅಲ್ಲಿ ಒಂದು ಮುಖ್ಯಾಂಶವಿದೆ. ನಮ್ಮ ಸಾಮಾನ್ಯ ಮಾನವ ಸಮಾಜ ಬದುಕುತ್ತಿರುವ ಪರಿಸ್ಥಿತಿಯನ್ನು ಅತಿಕ್ರಮಣ ಮಾಡಿ ಛಿದ್ರಗೊಳಿಸುವುದಕ್ಕೆ ಯಾರಿಗೂ ಅವಕಾಶವಿಲ್ಲ. ಇಡೀ ದೇಶದಲ್ಲಿ ಎಷ್ಟೊಂದು ಜನಕ್ಕೆ ತಿನ್ನಲು ಮತ್ತು ಕುಡಿಯಲು ಸಿಗುತ್ತಿಲ್ಲ ಎಂದು ಹೇಳುವುದಕ್ಕೆ ಈ ಮಾತನ್ನು ನಾನು ಬಳಸುತ್ತಿಲ್ಲ, ಚಾಂಗ್‌ಚುಂಗ್ ಪ್ರದೇಶಗಳಲ್ಲಿ ಬದುಕುವಂತಹ ಜನರಿಗೆ ತಿನ್ನುವುದಕ್ಕೂ, ಕುಡಿಯುವುದಕ್ಕೂ ಇಲ್ಲದಿದ್ದಾಗ, ಉಪವಾಸ ಕ್ರಿಯೆಯು ಪರಿಸ್ಥಿತಿಯನ್ನು ಸುಲಭಗೊಳಿಸುತ್ತದೆ! ನಾವು ಆಹಾರ ತಯಾರಿಸುವುದರ ಬಗ್ಗೆ ಚಿಂತಿಸುವ ಅಗತ್ಯವಿಲ್ಲ. ರೈತರು ಹೊಲದಲ್ಲಿ ಕಷ್ಟಪಟ್ಟು ಬೆವರು ಸುರಿಸುತ್ತಾರೆ ಮತ್ತು ಯಾವನೂ ತಿನ್ನುವುದಕ್ಕೆ ಪಡೆಯುತ್ತಿಲ್ಲ. ಉಪವಾಸ ಕ್ರಿಯೆಯು ನಿಜವಾಗಿಯೂ ಹೊಟ್ಟೆಗಿಲ್ಲದೆ ಜನ ದುಡಿಯುವುದಕ್ಕಿಂತ ಹೆಚ್ಚು ಉತ್ತಮವಾದ, ಸುಲಭವಾದ ವಸ್ತುಸ್ಥಿತಿಯಾಗಿದೆ. ಅದು ಹೇಗೆ ಒಪ್ಪಿತವಾಗುತ್ತದೆ? ಅದೂ ಒಂದು ಮಾನವ ಸಮಾಜವಾಗುತ್ತದೆಯೇ? ಉಪವಾಸ ಕ್ರಿಯೆಯು ಸಾಮಾನ್ಯ ಮಾನವ ಸಮಾಜಕ್ಕೆ ಖಚಿತವಾಗಿ ತಡೆಯಾಗಿ, ದೊಡ್ಡ ಮಟ್ಟದ ಅಡ್ಡಿಯನ್ನುಂಟು ಮಾಡುತ್ತದೆಯಾದ್ದರಿಂದ ಉಪವಾಸವು ಅವರ ಅನುಸರಣೆಗೆ ಯೋಗ್ಯವಲ್ಲ.

ಕೆಲ ಚೀಗಾಂಗ್ ಬೋಧಕರು ಉಪವಾಸ ಕ್ರಿಯೆಯನ್ನು ಬೋಧಿಸಿದಾಗ ಹಲವರ ಬದುಕು ಸಂಕಷ್ಟಕ್ಕೆ ಒಳಗಾಗಿದೆ. ಕೆಲವರು ತಮ್ಮ ದಿನನಿತ್ಯದ ಜೀವನ ವಿಧಾನಗಳೊಂದಿಗೆ ಸುಲಭವಾಗಿ ಉಪವಾಸವನ್ನು ಕಲಿಯಲು ಪ್ರಯತ್ನಿಸುತ್ತಲೇ ಇರುತ್ತಾರೆ. ಈ ಪ್ರವೃತ್ತಿ ಇನ್ನೂ ಕಡಿಮೆಯಾಗಿಲ್ಲ. ಅಂತಹ ವ್ಯಕ್ತಿಯು ರುಚಿಕರವಾದ ಆಹಾರವನ್ನು ನೋಡಿದಾಗ ಬಾಯಲ್ಲಿ ನೀರೂರುತ್ತದೆ. ಒಮ್ಮೆ ಈ ಚಪಲ ಮೂಡಿದರೆ, ಅವನು ಅದನ್ನು ನಿಯಂತ್ರಿಸಲಾರ, ಆಹಾರವನ್ನು ತಿನ್ನುವುದಕ್ಕೆ ಮುಗಿಬೀಳುತ್ತಾನೆ. ಹೀಗೆ ಆಸೆ ಹೆಚ್ಚಾದಾಗ, ಅವನು ತಿನ್ನುವುದಕ್ಕೆ ಇಷ್ಟಪಡುತ್ತಾನೆ; ಜೊತೆಗೆ ಇನ್ನೊಂದು ರೀತಿಯಲ್ಲಿ ಹಸಿವನ್ನು ಅನುಭವಿಸುತ್ತಾನೆ. ಹಸಿವು ಹೆಚ್ಚಾಗಿ ಹೇಗಾದರೂ ಅವನು ತಿಂದರೆ, ಅಲ್ಲಿಂದ ಅವನು ತಿನ್ನದಿದ್ದಾಗ ದುರ್ಬಲಗೊಂಡು ಭಯಗೊಳ್ಳುತ್ತಾನೆ. ಹೀಗಾದಾಗ ಹಲವರು ಆಸ್ಪತ್ರೆ ಸೇರಿದ್ದಾರೆ ಮತ್ತು ಕೆಲವರ ಬದುಕು ತೊಂದರೆಗೀಡಾಗಿದೆ. ನನ್ನ ಪರಿಚಯವಿರುವ ಜನರು ಇಂತಹ ಸಮಸ್ಯೆಯಲ್ಲಿರುವವರ ಯೋಗಕ್ಷೇಮವನ್ನು ವಹಿಸಿಕೊಳ್ಳುವಂತೆ ಕೇಳಿಕೊಳ್ಳುತ್ತಾರೆ. ನಾನು ಒಪ್ಪಿಕೊಳ್ಳುವುದಿಲ್ಲ. ಕೆಲವು ಚೀಗಾಂಗ್ ಬೋಧಕರು ಜವಾಬ್ದಾರಿಯಿಲ್ಲದೆ ಇಂಥವನ್ನು ಮಾಡುತ್ತಾರೆ. ಅಂತವರಿಗಾಗಿ ಯಾರೂ ಸಮಸ್ಯೆಯನ್ನು ನಿವಾರಿಸುವ ಜವಾಬ್ದಾರಿ ಹೊತ್ತುಕೊಳ್ಳುವುದಿಲ್ಲ.

ಇದಲ್ಲದೆ ನೀವೇನಾದರೂ ಉಪವಾಸ ಕ್ರಿಯೆ ಅಭ್ಯಾಸ ಮಾಡುವುದರಲ್ಲಿ ಸಮಸ್ಯೆಗೊಳಗಾಗಿದ್ದರೆ, ಅದು ನಿಮ್ಮ ಸ್ವಂತ ಪ್ರಯತ್ನದಿಂದ ಆಗಿದೆಯೇ? ಉಪವಾಸ ಕ್ರಿಯೆಯ ಸಂಗತಿಗಳು ಅಸ್ತಿತ್ವದಲ್ಲಿವೆ. ಆದರೆ ಯಾರ್‍ಯಾರೋ ಹೇಳುವ 'ಉನ್ನತ ಹಂತ' ಅಥವಾ 'ವಿಶೇಷ ಪ್ರತಿಕ್ರಿಯೆ'ಗಳಾಗಿ ಅಲ್ಲವೆಂದು ನಾವು ಹೇಳುತ್ತೇವೆ. ಉಪವಾಸ ಕ್ರಿಯೆಯು ಕೇವಲ ವಿಶೇಷ ಸನ್ನಿವೇಶಗಳಲ್ಲಿ ಮಾತ್ರ ಬಳಕೆಯಾಗುತ್ತಿರುವ ಅಭ್ಯಾಸ ಪದ್ಧತಿ. ಆ ಕಾರಣದಿಂದ ಅದನ್ನು ಎಲ್ಲ ಕಡೆ ವಿಸ್ತಾರವಾಗಿ ಉತ್ತೇಜಿಸಲಾಗುವುದಿಲ್ಲ. ಒಂದಷ್ಟು ಜನ ಉಪವಾಸವನ್ನು, ಉಪವಾಸ–ಅರೆ ಉಪವಾಸವೆಂದು ವಿಭಾಗಿಸಿದ್ದಾರೆ. ಅಲ್ಲದೆ ಅದನ್ನು

ಶ್ರೇಣಿಗಳಲ್ಲಿ ಗುರುತಿಸಿದ್ದಾರೆ. ಕೆಲವರು ಅವರಿಗೆ ಕುಡಿಯುವುದಕ್ಕೆ ನೀರು ಮಾತ್ರ ಇದ್ದರೆ ಸಾಕೆಂದು ಹೇಳಿದರೆ / ನಿರ್ಧರಿಸಿದರೆ, ಅದೇ ಸಂದರ್ಭದಲ್ಲಿ ಉಳಿದವರು ತಿನ್ನುವುದಕ್ಕೆ ಹಣ್ಣುಗಳಿದ್ದರೆ ಸಾಕೆಂದು ನಿರ್ಧರಿಸುತ್ತಾರೆ. ಇವೆಲ್ಲ ನಿಜವಾದ ಉಪವಾಸಗಳಲ್ಲ. ಕಾಲ ಸಾಗುತ್ತಿದ್ದಂತೆ ಅವರೆಲ್ಲ ಸೋಲನ್ನಪ್ಪುತ್ತಾರೆ. ಒಬ್ಬ ಅಪ್ಪಟ ಸಾಧಕನು ಗುಹೆಯಲ್ಲಿ ನೀರು ಆಹಾರಗಳನ್ನು ಸೇವಿಸದೆ ನೆಲೆಸಿರುತ್ತಾನಲ್ಲ –ಅದು ನಿಜವಾದ ಉಪವಾಸ ಕ್ರಿಯೆ.

## ಕದ್ದು ಪಡೆಯುವ ಪ್ರಭೆ (Stealing Qi)

ಕದಿಯುವ ಪ್ರಭೆಯ ಬಗ್ಗೆ ಮಾತನಾಡುತ್ತಿದ್ದಂತೆ ಕೆಲವರು ಹುಲಿಯನ್ನು ಕಂಡಂತೆ ಭಯದಿಂದ ಬಿಳಿಚಿಕೊಳ್ಳುತ್ತಾರೆ. ಅವರು ಚೀಗಾಂಗನ್ನು (ಪ್ರಭೆಯನ್ನು ಉದ್ದೀಪಿಸುವ ಕ್ರಿಯೆ) ಕಲಿಯುವುದಕ್ಕೆ ಹೆಚ್ಚು ಭಯಪಡುತ್ತಾರೆ. ಕದಿಯುವ ಪ್ರಭೆ ಮತ್ತು ಅದರ ಸಾಧನೆಯ ಉನ್ಮಾದದ ಬಗ್ಗೆ ಇರುವ ಊಹಾಪೋಹಗಳ ಕಾರಣದಿಂದಾಗಿ ವಿದ್ಯಾರ್ಥಿ ಸಮುದಾಯದ ಬಹುತೇಕರಲ್ಲಿ ಚೀಗಾಂಗ್ ಬಗ್ಗೆ ಕೇಳಲು ಮತ್ತು ಕಲಿಯಲು ಹೆಚ್ಚು ಭಯವಿದೆ. ಇಂತಹ ದೃಷ್ಟಿಕೋನಗಳು ಇಲ್ಲದಿದ್ದಲ್ಲಿ ಹೆಚ್ಚು ಜನ ಚೀಗಾಂಗನ್ನು ಕಲಿಯುತ್ತಿದ್ದರು. ಚೀಗಾಂಗನ್ನೇ ವಿಶೇಷವಾಗಿ ಬೋಧಿಸಬೇಕಾದ ಚೀಗಾಂಗ್ ಬೋಧಕರ ಬೋಧನೆಯೂ ಕೆಳಮಟ್ಟದಲ್ಲಿದೆ. ಅದು ವಿದ್ಯಾರ್ಥಿ ಸಮುದಾಯವನ್ನು ಸಂಪೂರ್ಣವಾಗಿ ಗಾಬರಿಗೊಳಿಸಿದೆ. ನಿಜವಾಗಿ ಅವರು ವರ್ಣಿಸುವಷ್ಟು ಚೀಗಾಂಗ್ ಭಯಾನಕವಾಗಿಲ್ಲ. ಚೀ(Qi=ಪ್ರಭೆ)ಯು ಕೇವಲ ಪ್ರಭೆಯಷ್ಟೆ ಎಂದು ನಾವು ಹೇಳುತ್ತೇವೆ. ಅದನ್ನು ನೀವು 'ಬೆರೆತಿರುವ ಮೂಲ ಪ್ರಭೆ'. ಈ ಪ್ರಭೆ ಅಥವಾ ಆ ಪ್ರಭೆ ಎಂದೂ ಕರೆಯಬಹುದು. ಎಲ್ಲಿಯವರೆಗೆ ವ್ಯಕ್ತಿಯ ದೇಹವು ಪ್ರಭೆಯನ್ನು ಹೊಂದಿರುತ್ತದೆಯೋ, ಅಲ್ಲಿಯವರೆಗೆ ಅವನು ಚೀಗಾಂಗ್‌ನ ಅಭ್ಯಾಸಿಯಾಗದಿದ್ದರೂ, ಸದೃಢ ಮತ್ತು ಆರೋಗ್ಯದಿಂದಿರುತ್ತಾನೆ. ಅವನ ದೇಹ ಹೆಚ್ಚು ಶುದ್ಧೀಕರಣಗೊಳ್ಳುವವರೆಗೆ, ರೋಗಗ್ರಸ್ತ ಪ್ರಭೆಯನ್ನು ಹೊಂದಿರುತ್ತದೆ. ಪ್ರಭೆಯನ್ನು ಕದಿಯುವ ವ್ಯಕ್ತಿಯಲ್ಲಿಯೂ ಪ್ರಭೆಯ ಮಟ್ಟ ಹೆಚ್ಚೇನೂ ಆಗುವುದಿಲ್ಲ. ನಮ್ಮ ಅಭ್ಯಾಸಿಗಳಲ್ಲಿ ಯಾರು ಅಪವಿತ್ರವಾಗಿರುವ ಪ್ರಭೆಯನ್ನು ಬಯಸುತ್ತಾರೆ? ಯಾರೂ ಇಲ್ಲ. ಅಭ್ಯಾಸಿಗರಲ್ಲದವರ ದೇಹದಲ್ಲಿ ಪ್ರಭೆಯು ಸುಮಾರು ಅಪವಿತ್ರಗೊಂಡಿರುತ್ತದೆ. ಅದನ್ನೂ ಚೀಗಾಂಗ್ ಅಭ್ಯಾಸದಿಂದ ಉದ್ದೀಪಿಸಬಹುದು. ಅನಾರೋಗ್ಯಕ್ಕೆ ಒಳಗಾಗಿರುವ ಭಾಗವು ದಟ್ಟವಾದ ಕಪ್ಪು ಛಾಯೆಯನ್ನು ತೋರಿಸುತ್ತದೆ. ಅಭ್ಯಾಸವನ್ನು ಮುಂದುವರೆಸುವುದರಿಂದ ಅನಾರೋಗ್ಯವನ್ನು ಗುಣಪಡಿಸಿ, ದೇಹವನ್ನು ಸದೃಢಗೊಳಿಸಬಹುದು. ಹೀಗೆ ಮಾಡುವುದರಿಂದ ಕ್ರಮೇಣ ಅವನ ಪ್ರಭೆ ಹಳದಿ ಬಣ್ಣಕ್ಕೆ ತಿರುಗುತ್ತದೆ. ಅವನು ಅಭ್ಯಾಸವನ್ನು ಮತ್ತೂ ಮುಂದುವರೆಸುತ್ತಿದ್ದರೆ ರೋಗವು ಸಂಪೂರ್ಣವಾಗಿ ಗುಣವಾಗಿ, ಪ್ರಭೆಯು ಅಗೋಚರವಾಗುತ್ತದೆ. ಅವನು ನಂತರದಲ್ಲಿ ಹಾಲು ಬಿಳುಪಿನ ಶಾರೀರಿಕ ಸ್ಥಿತಿಯನ್ನು ಪ್ರವೇಶಿಸುತ್ತಾನೆ.

ಕದಿಯುವ ಪ್ರಭೆ ವ್ಯಕ್ತಿಯೊಬ್ಬನಲ್ಲಿ ಇರುವಾಗಲೂ, ವ್ಯಕ್ತಿ ರೋಗಬಾಧೆಯನ್ನು ಹೊಂದಿರುತ್ತಾನೆ. ನಾವು ಅಭ್ಯಾಸಿಗಳು– ಅಭ್ಯಾಸದಲ್ಲಿ ಪ್ರಭೆಯನ್ನು ಹೊಂದಬೇಕಾದ ಅಗತ್ಯವೇನು? ನಮ್ಮ ದೇಹದ ಅಂಗಾಂಗಗಳು ಶುದ್ಧಗೊಳ್ಳಲು ಅದರ ಅಗತ್ಯವಿದೆ. ಅಶುದ್ಧವಾದ ಪ್ರಭೆಯನ್ನು ನಾವೇಕೆ ಹೊಂದುತ್ತೇವೆ? ಖಂಡಿತವಾಗಿ ಇಲ್ಲ. ಒಬ್ಬ ವ್ಯಕ್ತಿಯು ಪ್ರಭೆ ಸಮಸ್ಥಿತಿಯಲ್ಲಿದ್ದಾಗ, ಒಳ್ಳೆಯ ಪ್ರಭೆ ಮತ್ತು ಕೆಟ್ಟ ಪ್ರಭೆಗಳ ನಡುವೆ ಭಿನ್ನತೆಯನ್ನು ತಿಳಿಯಲಾರ, ಅವನು ಆ ಸಾಮರ್ಥ್ಯವನ್ನೇ ಹೊಂದಿರುವುದೂ ಇಲ್ಲ. ನಿಮ್ಮ ದೇಹದಲ್ಲಿರುವ ಅಪ್ಪಟ ಪ್ರಭೆಯನ್ನು ಡಾಂಟಿಯನ್ ಕದಿಯುವುದಕ್ಕಾಗುವುದಿಲ್ಲ, ಆ ಮೂಲಪ್ರಭೆಯನ್ನು ಕೇವಲ ಉನ್ನತಮಟ್ಟದ ಸಾಮರ್ಥ್ಯವಿರುವವನ ಸಹಾಯದಿಂದ ವರ್ಗಾಯಿಸಬಹುದು. ನಿಮ್ಮ ದೇಹದಲ್ಲಿರುವ ಅಶುದ್ಧ ಪ್ರಭೆಗಾಗಿ, ಅವನಿಗೆ ಅದನ್ನು ಕದಿಯಲು ಬಿಡಿ. ಅದೇನೂ ದೊಡ್ಡ ಮೊತ್ತವಲ್ಲ. ಅಭ್ಯಾಸದಲ್ಲಿದ್ದಾಗ ನಾನು ಸ್ವತಃ ಪ್ರಭೆಯನ್ನು ತುಂಬಿಕೊಳ್ಳಲು ಇಚ್ಛಿಸಿದರೆ, ಕೆಲವೇ ಕ್ಷಣಗಳಲ್ಲಿ ನಾನು ಅದನ್ನು ಪೂರೈಸಿಕೊಳ್ಳಬಹುದು.

ಬೌದ್ಧ ಪಂಥವು ಪ್ರಭೆಯನ್ನು ತಲೆಯ ಮಧ್ಯಭಾಗದಿಂದ ಚಿಮ್ಮಿಸುವುದನ್ನು ಬೋಧಿಸುವಾಗ, ತಾವೋ ಪಂಥವು **ಟಿಯಾನ್ಜಿ ಜುವಾಂಗ್** ಎನ್ನುವ ನಿಂತ ಭಂಗಿಯಲ್ಲಿ ಮಾಡುವ ವ್ಯಾಯಾಮವನ್ನು ಬೋಧಿಸಿತು. ನೀವು ಸ್ವತಃ ಪ್ರತಿದಿನ ತುಂಬಿಕೊಳ್ಳುವುದಕ್ಕೆ ವಿಶ್ವದಲ್ಲಿ ಬೇಕಾದಷ್ಟು ಪ್ರಭೆಯಿರುತ್ತದೆ.

ತಾಗಿಂಗ್ ಮತ್ತು **ಬಯ್‌ಹುಯಿ** –ಇದು ತಲೆಯ ಮಧ್ಯಭಾಗದಲ್ಲಿರುವ ಆಕ್ಯುಪಂಚರ್ ಕೇಂದ್ರ– ಕೇಂದ್ರಗಳನ್ನು ತೆರೆಯುವುದರ ಮೂಲಕ ನೀವು ನಿಮ್ಮ ಕೈಗಳನ್ನು ಡಾಂಟಿಯನ್ನಿನ ಮೇಲೆ ಏಕಾಗ್ರಗೊಳಿಸಿ ಸ್ವತಃ ಪ್ರಭೆಯನ್ನು ತುಂಬಿಕೊಳ್ಳಬಹುದು. ಒಮ್ಮೆಗೆ ನೀವು ತುಂಬಿಕೊಂಡಾದ ಮೇಲೆ, ಎಷ್ಟು ಪ್ರಭೆಯನ್ನು ತುಂಬಿಕೊಂಡಿರೆಂಬುದು ಮುಖ್ಯವಾಗುವುದಿಲ್ಲ. ಅದರಿಂದಾಗುವ ಪ್ರಯೋಜನವೇನು? ಕೆಲವರು ಪ್ರಭೆಯನ್ನು ಚೆನ್ನಾಗಿ ಅಭ್ಯಾಸ ಮಾಡಿದಾಗ, ಅವರ ಬೆರಳು ಮತ್ತು ಅಂಗಾಂಗಗಳು ಉಬ್ಬಿದಂತೆ ಅನುಭವವಾಗುತ್ತದೆ. ಅಂತಹ ವ್ಯಕ್ತಿಯ ಹತ್ತಿರ ಹೋದವರು ಅವನ ಸುತ್ತ ವಲಯವೊಂದು ಸುತ್ತುವರಿದಿರುವುದನ್ನು ತಿಳಿದು, ಅಬ್ಬಾ ನೀವು ಚೆನ್ನಾಗಿ ಅಭ್ಯಾಸ ಮಾಡಿದ್ದೀರಿ ಎಂದು ಉದ್ಗರಿಸುತ್ತಾರೆ. ನಾನು ಹೇಳುತ್ತೇನೆ ಅದೇನೂ ಅಲ್ಲ. ನಿಮ್ಮ ಗಾಂಗ್ (ಸಾಧನಾ ಹಾದಿಯಲ್ಲಿ ಉದ್ಭವಿಸುವ ಶಕ್ತಿ) ಎಲ್ಲಿದೆ? ಅದು ಇನ್ನೂ ಪ್ರಭೆಯ ಒಂದು ಅಭ್ಯಾಸವಷ್ಟೆ, ಯಾವುದು ಗಾಂಗ್‌ಗೆ ಪರಿವರ್ತಿತವಾಗುವುದಿಲ್ಲವೊ ಅದು ಎಷ್ಟು ಶೇಖರಿತವಾಗಿದೆ ಎಂಬುದು ಮುಖ್ಯವಾದುದೇನಲ್ಲ. ಪ್ರಭೆಯನ್ನು ಅಭ್ಯಾಸ ಮಾಡುವುದರ ಉದ್ದೇಶ ಒಬ್ಬ ವ್ಯಕ್ತಿಯ ದೇಹದೊಳಗೆ ಹೊರಗಡೆಯಿಂದ ಪ್ರಭೆಯನ್ನು ಪರ್ಯಾಯವಾಗಿ ಸೇರಿಸುವುದು ಮತ್ತು ದೇಹವನ್ನು ಶುದ್ಧೀಕರಿಸುವುದಾಗಿರುತ್ತದೆ. ಒಬ್ಬನು ಪ್ರಭೆಯನ್ನು ಸಂಪಾದಿಸುವುದರ ಉದ್ದೇಶವೇನು? ಈ ಹಂತದಲ್ಲಿ, ಮೂಲಭೂತ ಬದಲಾವಣೆಗಳಿಲ್ಲದೆ, ಪ್ರಭೆಯು ಗಾಂಗ್‌ಯೆನಿಸುವುದಿಲ್ಲ. ಆದ್ದರಿಂದ ನೀವು ಎಷ್ಟು ಪ್ರಮಾಣದ ಪ್ರಭೆಯನ್ನು ಕದ್ದು ಶೇಖರಿಸಿದ್ದೀರಿ ಎಂಬುದು ಮುಖ್ಯವಾಗುವುದಿಲ್ಲ. ನೀವು ಕೇವಲ ಪ್ರಭೆಯನ್ನು ಶೇಖರಿಸಿರುವ ದೊಡ್ಡ ಚೀಲವಾಗಿರುತ್ತೀರಿ. ಅದರಿಂದ ಪ್ರಯೋಜನವೇನು? ಅಷ್ಟೊಂದನ್ನು ಅತ್ಯುನ್ನತ ಸ್ಥಿತಿಗೆ ವರ್ಗಾಯಿಸಲೂ ಸಾಧ್ಯವಿಲ್ಲದಿದ್ದಾಗ, ಭಯಪಡುವುದರ ಅಗತ್ಯವೇನು? ಅವನಿಗೆ ಅಗತ್ಯವಿದ್ದರೆ ಪ್ರಭೆಯನ್ನು ಕದ್ದುಕೊಳ್ಳಲಿ ಬಿಡಿ.

ಎಲ್ಲರೂ ಇದರ ಬಗ್ಗೆ ಯೋಚಿಸಬೇಕು: ನಿಮ್ಮ ದೇಹ ಪ್ರಭೆಯನ್ನು ಹೊಂದಿದ್ದರೆ, ಜೊತೆಗೆ ರೋಗಬಾಧೆಯನ್ನೂ ಹೊಂದಿರುತ್ತದೆ. ಯಾವಾಗ ಒಬ್ಬನು ನಿಮ್ಮ ಪ್ರಭೆಯನ್ನು ಕದಿಯುತ್ತಾನೋ, ಆಗ ನಿಮ್ಮ ರೋಗಗ್ರಸ್ತ ಪ್ರಭೆಯನ್ನೂ ಚೆನ್ನಾಗಿ ಕದಿಯುತ್ತಾನೆಯೇ? ಎಲ್ಲಿಯವರೆಗೆ ಒಬ್ಬ ಇರುವುದಕ್ಕಿಂತ ಹೆಚ್ಚು ಪ್ರಭೆಯನ್ನು ಬಯಸುತ್ತಾನೋ ಮತ್ತು ಯಾವುದೇ ಸಾಮರ್ಥ್ಯವನ್ನು ಗಳಿಸಿರುವುದಿಲ್ಲವೋ ಅಲ್ಲಿಯವರೆಗೆ ಅವನು ಈ ವಿಷಯಗಳನ್ನು ಬೇರ್ಪಡಿಸಿ ನೋಡುವುದಿಲ್ಲ. ಗಾಂಗನ್ನು ಹೊಂದಿರುವ ವ್ಯಕ್ತಿಯು ಪ್ರಭೆಯನ್ನು ನಿಜವಾಗಿಯೂ ಬಯಸಲಾರ. ನೀವು ನಂಬದಿದ್ದರೆ, ನಾವು ಒಂದು ಪ್ರಯೋಗವನ್ನು ಏರ್ಪಡಿಸೋಣ. ಒಬ್ಬ ವ್ಯಕ್ತಿ ನಿಮ್ಮ ಪ್ರಭೆಯನ್ನು ಕದಿಯಲು ಬಯಸಿದರೆ, ಅವನ ಮುಂದೆ ನಿಂತು, ಕದಿಯಲು ಬಿಡಿ. ನೀವು ನಿಮ್ಮ ಮನಸ್ಸನ್ನು ವಿಶ್ವದಲ್ಲಿಂದ ಪ್ರಭೆಯನ್ನು ತುಂಬಿಕೊಳ್ಳಲು ಕೇಂದ್ರೀಕರಿಸಿ, ಇಲ್ಲಿ ಅವನು ನಿಮ್ಮ ಹಿಂದೆ ನಿಮ್ಮ ಪ್ರಭೆಯನ್ನು ಕದಿಯುವಾಗ, ಅದು ಎಷ್ಟೊಂದು ಒಳ್ಳೆಯ ವ್ಯವಹಾರವೆಂದು ನೀವೇ ನೋಡುತ್ತೀರಿ. ಅಂತೆಯೇ ಅದು ನಿಮ್ಮ ದೇಹ ಶುದ್ಧೀಕರಣದ ವೇಗವನ್ನು ಹೆಚ್ಚಿಸುವಲ್ಲಿ ಸಹಕಾರಿಯಾಗುತ್ತದೆ ಮತ್ತು ನೀವು ಪ್ರಭೆಯನ್ನು ತುಂಬಿಕೊಳ್ಳುವ ಅಥವಾ ಕಳೆದುಕೊಳ್ಳುವ ಅಗತ್ಯವಿರುವುದಿಲ್ಲ. ಅವನು ಕೆಟ್ಟ ಆಲೋಚನೆ ಹೊಂದಿ ಬೇರೆಯವರಿಂದ ಕದ್ದಿರುವುದರಿಂದ, ಅವನು ಕದ್ದಿರುವುದು ಒಳ್ಳೆಯದಾಗಿರುವುದಿಲ್ಲ, ಅದನ್ನು ಕಳೆದುಕೊಳ್ಳುವುದಕ್ಕೆ ಆತ ಅಂತದೇ ಇನ್ನೊಂದು ವ್ಯವಹಾರಕ್ಕೆ ತೊಡಗಿಸಿಕೊಳ್ಳಬೇಕು. ಅವನು ಅದನ್ನು ನಿಮಗೇ ನೀಡಿದರೆ ಅದು ಚಕ್ರೀಯವಾಗುತ್ತದೆ. ಯಾರು ಪ್ರಭೆಯನ್ನು ಕದಿಯುತ್ತಾರೆ ಅವರಿಗೆ ಈ ವಿಷಯಗಳು ತಿಳಿದಿರುವುದಿಲ್ಲ. ಅವನು ಅದನ್ನು ತಿಳಿದುಕೊಂಡರೆ, ಹಾಗೆ ಮಾಡುವುದಕ್ಕೆ ಅವನು ಹಿಂಜರಿಯುವುದಿಲ್ಲ!

ಪ್ರಭೆಯನ್ನು ಕದಿಯುವವರೆಲ್ಲರು ನೀಲಿಯಾದ ಮುಖಗಳನ್ನು ಹೊಂದಿರುತ್ತಾರೆ ಮತ್ತು ಅವರೆಲ್ಲ ಈ ದಾರಿಯಲ್ಲಿಯೇ ಇರುತ್ತಾರೆ. ಪಾರ್ಕಿನಲ್ಲಿ ಚೀಗಾಂಗ್ ಅಭ್ಯಾಸ ಮಾಡಲು ಹೋಗುವ ಬಹುತೇಕರು ರೋಗಬಾಧೆಯನ್ನು ನಿವಾರಿಸಿಕೊಳ್ಳುವ ಹಂಬಲದಲ್ಲಿರುತ್ತಾರೆ ಮತ್ತು ಎಲ್ಲ ವಿಧದ ರೋಗಗಳನ್ನು ಹೊಂದಿರುತ್ತಾರೆ. ಯಾವಾಗ ಒಬ್ಬ ರೋಗದ ಉಪಶಮನದಲ್ಲಿರುತ್ತಾನೋ, ಆಗ ಅವನು ರೋಗಗ್ರಸ್ತ ಪ್ರಭೆಯನ್ನು ಹೊರಬಿಡಲು ಪ್ರಯತ್ನಿಸುತ್ತಿರುತ್ತಾನೆ. ಹಾಗಿದ್ದಾಗ ಯಾವ ವ್ಯಕ್ತಿ ಕೇವಲ ಪ್ರಭೆಯನ್ನು ಕದಿಯುತ್ತ, ಬಿಟ್ಟುಕೊಡುವುದಿಲ್ಲವೋ ಅವನು ತನ್ನ ದೇಹದ ತುಂಬ ಎಲ್ಲ ರೀತಿಯ ರೋಗಗ್ರಸ್ತ ಪ್ರಭೆಯನ್ನು ತುಂಬಿಕೊಳ್ಳುತ್ತಾನೆ. ಅದೇ ಪ್ರಮಾಣದಲ್ಲಿ ಅವನ ಅಂತರಂಗ ಶರೀರ ಕಪ್ಪಾಗುತ್ತದೆ.

ಅವನು ಯಾವಾಗಲೂ ಅದೇ ಅಡ್ಡದಾರಿಯಲ್ಲಿದ್ದರೆ, ಅವನ ಶರೀರವೆಲ್ಲ ಕಪ್ಪಾಗುತ್ತದೆ. ಬೇರೆಯವರಿಂದ ಪ್ರಭೆಯನ್ನು ಕದ್ದವನು ಈ ಬದಲಾವಣೆಯ ಅನುಭವವನ್ನು ಸ್ವತಃ ತಿಳಿದುಕೊಂಡಾಗಲೂ, ಮೂರ್ಖ ಕೆಲಸವನ್ನು ಮುಂದುವರಿಸುತ್ತಾ, ಬೇರೆಯವರಿಗೆ ಅದನ್ನು ಕೊಡಬೇಕು ಎಂದು ಅರ್ಥಮಾಡಿಕೊಳ್ಳುವುದಿಲ್ಲ. ಅವನು ಕೊನೆಗೂ ಹಾಗೆ ಮಾಡುವುದಿಲ್ಲ.

ಕೆಲವರು ಹೊಂದಿರುವ ಪ್ರಭೆಯ ಸ್ವಲ್ಪ ಭಾಗವನ್ನು ಬಿಡಬೇಕಾಗುತ್ತದೆ. "ನೀವು ಅಮೇರಿಕಾದಲ್ಲಿದ್ದರೂ, ನಾನು ಬಿಟ್ಟುಕೊಡುವ ಪ್ರಭೆಯನ್ನು ಸ್ವೀಕರಿಸಬಹುದು." "ನೀವು ಗೋಡೆಯ ಇನ್ನೊಂದು ಭಾಗದಲ್ಲಿ ಕಾಯುತ್ತ, ನಾನು ಬಿಟ್ಟುಕೊಡುವ ಪ್ರಭೆಯನ್ನು ಸ್ವೀಕರಿಸಬಹುದು." ಕೆಲವರು ಹೆಚ್ಚು ಸಂವೇದನಾಶೀಲರಾಗಿದ್ದು, ಪ್ರಭೆ ಹೊರಹೊರಟದ್ದನ್ನು ಅನುಭವಗೊಳ್ಳಬಹುದು. ಆದರೆ ಪ್ರಭೆಯು ಈ ದಿಕ್ಕಿನಲ್ಲಿ ಪ್ರವಹಿಸುವುದಿಲ್ಲ. ಅದು ಬೇರೊಂದು ರೀತಿಯಲ್ಲಿ ಪ್ರವಹಿಸುತ್ತದೆ. ಚೀಗಾಂಗ್ ಬೋಧಕರು ಬಯಲಿನಲ್ಲಿ ಪ್ರಭೆಯನ್ನು ಹೊರಬಿಟ್ಟಾಗ, ನೀವೇಕೆ ಯಾವ ಅನುಭವವನ್ನು ಹೊಂದುವುದಿಲ್ಲ? ಅಲ್ಲಿ ಬೇರೊಂದು ರೀತಿಯಲ್ಲಿ ಪರದೆಯಿರುತ್ತದೆ; ಭೇದಕವಿರುತ್ತದೆ. ಹೀಗೆ ಪ್ರಭೆಯು ಜನರು ವರ್ಣಿಸುವಂತೆ ಹೆಚ್ಚು ಭೇದಿಸಿಕೊಂಡು ಹೋಗುವ ಶಕ್ತಿಯನ್ನು ಹೊಂದಿಲ್ಲ.

ಗಾಂಗ್‌ನಲ್ಲಿ ನಿಜವಾಗಿ ಏನಾಗುತ್ತದೆ, ಯಾವಾಗ ಒಬ್ಬ ಅಭ್ಯಾಸಿಯು ಗಾಂಗನ್ನು ಹೊರಬಿಡುತ್ತಾನೋ, ಸ್ವಲ್ಪ ಹೊತ್ತು ಯಾವುದೇ ಪ್ರಭೆಯನ್ನು ಹೊಂದಿರುವುದಿಲ್ಲವೋ ಮತ್ತು ದಿವ್ಯಚಕ್ಷುವಿಗೆ ಬೆಳಕಿನ ರೂಪದಲ್ಲಿ ಕಾಣುವ ಪ್ರಬಲ ಶಕ್ತಿಯನ್ನು ಹೊರಬಿಡುತ್ತಾನೋ, ಅದು ಬೇರೊಬ್ಬ ವ್ಯಕ್ತಿಯನ್ನು ತಲುಪಿದಾಗ, ಅದು ಆ ವ್ಯಕ್ತಿಯನ್ನು ಬೆಚ್ಚಗಾಗಿಸುತ್ತದೆ; ಸಾಮಾನ್ಯ ವ್ಯಕ್ತಿಯನ್ನು ಹತೋಟಿಯಲ್ಲಿಡುತ್ತದೆ. ಹಾಗಾಗದಿದ್ದರೆ, ಅದು ರೋಗವನ್ನು ವಾಸಿ ಮಾಡುವುದರಲ್ಲಿ ಪೂರ್ಣ ಸಫಲಗೊಳ್ಳುವುದಿಲ್ಲ. ಅದು ನಿಜವಾಗಿಯೂ ರೋಗವನ್ನು ವಾಸಿಮಾಡಬೇಕಾದರೆ ಅಸಾಮಾನ್ಯ ಸಾಮರ್ಥ್ಯ ಇರಬೇಕಾಗುತ್ತದೆ. ಅಲ್ಲಿ ಪ್ರತಿಯೊಂದು ರೋಗಕ್ಕೂ ವಿಶೇಷವಾದ, ನಿರ್ದಿಷ್ಟವಾದ ಅಸಾಮಾನ್ಯ ಸಾಮರ್ಥ್ಯವಿರುತ್ತದೆ. ಸೂಕ್ಷ್ಮಾತಿಸೂಕ್ಷ್ಮ ಹಂತದಲ್ಲಿ, ಗಾಂಗ್‌ನ ಪ್ರತಿಯೊಂದು ಸೂಕ್ಷ್ಮ ಕಣವೂ ನಿಮ್ಮ ಚರ್ಯೆಯನ್ನು ರೂಪಿಸುತ್ತಿರುತ್ತದೆ. ಅದು ಜನರನ್ನು ಗುರ್ತಿಸಬಲ್ಲದು ಮತ್ತು ಅದಕ್ಕೆ ಬೌದ್ಧಿಕ ಶಕ್ತಿಯೂ ಇರುತ್ತದೆ. ಹೀಗಿರುವಾಗ ಒಬ್ಬ ಅದನ್ನು ಕದ್ದರೆ, ಅದು ಹೇಗೆ ಅಲ್ಲಿ ಉಳಿದುಕೊಳ್ಳುತ್ತದೆ? ಅದು ಅವನ ಸ್ವಂತ ಆಸ್ತಿಯಲ್ಲದಿದ್ದರೆ ಅದು ಅಲ್ಲಿ ಉಳಿಯುವುದಿಲ್ಲ; ಸ್ಥಳಾಂತರಿಸಲ್ಪಡುವುದಿಲ್ಲ. ಇವೆಲ್ಲವುಗಳಿಂದ ಅಭ್ಯಾಸಿಯು ಗಾಂಗನ್ನು ಅಭಿವೃದ್ಧಿಗೊಳಿಸಿಕೊಂಡಾದ ಮೇಲೆ ತನ್ನ ಗುರುವಿನಿಂದ ಪರೀಕ್ಷಿಸಲ್ಪಡುತ್ತಾನೆ. ನಿಮ್ಮ ಗುರುವು ನೀವು ಏನು ಮಾಡಿದ್ದೀರೆಂದು ಗಮನಿಸುತ್ತಿರುತ್ತಾನೆ. ನೀವು ಬೇರೆಯವರಿಂದ ವಸ್ತುಗಳನ್ನು ಪಡೆಯಲು ಪ್ರಯತ್ನಿಸುತ್ತಿದ್ದರೆ, ಆ ವ್ಯಕ್ತಿಯ ಗುರುವು ಅದನ್ನು ವಿಫಲಗೊಳಿಸುತ್ತಾನೆ.

### ಸಂಗ್ರಹಿಸುವ ಪ್ರಭೆ

ಉನ್ನತ ಹಂತಗಳಲ್ಲಿ ಸಾಧನೆಯ ಅಭ್ಯಾಸವನ್ನು ಬೋಧಿಸುವಾಗ, ಪ್ರಭೆಯನ್ನು ಕದಿಯುವ ಮತ್ತು ಸಂಗ್ರಹಿಸುವ ವಿಚಾರಗಳು ಮುಖ್ಯವಾಗುವುದಿಲ್ಲ. ನಾವು ಎಲ್ಲರಿಗೂ ಸಹಾಯ ಮಾಡುತ್ತೇವೆ. ಒಳ್ಳೆಯ ಕೆಲವು ವ್ಯವಹಾರಗಳನ್ನು ಮಾಡುತ್ತ ನಾನು ಈಗಲೂ ಸಾಧನೆಯ ಅಭ್ಯಾಸಗಳ ಖ್ಯಾತಿಯನ್ನು ಮರಳಿ ಕ್ರೋಢೀಕರಿಸುವ ಗುರಿಯನ್ನು ಹೊಂದಿದ್ದೇನೆ. ನಾನು ಹಿಂದೆ ಯಾರೂ ಉದ್ದೇಶಿಸಿರದ ಕೆಟ್ಟ ಲಕ್ಷಣಗಳನ್ನೂ ಬಹಿರಂಗಪಡಿಸುತ್ತೇನೆ. ನೀವು ಅದನ್ನು ತಿಳಿದುಕೊಳ್ಳಬೇಕೆಂದು ನಾನು ಬಯಸುತ್ತೇನೆ. ಕೆಲವರು ಯಾವಾಗಲೂ ಕೆಟ್ಟ ವ್ಯವಹಾರಗಳಲ್ಲೇ ತೊಡಗಿರುವುದಿಲ್ಲವಲ್ಲ ಅದಕ್ಕಾಗಿ. ಚೀಗಾಂಗ್‌ನ ಬಗ್ಗೆ ಸತ್ಯವನ್ನು ತಿಳಿಯದೆ ಯಾವಾಗಲೂ ಅದರ ಬಗ್ಗೆ ಭಯಗೊಳ್ಳುವ ಕೆಲವು ಜನರಿಗಾಗಿ.

ವಿಶ್ವದಲ್ಲಿ ಸಮೃದ್ಧಿಯಾದಷ್ಟು ಪ್ರಭೆಯಿದೆ. ಕೆಲವರು ಅಲೌಕಿಕವಾದ ಯಾಂಗ್ ಪ್ರಭೆ ಮತ್ತು ಲೌಕಿಕವಾದ ಯಿನ್ ಪ್ರಭೆಯ ಬಗ್ಗೆ ಮಾತನಾಡುತ್ತಾರೆ. ಅದರಂತೆಯೇ ನೀವೂ ಸಹ ಈ ವಿಶ್ವದ ಒಂದು ಮೂಲಭೂತ ಕಣ, ನೀವು ಮುಂದುವರಿದು ಪ್ರಭೆಯನ್ನು ಸಂಗ್ರಹಿಸಬಹುದು. ಆದರೆ ಕೆಲವರು ವಿಶ್ವದಿಂದ ಪ್ರಭೆಯನ್ನು ಸಂಗ್ರಹಿಸುವುದಿಲ್ಲ. ಸಸ್ಯಗಳಿಂದ ಪ್ರಭೆಯನ್ನು ಸಂಗ್ರಹಿಸುವ ಪದ್ಧತಿಯನ್ನು

ಜನರಿಗೆ ಬೋಧಿಸುವಲ್ಲಿ ಅವರು ನಿಪುಣರಾಗಿದ್ದಾರೆ. ಅವರು ತಮ್ಮ ಅನುಭವಗಳನ್ನು ಸಂಗತಗೊಳಿಸಿದ್ದಾರೆ: ಹೇಗೆ ಮತ್ತು ಯಾವಾಗ ಈ ಪ್ರಭೆಯನ್ನು ಸಂಗ್ರಹಿಸಬೇಕು. ಪಾಪ್‌ಲಾರ್ (ಎತ್ತರಕ್ಕೆ ಬೆಳೆಯುವ ಗಿಡ) ಗಿಡದ ಪ್ರಭೆಯು ಬೆಳ್ಳಗಿರುತ್ತದೆ. ದೇವದಾರು ಮರದ ಪ್ರಭೆಯು ಹಳದಿಯಾಗಿರುತ್ತದೆ. ಕೆಲವರು ಸಾಧಿಸುತ್ತಾರೆ– ನಮ್ಮ ಮನೆಯ ಮುಂದೆ ಮರವೊಂದು ಇತ್ತು. ನಾನು ಅದರ ಪ್ರಭೆಯನ್ನು ತೆಗೆದುಕೊಂಡದ್ದರಿಂದ ಅದು ಸತ್ತು ಹೋಯಿತು. ಅದು ಎಂತಹ ಸಾಮರ್ಥ್ಯ? ಅದು ಕೆಟ್ಟ ವ್ಯವಹಾರವಲ್ಲವೆ? ಅದು ಎಲ್ಲರಿಗೂ ತಿಳಿದಿರಬೇಕು. ನಾವು ಯಾವಾಗ ನಿಜವಾಗಿ ಸಾಧನೆಯನ್ನು ಕಲಿಯುತ್ತೇವೆಯೋ, ಆಗ ನಾವು ಗುಣಾತ್ಮಕ ವಿಷಯಗಳನ್ನು ಬಯಸುತ್ತೇವೆ ಮತ್ತು ಈ ಜಗತ್ತಿನ ಗುಣಲಕ್ಷಣಗಳನ್ನು ಒಳಗೊಳ್ಳುವ ಆಸಕ್ತಿಯನ್ನು ಪಡೆಯುತ್ತೇವೆ. ನೀವು ಶಾನ್ ಅನ್ನು ಅಭ್ಯಾಸ ಮಾಡಿಲ್ಲವೆ? ಅದು ಜಗತ್ತಿನ ಗುಣಲಕ್ಷಣಗಳನ್ನು ಜೀರ್ಣಿಸಿಕೊಳ್ಳುವ ಕ್ರಮದಲ್ಲಿ, ಜೆನ್–ಶಾನ್–ರೆನ್, ಒಬ್ಬನು ಶಾನ್ ಅಭ್ಯಾಸ ಮಾಡಬಲ್ಲ. ನೀವು ಯಾವಾಗಲೂ ಕೆಟ್ಟ ಕಾರ್ಯಗಳಲ್ಲಿದ್ದರೆ, ಹೇಗೆ ನಿಮ್ಮ ಗಾಂಗನ್ನು ವೃದ್ಧಿಪಡಿಸಲು ಸಾಧ್ಯ? ಹೇಗೆ ನಿಮ್ಮ ರೋಗಬಾಧೆಯು ವಾಸಿಯಾಗುತ್ತದೆ? ನಮ್ಮ ಅಭ್ಯಾಸಿಗಳು ಮಾಡಬೇಕಿರುವುದಕ್ಕೆ ಇದು ವಿರುದ್ಧವಾಗಿದೆಯಲ್ಲವೆ? ಮರದಿಂದ ಪ್ರಭೆಯನ್ನು ಕದಿಯುವುದೂ ಸಹ ಜೀವಿಗಳನ್ನು ಕೊಲ್ಲುವಂತೆಯೇ ಆಗಿದ್ದು, ಕೆಟ್ಟ ಕಾರ್ಯವಾಗಿದೆ. ನಾವು ಊಹಿಸಲಾಗದ ಸಂಗತಿಯೇನೆಂದರೆ ಒಂದು ಪ್ರಾಣಿಯನ್ನು ಕೊಂದರೆ ಹೇಗೆ ಅದು ಪ್ರಾಣಿಹತ್ಯೆಯೋ ಹಾಗೆಯೇ ಗಿಡವನ್ನು ಕೊಲ್ಲುವುದೂ ಜೀವಹತ್ಯೆಯೇ ಆಗಿರುತ್ತದೆಂಬುದು. ಇದರ ಬಗ್ಗೆ ಬೌದ್ಧ ಪಂಥವು 'ಸಂಸಾರ'ದ ಬಗ್ಗೆ ವಿವರಿಸುವಾಗ ಹೇಳಿದೆ. ಅದರಂತೆ 'ಸಂಸಾರ'ದ ಅನುಕ್ರಮದಲ್ಲಿ ನೀವು ಒಂದು ಗಿಡದಲ್ಲಿಯೂ ಪುನರವತಾರವಾಗುವ ಸಾಧ್ಯತೆಯಿರುತ್ತದೆ. ನಾವಿಲ್ಲಿ ಅದನ್ನು ಬೌದ್ಧಪಂಥದಂತೆ ಹೇಳಹೋಗುವುದಿಲ್ಲ. ಆದರೆ ನಾವು ಎಲ್ಲರಿಗೂ ಗಿಡಗಳೂ ಸಹ ಜೀವಗಳೆಂದು ಹೇಳುತ್ತೇವೆ. ಅವು ಕೇವಲ ಜೀವ ಮಾತ್ರ ಹೊಂದಿಲ್ಲ. ಉನ್ನತ ಮಟ್ಟದ ಚಿಂತನ ಕ್ರಿಯೆಯನ್ನು ಹೊಂದಿವೆ.

ಉದಾಹರಣೆಗಾಗಿ ಹೇಳುತ್ತೇನೆ. ಅಮೇರಿಕಾದಲ್ಲಿ ವಿದ್ಯುನ್ಮಾನ ಶಾಸ್ತ್ರದಲ್ಲಿ ನಿಪುಣನಾಗಿರುವ ಒಬ್ಬ ವ್ಯಕ್ತಿಯು ಬೇರೆಯವರಿಗೆ ಹೇಗೆ ತರಂಗ ಶೋಧ ಉಪಕರಣಗಳನ್ನು ಬಳಸಬೇಕೆಂದು ಹೇಳಿಕೊಡ ುತ್ತಿದ್ದ. ಒಂದು ದಿನ ಅವನಿಗೆ ಇದ್ದಕ್ಕಿದ್ದಂತೆ ಯೋಚನೆಯೊಂದು ಹೊಳೆಯಿತು. ಅದರಂತೆ ಒಂದು ಗಿಡವನ್ನು ಅಗೆದು ತೆಗೆದು ತರಂಗಶೋಧ ಉಪಕರಣದ ಎರಡು ಬದಿಗಳನ್ನು ಅದರ ಸಮೀಪವಿರಿಸಿ, ಗಿಡದ ಬುಡಕ್ಕೆ ನೀರು ಹಾಯಿಸಿದ. ನಂತರದಲ್ಲಿ ಅವನು ತರಂಗಶೋಧ ಉಪಕರಣದ ಮುಳ್ಳು ಅತ್ತಿಂದಿತ್ತ ಅಲುಗಾಡುವುದನ್ನು ಗಮನಿಸಿದ. ಮಾನವನ ಮಿದುಳು ಭಾವನೆಗಳಿಗೆ ಸ್ಪಂದಿಸುವಂತೆಯೇ ಗಿಡಗಳೂ ಸ್ಪಂದಿಸುತ್ತವೆ ಎಂಬುದಕ್ಕೆ ಈ ಪ್ರಯೋಗವು ಸಾಕ್ಷಿಯಾಯಿತು. ಆ ಕ್ಷಣದಲ್ಲಿ, ಅವನು ನಿಬ್ಬೆರಗಾಗಿದ್ದ. ಗಿಡವೊಂದು ಭಾವನೆಗಳನ್ನು ಹೊಂದಿರುವುದಕ್ಕೆ ಹೇಗೆ ಸಾಧ್ಯ? ಸಸ್ಯಗಳಿಗೆ ಭಾವನೆಗಳಿವೆ! ಎಂದು ರಸ್ತೆ ತುಂಬ ಕಿರುಚುವುದಕ್ಕೆ ಅವನು ಸಂಪೂರ್ಣವಾಗಿ ಬಯಸಿದ್ದ. ಅವನು ಅದನ್ನು ಖಚಿತಪಡಿಸಿಕೊಳ್ಳುವುದಕ್ಕಾಗಿ ಅದೇ ಕ್ಷೇತ್ರದಲ್ಲಿ ಹಲವು ಪ್ರಯೋಗಗಳನ್ನು ಕೈಗೊಂಡ.

ಒಮ್ಮೆಅವನು ಎರಡುಗಿಡಗಳನ್ನು ಜೊತೆಯಲ್ಲಿಟ್ಟ. ನಂತರ ತನ್ನ ವಿದ್ಯಾರ್ಥಿಯೊಬ್ಬನಿಗೆ ಅದರಲ್ಲಿ ಒಂದನ್ನು ಇನ್ನೊಂದರ ಎದುರಲ್ಲಿ ಜಜ್ಜಿ ಸಾಯಿಸುವಂತೆ ತಿಳಿಸಿದ. ನಂತರ ಅವನು ಬದುಕಿದ್ದ ಗಿಡವನ್ನು ಒಂದು ಕೊಠಡಿಗೆ ತೆಗೆದುಕೊಂಡು ಹೋದ ಮತ್ತು ಅದಕ್ಕೆ ತರಂಗಶೋಧ ಉಪಕರಣವನ್ನು ಅಳವಡಿಸಿದ. ಅವನು ತನ್ನ ಐದು ಜನ ವಿದ್ಯಾರ್ಥಿಗಳನ್ನು ಹೊರಗಿನಿಂದ ಒಳಬರುವಂತೆ ಸೂಚಿಸಿದ. ಮೊದಲ ನಾಲ್ಕು ವಿದ್ಯಾರ್ಥಿಗಳು ಒಳಬಂದಾಗ, ಗಿಡವು ಪ್ರತಿಕ್ರಿಯಿಸಲಿಲ್ಲ. ಆದರೆ ಐದನೆಯವನು, ಯಾವನು ಗಿಡವನ್ನು ಕೊಂದಿದ್ದನೋ, ಅವನು ಒಳಬಂದಾಗ ತರಂಗಶೋಧ ಉಪಕರಣದ ಮುಳ್ಳು ಶೀಘ್ರವಾಗಿ ಅಲ್ಲಾಡುತ್ತಿತ್ತು. ಆ ವಿದ್ಯಾರ್ಥಿ ಒಳಬಂದಾಗ ಮಾತ್ರ ಹಾಗಾಗುತ್ತಿತ್ತು. ಈ ಖಚಿತತೆಯು ಒಂದು ಮುಖ್ಯ ವಿಷಯವನ್ನು ಹೊರತಂದಿತು. ವಸ್ತುಗಳ ನಡುವೆ ಭಿನ್ನತೆಯನ್ನು ಗುರುತಿಸುವ ಇಂದ್ರಿಯಶಕ್ತಿ ಮತ್ತು ವಸ್ತುಗಳನ್ನು ವಿಶ್ಲೇಷಿಸುವ ಶಕ್ತಿಯುಳ್ಳ ಮಿದುಳನ್ನು ಹೊಂದಿರುವ, ಉನ್ನತಮಟ್ಟದ ಜೀವಿಯೆಂದರೆ ಮಾನವ ಮಾತ್ರವೆಂದು ನಾವು ಯಾವಾಗಲೂ ತಿಳಿದಿದ್ದೆವು. ಸಸ್ಯಗಳು ಹೇಗೆ ವಸ್ತುಗಳ ಭಿನ್ನತೆಯನ್ನು ಗುರುತಿಸುತ್ತವೆ? ಇದು ಸಸ್ಯಗಳೂ ಸಹ ಚೆನ್ನಾಗಿರುವ ಇಂದ್ರಿಯಗಳನ್ನು ಹೊಂದಿವೆಯೆಂದು ಸೂಚಿಸುತ್ತದೆಯೋ? ಹಿಂದೆ ಯಾವನಾದರೂ ಸಸ್ಯಗಳು ಇಂದ್ರಿಯಗಳನ್ನು ಹೊಂದಿವೆ, ಯೋಚಿಸುತ್ತವೆ, ಅನುಭವಿಸುತ್ತವೆ ಮತ್ತು ಜನರನ್ನು ಗುರುತಿಸುತ್ತವೆ

ಎಂದು ಹೇಳಿದರೆ, ಅವನನ್ನು ಮೂಢನಂಬಿಕೆಯವನೆಂದು ಕರೆಯಲಾಗುತ್ತಿತ್ತು. ಈ ಎಲ್ಲ ವಿಷಯಗಳೊಂದಿಗೆ ಸಸ್ಯಗಳು ಇವತ್ತು ನಮ್ಮ ಜನಗಳನ್ನೂ ಮೀರಿ ಮುಂದುವರಿದಿರುವಂತೆ ಕಾಣುತ್ತವೆ.

ಒಂದು ದಿನ ಅವನು ಗಿಡಕ್ಕೆತರಂಗಶೋಧ ಉಪಕರಣವನ್ನು ಅಳವಡಿಸಿ, ನಾನು ಯಾವ ರೀತಿಯ ಪ್ರಯೋಗವನ್ನು ಮಾಡಲಿ? ಅದರ ಎಲೆಗಳನ್ನು ಸುಟ್ಟು, ಹೇಗೆ ಪ್ರತಿಕ್ರಿಯಿಸುತ್ತದೋ ನೋಡೋಣವೇ ಅಂದುಕೊಂಡನು. ಅದರಂತೆ ಎಲೆಗಳನ್ನು ಸುಟ್ಟಾಗ ಶೋಧಕದ ವಿದ್ಯುತ್ಕಾಂತೀಯ ಮುಳ್ಳು ಅಲುಗಾಡಿತು. ಒಬ್ಬ ವ್ಯಕ್ತಿ ಅದರ ಮುಂದೆ ಸಹಾಯಕ್ಕಾಗಿ ಅತ್ತಾಗಲೂ ಇದೇ ಪ್ರತಿಕ್ರಿಯೆ ಬಂದಿತು. ಈ ಅದ್ಭುತ ಇಂದ್ರಿಯ ಕ್ರಿಯೆಯನ್ನು ಹಿಂದೆ 'ಮನಸ್ಸನ್ನು ಓದುವುದು' ಎಂದು ಕರೆಯುತ್ತಿದ್ದರು. ಅದು ಮನುಷ್ಯನ ಅಂತರಂಗದ ಕ್ರಿಯೆ ಮತ್ತು ಸ್ವಾಭಾವಿಕ ಸಾಮರ್ಥ್ಯ. ಇವತ್ತು ಎಲ್ಲರು ಭ್ರಷ್ಟರಾಗಿರುವುದರಿಂದ, ಮತ್ತೆ ಅದನ್ನು ಪಡೆಯಬೇಕಾದರೆ, ನೀವು ಮೊದಲಿಂದ ಅಭ್ಯಾಸ ಮಾಡಿ ನಿಮ್ಮ ನಿಜವಾದ ಪ್ರಕೃತಿಗೆ ಹಿಂದಿರುಗಬೇಕು. ಸಸ್ಯಗಳು ಅವುಗಳನ್ನು ಹೊಂದಿವೆ ಮತ್ತು ಅವಕ್ಕೆ ನಿಮ್ಮ ತಲೆಯಲ್ಲೇನಿದೆ ಎಂಬುದು ತಿಳಿಯುತ್ತದೆ. ಇದು ಸ್ವಲ್ಪ ಊಹಿಸಲಾಗದಂತಹ ವಿಚಾರ. ಆದರೆ ನಿಜವಾಗಿಯೂ ಇದೊಂದು ವೈಜ್ಞಾನಿಕ ಪ್ರಯೋಗವಾಗಿದೆ. ಅವನು ವಿಭಿನ್ನ ಪ್ರಯೋಗಗಳನ್ನು ಕೈಗೊಂಡಿದ್ದಾನೆ. ಅದರ ಮೇಲೆ ಪುಸ್ತಕಗಳನ್ನು ಪ್ರಕಟಿಸಿದ್ದಾನೆ. ಅವನ ಲೇಖನಗಳು ಪ್ರಪಂಚದಾದ್ಯಂತ ಪೂರ್ಣ ಕೋಲಾಹಲವನ್ನು ಉಂಟುಮಾಡಿವೆ.

ವಿವಿಧ ದೇಶದ ಸಸ್ಯಶಾಸ್ತ್ರಜ್ಞರು ಈ ಕ್ಷೇತ್ರದಲ್ಲಿ ತಮ್ಮ ಸಂಶೋಧನೆ ನಡೆಸಿದ್ದಾರೆ ಮತ್ತು ಇದನ್ನು ಯಾರೂ ಹೆಚ್ಚು ಕಾಲ ಮೂಢನಂಬಿಕೆಯೆಂದು ಪರಿಗಣಿಸಿಲ್ಲ. ನಾನು ಬೇರೊಂದು ದಿನ ಹೇಳಿದ್ದೆ, ಇವತ್ತು ನಮ್ಮ ಮನುಕುಲದ ಜ್ಞಾನವು ಏನನ್ನು ಅನುಭವಿಸಿದೆ, ಆವಿಷ್ಕರಿಸಿದೆ, ಕಂಡುಹಿಡಿದಿದೆ ಅವುಗಳೆಲ್ಲ ಪ್ರಸ್ತುತ ಪಠ್ಯಗಳನ್ನು ಬದಲಾಯಿಸುವುದಕ್ಕೆ ಅನುಕೂಲವಾಗಿವೆ. ಸಾಂಪ್ರದಾಯಿಕವಾಗಿ ಯೋಚಿಸುವವರ ಪ್ರಭಾವದಿಂದಾಗಿ ಜನರು ಮನಸ್ಸಿಲ್ಲದೆ ಅಂತವರ ಅಭಿಪ್ರಾಯವನ್ನು ಒಪ್ಪುತ್ತಾರೆ. ಯಾವನೂ ಆ ವಿಷಯಗಳನ್ನು ವ್ಯವಸ್ಥಿತವಾಗಿ ಜೋಡಿಸುವ ಕೆಲಸ ಮಾಡಿಲ್ಲ.

ಪಾರ್ಕೊಂದರ ಈಶಾನ್ಯ ಭಾಗದಲ್ಲಿ, ದೇವದಾರು ಮರಗಳ ಸಮೂಹವೊಂದು ಸತ್ತಿರುವುದನ್ನು ನಾನು ಗುರುತಿಸಿದೆ. ಕೆಲವರು ಎಂತಹ ಚೀಗಾಂಗನ್ನು ಅಭ್ಯಾಸ ಮಾಡುತ್ತಿದ್ದಾರೆ ಎಂದು ಒಬ್ಬನೂ ಅರಿತಿರಲಿಲ್ಲ. ಅವರೆಲ್ಲ ಮೈದಾನವನ್ನೆಲ್ಲ ಸುತ್ತಿ ಬಂದು, ನಂತರ ಮರಗಳಿಂದ ಪ್ರಭೆಯನ್ನು ಒಂದು ಕಡೆ ತಮ್ಮ ಪಾದಗಳಿಂದ ಮತ್ತೊಂದು ಕಡೆ ಕೈಗಳಿಂದ ಸಂಗ್ರಹಿಸುತ್ತಿದ್ದರು. ಆ ನಂತರದಲ್ಲಿ ಅಲ್ಲಿದ್ದ ಎಲ್ಲ ದೇವದಾರು ಮರಗಳು ಹಳದಿ ಬಣ್ಣಕ್ಕೆ ತಿರುಗಿ ಸಾಯುತ್ತಿದ್ದವು. ಅವರು ಮಾಡಿದ್ದು ಒಳ್ಳೆಯ ವ್ಯವಹಾರವೆ ಅಥವಾ ಅದೊಂದು ಕೆಟ್ಟ ಕೆಲಸವೆ? ನಮ್ಮ ಅಭ್ಯಾಸಿಗಳ ದೃಷ್ಟಿಕೋನದಲ್ಲಿ ಅದು ಜೀವಗಳನ್ನು ಕೊಲ್ಲುವುದಾಗಿತ್ತು. ನೀವು ಒಬ್ಬ ಅಭ್ಯಾಸಿಯಾಗಿದ್ದಲ್ಲಿ, ವಿಶ್ವದ ಲಕ್ಷಣಗಳನ್ನು ಕ್ರಮೇಣ ಜೀರ್ಣಿಸಿಕೊಳ್ಳಲು, ಅಂತಹ ಕೆಟ್ಟ ನಡಾವಳಿಗಳನ್ನು ಬಿಟ್ಟುಬಿಡಿ, ನೀವು ಒಳ್ಳೆಯ ಮನುಷ್ಯರಾಗುತ್ತೀರಿ. ಸಾಮಾನ್ಯ ವ್ಯಕ್ತಿಯ ದೃಷ್ಟಿಯಲ್ಲಿಯೂ ಹೀಗೆ ಮಾಡುವುದು ಒಳ್ಳೆಯ ವ್ಯವಹಾರವಲ್ಲ. ಅದು ಸಾರ್ವಜನಿಕ ಆಸ್ತಿಯನ್ನು, ಹಸಿರು ಸಂಪತ್ತನ್ನು ಮತ್ತು ಪ್ರಾಕೃತಿಕ ವ್ಯವಸ್ಥೆಯ ಸಮತೋಲನವನ್ನು ಹಾಳು ಮಾಡುತ್ತದೆ. ಯಾವುದೇ ರೀತಿಯಿಂದ ಅದು ಒಳ್ಳೆಯ ಕೆಲಸವಲ್ಲ. ವಿಶ್ವದಲ್ಲಿ ಸಮೃದ್ಧವಾದ ಪ್ರಭೆ ಇದೆ; ನಿಮಗೆಷ್ಟು ಬೇಕೋ ಅಷ್ಟನ್ನು ನೀವು ಸಂಗ್ರಹಿಸಬಹುದು. ಒಂದು ಹಂತದ ಮೇಲೆ ಅಭ್ಯಾಸ ಮಾಡಿದವರು, ಖಂಡಿತವಾಗಿ ತಮ್ಮ ಕೈಗಳಿಂದ ಗಿಡಗಳ ಪ್ರಭೆಯನ್ನು ದೊಡ್ಡ ಪ್ರದೇಶದಲ್ಲಿ ಪಡೆಯಬಲ್ಲರು. ಆದರೂ ಅದು ಪ್ರಭಾಶಕ್ತಿಯಲ್ಲದೆ ಬೇರೇನೂ ಅಲ್ಲ. ಒಬ್ಬ ಎಷ್ಟು ಸಂಗ್ರಹಿಸುತ್ತಾನೆ ಎಂಬುದು ಮುಖ್ಯವಲ್ಲ. ಅದರಿಂದ ಅವನು ಪಡೆಯುವ ಉಪಯೋಗಗಳೇನು? ಕೆಲವರು ಪಾರ್ಕಿಗೆ ಹೋದಾಗ ಏನನ್ನೂ ಮಾಡುವುದಿಲ್ಲ. ಅಂತವರಲ್ಲೊಬ್ಬನು, ''ನನಗೆ ಚೀಗಾಂಗ್ ಅಭ್ಯಾಸ ಮಾಡುವ ಅಗತ್ಯವಿಲ್ಲ. ಅದಕ್ಕಿಂತ ಬೇಕಾದಷ್ಟು ಉತ್ತಮವಾದುದು ಪಾರ್ಕಿನಲ್ಲಿ ಸುತ್ತಲೂ ಓಡಾಡುತ್ತಾ ಪ್ರಭೆಯನ್ನು ಸಂಗ್ರಹಿಸುವುದು. ಅದಾದ ಮೇಲೆ ನನ್ನ ಅಭ್ಯಾಸ ಮುಗಿಯುತ್ತದೆ. ಪ್ರಭೆಯನ್ನು ಗಳಿಸುವುದಕ್ಕೆ ಇದು ಯಥೋಚಿತವಾಗಿದೆ'' ಎನ್ನುತ್ತಾನೆ. ಅವರು ಪ್ರಭೆಯನ್ನು ಗಾಂಗ್ ಎಂದು ತಿಳಿದಿದ್ದಾರೆ. ಅಂತಹ ವ್ಯಕ್ತಿಯ ಸಮೀಪ ಹೋದವರು ಅವನ ದೇಹ ಹೆಚ್ಚು ತಣ್ಣಗಿರುವಂತೆ ಅನುಭವಗೊಳ್ಳುತ್ತಾರೆ. ಗಿಡಗಳಿಂದ ಸಿಗುವ ಪ್ರಭೆಯು ಯಿನ್ ಲಕ್ಷಣದ್ದಲ್ಲವೇ? ಒಬ್ಬ ಅಭ್ಯಾಸಿಯು

ಯಿನ್ ಮತ್ತು ಯಾಂಗ್ ಅನ್ನು ಸಮತೋಲನದಲ್ಲಿ ಇಡಬೇಕು. ದೇವದಾರು ಮರಗಳಿಂದ ಪ್ರಭೆ ಪಡೆಯುವವನ ದೇಹವು ದೇವದಾರು ಮರದ ಎಣ್ಣೆಯ ವಾಸನೆ ಬೀರುತ್ತದೆ. ಆದರದನ್ನು ಅವನು ಚೆನ್ನಾಗಿ ಅಭ್ಯಾಸ ಮಾಡುತ್ತಿರುವುದಕ್ಕೆಂದು ಭಾವಿಸಬಹುದು.

## ಯಾರು ಅಭ್ಯಸಿಸುತ್ತಾರೊ ಅವರು ಗಾಂಗನ್ನು ಪಡೆಯುತ್ತಾರೆ

ಯಾರುಗಾಂಗನ್ನು ಅಭ್ಯಾಸ ಮಾಡುತ್ತಾರೆ ಮತ್ತು ಗಾಂಗನ್ನು ಪಡೆಯುತ್ತಾರೆ ಎಂಬುದು ಮುಖ್ಯವಾದ ಸಂಗತಿ. ಫಾಲನ್ ದಫಾದ (ಸಾಧನಾ ಹಾದಿಯ) ಉಪಯೋಗಗಳೇನು ಎಂಬುದನ್ನು ಬೇರೆಯವರಿಂದ ನಾನು ಕೇಳಲ್ಪಟ್ಟಾಗ, ಫಾಲನ್ ದಫಾವು ಅಭ್ಯಾಸಿಗಳನ್ನು ಬೆಳೆಸುವುದಕ್ಕೆ ಮತ್ತು ಅಭ್ಯಾಸದ ಅವಧಿಯನ್ನು ಕಡಿಮೆ ಮಾಡುವುದಕ್ಕೆ ಶಕ್ತವಿರುವ ಗಾಂಗೆಂದು ನಾನು ಹೇಳಿದೆ. ಅಭ್ಯಾಸಕ್ಕೆ ಸಮಯವಿಲ್ಲದಿದ್ದಾಗಲೂ ಅದು ಒಬ್ಬನ ಸಮಸ್ಯೆಯನ್ನು ಬಗೆಹರಿಸುತ್ತದೆ. ಆದಾಗ್ಯೂ ಅದು ಹಾಗೇ ಸ್ಥಿರವಾಗಿ ಸಾಧನೆಗೊಳ್ಳುತ್ತಿರುತ್ತದೆ. ಅಷ್ಟಲ್ಲದೆ ನಮ್ಮದು ದೇಹ ಮತ್ತು ಮನಸ್ಸುಗಳ ಅಪ್ಪಟವಾದ ಅಭ್ಯಾಸವಾಗಿರುತ್ತದೆ. ನಮ್ಮ ಭೌತಿಕ ಅಂಗಾಂಗಗಳು ದೊಡ್ಡ ಮಟ್ಟದ ಬದಲಾವಣೆಗೆ ಒಳಗಾಗಿರುತ್ತದೆ. ಫಾಲನ್ ದಫಾವು ಇನ್ನೂ ಒಂದು ಅತ್ಯದ್ಭುತವಾದ ಉಪಯೋಗವನ್ನು ಹೊಂದಿದೆ. ಈ ಹಿಂದೆ ನಾನದನ್ನು ಹೇಳಿಲ್ಲ. ಇವತ್ತು ನಾವು ಅದನ್ನು ಹೊರಗೆಡವುತ್ತೇವೆ. ಅದು ಒಂದು ಬಹುದೊಡ್ಡ ಐತಿಹಾಸಿಕ ಮಹತ್ವವನ್ನು ಪಡೆದಿದ್ದು, ವಿದ್ಯಾರ್ಥಿ ಸಮುದಾಯದ ಮೇಲೆ ಹೆಚ್ಚು ಪ್ರಭಾವ ಬೀರುತ್ತದೆ. ಯಾವನೂ ಇತಿಹಾಸದಲ್ಲಿ ಅದನ್ನು ಬಹಿರಂಗಪಡಿಸುವುದಕ್ಕೆ ಭಯಗೊಂಡಿಲ್ಲ. ಅಂತೆಯೇ ಯಾವನೂ ಅದನ್ನು ಬಹಿರಂಗಪಡಿಸುವುದಕ್ಕೆ ಅನುಮತಿಸಿಲ್ಲ. ಅದೇನಿದ್ದರೂ ನನಗೆ ಅದನ್ನು ತಿಳಿಯುವಂತೆ ಮಾಡಬೇಕಲ್ಲದೆ ಬೇರೆ ಆಯ್ಕೆಗಳಿಲ್ಲ.

ಅನುಯಾಯಿಗಳಾದವರು ಹೇಳುತ್ತಾರೆ''ಮಾಸ್ಟರ್ ಲಿ ಹಾಂಗ್‌ಜಿ ಹೇಳಿರುವ ಪ್ರತಿಯೊಂದು ವಾಕ್ಯವೂ ಅಲೌಕಿಕ ರಹಸ್ಯವಾಗಿದೆ ಮತ್ತು ಅಲೌಕಿಕ ರಹಸ್ಯಗಳ ಬಹಿರಂಗವಾಗಿದೆ.'' ನಾವು, ಯಾವುದು ಜನರನ್ನು ಕಾಪಾಡುತ್ತದೆಯೋ, ಅಂತಹ ಉನ್ನತ ಹಂತದ ಕಲಿಕೆಗೆ ನಿಜವಾಗಿಯೂ ಹೇಗಾದರೂ ಜನರನ್ನು ಕರೆದುಕೊಂಡು ಹೋಗುತ್ತೇವೆ. ಎಲ್ಲರಿಗೂ ಜವಾಬ್ದಾರರಾಗಿರುವುದೇ ಒಂದು ಜವಾಬ್ದಾರಿಯಾಗಿ, ನಾವದನ್ನು ಹೊಂದುವ / ಹೊತ್ತುಕೊಳ್ಳುವ ಶಕ್ತಿ ಹೊಂದಿದ್ದೇವೆ. ಅದರಂತೆ ನಾನು ಮಾಡುತ್ತಿರುವುದು ಅಲೌಕಿಕವಾದ ರಹಸ್ಯಗಳ ಬಹಿರಂಗವಲ್ಲ. ಅದರ ಬಗ್ಗೆ ಯಾವನಾದರು ಜವಾಬ್ದಾರಿಯಿಲ್ಲದೆ ಮಾತನಾಡಿದರೆ, ಅದು ಅಲೌಕಿಕವಾದ ರಹಸ್ಯಗಳ ಬಹಿರಂಗವಾಗುತ್ತದೆ. ಇವತ್ತು ನಾವು ಯಾರು ಗಾಂಗನ್ನು ಅಭ್ಯಾಸ ಮಾಡುತ್ತಾರೆ ಮತ್ತು ಪಡೆಯುತ್ತಾರೆ ಎಂಬ ವಿಷಯವನ್ನು ಸಾರ್ವಜನಿಕಗೊಳಿಸುತ್ತೇವೆ. ನನ್ನ ದೃಷ್ಟಿಕೋನದಲ್ಲಿ, ಹಿಂದಿನಿಂದ ಇಲ್ಲಿಯವರೆಗಿನ ಬೌದ್ಧ, ತಾವೋ ಮತ್ತು ಚೀಮೆನ್ ಪಂಥಗಳ ಎಲ್ಲಾ ಅಭ್ಯಾಸ ಕ್ರಮಗಳು ಒಬ್ಬನ ಸಹಾಯಕ ಚೈತನ್ಯವನ್ನು ಬೆಳೆಸಿವೆ. ಆ ಚೈತನ್ಯವೇ ಗಾಂಗನ್ನು ಹೊಂದುವಂತಹದ್ದು. ನಾವು ಇಲ್ಲಿ ಉಲ್ಲೇಖಿಸುತ್ತಿರುವ ಮುಖ್ಯವಾದ ಚೈತನ್ಯವು ನಮ್ಮ ಸ್ವಂತ ಮನಸ್ಸಿಗೆ ಅನ್ವಯಿಸುತ್ತದೆ. ಆದ್ದರಿಂದ ಒಬ್ಬನು ತನಗೆ ತಾನೇ ಏನನ್ನು ಯೋಚಿಸುತ್ತಿದ್ದೇನೆ, ಮಾಡುತ್ತಿದ್ದೇನೆ ಎಂಬುದರ ಬಗ್ಗೆ ಜಾಗರೂಕನಾಗಬೇಕು. ಆದರೂ ನಿಮ್ಮ ಸಹಾಯಕ ಚೈತನ್ಯವು ಏನು ಮಾಡುತ್ತದೆ ಎಂದು ನೀವು ಕೊನೆಗೂ ಅರಿಯಲಾರಿರಿ. ನೀವು ಮತ್ತು ನಿಮ್ಮ ಸಹಾಯಕ ಚೈತನ್ಯವು ಸಮಾನಾಂತರವಾಗಿ ಒಂದೇ ಹೆಸರಿನಲ್ಲಿ, ಒಂದೇ ರೂಪದಲ್ಲಿ, ಒಂದೇ ದೇಹವನ್ನು ನಿಯಂತ್ರಿಸುವಲ್ಲಿ ಹುಟ್ಟಿರುವುದರಿಂದ ಸಹಾಯಕ ಚೈತನ್ಯವು ನಿಮ್ಮ ನಿಯಂತ್ರಣದಲ್ಲಿರುವುದಿಲ್ಲ.

ಯಾವನು ಕಳೆದುಕೊಳ್ಳುತ್ತಾನೆ; ಪಡೆಯುತ್ತಾನೆ, ಯಾವನ ಅಭ್ಯಾಸಗಳ ಸಾಧನೆಯು ಗಾಂಗನ್ನು ಪಡೆಯುತ್ತದೆ ಎಂಬುದಕ್ಕೆ ವಿಶ್ವದಲ್ಲಿ ಒಂದು ನಿಯಮವಿದೆ. ಇತಿಹಾಸದಲ್ಲಿ ಎಲ್ಲ ಅಭ್ಯಾಸ ಕ್ರಮಗಳೂ ಅಭ್ಯಾಸದ ಸಂದರ್ಭದಲ್ಲಿ ಸಮಾಧಿ ಸ್ಥಿತಿಯಲ್ಲಿರಬೇಕೆಂದು ಹೇಳಿಕೊಟ್ಟಿವೆ. ಅದೆಂದರೆ ಒಬ್ಬನು ಯಾವುದರ ಬಗ್ಗೆಯೂ ಚಿಂತಿಸಬಾರದು. ಒಬ್ಬನು ಕೊನೆಯವರೆಗೂ ಆಳವಾದ ಧ್ಯಾನಸ್ಥ ಸ್ಥಿತಿಯಲ್ಲಿದ್ದರೆ, ಅವನು ಎಲ್ಲದರ ಪ್ರಜ್ಞೆ ಕಳೆದುಕೊಳ್ಳುತ್ತಾನೆ. ಕೆಲವರು ಮೂರು ಗಂಟೆ ಧ್ಯಾನದಲ್ಲಿದ್ದರೂ ಕೇವಲ ಕೆಲವೇ ಸೆಕೆಂಡುಗಳು ಸಮಾಧಿ ಸ್ಥಿತಿಯೇರುತ್ತಾರೆ. ಮಿಕ್ಕವರು ಅವನನ್ನು ಅವನ ಧ್ಯಾನಸ್ಥ ಸ್ಥಿತಿಯ

ಸಾಮರ್ಥ್ಯಕ್ಕಾಗಿ ಹೊಗಳುತ್ತಾರೆ. ಅವನು ನಿಜವಾಗಿಯೂ ಅಭ್ಯಾಸ ಮಾಡಿದ್ದಾನೆಯೇ? ಅವನು ಸ್ವತಃ ಏನಾಗುತ್ತಿದೆಯೆಂದು ಅರಿತಿರುವುದಿಲ್ಲ. ನಿರ್ದಿಷ್ಟವಾಗಿ ತಾವೋ ಪಂಥವು ಹೀಗೆ ಬೋಧಿಸುತ್ತದೆ. **ಶಿಷೆನ್** (ತಾವೋ ಪ್ರಕಾರ ಒಬ್ಬನ ಪ್ರಧಾನ ಪ್ರಜ್ಞೆ) ಸತ್ತಾಗ, ಪ್ರಿಮೋರ್ಡಿಯಲ್ ಚೈತನ್ಯವು ಹುಟ್ಟುತ್ತದೆ. ನಾವು ಕರೆಯುವ 'ಪ್ರಧಾನ ಚೈತನ್ಯ' ಎಂಬುದಕ್ಕೆ ಶಿಷೆನ್ ಎಂದೂ, 'ಸಹಾಯಕ ಚೈತನ್ಯ' ಎಂಬುದಕ್ಕೆ 'ಪ್ರಿಮೋರ್ಡಿಯಲ್ ಚೈತನ್ಯ' (ಆದಿಯ ಚೈತನ್ಯ) ಎಂದೂ ಹೆಸರಿಸಲಾಗಿದೆ. ಒಂದು ವೇಳೆ ನಿಜವಾಗಿಯೂ ನಿಮ್ಮ ಶಿಷೆನ್ ಸತ್ತರೆ, ನೀವು ನಿಶ್ಚಿತವಾಗಿ ಸಾಯುತ್ತೀರಿ ಮತ್ತು ನಿಮ್ಮಲ್ಲಿ ಪ್ರಧಾನ ಚೈತನ್ಯ ಇರುವುದಿಲ್ಲ. ಬೇರೊಂದು ಅಭ್ಯಾಸದ ಕ್ರಮದಿಂದ ಬಂದವನೊಬ್ಬ ಹೇಳಿದ– "ಗುರುವೇ, ನಾನು ಅಭ್ಯಾಸ ಮಾಡುವಾಗ ಮನೆಯಲ್ಲಿರುವ ಯಾವುದನ್ನೂ ಗುರುತಿಸಲು ಅಸಮರ್ಥನಾಗುತ್ತೇನೆ." ಇನ್ನೊಬ್ಬ ಹೇಳಿದನು– "ನಾನು ಬೇರೆಯವರಂತೆ ಅತೀ ಬೆಳಗ್ಗೆ ಮತ್ತು ಅತೀ ರಾತ್ರಿಯಲ್ಲಿ ಅಭ್ಯಾಸ ಮಾಡುವುದಿಲ್ಲ. ನಾನು ಮನೆಗೆ ಹೋದಮೇಲೆ ಹಾಸಿಗೆ ಮೇಲೆ ಕೂತು ನನ್ನ ಪಾಡಿಗೆ ಅಭ್ಯಾಸಕ್ಕೆ ಹೋಗುತ್ತೇನೆ. ನಾನು ಅಲ್ಲಿ ಕೂತು ಅಭ್ಯಾಸ ಮಾಡುವಾಗ, ನನ್ನ ಅಭ್ಯಾಸವನ್ನು ನಾನೇ ಗಮನಿಸುತ್ತಿರುತ್ತೇನೆ." ನಾನು ಅವುಗಳನ್ನು ಒಳ್ಳೆಯದಲ್ಲವೆಂದು ಗುರುತಿಸುತ್ತೇನೆ.

ಏಕೆ ಅವರು ಸಹಾಯಕ ಚೈತನ್ಯವನ್ನು ಕಾಪಿಡುತ್ತಾರೆ? **ಲ್ಯೂ ಡಾಂಗ್‌ಬಿನ್** (ತಾವೋ ತತ್ವದಲ್ಲಿರುವ ಎಂಟು ದೈವತ್ವವಿರುವರಲ್ಲೊಬ್ಬ) ಒಂದು ವ್ಯಾಖ್ಯಾನ ನೀಡಿದ್ದಾನೆ– "ನಾನು ಸರಿಸುಮಾರು ಒಂದು ಪ್ರಾಣಿಯಷ್ಟು, ಮನುಷ್ಯನಿಗಿಂತ ಹೆಚ್ಚು ಸಂಗ್ರಹಿಸಿದ್ದೇನೆ." ನಿಶ್ಚಿತವಾಗಿ ದಿನನಿತ್ಯದ ಜನರು ಸಾಮಾನ್ಯ ಮಾನವ ಸಮಾಜದಿಂದ ಹೊರಬರುವವರೆಗೆ ಅದನ್ನು ಅರ್ಥೈಸಿಕೊಳ್ಳುವುದಕ್ಕೆ ಹೆಚ್ಚು ಕಷ್ಟವಾಗುತ್ತದೆ. ಅವರ ಹಿಂದೆ ಅಭ್ಯಾಸದ ಲಾಭಗಳಿಲ್ಲದೆ, ಅವರು ತಮ್ಮ ಕಾರ್ಯಸಂಬಂಧಗಳನ್ನು ಬಿಡಲಾರರು. ನೀವು ಅದನ್ನು ನಂಬದಿದ್ದರೆ, ಇಂದಿನ ತರಗತಿಯ ಆಧಾರದ ಮೇಲೆಯೇ ನಿರ್ಧರಿಸಬಹುದು. ಕೆಲವರು ಈ ಸಭಾಂಗಣದಿಂದ ದಿನನಿತ್ಯದ ಜನರಂತೆ ಹೊರ ಹೋಗುತ್ತಾರೆ. ಯಾರಾದರೂ ಅವರನ್ನು ಟೀಕಿಸಿದರೆ, ಅದನ್ನವರು ಸಹಿಸಿಕೊಳ್ಳುವುದಿಲ್ಲ. ನಂತರದ ಸ್ವಲ್ಪ ಸಮಯದಲ್ಲಿ, ಅವರು ಸ್ವತಃ ಅಭ್ಯಾಸಕ್ಕೊಳಗಾಗುವುದಿಲ್ಲ. ಹಲವು ತಾವೋ ಪಂಥಾನುಯಾಯಿಗಳು ಇತಿಹಾಸದಿಂದ ಈ ಅಂಶವನ್ನು ಅರಿತುಕೊಂಡಿದ್ದಾರೆ. ಮನುಷ್ಯರು ಕಳೆದುಕೊಂಡಿರುವ ಪ್ರಧಾನ ಚೈತನ್ಯವನ್ನು ಮತ್ತೆ ಪಡೆಯುವುದು ತುಂಬ ಕಷ್ಟ. ಕೆಲವರು ಒಳ್ಳೆಯ ಜ್ಞಾನೋದಯ ಸಾಮರ್ಥ್ಯವನ್ನು ಹೊಂದಿರುತ್ತಾರೆ ಮತ್ತು ಸ್ವಲ್ಪದರಲ್ಲೇ ಅರ್ಥಮಾಡಿಕೊಳ್ಳುತ್ತಾರೆ. ಕೆಲವರು ನಿಮ್ಮನ್ನು ನಂಬುವುದಿಲ್ಲ. ಅವರು ನೀವು ದೊಡ್ಡ ಕಥೆ ಹೇಳುತ್ತಿದ್ದೀರೆಂದು ತಿಳಿಯುತ್ತಾರೆ. ಒಬ್ಬನ ಆತ್ಮಪ್ರಕೃತಿಯನ್ನು ರೂಢಿಸುವುದರ ಬಗ್ಗೆ ನಾವು ಹೆಚ್ಚು ಮಾತನಾಡುತ್ತಿದ್ದೇವೆ. ಅದಾಗುವವರೆಗೆ ವ್ಯಕ್ತಿಯು ಹಾಗೆಯೇ ವರ್ತಿಸುತ್ತಿರುತ್ತಾನೆ. ಅವನು ಯಾವ ವಿಷಯಗಳನ್ನು ತನ್ನಿಂದ ಸಾಧಿಸಲು ಸಾಧ್ಯವೆಂದು ತಿಳಿಯುತ್ತಾನೋ ಅವುಗಳನ್ನು ಒಪ್ಪಿ, ಪ್ರಾಯೋಗಿಕವಾದವುಗಳೆಂದು ನಂಬುತ್ತಾನೆ. ಗುರುವಿನಿಂದ ಪಡೆಯುವ ಬೋಧನೆಗಳೂ ಯೋಗ್ಯವಾಗಿರುತ್ತವೆ. ಆದರೆ ಅದನ್ನು ಅನುಸರಿಸುವುದಿಲ್ಲ. ಸಹಾಯಕ ಚೈತನ್ಯವು ಬೇರೊಂದು ದಿಕ್ಕಿನಲ್ಲಿ ದೃಶ್ಯಗಳನ್ನು ನೋಡುತ್ತಿರುವಾಗ, ಮನುಷ್ಯನ ಪ್ರಧಾನ ಚೈತನ್ಯವನ್ನು ಕಾಪಿಡುವುದು ತುಂಬಾ ಕಷ್ಟ. ಜೊತೆಗೆ ಅವರು ಯೋಚಿಸುತ್ತಾರೆ– ನಾನೇಕೆ ನಿಮ್ಮ ಪ್ರಧಾನ ಚೈತನ್ಯವನ್ನು ಕಾಪಿಡಬೇಕು? ನಿಮ್ಮ ಸಹಾಯಕ ಚೈತನ್ಯವೂ ನಿಮ್ಮಂತೆಯೇ. ನಾನದನ್ನು ಕಾಪಿಟ್ಟರೆ, ಅದು ನಿಮ್ಮಂತೆಯೇ ಇರುತ್ತದಲ್ಲವೆ? ಅದೆಲ್ಲ ನಿಮ್ಮದೆ, ಯಾವನು ಪಡೆದರೂ ಅದು ನೀವು ಪಡೆದಂತೆಯೇ ಇರುತ್ತದೆ.

ಅವರ ಅಭ್ಯಾಸಗಳನ್ನು ವಿಶೇಷವಾಗಿ ವರ್ಣಿಸಿ ಹೇಳುವುದಕ್ಕೆ ನನಗೆ ಅವಕಾಶ ಕೊಡಿ. ಯಾವನು ಅಸಾಮಾನ್ಯ ದಿವ್ಯದೃಷ್ಟಿಯ ಸಾಮರ್ಥ್ಯವನ್ನು ಹೊಂದುತ್ತಾನೋ, ಅವನು ಈ ದೃಶ್ಯವನ್ನು ನೋಡುವ ಸಂಭವವಿದೆ: ನೀವು ಯಾವಾಗ ಧ್ಯಾನಕ್ಕೆ ಕೂರುತ್ತೀರಿ, ಎಲ್ಲಿಯವರೆಗೆ ಸಮಾಧಿ ಸ್ಥಿತಿಯಲ್ಲಿರುತ್ತೀರಿ, ಅದೇ ಸ್ಥಿತಿಯಲ್ಲಿರುವ ಮತ್ತೊಬ್ಬನು ನಿಮ್ಮ ದೇಹಕ್ಕೆ ಇದ್ದಕ್ಕಿದ್ದಂತೆ ಪ್ರವೇಶ ಪಡೆಯಬಹುದು. ನೀವು ಪ್ರತ್ಯೇಕವಾಗಿ ನೋಡಲು ಪ್ರಯತ್ನಿಸಿದರೆ, ನಿಮ್ಮ ಸ್ವ ಎನ್ನುವುದು ಎಲ್ಲಿದೆ? ನೀವು ಇಲ್ಲೇ ಕೂತಿರುತ್ತೀರಿ ನಿಜ. ವ್ಯಕ್ತಿ ನಿಮ್ಮ ದೇಹಕ್ಕೆ ಪ್ರವೇಶಿಸುವುದನ್ನು ಗಮನಿಸಿದ ಮೇಲೆ, ಗುರುವು ಈ ವ್ಯಕ್ತಿಯನ್ನು ಬೇರೊಂದು ಮಾರ್ಗದಲ್ಲಿ ಅಭ್ಯಾಸಕ್ಕೆ ತೆಗೆದುಕೊಳ್ಳುತ್ತಾನೆ. ಇದೆಲ್ಲವೂ ಕ್ಷಮಿಸಿ ಮರೆತು ಹೋಗುವ ಸಮಾಜದ ರೀತಿ–ನೀತಿಯಲ್ಲಿ ನಡೆಯುತ್ತದೆ. ವ್ಯಕ್ತಿಯು ಈ

ಅಭ್ಯಾಸವನ್ನು ಮಾಡಿದನೆಂದರೆ, ಪ್ರತಿನಿತ್ಯ ಒಂದೆರಡು ಗಂಟೆ ಅಸಂಖ್ಯ ತೊಂದರೆಗಳನ್ನು ಹಾಯ್ದು ಹೋಗಬಹುದು. ವ್ಯಕ್ತಿಯು ಅಭ್ಯಾಸದಿಂದ ಹಿಂದಿರುಗಿದಾಗ, ನೀವೂ ಸಹ ಸಮಾಧಿ ಸ್ಥಿತಿಯಿಂದ ಎದ್ದೇಳಬಹುದು. ಇದು ಯಾರು ನೋಡಬಲ್ಲರೋ ಅಂತವರಿಗೆ ಒಂದು ಉದಾಹರಣೆ.

ಯಾವನಿಗೆ ನೋಡಲಾಗುವುದಿಲ್ಲವೋ, ಆಗ ಅದು ಹೆಚ್ಚು ಕನಿಕರ ಪಡುವಂತಾದ್ದು. ಅಂತಹ ವ್ಯಕ್ತಿಯು ಎರಡು ಗಂಟೆಗಳ ಸಮಾಧಿ ಸ್ಥಿತಿಯಿಂದ ಎಚ್ಚರಗೊಂಡಾಗ, ಏನೂ ಆಗಲಿಲ್ಲವೆಂದು ತಿಳಿದು ಮಂಕಾಗುತ್ತಾನೆ. ಅಭ್ಯಾಸದ ದಾರಿಯಲ್ಲಿ, ಕೆಲವರು ಎರಡು ಮೂರು ಗಂಟೆ ನಿದ್ದೆಗೆ ಜಾರುತ್ತಾರೆ ಮತ್ತು ಸಂಪೂರ್ಣವಾಗಿ ತಾವೇ ಬೇರೆಯವರಿಂದ ದೂರವುಳಿಯುತ್ತಾರೆ. ಇದನ್ನು ಪ್ರತಿನಿತ್ಯವೂ ನಿರಂತರವಾಗಿ ಸ್ವಲ್ಪ ಕಾಲಾವಧಿ ಅಭ್ಯಾಸ ಮಾಡುತ್ತಾ, ಪೂರ್ಣವಾಗಿ ಮಾಡಬಹುದು. ಇನ್ನೊಂದು ವಿಧಾನದಲ್ಲಿ ಅಭ್ಯಾಸವನ್ನು ಒಮ್ಮೆಗೇ ಪೂರ್ಣಗೊಳಿಸಬೇಕು. ಎಲ್ಲರೂ ಒಂಬತ್ತು ವರ್ಷ ಗೋಡೆಯ ಹಿಂದೆ ಕುಳಿತಿದ್ದ ಬೋಧಿಧರ್ಮನ ಬಗ್ಗೆ ಕೇಳಿರುತ್ತೀರಿ. ಹಿಂದಿನ ಕಾಲದಲ್ಲಿ ಬಹಳಷ್ಟು ಋಷಿಗಳು ಹತ್ತಾರು ವರ್ಷ ಧ್ಯಾನಕ್ಕೆ ಕೂರುತ್ತಿದ್ದರು. ಚರಿತ್ರೆಯಲ್ಲಿ ಧ್ಯಾನಕ್ಕೆ ಕೂತ ಅತ್ಯಧಿಕ ಅವಧಿಯೆಂದರೆ ತೊಂಬತ್ತು ವರ್ಷ. ಅದಕ್ಕಿಂತ ಹೆಚ್ಚು ಅವಧಿಯೂ ಇರಬಹುದು. ಧ್ಯಾನಕ್ಕೆ ಕೂತಾಗ ಕಣ್ಣಿನ ಮೇಲೆ ಶೇಖರಗೊಳ್ಳುವ ಧೂಳು ಮತ್ತು ಮೈಮೇಲೆ ಬೆಳೆಯುವ ಹುಲ್ಲಿನ ಕಾರಣದಿಂದಾಗಿ ಅವರು ಅಲ್ಲೇ ಕೂರುವುದನ್ನು ಮುಂದುವರೆಸುತ್ತಿದ್ದರು. ತಾವೋ ಪಂಥದಲ್ಲಿ ಕೆಲವು ಅದನ್ನು ಬೋಧಿಸುತ್ತವೆ. ನಿರ್ದಿಷ್ಟವಾಗಿ ಕೆಲವು ಅಭ್ಯಾಸಗಳು ಚೇಮೆನ್ ಪಂಥದಲ್ಲಿ ನಿದ್ದೆಯನ್ನು ಒಂದು ರೀತಿಯ ಅಭ್ಯಾಸ ಕ್ರಮವಾಗಿ ಬೋಧಿಸುತ್ತವೆ. ಒಬ್ಬನು ಹತ್ತಾರು ವರ್ಷ ಸಮಾಧಿ ಸ್ಥಿತಿಯಿಂದ ವಿಮುಖಗೊಳ್ಳದೆ ನಿದ್ರಿಸಬಹುದು ಮತ್ತು ಎಚ್ಚರಗೊಳ್ಳದೆ ಇರಬಹುದು. ಆದರೆ ಯಾರು ಅಭ್ಯಾಸ ಮಾಡಿದ್ದಾರೆ? ವ್ಯಕ್ತಿಯ ಸಹಾಯಕ ಚೈತನ್ಯವು ಅಭ್ಯಾಸಕ್ಕೆ ಹೊರಟು ಹೋದದ್ದನ್ನು ಅವನು ನೋಡಿದರೆ, ಅವನು ಗುರುವನ್ನು ಹುಡುಕಿ ಅಭ್ಯಾಸದಲ್ಲಿ ಮತ್ತೆ ಅದನ್ನು ಪಡೆಯಬೇಕಾಗುತ್ತದೆ. ಸಹಾಯಕ ಚೈತನ್ಯವು ಹೆಚ್ಚು ಕರ್ಮವನ್ನು ಹೊಂದಿದ್ದರೆ ಮತ್ತು ಗುರುವು ಆ ಎಲ್ಲ ಕರ್ಮವನ್ನು ನಾಶಮಾಡಲು ಸಾಮರ್ಥ್ಯ ಹೊಂದಿಲ್ಲದಿದ್ದರೆ, ಗುರುವು ಹೀಗೆ ಹೇಳಬಹುದು– "ನೀನು ಇಲ್ಲಿ ಸತತವಾಗಿ ಅಭ್ಯಾಸ ಮಾಡುತ್ತಿರು. ನಾನು ಸ್ವಲ್ಪ ದೂರ ಹೋಗಿಬರುತ್ತೇನೆ. ನೀನು ನನಗಾಗಿ ಕಾಯುತ್ತಿರು."

ಗುರುವು ಮುಂದೇನಾಗುತ್ತದೆಂದು ಖಚಿತವಾಗಿ ತಿಳಿದಿರುತ್ತಾನೆ. ಆದರೂ ಈ ದಾರಿಯಲ್ಲೇ ಅದನ್ನು ಮಾಡಬೇಕು.ಗೊತ್ತಿರುವಂತೆ ದೆವ್ವವೊಂದು ಹೆದರಿಸಲು ಬರುತ್ತದೆ ಅಥವಾ ಸುಂದ ರಾಂಗಿಯೊಬ್ಬಳು ಅದನ್ನು ಹಾಳುಮಾಡಲು ಬರುತ್ತಾಳೆ. ಅಲ್ಲಿ ಎಲ್ಲಾ ರೀತಿಯವೂ ನಡೆಯಬಹುದು. ದೆವ್ವವು ನಂತರದಲ್ಲಿ ಸಹಾಯಕ ಚೈತನ್ಯಕ್ಕೆ ಸ್ವಲ್ಪವೂ ಪ್ರಭಾವವಾಗುವುದಿಲ್ಲ ಎಂಬುದನ್ನು ಅರಿತುಕೊಳ್ಳುತ್ತದೆ. ಇದು ಸಹಾಯಕ ಚೈತನ್ಯಕ್ಕೆ ಸಾಧನೆಯನ್ನು ಮಾಡುವುದು ಸುಲಭವೆಂದು ಮತ್ತು ಅಂತೆಯೇ ಅದು ಸತ್ಯವನ್ನು ತಿಳಿದುಕೊಳ್ಳುತ್ತದೆಂದು ಸೂಚಿಸುತ್ತದೆ. ನಿರಾಶೆಯಿಂದ ದೆವ್ವವು ಮತ್ತೊಂದು ಪ್ರಯತ್ನದಲ್ಲಿ ಜೀವದ ಮೇಲೆ ಪ್ರತೀಕಾರ ಕೈಗೊಂಡು ಕೊಲ್ಲುತ್ತದೆ. ಅದರಿಂದ ಸಹಾಯಕ ಚೈತನ್ಯದ ಋಣವು ಸಂದಾಯವಾಗುತ್ತದೆ. ಸತ್ತ ನಂತರ ಸಹಾಯಕ ಚೈತನ್ಯವು ಹೊಗೆಯ ರೂಪದಲ್ಲಿ ಹೊರಬಂದು, ಮುಂದೆ ಬಡಕುಟುಂಬವೊಂದರಲ್ಲಿ ಪುನರಾವತಾರ ತಾಳುತ್ತದೆ. ಆ ಮಗುವು ಚಿಕ್ಕಂದಿನಿಂದಲೇ ಕಷ್ಟಗಳಿಗೆ ಒಳಗಾಗುತ್ತದೆ. ಅದು ಅನುಭವಿಸಿ ಪಕ್ವಗೊಂಡಾಗ, ಗುರುವು ಹಿಂದಿರುಗುತ್ತಾನೆ. ಆದರೆ ಆ ಮಗುವು ಅವನನ್ನು ಗುರುತಿಸುವುದಿಲ್ಲ. ಅಸಾಮಾನ್ಯ ಸಾಮರ್ಥ್ಯವನ್ನು ಬಳಸಿ, ಗುರುವು ಅವನ ನೆನಪುಗಳ ಸಂಗ್ರಹವನ್ನು ತೆರೆಯುತ್ತಾನೆ. ಒಮ್ಮೆಗೆ ಅವನು ಎಲ್ಲವನ್ನು ನೆನಪಿಸಿಕೊಳ್ಳುತ್ತಾನೆ. ನೀವು ನನ್ನ ಗುರುಗಳಲ್ಲವೇ? ಗುರುವು ಹೀಗೆ ಹೇಳುತ್ತಾನೆ– "ಈಗ, ಅಭ್ಯಾಸವನ್ನೇ ಪ್ರಾರಂಭಿಸುವ ಸಮಯವಾಗಿದೆ." ಈ ರೀತಿಯಲ್ಲಿ ಹಲವು ವರ್ಷಗಳ ನಂತರ ಗುರುವು ಸಹಾಯಕ ಚೈತನ್ಯಕ್ಕೆ ಬೋಧನೆಯನ್ನು ಮುಂದುವರೆಸುತ್ತಾನೆ.

ನಿರ್ದೇಶನಗಳನ್ನು ಕೊಟ್ಟು ಗುರು ಅದಕ್ಕೆ ಹೇಳುತ್ತಾನೆ– "ನೀನು ಈಗ ಕಳೆದುಕೊಳ್ಳಬೇಕಾದ ಹಲವು ಸಂಬಂಧಗಳಿವೆ. ಅದಕ್ಕಾಗಿ ನೀನು ಹೊರಗಡೆ ಸಂಚರಿಸು." ಸಮಾಜದಲ್ಲಿ ಅಲೆಯುವುದೆಂದರೆ ಹೆಚ್ಚು ಸಂಕಷ್ಟಗಳನ್ನು ಅನುಭವಿಸಬೇಕು. ಆಹಾರಕ್ಕಾಗಿ ಭಿಕ್ಷೆ ಬೇಡಬೇಕು ಮತ್ತು ಬಯ್ಯುವ, ಅವಮಾನ ಮಾಡುವ, ಉಪಯೋಗಿಸಿಕೊಳ್ಳುವ ಹಲವು ವಿಚಿತ್ರ ವ್ಯಕ್ತಿಗಳನ್ನು

ಭೇಟಿಯಾಗಬೇಕು. ಅದು ಎಲ್ಲ ರೀತಿಯ ವಸ್ತುಗಳಿಂದ ಚಿತ್ರಹಿಂಸೆಗೆ ಒಳಗಾಗಬೇಕು. ಅದು ತನ್ನನ್ನು ತಾನು ಅಭ್ಯಾಸಿಯೆಂದು ತಿಳಿದು, ಎಲ್ಲರೊಂದಿಗೆ ಒಳ್ಳೆಯ ಸಂಬಂಧವನ್ನು ಸಮತೋಲನ ಮಾಡಬೇಕು. ಆತ್ಮಪ್ರಕೃತಿಯನ್ನು ಯಾವಾಗಲೂ ಸಮತೋಲನದಲ್ಲಿಟ್ಟು ಬೆಳೆಸಬೇಕು. ಅದು ಹಲವು ಆಕರ್ಷಕ ಪ್ರೇರಣೆಗಳಿಂದ ಪ್ರೇರಿತವಾಗಬಾರದು. ಹೀಗೆ ಹಲವು ವರ್ಷಗಳ ನಂತರ, ಅದು ಸಂಚಾರದಿಂದ ಹಿಂದಿರುಗುತ್ತದೆ. ಗುರು ಹೇಳುತ್ತಾನೆ– ''ನೀನು ಈಗಾಗಲೇ ತಾವ್ರೋ ಅನ್ನು ಪಡೆದಿದ್ದೀಯ ಮತ್ತು ಆ ಸಾಧನೆಯನ್ನು ಮುಗಿಸಿದ್ದೀಯ. ನೀನು ಮಾಡುವುದಕ್ಕೆ ಇನ್ನೇನು ಇಲ್ಲದಿದ್ದರೆ, ಹೊರಡುವುದಕ್ಕೆ ಸಿದ್ಧನಾಗು. ಇನ್ನೇನಾದರು ಮಾಡುವಂತದ್ದು ಇದ್ದರೆ, ನೀನು ಹೋಗಿ ಮಾಡಿಕೊಂಡು ಬರಬಹುದು.'' ಹಲವು ವರ್ಷಗಳ ನಂತರ ಸಹಾಯಕ ಚೈತನ್ಯವು ಮತ್ತೆ ಮರಳುತ್ತದೆ. ಅದು ಬಂದ ಮೇಲೆ, ಪ್ರಧಾನ ಚೈತನ್ಯವೂ ತನ್ನ ಸಮಾಧಿ ಸ್ಥಿತಿಯಿಂದ ಹೊರಬಂದು, ಪ್ರಧಾನ ಪ್ರಜ್ಞೆಯೂ ಜಾಗೃತಗೊಳ್ಳುತ್ತದೆ.

ಆದಾಗ್ಯು ಈ ವ್ಯಕ್ತಿಯು ನಿಜವಾಗಿ ಸಾಧನೆಯನ್ನು ಅಭ್ಯಾಸ ಮಾಡಿರುವುದಿಲ್ಲ. ಆ ಸಹಾಯಕ ಚೈತನ್ಯವು ಅಭ್ಯಾಸ ಮಾಡಿರುತ್ತದೆ. ಆದ್ದರಿಂದ ಸಹಾಯಕ ಚೈತನ್ಯವು ಗಾಂಗನ್ನು ಹೊಂದುತ್ತದೆ. ಆದರೂ ಪ್ರಧಾನ ಚೈತನ್ಯವೂ ಅನುಭವಿಸಬೇಕು. ಅವೆಲ್ಲ ಆದಮೇಲೆ, ವ್ಯಕ್ತಿಯು ಅಲ್ಲಿ ಕೂತು ತನ್ನ ಇಡೀ ತಾರುಣ್ಯವನ್ನು ಸಮರ್ಪಿಸುತ್ತಾನೆ. ಅದಾದ ಮೇಲೆ ಏನಾಗುತ್ತದೆ? ಸಮಾಧಿ ಸ್ಥಿತಿಯಿಂದ ಎದ್ದ ನಂತರ, ಈ ವ್ಯಕ್ತಿಯು ತಾನು ಗಾಂಗನ್ನು ಅಭ್ಯಾಸದಿಂದ ಅಭಿವೃದ್ಧಿಪಡಿಸಿರುವುದನ್ನು, ಅಸಾಮಾನ್ಯ ಸಾಮರ್ಥ್ಯಗಳನ್ನು ಗಳಿಸಿರುವುದನ್ನು ಅನುಭವಗೊಳ್ಳುತ್ತಾನೆ. ಅವನು ರೋಗಿಯನ್ನು ಉಪಚರಿಸುವುದಕ್ಕೆ ಅಥವಾ ಇನ್ನೇನಾದರೂ ಮಾಡುವುದಕ್ಕೆ ಬಯಸಿದರೆ, ಅವನಿಗೆ ಸಾಮರ್ಥ್ಯವಿರುತ್ತದೆ. ಸಹಾಯಕ ಚೈತನ್ಯವು ಅವನನ್ನು ಸಂತೃಪ್ತಗೊಳಿಸಲು ಪ್ರಯತ್ನಿಸುತ್ತದೆ. ಏಕೆಂದರೆ ಈ ವ್ಯಕ್ತಿಯೇ ಪ್ರಧಾನ ಚೈತನ್ಯ. ಪ್ರಧಾನ ಚೈತನ್ಯವೇ ದೇಹವನ್ನು ನಿಯಂತ್ರಿಸುವುದು, ನಿರ್ಧಾರಗಳನ್ನು ಕೈಗೊಳ್ಳುವುದು. ಇದರ ಜೊತೆಗೆ, ಅವನು ಅಲ್ಲಿ ಕುಳಿತು ಕಳೆದಿರುವ ಎಲ್ಲ ವರ್ಷಗಳು ಕಳೆದುಹೋಗುತ್ತವೆ. ಯಾವಾಗ ಈ ವ್ಯಕ್ತಿ ಸಾಯುತ್ತಾನೋ, ಸಹಾಯಕ ಚೈತನ್ಯವೂ ಹಾರಿಹೋಗುತ್ತದೆ. ಪ್ರತಿಯೊಂದೂ ತನ್ನದೇ ಆದ ಪ್ರತ್ಯೇಕ ದಾರಿಯಲ್ಲಿ ಸಾಗುತ್ತದೆ. ಬೌದ್ಧಧರ್ಮದ ಪ್ರಕಾರ, ಇಂತಹ ವ್ಯಕ್ತಿಯೂ ಸಂಸಾರದಲ್ಲಿ ಮತ್ತೂ ಮುಂದುವರಿಯಬೇಕು. ಎಲ್ಲಿಯವರೆಗೆಂದರೆ ಒಬ್ಬ ಉತ್ತಮನಾದ ಜ್ಞಾನಿಯೊಬ್ಬನು ಯಶಸ್ವಿಯಾಗಿ ತನ್ನ ದೇಹದಲ್ಲಿ ಉತ್ಪನ್ನವಾಗುವವರೆಗೆ. ಈ ವ್ಯಕ್ತಿಯೂ ಕೆಟ್ಟದ್ದನ್ನು ಸಂಪಾದಿಸಿದರೆ ಏನಾಗುತ್ತದೆ? ಅವನು ಮುಂದಿನ ಜನ್ಮದಲ್ಲಿ ಅದಕ್ಕಿಂತ ಹೆಚ್ಚಿನ ಪುಣ್ಯವನ್ನು ಪಡೆಯಬೇಕಾಗುತ್ತದೆ. ಇದು ಹೀಗೆ ಮಾತ್ರ ನಡೆಯುತ್ತದೆ.

ಈ ವಿಷಯವನ್ನು ಪ್ರವೇಶಿಸುವುದಕ್ಕೆ ಮತ್ತು ಸ್ಪಷ್ಟಗೊಳ್ಳುವುದಕ್ಕೆ ಅದು ಹೆಚ್ಚಿನ ಪರಿಶ್ರಮವನ್ನು ನಮ್ಮಿಂದ ಬೇಡುತ್ತದೆ. ಯಾವುದು ರಹಸ್ಯಗಳಿಗೆ ರಹಸ್ಯವ್ರೋ, ಖಡಾಖಂಡಿತವಾಗಿ ಅನಾವರಣಗೊಳಿಸಬಾರದೋ ಅಂತಹ ಶಾಶ್ವತವಾದ ಗುಪ್ತವಿದ್ಯೆಯನ್ನು ನಾನು ಅನಾವರಣ ಮಾಡಿದ್ದೇನೆ. ನಾನು ಇತಿಹಾಸದಲ್ಲಿ ಬಳಕೆಯಾಗಿರುವ ಎಲ್ಲ ರೀತಿಯ ವಿಭಿನ್ನವಾದ ಸಾಧನಾಭ್ಯಾಸ ಕ್ರಮಗಳ ಬೇರುಗಳನ್ನು ಬಹಿರಂಗಗೊಳಿಸಿದ್ದೇನೆ. ಇದು ಆಳವಾದ ಚಾರಿತ್ರಿಕ ವಿಚಾರಗಳನ್ನು ಹೊಂದಿದೆಯೆಂದು ನಾನು ಹೇಳಿರಲಿಲ್ಲವೇ? ಅದಕ್ಕೆ ಕಾರಣಗಳಿವು. ಯಾವ ಪದ್ಧತಿಯು ಸಾಧನೆಯನ್ನು ಅಭ್ಯಾಸ ಮಾಡುವುದಿಲ್ಲ ಈ ಮಾರ್ಗದಲ್ಲಿ? ಅದರ ಬಗ್ಗೆ ಯೋಚಿಸಿ. ನೀವು ಹಿಂದೆ ಹೇಗೋ ಅಭ್ಯಾಸ ಮಾಡಿದ್ದು, ಗಾಂಗ್ ಹೊಂದಿಲ್ಲದೆ ಮುಂದುವರೆದಿರಿ. ನೀವು ಹತಾಶರಾಗಿದ್ದೀರಲ್ಲವೆ? ಅದಕ್ಕಾಗಿ ಯಾರನ್ನು ತೆಗಳುವಿರಿ? ತಾವು ಮಾಡಲು ಸಾಧ್ಯವಾಗದ್ದನ್ನು ಮನುಷ್ಯರು ಎಷ್ಟೋ ಬಿಟ್ಟುಬಿಡುತ್ತಾರೆ. ಅವರು ಏನು ಸಲಹೆಗಳನ್ನು ಕೊಟ್ಟಿರುತ್ತಾರೆಂಬುದು ಮುಖ್ಯವಲ್ಲ. ಒಂದು ವೇಳೆ ಏನಾದರು ಉನ್ನತ ದೃಷ್ಟಿಕೋನದಿಂದ ವಿವರಿಸಲ್ಪಟ್ಟರೆ, ಅವರು ಅದನ್ನು ಅತೀಂದ್ರಿಯವೆಂದು ಗುರುತಿಸುತ್ತಾರೆ. ಅದೇ ಸಂಕುಚಿತ ದೃಷ್ಟಿಕೋನದಿಂದ ವಿವರಿಸಲ್ಪಟ್ಟರೆ, ಅವರಿಗೆ ಯಾವುದು ಉನ್ನತವಾದುದೆಂದು ತಿಳಿಯುವುದಿಲ್ಲ. ನಾನು ಈ ದಾರಿಯಲ್ಲಿ ಉದ್ದೇಶಿಸಿದರೆ, ಕೆಲವರು ಮತ್ತೂ ನನ್ನನ್ನು ಅವರ ರೋಗಬಾಧೆ ನಿವಾರಿಸುವುದಕ್ಕೆ ಬಯಸುತ್ತಾರೆ. ಅವರಿಗೆ ಏನು ಹೇಳಬೇಕೋ ನನಗೆ ನಿಜವಾಗಿಯೂ ಗೊತ್ತಿಲ್ಲ. ನಾವು ಸಾಧನೆಯ ಅಭ್ಯಾಸವನ್ನು ಹೇಳಿಕೊಡುತ್ತೇವೆ ಮತ್ತು ಕೇವಲ ನಾವು ಅಭ್ಯಾಸಿಗಳಲ್ಲಿ ಯಾರು ಮುಂದಿನ ಉನ್ನತ ಹಂತಗಳಲ್ಲಿ ಸಾಧನೆಯ ಅಭ್ಯಾಸ ಮಾಡುತ್ತಾರೋ ಅಂತವರ ಯೋಗಕ್ಷೇಮ ನೋಡುತ್ತೇವೆ.

ನಮ್ಮ ಅಭ್ಯಾಸದ ಶಾಲೆಯಲ್ಲಿ, ಗಾಂಗನ್ನು ಪಡೆಯುವುದು ಪ್ರಧಾನ ಪ್ರಜ್ಞೆಯಾಗಿರುತ್ತದೆ. ಹೀಗಿರುವಾಗ ಪ್ರಧಾನ ಪ್ರಜ್ಞೆಯೇ ಗಾಂಗನ್ನು ಹೊಂದಿದ ಮೇಲೆ ನೀವು ಹಾಗೆ ಹೇಳಲು ಸಾಧ್ಯವೆ? ಯಾರು ಅನುಮತಿಸುತ್ತಾರೆ? ಅದು ಹಾಗಲ್ಲ, ಅಲ್ಲಿಗೆ ಪೂರ್ವಾಪೇಕ್ಷಿತವಿರಬಹುದು. ಎಲ್ಲರಿಗೂ ಗೊತ್ತಿದೆ ನಮ್ಮ ಅಭ್ಯಾಸದ ಶಾಲೆಯಲ್ಲಿ ಸಾಧನೆಯನ್ನು ಅಭ್ಯಾಸ ಮಾಡುವಲ್ಲಿ ಸಾಮಾನ್ಯ ಮನುಷ್ಯ ಸಮಾಜವನ್ನು ತ್ಯಜಿಸಿಲ್ಲ ಮತ್ತು ವೈಚಾರಿಕ ಘರ್ಷಣೆಗಳನ್ನು ತಡೆದಿಲ್ಲ ಮತ್ತು ದೂರ ಸರಿಸಿಲ್ಲ. ಸಾಮಾನ್ಯ ಜನರ ಸಂಕೀರ್ಣ ಪರಿಸರದಲ್ಲಿ ನೀವು ಗೊಂದಲಮುಕ್ತರಾಗಿರಬೇಕು, ಸ್ವಾರ್ಥಪ್ರವೃತ್ತಿ – ಪಕ್ಷಪಾತದ ವಿಷಯಗಳಲ್ಲಿ ಬುದ್ಧಿಪೂರ್ವಕವಾಗಿ ತಪ್ಪಿಸಿಕೊಳ್ಳಬೇಕು. ಯಾವಾಗ ನಿಮ್ಮ ಸ್ವ-ಇಚ್ಛೆಯು ಬೇರೆಯವರಿಂದ ತೆಗೆಯಲ್ಪಡುತ್ತದೋ, ಆಗ ನೀವು ಬೇರೆಯವರಂತೆ ಸ್ಪರ್ಧೆಗೆ, ಜಗಳಕ್ಕೆ ಹೋಗುವುದಿಲ್ಲ. ಆತ್ಮ ಪ್ರಕೃತಿಯ ಬೇರೆ ಬೇರೆ ತೊಡಕುಗಳಿಂದ, ನೀವು ನಷ್ಟ ಅನುಭವಿಸಬೇಕಾಗುತ್ತದೆ. ಇಂತಹ ಸಂದಿಗ್ಧ ಪರಿಸರದಲ್ಲಿ, ನೀವು ನಿಮ್ಮ ಆತ್ಮಬಲವನ್ನು ಹದಗೊಳಿಸಬೇಕು ಮತ್ತು ಆತ್ಮಪ್ರಕೃತಿಯನ್ನು ವೃದ್ಧಿಸಬೇಕು. ಪ್ರತಿನಿತ್ಯದ ಜನರ ಭಿನ್ನವಾದ ಕೆಟ್ಟ ಆಲೋಚನೆಗಳ ಪ್ರಭಾವದಿಂದಲೇ ನೀವು ಮೇಲೇರಿ, ಅದನ್ನು ದಾಟುವುದಕ್ಕೆ ಸಾಮರ್ಥ್ಯ ಬರುತ್ತದೆ.

ಪ್ರತಿಯೊಬ್ಬನೂ ಇದರ ಬಗ್ಗೆ ಯೋಚಿಸಿ, ಬುದ್ಧಿಪೂರ್ವಕವಾಗಿ ನರಳುತ್ತಿರುವವರಲ್ಲಿ ನೀವೂ ಒಬ್ಬರಲ್ಲವೆ? ನಿಮ್ಮ ಪ್ರಧಾನ ಚೈತನ್ಯ ಅದನ್ನು ಒಪ್ಪಿಕೊಳ್ಳುತ್ತದೆಯಲ್ಲವೆ? ಅದರಂತೆ ನಿತ್ಯದ ಜನರ ಜೊತೆ ನೀವು ಏನನ್ನು ಕಳೆದುಕೊಂಡಿರಿ, ಅದನ್ನು ಬುದ್ಧಿಪೂರ್ವಕ ಕಳೆದುಕೊಂಡಿದ್ದೀರಲ್ಲವೆ? ನಂತರ ಈ ಗಾಂಗ್ ನಿಮಗೆ ಸೇರಿದ್ದು, ಬೇರೆಯವರು ಕಳೆದುಕೊಳ್ಳುವ, ಪಡೆಯುವ ರೀತಿಯಲ್ಲಿಯೇ. ಪ್ರತಿನಿತ್ಯದ ಜನರ ಸಂಕೀರ್ಣವಾದ ಈ ಪರಿಸರದಲ್ಲಿ ಏಕೆ ನಮ್ಮ ಶಾಲೆ ಸಾಧನೆಯ ಅಭ್ಯಾಸವನ್ನು ತಡೆಹಿಡಿಯುವುದಿಲ್ಲ ಎಂಬುದಕ್ಕೆ ಇದೇ ಕಾರಣ. ಪ್ರತಿನಿತ್ಯದ ಜನರ ಘರ್ಷಣೆಯ ನಡುವೆ ಸಾಧನೆಯ ಅಭ್ಯಾಸವನ್ನು ನಾವು ಮಾಡಬೇಕು ಏಕೆ? ಏಕೆಂದರೆ ನಾವು ಸ್ವತಃ ಗಾಂಗನ್ನು ಪಡೆಯಲು ಹೋಗುತ್ತಿದ್ದೇವೆ. ಮುಂದಿನ ವೃತ್ತಿಪರರಾಗುವ ಅಭ್ಯಾಸಿಗಳು ದೇವಸ್ಥಾನಗಳಲ್ಲಿ ಜನರ ನಡುವೆ ಅಲೆದಾಡುವುದನ್ನು ತಮ್ಮ ಸಾಧನೆಯ ಅಭ್ಯಾಸದಲ್ಲಿಯೇ ಅರಿತುಕೊಳ್ಳಬೇಕು.

ಕೆಲವರು ಕೇಳುತ್ತಾರೆ- ಬೇರೆಯ ಪದ್ಧತಿಗಳೂ ಪ್ರಸ್ತುತದಲ್ಲಿ ನಿತ್ಯದ ಜನರೊಂದಿಗೆ ಅಭ್ಯಾಸ ಮಾಡುತ್ತಿಲ್ಲವೆ? ಆದರೆ ಅಂತಹ ಪದ್ಧತಿಗಳು ಉಪಶಮನಕ್ಕೆ ಮತ್ತು ಸದೃಢತೆಗಾಗಿ ಪ್ರೋತ್ಸಾಹಿಸಲ್ಪಡುತ್ತಿವೆ. ಒಬ್ಬ ಅನುಯಾಯಿಯನ್ನು ಪ್ರತ್ಯೇಕವಾಗಿ ತೆಗೆದುಕೊಳ್ಳದೆ, ಸಾರ್ವಜನಿಕವಾಗಿ ಉನ್ನತ ಮಟ್ಟದ ಅಭ್ಯಾಸಗಳನ್ನು ಯಾರೂ ನಿಜವಾಗಿ ಬೋಧಿಸಲಾರರು. ಯಾರು ಅಪ್ಪಟವಾಗಿ ತನ್ನ ಅನುಯಾಯಿಗಳಿಗೆ ಬೋಧಿಸುವನೋ ಅವನು ಮೊದಲೇ ಖಾಸಗಿ ಸೂಚನೆ ನೀಡುವುದಕ್ಕೆ ಅವರನ್ನು ದೂರಕ್ಕೆ ಕರೆದುಕೊಂಡು ಹೋಗಿರುತ್ತಾನೆ. ಬಹಳ ವರ್ಷಗಳಿಂದ ಯಾರು ಇವುಗಳನ್ನೆಲ್ಲ ಸಾರ್ವಜನಿಕವಾಗಿ ಮಾತನಾಡಿದ್ದಾರೆ? ಯಾವನೂ ಇದನ್ನು ಮಾಡಿಲ್ಲ. ನಮ್ಮ ಅಭ್ಯಾಸದ ಶಾಲೆಯು ಈ ಮಾರ್ಗದಲ್ಲಿ ಬೋಧಿಸುತ್ತದೆ. ಏಕೆಂದರೆ ಇದೇ ನಾವು ಸಾಧನೆಯನ್ನು ಅಭ್ಯಾಸ ಮಾಡಬೇಕಾದ ಖಚಿತವಾದ ದಾರಿ ಮತ್ತು ಗಾಂಗನ್ನು ಪಡೆಯುವ ದಾರಿ. ನಮ್ಮ ಅಭ್ಯಾಸದ ಶಾಲೆಯು ನೂರಾರು ಮತ್ತು ಸಾವಿರಾರು ವಸ್ತುಗಳನ್ನು ನಿಮ್ಮ ಪ್ರಧಾನ ಚೈತನ್ಯಕ್ಕೇ ನೀಡುತ್ತದೆ. ಆ ಮೂಲಕ ಸ್ವತಃ ನೀವು ಗಾಂಗ್ ಪಡೆಯುವುದಕ್ಕೆ ನಿಮ್ಮನ್ನು ಶಕ್ತಗೊಳಿಸುತ್ತದೆ. ನಾನು ಹೇಳುತ್ತೇನೆ. ನಾನು ಸ್ವಲ್ಪ ಹೊಸದನ್ನು ಮಾಡಿದ್ದೇನೆ ಮತ್ತು ವಿಸ್ತಾರವಾದ ಬಾಗಿಲನ್ನು ತೆರೆದಿದ್ದೇನೆ. ನನ್ನ ಮಾತುಗಳನ್ನು, ನಾನು ಹೇಳಿರುವುದು ನಿಜವಾಗಿ ಅತೀಂದ್ರಿಯವಾದುದಲ್ಲ ಎಂಬುದನ್ನು ಕೆಲವರು ಅರ್ಥಮಾಡಿಕೊಂಡಿದ್ದಾರೆ. ಒಬ್ಬ ವ್ಯಕ್ತಿಯಾಗಿ, ನಾನು ಒಂದು ಅಭ್ಯಾಸ ಹೊಂದಿದ್ದೇನೆ. ನಾನು ಒಂದು ಗಜ ಮುಂದೆ ಹೋಗಿದ್ದರೆ, ಒಂದು ಇಂಚು ಹೋಗಿದ್ದೇನೆ ಎಂದು ಹೇಳುತ್ತೇನೆ. ನೀವು ಜಂಭ ಕೊಚ್ಚಿಕೊಳ್ಳುತ್ತಿದ್ದೇನೆಂದು ನಿರ್ಧರಿಸಬಹುದು. ಆದರೆ ನಾನು ಹೇಳಿರುವುದು ಸತ್ಯದ ಒಂದು ಚಿಕ್ಕ ಭಾಗ. ಹಂತಗಳ ನಡುವೆ ಇರುವ ದೊಡ್ಡ ಅಂತರದಿಂದ ನಾನು ಸ್ವಲ್ಪವೂ ಉನ್ನತ ದಘಾವನ್ನು ಸಾರ್ವಜನಿಕಗೊಳಿಸಿಲ್ಲ.

ನಮ್ಮ ಅಭ್ಯಾಸದ ಶಾಲೆಯು, ನೀವು ನಿಮ್ಮಷ್ಟಕ್ಕೆ ಗಾಂಗನ್ನು ಪಡೆಯುವಂತೆ ಬೆಳೆಸುತ್ತದೆ. ಅದು ತುಂಬಾ ನವೀನವಾದುದು. ಚರಿತ್ರೆಯನ್ನು ನೀವೇ ಪರೀಕ್ಷಿಸಬಹುದು. ಅದು ತುಂಬಾ ಒಳ್ಳೆಯದು. ಏಕೆಂದರೆ ನೀವೇ ಸ್ವತಃ ಗಾಂಗನ್ನು ಪಡೆಯಬಲ್ಲಿರಿ. ಆದರೆ ಅದೂ ಕಷ್ಟವೇ ಆಗಿದೆ. ನಿತ್ಯದ ಜನರ

ಸಂಕೀರ್ಣ ಪರಿಸರದ ನಡುವೆ, ಸಮಾಜದ ಜನರ ನಡುವಿನ ಆತ್ಮಪ್ರಕೃತಿಯ ಘರ್ಷಣೆಗಳ ನಡುವೆ ನೀವು ಮೇಲಕ್ಕೆ ಮತ್ತು ಅದನ್ನು ದಾಟಿ ಬೆಳೆಯಲು ಶಕ್ತರಾಗುತ್ತೀರಿ. ಇದೂ ತುಂಬಾ ಕಷ್ಟದ ಸಂಗತಿಯೇ. ಜನರ ಮಧ್ಯೆ ಬುದ್ಧಿಪೂರ್ವಕವಾಗಿ ನಿಮ್ಮ ಸ್ವಾರ್ಥಪ್ರವೃತ್ತಿಯನ್ನು ಕಳೆದುಕೊಳ್ಳುವುದು ತುಂಬ ಕಷ್ಟದ್ದು. ನಿಮ್ಮ ಸಂದಿಗ್ಧ ಸ್ವ-ಇಚ್ಛೆಗಳ ನಡುವೆ ನೀವು ಮುಂದುವರಿದಿದ್ದೀರಾ? ವ್ಯಕ್ತಿಗಳ ನಡುವೆ ಬೌದ್ಧಿಕವಾಗಿ ಸ್ಪರ್ಧಿಸಿ, ನೀವು ಮುಂದುವರಿದಿದ್ದೀರಾ? ನಿಮ್ಮ ಗೆಳೆಯ ಅಥವಾ ಮನೆಯವರು ಕಷ್ಟದಲ್ಲಿದ್ದಾಗ, ನೀವು ಮುಂದುವರಿದಿದ್ದೀರಾ? ಅವರನ್ನು ಹೇಗೆ ತೂಗಿ ಅಳೆಯುತ್ತೀರಿ? ಇದೆಲ್ಲ ಹೇಗೆ ಅಭ್ಯಾಸಿಯಾಗುವುದು ಕಷ್ಟವೆಂಬುದನ್ನು ತೋರಿಸುತ್ತದೆ! ಯಾವನೋ ಒಬ್ಬ ನನಗೆ ಹೇಳಿದ: ''ಗುರು, ನಿತ್ಯದ ಜನರೊಂದಿಗೆ ಒಳ್ಳೆಯ ಮನುಷ್ಯನಾಗಿರುವುದು ಹೆಚ್ಚಾಯಿತು, ಯಾರು ಸಾಧನೆಯಲ್ಲಿ ಯಶಸ್ವಿಯಾಗಬಲ್ಲರು?'' ಅದನ್ನು ಕೇಳಿದ ಮೇಲೆ, ನಾನು ನಿಜವಾಗಿ ನಿರಾಸಕ್ತನಾದೆ! ನಾನು ಅವನಿಗೆ ಒಂದು ಪದವನ್ನು ಹೇಳಲಿಲ್ಲ. ಅಲ್ಲಿ ಎಲ್ಲ ರೀತಿಯ ಆತ್ಮಪ್ರಕೃತಿಗಳಿವೆ. ಒಬ್ಬ ಎಷ್ಟು ಜ್ಞಾನೋದಯಗೊಳ್ಳುವನು ಅಷ್ಟೇ ಮೇಲೇರುವುದಕ್ಕೆ ಸಾಧ್ಯ.

ಲಾವ್ಗೋ ಜಿ ಹೇಳಿದ್ದಾನೆ- ''ತಾವ್ಗೋ ಅನುಸರಿಸಬೇಕಾದ ದಾರಿಯಾಗಿದೆ. ಆದರೆ ಇದು ಸಾಮಾನ್ಯ ದಾರಿಯಲ್ಲ.'' ಒಂದು ವೇಳೆ ಒಬ್ಬನು ಎಲ್ಲ ಕಡೆ ನೆಲದ ಮೇಲೆ ಕುಳಿತು ಅಭ್ಯಾಸದಲ್ಲಿ ಯಶಸ್ವಿಯಾಗುವುದಕ್ಕೆ ತಾವ್ಗೋ ಅಮೂಲ್ಯವೆನಿಸುವುದಿಲ್ಲ. ನಮ್ಮ ಅಭ್ಯಾಸದ ಶಾಲೆಯು ನಿಮಗೆ ಘರ್ಷಣೆಗಳ ಮೂಲಕ ಗಾಂಗ್ ಹೊಂದುವಿಕೆಯನ್ನು ಹೇಳಿಕೊಡುತ್ತದೆ. ಅದರಂತೆ ನಾವು ದಿನನಿತ್ಯದ ಜನರೊಂದಿಗೆ ಸಾಧ್ಯವಾದಷ್ಟು ಸಾಮರಸ್ಯವನ್ನು ಹೊಂದಬೇಕು. ವಸ್ತುತಃ ನೀವು ಏನನ್ನೂ ಕಳೆದುಕೊಳ್ಳುವ ಅವಶ್ಯಕತೆಯಿಲ್ಲ. ಆದರೆ ಇದೇ ಭೌತಿಕ ಪರಿಸರದಲ್ಲಿ ನೀವು ನಿಮ್ಮ ಆತ್ಮಪ್ರಕೃತಿಯನ್ನು ಉನ್ನತಗೊಳಿಸಬೇಕು. ಅದಕ್ಕಾಗಿ ಇದು ಪ್ರಶಸ್ತವಾದುದು. ನಮ್ಮ ಅಭ್ಯಾಸದ ಶಾಲೆಯು ಒಬ್ಬನು ಖುಷಿಯಾಗದೆ ಜನರ ನಡುವೆಯೇ ಅಭ್ಯಾಸ ಮಾಡಲು ಹೇಳಿಕೊಡುತ್ತದೆಯಾದ್ದರಿಂದ ಹೆಚ್ಚು ಪ್ರಶಸ್ತವಾಗಿದೆ. ಇದೂ ಸಹ ಹೆಚ್ಚು ಕಷ್ಟವಾದುದೇಕೆಂದರೆ ಇದರಲ್ಲಿ ಜನರ ಸಂಕೀರ್ಣವಾದ ಪರಿಸರದಲ್ಲಿ ಒಬ್ಬನು ಸಾಧನೆಯ ಅಭ್ಯಾಸವನ್ನು ಮಾಡಬೇಕಾಗುತ್ತದೆ. ಒಬ್ಬ ತನಗೆ ತಾನೆ ಗಾಂಗನ್ನು ಪಡೆಯಲು ಇದು ಶಕ್ತಗೊಳಿಸುತ್ತದೆಯಾದ್ದರಿಂದ ಅದು ಒಳ್ಳೆಯದೂ ಹೌದು. ನಮ್ಮ ಅಭ್ಯಾಸದ ಶಾಲೆಯಲ್ಲಿ ತುಂಬಾ ನಿರ್ಧಾರಕವಾದ ಅಂಶವಿದು. ಅದನ್ನು ನಾನಿವತ್ತು ಎಲ್ಲರಿಗೂ ಬಹಿರಂಗಪಡಿಸಿದ್ದೇನೆ. ಪ್ರಧಾನ ಚೈತನ್ಯವು ಗಾಂಗನ್ನು ಹೊಂದಿದಾಗ, ಸಹಾಯಕ ಚೈತನ್ಯವೂ ಅದನ್ನು ಹೊಂದುತ್ತದೆ. ಯಾಕಿದು? ನಿಮ್ಮ ದೇಹದಲ್ಲಿರುವ ಎಲ್ಲಾ ಸಂದೇಶಗಳು, ಜೀವಂತ ಅಂಗಗಳು ಮತ್ತು ಜೀವಕಣಗಳು ಗಾಂಗನ್ನು ಹೊಂದುತ್ತಿರುವಾಗ, ಸಹಾಯಕ ಚೈತನ್ಯವೂ ನಿಶ್ಚಿತವಾಗಿ ಗಾಂಗನ್ನು ಚೆನ್ನಾಗಿ ಪಡೆದುಕೊಳ್ಳುತ್ತಿರುತ್ತದೆ. ಹೇಗಿದ್ದರೂ ಅದರ ಗಾಂಗ್‌ನ ಹಂತವು ನಿಮ್ಮಲ್ಲಿರುವುದಕ್ಕಿಂತ ಯಾವ ಸಮಯದಲ್ಲಿಯೂ ಹೆಚ್ಚಾಗುವುದಿಲ್ಲ. ಅದು 'ಫಾ' ರಕ್ಷಕನಾದಾಗ ನೀವೇ ಮಾಸ್ಟರ್.

ಅಭ್ಯಾಸದಲ್ಲಿ ಮುಂದಿನ ಹಂತಗಳನ್ನು ತಲುಪುವುದಕ್ಕೆ ಯಾವಾಗಲೂ ಪ್ರಯತ್ನಿಸುವ ಹಲವು ಜನ, ವಿದ್ಯಾರ್ಥಿ ಸಮುದಾಯದಲ್ಲಿದ್ದಾರೆ. ಆದ್ದರಿಂದ ನಾನು ಇದನ್ನು ಸೇರಿಸಲು ಬಯಸುತ್ತೇನೆ. ಅವರು ಎಲ್ಲ ಕಡೆ ಪ್ರಯಾಣ ಮಾಡುತ್ತಾರೆ ಮತ್ತು ಹೆಚ್ಚು ಹಣ ಖರ್ಚು ಮಾಡುತ್ತಾರೆ. ಅವರು ದೇಶವೆಲ್ಲ ಸುತ್ತಿದ ಮೇಲೂ ಸುಪ್ರಸಿದ್ಧವಾದ ಗುರುವನ್ನು ಗುರುತಿಸಿಕೊಳ್ಳುವುದಿಲ್ಲ. ಸುಪ್ರಸಿದ್ಧರಾದವರೆಂದರೆ, ಯಾವನು ನಿಜವಾಗಿ ಸಂಗತಿಗಳನ್ನು ಚೆನ್ನಾಗಿ ಅರಿತಿದ್ದಾನೋ ಅವನು. ಕೊನೆಯಲ್ಲಿ ಇಂತಹ ಜನರು ಹೆಚ್ಚು ಖರ್ಚು ಮಾಡುತ್ತಾ, ಏನಕ್ಕೂ ಪ್ರಯತ್ನಿಸದೆ ಹಿಂದೆ ಮುಂದೆ ಓಡಾಡುತ್ತಾರೆ. ಇವತ್ತು ನಾವು ಅತ್ಯುನ್ನತವಾದ ಅಭ್ಯಾಸವನ್ನು ನಿಮಗಾಗಿ ಪ್ರಚಾರ ಮಾಡಿದ್ದೇವೆ. ನಾನು ಈಗಾಗಲೇ ಅದನ್ನು ನಿಮ್ಮ ಮನೆಯವರೆಗೆ ತಂದಿದ್ದೇನೆ. ಅದು ನಿಮಗಿಂತ ಮೇಲಿರುತ್ತದೆ. ಹೇಗಾದರೂ ನೀವೂ ನಿಮ್ಮ ಸಾಧನೆಯನ್ನು ಮುಂದುವರಿಸಬಹುದು. ನೀವೇನಾದರೂ ಮಾಡದಿದ್ದರೆ, ಇವತ್ತಿನಿಂದ ಸಾಧನೆಯ ಅಭ್ಯಾಸ ಮಾಡುವುದರ ಬಗ್ಗೆ ಮರೆತುಬಿಡಿ. ನಿಮ್ಮನ್ನು ಮೋಸ ಮಾಡುವ ದೆವ್ವಗಳನ್ನು ಬಿಟ್ಟರೆ, ಇನ್ನಾರೂ ನಿಮಗೆ ಬೋಧಿಸಲಾರರು. ಭವಿಷ್ಯದಲ್ಲಿ ನೀವು ಅಭ್ಯಾಸ ಮಾಡುವುದಕ್ಕೇ ಅನರ್ಹರಾಗುತ್ತೀರಿ. ನಾನೇ ನಿಮ್ಮನ್ನು ಕಾಪಾಡದಿದ್ದರೆ, ಇನ್ನಾರೂ ಕಾಪಾಡಲಾರರು. ಸಂಗತಿಯೇನೆಂದರೆ, ನಿಮಗೆ ಸಂಪ್ರದಾಯಬದ್ಧವಾಗಿ 'ಫಾ' ಬೋಧಿಸುವ ಒಬ್ಬ ಗುರುವನ್ನು ಹುಡುಕುವುದೂ, ಸ್ವರ್ಗಕ್ಕೆ ಹತ್ತುವುದಕ್ಕಿಂತ ಕಷ್ಟವಾಗಬಹುದು. ಅದರ ಬಗ್ಗೆ ಆಸಕ್ತಿಯಿರುವವನೂ ಅಲ್ಲಿರುವುದಿಲ್ಲ. ಧರ್ಮದ

ಕೊನೆಯ ಅವಧಿಯಲ್ಲಿ, ಉನ್ನತ ಹಂತಗಳೂ ವಿನಾಶದ ಕೊನೆಯಲ್ಲಿರುತ್ತವೆ. ಯಾವನೂ ದಿನನಿತ್ಯದ ಜನರ ಕ್ಷೇಮವನ್ನು ಹೊತ್ತುಕೊಳ್ಳುವುದಿಲ್ಲ. ಇದು ಹೆಚ್ಚು ಸಮರ್ಥವಾದ ಅಭ್ಯಾಸದ ಶಾಲೆ. ವಿಶ್ವದ ಲಕ್ಷಣಗಳಿಗೆ ಅನುಗುಣವಾಗಿ ನೇರವಾಗಿ ಅದು ಅಭ್ಯಾಸ ಮಾಡಿಸುತ್ತದೆ. ಅದು ತುಂಬ ಶೀಘ್ರ, ಹೆಚ್ಚು ನೇರವಾದ ದಾರಿ, ಒಬ್ಬನ ಹೃದಯವನ್ನು ಅಮೂಲ್ಯವೆಂದು ಗುರಿಯಿಡುತ್ತದೆ.

## ಸ್ವರ್ಗೀಯ ಪ್ರದಕ್ಷಿಣೆಯ ಪಥ

ತಾವೋ ತತ್ವದಲ್ಲಿ ಉನ್ನತ ಮತ್ತು ಸಾಧಾರಣ ಸ್ವರ್ಗೀಯ ಪ್ರದಕ್ಷಿಣೆಗಳನ್ನು ಬೋಧಿಸಲಾಗುತ್ತದೆ. 'ಸ್ವರ್ಗೀಯ ಪ್ರದಕ್ಷಿಣೆ' ಎಂದರೇನು ಎಂಬುದನ್ನು ನಾವು ವಿವರಿಸುತ್ತೇವೆ. ರೆನ್ ಮತ್ತು ಡ್ಯು ಎನ್ನುವ ಎರಡು ಶಕ್ತಿ ಪ್ರವಾಹಗಳನ್ನು ಜೋಡಿಸಿದಾಗ ಸ್ವರ್ಗೀಯ ಪ್ರದಕ್ಷಿಣೆಯಾಗುತ್ತದೆ. ಈ ಸ್ವರ್ಗೀಯ ಪ್ರದಕ್ಷಿಣೆಯು ದೇಹದೊಳಗಿನ ಒಂದು, ಏನಕ್ಕೂ ಪರಿಗಣಿತವಾಗದ, ಆದರೆ ಉಪಶಮನಕ್ಕೆ ಮತ್ತು ಸದೃಢತೆಗೆ ಒದಗುವ ಸ್ವರ್ಗೀಯ ಪ್ರದಕ್ಷಿಣೆ. ಇದನ್ನು ಸಾಧಾರಣ ಸ್ವರ್ಗೀಯ ಪ್ರದಕ್ಷಿಣೆ ಎಂದೂ ಕರೆಯಲಾಗುತ್ತದೆ. ಮತ್ತೊಂದು ಸ್ವರ್ಗೀಯ ಪ್ರದಕ್ಷಿಣೆಯು ಧ್ಯಾನಸ್ಥ ಸ್ಥಿತಿಯಲ್ಲಿ ಸಾಧನೆಯನ್ನು ಅಭ್ಯಾಸ ಮಾಡುವುದಕ್ಕೆ ಇರುವ ಒಂದು ರೀತಿಯ ಪ್ರದಕ್ಷಿಣೆಯಾಗಿರುತ್ತದೆ. ಅದು ಒಬ್ಬನ ದೇಹದೊಳಗೆ ಪ್ರಾರಂಭವಾಗುತ್ತ, ನಿವಾನ್‌ನ ಎಲ್ಲ ಕಡೆಗೂ ಹೋಗಿ, ಡಾಂಟಿಯನ್ನನಿಗೆ ಒಂದು ಅಂತರದಲ್ಲಿ ಸುತ್ತುತ್ತದೆ ಮತ್ತು ಚಲಿಸುತ್ತದೆ. ಅದು ಒಂದು ಅಂತರ್ ಪ್ರಸರಣೆಯಾಗಿರುತ್ತದೆ. ಇದು ಧ್ಯಾನಸ್ಥ ಸ್ಥಿತಿಯಲ್ಲಿ ಸಾಧನೆಯನ್ನು ಅಭ್ಯಾಸ ಮಾಡುವುದಕ್ಕೆ ನಿಜವಾದ ಸ್ವರ್ಗೀಯ ಪ್ರದಕ್ಷಿಣೆ. ಇದು ರೂಪುಗೊಂಡ ಮೇಲೆ, ಯಾವುದು ನೂರಾರು ಶಕ್ತಿ ಪ್ರವಾಹಗಳನ್ನು ಒಂದು ಶಕ್ತಿ ಪ್ರವಾಹದ ಮೂಲಕ ಚಲಿಸುವಂತೆ ಮಾಡುತ್ತದೆಯೋ, ಅಂತೆಯೇ ಮಿಕ್ಕೆಲ್ಲ ಶಕ್ತಿಯ ಪ್ರವಾಹಗಳನ್ನು ತೆರೆಯುತ್ತದೆಯೋ, ಅಂತಹ ಒಂದು ಪ್ರಬಲವಾದ ಶಕ್ತಿಯಾಗಿ–ಪ್ರವಾಹವಾಗಿ ರೂಪುಗೊಳ್ಳುತ್ತದೆ. ತಾವೋ ಪಂಥವು ಸ್ವರ್ಗೀಯ ಪ್ರದಕ್ಷಿಣೆಯನ್ನು ಬೋಧಿಸುತ್ತದೆ. ಆದರೆ ಬೌದ್ಧಧರ್ಮವು ಬೋಧಿಸುವುದಿಲ್ಲ. ಬೌದ್ಧಧರ್ಮ ಏನನ್ನು ಬೋಧಿಸುತ್ತದೆ? ಶಾಕ್ಯಮುನಿಯು ತನ್ನ ಧರ್ಮವನ್ನು ಬೋಧಿಸಿದಾಗ ವ್ಯಾಯಾಮದ ಅಭ್ಯಾಸಗಳನ್ನು ವಿವರಿಸಲಿಲ್ಲ ಮತ್ತು ಬೋಧಿಸಲಿಲ್ಲ. ಆದಾಗ್ಯೂ ಅವನ ಅಭ್ಯಾಸವು ಅವನದೇ ಸ್ವಂತ ರೂಪದಲ್ಲಿ ಅವನ ಸಾಧನಾ ಪದ್ಧತಿಯಲ್ಲಿದೆ. ಶಕ್ತಿಯ ಪ್ರವಾಹವು ಬೌದ್ಧಧರ್ಮದಲ್ಲಿ ಹೇಗೆ ಚಲಿಸುತ್ತದೆ? ಇದು ಬಯ್‌ಹುಯಿ ಕೇಂದ್ರದಲ್ಲಿ ಪ್ರಾರಂಭವಾಗಿ ಮುಂದೆ ಸಾಗುತ್ತದೆ. ಒಬ್ಬನ ತಲೆಯಲ್ಲಿ ಪ್ರಾರಂಭವಾಗಿ ಪಾದದವರೆಗೆ ಅದು ವೃದ್ಧಿಗೊಂಡ ಮೇಲೆ, ಕೊನೆಗೆ ಅದು ಕ್ರಮದಂತೆ ನೂರಾರು ಶಕ್ತಿ ಪ್ರವಾಹಗಳ ಚಲನೆಯನ್ನು ನಿಯಂತ್ರಿಸುತ್ತದೆ ಮತ್ತು ಅವನ್ನು ಮೇಲಕ್ಕೆ ತೆರೆಯುತ್ತದೆ.

ತಾಂತ್ರಿಕ ಧರ್ಮದಲ್ಲಿನ ಕೇಂದ್ರೀಯ ಶಕ್ತಿ ಪ್ರವಾಹವೂ ಈ ಉದ್ದೇಶಕ್ಕಾಗಿಯೇ ಬಳಕೆಯಾಗುತ್ತದೆ. ಯಾರೋ ಹೇಳಿದರು– "ಅಲ್ಲಿ ಕೇಂದ್ರೀಯ ಶಕ್ತಿ ಪ್ರವಾಹವೇ ಇಲ್ಲ. ಆದರೂ ಏಕೆ ತಾಂತ್ರಿಕ ಧರ್ಮವು ಈ ಕೇಂದ್ರೀಯ ಶಕ್ತಿ ಪ್ರವಾಹವನ್ನು ಅಭಿವೃದ್ಧಿಪಡಿಸಿತು? ಯಾವಾಗ ಎಲ್ಲಾ ಶಕ್ತಿ ಪ್ರವಾಹಗಳು ಮಾನವನ ದೇಹದಲ್ಲಿ ಒಂದಕ್ಕೊಂದು ಸೇರುತ್ತವೆಯೋ, ಅವುಗಳೆಲ್ಲ ಹತ್ತಾರು ಸಾವಿರ ಸಂಖ್ಯೆಯಲ್ಲಾಗುತ್ತವೆ. ಅವುಗಳ ಸಮತಲವಾಗಿ ಮತ್ತು ಲಂಬವಾಗಿ ಒಂದಕ್ಕೊಂದು ಭೇದಿಸುತ್ತವೆ ಮತ್ತು ಅವು ರಕ್ತಕಣಗಳಿಗಿಂತ ಹೆಚ್ಚಾಗೇ ಇರುತ್ತವೆ. ಅಲ್ಲಿ ಆಂತರಿಕ ಭಾಗಗಳ ನಡುವೆ ರಕ್ತಕಣಗಳಿರುವುದಿಲ್ಲ, ಶಕ್ತಿ ಪ್ರವಾಹಗಳಿರುತ್ತವೆ. ಅವುಗಳೇ ವ್ಯಕ್ತಿಯ ತಲೆಯಿಂದ ದೇಹದ ಎಲ್ಲ ಭಾಗಗಳವರೆಗೆ ಲಂಬಾತ್ಮಕವಾಗಿ ಮತ್ತು ಸಮತಲಾತ್ಮಕವಾಗಿ ಸಂಬಂಧಗಳನ್ನು ಬೆಸೆಯುತ್ತವೆ. ಆದಾಗ್ಯು ಅವು ನೇರವಾಗಿರುವುದಿಲ್ಲ ಮತ್ತು ಅವುಗಳೆಲ್ಲ ಸಂಪರ್ಕಕ್ಕಾಗಿ ತೆರೆದುಕೊಂಡಿರುತ್ತವೆ. ಅವುಗಳೆಲ್ಲ ನಂತರದಲ್ಲಿ ಕ್ರಮೇಣ ವಿಸ್ತರಿಸಿಕೊಂಡು, ನಿಧಾನಕ್ಕೆ ನೇರ ಶಕ್ತಿ ಪ್ರವಾಹವನ್ನೇ ರೂಪಿಸುತ್ತವೆ. ಹೀಗೆ ರೂಪುಗೊಂಡ ಶಕ್ತಿ ಪ್ರವಾಹವು, ಅದು ತಾನೇ ತಾನಾಗಿ ಸುತ್ತುತ್ತ ಹಲವು ಕಾಲ್ಪನಿಕ ಚಕ್ರಗಳನ್ನು ಸಮಾನಾಂತರ ಸುತ್ತುಗಳಲ್ಲಿ ಸುತ್ತುವುದಕ್ಕೆ ಉತ್ತೇಜಿಸುತ್ತದೆ. ಅದರ ಗುರಿಯು ದೇಹದಲ್ಲಿರುವ ಎಲ್ಲ ಶಕ್ತಿ ಪ್ರವಾಹಗಳನ್ನು ಹೊರತರುವುದಾಗಿರುತ್ತದೆ.

ನಮ್ಮ ಫಾ ದಫಾದಲ್ಲಿ ಸಾಧಿತ ಅಭ್ಯಾಸವು, ಒಂದು ಶಕ್ತಿ ಪ್ರವಾಹವು ನೂರಾರು ಶಕ್ತಿ ಪ್ರವಾಹಗಳನ್ನು ಚಾಲನೆಗೆ ತರುವ ಈ ರೀತಿಯನ್ನು ತಡೆಯುತ್ತದೆ. ಅತೀ ಪ್ರಾರಂಭದಿಂದಲೇ

ನಾವು, ನೂರಾರು ಶಕ್ತಿ ಪ್ರವಾಹಗಳನ್ನು ಹೊರತಂದು, ಒಂದೇ ರೀತಿಯ ಪುನರಾವೃತ್ತಿಗೆ ಒಳಪಡಿಸುವುದನ್ನು ಗಳಿಸಿದ್ದೇವೆ. ಒಮ್ಮೆಗೇ ನಾವು ಉನ್ನತ ಹಂತದಲ್ಲಿ ಅಭ್ಯಾಸ ಮಾಡುತ್ತೇವೆ ಮತ್ತು ಕೆಳಮಟ್ಟದ ವಸ್ತುಗಳನ್ನು ನಿಯಂತ್ರಿಸುತ್ತೇವೆ. ಕೆಲವು ಜನರಿಗೆ ನೂರಾರು ಶಕ್ತಿಪ್ರವಾಹಗಳನ್ನು ಒಂದು ಶಕ್ತಿಪ್ರವಾಹದಿಂದ ತೆರೆಯುವುದಕ್ಕೆ, ಇಡೀ ಜೀವನವೇ ಸಾಕಾಗದಿರಬಹುದು. ಕೆಲವರು ಹತ್ತಾರು ವರ್ಷ ಅಭ್ಯಾಸ ಮಾಡಬೇಕಾಗುತ್ತದೆ ಮತ್ತು ಅದು ತುಂಬಾ ಕಷ್ಟದಾಯಕವಾದುದು. ಹಲವು ಪದ್ಧತಿಗಳು ಹೇಳುತ್ತವೆ ಸಾಧನೆಯಲ್ಲಿ ಯಶಸ್ವಿಯಾಗುವುದಕ್ಕೆ ಒಂದು ಜೀವಮಾನವೇ ಸಾಲದು. ಅದೇ ಸಮಯಕ್ಕೆ ಅಲ್ಲಿ ಹಲವು ಸಾಧಕರು ಉನ್ನತ ಹಂತದ ಅಭ್ಯಾಸದಲ್ಲಿರುವವರು ತಮ್ಮ ಜೀವಿತವನ್ನೇ ವಿಸ್ತರಿಸಿದ್ದಾರೆ. ಅವರು ಸಾಧನಾ ಜೀವಿತದ ಬಗ್ಗೆ ಮಾತಾಡುತ್ತಿಲ್ಲವೆ? ಯಾವ ಅಭ್ಯಾಸವು ಹೆಚ್ಚು ಸಮಯವನ್ನು ಬಯಸುತ್ತದೋ ಅದಕ್ಕಾಗಿ ಅವರು ತಮ್ಮ ಜೀವಿತವನ್ನು ಸಮರ್ಪಿಸಿದ್ದಾರೆ.

ಸಾಧಾರಣ ಸ್ವರ್ಗೀಯ ಪ್ರದಕ್ಷಿಣೆಯು ಮೂಲತಃ ಉಪಶಮನಕ್ಕೆ ಮತ್ತು ಸದೃಢತೆಗೆ, ಉನ್ನತ ಸ್ವರ್ಗೀಯ ಪ್ರದಕ್ಷಿಣೆಯು ಯಾವಾಗ ಒಬ್ಬನು ನಿಜವಾಗಿ ಸಾಧನೆಯ ಅಭ್ಯಾಸದಲ್ಲಿರುತ್ತಾನೋ ಆಗ ಗಾಂಗನ್ನು ಪಡೆಯುವುದಕ್ಕೆ ಸಹಾಯಕವಾಗಿರುತ್ತದೆ. ತಾವೋ ಶಾಲೆಯು ಮಾಡಿಯೆಂದು ಹೇಳಿರುವ ಉನ್ನತ ಸ್ವರ್ಗೀಯ ಪ್ರದಕ್ಷಿಣೆಯು, ಒಮ್ಮೆಗೇ ನೂರಾರು ಶಕ್ತಿ ಪ್ರವಾಹಗಳನ್ನು ತೆರೆಯುವ ನಮ್ಮದಷ್ಟು ಶಕ್ತಿಯುತವಾಗಿ ಇರುವುದಿಲ್ಲ. ತಾವೋ ಪಂಥದಲ್ಲಿ ಉನ್ನತ ಸ್ವರ್ಗೀಯ ಪ್ರದಕ್ಷಿಣೆಯ ಸುತ್ತುವಿಕೆಯು ಇದನ್ನು ಸೂಚಿಸುತ್ತದೆ: ಹಲವು ಶಕ್ತಿ ಪ್ರವಾಹಗಳು ಒಮ್ಮೆಗೇ ಒಬ್ಬನ ಕೈಯಲ್ಲಿರುವ ಮೂರು ಯಿನ್ ಮತ್ತು ಮೂರು ಯಾಂಗ್ ಪ್ರವಾಹಗಳ ಮೂಲಕ ಅವನ ಪಾದತಲಗಳಿಗೆ, ಕೂದಲಿಗೆ, ಪೂರ್ಣವಾಗಿ ದೇಹಕ್ಕೆ ಸಂಚಾರವಾಗುತ್ತವೆ. ಅದೇ ಚಾಲನೆಯಲ್ಲಿರುವ ಉನ್ನತ ಸ್ವರ್ಗೀಯ ಪ್ರದಕ್ಷಿಣೆ. ಎಲ್ಲಿಯತನಕ ಅದು ಚಾಲನೆಯಲ್ಲಿರುತ್ತದೆ, ಅಲ್ಲಿಯತನಕ ಗಾಂಗ್ ಅಭ್ಯಾಸ ನಡೆಯುತ್ತಿರುತ್ತದೆ. ಕೆಲ ಚೀಗಾಂಗ್ ಬೋಧಕರು ಏನನ್ನು ಕೇವಲ ಉಪಶಮನ ಮತ್ತು ಸದೃಢತೆಗೆ ಬೋಧಿಸುತ್ತಿರುತ್ತಾರೋ ಅದಕ್ಕಾಗಿ ಉನ್ನತ ಸ್ವರ್ಗೀಯ ಪ್ರದಕ್ಷಿಣೆಯನ್ನು ಬೋಧಿಸುವುದಿಲ್ಲ. ಕೆಲವರು ಉನ್ನತ ಸ್ವರ್ಗೀಯ ಪ್ರದಕ್ಷಿಣೆಯ ಬಗ್ಗೆ ಮಾತನಾಡುತ್ತಾರೆ, ಆದರೆ ಅವರು ಏನನ್ನು ನಿಮ್ಮ ದೇಹಕ್ಕೆ ಸೇರಿಸುವುದಿಲ್ಲ ಮತ್ತು ನೀವು ಅದನ್ನು ಸ್ವಂತವಾಗಿ ಹೊರತರಲಾರಿರಿ. ವ್ಯವಸ್ಥೆಯನ್ನು ಅಳವಡಿಸದೆ, ಹೇಗೆ ಅದು ಸುಲಭವಾಗಿ ಅವನ ಬೌದ್ಧಿಕ ಆಶಯದಂತೆ ತೆರೆದುಕೊಳ್ಳಲು ಸಾಧ್ಯ? ಅದು ಸಂಗೀತ ವ್ಯಾಯಾಮ ಮಾಡುವಂತೆ ತೆರೆದುಕೊಳ್ಳಲು ಹೇಗೆ ಸಾಧ್ಯ? ಗಾಂಗ್‌ನ ವರ್ಗಾವಣೆಯು ಗುರುವಿನಿಂದ ಆಗುವಾಗ, ಸಾಧನೆಯು ವ್ಯಕ್ತಿಯ ವೈಯಕ್ತಿಕ ಸಾಮರ್ಥ್ಯವನ್ನು ಅವಲಂಬಿಸಿರುತ್ತದೆ. ಆಂತರಿಕ ಕಾರ್ಯಚಟುವಟಿಕೆ ಆದಮೇಲೆ ಮಾತ್ರ ಪೂರ್ಣವಾಗಿ ನಿಮಗೆ ಗಾಂಗ್ ಕೊಡಲಾಗುತ್ತದೆ.

ಇತಿಹಾಸದುದ್ದಕ್ಕೂ ತಾವೋ ಶಾಲೆಯು ಮನುಷ್ಯ ದೇಹವನ್ನು ಒಂದು ಸಣ್ಣ ವಿಶ್ವವೆಂದು ಪರಿಗಣಿಸಿದೆ. ಹೊರಗಿನ ವಿಶ್ವವು ಅದರ ಒಳಗಿನದಕ್ಕಿಂತ ದೊಡ್ಡದಿರುತ್ತದೆ. ಒಳಗಿರುವಂತೆಯೇ ಅದರ ಹೊರಗಿನ ವಿಶ್ವವೂ ಕಾಣುತ್ತದೆ. ಈ ದೃಷ್ಟಿಕೋನವು ಅತೀಂದ್ರಿಯವಾಗಿದೆ ಮತ್ತು ಸುಲಭಕ್ಕೆ ಅರ್ಥವಾಗುವುದಿಲ್ಲ. ಈ ವಿಶ್ವವು ತುಂಬಾ ದೊಡ್ಡದಿದೆ. ಅದನ್ನು ಹೇಗೆ ಈ ಮನುಷ್ಯ ದೇಹದೊಂದಿಗೆ ಹೋಲಿಸಲು ಸಾಧ್ಯ? ನಾವು ಈ ಅಂಶವನ್ನು ಮುಂದಿಡುತ್ತೇವೆ. ನಮ್ಮ ಪ್ರಸ್ತುತ ಭೌತಶಾಸ್ತ್ರವು ದ್ರವ್ಯಮೂಲವನ್ನು ಕಣಗಳು, ಅಣುಗಳು, ಎಲೆಕ್ಟ್ರಾನ್‌ಗಳು, ಪ್ರೋಟ್ರಾನ್‌ಗಳು ಮತ್ತು ಪೋಷಕಾಂಶಗಳೆಂದು ಅಧ್ಯಯನ ಮಾಡುತ್ತದೆ. ಆದರೆ ಅದಕ್ಕಿಂತ ಕೆಳಗೆ ಯಾವ ಗಾತ್ರದ ವಿಭಜನೆಗಳಿವೆ? ಸೂಕ್ಷ್ಮದರ್ಶಕವೂ ಅದನ್ನು ಗುರುತಿಸಲಾರದು. ಹಾಗಾದರೆ ಅದಕ್ಕಿಂತ ಕೆಳಗೆ ಯಾವ ಸೂಕ್ಷ್ಮಾತಿಸೂಕ್ಷ್ಮ ಭಾಗಗಳಿವೆ? ಅದನ್ನು ತಿಳಿಯುವುದಕ್ಕಾಗಿಲ್ಲ. ನಮ್ಮ ಭೌತಶಾಸ್ತ್ರ ಏನನ್ನು ಗುರುತಿಸಿದೆ ಅದು ಈ ಜಗತ್ತಿನಲ್ಲಿರುವ ತುಂಬಾ ಸೂಕ್ಷ್ಮಾತಿಸೂಕ್ಷ್ಮ ಭಾಗಗಳಿಗಿಂತ ತುಂಬಾ ದೂರದಲ್ಲಿದೆ. ಒಬ್ಬನು ಒಮ್ಮೆ ಮಾಂಸದೇಹವನ್ನು ಹೊಂದದೆ, ದೊಡ್ಡದು ಮಾಡಿ ತೋರಿಸುವ ದೃಷ್ಟಿಯುಳ್ಳ ಕಣ್ಣನ್ನು ಹೊಂದಿದರೆ, ಸೂಕ್ಷ್ಮಾತಿಸೂಕ್ಷ್ಮ ಹಂತವನ್ನು ನೋಡಬಹುದು. ಉನ್ನತ ಹಂತದಲ್ಲಿರುವವನೊಬ್ಬನು ಇದನ್ನು ನೋಡಬಹುದು.

ತನ್ನ ಸಾಮರ್ಥ್ಯದಿಂದ ಶಾಕ್ಯಮುನಿಯು ಮೂವರು ಸಾವಿರ ಜಗತ್ತುಗಳ ಸಿದ್ಧಾಂತವನ್ನು ಹೊರತಂದಿದ್ದಾನೆ. ನಮ್ಮ ಹಾಲುಹಾದಿ–ಗೆಲಾಕ್ಸಿಯಲ್ಲಿರುವ ಈ ಜಗತ್ತುಗಳು ನಮ್ಮಂತೆಯೇ ಇರುವ

ಜನಾಂಗಿಕವಾದ ಮಾಂಸದೇಹಿಗಳಾದವರನ್ನು ಹೊಂದಿವೆ. ಅವನು ಒಂದು ಸಣ್ಣ ಮಣ್ಣಿನ ಕಣದಲ್ಲಿ ಮೂರು ಸಾವಿರ ಜಗತ್ತುಗಳಿರುತ್ತವೆ ಎಂದು ಉದ್ಧರಿಸಿದ್ದಾನೆ ಮತ್ತು ಇದು ನಮ್ಮ ಆಧುನಿಕ ಭೌತಶಾಸ್ತ್ರದಿಂದ ಒಪ್ಪಿತವಾಗಿದೆ. ಎಲೆಕ್ಟ್ರಾನುಗಳು ನ್ಯೂಕ್ಲಿಯರನ್ನು ಸುತ್ತುವುದಕ್ಕೂ ಮತ್ತು ಭೂಮಿ ಸೂರ್ಯನನ್ನು ಸುತ್ತುವುದಕ್ಕೂ ಏನು ವ್ಯತ್ಯಾಸವಿದೆ? ಶಾಕ್ಯಮುನಿಯು ಸೂಕ್ಷ್ಮಾತಿಸೂಕ್ಷ್ಮ ಹಂತದಲ್ಲಿ ಹೇಳಿದ್ದಾನೆ– ಮಣ್ಣಿನ ಕಣವೊಂದು ಮೂರು ಸಾವಿರ ಜಗತ್ತುಗಳನ್ನು ಒಳಗೊಂಡಿರುತ್ತದೆ. ಅದೂ ಸಹ ಜೀವ ಮತ್ತು ಅಜೀವ ವಸ್ತುಗಳನ್ನು ಹೊಂದಿರುವ ಒಂದು ವಿಶ್ವದಂತೆಯೇ. ಅದು ಸತ್ಯವಾದರೆ, ಅದರ ಬಗ್ಗೆ ಯೋಚಿಸಿ: ಆ ಮಣ್ಣಿನ ಕಣದ ವಿಶ್ವದಲ್ಲಿ ಮಣ್ಣಿದ್ದರೆ? ಆ ಮಣ್ಣಿನ ಕಣದಿಂದ ಆ ಮಣ್ಣಿನಲ್ಲಿ ಮೂರು ಸಾವಿರ ಜಗತ್ತುಗಳಿರುತ್ತವೆಯೇ? ನಂತರ ಅಲ್ಲಿ ಮೂರು ಸಾವಿರ ಜಗತ್ತುಗಳಲ್ಲಿ ಮಣ್ಣಿದ್ದರೆ, ಆ ಮಣ್ಣಿನಲ್ಲಿ ಮಣ್ಣಿದ್ದರೆ? ಹೀಗೆಯೇ ಶೋಧನೆಗೆ ತಳಾತಳಕ್ಕೆ ಮುಂದುವರಿದರೆ, ಅದು ಅನಂತವಾಗಿರುತ್ತದೆ. ತಥಾಗತನಾಗಿ ಶಾಕ್ಯಮುನಿ ಈ ವ್ಯಾಖ್ಯಾನ ಮಾಡಿದನು– "ಬಯಲಾಗದೆ ಅದು ಅಪರಿಮಿತ, ಆಂತರಿಕವಾಗಿದೆ ಅದು ಚಿಕ್ಕದು." ಅದು ತುಂಬಾ ಅಪರಿಮಿತವಾದ್ದರಿಂದ ಅವನು ವಿಶ್ವದ ಪರಿಧಿಯನ್ನು ನೋಡಲಾರ, ಅಂತೆಯೇ ತುಂಬಾ ಚಿಕ್ಕದಿರುವುದರಿಂದ ಅವನು ಸೂಕ್ಷ್ಮಾತಿಸೂಕ್ಷ್ಮ ಭಾಗಗಳನ್ನು ಕಂಡುಹಿಡಿಯಲಾರ.

ಒಬ್ಬನು ಚೀಗಾಂಗ್ ಬೋಧಕನು ಹೇಳುತ್ತಾನೆ– ಬೆವರಿನ ರಂಧ್ರದಲ್ಲಿ ಚಲಿಸುವ ಕಾರು ಮತ್ತು ರೈಲುಗಳನ್ನೊಳಗೊಂಡ ಒಂದು ನಗರವಿದೆ. ಅದು ಹೆಚ್ಚು ಅತೀಂದ್ರಿಯವಾದದ್ದನ್ನು ಧ್ವನಿಸುತ್ತದೆ. ಆದರೆ ನಾವು ಈ ವ್ಯಾಖ್ಯಾನವನ್ನು ನಿಜವಾಗಿ ಅರ್ಥಮಾಡಿಕೊಂಡರೆ, ಅದು ಅತೀಂದ್ರಿಯವಾದುದಲ್ಲವೆಂದು ತಿಳಿಯುತ್ತದೆ ಮತ್ತು ವೈಜ್ಞಾನಿಕ ದೃಷ್ಟಿಕೋನದಲ್ಲಿ ಅದನ್ನು ಅಧ್ಯಯನ ಮಾಡಬಹುದು. ಮತ್ತೊಂದು ದಿನ ದಿವ್ಯದೃಷ್ಟಿಯನ್ನು ತೆರೆಯುವುದರ ಬಗ್ಗೆ ನಾನು ಹೇಳುತ್ತಿದ್ದ ಸಮಯದಲ್ಲಿ, ಬಹಳಷ್ಟು ಜನರು ತಮ್ಮ ದಿವ್ಯದೃಷ್ಟಿಯನ್ನು ತೆರೆಯುವಾಗ ಈ ಪರಿಸ್ಥಿತಿಯನ್ನು ಗಮನಿಸಿಕೊಂಡರು: ಅವರೆಲ್ಲ ಸುರಂಗ ಮಾರ್ಗವೊಂದರಲ್ಲಿ ಸ್ಪರ್ಧಿಸುತ್ತ ಹೋಗುತ್ತಿರುವಂತೆ ಅವರ ಹಣೆಯಲ್ಲಿ ಅನ್ನಿಸುತ್ತಿತ್ತು. ಆದರೆ ಅವರೆಲ್ಲ ಅದರ ಕೊನೆ ಮುಟ್ಟಲಿಲ್ಲ. ಪ್ರತಿದಿನ ಅವರೆಲ್ಲರ ಅಭ್ಯಾಸದ ಸಂದರ್ಭದಲ್ಲಿ, ಅವರೆಲ್ಲ ಈ ದೊಡ್ಡ ರಸ್ತೆಯಲ್ಲಿ ಸ್ಪರ್ಧೆಗೆ ಬಿದ್ದಂತೆ ಎರಡೂ ಕಡೆ ಬೆಟ್ಟಗಳೂ, ನದಿಗಳೂ ಇರುವಂತೆ ಅನುಭವಗೊಳ್ಳುತ್ತಿದ್ದರು. ಓಡುತ್ತಿರುವಾಗ ಅವರು ನಗರಗಳನ್ನು ದಾಟಿ ಹೋಗಿ, ಹೆಚ್ಚು ಜನರನ್ನು ನೋಡಿದರು ಮತ್ತು ಅವರೆಲ್ಲ ಅದನ್ನು ಭ್ರಮೆಯೆಂದು ತಿಳಿದರು. ಹೆಚ್ಚು ಸ್ಪಷ್ಟವಾಗಿ ಮತ್ತು ಭ್ರಮೆಯಿಲ್ಲದ ಅದು ಏನು? ನಾನು ಹೇಳುತ್ತೇನೆ. ಒಬ್ಬನ ದೇಹವು ಸೂಕ್ಷ್ಮಾತಿಸೂಕ್ಷ್ಮ ಹಂತವನ್ನು ತಲುಪಿದ್ದರೆ, ಅದು ಭ್ರಮೆಯಲ್ಲ. ಈ ಕಾರಣದಿಂದಲೇ ತಾವೋ ಪಂಥವು ಮನುಷ್ಯ ದೇಹವನ್ನು ಒಂದು ವಿಶ್ವವೆಂದು ಯಾವಾಗಲೂ ಪರಿಗಣಿಸಿದೆ. ನಿಶ್ಚಯವಾಗಿ ಅದು ವಿಶ್ವವೇ ಆಗಿದ್ದರೆ, ಹಣೆಯಿಂದ ಆ ಯಾತನಾಮಯ ದೇಹದವರೆಗಿನ ದೂರವು 108 ಸಾವಿರ 'ಲಿ'ಗಿಂತ ಹೆಚ್ಚು ದೂರವಿರುತ್ತದೆ. ನೀವು ಹೊರಗೆ ಹೋಗುವುದಕ್ಕೆ ಶಕ್ತಿ ಹೊಂದಿದರೆ, ಅದು ರಿಮೋಟಿನ ದೂರವಷ್ಟೇ.

ಉನ್ನತ ಸ್ವರ್ಗೀಯ ಪ್ರದಕ್ಷಿಣೆಯು ಸಾಧನೆಯ ಅಭ್ಯಾಸದ ಅವಧಿಯಲ್ಲಿ ಪೂರ್ಣವಾಗಿ ತೆರೆದುಕೊಂಡರೆ, ಅದು ಅಭ್ಯಾಸಿಗೆ ಅಸಾಮಾನ್ಯ ಸಾಮರ್ಥ್ಯವನ್ನು ತಂದುಕೊಡುತ್ತದೆ. ಅಸಾಮಾನ್ಯ ಸಾಮರ್ಥ್ಯವೆಂದರೇನು? ನೀವು ತಿಳಿದಿದ್ದೀರಿ. ಉನ್ನತ ಸ್ವರ್ಗೀಯ ಪ್ರದಕ್ಷಿಣೆಯನ್ನು 'ಮೆರಿಡಿಯನ್ ಸ್ವರ್ಗೀಯ ಪ್ರದಕ್ಷಿಣೆ', 'ಸ್ವರ್ಗ ಮತ್ತು ಭೂಮಿ ಸುತ್ತು' ಎಂದೂ ಕರೆಯುತ್ತಾರೆ. ತೀರಾ ಕೆಳಹಂತದಲ್ಲಿ ಸ್ವರ್ಗೀಯ ಪ್ರದಕ್ಷಿಣೆಯ ಸುತ್ತುವಿಕೆ ಒಂದು ಶಕ್ತಿ ಪ್ರವಾಹವನ್ನು ಉಂಟು ಮಾಡುತ್ತದೆ, ಯಾವುದು ಮುಂದೆ ಹೆಚ್ಚು ಸಾಂದ್ರೀಕರಣವಾಗುತ್ತದೆಯೋ ಅದು ಉನ್ನತ ಹಂತಕ್ಕೆ ವರ್ಗಾವಣೆಗೊಳ್ಳುತ್ತ, ದೊಡ್ಡದಾದ ಹೆಚ್ಚಿನ ಸಾಂದ್ರತೆಯುಳ್ಳ ಶಕ್ತಿ ಒಂದು ಕಡೆ ಸೇರುತ್ತದೆ. ಈ ಶಕ್ತಿಯ ಪಟ್ಟಿಯು ಸುತ್ತುವ ಚಲನೆಯನ್ನು ಹೊಂದಿರುತ್ತದೆ. ಅದರ ಸುತ್ತುವಿಕೆಯಲ್ಲಿ, ನಾವು ಕಡಿಮೆ ದಿವ್ಯದೃಷ್ಟಿಯಿಂದಲೇ, ಅದು ಒಬ್ಬನ ದೇಹದೊಳಗಿನ ಸ್ಥಳಗಳಿಗೆ ಪ್ರಭೆಯನ್ನು ಬದಲಾವಣೆ ಮಾಡುವುದನ್ನು ಗುರುತಿಸಬಹುದು. ಅಲ್ಲಿ ಹೃದಯದಿಂದ ಬಂದ ಪ್ರಭೆ ದೇಹದ ಒಳಗೆ ಚಲಿಸುತ್ತಿರಬಹುದು ಅಥವಾ ಯಕೃತ್ತಿನಿಂದ ಬಂದ ಪ್ರಭೆ ಹೊಟ್ಟೆಯೊಳಗೆ ಸಂಚರಿಸುತ್ತಿರಬಹುದು. ಸೂಕ್ಷ್ಮವಾದ ಹಂತದಲ್ಲಿ, ಅದು ಏನು ಸಾಗಿಸುತ್ತದೋ ಅದನ್ನು ದೊಡ್ಡದಾಗಿ ನೋಡಬಹುದು. ಒಂದು ವೇಳೆ ಈ ಶಕ್ತಿ ಪಟ್ಟಿಯನ್ನು ಒಬ್ಬನ ದೇಹದಿಂದ ಹೊರಬರಿಸಿದರೆ, ಅದು ದೂರಸಂಪರ್ಕದ

ಶಕ್ತಿ ಹೊಂದಿರುತ್ತದೆ. ಹೆಚ್ಚು ಶಕ್ತಿಯುತವಾದ ಗಾಂಗ್ ಜೊತೆಗೆ ಒಬ್ಬನು ದೊಡ್ಡದೊಂದನ್ನು ಕಳುಹಿಸಬಹುದು. ಇದನ್ನೇ ಉನ್ನತ ದೂರಸಂಪರ್ಕ ವ್ಯವಸ್ಥೆ ಎನ್ನಲಾಗುತ್ತದೆ. ಒಬ್ಬನು ಕಡಿಮೆ ಶಕ್ತಿಯುಳ್ಳ ಗಾಂಗ್‌ನ ಸಹಾಯದಿಂದ ಕಡಿಮೆಯಾದದ್ದನ್ನು ಕಳುಹಿಸಬಹುದು ಮತ್ತು ಅದು ಕಡಿಮೆ ದೂರಸಂಪರ್ಕ ವ್ಯವಸ್ಥೆಯೆನಿಸುತ್ತದೆ. ಇವುಗಳು ದೂರಸಂಪರ್ಕದ ವಿಧಗಳು ಮತ್ತು ಪೀಳಿಗೆಗಳಾಗಿವೆ.

ಗಾಂಗನ್ನು ಕಲಿಯುವುದರಲ್ಲಿ ಉನ್ನತ ಸ್ವರ್ಗೀಯ ಪ್ರದಕ್ಷಿಣೆಯು ನೇರವಾಗಿ ಭಾಗಿಯಾಗುತ್ತದೆ. ಹೀಗೆಯೇ ಅದು ಭಿನ್ನ ಪರಿಸ್ಥಿತಿ ಮತ್ತು ಭಿನ್ನ ಗಾಂಗ್‌ಗಳಾಗುವಂತೆ ಮಾಡುತ್ತದೆ. ಅದು ನಮ್ಮನ್ನು ಹೊಸದೊಂದು ಹಂತಕ್ಕೂ ಕರೆದುಕೊಂಡು ಹೋಗಬಹುದು. ಅದು ಯಾವ ಹಂತ? ಎಲ್ಲರೂ ಒಂದು ವೇಳೆ ಈ ನಾಣ್ಣುಡಿಯನ್ನು 'A Biography of Immortals', `Dan Jing', `Tao Zang' ಅಥವಾ `Singming Guizi'ನಂತಹ ಪುರಾತನ ಪುಸ್ತಕಗಳಲ್ಲಿ 'ಹಗಲಿನ ಸ್ಪಷ್ಟ ಬೆಳಕಿನಲ್ಲಿ ತೇಲಾಡುವುದು' ಎಂಬುದನ್ನು ಓದಿರಬಹುದು. ಅದರರ್ಥ ಒಬ್ಬ ವ್ಯಕ್ತಿ ಹಗಲಿನ ಸ್ಪಷ್ಟ ಬೆಳಕಿನಲ್ಲಿ ತೇಲಬಹುದು ಅಂತಲೇ? ಹೌದು. ನನಗೆ ಹೇಳಲು ಬಿಡಿ. ಒಬ್ಬ ವ್ಯಕ್ತಿ ಹಗಲಿನ ಸ್ಪಷ್ಟ ಬೆಳಕಿನಲ್ಲಿ ಉನ್ನತ ಸ್ವರ್ಗೀಯ ಪ್ರದಕ್ಷಿಣೆಯು ತೆರೆದುಕೊಂಡಾಗ ತೇಲಬಹುದು. ಅದು ತುಂಬಾ ಸಾಧಾರಣವಾದುದು. ಕೆಲವರು ಯೋಚಿಸಬಹುದು. ಹಲವು ವರ್ಷ ಮಾಡಿದ ಮೇಲೆ ಪ್ರದಕ್ಷಿಣೆಯು ಹೆಚ್ಚಿನವರಲ್ಲಿ ಕೆಲವರಿಗೆ ಮಾತ್ರ ತೆರೆದುಕೊಂಡಿರಬಹುದು. ನಾನು ಈಗಲೂ ಹೇಳುತ್ತೇನೆ– ಈ ಹಂತವನ್ನು ತಲುಪುವುದಕ್ಕೆ ಸಾವಿರಾರು ಮಂದಿಗೆ ಅತೀಂದ್ರಿಯವೇನಲ್ಲ. ಏಕೆಂದರೆ ಇದು ಸಾಧನೆಯ ಅಭ್ಯಾಸದ ಮೊದಲು ಹಂತವೇ ಆಗಿದೆ.

ಇಂತಹ ಜನರು ತೇಲುವುದನ್ನು ಏಕೆ ಯಾವನೂ ನೋಡಿಲ್ಲ? ಸಾಮಾನ್ಯ ಜನಸಮುದಾಯದ ಸ್ಥಿತಿಯನ್ನು ಯಾರೂ ಕದಡಬಾರದು, ಕದಡಿದರೆ ಸಾಮಾನ್ಯ ಜನಸಮುದಾಯದ ವ್ಯವಸ್ಥೆಯೂ ಕದಡುತ್ತದೆ. ಎಲ್ಲರಿಗೂ ಗಾಳಿಯಲ್ಲಿ ಹಾರಲು ಅವಕಾಶವನ್ನು ಈ ವ್ಯವಸ್ಥೆಯು ಹೇಗೆ ನೀಡುತ್ತದೆ? ಅದೂ ಸಾಧಾರಣ ಸಮಾಜವಾಗಿರುವಾಗ? ಇದು ಒಂದು ಪ್ರಾಥಮಿಕ ದೃಷ್ಟಿ. ಮತ್ತೊಂದು ದೃಷ್ಟಿಕೋನದಲ್ಲಿ, ಮನುಷ್ಯನೊಬ್ಬನು ಏನೇ ಸಾಧನೆ ಮಾಡಿದರೂ ಸಾಧಾರಣ ವ್ಯಕ್ತಿಯಾಗಿ ಹಿಂತಿರುಗದೆ ದಿನನಿತ್ಯದ ಜನರೊಂದಿಗೆ ಬದುಕಲಾರ. ಒಬ್ಬನು ಹಲವರು ಹಾರಾಡುವುದಕ್ಕೆ ನೋಡಿದರೆ, ಅವನು ಸಹ ಅಂತಹ ಸಾಧನೆಯನ್ನು ಅಭ್ಯಾಸ ಮಾಡುವುದಕ್ಕೆ ಬಯಸುತ್ತಾನೆ ಮತ್ತು ಅಲ್ಲಿ ಆಸಕ್ತಿಯನ್ನು ಉದ್ದೀಪಿಸುವ ಅಗತ್ಯವಿರುವುದಿಲ್ಲ. ನೀವೇನಾದರೂ ಅಭ್ಯಾಸದ ಮೂಲಕ ಹಾರಾಡುವುದನ್ನು ಕಲಿತರೆ, ಸಹಜವಾಗಿ ನೀವು ಜನರ ಮುಂದೆ ಅದನ್ನು ಪ್ರದರ್ಶಿಸಲಾರಿರಿ, ಅಂತೆಯೇ ಅವರೂ ಅಭ್ಯಾಸದಲ್ಲಿರುತ್ತಾರೆ. ನಿಮ್ಮ ಉನ್ನತ ಸ್ವರ್ಗೀಯ ಪ್ರದಕ್ಷಿಣೆಯು ತೆರೆದುಕೊಂಡಿದ್ದು, ನಿಮ್ಮ ದೇಹದ ಯಾವುದಾದರೊಂದು ಭಾಗ ಮುಚ್ಚಿದ್ದರೆ, ಆಗಲೂ ನೀವು ಹಾರುವುದಕ್ಕೆ ಸಮರ್ಥರಿರುವುದಿಲ್ಲ.

ನಮ್ಮ ಉನ್ನತ ಸ್ವರ್ಗೀಯ ಪ್ರದಕ್ಷಿಣೆಗಳು ತೆರೆದುಕೊಳ್ಳುವುದಕ್ಕೆ ಹತ್ತಿರವಿದ್ದಾಗ, ಕೆಲವರು ಧ್ಯಾನಕ್ಕೆ ಕೂತಿರುವವರು ಮುಂಭಾಗದಲ್ಲಿ ಹೆಚ್ಚು ಕೃಶರಾಗುತ್ತಾರೆ. ಅಂತಲ್ಲಿ ಪರಿಸ್ಥಿತಿಯೊಂದು ನಡೆಯುತ್ತದೆ. ಸುತ್ತುವಿಕೆಯ ಕಾರಣದಿಂದಾಗಿ ಒಬ್ಬನ ಹಿಂಭಾಗದಲ್ಲಿ ಚೆನ್ನಾಗಿ ಪ್ರದಕ್ಷಿಣೆಯು ತೆರೆದುಕೊಳ್ಳುತ್ತದೆ. ಆಗ ಒಬ್ಬನ ಹಿಂಭಾಗವು ತುಂಬಾ ಹಗುರವಾಗಿ ಅದೇ ಸಮಯಕ್ಕೆ ಮುಂಭಾಗವು ಭಾರವೆನಿಸುತ್ತದೆ. ಕೆಲವರು ಹಿಮ್ಮೂಲವಾಗಿ ಕೃಶರಾಗುತ್ತಾರೆ ಮತ್ತು ಅವರ ಹಿಂಭಾಗವು ಭಾರವಾದಂತೆ ಮತ್ತು ಮುಂಭಾಗವು ಹಗುರವಾದಂತೆ ಅನುಭವಗೊಳ್ಳುತ್ತಾರೆ. ನಿಮ್ಮ ದೇಹದಲ್ಲೆಲ್ಲ ಪ್ರದಕ್ಷಿಣೆಯು ಚೆನ್ನಾಗಿ ತೆರೆದುಕೊಂಡರೆ, ನೀವು ಭೂಮಿಯಿಂದ ಮೇಲೆ ಎತ್ತಿದಂತೆ ಅನುಭವಗೊಳ್ಳುತ್ತೀರಿ. ಒಮ್ಮೆ ನೀವು ನಿಜವಾಗಿ ತೇಲಿಬಿಟ್ಟರೆ, ನೀವು ಹಾರುವುದಕ್ಕೆ ಅನುಮತಿಯಿರುವುದಿಲ್ಲ. ಆದರೆ ಇದು ಖಚಿತವಲ್ಲ. ಅಸಾಮಾನ್ಯ ಸಾಮರ್ಥ್ಯಗಳನ್ನು ಅಭಿವೃದ್ಧಿಪಡಿಸಿರುವವರೆಲ್ಲ ಎರಡು ಕೊನೆಗಳಲ್ಲಿದ್ದಾರೆ. ಒಂದು ಮಕ್ಕಳು ಮತ್ತೊಂದು ವಯಸ್ಸಾದವರು ಅದರಲ್ಲಿಯೂ ಮುದುಕಿಯರು. ಅವರು ಸುಲಭಕ್ಕೆ ಅಭಿವೃದ್ಧಿಗೊಳ್ಳುತ್ತಾರೆ ಮತ್ತು ಈ ಸಾಮರ್ಥ್ಯವನ್ನು ಸಂಗ್ರಹಿಸುತ್ತಾರೆ. ಮನುಷ್ಯರಿಗೆ, ಅದರಲ್ಲೂ ಯುವಕರಿಗೆ, ಒಮ್ಮೆ ಅವರು ಸಾಮರ್ಥ್ಯವನ್ನು ಹೊಂದಿದ್ದರೂ, ಜಂಭದ ಬುದ್ಧಿಯಿಂದ ಅವರು ಸಹಾಯ ಮಾಡುವುದಿಲ್ಲ. ಅದನ್ನು ಅವರು ದಿನನಿತ್ಯದ ಜನರೊಂದಿಗೆ ಸ್ಪರ್ಧೆಗಾಗಿ ಬಳಸುತ್ತಾರೆ.

ಆದ್ದರಿಂದ ಅಭ್ಯಾಸದ ಅವಧಿಯಲ್ಲಿ ಅದರ ಅಸ್ತಿತ್ವವನ್ನು ಒಪ್ಪುವುದಿಲ್ಲ ಮತ್ತು ಅದು ಸಾಧಿತವಾಗುತ್ತಿದ್ದಂತೆ ಬಂಧನಕ್ಕೊಳಪಡಿಸಲಾಗುತ್ತದೆ. ದೇಹದ ಒಂದು ಭಾಗವನ್ನು ಬಂಧಿಸಿದರೆ ಸಾಕು, ಈ ವ್ಯಕ್ತಿಯು ತೇಲಲು ಸಮರ್ಥನಾಗುವುದಿಲ್ಲ. ನೀವು ಈ ಹಂತವನ್ನು ಹೊಂದುವುದಕ್ಕೆ ಪೂರ್ಣ ನಿಷೇಧವಿದೆ ಎನ್ನುವುದಕ್ಕಲ್ಲ ಇದನ್ನು ಹೇಳಿರುವುದು. ನಿಮಗೆ ಅದನ್ನು ಪ್ರಯೋಗಿಸುವುದಕ್ಕೆ ಅನುಮತಿ ಕೊಡಬಹುದು ಮತ್ತು ಕೆಲವರು ಅದನ್ನೇ ಪಡೆಯುವುದಕ್ಕೆ ಸಮರ್ಥರಿದ್ದಾರೆ.

ಎಲ್ಲೆಲ್ಲಿ ನಾನು ಉಪನ್ಯಾಸ ನೀಡುತ್ತೇನೆಯೋ ಅಲ್ಲೆಲ್ಲ ಈ ಸನ್ನಿವೇಶಗಳು ನಡೆಯುತ್ತವೆ. ನಾನು ಶಾನ್‌ಡಾಂಗ್‌ನಲ್ಲಿನ ಒಂದುತರಗತಿಯಲ್ಲಿ ಬೋಧಿಸಿದಾಗ,ಅಲ್ಲಿ ಬೀಜಿಂಗ್ ಮತ್ತು ಜಿನಾನ್‌ಗಳಿಂದ (ಶಾನ್‌ಡಾಂಗ್ ಪ್ರಾಂತ್ಯದ ರಾಜಧಾನಿ) ಬಂದ ಅಭ್ಯಾಸಿಗಳಿದ್ದರು. ಯಾವನೋ ಒಬ್ಬ ಕೇಳಿದ– ''ಗುರುವೇ ನನಗೆ ಏನಾಗಿದೆ? ನಡೆಯುವಾಗ ನಾನು ನೆಲವನ್ನು ತ್ಯಜಿಸುತ್ತಿರುವಂತೆ ಅನುಭವಿಸುತ್ತೇನೆ. ನಾನು ಮನೆಯಲ್ಲಿ ನಿದ್ರಿಸುವಾಗಲೂ ತೇಲಿದಂತೆ ಅನುಭವಿಸುತ್ತೇನೆ. ಜೊತೆಗೆ ಹಾಸಿಗೆಯ ಬಟ್ಟೆಯೂ ಬಲೂನಿನಂತೆ ಮೇಲೇರುತ್ತದೆ.'' ನಾನು ಗುಯಾಂಗ್‌ನಲ್ಲಿ (ಗುಯಾಂಗ್ ಪ್ರಾಂತ್ಯದ ರಾಜಧಾನಿ) ಬೋಧಿಸಿದಾಗ, ಅಲ್ಲಿ ವಯಸ್ಸಾದ ಮುದುಕಿಯೊಬ್ಬಳು ಚಿಂಗ್‌ಡಾವೋದಿಂದ (ಶಾನ್‌ಡಾಂಗ್ ಪ್ರಾಂತ್ಯದ ಬಂದರು ನಗರ) ಬಂದಿದ್ದಳು. ಅವಳು ಎರಡು ಹಾಸಿಗೆಯನ್ನು ತನ್ನ ಕೊಠಡಿಯಲ್ಲಿ ಹೊಂದಿದ್ದಳು. ಎರಡೂ ಬೇರೆ ಬೇರೆ ಎದುರು ಗೋಡೆಗಳಿಗೆ ಆತುಕೊಂಡಿದ್ದವು. ಹಾಸಿಗೆಯ ಮೇಲೆ ಧ್ಯಾನದಲ್ಲಿದ್ದಾಗ ಆಕೆಯು ತನಗೆ ತಾನೇ ತೇಲುತ್ತಿರುವಂತೆ ಅನುಭವಿಸುತ್ತಿದ್ದಳು. ಕಣ್ಣು ತೆರೆದಾಗ ಇನ್ನೊಂದು ಮಂಚಕ್ಕೆ ಎತ್ತಾಕಿರುವುದನ್ನು ತನಗೆ ತಾನೇ ತಿಳಿಯುತ್ತಿದ್ದಳು. ಮತ್ತೆ 'ನನ್ನ ಮಂಚಕ್ಕೆ ಹಿಂದಿರುಗಬೇಕೆಂದು' ಆಕೆ ತನಗೆ ತಾನೇ ಯೋಚಿಸಿಕೊಂಡು ಮತ್ತೊಮ್ಮೆ ಹಿಂದಕ್ಕೆ ಹಾರುತ್ತಿದ್ದಳು.

ಕ್ವಿಂಗ್‌ಡೋನಲ್ಲಿ ಒಬ್ಬನಿದ್ದ, ಅವನು ತನ್ನ ಆಫೀಸಿನ ಸುತ್ತ ಯಾರೂ ಇಲ್ಲದಾಗ, ಊಟದ ಸಮಯದಲ್ಲಿ, ಹಾಸಿಗೆಯ ಮೇಲೆ ಧ್ಯಾನಕ್ಕೆ ಕೂರುತ್ತಿದ್ದ. ಹಾಗೇ ಅಲ್ಲಿ ಕೂತಿದ್ದಾಗ, ಅವನು ತೇಲಿದ ಮತ್ತು ಒಂದು ಮೀಟರಿಗೂ ಹೆಚ್ಚು ಮೇಲಕ್ಕೆ ದಡಬುಡನೆ ಮೇಲೆ ಕೆಳಗೆ ಚಲಿಸಿದ. ಅವನು ಮೇಲೇರುತ್ತ ನಂತರ ಕೆಳಗೆ ಬರುತ್ತಿದ್ದ. ಅದು ಹಾಗೇ ನಡೆಯುತ್ತಿತ್ತು. ಹಾಸಿಗೆಯ ಬಟ್ಟೆಯೂ ಸಹ ಮೇಲಕ್ಕೆ ಪುಟಿಯುತ್ತಿತ್ತು. ಅವನು ಸ್ವಲ್ಪ ಗಾಬರಿ ಮತ್ತು ಅಚ್ಚರಿಗೊಂಡ. ಇದು ಊಟದ ಪೂರ್ಣ ಸಮಯ ನಡೆಯಿತು. ಕೊನೆಗೆ ಆಫೀಸಿನ ಬೆಲ್ ಹೊಡೆಯಿತು ಮತ್ತು ತನಗೆ ತಾನೇ ಯೋಚಿಸಿದ– 'ನಾನು ಬೇರೆಯವರಲ್ಲಿ ಇದನ್ನು ತೋರಿಸಬೇಕು. ಏನು ನಡೆಯುತ್ತಿದೆ?' ಎಂದು ಅವರೆಲ್ಲ ಅಚ್ಚರಿಗೊಂಡರು. ನಾನು ಇದ್ದಕ್ಕಿದ್ದಂತೆ ನಿಲ್ಲಿಸಿಬಿಟ್ಟೆ. ಅವನೂ ನಿಲ್ಲಿಸಿದ. ಇದೇಕೆ ಮುದುಕರು ತಮಗೆ ತಾವೇ ಹೀಗೆ ವರ್ತಿಸುತ್ತಾರೆ. ಇದೇ ಒಂದು ಯುವಕನಿಗೆ ಆಗಿದೆಯೆಂದರೆ, ಆಫೀಸಿನ ಬೆಲ್ ರಿಂಗಣಿಸಿದಾಗಲೆ ಅವನು ಯೋಚಿಸುತ್ತಾನೆ– ''ನೀವೆಲ್ಲ ತೇಲುವುದಕ್ಕೆ ನನ್ನ ಬಂದು ನೋಡಿ.'' ಜಂಭ ಕೊಚ್ಚಿಕೊಳ್ಳುವುದನ್ನು ಒಬ್ಬ ಎಲ್ಲಿ ನಿಯಂತ್ರಿಸಿಕೊಳ್ಳುವುದಿಲ್ಲ ಎಂಬುದಕ್ಕೆ ಇದು ದೃಷ್ಟಾಂತ. ಒಮ್ಮೆ ಒಬ್ಬನು ಹೀಗೆ ಪ್ರದರ್ಶಿಸಿದರೆ, ಅವನ ಸಾಮರ್ಥ್ಯ ಹೊರಟು ಹೋಗುತ್ತದೆ. ಈ ದಾರಿಯಲ್ಲಿ ಉಳಿಯುವುದಕ್ಕೆ ಅದು ಅನುಮತಿ ಪಡೆದಿಲ್ಲ. ಎಲ್ಲ ಕಡೆ ಅಭ್ಯಾಸಗಳಲ್ಲಿ ಇಂತಹ ಹಲವು ಪ್ರಕರಣಗಳಿವೆ.

ನಾವು ಆರಂಭದಿಂದಲೇ ನೂರಾರು ಶಕ್ತಿ ಪ್ರವಾಹಗಳನ್ನು ತೆರೆದುಕೊಳ್ಳಬೇಕು. ಈ ದಿನದವರೆಗೆ, ಎಂಬತ್ತರಿಂದ ತೊಂಬತ್ತರಷ್ಟು ನಮ್ಮ ಅಭ್ಯಾಸಿಗಳು ಹಗುರವಾದ ಮತ್ತು ರೋಗಮುಕ್ತವಾದ ದೇಹಸ್ಥಿತಿಯನ್ನು ತಲುಪಿದ್ದಾರೆ. ಅದೇ ಸಮಯದಲ್ಲಿ, ನಾವು ಹೇಳುತ್ತೇವೆ. ಈ ತರಗತಿಯಲ್ಲಿ ನಿಮ್ಮ ದೇಹ ಪೂರ್ಣ ಶುದ್ಧೀಕರಣಗೊಳ್ಳುವ ಸ್ಥಿತಿಗೆ ಮಾತ್ರ ನೀವು ನೂಕಲ್ಪಟ್ಟಿಲ್ಲ, ಜೊತೆಗೆ ಹಲವು ವಿಷಯಗಳನ್ನು ನಿಮ್ಮ ದೇಹಕ್ಕೆ ಅಳವಡಿಸುತ್ತಿದ್ದೇವೆ. ಅದರಿಂದ ನೀವು ಗಾಂಗನ್ನು ವೃದ್ಧಿಸಬಹುದು. ನಾನು ತರಗತಿಯಲ್ಲಿ ಎಲ್ಲರಿಗೂ 'ಫಾ' ಬೋಧಿಸುತ್ತಲೇ ಇದ್ದೇನೆ ಮತ್ತು ಎಲ್ಲರ ಆತ್ಮಪ್ರಕೃತಿ ನಿರಂತರವಾಗಿ ಚೆನ್ನಾಗಿ ಬದಲಾವಣೆಗೊಳಗಾಗುತ್ತಿದೆ. ಈ ಸಭಾಂಗಣದಿಂದ ನೀವು ಹೊರಹೋದ ನಂತರ ಸ್ವತಃ ವಿಶೇಷ ವ್ಯಕ್ತಿಗಳಂತೆ ಅನುಭವಗೊಳ್ಳುತ್ತೀರಿ ಮತ್ತು ನಿಮ್ಮ ಹೊರರೂಪವೇ ಖಂಡಿತವಾಗಿ ಬದಲಾಗಿರುತ್ತದೆ. ನೀವು ಮುಂದೆ ಹೇಗಿರಬೇಕೆಂದು ತಿಳಿಯುತ್ತೀರಿ ಮತ್ತು ನೀವು ಹೆಚ್ಚು

ಸಮಯ ಗಲಿಬಿಲಿಯಲ್ಲಿರುವುದಿಲ್ಲ. ಏನೇ ಆದರೂ ನಿಮ್ಮಯ ಆತ್ಮಪ್ರಕೃತಿ ಈಗಾಗಲೇ ಪರವಶಗೊಂಡಿದೆ.

ಉನ್ನತ ಸ್ವರ್ಗೀಯ ಪ್ರದಕ್ಷಿಣೆಯ ಬಗ್ಗೆ ಮಾತನಾಡುತ್ತ, ಆದರೂ ನೀವು ತೇಲುವುದಕ್ಕೆ ಅನುಮತಿ ಪಡೆದಿಲ್ಲ. ನಿಮ್ಮ ದೇಹ ಹಗುರಾಗಿದೆ, ಗಾಳಿಯಲ್ಲಿ ವ್ಯವಹರಿಸುತ್ತಿದೆ ಎಂದು ನಿಮಗನಿಸುತ್ತಿರಬಹುದು. ಹಿಂದೆ ನೀವು ಸ್ವಲ್ಪ ದೂರ ನಡೆದರು ಸುಸ್ತಾಗಿದ್ದೀರಿ. ಆದರೀಗ ಅದು ತುಂಬ ಸುಲಭ. ಎಷ್ಟು ದೂರ ನಡೆಯಬೇಕು ಎಂಬುದು ನಿಮಗೆ ಮುಖ್ಯವಾಗುವುದಿಲ್ಲ. ಯಾರು ಈ ಪುಸ್ತಕವನ್ನು ಓದುತ್ತಾರೋ ಮತ್ತು ಸ್ವತಃ ಅಭ್ಯಾಸಕ್ಕೆ ತೊಡಗುತ್ತಾರೋ ಅವರು ಸಹ ತಾವು ಅಂದುಕೊಂಡಂತೆ ಈ ಸ್ಥಿತಿಯನ್ನು ತಲುಪಬಹುದು. ವಿಶೇಷವಾಗಿ ಈ ಸನ್ನಿವೇಶಗಳಲ್ಲಿ, ನಾನು ಅತೀಂದ್ರಿಯವಾದ ವ್ಯಾಖ್ಯಾನಗಳನ್ನು ಮಾಡಿದರೆ ಅಥವಾ ಗುರಿಯಿಲ್ಲದೆ ಸಾಧಾರಣವಾಗಿ ಮಾತನಾಡಿದರೆ, ನಾನು ತಪ್ಪು ಫಾ ಬೋಧಿಸುತ್ತಿದ್ದೇನೆ. ಇಡೀ ವಿಶ್ವವೇ ನನ್ನನ್ನು ಗಮನಿಸುತ್ತಿರುವಾಗ, ಇದನ್ನು ಮಾಡುವುದಕ್ಕೆ ನನಗೆ ಸಾಧ್ಯವಿಲ್ಲ. ಒಬ್ಬ ಅಡ್ಡದಾರಿ ಹಿಡಿಯುವುದಕ್ಕೆ ಅದು ಸಮ್ಮತಿಸುವುದಿಲ್ಲ.

ದಿನನಿತ್ಯದ ವ್ಯಕ್ತಿ ಈ ಸ್ವರ್ಗೀಯ ಪ್ರದಕ್ಷಿಣೆಯನ್ನು ಕೇವಲ ತಿಳಿಯಬಲ್ಲ. ಇದು ಹೆಚ್ಚಿನದೇನೂ ಅಲ್ಲ. ಸಾಧ್ಯವಾದಷ್ಟು ಹೆಚ್ಚು ಪ್ರಬಲವಾದ ವಸ್ತುವಿನಿಂದ ನಿಮ್ಮ ದೇಹವನ್ನು ತುಂಬಿಕೊಳ್ಳುವುದಕ್ಕೆ, ವರ್ಗಾಯಿಸುವುದಕ್ಕೆ ಯಾವುದು ಎಲ್ಲ ಶಕ್ತಿ ಪ್ರವಾಹಗಳನ್ನು ನಿಮ್ಮ ದೇಹದಲ್ಲಿ ಚಾಲನೆಗೆ ತರುತ್ತದೋ ಅಂತಹ ಬೇರೊಂದು ಸ್ವರ್ಗೀಯ ಪ್ರದಕ್ಷಿಣೆ ಅಲ್ಲಿ ಬೇಕಾಗುತ್ತದೆ. ಅದು 'ಮೌಯು' (ದೇಹದೊಳಗಿನ ಪ್ರಕೃತಿ ಹಾಗೂ ಪುರುಷ ನಡುವಣಗೆರೆ)) ಸ್ವರ್ಗೀಯ ಪ್ರದಕ್ಷಿಣೆಯೆಂದು ಕರೆಯಲ್ಪಡುತ್ತದೆ ಮತ್ತು ಗಣನೀಯವಾಗಿ ಇದು ಕೆಲವರಿಗೆ ಮಾತ್ರ ತಿಳಿದಿದೆ. ಈ ಪರಿಕಲ್ಪನೆಯು ಸಾಂದರ್ಭಿಕವಾಗಿ ಪುಸ್ತಕಗಳಲ್ಲಿ ಬಳಕೆಯಾಗಿದೆ. ಆದರೆ ಯಾರೂ ಅದನ್ನು ನಿಮಗೆ ಹೇಳಿಲ್ಲ, ವಿವರಿಸಿಲ್ಲ. ಅದು ಒಂದು ಸಿದ್ಧಾಂತವಾಗಿ, ರಹಸ್ಯಗಳ ರಹಸ್ಯವಾಗಿ ಮಾತ್ರ ಚರ್ಚೆಯಾಗಿದೆ. ಇದನ್ನೆಲ್ಲ ನಾವು ನಿಮಗಾಗಿ ಇಲ್ಲಿ ಬಹಿರಂಗಪಡಿಸುತ್ತಿದ್ದೇವೆ. ಅದು ಬಯ್‌ಹುಯಿ (ತಲೆಯ ಮಧ್ಯಭಾಗದಲ್ಲಿರುವ ಆಕ್ಯುಪಂಚರ್ ಕೇಂದ್ರ) ಕೇಂದ್ರದಲ್ಲಿ ಶುರುವಾಗುತ್ತದೆ ಮತ್ತು ಯಿನ್–ಯಾಂಗ್‌ಗಳ (ಪ್ರಕೃತಿ–ಪುರುಷ) ನಡುವಿನ ಗಡಿಯಲ್ಲಿ ಸಂಚರಿಸುವುದಕ್ಕೆ ಹೊರಬರುತ್ತದೆ. ನಂತರದಲ್ಲಿ ಅದು ಕಿವಿಯಿಂದ ಭುಜಕ್ಕೆ ಇಳಿದು, ಎಲ್ಲ ಬೆರಳುಗಳ ನಡುವೆ, ನಿಮ್ಮ ದೇಹದ ಪಾರ್ಶ್ವಕ್ಕೆ ಸಾಗಿ, ನಂತರದಲ್ಲಿ ನಿಮ್ಮ ಪಾದತಳಕ್ಕೆ ಇಳಿದುಬರುತ್ತದೆ. ನಂತರ ಅದು ಒಂದು ತೊಡೆಯ ಒಳಭಾಗದಲ್ಲಿ ಮೇಲಕ್ಕೇರುತ್ತದೆ ಮತ್ತು ಇನ್ನೊಂದು ತೊಡೆಯ ಒಳಭಾಗದಿಂದ ಕೆಳಗಿಳಿಯುತ್ತದೆ. ಅದು ನಿಮ್ಮ ಇನ್ನೊಂದು ಪದತಳವನ್ನು ಬಳಸಿ ಹೋಗುತ್ತ, ನಿಮ್ಮ ದೇಹದ ಇನ್ನೊಂದು ಪಾರ್ಶ್ವಕ್ಕೆ ಬರುತ್ತದೆ. ಮತ್ತೆ ನಿಮ್ಮ ಬೆರಳುಗಳ ಮೂಲಕ ನಿಮ್ಮ ತಲೆಯ ಉನ್ನತ ಭಾಗವನ್ನು ತಲುಪಿ, ಒಂದು ಸುತ್ತು ಪೂರ್ಣಗೊಳಿಸುತ್ತದೆ. ಇದು ಮೌಯು ಸ್ವರ್ಗೀಯ ಪ್ರದಕ್ಷಿಣೆ. ಬೇರೆಯವರು ಅದರ ಬಗ್ಗೆ ಪುಸ್ತಕ ಬರೆಯಬಹುದು ನಾನು ಮಾತ್ರ ಅದನ್ನು ಕೆಲವೇ ಪದಗಳಲ್ಲಿ ಸಂಗತಗೊಳಿಸಿದ್ದೇನೆ. ನಾನಂದುಕೊಂಡಿದ್ದೇನೆ ಅದು ಒಂದು ಅಲೌಕಿಕ ರಹಸ್ಯವೆಂದು ಪರಿಗಣಿಸಲ್ಪಡುವುದಿಲ್ಲ. ಆದಾಗ್ಯೂ ಮಿಕ್ಕವರು ಅದನ್ನು ಕಾಪಿಡಬೇಕಾದ್ದೆಂದು ಗುರುತಿಸಿಕೊಂಡರೆ, ಯಾವಾಗ ಅವರು ನಿಜವಾಗಿಯೂ ಬೋಧಿಸುತ್ತಿರುತ್ತಾರೋ ಅಲ್ಲಿವರೆಗೆ ಅದನ್ನು ಚರ್ಚಿಸುವುದಿಲ್ಲ. ನಾನದನ್ನು ಚರ್ಚಿಸಿದ್ದೇನೆ. ಉನ್ನತ ಹಂತಗಳಲ್ಲಿನ ಅಪ್ಪಟ ಅಭ್ಯಾಸವು 'ವೂ–ವೇ' (ನಿರ್ಲಿಪ್ತ) ಸ್ಥಿತಿಯಲ್ಲಿರುತ್ತದೆ ಮತ್ತು ಯಾವುದೇ ಬೌದ್ಧಿಕ ಚಟುವಟಿಕೆಗೆ ಮುಕ್ತವಾಗಿರುತ್ತದೆ. ಎಲ್ಲವೂ ನಿಮ್ಮ ದೇಹದಲ್ಲಿಯೇ ಸೇರಿಕೊಂಡಿರುತ್ತದೆ. ಅವುಗಳು ಸ್ವತಂತ್ರವಾಗಿ ರೂಪುಗೊಳ್ಳುತ್ತವೆ ಮತ್ತು ಈ ಆಂತರಿಕ ಕ್ರಿಯಾ ಚಟುವಟಿಕೆಗಳು ನಿಮ್ಮನ್ನು ರೂಪಿಸುತ್ತವೆ. ಅವುಗಳು ತಾನೇ ತಾನಾಗಿ ಸಮಯ ಬಂದಾಗ ಸುತ್ತುತ್ತವೆ. ಒಂದು ದಿನ ಅಭ್ಯಾಸದ ಸಂದರ್ಭದಲ್ಲಿ ನಿಮ್ಮ ತಲೆ ಇನ್ನೊಂದು ಕಡೆಯಿಂದ ತಿರುಗಿದರೆ ಅದು ಆ ದಾರಿಯಲ್ಲಿ ಸುತ್ತುತ್ತದೆ. ಏಕೆಂದರೆ ಅದು ಎರಡೂ ದಾರಿಯಲ್ಲಿ ಸುತ್ತಬಲ್ಲದು.

ಯಾವಾಗ ಉನ್ನತ ಅಥವಾ ಸಾಧಾರಣ ಸ್ವರ್ಗೀಯ ಪ್ರದಕ್ಷಿಣೆಯು ತೆರೆಯುತ್ತಿರುತ್ತದೆ, ಒಬ್ಬನ ತಲೆ ಧ್ಯಾನಸ್ಥ ಸ್ಥಿತಿಯಲ್ಲಿ ತಲೆದೂಗುತ್ತಿರುತ್ತದೆ. ಇದು ಶಕ್ತಿ ಸಂಚಾರವಾಗುತ್ತಿರುವುದಕ್ಕೆ ಸಂಕೇತ. ಫಾಲನ್ ಸ್ವರ್ಗೀಯ ಪ್ರದಕ್ಷಿಣೆಯೂ ಹೀಗೆಯೇ; ಆದ್ದರಿಂದ ನಾವು ಅಭ್ಯಾಸವನ್ನು ಈ ದಾರಿಯಲ್ಲಿಯೇ ಮಾಡುತ್ತೇವೆ. ನೀವು ಅದನ್ನು ಅಭ್ಯಾಸ ಮಾಡದಿದ್ದಾಗ, ಅದು ತಾನಾಗೇ ಸುತ್ತುತ್ತಿರುತ್ತದೆ. ಅದು

ಸ್ಥಿರವಾಗಿ ಯಾವಾಗಲೂ ಸುತ್ತುತ್ತಲೇ ಇರುತ್ತದೆ. ನೀವು ಅಭ್ಯಾಸ ಮಾಡುವಾಗ, ತಾಂತ್ರಿಕತೆಯನ್ನು ಬಲಪಡಿಸುತ್ತಿರುತ್ತೀರಿ. ನಾವು 'ಫಾ' ಅಭ್ಯಾಸಿಗಳ ಬಗ್ಗೆ ಮಾತನಾಡುತ್ತಿಲ್ಲವೆ? ಸಹಜವಾಗಿ ನೀವು ನಿಮ್ಮ ಸ್ವರ್ಗೀಯ ಪ್ರದಕ್ಷಿಣೆಯು ಯಾವಾಗಲೂ ಸುತ್ತುತ್ತಿರುವುದನ್ನು ಕಂಡುಹಿಡಿಯುತ್ತೀರಿ. ನೀವು ಅಭ್ಯಾಸ ಮಾಡದಿದ್ದಾಗ ಈ ಶಕ್ತಿ ವಲಯದ ತಾಂತ್ರಿಕತೆಯು ನಿಮ್ಮ ದೇಹದ ಹೊರಗೆ ಅಳವಡುತ್ತದೆ. ಅದೊಂದು ದೊಡ್ಡ ಹೊರಪ್ರವಾಹಗಳ ವಲಯ. ಅದು ನಿಮ್ಮ ದೇಹವನ್ನು ಅಭ್ಯಾಸದಲ್ಲಿ ನಿಯಂತ್ರಿಸುತ್ತಿರುತ್ತದೆ. ಅದೆಲ್ಲ ಸ್ವಯಂಚಾಲಿತ, ಅದು ಹಿಮ್ಮುಖವಾಗಿಯೂ ಸುತ್ತುತ್ತದೆ. ಎರಡೂ ಕಡೆ ಸುತ್ತುತ್ತದೆ ಮತ್ತು ಸ್ಥಿರವಾಗಿ ಶಕ್ತಿ ಪ್ರವಾಹಗಳನ್ನು ತೆರೆಯುತ್ತದೆ.

ಸ್ವರ್ಗೀಯ ಪ್ರದಕ್ಷಿಣೆಯನ್ನು ತೆರೆಯುವುದಕ್ಕೆ ಗುರಿ ಏನು? ಸ್ವರ್ಗೀಯ ಪ್ರದಕ್ಷಿಣೆಯನ್ನು ತೆರೆಯುವುದೇ ಅಭ್ಯಾಸದ ಉದ್ದೇಶವೇನಲ್ಲ, ಆದಾಗ್ಯೂ ನಿಮ್ಮ ಸ್ವರ್ಗೀಯ ಪ್ರದಕ್ಷಿಣೆ ತೆರೆದರೂ, ನಾನು ಮತ್ತೂ ಹೇಳುತ್ತೇನೆ ಅದು ಆಗಲೂ ಏನೂ ಅಲ್ಲ. ಒಂದು ವೇಳೆ ಒಬ್ಬನ ಅಭ್ಯಾಸವು ಇನ್ನೂ ಕ್ರಮದಲ್ಲಿ ಮುಂದುವರೆದರೆ, ಒಬ್ಬನ ಗುರಿ, ಒಂದು ಶಕ್ತಿ ಪ್ರವಾಹದ ಮೂಲಕ ನೂರಾರು ಶಕ್ತಿ ಪ್ರವಾಹಗಳನ್ನು ತೆರೆಯುವುದಾಗಿರುತ್ತದೆ. ಒಬ್ಬನು ಅದರಿಂದ ತನ್ನ ದೇಹದಲ್ಲಿ ಎಲ್ಲಾ ಶಕ್ತಿ ಪ್ರವಾಹಗಳನ್ನು ತೆರೆಯುತ್ತಾನೆ. ನಾವೀಗಾಗಲೇ ಇದನ್ನು ಮಾಡಲು ಶುರುಮಾಡಿದ್ದೇವೆ. ಇನ್ನೂ ಹೆಚ್ಚಿನ ಅಭ್ಯಾಸದಿಂದ ಉನ್ನತ ಸ್ವರ್ಗೀಯ ಪ್ರದಕ್ಷಿಣೆಯ ಸುತ್ತುವಿಕೆಯಲ್ಲಿ ಶಕ್ತಿ ಪ್ರವಾಹಗಳು ಹಿಗ್ಗುತ್ತಿರುವುದನ್ನು ಒಬ್ಬನು ಗುರುತಿಸುತ್ತಾನೆ. ಏಕೆಂದರೆ ಶಕ್ತಿಯೂ ಹೆಚ್ಚು ಪ್ರಬಲವಾಗುತ್ತದೆ. ಶಕ್ತಿಯು ವಿದ್ಯುತ್ ತಯಾರಾದ ಮೇಲೆ, ಅದು ಹೆಚ್ಚು ವಿಸ್ತಾರ ಮತ್ತು ಕಾಂತಿಯುತವಾಗುತ್ತದೆ. ಆಗಲೂ ಇದೇನೂ ಅಲ್ಲ. ಯಾವಾಗ ಅಭ್ಯಾಸವು ಹೆಚ್ಚು ಒಳ್ಳೆಯದೆಂದಾಗುತ್ತದೆ? ಕೊನೆಯಲ್ಲಿ ಸಾವಿರಾರು ಶಕ್ತಿ ಪ್ರವಾಹಗಳು ಒಂದಕ್ಕೊಂದು ಸೇರಿ, ಶಕ್ತಿ ಪ್ರವಾಹವಿಲ್ಲದ, ಆಕ್ಯುಪಂಚರ್ ಕೇಂದ್ರಗಳಿಲ್ಲದ ದೇಹವಾಗಿ ಪರಿವರ್ತಿತವಾಗುತ್ತದೆ; ಆ ಶಕ್ತಿ ಪ್ರವಾಹಗಳೆಲ್ಲ ಒಂದಕ್ಕೊಂದು ಸೇರಿ ಪೂರ್ಣ ದೇಹವಾಗುತ್ತದೆ. ಇದು ಶಕ್ತಿ ಪ್ರವಾಹಗಳನ್ನು ತೆರೆಯುವುದರ ನಿಜವಾದ ಉದ್ದೇಶ. ಅದರ ರೂಪಿತ ಗುರಿಯು ಮನುಷ್ಯನ ದೇಹವನ್ನು ಪೂರ್ಣವಾಗಿ ಹೆಚ್ಚಿನ ಶಕ್ತಿಯಿಂದ ತುಂಬಿಸುವುದು.

ಇಂತಹ ಸಂದರ್ಭದಲ್ಲಿ, ಒಬ್ಬನ ದೇಹವು ಮೂಲದಿಂದಲೇ ಹೆಚ್ಚಿನ ಶಕ್ತಿಯಿಂದ ತುಂಬಿಕೊಳ್ಳುತ್ತದೆ. ಇನ್ನೊಂದು ಮಾತಿನಲ್ಲಿ, ಒಬ್ಬನು ತ್ರಿಗುಣ ವಿಶ್ವದೊಳಗಿನ ಫಾ ಸಾಧನೆಯು ಅತ್ಯುಚ್ಚ ಹಂತವನ್ನು ತಲುಪುತ್ತದೆ. ಮನುಷ್ಯನ ಮಾಂಸ ದೇಹವು ಕೊನೆಯು ಹಂತದವರೆಗೆ ಸಾಧನೆಗೊಳ್ಳುತ್ತದೆ. ಈ ವೇಳೆಗಾಗಲೇ, ಒಬ್ಬನು ಮತ್ತೊಂದು ಪರಿಸ್ಥಿತಿಯನ್ನು ಅನುಭವಿಸುತ್ತಾನೆ. ಯಾವ ರೀತಿಯ ಪರಿಸ್ಥಿತಿ? ಈ ವ್ಯಕ್ತಿಯು ಶ್ರೀಮಂತ ಗಾಂಗನ್ನು ವೃದ್ಧಿಸಿಕೊಂಡಿರುತ್ತಾನೆ. ತ್ರಿಗುಣ ವಿಶ್ವದೊಳಗಿನ ಫಾ ಸಾಧನೆಯಲ್ಲಿ, ಎಲ್ಲಾ ಮಾನವನ ಅಸಾಮಾನ್ಯ ಸಾಮರ್ಥ್ಯಗಳು ಮತ್ತು ಎಲ್ಲವೂ ವೃದ್ಧಿಯಾಗುತ್ತವೆ. ಆದಾಗ್ಯೂ, ಜನರ ನಡುವೆ ಅಭ್ಯಾಸ ಮಾಡುವಾಗ, ಹೆಚ್ಚಿನವರು ಬಂಧಿಸಲ್ಪಡುತ್ತಾರೆ. ಅದರೊಂದಿಗೆ ಒಬ್ಬನ ಗಾಂಗ್ ಸ್ತಂಭವು ಎತ್ತರಕ್ಕೆ ಬೆಳೆಯುತ್ತದೆ. ಎಲ್ಲ ರೂಪದ ಗಾಂಗ್‌ಗಳೂ ಮೂಲಸ್ವರೂಪದ ಗಾಂಗ್‌ನಿಂದ ಬಲಗೊಳ್ಳುತ್ತವೆ ಮತ್ತು ಹೆಚ್ಚು ಶಕ್ತಿಶಾಲಿಯಾಗುತ್ತವೆ. ಆದರೂ ಅವರೆಲ್ಲ ನಮ್ಮ ಈ ದಿಕ್ಕಿನಲ್ಲಿಯೇ ಕೆಲಸ ಮಾಡಬಹುದು ಮತ್ತು ಬೇರೊಂದು ದಿಕ್ಕಿನಲ್ಲಿ ಯಾವುದರ ಮೇಲೂ ಕ್ರಿಯೆ ಮಾಡಲಾರರು, ಎಲ್ಲಿಯವರೆಗೆಂದರೆ ಅವರು ಅಸಾಮಾನ್ಯ ಸಾಮರ್ಥ್ಯವನ್ನು ಸಾಧಿಸುವವರೆಗೆ. ಅದಕ್ಕಿಂತ ಕಡಿಮೆಯಿಲ್ಲದೆ, ಅವರು ಈಗಾಗಲೇ ಹೆಚ್ಚು ಗಟ್ಟಿಯಾಗಿರುತ್ತಾರೆ. ವಿಭಿನ್ನವಾದ ದಿಕ್ಕುಗಳಲ್ಲಿ ಹೆಚ್ಚು ಬದಲಾವಣೆಗಳಾಗಬಹುದು. ದಿಕ್ಕುಗಳ ಪ್ರತಿಯೊಂದು ಹಂತದಲ್ಲಿಯೂ ಈ ದೇಹವು ತೆಗೆದುಕೊಂಡು ಬರುವ ವಸ್ತುಗಳು ಹೆಚ್ಚು ಗಟ್ಟಿ ಮತ್ತು ನೋಡುವುದಕ್ಕೆ ಭಯಾನಕವಾಗಿರಬಹುದು. ಕೆಲವರು ದೇಹದ ತುಂಬೆಲ್ಲ ಕಣ್ಣುಗಳನ್ನು ಹೊಂದುತ್ತಾರೆ ಮತ್ತು ಅವರ ದೇಹದಲ್ಲಿನ ಎಲ್ಲಾ ಬೆವರು ರಂಧ್ರಗಳು ಕಣ್ಣಾಗಿ ಬಿಡಬಹುದು. ಇವೆಲ್ಲ ಈ ವ್ಯಕ್ತಿಯ ಪೂರ್ಣ ದಿಕ್ಕುಗಳ ವಲಯದಲ್ಲಿಯೇ ಇರುತ್ತವೆ. ಏಕೆಂದರೆ ಇದು ಬುದ್ಧ ಶಾಲೆಯಿಂದ ಬಂದ ಗಾಂಗ್, ಕೆಲವರು ತಮ್ಮ ದೇಹದ ತುಂಬ ಬುದ್ಧ ರೂಪಗಳನ್ನು ಪಡೆಯುತ್ತಾರೆ. ಎಲ್ಲ ಸ್ವರೂಪದ ಗಾಂಗ್‌ಗಳು ಹೆಚ್ಚು ಗಟ್ಟಿತನವನ್ನು ಹೊಂದುತ್ತವೆ. ಅದರೊಂದಿಗೆ ಹಲವು ಜೀವಿಗಳು ತಾವೇ ನಿಯಂತ್ರಿಸಿಕೊಳ್ಳುತ್ತವೆ.

ಈ ಸಮಯಕ್ಕಾಗಲೆ, 'ಮೂರು ಹೂವು ತಲೆಯ ಮೇಲೆ ಸೇರುವ' ಸ್ಥಿತಿಯೊಂದು ನಡೆಯುತ್ತದೆ. ಅದು ಕಣ್ಣಿಗೂ ಕಾಣಬಹುದಾದ ಹೆಚ್ಚು ಗೋಚರವಾದ ಸ್ಥಿತಿ. ಕಡಿಮೆಯ ದಿವ್ಯ ದೃಷ್ಟಿಯಿಂದಲೂ ಒಬ್ಬ ಇದನ್ನು ನೋಡಬಲ್ಲ. ಒಬ್ಬನು ಮೂರು ಹೂವುಗಳನ್ನು ತಲೆಯ ಮೇಲೆ ಹೊಂದಬಹುದು. ಒಂದು ಕಮಲದ ಹೂವು. ಆದರೆ ಅದು ನಮ್ಮ ಭೌತಿಕ ದಿಕ್ಕಿನಲ್ಲಿ ಕಮಲದ ಹೂವು ಆಗಿರುವುದಿಲ್ಲ. ಮಿಕ್ಕೆರಡು ಹೂಗಳು ಅತೀ ಸುಂದರವಾಗಿರುತ್ತವೆ. ಈ ಮೂರು ಹೂವುಗಳು ಒಬ್ಬನ ತಲೆಯ ಮೇಲೆ ಸುತ್ತುವುದಕ್ಕೆ ಪ್ರಾರಂಭಿಸುತ್ತವೆ. ಅವೆಲ್ಲ ಗಡಿಯಾರದಂತೆ ಸುತ್ತುತ್ತವೆ. ಅಲ್ಲದೆ ಪ್ರತೀ ಹೂವೂ ತನ್ನಷ್ಟಕ್ಕೆ ಸುತ್ತುತ್ತಿರುತ್ತದೆ. ಪ್ರತೀ ಹೂವು ಅದರ ವ್ಯಾಸದಷ್ಟೇ ದೊಡ್ಡದಾದ ಧ್ರುವವನ್ನು ಹೊಂದಿರುತ್ತದೆ. ಅವು ಮೂರೂ ದೊಡ್ಡ ಧ್ರುವಗಳು ಎಲ್ಲ ದಾರಿಯಲ್ಲಿ ಆಕಾಶಕ್ಕೆ ಏರುತ್ತವೆ. ಆದರೆ ಅವು ಗಾಂಗ್‌ನ ಸ್ತಂಭಾಕೃತಿಯಾಗುವುದಿಲ್ಲ. ನೀವು ಅದನ್ನೇನಾದರೂ ನೋಡುವುದಕ್ಕೆ ಸಾಧ್ಯವಾದರೆ, ನೀವು ಅಚ್ಚರಿಗೊಳ್ಳುತ್ತೀರಿ. ಒಬ್ಬನ ಅಭ್ಯಾಸವು ಈ ಹಂತವನ್ನು ತಲುಪಿದಾಗ, ಒಬ್ಬನ ದೇಹವು ಶ್ವೇತ ಮತ್ತು ಶುದ್ಧವಾಗಿರುತ್ತದೆ, ಚರ್ಮವೂ ಆಕರ್ಷಕ ಮತ್ತು ಕೋಮಲವಾಗಿರುತ್ತದೆ. ಈ ಸ್ಥಿತಿಯಲ್ಲಿ ಒಬ್ಬ ಇನ್-ಟ್ರಿಪಲ್-ವರ್ಲ್ಡ್ ಫಾ ಸಾಧನೆಯ ಅತ್ಯುತ್ಕೃಷ್ಟ ಸ್ವರೂಪವನ್ನು ತಲುಪುತ್ತಾನೆ. ಆದಾಗ್ಯೂ ಅದೇ ಕೊನೆಯಲ್ಲ, ಅಂಥವನು ಮತ್ತೂ ಸಾಧನಾಭ್ಯಾಸವನ್ನು ಮುಂದುವರಿಸುವ ಅಗತ್ಯವಿರುತ್ತದೆ ಮತ್ತು ಮುಂದುವರಿಸುತ್ತಾನೆ.

ಅದರಂತೆ ಒಬ್ಬ ಮುಂದುವರಿದರೆ ಒಬ್ಬನು ತ್ರಿಗುಣ ವಿಶ್ವದೊಳಗಿನ ಫಾ ಮತ್ತು ತ್ರಿಗುಣ ವಿಶ್ವದಾಚೆಗಿನ ಫಾ ನಡುವಿನ ಹಂತವನ್ನು, 'ಶುದ್ಧ-ಶ್ವೇತ ದೇಹ' ಎಂದು ಕರೆಯುವ ಹಂತವನ್ನು ಪ್ರವೇಶಿಸುತ್ತಾನೆ. ಭೌತಿಕ ದೇಹದ ಸಾಧನೆಯು ಉನ್ನತ ರೂಪದ ತ್ರಿಗುಣ ವಿಶ್ವದೊಳಗಿನ ಫಾ ಸ್ಥಿತಿಯನ್ನು ತಲುಪಿದಾಗ, ಕೇವಲ ಮನುಷ್ಯ ಮಾಂಸ ದೇಹವು ಉನ್ನತ ಸ್ವರೂಪಕ್ಕೆ ವರ್ಗಾಯಿಸಲ್ಪಡುತ್ತದೆ. ಯಾವಾಗ ಪೂರ್ಣ ದೇಹವು ನಿಜವಾಗಿ ಈ ಹಂತದಲ್ಲಿರುತ್ತದೆ. ಅದು ಉನ್ನತ ಶಕ್ತಿಯಿಂದ ಪೂರ್ಣವಾಗಿ ಸಂಯೋಜಿತವಾಗಿರುತ್ತದೆ. ಏಕೆ ಇದನ್ನು ಶುದ್ಧ-ಶ್ವೇತ ದೇಹ ಎಂದು ಕರೆಯಲಾಗಿದೆ? ಅದೇಕೆಂದರೆ ಈ ದೇಹವು ಈಗಾಗಲೇ ನಿಖರವಾದ ಶುದ್ಧತೆಯ ಉನ್ನತ ಹಂತವನ್ನು ತಲುಪಿರುತ್ತದೆ. ದಿವ್ಯದೃಷ್ಟಿಯಿಂದ ಅದು ನೋಡಲ್ಪಟ್ಟಾಗ, ಪೂರ್ಣ ದೇಹವು ಪಾರದರ್ಶಕವಾಗಿ, ಗ್ಲಾಸಿನಂತೆಯೇ ಕಾಣುತ್ತದೆ. ಈ ದೇಹವು ಈಗಾಗಲೇ ಬುದ್ಧ ದೇಹವಾಗಿದೆ. ಅದೇಕೆಂದರೆ ಹೆಚ್ಚಿನ ಶಕ್ತಿಯಿಂದ ಸಂಯೋಜಿತಗೊಂಡಿರುವ ದೇಹವು ನಮ್ಮ ಭೌತಿಕ ದೇಹಗಳಿಗಿಂತ ಈಗಾಗಲೇ ಭಿನ್ನವಾಗಿರುತ್ತದೆ. ಈ ಸ್ಥಿತಿಯಲ್ಲಿ, ಎಲ್ಲಾ ಅಸಾಮಾನ್ಯ ಸಾಮರ್ಥ್ಯಗಳು ಮತ್ತು ಅಸಾಮಾನ್ಯ ರೂಪದ ಕೌಶಲ್ಯಗಳು ಒಮ್ಮೆ ದುರ್ಮಾರ್ಗಕ್ಕೆ ಬಳಕೆಯಾದರೆ, ಅವುಗಳೆಲ್ಲ ತುಂಬಾ ಆಳದ ದಿಕ್ಕಿನಲ್ಲಿ ನೆಲೆಸಿಬಿಡುತ್ತವೆ. ಅಂತೆಯೇ ಅವು ನಿರುಪಯುಕ್ತವಾಗಿ, ಬಹಳ ಕಾಲದವರೆಗೆ ಯಾವ ಕಾರ್ಯವನ್ನು ಮಾಡುವುದಿಲ್ಲ. ಭವಿಷ್ಯತ್ತಿನಲ್ಲಿ ಒಂದು ದಿನ ನೀವು ಅಭ್ಯಾಸದ ಸಾಧನೆಯಲ್ಲಿ ಯಶಸ್ವಿಯಾದಾಗ ಮತ್ತೆ ಪುನಃ ಕಾಣಬಹುದು. ಈಗ ನೀವು ಸಾಗಿಬಂದ ಪ್ರಯಾಣವನ್ನು ನೆನಪಿಸಿಕೊಳ್ಳಿ. ಈ ಸಮಯದಲ್ಲಿ, ಕೇವಲ ಎರಡು ವಸ್ತುಗಳು ಉಳಿಯುತ್ತವೆ. ಗಾಂಗ್‌ನ ಸ್ತಂಭವು ಉಳಿಯುತ್ತದೆ ಮತ್ತು ಹಸುಳೆಯಾಗಿರುವ ಸಾಧಿತವು ದೊಡ್ಡದಾಗಿ ಬೆಳೆಯುತ್ತದೆ. ಅಲ್ಲಿಯವರೆಗೆ ಅವೆರಡೂ ಸಾಧಾರಣ ದಿವ್ಯದೃಷ್ಟಿಯಿಂದಲೂ ಕಾಣಲಾಗದ ಆಳದಲ್ಲಿ ನೆಲೆಸಿರುತ್ತವೆ.

ಶುದ್ಧ-ಶ್ವೇತ ದೇಹದ ಹಂತವನ್ನು ಒಬ್ಬನು ತಲುಪಿರುವುದರಿಂದ ಅವನು ಮುಂದಿನ ಸಾಧನೆಯ ಅಭ್ಯಾಸವನ್ನು ತ್ರಿಗುಣ ವಿಶ್ವದಾಚೆಗಿನ ಫಾನಲ್ಲಿ ಪ್ರಾರಂಭಿಸಬೇಕು. ಅದು ಬುದ್ಧ ದೇಹದ ಸಾಧನೆಯೆಂತಲೂ ತಿಳಿಯಲ್ಪಟ್ಟಿದೆ. ಪೂರ್ಣ ದೇಹವು ಗಾಂಗ್‌ನ ಸಂಯೋಜನೆಯಾಗುತ್ತದೆ. ಇಲ್ಲಿಂದ ಒಬ್ಬನ ಆತ್ಮಪ್ರಕೃತಿಯು ಹೆಚ್ಚು ದೃಢವಾಗುತ್ತದೆ. ಒಬ್ಬನು ತನ್ನ ಸಾಧನೆಯ ಅಭ್ಯಾಸವನ್ನು ಹೊಸ ಪ್ರಾರಂಭದಿಂದ ಶುರು ಮಾಡುತ್ತಾನೆ ಮತ್ತು ಅಸಾಮಾನ್ಯ ಸಾಮರ್ಥ್ಯಗಳನ್ನು ಮತ್ತೊಮ್ಮೆ ಅಭಿವೃದ್ಧಿಪಡಿಸುತ್ತಾನೆ. ಆ ಸಾಮರ್ಥ್ಯಗಳು ಹೆಚ್ಚು ಸಮಯ 'ಅಸಾಮಾನ್ಯ ಸಾಮರ್ಥ್ಯ'ಗಳೆಂದು ಕರೆಯಲ್ಪಡುವುದಿಲ್ಲ. 'ಬುದ್ಧ ಫಾನ ದಿವ್ಯಶಕ್ತಿ' ಎಂದು ಕರೆಯಲ್ಪಡುತ್ತದೆ. ಅದು ಎಲ್ಲ ದಿಕ್ಕುಗಳಲ್ಲಿ ಕೆಲಸ ಮಾಡುತ್ತದೆ. ನೀವು ಭವಿಷ್ಯತ್ತಿನಲ್ಲಿ ನಿಮ್ಮ ಅಭ್ಯಾಸವನ್ನು ಮುಂದುವರೆಸುತ್ತ, ಸ್ವತಃ ಉನ್ನತ ಹಂತದ ವಸ್ತುಗಳನ್ನು ತಿಳಿದುಕೊಳ್ಳುತ್ತೀರಿ.

**ಮತಾಂಧತೆಯ ಸಂಬಂಧ:**

ನಾನು ಮತಾಂಧತೆಗೆ ಸಂಬಂಧಿಸಿದಂತೆ ಮಾತನಾಡುತ್ತೇನೆ. ಹಲವು ಜನರು ಚೀಗಾಂಗನ್ನು ದೀರ್ಘಕಾಲ ಅಭ್ಯಾಸ ಮಾಡಿದ್ದಾರೆ. ಅಲ್ಲಿ ಯಾವತ್ತೂ ಚೀಗಾಂಗನ್ನು ಅಭ್ಯಾಸ ಮಾಡದ ಜನರೂ ಇದ್ದಾರೆ. ಆದರೆ ಅವರು ಮಾನವ ಬದುಕಿನ ಅರ್ಥ ಮತ್ತು ಸತ್ಯವನ್ನು ವಿಚಾರ ಮಾಡಿ, ಅದನ್ನು ಒಪ್ಪಿ ಅನುಸರಿಸುತ್ತಿದ್ದಾರೆ. ಅವರು ಒಮ್ಮೆ ನಮ್ಮ ಫಾಲನ್ ದಫಾವನ್ನು ಕಲಿತರೆ, ಅವರು ತಿಳಿದುಕೊಳ್ಳಬೇಕೆಂದು ಬಯಸುವ, ಉತ್ತರಿಸಲಾಗದ ಹಲವು ಪ್ರಶ್ನೆಗಳನ್ನು ಒಮ್ಮೆಗೇ ಜೀವನದಲ್ಲಿ ಅರ್ಥಮಾಡಿಕೊಳ್ಳುತ್ತಾರೆ. ಅವರ ಮನಸ್ಸುಗಳು ಮೇಲೇರುವುದರೊಂದಿಗೆ, ಅವರು ನಿಜವಾಗಿಯೂ ಹೆಚ್ಚು ಭಾವುಕರಾಗುತ್ತಾರೆ. ಒಬ್ಬ ಅಪ್ಪಟ ಅಭ್ಯಾಸಿಯು ಅದರ ಮೌಲ್ಯವನ್ನು ಅರಿತಿರುತ್ತಾನೆ ಮತ್ತು ಅದನ್ನು ಪಾಲಿಸುತ್ತಾನೆ ಎಂದು ನಾನು ತಿಳಿದಿದ್ದೇನೆ. ಆದರೂ ಈ ಸಮಸ್ಯೆ ತಲೆದೋರುತ್ತದೆ: ಮಾನವರ ಭಾವುಕತೆಯಿಂದ, ಒಬ್ಬನು ಉಪಯೋಗವಿಲ್ಲದ ಮತಾಂಧತೆಯನ್ನು ಬೆಳೆಸುತ್ತಾನೆ. ಅದು ವ್ಯಕ್ತಿಯೊಬ್ಬನು ಸಾಮಾನ್ಯ ಮಾನವ ಸಮಾಜದ ವ್ಯಕ್ತಿಯೊಬ್ಬನೊಂದಿಗೆ ವ್ಯವಹರಿಸುವಾಗ, ಸಾಮಾನ್ಯ ಸಮಾಜದ ಪರಿಸರದಲ್ಲಿರುವಾಗ ವಿಚಿತ್ರವಾಗಿ, ಅಸಹಜವಾಗಿ ವರ್ತಿಸುವುದಕ್ಕೆ ಕಾರಣವಾಗುತ್ತದೆ. ಇದು ಒಪ್ಪಿತವಲ್ಲವೆಂದು ನಾನು ಹೇಳುತ್ತೇನೆ.

ನಮ್ಮ ಶಾಲೆಯಲ್ಲಿ ಬಹಳಷ್ಟು ಜನರು ಸಾಮಾನ್ಯ ಮಾನವ ಸಮಾಜದಲ್ಲಿ ಸಾಧನೆಯನ್ನು ಅಭ್ಯಾಸ ಮಾಡಬೇಕು. ಆದ್ದರಿಂದ ನೀವು ನೀವಾಗಿಯೇ ಸಾಮಾನ್ಯ ಸಮಾಜದಿಂದ ದೂರವುಳಿಯುವಂತಿಲ್ಲ ಮತ್ತು ಸಾಧನೆಯ ಅಭ್ಯಾಸವನ್ನು ಸ್ವಚ್ಛ ಮನಸ್ಸಿನೊಂದಿಗೆ ಮಾಡಬೇಕಾಗುತ್ತದೆ. ಮತ್ತೊಬ್ಬನೊಂದಿಗಿನ ನಿಮ್ಮ ಸಂಬಂಧವು ಸಹಜವಾಗಿಯೇ ಇರಬೇಕು. ಅದು ಸರಿ. ನೀವು ಹೆಚ್ಚು ಉನ್ನತ ಹಂತದ ಆತ್ಮಪ್ರಕೃತಿಯನ್ನು, ಒಳ್ಳೆಯ ಸ್ವಚ್ಛ ಮನಸ್ಸನ್ನು ಹೊಂದಿದ್ದೀರಿ. ನೀವು ಇನ್ನೂ ಅದನ್ನು ಉತ್ತಮಗೊಳಿಸಿ, ಅದರಿಂದ ನೀವು ಕೆಟ್ಟ ಕೆಲಸಗಳಿಗೆ ಬದ್ಧರಾಗುವುದಿಲ್ಲ ಮತ್ತು ಒಳ್ಳೆಯದನ್ನೇ ಮಾಡುತ್ತೀರಿ. ಇವುಗಳು ಕೇವಲ ಒಂದು ಪ್ರಕಟಣೆಯಂತೆಯೇ. ಕೆಲವರು ತಮಗೆ ತಾವೇ ತೊಡಗಿಸಿಕೊಂಡು, ಬೌದ್ಧಿಕ ಅಸಹಜತೆಯಂತೆ ಅಥವಾ ಅವರು ಬೇಕಾದಷ್ಟು ಈ ಜಾತ್ಯತೀತ ಪ್ರಪಂಚವನ್ನು ನೋಡಿರುವಂತೆ ಮಾತನಾಡುತ್ತಾರೆ. ಅದು ಬೇರೆಯವರಿಗೆ ಗ್ರಹಿಸಲೂ ಆಗುವುದಿಲ್ಲ. ಬೇರೆಯವರು ಹೇಳಬಹುದು: "ಹೇಗೆ ಒಬ್ಬ ವ್ಯಕ್ತಿಯು ಫಾಲನ್ ದಫಾ ಕಲಿತೂ ಹೀಗಾಗಲು ಸಾಧ್ಯ? ಅದು ಅವನು ಮಾನಸಿಕ ಸಮಸ್ಯೆಯೊಂದನ್ನು ಹೊಂದಿದ್ದಾನೆಂದು ಸೂಚಿಸುತ್ತದೆಯೇ." ಹೌದು, ಆದರೆ ಅದು ಹಾಗಲ್ಲ. ಅವನು ಸಾಧಾರಣವಾಗಿ ಹೆಚ್ಚು ಭಾವುಕನಾಗಿದ್ದಾನೆ ಮತ್ತು ಆ ಕಾರಣದಿಂದ ಸಾಮಾನ್ಯ ಜ್ಞಾನವಿಲ್ಲದೆ ಬುದ್ಧಿಯಿಲ್ಲದವನಂತೆ ಕಾಣುತ್ತಿದ್ದಾನೆ. ಅದರ ಬಗ್ಗೆ ಎಲ್ಲರೂ ಯೋಚಿಸಿ, ನಿಮ್ಮ ವರ್ತನೆಯೂ ಇದರಂತೆಯೇ ಇದ್ದರೆ ಅದೂ ಸಹ ತಪ್ಪು ಮತ್ತು ನೀವು ಅದರ ವಿರುದ್ಧದ ತುದಿಯನ್ನು ತಲುಪಿದರೆ ಅದೂ ಸಹ ಒಂದು ಬಂಧನವೇ. ನೀವು ಅದೆಲ್ಲವನ್ನು ಬಿಡಬೇಕಾಗುತ್ತದೆ ಮತ್ತು ದಿನನಿತ್ಯದ ಜನರೊಂದಿಗೆ ಎಲ್ಲರಂತೆ ಸಾಧಾರಣವಾಗಿ ಬದುಕುತ್ತಾ ಸಾಧನೆಯನ್ನು ಅಭ್ಯಾಸ ಮಾಡಬೇಕಾಗುತ್ತದೆ. ದಿನನಿತ್ಯದ ಜನರೊಂದಿಗೆ ನೀವು ಇರುವಾಗ, ಮಿಕ್ಕವರು ನೀವು ಬುದ್ಧಿ ಕೆಟ್ಟಿರುವವರೆಂದು ತೀರ್ಮಾನಿಸುತ್ತಾರೆ. ಅವರು ನಿಮ್ಮೊಂದಿಗೆ ವ್ಯವಹರಿಸುವುದಿಲ್ಲ ಮತ್ತು ನಿಮ್ಮಿಂದ ಅಂತರವನ್ನು ಕಾಪಾಡಿಕೊಳ್ಳುತ್ತಾರೆ. ಯಾರೂ ಅವಕಾಶಗಳೊಂದಿಗೆ ಆತ್ಮಪ್ರಕೃತಿಯನ್ನು ಉತ್ತಮಗೊಳಿಸುವುಕ್ಕೆ ನಿಮ್ಮಲ್ಲಿ ಕಾತುರರಾಗಿರುವುದಿಲ್ಲ ಮತ್ತು ಅವರು ನಿಮ್ಮನ್ನು ಸಾಧಾರಣ ವ್ಯಕ್ತಿಯಂತೆಯೂ ಪರಿಗಣಿಸುವುದಿಲ್ಲ. ನಾನು ಹೇಳುತ್ತಿದ್ದೇನೆ– ಇದು ಸರಿಯಲ್ಲ! ಅದೇನೇ ಆದರೂ ಪ್ರತಿಯೊಬ್ಬನೂ ಈ ವಿಚಾರದ ಬಗ್ಗೆ ಗಮನ ಹರಿಸಲೇಬೇಕು ಮತ್ತು ಸ್ವತಃ ಪಾಲ್ಗೊಳ್ಳಬೇಕು.

ನಮ್ಮ ಅಭ್ಯಾಸವು ಧ್ಯಾನದಲ್ಲಿ ಶಿಸ್ತಿಲ್ಲದಂತೆ ಮಾಡುವ ಸಾಧಾರಣ ಅಭ್ಯಾಸಗಳಂತೆ ಅಲ್ಲ. ನಮ್ಮ ಅಭ್ಯಾಸವು ನೀವು ಸ್ವತಃ ಪೂರ್ಣ ಪರಿಜ್ಞಾನದೊಂದಿಗೆ ಸಾಧನೆ ಮಾಡುವುದಕ್ಕೆ ಬಯಸುತ್ತದೆ. ಯಾವನೋ ಒಬ್ಬ ಯಾವಾಗಲೂ ಹೇಳುತ್ತಾನೆ: "ಗುರುವೇ, ಒಮ್ಮೆ ನಾನು ನನ್ನ ಕಣ್ಣುಗಳನ್ನು ಮುಚ್ಚಿದರೆ ನನ್ನ ದೇಹವೂ ತೂಗಾಡುತ್ತದೆ." ನಾನು ಹೇಳುತ್ತಿದ್ದೇನೆ ಇದು ಸಾಧನೆಗೆ ಅಗತ್ಯವಿಲ್ಲದ್ದು. ನೀನು ಈಗಾಗಲೇ ಒಂದು ಅಭ್ಯಾಸವನ್ನು, ಪ್ರಧಾನ ಪ್ರಜ್ಞೆಯನ್ನು ಸ್ವಚ್ಛಂದವಾಗಿ ಅಲೆಯಲು ಬಿಡುವ ಅಭ್ಯಾಸವನ್ನು ಬೆಳೆಸಿಕೊಂಡಿದ್ದೀಯ. ಒಮ್ಮೆ ನೀನು ನಿನ್ನ ಕಣ್ಣನ್ನು ಮುಚ್ಚಿದ ಮೇಲೆ, ಪ್ರಧಾನ

ಪ್ರಜ್ಞೆಯನ್ನು ವಿರಾಮಕ್ಕೆ ತರುತ್ತೀಯ. ಇದನ್ನು ನೀನು ಈಗಗಾಲೇ ಬೆಳೆಸಿಕೊಂಡಿದ್ದೀಯ. ಇಲ್ಲಿ ಕೂತಿರುವಾಗ, ಏಕೆ ನಿನ್ನ ದೇಹ ತೂಗಾಡುತ್ತಿಲ್ಲ? ಚೀಗಾಂಗ್ ಈ ರೀತಿಯಲ್ಲಿ ಅಭ್ಯಾಸಗೊಳ್ಳುತ್ತದೆ ಎಂದು ನೀನು ಯೋಚಿಸಿದ್ದೀಯ ಮತ್ತು ಅಂತಹ ಕಲ್ಪನೆಯನ್ನು ರೂಪಿಸಿಕೊಂಡಿದ್ದೀಯ. ನೀನು ನಿನ್ನ ಕಣ್ಣುಗಳನ್ನು ಮುಚ್ಚಿದಾಕ್ಷಣ, ನೀನು ಎಲ್ಲಿದ್ದೀಯೆಂದು ಅರಿಯದೆಯೇ ಅದೃಶ್ಯವಾಗುತ್ತೀಯ. ನಾವು ಹೇಳುತ್ತೇವೆ ನಿನ್ನಯ ಪ್ರಧಾನ ಪ್ರಜ್ಞೆಯು ಜಾಗೃತವಾಗಿಯೇ ಇರಬೇಕು. ಏಕೆಂದರೆ ಈ ಅಭ್ಯಾಸವು ನೀನಾಗಿಯೇ ಮಾಡುವಂತಾದ್ದು. ನೀನು ಜಾಗೃತ ಮನಸ್ಸಿನಿಂದಲೇ ಮುಂದುವರಿಯಬೇಕು. ನಾವು ಒಂದು ಧ್ಯಾನದ ವ್ಯಾಯಾಮವನ್ನು ಹೊಂದಿದ್ದೇವೆ. ನಾವು ಧ್ಯಾನವನ್ನು ಹೇಗೆ ಅಭ್ಯಾಸ ಮಾಡುತ್ತೇವೆ? ನಾವು ಎಲ್ಲರಿಂದ ಇದನ್ನು ಬಯಸುತ್ತೇವೆ. ನೀವು ಎಷ್ಟು ಆಳವಾಗಿ ಧ್ಯಾನ ಮಾಡುತ್ತೀರ ಎಂಬುದು ಮುಖ್ಯವಲ್ಲ, ನೀವು 'ಇಲ್ಲಿ ಅಭ್ಯಾಸ ಮಾಡುತ್ತಿದ್ದೇವೆ'ಂದು ಅರಿಯುವುದು ಮುಖ್ಯ. ನೀವು ಎಲ್ಲಿದ್ದೀರೆಂದು ಅರಿಯದಿದ್ದರೆ ಖಂಡಿತವಾಗಿ ನೀವು ಧ್ಯಾನಸ್ಥ ಹಂತದಲ್ಲಿ ಅಡಚಣೆ ಹೊಂದುತ್ತೀರಿ. ಹಾಗಾದರೆ ಯಾವ ನಿರ್ದಿಷ್ಟ ಹಂತವನ್ನು ಹೊಂದಬೇಕು? ನೀವು ಅಲ್ಲಿ ಕುಳಿತಿರಬೇಕಾದರೆ, ಹೆಚ್ಚು ಆರಾಮವಾಗಿ ಮತ್ತು ಸಂತೋಷವಾಗಿ ಮೊಟ್ಟೆಯೊಳಗೆ ಕುಳಿತಿರುವಂತೆ ಅನುಭವ ಹೊಂದಬೇಕು; ಸ್ವತಃ ವ್ಯಾಯಾಮವನ್ನು ಅಭ್ಯಾಸ ಮಾಡುತ್ತಿದ್ದೇನೆ ಎಂಬ ಪ್ರಜ್ಞೆ ಹೊಂದಿರಬೇಕು, ಆದರೆ ಪೂರ್ಣ ದೇಹ ಅಲ್ಲಾಡದಂತೆಯೂ ಗಮನ ಹರಿಸಬೇಕು. ಇದೇ ನಿಮ್ಮ ಅಭ್ಯಾಸದಲ್ಲಿ ಏನೇನಿರಬೇಕು ಎಂಬುದರ ವಿವರ. ಅಲ್ಲಿ ಮತ್ತೊಂದು ಹಂತವಿದೆ. ಒಬ್ಬನು ಒಂದಷ್ಟು ಸಮಯ ಕುಳಿತಿದ್ದಾಗ, ತನ್ನ ಕಾಲುಗಳು ಹೊರಟು ಹೋದದ್ದನ್ನು ಗುರುತಿಸುತ್ತಾನೆ ಮತ್ತು ಕಾಲುಗಳು ಎಲ್ಲಿ ಹೋದವೆಂದು ಚಿಂತಿಸುವುದಿಲ್ಲ; ದೇಹವೂ ಹೊರಟುಹೋಗುತ್ತದೆ; ಭುಜಗಳೂ, ಕೈಗಳೂ ಹೊರಟುಹೋಗುತ್ತವೆ, ತಲೆ ಮಾತ್ರ ಉಳಿಯುತ್ತದೆ. ಅದಾದ ಮೇಲೂ ಒಬ್ಬನು ಅಭ್ಯಾಸವನ್ನು ಮುಂದುವರೆಸಿದರೆ, ತಲೆಯೂ ಹೊರಟುಹೋದದ್ದನ್ನು ಚೆನ್ನಾಗಿ ತಿಳಿಯುತ್ತಾನೆ. ಕೇವಲ ಒಬ್ಬನ ಮನಸ್ಸು ಮಾತ್ರ ಅದರಲ್ಲೂ ಇಲ್ಲಿ ಅಭ್ಯಾಸ ಮಾಡುತ್ತಿದ್ದೇನೆ ಎಂಬುದು ಮಾತ್ರ ಉಳಿಯುತ್ತದೆ. ನಾವು ಈ ಹಂತವನ್ನು ತಲುಪಿದರೆ ಸಾಕು. ಇದು ಏಕೆ? ಒಬ್ಬನು ಯಾವಾಗ ಈ ಹಂತದಲ್ಲಿ ಅಭ್ಯಾಸ ಮಾಡುತ್ತಾನೆ. ಆಗ ದೇಹವು ಪೂರ್ಣವಾಗಿ ವರ್ಗಾವಣೆಗೊಳ್ಳುತ್ತದೆ ಮತ್ತು ಈ ಸ್ಥಿತಿಯೇ ಅತ್ಯುನ್ನತವಾದುದು. ಆದ್ದರಿಂದ ನೀವು ಈ ಶಾಂತಸ್ಥಿತಿಯನ್ನು ಗಳಿಸಬೇಕೆಂದು ನಾವು ಬಯಸುತ್ತೇವೆ. ಹೇಗಾದರೂ ನೀವು ನಿದ್ದೆಗೆ ಜಾರಬೇಡಿ ಅಥವಾ ಪ್ರಜ್ಞೆಯನ್ನು ಕಳೆದುಕೊಳ್ಳಬೇಡಿ. ಇಲ್ಲದಿದ್ದರೆ ಬೇರೊಬ್ಬನಿಂದ ಒಳ್ಳೆಯ ಸಂಗತಿಗಳು ಅಭ್ಯಾಸಗೊಂಡುಬಿಡುತ್ತವೆ.

ನಮ್ಮ ಎಲ್ಲ ಅಭ್ಯಾಸಿಗಳು ಖಂಡಿತವಾಗಿ ಎಂದಿಗೂ ಅಸಹಜವಾಗಿ ದಿನನಿತ್ಯದ ಜನರೊಂದಿಗೆ ವರ್ತಿಸುವುದಿಲ್ಲ. ಒಂದು ವೇಳೆ ನೀವು ಒಂದು ಕೆಟ್ಟ ಪಾತ್ರವನ್ನು ದಿನನಿತ್ಯದ ಜನರೊಂದಿಗೆ ಆಡಿದರೆ, ಬೇರೆಯವರು ಹೇಳಬಹುದು: ಯಾಕಪ್ಪಾ ಫಾಲನ್ ದಫಾ ಕಲಿತಿರುವ ಕೆಲವು ಜನರು ಈ ರೀತಿಯಲ್ಲಿ ವರ್ತಿಸುತ್ತಾರೆ? ಅದು ಹಾಗೆಯೇ ಫಾಲನ್ ದಫಾದ ಕೀರ್ತಿಯನ್ನು ಹಾಳುಮಾಡುತ್ತದೆ. ಆದ್ದರಿಂದ ಇದರ ಮೇಲೆ ಗಮನವಿಡಿ. ಸಾಧನಾಭ್ಯಾಸದ ಅವಧಿಯಲ್ಲಿ ಒಬ್ಬನು ಮತಾಂಧತೆಯನ್ನು ಬೆಳೆಸಿಕೊಳ್ಳದೆ ಇರುವುದರಲ್ಲಿ ಖಚಿತವಾಗಿರಬೇಕು.

**ಪ್ರವಚನ ವೃದ್ಧಿ:**

ಪ್ರವಚನದ ವೃದ್ಧಿಯ ಹಿಂದೆ ಧರ್ಮಗಳಿಂದ ಮನ್ನಿಸಲ್ಪಟ್ಟಿದೆ. ಏನೇ ಇದ್ದರೂ, ಮಾತಿನ ಸಾಧನೆಯು ಕೆಲವು ವೃತ್ತಿಪರ ಅಭ್ಯಾಸಿಗಳಿಗೆ / ಸಾಧಕರಿಗೆ ಧರ್ಮಗಳಿಂದ ಸೂಚಿತವಾಗಿ ಅನ್ವಯಿಸಿದ್ದಾಗಿದೆ. ಋಷಿಗಳು ಮತ್ತು ತಾವೋ ಅನುಯಾಯಿಗಳಾದವರಿಗೆ, ಯಾರು ಮಾತನಾಡಲು ಬಾಯಿ ತೆರೆಯುವುದಿಲ್ಲವೋ ಅಂತವರಿಗೆ ಅನ್ವಯಿಸಿದ್ದಾಗಿದೆ. ಏಕೆಂದರೆ ಅವರು ವೃತ್ತಿಪರ ಸಾಧಕರಾಗಿದ್ದರು. ಅವರು ಮಾನವ ಸಮಾಜದಿಂದ; ಸಂಬಂಧಗಳಿಂದ ದೂರವಿರುವುದಕ್ಕೆ ಬಯಸುತ್ತಿದ್ದರು. ಅವರು ಅಂದುಕೊಂಡಿದ್ದರು ಒಮ್ಮೆ ಒಬ್ಬ ಯೋಚಿಸಿದರೆ, ಅದು ಕರ್ಮ. ಧರ್ಮಗಳು ಕರ್ಮವನ್ನು 'ಒಳ್ಳೆಯ ಕರ್ಮ' ಮತ್ತು 'ಪಾಪಪೂರ್ಣ ಕರ್ಮ'ವೆಂದು ವಿಂಗಡಿಸಿವೆ. ಅದು ಒಳ್ಳೆಯ ಕರ್ಮವೋ ಅಥವಾ ಪಾಪಪೂರ್ಣ ಕರ್ಮವೋ ಎಂದು ಗಣಿಸದೆ, ಬುದ್ಧ ಪಂಥವು ಅವೆರಡರ ನಡುವಿನ ಖಾಲಿತನವನ್ನು ಒಪ್ಪುತ್ತದೆ. ತಾವೋ ಪಂಥವು ಏನನ್ನೂ ಇಟ್ಟುಕೊಳ್ಳದಿರುವುದನ್ನು

ಬೋಧಿಸುತ್ತದೆ. ಅದು ಏನನ್ನೂ ಉತ್ಪಾದಿಸುವುದಿಲ್ಲ. ಆದ್ದರಿಂದಲೇ, ಅವರು ಹೇಳುತ್ತಾರೆ ಕರ್ಮದ ಸಂಬಂಧವನ್ನು ಅವರು ನೋಡುವವರೆಗೆ, ಏನನ್ನೂ ಮಾಡುವುದಿಲ್ಲ. ಒಬ್ಬ ಸಾಮಾನ್ಯ ಅಭ್ಯಾಸಿಯು, ಯಾರು ಈ ಉನ್ನತ ಹಂತವನ್ನು ತಲುಪಿರುವುದಿಲ್ಲವೋ, ಅವನು ಇದನ್ನೆಲ್ಲ ನೋಡಲಾರ. ಆದ್ದರಿಂದ ಅವನು ಚಿಂತಿಸಬೇಕಾಗುತ್ತದೆ. ಕೆಲವು ಮೇಲ್ನೋಟಕ್ಕೆ ಒಳ್ಳೆಯದಾಗಿ ಕಾಣುತ್ತವೆ. ಆದರೆ ಒಮ್ಮೆ ಮಾಡಲ್ಪಟ್ಟರೆ ಅದು ಒಂದು ಕೆಟ್ಟದ್ದಾಗಿರುತ್ತದೆ. ಒಬ್ಬನು ತನ್ನ ನಿರ್ಲಿಪ್ತ ಅಭ್ಯಾಸದಲ್ಲಿ ಉತ್ತಮವಾದುದನ್ನು ಮಾಡಬೇಕು ಮತ್ತು ಬೇರ್‍ಯಾವುದನ್ನು ಮಾಡಬಾರದು. ಅದರಿಂದ ಒಬ್ಬನು ಕರ್ಮದ ಉತ್ಪಾದನೆಯನ್ನು ತಡೆಯಬಹುದು. ಉದಾಹರಣೆಗೆ, ನಮ್ಮ ಅಭ್ಯಾಸಿಗರಿಗಾಗಿ ಅದೀಗಾಗಲೇ ನಿಶ್ಚಯಿಸಲ್ಪಟ್ಟಿದೆ. ಯಾವ ಹಂತದಲ್ಲಿ ಅವರು ಜ್ಞಾನೋದಯಗೊಳ್ಳುತ್ತಾರೆಂದು. ಒಂದು ವೇಳೆ ನೀವು ಅನಗತ್ಯವಾಗಿ ಏನನ್ನಾದರು ಅರ್ಧ ದಾರಿಯಲ್ಲಿ ಅಳವಡಿಸಿಕೊಂಡರೆ, ಅದು ನಿಮ್ಮ ಪೂರ್ಣ ಸಾಧನೆಯ ಅಭ್ಯಾಸದಲ್ಲಿ ಸಮಸ್ಯೆಗಳುಂಟಾಗುವುದಕ್ಕೆ ಕಾರಣವಾಗುತ್ತದೆ.

ಬುದ್ಧ ಪಂಥವು ಮಾತಿನ ಸಾಧನೆಯನ್ನು ಹೊಂದುತ್ತದೆ. ಒಬ್ಬನ ಮಾತು ಅವನ ಆಲೋಚನೆಯಿಂದ ನಿರ್ದೇಶಿಸಲ್ಪಡುತ್ತದೆ. ಆ ವಿಚಾರದಂತೆ ಒಬ್ಬನ ಆಲೋಚನೆಯು ಉದ್ದೇಶಗಳನ್ನು ಹೊಂದಿರುತ್ತದೆ. ಒಂದು ವೇಳೆ ಒಬ್ಬನ ಬುದ್ಧಿಯು ತನಗೆ ತಾನೇ ಸ್ವಲ್ಪ ಯೋಚಿಸುವುಕ್ಕೆ ಬಯಸಿದರೆ, ಏನನ್ನಾದರು ವ್ಯಕ್ತಪಡಿಸುತ್ತದೆ, ಏನನ್ನಾದರು ಮಾಡುತ್ತದೆ, ಪಂಚೇಂದ್ರಿಯಗಳನ್ನು ನಿರ್ದೇಶಿಸುತ್ತದೆ, ಅದು ದಿನನಿತ್ಯದ ಜನರೊಂದಿಗೆ ಸಂಬಂಧವೊಂದನ್ನು ಹೊಂದಬಹುದು. ಒಬ್ಬನಿಂದ ಇನ್ನೊಬ್ಬನಿಗೆ ಅಲ್ಲಿ ಸಂಘರ್ಷಗಳಿರುತ್ತವೆ. ಉದಾಹರಣೆಗೆ, ಇಂತವು "ನೀನು ಒಳ್ಳೆಯವನು, ಆದರೆ ಅವನು ಒಳ್ಳೆಯವನಲ್ಲ" ಅಥವಾ "ನಿನ್ನಯ ಸಾಧನೆ ಉತ್ತಮವಾಗಿದೆ, ಆದರೆ ಅವನದಿಲ್ಲ." ಸಾಧಾರಣವಾಗಿರುವ ಕೆಲವಾರು ವಿಚಾರಗಳ ಬಗ್ಗೆಯೂ ನಾವು ಮಾತನಾಡೋಣ. ಅವುಗಳೆಂದರೆ, 'ನಾನು ಇದನ್ನು ಅಥವಾ ಅದನ್ನು ಮಾಡಲು ಬಯಸುತ್ತೇನೆ' ಅಥವಾ 'ಈ ವಿಷಯವು ಈಗಲೇ ಈ ದಾರಿಯಲ್ಲಿ ಅಥವಾ ಆ ದಾರಿಯಲ್ಲಿ ಆಗಬೇಕು.' ಅದು ಉದ್ದೇಶಪೂರ್ವಕವಲ್ಲದೆ ಯಾವನೋ ಒಬ್ಬನಿಗೆ ನೋವು ತರಬಹುದು. ಏಕೆಂದರೆ ಅಂತರ್ ವ್ಯಕ್ತಿಗಳ ನಡುವಿನ ಘರ್ಷಣೆಗಳು ಹೆಚ್ಚು ಸಂಕೀರ್ಣವಾದುವು. ಒಬ್ಬ ಉದ್ದೇಶರಹಿತವಾಗಿಯೇ ಕರ್ಮವನ್ನು ಉತ್ಪಾದಿಸಬಹುದು. ಈ ಸಂದರ್ಭಗಳನುಸಾರ, ಒಬ್ಬನು ನಿಜವಾಗಿಯೂ ತನ್ನ ಬಾಯನ್ನು ಸಂಪೂರ್ಣವಾಗಿ ಮುಚ್ಚಲು ಬಯಸುತ್ತಾನೆ ಮತ್ತು ಏನನ್ನು ಹೇಳುವುದಿಲ್ಲ. ಇತಿಹಾಸದಲ್ಲಿ, ಧರ್ಮಗಳು ಮಾತಿನ ಸಾಧನೆಯನ್ನು ಹೆಚ್ಚು ಗಂಭೀರವಾಗಿ ಕೈಗೆತ್ತಿಕೊಂಡಿವೆ ಮತ್ತು ಬೋಧಿಸಿವೆ.

ನಮ್ಮ ಫಾಲನ್ ದಫಾದ ಬಹುತೇಕ ಅಭ್ಯಾಸಿಗಳು ಸಾಧನೆಯನ್ನು ದಿನನಿತ್ಯದ ಜನರ ನಡುವೆ ಅಭ್ಯಾಸ ಮಾಡುತ್ತಾರೆ. ಅವರೆಲ್ಲ ಸಾಮಾನ್ಯ ಮಾನವ ಸಮಾಜದೊಂದಿಗೆ ಸಾಧಾರಣ ಜೀವನವನ್ನು ಸಾಗಿಸುವುದಕ್ಕೆ ಮತ್ತು ಸಮಾಜದೊಂದಿಗೆ ವ್ಯವಹರಿಸುವುದಕ್ಕೆ ಹಿಂಜರಿಸುವುದಿಲ್ಲ. ಪ್ರತಿಯೊಬ್ಬನೂ ಕೆಲಸವೊಂದನ್ನು ಹೊಂದಿರುತ್ತಾನೆ ಮತ್ತು ಅದನ್ನು ಚೆನ್ನಾಗಿ ಮಾಡುತ್ತಾನೆ. ಕೆಲವರು ಮಾತನಾಡುತ್ತಲೇ ತಮ್ಮ ಕೆಲಸವನ್ನು ಮಾಡುತ್ತಾರೆ. ಆದ್ದರಿಂದ ಅದೊಂದು ಸಂಘರ್ಷವಲ್ಲವೆ? ಅದೊಂದು ಸಂಘರ್ಷವಲ್ಲ. ಏಕೆ ಅದೊಂದು ಸಂಘರ್ಷವಲ್ಲ? ಏಕೆಂದರೆ ಮಾತಿನ ಸಾಧನೆಯು ಅದಕ್ಕಿಂತ ಭಿನ್ನವಾದುದು. ಅವೆರಡರ ಸಾಧನೆಯು ದಾರಿ ಮತ್ತು ಅಗತ್ಯಗಳೂ ಭಿನ್ನವಾಗಿವೆ. ನಾವೆಲ್ಲ ಮಾತನಾಡಿದ್ದೇವೆ. ಅಭ್ಯಾಸಿಯೊಬ್ಬನ ಆತ್ಮಪ್ರಕೃತಿಯು ಹೆಚ್ಚು ಸಂಘರ್ಷಗಳನ್ನು ಸೃಷ್ಟಿಸುತ್ತದೆ. ಅಭ್ಯಾಸಿಯಾಗಿ, ನಾವು ನಾವಾಗಿಯೇ ಬೋಧನೆಯ ಗುಣಮಟ್ಟದ ಮೇಲೆ ನಾವು ಹೇಳಿರುವುದು ಖಚಿತವಾದ ಸಂಗತಿಗಳೇ ಎಂಬುದನ್ನು ಅಳೆದುಕೊಳ್ಳಬೇಕು. ನಾವು ಬೋಧಿಸುವ ಮಾತಿನ ಸಾಧನೆಯು ಇದಕ್ಕೆ ಅನ್ವಯಿಸುತ್ತದೆ. ಯಾವುದು ಒಬ್ಬನ ಕೀರ್ತಿಯಲ್ಲಿ ಭಾಗಿಯಾಗುತ್ತದೆ ಮತ್ತು ಅವನ ವೈಯಕ್ತಿಕ ಗಳಿಕೆಯಾಗಿದ್ದು, ದಿನನಿತ್ಯದ ಜನರೊಂದಿಗೆ ಕಳೆದುಹೋಗದಂಥದ್ದು. ಒಂದೇ ಅಭ್ಯಾಸ ಶಾಲೆಯ ಅಭ್ಯಾಸಿಗಳ ನಡುವೆ ಪರಿಜ್ಞಾನವಿಲ್ಲದೆ ಸುಳ್ಳು ಸುದ್ದಿಗಳು, ಪುಕಾರುಗಳು ಹರಡುವಾಗ ಬಳಕೆಯಾಗದಂತದ್ದು. ನಾನು ಯೋಚಿಸುತ್ತೇನೆ ಈ ಕ್ಷೇತ್ರಗಳಲ್ಲಿ ನಾವು ಏನು ಹೇಳುತ್ತೇವೆ ಎಂದು ಗಮನಿಸುವುದೇ ಮಾತಿನ ಸಾಧನೆ. ಹಿಂದಿನ ಋಷಿಗಳು ಈ ವಿಚಾರಗಳಲ್ಲಿ ಹೆಚ್ಚು ಗಂಭೀರವಾಗಿದ್ದರು.

ಏಕೆಂದರೆ ಒಮ್ಮೆ ಒಬ್ಬನು ಯೋಚಿಸುವುದಕ್ಕೆ ಪ್ರಾರಂಭಿಸಿದರೆ ಅವನು ಕರ್ಮವನ್ನು ಸೃಷ್ಟಿಸುತ್ತಿದ್ದ. ಆದರೂ ಅವರು 'ದೇಹ, ಮಾತು ಮತ್ತು ಮನಸ್ಸು'ಗಳನ್ನು ಸಾಧಿಸುತ್ತಿದ್ದರು. ದೇಹದ ಸಾಧನೆಯಲ್ಲಿ ಒಬ್ಬ ಕೆಟ್ಟ ವ್ಯವಹಾರಗಳಲ್ಲಿ ತೊಡಗಬಾರದಿತ್ತು. ಮಾತಿನ ಸಾಧನೆಯಲ್ಲಿ ಒಬ್ಬ ಮಾತನಾಡಬಾರದಿತ್ತು. ಮನಸ್ಸಿನ ಸಾಧನೆಯಲ್ಲಿ ಒಬ್ಬ ಯೋಚಿಸಿರುವುದನ್ನೂ ಮಾಡಬಾರದಿತ್ತು. ನಾವು ನಮ್ಮಷ್ಟಕ್ಕೆ ಅಭ್ಯಾಸಿಯೊಬ್ಬನ ಆತ್ಮಪ್ರಕೃತಿಯ ಗುಣಮಟ್ಟದ ಹಿನ್ನೆಲೆಯಲ್ಲಿ ತೊಡಗಿಸಿಕೊಳ್ಳುತ್ತೇವೆ.

# ಉಪನ್ಯಾಸ–ಒಂಬತ್ತು

**ಚೀಗಾಂಗ್ (ಪಾರಂಪರಿಕ ಚೀನೀ ವ್ಯಾಯಾಮ ಪದ್ಧತಿ) ಮತ್ತು ದೈಹಿಕ ವ್ಯಾಯಾಮ**

**ಒಂ**ದು ಸಾಮಾನ್ಯ ಹಂತದಲ್ಲಿ, ಜನರು ಸುಲಭವಾಗಿ ಚೀಗಾಂಗನ್ನು ನೇರವಾಗಿ ದೈಹಿಕ ವ್ಯಾಯಾಮಗಳಿಗೆ ಸಂಬಂಧಿಸಿದ್ದೆಂದು ತೆಗೆದುಕೊಳ್ಳುತ್ತಾರೆ. ಹೌದು, ಕೆಳಹಂತದಲ್ಲಿ ಒಂದು ಆರೋಗ್ಯವಂತ ದೇಹವನ್ನು ಹೊಂದುವುದಕ್ಕಾಗಿ ಜನ ಚೀಗಾಂಗ್ ಮತ್ತು ದೈಹಿಕ ವ್ಯಾಯಾಮಗಳನ್ನು ಸಮಾನವಾಗಿ ಗೌರವಿಸುತ್ತಾರೆ. ಆದಾಗ್ಯೂ ಚೀಗಾಂಗ್‌ನ ನಿರ್ದಿಷ್ಟವಾದ ವ್ಯಾಯಾಮ ಪದ್ಧತಿ ದೈಹಿಕ ವ್ಯಾಯಾಮಗಳಿಗಿಂತ ಹೆಚ್ಚು ಭಿನ್ನವಾಗಿರುತ್ತದೆ. ದೈಹಿಕ ವ್ಯಾಯಾಮಗಳ ಮೂಲಕ ಒಂದು ಆರೋಗ್ಯವಂತ ದೇಹವನ್ನು ಹೊಂದುವುದಕ್ಕೆ, ಒಬ್ಬನು ವ್ಯಾಯಾಮದ ಮೊತ್ತವನ್ನು ಮತ್ತು ದೈಹಿಕ ತರಬೇತಿಯ ತೀವ್ರತೆಯನ್ನು ಹೆಚ್ಚಿಸಬಹುದು. ಚೀಗಾಂಗ್ ಅಭ್ಯಾಸವು ಇದಕ್ಕೆ ವಿರುದ್ಧವಾದುದು. ಅಲ್ಲಿ ಯಾವುದೇ ಚಲನೆಯಿದ್ದರೂ, ಅದು ಸಾಧುವಾದದ್ದು, ನಿಧಾನವಾದದ್ದು ಮತ್ತು ತಿರುವುಗಳುಳ್ಳದ್ದು. ಅದಲ್ಲದೆ ಅದು ಸ್ಥಿರವಾದದ್ದು ಮತ್ತು ಚಲನೆಯಿಲ್ಲದ್ದು. ಈ ಎಲ್ಲಾ ಅಂಶಗಳು ಚೀಗಾಂಗನ್ನು ದೈಹಿಕ ವ್ಯಾಯಾಮಗಳಿಂದ ಹೆಚ್ಚು ಭಿನ್ನವೆಂದು ಸೂಚಿಸುತ್ತವೆ. ಒಂದು ಉನ್ನತ ಹಂತದ ದೃಷ್ಟಿಕೋನದಲ್ಲಿ ಚೀಗಾಂಗ್ ಕೇವಲ ಉಪಶಮನಕ್ಕೆ ಮತ್ತು ಸದೃಢತೆಗೆ ಸೀಮಿತವಾಗಿಲ್ಲ. ಅದು ಉನ್ನತ ಹಂತಗಳ ಮತ್ತು ಹೆಚ್ಚು ಆಳದ ಸಾರಾಂಶಗಳಲ್ಲಿ ಕೆಲವಸ್ತುಗಳನ್ನು ಸಶರೀರಗೊಳಿಸುತ್ತದೆ. ಸಾಮಾನ್ಯ ಜನರ ಹಂತದಲ್ಲಿನ ಚಿಕ್ಕ ಅಲ್ಪವಿದ್ಯೆಯೇ ಚೀಗಾಂಗ್ ಅಲ್ಲ. ಅದು ಅಸಾಮಾನ್ಯವಾದುದು ಮತ್ತು ಭಿನ್ನ ಭಿನ್ನ ಹಂತಗಳಲ್ಲಿ ಭಿನ್ನ ಭಿನ್ನ ರೀತಿಯಲ್ಲಿ ಪ್ರಕಟಗೊಳ್ಳುವಂತದ್ದು. ಅದು ದಿನನಿತ್ಯದ ಜನರನ್ನು ಮೀರಿ ದೂರಕ್ಕೆ ಸಾಗುವಂತಾದ್ದು.

ವ್ಯಾಯಾಮಗಳ ಸ್ವರೂಪವನ್ನು ಗಣನೆಗೆ ತೆಗೆದುಕೊಂಡರೂ, ಪ್ರಚಂಡ ಭಿನ್ನತೆಯನ್ನು ಅವು ತೋರಿಸುತ್ತವೆ. ಈ ಆಧುನಿಕ ಹಂತದ ಸ್ಪರ್ಧೆಗಳಿಗೆ ಯಾವಾಗಲೂ ಸಿದ್ಧವಾಗಿರುವುದಕ್ಕೆ ಮತ್ತು ಸ್ಪರ್ಧೆಯ ಅಳತೆಗೋಲನ್ನು ಸಂಧಿಸುವುದಕ್ಕೆ, ಒಬ್ಬ ಅಥ್ಲೀಟ್, ಅದರಲ್ಲಿಯೂ ಇಂದಿನ ಅಥ್ಲೀಟ್ ವ್ಯಾಯಾಮದ ಮೊತ್ತವನ್ನು ಹೆಚ್ಚಿಸುವ ಅಗತ್ಯವಿರುತ್ತದೆ. ಅದರಲ್ಲಿಯೂ, ಒಬ್ಬನು ಯಾವಾಗಲೂ ದೇಹವನ್ನು ಒಂದೇ ರೂಪದಲ್ಲಿ ಕಾಯ್ದುಕೊಳ್ಳಬೇಕಾಗುತ್ತದೆ. ಈ ಗುರಿಯನ್ನು ಸಾಧಿಸುವುದಕ್ಕೆ, ರಕ್ತಸಂಚಾರವನ್ನು ಯಥೋಚಿತವಾಗಿರಿಸಬೇಕು. ಅದಕ್ಕಾಗಿ ಒಬ್ಬನು ವ್ಯಾಯಾಮದ ಸಮಯವನ್ನು ಹೆಚ್ಚಿಸಬೇಕಾಗುತ್ತದೆ ಮತ್ತು ದೇಹವನ್ನು ಯಾವಾಗಲೂ ಉತ್ತಮ ಸ್ಥಿತಿಯಲ್ಲಿಡಬೇಕಾಗುತ್ತದೆ. ಏಕೆ ಜೀರ್ಣಕ್ರಿಯೆಯನ್ನು ಹೆಚ್ಚಿಸಬೇಕಾಗುತ್ತದೆ? ಅದು ಏಕೆಂದರೆ ಅಥ್ಲೀಟ್‌ನ ದೇಹವು ಯಾವಾಗಲೂ ಉತ್ತಮ ಸ್ಥಿತಿಗೇರುತ್ತಿರಬೇಕು ಮತ್ತು ಸ್ಪರ್ಧೆಗಾಗಿ ಅತ್ಯುತ್ತಮ ಸ್ಥಿತಿಯಲ್ಲಿರಬೇಕು. ಮಾನವ ದೇಹವು ಅಸಂಖ್ಯಾತ ಜೀವಕೋಶಗಳಿಂದ ರೂಪಿತವಾಗಿದೆ. ಈ ಎಲ್ಲ ಜೀವಕೋಶಗಳು ಒಂದು ನಿರ್ದಿಷ್ಟ ಪ್ರಕ್ರಿಯೆಯಲ್ಲಿರುತ್ತವೆ. ಹೊಸದಾಗಿ ಬೆಳೆಯ ಜೀವಕೋಶದ ಜೀವಿತವು ಹೆಚ್ಚು ಸತ್ವಯುತವಾದುದು ಮತ್ತು ಜೀವಕೋಶವು ಒಂದು ಬೆಳವಣಿಗೆಯ ಸ್ಥಿತಿಯನ್ನು ಪ್ರಕಟಿಸುತ್ತದೆ. ಅದು ಪೂರ್ಣವಾಗಿ ಬೆಳೆದ ಮೇಲೆ, ಮತ್ತೂ ಬೆಳೆಯಲಾರದು, ಅದು ಕೇವಲ ಕನಿಷ್ಠ ಸ್ಥಿತಿಗೆ ಕುಗ್ಗುತ್ತದೆ. ಒಂದು ಹೊಸ ಜೀವಕೋಶ ಅದರ ಸ್ಥಾನದಲ್ಲಿ ಸ್ಥಳಾಂತರಗೊಳ್ಳುತ್ತದೆ. ಉದಾಹರಣೆಗೆ, ಹನ್ನೆರಡು ಗಂಟೆಯ ಅವಧಿಯಲ್ಲಿ ಅದನ್ನು ಹೀಗೆ ವಿವರಿಸೋಣ. ಒಂದು ಜೀವಕೋಶವು ಬೆಳಿಗ್ಗೆ 6 ಗಂಟೆಯ ಸಮಯದಲ್ಲಿ ವಿಭಜನೆಯಾಗುತ್ತದೆ ಮತ್ತು ಬೆಳವಣಿಗೆಯ ಸ್ಥಿತಿಯನ್ನು ಪ್ರಕಟಿಸುತ್ತದೆ. ಅದು 8, 9, 10 ಗಂಟೆಯ ಸಮಯದಲ್ಲಿ ಒಳ್ಳೆಯ ಸದೃಢ ಸ್ಥಿತಿಯಲ್ಲಿರುತ್ತದೆ. 12 ಗಂಟೆ ಆಗುತ್ತಿದ್ದಂತೆ ಅದು ಬೆಳೆಯುವುದನ್ನೇ ನಿಲ್ಲಿಸಿ, ಕುಗ್ಗುವುದಕ್ಕೆ ಶುರುವಿಡುತ್ತದೆ. ಈ ಸ್ಥಿತಿಯಲ್ಲಿ, ಜೀವಕೋಶವು ತನ್ನ ಅರ್ಧ ಜೀವಿತಾವಧಿಯನ್ನು ಮಾತ್ರ ಹೊಂದಿರುತ್ತದೆ. ಅದೂ ಸಹ ಅಥ್ಲೀಟ್ ಸ್ಪರ್ಧಿಸುವ ಪರಿಸ್ಥಿತಿಗೆ ಪೂರಕವಾಗಿರುವುದಿಲ್ಲ.

ನಂತರ ಏನು ಮಾಡಲಾಗುತ್ತದೆ? ಒಬ್ಬನು ತನ್ನ ತರಬೇತಿಯನ್ನು ತೀವ್ರಗೊಳಿಸುತ್ತಾನೆ ಮತ್ತು ರಕ್ತ ಪರಿಚಲನೆಯನ್ನು ಹೆಚ್ಚಿಸುತ್ತಾನೆ ಮತ್ತು ನಂತರದಲ್ಲಿ ವಿಭಜನೆಗೊಂಡ ಹೊಸದಾದ ಜೀವಕೋಶವು ಹಳೆಯದರ ಜಾಗದಲ್ಲಿ ಸೇರುತ್ತದೆ. ಆದ್ದರಿಂದ ಜೀವಕೋಶದ ಪೂರ್ಣ ಅವಧಿಯು ಮುಗಿಯುವ

ಮುಂಚೆಯೇ ಅಥವಾ ಯಾವಾಗ ಅರ್ಧ ಅವಧಿಯಾಗಿರುತ್ತದೊ ಆಗಲೇ ಹೊಸದೊಂದನ್ನು ಸ್ಥಳಾಂತರಗೊಳಿಸಲಾಗುತ್ತದೆ. ಹೀಗೆ ದೇಹವು ಯಾವಾಗಲೂ ಶಕ್ತಿಯನ್ನು ಸಮತೋಲನ ಮಾಡುತ್ತದೆ ಮತ್ತು ಉತ್ತಮಗೊಳ್ಳುತ್ತಿರುತ್ತದೆ. ಆದಾಗ್ಯೂ ಮಾನವ ಕೋಶಗಳು ಕೊನೆಯಿಲ್ಲದೆ ಹೀಗೆ ವಿಭಜನೆಗೊಳ್ಳದಿದ್ದರೆ, ಕೋಶ ವಿಭಜನೆಯ ಸಂಖ್ಯೆಯು ಪರಿಮಿತಿಗೊಳ್ಳುತ್ತದೆ. ಅಂದಾಜು ಒಂದು ಕೋಶವು ಕೇವಲ ನೂರು ಬಾರಿ ಮಾತ್ರ ಅವನ ಜೀವನದಲ್ಲಿ ವಿಭಜನೆಯಾದರೆ, ಅವನು ನೂರು ವರ್ಷ ಬದುಕುತ್ತಾನೆ. ಆದರೆ ಈಗ ಈ ಕೋಶವು ಅರ್ಧ ಜೀವಿತವನ್ನು ಮಾತ್ರ ಬದುಕಿದೆ. ಆದ್ದರಿಂದ ಅವನು ಕೇವಲ ಐವತ್ತು ವರ್ಷ ಬದುಕುತ್ತಾನೆ. ಇದುವರೆಗೆ ನಾವು ಅಥ್ಲೀಟ್‌ಗಳಿಗೆ ದೊಡ್ಡ ಸಮಸ್ಯೆಗಳು ಆಗಿರುವುದನ್ನು ನೋಡಿಲ್ಲ. ಏಕೆಂದರೆ ಅಥ್ಲೀಟ್‌ಗಳೆಲ್ಲ ಇವತ್ತು ಮೂವತ್ತು ವರ್ಷಗಳ ಒಳಗೇ ನಿವೃತ್ತಿ ಹೊಂದುತ್ತಿದ್ದಾರೆ. ಹಾಗೆಯೇ ಈಗ ಸ್ಪರ್ಧೆಯ ಮಟ್ಟವು ತುಂಬಾ ಉನ್ನತವಾಗಿದೆ ಮತ್ತು ನಿವೃತ್ತಿಯಾಗುವ ಅಥ್ಲೀಟ್‌ಗಳ ಸಂಖ್ಯೆಯೂ ದೊಡ್ಡದಾಗುತ್ತಿದೆ. ಒಬ್ಬ ಅಥ್ಲೀಟ್ ಸಾಮಾನ್ಯವಾಗಿ ಬದುಕಿದರೆ, ಹೆಚ್ಚು ಪರಿಣಾಮಕ್ಕೊಳಗಾದಂತೆ ಕಾಣುವುದಿಲ್ಲ. ಸೈದ್ಧಾಂತಿಕವಾಗಿ, ಅದು ಈ ದಾರಿಯಲ್ಲಿ ಉತ್ತಮವಾದುದು. ದೈಹಿಕ ವ್ಯಾಯಾಮವು ಆರೋಗ್ಯಯುತ ದೇಹವನ್ನು ಉಳಿಸಿಕೊಳ್ಳುವುದಕ್ಕೆ ಶಕ್ತಿಗೊಳಿಸುತ್ತದೆ. ಆದರೆ ಇದು ಒಬ್ಬನ ಜೀವಿತಾವಧಿಯನ್ನು ಮೊಟಕುಗೊಳಿಸುತ್ತದೆ. ಹೊರಗೆ ನೋಡುವುದಕ್ಕೆ ಒಬ್ಬ ಅಥ್ಲೀಟ್ ತನ್ನ ಹದಿವಯಸ್ಸಿನಲ್ಲಿ ಇಪ್ಪತ್ತರಲ್ಲಿರುವಂತೆಯೂ, ಇಪ್ಪತ್ತರಲ್ಲಿ ಮೂವತ್ತರಲ್ಲಿರುವಂತೆಯೂ ಕಾಣುತ್ತಾನೆ. ಬಹುಬೇಗ ಅವನು ವಯಸ್ಸಾದವನಂತೆ ಕಾಣುತ್ತಾನೆ. ಅಲ್ಲಿ ಉಪಯೋಗವಿದ್ದರೆ, ಅಂತೆಯೇ ಅಲ್ಲಿ ದೋಷಗಳೂ ಕಾಣಿಸಿಕೊಳ್ಳುತ್ತವೆ.

ಚೇಗಾಂಗ್ ಅಭ್ಯಾಸವು ದೈಹಿಕ ವ್ಯಾಯಾಮಗಳಿಗಿಂತ ಸ್ವಲ್ಪ ವಿರುದ್ಧವಾದುದು. ಅದು ಪರಿಶ್ರಮದ ಚಲನೆಯನ್ನು ಬಯಸುವುದಿಲ್ಲ. ಅಲ್ಲಿ ಯಾವುದೇ ಚಲನೆಯಿದ್ದರೆ, ಅದು ಸಾಧುವಾದದ್ದು, ನಿಧಾನವಾದದ್ದು ಮತ್ತು ತಿರುವುಗಳುಳ್ಳದ್ದು. ಅದಲ್ಲದೆ ಅದು ಸ್ಥಿರವಾದದ್ದು ಮತ್ತು ಚಲನೆಯಿಲ್ಲದ್ದು. ನೀವು ತಿಳಿದಿದ್ದೀರಿ, ಕುಳಿತು ಸಮಾಧಿಸ್ಥಿತಿಯಲ್ಲಿರುವ ಸಾಧನೆಯ ಪದ್ಧತಿಯು ನಿಶ್ಚಲತೆಯನ್ನು ಬಯಸುತ್ತದೆ. ಪ್ರತಿಯೊಂದೂ, ಹೃದಯ ಬಡಿತ ಮತ್ತು ರಕ್ತ ಪರಿಚಲನೆಯಂತವೂ ನಿಧಾನವಾಗುತ್ತಿರುತ್ತದೆ. ಭಾರತದಲ್ಲಿ ಹಲವು ಯೋಗ ಗುರುಗಳಿದ್ದಾರೆ. ಅವರು ನೀರಿನಲ್ಲಿ ಕೂರುತ್ತಾರೆ ಅಥವಾ ಮಣ್ಣಿನಲ್ಲಿ ಹಲವು ದಿನಗಳ ಮಟ್ಟಿಗೆ ಮಲಗಿರುತ್ತಾರೆ. ಅವರು ತಮ್ಮನ್ನು ತಾವು ಪೂರ್ಣವಾಗಿ ನಿಶ್ಚಲಗೊಳಿಸಿಕೊಳ್ಳಬಲ್ಲರು ಮತ್ತು ಹೃದಯ ಬಡಿತವನ್ನೂ ನಿಯಂತ್ರಿಸಬಲ್ಲರು. ಪ್ರಾಯಶಃ ಒಬ್ಬನ ಕೋಶವು ದಿನವೊಂದಕ್ಕೆ ಒಮ್ಮೆ ಮಾತ್ರ ವಿಭಜನೆಯಾಗುತ್ತಿರಬೇಕು. ಒಬ್ಬ ಸಾಧಕನು ಅವನ ದೇಹದ ಕೋಶಗಳು ಪ್ರತೀ ಎರಡು ದಿನಕ್ಕೆ ಒಮ್ಮೆ ಮಾತ್ರ ವಿಭಜನೆಗೊಳ್ಳುವಂತೆ, ಪ್ರತೀ ವಾರಕ್ಕೊಮ್ಮೆ, ಪ್ರತೀ ಅರ್ಧ ತಿಂಗಳಿಗೊಮ್ಮೆ ಅಥವಾ ಹೆಚ್ಚಿನ ಅವಧಿಗೊಮ್ಮೆ ವಿಭಜನೆಗೊಳ್ಳುವಂತೆ ನಿಯಂತ್ರಣ ತರಬಹುದು. ಅವನು ಈಗಾಗಲೇ ತನ್ನ ಬದುಕನ್ನು ವಿಸ್ತರಿಸಿದ್ದಾನೆ, ನಂತರದಲ್ಲಿ ದೇಹವನ್ನು ಸಾಧನೆಯಲ್ಲಿ ಹದಗೊಳಿಸದೆ ಕೇವಲ ಮನಸ್ಸನ್ನು ಹದಗೊಳಿಸಿ, ಅವರು ಈ ಸಾಧನೆಯನ್ನು ಮಾಡಬಹುದು ಮತ್ತು ಒಬ್ಬನ ಜೀವನವನ್ನು ವಿಸ್ತರಿಸಬಹುದು. ಯಾವನಾದರೊಬ್ಬ ಯೋಚಿಸಬಹುದು: ಒಬ್ಬನ ಬದುಕಿನ ಅವಧಿ ಪೂರ್ವನಿಶ್ಚಿತವಲ್ಲವೆ? ಒಬ್ಬ ಹೇಗೆ ಹೆಚ್ಚು ವರ್ಷ ದೇಹವನ್ನು ಸಾಧನೆಗೊಳಪಡಿಸದೆ ಜೀವಿಸಬಲ್ಲ? ನಿಜ. ಒಬ್ಬ ಅಭ್ಯಾಸಿಯು ನಿರ್ದಿಷ್ಟ ಹಂತವನ್ನು ದಾಟಿಯಾದ ಮೇಲೆ, ಅವನ ಜೀವನಾವಧಿಯು ವಿಸ್ತರಿಸಬಹುದು. ಆದರೆ ಮೇಲ್ನೋಟಕ್ಕೆ ಅವನು ವೃದ್ಧನಂತೆ ಕಾಣುತ್ತಾನೆ.

ಒಂದು ನಿಜವಾದ ಅಭ್ಯಾಸವು, ಸ್ಥಿರವಾಗಿ ಉನ್ನತ ಸ್ಥಿತಿಯನ್ನು ಒಬ್ಬನ ದೇಹದ ಕೋಶಗಳಲ್ಲಿ ಸಂಗ್ರಹಿಸಿ, ಶೇಖರಿಸುವ ಮತ್ತು ಅದರ ಸಾಂದ್ರತೆಯನ್ನು ಸ್ಥಿರವಾಗಿ ಹೆಚ್ಚಿಸುವ, ಹಂತಹಂತವಾಗಿ ನಿಗ್ರಹಿಸಿ ಮತ್ತು ನಿಧಾನಕ್ಕೆ ಅಂತಹ ದಿನನಿತ್ಯದ ವ್ಯಕ್ತಿಯ ಕೋಶಗಳನ್ನು ಸ್ಥಳಾಂತರಿಸುವಂತಹ ಹದಕ್ಕೆ, ದೇಹವನ್ನು ಸಿದ್ಧಗೊಳಿಸುತ್ತದೆ. ಈ ಸಮಯದಲ್ಲಿ ಅಲ್ಲಿ ಗುಣಾತ್ಮಕ ಬದಲಾವಣೆಯಾಗುತ್ತದೆ ಮತ್ತು ಈ ವ್ಯಕ್ತಿಯು ಎಂದಿಗೂ ಯುವಕನಾಗಿಯೇ ಉಳಿಯುತ್ತಾನೆ. ಸಾಧನೆಯ ಪ್ರಕ್ರಿಯೆಯು ತುಂಬಾ ನಿಧಾನವಿರುತ್ತದೆ ಮತ್ತು ನಿರಂತರವಾಗಿ ನಡೆಯುವಂತದ್ದು. ಅದಕ್ಕಾಗಿ ಒಬ್ಬನು ಬಹಳಷ್ಟನ್ನು ಅರ್ಪಿಸಬೇಕಾಗುತ್ತದೆ. ಒಬ್ಬನು ತನಗೆ ತಾನೇ ದೈಹಿಕ ಮತ್ತು ಮಾನಸಿಕವಾಗಿ ಹದಗೊಳ್ಳುವುದು ಸುಲಭವೇನಲ್ಲ. ಬೇರೆಯವರೊಂದಿಗಿನ ಆತ್ಮಪ್ರಕೃತಿಯ ಸಂಘರ್ಷದಲ್ಲಿ ಒಬ್ಬನು ಶಾಂತವಾಗಿ

ಉಳಿಯಬಲ್ಲನೆ? ವೈಯಕ್ತಿಕ ಮತ್ತು ಪಟ್ಟಭದ್ರ ಹಿತಾಸಕ್ತಿಗಳ ನಡುವೆ ಪೇಚಿನಲ್ಲಿರುವಾಗ ಒಬ್ಬನು ಪ್ರಭಾವಿತನಾಗದೆ ಇರುತ್ತಾನೆಯೇ? ಅದನ್ನು ಮಾಡುವುದಕ್ಕೆ ತುಂಬಾ ಕಷ್ಟಕರವಾದುದು. ಒಬ್ಬನು ದೀರ್ಘಕಾಲ ಈ ಗುರಿಯನ್ನು ತಲುಪುವುದಕ್ಕೆ ಬಯಸುತ್ತಿದ್ದರೆ, ಅದನ್ನು ಸಾಧಿಸಬಲ್ಲನು. ಯಾವಾಗ ಒಬ್ಬನ ಆತ್ಮಪ್ರಕೃತಿ ಉನ್ನತಗೊಳ್ಳುತ್ತಿರುತ್ತದೋ ಆಗ ಮಾತ್ರ ಒಬ್ಬನು ಈ ಗುರಿಯನ್ನು ತಲುಪಬಲ್ಲನು.

ಹಲವು ಜನ ಚೀಗಾಂಗನ್ನು ಸಾಧಾರಣ ದೈಹಿಕ ವ್ಯಾಯಾಮವೆಂದು ತೆಗೆದುಕೊಳ್ಳುತ್ತಿದ್ದಾರೆ. ಯಾವಾಗ ಅವೆರಡರ ನಡುವಿನ ಭಿನ್ನತೆಯು ಎದ್ದುಕಾಣುತ್ತದೋ ಆಗ ಅವರು ಇದನ್ನು ಬದಲಾಯಿಸಿಕೊಳ್ಳುತ್ತಾರೆ. ಯಾವಾಗ ಪ್ರಭೆಯನ್ನು ಉಪಶಮನ ಮತ್ತು ಸದೃಢತೆಗಾಗಿ ಕೆಳಹಂತದಲ್ಲಿ ಅಭ್ಯಾಸ ಮಾಡುತ್ತ, ಆರೋಗ್ಯಯುತ ದೇಹಕ್ಕೆ ಬಳಸುತ್ತಾರೋ ಆಗ ಅದರ ಗುರಿಯು ದೈಹಿಕ ವ್ಯಾಯಾಮದ ಗುರಿಗೆ ಸಾಮ್ಯವಾಗುತ್ತದೆ. ಉನ್ನತ ಹಂತದ ಅಭ್ಯಾಸದಲ್ಲಿ ಅವೆರಡೂ ತೀರಾ ಭಿನ್ನವಾದವುಗಳು. ಚೀಗಾಂಗ್‌ನಲ್ಲಿನ ದೇಹ ಶುದ್ಧೀಕರಣವೂ ಅದರದ್ದೇ ಆದ ಉದ್ದೇಶವನ್ನು ಹೊಂದಿರುತ್ತದೆ. ಇನ್ನೂ ಹೆಚ್ಚಾಗಿ ಅಭ್ಯಾಸಿಗಳು ದಿನನಿತ್ಯದ ಜನರ ರೀತಿ–ನೀತಿಗಳಿಗೆ ಬದಲಾಗಿ ಅಸಾಮಾನ್ಯವಾದ ತತ್ವಗಳಿಗೆ ಸಮ್ಮತಿಸಿ, ಬದ್ಧರಾಗುತ್ತಾರೆ. ಆದರೆ ದೈಹಿಕ ವ್ಯಾಯಾಮಗಳು ಕೇವಲ ದಿನನಿತ್ಯದ ಜನರಿಗೇ ಸೃಷ್ಟಿಯಾಗಿರುವಂತವು.

**ಮನಸ್ಸಿನ ಆಲೋಚನೆ**

ನಮ್ಮ ಮಾನವ ಮನಸ್ಸಿನ ಚಟುವಟಿಕೆಗಳಿಗೆ ಇದು ಅನ್ವಯವಾಗುತ್ತದೆ. ಸಾಧಕರ ಸಮುದಾಯದಲ್ಲಿ ಎಷ್ಟು ಮನಸ್ಸಿನ ಚಟುವಟಿಕೆಗಳು ಮಿದುಳಿನ ದಿಕ್ಕಿನಲ್ಲಿವೆ? ಹೇಗೆ ಅದು ಭಿನ್ನ ರೂಪದ ಮಾನವನ ಆಲೋಚನೆಗಳಲ್ಲಿ ಕಾಣುತ್ತದೆ? ಮತ್ತು ಅವರು ಅದನ್ನು ಹೇಗೆ ರೂಪಿಸುತ್ತಾರೆ? ಆಧುನಿಕ ಔಷಧಗಳು ಮನುಷ್ಯ ಮಿದುಳಿನ ಅಧ್ಯಯನದಲ್ಲಿ ಎದುರಾಗಿರುವ ಪ್ರಶ್ನೆಗಳಿಗೆ ಇನ್ನೂ ಪರಿಹಾರ ಕಂಡುಹಿಡಿದಿಲ್ಲ. ಏಕೆಂದರೆ ನಮ್ಮ ದೇಹದ ಬೇರೆ ಭಾಗಗಳನ್ನು ಅಧ್ಯಯನ ಮಾಡುವಷ್ಟು ಅದು ಸುಲಭವಲ್ಲ. ಆಳವಾದ ಹಂತಗಳಲ್ಲಿ ಬೇರೆ ಬೇರೆ ಆಯಾಮಗಳು ಬೇರೆ ಬೇರೆ ರೂಪಗಳನ್ನು ಸಂಕೇತಿಸುತ್ತವೆ. ಆದರೆ ಅದು ಚೀಗಾಂಗ್ ಬೋಧಕರು ಏನು ಹೇಳಿದ್ದಾರೆ ಅದಕ್ಕಿಂತ ಭಿನ್ನವಾಗಿದೆ. ಕೆಲ ಚೀಗಾಂಗ್ ಬೋಧಕರು ಸ್ವತಃ ಏನಾಗುತ್ತಿದೆಯೆಂದು ಅರಿಯಲಾರರು ಮತ್ತು ಅವರು ಅದನ್ನು ಸ್ಪಷ್ಟವಾಗಿ ವಿವರಿಸಲಾರರು. ಅವರು ಯೋಚಿಸುತ್ತಾರೆ. ಒಮ್ಮೆ ಅವರು ತಮ್ಮ ಮನಸ್ಸುಗಳನ್ನು ಬಳಸಿದರೆ ಮತ್ತು ಆಲೋಚನೆಯೊಂದನ್ನು ಬೆಳೆಸಿದರೆ, ಏನಾದರೂ ಮಾಡುವುದಕ್ಕೆ ಸಮರ್ಥರಾಗುತ್ತಾರೆ. ಅಂತಹ ಯಾವುದೇ ಸಂಗತಿಗಳು ಅವರ ಆಲೋಚನೆಗಳಿಂದ ರೂಪಿತವಾಗಿರುತ್ತದೆಂದು ಅವರು ವಾದಿಸುತ್ತಾರೆ. ಸತ್ಯಸಂಗತಿಯೇನೆಂದರೆ ಆ ಸಂಗತಿಗಳು ಅವರ ಆಲೋಚನೆಗಳಿಂದ ಎಂದಿಗೂ ಮಾಡಲ್ಪಡುವುದಿಲ್ಲ.

ಮೊದಲಿಗೆ ಒಬ್ಬನ ಆಲೋಚನೆಗಳ ಉತ್ಪತ್ತಿಯ ಬಗ್ಗೆ ಮಾತನಾಡೋಣ. ಪ್ರಾಚೀನ ಚೀನದಲ್ಲಿ 'ಹೃದಯ ಆಲೋಚನೆ' ಎಂಬ ಮಾತು ಬಳಕೆಯಾಗುತ್ತಿತ್ತು. ಏಕೆ ಅದನ್ನು 'ಹೃದಯ ಆಲೋಚನೆ' ಎಂದು ಕರೆಯಲಾಗಿದೆ? ಪ್ರಾಚೀನ ಚೀನಿಯರ ವಿಜ್ಞಾನವು ಮನುಷ್ಯ ದೇಹ, ಜೀವನ ಮತ್ತು ವಿಶ್ವಕ್ಕೆ ಸಂಬಂಧಿಸಿದಂತೆ ಹೆಚ್ಚು ಮುಂದುವರಿದಿದೆ. ಕೆಲವರು ಅವರ ಹೃದಯ ಯೋಚಿಸುತ್ತದೆಂದು ಭಾವಿಸುತ್ತಾರೆ. ಅಂತೆಯೇ ಬೇರೆಯವರು ಅವರ ಮಿದುಳು ಯೋಚಿಸುತ್ತದೆಂದು ಭಾವಿಸುತ್ತಾರೆ. ಏಕೆ ಅಲ್ಲಿ ಈ ಸನ್ನಿವೇಶವಿದೆ? ಕೆಲವರು ಹೃದಯದ ಆಲೋಚನೆಯ ಬಗ್ಗೆ ಮಾತನಾಡುವಾಗ, ಹೆಚ್ಚು ಸರಿಯಾದುದೆಂದು ಅನಿಸುತ್ತದೆ. ಏಕೆಂದರೆ ನಾವಿದನ್ನು ಕಂಡುಕೊಂಡಿದ್ದೇವೆ. ದಿನನಿತ್ಯದ ವ್ಯಕ್ತಿಯ ಪ್ರಿಮೋರ್ಡಿಯಲ್ ಚೈತನ್ಯವು (ಪ್ರಾಚೀನ ಮೂಲ ಚೈತನ್ಯ) ತುಂಬಾ ಚಿಕ್ಕದಿರುತ್ತದೆ ಮತ್ತು ಮಾನವ ಮಿದುಳಿನಿಂದ ಬರುವ ಸಂದೇಶಗಳು ಮಾನವ ಮಿದುಳಿನ ಕ್ರಿಯೆಯಿಂದಲೇ ಹುಟ್ಟಿದಂತವುಗಳಲ್ಲ, ಅವು ಹುಟ್ಟುವುದು ಪ್ರಿಮೋರ್ಡಿಯಲ್ ಚೈತನ್ಯದಿಂದ. ಒಬ್ಬನ ಪ್ರಿಮೋರ್ಡಿಯಲ್ ಚೈತನ್ಯವು ಕೇವಲ ಅವನ ತಲೆಯ ಭಾಗದ ನಿವಾನ್ ಪ್ಯಾಲೆಸ್‌ನಲ್ಲಿ ಇರುವುದಿಲ್ಲ. ತಾವೋ ಪಂಥದಲ್ಲಿ ನಿವಾನ್ ಪ್ಯಾಲೆಸ್ ಎಂಬುದು ಪೈನೀಲ್ ದೇಹವಾಗಿರುತ್ತದೆ. ಒಂದು ವೇಳೆ ಒಬ್ಬನ ಪ್ರಿಮೋರ್ಡಿಯಲ್ ಚೈತನ್ಯವು ನಿವಾನ್ ಪ್ಯಾಲೆಸ್‌ನಲ್ಲಿ ಇದ್ದರೆ, ಒಬ್ಬನು ನಿಜವಾಗಿಯೂ ಮಿದುಳು ಆಲೋಚಿಸುತ್ತಿದೆ ಎಂದು, ಮುಂದಕ್ಕೆ

ಸಂದೇಶ ಕಳುಹಿಸುತ್ತಿದೆ ಎಂದು ಅನುಭವಗೊಳ್ಳುತ್ತಾನೆ. ಒಂದು ವೇಳೆ ಅದು ಒಬ್ಬನ ಹೃದಯದಲ್ಲಿದ್ದರೆ, ಹೃದಯವು ಬೇರೊಂದರ ಬಗ್ಗೆ ಆಲೋಚಿಸುತ್ತಿದೆ ಎಂದು ಅನುಭವಗೊಳ್ಳುತ್ತಾನೆ.

ಒಂದು ಮನುಷ್ಯ ದೇಹವು ಒಂದು ಚಿಕ್ಕ ವಿಶ್ವವಾಗಿದೆ. ಯಾವಾಗ ಪ್ರಿಮೋರ್ಡಿಯಲ್ ಚೈತನ್ಯವು ತನ್ನ ಸ್ಥಾನವನ್ನು ಬದಲಾಯಿಸುತ್ತದೆಯೋ, ಒಂದು ವೇಳೆ ಅದು ಒಬ್ಬನ ಹೊಟ್ಟೆಯ ಭಾಗಕ್ಕೆ ಚಲಿಸಿದರೆ, ಅವನ ಹೊಟ್ಟೆ ಆಲೋಚಿಸುತ್ತಿದೆ ಎಂದು, ಅದು ಒಬ್ಬನ ಹಿಮ್ಮಡಿಗೆ ಚಲಿಸಿದರೆ ಹಿಮ್ಮಡಿ ಆಲೋಚಿಸುತ್ತಿದೆ ಎಂದು ಅನುಭವಗೊಳ್ಳುತ್ತಾನೆ. ಅದು ಖಂಡಿತವಾಗಿಯೂ ಹಾಗೆಯೇ ಆಗುತ್ತದೆ. ಅದು ಹೆಚ್ಚು ಅತೀಂದ್ರಿಯವಾದುದನ್ನು ಧ್ವನಿಸುತ್ತಿರಬಹುದು. ನಿಮ್ಮ ಸಾಧನೆಯ ಮಟ್ಟವು ಉನ್ನತವಾಗಿಲ್ಲದಿದ್ದರೆ ಹಾಗೆ ಅನಿಸುತ್ತದೆ. ಒಂದು ವೇಳೆ ಮನುಷ್ಯ ದೇಹವು ಪ್ರಿಮೋರ್ಡಿಯಲ್ ಚೈತನ್ಯವನ್ನು ಹೊಂದಿಲ್ಲದಿದ್ದರೆ ಮತ್ತು ಸ್ವಭಾವ ವೈಚಿತ್ರ್ಯ, ನಡತೆ ಮತ್ತು ವ್ಯಕ್ತಿತ್ವದಂತವು ಇಲ್ಲದಿದ್ದರೆ, ಅದು ಕೇವಲ ಒಂದು ಮಾಂಸದ ಮುದ್ದೆ; ವೈಯಕ್ತಿಕತೆಯಿರುವ ಪೂರ್ಣ ವ್ಯಕ್ತಿಯಿಲ್ಲ. ಹಾಗಾದರೆ ಮಾನವನ ಮಿದುಳು ಏನು ಕೆಲಸವನ್ನು ಮಾಡುತ್ತದೆ? ಮಾನವನ ಮಿದುಳು ಕೇವಲ ಒಂದು ಸಂಸ್ಕರಣ ಘಟಕವಷ್ಟೆ ನಿಜವಾದ ಸಂದೇಶಗಳು ಪ್ರಿಮೋರ್ಡಿಯಲ್ ಚೈತನ್ಯದಿಂದ ಕಳುಹಿಸಲ್ಪಟ್ಟಿರುತ್ತವೆ. ಈ ಸಂದೇಶಗಳು ಭಾಷಿಕವಾಗಿಲ್ಲದಿದ್ದರೂ ಏನನ್ನು ರವಾನಿಸುತ್ತವೆ. ವಿಶ್ವದ ಪ್ರತಿಯೊಂದು ಸಂದೇಶವೂ ನಿರ್ದಿಷ್ಟವಾದ ಒಂದು ಅರ್ಥವನ್ನು ಪ್ರತಿನಿಧಿಸುತ್ತದೆ. ಅಂತಹ ಆಜ್ಞೆಯನ್ನು ಪಡೆದ ಮೇಲೆ, ನಮ್ಮ ಮಿದುಳುಗಳು ಅದನ್ನು ನಮ್ಮ ಪ್ರಸ್ತುತ ಭಾಷೆಗೆ ಅಥವಾ ಇನ್ನಿತರ ಭಾವಾಭಿನಯಗಳಿಗೆ ಸಂಸ್ಕರಿಸುತ್ತವೆ. ನಾವು ಅದನ್ನು ಕೈಸನ್ನೆಗಳಿಂದ, ಕಣ್ಣಿನ ನೇರ ದೃಷ್ಟಿಯಿಂದ ಮತ್ತು ಪೂರ್ಣವಾದ ಒಂದು ಕ್ರಿಯೆಯಿಂದ ಅಭಿವ್ಯಕ್ತಿಸುತ್ತೇವೆ. ಮಿದುಳು ಆ ಪರಿಣಾಮವನ್ನು ಮಾತ್ರ ಹೊಂದಿದೆ. ನಿಜವಾಗಿ ಆಜ್ಞೆಗಳು ಮತ್ತು ಆಲೋಚನೆಗಳು ಒಬ್ಬನ ಪ್ರಿಮೋರ್ಡಿಯಲ್ ಚೈತನ್ಯದಿಂದ ಬರುತ್ತವೆ. ಜನರು ತಾವು ಮೆದುಳಿನಿಂದ ನಿರ್ದೇಶಿಸಲ್ಪಡುತ್ತೇವೆ ಎಂದು ನಂಬಿದ್ದಾರೆ. ಸಂಗತಿಯೇನೆಂದರೆ, ಪ್ರಿಮೋರ್ಡಿಯಲ್ ಚೈತನ್ಯವು ಕೆಲವೊಮ್ಮೆ ಹೃದಯದಲ್ಲಿರುತ್ತದೆ. ಆದ್ದರಿಂದ ಕೆಲವರು ಅವರ ಹೃದಯ ಆಲೋಚಿಸುತ್ತಿದೆ ಎಂದು ಭಾವಿಸಬಹುದು.

ಪ್ರಸ್ತುತದಲ್ಲಿ ಮಾನವ ದೇಹದ ಮೇಲೆ ಸಂಶೋಧನೆ ಮಾಡುವವರು ಮಾನವನ ಮಿದುಳು ಪ್ರಸರಿಸುವ ಸಂಗತಿಗಳು ಒಂದು ವಿದ್ಯುತ್ಕಾಂತೀಯ ಅಲೆಯಂತಿರುತ್ತವೆ ಎಂದು ನಂಬಿದ್ದಾರೆ. ಅವರೆಲ್ಲ ಅದನ್ನು ಒಂದು ವಿಧದ ವಸ್ತುತಃ ಅಸ್ತಿತ್ವವೆಂದು ಒಪ್ಪುತ್ತಾರೆ. ಹೀಗೆ ಅದು ಮೂಢಭಕ್ತಿಯಲ್ಲ. ಈ ಸಂಗತಿಗಳು ಯಾವ ಪರಿಣಾಮಗಳನ್ನು ಹೊಂದಿವೆ? ಕೆಲವು ಚೀಗಾಂಗ್ ಬೋಧಕರು ವಾದಿಸುತ್ತಾರೆ: 'ನಾನು ನನ್ನ ಮನಸ್ಸಿನಾಸಯವನ್ನು (ಒಟಿಜ-ಖಟಿಣಜುಟಿ) ದೂರ ಸಂಪರ್ಕವನ್ನು ಸಾಧಿಸುವುದಕ್ಕೆ, ನಿಮ್ಮ ದಿವ್ಯದೃಷ್ಟಿಯನ್ನು ತೆರೆಯುವುದಕ್ಕೆ, ನಿಮ್ಮ ರೋಗಬಾಧೆಯನ್ನು ಹೋಗಲಾಡಿಸುವುದಕ್ಕೆ, ಮುಂತಾದವುಗಳಿಗೆ ಬಳಸುತ್ತೇನೆ.' ನಿಜವೇನೆಂದರೆ ಕೆಲ ಚೀಗಾಂಗ್ ಬೋಧಕರ ಹಿನ್ನೆಲೆಯಲ್ಲಿಯೇ, ಅವರೆಲ್ಲ ಅವರು ಗಳಿಸಿರುವ ಅಸಾಮಾನ್ಯ ಸಾಮರ್ಥ್ಯಗಳೇನಿವೆ ಅವುಗಳ ಬಗ್ಗೆಯೇ ತಿಳಿದುಕೊಂಡಿಲ್ಲ ಮತ್ತು ಸ್ಪಷ್ಟವಾಗಿಲ್ಲ. ಅವರೆಲ್ಲ ತಾವು ಅಂದುಕೊಂಡದ್ದನ್ನು ಮಾಡಬಲ್ಲೆವೆಂದು ತಿಳಿದಿದ್ದಾರೆ. ನಿಜದಲ್ಲಿ, ಅದು ಅವರ ಮನಸ್ಸಿನಾಶಯದ ಕೆಲಸವಾಗಿದೆ. ಅಸಾಮಾನ್ಯ ಸಾಮರ್ಥ್ಯಗಳು ಮಿದುಳಿನ ಮನಸ್ಸಿನಾಶಯದಿಂದ ನಿರ್ದೇಶಿಸಲ್ಪಡುತ್ತವೆ. ಅದರಂತೆ ಅವರು ಕಾರ್ಯಪ್ರವೃತ್ತರಾಗುತ್ತಾರೆ. ಆದಾಗ್ಯೂ ಮನಸ್ಸಿನ ಆಶಯವು (ಒಟಿಜ-ಖಟಿಣಜುಟಿ) ತನಗೆ ತಾನೇ ಏನನ್ನು ಮಾಡಲಾರದು. ಒಬ್ಬ ಅಭ್ಯಾಸಿಯು ಏನನ್ನಾದರೂ ನಿರ್ದಿಷ್ಟವಾಗಿ ಮಾಡಿದಾಗ, ಅದು ಅವನ ಅಸಾಮಾನ್ಯ ಸಾಮರ್ಥ್ಯವಾಗಿ, ಕೆಲಸವನ್ನು ಮಾಡುತ್ತದೆ.

ಅಸಾಮಾನ್ಯ ಸಾಮರ್ಥ್ಯಗಳು ಮಾನವ ದೇಹದ ಅಂತಸ್ಥ ಸಾಮರ್ಥ್ಯಗಳಾಗಿವೆ. ನಮ್ಮ ಮಾನವ ಸಮಾಜದ ಬೆಳವಣಿಗೆಯೊಂದಿಗೆ, ಮಾನವನ ಮನಸ್ಸೂ ನಿರಂತರವಾಗಿ ಹೆಚ್ಚು ಸಂಕೀರ್ಣವಾಗುತ್ತಿದೆ; ವಾಸ್ತವತೆಗೆ ಹೆಚ್ಚು ಪ್ರಾಮುಖ್ಯತೆಯನ್ನು ಆರೋಪಿಸುತ್ತ ಮತ್ತು ಆಧುನಿಕ ಸಲಕರಣೆಗಳಿಗೆ ಹೆಚ್ಚು ಅಧೀನರಾಗುತ್ತ ಹೆಚ್ಚು ಸಂಕೀರ್ಣವಾಗುತ್ತಿದೆ. ಸಮಾನಾಂತರವಾಗಿ ಮನುಷ್ಯನ ಜನ್ಮತಃ ಸಾಮರ್ಥ್ಯಗಳು ಹಂತಹಂತವಾಗಿ ಕೃಶವಾಗುತ್ತಿವೆ. ತಾವೋ ಪಂಥವು ಸ್ವತಃ ಹಿಂದಿನ ಸ್ಥಿತಿಗೆ ತಲುಪುವುದನ್ನು ಬೋಧಿಸುತ್ತದೆ. ಸಾಧನೆಯ ಅಭ್ಯಾಸದ ಅವಧಿಯಲ್ಲಿ, ನೀವು ಸತ್ಯವನ್ನು ಹುಡುಕುತ್ತೀರಿ ಮತ್ತು

ಕೊನೆಯಲ್ಲಿ ಸ್ವಾಭಾವಿಕವಾಗಿ ನಿಮ್ಮ ಮೂಲಕ್ಕೆ ಹಿಂದಿರುಗುತ್ತೀರಿ. ಆನಂತರದಲ್ಲಿ ನೀವು ನಿಮ್ಮ ಜನ್ಮತಃ ಸಾಮರ್ಥ್ಯವನ್ನು ಹೊರತರುತ್ತೀರಿ. ಇಂದಿನ ದಿನಗಳಲ್ಲಿ ನಾವು ಅವುಗಳನ್ನು 'ಅಸಾಮಾನ್ಯ ಸಾಮರ್ಥ್ಯಗಳೆಂದು ಕರೆಯುತ್ತಿದ್ದೇವೆ ಅಷ್ಟೆ. ಮಾನವ ಸಮಾಜವು ಮುಂದುವರಿಯುತ್ತಿರುವಂತೆ ಕಾಣುತ್ತದೆ. ಆದರೆ ಅದು ಹಿನ್ನಯುತ್ತಿದೆ ಮತ್ತು ವಿಶ್ವದ ಲಕ್ಷಣಗಳಿಂದ ತುಂಬಾ ದೂರಕ್ಕೆ ಸಾಗುತ್ತಿದೆ. ಬೇರೊಂದು ದಿನ ನಾನು ಹೇಳಿದ್ದೆ. ಜಾಂಗ್ ಗುಯಾಲಾವ್ಹೋ ಒಂದು ಕತ್ತೆಯ ಮೇಲೆ ಹಿಮ್ಮುಖವಾಗಿ ಸವಾರಿ ಮಾಡುತ್ತಿದ್ದರು. ಜನರಿಗೆ ಅದರ ಅರ್ಥ ತಿಳಿಯಲಿಲ್ಲ. ಅವನು ಮುಂದಕ್ಕೆ ಹೋಗುವುದು ಹಿಂದಕ್ಕೆ ಚಲಿಸಿದಂತೆ ಎಂದು ಕಂಡುಹಿಡಿದಿದ್ದ ಮತ್ತು ಮಾನವಕುಲವೂ ವಿಶ್ವದ ಗುಣಲಕ್ಷಣಗಳಿಂದ ಹಿಂದಕ್ಕೆ ಸಾಗುತ್ತಲೇ ಇದೆಯೆಂದು ಅನ್ವೇಷಿಸಿದ್ದ. ವಿಶ್ವದ ವಿಕಸನದ ಅವಧಿಯಲ್ಲಿ ವಿಶೇಷವಾಗಿ ಪ್ರಸ್ತುತದ ಅರ್ಥವ್ಯವಸ್ಥೆಯಲ್ಲಿ; ವ್ಯಾಪಾರೀ ಪ್ರಪಂಚದಲ್ಲಿ ಹಲವು ಜನ ಮೌಲ್ಯಿಕವಾಗಿ ಭ್ರಷ್ಟರಾಗುತ್ತಿದ್ದಾರೆ ಮತ್ತು ವಿಶ್ವದ ಲಕ್ಷಣಗಳಿಂದ ಹೆಚ್ಚು ದೂರ ಸಾಗುತ್ತಿದ್ದಾರೆ. ಅಂತವರು ಹೆಚ್ಚಾಗುತ್ತಿರುವ ಮಾನವೀಯ ಮೌಲ್ಯಗಳ ಭ್ರಷ್ಟತೆಯನ್ನು ಅರ್ಥಮಾಡಿಕೊಳ್ಳಲಾರರು. ಆದರೂ ಕೆಲವರ ಆಲೋಚನೆಗಳು ಉತ್ತಮವಾಗಿವೆ. ಅಂತವರು ಮಾತ್ರ; ಸಾಧನೆಯ ಮೂಲಕ ತಮ್ಮ ಆತ್ಮಪ್ರಕೃತಿಯನ್ನು ಉತ್ತಮಗೊಳಿಸಿಕೊಂಡಿರುವವರು ಮಾತ್ರ, ಹಿಂದಿನದನ್ನು ನೋಡುತ್ತ, ಮಾನವೀಯ ಮೌಲ್ಯಗಳು ನಶಿಸುತ್ತಿರುವುದನ್ನು ಅರ್ಥಮಾಡಿಕೊಳ್ಳುತ್ತಾರೆ.

ಕೆಲವು ಚೀಗಾಂಗ್ ಬೋಧಕರು, "ನಾನು ನಿಮ್ಮ ಅಸಾಮಾನ್ಯ ಸಾಮರ್ಥ್ಯವನ್ನು ವೃದ್ಧಿಸುತ್ತೇನೆ" ಎಂದು ಹೇಳುತ್ತಾರೆ. ಯಾವ ಅಸಾಮಾನ್ಯ ಸಾಮರ್ಥ್ಯವನ್ನು ಅವರು ವೃದ್ಧಿಸುತ್ತಾರೆ? ಶಕ್ತಿಯಿಲ್ಲದೆ ಒಬ್ಬನ ಅಸಾಮಾನ್ಯ ಸಾಮರ್ಥ್ಯವು ಕೆಲಸ ಮಾಡುವುದಿಲ್ಲ. ಅದಿಲ್ಲದೆ ಹೇಗೆ ನೀವು ಸಾಮರ್ಥ್ಯವನ್ನು ಬೆಳೆಯುತ್ತೀರಿ? ಅದು ಖಂಡಿತವಾಗಿ ಸಾಧ್ಯವಿಲ್ಲ. ಅಸಾಮಾನ್ಯ ಸಾಮರ್ಥ್ಯ ವೃದ್ಧಿಸುವುದರ ಬಗ್ಗೆ ಅವರೇನು ಹೇಳಿದ್ದಾರೆ ಅದು ಏನೂ ಅಲ್ಲ. ಅದು ಕೇವಲ ನಿಮ್ಮಲ್ಲಿ ಈಗಾಗಲೇ ಅಸ್ತಿತ್ವದಲ್ಲಿರುವ ಅಸಾಮಾನ್ಯ ಸಾಮರ್ಥ್ಯವನ್ನು ನಿಮ್ಮ ಮಿದುಳಿನೊಂದಿಗೆ ಸಂಪರ್ಕಿಸುವುದಷ್ಟೆ. ಅವರು ನಿಮ್ಮ ಮಿದುಳಿನ ಮನಸ್ಸಿನಾಶಯವನ್ನು ನಿರ್ದೇಶಿಸುತ್ತಾರೆ. ನಿಜವೇನೆಂದರೆ, ಅವರು ನಿಮ್ಮ ಯಾವ ಅಸಾಮಾನ್ಯ ಸಾಮರ್ಥ್ಯವನ್ನು ವೃದ್ಧಿಸುವುದಿಲ್ಲ; ಸ್ವಲ್ಪ ಪ್ರಚೋದಿಸುತ್ತಾರೆ.

ಅಭ್ಯಾಸಿಯೊಬ್ಬನಿಗೆ, ಮನಸ್ಸಿನಾಶಯವು (ಒಟಿಜ-ಖಟಿಣಜುಟಿಣ) ಅಸಾಮಾನ್ಯ ಸಾಮರ್ಥ್ಯಗಳು ಕೆಲಸ ಮಾಡುವಂತೆ ನಿರ್ದೇಶಿಸುತ್ತದೆ. ದಿನನಿತ್ಯದ ವ್ಯಕ್ತಿಗೆ ಅದು ನಾಲ್ಕು ಕೈಕಾಲುಗಳು ಮತ್ತು ಪಂಚೇಂದ್ರಿಯಗಳು ಕೆಲಸ ಮಾಡುವಂತೆ ಮಾತ್ರ ನಿರ್ದೇಶಿಸುತ್ತದೆ. ಇದು ಕಾರ್ಖಾನೆಯಲ್ಲಿ ಉತ್ಪಾದನಾ ಕಚೇರಿಯಿದ್ದಂತೆ. ಉತ್ಪಾದನಾ ಕಚೇರಿಯು ಪ್ರತಿಯೊಂದು ವಿಭಾಗಕ್ಕೂ ಅದರದ್ದೇ ಆದ ಚಟುವಟಿಕೆಗಳನ್ನು ಆಜ್ಞಾಪಿಸುತ್ತದೆ. ನಾನು ಉಪನ್ಯಾಸ ಮಾಡಿ ನಗರಕ್ಕೆ ಬಂದಾಗ, ಸ್ಥಳೀಯ ಚೀಗಾಂಗ್ ಸೊಸೈಟಿಗಳಲ್ಲಿ ಆಡಳಿತಗಾರರೊಂದಿಗೆ ಈ ವಿಷಯವನ್ನು ಚರ್ಚಿಸುತ್ತೇನೆ. ಅವರೆಲ್ಲ "ಮನುಷ್ಯನ ಮನಸ್ಸು ಎಷ್ಟು ಅಂತಸ್ಥ ಶಕ್ತಿ ಮತ್ತು ಪ್ರಜ್ಞೆಯನ್ನು ಹೊಂದಿದೆಯೆಂದು ನಾವು ಅಧ್ಯಯನ ಮಾಡುತ್ತಿದ್ದೇವೆ" ಎಂದು ಅಚ್ಚರಿಗೊಳ್ಳುತ್ತಾರೆ. ನಿಜವಾಗಿ ಅದು ಹಾಗೆ ಇರುವುದಿಲ್ಲ. ಅವರು ದಾರಿ ಮಧ್ಯದಲ್ಲಿದ್ದಾರೆ. ಮಾನವ ದೇಹ ವಿಜ್ಞಾನವನ್ನು ಅಭ್ಯಾಸ ಮಾಡಿ, ಒಬ್ಬನು ತನ್ನ ಆಲೋಚನೆಯನ್ನು ವಿಕಸಿಸಿಕೊಳ್ಳಬಹುದೆಂದು ನಾನು ಹೇಳುತ್ತೇನೆ. ಅಂತಹ ಅಸಾಮಾನ್ಯವಾದವುಗಳನ್ನು ಅರ್ಥಮಾಡಿಕೊಳ್ಳುವುದಕ್ಕೆ, ಒಬ್ಬನು ದಿನನಿತ್ಯದ ಜನರ ಶೋಧನಾತ್ಮಕ ಪದ್ಧತಿಗಳನ್ನು ಅಳವಡಿಸಿಕೊಳ್ಳಬಾರದು.

ಮನಸ್ಸಿನ ಆಶಯವು ಹಲವು ರೂಪಗಳನ್ನು ಹೊಂದಿರುತ್ತದೆ. ಉದಾಹರಣೆಗೆ, ಕೆಲವರು ಅಸ್ಪಷ್ಟ ಜಾಗೃತಿ, ಸ್ಫೂರ್ತಿ, ಕನಸು ಮುಂತಾದವುಗಳನ್ನು ಹೊಂದಿರುತ್ತಾರೆ. ಕನಸುಗಳ ಬಗ್ಗೆ ಹೇಳುವುದಾದರೆ, ಯಾವ ಚೀಗಾಂಗ್ ಬೋಧಕನೂ ಅವುಗಳನ್ನು ವಿವರಿಸುವುದಕ್ಕೆ ಇಷ್ಟಪಡುವುದಿಲ್ಲ. ಏಕೆಂದರೆ ನೀವು ಹುಟ್ಟುವಾಗಲೇ ವಿಶ್ವದ ಹಲವು ಆಯಾಮಗಳಲ್ಲಿ ಹುಟ್ಟಿರುತ್ತೀರಿ, ಇವೆಲ್ಲಾ ನಿಮ್ಮನ್ನು ಪೂರ್ಣಗೊಳಿಸಿರುತ್ತವೆ. ನಿಮ್ಮೊಂದಿಗೆ ಸಮಗ್ರ ಅಸ್ತಿತ್ವವನ್ನು, ಒಂದರಿಂದ ಮತ್ತೊಂದಕ್ಕೆ ಅಂತರ್‌ಸಂಬಂಧವನ್ನು ಹೊಂದಿರುತ್ತವೆ ಮತ್ತು ಬೌದ್ಧಿಕವಾಗಿಯೂ ಸೇರಿಕೊಂಡಿರುತ್ತವೆ. ಜೊತೆಗೆ ನೀವು ದೇಹದಲ್ಲಿ ನಿಮ್ಮದೇ ಆದ ಪ್ರಧಾನ ಚೈತನ್ಯ, ಸಹಾಯಕ ಚೈತನ್ಯ ಮತ್ತು ಹಲವು ಭಿನ್ನ ಜೈವಿಕ

ರೂಪಗಳನ್ನು ಹೊಂದಿರುತ್ತೀರಿ. ಹೀಗೆ ಅದು ಅತ್ಯಂತ ಸಂಕೀರ್ಣವಾಗಿರುತ್ತದೆ. ಕನಸಿನಲ್ಲಿ ಸಂಗತಿಗಳು ಯಾವ ಮಾರ್ಗದಲ್ಲಿ ಬೇಕಾದರೂ ಚಲಿಸಬಹುದು. ಅವೆಲ್ಲ ಎಲ್ಲಿಂದ ಬರುತ್ತವೆ, ಯಾವುದಾದರೂ ದಾರಿಯಿದೆಯೇ? ಅದನ್ನು ವೈದ್ಯ ವಿಜ್ಞಾನದಲ್ಲಿ ಹೇಳಲಾಗಿದೆ. ಮೆದುಳಿನ ಮೇಲ್ಮೈ ಬದಲಾವಣೆಗಳನ್ನು ಅನುಭವಿಸಿದಾಗ, ಪ್ರತಿಕ್ರಿಯೆಯಾಗಿ ಬೇರೊಂದು ಆಯಾಮದಲ್ಲಿ ಸಂದೇಶಗಳನ್ನು ಪಡೆಯುವುದರ ಪರಿಣಾಮವಾಗಿರುತ್ತದೆ. ಇದರೊಂದಿಗೆ, ನೀವು ಕನಸು ಕಂಡಾಗ ತಲೆಕೆಟ್ಟವರಂತೆ ಅನುಭವಿಸುತ್ತೀರಿ. ಕನಸುಗಳಿಗೆ ನಿಮ್ಮೊಂದಿಗೆ ಮಾಡುವುದಕ್ಕೆ ಏನೂ ಕೆಲಸವಿರುವುದಿಲ್ಲ ಮತ್ತು ನಿಮಗೂ ಅವುಗಳ ಮೇಲೆ ಗಮನವಿರಿಸುವ ಅಗತ್ಯವಿರುವುದಿಲ್ಲ. ಒಂದು ವಿಧದ ಕನಸು ನಿಮ್ಮನ್ನು ನೇರವಾಗಿ ಬಾಧಿಸುತ್ತದೆ. ಅಂತಹ ಕನಸನ್ನು ನಾವು 'ಕನಸು' ಎಂದು ಕರೆಯುವುದಿಲ್ಲ. ನಿಮ್ಮ ಪ್ರಧಾನ ಚೈತನ್ಯವು ಕನಸಿನಲ್ಲಿ ಕುಟುಂಬದ ಸದಸ್ಯನೊಬ್ಬ ನಿಮ್ಮ ಹತ್ತಿರಕ್ಕೆ ಬರುತ್ತಿರುವುದನ್ನು ಒಂದು ವೇಳೆ ನೋಡಿದರೆ, ಅದು ನಿಜವಾಗಿರುತ್ತದೆ. ನೀವದನ್ನು ಹೇಗೆ ಕನಸೆಂದು ಕರೆಯುತ್ತೀರಿ? ಅದು ಸಾಧ್ಯವಿಲ್ಲ.

ಮಾನವನ ಸ್ಫೂರ್ತಿ, ಅಸ್ಪಷ್ಟ ಜಾಗೃತಿ, ಅರೆಪ್ರಜ್ಞೆ ಮುಂತಾದವುಗಳ ಬಗ್ಗೆ ಮಾತನಾಡುತ್ತಾ ನಾನು ಹೇಳುತ್ತೇನೆ, ಈ ಪರಿಕಲ್ಪನೆಗಳೆಲ್ಲ ವಿಜ್ಞಾನಿಗಳಿಂದ ರೂಪಿತವಾದವುಗಳಲ್ಲ. ಇವೆಲ್ಲ ಬರಹಗಾರರಿಂದ ಜನಸಾಮಾನ್ಯರ ಆಚಾರಗಳಿಗೆ ಅನುಗುಣವಾಗಿ ರೂಪುಗೊಂಡಂತವು; ಅವೈಜ್ಞಾನಿಕವಾಗಿರುವಂತವು. 'ಅಸ್ಪಷ್ಟ ಜಾಗೃತಿ'ಯನ್ನು ಜನರು ಯಾವುದಕ್ಕೆ ಅನ್ವಯಿಸುತ್ತಾರೆ? ಅದನ್ನು ಸ್ಪಷ್ಟವಾಗಿ ವಿವರಿಸುವುದಕ್ಕೆ ಕಷ್ಟ ಮತ್ತು ಅದು ಹೆಚ್ಚು ವಾಗಾಂಡಬರದ್ದು. ಅರೆಪ್ರಜ್ಞೆಯನ್ನು ನಾವು ಸುಲಭವಾಗಿ ವಿವರಿಸಬಹುದು. ಅದು ಸಾಮಾನ್ಯವಾಗಿ ವ್ಯಕ್ತಿಯೊಬ್ಬನು ಏನನ್ನೂ ಅರಿಯದೆ ಯಾವುದಾದರೊಂದನ್ನು ಮಾಡಿಬಿಡುವುದಕ್ಕೆ ಅನ್ವಯಿಸುತ್ತದೆ. ಬೇರೆಯವರು, ಈ ವ್ಯಕ್ತಿಯು ಈ ಕೆಲಸವನ್ನು ಉದ್ದೇಶಪೂರ್ವಕವಾಗಿ ಅಲ್ಲದೆ, ಅರೆಪ್ರಜ್ಞಾವಸ್ಥೆಯಲ್ಲಿ ಮಾಡಿದ್ದಾನೆ ಎಂದು ಹೇಳುತ್ತಾರೆ. ಈ ಅರೆಪ್ರಜ್ಞಾವಸ್ಥೆಯು ಖಚಿತವಾಗಿ ನಾವು ಹೇಳಿದ ಸಹಾಯಕ ಪ್ರಜ್ಞಾವಸ್ಥೆಯಂತೆಯೇ. ಯಾವಾಗ ಒಬ್ಬನ ಪ್ರಧಾನ ಪ್ರಜ್ಞೆಯು ವಿರಾಮದಲ್ಲಿರುತ್ತದೆ. ಆಗ ಅದು ಮಿದುಳನ್ನು ನಿಯಂತ್ರಿಸುವುದಿಲ್ಲ. ಒಬ್ಬನು ಸ್ಪಷ್ಟವಾದ ಪ್ರಜ್ಞೆಯನ್ನು ಹೊಂದದೆ, ನಿದ್ರೆಗೆ ಜಾರಬಹುದು. ಕನಸಿನಲ್ಲಿ ಅಥವಾ ಅಪ್ರಜ್ಞೆಯಲ್ಲಿ ಒಬ್ಬನು ಸುಲಭವಾಗಿ ಸಹಾಯಕ ಪ್ರಜ್ಞೆ ಅಥವಾ ಸಹಾಯಕ ಚೈತನ್ಯದಿಂದ ಸುಲಭವಾಗಿ ನಿಯಂತ್ರಿಸಲ್ಪಡುತ್ತಾನೆ. ಆ ಸಮಯದಲ್ಲಿ, ಸಹಾಯಕ ಪ್ರಜ್ಞೆಯು ಕೆಲವು ನಿರ್ದಿಷ್ಟ ಸಂಗತಿಗಳನ್ನು ಮಾಡುವುದಕ್ಕೆ ಶಕ್ತವಿರುತ್ತದೆ. ಆದಾಗ್ಯೂ ಈ ಸಂಗತಿಗಳನ್ನು ಚೆನ್ನಾಗಿಯೇ ಮಾಡಲಾಗಿರುತ್ತದೆ. ಎಲ್ಲಿಯವರೆಗೆ ಎಂದರೆ ನಮ್ಮ ಸಾಮಾನ್ಯ ಮಾನವ ಸಮಾಜದಿಂದ ಸಹಾಯಕ ಪ್ರಜ್ಞೆಯು ದುರುಪಯೋಗವಾಗದೆ ಇರುವವರೆಗೆ. ಒಬ್ಬನು ಎಚ್ಚೆತ್ತ ಮೇಲೆ ತಾನು ಮಾಡಿದ್ದನ್ನು ಹಿಂತಿರುಗಿ ನೋಡಿದರೆ "ಹೇಗೆ ನಾನಿದನ್ನು ಇಷ್ಟೊಂದು ಕೆಟ್ಟದಾಗಿ ಮಾಡಿದೆ? ಸ್ವಚ್ಛ ಮನಸ್ಸಿನಲ್ಲಿ ನಾನಿದನ್ನು ಈ ರೀತಿ ಮಾಡುತ್ತಿರಲಿಲ್ಲ" ಎನ್ನುತ್ತಾನೆ. ನೀವು ಈಗ ಅದು ಚೆನ್ನಾಗಿಲ್ಲವೆಂದು ಹೇಳಬಹುದು. ಆದರೆ ಹತ್ತಾರು ದಿನ ಕಳೆದ ಮೇಲೆ 'ಅಬ್ಬಾ! ಅದು ತುಂಬಾ ಚೆನ್ನಾಗಿ ಮಾಡಲ್ಪಟ್ಟಿದೆ! ನಾನು ಹೇಗೆ ಅದನ್ನು ಮಾಡಿದೆ?' ಎಂದು ಹೇಳುತ್ತೀರಿ. ಏಕೆಂದರೆ ಸಹಾಯಕ ಪ್ರಜ್ಞೆಯು ಆ ಕ್ಷಣದ ಪರಿಣಾಮದ ಬಗ್ಗೆ ಗಮನಹರಿಸುವುದಿಲ್ಲ. ಅದು ಭವಿಷ್ಯತ್ತಿನಲ್ಲಿ ಒಳ್ಳೆಯ ಪರಿಣಾಮ ಹೊಂದಿರುತ್ತದೆ. ಅಲ್ಲಿ ಹಾಗೆಯೇ ಕೆಲವು ಸಂಗತಿಗಳು ಯಾವುದೇ ಭವಿಷ್ಯತ್ತಿನ ಪರಿಣಾಮಗಳನ್ನು ಹೊಂದಿರುವುದಿಲ್ಲ. ಆ ಕ್ಷಣದ ಪರಿಣಾಮವನ್ನು ಮಾತ್ರ ಹೊಂದಿರುತ್ತದೆ.

'ಸ್ಫೂರ್ತಿ' ಎನ್ನುವುದು ಬರಹಗಾರರಿಂದ ರೂಪಿಸಲ್ಪಟ್ಟ ಅತಿಯಾದ ಒಂದು ಪರಿಕಲ್ಪನೆ. ಒಬ್ಬನ ಬದುಕಿನ ಪೂರ್ಣಜ್ಞಾನವು ಒಮ್ಮೆಲೇ, ಒಂದೇ ಕ್ಷಣದಲ್ಲಿ ಬೆಂಕಿಯ ಕಿಡಿಯಂತೆ ಸ್ಫೋಟಗೊಳ್ಳುವುದನ್ನು ಸ್ಫೂರ್ತಿಯೆಂದು ನಂಬಲಾಗಿದೆ. ಭೌತಿಕವಾದದ ಹಿನ್ನೆಲೆಯಲ್ಲಿ ನಾನು ಹೇಳುತ್ತೇನೆ –ಒಬ್ಬನು ಜೀವನದಲ್ಲಿ ಹೆಚ್ಚು ಜ್ಞಾನವನ್ನು ಸಂಪಾದಿಸುವಾಗ, ಬುದ್ಧಿಯನ್ನು ಹೆಚ್ಚು ಬಳಸುತ್ತಾನೆ. ಅದರಿಂದ ಬುದ್ಧಿಯು ಹೆಚ್ಚು ಮೊನಚಾಗಿರುತ್ತದೆ. ಅವನು ಬುದ್ಧಿಯನ್ನು ಬಳಸಲು ಶುರುವಿಟ್ಟಾಗ, ವಿಷಯಗಳು ನಿರಂತರವಾಗಿ ಹೊರಬರುತ್ತವೆ. ಅದರಲ್ಲಿ ಯಾವ ಸ್ಫೂರ್ತಿಯೂ ಇರುವುದಿಲ್ಲ. ಸ್ಫೂರ್ತಿ ಹೊರಬಂದಾಗ, ಅದು ಈ ಸ್ಥಿತಿಯಲ್ಲಿ ಇರುವುದಿಲ್ಲ. ಒಬ್ಬ ವ್ಯಕ್ತಿಯು ತನ್ನ ಮಿದುಳನ್ನು ಬಳಸುವಾಗ, 'ಇಲ್ಲಿಗೆ ನನ್ನ ಜ್ಞಾನ ಖಾಲಿಯಾಯಿತು' ಅಥವಾ 'ಕಲ್ಪನಾಶಕ್ತಿ ಮುಗಿಯಿತು' ಎನ್ನುವವರೆಗೆ ಮಿದುಳನ್ನು ಬಳಸುತ್ತಲೇ ಇರುತ್ತಾನೆ. ಒಂದು ಘಟ್ಟದಲ್ಲಿ ಅವನು ಮುಂದುವರಿಯುವುದಕ್ಕೆ ಅಸಮರ್ಥನಾಗುತ್ತಾನೆ. ಅವನ ತಲೆಯಲ್ಲಿನ ಎಲ್ಲಾ ಆಲೋಚನೆಗಳು ನಿಂತು ಹೋಗುತ್ತವೆ. ಈ ಸಂದರ್ಭದಲ್ಲಿ ವ್ಯಕ್ತಿಯು ಹೆಚ್ಚು

ಬಳಲಿಕೆ ಅನುಭವಿಸಿ, ಸಿಗರೇಟು ಸುಡುತ್ತಾನೆ. ಪ್ರಯೋಜನವಾಗುವುದಿಲ್ಲ. ತಲೆನೋವು ಅನುಭವಿಸುತ್ತಾನೆ. ಆಗ ಅವನು ಹೀಗೆ ಯೋಚಿಸಬಹುದು– 'ಅದನ್ನು ಮರೆತುಬಿಡು. ನಾನು ವಿರಾಮ ತೆಗೆದುಕೊಳ್ಳುತ್ತೇನೆ.' ಈ ವಿರಾಮದಲ್ಲಿ ಅವನು ಇದ್ದಕ್ಕಿದ್ದಂತೆ ಏನನ್ನೋ ಉದ್ದೇಶಪೂರ್ವಕವಾಗಿ ತನ್ನ ಮಿದುಳಿನ ಒಳಗಿಂದ ನೆನಪನ್ನು ಹೊರತೆಗೆಯಬಹುದು. ಬಹಳಷ್ಟು ಸ್ಫೂರ್ತಿಗಳು ಈ ದಾರಿಯಲ್ಲಿಯೇ ಬರುತ್ತವೆ.

ಸ್ಫೂರ್ತಿಯು ಇಂತಹ ಸಮಯದಲ್ಲಿಯೇ ಏಕೆ ಹೊರಬರುತ್ತದೆ? ಏಕೆಂದರೆ ಒಬ್ಬನ ಮಿದುಳು ಯಾವಾಗ ಪ್ರಧಾನ ಪ್ರಜ್ಞೆಯಿಂದ ನಿಯಂತ್ರಿಸಲ್ಪಡುತ್ತದೋ, ಆಗ ಒಬ್ಬನು ಮಿದುಳನ್ನು ಹೆಚ್ಚು ಬಳಸುತ್ತಾನೆ. ಪ್ರಧಾನ ಪ್ರಜ್ಞೆಯು ಹೆಚ್ಚಿನ ನಿಯಂತ್ರಣವನ್ನು ಹೊಂದಿದ್ದು, ಸಹಾಯಕ ಪ್ರಜ್ಞೆಯು ಕನಿಷ್ಠ ನಿಯಂತ್ರಣವನ್ನು ಹೊಂದಿರುತ್ತದೆ. ಒಬ್ಬನು ಯೋಚಿಸುತ್ತಿರುವಾಗ ತಲೆನೋವನ್ನು ಅನುಭವಿಸುತ್ತಾನೆ. ಆಗ ಸಹಾಯಕ ಪ್ರಜ್ಞೆಯೂ ತಲೆನೋವನ್ನು ಅನುಭವಿಸುತ್ತದೆ. ಈ ದೇಹದೊಂದಿಗೇ ಸಹಾಯಕ ಪ್ರಜ್ಞೆಯೂ ಜನಿಸಿರುವುದರಿಂದ ಅದೂ ಸಹ ದೇಹದ ಒಂದು ಭಾಗವನ್ನು ನಿಯಂತ್ರಿಸುತ್ತದೆ. ಒಬ್ಬನ ಪ್ರಧಾನ ಪ್ರಜ್ಞೆಯು ವಿರಾಮದಲ್ಲಿದ್ದಾಗ, ಸಹಾಯಕ ಪ್ರಜ್ಞೆಯು ತನಗೆ ಗೊತ್ತಿರುವುದನ್ನು ಮಿದುಳಿಗೆ ರವಾನಿಸುತ್ತದೆ. ಬೇರೊಂದು ಆಯಾಮದಲ್ಲಿ ಸಹಾಯಕ ಪ್ರಜ್ಞೆಯು ವಸ್ತುವೊಂದರ ಸ್ವರೂಪವನ್ನು ನೋಡುತ್ತದೆಯಾದ್ದರಿಂದ, ಆ ಹಿನ್ನೆಲೆಯಲ್ಲಿ ಕೆಲಸವು ಪೂರ್ಣಗೊಳ್ಳುತ್ತದೆ.

ಕೆಲವರು'ಅಂತಹ ಸಂದರ್ಭದಲ್ಲಿ, ನಾವು ಸಹಾಯಕ ಪ್ರಜ್ಞೆಯಉಪಯೋಗವನ್ನು ಮಾಡಿಕೊಳ್ಳಬಹುದು' ಎನ್ನಬಹುದು. ಇದು ಹೇಗಿದೆಯೆಂದರೆ ಯಾವನೋ ಒಬ್ಬ 'ಸಹಾಯ ಪ್ರಜ್ಞೆಯನ್ನು ನಾವು ಹೇಗೆ ಸಂಪರ್ಕಿಸಬಹುದು?' ಎಂದು ಕೇಳಿದಂತಿದೆ. ನೀವು ಸಹಾಯಕ ಪ್ರಜ್ಞೆಯೊಂದಿಗೆ ಸಂಪರ್ಕವನ್ನು ಪಡೆಯಲಾರಿರಿ. ಏಕೆಂದರೆ ನಿಮ್ಮ ಅಭ್ಯಾಸವು ಈಗ ತಾನೇ ಪ್ರಾರಂಭವಾಗಿದೆ ಮತ್ತು ನೀವು ಯಾವ ಸಾಮರ್ಥ್ಯವನ್ನು ಹೊಂದಿಲ್ಲ. ಕೆಲವರು ಯೋಚಿಸಬಹುದು: "ಸಹಾಯಕ ಪ್ರಜ್ಞೆಯನ್ನು ನಾವು, ನಮ್ಮನ್ನು ಶ್ರೀಮಂತಗೊಳಿಸುವುದಕ್ಕೆ ಮತ್ತು ಮಾನವ ಸಮಾಜದ ಅಭಿವೃದ್ಧಿಯನ್ನು ಉದ್ದೀಪಿಸುವುದಕ್ಕೆ ಬಳಸಿಕೊಳ್ಳಬಹುದೆ?" ಬೇಡ! ಏಕಾಗಬಾರದು? ಅದೇಕೆಂದರೆ ನಿಮ್ಮ ಸಹಾಯಕ ಪ್ರಜ್ಞೆಯು ಏನನ್ನು ತಿಳಿದಿದೆ ಅದು ಇನ್ನೂ ತುಂಬಾ ಪರಿಮಿತಿಯಲ್ಲಿದೆ. ಸಹಾಯಕ ಪ್ರಜ್ಞೆಯು ತನ್ನ ಆಯಾಮದಲ್ಲಿ ಏನಿದೆಯೋ ಅಷ್ಟನ್ನು ಮಾತ್ರ ತಿಳಿದುಕೊಳ್ಳುತ್ತದೆ. ತನ್ನ ಆಯಾಮದಿಂದ ಹೊರಗುಳಿದಿರುವ ಯಾವುದನ್ನೂ ತಿಳಿದುಕೊಳ್ಳುವುದಿಲ್ಲ. ಅಲ್ಲಿ ನೇರವಾದ ಭಿನ್ನ ಹಂತಗಳು ಮತ್ತು ಆಯಾಮಗಳಿವೆ. ಮನುಕುಲದ ಅಭಿವೃದ್ಧಿಯು ಕೇವಲ ಉನ್ನತ ಹಂತದ ಬದುಕುಗಳಿಂದ ಮಾತ್ರ ನಿಯಂತ್ರಣಗೊಳ್ಳಬಲ್ಲದು ಮತ್ತು ಅದು ಅಭಿವೃದ್ಧಿಯ ನಿಯಮದಂತೆಯೇ ಮುಂದುವರಿಯುತ್ತದೆ.

ನಮ್ಮ ಸಾಮಾನ್ಯಮಾನವ ಸಮಾಜವು ಐತಿಹಾಸಿಕ ಅಭಿವೃದ್ಧಿ ನಿಯಮದಂತೆ ಬೆಳವಣಿಗೆಯಾಗುತ್ತದೆ. ನೀವು ನಿರ್ದಿಷ್ಟ ಗುರಿಗಾಗಿ ನಿರ್ದಿಷ್ಟ ಮಾರ್ಗವೊಂದರಲ್ಲಿ ಅಭಿವೃದ್ಧಿಗೊಳ್ಳುವುದಕ್ಕೆ ಆಶಿಸಬಹುದು. ಆದರೆ ಆ ಉನ್ನತ ಜೀವನವನ್ನು ಈ ಮಾರ್ಗದಲ್ಲಿ ಪರಿಗಣಿಸುವುದಿಲ್ಲ. ಪ್ರಾಚೀನ ಕಾಲದಲ್ಲಿ ಮಾನವರು ಆಧುನಿಕ ಸಂದರ್ಭದ ವಿಮಾನ, ರೈಲು ಮತ್ತು ಬೈಕ್‌ಗಳ ಬಗ್ಗೆ ಯೋಚಿಸಿಯೇ ಇರಲಿಲ್ಲವೆ? ನನ್ನ ಪ್ರಕಾರ ಅವರು ಅಸಾಧ್ಯವೆಂದು ಮಾಡಲಿಲ್ಲವೆ? ಏಕೆಂದರೆ ಆ ಕಾಲಘಟ್ಟದಲ್ಲಿ ಇದರ ಚರಿತ್ರೆ ಕ್ರಮಬದ್ಧವಾಗಿ ವಿಕಾಸವಾಗಿರಲಿಲ್ಲ. ಹಾಗಾಗಿ ಅವರು ಅದನ್ನು ಸಂಶೋಧಿಸಲಿಲ್ಲ. ಮೇಲ್‌ರಚನೆಯು ಸಾಂಪ್ರದಾಯಿಕ ಸಿದ್ಧಾಂತಗಳ ಮತ್ತು ಇಂದಿನ ಮಾನವ ಜ್ಞಾನಗಳ ದೃಷ್ಟಿಯಲ್ಲಿ ಮಾನವಿಕ ವಿಜ್ಞಾನವು ಆ ಐತಿಹಾಸಿಕ ಸಂದರ್ಭದಲ್ಲಿ ಈಗಿನ ಮಟ್ಟವನ್ನು ತಲುಪಿರಲಿಲ್ಲ. ಹಾಗಾಗಿ ಅವರು ಅವುಗಳನ್ನು ಸಂಶೋಧಿಸಲಿಲ್ಲ. ಒಂದರ್ಥದಲ್ಲಿ ಮಾನವಿಕ ವಿಜ್ಞಾನವು ಏನಿವತ್ತು ದಾಪುಗಾಲಿಡುತ್ತಾ ಮುಂದುವರಿಯುತ್ತಿದೆ ಅದು ಇತಿಹಾಸವು ರೂಪಿಸಿದ ಏರ್ಪಾಡಿನಂತೆಯೇ ಇದೆ. ನೀವು ನಿರ್ದಿಷ್ಟ ಗುರಿಯೊಂದನ್ನು ಮಾನವರಾಗಿ ತಲುಪಲು ಪ್ರಯತ್ನಿಸಿದರೆ, ಅದು ಕೈಗೂಡುವುದಿಲ್ಲ. ಹೌದು ಸಹಾಯಕ ಪ್ರಜ್ಞೆಯು ಸುಲಭವಾಗಿ ಪಾತ್ರವೊಂದನ್ನು ನಿರ್ವಹಿಸುವಂತಹ ಜನರು ಅಲ್ಲಿದ್ದಾರೆ. ಬರಹಗಾರನೊಬ್ಬನ ಪ್ರಕಾರ "ನಾನು ಸುಸ್ತಾಗದೆ ಸಾವಿರಾರು ಪದಗಳನ್ನು ನನ್ನ ಪುಸ್ತಕಕ್ಕಾಗಿ ಬರೆಯಬಲ್ಲೆ. ನಾನು ಬಯಸಿದರೆ ಹೆಚ್ಚು ಶೀಘ್ರವಾಗಿ ಬರೆಯುತ್ತೇನೆ." ಅದನ್ನು ಬೇರೆಯವರು ಓದಿದಾಗ ನಿಜವಾಗಿಯೂ ಚೆನ್ನಾಗಿದೆ ಎಂದು ಗುರುತಿಸುತ್ತಾರೆ. ಇದೇಕೆ ಹೀಗೆ? ಇದು ಅವನ ಪ್ರಧಾನ ಪ್ರಜ್ಞೆ ಮತ್ತು ಸಹಾಯಕ

ಪ್ರಜ್ಞೆ ಎರಡರ ಜಂಟಿ ಪರಿಶ್ರಮದಿಂದ ಬಂದ ಫಲಿತಾಂಶ. ಹಾಗೆಯೇ ಸಹಾಯಕ ಪ್ರಜ್ಞೆಯು ಅರ್ಧ ಕೆಲಸವನ್ನು ಕೈಗೊಳ್ಳಬಲ್ಲದು. ಆದರೆ ಅದು ಎಲ್ಲ ಕಾಲದಲ್ಲೂ ಅಲ್ಲ. ಬಹುತೇಕವಾಗಿ ಸಹಾಯಕ ಪ್ರಜ್ಞೆಯು ಒಳಗಾಗುವುದಿಲ್ಲ. ನೀವು ಏನನ್ನಾದರೂ ಮಾಡಲು ಅದನ್ನು ಬಯಸಿದರೆ, ಅದು ಒಳ್ಳೆಯದಾಗುವುದಿಲ್ಲ, ನೀವು ಅದಕ್ಕೆ ವಿರುದ್ಧವಾದ ಫಲಿತಾಂಶವನ್ನು ಪಡೆಯುತ್ತೀರಿ.

## ಮುಕ್ತ ಮತ್ತು ಸ್ವಚ್ಛ ಮನಸ್ಸು

ಹಲವು ಜನ ಅಭ್ಯಾಸದ ಸಮಯದಲ್ಲಿ ಅಚಲ ಮನಸ್ಸನ್ನು ಸಾಧಿಸಲಾರರು. ಅವರೆಲ್ಲ ಚೀಗಾಂಗ್ ಬೋಧಕರನ್ನು 'ಗುರುವೇ, ನಾನು ನಿಶ್ಚಲತೆಯನ್ನು ಹೊಂದಲಾರೆ, ಹೇಗೆ ನಾನು ಅಭ್ಯಾಸ ಮಾಡಲಿ. ಒಮ್ಮೆ ನಾನು ಕೆಳಗೆ ಕುಳಿತರೆ, ಎಲ್ಲದರ ಬಗ್ಗೆ ಯೋಚಿಸುತ್ತೇನೆ' ಎಂದು ಕೇಳುವುದಕ್ಕೆ ಎಲ್ಲ ಕಡೆ ಹೋಗುತ್ತಾರೆ. ಅದು ಎಲ್ಲದರ ಮೇಲೆ ತೇಲುತ್ತ ನದಿಗಳನ್ನು, ಸಮುದ್ರಗಳನ್ನು ದಾಟಿದಂತಾಗುತ್ತದೆ ಮತ್ತು ಒಬ್ಬನು ಹಾಗೆ ಖಂಡಿತವಾಗಿಯೂ ನಿಶ್ಚಲತೆಯನ್ನು ಸಾಧಿಸಲಾರ. ಒಬ್ಬನು ನಿಶ್ಚಲತೆಯನ್ನು ಸಾಧಿಸುವುದಕ್ಕೆ ಏಕೆ ವಿಫಲನಾಗುತ್ತಾನೆ? ಕೆಲವರು ಅದನ್ನು ಅರ್ಥಮಾಡಿಕೊಳ್ಳಲಾರರು ಮತ್ತು ಏನೋ ರಹಸ್ಯಗಳಿವೆಯೆಂದು ನಂಬುತ್ತಾರೆ. ಅವರು ಪ್ರಸಿದ್ಧರಾದ ಗುರುಗಳನ್ನು ಹುಡುಕಿ, ''ದಯವಿಟ್ಟು ನನಗೆ ಹೆಚ್ಚು ಮುಂದುವರಿದಿರುವ ತಂತ್ರಗಳನ್ನು, ನಿಶ್ಚಲತೆಯುಳ್ಳ ಮನಸ್ಸನ್ನು ಹೊಂದುವುದಕ್ಕೆ ಬೋಧಿಸಿ'' ಎಂದು ಕೇಳಿಕೊಳ್ಳುತ್ತಾರೆ. ನನ್ನ ದೃಷ್ಟಿಕೋನದಲ್ಲಿ ಅದು ಹೊರಗಿನ ಸಹಾಯಕ್ಕಾಗಿ ಕಾಯುವುದಾಗಿರುತ್ತದೆ. ನೀವು ನಿಮ್ಮಷ್ಟಕ್ಕೇ ಉತ್ತಮಗೊಳ್ಳಲು ಬಯಸಿದರೆ, ನೀವು ನಿಮ್ಮ ಒಳಗಿನದನ್ನು ಹುಡುಕಿ ಮತ್ತು ಹೃದಯದಿಂದ ಕಷ್ಟಪಟ್ಟು ಕೆಲಸ ಮಾಡಿ, ಅದಾದ ಮೇಲೆ ಮಾತ್ರ ನೀವು ನಿಜವಾಗಿ ಧ್ಯಾನದಲ್ಲಿ ನಿಶ್ಚಲತೆಯನ್ನು ಸಾಧಿಸುತ್ತೀರಿ. ನಿಶ್ಚಲತೆಯನ್ನು ಸಾಧಿಸುವುದಕ್ಕೆ ಬೇಕಾಗಿರುವ ಶಕ್ತಿಯೆಂದರೆ ಗಾಂಗ್.

ದಿನನಿತ್ಯದ ವ್ಯಕ್ತಿಯು ನಿಶ್ಚಲತೆಯನ್ನು ಹೇಗೆ ಗಳಿಸುತ್ತಾನೆ? ಒಬ್ಬನು ಒಳ್ಳೆಯ ಜನ್ಮತಃ ಗುಣವನ್ನು ಹೊಂದಿಲ್ಲದೆ, ನಿಶ್ಚಲತೆಯನ್ನು ಸಾಧಿಸಲಾರ. ಇನ್ನೊಂದು ಮಾತಿನಲ್ಲಿ ನಿಶ್ಚಲತೆಯನ್ನು ಸಾಧಿಸುವಲ್ಲಿ ಅಸಮರ್ಥರಾಗುವುದಕ್ಕೆ ಮೂಲಭೂತ ಕಾರಣ ತಾಂತ್ರಿಕ ದೋಷವಲ್ಲ. ಬದಲಾಗಿ ನಿಮ್ಮ ಮನಸ್ಸು ಮತ್ತು ಹೃದಯ ಸ್ವಚ್ಛವಾಗಿಲ್ಲದೆ ಇರುವುದು. ಸಾಮಾನ್ಯ ಮಾನವ ಸಮಾಜದಲ್ಲಿ ಮತ್ತು ಅಂತರ್ ವೈಯಕ್ತಿಕ ಸಂಘರ್ಷಗಳಲ್ಲಿ ಇದ್ದರೆ, ವೈಯಕ್ತಿಕ ಗಳಿಕೆಗಾಗಿ ನೀವು ಸ್ಪರ್ಧಿಸುತ್ತ, ಜಗಳವಾಡುತ್ತ ಇದ್ದರೆ, ಎಲ್ಲ ರೀತಿಯ ಭಾವುಕತೆಗಳಲ್ಲಿ ಮುಳುಗಿದ್ದರೆ, ಹೇಗೆ ತಾನೆ ನೀವು ಸುಲಭವಾಗಿ ನಿಶ್ಚಲತೆಯನ್ನು ಸಾಧಿಸಬಲ್ಲಿರಿ? ಚಿಗಾಂಗನ್ನು ಅಭ್ಯಾಸ ಮಾಡುತ್ತಿರುವಾಗ, ಒಬ್ಬನು ಹೇಳಿದ 'ನಾನು ಅದನ್ನು ನಂಬುವುದಿಲ್ಲ. ನಾನು ಸಮಾಧಾನವಾಗಿರುವುದಕ್ಕೆ ಮತ್ತು ಯೋಚಿಸದೆ ಇರುವುದಕ್ಕೆ ಕಲಿತಿದ್ದೇನೆ.' ನಿಮ್ಮ ಮನಸ್ಸು ಶುದ್ಧವಾಗಿಲ್ಲದಿದ್ದರೆ, ಎಲ್ಲಾ ಆಲೋಚನೆಗಳು ಥಟ್ಟನೆ ಎದ್ದು ಬರುತ್ತವೆ. ಹಾಗಾದರೆ ನೀವು ಮತ್ತೆ ಮನಸ್ಸಿನ ನಿಶ್ಚಲತೆಯನ್ನು ಹೊಂದುವುದಕ್ಕೆ ಅಸಮರ್ಥರಾಗುತ್ತೀರಿ.

ಕೆಲವು ಜನರು ನನ್ನ ಅಭಿಪ್ರಾಯವನ್ನು ಒಪ್ಪದೆ, ''ಚೀಗಾಂಗ್ ಬೋಧಕರು ಜನರಿಗೆ ನಿರ್ದಿಷ್ಟ ತಂತ್ರಗಳನ್ನು ಉಪಯೋಗಿಸುವುದಕ್ಕೆ ಬೋಧಿಸುವುದಿಲ್ಲವೇ?'' ಎಂದು ಕೇಳಬಹುದು. ಅಲ್ಲದೆ ಒಬ್ಬನು ಏಕಾಗ್ರತೆಗಾಗಿ ಏನನ್ನಾದರೂ ದೃಷ್ಟಿಸುತ್ತ ಕೂರಬಹುದು, ಡಾಂಟಿಯನ್ನಿನ (ಡಾನ್ ಕ್ಷೇತ್ರ; ಹೊಟ್ಟೆಯ ಕೆಳಭಾಗ) ಮೇಲೆ ತನ್ನ ಮನಸ್ಸನ್ನು ಕೇಂದ್ರೀಕರಿಸಬಹುದು, ಬುದ್ಧನ ಹೆಸರನ್ನು ಜಪಿಸಬಹುದು ಮತ್ತು ಆ ರೀತಿಯದ್ದೇ ಬೇರೇನನ್ನಾದರೂ ಮಾಡಬಹುದು. ಇವುಗಳು ತಂತ್ರಗಳ ವಿಧಗಳು. ಆದಾಗ್ಯೂ ಅವು ಖಚಿತ ತಂತ್ರಗಳೇ ಅಲ್ಲ; ಅವು ಒಬ್ಬನ ಸಾಮರ್ಥ್ಯವನ್ನು ಪ್ರತಿಫಲಿಸುತ್ತವೆ. ಅಂತೆಯೇ ಈ ಸಾಮರ್ಥ್ಯಗಳು ನೇರವಾಗಿ ನಮ್ಮ ಆತ್ಮಪ್ರಕೃತಿಯ ಸಾಧನೆಗೆ ಸಂಬಂಧಿಸಿರುತ್ತವೆ. ಇನ್ನೂ ಹೆಚ್ಚಾಗಿ ಒಬ್ಬನು ಪ್ರತ್ಯೇಕವಾಗಿ ಈ ತಂತ್ರಗಳನ್ನು ಬಳಸಿ ನಿಶ್ಚಲತೆಯನ್ನು ಸಾಧಿಸಲಾರ. ನೀವು ಅದನ್ನು ನಂಬದಿದ್ದರೆ, ಪ್ರಯತ್ನಿಸಿ ನೋಡಬಹುದು. ಕೆಲವರು ಬುದ್ಧನ ಹೆಸರನ್ನು ಜಪಿಸುತ್ತಿದ್ದರೆ ನಿಶ್ಚಲತೆಯು ಕೆಲಸ ಮಾಡುತ್ತದೆ ಎನ್ನುತ್ತಾರೆ. ಬುದ್ಧನ ಹೆಸರನ್ನು ಜಪಿಸುವುದರಿಂದ ನೀವು ನಿಶ್ಚಲತೆಯನ್ನು ಪಡೆಯಲು ಸಾಧ್ಯವೇ? ಯಾವನೋ ಒಬ್ಬ ವಾದಿಸುತ್ತಾನೆ– 'ನಿಶ್ಚಲತೆಯನ್ನು ಬುದ್ಧ ಅಮಿತಭರ

ಅಭ್ಯಾಸ ಕ್ರಮದಲ್ಲಿ ಅಭ್ಯಾಸ ಮಾಡುವುದಕ್ಕೆ ಸುಲಭ. ಅದು ಕೇವಲ ಬುದ್ಧನ ಹೆಸರನ್ನು ಜಪಿಸುವುದರಿಂದ ಕಾರ್ಯಗತವಾಗುತ್ತದೆ.' ನೀವು ಏಕೆ ಅದನ್ನು ಪ್ರಯತ್ನಿಸುತ್ತಿಲ್ಲ? ನಾನು ಅದನ್ನು ಒಂದು ಸಾಮರ್ಥ್ಯವೆಂದು ಕರೆಯುತ್ತೇನೆ. ನೀವು ಅದು ಸುಲಭವೆಂದು ಹೇಳುತ್ತೀರಿ. ಆದರೆ ನಾನು ಹೇಳುತ್ತೇನೆ ಯಾವ ಅಭ್ಯಾಸವೂ ಸುಲಭದ್ದಲ್ಲ.

ಶಾಕ್ಯಮುನಿಯು 'ಸಮಾಧಿ'ಯನ್ನು ಬೋಧಿಸಿದ್ದಾರೆಂದು ನೀವೆಲ್ಲ ತಿಳಿದಿದ್ದೀರಿ. ಸಮಾಧಿಗೆ ಮುಂಚೆ ಅವರು ಏನನ್ನು ಬೋಧಿಸಿದ್ದಾರೆ? ಅವರು 'ವಿಧಿ' ಮತ್ತು ಎಲ್ಲ ಅಪೇಕ್ಷೆಗಳನ್ನು ತೊರೆಯುವುದು ಮತ್ತು ಯಾವುದನ್ನೂ ಬಿಡದೆ ವ್ಯಸನಕ್ಕೊಳಗಾಗುವುದು– ಇವುಗಳ ಬಗ್ಗೆ ಬೋಧಿಸಿದ್ದಾರೆ. ಸಮಾಧಿಯು ಸಹ ಒಂದು ಸಾಮರ್ಥ್ಯವೇ ಆಗಿದೆ. ಹಂತಹಂತವಾಗಿ ಕೆಟ್ಟದ್ದನ್ನೆಲ್ಲ ಬಿಟ್ಟು ಬಿಡುತ್ತಾ ಬರುವುದರಿಂದ, ಏಕಾಗ್ರತೆಯನ್ನು ಸಾಧಿಸುವುದಕ್ಕೆ ಒಬ್ಬನ ಸಾಮರ್ಥ್ಯವು ಉತ್ತಮವಾಗುತ್ತಾ ಬರುತ್ತದೆ. ಒಬ್ಬನು ಬುದ್ಧನ ಹೆಸರನ್ನು ಜಪಿಸಿದಾಗ, ತನ್ನ ತಲೆಯೊಳಗೆ ಏನನ್ನೂ ಇಟ್ಟುಕೊಳ್ಳುವುದಿಲ್ಲ ಮತ್ತು ಎಲ್ಲದರ ಬಗ್ಗೆ ಅಪ್ರಜ್ಞನಾಗುತ್ತಾನೆ. ಒಂದು ಆಲೋಚನೆಯು ಇತರ ಸಾವಿರಾರು ಮಂದಿಯ ಪ್ರತೀ 'ಬುದ್ಧ ಅಮಿತಾಭ' ಎಂಬ ಪದದಿಂದ ಸ್ಥಳಾಂತರಗೊಳ್ಳುತ್ತದೆ. ಇದೂ ಒಂದು ಸಾಮರ್ಥ್ಯವೇ? ಒಬ್ಬನು ಪ್ರಾರಂಭದಿಂದಲೇ ಇದನ್ನು ಮಾಡಬಲ್ಲನೆ? ಮಾಡಲಾರ. ಒಂದು ವೇಳೆ ಒಬ್ಬನು ಅದನ್ನು ಮಾಡದಿದ್ದರೆ, ಖಂಡಿತವಾಗಿ ನಿಶ್ಚಲತೆಯನ್ನು ಸಾಧಿಸುವಲ್ಲಿ ಅಸಮರ್ಥನಾಗುತ್ತಾನೆ. ನೀವು ನಂಬದಿದ್ದರೆ, ಪ್ರಯತ್ನಿಸಿ ನೋಡಿ. ಒಬ್ಬನ ಬಾಯಿ ಬುದ್ಧನ ಹೆಸರನ್ನು ನಿರಂತರವಾಗಿ ಜಪಿಸುತ್ತಿರುವ ಸಮಯದಲ್ಲಿಯೇ, ಒಬ್ಬನ ಮನಸ್ಸನ್ನು ಎಲ್ಲದರ ಬಗ್ಗೆ ಆಲೋಚಿಸುತ್ತಿರುತ್ತದೆ. "ಕೆಲಸ ಜಾಗದಲ್ಲಿ ನನ್ನ ಮಾಲೀಕ ಏಕೆ ನನ್ನನ್ನು ಅಷ್ಟು ಇಷ್ಟಪಡುವುದಿಲ್ಲ? ಈ ತಿಂಗಳಿಗೆ ನನ್ನ ಬೋನಸ್ ತುಂಬಾ ಕಡಿಮೆ" ಹೀಗೆ. ಬೇರೊಬ್ಬನೂ ಅದರ ಬಗ್ಗೆ ಯೋಚಿಸುತ್ತಾನೆ. ಒಬ್ಬನು ಬುದ್ಧನ ಹೆಸರನ್ನು ಜಪಿಸುತ್ತಲೇ ಕೋಪಗ್ರಸ್ತನಾಗಬಹುದು. ಈ ವ್ಯಕ್ತಿಯು ಚೀಗಾಂಗನ್ನು ಅಭ್ಯಾಸ ಮಾಡಬಲ್ಲನೆಂದು ನೀವು ಯೋಚಿಸುತ್ತೀರಾ? ಅದು ನಿಮ್ಮ ಮನಸ್ಸು ಅಶುದ್ಧವಾಗಿರುವುದರ ವಿಷಯವಲ್ಲವೆ? ಕೆಲವರ ದಿವ್ಯದೃಷ್ಟಿಯು ತೆರೆದು, ಅವರು ಆಂತರಿಕವಾಗಿ ಡಾಂಟಿಯನ್ ಕಡೆಗೆ ನೋಡಬಲ್ಲರು. **ಡಾನ್** ಪ್ರಕಾರ ಅದು ಒಬ್ಬನ ಹೊಟ್ಟೆಯ ಕೆಳಭಾಗದಲ್ಲಿ ಸಂಗ್ರಹವಾಗುತ್ತದೆ. ಅದು ಪರಿಶುದ್ಧವಾದ ಶಕ್ತಿ, ಅದು ಉಜ್ವಲವಾಗಿ ಮಾರ್ಪಡುತ್ತದೆ. ಅದು ಪರಿಶುದ್ಧವಲ್ಲದ್ದಾದರೆ ತುಂಬಾ ಅಸ್ಪಷ್ಟ ಮತ್ತು ಕಪ್ಪಗಾಗುತ್ತದೆ. ಡಾಂಟಿಯನ್‌ನಲ್ಲಿ ಒಬ್ಬನು ಅಂತರ್ಮುಖವಾಗಿ ಡಾನ್ ಕಡೆಗೆ ನೋಡುವುದರಿಂದಲೇ ನಿಶ್ಚಲತೆಯನ್ನು ಪಡೆಯುತ್ತಾನೆಯೋ? ಒಬ್ಬನು ಒದನ್ನು ಪಡೆಯಲಾರ. ಅದು ಒಂದು ತಂತ್ರವಾಗಿ ಮೇಲೇರಿಲ್ಲ. ಅದಕ್ಕೆ ಕಾರಣವೇನೆಂದರೆ ಒಬ್ಬನ ಮನಸ್ಸು ಮತ್ತು ಆಲೋಚನೆಗಳು ಮುಕ್ತ ಮತ್ತು ಸ್ವಚ್ಛವಾಗಿಲ್ಲದಿರುವುದು. ನೀವು ಡಾಂಟಿಯನ್ ಕಡೆಗೆ ನೋಡಿದಾಗ, ಡಾನ್ ಪ್ರಕಾಶಮಾನವಾಗಿ ಮತ್ತು ಮನೋಹರವಾಗಿ ಕಾಣುತ್ತದೆ. ಕ್ಷಣದಲ್ಲಿ, ಈ ಡಾನ್ ಹಲವು ವಿಭಾಗಗಳುಳ್ಳ ಕೋಣೆಯಾಗಿ ಬದಲಾಗುತ್ತದೆ. "ಈ ಕೊಠಡಿಯು ನನ್ನ ಮಗ ಮದುವೆಯಾದಾಗ, ಅವನಿಗೆ ಆಗುತ್ತದೆ. ಆ ಕೊಠಡಿಯು ನನ್ನ ಮಗಳಿಗೆ, ಮುದುಕರಾದಾಗ, ನಾವು ಬೇರೆ ಕೊಠಡಿಯಲ್ಲಿ ಬದುಕುತ್ತೇವೆ ಮತ್ತು ಮಧ್ಯದಲ್ಲಿರುವ ಕೊಠಡಿ ವಾಸದ ಕೊಠಡಿಯಾಗುತ್ತದೆ. ಅದು ತುಂಬಾ ಚೆನ್ನಾಗಿದೆ! ಈ ಮನೆಯು ನನಗಾಗಿ ನಿರ್ಧರಿತವಾಗಿದೆಯೇ? ನಾನು ಅದನ್ನು ಪಡೆಯುವುದಕ್ಕೆ ದಾರಿಯೊಂದನ್ನು ಹುಡುಕಬೇಕು. ಏನು ಮಾಡಲಿ? ಜನರು ಈ ಸಂಗತಿಗಳಿಗೆ ಅಂಟಿಕೊಂಡಿರುತ್ತಾರೆ. ನಿಶ್ಚಲತೆಯನ್ನು ಈ ದಾರಿಯಲ್ಲಿಯೇ ಸಾಧಿಸಬಹುದೆಂದು ನೀವು ಆಲೋಚಿಸಿದ್ದೀರಾ? ಅದನ್ನು ಹೇಳಲಾಗಿದೆ: "ಈ ಸಾಮಾನ್ಯ ಮಾನವ ಸಮಾಜಕ್ಕೆ ನಾನು ಬಂದಾಗ, ಅದು ಹೋಟೆಲೊಂದರಲ್ಲಿ ಕೆಲವು ದಿನ ಇದ್ದು, ನೋಡಿಕೊಂಡು ಹೋಗುವಂತೆ. ನಂತರ ಆತುರದಲ್ಲಿ ನಾನು ಹೊರಡುತ್ತೇನೆ." ಕೆಲವರು ತಮ್ಮ ಮನೆಯನ್ನು ಮರೆತು ಈ ಸ್ಥಳದ'ಲ್ಲಿಯೇ ಇದ್ದುಬಿಡುತ್ತಾರೆ.

ಅಪ್ಪಟ ಸಾಧನೆಯ ಅಭ್ಯಾಸದಲ್ಲಿ ಒಬ್ಬನು ತನ್ನ ಹೃದಯ ಮತ್ತು ಅಂತರಂಗವನ್ನು ಹದಗೊಳಿಸುತ್ತಾನೆ. ಒಬ್ಬನು ಹೊರಗೆ ಹುಡುಕುವುದಕ್ಕಿಂತ ಹೆಚ್ಚು ತನ್ನೊಳಗೆಯೇ ಹುಡುಕಬೇಕು. ಕೆಲವು ಅಭ್ಯಾಸದ ಶಾಲೆಗಳು ಹೇಳುತ್ತವೆ– 'ಬುದ್ಧ ಒಬ್ಬನ ಹೃದಯದಲ್ಲಿದ್ದಾನೆ.' ಇದು ಸತ್ಯವನ್ನು ಹೊಂದಿದೆ. ಕೆಲವರು ಈ ಹೇಳಿಕೆಯನ್ನು ತಪ್ಪಾಗಿ ಅರ್ಥೈಸಿಕೊಂಡಿದ್ದಾರೆ. ಬುದ್ಧ ಅವರ ಹೃದಯದಲ್ಲಿದ್ದಾನೆ. ಆದ್ದರಿಂದ ಅವರು ತಮಗೆ ತಾವೇ ಬುದ್ಧರಾಗಿದ್ದಾರೆ. ಅದು ತಪ್ಪಲ್ಲವೇ? ಅದು

ಹೇಗೆ ತಾನೆ ಅರ್ಥೈಸಿಕೊಂಡಿದೆ? ಆ ಹೇಳಿಕೆಯ ಅರ್ಥ– ನೀವು ಸಾಧನೆಯಲ್ಲಿ ಸಫಲರಾಗಬೇಕಾದರೆ, ಮೊದಲು ನಿಮ್ಮ ಹೃದಯವನ್ನು ಹದಗೊಳಿಸಿ, ಸಾಧನೆ ಮಾಡಿ. ಅಲ್ಲಿ ಹೇಗೆ ಬುದ್ಧ ನಿಮ್ಮ ದೇಹದಲ್ಲಿರುವುದಕ್ಕೆ ಸಾಧ್ಯ? ನೀವು ಸಫಲರಾಗುವುದಕ್ಕೆ ಸಾಧನೆಯನ್ನು ಅಭ್ಯಾಸ ಮಾಡಬೇಕು; ಅದರಲ್ಲಿ ಯಶಸ್ವಿಯಾಗಬೇಕು.

ನೀವು ನಿಶ್ಚಲತೆಯನ್ನು ಸಾಧಿಸಲಾರದ್ದಕ್ಕೆ ಕಾರಣ ನಿಮ್ಮ ಮನಸ್ಸು ಖಾಲಿಯಾಗಿರುವುದು ಮತ್ತು ಹಂತ ಹಂತವಾಗಿ ಸಾಧಿಸಬೇಕಾದ ಉನ್ನತ ಹಂತವನ್ನು ನೀವು ತಲುಪದಿರುವುದು. ನಿಮ್ಮ ಬದಲಾವಣೆಯ ಹಂತದೊಂದಿಗೆ ನಿಶ್ಚಲತೆಯೂ ಕೈಹಿಡಿದು ಬರುತ್ತದೆ. ನೀವು ಕಾರ್ಯಸಂಬಂಧಗಳನ್ನು ತ್ಯಜಿಸಿದಾಗ, ನಿಮ್ಮ ಮಟ್ಟವು ಮೇಲೇರುತ್ತದೆ ಮತ್ತು ಏಕಾಗ್ರತೆಯ ಸಾಮರ್ಥ್ಯವೂ ಉತ್ತಮಗೊಳ್ಳುತ್ತದೆ. ಒಂದು ವೇಳೆ ನೀವು ಕೆಲವಾರು ಪದ್ಧತಿಗಳ ಮೂಲಕ ನಿಶ್ಚಲತೆಯನ್ನು ಸಾಧಿಸಲು ಬಯಸಿದರೆ, ನಾನದನ್ನು ಹೊರಗಿನಿಂದ ಸಹಾಯಕ್ಕೆ ಹುಡುಕಿದಂತೆ ಎಂದು ಕರೆಯುತ್ತೇನೆ. ಹೀಗೆ ಮಾಡುವುದು ಚೀಗಾಂಗ್ ಅಭ್ಯಾಸದಲ್ಲಿ ಅಡ್ಡಾದಿಡ್ಡಿಯಾಗಿ ಮತ್ತು ಕೆಟ್ಟದಾರಿಯಲ್ಲಿ ಹೋದಂತೆ. ಒಂದು ಕಡೆ ಬೌದ್ಧಧರ್ಮವನ್ನು ಹೊಂದಿದ್ದು, ನೀವು ಆ ರೀತಿ ವರ್ತಿಸಿದರೆ, ಅದು ಖಂಡಿತವಾಗಿ ಕೆಟ್ಟ ದಾರಿಯಾಗುತ್ತದೆ. ಅಪ್ಪಟ ಸಾಧನಾಭ್ಯಾಸದಲ್ಲಿ ಒಬ್ಬನು ತನ್ನ ಹೃದಯವನ್ನು ಹದಗೊಳಿಸಬೇಕು. ನೀವು ನಿಮ್ಮ ಆತ್ಮಪ್ರಕೃತಿಯನ್ನು ಉತ್ತಮಗೊಳಿಸಿದರೆ ಮಾತ್ರ ಒಂದು ಮುಕ್ತ ಮತ್ತು ಸ್ವಚ್ಛ ಮನಸ್ಸನ್ನು ಹೊಂದಬಲ್ಲಿರಿ. ನಿಮ್ಮ ಆತ್ಮಪ್ರಕೃತಿ ಉತ್ತಮಗೊಂಡಾಗ ಮಾತ್ರ, ನೀವು ವಿಶ್ವದ ಲಕ್ಷಣಗಳನ್ನು ಒಳಗೊಳ್ಳುತ್ತೀರಿ ಮತ್ತು ವಿಭಿನ್ನವಾದ ಮಾನವ ಅಪೇಕ್ಷೆಗಳನ್ನು, ಕಾರ್ಯಸಂಬಂಧಗಳನ್ನು ಮತ್ತು ಕೆಟ್ಟ ಸಂಗತಿಗಳನ್ನು ತೊರೆಯುತ್ತೀರಿ. ಹಾಗಾದ ನಂತರವೇ ನೀವು ಸ್ವತಃ ಕೆಟ್ಟ ಸಂಗತಿಗಳನ್ನು ನಾಶ ಮಾಡುವುದಕ್ಕೆ ಶಕ್ತರಾಗುತ್ತೀರಿ ಮತ್ತು ವಿಶ್ವದ ಲಕ್ಷಣಗಳಿಂದ ಬಂಧಿತರಾಗುವುದಿಲ್ಲ. ನಂತರ ಅದು ಗಾಂಗ್ ಆಗಿ ಪರಿವರ್ತಿತವಾಗುತ್ತದೆ. ಅವೆಲ್ಲ ಕೈ ಕೈ ಹಿಡಿದು ಹೋಗುತ್ತಿಲ್ಲವೆ? ಅದು ಅಂತಹ ತತ್ವವನ್ನೇ ಹೊಂದಿದೆ!

ನಿಶ್ಚಲತೆಯನ್ನು ಗಳಿಸುವಲ್ಲಿ ವ್ಯಕ್ತಿಗತ ಪಾಲ್ಗೊಳ್ಳುವಿಕೆಯು ಅಸಮರ್ಥವಾಗಿರುತ್ತದೆ. ಏಕೆಂದರೆ, ಅಲ್ಲಿ ನಿಮ್ಮ ಸಾಧನಾಭ್ಯಾಸದ ಮುಂದಿನ ಉನ್ನತ ಹಂತಗಳೊಂದಿಗೆ ಪ್ರಸ್ತುತದ ಪರಿಸ್ಥಿತಿಯೊಂದು ಗಂಭೀರವಾಗಿ ಪ್ರವೇಶಿಸಿ, ಅಡಚಣೆಯನ್ನುಂಟುಮಾಡುತ್ತದೆ. ಪುನರುತ್ಥಾನ ಮತ್ತು ಮುಕ್ತತೆಯ ಕಾರಣದಿಂದಾಗಿ ಅರ್ಥವ್ಯವಸ್ಥೆಯು ಹೆಚ್ಚು ನಮ್ಯವಾಗಿರುವುದನ್ನು ನೀವು ತಿಳಿದಿದ್ದೀರಿ. ಹಲವು ಹೊಸ ತಂತ್ರಜ್ಞಾನಗಳು ಪರಿಚಿತವಾಗುತ್ತಿವೆ ಮತ್ತು ಜನರ ಜೀವನ ಮಟ್ಟವು ಉತ್ತಮಗೊಂಡಿದೆ. ಎಲ್ಲಾ ದಿನನಿತ್ಯದ ಜನರು ಅದು ಒಳ್ಳೆಯದೆಂದು ತಿಳಿದಿದ್ದಾರೆ. ಆದರೆ ವಸ್ತುಗಳನ್ನು ಸಾಧಕ–ಬಾಧಕಗಳೆರಡರ ದೃಷ್ಟಿಯಲ್ಲಿ ನೋಡಬೇಕು. ಪುನರುತ್ಥಾನ ಮತ್ತು ಮುಕ್ತತೆಯ ಕಾರಣದಿಂದಾಗಿ ಹಲವು ಭಿನ್ನ ಕೆಟ್ಟ ಸಂಗತಿಗಳೂ ಪ್ರವೇಶ ಪಡೆದಿವೆ. ಒಂದು ಚಿಕ್ಕ ಸಾಹಿತ್ಯಕ ಕೆಲಸವೂ ಲೈಂಗಿಕ ವಿಷಯದಿಂದ ಕೂಡಿರದಿದ್ದರೆ, ಆ ಪುಸ್ತಕವು ಮಾರುವುದಕ್ಕೆ ಅಯೋಗ್ಯವೆನಿಸುತ್ತದೆ. ಚಲನಚಿತ್ರಗಳಲ್ಲಿ ಮತ್ತು ದೂರದರ್ಶನದ ಕಾರ್ಯಕ್ರಮಗಳಲ್ಲಿ ಬೆಡ್‌ರೂಮಿನ ಚಿತ್ರಗಳನ್ನು ತೋರಿಸದಿದ್ದರೆ, ಪ್ರೇಕ್ಷಕರು ಅವುಗಳನ್ನು ನೋಡಲೂ ಬಯಸುವುದಿಲ್ಲ. ಅಂತೆಯೇ ಕಲೆಯ ಬಗ್ಗೆಯೂ ಯಾವನೂ ಪ್ರತಿಕ್ರಿಯಿಸುವುದಿಲ್ಲ. ನಮ್ಮ ಪುರಾತನ ಚೀನೀ ಸಾಂಪ್ರದಾಯಿಕ ಕಲೆಗಳಲ್ಲಿ ಅಂತಹ ಅಶ್ಲೀಲ ಸಂಗತಿಗಳು ಇರುವುದಿಲ್ಲ. ಚೀನೀ ರಾಷ್ಟ್ರೀಯತೆಯ ಪರಂಪರೆಗಳು ಯಾವನೋ ಒಬ್ಬನಿಂದ ಅನ್ವೇಷಣೆಗೊಂಡದ್ದು ಅಥವಾ ರೂಪಿತವಾದದ್ದು ಅಲ್ಲ. ಇತಿಹಾಸಪೂರ್ವ ಸಂಸ್ಕೃತಿಯನ್ನು ಗುರುತಿಸುವಲ್ಲಿ ನಾನು ಪ್ರಸ್ತಾಪಿಸಿದ್ದೆ, ಪ್ರತಿಯೊಂದೂ ಅದರದ್ದೇ ಆದ ಸತ್ವವನ್ನು ಹೊಂದಿದೆ. ಈಗ ಮಾನವ ಮೌಲ್ಯಗಳು ಬದಲಾಗಿವೆ ಮತ್ತು ವಿಕಾರಗೊಂಡಿವೆ. ಒಳ್ಳೆಯ ಮತ್ತು ಕೆಟ್ಟದ್ದರ ಮೌಲ್ಯಮಾಪನವೂ ಬದಲಾಗಿದೆ. ಅವೆಲ್ಲ ದಿನನಿತ್ಯದ ಜನರ ವಿಚಾರಗಳಾಗಿವೆ. ಆದಾಗ್ಯೂ ಈ ವಿಶ್ವದ ಲಕ್ಷಣಗಳೇನೂ ಬದಲಾಗಿಲ್ಲ. ಒಳ್ಳೆಯ ಮತ್ತು ಕೆಟ್ಟ ವ್ಯಕ್ತಿಗಳನ್ನು ಗುರುತಿಸುವಲ್ಲಿ ಅನುಸರಿಸುವ ಮೌಲ್ಯಮಾಪನವೂ ಬದಲಾಗಿಲ್ಲ. ಒಬ್ಬ ಅಭ್ಯಾಸಿಯಾಗಿ, ನೀವೇನಾದರೂ ಎತ್ತರಕ್ಕೆ ಮತ್ತು ಅದನ್ನೇ ದಾಟಿ ಬೆಳೆಯುವುದಕ್ಕೆ ಬಯಸಿದರೆ, ನೀವು ಖಂಡಿತವಾಗಿ ಈ ಮಾರ್ಗವನ್ನು ಅನುಸರಿಸಿ, ವಸ್ತುಗಳನ್ನು ಮೌಲ್ಯಮಾಪನ ಮಾಡಿ. ಹೀಗೆ ಅಲ್ಲಿ ಹಲವು ಬಾಹ್ಯ ಅಡಚಣೆಗಳಿವೆ. ಎಂತಹವೆಂದರೆ, ಸಲಿಂಗಕಾಮ, ಲೈಂಗಿಕ ಸ್ವೇಚ್ಛೆ ಮತ್ತು ಮಾದಕ ವಸ್ತುಗಳ ಚಟದಂತಹವು.

ಮಾನವ ಸಮಾಜವು ಈ ದಾರಿಯಲ್ಲಿ ಅಭಿವೃದ್ಧಿ ಹೊಂದಿದಾಗ, ಅದರ ಬಗ್ಗೆ ಯೋಚಿಸಿ, ಸಮಾಜ ಏನಾಗುತ್ತದೆ? ಅದು ಹೀಗೆಯೇ ಅಸ್ತಿತ್ವದಲ್ಲಿರಲು ಒಪ್ಪಿತವಾಗುತ್ತದೆಯೇ? ಒಂದು ವೇಳೆ ಮಾನವಕುಲ ಅದರ ಬಗ್ಗೆ ಏನನ್ನಾದರೂ ಮಾಡದಿದ್ದರೆ, ಅದು ಎತ್ತರಕ್ಕೆ ಬೆಳೆಯುತ್ತದೆ. ಮಾನವಕುಲ ಅನಾಹುತವನ್ನು ಅನುಭವಿಸುವಷ್ಟರಲ್ಲಿ, ಪರಿಸ್ಥಿತಿಯು ಕೈ ತಪ್ಪಿ ಹೋಗಿರುತ್ತದೆ. ಹಲವು ಉಪನ್ಯಾಸಗಳಲ್ಲಿ ನಾನು ಮನುಕುಲದ ದೊಡ್ಡ ಸಮಸ್ಯೆಗಳ ಬಗ್ಗೆ ಮಾತನಾಡುವುದಿಲ್ಲ. ಏಕೆಂದರೆ ಈ ವಿಷಯವು ಹಲವು ಧರ್ಮಗಳಲ್ಲಿ ಮತ್ತು ಜನರಲ್ಲಿ ಚರ್ಚಿತವಾಗುತ್ತಿದೆ. ನಾನು ಈ ಪ್ರಶ್ನೆಯನ್ನು ಪ್ರತಿಯೊಬ್ಬನಿಗೂ ಕೇಳುತ್ತಿದ್ದೇನೆ. ಆದ್ದರಿಂದ ಅದರ ಬಗ್ಗೆ ಯೋಚಿಸಿ. ನಮ್ಮ ಸಾಧಾರಣ ಮಾನವ ಸಮಾಜದಲ್ಲಿ, ಮಾನವ ಮೌಲ್ಯಗಳ ಗುಣಮಟ್ಟವು ಇಂತಹ ಬದಲಾವಣೆಗಳಿಗೆ ಒಳಗಾಗಿದೆಯೇ! ಇಬ್ಬರ ನಡುವಿನ ಮಾನಸಿಕ ಉದ್ವೇಗಗಳು ಅತಿಯಾದ ಸ್ಥಿತಿಗೆ ತಲುಪಿವೆಯೆಂದು ಅನಿಸುತ್ತದೆಯೇ! ಅದು ತುಂಬಾ ಅಪಾಯದ ಸ್ಥಿತಿಗೆ ಬಂದಿದೆಯೆಂದು ನೀವು ತಿಳಿದಿಲ್ಲವೇ? ಏನೇ ಆದರೂ, ಪ್ರಸ್ತುತ ಸಂದರ್ಭವು ಸಾಧನೆಯನ್ನು ಅಭ್ಯಾಸ ಮಾಡುತ್ತಿರುವವರ ಮೇಲೆ ಗಂಭೀರವಾದ ಪ್ರಭಾವ ಬೀರುತ್ತಿದೆ. ಬೆತ್ತಲೆ ಚಿತ್ರಗಳು ರಸ್ತೆಯ ಮಧ್ಯದಲ್ಲಿಯೇ ತೂಗಾಡುತ್ತ, ಪ್ರದರ್ಶನಗೊಳ್ಳುತ್ತವೆ. ಒಮ್ಮೆ ಕಣ್ಣೆತ್ತಿದರೆ, ನೀವೇ ಅವುಗಳನ್ನು ನೋಡುತ್ತೀರಿ.

ಲಾವೋಜಿ ಈ ಹೇಳಿಕೆಯನ್ನು ನೀಡಿದ್ದಾನೆ– ಒಬ್ಬ ವಿವೇಕವುಳ್ಳ ವ್ಯಕ್ತಿಯು ತಾವೋವನ್ನು ಕೇಳಿದಾಗ, ಅದನ್ನು ಚೆನ್ನಾಗಿ ಅಭ್ಯಾಸ ಮಾಡುತ್ತಾನೆ. ವಿವೇಕವುಳ್ಳ ವ್ಯಕ್ತಿಯು ತಾವೋವನ್ನು ಯಾವಾಗ ಕಲಿಯುತ್ತಾನೆ ಆಗ ಹೇಗೆ ಯೋಚಿಸುತ್ತಾನೆ– ಕೊನೆಗೂ ನಾನು ಒಳ್ಳೆಯದಾದ ಸಾಧನಾ ಪದ್ಧತಿಯನ್ನು ಪಡೆದಿದ್ದೇನೆ. ಇವತ್ತಿನಿಂದ ಅಭ್ಯಾಸ ಪ್ರಾರಂಭಿಸುವುದಕ್ಕೆ ಏಕೆ ಕಾಯಬೇಕು? ಒಂದು ಒಳ್ಳೆಯ ಸಂಗತಿಗೆ ಬದಲಾಗಿ ಸಂಕೀರ್ಣವಾದ ಪರಿಸರವಿರುತ್ತದೆ. ಒಬ್ಬನು ತನಗೆ ತಾನೇ ಮೇಲಕ್ಕೆ ಮತ್ತು ಅದನ್ನು ದಾಟಿ ಮುಂದುವರಿದರೆ, ಅದು ಸತ್ವಯುತವಾದ ಸಾಧನೆಯಾಗುತ್ತದೆ.

ಸಾಧನೆಯ ಅಭ್ಯಾಸದಲ್ಲಿ ಯಾರು ನಿಜವಾಗಿ ದೃಢವಾಗಿರುತ್ತಾರೆ ಅಂತವರಿಗೆ ನಾನು ಹೇಳುತ್ತೇನೆ– ಆ ದೃಢತೆಯು ಒಳ್ಳೆಯ ಸಂಗತಿಯಾಗಿ ಮಾರ್ಪಡುತ್ತದೆ. ಸಂಕಷ್ಟಗಳಿಲ್ಲದೆ ನಿಮ್ಮ ಆತ್ಮಪ್ರಕೃತಿಯನ್ನು ಉತ್ತಮಗೊಳಿಸುವುದಕ್ಕೆ ಸಾಧ್ಯವಾಗಲಾರದು. ಒಂದು ವೇಳೆ ಎಲ್ಲರೂ ಒಬ್ಬರಿಗೊಬ್ಬರು ಚೆನ್ನಾಗಿದ್ದರೆ, ನೀವು ಹೇಗೆ ಸಾಧನೆಯನ್ನು ಅಭ್ಯಾಸ ಮಾಡುವಿರಿ? ಸರಾಸರಿ ಅಭ್ಯಾಸಿಯಾಗಿರುವ ಒಬ್ಬನಿಗೆ, ತಾವೋವನ್ನು ಸರಾಸರಿ ಕೇಳುವ ವ್ಯಕ್ತಿಗೆ, ನಿಶ್ಚಲತೆಯನ್ನು ಸಾಧಿಸುವಲ್ಲಿ ಸಫಲತೆ ದೊರೆಯುವುದಿಲ್ಲ. ಇಲ್ಲಿ ಕುಳಿತು ಕೇಳುತ್ತಿರುವ ಕೆಲವರು ಗುರು ಏನು ಹೇಳುತ್ತಾನೋ ಅದು ಸರಿಯಾಗಿರುತ್ತದೆಂದು ಕಂಡುಕೊಂಡಿದ್ದಾರೆ. ಸಾಮಾನ್ಯ ಮಾನವ ಸಮಾಜಕ್ಕೆ ಹಿಂತಿರುಗಿದ ಮೇಲೆ, ಅವರು ಆಗಲೂ ಕ್ಷಣಕ್ಷಣದ ಗಳಿಕೆಯು ಹೆಚ್ಚು ಸತ್ಯ ಮತ್ತು ಪ್ರಾಯೋಗಿಕವೆಂದು ತಿಳಿಯುತ್ತಾರೆ. ಶ್ರೀಮಂತರು, ಪಾಶ್ಚಾತ್ಯ ಮಿಲಿಯನನ ಅಧಿಪತಿಗಳು, ಎಲ್ಲರೂ– ಸಾವಿನ ನಂತರ ಅಲ್ಲಿ ಏನೂ ಉಳಿಯುವುದಿಲ್ಲ ಎಂದು ಕಂಡುಕೊಂಡಿದ್ದಾರೆ. ವಸ್ತು ಸಂಪತ್ತು ಹುಟ್ಟಿನಿಂದ ಬರುವುದಿಲ್ಲ; ಸಾವಿನ ನಂತರವೂ ಜೊತೆಗೆ ಬರುವುದಿಲ್ಲ, ಅವು ದೊಡ್ಡ ಕಂದಕಗಳಿದ್ದಂತೆ. ಹಾಗಾದರೆ ಗಾಂಗ್ ಏಕೆ ಹೆಚ್ಚು ಅಮೂಲ್ಯ? ಇದು ಏಕೆಂದರೆ, ಗಾಂಗ್ ನಿಮ್ಮ ದೇಹದ ಸಹಾಯಕ ಚೈತನ್ಯದೊಂದಿಗೆ ಕೂಡಿಕೊಳ್ಳುತ್ತದೆ ಮತ್ತು ಹುಟ್ಟಿನೊಂದಿಗೆ ನಿಮ್ಮೊಂದಿಗೆ ಬರುತ್ತದೆ ಮತ್ತು ಸಾವಿನ ನಂತರ ನಿಮ್ಮೊಂದಿಗೇ ಹೋಗುತ್ತದೆ. ನಾವು ಹೇಳಿದ್ದೇವೆ ಒಬ್ಬನ ಸಹಾಯಕ ಚೈತನ್ಯವು ನಶಿಸಿಹೋಗುವುದಿಲ್ಲ ಮತ್ತು ಅದು ಮೂಢನಂಬಿಕೆಯಲ್ಲ.

ನಾನು ಈಗತಾನೆ ಮಾತನಾಡಿದ ಒಬ್ಬನ ಆತ್ಮಪ್ರಕೃತಿಯ ಬಗ್ಗೆ, ಶಾಕ್ಯಮುನಿಯು ಒಮ್ಮೆ ಈ ವ್ಯಾಖ್ಯಾನ ಮಾಡಿದ್ದಾರೆ. ಅದನ್ನೇ ಬೋಧಿಧರ್ಮನೂ ಮಾಡಿದ್ದಾನೆ. 'ಚೀನಾದ ಈ ಪೌರಾತ್ಯ ಭೂಮಿಯು ಪಾವಿತ್ರ್ಯವು ಸೃಷ್ಟಿಸಿದ ಜನರನ್ನು ಒಳಗೊಂಡ ಪ್ರದೇಶವಾಗಿದೆ.' ಇತಿಹಾಸದ ತುಂಬೆಲ್ಲ, ಹಲವು ಋಷಿಗಳು ಮತ್ತು ಚೀನಿಯರು ಈ ಮಾತಿನ ಬಗ್ಗೆ ಹೆಚ್ಚು ಹೆಮ್ಮೆಪಟ್ಟುಕೊಂಡಿದ್ದಾರೆ. ಅದು, ಅವರೆಲ್ಲ ಉನ್ನತ ಹಂತದ ಗಾಂಗನ್ನು ಸಾಧಿಸಬಲ್ಲರೆಂದು ಸೂಚಿಸುತ್ತಿರುವಂತೆ ಅನಿಸುತ್ತದೆ. ಅಂತೆಯೇ ಹಲವು ಜನ ಘೋಷಿಸುತ್ತಾರೆ: "ಆಗಲಿ ನಮ್ಮಯ ಚೀನೀ ಜನರೇ! ಚೀನಾದ ಭೂಮಿಯು ಜನ್ಮತಃ ಒಳ್ಳೆಯ ಗುಣ ಮತ್ತು ಪಾವಿತ್ರ್ಯವನ್ನು ಹೊಂದಿರುವ ಜನರನ್ನು ಉತ್ಪಾದಿಸಬಲ್ಲದು." ನಿಜ ಸಂಗತಿಯೇನೆಂದರೆ, ಹಲವು ಜನ ಆ ವ್ಯಾಖ್ಯಾನದ ಹಿಂದಿನ ಅರ್ಥವನ್ನು ಅರ್ಥಮಾಡಿಕೊಂಡಿಲ್ಲ.

ಚೀನಾದ ಭೂಮಿಯು ಹೆಚ್ಚು ಪವಿತ್ರವಾದ ಮತ್ತು ಉನ್ನತ ಮಟ್ಟದ ಗಾಂಗ್‌ವುಳ್ಳ ಜನರನ್ನು ಏಕೆ ಉತ್ಪಾದನೆ ಮಾಡಬೇಕು? ಹಲವು ಜನ ಆ ವ್ಯಾಖ್ಯಾನದ ನಿಜವಾದ, ಅಪ್ಪಟವಾದ ಅರ್ಥವನ್ನು ಅರ್ಥಮಾಡಿಕೊಳ್ಳುತ್ತಿಲ್ಲ. ಅದರ ಅರ್ಥವೇನೆಂದು ನಾವು ಹೇಳಹೋಗುವುದಿಲ್ಲ. ನೀವೆಲ್ಲರೂ ಅದರ ಬಗ್ಗೆ ಯೋಚಿಸಿ. ಏಕೆಂದರೆ ಸಂಕೀರ್ಣವಾದ ಪರಿಸರ ಮತ್ತು ಜನರೊಂದಿಗೆ ಮಾತ್ರ ಉನ್ನತವಾದ ಗಾಂಗನ್ನು ಒಬ್ಬನು ಸಾಧಿಸಲು ಸಾಧ್ಯ.

**ಜನ್ಮತಃ ಗುಣ:**

ಒಬ್ಬನ ದೇಹದಲ್ಲಿರುವ ಹಿಂದಿನಿಂದ ಬಂದಿರುವ ತಿರುಳಿನ ಮೊತ್ತವು, ಅವನ ಜನ್ಮತಃ ಗುಣವನ್ನು ಗಟ್ಟಿಗೊಳಿಸುತ್ತದೆ. ತಿರುಳನ್ನು ಕಳೆದುಕೊಳ್ಳುವುದರಿಂದ ಅದರ ಜೊತೆಗೆ ಕೆಟ್ಟದ್ದು ಜಾಸ್ತಿಯಾಗಿ, ಕರ್ಮದ ವ್ಯಾಪ್ತಿಯು ವಿಸ್ತಾರಗೊಳ್ಳುತ್ತದೆ. ಅಂತಹ ವ್ಯವಹಾರದಲ್ಲಿ, ಒಬ್ಬನು ಜನ್ಮತಃ ದುರ್ಬಲ ಗುಣವುಳ್ಳವನಾಗುತ್ತಾನೆ. ಹೆಚ್ಚಿನ ತಿರುಳಿನ ಜೊತೆಗೆ ಒಬ್ಬನ ಕರ್ಮದ ವ್ಯಾಪ್ತಿಯೂ ಚಿಕ್ಕದಾಗುತ್ತದೆ. ಆ ಸಂಬಂಧದಂತೆ, ಈ ವ್ಯಕ್ತಿಯು ಒಳ್ಳೆಯ ಜನ್ಮತಃ ಗುಣವುಳ್ಳವನಾಗುತ್ತಾನೆ. ಒಬ್ಬನ ಒಳ್ಳೆಯದು ಮತ್ತು ಕೆಟ್ಟದ್ದು ಒಂದಕ್ಕೊಂದು ಬದಲಾಗುವುದಾದರೆ, ಹೇಗೆ ಬದಲಾಗುತ್ತವೆ? ಒಳ್ಳೆಯ ಕೆಲಸಗಳನ್ನು ಮಾಡುತ್ತಿದ್ದರೆ ಅದು ಶುದ್ಧವಾದ ಒಳ್ಳೆಯದನ್ನು ಉತ್ಪಾದಿಸುತ್ತದೆ. ದಾರಿದ್ರ್ಯದಿಂದ ಬಾಳುವುದರಿಂದ, ಕಷ್ಟಗಳನ್ನು ಅನುಭವಿಸುವುದರಿಂದ, ಒಳ್ಳೆಯದನ್ನು ಮಾಡುವುದರಿಂದ ಒಳ್ಳೆಯದು ಗಳಿಕೆಯಾಗುತ್ತದೆ. ತಪ್ಪಾದುದನ್ನು, ಕೆಟ್ಟದ್ದನ್ನು ಮಾಡುವುದರಿಂದ ಕೆಟ್ಟದು ಗಳಿಕೆಯಾಗುತ್ತದೆ ಮತ್ತು ಅದೇ ಕರ್ಮವಾಗಿರುತ್ತದೆ. ಅದು ವರ್ಗಾವಣೆಯ ಮೂಲಕ ಸಾಗುತ್ತಿರುತ್ತದೆ. ಈ ಮಧ್ಯೆ, ಅದು ಸಂಬಂಧಗಳ ಮಧ್ಯೆಯೂ ವರ್ಗಾವಣೆಯಾಗುತ್ತದೆ. ಏಕೆಂದರೆ ಕರ್ಮವು ಒಬ್ಬನ ಸಹಾಯಕ ಚೈತನ್ಯವನ್ನು ನೇರವಾಗಿ ಅನುಸರಿಸುತ್ತದೆ. ಕರ್ಮವು ಒಂದು ನಿರ್ದಿಷ್ಟ ವಯಸ್ಸಿನಿಂದ ಸಂಗ್ರಹವಾಗುತ್ತದೆ. ಜೊತೆಗೆ ಅವರು ತಮ್ಮ ಪೂರ್ವಿಕರಿಂದಲೂ ಪಡೆಯಬಹುದು. ಕೆಲವು ಸಂದರ್ಭಗಳಲ್ಲಿ ವಯಸ್ಸಾದವರು ಹೇಳುವ 'ಒಬ್ಬನ ಪೂರ್ವಿಕರು ಪುಣ್ಯ ಮಾಡಿರಬೇಕು' ಎಂಬ ಮಾತುಗಳು ಪೂರ್ಣ ಸತ್ಯವಾಗಿರುತ್ತವೆ!

ಒಬ್ಬ ವ್ಯಕ್ತಿಯ ಒಳ್ಳೆಯ ಅಥವಾ ದುರ್ಬಲ ಜನ್ಮತಃ ಗುಣವೇ, ಅವನು ಒಳ್ಳೆಯ ಅಥವಾ ದುರ್ಬಲ ಜ್ಞಾನೋದಯ ಸಾಮರ್ಥ್ಯವನ್ನು ಹೊಂದಿದ್ದನೆಂಬುದನ್ನು ಖಚಿತಪಡಿಸಬಲ್ಲದು. ವ್ಯಕ್ತಿಯು ದುರ್ಬಲ ಜನ್ಮತಃ ಗುಣವು ಅವನ ಜ್ಞಾನೋದಯ ಸಾಮರ್ಥ್ಯವನ್ನು ದುರ್ಬಲ ಮಾಡಬಲ್ಲದು. ಏಕೆ ಇದಾಗುತ್ತದೆ? ಅದೇಕೆಂದರೆ ಒಬ್ಬನು ಒಳ್ಳೆಯ ಜನ್ಮತಃ ಗುಣದೊಂದಿಗೆ ಹುಟ್ಟಿದ್ದರೆ, ಅವನು ಒಳ್ಳೆಯ ಅಂಶವನ್ನು ಹೆಚ್ಚು ಹೊಂದಿರುತ್ತಾನೆ. ಅದರಿಂದ ವಿಶ್ವದ ಲಕ್ಷಣಗಳು ನೇರವಾಗಿ ಅವನ ದೇಹದಲ್ಲಿ ಬಹುಬೇಗ ಪ್ರಕಟಗೊಳ್ಳುತ್ತವೆ. ಆದರೆ ಕೆಟ್ಟದಾದ ಕಪ್ಪು ಅಂಶವು ಅದಕ್ಕೆ ವಿರುದ್ಧವಾದುದು. ಅಂತೆಯೇ ಅದು ಕೆಟ್ಟ ಕೆಲಸಗಳಿಂದ ಗಳಿಕೆಯಾಗಿರುತ್ತದೆ. ಅದು ವಿಶ್ವದ ಲಕ್ಷಣಗಳಿಗೆ ವಿರುದ್ಧ ದಿಕ್ಕಿನಲ್ಲಿ ಚಲಿಸುತ್ತದೆ; ಪ್ರತ್ಯೇಕಗೊಳ್ಳುತ್ತದೆ. ಯಾವಾಗ ಈ ಕೆಟ್ಟ ಅಂಶವು ಹೆಚ್ಚು ಶೇಖರಗೊಳ್ಳುತ್ತದೋ, ಆಗ ಅದು ಒಬ್ಬನ ದೇಹದ ಸುತ್ತ ಒಂದು ವಲಯವನ್ನು ನಿರ್ಮಿಸುತ್ತದೆ ಮತ್ತು ಅವನ ಒಳಗನ್ನು ಮುಚ್ಚುತ್ತದೆ. ಅದರ ದೊಡ್ಡದಾದ ವಲಯ, ಆಳ ಮತ್ತು ದಪ್ಪ ಒಬ್ಬನ ಜ್ಞಾನೋದಯ ಸಾಮರ್ಥ್ಯವನ್ನು ಹಾಳಾಗಿಸುತ್ತದೆ. ಇದೇಕೆಂದರೆ ಅವನು ವಿಶ್ವದ ಲಕ್ಷಣಗಳನ್ನು ಪಡೆಯುವುದಕ್ಕೆ ಅಸಮರ್ಥನಾಗಿರುತ್ತಾನೆ. ಸಾಧನೆಯ ಸಂದರ್ಭದಲ್ಲಿ ಅಂತಹ ವ್ಯಕ್ತಿಗೆ ಅದನ್ನು ನಂಬುವುದಕ್ಕೇ ಆಗುವುದಿಲ್ಲ. ಅವನಿಗೆ ಸಾಧನೆಯ ಅಭ್ಯಾಸ ಮಾಡಲು ತುಂಬಾ ಕಷ್ಟವಾಗುತ್ತದೆ.

ಹೆಚ್ಚು ಒಳ್ಳೆಯ ಅಂಶವನ್ನು ಹೊಂದಿರುವ ವ್ಯಕ್ತಿಗೆ ಸಾಧನೆಯನ್ನು ಅಭ್ಯಾಸ ಮಾಡುವುದು ತುಂಬಾ ಸುಲಭವಿರುತ್ತದೆ. ಇದೇಕೆಂದರೆ, ಸಾಧನೆಯ ಅವಧಿಯಲ್ಲಿ ಹೆಚ್ಚು ಸಮಯ ಇಂತಹ ವ್ಯಕ್ತಿಯು ವಿಶ್ವದ ಲಕ್ಷಣಗಳನ್ನು ಹೀರಿಕೊಳ್ಳುತ್ತಾನೆ ಮತ್ತು ತನ್ನ ಆತ್ಮಪ್ರಕೃತಿಯನ್ನು ಉತ್ತಮಗೊಳಿಸುತ್ತಾನೆ. ಅವನು ಗಳಿಸಿದ ತಿರುಳು ನೇರವಾಗಿ ಗಾಂಗ್‌ಗೆ ಪರಿವರ್ತಿತವಾಗುತ್ತದೆ. ಹೆಚ್ಚು ಕೆಟ್ಟ ಅಂಶವನ್ನು ಹೊಂದಿರುವ ವ್ಯಕ್ತಿಗೆ, ಬೇರೊಂದು ಕ್ರಮವನ್ನು ಸೇರಿಸಲಾಗುತ್ತದೆ. ಅವನು ಪ್ರಾರಂಭದಿಂದ ಸಾಧನೆ ಮಾಡಬೇಕು. ದಾರಿದ್ರ್ಯವನ್ನು ಅನುಭವಿಸಿ, ಕರ್ಮವನ್ನು ಕಳೆದುಕೊಳ್ಳಬೇಕು.

ಆಗ ಅದು ಒಳ್ಳೆಯ ಅಂಶವಾಗುತ್ತದೆ; ನಂತರದಲ್ಲಿ ಒಳ್ಳೆಯ ತಿರುಳಾಗುತ್ತದೆ. ಅದಾದ ಮೇಲೆ ಮಾತ್ರ ಒಬ್ಬನು ಗಾಂಗನ್ನು ಬೆಳೆಸಬಲ್ಲನು. ಅಂತಹ ವ್ಯಕ್ತಿಯು ಸಾಧಾರಣವಾಗಿ ಒಳ್ಳೆಯ ಜನ್ಮತಃ ಜ್ಞಾನೋದಯ ಗುಣವನ್ನು ಹೊಂದಿರುವುದಿಲ್ಲ. ಅಂತವರಿಗೆ ನೀವು ಹೆಚ್ಚು ಕಷ್ಟಪಡಲು ಹೇಳಿದರೆ, ಅದನ್ನು ಅವರು ಕಡಿಮೆ ನಂಬುತ್ತಾರೆ; ಆಚರಣೆಗೆ ತರುವುದಂತೂ ತುಂಬಾ ಕಷ್ಟ. ಅಭ್ಯಾಸದ ಶಾಲೆಯಲ್ಲಿ ಗುರುವು ಇದನ್ನೆಲ್ಲಾ ಗಮನಿಸುತ್ತಾನೆ.

ಜನ್ಮತಃ ಗುಣವು ಒಬ್ಬನ ಜ್ಞಾನೋದಯ ಗುಣವನ್ನು ದೃಢಗೊಳಿಸುತ್ತದೆ. ಆದರೆ ಇದು ಖಚಿತವಲ್ಲ. ಕೆಲವರು ಒಳ್ಳೆಯ ಜನ್ಮತಃ ಗುಣವನ್ನು ಹೊಂದಿರುವುದಿಲ್ಲ. ಆದರೆ ಅವರ ಮನೆಯ ವಾತಾವರಣ ತುಂಬಾ ಚೆನ್ನಾಗಿರುತ್ತದೆ; ಹಲವು ಕುಟುಂಬದ ಸದಸ್ಯರು ಸಾಧನೆಯನ್ನು ಅಭ್ಯಾಸ ಮಾಡುತ್ತಿರುತ್ತಾರೆ. ಅವರಲ್ಲಿ ಕೆಲವರು ಹೆಚ್ಚು ಧಾರ್ಮಿಕ ನಂಬಿಕೆಯುಳ್ಳವರಾಗಿರುತ್ತಾರೆ ಮತ್ತು ಸಾಧನೆಯ ಅಭ್ಯಾಸದ ವಿಷಯದಲ್ಲಿಯೂ ಹೆಚ್ಚಿನ ನಂಬಿಕೆಯನ್ನು ಇಟ್ಟಿರುತ್ತಾರೆ. ಇಂತಹ ಪರಿಸರದಲ್ಲಿ, ಒಬ್ಬನು ಅವುಗಳೆಲ್ಲದರಲ್ಲಿ ನಂಬಿಕೆಯನ್ನು ಹೊಂದಬಹುದು ಮತ್ತು ಅದರಿಂದ ಜ್ಞಾನೋದಯ ಗುಣವನ್ನು ಉತ್ತಮಪಡಿಸುವುದಕ್ಕೆ ಸಾಧ್ಯವಾಗುತ್ತದೆ. ಕೆಲವರು ಉತ್ತಮವಾದ ಜನ್ಮತಃ ಗುಣವನ್ನು ಹೊಂದಿರುತ್ತಾರೆ; ಆದರೆ ನಮ್ಮ ಆಚರಣೆಯ ಸಮಾಜದಿಂದ ಚಿಕ್ಕ ಜ್ಞಾನಸಂಪತ್ತನ್ನು ಪಡೆದ ಕಾರಣಕ್ಕೆ, ವಿಶೇಷವಾಗಿ ಸೈದ್ಧಾಂತಿಕ ಶಿಕ್ಷಣದಲ್ಲಿ ಕೆಲ ವರ್ಷಗಳ ಹಿಂದೆ ಪಡೆದ ಪರಿಪೂರ್ಣ ಪದ್ಧತಿಗಳ ಕಾರಣಕ್ಕೆ, ಅವರೆಲ್ಲ ಹೆಚ್ಚು ಸಂಕುಚಿತ ಮನಸ್ಸಿನವರಾಗಿ, ತಮ್ಮ ಜ್ಞಾನಕ್ಕೆ ಮೀರಿದ ಯಾವುದನ್ನೂ ನಂಬುವುದಿಲ್ಲ. ಇದು ಅವರ ಜ್ಞಾನೋದಯ ಗುಣದ ಮೇಲೆ ಗಂಭೀರವಾದ ಪರಿಣಾಮ ಬೀರಬಲ್ಲದು.

ಉದಾಹರಣೆಗೆ, ಉಪನ್ಯಾಸದ ಎರಡನೇ ದಿನ ನಾನು ದಿವ್ಯದೃಷ್ಟಿಯನ್ನು ತೆರೆಯುವುದರ ಬಗ್ಗೆ ಬೋಧಿಸಿದ್ದೆ. ಒಬ್ಬ ವ್ಯಕ್ತಿಯು ಉತ್ತಮ ಜನ್ಮತಃ ಗುಣದೊಂದಿಗೆ ಅತ್ಯುಚ್ಛ ಹಂತದ ದಿವ್ಯದೃಷ್ಟಿಯನ್ನು ತೆರೆದನು. ಅವನು ಹಲವು ಬೇರೆಯ ಜನರು ನೋಡಲಾಗದ ಅಸಂಖ್ಯಾತ ಚಿತ್ರಗಳನ್ನು ನೋಡಿದನು. ಅವನು ಬೇರೆಯವರಿಗೆ ಹೇಳಿದನು, ''ವಾವ್, ನಾನು ಕೇಳುಗರ ದೇಹಗಳ ಮೇಲೆ 'ಫಾಲನ್' ಮಂಜಿನ ಪದರಗಳಂತೆ ಬೀಳುವುದನ್ನು ಸಭಾಂಗಣದ ತುಂಬೆಲ್ಲ ನೋಡಿದೆ. ಗುರು 'ಲೀ'ಯವರ ದೇಹ ನಿಜವಾಗಿ ಹೇಗೆ ಕಾಣುತ್ತದೆ ಎಂದು ನಾನು ನೋಡಿದೆ; ಸಂತರ ಹಿಂದೆ ಇರುವಂತೆ ಗುರು ಲೀಯವರ ಹಿಂದೆ ಪ್ರಭಾವಳಿಯಿತ್ತು.'' ಅವನು ಗುರುವು ಭಿನ್ನ ಹಂತಗಳಲ್ಲಿ ಉಪನ್ಯಾಸ ಮಾಡುತ್ತಿದ್ದುದನ್ನು ಮತ್ತು ಫಾಲನ್ ಅಭ್ಯಾಸಿಗಳ ದೇಹಗಳಿಗೆ ಹೊಂದಿಕೊಳ್ಳುತ್ತಿರುವುದನ್ನು ನೋಡಿದನು. ಅವನು ಉಪನ್ಯಾಸದ ಸಮಯದಲ್ಲಿ ಗುರುವಿನ ಗಾಂಗ್‌ಶೆನ್ (ಗಾಂಗ್‌ನಿಂದ ಮಾಡಲಾದ ದೇಹ) ಪ್ರತೀ ಭಿನ್ನ ಹಂತದಲ್ಲಿ ಉಪನ್ಯಾಸ ನೀಡುತ್ತಿದ್ದುದನ್ನು ಸಹ ನೋಡಿದನು. ಅದರ ಜೊತೆಯಲ್ಲಿ, ಅವನು ಸ್ವರ್ಗೀಯ ಸೌಂದರ್ಯವುಳ್ಳ ಹೂವುಗಳನ್ನು, ಇನ್ನಿತರ ವಸ್ತುಗಳನ್ನು ನೋಡಿದನು. ಹಾಗೆಯೇ ಅವನು ಮುಂದು ಮುಂದಕ್ಕೆ ಹೋಗುತ್ತಾ, ಕೊನೆಯಲ್ಲಿ ಹೇಳಿದನು– 'ನಾನು ಇವುಗಳನ್ನೆಲ್ಲ ನಂಬುವುದಿಲ್ಲ.' ಇವುಗಳಲ್ಲಿ ಕೆಲವನ್ನು ಈಗಾಗಲೇ ವಿಜ್ಞಾನವು ಪರಿಶೀಲಿಸುತ್ತಿದೆ ಮತ್ತು ಹಲವು ವಸ್ತುಗಳು ಆಧುನಿಕ ವಿಜ್ಞಾನದಿಂದ ವಿವರಿಸಲ್ಪಡುವ ಸಾಧ್ಯತೆಯಿದೆ; ಅವುಗಳಲ್ಲಿ ಕೆಲವನ್ನು ನಾವು ಚೆನ್ನಾಗಿಯೇ ಚರ್ಚಿಸಿದ್ದೇವೆ. ಏನನ್ನು ಚೀಗಾಂಗ್ ಅರ್ಥಮಾಡಿಕೊಳ್ಳುತ್ತದೆ. ಅದು ಆಧುನಿಕ ವಿಜ್ಞಾನವು ಅರ್ಥಮಾಡಿಕೊಂಡಿರುವುದಕ್ಕಿಂತ ದಾಟಿ ಹೋಗಿದೆ. ಈ ದೃಷ್ಟಿಕೋನದಲ್ಲಿ, ಒಬ್ಬನ ಜನ್ಮತಃ ಗುಣವು ಒಬ್ಬನ ಜ್ಞಾನೋದಯದ ಗುಣವನ್ನು ಪೂರ್ಣವಾಗಿ ದೃಢಪಡಿಸಲು ಆಗುವುದಿಲ್ಲ.

### ಜ್ಞಾನೋದಯ

'ಜ್ಞಾನೋದಯ' ಎಂದರೇನು? 'ಜ್ಞಾನೋದಯ' ಎಂಬುದು ಧರ್ಮದಿಂದ ಬಂದ ಒಂದು ಪರಿಭಾಷೆ. ಬೌದ್ಧಧರ್ಮದಲ್ಲಿ, ಅದು ಅಭಾಸಿಯೊಬ್ಬನು ಬುದ್ಧಧರ್ಮದ ಬಗ್ಗೆ ಅರ್ಥಮಾಡಿಕೊಳ್ಳುವುದಕ್ಕೆ ಅನ್ವಯಿಸುತ್ತದೆ. ಅರ್ಥಮಾಡಿಕೊಳ್ಳುವುದರ ಪರಿಭಾಷೆಗಳಲ್ಲಿ ಜ್ಞಾನೋದಯವಿದೆ. ಅದರ ಅರ್ಥ ವಿವೇಕವನ್ನು ಬೆಳಗುವುದು. ಅದು ಈಗಾಗಲೇ ದಿನನಿತ್ಯದ ಜನರಿಗೆ ಅನ್ವಯಗೊಂಡಿದೆ. ಅದು ಈ ವ್ಯಕ್ತಿಯು ತುಂಬಾ ಚುರುಕಾಗಿದ್ದಾನೆ ಎಂದು ಸಲಹೆ ನೀಡುತ್ತದೆ; ಅಲ್ಲದೆ ಅವನ ಒಡೆಯನ

ತಲೆಯಲ್ಲೇನಿದೆ ಎಂದು ಓದಬಲ್ಲದು. ಅಂತವನು ಸಂಗತಿಗಳನ್ನು ಬಹುಬೇಗ ಕಲಿಯಬಲ್ಲನು ಮತ್ತು ಹೇಗೆ ಅವನ ಒಡೆಯನನ್ನು ಮೆಚ್ಚಿಸಬಹುದೆಂದು ತಿಳಿಯಬಲ್ಲನು. ಜನರು ಅದನ್ನು ಉತ್ತಮ ಜ್ಞಾನೋದಯ ಗುಣ ಎಂದು ಕರೆಯುತ್ತಾರೆ. ಒಮ್ಮೆ ನೀವು ದಿನನಿತ್ಯದ ಜನರ ಮಟ್ಟಕ್ಕಿಂತ ಸ್ವಲ್ಪ ಮೇಲಕ್ಕೆ ಬೆಳೆದರೆ, ಹೇಗಾದರೂ ಈ ಹಂತದ ತತ್ವಗಳನ್ನು ಕಂಡುಕೊಳ್ಳುತ್ತೀರಿ, ದಿನನಿತ್ಯದ ಜನರಿಂದ ಅರ್ಥವಾಗಿರುವಂತವು ಸಹಜವಾಗಿ ತಪ್ಪಾಗಿರುತ್ತವೆಂದು. ನಾವು ಸೂಚಿಸುತ್ತಿರುವ ಜ್ಞಾನೋದಯ ಇದಲ್ಲ. ಬದಲಾಗಿ, ಒಬ್ಬ ಚತುರ ವ್ಯಕ್ತಿಯ ಜ್ಞಾನೋದಯ ಗುಣವು ಉತ್ತಮವಾದುದಾಗಿರುವುದಿಲ್ಲ. ಏಕೆಂದರೆ ಚತುರನಾಗಿರುವ ವ್ಯಕ್ತಿಯು ಕೇವಲ ತೋರಿಕೆಯ ಕೆಲಸಗಳನ್ನು, ಯಜಮಾನರಿಂದ ಹೊಗಳಿಸಿಕೊಳ್ಳುವಂತಹ ಕೆಲಸಗಳನ್ನು ಮಾತ್ರ ಮಾಡುತ್ತಾನೆ. ಅಂತಹ ಸಂದರ್ಭಗಳಲ್ಲಿ ಅವನು ಬೇರೆಯವರಿಂದ ಕೆಲಸ ಮಾಡಿಸಿರಬಹುದು. ಈ ವ್ಯಕ್ತಿಯು ಬೇರೆಯುವರಿಗೆ ಋಣಿಯಾಗಿರುತ್ತಾನೆ. ಏಕೆಂದರೆ ಅವನು ಚುರುಕಾಗಿರುತ್ತಾನೆ ಮತ್ತು ಬೇರೆಯವರನ್ನು ಹೇಗೆ ಮೆಚ್ಚಿಸಬೇಕು ಎಂದು ತಿಳಿದಿರುತ್ತಾನೆ. ಆ ಮೂಲಕ ಅವನು ಬೇರೆಯವರು ಹೆಚ್ಚು ನಷ್ಟ ಅನುಭವಿಸುತ್ತಿರುವಾಗಲೂ, ಹೆಚ್ಚು ಲಾಭವನ್ನು ಗಳಿಸುತ್ತಾನೆ. ಏಕೆಂದರೆ ಅವನು ಚತುರ. ಅವನು ಯಾವುದೇ ನಷ್ಟದಿಂದ ದುಃಖ ಅನುಭವಿಸುವುದಿಲ್ಲ, ಸುಲಭವಾಗಿ ಏನನ್ನೂ ಕಳೆದುಕೊಳ್ಳುವುದಿಲ್ಲ. ಅವನು ಹೆಚ್ಚು ಗಮನ ಹರಿಸುವುದು ಈ ಅಲ್ಪ ಪ್ರಾಯೋಗಿಕ ಗಳಿಕೆಗಾಗಿ ಮಾತ್ರ. ಅವನು ಹೆಚ್ಚು ಸಂಕುಚಿತ ಮನಸ್ಸಿವನಾಗಿ, ತನಗೆ ತಾನೇ ಹೆಚ್ಚು ವಸ್ತುಗಳಿಗೆ ನಿಷ್ಟನಾಗುತ್ತಾನೆ.

ಕೆಲವರು ಈ ವ್ಯಕ್ತಿಯ ಬಗ್ಗೆ ಅಸೂಯೆ ಪಡುತ್ತಾರೆ! ನಾನು ನಿಮಗೆ ಹೇಳುತ್ತಿದ್ದೇನೆ ಅವನ ಬಗ್ಗೆ ಅಸೂಯೆ ಪಡಬೇಡಿ. ಏಕೆಂದರೆ ನೀವು ತಿಳಿದಿಲ್ಲ. ಅವನು ಎಂತಹ ಕಷ್ಟದ ಜೀವನ ನಡೆಸುತ್ತಾನೆಂದು. ಅವನು ಊಟವನ್ನು, ನಿದ್ದೆಯನ್ನು ಚೆನ್ನಾಗಿ ಮಾಡಲಾರ; ಕನಸಿನಲ್ಲೂ ನಷ್ಟದ ಬಗ್ಗೆ ಭಯಗೊಳ್ಳುತ್ತಾನೆ, ಎಲ್ಲ ಕಡೆ ವೈಯಕ್ತಿಕ ಗಳಿಕೆಗಾಗಿ ಹೊರಹೋಗುತ್ತಿರುತ್ತಾನೆ. ಅವನು ತನ್ನ ಪೂರ್ಣ ಬದುಕನ್ನು ಅದಕ್ಕಾಗಿ ಮೀಸಲಾಗಿಸಿದ್ದಾನೆ ಎಂದು ನೀವು ಹೇಳುವುದಿಲ್ಲವೆ? ನಮ್ಮ ಪ್ರಕಾರ ನೀವು ಸಂಕಷ್ಟದ ಸಮಯದಲ್ಲಿ ಹಿಂಜರಿಯುತ್ತೀರಿ. ಆದರೆ ಅಂತಹ ವ್ಯಕ್ತಿಗಳು ಹೇಗಾದರೂ ಅದನ್ನು ಸಾಧಿಸಲು ಪ್ರಯತ್ನಿಸುತ್ತಾರೆ. ನೀವು ಅಂತವರಿಂದ ಕಲಿಯುವುದಿಲ್ಲವೇ. ಸಾಧಕರ ಸಮುದಾಯದಲ್ಲಿ ಹೇಳಿದ ಮಾತಿದು– 'ಅಂತಹ ವ್ಯಕ್ತಿಯು ಪೂರ್ಣವಾಗಿ ಕಳೆದುಕೊಳ್ಳುತ್ತಾನೆ.' ಅವನಿಗೆ ತಿರುಳನ್ನು ಕಾಪಿಡುವುದಕ್ಕೆ ಹೇಳುವುದು ಅಷ್ಟು ಸುಲಭವಲ್ಲ! ಒಂದು ವೇಳೆ ನೀವು ಅವನಿಗೆ ಸಾಧನೆಯನ್ನು ಅಭ್ಯಾಸ ಮಾಡುವುದಕ್ಕೆ ಕೇಳಿದರೆ, ಅವನು ಅದನ್ನು ನಂಬುವುದಿಲ್ಲ, "ಅಭ್ಯಾಸಿಯಾಗಿ, ನೀವು ಸೋತಾಗ, ಮರು ಹೋರಾಟ ನಡೆಸುವುದಕ್ಕೆ ನೀವು ಬಯಸುವುದಿಲ್ಲ. ಬೇರೆಯವರು ನಿಮಗೆ ಸಹಾಯ ಮಾಡಲು ಬಂದಾಗಲೂ, ನೀವದನ್ನು ತಿರಸ್ಕರಿಸಿ, ಒಂದು ಧನ್ಯವಾದವನ್ನು ಹೇಳುವುದಿಲ್ಲ. ನೀವೆಲ್ಲ ಮಾನಸಿಕವಾಗಿ ಅಸ್ವಸ್ಥರಾಗಿದ್ದೀರಿ" ಎನ್ನುತ್ತಾನೆ. ಅಂತಹ ವ್ಯಕ್ತಿಗೆ ಅಲ್ಲಿ ಸಾಧನೆಯ ಅಭ್ಯಾಸವನ್ನು ಅರ್ಥಮಾಡಿಕೊಳ್ಳುವುದಕ್ಕೆ ಬೇರೆ ದಾರಿಗಳಿರುವುದಿಲ್ಲ. ನೀವು ಮೂಢಭಕ್ತಿಯವರು ಮತ್ತು ಮೂರ್ಖರು ಎಂದು ಅವನು ಹೇಳಬಹುದು. ಆದರೆ ನೀವು ಅವನಿಂದ ಸಾಧನೆ ಮಾಡುವುದಕ್ಕೆ ಸಾಧ್ಯವಿಲ್ಲವೆಂದು ಹೇಳಲಾರಿರಿ.

ನಾವು ಹೇಳುತ್ತಿರುವ ಜ್ಞಾನೋದಯ ಇದಲ್ಲ. ಸ್ವಾರ್ಥದ ಹಿನ್ನೆಲೆಯಲ್ಲಿ ವ್ಯಕ್ತಿಯು ಯಾವುದನ್ನು 'ಮೂರ್ಖತನ' ಎನ್ನುತ್ತಾನೆ. ಅದರ ಬಗ್ಗೆ ನಾವು ಮಾತನಾಡುತ್ತಿದ್ದೇವೆ. ಅಂತಹ ವ್ಯಕ್ತಿಯು ನಿಜವಾಗಿ ಮೂರ್ಖನಲ್ಲ. ನಾವು ವೈಜ್ಞಾನಿಕ ಸಂಶೋಧನಾ ಯೋಜನೆಯನ್ನು ಆಯೋಜಿಸುವಾಗ, ನಾವು ಹೆಚ್ಚು ಸ್ವಚ್ಛ ಮನಸ್ಸಿನವರಾಗಿದ್ದು, ಚೆನ್ನಾಗಿ ಕೆಲಸ ಮಾಡುತ್ತೇವೆ. ಕೇವಲ ನಮ್ಮ ವೈಯಕ್ತಿಕ ಉಪಯೋಗ ಮತ್ತು ಅಂತರ್ ವೈಯಕ್ತಿಕ ಸಂಘರ್ಷಗಳಲ್ಲಿ ನಾವು ಗಮನಹರಿಸುವುದಿಲ್ಲ. ಯಾರು ನಿಮ್ಮನ್ನು ಮೂರ್ಖನೆನ್ನುತ್ತಾರೆ? ಖಚಿತವಾಗಿ ಯಾರೂ ಹೇಳಲಾರರು.

ನಿಜವಾದ ಮೂರ್ಖ ವ್ಯಕ್ತಿಯ ಬಗ್ಗೆ ನಾವೀಗ ಮಾತನಾಡೋಣ. ಇದಕ್ಕಾಗಿ ಉನ್ನತ ಹಂತಗಳಲ್ಲಿ ತತ್ವಗಳು ಸಂಪೂರ್ಣ ಬದಲಾಗುತ್ತವೆ. ಮೂರ್ಖ ವ್ಯಕ್ತಿಯು ದೊಡ್ಡದಾದ ತಪ್ಪುಗಳನ್ನು ಮಾಡುತ್ತ ದಿನನಿತ್ಯದ ಜನರಿಗೆ ವಿಚಿತ್ರವಾಗಿ ಕಾಣುತ್ತಾರೆ. ಆದರೆ ಅವನು ತನ್ನ ಸ್ವಾರ್ಥಕ್ಕಾಗಿ ಸರಿಯಾದ ರೀತಿಯಲ್ಲಿ ಸ್ಪರ್ಧಿಸಿ, ಹೋರಾಡುತ್ತಿರುತ್ತಾನೆ. ಅವನು ಕೀರ್ತಿಗಾಗಿ ಅಥವಾ ಕೆಟ್ಟ ತಿರುಳನ್ನು

ಕಳೆದುಕೊಳ್ಳುವುದಕ್ಕಾಗಿ ಪ್ರಯತ್ನಿಸುವುದಿಲ್ಲ. ಆದರೆ ಬೇರೆಯವರು ಅವನನ್ನು ಸೋಲಿಸುತ್ತ ಮತ್ತು ಅವನ ಮೇಲೆ ಶಪಥ ಮಾಡುತ್ತ ಅವನಿಗೆ ಒಳ್ಳೆಯ ತಿರುಳನ್ನು ನೀಡುತ್ತಾರೆ ಮತ್ತು ಈ ತಿರುಳು ಅತಿ ಹೆಚ್ಚು ಮೌಲ್ಯ ಹೊಂದಿರುತ್ತದೆ. ನಮ್ಮ ವಿಶ್ವದಲ್ಲಿ ಈ ತತ್ವವಿದೆ: ಕಳೆದುಕೊಳ್ಳದೆ, ಗಳಿಕೆಯಿಲ್ಲ, ಗಳಿಕೆಗಾಗಿ, ಒಬ್ಬನು ಕಳೆದುಕೊಳ್ಳಬೇಕು. ಹೆಚ್ಚು ಮೂರ್ಖನಾದ ವ್ಯಕ್ತಿಯನ್ನು ಬೇರೆಯವರು ನೋಡಿದಾಗ, 'ನೀನೊಬ್ಬ ಮೂರ್ಖ' ಎಂದು ಅವರೆಲ್ಲ ಅವನನ್ನು ಮಾತಿನಲ್ಲಿ ಬಯ್ಯುತ್ತಾರೆ. ಇದರಿಂದ ಅವರು ಒಳ್ಳೆಯ ತಿರುಳನ್ನು ಅವನೆಡೆಗೆ ಎಸೆಯುತ್ತಾರೆ. ಅವನ ಕಾರಣದಿಂದ ನೀವು ಗಳಿಸಬೇಕಾದ ಕಡೆಯಲ್ಲಿರುತ್ತೀರಿ, ಆದ್ದರಿಂದ ನೀವು ಏನನ್ನಾದರು ಕಳೆದುಕೊಳ್ಳಬೇಕು. ಒಂದು ವೇಳೆ ಒಬ್ಬನು ನಡೆದುಕೊಂಡು ಬಂದು, ಅವನನ್ನು ಒದ್ದು 'ನೀನೊಬ್ಬ ದೊಡ್ಡ ಮೂರ್ಖ' ಎಂದರೆ ಒಳ್ಳೆಯದು. ಮತ್ತೆ ಒಳ್ಳೆಯ ತಿರುಳಿನ ದೊಡ್ಡ ತುಣುಕೊಂದು ಅವನ ಕಡೆಗೆ ಎಸೆಯಲ್ಪಟ್ಟಿತು. ಇನ್ನೊಬ್ಬನು ಯಾವನಾದರೂ ಬಂದು ಅವನನ್ನು ಒದ್ದರೆ, ಅವನು ಸುಮ್ಮನೆ ನಗುತ್ತಾನೆ: "ನೀವೆಲ್ಲ ನನಗೆ ಮೊದಲಿನಂತೆಯೇ ತಿರುಳನ್ನು ಕೊಟ್ಟಿದ್ದೀರಿ ಮತ್ತು ನಾನು ಅದರಲ್ಲಿ ಸ್ವಲ್ಪವನ್ನೂ ತಿರಸ್ಕರಿಸಲು ಹೋಗುವುದಿಲ್ಲ!" ಈಗ ಉನ್ನತ ಹಂತದ ತತ್ವಗಳೊಂದಿಗೆ ಅದರ ಬಗ್ಗೆ ನೀವು ಯೋಚಿಸಿ, ಯಾರು ಚತುರರು ಅಥವಾ ಜಾಣರು? ಈ ವ್ಯಕ್ತಿಯು ಜಾಣನಲ್ಲವೇ? ಅವನೇ ಹೆಚ್ಚು ಚತುರನಾದವನು. ಅವನು ಯಾವ ತಿರುಳನ್ನೂ ಕಳೆದುಕೊಳ್ಳಲಿಲ್ಲ. ನೀವು ಅವನೆಡೆಗೆ ತಿರುಳನ್ನು ಎಸೆದಾಗ, ಅದನ್ನು ಅವನು ತಿರಸ್ಕರಿಸಲಿಲ್ಲ, ನಗುವಿನೊಂದಿಗೆ ಎಲ್ಲವನ್ನೂ ಪಡೆದುಕೊಂಡ. ಅವನು ಈ ಬದುಕಿನಲ್ಲಿ ಮೂರ್ಖನಾಗಿರಬಹುದು. ಆದರೆ ಅವನ ಸಹಾಯಕ ಚೈತನ್ಯವು ಮೂರ್ಖವಾಗಿಲ್ಲ. ಧರ್ಮದಲ್ಲಿ ಅದನ್ನು ಹೇಳಲಾಗಿದೆ. ತಿರುಳಿನ ಸಂಗ್ರಹದೊಂದಿಗೆ, ಒಬ್ಬ ವ್ಯಕ್ತಿಯು ಮುಂದಿನ ಬದುಕಿನಲ್ಲಿ ಉನ್ನತ ವ್ಯಕ್ತಿಯಾಗುತ್ತಾನೆ ಅಥವಾ ದೊಡ್ಡ ಸಂಪತ್ತನ್ನು ಗಳಿಸುತ್ತಾನೆ; ಇವೆರಡೂ ಒಬ್ಬನ ತಿರುಳಿನಿಂದ ಬದಲಾಗುತ್ತವೆ.

ತಿರುಳು ನೇರವಾಗಿ ಗಾಂಗ್‌ನಲ್ಲಿ ವರ್ಗಾವಣೆಯಾಗಬಲ್ಲದು ಎಂದು ನಾವು ಹೇಳಿದ್ದೇವೆ. ನಿಮ್ಮ ಸಾಧನೆಯ ಮಟ್ಟವು ಈ ತಿರುಳು ವರ್ಗಾವಣೆಯಾದದ್ದರಿಂದ ಬಂದಿಲ್ಲವೇ? ಗಾಂಗ್ ಒಬ್ಬನ ಮಟ್ಟವನ್ನು ದೃಢಗೊಳಿಸುವುದಿಲ್ಲವೆ ಮತ್ತು ಗಾಂಗ್ ಶಕ್ತಿ ಇದರಿಂದ ವರ್ಗಾವಣೆಯಾಗುವುದಿಲ್ಲವೆ? ಅದು ತುಂಬಾ ಬೆಲೆಬಾಳುವಂತದ್ದು ಎಂದು ನೀವು ಹೇಳಿಲ್ಲವೆ? ಅದು ಹುಟ್ಟಿನ ಜೊತೆಗೆ ಬಂದು, ಸಾವಿನ ಜೊತೆಗೆ ಹೋಗಬಲ್ಲದು. ಬೌದ್ಧಧರ್ಮದಲ್ಲಿ ಹೀಗೆ ಹೇಳಲಾಗಿದೆ: ನಿಮ್ಮ ಸಾಧನೆಯ ಮಟ್ಟವು ನಿಮ್ಮ ಮಾಗಿದ ಸ್ಥಿತಿ. ಧರ್ಮದ ಪ್ರಕಾರ ತಿರುಳಿನಿಂದ ಒಬ್ಬನು ಉತ್ತಮ ವ್ಯಕ್ತಿಯಾಗಿ ಅಥವಾ ಶ್ರೀಮಂತನಾಗಿ ಮುಂದಿನ ಜನ್ಮದಲ್ಲಿ ಹುಟ್ಟಬಲ್ಲನು. ಕಡಿಮೆ ತಿರುಳಿನೊಂದಿಗೆ ಒಬ್ಬನು ಕಷ್ಟದ ಸಮಯವನ್ನು ಹೊಂದುತ್ತಾನೆ; ಆಹಾರಕ್ಕಾಗಿ ಭಿಕ್ಷೆ ಬೇಡಬೇಕಾಗುತ್ತದೆ. ಯಾವುದೇ ತಿರುಳನ್ನು ಹೊಂದಿರದಿದ್ದರೆ, ಒಬ್ಬನು ದೇಹ ಮತ್ತು ಆತ್ಮ ಎರಡರಲ್ಲೂ ಸೋತು, ನಿಜವಾಗಿಯೂ ಸತ್ತು ಹೋಗುತ್ತಾನೆ.

ಹಿಂದೆ ಅಲ್ಲಿ ಸಾಧನೆಯ ಮಟ್ಟವನ್ನು ತಲುಪಿದ ಗುರುವೊಬ್ಬನಿದ್ದನು. ಅವನು ಮೊದಲಿಗೆ ಸಾರ್ವಜನಿಕ ಜೀವನಕ್ಕೆ ಬಂದಾಗ, ಹೆಚ್ಚು ಕೀರ್ತಿ ಮತ್ತು ಸ್ವಾರ್ಥಗಳಿಂದ ತುಂಬಿ ಹೋದನು. ಅವನ ಗುರು ಅವನ ಸಹಾಯಕ ಚೈತನ್ಯವನ್ನು ತೆಗೆದುಕೊಂಡು ಹೋದನು. ಉದಾಹರಣೆಗೆ, ಒಂದು ದಿನ ಅವನ ಕಾರ್ಯಕ್ಷೇತ್ರವು ಒಂದು ಕಟ್ಟಡದ ಭಾಗದಲ್ಲಿ ನಡೆಯುತ್ತಿತ್ತು. ವ್ಯವಸ್ಥಾಪಕನು ಹೇಳಿದ, "ಕಟ್ಟಡದ ಅಥವಾ ಕೋಣೆಯ ಅಗತ್ಯವಿರುವವರೆಲ್ಲರು ಇಲ್ಲಿ ಬನ್ನಿ, ನಿಮ್ಮ ಸ್ಥಿತಿಯನ್ನು ವರ್ಣಿಸುವುದಕ್ಕೆ ಮತ್ತು ಪ್ರತಿಯೊಬ್ಬನೂ ಏಕೆ ಕೋಣೆಯನ್ನು ಬಯಸುತ್ತೀರೆಂದು ವಿವರಿಸುವುದಕ್ಕೆ." ಈ ವ್ಯಕ್ತಿಯು ಏನೂ ಮಾತನಾಡದಿದ್ದಾಗ, ಪ್ರತಿಯೊಬ್ಬನೂ ಅವರದ್ದೇ ಆದ ಕಾರಣಗಳನ್ನು ಪ್ರಸ್ತಾಪಿಸಿದರು. ಕೊನೆಯಲ್ಲಿ, ವ್ಯವಸ್ಥಾಪಕನು ಈ ವ್ಯಕ್ತಿಯನ್ನು ಗುರುತಿಸಿದನು. ಇವನಿಗೆ ಎಲ್ಲರಿಗಿಂತ ಹೆಚ್ಚಾಗಿ ಕೋಣೆಯ ಅಗತ್ಯವಿದೆ ಮತ್ತು ಅವನಿಗೆ ಕೋಣೆಯನ್ನು ಕೊಡಬೇಕು. ಉಳಿದವರೆಲ್ಲ ಪ್ರತಿಪಾದಿಸಿದರು. "ಇಲ್ಲ, ಕೋಣೆಯನ್ನು ಅವನಿಗೆ ನೀಡಬಾರದು. ಅದು ನನಗೇ ಕೊಡಮಾಡಬೇಕು. ಏಕೆಂದರೆ ನನಗೆ ಕೋಣೆಯ ಅಗತ್ಯತೆ ಶೋಚನೀಯವಾಗಿದೆ." ಈ ವ್ಯಕ್ತಿಯು "ಹಾಗಾದರೆ ನೀನು ಮುಂದುವರಿದು, ಅದನ್ನು ಪಡೆದುಕೋ" ಎಂದು ಹೇಳಿದನು. ದಿನನಿತ್ಯದ ಜನರು ಅವನನ್ನು ಮೂರ್ಖನಂತೆ ನೋಡುತ್ತಿದ್ದರು. ಅವನು ಅಭ್ಯಾಸಿಯೆಂದು ತಿಳಿದಿದ್ದ ಕೆಲವರು ಕೇಳಿದರು,

“ಅಭ್ಯಾಸಿಯಾಗಿ, ನೀನು ಏನನ್ನೂ ಬಯಸುವುದಿಲ್ಲ. ನೀನು ಏನನ್ನು ಬಯಸುತ್ತೀಯೆ?” ಅವನು “ಬೇರೆಯವರಿಗೆ ಅಗತ್ಯವಿಲ್ಲದ್ದನ್ನು ನಾನು ಪಡೆಯುತ್ತೇನೆ” ಎಂದು ಪ್ರತಿಕ್ರಿಯಿಸಿದ. ನಿಜವಾಗಿ, ಅವನು ಮೂರ್ಖನಲ್ಲ, ಬದಲಾಗಿ ಹೆಚ್ಚು ಬುದ್ಧಿವಂತ. ವೈಯಕ್ತಿಕವಾಗಿ ಅವನು ಹೀಗೆಯೇ ಇರಬೇಕು. ಅವನು ಪ್ರಕೃತಿಯನ್ನು ಅನುಸರಿಸುವಲ್ಲಿ ನಂಬಿಕೆಯುಳ್ಳವನಾಗಿರುತ್ತಾನೆ. ಬೇರೆಯವರು ಅವನನ್ನು ಕೇಳಿದರು, “ಈ ದಿನಗಳಲ್ಲಿ ವ್ಯಕ್ತಿಯೊಬ್ಬ ಏನನ್ನು ಬಯಸುವುದಿಲ್ಲ?” ಅವನು ಅದಕ್ಕೆ “ಯಾವನೊಬ್ಬನೂ ಮೈದಾನದಲ್ಲಿ ಆ ಕಡೆಯಿಂದ ಈ ಕಡೆಗೆ ಒದೆಯುವ ಚಿಕ್ಕ ಕಲ್ಲುಗಳನ್ನು ಬಯಸುವುದಿಲ್ಲ. ಆದ್ದರಿಂದ ನಾನದನ್ನು ತೆಗೆದುಕೊಳ್ಳುತ್ತೇನೆ” ಅಂದನು. ದಿನನಿತ್ಯದ ಜನರಿಗೆ ಅದು ಅರ್ಥವಾಗಲಿಲ್ಲ. ಅವರು ಆ ಮಟ್ಟದಲ್ಲಿ ಇಲ್ಲದಿರುವುದರಿಂದ, ಅರ್ಥಮಾಡಿಕೊಳ್ಳಲಾರರು. ಖಂಡಿತವಾಗಿ, ಅವನು ಕಲ್ಲುಗಳನ್ನು ತೆಗೆದುಕೊಳ್ಳುವುದರ ಬಗ್ಗೆ ಆಸಕ್ತನಾಗಿಲ್ಲ. ಅವನು ದಿನನಿತ್ಯದ ಜನ ಅರ್ಥೈಸಿಕೊಳ್ಳಲಾರದ ತತ್ವವೊಂದನ್ನು ಹೇಳಿದ್ದಾನೆ, “ದಿನನಿತ್ಯದ ಜನರ ನಡುವೆ ನಾನು ಏನನ್ನೂ ಹುಡುಕಲು ಬಯಸುವುದಿಲ್ಲ.” ಈಗ ಕಲ್ಲಿನ ಬಗ್ಗೆ ಮಾತನಾಡೋಣ. ಬೌದ್ಧೀಯರ ಬರವಣಿಗೆಯಲ್ಲಿ ಅದನ್ನು ಬರೆಯಲಾಗಿದೆ ಎಂದು ನೀವು ತಿಳಿದಿದ್ದೀರಿ. ಅದರ ಪ್ರಕಾರ, “ಪರಮಾನಂದದ ಸಾಮ್ರಾಜ್ಯದಲ್ಲಿ, ಮರಗಳು ಚಿನ್ನದಿಂದಾಗಿವೆ ಮತ್ತು ನೆಲ, ಹಕ್ಕಿಗಳು, ಹೂವುಗಳು, ಮನೆಗಳೂ ಸಹ. ಜೊತೆಗೆ ಬುದ್ಧ ದೇಹವೂ ಚಿನ್ನದ್ದು ಮತ್ತು ಹೊಳಪಿನದ್ದಾಗಿದೆ.” ಒಬ್ಬನು ಅಲ್ಲಿನ ಒಂದು ಚಿಕ್ಕ ಕಲ್ಲನ್ನು ಶೋಧಿಸಲಾರನು. ಅಲ್ಲಿ ಬಳಕೆಯಾಗುವ ಹಣವೆಂದರೆ ಹೇಳಿದ ಕಲ್ಲುಗಳೇ. ಅದಕ್ಕಾಗಿ ಅಭ್ಯಾಸಿಗಳು ಹೇಳುತ್ತಾರೆ, “ಸಾಮಾನ್ಯ ಜನ ಅವರದ್ದೇ ಆಸಕ್ತಿಗಳನ್ನು ಹೊಂದಿರುತ್ತಾರೆ, ನಾವದನ್ನು ಹುಡುಕುವುದಿಲ್ಲ. ಅಂತೆಯೇ ಸಾಮಾನ್ಯ ಜನ ಏನನ್ನು ಹೊಂದಿರುತ್ತಾರೆ. ಅವುಗಳ ಬಗ್ಗೆ ನಾವು ಆಸಕ್ತರಾಗಿರುವುದಿಲ್ಲ. ಆದಾಗ್ಯೂ ಸಾಮಾನ್ಯ ಜನ ಹೊಂದಲಾಗದ ಕೆಲವನ್ನು ನಾವು ಹೊಂದುತ್ತೇವೆ, ಅವರು ಬಯಸುವಂತದ್ದಾಗಿದ್ದರೂ.”

ನಾವು ಗುರುತಿಸುವ ಒಂದು ವಿಧದ ಜ್ಞಾನೋದಯವು ಸಾಧನಾ ಅಭ್ಯಾಸದ ಅವಧಿಯಲ್ಲಿ ಕಂಡುಬರುವ, ದಿನನಿತ್ಯದ ಜನರದ್ದಕ್ಕಿಂತ ವಿರುದ್ಧವಾಗಿರುವ ಸಂಗತಿಯಾಗಿರುತ್ತದೆ. ನಾವು ಹೇಳುವ ಜ್ಞಾನೋದಯದಿಂದ ಸಾಧನೆಯ ಅಭ್ಯಾಸದ ಅವಧಿಯಲ್ಲಿ ಒಬ್ಬನು ಜ್ಞಾನೋದಯಗೊಳ್ಳಬಲ್ಲನು ಮತ್ತು ಗುರು ಬೋಧಿಸಿದ ‘ಫಾ’ ಅನ್ನು ಒಪ್ಪಬಲ್ಲನು. ಒಬ್ಬನು ತನ್ನನ್ನು ತಾನು ಅಭ್ಯಾಸಿಯಂತೆ ಅಂದುಕೊಂಡು ಸಂಕಟಗಳನ್ನು ನಾಶಮಾಡಬಲ್ಲನು. ಸಾಧನೆಯ ಅಭ್ಯಾಸದಲ್ಲಿರುವಾಗ ‘ಫಾ’ಗೆ ಪೂರ್ಣವಾಗಿ ಒಬ್ಬನು ಅಂಟಿಕೊಳ್ಳಬಲ್ಲನು. ಕೆಲವರು ನೀವು ಹೇಳುವುದನ್ನು ನಂಬುವುದಿಲ್ಲ ಮತ್ತು ದಿನನಿತ್ಯದ ವ್ಯಕ್ತಿಗೆ ಜ್ಞಾನೋದಯವು ಹೆಚ್ಚು ಪ್ರಾಯೋಗಿಕವಾದುದು ಎಂದು ಯೋಚಿಸುತ್ತಾರೆ. ಅವರು ತಮ್ಮದೇ ಹುಟ್ಟು ನಂಬಿಕೆಗಳಿಗೆ ಬದ್ಧರಾಗಿ, ಅದನ್ನು ರೋಗದ ಉಪಶಮನಕ್ಕೆ ಮಾತ್ರ ಬಯಸುತ್ತಾರೆ. ನಾನು ಇಲ್ಲಿ ರೋಗದ ಉಪಶಮನಕ್ಕೆ ಚೀಗಾಂಗ್ ಬಳಕೆಯಾಗುವುದಿಲ್ಲವೆಂದು ಹೇಳುತ್ತೇನೆ.

ಕೆಲವರು ಅವರ ಜ್ಞಾನೋದಯ ಗುಣವನ್ನು ಸ್ವಲ್ಪವೂ ಉತ್ತಮಗೊಳಿಸಲಾರರು. ಸಹಜವಾಗಿ ಅವರು ನನ್ನ ಪುಸ್ತಕದಲ್ಲಿ ಗುರುತುಗಳನ್ನು ಮಾಡುತ್ತಾರೆ. ನಮ್ಮ ಅಭ್ಯಾಸಿಗಳಾದವರು ದಿವ್ಯದೃಷ್ಟಿಯನ್ನು ತೆರೆಯುವುದರೊಂದಿಗೆ ಈ ಪುಸ್ತಕವು ವಿಶಿಷ್ಟವಾಗಿರುವುದನ್ನು, ಚಿನ್ನದ ಹೊಳಪುಳ್ಳದ್ದನ್ನು ನೋಡಬಹುದು. ಪ್ರತಿಯೊಂದು ಪದವೂ ನನ್ನ ಕಷ್ಟಗಳ ರೂಪವನ್ನು ತೋರುತ್ತವೆ. ನಾನು ಸುಳ್ಳು ಹೇಳಿದರೆ, ಎಲ್ಲರನ್ನೂ ಮೋಸಗೊಳಿಸುತ್ತೇನೆ. ನೀವು ಮಾಡುವ ಆ ಗುರುತು ಹೆಚ್ಚು ಗಾಢವಾಗಿರುತ್ತದೆ. ನೀವು ಅದರಲ್ಲಿ ಗುರುತುಗಳನ್ನು ಮಾಡುವುದಕ್ಕೆ ಹೇಗೆ ತಾನೆ ಭಯ ಪಡುತ್ತೀರಿ? ನಾವು ಇಲ್ಲಿ ಏನು ಮಾಡುತ್ತಿದ್ದೇವೆ? ನಾವು ನಿಮಗೆ ಉನ್ನತ ಹಂತಗಳಿಗೆ ಸಾಧನೆಯ ಅಭ್ಯಾಸವನ್ನು ಮಾರ್ಗದರ್ಶನ ಮಾಡುತ್ತಿಲ್ಲವೇ? ನೀವು ಯೋಚಿಸಬೇಕಾದ ವಿಷಯಗಳಿವು. ಈ ಪುಸ್ತಕವು ನಿಮ್ಮ ಸಾಧನೆಯ ಅಭ್ಯಾಸಕ್ಕೆ ಮಾರ್ಗದರ್ಶನ ಮಾಡಬಲ್ಲದು. ಅದು ಅಮೂಲ್ಯವಾದುದೆಂದು ನೀವು ಯೋಚಿಸುವುದಿಲ್ಲವೇ? ಬುದ್ಧನನ್ನು ಆರಾಧಿಸುತ್ತಾ ನೀವು ನಿಜವಾಗಿ ಸಾಧನೆಯ ಅಭ್ಯಾಸ ಮಾಡುತ್ತೀರಾ? ಅದರ ಬಗ್ಗೆ ನೀವು ಹೆಚ್ಚು ಪೂಜ್ಯ ಭಾವನೆ ಇಟ್ಟುಕೊಂಡಿದ್ದೀರಿ ಮತ್ತು ನೀವು ಸುಡುವ ಊದುಬತ್ತಿಯಿಂದ ಬುದ್ಧನ ವಿಗ್ರಹಕ್ಕೆ ಸ್ವಲ್ಪವೇ ಮುಟ್ಟುವುದಕ್ಕೂ ಭಯಪಡುತ್ತೀರಿ. ಅಂತೆಯೇ ದಫಾವನ್ನೂ (ಮಹಾಕಾಯ್ದೆ) ಗೌರವಿಸಿ, ನಿಮಗೆ ನಿಜವಾಗಿಯೂ ಮಾರ್ಗದರ್ಶನ ಮಾಡಬಲ್ಲದು.

ಒಬ್ಬನ ಜ್ಞಾನೋದಯ ಗುಣವನ್ನು ಮಾತನಾಡುತ್ತಾ, ಅದು ನಿಮ್ಮ ಅರ್ಥೈಸಿಕೊಳ್ಳುವಿಕೆಯ ಆಳವನ್ನು, ಸಾಧನೆಯ ಅಭ್ಯಾಸದ ಅವಧಿಯಲ್ಲಿ ಹಲವು ಭಿನ್ನ ಹಂತಗಳಲ್ಲಿ ಬರುವ ಏನನ್ನಾದರೂ ಅರ್ಥೈಸಿಕೊಳ್ಳುವ ಸಾಮರ್ಥ್ಯವನ್ನು ಸೂಚಿಸುತ್ತದೆ. ಆದಾಗ್ಯೂ ಅದು ನಾವು ಸೂಚಿಸಬೇಕಾದ ಮೂಲಭೂತ ಜ್ಞಾನೋದಯವಲ್ಲ. ಅದು ಏನೆಂದರೆ, ಒಬ್ಬನ ಜೀವಿತದಲ್ಲಿ ಸಾಧನೆಯ ಅಭ್ಯಾಸದ ಫಲಿತದಿಂದ ಒಬ್ಬನು ನಿರಂತರವಾಗಿ ಮೇಲಕ್ಕೆ ಸಾಗುತ್ತ, ಮಾನವ ಕಾರ್ಯಸಂಬಂಧಗಳನ್ನು, ಇಚ್ಛೆಗಳನ್ನು ಮೀರಿ ಹೋಗುತ್ತ, ಒಬ್ಬನ ಗಾಂಗ್ ಸಹ ನಿರಂತರವಾಗಿ ಕೊನೆಯ ಹಂತದವರೆಗೆ ಬೆಳೆಯುತ್ತದೆ. ತಿರುಳು ಸಂಪೂರ್ಣವಾಗಿ ಗಾಂಗ್‌ನಲ್ಲಿ ವರ್ಗಾಯಿತವಾದಾಗ, ಗುರುವು ನಿರ್ಧರಿಸಿದ ಈ ವ್ಯಕ್ತಿಯ ಪ್ರಯಾಣವು ಮುಗಿಯುತ್ತದೆ. 'ಭೂಮ್!' ಎಲ್ಲ ನಿರ್ಬಂಧಗಳು ಸಿಡಿದು, ಕೆಲವೇ ಸೆಕೆಂಡುಗಳಲ್ಲಿ ತೆರೆದುಕೊಳ್ಳುತ್ತವೆ. ಆಗ ಅವನು ಉನ್ನತ ಬಿಂದುವಿನಲ್ಲಿ ದಿವ್ಯಚಕ್ಷುವನ್ನು ತೆರೆದು, ನಮ್ಮ ವಿಶ್ವದ ಸತ್ಯವನ್ನೆಲ್ಲ ಅರಿಯುತ್ತಾನೆ. ಅವನ ಎಲ್ಲ ದಿವ್ಯಶಕ್ತಿಗಳು ಹೊರಬಂದು, ಅವನು ಎಲ್ಲ ವಿಧದ ಬದುಕುಗಳಿಗೂ ಶಕ್ತನಾಗುತ್ತಾನೆ. ಈ ಸಮಯದಿಂದ, ಈ ವ್ಯಕ್ತಿಯು ದೊಡ್ಡ ಜ್ಞಾನೋದಯವಾದ ವ್ಯಕ್ತಿಯೇ? ಪುರಾತನ ಭಾರತೀಯ ಭಾಷೆಯಲ್ಲಿ, ಅವನೇ ಬುದ್ಧ.

ಮೂಲಭೂತ ಜ್ಞಾನೋದಯವು ತಕ್ಷಣ ಉಂಟಾಗುವ ಜ್ಞಾನೋದಯವಾಗಿರುತ್ತದೆ. ತಕ್ಷಣದ ಜ್ಞಾನೋದಯವೆಂದರೆ, ಒಬ್ಬ ವ್ಯಕ್ತಿಯು ಅವನ ಪೂರ್ಣ ಜೀವನದ ಸಾಧನೆಯ ಅವಧಿಯಲ್ಲಿ ನಿರ್ಬಂಧಿತನಾಗಿದ್ದು, ತನ್ನ ಸಾಮರ್ಥ್ಯವೇನೆಂದು ಅರಿತಿರುವುದಿಲ್ಲ. ಅವನು ಸಾಧಿಸಿರುವ ಗಾಂಗ್, ಸಾಧನೆಯು ಪೂರ್ಣವಾಗುವವರೆಗೆ ತೆರೆದುಕೊಳ್ಳುವುದಿಲ್ಲ. ಕೆಲವರು ಮಾತ್ರ ಹೆಚ್ಚಿನ ಜನ್ಮತಃ ಗುಣದಿಂದ ಇರುವವರು ಅದನ್ನು ಸಾಧಿಸಬಲ್ಲರು, ಅಂತೆಯೇ ಈ ಸಾಧನೆಯು ಹೆಚ್ಚು ನೋವು ಭರಿತವಾಗಿರುತ್ತದೆ. ಒಬ್ಬನು ಯಾವಾಗಲೂ ತನ್ನ ಆತ್ಮಪ್ರಕೃತಿಯನ್ನು ಉತ್ತಮಗೊಳಿಸುತ್ತಿರಬೇಕಾಗುತ್ತದೆ. ಇಲ್ಲದಿದ್ದರೆ ಒಬ್ಬನು ಸ್ವಂತದ ಗಾಂಗನ್ನೂ ನೋಡಲಾರನು.

ಇನ್ನೊಂದು ರೀತಿಯ ಜ್ಞಾನೋದಯವಿದೆ ಅದು ಕ್ರಮೇಣ ಸಂಭವಿಸುವ ಜ್ಞಾನೋದಯ. ಪ್ರಾರಂಭದಿಂದಲೇ ಹಲವರು ಫಾಲನ್‌ನ (ಸಾಧನೆಯ) ವೃತ್ತದಲ್ಲಿ ಸಿಕ್ಕಿರುತ್ತಾರೆ. ಅಂತಹ ಸಮಯದಲ್ಲೇ ನಾನು ಸಹ ಎಲ್ಲರ ದಿವ್ಯಚಕ್ಷುವನ್ನು ತೆರೆದಿದ್ದೇನೆ. ಬೇರೆಯ ಕಾರಣಗಳಿಂದ ಕೆಲವರು ಭವಿಷ್ಯತ್ತಿನ ವಿಚಾರಗಳನ್ನು ನೋಡುವುದಕ್ಕೆ ಸಾಮರ್ಥ್ಯ ಹೊಂದಿರುವುದಿಲ್ಲ. ವಿಚಾರಗಳನ್ನು ಅಸ್ಪಷ್ಟವಾಗಿ ನೋಡುವುದರಿಂದ ಸ್ಪಷ್ಟವಾಗಿ ನೋಡುವುದಕ್ಕೆ, ಉಪಯೋಗಿಸಲು ಅಸಮರ್ಥನಾಗಿರುವ ಸ್ಥಿತಿಯಿಂದ ಹೇಗೆ ಉಪಯೋಗಿಸಬೇಕು ಎಂದು ತಿಳಿಯುವ ಸ್ಥಿತಿಗೆ ಅವರು ಹೋಗುವುದಕ್ಕೆ ಶಕ್ತರಿರುತ್ತಾರೆ. ಒಬ್ಬನ ಮಟ್ಟವು ಸ್ಥಿರವಾಗಿ ಹೆಚ್ಚಾಗುತ್ತದೆ. ನಿಮ್ಮ ಆತ್ಮಪ್ರಕೃತಿ ಉತ್ತಮಗೊಂಡು, ಬೇರೆ ಬೇರೆಯ ಕಾರ್ಯಸಂಬಂಧಗಳು ನಾಶವಾಗುತ್ತಿದ್ದಂತೆ, ಹಲವು ಅಸಾಮಾನ್ಯ ಸಾಮರ್ಥ್ಯಗಳು ವೃದ್ಧಿಯಾಗುತ್ತವೆ. ಸಂಪೂರ್ಣ ಪ್ರಕ್ರಿಯೆಯು ನಿಮ್ಮ ಅನುಭವಕ್ಕೆ ಸಿಗಬಲ್ಲದು. ಅದು ಕ್ರಮೇಣ ಈ ಗುರಿಯನ್ನು ಸಾಧಿಸುತ್ತದೆ. ಇದೇ ಕ್ರಮೇಣ ಸಂಭವಿಸುವ ಜ್ಞಾನೋದಯ. ಈ ಪದ್ಧತಿಯೂ ಸಹ ಸುಲಭವೇನಲ್ಲ. ಅಸಾಮಾನ್ಯ ಸಾಮರ್ಥ್ಯಗಳೊಂದಿಗೆ ಕೆಲವರು ತಮ್ಮ ಕಾರ್ಯಸಂಬಂಧಗಳನ್ನು, ಕೆಟ್ಟ ವ್ಯವಹಾರಗಳನ್ನು ಬಿಡಲಾರರು. ಹಾಗಾದರೆ ನಿಮ್ಮ ಎಲ್ಲಾ ಸಾಧನೆಗಳು ವ್ಯರ್ಥವಾಗುತ್ತವೆ. ಒಬ್ಬನು ಇದನ್ನು ಅಥವಾ ಅದನ್ನು ಮಾಡುವುದಕ್ಕೆ ನಿಮಗೆ ಕೇಳಬಹುದು. ಆ ವ್ಯಕ್ತಿಯು ಈ ಸಂಗತಿಗಳನ್ನು ಅಭ್ಯಾಸ ಮಾಡುವುದಕ್ಕೆ ಕೇಳಿಕೊಳ್ಳಬಹುದು. ಆದರೆ ಅವನು ಫಲಿತವಾಗುವುದಕ್ಕೆ ನಿಮಗೆ ಸಹಾಯ ಮಾಡಲಾರನು. ಎಲ್ಲಿಯವರೆಗೆಂದರೆ ಅವನು ಫಲವನ್ನು ಗಳಿಸುವವರೆಗೆ.

ಉನ್ನತ ಹಂತದಲ್ಲಿರುವ ಎಲ್ಲ ಜೀವಿಗಳೂ ಅಮರವಾಗಿರುತ್ತವೆ. ದೊಡ್ಡದಾಗಿ ಬೆಳೆದು, ತಮ್ಮ ಅಸಾಮಾನ್ಯ ಸಾಮರ್ಥ್ಯಗಳನ್ನು ಪೂರ್ಣವಾಗಿ ಪ್ರದರ್ಶಿಸುತ್ತವೆ.ನಿಮ್ಮ ಮನಸ್ಸು ಪ್ರಾಮಾಣಿಕವಾಗಿ ಲ್ಲದಿದ್ದರೆ, ನೀವು ಅದನ್ನು ಅನುಸರಿಸುವುದಕ್ಕೆ ಬಯಸುವುದಿಲ್ಲವೆ? ಒಮ್ಮೆ ನೀವು ಅನುಸರಿಸಿದರೆ, ನಿಮ್ಮ ಸಾಧನೆಯ ಅಭ್ಯಾಸವು ವ್ಯರ್ಥವಾಗುತ್ತದೆ. ಹಾಗಿದ್ದರೂ ಅಪ್ಪಟ ಬುದ್ಧನಾಗುವ ದಾರಿಯಲ್ಲಿ, ನೀವು ಮತ್ತೆ ಮೊದಲಿಂದ ಸಾಧನೆಯ ಅಭ್ಯಾಸವನ್ನು ಪ್ರಾರಂಭಿಸಬೇಕು. ಅವರು ಇನ್ನೂ ದೈವಿಕರಾಗಿರುತ್ತಾರೆಯೇ ಎಂಬುದು ಮುಖ್ಯವಲ್ಲ ಯಾವ ಸ್ವರ್ಗದ ಹಂತಗಳಲ್ಲಿ ಅವರು ಬಂದಿರುತ್ತಾರೆ? ಯಾವಾಗ ಒಬ್ಬನು ಉನ್ನತ ಹಂತದ ಸಾಧನೆಯನ್ನು ಮುಟ್ಟುತ್ತಾನೋ ಆಗ ಮಾತ್ರ ಅವನು ಗುರಿಯನ್ನು

ಸಾಧಿಸಿ, ಪೂರ್ಣವಾಗಿ ಮೇಲಕ್ಕೆ ಮತ್ತು ಅದನ್ನು ದಾಟಿ ಬೆಳೆಯಬಲ್ಲನು. ಸಾಮಾನ್ಯ ವ್ಯಕ್ತಿಗೆ ಒಬ್ಬ ದೈವಿಕನು ಖಚಿತವಾಗಿ ಉತ್ತರವಾಗಿ ಮತ್ತು ಹೆಚ್ಚು ಸಮರ್ಥನಾಗಿ ಕಾಣಬಲ್ಲನು. ಆದಾಗ್ಯೂ ಅವನು ಫಲವನ್ನು ಪಡೆದಿರುವುದಿಲ್ಲ. ಹಲವು ವಿಷಯಗಳು, ವಿಭಿನ್ನ ಚಿತ್ರಗಳೊಂದಿಗೆ ನೀವು ತೊಂದರೆಗೊಳಗಾಗದೆ ಉಳಿಯಬಲ್ಲಿರೆ? ಆದ್ದರಿಂದ ಸಾಧನೆಯನ್ನು ದಿವ್ಯಚಕ್ಷು ತೆರೆದ ಮೇಲೂ ಅಭ್ಯಾಸ ಮಾಡುವುದಕ್ಕೆ ಕಷ್ಟವಾಗುತ್ತದೆ ಮತ್ತು ನಿಮ್ಮ ಆತ್ಮಪ್ರಕೃತಿಯನ್ನು ಸಮತೋಲನ ಮಾಡುವುದೂ ಕಷ್ಟಸಾಧ್ಯವೇ. ನಮ್ಮ ಹಲವು ಅಭ್ಯಾಸಿಗಳಲ್ಲಿ ಅಸಾಮಾನ್ಯ ಸಾಮರ್ಥ್ಯಗಳಿದ್ದರೂ ಅವರ ಸಾಧನೆಯ ಅರ್ಧ ಮಾರ್ಗದಲ್ಲಿಯೇ ನಿರ್ಬಂಧಿಸಲ್ಪಡುತ್ತಾರೆ ಮತ್ತು ನಂತರ ಅವರು ಕ್ರಮೇಣ ಜ್ಞಾನೋದಯದ ಹಂತವನ್ನು ತಲುಪುತ್ತಾರೆ. ಪ್ರತಿಯೊಬ್ಬನ ದಿವ್ಯಚಕ್ಷು ತೆರೆದುಕೊಳ್ಳಬಹುದು. ಆದರೆ ಬಹುತೇಕರ ಅಸಾಮಾನ್ಯ ಸಾಮರ್ಥ್ಯ ಮುಂದೆ ಬರುವುದಕ್ಕೆ ಒಪ್ಪುವುದಿಲ್ಲ. ನಿಮ್ಮ ಆತ್ಮಪ್ರಕೃತಿಯು ಕ್ರಮೇಣ ಒಂದು ನಿರ್ದಿಷ್ಟ ಹಂತವನ್ನು ಯಾವಾಗ ತಲುಪುತ್ತದೆಯೋ, ಆಗ ನೀವು ದೃಢಮನಸ್ಸಿನಿಂದ ನಿಮ್ಮಿಷ್ಟಕ್ಕೇ ತೊಡಗಿಸಿಕೊಳ್ಳಬಲ್ಲಿರಿ. ಒಂದು ನಿರ್ದಿಷ್ಟ ಹಂತದಲ್ಲಿ, ನೀವು ಕ್ರಮೇಣ ಜ್ಞಾನೋದಯದ ಸ್ಥಿತಿಯನ್ನು ಪ್ರವೇಶಿಸುತ್ತೀರಿ. ವಿಭಿನ್ನವಾದ ಎಲ್ಲಾ ಅಸಾಮಾನ್ಯ ಸಾಮರ್ಥ್ಯಗಳು ಮುಂದೆ ಬರುತ್ತವೆ. ನೀವು ಕೊನೆಯವರೆಗೂ ಸ್ವಸಾಮರ್ಥ್ಯದಿಂದ ಮುಂದುವರಿಯಬಹುದು, ಅವೆಲ್ಲ ತೆರೆದುಕೊಂಡಿರುತ್ತವೆ. ಇಂತಹ ಸಾಧನೆ ಮಾಡಿರುವ ಬಹುತೇಕ ಅಭ್ಯಾಸಿಗಳು ನಮ್ಮಲ್ಲಿದ್ದಾರೆ. ಆದ್ದರಿಂದ ನೀವು ಇದನ್ನೆಲ್ಲ ನೋಡುವುದಕ್ಕೆ ಭಯಪಡಬೇಕಿಲ್ಲ.

ಜೆನ್ ಬುದ್ಧಧರ್ಮವೂ ಕ್ಷಣದ ಜ್ಞಾನೋದಯ ಮತ್ತು ಕ್ರಮೇಣ ಜ್ಞಾನೋದಯದ ನಡುವಿನ ವ್ಯತ್ಯಾಸಗಳ ಬಗ್ಗೆ ಮಾತನಾಡಿದೆ ಎಂದು ನೀವೆಲ್ಲ ಕೇಳಿರಬಹುದು. ಜೆನ್ ಬುದ್ಧಧರ್ಮದ ಉತ್ತರೇಯ ಶಾಲೆಯಿಂದ ಶೆನ್‌ಶಿಯು (ಟಾಂಗ್ ಸಾಮ್ರಾಜ್ಯದಲ್ಲಿ ಉತ್ತರ ಬೌದ್ಧ ಜೆನ್ ತತ್ವದ ಸಂಸ್ಥಾಪಕ) ಕ್ರಮೇಣ ಜ್ಞಾನೋದಯವನ್ನು ಬೋಧಿಸುವಾಗ, ಹುಯ್‌ಸಿಂಗ್ ಕ್ಷಣದ ಜ್ಞಾನೋದಯವನ್ನು ಬೋಧಿಸಿದ್ದಾನೆ. ಇವೆರಡರ ನಡುವಿನ ವ್ಯಾಜ್ಯವು ಇತಿಹಾಸದಲ್ಲಿ ಬಹಳಷ್ಟು ಸಮಯವನ್ನು ಹಾಳುಮಾಡಿದೆ. ನಾವಿದನ್ನು ಅರ್ಥವಿಲ್ಲದ್ದೆಂದು ಕರೆಯುತ್ತೇನೆ. ಏಕೆಂದರೆ ಅವರೇನು ಹೇಳಿದ್ದಾರೆ ಅದು ಕೇವಲ ಸಾಧನಾಭ್ಯಾಸದ ಪ್ರಕ್ರಿಯೆಯಲ್ಲಿ ತತ್ವವೊಂದನ್ನು ಅರ್ಥೈಸಿಕೊಳ್ಳುವುದು. ಈ ತತ್ವದಂತೆ, ಕೆಲವರು ಒಮ್ಮೆಲೇ ಅದನ್ನು ಅರ್ಥಮಾಡಿಕೊಳ್ಳಬಹುದು ಅಥವಾ ಕ್ರಮೇಣ ಅರ್ಥಮಾಡಿಕೊಳ್ಳಬಹುದು. ಒಬ್ಬನು ಹೇಗೆ ಜ್ಞಾನೋದಯಗೊಳ್ಳುತ್ತಾನೆ ಎಂಬುದು ಪ್ರಮುಖವೇ? ಎರಡೂ ಸಹ ಜ್ಞಾನೋದಯವೇ ಅಲ್ಲವೇ? ಎರಡೂ ಜ್ಞಾನೋದಯಗಳೇ, ಆದ್ದರಿಂದ ಯಾವುದೂ ತಪ್ಪಾಗಿಲ್ಲ.

## ಜನ್ಮತಃ ಶ್ರೇಷ್ಟ ಗುಣವುಳ್ಳ ಜನರು

ದೊಡ್ಡ ಜನ್ಮತಃ ಗುಣವುಳ್ಳ ವ್ಯಕ್ತಿ ಎಂದರೇನು? ದೊಡ್ಡ ಜನ್ಮತಃ ಗುಣವುಳ್ಳ ಯಾವನೋ ಒಬ್ಬನಿಗೂ ಮತ್ತು ಉತ್ತಮ ಅಥವಾ ದುರ್ಬಲ ಜನ್ಮತಃ ಗುಣವುಳ್ಳ ಯಾವನೋ ಒಬ್ಬನಿಗೂ ನಡುವೆ ಇನ್ನೂ ವ್ಯಕ್ತಿಗಳಿವೆ. ದೊಡ್ಡ ಜನ್ಮತಃ ಗುಣವುಳ್ಳ ಒಬ್ಬನನ್ನು ಹುಡುಕುವುದು ಅತೀ ಹೆಚ್ಚು ಕಷ್ಟವಾದುದು. ಏಕೆಂದರೆ ಹಾಗೆ ಹುಟ್ಟಲು ಮೊದಲು ಅವನು ಒಂದು ದೊಡ್ಡ ಮೊತ್ತದ ತಿರುಳನ್ನು, ಶುದ್ಧ ಅಂಶದ ದೊಡ್ಡ ವಲಯವೊಂದನ್ನು ಹೊಂದಿರಬೇಕು. ಅಂದರೆ ಈ ವ್ಯಕ್ತಿಯು ಕಷ್ಟದಾಯಕವಾದ ದಾರಿದ್ರ್ಯವನ್ನು ಅನುಭವಿಸಲು ಸಮರ್ಥನಾಗಿರಬೇಕು. ಅವನು ಹೆಚ್ಚಿನ ಕಷ್ಟ ಸಹಿಷ್ಣುತೆಯ ಮನಸ್ಸನ್ನು ಹೊಂದಿರಬೇಕು ಮತ್ತು ತ್ಯಾಗಕ್ಕೆ ಸಿದ್ಧನಿರಬೇಕು. ಆಗ ಅವನು ತಿರುಳನ್ನು ಚೆನ್ನಾಗಿ ಕಾಯ್ದುಕೊಳ್ಳಲು ಸಮರ್ಥನಾಗಿ, ಒಳ್ಳೆಯ ಜ್ಞಾನೋದಯ ಗುಣವನ್ನು ಹೊಂದುತ್ತಾನೆ.

ಎಲ್ಲಕ್ಕಿಂತ ಕಷ್ಟದಾಯಕವಾದ ದಾರಿದ್ರ್ಯವೆಂದರೆ ಏನು? ಮಾನವನಾಗಿ ಇರುವುದೇ ಕಷ್ಟದಾಯಕವೆಂದು ಬುದ್ಧಧರ್ಮ ನಂಬಿದೆ. ಬೇರೆ ಎಲ್ಲ ಆಯಾಮಗಳಲ್ಲಿ ಜೀವಿಗಳು ನಮ್ಮ ಸಾಮಾನ್ಯ ಮಾನವ ದೇಹಗಳನ್ನು ಹೊಂದಿರುವುದಿಲ್ಲವೆಂದು ಅದು ನಂಬುತ್ತದೆ. ಅವು ರೋಗಗ್ರಸ್ತವಾಗುವುದಿಲ್ಲ ಮತ್ತು ಅಲ್ಲಿ ಹುಟ್ಟು, ಮುಪ್ಪು, ರೋಗಬಾಧೆ ಮತ್ತು ಸಾವಿನ ಸಮಸ್ಯೆಗಳಿರುವುದಿಲ್ಲ. ಇನ್ನೊಂದು ಆಯಾಮದಲ್ಲಿ ಜನರು ತೇಲಬಲ್ಲರು, ಅಂತೆಯೇ ಅವರು ಹಗುರವಾಗಿ, ಚೆನ್ನಾಗಿ ಇರುತ್ತಾರೆ. ಈ

ದೇಹದ ಕಾರಣದಿಂದ ದಿನನಿತ್ಯದ ಜನರು ಎಲ್ಲಾ ಸಮಸ್ಯೆಗಳಿಂದ ನರಳುತ್ತಾರೆ. ಯಾವುದೇ ಸಂದರ್ಭದಲ್ಲಿ ಒಬ್ಬನು ಆರಾಮವಾಗಿರುವುದಿಲ್ಲ.

ಟಾಂಗ್‌ಷಾನ್‌ನಲ್ಲಿ (ಹೆಬೀ ಪ್ರಾಂತ್ಯದ ನಗರ) ಭೂಕಂಪವಾದ ಸಮಯದಲ್ಲಿ ನಾನು ಸುದ್ದಿ ಪತ್ರಿಕೆಯಲ್ಲಿ ಓದಿದೆ, ಹಲವು ಜನರು ಭೂಕಂಪದಿಂದ ಸತ್ತಿದ್ದಾರೆ. ಆದರೆ ಕೆಲವರು ಉಳಿದುಕೊಂಡಿದ್ದಾರೆ. ಒಂದು ಸಾಮಾಜಿಕ ಸಂಘಟನೆಯು ಈ ಗುಂಪಿನ ಜನರೊಂದಿಗೆ ವಿಷಯ ಸಂಗ್ರಹಿಸಿತು. ಸಂಘಟನೆಯವರು 'ಸಾವು ಸಂಭವಿಸುವಾಗ ನೀವು ಹೇಗೆ ಅನುಭವಿಸಿದಿರಿ?' ಎಂದು ಕೇಳಿದರು. ಆಶ್ಚರ್ಯವಾಗುವಂತೆ, ಈ ಜನರೆಲ್ಲ ಒಂದೇ ರೀತಿಯಲ್ಲಿ ಮಾತನಾಡಿದರು. ಸಾವಿನ ಸಮೀಪದಲ್ಲಿ ಅವರು ಭಯಗೊಳ್ಳಲಿಲ್ಲ. ಬದಲಾಗಿ, ತಕ್ಷಣಕ್ಕೆ ಒಂದು ರೀತಿಯ ಸುಪ್ತ ಉದ್ರೇಕವು ಶಮನಗೊಂಡಂತೆ ಅನುಭವಗೊಂಡರು. ಕೆಲವರು ದೇಹದಿಂದ ಬಿಡುಗಡೆ ಹೊಂದಿದಂತೆ, ಗಾಳಿಯಲ್ಲಿ ಹಗುರವಾಗಿ ತೇಲಿದಂತೆ, ತಮ್ಮ ದೇಹಗಳನ್ನು ತಾವೇ ನೋಡುತ್ತಿರುವಂತೆ ಅನುಭವಗೊಂಡರು. ಕೆಲವರು ಬೇರೊಂದು ದಿಕ್ಕಿನಲ್ಲಿ ಬೇರೆಯವರು ಹೊರಟು ಹೋದದ್ದನ್ನು ನೋಡಿದರು. ಅಲ್ಲಿ ಯಾರೂ ನೋವಿನ ಅನುಭವ ಪಡೆಯಲಿಲ್ಲ. ಈ ಸಂದರ್ಭದಿಂದ ಮನುಷ್ಯನ ದೇಹವು ಇದ್ದರೆ ಮಾತ್ರ ಒಬ್ಬನು ನೋವು ಅನುಭವಿಸುತ್ತಾನೆ ಎಂದು ತಿಳಿಯುತ್ತದೆ.

ಒಬ್ಬನು ಹೆಚ್ಚು ದಾರಿದ್ರ್ಯದಿಂದ ನರಳುತ್ತಾನೆ ಎಂದು ನಾನು ಪ್ರಸ್ತಾಪಿಸಿದ್ದೇನೆ. ಬೇರೊಂದು ದಿನ ನಾನು ಹೇಳಿದ್ದೆ, ಮಾನವಕುಲದ ಸಮಯದ ಗಣನೆಯು ವಿಶಾಲವಾದ ಸಮಯದ ಗಣನೆಗಿಂತ ಭಿನ್ನವಾಗಿದೆಯೆಂದು. ಇಲ್ಲಿ ಒಂದು ಶಿಷೆನ್ ಎರಡು ಗಂಟೆ, ಆ ಗಣನೆಯಲ್ಲಿ ಒಂದು ವರ್ಷ. ಒಬ್ಬ ವ್ಯಕ್ತಿಯು ಇಂತಹ ನಿಷ್ಠುರ ಪರಿಸ್ಥಿತಿಯಲ್ಲಿ ಸಾಧನೆಯನ್ನು ಅಭ್ಯಾಸ ಮಾಡಿದರೆ, ಅವನು ನಿಜವಾಗಿ ಹೆಚ್ಚು ಗಣನೀಯವಾಗುತ್ತಾನೆ. ಈ ವ್ಯಕ್ತಿಯು ಯಾವಾಗ ತನ್ನ ಹೃದಯವನ್ನು ತಾವೋಗಾಗಿ ಮತ್ತು ಸಾಧನಾಭ್ಯಾಸದ ಬಯಕೆಗಾಗಿ ವೃದ್ಧಿಸುತ್ತಾನೋ, ಆಗ ಅವನು ಸ್ವಲ್ಪವೇ ಉತ್ತಮ. ದಾರಿದ್ರ್ಯಗಳೊಂದಿಗೆ ಅವನು ತನ್ನ ಮೂಲ ಪ್ರಕೃತಿಯನ್ನು, ತನ್ನ ಮೂಲಕ್ಕೆ ಸಾಧನೆಯ ಮೂಲಕ ಹಿಂತಿರುಗಬೇಕು ಎಂಬ ಬಯಕೆಯನ್ನು ಕಳೆದುಕೊಳ್ಳುವುದಿಲ್ಲ. ಈ ವ್ಯಕ್ತಿಯು ದಿನನಿತ್ಯದ ಜನರ ಆಯಾಮದಲ್ಲಿ ಒಂದು ರಾತ್ರಿಯ ಮಟ್ಟಿಗೆ ಧ್ಯಾನದಲ್ಲಿ ಕುಳಿತರೆ, ಅದನ್ನು ನೋಡಿ, ಬೇರೆಯವರು ಅವನು ಈಗಾಗಲೇ ಆರು ವರ್ಷ ಅಲ್ಲಿ ಕುಳಿತಿದ್ದಾನೆ ಎನ್ನುತ್ತಾರೆ. ಇದೇಕೆಂದರೆ ನಮ್ಮ ಒಂದು ಶಿಷೆನ್ ಅಲ್ಲಿನ ಒಂದು ವರ್ಷಕ್ಕೆ ಸಮನಾಗುತ್ತದೆ. ನಮ್ಮ ಮನುಕುಲದ ಆಯಾಮವು ತುಂಬಾ ಅನುಪಮವಾದುದು.

ಒಬ್ಬನು ಕಷ್ಟದಾಯಕವಾದ ದಾರಿದ್ರ್ಯವನ್ನು ಹೇಗೆ ಅನುಭವಿಸುತ್ತಾನೆ? ಉದಾಹರಣೆಗೆ, ಒಂದು ದಿನ ಒಬ್ಬ ವ್ಯಕ್ತಿಯು ಕೆಲಸ ಮಾಡುವುದಕ್ಕೆ ಹೋಗುತ್ತಾನೆ ಮತ್ತು ಕೆಲಸದ ಸ್ಥಳವು ಸರಿಯಾಗಿ ಕೆಲಸ ನೀಡುವುದಿಲ್ಲ. ಈ ಸ್ಥಿತಿಯು ಹೆಚ್ಚು ದಿನ ಮುಂದುವರಿಯುವುದಿಲ್ಲ. ಉದ್ಯಮವು ನವೀಕರಣಗೊಂಡು, ಕೆಲವರಿಗೆ ಮಾತ್ರ ಕೆಲಸವಿದ್ದು, ಮಿಕ್ಕವರನ್ನೆಲ್ಲ ಹೊರಗೆ ಕಳುಹಿಸುತ್ತಾರೆ. ಅಂತವರಲ್ಲಿ ಈ ವ್ಯಕ್ತಿಯೂ ಒಬ್ಬನಾಗಿದ್ದು, ಅನ್ನದ ತಟ್ಟೆಯನ್ನು ಕಸಿದುಕೊಂಡಂತಾದರೆ, ಅವನು ಹೇಗೆ ಅನುಭವಿಸುತ್ತಾನೆ? ಅಲ್ಲಿ ಆದಾಯವನ್ನು ಗಳಿಸುವುದಕ್ಕೆ ಬೇರೆ ಮಾರ್ಗಗಳಿಲ್ಲದಿದ್ದರೆ, ಅವನು ಹೇಗೆ ಬದುಕಬಲ್ಲನು? ಅವನಿಗೆ ಬೇರೆ ಕೌಶಲಗಳಿರುವುದಿಲ್ಲ, ಆದ್ದರಿಂದ ಅವನು ದುಃಖದಿಂದ ಮನೆಗೆ ಹೋಗುತ್ತಾನೆ. ಮನೆಗೆ ಹೋದಾಗ ಮುಪ್ಪಾದ ಪೋಷಕರು ಹುಷಾರಿಲ್ಲದೆ, ಗಂಭೀರ ಸ್ಥಿತಿಯಲ್ಲಿರುತ್ತಾರೆ. ಅವನು ಬೇಗ ಅವರನ್ನು ಆಸ್ಪತ್ರೆಗೆ ಸೇರಿಸಲು ಮುಂದಾಗುತ್ತಾನೆ. ಅವನು ಹಣವನ್ನು ಸಾಲ ಪಡೆಯುವುದಕ್ಕೆ ಹೆಚ್ಚು ಕಷ್ಟಪಡುತ್ತಾನೆ. ನಂತರ ಅವನು ಮುಪ್ಪಾದ ಪೋಷಕರಿಗೆ ಏನನ್ನಾದರೂ ತಯಾರಿಸೋಣವೆಂದು ಮನೆಗೆ ಹಿಂತಿರುಗುತ್ತಾನೆ. ಅಷ್ಟರಲ್ಲಿ ಶಾಲೆಯ ಗುರುಗಳು ಬಾಗಿಲು ಬಡಿಯುತ್ತಾರೆ. "ನಿಮ್ಮ ಮಗು ಜಗಳವಾಡಿ ಗಾಯಗೊಂಡಿದೆ, ಬೇಗ ಬನ್ನಿ, ನೋಡಿಕೊಳ್ಳಿ" ಹೋಗಿ ನೋಡಿಕೊಂಡು ಬರುತ್ತಾನೆ, ಬಂದು ಕುಳಿತುಕೊಳ್ಳುವಷ್ಟರಲ್ಲಿ ದೂರವಾಣಿ ಕರೆ ಬರುತ್ತದೆ. "ನಿಮ್ಮ ಹೆಂಡತಿ ಬೇರೆಯವನೊಂದಿಗೆ ಸಂಬಂಧವಿಟ್ಟುಕೊಂಡಿದ್ದಾಳೆ." ಹೌದು, ನೀವು ಇಂತಹ ಸಂದರ್ಭಗಳಲ್ಲಿ ನಡೆಯಲಾರಿರಿ. ಒಬ್ಬ ಸಾಮಾನ್ಯ ವ್ಯಕ್ತಿಯು ಇಂತಹ ದಾರಿದ್ರ್ಯವನ್ನು ನಿಂತು ಅನುಭವಿಸಲಾರನು ಮತ್ತು ಯೋಚಿಸುತ್ತಾನೆ. "ನಾನು ಏತಕ್ಕಾಗಿ ಬದುಕಬೇಕು? ನಾನು ಏಕೆ ಇನ್ನೂ ನೇಣು ಹಾಕಿಕೊಂಡಿಲ್ಲ?" ನಾನು ಇಷ್ಟು ಮಾತ್ರ

ಹೇಳುತ್ತೇನೆ, ಒಬ್ಬನು ಕಷ್ಟದಾಯಕವಾದ ದಾರಿದ್ರ್ಯವನ್ನು ಅನುಭವಿಸುವ ಸಾಮರ್ಥ್ಯವನ್ನು ಹೊಂದಿರಬೇಕು. ಆದ್ದರಿಂದ ನಾವು ಈ ಸಂಕೀರ್ಣ ಪರಿಸರದಲ್ಲಿ ಸಾಧನೆಯನ್ನು ಅಭ್ಯಾಸ ಮಾಡಬೇಕು. ಅರ್ಥಾತ್, ನಾವು ಕಷ್ಟ ಸಹಿಷ್ಣುತೆಯ ಹೃದಯವನ್ನು ಗಳಿಸಿಕೊಳ್ಳಬೇಕು.

ಕಷ್ಟ ಸಹಿಷ್ಣುತೆಯ ಹೃದಯ ಎಂದರೆ ಏನು? ಒಬ್ಬ ಅಭ್ಯಾಸಿಯಾಗಿ, ನೀವು ಮೊದಲಿಗೆ ಸೋತಾಗ ತಿರುಗಿ ಬೀಳದ ಸಾಮರ್ಥ್ಯವನ್ನು ಹೊಂದಿರಬೇಕು. ಒಬ್ಬನು 'ಸಹಿಸಿಕೊಂಡು ಹೋಗುವುದು ತುಂಬಾ ಕಷ್ಟ ಮತ್ತು ನಾನು ಕೆಟ್ಟ ಕೋಪ ಹೊಂದಿದ್ದೇನೆ' ಎನ್ನುತ್ತಾನೆ. ನಿಮ್ಮ ಮನೋಭಾವ ಉತ್ತಮವಾಗಿಲ್ಲದಿದ್ದರೆ, ನೀವು ಅದನ್ನು ಬದಲಾಯಿಸಿ, ಅಭ್ಯಾಸಿಯೊಬ್ಬನಿಗೆ ಶಾಂತಸ್ವಭಾವವಿರಬೇಕು. ಮಕ್ಕಳನ್ನು ಶಿಸ್ತಾಗಿರಿಸುವಲ್ಲಿ ಕೆಲವರು ಶಾಂತಸ್ವಭಾವವನ್ನು ಕಳೆದುಕೊಳ್ಳುತ್ತಾರೆ. ನೀವೂ ಹಾಗೆಯೇ ಮಾಡಿದರೆ, ನಿಮ್ಮಷ್ಟಕ್ಕೇ ನೀವು ನಿಜವಾಗಿಯೂ ತಲೆಕೆಡಿಸಿಕೊಳ್ಳುತ್ತೀರಿ. ನೀವು ಮಕ್ಕಳಿಗೆ ಸರಿಯಾದ ಕಾರಣಗಳನ್ನು ಹೇಳಿಕೊಡುತ್ತಾ ಬೋಧಿಸಬೇಕು. ನೀವು ನಿಮ್ಮ ಶಾಂತತೆಯನ್ನು ಸುಲಭವಾಗಿ ಕಳೆದುಕೊಳ್ಳುವುದಿದ್ದರೆ, ಹೇಗೆ ನಿಮ್ಮ ಗಾಂಗನ್ನು ಹೆಚ್ಚಿಸಲು ಬಯಸಬಲ್ಲಿರಿ? ಯಾರೋ ಒಬ್ಬ ಹೇಳುತ್ತಾನೆ, "ಯಾರಾದರು ನಾನು ನಡೆಯುತ್ತಿರುವಾಗ ನೆಲಕ್ಕೆ ಬೀಳುವಂತೆ ಒದ್ದರೆ ಮತ್ತು ಯಾರೂ ನನ್ನನ್ನು ತಿಳಿದಿರದಿದ್ದರೆ, ನಾನದನ್ನು ಶಾಂತವಾಗಿ ಸಹಿಸಿಕೊಳ್ಳಬಲ್ಲೆನು." ನನ್ನ ಪ್ರಕಾರ ಅದು ಒಳ್ಳೆಯದಲ್ಲ. ಭವಿಷ್ಯದಲ್ಲಿ ನೀವು ಬೇರೆಯವರಿಂದ ಮುಖಕ್ಕೆ ಎರಡು ಬಾರಿ ಹೊಡೆಸಿಕೊಂಡು, ಅವಮಾನಗೊಂಡಾಗ, ಹೇಗೆ ಅದನ್ನು ಸಹಿಸಿಕೊಳ್ಳುತ್ತೀರಿ. ಒಂದು ವೇಳೆ ನೀವು ಅದನ್ನು ಶಾಂತವಾಗಿ ಸ್ವೀಕರಿಸಿ, ಅದು ನಿಮ್ಮ ತಲೆಯಲ್ಲೇ ಕೊರೆಯುತ್ತಿದ್ದರೆ, ಅದೂ ಸಹ ಉತ್ತಮವಲ್ಲ. ಅಂತೆಯೇ ನೀವು ತಿಳಿದಿರಿ, ಯಾವಾಗ ಒಬ್ಬ ವ್ಯಕ್ತಿಯು ಅರಹತ್ ಹಂತವನ್ನು ತಲುಪುತ್ತಾನೋ ಆಗ ಅವನ ಹೃದಯದಲ್ಲಿ ಯಾವುದೇ ವಿಚಾರದ ಬಗ್ಗೆ ಆಸಕ್ತಿಯಿರುವುದಿಲ್ಲ. ಅವನು ಯಾವಾಗಲೂ ನಗುತ್ತಿರುತ್ತಾನೆ, ನಷ್ಟವಾದರೂ ಕೂಡ. ನೀವು ಇದನ್ನು ನಿಜವಾಗಿ ಮಾಡಬಲ್ಲಿರಾದರೆ, ನೀವೀಗಾಗಲೇ ಆ ಹಂತಕ್ಕೆ ತಲುಪಿದ್ದೀರಿ.

ಒಬ್ಬ ಹೇಳಿದ, "ಶಾಂತ ಸ್ವಭಾವವನ್ನು ಹೆಚ್ಚಿನ ಸ್ಥಿತಿಯವರೆಗೆ ಅಭ್ಯಾಸ ಮಾಡಿದರೆ, ದಿನನಿತ್ಯದ ಜನರು ಹೇಳುತ್ತಾರೆ– ನಾವು ಅತೀ ಹೇಡಿಗಳು ಮತ್ತು ಅದರ ಉಪಯೋಗವನ್ನು ಸುಲಭವಾಗಿ ಪಡೆಯಬಹುದು ಎಂದು." ನಾನದನ್ನು ಹೆಚ್ಚು ಹೇಡಿತನ ಎಂದು ಕರೆಯುವುದಿಲ್ಲ. ಪ್ರತಿಯೊಬ್ಬನೂ ಅದರ ಬಗ್ಗೆ ಯೋಚಿಸಿ: ದಿನನಿತ್ಯದ ಜನರ ನಡುವೆಯೇ ಮಧ್ಯ ವಯಸ್ಕರು ಅಥವಾ ಮುಪ್ಪಿನ ಜನರು ಮತ್ತು ಉನ್ನತ ಮಟ್ಟದ ವಿದ್ಯಾಭ್ಯಾಸ ಪಡೆದವರು ವ್ಯಾಜ್ಯಗಳಿಂದ ದೂರವಿರುತ್ತಾರೆ. ಅದನ್ನು ಹೇಗೆ ಹೇಡಿಯಾಗಿರುವುದು ಎಂದು ಪರಿಗಣಿಸಬಲ್ಲೆವು? ನಾನು ಅದನ್ನು ಉನ್ನತ ಸಹಿಷ್ಣುತೆಯ ಪ್ರತಿಕ್ರಿಯೆಯೆಂದು, ಒಳ್ಳೆಯ ಗುಣದ ಭಾವನೆ ಎಂದು ಕರೆಯುತ್ತೇನೆ. ಕೇವಲ ಒಬ್ಬ ಅಭ್ಯಾಸಿ ಮಾತ್ರ ಹೆಚ್ಚು ಸಹಿಷ್ಣುತೆಯ ಹೃದಯವನ್ನು ಹೊಂದಿರುತ್ತಾನೆ. ಸಾಧಾರಣ ವ್ಯಕ್ತಿಯೊಬ್ಬ ಅಪಮಾನಿತನಾದಾಗ, ಅವನು ಜಗಳಕ್ಕೆ ಬೀಳುತ್ತಾನೆ. ದಿನನಿತ್ಯದ ಜನರಿಗೆ ಅದು ಕೇವಲ ಸಹಜವಾದುದು. ಒಬ್ಬನು ಹೊಡೆದರೆ ಅವನೂ ತಿರುಗಿಸಿ ಹೊಡೆಯುತ್ತಾನೆ. ಅಭ್ಯಾಸಿಯಾಗಿ, ನೀವಿದನ್ನು ಮಾಡಲು ಶಕ್ತರಿರುವುದಿಲ್ಲ.

ಪ್ರಾಚೀನ ಕಾಲದಲ್ಲಿ ಹ್ವಾನ್ ಶೀನ್ ಎನ್ನುವವನು ಲಿಯೋ ಬ್ವಾಂಗ್ (ಹಾನ್ ಸಾಮ್ರಾಜ್ಯದ ಸಂಸ್ಥಾಪಕ ಚಕ್ರವರ್ತಿ– 206 ಕ್ರಿ.ಪೂ. 23 ಕ್ರಿ.ಶ.) ಎನ್ನುವ ದೊರೆಯ ಹಿರಿಯ ಜನರಲ್ ಆಗಿ ಸಮರ್ಥನಾಗಿದ್ದು, ದೇಶದ ಬೆನ್ನೆಲುಬಾಗಿದ್ದ. ಅವನ ಬಗ್ಗೆ ಕಥೆಯೊಂದಿದೆ. ಅವನು ಯಾವನೋ ಒಬ್ಬನ ಎರಡೂ ಕಾಲುಗಳ ನಡುವೆ ತೆವಳಿ ಅವಮಾನ ಅನುಭವಿಸಿದ್ದನಂತೆ. ಹ್ವಾನ್ ಶೀನ್ ತನ್ನ ಯೌವನದಲ್ಲಿ ಯುದ್ಧ ಕಲೆಯನ್ನು ಅಭ್ಯಾಸ ಮಾಡಲು ಇಚ್ಛಿಸಿದ್ದು, ಯಾವಾಗಲೂ ಖಡ್ಗವನ್ನು ಯುದ್ಧಕಲೆಯನ್ನು ಕಲಿಯುವವ ಹೊಂದಿರಬೇಕಿತ್ತು. ಒಂದು ದಿನ ಅವನು ರಸ್ತೆಯಲ್ಲಿ ನಡೆಯುತ್ತಿರಬೇಕಾದರೆ, ಸ್ಥಳೀಯ ಕೊಲೆಗಡುಕನೊಬ್ಬನು ಅವನನ್ನು ಅಡ್ಡಗಟ್ಟಿ, "ಆ ಖಡ್ಗವನ್ನು ಏನಕ್ಕಾಗಿ ಇಟ್ಟುಕೊಂಡಿದ್ದೀಯಾ? ನೀನು ಯಾವನನ್ನಾದರು ಕೊಲ್ಲುವುದಕ್ಕೆ ಭಯಪಡುತ್ತೀಯಾ? ನೀನು ಮಾಡುವುದಿದ್ದರೆ, ನನ್ನ ತಲೆಯನ್ನು ಕತ್ತರಿಸು" ಎಂದನು. ಆಗ ಹ್ವಾನ್ ಶೀನ್ "ನಾನೇಕೆ ನಿನ್ನ ತಲೆಯನ್ನು ಕಡಿಯಲಿ?" ಎಂದು ಪ್ರಶ್ನಿಸಿದ. ಆ ಸಮಯದಲ್ಲಿ ಯಾರಾದರೊಬ್ಬರು ಕೊಲೆಯಾಗುವುದನ್ನು ಸರ್ಕಾರದ ಗಮನಕ್ಕೆ ತರಲಾಗುತ್ತಿತ್ತು

ಮತ್ತು ಕೊಲೆ ಮಾಡಿದವನು ದಂಡ ಕಟ್ಟಬೇಕಿತ್ತು. ಕೊಲೆಗಡುಕನು, ಹ್ಯಾನ್ ಶೀನ್ ಅವನನ್ನು ಕೊಲ್ಲುವುದಕ್ಕೆ ಭಯಪಡದಿದ್ದಾಗ, ಹೇಳಿದನು "ನೀನು ನನ್ನನ್ನು ಕೊಲ್ಲುವುದಕ್ಕೆ ಭಯಪಡದಿದ್ದರೆ, ನನ್ನ ಎರಡು ಕಾಲುಗಳ ನಡುವೆ ತೆವಳಬೇಕು." ಹ್ಯಾನ್‌ಶೀನ್ ಒಪ್ಪಿಕೊಂಡು ಅವನ ಕಾಲುಗಳ ನಡುವೆ ತೆವಳಿದನು. ಇದು ಹ್ಯಾನ್‌ಶೀನ್ ಹೆಚ್ಚು ಸಹಿಷ್ಣುತೆಯ ಹೃದಯವನ್ನು ಹೊಂದಿದ್ದಾನೆಂದು ಸೂಚಿಸುತ್ತದೆ. ಏಕೆಂದರೆ ಅವನು ನಿತ್ಯದ ಜನರಿಗಿಂತ ಭಿನ್ನವಾಗಿದ್ದನು ಮತ್ತು ದೊಡ್ಡ ದೊಡ್ಡ ಸಾಧನೆಗಳನ್ನು ಮಾಡಿದ್ದನು. ಸಾಮಾನ್ಯ ವ್ಯಕ್ತಿಯ ಬದುಕಿನ ಗುರಿಯು ತನ್ನ ಮಾನವನ್ನು ಕಾಪಾಡಿಕೊಳ್ಳುವುದಾಗಿರುತ್ತದೆ. ಅದು ಕೀರ್ತಿಯುತವಲ್ಲವೇ? ನೋವುಭರಿತವಲ್ಲವೇ? ಅದು ಮೌಲ್ಯಿಕವೇ? ಹ್ಯಾನ್‌ಶೀನ್ ಒಬ್ಬ ಸಾಧಾರಣ ಮನುಷ್ಯನೇ ಆಗಿದ್ದನು. ಅಭ್ಯಾಸಿಗಳಾಗಿ ನಾವು ಅವನಿಗಿಂತ ಉತ್ತಮವಾಗಿರಬೇಕು. ದಿನನಿತ್ಯದ ಜನರ ನಡುವೆ ಅಪಮಾನಗೊಳ್ಳುವುದು, ಪೇಚಾಟಕ್ಕೊಳಗಾಗುವುದು ಸಹ ಒಬ್ಬ ಅಭ್ಯಾಸಿಗೆ ಹ್ಯಾನ್‌ಶೀನ್‌ನದಕ್ಕಿಂತ ಸುಲಭವಲ್ಲ. ನನ್ನ ಪ್ರಕಾರ, ದಿನನಿತ್ಯದ ಜನರ ನಡುವಿನ ಘರ್ಷಣೆಗಳೂ ನಿಮ್ಮ ಆತ್ಮಪಕೃತಿಯನ್ನು ಉತ್ತಮಗೊಳಿಸುವುದಕ್ಕೆ ಸುಲಭದ್ದೇನೂ ಅಲ್ಲ.

ಒಬ್ಬ ಅಭ್ಯಾಸಿಯು ತ್ಯಾಗಕ್ಕೆ, ವಿಭಿನ್ನ ಕಾರ್ಯಸಂಬಂಧಗಳ ನಾಶಕ್ಕೆ ದಿನನಿತ್ಯದ ಜನರ ಸ್ವಾರ್ಥ ನಾಶಕ್ಕೆ ಸಮರ್ಥನಾಗಿರಬೇಕು. ಅದೆಲ್ಲವನ್ನು ಒಮ್ಮೆಲೇ ಮಾಡುವುದಕ್ಕೆ ಸಾಧ್ಯವಿಲ್ಲ; ಕ್ರಮೇಣ ನಾವು ಮಾಡಬಲ್ಲೆವು. ನೀವು ಈ ದಿನವೇ ಅದನ್ನು ಮಾಡಿದರೆ, ನೀವು ಈಗಿನಿಂದಲೇ ಬುದ್ಧನಾಗುತ್ತೀರಿ. ಸಾಧನೆಯ ಅಭ್ಯಾಸವು ಸಮಯವನ್ನು ತೆಗೆದುಕೊಳ್ಳುತ್ತದೆ. ಆದರೆ ನೀವು ಮಂದವಾಗಿರಬಾರದು. ನೀವು ಹೀಗೆನ್ನಬಹುದು, "ಗುರುಗಳು ಸಾಧನೆಯ ಅಭ್ಯಾಸವು ಸಮಯವನ್ನು ತೆಗೆದುಕೊಳ್ಳುತ್ತದೆಂದು ಹೇಳಿದ್ದಾರೆ– ಬನ್ನಿ ಅದನ್ನು ನಿಧಾನವಾಗಿ ಮಾಡೋಣ." ಹಾಗೆ ಮಾಡಬಾರದು! ನೀವು ನಿಮ್ಮಷ್ಟಕ್ಕೇ ಶಿಸ್ತಾಗಿದ್ದು, ಬುದ್ಧ ಉನ್ನತ ಮಾರ್ಗದ ಸಾಧನೆ ಮಾಡಬೇಕು.

ನೀವು ತಿರುಳನ್ನು ಕಾಪಿಡುವುದಕ್ಕೆ ಶಕ್ತರಾಗಿರಬೇಕು; ನಿಮ್ಮ ಆತ್ಮಪ್ರಕೃತಿಯನ್ನು ಸಮತೋಲನ ಮಾಡಬೇಕು. ದಿನನಿತ್ಯದ ಜನರ ನಡುವೆ ಈ ಮಾತಿದೆ, "ಒಳ್ಳೆಯ ಕೆಲಸಗಳನ್ನು ಮಾಡುತ್ತಾ ತಿರುಳನ್ನು ಸಂಗ್ರಹಿಸಬೇಕು." ಒಬ್ಬ ಅಭ್ಯಾಸಿಯು ತಿರುಳಿನ ಸಂಗ್ರಹಣೆಗಾಗಿ ಅಭ್ಯಾಸ ಮಾಡಬಾರದು. ಆದರೂ ತಿರುಳನ್ನು ಸಂಗ್ರಹಿಸುವಲ್ಲಿ ನಂಬಿಕೆಯನ್ನು ನಾವೇಕೆ ಇಟ್ಟದ್ದೇವೆ? ಅದೇಕೆಂದರೆ ದಿನನಿತ್ಯದ ಜನರು ತಿರುಳನ್ನು ಸಂಗ್ರಹಿಸಿ, ಒಳ್ಳೆಯ ಕೆಲಸಗಳನ್ನು ಮಾಡಿ ಅದರಿಂದ ಮರುಜನ್ಮದಲ್ಲಿ ಉತ್ತಮವಾಗಿ ಬಾಳಬಹುದೆಂದು ನಂಬಿರುತ್ತಾರೆ. ಆದರೆ ನಾವು ಈ ವಿಚಾರವನ್ನು ಹೊಂದಬಾರದು. ನೀವು ಸಾಧನೆಯಲ್ಲಿ ಯಶಸ್ವಿಯಾದರೆ, ನೀವು ತಾವೋವನ್ನು ಗಳಿಸುತ್ತೀರಿ ಮತ್ತು ಅಲ್ಲಿ ಮರುಜನ್ಮದ ವಿಚಾರ ಬರುತ್ತದೆ. ನಾವು ಇಲ್ಲಿ ತಿರುಳನ್ನು ಸಂಗ್ರಹಿಸುವುದರ ಬಗ್ಗೆ ಮಾತನಾಡುವಾಗ, ಅದು ಇನ್ನೊಂದು ಅರ್ಥ ಹೊಂದಿದೆ. ನಮ್ಮ ದೇಹಗಳಲ್ಲಿ ಬರುವ ಈ ಎರಡು ವಸ್ತುಗಳು ಜೀವನಪರ್ಯಂತ ಸಂಗ್ರಹವಾಗುವುದಿಲ್ಲ; ನಿರ್ದಿಷ್ಟ ವಯಸ್ಸಿನಲ್ಲಿ ಮಾತ್ರ ಫಲಗೊಳ್ಳುತ್ತವೆ. ನೀವು ಬೈಕಿನಲ್ಲಿ ನಗರವನ್ನೆಲ್ಲ ಸುತ್ತುವಾಗ, ನೀವು ಕೆಲವು ವ್ಯವಹಾರಗಳಲ್ಲಿ ಭಾಗಿಯಾಗುವುದಕ್ಕೆ ಹೋಗುವುದಿಲ್ಲ.

ತಿರುಳನ್ನು ಸಂಗ್ರಹಿಸುವುದಕ್ಕೆ ಪ್ರಯತ್ನಿಸುವಲ್ಲಿ, ನೀವು ಯಾವುದೋ ಒಂದನ್ನು ಒಳ್ಳೆಯದೆಂದು ತಿಳಿದು ಮಾಡಿದರೆ, ನಂತರದಲ್ಲಿ ಅದು ಕೆಟ್ಟ ವ್ಯವಹಾರವಾಗಿ ಬದಲಾಗಿಬಿಡಬಹುದು. ನೀವು ಕೆಟ್ಟದ್ದೆಂದು ಮಾಡಿರುವ ಯಾವುದೋ ಒಂದು ಸಂಗತಿಯು, ನಂತರದಲ್ಲಿ ಒಳ್ಳೆಯದಾಗಿಬಿಡಬಹುದು. ಏಕೆ? ಅದೇಕೆಂದರೆ ನೀವು ಅದರ ಕರ್ಮದ ಸಂಬಂಧವನ್ನು ನೋಡಲಾರಿರಿ. ಒಬ್ಬ ಅಭ್ಯಾಸಿಯಾಗಿದ್ದುಕೊಂಡು ಅಸಾಮಾನ್ಯ ವ್ಯಕ್ತಿಯಾಗಿ, ನೀವು ನಿಮ್ಮಷ್ಟಕ್ಕೇ ದಿನನಿತ್ಯದ ಜನರೊಂದಿಗೆ ಮಾಪನ ಮಾಡಿಕೊಳ್ಳುವುದಕ್ಕೆ ಬದಲಾಗಿ, ಅಸಾಮಾನ್ಯ ತತ್ವಗಳೊಂದಿಗೆ ಭಾಗಿಯಾಗಬೇಕು. ನೀವು ಕರ್ಮದ ಸಂಬಂಧವನ್ನು ತಿಳಿಯದಿದ್ದರೆ, ಅದನ್ನು ಸರಿಯಾಗಿ ನಿರ್ವಹಿಸಲಾರಿರಿ. ಆದ್ದರಿಂದಲೇ ನಾವು ನಿರ್ಲಿಪ್ತತೆಯನ್ನು ಬೋಧಿಸುತ್ತೇವೆ; ಕೇವಲ ನೀವು ಬಯಸಿದ್ದಕ್ಕಾಗಿ, ನೀವು ಕೆಲವನ್ನು ಮಾಡಬಾರದು. ಕೆಲವರು "ನಾನು ಕೆಟ್ಟ ಜನರನ್ನು ಶಿಸ್ತುಗೊಳಿಸುವುದಕ್ಕೆ ಬಯಸುತ್ತೇನೆ" ಎನ್ನುತ್ತಾರೆ. ನನ್ನ ಪ್ರಕಾರ ನೀವು ಪೊಲೀಸರಾಗಬಹುದು. ನಾನು ಎಲ್ಲರಿಗೂ ಹೇಳಲು ಬಯಸುತ್ತೇನೆ, ಯಾವಾಗ ವ್ಯಕ್ತಿಗಳಿಬ್ಬರ ನಡುವೆ ಸಂಘರ್ಷ ಕಂಡುಬರುತ್ತದೆ. ಅದು ಅವರಿಬ್ಬರು ಪರಸ್ಪರ ಹಿಂದೆ ಸಾಲ ಹೊಂದಿರುತ್ತಾರೆ ಮತ್ತು

ಅಲ್ಲಿ ತಮ್ಮ ವ್ಯವಹಾರವನ್ನು ಚುಕ್ತಾ ಮಾಡುತ್ತಾರೆ. ನೀವು ಅದನ್ನು ತಡೆಯಲು ಮುಂದಾದರೆ, ಅವರು ತಮ್ಮ ವ್ಯವಹಾರವನ್ನು ತೀರಿಸಿಕೊಳ್ಳಲು ಅಸಮರ್ಥರಾಗುತ್ತಾರೆ ಮತ್ತು ಅದನ್ನು ಮಾಡುವುದಕ್ಕೆ ಇನ್ನೊಂದು ಸಮಯದ ತನಕ ಕಾಯಬೇಕು. ಇದರರ್ಥ ನೀವು ಕರ್ಮದ ಸಂಬಂಧವನ್ನು ನೋಡಲಾಗದಿದ್ದರೆ, ನೀವು ಸುಲಭವಾಗಿ ಕೆಟ್ಟ ವ್ಯವಹಾರ ಮಾಡಿ, ಕೆಟ್ಟ ತಿರುಳನ್ನು ಸಂಪಾದಿಸುತ್ತೀರಿ.

ಜನಸಾಮಾನ್ಯರಿಗಿಂತ ಭಿನ್ನವಾಗಿ ನೀವು ಅಸಾಮಾನ್ಯತತ್ವಗಳನ್ನು ಬಳಸಿ ವಸ್ತುಗಳನ್ನು ನೋಡಬೇಕು. ಅದು ಒಂದು ಆತ್ಮಪ್ರಕೃತಿಯ ಸಂಗತಿ, ನೀವು ಒಂದು ವೇಳೆ ಕೊಲೆಯಾಗುವುದನ್ನು ನೋಡಿ, ಅದನ್ನು ತಡೆಯಲು ಸಹಾಯ ಮಾಡದಿದ್ದರೆ, ಹೇಗೆ ನೀವು ಬೇರೊಂದು ರೀತಿಯಲ್ಲಿ ನಿಮ್ಮನ್ನು ನೀವು ಉತ್ತಮ ವ್ಯಕ್ತಿಯೆಂದು ನಿರೂಪಿಸುತ್ತೀರಿ? ನೀವು ಕೊಲೆಯನ್ನು ತಡೆಯಲು ಸಹಾಯ ಮಾಡದಿದ್ದರೆ, ಅದರೊಂದಿಗೆ ಭಾಗಿಯಾಗಿ ಏನನ್ನು ಪಡೆಯುತ್ತೀರಿ? ಆದಾಗ್ಯೂ ಈ ಸಂಗತಿಗಳು ನಿಜವಾಗಿಯೂ ನಮ್ಮ ಅಭ್ಯಾಸಿಗಳೊಂದಿಗೆ ಯಾವ ಕಾರ್ಯ ಸಂಬಂಧವನ್ನು ಹೊಂದಿಲ್ಲ. ಅವರು ನಿಮ್ಮ ಮಧ್ಯ ಪ್ರವೇಶಕ್ಕಾಗಿ ಸಿದ್ಧತೆಯನ್ನೇನೂ ಮಾಡಿಲ್ಲ. ತಪ್ಪುಗಳಾಗದಂತೆ ತಡೆಯುವುದಕ್ಕೆ ಕಾಪಿಟ್ಟ ತಿರುಳು ಶಕ್ತವಾಗಿರುತ್ತದೆಂದು ನಾವು ಹೇಳುತ್ತೇವೆ. ಹಾಗಿದ್ದರೂ, ನೀವೇನಾದರೂ ಸ್ವಲ್ಪವೇ ಕೆಟ್ಟ ಕೆಲಸ ಮಾಡಿದರೂ, ನಂತರ ನೀವು ತಿರುಳನ್ನು ಕಳೆದುಕೊಳ್ಳುತ್ತೀರಿ. ಒಮ್ಮೆ ನೀವು ತಿರುಳನ್ನು ಕಳೆದುಕೊಂಡ ಮೇಲೆ, ಹೇಗೆ ನಿಮ್ಮ ಆತ್ಮಪ್ರಕೃತಿಯನ್ನು ಉತ್ತಮಗೊಳಿಸಬಲ್ಲಿರಿ? ಹೇಗೆ ನಿಮ್ಮ ಗುರಿಯನ್ನು ತಲುಪಬಲ್ಲಿರಿ? ಅದು ಇಂತಹ ಸಂಗತಿಗಳನ್ನು ಒಳಗೊಳ್ಳುತ್ತದೆ. ಜೊತೆಗೆ ಒಬ್ಬನು ಒಳ್ಳೆಯ ಜ್ಞಾನೋದಯ ಗುಣವನ್ನೂ ಹೊಂದಿರಬೇಕು.

ನಾವು ಮತ್ತೂ ಹೇಳುತ್ತೇವೆ. ನೀವೆಲ್ಲ ನಿಮ್ಮ ಆಂತರಂಗಿಕ ಸಾಧನೆ ಮಾಡುತ್ತಿದ್ದರೆ, ಕೆಟ್ಟ ಚಟುವಟಿಕೆಗಳ ಪರಿಣಾಮದ ಬಗ್ಗೆ ಗಮನಿಸಿ, ಮುಂದಿನ ಬಾರಿ ತಿದ್ದಿಕೊಳ್ಳಿ. ಯಾವುದೇ ಕ್ರಮ ತೆಗೆದುಕೊಳ್ಳುವಾಗ ಬೇರೆಯವರನ್ನು ಮೊದಲು ಪರಿಗಣಿಸಿ, ಮಾನವ ಸಮಾಜ ಉತ್ತಮವಾಗುತ್ತದೆ ಮತ್ತು ಮೌಲ್ಯಗಳು ಎತ್ತರಕ್ಕೆ ಬೆಳೆಯುತ್ತವೆ. ಚೈತನ್ಯದಾಯಕ ನಾಗರೀಕತೆಯು ಮತ್ತೂ ಉತ್ತಮಗೊಳ್ಳುತ್ತದೆ, ಸಾರ್ವಜನಿಕ ಭದ್ರತೆ ಹೆಚ್ಚುತ್ತದೆ. ಪ್ರತಿಯೊಬ್ಬರೂ ತಮಗೆ ತಾವೇ ಶಿಸ್ತುಬದ್ಧರಾಗುತ್ತಾರೆ. ನೀವು ಇದನ್ನು ಉತ್ತಮವೆನ್ನುವುದಿಲ್ಲವೇ? ಆದಾಗ್ಯೂ ಅಲ್ಲಿ ಕೆಟ್ಟ ವ್ಯವಹಾರದಲ್ಲಿ ತೊಡಗುವ ಜನರು ಏಕಿದ್ದಾರೆ? ಏಕೆ ಅವರು ಕಾನೂನಿಗೆ ಬದ್ಧರಾಗುವುದಿಲ್ಲ? ಅದೇಕೆಂದರೆ ನೀವು ಅವರ ಹೃದಯವನ್ನು ಆಳಲಾರಿರಿ. ಪ್ರತಿಯೊಬ್ಬನೂ ಆಂತರಂಗಿಕವಾಗಿ ಬೆಳೆದರೆ, ಅಲ್ಲಿ ನ್ಯಾಯದ ಪ್ರಶ್ನೆಯೇ ಉದ್ಭವಿಸುವುದಿಲ್ಲ.

ಈ ಬೋಧನೆಯು ಈ ಹಂತಕ್ಕೆ ಮಾತ್ರ ಬೋಧಿಸಲಾಗುತ್ತದೆ. ಅದು ನಿಮ್ಮ ಸ್ವ–ಸಾಧನೆಯನ್ನು ಉನ್ನತಗೊಳಿಸುತ್ತದೆ. ಕೆಲವರಿಂದ ಎದ್ದಂತಹ ಪ್ರಶ್ನೆಗಳು ಹೆಚ್ಚು ನಿರ್ದಿಷ್ಟವಾಗಿದ್ದವು. ನಾನು ನಿಮ್ಮ ಬದುಕಿನಲ್ಲಿ ಬರುವ ಎಲ್ಲ ಪ್ರಶ್ನೆಗಳಿಗೆ ವಿವರಣೆ ನೀಡಿದರೆ, ಸಾಧನೆ ಮಾಡುವುದಕ್ಕೆ ಇನ್ನೇನು ಉಳಿಯುತ್ತದೆ. ನೀವು ಸ್ವತಃ ಸಾಧನೆ ಮಾಡಬೇಕು ಮತ್ತು ಜ್ಞಾನೋದಯಗೊಳ್ಳಬೇಕು. ದಫಾ ಈಗಾಗಲೇ ಸಾರ್ವಜನಿಕಗೊಂಡಿದೆ ಮತ್ತು ನೀವು ದಫಾ ಹಿನ್ನೆಲೆಯಂತೆ ಯಾವುದೇ ಸಂಗತಿಯನ್ನು ಮಾಡಬಲ್ಲಿರಿ.

* * *

ಫಾ (ಉನ್ನತ ಹಂತಕ್ಕೊಯ್ಯುವ ಮಾರ್ಗ) ಬೋಧನೆಯ ನನ್ನ ಸಮಯ ಮುಗಿಯುತ್ತ ಬಂದಿದೆ ಎಂದು ನಾನು ತಿಳಿಯುತ್ತೇನೆ. ಆದಾಗ್ಯೂ, ನಾನು ಕೆಲವು ಮುಖ್ಯ ವಿಚಾರಗಳನ್ನು ಹೇಳಿ ಹೋಗಲು ಬಯಸುತ್ತೇನೆ. ನನ್ನ ಬೋಧನೆಯ ಅವಧಿಯಲ್ಲಿ, ನಾನು ಯಾವುದೇ ವಿಚಾರವನ್ನು ಎಲ್ಲರಿಗೂ ಜವಾಬ್ದಾರಿಯುತ ತತ್ವದ ಹಿನ್ನೆಲೆಯಲ್ಲಿ ಮತ್ತು ಸಮಾಜದ ಹಿನ್ನೆಲೆಯಲ್ಲಿ ಮಾಡಬೇಕೆಂಬ ಆಶಯವನ್ನು ಹೊಂದಿದ್ದೇನೆ. ನಾವು ಈ ತತ್ವಗಳನ್ನು ಅನುಸರಿಸಿದ್ದೇವೆ. ಫಲಿತಾಂಶ ಬರುವವರೆಗೆ, ಅದರ ಬಗ್ಗೆ ಏನನ್ನೂ ನಾನು ಪ್ರತಿಕ್ರಿಯಿಸುವುದಿಲ್ಲ. ಅದು ಸಾರ್ವಜನಿಕರಿಗೆ ಸೇರಿದ್ದು. ನನ್ನ ಗುರಿಯು ಈ ದಫಾವನ್ನು ಸಾರ್ವಜನಿಕಗೊಳಿಸುವುದು ಮತ್ತು ಅದರಿಂದ ಹೆಚ್ಚು ಜನ ಉಪಯೋಗ ಹೊಂದಬೇಕು

ಎಂಬುದೇ. ಬೋಧನೆಯ ಸಮಯದಲ್ಲಿ ಮಾನವೀಯವಾಗುವ ತತ್ವಗಳನ್ನೂ ವಿವರಿಸಿದ್ದೇವೆ. ತರಗತಿ ಮುಗಿದ ಮೇಲೆ ನೀವು ಸಾಧನಾ ಅಭ್ಯಾಸಕ್ಕೆ ಈ ದಫಾವನ್ನು ಬಳಸಲಾಗದಿದ್ದರೂ, ಒಬ್ಬ ಉತ್ತಮ ವ್ಯಕ್ತಿಯಾಗಿಯಾದರೂ ಇರುತ್ತಾರೆಂದು ನಂಬಿಕೊಳ್ಳುತ್ತೇವೆ. ಇದೇ ನಮ್ಮ ಸಮಾಜಕ್ಕೆ ಉಪಯುಕ್ತವಾಗುತ್ತದೆ. ನಿಜವಾಗಿ ಅದನ್ನೆಲ್ಲ ನೀವು ತಿಳಿದುಕೊಂಡಿದ್ದೀರಿ.

ಬೋಧನೆಯ ಅವಧಿಯಲ್ಲಿ ಕೆಲವು ಸಂಗತಿಗಳು ಸರಿಯಾಗಿ ಜರುಗಲಿಲ್ಲ ಮತ್ತು ಹಲವು ರೀತಿಯ ಅಡಚಣೆಗಳಾದವು. ಸಂಘಟನೆಯು ಹೆಚ್ಚಿನ ಬೆಂಬಲ, ವಿಭಿನ್ನ ವೃತ್ತಿಗಳಲ್ಲಿನ ಆಡಳಿತಗಾರರು ಮತ್ತು ಕೆಲಸಗಾರರ ಪರಿಶ್ರಮದ ಕಾರಣದಿಂದ ನಮ್ಮ ತರಗತಿಗಳು ಹೆಚ್ಚು ಯಶಸ್ವಿಯಾಗಿವೆ.

ನಾನು ಉಪನ್ಯಾಸದಲ್ಲಿ ಉಲ್ಲೇಖಿಸಿರುವ ಎಲ್ಲಾ ವಿಷಯಗಳು ಪ್ರತಿಯೊಬ್ಬನಿಗೂ ಉನ್ನತ ಹಂತಗಳಲ್ಲಿ ಸಾಧನಾಭ್ಯಾಸ ಮಾಡುವುದಕ್ಕೆ ಮಾರ್ಗದರ್ಶಕವಾಗಿ ಹೇಳಿದಂತಹ ವಿಷಯಗಳು. ಈ ಹಿಂದೆ ಯಾವನೂ ಅದನ್ನು ಬೋಧಿಸಿಲ್ಲ. ನಾವು ಕೂಲಂಕಷವಾಗಿ ಮಾನವ ದೇಹ ರಚನೆಯ ಆಧುನಿಕ ವೈಜ್ಞಾನಿಕ ವಿಚಾರಗಳೊಂದಿಗೆ ವಿಷಯಗಳನ್ನು ಬೋಧಿಸಿದ್ದೇವೆ. ನಾವು ಏನು ಬೋಧಿಸಿದ್ದೇವೆ ಅದು ಹೆಚ್ಚು ಉನ್ನತವಾದುದು. ಪ್ರತಿಯೊಬ್ಬನೂ ಸ್ವತಃ ಸಾಧನೆ ಮಾಡಿ 'ಫಾ' ಗಳಿಸುವಂತೆ ಅದು ಆಶಯವನ್ನು ಹೊಂದಿದೆ. ಬೋಧನಾ ಅವಧಿಯಲ್ಲಿ ಹಲವರು 'ಫಾ' ತುಂಬಾ ಒಳ್ಳೆಯದೆಂದು ಕಂಡುಕೊಂಡಿದ್ದಾರೆ. ಆದರೆ ಅನುಸರಣೆಗೆ ಹೆಚ್ಚು ಕಷ್ಟದಾಯಕವಾದುದು. ನನ್ನ ಪ್ರಕಾರ ಅದು ಆಯಾ ವ್ಯಕ್ತಿಗೆ ಸಂಬಂಧಿಸಿದ್ದು. ಸಾಧನಾ ಅಭ್ಯಾಸವನ್ನು ಬಯಸದ ದಿನನಿತ್ಯದ ಜನರಿಗೆ ಸಾಧನೆಯು ಹೆಚ್ಚು ಕಷ್ಟವಾದುದು, ಅಸಾಧ್ಯವಾದುದು. ಲಾವ್ಹೋ ಜಿ ಹೇಳಿದರು: ''ಒಬ್ಬ ಉತ್ತಮನಾದ ವ್ಯಕ್ತಿ ತಾವೋವನ್ನು ಕೇಳಿದಾಗ, ಅವನು ಅದನ್ನು ಚೆನ್ನಾಗಿ ಅಭ್ಯಾಸ ಮಾಡುತ್ತಾನೆ. ಸಾಧಾರಣ ವ್ಯಕ್ತಿ ಕೇಳಿದಾಗ, ಅವನು ಅದನ್ನು ಅಲ್ಪಸ್ವಲ್ಪ ಅಭ್ಯಾಸ ಮಾಡುತ್ತಾನೆ. ಒಬ್ಬ ಮೂರ್ಖ ಕೇಳಿದಾಗ, ಜೋರಾಗಿ ನಗುತ್ತಾನೆ. ಹಾಗೆ ಜೋರಾಗಿ ಅವನು ನಗದಿದ್ದರೆ, ಅದು ತಾವೋ ಅಲ್ಲ.'' ಅಪ್ಪಟ ಅಭ್ಯಾಸಿಗೆ ನಾನು ಹೇಳುತ್ತೇನೆ ಅದು ತುಂಬಾ ಸುಲಭವಾದುದು ಮತ್ತು ತಲುಪುವುದಕ್ಕೆ ಹೆಚ್ಚು ಎತ್ತರದ್ದೇನೂ ಅಲ್ಲ. ನಿಜವಾದ ದೃಢಮನಸ್ಸಿನ ಅಭ್ಯಾಸಿಯು ಎಲ್ಲವನ್ನು ಅನುಭವಿಸುವುದಕ್ಕೆ ಮತ್ತು ಎಲ್ಲಾ ವಿಧದ ಸ್ವಾರ್ಥಗಳ ಕಾರ್ಯಸಂಬಂಧಗಳನ್ನು ತ್ಯಜಿಸುವುದಕ್ಕೆ ಶಕ್ತನಾಗಿರುತ್ತಾನೆ. ಕೆಲವರು ಅದು ಕಷ್ಟವೆಂದು ತಿಳಿದಿದ್ದಾರೆ. ಏಕೆಂದರೆ ಅವರು ಇದನ್ನೆಲ್ಲ ಮೀರಲಾರರು. ಅವರು ಮನುಷ್ಯನ ಮನಸ್ಸನ್ನು ಬಿಡಲಾರರು. ಅದರಿಂದ ಅವರು ಅದನ್ನು ಕಷ್ಟವೆನ್ನುತ್ತಾರೆ. ಪ್ರಾಯೋಗಿಕವಾಗಿ ಅನುಸರಿಸುವುದಂತೂ ಮತ್ತೂ ಕಷ್ಟ. ಇಲ್ಲಿ ಉಪಯೋಗಗಳಿವೆ. ಆದರೂ ಈ ಸಂಬಂಧಗಳನ್ನು ಹೇಗೆ ನಾಶಮಾಡಬಲ್ಲಿರಿ? ಈ ಕಾರಣದಿಂದ ಒಬ್ಬನು ಅದನ್ನು ಕಷ್ಟವೆಂದು ಗುರುತಿಸುತ್ತಾನೆ. ಅಂತರ್ ವೈಯಕ್ತಿಕ ಸಂಘರ್ಷಗಳು ಏರ್ಪಟ್ಟಾಗ, ನೀವು ಸಹಿಷ್ಣುತೆಯನ್ನು ಅಭ್ಯಾಸ ಮಾಡದಿದ್ದರೆ, ಇದು ಒಪ್ಪಿತವಾಗುವುದಿಲ್ಲ. ನಾನು ವಿದ್ಯಾರ್ಥಿಯಾಗಿದ್ದಾಗ ಹಲವು ಪ್ರಸಿದ್ಧ ಗುರುಗಳು ಹೇಳುತ್ತಿದ್ದಂತಹ ಮಾತಿದು, ''ಯಾವಾಗ ಅದು ಸಾಧಿಸುವುದಕ್ಕೆ ಕಷ್ಟವೋ, ಆಗ ನೀನದನ್ನು ಸಾಧಿಸುತ್ತೀಯ. ಯಾವಾಗ ಅದು ಮಾಡುವುದಕ್ಕೆ ಅಸಾಧ್ಯವೋ, ಆಗ ನೀನದನ್ನು ಮಾಡುತ್ತೀಯ.'' ನೀವು ಅದನ್ನು ಮಾಡಬಲ್ಲಿರಾದರೆ, ಅದರಿಂದ ನೀವು ತಿಳಿಯುತ್ತೀರಿ. ''ಎಲ್ಲೋ ಮರದ ಕೆಳಗೆ ನಡೆದುಕೊಂಡು ಹೋದ ಮೇಲೆ, ಅಲ್ಲಿ ಸುಂದರ ಹೂವುಗಳು ಮತ್ತು ಅದರ ಹಿಂದೆ ಮತ್ತೊಂದು ಹಳ್ಳಿಯಿರುತ್ತದೆ!''

ನಾನು ಎಷ್ಟೆಲ್ಲವನ್ನು ಹೇಳಿದ್ದೇನೆ ಅದನ್ನೆಲ್ಲ ಪ್ರತಿಯೊಬ್ಬನಿಗೂ ಜ್ಞಾಪಕದಲ್ಲಿಟ್ಟುಕೊಳ್ಳಲು ಕಷ್ಟವಾಗುತ್ತದೆ. ನಾನು ಕೆಲವೇ ಮುಖ್ಯ ಅಗತ್ಯಗಳನ್ನು ಸೂಚಿಸುತ್ತೇನೆ. ನೀವು ನಿಮ್ಮನ್ನು ಅಭ್ಯಾಸಿಯೆಂದು ತಿಳಿದು, ನಿಜವಾಗಿಯೂ ನಿಮ್ಮ ಸಾಧನೆಯ ಅಭ್ಯಾಸವನ್ನು ಮುಂದುವರೆಸುತ್ತೀರೆಂದು ನಿರೀಕ್ಷಿಸುತ್ತೇನೆ. ಹಳೆಯ ಮತ್ತು ಹೊಸ ಅಭ್ಯಾಸಿಗಳೂ ದಫಾದಲ್ಲಿ ಸಾಧನೆ ಅಭ್ಯಾಸ ಮಾಡುವುದಕ್ಕೆ ಶಕ್ತರಾಗಿ, ಯಶಸ್ವಿಯಾಗುತ್ತೀರೆಂದು ನಿರೀಕ್ಷಿಸುತ್ತೇನೆ. ನೀವು ಮನೆಗೆ ಹೋದ ಮೇಲೆ ನಿಮ್ಮ ಸಮಯವನ್ನು ಅಪ್ಪಟ ಸಾಧನಾಭ್ಯಾಸಕ್ಕೆ ವಿನಿಯೋಗಿಸುತ್ತೀರೆಂದು ನಿರೀಕ್ಷಿಸುತ್ತೇನೆ.

ಮೇಲ್ನೋಟಕ್ಕೆ, ಜುಆನ್ ಫಾಲನ್ ಭಾಷಿಕವಾಗಿ ನಾಜೂಕಾಗಿಲ್ಲ. ಅದು ಆಧುನಿಕ ವ್ಯಾಕರಣಬದ್ಧವಾಗಿಯೂ ಸಮ್ಮತವಾಗಿಲ್ಲ. ಒಂದು ವೇಳೆ ನಾನು ಆಧುನಿಕ ವ್ಯಾಕರಣವನ್ನು ಈ ಪುಸ್ತಕವನ್ನು ಸಜ್ಜುಗೊಳಿಸುವುದಕ್ಕೆ ಬಳಸಿದರೆ, ಎಲ್ಲಿ ಪುಸ್ತಕದ ಭಾಷಿಕ ರಚನೆಯು ನಾಜೂಕು ಮತ್ತು ಪ್ರಮಾಣೀಕೃತವಾಗಿದೆಯೋ ಅಲ್ಲಿ ಒಂದು ಗಂಭೀರವಾದ ಸಮಸ್ಯೆ ಮೇಲೇಳುತ್ತದೆ. ಅದು ತೀವ್ರ ಚಿಂತನೆಯ, ಉನ್ನತವಾದ ವಸ್ತುವನ್ನು ಸವಿವರವಾಗಿ ಒಳಗೊಳ್ಳುವುದಿಲ್ಲ. ಇದೇಕೆಂದರೆ ಆಧುನಿಕ, ಪ್ರಮಾಣೀಕೃತಗೊಂಡ ಪರಿಭಾಷೆಗಳು ವಿವಿಧ ಹಂತಗಳಲ್ಲಿ ಮತ್ತು ಪ್ರತಿಯೊಂದು ಹಂತದ 'ಫಾ' ಅನ್ನು ಪ್ರಕಟಗೊಳಿಸುವಲ್ಲಿ ದಾಫಾದ ಮಾರ್ಗದರ್ಶನವನ್ನು ಅಭಿವ್ಯಕ್ತಿಸಲಾರದು; ಅಂತೆಯೇ ಅದು ಅಭ್ಯಾಸಿಗಳಲ್ಲಿ ಮೂಲಭೂತ ಬದಲಾವಣೆಯನ್ನು ಹೊರತರುವ ಶಕ್ತಿ ಹೊಂದಿಲ್ಲ.

**ಲಿ ಹಾಂಗ್‌ಜಿ, ಜನವರಿ 5, 1996**

## ಪಾರಿ ಭಾಷಿಕ ಕೋಶ

| | |
|---|---|
| **Ah Q ( ah cue)** | ಚೈನಾದ ಕಾದಂಬರಿಗಳಲ್ಲಿ ಬರುವ ಮೂರ್ಖ ಪಾತ್ರ |
| **Arhat** | ಬುದ್ಧ ಶಾಲೆಯಲ್ಲಿ ಜ್ಞಾನೋದಯವನ್ನು ಪಡೆದು ಮೂರು ಲೋಕಗಳನ್ನು ಮೀರಿದವನು |
| **Assistant spirit** | ಅಧೀನಾತ್ಮ |
| **Asura** | ಅಸುರ/ ರಾಕ್ಷಸ |
| **Baihui (bui – hway)** | ತಲೆಯ ಕಿರೀಟ ಭಾಗದಲ್ಲಿರುವ ಆಕ್ಯು ಪಾಯಿಂಟ್ |
| **Benti (bun – tee)** | ಒಬ್ಬನ ಭೌತಿಕ ಶರೀರ ಮತ್ತು ಇತರ ಆಯಾಮಗಳಲ್ಲಿನ ಶರೀರಗಳು |
| **Bain  Que ( B' yen – chueh)** | ಚೀನಾದ ವೈದ್ಯಕೀಯ ಇತಿಯಾಸದಲ್ಲಿ ಶ್ರೇಷ್ಠ ವೈದ್ಯ |
| **Big Lotus Flower Hand sign** | ದೀಕ್ಷೆ ಪಡೆಯುವಾಗ ಕೈ ಜೋಡಿಸುವ ಭಂಗಿ |
| **Bigu (bee-goo)** | ಉಪವಾಸ |
| **Bodhisattva** | ಬುದ್ಧ ಶಾಲೆಯಲ್ಲಿ ಜ್ಞಾನೋದಯವನ್ನು ಪಡೆದು ಹರಹತನನ್ನು ಮೀರಿದವ ಆದರೆ ತಥಾಗತನಿಗಿಂತ ಕೆಳಮಟ್ಟದವನು |
| **Bodhisattva Avalokitesvara** | ಭೋದಿಸತ್ವರಲ್ಲಿ ಹಿರಿಯಳಾದ ಈಕೆ ಉದಾರತೆಗೆ ಹೆಸರಾಗಿರುವವಳು |
| **Book of changes** | ಪ್ರಾಚೀನ ಚೀನಾದ ಝೋ ಸಾಮ್ರಾಜ್ಯದ ದೈವಿಕ ಪುಸ್ತಕ (ಕ್ರಿ. ಪೂ -1100 ರಿಂದ 221) |
| **Caocao (tsaow-tsaow)** | ಮೂರು ಸಾಮ್ರಾಜ್ಯಗಳ ಚಕ್ರವರ್ತಿಗಳಲ್ಲಿ ಒಬ್ಬ ( ಕ್ರಿ.ಶ. 220 ರಿಂದ 265) |
| **Celestial eye** | ಮೂರನೆ ಕಣ್ಣು |
| **Changchun (chahng-choon)** | ಜಿಲಿನ್ ಪ್ರಾಂತ್ಯದ ರಾಜಧಾನಿ |
| **Chongqing (chong-ching)** | ನೈರುತ್ಯ ಚೈನಾದ ಜನಭರಿತ ನಗರ |
| **Da Ji (dahjee)** | ಶಾಂಗ್ ಸಾಮ್ರಾಜ್ಯದ ಪತನಕ್ಕೆ ಕಾರಣವಾದ ವೇಶ್ಯೆ |
| **Dafa (dah-fah)** | ತತ್ವ ಭರಿತವಾದ ಉನ್ನತ ಮಾರ್ಗ |
| **Dan (dahn)** | ಅಭ್ಯಾಸಿಗನು ವಿವಿಧ ಆಯಾಮಗಳಿಂದ ಪಡೆದ ಶಕ್ತಿ. |
| **Dan Jing (dahn jing)** | ಚೀನಿಯರ ಸಾಂಪ್ರದಾಯಕ ಅಭ್ಯಾಸಿಗಳ ಪಠ್ಯ ಪುಸ್ತಕ |
| **Dantian (dahn tien)** | ಕಿಬ್ಬೊಟ್ಟೆಯ ಕೆಳ ಭಾಗದ ಶಕ್ತಿ ಕ್ಷೇತ್ರ |
| **De (duh)** | ಪಾವಿತ್ರತೆ |
| **Dharma** | ಧರ್ಮ- ಶಾಖ್ಯ ಮುನಿ ಬುದ್ಧನ ಉಪದೇಶಗಳು |
| **Dharma ending period** | ಬುದ್ಧನ ಪ್ರಕಾರ ಆತನು ಮರಣಿಸಿದ ಐನೂರು ವರ್ಷಗಳ ನಂತರ ಧರ್ಮ ಮುಗಿಯುತ್ತದೆ. ತದನಂತರ ಇದು ಮನುಷ್ಯನನ್ನು ರಕ್ಷಿಸುವುದಿಲ್ಲ |
| **Diamond sutra** | ಭೌದ್ಧ ಧರ್ಮದ ಪ್ರಾಚೀನ ಗ್ರಂಥ |
| **Digging into a bull's horn** | ಅಂತ್ಯಕ್ಕೆ  ಹೋಗುವ ಬಗ್ಗೆ ಚೈನಿಯರ ಭಾವನೆ |
| **Ding** | ಮನಸಿನ ನಿರ್ವಾತ ಪ್ರದೇಶ |

**The eight deities** ಚೀನಾದ ಚರಿತ್ರೆಯಲ್ಲಿ ಬರುವ ಪ್ರಸಿದ್ಧ ತಾವೋಗಳು

**Eight triangrams** ಪ್ರಕೃತಿಯಲ್ಲಿ ನಡೆಯುವ ಬದಲಾವಣೆಗಳನ್ನು ಸೂಚಿಸುವ ಚರಿತ್ರ ಪೂರ್ವದ ರೇಖಾ ನಕ್ಷೆ

**Energy channels** ಶಕ್ತಿ ಪ್ರಚಲನೆಯ ಜಾಲ

**Fa (fah)** ಬುದ್ಧ ಶಾಲೆಯ ನಿಯಮ ಮತ್ತು ತತ್ವಗಳು

**Fashen (fah-shun)** ಗಾಂಗ್ ಮತ್ತು ಫಾ ದಿಂದ ಮಾಡಲ್ಪಟ್ಟ ಶರೀರ

**Fengshui (fung-shway)** ಚೀನಾದ ಭೂ ಸಬಂಧಿತ ಅಧ್ಯಯನ ಶಾಸ್ತ್ರ

**Five elements** ನೀರು , ಲೋಹ. ಮರ, ಅಗ್ನಿ ಮತ್ತು ಭೂಮಿ

**Fruit status** ಭೌದ್ಧ ಧರ್ಮಗಳಲ್ಲಿರುವ ಹಂತಗಳಲ್ಲಿ ಇದು ಒಂದು.
ಉದಾ : ಹರಹತ್, ಭೋದಿಸತ್ವ ಇತ್ಯಾಧಿ

**Great cultural revolution** ಚೀನಾದ ಮೌಲ್ಯ ಮತ್ತು ಸಂಸ್ಕೃತಿಗಳನ್ನು ಆಪಾಧಿಸಿದ ಕಮ್ಯುನಿಷ್ಟ ರಾಜಕೀಯ ಚಳುವಳಿ

**Gong** ಶಕ್ತಿ ಸಂವರ್ಧನೆ

**Gongshen (gong-shuhn)** ಸಂವರ್ಧನೆಗೊಂಡಿರುವ ಶಕ್ತಿಯನ್ನು ಹೊಂದಿರುವ ಶರೀರ

**Great Jade Emperor** ಮೂರು ಆಯಾಮಗಳ ಮೇಲ್ವಿಚಾರಕಿ

**Guanding (gwan-ding)** ಒಬ್ಬ ವ್ಯಕ್ತಿ ಶಿರದ ಮೇಲೆ ಶಕ್ತಿಯನ್ನು ಸಾಂಪ್ರದಾಯಕವಾಗಿ ಸುರಿಯುವುದು

**Guangdong (gwang-dong)** ದಕ್ಷಿಣ ಚೀನಾದ ಒಂದು ಪ್ರಾಂತ್ಯ

**Guangxi (gwang-shee)** ದಕ್ಷಿಣ ಚೀನಾದ ಒಂದು ಪ್ರಾಂತ್ಯ

**Guanyian (gwan-yeen)** ಬೋಧಿಸತ್ವನ ನಂತರ ಬರುವ ದಯಾಮಯಿ

**Guiyang (gway-yahng)** ಗ್ಯುಝೋ ಪ್ರಾಂತ್ಯದ ರಾಜಧಾನಿ

**Guizhou (gway-jhoe)** ನೈರುತ್ಯ ಪ್ರಾಂತ್ಯದ ರಾಜಧಾನಿ

**Han (hahn)** ಅತಿ ಹೆಚ್ಚಿನ ಚೀನಿಯ ಜನಾಂಗವನ್ನು ಹೊಂದಿರುವ ಸಾಮ್ರಾಜ್ಯ

**Han Xin (hahn-sheen)** ಯಾನ್ ಸಾಮ್ರಾಜ್ಯದ ಲ್ಯೂ ಬ್ಯಾಂಗನ ಜನರಲ್

**Heche (huh-chuh)** ಜಲವಾಹನ

**Hegu (huh-goo)** ಹೆಬ್ಬೆರಳು ಮತ್ತು ತೋರು ಬೆರಳಿನ ನಡುವಿನ ಆಕ್ಯು ಪಾಯಿಂಟ್

**Hetu (huh-too)** ಪ್ರಕೃತಿಯಲ್ಲಿನ ಬದಲಾವಣೆಗಳನ್ನು ಬಿಚ್ಚಿಡುವ ಚರಿತ್ರಾ ಪೂರ್ವ ರೇಖಾ ನಕ್ಷೆ

**Hinayana** ಭೌದ್ಧ ಧರ್ಮದ ಒಂದು ಪಂಥ

**Huatuo (hwa-twoah)** ಚೀನಾದ ವೈದ್ಯಕೀಯ ಇತಿಯಾಸದಲ್ಲಿ ಶ್ರೇಷ್ಠ ವೈದ್ಯ

**Huiyin (hway-yeen)** ಗುದ ದ್ವಾರದ ಬಳಿಯಿರುವ ಅಕ್ಯು ಪಂಚರ ಬಳಿಯಿರುವ ಬಿಂದು

**Hun (huhn)** ಭೌದ್ಧ ಧರ್ಮದಲ್ಲಿ ನಿಷೇಧಿಸಲಾದ ಆಹಾರ

**In-Triple-World-Fa** ಬೌದ್ಧ ಧರ್ಮದ ಪ್ರಕಾರ ಸಂಸಾರಿಯಾಗಿರುವವನು ಮೂರು ಲೋಕಗಳನ್ನು ಮೀರಲು ಸಾಧ್ಯವಿಲ್ಲ

**Investiture of the Gods** ಚೀನಿಯರ ಸಾಂಪ್ರದಾಯಿಕ ಕಲ್ಪನೆ

**Iron Sand Palm, Cinnabar palm, Vajra leg, Arhat foot**
ಚೀನಿಯರ ಯುದ್ಧ ನೈಪುಣ್ಯದ ಕಲೆಗಳು

**Jiang Ziya (jyang dzz-yah)** ದೇವತೆಗಳ ಅಧಿಕಾರವನ್ನು ವಿಧಿವತ್ತಾಗಿ ವಹಿಸಿಕೊಡುವ ಪಾತ್ರ

**Jigong (jee-gong)** ದಕ್ಷಿಣ ಸಾಂಗ್ ಚಕ್ರಾಧಿಪತ್ಯದ ಬೌದ್ಧ ಸನ್ಯಾಸಿ(1127

**Jinan (jee-nahn)** ಸ್ಯಾಂಡೊಂಗ್ ಪ್ರಾಂತ್ಯದ ರಾಜಧಾನಿ

**Kalpa** ಕಳೆದುಹೋದ 200 ವರ್ಷಗಳ ಕಾಲಾವಧಿ

**Karma** ಹಿಂದಿನ ಪಾಪದ ಕೆಲಸಗಳ ಪ್ರತಿ ಫಲ

**Lady Queen Mother** ಚೈನಿಯರ ಪುರಾಣಗಳಲ್ಲಿ ಬರುವ ಅತ್ಯುನ್ನತ ದೇವತೆ

**Lao Zi (laow-dzz)** ಕ್ರಿ. ಪೂ. 500 ರಿಂದ 400 ರಲ್ಲಿನ ತಾವೋ ಶಾಲೆಯ ಸಂಸ್ಥಾಪಕ ಹಾಗೂ ತಾವೋ ಬೋಧನೆಚಿು ಲೇಖಕ

**Laogong (laow-gong)** ಅಂಗೈ ಮಧ್ಯ ಭಾಗದಲ್ಲಿನ ಅಕ್ಯು ಪಾಯಿಂಟ್

**Last Havoc** ವಿಶ್ವ ವಿಕಾಸದ ಮೂರು ಹಂತಗಳಲ್ಲಿ ಕೊನಯ ಹಂತ

**Lei feng (lay-fung)** 1960 ರ ಚೈನಿಯರ ನೈತಿಕ ನಿದರ್ಶನ

**Li(Lee)** 0.5 ಕಿಲೋ ಮೀಟರ್ ದೂರದ ಅಳತೆಮಾನ

**Li- Shizhen(Leeshr –Jhun)** ಚೀನಿ ವೈದ್ಯಕೀಯ ಚ್ಚರಿತ್ರೆಯಲ್ಲಿ ಬರುವ ಪ್ರಖ್ಯಾತ ವ್ಯದ್ಯ

**Lianhuase(L 'yen hwa-suh)** ಬೌದ್ಧ ಸಾಖ್ಯ ಮುನಿಯ ಹತ್ತು ಮಹಿಳಾ ಅನಿಯಾಯಿಗಳಲ್ಲಿ ಒಬ್ಬರು

**Liu bang (lea bahing)** ಹಾನ್ ಸಾಮ್ರಾಜ್ಯದ ಸಂಸ್ಥಾಪಕ ಮತ್ತು ರಾಜ (ಕ್ರಿ ಪೂ. 206 – ಕ್ರಿ ಶ. 23)

**Lu dongban(lyu dong- bin)** ತಾವೋ ಶಾಲೆಯ ಎಂಟು ದೇವತೆಗಳಲ್ಲಿ ಒಬ್ಬರು

**Luoshu (leo- shew)** ಚರಿತ್ರಾ ಪೂರ್ವ ರೇಖಾ ನಕ್ಷೆಯ ಪ್ರಕಾರ ಇದು ಪ್ರಕೃತಿ ಬದಲಾವಣೆಗಳ ರಹಸ್ಯಗಳನ್ನು ತಿಳಿಸುತ್ತದೆ

**Mah jong** ನಾಲ್ಕು ಜನರ ಆಟಗಾರರಿಂದ ಕೂಡಿದ ಚೈನಿಯರ ಆಟ

**Maha yana** ಬೌದ್ಧ ಧರ್ಮದ ಒಂದು ದೊಡ್ಡ ಪಂಗಡ

**Maoyou(maow-yo)** ಶರೀರದ ಆಂತರಿಕ ಮತ್ತು ಬಾಹ್ಯಗಳ ನಡುವಿನ ಗಡಿ ರೇಖೆ

**Milky- white body** ಶಕ್ತಿ ಹೀನ ಶುದ್ಧಿಕರಿಸಿದ ದೇಹ

**Ming dynasty** ಕ್ರಿ.ಪೂ. 1368 -1644 ರಲ್ಲಿನ ಚೀನಿ ಸಾಮ್ರಾಜ್ಯ

**Ming men (ming- muhn)** ಬೆನ್ನು ಮೂಳೆಯ ಕೆಳ ಭಾಗದಲ್ಲಿ ಬರುವ ಅಕ್ಯು ಪಾಯಿಂಟ್

**Mo ding (muh ding)** ಶಿರದ ಮೇಲ್ಭಾಗವನ್ನು ಸ್ಪರ್ಶಿಸಿ ಚಿಗಾಂಗ್ ಗುರಗಳು ಶಕ್ತಿಯನ್ನು ನೀಡುವುದು

**Mujianlian(moo– j'yen-l'yen)** ಬೌದ್ಧ ಸಾಖ್ಯ ಮುನಿಯ ಹತ್ತು ಪುರುಷ ಅನುಯಾಯಿಗಳಲ್ಲಿ ಒಬ್ಬರು

**Nanjing (nahn-jing)** ಜಿಯಾಂಗ್ ಜು ಪ್ರಾಂತ್ಯದ ರಾಜಧಾನಿ

**Nirvana** ಭೌತಿಕ ಪ್ರಪಂಚವನ್ನು ತ್ಯಜಿಸುವುದು

**Niwan palace** ತಾವೋಯಿಷ್ಟಗಳ ಪ್ರಕಾರ ಅಸ್ತಿ ಪಂಜರ

**Primordial spirit** ಮಾನವನ ಆತ್ಮ ಹಾಗೂ ಇದರ ಎರಡು ಭಾಗಗಳು ಪ್ರಧಾನ ಮತ್ತು ಅಧೀನ ಆತ್ಮಗಳು

**Pure white body** ಶೀ-ಜೈನ್-ಫಾ ಕೃಷಿಯ ಉನ್ನತ ಮಟ್ಟದಲ್ಲಿನ ಪಾರದರ್ಶಕ ಶರೀರ

**Qi (chee)** ಶಕ್ತಿ

**Qiankun (chyen- kuhn)** ಮರ್ತ್ಯ ಮತ್ತು ಸ್ವರ್ಗ

| | |
|---|---|
| **Qianmen(chyen-mum)** | ಬೀಜಿಂಗ್‌ನ ಪ್ರಖ್ಯಾತ ವಾಣಿಜ್ಯ ಜಿಲ್ಲೆಗಳಲ್ಲಿ ಒಂದು |
| **Qigong (chee-gong)** | ಶಕ್ತಿ ಪಡೆಯುವಲ್ಲಿ ಚೀನಿಯರ ಸಾಂಪ್ರದಾಯಿಕ ವ್ಯಾಯಾಮಗಳು |
| **Qiji (chee-jee)** | ಯಾಂತ್ರಿ ಶಕ್ತಿ |
| **Qimen (chee-mun)** | ಅಸಂಪ್ರದಾಯಕ (ಅನೌಪಚಾರಿಕ) ಶಾಲೆ |
| **Quin hui (chin-hway)** | ದಕ್ಷಿಣ ಸ್ಯಾಂಗ್ ಸಾಮ್ರಾಜ್ಯದ ಶ್ರೇಷ್ಠ ನ್ಯಾಯಾಲಯದ ಕ್ರೂರ ಅಧಿಕಾರಿ (ಕ್ರಿ. ಪೂ. 1127 -1279) |
| **Qingdao (ching-dow)** | ಶಾನ್ ಡಾಂಗ್ ಪ್ರಾಂತ್ಯದ ಬಂದರು ನಗರ |
| **Qiqihar (chee-chee-har)** | ಈಶಾನ್ಯ ಚೈನಾದ ನಗರ |
| **Ren** | ಸಹನೆ |
| **Right fruit** | ಬುದ್ಧ ಶಾಲೆಯಲ್ಲಿ ಶ್ರೇಷ್ಠ ಮಟ್ಟವನ್ನು ಪಡೆಯುವುದು |
| **Sakyamuni** | ಗೌತಮ ಸಿದ್ಧಾರ್ಥ |
| **Samadhi** | ಸಮಾಧಿ ಸ್ಥಿತಿಯಲ್ಲಿ ದ್ಯಾನ ಮಾಡುವುದು |
| **Samsara** | ಬೌದ್ಧ ಧರ್ಮದ  ಪ್ರಕಾರ ಪುನರ್ ಜನ್ಮದ ಆರು ಮಾರ್ಗಗಳಲ್ಲೊಂದು |
| **Setting up a bodily crucible and furnace to make dan using gathered medicinal herbs** | ತಾವೋಯಿಸ್ಟ್ ಪ್ರಕಾರ ಆಂತರಿಕ ಸೌಂದರ್ಯವನ್ನು ಹೆಚ್ಚಿಸುವ ರಸಾಯನ. |
| **Shan (shahn)** | ಕರುಣೆ |
| **Shangen (shahn-guhn)** | ಕಣ್ಣುಬ್ಬುಗಳ ನಡುವಿನ ಅಕ್ಯು ಪಾಯಿಂಟ್ |
| **Shen Gongbao(shun gong-baow)** | ದೇವತೆಗಳ ಪದ ಸ್ಥಾಪನೆಯಲ್ಲಿ ಬರುವ ಅಸೂಯೆ ಪಾತ್ರ |
| **Shenxiu (shuhn-shyo)** | ತಾಂಗ್ ಸಾಮ್ರಾಜ್ಯದ ಉತ್ತರ ಜೆನ್ ಬೌದ್ಧ  ಶಾಲೆಯ ಸಂಸ್ಥಾಪಕ |
| **Shichen (shr-chuhn)** | ಎರಡು ಗಂಟೆಗಳ ಚೀನಿಯರ ಮೂಲಮಾನ |
| **Shishan (shr-shuhn)** | ತಾವೋಯಿಷ್ಟಗಳ ಪ್ರಕಾರ ಒಬ್ಬನ ಪ್ರಧಾನ ಆತ್ಮ |
| **Sun Simiao (sun szz-meow)** | ಚೈನಿ ಚರಿತ್ರೆಯಲ್ಲಿ ಪ್ರಸಿದ್ಧ ವೈದ್ಯ |
| **Sun Wokong** | ಜರ್ನಿ ಟು ದಿ ವೆಸ್ಟ್ ಎಂಬ ಚೈನಿ ಕಾದಂಬರಿಯಲ್ಲಿ ಬರುವ ಪಾತ್ರ |
| **Srivastsa** | ಸೂರ್ಯನ ಧನಾತ್ಮಕ ಕಿರಣಗಳ ಬೆಳಕಿನ ಚಕ್ರ |
| **Taiji (tie-jee)** | ತಾವೋ ಶಾಲೆ ಸಂಕೇತ |
| **Taiyuan (tie-yu-en)** | ಷಾಂಗ್ ಶಿ ಪ್ರಾಂತ್ಯದ ರಾಜಧಾನಿ |
| **Tang (tahng) Dynasty** | ಚೈನಿ ಚರಿತ್ರೆಯಲ್ಲಿ ಬರುವ ಹೆಚ್ಚಿನ ಅಭಿವೃದ್ಧಿ ಹೊಂದಿದ ಸಾಮ್ರಾಜ್ಯ(ಕ್ರಿ. ಪೂ. 618- 97) |
| **Tang Shan** | ಹೇ ಬೈ ಪ್ರಾಮತ್ಯದ ಒಂದು ನಗರ |
| **Tantrism** | ಬೌದ್ಧ ಧರ್ಮದಲ್ಲಿ ಬರುವ ರಹಸ್ಯವಾಗಿ ಅಭ್ಯಾಸಿಸುವ ವಿಧಾನ |
| **Tanzhong (than-jong)** | ಎದೆಯ ಮಧ್ಯ ಭಾಗದಲ್ಲಿರುವ ಅಕ್ಯು ಪಾಯಿಂಟ್ |
| **Tao (daow)** | ಪ್ರಕೃತಿ ಮತ್ತು ವಿಶ್ವದ ಮಹಾನ್ ಮಾರ್ಗ |
| **Tao Zang (daow-zang )** | ಕೃಷಿ ಅಭ್ಯಾಸದ ಚೀನಿಯರ ಸಾಂಪ್ರದಾಯಿಕ ಪಠ್ಯ |

| | |
|---|---|
| **Tathagata** | ಬುದ್ಧನ ಶಾಲೆಯಲ್ಲಿ ಜ್ಞಾನೋದಯ ಪಡೆದವ ಹಾಗೂ ಬೋದಿಸತ್ವ ಹರಹತ್‌ನಿಗಿಂತ ಹಿರಿಯವ |
| **The world of ten directions** | ಬೌದ್ಧ ದರ್ಮದ ವಿಶ್ವ ಕಲ್ಪನೆ |
| **Tian (tyen)** | ಕ್ಷೇತ್ರ |
| **Tiananmen** | ಬೀಜಿಂಗ್‌ಲ್ಲಿರುವ ಹೆಬ್ಬಾಗಿಲು (ದಿ ಗೇಟ್ ಆಪ್ ಹೆವನ್ಲಿ ಪೀಸ್) |
| **Tianzi Zhuang (tyen-dzz jwahng)** | ತಾವೋ ಶಾಲೆಯಲ್ಲಿ ನಿಂತು ವ್ಯಾಯಾಮ ಮಾಡುವ ಭಂಗಿ |
| **Wuhan (woo-hahn)** | ಹೂ ಬೈ ಪ್ರಾಂತ್ಯದ ರಾಜಧಾನಿ |
| **Wuwei (woo-way)** | ಉದ್ದೇಶ ಪುರ್ಶೋವಲ್ಲದ ಸ್ತಬ್ದತೆ |
| **Xinjiang (sheen-jyang)** | ವಾಯುವ್ಯ ಚೈನಾದ ಪ್ರಾಂತ್ಯ |
| **Xingming Guizhi (shing-ming gwee-jhr)** | ಕೃಷಿ ಅಭ್ಯಾಸದ ಚೀನಿಯರ ಸಾಂಪ್ರದಾಯಿಕ ಪಠ್ಯ |
| **Xinxing (shin-shing)** | ನೈತಿಕತೆ |
| **Yin (yeen) and Yang (yahng)** | ತಾವೋಗಳ ನಂಬಿಕೆಯ ಪ್ರಕಾರ ಪ್ರತಿಯೊಂದು ವಸ್ತುವು ಯಿನ್ ಮತ್ತು ಯಾಂಗ್ ಬಲಗಳನ್ನು ಹೊಂದಿರುತ್ತವೆ. ಊದಾ : ಹೆಣ್ಣು ಮತ್ತು ಗಂಡು |
| **Yuan (yu-en)** | ಚೀನಿಯರ ಕರೆನ್ಸಿ(**USD $ 0.12)** |
| **Yuzhen(yu-jhun)** | ಹಿಂದಲೆಯ ಕೆಳ ಭಾಗದಲ್ಲಿರುವ ಅಕ್ಯು ಪಾಯಿಂಟ್ |
| **Zhang Guolao (jahng gwo-laom)** | ತಾವೋ ಶಾಲೆಯಲ್ಲಿರುವ ಎಂಟು ದೇವತೆಗಳಲ್ಲಿ ಒಬ್ಬರು |
| **Zhen (jhun)** | ಸತ್ಯ |
| **Zhen-Shan-Ren** | ಸತ್ಯ , ಕರುಣೆ ಅಥವಾ ದಯೆ |
| **Zhuyou Ke (jew-yo kuh)** | ಪ್ರಾರ್ಥನಾಭ್ಯಾಸ |

## ಆಂಗ್ಲ ಭಾಷೆಯಲ್ಲಿರುವ ಫಾಲೂನ್ ದಫಾ ಪುಸ್ತಕಗಳು

- **Zhuan Falun**
- **Chain Falun Gong**
- **Falun Dafa – Essentials Further Advancement**
- **Falun Dafa Lectures in the United states**

For more information on Falun Dafa books and materials,
Please visit The Universe Publishng Company's website at
http:// www.Universepublishng.com

**ಫಾಲೂನ್ ದಫಾ ಪುಸ್ತಕಗಳ ಹಾಗೂ ವಸ್ತುಗಳ ಬಗ್ಗೆ ಇನ್ನೂ ಹೆಚ್ಚಿನ ಮಾಹಿತಿಗಾಗಿ ನೀವು ಯೂನಿವರ್ಸ್ ಪಬ್ಲಿಷಿಂಗ್ ಕಂಪನಿಯ ವೆಬ್ ಸೈಟ್‌ನ್ನು ಸಂಪರ್ಕಿಸಲು ಕೋರಿದೆ.**

http:// www.Universepublishng.com

---

## Free Instruction and Workshops Worldwide.

**ವಿಶ್ವದಾದ್ಯಂತ ನಡೆಯುತ್ತಿರುವ ಉಚಿತ ಕಾರ್ಯಗಾರಗಳು ಮತ್ತು ಸಲಹೆಗಳು**

Falun Dafa practitioners provide free instruction and workshops worldwide. Books indifferent languages are available on internet for free downlode. For further information, please visit the followlng websites.

ಫಾಲೂನ್ ದಫಾ ಅಭ್ಯಾಸಿಗರಿಂದ ವಿಶ್ವದಾದ್ಯಂತ ಉಚಿತವಾಗಿ ಸಲಹೆಗಳು ಮತ್ತು ಅಭ್ಯಾಸದ ಕಾರ್ಯಾಗಾರಗಳನ್ನು ನಡೆಸಿ ಕೊಡಲಾಗುತ್ತದೆ. ವಿವಿಧ ಭಾಷೆಗಳ ಫಾಲೂನ್ ದಫಾ ಪುಸ್ತಕಗಳನ್ನು ಅಂತರ್ ಜಾಲದಿಂದ ಉಚಿತವಾಗಿ ಡೌನ್‌ಲೌಡ್ ಮಾಡಿಕೊಂಡು ಪಡೆಯಬಹುದು. ಹೆಚ್ಚಿನ ಮಾಹಿತಿಗಾಗಿ, ದಯವಿಟ್ಟು ಈ ಕೆಳಗಿನ ವೆಬ್ ಸೈಟಗಳನ್ನು ಸಂಪರ್ಕಿಸಿ.

**http:// www. falundafa.org (USA)**
**http:// www. falundafa.ca (Canada)**
**http:// www. falunau.org (Australia)**

**or call toll free:1-877-FALUN 99 (North America)**

**ಅಥವಾ 1-877-FALUN 99 (ಉತ್ತರ ಅಮೇರಿಕ) ಈ ದೂರವಾಣಿ ಸಂಖ್ಯೆಗೆ ಉಚಿತ ಕರೆಯನ್ನು ಮಾಡಬಹುದು.**

-------------------- **ಸಮಾಪ್ತಿ** --------------------